12th Century's
Enlightment Technic
and Evolution

ಪರಮ ಪೂಜ್ಯ ಸದ್ಗುರು ಶ್ರೀ ವಿದ್ಯಾನಂದ ಶರಣರು ವಿರಚಿತ

ಉತ್ತರ ಸಿದ್ಧಾಂತ



ಸಂಪಾದಕರು

ಬಸವರಾಜ ಸ್ವಾಮಿ

12th Century's
Enlightment Technic
and Evolution

ಉತ್ತರ ಸಿದ್ಧಾಂತ

ಲೇಖಕರು
ಪರಮ ಪೂಜ್ಯ ಸದ್ಗುರು ಶ್ರೀ ವಿದ್ಯಾನಂದ ಶರಣರು
ಡಬ್ಬೇರು ಮಡುವು

ಸಂಪಾದಕರು
ಬಸವರಾಜಸ್ವಾಮಿ
ರಾಯಚೂರು

ಪ್ರಕಾಶಕರು
ಶ್ರೀ ಬಸವಸೇವಾ ಪ್ರತಿಷ್ಠಾನ
ನಂ.12-7-196 ಸುದ್ದಿಮೂಲ ಕಾರ್ಯಾಲಯ
ಸಿಯಾತಲಾಬ ಗಂಜ್ ಏರಿಯಾ
ರಾಯಚೂರು-584102

ಉತ್ತರ ಸಿದ್ಧಾಂತ

ವಚನಾನುಭಾವ

Uttara Siddanta Vachananubhava Authour : Sadguru Sri Vidyananda Saharanaru
Dabberumaduvu Tq. Lingsugur, Dt. Raichur
Edited by : Basavaraj Swamy, Raichur
Mobile : 9980553750

ಲೇಖಕರು
ಪರಮಪೂಜ್ಯ ಸದ್ಗುರು ಶ್ರೀ ವಿದ್ಯಾನಂದ ಶರಣರು ಡಬ್ಬೇರಮಡುವು

ಸಂಪಾದಕರು
ಬಸವರಾಜ ಸ್ವಾಮಿ,
ರಾಯಚೂರು

ಮಿಂಚಂಚೆ:
suddimoola@gmail.com

ಪ್ರಕಾಶಕರು
ಶ್ರೀ ಬಸವಸೇವಾ ಪ್ರತಿಷ್ಠಾನ
ನಂ.12–7–196 ಸುದ್ದಿಮೂಲ ಕಾರ್ಯಾಲಯ
ಸಿಯಾತಲಾಬ ಗಂಜ್ ಏರಿಯಾ
ರಾಯಚೂರು– 584102

ಬೆಲೆ : 300/–

ಪ್ರತಿಗಳು : 500

ಮುದ್ರಣ : ಪ್ರಥಮ ಮುದ್ರಣ ಜೂನ್ 2023

ಬಳಸಿದ ಕಾಗದ : 70 ಜಿ.ಎಸ್. ಎಮ್. ಎನ್.ಎಸ್ ಮ್ಯಾಪಲಿತೋ

ಆಕಾರ : ಡೆಮಿ 1/8

ಪುಟಗಳು : 423+X

ಮುಖ ಪುಟ
ಮುರಳೀಧರ ವಿ. ರಾಠೋಡ್ ಬೆಂಗಳೂರು

ಮುದ್ರಣ
ಟ್ರಿನಿಟಿ ಅಕಾಡೆಮಿ – ಬೆಂಗಳೂರು

ಓದುವ ಮುನ್ನ ....

ದ್ವೈತ, ದ್ವೈತಾದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಿವಶಕ್ತಿ ವಿಶಿಷ್ಟಾದ್ವೈತ, ಮುಂತಾದ ಸಿದ್ಧಾಂತಗಳು ಭಾರತದಲ್ಲಿ ಪ್ರಚಲಿತದಲ್ಲಿವೆ . ಪ್ರತಿ ದೇಹದಲ್ಲಿರುವ ಶಕ್ತಿಯನ್ನು ಆಯಾ ದೇಹವೇ ಬಳಕೆ ಮಾಡಿಕೊಳ್ಳಲು ಸಕಲ ದೇಹಗಳಿಗೆ ನೆರವಾಗಲೆಂದು ಆಯಾ ಸಿದ್ಧಾಂತಗಳನ್ನು ಮಹಾಜ್ಞಾನಿಗಳು ರಚಿಸಿರುವರು . ಆದರೆ ಜನ ಆಯಾ ಗ್ರಂಥಗಳನ್ನು ಬರೆದ ಜ್ಞಾನಿಗಳನ್ನು ಅವರು ಬರೆದ ಸೂತ್ರ ಪ್ರಧಾನವಾದ ಜ್ಞಾನ ಗ್ರಂಥಗಳನ್ನು ಮಾತ್ರ ವಿಶ್ವಾಸಕ್ಕೆ ತೆಗೆದುಕೊಂಡರು . ತಮ್ಮ ತಮ್ಮ ದೇಹಗಳಲ್ಲಿ ತನ್ಮಯವಾದ ಅರಿವಿನ ಶಕ್ತಿಯನ್ನೆ ಮರೆತರು . ಒಬ್ಬೊಬ್ಬ ಜ್ಞಾನಿಯ ಹೆಸರಲ್ಲಿ ಮತ ಧರ್ಮ ನಿರ್ಮಾಣವಾಯಿತು . ಜಾತಿಉಪಜಾತಿ ಪಂಗಡಗಳು ಹುಟ್ಟಿಕೊಂಡವು. ಜ್ಞಾನಿಗಳು ಬರೆದ ಸೂತ್ರ ಪ್ರಧಾನ ಸಿದ್ಧಾಂತಗಳೆಲ್ಲಾ ಧರ್ಮಗ್ರಂಥಗಳಾದವು . ಅವು ಪೂಜೆಗೆ , ವಾದ ವಿವಾದಗಳಿಗೆ ಉಪನ್ಯಾಸಕ್ಕೆ ಮೀಸಲಾದವು .

ದೇಹದ ಉನ್ನತಿಗಾಗಿ ದೇಹದಿಂದಲೇ ಬರೆದ ಗ್ರಂಥಗಳು ದೇಹಗಳಿಗೆ ಮುಳುವಾದವು. ಈ ಸಕಲ ಸಿದ್ಧಾಂತಗಳಿಂದ ಆದ ಬದಲಾವಣೆಯನ್ನು ಶ್ರೀ ವಿದ್ಯಾನಂದ ಶರಣರು ಗಮನದಲ್ಲಿಟ್ಟು ಕೊಂಡು ಅಕಾಯ ಭಕ್ತ ಗ್ರಂಥವನ್ನು ಬರೆದರು .'' **ಉತ್ತರ ಸಿದ್ಧಾಂತದಲ್ಲಿ** '' ಶ್ರೀ ವಿದ್ಯಾನಂದ ಶರಣರು ಬಸವಣ್ಣ ಚೆನ್ನಬಸವಣ್ಣ ಹಾಗೂ ಅಲ್ಲಮಪ್ರಭು ಅವರ 182 ವಚನಗಳಿಗೆ ವಚನಾನುಭಾವವನ್ನು ಬರೆದಿದ್ದಾರೆ.

ಎಂಜಲ ಮಾತ ನುಡಿವ ರಂಜಕರೆಲ್ಲರೂ ಮಿಗೆ, ಮಿಗೆ ಮೀಸಲ ತಾವೆತ್ತ ಬಲ್ಲರೊ!
ಮೀಸಲು ಎಂಜಲಹುದೆ ? ಎಂಜಲ ಮೀಸಲಹುದೆ ?
ಮಾತಿನ ಬಣಮೆಯ ಮೇದ ಪಶು ಪ್ರಾಣಿಯಂತೆ ಎಂಜಲ ಮಾತ ನುಡಿಯುತ್ತಿಹರು,
ಲಿಂಗ ಸಕೀಲ ಸಂಯೋಗದ ವರ್ಮಸ್ಥಲವ ನವರೆತ್ತ ಬಲ್ಲರು !
ಕೂಡಲ ಚೆನ್ನಸಂಗಯ್ಯಾ ,
ಉಪದೇಶ ಸೂತಕಿಗಳೆಲ್ಲರೂ ರೌರವ ನರಕಿಗಳು .

ವಚನದಿಂದ ಹಿಡಿದು
ಏನೆಂಬೆ ನೇನೆಂಬೆ ಆಶ್ರಯ ವಿರಹಿತನ,
ಏನೆಂಬೆ ನೇನೆಂಬೆ ನಾಮ ನಿರ್ನಾಮನ
ಏನೆಂಬೆ ನೇನೆಂಬೆ ಸಾರಾಯ ಭೂತನಲ್ಲದುದು,
ಏನೆಂಬೆ ನೇನೆಂಬೆ ದೇವಾ ಕ್ರಿಯೆ ಮೀರಿದ ಸಂಬಂಧವ
ಕೂಡಲಚೆನ್ನಸಂಗಮದೇವಾ
ಆನೆಂಬುದಿಲ್ಲದ ನೇನೆಂದುಪಮಿಸುವೆನಯ್ಯ .

ವರೆಗೆ ಹೀಗೆ ಒಟ್ಟು 182 ವಚನಗಳನ್ನು ಆಧಾರವಾಗಿಟ್ಟುಕೊಂಡು ಅವುಗಳ ಮೂಲಕ ಅನುಭಾವ ಶಕ್ತಿಯನ್ನು ಓದುವ ತನುವಿಗೆ ಮನದಟ್ಟಾಗುವಂತೆ ''**ಉತ್ತರ ಸಿದ್ಧಾಂತ**'' ಗ್ರಂಥ ಸಿದ್ಧಪಡಿಸಿ ಸ್ವಾನುಭಾವದ ಕೃಷಿಯಲ್ಲಿ ತೊಡಗಿದ ಓದುಗನಿಗೆ ದಾಸೋಹ ರೂಪದಲ್ಲಿ ಉಣ ಬಡಿಸಿದ್ದಾರೆ.

ಸತ್ಯವನ್ನು ಲೋಕೋಪಯೋಗಿ ದೃಷ್ಟಿಯಿಂದ ಹೇಳುವವರೇ ಆಪ್ತರು. ಲೋಕೋದ್ದಾರವೆಂದರೇನು? ಅದು ಯಾವುದರಿಂದ ಆಗುತ್ತದೆ? ಎಂಬುದನ್ನು ಸ್ಪಷ್ಟವಾಗಿ ತಿಳಿದು ಸ್ವಾರ್ಥದ ಲವಲೇಶವೂ ಇಲ್ಲದೆ ಉಸಿರಾಟದಷ್ಟೇ ಸಹಜವಾಗಿ ಆ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು ಡಬ್ಬೇರುಮಡುವಿನ ಪರಮಪೂಜ್ಯ ಶ್ರೀ ವಿದ್ಯಾನಂದ ಶರಣರು.

ಶರಣರ ಮಾತೆಲ್ಲಾ ಅಮೃತವಾಯಿತು. ಪೂಜ್ಯರ ವ್ಯಕ್ತಿತ್ವವನ್ನು ವರ್ಣಿಸುವುದು ಕಷ್ಟವೇ. ಅವರನ್ನು ಕಣ್ಣಾರೆ ಕಂಡ, ಅವರೊಡನಾಡಿದ ಶಿಷ್ಯವರ್ಗ, ಅವರ ಪ್ರವಚನಗಳನ್ನು ಕೇಳಿದವರಿಗೆ ಅವರ ಬಗ್ಗೆ ಹೇಳಬೇಕಾಗಿಲ್ಲ . ಯಾರು ಅವರನ್ನು ನೋಡಿಲ್ಲವೋ, ಕೇಳಿಲ್ಲವೋ ಅಂಥವರನ್ನು ಇಂಥ ಒಬ್ಬ ಶರಣರಿದ್ದರು ಎಂದು ನಂಬಿಸುವುದು ಕಷ್ಟದ ಕೆಲಸ ಅಂತಹ ವ್ಯಕ್ತಿತ್ವ ಪೂಜ್ಯ ಸದ್ಗುರು ಶ್ರೀ ವಿದ್ಯಾನಂದಶರಣರದು.

ಮಗುವಿನಂಥ ನಿಷ್ಕಲ್ಮಷ ಹೃದಯ , ನಿರ್ಮಲ ನಗೆ, ವಾತ್ಸಲ್ಯಪೂರ್ಣ ನೋಟ. ಸದಾ ಶರಣರ ಗುರುಗಳಾದ ಸದ್ಗುರು ನಾಗಭೂಷಣರ ಸ್ಮರಣೆ, ಒಂದೇ ಮಾತಿನಲ್ಲಿ ಹೇಳುವುದಾದರೆ ಕಣ್ಣಿಗೆ ಬಿದ್ದ ಅರುಹೃದಯಿಗೆ ಸ್ವರೂಪ ಜ್ಞಾನ ಮಾಡಿಸುವ ಛಲವಂತ ಶರಣರವರು.

ಅವರೇ ಹೇಳಿದಂತೆ 4ನೇ ತರಗತಿಯವರೆಗೆ ಅಯ್ಯನವರ ಶಾಲೆಯಲ್ಲಿ ಅಭ್ಯಾಸ. ತಮ್ಮ 23ನೇಯ ವಯಸ್ಸಿನವರೆಗೆ ಈ ಲೋಕದವರು ಆಚರಿಸುವ ಹಲವಾರು ಆಚಾರಗಳಲ್ಲಿದ್ದೆವೆಂದು ಆಗಾಗ ಹೇಳಿಕೊಳ್ಳುತ್ತಿದ್ದರು.

ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಮುಚಳಾಂಬದ **ಸದ್ಗುರು ಶ್ರೀ ನಾಗಭೂಷಣ ಶಿವಯೋಗಿಗಳ** ದರ್ಶನದ ನಂತರ ಅವರೆಂದೂ ಹಿಂತಿರುಗಿ ನೋಡಲಿಲ್ಲ. ಪೂರ್ವಾಶ್ರಯದ ಡಬ್ಬೇರುಮಡುವಿನ ಆದನಗೌಡರು **ಶ್ರೀ ವಿದ್ಯಾನಂದ ಶರಣ**ರಾದರು. ಅಯ್ಯನವರ ಶಾಲೆಯಲ್ಲಿ ಕೇವಲ ಕನ್ನಡ ಅಭ್ಯಾಸ ಮಾಡಿದ್ದ ಆದನಗೌಡರು ಸದ್ಗುರು ನಾಗಭೂಷಣರ ಗರಡಿಯಲ್ಲಿ ಸಂಸ್ಕೃತ ಹಾಗೂ ಹಿಂದಿ ಅಭ್ಯಾಸ ಮಾಡಿ ಭಗವದ್ಗೀತೆಯನ್ನು ಸರಳ ಹಾಗೂ ಸುಲಲಿತವಾಗಿ ಪ್ರವಚನ ಮಾಡ ಹತ್ತಿದರು. ಸಕಲ ಶಿವಶರಣರ ವಚನಗಳು ಅವರಿಗೆ ಅತ್ಯಂತ ಪ್ರಿಯವಾದವು. ಕಬ್ಬಿಣದ ಕಡಲೆಯಂತಿರುವ ಅಲ್ಲಮ ಪ್ರಭುಗಳ ವಚನಗಳನ್ನು ನೋಡಿ ಅತ್ಯಂತ ಆನಂದಿತರಾದರು. ಅವುಗಳ ಒಳಗುಟ್ಟನ್ನು ತಮ್ಮ ಪ್ರವಚನಗಳ ಮೂಲಕ ಹೇಳಿ ಶಿಷ್ಯರ ಸ್ವರೂಪ ಜ್ಞಾನಕ್ಕೆ ದಾರಿಮಾಡಿಕೊಟ್ಟರು. ಹಗಲು ದಣಿವರಿಯದೆ ಪ್ರವಚನ ಮಾಡಿದರೆ ರಾತ್ರಿ ಏಕಾಂತದಲ್ಲಿ ವಚನಗಳಿಗೆ ವ್ಯಾಖ್ಯಾನ ಬರೆಯುತ್ತಿದ್ದರು. ಪುಸ್ತಕ ಓದಿ ಉದಾಹರಿಸುವ ಪಂಡಿತೋತ್ತಮನಿಗೆ ತನ್ನ (ದೇಹವೆಂಬ) ಪುಸ್ತಕದ ಪರಿಚಯ ಸ್ವರೂಪ ಜ್ಞಾನ ಕರುಣಿಸುತ್ತಿದ್ದರು.

ಸಕಲ ಶರಣರ ವಚನಗಳೂ ಅವರ ನಾಲಿಗೆಯ ತುದಿಯಲ್ಲಿದ್ದವು. ಪ್ರವಚನಗಳನ್ನು ಸಿದ್ಧಮಾಡಿಕೊಳ್ಳುತ್ತಿರಲಿಲ್ಲ. ಒಮ್ಮೆ ಹೇಳಿದ ವಚನದ ತಿರುಳು ಮತ್ತೊಮ್ಮೆ ಅನೇಕ ಕವಲುಗಳನ್ನು ಒಡೆದು ಒಂದೇ ಅರ್ಥದಲ್ಲಿ ಲೀನವಾಗಿ ಮೈಮನಗಳನ್ನು ಅರಳಿಸಿ ತನ್ನನ್ನು ನೋಡಿಕೊಳ್ಳುವಂತೆ ಮಾಡುವ ಮೋಡಿ ಸದ್ಗುರುಗಳಿಗೆ ಕರಗತವಾಗಿತ್ತು. ಅವರ ಪ್ರವಚನ ಕಲಿತ ವಿದ್ಯೆಯ ಪ್ರದರ್ಶನವಾಗಿರದೆ ಸತ್ಯವೇ ತಾನಾಗಿ ತಾನೇ ಸತ್ಯವಾಗಿ ತಾಯಿ ರೂಪದಲ್ಲಿ ತುತ್ತು ಮಾಡಿ ಉಣಬಡಿಸಿದಂತಿರುತ್ತಿತ್ತು. ತಾವೂ ಉಂಡು ಶಿಷ್ಯರಿಗೂ ಉಣ್ಣಿಸಿ ಸತ್ಯದ ಡೇಗು ಡೇಗುತ್ತಿದ್ದರು.

ಒಬ್ಬವ್ಯಕ್ತಿ ಸ್ವರೂಪ ಜ್ಞಾನಿಯಾಗಿ ತಾನು ಯಾವ ಕಾಯಕವನ್ನಾದರೂ ಮಾಡಲಿ ಅವನಿಂದ ಲೋಕಕ್ಕೆ ಉಪಯೋಗವಾಗುತ್ತದೆ. ಮಹದಾನಂದ ಹೊಂದಿ ಸ್ವಸುಖ ಪಡೆಯುತ್ತಾನೆ ಎಂಬ ಕಳಕಳಿ ಅವರದಾಗಿತ್ತು. ಹಗಲಿರುಳೆನ್ನದೆ ತಮ್ಮ ಅರವತ್ತು ವಸಂತಗಳನ್ನು ಇದಕ್ಕಾಗಿ ಮೀಸಲಿಟ್ಟರು.

ಕುಳಿತಲ್ಲಿ, ನಿಂದಲ್ಲಿ, ಮಲಗಿದಲ್ಲಿ ಅವರ ಧ್ಯಾನ ಶರಣರ ಕುರಿತೇ ಆಗಿರುತ್ತಿತ್ತು. ಅರುಹೃದಯ ಸಿಕ್ಕ ಕೂಡಲೇ ಅವನನ್ನು ಬಿಗಿದಪ್ಪಿ ತಮ್ಮವನನ್ನಾಗಿ ತಮ್ಮ ಮಗನನ್ನಾಗಿ ಮಾಡಿಕೊಂಡು ಆತನೊಳಗಿದ್ದ ಅರುವನ್ನು ಆತನಿಗೇ ಪರಿಚಯಿಸುತ್ತಾ ಆತನ ಮರುವನ್ನು ಆತನಿಂದಲೇ ನಷ್ಟಮಾಡಿಸಿ ಸ್ವರೂಪ ಜ್ಞಾನಿಯನ್ನಾಗಿಸುವ ಸುಳುಹು ನೀಡುತ್ತಿದ್ದರು.

ಹೀಗೆ ಮಾಡುವಾಗ ಅವರ ಜಾತಿ-ಮತ ಪಂಥ ಅರ್ಥವ್ಯವಸ್ಥೆ, ಅಧಿಕಾರ, ಇದಾವುದನ್ನು ಗಮನಿಸದೆ ಅರುಹೃದಯವನ್ನು ಮಾತ್ರ ನೋಡುತ್ತಿದ್ದರು. ಅವನ ಭೇಟಿಗಾಗಿ ಹಗಲಿರುಳು ಹಂಬಲಿಸುತ್ತಿದ್ದರು. ದೇಹದ ಅಭಿಮಾನ ಅಹಂಕಾರ ಬಿಡುವವರಿಗೆ ಸುಲಲಿತವಾಗಿ ಪರೀಕ್ಷೆಗಳು ಸದಾ ನಡೆಯುತ್ತಿದ್ದವು. ಒಬ್ಬ ವ್ಯಕ್ತಿ ಸ್ವರೂಪ ಜ್ಞಾನಿಯಾಗಿ ತಾನು ಯಾವ ಕಾಯಕವನ್ನಾದರೂ ಮಾಡಲಿ ಪಾದದಿಂದ ಹಿಡಿದು ನೆತ್ತಿಯವರೆಗಿನ ಅಭಿಮಾನ ಬಿಟ್ಟಾಗಲೇ ಆತ ಸದ್ಗುರುಗಳಿಂದ ಪೂಜಿತನಾಗುತ್ತಿದ್ದ ಪೂಜಿಸಲ್ಪಡುತ್ತಿದ್ದ. ಗುರುವಾಗುತ್ತಿದ್ದ. ಗುರುಮುಟ್ಟಿಗುರುವಾಗುವ ಪರಂಪರೆ ಶರಣ ಪರಂಪರೆಯಲ್ಲಿ ಮಾತ್ರ ಕೇಳುತ್ತೇವೆ. ಆದರೆ ಸದ್ಗುರು ವಿದ್ಯಾನಂದ ಶರಣರು ಆರು ದಶಕಗಳವರೆಗೆ ಇದನ್ನು ಸದ್ದುಗದ್ದಲವಿಲ್ಲದೆ ಏಕಾಂಗಿಯಾಗಿ ನಡೆಸಿಕೊಂಡು ಬಂದರು. ಜ್ಞಾನ ಪಡೆದು ತಮ್ಮ ಕಾಯಕ ಮಾಡುತ್ತಾ ಸ್ವಸುಖದಲ್ಲಿ ಲೀನವಾದ ಸದ್ಗುರು ವಿದ್ಯಾನಂದ ಶರಣರ ಶಿಷ್ಯಂದಿರು ಸಾವಿರಾರು ಸಂಖ್ಯೆಯಲ್ಲಿದ್ದಾರೆ. ಅವರೆಲ್ಲರೂ ಸದ್ಗುರು ವಿದ್ಯಾನಂದರ ಕಾಯಕದಲ್ಲಿ ತಲ್ಲೀನವಾದರೆ ಕಲ್ಯಾಣ ರಾಜ್ಯ ನಿರ್ಮಾಣವಾಗುವುದರಲ್ಲಿ ಸಂದೇಹವಿಲ್ಲ.

ಮಹಾತ್ಮಾ ಬಸವಣ್ಣ ಇಷ್ಟ ಲಿಂಗ ಕೊಟ್ಟು ಉಪಕಾರ ಮಾಡಿದನೆಂದು ಒಂದು ವರ್ಗ ಅವರನ್ನು ಸ್ಮರಿಸುತ್ತದೆ. ಮತ್ತೊಂದು ವರ್ಗ ರೇಣುಕರು ಇಷ್ಟಲಿಂಗ ಕೊಟ್ಟರೆಂದು ಪ್ರತಿಪಾದಿಸುತ್ತದೆ. ಹೀಗೆ ಅನ್ನುವ ಈ ಎರಡು ವರ್ಗಗಳು ಉಣ್ಣೆಯಂತೆ ಕ್ಷೀರದ ರುಚಿಯನ್ನು ಸವಿಯಲಿಲ್ಲವೆಂದು ರೇಣುಕ ಹಾಗೂ ಶರಣರ ಅಮೃತವನ್ನು ಸವಿದ ಅನುಭಾವಿಗಳಿಗೆ ಅನ್ನಿಸದೇ ಇರದು. ಶರಣರ ವಚನಗಳಲ್ಲಿ ರೇಣುಕರ ಅನುಭಾವದಲ್ಲಿ ಕುರುಹನ್ನೆ ಕಂಡರು. ಸದಾ ಕತ್ತಲನ್ನೆ ಕಂಡವರಿಗೆ ಬೆಳಕಿನ ರುಚಿ ಹಿಡಿಸುವುದಿಲ್ಲ.

ಸದ್ಗುರು ವಿದ್ಯಾನಂದರು ಈ ನಾಡು ಕಂಡ ಮಹಾನ್ ಸಂತರು. ಮಠ ಮಾನ್ಯಗಳ ಒಡೆಯರು ಸಾಹಿತಿಗಳು ಈ ಸತ್ಪುರುಷರನ್ನು ನೋಡಲು ಬರಲಿಲ್ಲ . ರಾಜಕಾರಣಿಗಳು ಇವರತ್ತ ಸುಳಿಯಲಿಲ್ಲ, ಗುರುಗಳಾದರೂ ಅಷ್ಟೆ, ಅವರ ನೆರಳಿನ ಸಾಮಿಪ್ಯವೂ ಹೋಗಲಿಲ್ಲ. ಅರುಹೃದಯಿಗಳನ್ನು ಕಂಡು ಅರಿವಿನ ಬೀಜ ಬಿತ್ತಿದರು. ಮೊಳಕೆಯೊಡೆದು ಸಸಿಗಳಾಗಿವೆ. ಕೆಲವು ಮರಗಳಾಗಿ ಫಲಕ್ಕೆ ಬಂದಿವೆ . ಆ ಮಾಗಿದ ಅರಿವಿನ ಫಲ ತನ್ನ ಕೆಲಸ ಮಾಡದೇ ಇರದು.

ತನ್ನೊಳಗಿರುವ ಒಡೆಯನನ್ನು ತೋರಿಸಿ ಅವನೇ ತಾನಾಗುವ ಪ್ರಯತ್ನವನ್ನು ಶರಣರು ಹನ್ನೆರಡನೆಯ ಶತಮಾನದಲ್ಲಿ ಯಶಸ್ವಿಯಾಗಿ ಪೂರೈಸಿದ್ದಾರೆ.

ಅದೇ ಪ್ರಯತ್ನವನ್ನು ಪರಮ ಪೂಜ್ಯ ಸದ್ಗುರು ಡಬ್ಬೇರುಮಡುವಿನ ಶ್ರೀ ವಿದ್ಯಾನಂದ

ಶರಣರು ಮನೆ ಮನೆಗೆ ತೆರಳಿ ಶ್ರೀಸಾಮಾನ್ಯನನ್ನು ಸ್ವರೂಪ ಜ್ಞಾನಿಗಳನ್ನಾಗಿ ಪರಿವರ್ತಿಸಲು ಏಕಾಂಗಿಯಾಗಿ ಯತ್ನಿಸಿದರು. ಹೆದ್ದೊರೆನಾಡು ಕಂಡ ಅಪೂರ್ವ ಸಂಚಾರಿ ಸಂತರಾದ ಪೂಜ್ಯ ಶ್ರೀ ವಿದ್ಯಾನಂದ ಶರಣರು ನಾಡಿನಾದ್ಯಂತ ಆಧ್ಯಾತ್ಮದ ಚಿಂತನೆಯ ವಾತಾವರಣವನ್ನು ಮೂಡಿಸಿದರು.

ಉತ್ತರ ಕರ್ನಾಟಕದ ರಾಯಚೂರು, ಕಲಬುರ್ಗಿ, ಬೀದರ್, ಬಾಗಲಕೋಟೆ, ಬಿಜಾಪುರ, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಾದ್ಯಂತ ಸತತ ಅರವತ್ತು ವರ್ಷಗಳವರೆಗೆ ಹಗಲಿರುಳೆನ್ನದೆ ಸಂಚರಿಸಿ ಸಾವಿರಾರು ಸಂಖ್ಯೆಯ ಜಿಜ್ಞಾಸುಗಳಲ್ಲಿ ಆಧ್ಯಾತ್ಮದ ಆಸಕ್ತಿ ಹುಟ್ಟಿಸಿದರು.

ಈ ಜ್ಞಾನ ಮಹಾಯಜ್ಞ ಅವರೊಂದಿಗೆ ನಂದಲಿಲ್ಲ. ಅನುಭವ ಮಂಟಪದಲ್ಲಿ ಚೆನ್ನಬಸವಣ್ಣನವರು ಕ್ರಿಯಾಶೀಲರಾದಂತೆ ಬೆನಕನ ಹಳ್ಳಿಯ ಸದ್ಗುರು ನಾಗಭೂಷಣ ಶಿವಯೋಗಿ ಮಹಾಬೋಧಾಲಯದಲ್ಲಿ ಪೂಜ್ಯ ವಿದ್ಯಾನಂದ ಶರಣರ ಪ್ರೀತಿಯ ಕಂದ ಮಹಾಜ್ಞಾನಿ ದೇವಾನಂದರಾಗಿ ರೂಪುಗೊಂಡಿರುವರು.

ಸಾಧನೆಯ ಮಾರ್ಗದಲ್ಲಿರುವವರಿಗೆ ಯಾದಗಿರಿ ಜಿಲ್ಲೆಯ ಹುಣಶಿಗಿ ತಾಲೂಕಿನ ಬೆನಕನ ಹಳ್ಳಿಯ ಮಹಾ ಬೋಧಾಲಯ ಕೈ ಮಾಡಿ ಕರೆಯುತ್ತಲಿದೆ.

ಸದ್ಗುರು ಶ್ರೀ ವಿದ್ಯಾನಂದಶರಣರು ಜೂನ್ 1-2006 ರಂದು ಅಸ್ವಸ್ಥರಾದರು. ದೇಹದ ಬಳಲಿಕೆಯ ಮಧ್ಯೆಯೇ ಪ್ರವಚನ ಸಾಗಿತ್ತು. ಆನಂದದ ಮರೆಯಲ್ಲಿ ದೇಹ ಮತ್ತು ಪ್ರಾಣದ ಚಿನ್ನಾಟ ನಡೆದೇ ಇತ್ತು. 23 ದಿನಗಳ ಚಿಕಿತ್ಸಾ ಹಂತದಲ್ಲಿ ವೈದ್ಯರಿಗೆ ಒಮ್ಮೆಯೂ ದೇಹಕ್ಕಾದ ನೋವಿನ ಸಂಗತಿಯನ್ನು ವ್ಯಕ್ತಪಡಿಸಲಿಲ್ಲ.

ಗುರುಗಳು ಮುಂದಿನ ಚಿಕಿತ್ಸೆಗೆ ಒಪ್ಪಿಗೆ ಕೊಡಲಿಲ್ಲ. ಈ ಶರೀರದ ಕತೆ ಮುಗಿಯಿತು. ಬೆಳಿಗ್ಗೆ ಊರಿಗೆ ಹೊರಡೋಣ ಎಂದರು. ಅವರ ದೇಹದ ನರಳಾಟದಿಂದ ನನ್ನ ಹಾಗೂ ದೇವಾನಂದ ಶರಣರ ಮುಖ ಕಂದಿತು. ಇದನ್ನು ಗಮನಿಸಿದ ಗುರುಗಳು ನಮ್ಮಿಬ್ಬರನ್ನು ಹತ್ತಿರ ಕೂಡಿಸಿಕೊಂಡು ಇಡೀ ರಾತ್ರಿ ಪ್ರವಚನ ಮಾಡಿದರು, ಮಹಾಜ್ಞಾನ ಕಾಯ ಮತ್ತು ಪ್ರಾಣದ ಚಿನ್ನಾಟದ ದರ್ಶನ ಮಾಡಿಸಿದರು.

ಬೆನಕನಹಳ್ಳಿಯಲ್ಲಿ ದೇಹ ಬಿಡುವುದಾಗಿ ಹೇಳಿ ಕರೆದುಕೊಂಡು ಹೋಗಲು ಸೂಚಿಸಿದರು. ದಿನಾಂಕ 23-6-2006 ರಂದು ಬೆನಕನ ಹಳ್ಳಿಗೆ ಹೋದೆವು. ಕೊನೆಗೆ ಮೂರು ದಿನಗಳಲ್ಲಿ ಸಂಜ್ಞೆಯ ಮೂಲಕ ಹೇಳಿ ದಿನಾಂಕ 2-7-2006 ಮಧ್ಯಾಹ್ನ 2.20 ಗಂಟೆಗೆ ದೇಹಬಿಟ್ಟರು.

ಅವರು ಬರೆದ ಶರಣ ಸಾಹಿತ್ಯದಲ್ಲಿ 'ನಾನು ನನ್ನ ಕಂಡ ಕಣ್ಣು', 'ನಿಃಶಬ್ದ ಕೃಪೆ' ಅವರಿರುವಾಗಲೇ ಪ್ರಕಟವಾಗಿದೆ. ಅವರು ಇರುವವರೆಗೂ ತಮ್ಮ ಸಾಹಿತ್ಯ ಪ್ರಕಟಿಸಲು ಮುಂದೆ ಬಂದವರಿಗೆ ಇದನ್ನು ತಮ್ಮ ಹೃದಯದಲ್ಲಿ ಪ್ರಕಟಿಸಿಕೊಳ್ಳಿ ಪ್ರಕಟಣೆ ಬೇಡ ಎಂದು ಒತ್ತಿ ಹೇಳುತ್ತಿದ್ದರು. ನನ್ನ ಒತ್ತಾಯದ ಮೇರೆಗೆ ಪ್ರಕಟಿಸಲು ಅನುಮತಿ ಕೊಟ್ಟರು. 'ಗಗನ ಸಿದ್ಧಾಂತ ' ' ಗುರುಕನ್ಯ, ' ಡಿ.ಟಿ.ಪಿ.ಮಾಡಿ ತೋರಿಸಿದಾಗ ಅತ್ಯಂತ ಆನಂದ ಪಟ್ಟರು. ಇಷ್ಟು ಸಾಕು. ಬೇಕಾದವರು ಇದರ ಫೋಟೊ ಪ್ರತಿ ಮಾಡಿಕೊಳ್ಳಲಿ ಎಂದು ಹೇಳಿದರು.

ಗಗನ ಸಿದ್ಧಾಂತ 136 ವಚನಗಳ ತಾತ್ಪರ್ಯ ಮೊದಲ ಭಾಗ 6-7-2006 ರಂದು

ಮುದ್ರಣಗೊಂಡು ಪ್ರಕಾಶಿಸಲ್ಪಟ್ಟಿತು. ಪ್ರತಿಗಳು ಮುಗಿದು ಹೋದ ನಿಮಿತ್ತ ಪುನಃ ಸಮಗ್ರವಾಗಿ ಗಗನ ಸಿದ್ಧಾಂತವನ್ನು ಪ್ರಕಟಿಸಲಾಯಿತು . ಈ ಗ್ರಂಥ ಭೂಮಿಯೊಳಗಿದ್ದ ನಿಧಿಯಂತೆ ಅಂಜನ ಹಾಕಿ ಹುಡುಕಬೇಕು. ಸಾಧಕರಿಗೆ ಮಾರ್ಗ ಸುಲಭವಾಗಲಿ ಎಂದು ಹೆಚ್ಚಿನ ವಿವರಣೆಯೊಂದಿಗೆ ಶ್ರೀಸಾಮಾನ್ಯರ ಮನ ಮುಟ್ಟುವಂತೆ ಸದ್ಗುರುಗಳು ವಿವರಿಸಿದ್ದಾರೆ.

ಪೂಜ್ಯ ವಿದ್ಯಾನಂದ ಶರಣರ ಅಪ್ರಕಟಿತ ಸಾಹಿತ್ಯ ಐದು ಸಾವಿರ ಪುಟಗಳನ್ನು ಮೀರಲಿದೆ. ಪತ್ರಿಕೆ ಪ್ರಸಾರದೊಂದಿಗೆ ಅರಿವಿನ ಪ್ರಸಾರ ಮಾಡಲು ಪಣ ತೊಟ್ಟಿರುವ ರಾಯಚೂರು (ಸ್ಪಿಲ್)ಸುದ್ದಿಮೂಲ ಪಬ್ಲಿಷರ್ಸ್ ಇಂಡಿಯಾ ಲಿಮಿಟೆಡ್ ಸಂಸ್ಥೆಯು ಸದ್ಗುರುಗಳ ಇಚ್ಛೆಯಂತೆ ಶ್ರೀ ಬಸವ ಸೇವಾ ಪ್ರತಿಷ್ಠಾನ ಪ್ರಕಾಶನದ ಮೂಲಕ ಸಕಲರೂ ಸ್ವರೂಪ ಜ್ಞಾನಿಗಳಾಗಬೇಕೆನ್ನುವ ಆಶಯದೊಂದಿಗೆ **' ಉತ್ತರ ಸಿದ್ಧಾಂತ '** ಪ್ರಕಾಶಿಸಿದೆ.

ಪ್ರಯತ್ನ ನಮ್ಮದು, ಅಂತಿಮ ಇಚ್ಛೆ ಓದುಗರದು; ಸಕಲ ತನುಗಳಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನದು.

ಬಸವರಾಜ ಸ್ವಾಮಿ
ಸಂಪಾದಕ, ರಾಯಚೂರು
ಮೇ 25, 2023

ಉತ್ತರ ಸಿದ್ಧಾಂತ

ಸಿದ್ಧಾಂತಗಳ ಉತ್ತರವೇ ಉತ್ತರ ಸಿದ್ಧಾಂತವು. ಸಿದ್ಧಾಂತಗಳು ಉತ್ತರವೆ ಇರುವಲ್ಲಿ ಅವುಗಳ ಉತ್ತರವಾವುದು ?

ದ್ವೈತ ಸಿದ್ಧಾಂತ, ಅದ್ವೈತ ಸಿದ್ಧಾಂತ ಇವೆರಡು ಪ್ರಬಲ ಸಿದ್ಧಾಂತಗಳು. ವೇದದ ಪ್ರಥಮ ಭಾಗವಾಗಿಹುದು ದ್ವೈತ ಸಿದ್ಧಾಂತ, ವೇದದ ಕೊನೆಯ ಭಾಗವಾಗಿಹುದು ಅದ್ವೈತ ಸಿದ್ಧಾಂತ. ಒಂದು ಜೀವ ಬ್ರಹ್ಮರ ಭೇದಜ್ಞಾನ ಸೂಚಿಸುವದು, ಇನ್ನೊಂದು ಅಭೇದ ಜ್ಞಾನವ ಸೂಚಿಸುವದು. ಹೀಗೆ ಎರಡು ಸಿದ್ಧಾಂತಗಳು. ಇವುಗಳ ಉತ್ತರವೇ ಉತ್ತರ ಸಿದ್ಧಾಂತವು.

ಶ್ಲೋಕ 36 : ಅದ್ವೈತಂ ಕೇಚಿ ದಿಚ್ಛಂತಿ ದ್ವೈತ ಮಿಚ್ಛಂತಿ ಚಾಪರೇ॥
ಸಮಂ ತತ್ವಂ ನ ವಿಂದಂತಿ ದ್ವೈತಾದ್ವೈತ ವಿವರ್ಜಿತಮ್ ॥ ಅವಧೂತ ಗೀತಾ ಅ.1

ಕೆಲಬರು ಅದ್ವೈತವನ್ನು ಇಚ್ಛಿಸುವರು, ಕೆಲಬರು ದ್ವೈತವನ್ನು ಇಚ್ಛಿಸುವರು, ಇಂತಹವರು ದ್ವೈತಾದ್ವೈತ ವಿವರ್ಜಿತವಾದ ಸಮ ಸ್ವರೂಪವಾಗಿರುವ ತತ್ವವನ್ನು ತಿಳಿಯಲಾರರು.

ಉತ್ತರ ಸಿದ್ಧಾಂತ, ದ್ವೈತಾದ್ವೈತಗಳಿಗೆ ಬೇರಾಗಿರುವ ಸಮ ಸ್ವರೂಪ ತತ್ವ ತಿಳಿಸುವುದೆ ಇದರ ಧ್ಯೇಯವು, ಏಕೆಂದರೆ

'ವೇದ ಘನವೆಂಬೆನೆ? ವೇದ ವೇದಿಸಲರಿಯದೆ ಕೆಟ್ಟವು
ಶಾಸ್ತ್ರಘನವೆಂಬೆನೆ? ಶಾಸ್ತ್ರಸಾಧಿಸಲರಿಯದೆ ಕೆಟ್ಟವು.
ಪುರಾಣ ಘನವೆಂಬೆನೆ? ಪುರಾಣ ಪೂರೈಸಲರಿಯದೆ ಕೆಟ್ಟವು.
ಆಗಮ ಘನವೆಂಬೆನೆ? ಆಗಮ ಅರಸಲರಿಯದೆ ಕೆಟ್ಟವು
ಅದೇನು ಕಾರಣವೆಂದರೆ:
ವೇದ,ಶಾಸ್ತ್ರ,ಪುರಾಣಾಗಮಂಗಳೆಲ್ಲ ತಮ್ಮ ತನುವಿಡಿದು ಅರಸಲರಿಯವು.
ಇದಿರಿಟ್ಟುಕೊಂಡು ಕಂಡುಹೋದ
ನರಲೋಕದ ನರರುಗಳರಿಯರು ಸುರಲೋಕದ ಸುರರುಗಳರಿಯರು
ಕೂಡಲಚೆನ್ನಸಂಗಾ ನಿಮ್ಮ ಶರಣನೇ ಬಲ್ಲ'.

ವೇದ, ಶಾಸ್ತ್ರ ಪುರಾಣಂಗಳೆಲ್ಲ ತಮ್ಮ ಮೂಲವ ಅರಸ ಲರಿಯದೆ ಕೆಟ್ಟವು. ಅವುಗಳ ನಂಬಿದ ನರರು, ಸುರರು ಅವರೆಂತು ತಮ್ಮ ಮೂಲ ಸ್ವರೂಪವ ತಿಳಿವರು ? ಇವರುಗಳು ಶಬ್ದ ಸಂಭ್ರಮದವರು ಮುನ್ನ ಮುನ್ನಲಾದ ಘನವ ಅವರೆಂತು ತಿಳಿವರು. ಇದು ಕಾರಣ ತಮ್ಮ ತಮ್ಮ ಸಿದ್ಧಾಂತಗಳು ಘನವಾಗಿಹವು ಹೀಗಾಗಿ ಸಮ ಸ್ವರೂಪದ ಘನವು ತಿಳಿಯದಾಯಿತು.

'ಸಮತೆ ಸಯವಾದ ಶರಣಂಗೆ ಅರವು ಮರಹುಗಳುಂಟೆ ? ಉಪಮೆ ನಿಸ್ಥಲವಾದ ಶರಣಂಗೆ ಶಬ್ದ ಸಂದಣಿಯುಂಟೆ ? ಅಖಂಡಿತ ಲಿಂಗಕ್ಕೆ ಅಪ್ರಮಾಣ ಶರಣಂಗೆ ಸೀಮೆ ಸಂಬಂಧವೆಂಬ ಸಂಕಲ್ಪ ಉಂಟೆ ? ಇದು ಕಾರಣ ಕೂಡಲ ಚೆನ್ನಸಂಗಾ ನಿಮ್ಮ ಶರಣಂಗೆ ಭವವಿಲ್ಲ, ಬಂಧನವಿಲ್ಲ'.

ದ್ವೈತ ಸಿದ್ಧಾಂತ , ಅದ್ವೈತ ಸಿದ್ಧಾಂತ, ಮರವು ಅರುವನ್ನು ಪ್ರತಿಪಾದಿಸುತ್ತವೆ. ಅಲ್ಲಿ ಉಪ ಮಾನ ಉಪಮೇಯಂಗಳ ಬಳಕೆ ಬಹುವಾಗಿದೆ. ಇಲ್ಲಿ ಶಬ್ದವು ಸತ್ಯವಾಗಿದೆ. ಇದಲ್ಲದೆ ಸೀಮಿತ ವಾದವುಗಳು. ದ್ವೈತವು ಅದ್ವೈತವ ಸೇರದು, ಅದ್ವೈತವು ದ್ವೈತವ ಸೇರದು, ಉತ್ತರ ಸಿದ್ಧಾಂತ ನಿಸ್ಸೀಮವು. ಸಮತ್ವ ತನ್ನದಾದುದರಿಂದ ಅಖಂಡ, ಅದ್ವಿತೀಯ, ಅಪ್ರಮಾಣ, ಅಚಿಂತ್ಯತ್ವ ಸಿದ್ಧಿಸುವುದರಿಂದ ಸಿದ್ಧಾಂತಗಳ ಉತ್ತರವಾಗಿಹುದು.

ಉತ್ತರ ಸಿದ್ಧಾಂತವು ಅಷ್ಟಾವರಣ, ಪಂಚಾಚಾರಂಗಳಿಗೆ ಉತ್ತರ ನೀಡುವ ಸಿದ್ಧಾಂತವು. ಸ್ಥಲ,

ನಿಷ್ಫಲವ ಸೂಚಿಸಿ ತಾನು ಮಿಕ್ಕಿ ಮೀರಿ ನಿಂತ ನಿಲುವುಳ್ಳ ಘನದಿರುವಿನ ಅರುವಾಗಿಹ ಸಿದ್ಧಾಂತ, ತಾನಾರೆಂಬ ತನ್ನ ಪ್ರಶ್ನೆಗೆ ತಾನೆ ಉತ್ತರವ ಕಂಡು ಕೊಂಡಿಹ ಸಿದ್ಧಾಂತ. ತನ್ನಿಂದ ತನ್ನ ನೋಡಿ ತನಗೆ ತಾನೆ ಪ್ರತ್ಯಕ್ಷನಾದೆ ನೆಂಬುವುವವರ ಮತಿಗೆ ಉತ್ತರ ನೀಡುವ ಸಿದ್ಧಾಂತ. ಎನಗೆ ಅನ್ಯವಿಲ್ಲ, ಅನ್ಯ ನಾನಲ್ಲ , ಬ್ರಹ್ಮವೇ ನಾನೆಂಬ ಚಿದಹಮ್ಮಿಗೆ ಉತ್ತರ ನೀಡುವ ಸಿದ್ಧಾಂತ.

ಉತ್ತರ ಸಿದ್ಧಾಂತ ಎಂಜಲ ಮಾತಿನವರ ಸಿದ್ಧಾಂತವಲ್ಲ, ಅವರುಗಳಿಗೆ ಮಿಗೆ ಮಿಗೆ ಮೀಸಲವಾಗಿಹ ಅನುಪಮ ಸಮ ಸುಖದತ್ತ ಸಂಜ್ಞೆಯ ಕರುಣಿಸುವ ಸಿದ್ಧಾಂತ . ಇದು ತನ್ನಿಂದ ತನ್ನ ಕಂಡ ಸಿದ್ಧಾಂತವಾದ್ದರಿಂದ ಶಬ್ದವೇದಿಗಳಿಗೆ ಉತ್ತರ ನೀಡುವ ಸಿದ್ಧಾಂತ. ಭಾವಕ್ಕಿಂಬು ಕೊಡದ ಸಿದ್ಧಾಂತ. ಆವಲ್ಲಿ ಆವುದರಿಂದ ಸರ್ವಪ್ರಪಂಚ ನಿವೃತ್ತವಾಗಿಹುದು ಅದರ ಸಿದ್ಧಾಂತ. ಆವುದರಿಂದ ಆನೆಂಬ ತೋರಿಕೆ ಹುಟ್ಟದಿಹುದು ಅದರ ಸಿದ್ಧಾಂತ . ಆವುದರಿಂದ ಕೇವಲ ನಿಶ್ಚಿಂತ ವಾಗುವದು ಅದರ ಸಿದ್ಧಾಂತ. ಅಲ್ಲಿ ಶಬ್ದವೆ ಮೀಸಲವಾಗಿಹುದು. ಇದು ತನಗೆ ತಾನೆ ಉತ್ತರ ಕಂಡು ಕೊಂಡವರ ಸಿದ್ಧಾಂತ ಉತ್ತರ ಪ್ರಾಪ್ತವಾದಲ್ಲಿ ಪ್ರಶ್ನೆ ಉದ್ಭವಿಸಲಿಂಬುಂಟೆ ? ಶುದ್ಧನರಿದಿಹ ಸಿದ್ಧವನರಿದಿಹ, ಪ್ರಸಿದ್ಧವನರಿದಿಹ ಸಿದ್ಧಾಂತ. ಮೂರೊಂದಾದ ಸಿದ್ಧಾಂತವೆ ಉತ್ತರ ಸಿದ್ಧಾಂತವು. ಇದು ಲಿಂಗೈಕ್ಯ ನಿಲುವುಳ್ಳವರದಾದುದರಿಂದ ನಿಶಬ್ದವೇದಿಗಳ ಸಿದ್ಧಾಂತವೆಂದು ಹೇಳಿದೆ.

ವಿದ್ಯಾನಂದ ಶರಣರು , ಡಬ್ಬೇರುಮಡುವು

1

ಎಂಜಲ ಮಾತ ನುಡಿವ ರಂಜಕರೆಲ್ಲರೂ ಮಿಗೆ, ಮಿಗೆ ಮೀಸಲ ತಾವೆತ್ತ ಬಲ್ಲರೊ!
ಮೀಸಲು ಎಂಜಲಹುದೆ? ಎಂಜಲ ಮೀಸಲಹುದೆ?
ಮಾತಿನ ಬಣಮೆಯ ಮೇದ ಪಶು ಪ್ರಾಣಿಯಂತೆ ಎಂಜಲ ಮಾತ ನುಡಿಯುತ್ತಿಹರು,
ಲಿಂಗ ಸಕೀಲ ಸಂಯೋಗದ ವರ್ಮಸ್ಥಲವ ನವರೆತ್ತ ಬಲ್ಲರು!
ಕೂಡಲ ಚೆನ್ನಸಂಗಯ್ಯಾ,
ಉಪದೇಶ ಸೂತಕಿಗಳೆಲ್ಲರೂ ರೌರವ ನರಕಿಗಳು. ॥ 693 ॥

ತಾತ್ಪರ್ಯ : ಎಂಜಲ ಮಾತ ನುಡಿವ ರಂಜಕರೆಲ್ಲರೂ ಮಿಗೆ ಮಿಗೆ ಮೀಸಲ ತಾವೆತ್ತ ಬಲ್ಲರೊ: ಎಂಜಲ ಮಾತ ನುಡಿವ ರಂಜಕರಾರು? ಮಿಗೆ ಮಿಗೆ ಮೀಸಲ ವಾಗಿದ್ದ ಲಿಂಗ ಪರ ತತ್ವವರಿಯದವರು. ಲಿಂಗ ಸಕೀಲ ಸಂಯೋಗ ವರ್ಮ ಸ್ಥಲ ನರಿಯದವರೆಲ್ಲ ಎಂಜಲ ಮಾತ ನುಡಿವ ರಂಜಕರೆ ರಂಜಕರು. ಮಹಾತ್ಮರ ಬೋಧ ಕಳವು ಮಾಡಿದ ರಂಜಕರು. ಅವರು ಸ್ವಾನುಭವ ಕಳವು ಮಾಡಿದ ರಂಜಕರು, ಇವರು ಎಂಜಲ ಮಾತ ನುಡಿವ ರಂಜಕರು.

ಇವರು ಕೂಡ ಲಿಂಗವೆಂಬುದು ಸರ್ವಕಾರಣ, ಪರಮ ನಿರ್ಮಲ ಸಚ್ಚಿದಾನಂದ ನಿತ್ಯ ಪರಿಪೂರ್ಣ, ಲಿಂಗವದು ಸಕಲ ಲೋಕೋತ್ಪತ್ತಿಗೆ ಮೂಲ ಕಾರಣ; ಸರ್ವರ ತತ್ವಪೂರ್ಣ ನಿಜ ಚೈತನ್ಯ ಲಿಂಗವೆಂಬುದು ಶರಣರ ಹೃದಯದಲ್ಲಿ ಬೆಳಗುವ ಜ್ಯೋತಿ. ಲಿಂಗವದು ಜನ್ಮ ವಾರುಧಿಯ ದಾಂಟಿಸುವ ಭೈತ್ರವು ಎಂದು ಮಹಾತ್ಮರು ಹೇಳಿದುದನ್ನೆ ಹೇಳುವರು. ನುಡಿದುದನ್ನೆ ನುಡಿದು ನುಡಿಯಿಂದಲೆ ಸಂತೋಷ ಗೊಳಿಸುವವರು, ಶಬ್ದ ಸಂಭ್ರಮದವರು. ಇವರು ನಿಶಬ್ದ ವೇದಿಸದವರು. ಇವರು ನುಡಿಯಲ್ಲಿಯೆ ನಿಂತು ನುಡಿಯೆ ಲಿಂಗ, ನುಡಿಯೆ ಸಚ್ಚಿದಾನಂದ ನಿತ್ಯ ಪೂರ್ಣ, ನುಡಿಯೆ ನಿಜ ಚೈತನ್ಯ, ಶರಣರ ಹೃದಯದಲ್ಲಿ ಬೆಳಗುವ ಜ್ಯೋತಿ ಲಿಂಗವದು ಎಂದು ನುಡಿ ನುಡಿದು ನುಡಿಯೆ ವೃದ್ಧಿಯಾಯಿತ್ತು. ಇದರಿಂದ ಲಿಂಗ ಸಕೀಲ ಸಂಯೋಗದ ವರ್ಮ ಸ್ಥಲವರಿತಂತಾಯಿತೆ?

ಓ ಅಣ್ಣಯ್ಯಗಳಿರಾ, ಅಪ್ಪಯ್ಯಗಳಿರಾ, ನಿಮ್ಮ ನುಡಿಗಳೆ ನಿಮಗೆ ಹಗೆಯಾದುದು ವಿದಿತವಾಗಲಿಲ್ಲವೆ? ನಿಮ್ಮ ಶಬ್ದಂಗಳೆ ನಿಮ್ಮ ಅರುವಿಂಗೆ ಹಾನಿಯನ್ನುಂಟು ಮಾಡಿದುದು ನಿಮಗೆ ಗೊತ್ತಾಗಲಿಲ್ಲವೆ? ನೀವು ಈ ಶಬ್ದ ಸಂಭ್ರಮದ ವಾಸನೆ ಕಳೆದು ಕೊಳ್ಳುವದದೆಂತು? ಇದರಿಂದ ದೇಹ ವಾಸನೆ ಲೋಕ ವಾಸನೆ ವೃದ್ಧಿಯಾಯಿತಲ್ಲದೆ ವಾಸನಾತ್ರಂಯಗಳು ಕ್ಷಯವಾಗಲಿಲ್ಲ. ಇದರಿಂದ ನಿಮಗಾದ ಲಾಭವಾವುದು, ವಾಸನೆಯೆ ಲಿಂಗದ ಘನತ್ವ ಅರಿಯದಂತೆ ಮಾಡಿತ್ತು. ಎಂಜಲ ಮಾತು ಮೀಸಲವಾಗದು ಮೀಸಲು ಎಂಜಲವಾಗದು. ಓ ಅಣ್ಣಯ್ಯಗಳಿರಾ ನಿಮ್ಮ ಸ್ವಾನುಭವ ಮೀಸಲವಾಗಿದ್ದಲ್ಲಿ ಅದು ಶಬ್ದ ಸಂಭ್ರಮವುಳ್ಳದ್ದಾಗದು. ಮೀಸಲ ತತ್ವ ಸರಿಯಾಗಿ ತಿಳಿಯದ್ದರಿಂದ ವಿಶ್ವದಲ್ಲಿ ಜಾತೀಯತೆ ಮಿಗೆ ಮಿಗೆಯಾಗಿದೆ. ಪಕ್ಷ ಪಂಗಡಗಳು ಸಾಂಪ್ರದಾಯಗಳು ಧರ್ಮಗಳು ಅಧಿಕವಾಗಿವೆ. ತಿಳಿ ತಿ ಳಿದಂತೆ ವಿಶ್ವವೆ ಭಿನ್ನ ಭಿನ್ನ ಅಭಿಪ್ರಾಯವುಳ್ಳದಾಗಿರುವದು, ಇದು ಕಾರಣ ಮಹಾನುಭಾವಿಗಳು ಎಂಜಲು ಮೀಸಲಹುದೆ? ಮೀಸಲು ಎಂಜಲಹುದೆ? ಎಂದು ಪ್ರಶ್ನಿಸಿಹರು.

ನುಡಿಗೆ ಮೀರಿದ ತತ್ವ, ನಡೆಗೆ ಮೀರಿದ ತತ್ವ, ನುಡಿ ನಡೆಗೊಳಗಾಗದಲ್ಲಿ ಮೀಸಲ ಹೇಗಾಗುವದು? ಅಚಿಂತ್ಯವು ಚಿಂತನದಿಂದುಕ್ತವಾದಲ್ಲಿ ಮೀಸಲ ಹೇಗಾಗುವದು? ಅನುಪಮ ಲಿಂಗವು ಉಪಮೆಗೊಳಪಟ್ಟಲ್ಲಿ ಮೀಸಲ ಹೇಗಾಗುವದು. ಅಕ್ರಿಯೆ ಲಿಂಗ, ಕ್ರಿಯಾ ಲಿಂಗವಾಗಬಹುದೆ? ಅರುವ ಅರಿತವರ ಲಿಂಗ, ಅರಸುವವರ ಲಿಂಗ ಹೇಗಾಗುವುದು?

ಅರಸುವವರೆಲ್ಲ ಎಂಜಲ ಮಾತ ನುಡಿವ ರಂಜಕರು. ಲಿಂಗ ಸಕೀಲ ಸಂಯೋಗದ ವರ್ಮ ಸ್ಥಲವರಿತವರು ಮೀಸಲವರಿತವರು.

ಮಾತಿನ ಬಣಬೆಯ ಮೇದ ಪಶು ಪ್ರಾಣಿಯಂತೆ : ಮಾತಿನ ಬಣಬೆಯು ಆವುದು , ಪಶು ಪ್ರಾಣಿಗಳು ಆವವು ? ವೇದ , ಶಾಸ್ತ್ರ , ಆಗಮ , ಪುರಾಣಂಗಳು ಮಾತಿನ ಬಣಬೆಯು. ಅವುಗಳ ಮೂಲವ ನರಿಯದೆ , ಅಲ್ಲಿ ಬರುವ ಶ್ಲೋಕಕ್ಕೆ ನಂಬಿ ಪಾಠ ಪಾರಾಯಣ ಮಾಡುವವರೆಲ್ಲ ಪಶು ಪ್ರಾಣಿಗಳು. ಶಬ್ದ ಸಂಭ್ರಮದವರು. ಇವರು ಪಶು ಪ್ರಾಣಿಗಳು, ಲಿಂಗ ವರಿಯದವರು ಪಶು ಪ್ರಾಣಿಗಳು, ಇವರು ಎಂಜಲ ಮಾತ ನುಡಿದುದೆ ಬಣಬೆಯ ಮೇದುದು. ಇವರು ಅರುವ ಅರಿಯ ಹೇಳಿ ಗುರು ಕೊಟ್ಟ ಲಿಂಗ ವರಿತರೆ?

ಲಿಂಗವದು ಸಚ್ಚಿದಾನಂದವೆಂದು ಅರಿತರೆ, ನಿಜವರಿತರೆ ? ಚೈತನ್ಯ ಸಚ್ಚಿದಾನಂದ ಅರಿತರೆ! ನುಡಿಗೆಡೆಗೊಡದಿಹ ಘನವೆ ತನ್ನಿರುವೆಂಬುದು ತನ್ನಿಂದ ತನಗೆ ವಿದಿತವಾಯಿತೆ? ತಾನು ಜ್ಯೋತಿಯ ಜ್ಯೋತಿ , ಸ್ವಯಂಜ್ಯೋತಿ , ಹೆತ್ತರಿವು ಆಗಲಿಲ್ಲವೆ ? ನುಡಿಗಳೆಲ್ಲ ಎಂಜಲವಾಯಿತೆ, ತನ್ನ ನುಡಿಯೆ ಎಂಜಲವೆಂಬುದು ತನ್ನಿಂದ ತನಗದು ಸಿದ್ಧವಾಯಿತೆ ? ಮೀಸಲವಾಗಿಹ ತನ್ನಿರುವೆ ಅರುವು ಎಂಬುದು ತನ್ನಿಂದ ತಾನು ಕಂಡನೆ ? ತಾನಾದನೆ ? ಯಾರು ಲಿಂಗ ಲಿಂಗ ಎಂದು ಹಲುಬುವವರಲ್ಲವೊ ಅವರಿಗೆ ಲಿಂಗವರಿಯುವ ಸಕೀಲ ಗೊತ್ತು. ಲಿಂಗವದು ಸಚ್ಚಿದಾನಂದ, ನಿಜ ಚೈತನ್ಯ ಪರಿಪೂರ್ಣ, ಅಚಿಂತ್ಯ ಸ್ವಯಂಜ್ಯೋತಿ ಎಂದು ಹೇಳುವ ಕಲೆ ಹೇಗೆ ಗೊತ್ತಾಗಿದೆಯೊ ಹಾಗೆ ಸಚ್ಚಿದಾನಂದ ರೂಪಿ ಲಿಂಗ ನಿರೂಪವಾಗಿಹ ಲಿಂಗವರಿಯುವ ಸಕೀಲ ಅವರಿಗೆ ಗೊತ್ತುಂಟು. ಈ ಸಕೀಲ ಗೊತ್ತಾದುದರಿಂದ ಲಿಂಗ ತಾನು ಒಂದಾಗುವ ವರ್ಮಸ್ಥಲ ವರಿತುದರಿಂದ ಅರ್ಪಿತವಿಲ್ಲ, ಅರ್ಚನೆ ಅವಧಾನವಿಲ್ಲ ಶಬ್ದಕ್ಕೆ ತೆರಹಿಲ್ಲದಂತೆ ಮಿಗೆ ಮಿಗೆ ಮೀಸಲವಾಗಿಹ ಅರಿವು ಆಗಿದೆ ಎಂದು ತಿಳಿವುದು.

ತಿಳಿಯದವರು ಕೂಡಲಚೆನ್ನಸಂಗಯ್ಯನಲ್ಲಿ ಶಬ್ದಸೂತಕರೆಲ್ಲರೂ ರೌರವ ನರಕಿಗಳು . ಶಬ್ದವೆ ಲಿಂಗವಾಗಿ ತಾವಾದವರೆಲ್ಲ ಶಬ್ದ ಸೂತಕಿಗಳು . ಇವರು ಶಬ್ದಸಂಭ್ರಮದಲ್ಲಿ ಲಿಂಗ ತೋರಿಸುವವರು ಸಂತೋಷ ಪಡಿಸುವ ರಂಜಕರು . ಇವರಿಗೆ ಶಬ್ದ ಕರಗಿಸುವ ಘನದಿರುವುಳ್ಳ ಅರುವಾಗಿಹ ಕರುಣಾರಸ ಹೇಗೆ ಪ್ರಕಟವಾಗಬೇಕು? ಶಬ್ದಮುಗ್ಧವಾಗಿಹ ಘನದಿರುವು ಹೇಗೆ ಪ್ರಜ್ವಲಿಸುವದು ? ಇಂಥವರಿಂದ ಪರತತ್ವ ನಿಜ ಸಂಯುಕ್ತರ ಆನು ನೀನೆನ್ನದಿಹ ಶಬ್ದಸುಖಿಗಳ ತೋರಾ ಎನಗೆ ! ಎಲೆ ಲಿಂಗವೆ ಲಿಂಗೈಕ್ಯರ, ಲಿಂಗ ಗೂಢಾಗಿಪ್ಪವರ ಲಿಂಗಸಂಗಿಗಳ ಲಿಂಗಾಭಿಮಾನಿಗಳ ತೋರಾ ಎನಗೆ ! ಕೂಡಲಸಂಗಮದೇವಾ. ಅಹೋ ರಾತ್ರಿ ಅವರ ಸೇವೆಯಲ್ಲಿರಿಸು ಎಂದು ಬಸವರಸರೆ ಬಿತ್ತರಿಸಿರುವಲ್ಲಿ ಲಿಂಗ ಸಕೀಲ ಸಂಯೋಗದ ವರ್ಮಸ್ಥಲ ಅರಿಯುವ ಭಾಗ್ಯ ಈ ಶಬ್ದಾಭಿಮಾನಿಗಳಿಗೆ ಶಬ್ದ ಪ್ರೇಮಿಗಳಿಗೆ ಶಬ್ದವೆ ತಾವಾಗಿ ಹೇಳುವವರಿಗೆ ಅಸಾಧ್ಯವಾದುದರಿಂದ ಶಬ್ದಸೂತಕರೆಲ್ಲರೂ ರೌರವ ನರಕಿಗಳು ಎಂದು ಹೇಳಿಹರು.

2

ಪ್ರಥಮ ವೇದಿಗಳೆಲ್ಲರು ಗತಿಯಲ್ಲಿ ಸಿಲುಕಿದರು ,
ಅತೀತ ಅನಾಗತ ರೆಂಬುವವರೆಲ್ಲರು ಮತಿಯಲ್ಲಿ ಸಿಲುಕಿದರು
ಶೃತಿವಂತರೆಲ್ಲ ಆಗಮದಲ್ಲಿ ಸಿಲುಕಿದರು ಇಂಥವನು ಲಿಂಗೈಕ್ಯನಹನೆ?
ನುಡಿದು ನುಡಿಯ ನಡೆದುದು ನಡೆಯ ಬಂದಲ್ಲಿ ಬಾರನು , ನಿಂದಲ್ಲಿ ನಿಲ್ಲನು
ನಿಸ್ಸೀಮನು ಕೂಡಲಚೆನ್ನಸಂಗಯ್ಯ ಲಿಂಗೈಕ್ಯನು . ॥ 751 ॥

ತಾತ್ಪರ್ಯ : ಷಟ್‌ಸ್ಥಲ ಚಕ್ರವರ್ತಿ ನಿಸ್ಸೀಮ ಚಕ್ರವರ್ತಿ ಲಿಂಗೈಕ್ಯ : ವೇದದ ತಿರುಳನ್ನು ತಿಳಿದ ಅಕ್ಷರೋತ್ತಮ, ಬಚ್ಚಬರಿಯ ನಿರಾಳ ಅಚಿಂತ್ಯಾತ್ಮ . ಈ ಸೀಮಿತರು ನಿಂತ ನಿಲುವು ಇವರ ಗತಿ ಮತಿ ಇವರು ನಂಬಿದ ವೇದ ಆಗಮಂಗಳ ವಿವರವನ್ನು ಇಲ್ಲಿ ತಿಳಿಸುತ್ತಿದ್ದಾರೆ.

ಪ್ರಥಮ ವೇದಿಗಳೆಲ್ಲರೂ ಗತಿಯಲ್ಲಿ ಸಿಲುಕಿದರು. ಅತೀತ ಅನಾಗತರೆಂಬುವವರೆಲ್ಲರು ಮತಿಯಲ್ಲಿ ಸಿಲುಕಿದರು, ಶೃತಿವಂತರೆಲ್ಲ ಆಗಮದಲ್ಲಿ ಸಿಲುಕಿದರು, ಇಂಥವನು ಲಿಂಗೈಕ್ಯನೆ ?

ವೇದವೆಂಬುದು ಜ್ಞಾನ, ಜ್ಞಾನವದು ಕ್ರಿಯೆ. ಉಪಾಸನಾ ಜ್ಞಾನ , ಈ ಮೂರರ ಜ್ಞಾನ ಉಂಟು ಇದರಲ್ಲಿ ಕ್ರಿಯಾ ಜ್ಞಾನ ಉಂಟು, ಉಪಾಸನಾ ಜ್ಞಾನವುಂಟು ಅರುವಿನ ಲಕ್ಷಣಾತ್ಮಕ ಜ್ಞಾನವು ಉಂಟು. ವೇದ ತ್ರಿವಿಧಕ್ರಮ ತಿಳಿಸುವ ಮಹಾಗ್ರಂಥ .ಈ ಮಹಾ ಬೋಧರೂಪ ವೇದದಿಂದ ಕಲ್ಪಿತ ಪುರುಷನಿಗೆ ಪಾಪದೋಷ, ಚಾಂಚಲ್ಯದೋಷ, ಆವರಣ ದೋಷ ಕಳೆದು ಕೊಳ್ಳಲು ಸಾಧನೆಯ ವಿವರಗಳು ಇದರಲ್ಲಿ ತಿಳಿಸಿದೆ.

ರಾಗ ದ್ವೇಷರೂಪಿ ಪಾಪದೋಷ ಕಳೆದುಕೊಳ್ಳಲು ಪ್ರಥಮ ಭಾಗ ಹೇಳಿದೆ. ಮನದ ಚಂಚಲತೆಯ ಕಳೆಯಲು ದ್ವಿತೀಯ ಭಾಗ ಹೇಳಿದೆ. ಆವರಣವ ಕಳೆಯಲು ವೇದದ ಕೊನೆಯ ಭಾಗ ಹೇಳಿದೆ. ಬಹು ಜನರು ವೇದದ ಪ್ರಥಮ ಭಾಗಕ್ಕೆ ಒಪ್ಪಿದಂತೆ ಕಾಣುತ್ತದೆ . ವೇದದಲ್ಲಿಯೂ ಕೂಡಾ 80 ಪೈಸದಷ್ಟು ಕರ್ಮಜ್ಞಾನವ ಹೇಳಿದೆ, 16 ಪೈಸದಷ್ಟು ಉಪಾಸನೆ ಹೇಳಿದೆ, ಜ್ಞಾನಕ್ಕೆ 4 ಪೈಸದಷ್ಟು ಹೇಳಿದೆ. ಇವರು ವೇದ ತನ್ನನ್ನು ತಿಳಿಯುತ್ತದೆಯೊ ? ತಾನು ವೇದವನ್ನು ತಿಳಿಯುವನೊ? ಎಂಬ ಸುವಿಚಾರವಂತರಾಗಲಿಲ್ಲ , ಸುವಿಚಾರ ಮಾಡದಿದ್ದರೂ ಸುಸಂಗ ಮಾಡಲಿಲ್ಲ . ಇದು ಕಾರಣ ಇವರುಗಳಿಗೆ ತಮ್ಮಿಂದ ತಿಳಿಸಿಕೊಳ್ಳುವ ವೇದವೆ ಘನವಾಯಿತಲ್ಲದೆ , ತಾನು ಘನಕ್ಕೆ ಘನನೆಂಬುದು ವಿದಿತವಾಗಲಿಲ್ಲ .

ತಾನಾರು ತನ್ನಸ್ವರೂಪವರಿಯದೆ ವೇದವನೋದಿದ ಪ್ರಥಮ ವೇದಿಗೆ ಕರ್ಮಕಾಂಡ ಬೋಧಿಸುವ ದ್ವೈತಜ್ಞಾನವೆ ಶ್ರೇಷ್ಠವೆನಿಸಿ ಕ್ರಿಯಾಕರ್ಮಗಳೆ ಪ್ರಿಯಾವಾಗಿ ಗತಿಯಲ್ಲಿ ಸಿಲುಕಿದ. ಅತೀತ ಅನಾಗತರೆಂಬುವವರು ಮಧ್ಯಮ ಭಾಗವಾಗಿಹ , ವೇದಾತೀತ , ಭಾವಾತೀತ , ತ್ರಿಗುಣಾತೀತ ಕಾಲಾತೀತನೆಂಬ ಉಪಾಸನೆ ಶ್ರೇಷ್ಠವೆನಿಸಿ, ಮತಿಗೆ ಸಿಲುಕಿದ. ಕೊನೆಯದಾದ ಜ್ಞಾನ ಕಾಂಡದಲ್ಲಿ ತತ್ವಮಸಿ , ಅಯಮಾತ್ಮ ಬ್ರಹ್ಮ, ಪ್ರಜ್ಞಾನಂ ಬ್ರಹ್ಮ, ಅಹಂಬ್ರಹ್ಮಾಸ್ಮಿ ಮಹಾವಾಕ್ಯಗಳ ನಂಬಿ ಶೃತಿಯೆ ಘನವಾಗಿ, ಏಕಮೇವಾದ್ವಿತೀಯ ಬ್ರಹ್ಮ, ಸತ್ಯಜ್ಞಾನಮನಂತಂ ಬ್ರಹ್ಮಶೃತಿಗಳ ಒಪ್ಪಿದವರೆಲ್ಲ ಚಿದಹಮ್ಮಿಗೆ ಒಪ್ಪಿ ಭ್ರಮಿತರಾದರು .

ಗತಿ ಮತಿಗೆ ಸಿಲುಕಿದವರು ಆರು ? ಕ್ರಿಯಾ ಕರ್ಮದ ಅಭಿಮಾನಿಗಳು ಗತಿಗೆ ಸಿಲುಕಿದರು . ಶಬ್ದಾಭಿಮಾನಿಗಳು ಮತಿಗೆ ಸಿಲುಕಿದರು.ಚಿತ್ತಾಭಿಮಾನಿಗಳು ಆಗಮದಲ್ಲಿ ಸಿಲುಕಿದರು . ಇಂಥವನು ಲಿಂಗೈಕ್ಯನಹನೆ ? ಲಿಂಗೈಕ್ಯರಾರು ? ವಾಙ್ಮನಕ್ಕೆಬಾರದ ಅಪ್ರತಿಮ ಲಿಂಗವರಿತು ಅಚಲಾನಂದದಲ್ಲಿರುವವರೆ ಲಿಂಗೈಕ್ಯರು . ಅರುವ ಅರಿತು ಅರಿಯದರುವು ಏನೆಂದೆನಲಿಲ್ಲದ ಅರುವು ಅವರ್ಣೀಯವು. 'ಅರಿದೆನೆಂದರೆ ಅರಿಯ ಬಾರದು ನೋಡಾ. ಘನಕ್ಕೆ ಘನ ತಾನೆ ನೋಡಾ. ಚೆನ್ನಮಲ್ಲಿಕಾರ್ಜುನನ ನಿರ್ಣಯವಿಲ್ಲದೆ ಸೋತೆನು' ಅಕ್ಕ ತಾನು ತನ್ನನ್ನು ಅರಿದರಿದು ಹೇಳಿದುದು, ಏನನ್ನಾದರೂ ಅರಿಯ ಬಹುದು. ತನ್ನನ್ನು ಅರಿದೆನೆಂದರೆ ಅರಿಯಬಾರದು , ತಾನೆ ಘನಕ್ಕೆ ಘನನಾಗಿರುವಲ್ಲಿ ತನ್ನನ್ನು ಅರಿಯುವುದದೆಂತು ? ತಾನು ವಾಙ್ಮನೋತೀತ, ಗತಿಮತಿಗೆ ಮೀರಿದ ಘನಕ್ಕೆ ಘನ . ಶೃತಿಗಗೋಚರವಾಗಿರುವ ತನ್ನನ್ನು ಅದಾವ ಪರಿಯಲ್ಲಿ ಅರಿವುದು .

ನುಡಿದುದ ನುಡಿಯ ನಡೆದುದ ನಡೆಯ ಬಂದಲ್ಲಿ ಬಾರನು ,ನಿಂದಲ್ಲಿ ನಿಲ್ಲನು, ನಿಸ್ಸೀಮ

ಕೂಡಲಚೆನ್ನಸಂಗಾ ಲಿಂಗೈಕ್ಯನು. ಲಿಂಗೈಕ್ಯನು ನುಡಿದುದು ನುಡಿಯ, ಲಿಂಗವೆಂಬುದು ಸರ್ವ ಕಾರಣ ಪರಮ ನಿರ್ಮಲ ಸಚ್ಚಿದಾನಂದ ನಿತ್ಯ ಪರಿಪೂರ್ಣ ನಿಜ ಚೈತನ್ಯ, ಶರಣರ ಹೃದಯದಲ್ಲಿ ಬೆಳಗುವ ಜ್ಯೋತಿ, ಇಂತೀ ಲಿಂಗವರ್ಮವ ನರಿದವನೆ ಅರಿದವನು. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ಲಿಂಗೈಕ್ಯನು. ಲಿಂಗವೆಂದವನು ಪುನಃ ಲಿಂಗವೆನಲಿಲ್ಲ, ಶರಣರ ಅರುಹೃದಯ ಮಾಡಲು ಉಸುರಿದ ಶರಣರಿಗೆ ಲಿಂಗಸಕೀಲ ಸಂಯೋಗದ ವರ್ಮವನರಿಯಲು ನುಡಿದ. ಪುನಃ ನುಡಿಯಲಿಲ್ಲ ನುಡಿದ ನುಡಿ ತಾನಾಗಲಿಲ್ಲ.

ನಡೆದುದ ನಡೆಯ , ಅಂಗವಾಗಿ ನಡೆದುದು ನಡೆಯ , ಲಿಂಗಾಂಗವಾಗಿ ನಡೆದುದು ನಡೆಯ , ಲಿಂಗಾಂಗವಾಗಿ ನಡೆದುದು ಲಿಂಗಾಂಗ ಸಮರಸವರಿಯಲು ಲಿಂಗಾಂಗವಾಗಿ ನಡೆಯ, ಲಿಂಗವರಿತ ಅಕಲ್ಪಿತ ಘನ ಕಲ್ಪಿತನಾಗಿ ನಡೆಯನು. ಪೂರ್ವದಲ್ಲಿ ಕಲ್ಪಿತನಾಗಿ ಅಂಗವಾಗಿದ್ದ , ಲಿಂಗವಾಗಿದ್ದ ಲಿಂಗಾಂಗವಾಗಿದ್ದ, ಲಿಂಗಾಂಗ ಸಮರಸವಾಗಿದ್ದ ಲಿಂಗ ಸಕೀಲ ಸಂಯೋಗದ ವರ್ಮ ವರಿತು ಅಕಲ್ಪಿತ ಘನನೆ ತಾನಾದುದರಿಂದ ನಡೆದುದೆಲ್ಲವನ್ನು ನಡೆಯದಾದ.

ಬಂದಲ್ಲಿ ಬಾರನು ನಿಂದಲ್ಲಿ ನಿಲ್ಲನು : ಗುರುವಿನಿಂದ ಲಿಂಗದಿಂದ , ಜಂಗಮದಿಂದ ಪ್ರಸಾದದಿಂದ ಬಂದ, ಪುನಃ ಗುರುಘನವನರಿಯ ಹೋಗಿ ಗುರುವಿಂಗೆ ಗುರುವಾದುದರಿಂದ ಬಂದಲ್ಲಿ ಬಾರನು ಎಂದು ಹೇಳಿದ. ಲಿಂಗವರಿಯ ಹೋದ , ಸುಚೈತನ್ಯವರಿಯ ಹೋದ , ಪ್ರಸಾದವರಿಯ ಹೋಗಿ , ಲಿಂಗಕ್ಕೆ ಲಿಂಗವಾಗಿ ಬೆಳಗಿನ ಬೆಳಗು ತಾನಾದ. ಸುಚೈತನ್ಯವರಿಯ ಹೋಗಿ ನಿಜಚೈತನ್ಯ ವಾದ, ಪ್ರಸಾದವರಿಯ ಹೋಗಿ ಮಹಾಪ್ರಸಾದವೆ ತಾನಾದುದರಿಂದ ಬಂದಲ್ಲಿ ಬಾರನು ನಿಂದಲ್ಲಿ ನಿಲ್ಲನು , ನಿಸ್ಸೀಮನು ಎಂದು ಹೇಳಿದುದು .

ನಿಸ್ಸೀಮವದು ಗುರುವಿಂಗೆ ಗುರುವಾದುದು . ಅಲ್ಲಿ ಶಿಷ್ಯನಾಗಿ ಕಾಣಲಿಲ್ಲ ಗುರುವಾಗಿ ಬೋಧಿಸಲಿಲ್ಲ, ಗುರುವಿಂಗೆ ಗುರುವಾಗಿಹ ಹೃದಯ ಗುರುವಿಂಗೆ ಶಿಷ್ಯನೆಂಬುದುಂಟೆ . ಶಿಷ್ಯಂಗೆ ಗುರುವೆಂಬುದುಂಟೆ ? ಗಮನಾ ಗಮನ ನಾಸ್ತಿಯಾದ ನಿಲವು. ಲಿಂಗಕ್ಕೆ ಲಿಂಗವಾಗಿಹ ತನ್ನಿರವು ಪೂಜೆಗೆಬಾರದ ಲಿಂಗವೆ ತಾನಾಗಿಹ ತನ್ನಿರುವು. ಜಂಗಮಕ್ಕೆ ಜಂಗಮವಾಗಿಹ ಅರುವೆಂಬುದು ಅರಿದರಿದು ಅರಿಯದರುವು ಆದಲ್ಲಿ ಭಕ್ತನ ಕಾಣಲಿಲ್ಲ, ತಾ ಜಂಗಮವೆನಲಿಲ್ಲ, ಪ್ರಸಾದವೆಂಬ ಪರಮಜ್ಞಾನವರಿತು ಪರಮಾಮೃತನಾದ, ಜ್ಞಾನಾಮೃತನಾದ. ನಾ ನೀನೆಂಬುದಕ್ಕೆ ತೆರಹಿಲ್ಲದ ಘನವಾದುದು ನಿಸ್ಸೀಮವು ಇದುವೆ ಲಿಂಗೈಕ್ಯವು .

3

ಕಾಯದೊಳಗೆ ಕಾಯವಾಗಿರ್ದೆಯಲ್ಲಾ ಹಂಸಾ,
ಸಂಸಾರ ಮಾಯಾ ಪಾಶವ ಬಿಡಲೊಲ್ಲದೆ
ಡಿಂಬವ ನಚ್ಚಿ ಕೆಟ್ಟೆಯಲ್ಲಾ ಹಂಸಾ .
ಜೀವ ಶೂನ್ಯವಾಗಿ ಕೂಡಲ ಚೆನ್ನಸಂಗನ ಶರಣರು
ಲಿಂಗವಾಗಿ ಹೋದುದನರಿಯಾ ಹಂಸಾ . (ಮ.ಸಂ. 714)

ತಾತ್ಪರ್ಯ : ಕಾಯದೊಳಗೆ ಕಾಯವಾಗಿರ್ದೆಯಲ್ಲಾ ಹಂಸಾ: ಸುಖ ಸ್ವರೂಪನಾಗಿಹ ಮಹಾಲಿಂಗವು ಕಾಯದೊಳಗೆ ಕಾಯವಾಗಿದ್ದ ಹಂಸಾ. ನೀನಾರು ನಿನ್ನ ಯತಾರ್ಥ ಸ್ವರೂಪಕ್ಕೆ ಮೆಚ್ಚಬೇಕೊ, ಈ ಡಿಂಬಕ್ಕೆ ಮೆಚ್ಚಬೇಕೊ ? ವಿಚಾರಿಸದೆ ಸಂಸಾರ ಮಾಯಾ ಪಾಶ ಬಿಡಲೊಲ್ಲದೆ ಕೆಡುವಿಯಲ್ಲಾ ಎಂದು ಎಚ್ಚರಿಸುತ್ತಿಹರು .

ಎಲೈ ಹಂಸನೆ, ನೀನು ಸಾರ ರೂಪವಾದ ಅಮೃತ ಸೇವನೆ ಮಾಡುವ ಹಂಸನೆ ? ಹಾಲು ನೀರು ಕೂಡಿಸಿ ಇಟ್ಟಲ್ಲಿ ನೀರು ಬಿಟ್ಟು ಹಾಲನ್ನೆ ಸೇವಿಸುವಿ. ಇದು ನಿನ್ನ ಸಹಜತ್ವ . ಸಂಸಾರದ ಮಾಯಾ ತೋರಿಕೆಯ ಅನಿತ್ಯ ಸುಖವ ಬಿಟ್ಟು ನಿತ್ಯ ಸುಖರೂಪವಾದ ಸಚ್ಚಿದಾನಂದದ ಜ್ಞಾನಮೃತ ಸೇವಿಸುವ ಹಂಸ. ನೀನು ಕಾಯದೊಳಗೆ ಕಾಯವಾಗಿರ್ದುದ ಮರತೆಯಲ್ಲ!

ಹಂಸನೆ ಕಾಯದೊಳಗೆ ಅದಾವ ಕಾಯ ? ತೋರಿ ಇಲ್ಲವಾಗುವ ಕಾಯದೊಳಗೆ ತೋರದಡಗದ ಮಹಾ ಕಾಯ. ವಿಕಾರದೊಳಗೆ ವಿಕಾರ ರಹಿತ ಕಾಯ , ನಾಶವುಳ್ಳ ಕಾಯದೊಳಗೆ ಅಬಾದಿತ ಕಾಯ , ತಾಪತ್ರಯದಿಂದುಕ್ತವಾದ ಕಾಯದೊಳಗೆ ತಾಪರಹಿತ ಕಾಯ . ನಿಷ್ಪತ್ತಿ ಕಾಯ, ನಿರಾಳ ಕಾಯ ,ನಿಸ್ಸಂಗ ಕಾಯ, ಗಮನ ಕಾಯದೊಳಗೆ ನಿರ್ಗಮನ ಕಾಯ, ರಂಜನೆಯಿಂದುಕ್ತವಾದ ಕಾಯದೊಳಗೆ ನಿರಂಜನ ಕಾಯ, ಉಪಾಧಿಯಿಂದುಕ್ತವಾದ ಕಾಯದೊಳಗೆ ನಿರುಪಾಧಿ ಕಾಯ , ನಾಮದಿಂದುಕ್ತವಾದ ಕಾಯದೊಳಗೆ ನಿರ್ನಾಮದ ಕಾಯ, ನಿರ್ಲಿಖಿತ ಕಾಯ ಉಪಮೆಯಿಂ ದುಕ್ತವಾದ ಕಾಯದೊಳಗೆ ಅನುಪಮ ಕಾಯ, ನಿರಂತರ ಮಂಗಳಮಯನಾಗಿಹ ಕಾಯವಾಗಿ ರ್ದೆಯಲ್ಲ ಹಂಸಾ. ನಿನ್ನ ಸಹಜವಾಗಿಹ ಸಹಜಾನಂದವ ಸೇವಿಸುವದು ಬಿಟ್ಟು ಸಾರರಹಿತ ವಿಷಯ ಭೋಗೋಪ ಭೋಗ ಸುಖವ ಅದೇಕೆ ಭೋಗಿಸುವಿ? ನಿನ್ನ ಜ್ಞಾನಾಮೃತರೂಪಿ ಚಿದ್ರಸವ ಸೇವಿಸುವದು ಅದೇಕೆ ಮರತೆ ?

ನಿನ್ನ ನಿಜ ಸುಖ ಮರೆತ ಪರಿಣಾಮವೆ , ಸಂಸಾರ ಮಾಯಾ ಪಾಶ ಬಿಡಲೊಲ್ಲದೆ ಡಿಂಬವ ಮೆಚ್ಚಿ ಕೆಟ್ಟೆಯಲ್ಲ ಹಂಸಾ . ಎಲೈ ಹಂಸನೆ, ಇದು ಕ್ಷಣ ಸುಖದ ಸಂಸಾರ, ಅನಿತ್ಯ ಸಂಸಾರ, ವಿಷಯ ಭೋಗೋಪ ಭೋಗಿಯಾಗಿಹ ಸಂಸಾರ , ಇಂದ್ರಿಯಂಗಳು ವಿಷಯಂಗಳ ಸಂಸರ್ಗದಿಂದುಕ್ತವಾಗಿಹ ಸಂಸಾರ . ಇದು ಸಂಗ ಸುಖದ ಸಂಸಾರ . ಇದುವೆ ಮಾಯಾಪಾಶ , ಅವಿಚಾರ ಕಾಲದಲ್ಲಿ ತೋರುವ ಮಾಯಾ . ಅವಿಚಾರ ಕಾಲದಲ್ಲಿ ತೋರಿ, ವಿಚಾರ ಕಾಲದಲ್ಲಿ ಇಲ್ಲವಾಗುವ ಮಾಯೆ . ಇದು ಸಂಸಾರಿಗಳಿಗಷ್ಟೆ ತನ್ನ ಪಾಶದಿಂದ ಬಂಧಿಸಿದೆ ಇನ್ನುಳಿದವರಿಗೆ ಬಂಧಿಸಿರುವುದಿಲ್ಲ ಎನ್ನುವ ಹಾಗಿಲ್ಲ. ಸಂಸಾರಿಗೆ ವಿಷಯಾಸಕ್ತಿಯ ಪಾಶದಿಂದ ಬಂಧಿಸಿದರೆ ತ್ಯಾಗಿಗಳಿಗೆ ತ್ಯಾಗದಾಸಕ್ತಿ, ಯೋಗಿಗಳಿಗೆ ಯೋಗದಾಸಕ್ತಿ ,ಶಾಸ್ತ್ರಿಗಳಿಗೆ ಶಬ್ದದಾಸಕ್ತಿ , ಆಶ್ರಮ ವಾಸಿಗಳಿಗೆ ಆಶ್ರಮದಾಸಕ್ತಿ ಎಲ್ಲೆಲ್ಲೊ ಅವರವರ ಕ್ರಿಯೆಗಳ ಕ್ರಿಯಾಚಾರದಾಸಕ್ತಿಯೆ ಮಾಯಾ ಪಾಶವಾಗಿ ಆಸಕ್ತಿ ಎಂಬ ಮಹಾ ಮೋಹವ ಬಿಡಲು ಆಗಲೊಲ್ಲದು . ಇದರಿಂದ ದಿನೆ ದಿನೆ ದೇಹದ ಸತ್ಯತ್ವ ಬುದ್ಧಿ ದೃಢವಾಗುವದಲ್ಲದೆ ಇಲ್ಲದ ದೇಹ , ದೇಹದ ತೋರಿಕೆ ಇಲ್ಲವಾಗದಂತಾಗಿದೆ . ಇದುವೆ ಇಲ್ಲವಾಗದಿರುವಾಗ ಇಲ್ಲೆಂಬುದು ಕೂಡ ಇದು ಆವಾಗ ಇಲ್ಲವಾಗಬೇಕು. ರತಿಯಾದರೇನು ? ವಿರತಿ ಯಾದರೇನು ? ತನ್ನ ಡಿಂಬವ ಮೆಚ್ಚದಿರುವದೆ ವಿರತಿಯ ಕಾರ್ಯ, ಇಲ್ಲದ ಡಿಂಬ ಇಲ್ಲವಾದುದು ವಿರತಿಯ ಕಾರ್ಯ ಯೋಗಿಯ ಕಾರ್ಯ, ವೇದ ವೇದಾಂತವ ಹೇಳಿದರೇನು ತನ್ನ ಡಿಂಬ ಇಲ್ಲೆಂಬುದಾ ಇಲ್ಲವಾಗದಿದ್ದರೆ ಅದಾವ ವೇದ ಹೇಳಿದುದು , ವೇದಾಂತವ ಹೇಳಿದುದು, ಇಲ್ಲದ ನಾಮರೂಪ ಇಲ್ಲವಾಗದಿದ್ದಲ್ಲಿ ಇದ್ದ ಅಸ್ತಿ , ಭಾತಿ , ಪ್ರಿಯ ತಾನಾಗದಿದ್ದಲ್ಲಿ ವಿರತಿಯಾದರೇನು ? ಯೋಗವ ಸಿದ್ಧಿಸಿ ಸಹಸ್ರಾರು ವರ್ಷ ಬದುಕಿದರೇನು? ವೇದ ವೇದಾಂತವನೋದಿದರೇನು ತಾನಾಗದ ತನ್ನದಾಗದ ಡಿಂಬಕ್ಕೆ ಮೆಚ್ಚಿ ಕೆಟ್ಟೆಯಲ್ಲ ಹಂಸಾ ; ಇದರಿಂದ ನಿನಗಾದ ಲಾಭವಾವುದು ? ಪರುಷವ ಕೈಯಲ್ಲಿ ಹಿಡಿದು ಕೂಲಿಯ ಹುಡುಕುವರೆ ? ಅಮೃತವ ಕೈಯಲ್ಲಿ ಹಿಡಿದು ಹಸುವಿನಿಂದ ಬಳಲುವುದೆ ? ಜ್ಞಾನಾಮೃತರೂಪಿ ಚಿದ್ಘನವೆ ತಾನಿದ್ದು ಡಿಂಬಕ್ಕೆ ಮೆಚ್ಚಿ ಕೆಟ್ಟೆಯಲ್ಲಾ ಹಂಸಾ. ಇದರಿಂದ ಸಂಸಾರ ಇದರಿಂದ ಮಾಯಾಪಾಶ ನೋಡು ಹಂಸಾ,

ಎಚ್ಚರಾಗು.

ಜೀವ ಶೂನ್ಯವಾಗಿ ಕೂಡಲ ಚೆನ್ನಸಂಗನ ಶರಣರು ಲಿಂಗವಾಗಿ ಹೋದುದ ನರಿಯಾ ಹಂಸಾ: ಎಲೈ ಹಂಸನೆ, ಕೂಡಲಚೆನ್ನಸಂಗನ ಶರಣರು ಲಿಂಗವಾಗಿ ಹೋದದ್ದಾದರೂ ತಿಳಿ! ಇಲ್ಲದ ಹಂಸನೆಂದು ಅದೇಕೆ ಕಲ್ಪಿಸುವಿ, ನೀನು ಜೀವನೆಂದು ಅದೇಕೆ ತಪ್ಪು ತಿಳಿದುಕೊಂಡಿರುವೆ. ಇಲ್ಲದ ಜೀವ ಇಲ್ಲವೆ ಇಲ್ಲ. ನಿರಂತರವಾಗಿರುವ ಮಂಗಲಮಯವಾಗಿಹ ಲಿಂಗ ಸ್ವರೂಪ ವಿರುವಲ್ಲಿ ಅದೇಕೆ ಕಲ್ಪಿತ ಪುರುಷನೆಂದು ಬಳಲುವೆ. ನಿನ್ನ ನಿಜವ ತಿಳಿದು ಅದೇಕೆ ಅಚ್ಚ ಸುಖಿಯಾಗಲಾರೆ? ಇದು ಕಾರಣ ಎಲ್ಲಿಯವರೆಗೆ ಕಲ್ಪಿತ ಪುರುಷನಾಗುವಿ ಅಲ್ಲಿಯವರೆಗೆ ನಿನ್ನ ನಿಜವ ನೀ ತಿಳಿಯಲಾರೆ. ಅರಿಯದರುವು ನೀನು, ಅರಿಯುವ ಅರುವು ಆಗಿರುವದರಿಂದ ನಿನ್ನ ಸ್ವಮಹಿಮೆ ತಿಳಿಯದಂತಾಗಿದೆ. ಇಲ್ಲದ ಅನಾತ್ಮ ಕಂಡೆ ಅದನ್ನು ಅರಿಯುವ ದೃಕ್ ಆದೆ. ಇಲ್ಲದ ಅನಾತ್ಮ ಇಲ್ಲವೆಂಬುದು ನಿಶ್ಚಯ ಮಾಡು ಪುನಃ ಈ ಇಲ್ಲೆಂಬುದು ನಿನ್ನ ಜ್ಞಾನದೃಷ್ಟಿಯಿಂದ ನೋಡಿ. ಇಲ್ಲೆಂಬುದು ಇಲ್ಲವಾಗಲಿ, ಆಗ ನೀನು ಸ್ವಯಮೇವ ಲಿಂಗಸ್ವರೂಪನಾಗಿ ಪ್ರಜ್ವಲಿಸುವಿ. ಇದು ನಿನ್ನ ಸ್ವತಃ ಸಿದ್ಧ ಸ್ವರೂಪ. ಅಂದು, ಇಂದು, ಏದೆಂದೂ ಅದುವೆ ಇರುವಿ. ಪೂರ್ವದಲ್ಲಿ ಶರಣರು ಕಲ್ಪಿತ ಪುರುಷನನ್ನೆ ಬಂಜೆಮಗನನ್ನಾಗಿ ಮಾಡಿ ತಾವಾರೆಂದು ತನ್ನಿಂದ ತನ್ನ ಅರಿವುಡೆ ತನ್ನ ಘನವ ಹೇಳಲೆಂತುಬಾರದು, ತೋರಲು ಬಾರದೆಂಬುದು ತನ್ನಿಂದ ತನಗೆ ವೇದ್ಯವಾಗಿ ಲಿಂಗವಾಗಿ ಹೋದರು ಎಂದು ಹೇಳಿಹರು.

4

ಹಿಂದೆ ಎಷ್ಟು ಪ್ರಳಯ ಹೋಯಿತ್ತೆಂದರಿಯೆ! ಮುಂದೆ ಎಷ್ಟು ಪ್ರಳಯ
ವಾಗುವುದೆಂದರಿಯೆ, ತನ್ನ ಸ್ಥಿತಿಯ ತಾನರಿದಡೆ ಅದೆ ಪ್ರಳಯವಲ್ಲ.
ತನ್ನ ವಚನ ತನಗೆ ಹಗೆಯಾದಡೆ ಅದೆ ಪ್ರಳಯವಲ್ಲಾ! ಇಂಥ
ಪ್ರಳಯ ನಿನ್ನಲ್ಲುಂಟೆ ಗುಹೇಶ್ವರಾ? ॥ 655 ॥

ತಾತ್ಪರ್ಯ : ಹಿಂದೆ ಎಷ್ಟು ಪ್ರಳಯ ಹೋಯಿತ್ತೆಂದರಿಯೆ, ಮುಂದೆ ಎಷ್ಟು ಪ್ರಳಯ ವಾಗುವುದೆಂದರಿಯೆ : ಇದು ಮಾಯಿಕ ಕಾರ್ಯ. ಇವುಗಳು ಹಿಂದೆ ಎಷ್ಟು ಪ್ರಳಯಗಳಾಗಿವೆ ಅವುಗಳ ತಿಳಿಯಲಾಗದು. ಮುಂದೆ ಇನ್ನು ಎಷ್ಟು ಪ್ರಳಯವಾಗುವವು ಅವುಗಳ ತಿಳಿಯಲಾಗದು. ಏಕೆಂದರೆ " ನಾಲ್ಕು ಯುಗಗಳು ಸಹಸ್ರವೇಳೆ ತಿರುಗಿದರೆ ಬ್ರಹ್ಮಂಗೊಂದು ದಿನ ಬ್ರಹ್ಮನಂದು ಸಹಸ್ರ ವೇಳೆ ತಿರುಗಿದರೆ ವಿಷ್ಣುವಿಂಗೊಂದು ಗಳಿಗೆ, ವಿಷ್ಣು ತಾನು ಹನ್ನೆರಡು ಲಕ್ಷ ತಿರುಗಿದರೆ ಮಹೇಶ್ವರನಿ ಗೊಂದು ನಿಮಿಷ, ಅಂತಪ್ಪ ಮಹೇಶ್ವರ ರನೇಕ ಲೀಲೆ ಧರಿಸಿದಲ್ಲಿ ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನ ಪೂಜಾ ಸಮಾಪ್ತಿ ನೋಡಾ. ಬಾಚರಸರೆ ಎಂದು ಸಿದ್ಧರಾಮ ಶಿವಯೋಗಿಗಳು ಯುಗಂಗಳ ಪ್ರಳಯದ ವಿವರವು ಬಿತ್ತರಿಸಿಹರು. ನಾಲ್ಕು ಯುಗಂಗಳು ಸಹಸ್ರವೇಳೆ ತಿರುಗಿದರೆ ಬ್ರಹ್ಮಂಗೊಂದು ದಿನ! ನಾಲ್ಕು ಯುಗಂಗಳು ಒಂದು ವೇಳ್ಯ ತಿರುಗಿದರೆ. 43 ಲಕ್ಷ 20 ಸಾವಿರ ವರ್ಷಂಗಳು ಆಗುತ್ತವೆ. ಇದು ಬ್ರಹ್ಮನ ಒಂದುದಿನ. ನಾಲ್ಕು ಯುಗಂಗಳು ಒಂದು ಸಲ ಪ್ರಳಯವಾದರೆ ಅದು ಬ್ರಹ್ಮನ ಒಂದು ದಿನ, ಬ್ರಹ್ಮನಂದು ಸಹಸ್ರವೇಳೆ ತಿರುಗಿದರೆ ಬ್ರಹ್ಮ ಪ್ರಳಯ, ಆಗ ವಿಷ್ಣುವಿಗೊಂದು (ದಿನ) ಗಳಿಗೆ ವಿಷ್ಣು ತಾನು ಹನ್ನೆರಡು ಲಕ್ಷ ತಿರುಗಿದರೆ. ವಿಷ್ಣು ಪ್ರಳಯ, ಆಗ ಮಹೇಶ್ವರನಿಗೊಂದು ನಿಮಿಷ, ಇಂತಪ್ಪ ಮಹೇಶ್ವರ ಅನೇಕ ಲೀಲೆ ಧರಿಸಿದಾಗ ನಮ್ಮ ಕಪಿಲ ಸಿದ್ಧ ಮಲ್ಲಿಕಾರ್ಜುನ ಪೂಜೆ ಸಮಾಪ್ತಿ. ಇಲ್ಲಿ ಪ್ರಳಯದ ವಿವರ ತಿಳಿಸುತ್ತಿಹರು. ಹಗಲು ಪ್ರಳಯ, ರಾತ್ರಿ ಪ್ರಳಯ. ಏಳು ವಾರಂಗಳು ಪ್ರಳಯ ತಿಥಿ ಮಾಸಾದಿ

ಸಂವತ್ಸರಗಳು ಪ್ರಳಯ , ಯುಗಂಗಳು ಪ್ರಳಯ , ಬ್ರಹ್ಮ ಪ್ರಳಯ , ವಿಷ್ಣು ಪ್ರಳಯ ತೋರುವುದೆಲ್ಲ ಪ್ರಳಯ , ಸೃಷ್ಠಿಯು ಪ್ರಳಯ . ಮಹೇಶ್ವರ ಅನೇಕ ಲೀಲೆ ಧರಿಸಿದಾಗ ಪ್ರಳಯದ ಅರ್ಥವಾಗುತ್ತದೆ. ಕಾರಣರಾಗಿರುವ ಬ್ರಹ್ಮಾದಿಗಳೆ ಪ್ರಳಯವಾಗುವಲ್ಲಿ ಅವರಿಂದ ರಚಿತವಾದ ಸೃಷ್ಠಿಗಳು ಸೃಷ್ಠಿಯಲ್ಲಿ ವಾಸಿಸುವ ವ್ಯಷ್ಠಿ ಶರೀರ ಸಮಷ್ಠಿ ಶರೀರ . ಪ್ರಕೃತಿ , ಪುರುಷ ಪ್ರಳಯವು ಪಿಂಡಾಂಡ, ಬ್ರಹ್ಮಾಂಡ ಪ್ರಳಯವಾಗುವಲ್ಲಿ ಆಶ್ಚರ್ಯವೇನಿದೆ ?ಇದು ಕಾರಣ ಕಾಣಿಸಿಕೊಳ್ಳುವದೆಲ್ಲವು ಪ್ರಳಯವಾಗುವದರಿಂದ ಇದಕ್ಕೆ ಮೃತ್ಯುಲೋಕವೆಂದು ಕರೆಯುವರು .

ಪ್ರಳಯದ ಯತಾರ್ಥಜ್ಞಾನವಾಗುವದು ಮಹೇಶ್ವರ ಅನೇಕ ಲೀಲೆ ಧರಿಸಿ, ಅವುಗಳ ತಿರಳು ತಿಳಿಸಿದಾಗ ಪ್ರಳಯ ತನ್ನಲ್ಲಿ ಕಾಣುವನು. ಇದು ತನ್ನ ವಚನ ತನಗೆ ಹಗೆಯಾದಾಗ ಪ್ರಳಯ ಕಾಣುವನು. ಬಹಿರಂಗದಲ್ಲಿ ಬಿಟ್ಟ ಮಹೇಶರು ಬ್ರಹ್ಮನ ವಂಶದವರು , ಅಂತರಂಗದಲ್ಲಿ ಬಿಟ್ಟ ಮಹೇಶರು, ವಿಷ್ಣುವಿನ ವಂಶದವರು ಎರಡರಲ್ಲಿ ಬಿಟ್ಟ ಮಹೇಶರು ಕಪಿಲಸಿದ್ಧ ಮಲ್ಲಿಕಾರ್ಜುನ ಮಹಾದೇವಿಯ ಸಂಗದಿಂದ ಹುಟ್ಟಿದವರು ಯೋಗಿನಾಥ .

ಬಹಿರಂಗದಲ್ಲಿ ಬಿಟ್ಟ ಮಹೇಶರು ಸಿಕ್ಕುತ್ತಾರೆ . ಅಂತರಂಗದಲ್ಲಿ ಬಿಟ್ಟ ಮಹೇಶರು ಸಿಕ್ಕುತ್ತಾರೆ. ಎರಡರಲ್ಲಿ ಬಿಟ್ಟ ಮಹೇಶನು ಚಿತ್ ಸ್ವರೂಪದ ಸಂಗದಿಂದ ಹುಟ್ಟಿದ ಶಿವಯೋಗಿ ಶಿಕ್ಕುವದು ವಿರಳ. ಬಿಟ್ಟು ಮಹೇಶನಾದೆನೆಂಬುದು ಅರುಹಿನ ಕೇಡು, ಹಿಡಿದು ಭಕ್ತನಾದೆನೆಂಬುದು ನಿಜದ ಕೇಡು, ಬಿಡುವುದು ಹಿಡಿವುದು , ಮನ ಕಲ್ಪಿತವಲ್ಲದೆ ಕಲ್ಪನಾರಹಿತ ಭಕ್ತ ಮಹೇಶ್ವರರಲ್ಲಿ ಪ್ಪುದೇನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನ .

ಮಹೇಶರೆಂದರೆ ಬಹು ಜನರು ತಿಳಿದುದು ಗೃಹಸ್ಥಾಶ್ರಮ ತ್ಯಾಗಮಾಡಿ ಸನ್ಯಾಸತ್ವ ಸ್ವೀಕಾರ ಮಾಡಿದವರು . ಇದಲ್ಲದೆ ಅಯ್ಯಗಳ ವಂಶದಲ್ಲಿ ಹುಟ್ಟಿದವರಾಗಿರುವದು . ಅವರೆ ಮಹೇಶ್ವರರೆಂಬ ನಂಬುಗೆ ಗಾಢವಾಗಿ ಬೆಳದಿದೆ . ಈ ಭಾವುಕತನ ನಿಜವಾದ ಭಕ್ತ ಮಹೇಶ್ವರರ ಸ್ವಾನುಭವ ಶ್ರವಣ ಮಾಡದ್ದರಿಂದ ಈ ಅಂಧ ಶ್ರದ್ಧೆ ಬೆಳದು ಬಂದಿದೆ . ಆರೆ ಆಗಲಿ ಆಶ್ರಮ ಬಿಟ್ಟು ಆಶ್ರಮ ಸ್ವೀಕಾರ ಮಾಡುವದು ಬ್ರಹ್ಮನ ಸಂತತಿಯವರು. ಇವರು ಇಂದ್ರಿಯಂಗಳ ನಿಗ್ರಹವಂತರು . ಬ್ರಹ್ಮಚರ್ಯ ಕಟ್ಟು ನಿಟ್ಟಾಗಿ ಪಾಲಿಸುವವರು ಅಂತರಂಗದಲ್ಲಿ ಬಿಟ್ಟವರು . ಇವರ ಮನವು ಸತ್ವಗುಣ ಪ್ರವೃತ್ತವಾದುದು. ವಿವೇಕ , ವೈರಾಗ್ಯ , ಶಮ , ದಮ , ಶ್ರದ್ಧೆ, ಸಮಾಧಾನ , ತಿತಿಕ್ಷೆ , ಉಪರತಿ ಮುಮುಕ್ಷು , ತತ್ವರೂಪಿ ಪುರುಷಾರ್ಥ ಬಯಕೆ ಉಳ್ಳವರು ಇವರಲ್ಲಿ ನಿರಾಸೆ, ವೈರಾಗ್ಯ , ಶಮೆ , ತಿತಿಕ್ಷೆ ಎದ್ದು ಕಾಣುವದರಿಂದ ಅಂತರಂಗದಲ್ಲಿ ಬಿಟ್ಟವರು ವಿಷ್ಣುವಿನ ಅಂಶದವರು, ಇವೆರಡರಲ್ಲಿ ಬಿಟ್ಟವರು ಯೋಗಿನಾಥ .

ಬಿಟ್ಟು ಮಹೇಶನಾದೆನೆಂಬುದು ಅರುಹಿನ ಕೇಡೆಂದು ಮಹೇಶ್ವರನನ್ನು ಎಚ್ಚರಿಸಿಹರು , ತಾನಾರು ? ತನ್ನ ತಾನರಿದಲ್ಲಿ ತಾನೆ ಚೈತನ್ಯಾತ್ಮಕ ಚಿತ್‌ಸ್ವರೂಪ ಜಂಗಮ ನಾಗಿರುವಲ್ಲಿ ತನಗಾವ ಉಪಾಧಿ? ತಾನೆ ನಿರುಪಾಧಿ ಇರುವಲ್ಲಿ ತನಗೆಲ್ಲಿ ದೇಹ ? ತನಗೆಲ್ಲಿ ಇಂದ್ರಿಯಂಗಳು ? ತನಗೆಲ್ಲಿ ಕರಣಂಗಳು ? ಇಲ್ಲದವು ಇಲ್ಲವಾಗಿರುವಲ್ಲಿ ಬಿಟ್ಟುದೇನು ? ಹಿಡಿದುದೇನು ?

ಮನದ ಕಲ್ಪನೆಯಲ್ಲಿಯೆ ನಾಲ್ಕು ಆಶ್ರಮಂಗಳು , ನಾಲ್ಕು ವರ್ಣಂಗಳು. ಇವುಗಳಿಗೆ ಕಾರಣವಾದುದು ಮನವು. ಮನವೆ ಇಲ್ಲವೆಂದಲ್ಲಿ ಬಿಡುವುದೆಲ್ಲಿ? ಹಿಡಿವುದೆಲ್ಲಿ?

ಆರು ಬಿಡುವವರು ಹಿಡಿವವರು ಆಗಿಹರು ಅವರು ಕಲ್ಪನಾರಹಿತವಾದ ತಮ್ಮ ಸ್ವರೂಪದ ಘನವ ಅರಿಯದವರು ಅವರು ನಿಜವಾದ ಭಕ್ತರಲ್ಲ , ಮಹೇಶ್ವರರಲ್ಲ , ಗುಣಮಯಿ ಆಧೀನರಾಗಿಹ, ಬ್ರಹ್ಮನ ಅಂಶರಾಗಿಹ ಮಹೇಶ್ವರರು , ವಿಷ್ಣುವಿನ ಅಂಶವಾಗಿಹ ಮಹೇಶ್ವರರು.

ನಿಜವಾದ ಮಹೇಶ್ವರನು ''ಅಟ್ಟು ನೀಡುವ ಭಕ್ತನ ಬಟ್ಟೆಯ ಇಚ್ಚೆಗೆ ಬಂದಾತನಲ್ಲ ನೋಡಾ, ನೆಟ್ಟನೆ ನೀ ಪರವಸ್ತುವೆಂಬ ಜ್ಞಾನ ವಟ್ಟುವದಕ್ಕೆ ಬಂದಾತ ಮಹೇಶ ನೋಡಾ ಕಪಿಲ ಸಿದ್ಧ ಮಲ್ಲಿಕಾರ್ಜುನ' ತನ್ನ ಸ್ಥಿತಿಯ ತಾನರಿಯಬಲ್ಲಡೆ ಅದೆ ಪ್ರಳಯವಲ್ಲ. ತನ್ನ ವಚನ ತನಗೆ ಹಗೆಯಾದರೆ ಅದೆ ಪ್ರಳಯವಲ್ಲ. ಇಂಥ ಪ್ರಳಯ ನಿನ್ನಲುಂಟೆ ಗುಹೇಶ್ವರಾ?

ಮಹೇಶ್ವರ ಆರು ಗೊತ್ತೆ? ವಿಷ್ಣು ತಾ ಹನ್ನೆರಡು ಲಕ್ಷ ತಿರುಗಿದರೆ ಮಹೇಶ್ವರನಿಗೊಂದು ನಿಮಿಷ, ಅಂತಪ್ಪ ಮಹೇಶ್ವರರನೇಕ ಲೀಲೆಯ, ಸಕಲ ಭಕ್ತರನನ್ನು ತನ್ನಂತೆ ಮಾಡುವ ಲೀಲೆ, ತ್ಯಾಗಿಯೆ ಇರಲಿ ಯೋಗಿಯೆ ಇರಲಿ ಭೋಗಿಯೆ ಇರಲಿ ದಾಸೋಹಂ ಭಾವಿಯಾಗಿರಲಿ , ಸೋಹಂ, ಕೋಹಂ,ಚಿದಹಂ ಭಾವಿಯಾಗಿರಲಿ ಆರೆ ಇರಲಿ ಅವರನ್ನು ಕಲ್ಪನಾರಹಿತರನ್ನಾಗಿ ಅಚಿಂತ್ಯರನ್ನಾಗಿ , ಅನುಪಮರನ್ನಾಗಿ ವಾಙ್ಮನೋತೀತರನ್ನಾಗಿ ಮಾಡುವದೆ ಅಂತಪ್ಪ ಮಹೇಶ್ವರನು, ಅನೇಕ ಲೀಲೆಗಳು, ಆ ಲೀಲೆಯೆ ಮಹೇಶ್ವರನ ಒಂದು ನಿಮಿಷದ ಸಮ್ಯ ಜ್ಞಾನರೂಪಿ ಅಚಿಂತ್ಯದಿರುವಿನ ಅರುವು ಪ್ರಜ್ವಲಿಸುವದು. ಈ ಒಂದು ನಿಮಿಷದ ಪರತತ್ವದ ನಿಜ ಸಂಯುಕ್ತರ ಆನು ನೀನೆನ್ನದಿಹ ಶಬ್ದಸುಖಿಗಳ ಮಾಡುವದು. ಅಂತಪ್ಪ ಮಹೇಶಂಗೆ ಒಂದು ನಿಮಿಷ ಸಾಕು ಲಿಂಗ ಸಂಗಿಗಳ ಮಾಡಲು ಒಂದು ನಿಮಿಷ ಲಿಂಗೈಕ್ಯರ ಮಾಡಲು ಒಂದು ನಿಮಿಷ ಸಾಕು. ಈ ಮಹದರಿವು ಭಕ್ತಂಗೆ ಹೃದಯದೊಳ ಬೆಳಗುವುಡೆ, ಹಗಲು ರಾತ್ರಿಯೆಂಬ ಕಲ್ಪಿತ ಪ್ರಳಯ ಏಳುವಾರಂಗಳು , ತಿಥಿ , ಮಾಸಾದಿಗಳು , ಸಂವತ್ಸರಗಳು , ಯುಗಂಗಳು , ಸೃಷ್ಠಿ , ಸೃಷ್ಠಿಕರ್ತರೆಂಬುದು ಕಾರ್ಯ , ಕಾರಣವೆಂಬ ಕಲ್ಪಿತ ಪ್ರಳಯ, ಲಿಂಗೈಕ್ಯರ ಮಹಾನುಭವದ ಮುಂದೆ , ಬ್ರಹ್ಮ ಪ್ರಳಯ ವಿಷ್ಣು ಪ್ರಳಯ , ತತ್ವ , ಅತತ್ವವೆಂಬ ವಿವೇಕವು ಪ್ರಳಯವಾಗುವುದು ಇಲ್ಲಿ ನೈಮಿತ್ರಿಕ ಪ್ರಳಯ ನಿತ್ಯ ಪ್ರಳಯ, ಮಹಾಪ್ರಳಯವು ಕೂಡ ಪ್ರಳಯವಾಗಿ ತನ್ನ ಸ್ಥಿತಿಯ ತಾನರಿಯುವ ಗಂಭೀರನಾಗುತ್ತಾನೆ.

ತನ್ನ ವಚನ ತನಗೆ ಹಗೆಯಾದಡೆ ಅದೆ ಪ್ರಳಯವಲ್ಲಾ. ಇಂತಪ್ಪ ಮಹೇಶ್ವರ ಅನೇಕ ಲೀಲೆ ಅದು ಲಿಂಗೈಕ್ಯರ ಮಾಡಲು,ಲಿಂಗ ಸಕೀಲ ಸಂಯೋಗದ ವರ್ಮಸ್ಥಲವ ನರಿಯಲು . ತನ್ನ ಕರುಣಾರಸದ ಕಡಕೋಡಿಯೆ ಅವನ ಮೇಲೆ ಪ್ರವಹಿಸುವಂತೆ ಮಾಡಿದಾಗ ಆಗ ಭಾವಕ್ಕಿಂಬು ಗೊಡದವನಾಗಿ ಶಬ್ದವೆ ಮೀಸಲವಾಗಿ, ನುಡಿಗೆ ಅವಕಾಶ ಕೊಡದ ಮಹದರಿವು ಪ್ರಜ್ವಲಿಸಿ, ತಾನೆ ಘನಕ್ಕೆ ಘನನಾಗಿ ತನ್ನಿಂದ ತನ್ನ ನೋಡ ಹತ್ತಿದಾಗ ತನ್ನ ವಚನಗಳೆ ತನಗೆ ಹಗೆಯಾಗುತ್ತವೆ. ಈ ಪ್ರಳಯ ತನ್ನಲ್ಲಿದ್ದ ಪ್ರಳಯ , ತಾನು ನಿಶಬ್ದವೇದಿಯಾದಾಗ ಪ್ರಳಯ ವಿದಿತವಾಗುವದು . ಇದು ಕಾರಣ ಇಂಥ ಪ್ರಳಯ ನಿನ್ನಲ್ಲುಂಟೆ ಗುಹೇಶ್ವರಾ , ನೀ ನಾನೆಂಬುದಕ್ಕೆ ತೆರಹಿಲ್ಲದ ಘನವೆ ನಿರಂತರ ಪ್ರಜ್ವಲಿಸುವಲ್ಲಿ ಆವಾವ ಭಾವಕ್ಕಿಂಬುಗೊಡದಿರುವಲ್ಲಿ, ಎಲ್ಲಿಯ ಪಿಂಡಾಂಡ ಎಲ್ಲಿಯ ಬ್ರಹ್ಮಾಂಡ ? ಎಲ್ಲಿಯ ಜೀವರುಗಳು ಎಲ್ಲಿಯ ಬ್ರಹ್ಮಾದಿಗಳು ಎಲ್ಲಿಯ ಪ್ರಕೃತಿ , ಎಲ್ಲಿಯ ಪುರುಷ ?ಇಲ್ಲಾದುದಿಲ್ಲಾದುದು ಎಲ್ಲಿಪ್ಪುದು, ಇಲ್ಲಾದುದಿಲ್ಲಾದುದೆಂದಿಪ್ಪುದು, ಅನುವರಿತು ತನುವ ಮರೆದುದು ನಿನ್ನಯ ಇರುವು ಇರುವಲ್ಲಿ ಎಲ್ಲಿಯ ಪ್ರಳಯ ಉತ್ಪತ್ತಿ ಪುಶಿ , ಪ್ರಳಯವು ಪುಶಿ ಪುಶಿ ಎಂಬುದು ಪುಸಿಯಾಗಿರುವಲ್ಲಿ ಗುಹೇಶ್ವರಾ ಪ್ರಳಯ ನಿನ್ನಲ್ಲುಂಟೆ? ಎಂದು ಪ್ರಭುದೇವ, ಪ್ರಳಯವೆಂಬ ಸಂದು ಸಂಶಯವನ್ನೆ ನಷ್ಟಮಾಡಿಹನು.

5

ಶಬ್ದ ಸಂಭ್ರಮದಲ್ಲಿ ಹಿಂದು ಗಾಣರು, ಮುಂದು ಗಾಣರು ,
ತಮ್ಮ ತಾವರಿಯರು ಇದು ಕಾರಣ . ಮೂರು
ಲೋಕವೆಲ್ಲವೂ ಬರು ಸೂರೆ ವೋಯಿತ್ತು ಗುಹೇಶ್ವರಾ . ॥ 609 ॥

ತಾತ್ಪರ್ಯ : ಶಬ್ದ ಸಂಭ್ರಮದಲ್ಲಿ ಹಿಂದು ಗಾಣರು ಮುಂದು ಗಾಣರು : ತನ್ನನ್ನು ಕಾಣರು! ಹಿಂದು ಗಾಣರು, ಭವಕ್ಕೆ ಬಾರದ ಮುನ್ನ ಪೂರ್ವದಲ್ಲಿ ನಾನು ಏನಾಗಿದ್ದೆನೆಂಬುದು ಅರಿಯರು. ಮುಂದುಗಾಣರು,ಈ ಶಬ್ದ ಸಂಭ್ರಮದ ವಾಸನೆಯಿಂದ ಮುಂದೆ ಅದಾವ ಜನ್ಮ ಬರುವದು, ಇದರಿಂದ ಭವ ವಿರಹಿತನೊ, ಭವದಿಂದುಕ್ತನೊ? ಎಂಬುದು ಮುಂದು ಗಾಣರು.

ಶಬ್ದ ಸಂಭ್ರಮ ! ಅದಾವ ಶಬ್ದ ಸಂಭ್ರಮ! ಹಿಂದು ಗಾಣರು,ಮುಂದು ಗಾಣರು,ಶಬ್ದ ಸಂಭ್ರಮದಲ್ಲಿದ್ದವರು, ಅದಾವ ಶಬ್ದ ಸಂಭ್ರಮದಲ್ಲಿದ್ದವರು? ಜೀವ ಈಶ್ವರ,ಭೇದ,ಜೀವ ಜೀವಿಗಳ ಭೇದ,ಜೀವ ಜಡ ಭೇದ, ಈಶ್ವರ ಜಡ ಭೇದ, ಜಡಾ ಜಡ ಭೇದ ಹೀಗೆ ಪಂಚ ಪ್ರಕಾರ ಭೇದ ಜ್ಞಾನವುಳ್ಳವರು ಜೀವ ಬ್ರಹ್ಮರೇಕತ್ವವೆಂಬ ಅಭೇದ ಜ್ಞಾನಿಗಳು ಇವರು ಶಬ್ದ ಸಂಭ್ರಮದಲ್ಲಿದ್ದವರು. ಪ್ರಥಮವೇದಿಗಳು ಅತೀತ ಅನಾಗತರೆಂಬುವವರು ಶಬ್ದ ಸಂಭ್ರಮದಲ್ಲಿದ್ದವರು ಶೃತಿವಂತರು ಶಬ್ದ ಸಂಭ್ರಮದಲ್ಲಿದ್ದವರು, ಆನು ಅರಿದೆ ಮರದೆನೆಂಬುವವರು ಅಳಿದೆ ಉಳಿದೆನೆಂಬುವವರು. ಅಣೋರಣಿಯಾನ್ ಮಹತೋ ಮಹಿಯಾನ್ ಎಂಬುವರು ಅಂತರ್ಮುಖ, ಬಹಿರ್ಮುಖದವರು . ತತ್ವ , ಅತತ್ವವೆಂದು ವಿಭಾಗಿಸುವವರು , ಪ್ರವರ್ತಕರು, ನಿವರ್ತಕರು , ಕ್ರಿಯಾವಂತರು ಲಿಂಗಾರ್ಚಕರು ಬಂಧ ಮೋಕ್ಷ ದಿಟವಾದವರು ಮರವರುವುಳ್ಳವರು, ಹಠಯೋಗಿಗಳು,ರಾಜಯೋಗಿ ಮೊದಲಾದವರು ನಿತ್ಯ ಅನಿತ್ಯವೆಂಬುವವರು ಶಬ್ದ ಸಂಭ್ರಮದವರು . ನಾಹಂ, ಕೋಹಂ, ಸೋಹಂ, ಚಿದಹಮ ಇವರುಗಳೆಲ್ಲ ಶಬ್ದ ಸಂಭ್ರಮದಲ್ಲಿದ್ದವರು.ಇವರು ತಾನು ಕಲ್ಪಿತ ಪುರು ಷನೆಂದು ಒಪ್ಪಿಕೊಂಡವರು , ತಮ್ಮ ಶಬ್ದ ಸಂಭ್ರಮದಲ್ಲಿ ತನ್ನ ಮುನ್ನ ಮುನ್ನಲಾದ ಅಚಿಂತ್ಯಪದ ತನ್ನದಾದ ಉಪಮಿಸದ ಪದ ನುಡಿಗೆಡೆಗೊಡದ ಘನದಿರುವು,ಅದು ತನ್ನ ಪೂರ್ವದ ಶಿರಿ , ಕಾಣರು , ಕಲ್ಲಿತ ಪುರುಷನಾಗುವ ಮುನ್ನ ತಾವು ಏನಾಗಿದ್ದೆವು ಶಬ್ದ ಸಂಭ್ರಮರಾಗದವರ ಮುನ್ನ ತಾವು ಏನಾಗಿದ್ದೆವು ಎಂಬುದ ತಿಳಿಯದವರು . ಇದು ಕಾರಣ ಇವರು ಹಿಂದು ಗಾಣರು ಎಂದು ಹೇಳಿದೆ.

ಮುಂದು ಗಾಣರು : ಈ ಶಬ್ದ ಸಂಭ್ರಮದಲ್ಲಿದ್ದವರು ಶಬ್ದವೆ ಬ್ರಹ್ಮವಾಗಿದೆ ; ಶಬ್ದವೆ ತಾವಾಗಿಹರು. ಈ ಶಬ್ದದ ವಾಸನೆ ತನ್ನ ನಿಜದಿರುವಿಂಗೆ ಪ್ರತಿಬಂಧಕ ಮಾಡುತ್ತದೆ ಎಂಬ ಪರಿಜ್ಞಾನ ವಿಲ್ಲದೆ ಶಬ್ದ ಸಂಭ್ರಮದಿಂದುಕ್ತರಾಗಿರುವದರಿಂದ ಸೀಮಾ ರಹಿತವಾದ ಅಖಂಡಿತ ಘನ ಪೂರ್ಣವಪ್ಪ ಪರಾತ್ಪರ ದರುವಿನ ಇರುವು ನಮಗೆ ಲಭ್ಯವಾಗುವದಿಲ್ಲ ಎಂಬ ಕಳಕಳಿಯು ಇಲ್ಲ ಅದರ ಬಗ್ಗೆ ಹೃದಯದಲ್ಲಿ ನೋವು ಇಲ್ಲ . ಇದಲ್ಲದೆ ಈ ಶಾಸ್ತ್ರ ವಾಸನೆಯಿಂದ ಇನ್ನು ಭವ ಭವಾಂತ ರದಲ್ಲಿ ಜನ್ಮ ಧರಿಸುವ ಭಯಾನಕವು ಇಲ್ಲ . ಇದು ಕಾರಣ ಇವರು ಮುಂದುಗಾಣರು ಎಂದು ಹೇಳಿದೆ.

ತಮ್ಮ ತಾವರಿಯರು : ಶಬ್ದ ಸಂಭ್ರಮದಲ್ಲಿದ್ದವರು ತಮ್ಮ ತಾವರಿಯದವರು , ಏಕೆಂದರೆ ಇವರಿಗೆ ಶಬ್ದವೆ ಸ್ವರೂಪವಾಗಿದೆ .ಶಬ್ದವೆ ಲಿಂಗವಾಗಿದೆ . ಶಬ್ದ ಜಂಗಮ , ಶಬ್ದವೆ ಪ್ರಸಾದವಾದ್ದರಿಂದ ಶಬ್ದಕ್ಕೆ ನಿಲುಕದ ಮಿಗೆ ಮಿಗೆ ಮೀಸಲವಾಗಿಹ ತತ್ತ್ವನೆತ್ತ ಬಲ್ಲರು .

ತನ್ನಿಂದ ತನ್ನ ಕಂಡು, ತನಗೆ ತಾ ಪ್ರತ್ಯಕ್ಷನಾಗೆ ಆ ಪ್ರತ್ಯಕ್ಷವೆಂಬುದೆ ಭ್ರಾಂತು ನೋಡಾ; ಅದೇನು ಕಾರಣವೆಂದಡೆ , ಎನಗೆ ಅನ್ಯವಿಲ್ಲ ಅನ್ಯನಾನಲ್ಲ . ಬ್ರಹ್ಮವೆ ನಾನೆಂಬುದು ಅತಿಶಯದ ಭ್ರಾಂತೆಂದು ತಿಳಿದು ನೋಡಾ, ಅದೇನು ಕಾರಣವೆಂದಡೆ ಬ್ರಹ್ಮಕ್ಕೆ ನಾ ಬ್ರಹ್ಮವೆಂಬುದು ಘಟಿಸದಾಗಿ, ತನ್ನಿಂದ ತನ್ನ ನೋಡಿದವರು ನಿಃಶಬ್ದವೇದಿಗಳು ಶಬ್ದವೆ ಇವರಿಗೆ ವೈರಿಯಾಗಿರುವಲ್ಲಿ ಶಬ್ದ ಸಂಭ್ರಮದ ಹುಚ್ಚು ಏತರದು ಶಬ್ದಾಭಿಮಾನಿಗಳು ಶಬ್ದದ ಭ್ರಾಂತರು ತಮ್ಮ ತಾವರಿಯದವರು .

ಮೂರು ಲೋಕವೆಲ್ಲವು ಬರುಸೂರೆ ವೋಯಿತ್ತು ಗುಹೇಶ್ವರಾ : ಮೂರು ಲೋಕ , ಗುಣಮಯಿಯಾಗಿಹ ಮಾಯಿಕ ಕಾರ್ಯಕ್ಕೆ ಒಪ್ಪಿದವರು , ಧರ್ಮವಂತರು , ಮಿಶ್ರ ಧರ್ಮವಂತರು,

ಅಧರ್ಮವಂತರು ಇರುವ ಮೂರು ಲೋಕವು ವ್ಯರ್ಥ ಶಬ್ದಾಭಿಮಾನಿಗಳಾಗಿ ,ಶಬ್ದದ ಮೋಹಿಗಳಾಗಿ ಸತ್ತು ಹೋದರು . ಪ್ರಥಮ ಭಾಗ ವೇದವ ನೋದಿದ ಕರ್ಮಕಾಂಡಿಯು , ದ್ವಿತೀಯ ಭಾಗವಾಗಿಹ ಉಪಾಸನಾಕಾಂಡವಾಗಿಹ ಭಕ್ತರು,ಕೊನೆಯ ಭಾಗವಾಗಿಹ ಜ್ಞಾನಕಾಂಡಿಯು ಶಬ್ದಸಂಭ್ರಮದವರಾಗಿ ತಾವಾರೆಂದರಿಯದೆ ಗುಣಮಯಿ ಕಾರ್ಯವಾಗಿಹ ದೇವಲೋಕ , ಮರ್ತ್ಯಲೋಕ , ಪಾತಾಳಲೋಕ ಈ ಮೂರು ಲೋಕದವರು ವ್ಯರ್ಥ ಕೆಟ್ಟವು ಎಂದು ಹೇಳಿಹರು.

6

ಅಂಗದ ಧರೆಯ ಮೇಲೆ ಮೂರು ಬಾವಿಗಳುಂಟು
ಮೊದಲ ಭಾವಿಯ ಮುಟ್ಟಿದಾತ ಅಂಗ ಸಂಗಿಯಾದ
ನಡುವಣ ಬಾವಿ ಮುಟ್ಟಿದಾತ ಉತ್ಪತ್ತಿ ,ಸ್ಥಿತಿ , ಲಯಕ್ಕೊಳಗಾದನು ,
ಮೇಲಣ ಬಾವಿ ಮುಟ್ಟಿದಾತ ಜೀವನ್ಮುಕ್ತನಾದನು . ಇವ ತಟ್ಟದೆ
ಮುಟ್ಟದೆ ಹೋದರು ನೋಡಾ ಪರಬ್ರಹ್ಮವ ದಾಂಟಿ
ಗುಹೇಶ್ವರ ಲಿಂಗದಲ್ಲಿ ಹಂಗು ಹರಿದ ಶರಣರು . ॥ 618 ॥

ತಾತ್ಪರ್ಯ : ಅಂಗದ ಧರೆಯ ಮೇಲೆ ಮೂರು ಭಾವಿಗಳುಂಟು : ಸ್ಥೂಲಾಂಗ, ಸುಕ್ಷ್ಮಾಂಗ, ಕಾರಣಾಂಗದ ಧರೆಯ ಮೇಲೆ ಮೂರು ಭಾವಿಗಳುಂಟು , ಮೂರು ಭಾವಿಗಳಾವು? ಮೊದಲಣ ಭಾವಿ ಅಂಗನೆಂಬ ಭಾವಿ ಅಂಗ ಭಾವಿ, ನಡುವಣ ಲಿಂಗ ಭಾವಿ, ಮೇಲಣ ಭಾವಿ, ಜಂಗಮಭಾವಿ ಈ ಮೂರು ಭಾವಿಗಳುಂಟು.ಮೊದಲಿನ ಭಾವಿ ಕುರುಹುಳ್ಳ ಭಾವ ನಾವು ರೂಪದಿಂದುಕ್ತವಾದುದರಿಂದ ಅಂಗ ಸಂಗಿಯಾದೆ. ನಡುವಣ ಭಾವಿ, ಕುರು ಹಿಲ್ಲದುದು, ಆವಾವ ಕುರುಹಿನಿಂದ ಕೂಡದ ಭಾವಿ , ವೇದ ವೇದಾಂತಗಳಿಂದಲೂ ಹೇಳಲು ಅಸಾಧ್ಯವಾಗಿಹ ಭಾವಿ , ಶಬ್ದಮುಗ್ಧವಾಗಿಹ ಭಾವಿ ಲಿಂಗವೆಂಬ ಭಾವಿ ಶಬ್ದಮುಗ್ಧದ ಘನವನರಿಯದೆ ಲಿಂಗ, ಲಿಂಗ, ಎಂಬ ಭಾವ ಭ್ರಮಿತರಾಗಿ ಉತ್ಪತ್ತಿ ಸ್ಥಿತಿ ಲಯ ಕ್ಕೊಳಗಾದರು.ಮೇಲಣ ಅರುವಿನ ಭಾವಿ ಮುಟ್ಟಿದಾತ ಜೀವನುಕ್ತನಾದನು .

ಮೊದಲಣ ಕುರುಹುಳ್ಳ ನಾಮರೂಪದಿಂದುಕ್ತವಾಗಿಹ ಭಾವಿ ಮುಟ್ಟಿದವನು, ಜಗತ್ ಸತ್ ದೇಹಾದಿಗಳು ಸತ್‌ಜೀವ ಬ್ರಹ್ಮರ ಭೇದ ಸತ್ ಬ್ರಹ್ಮಾದಿಗಳು ಸತ್ಯ ಅವರಿಂದ ರಚಿತವಾಗಿಹ ಸ್ಥಾವರ ಜಂಗಮ ಸತ್ಯ , ದೇವಗಣ, ರುದ್ರಗಣ , ಪ್ರಮಥಗಣ ಸತ್ಯ .ಇವರು ಮೊದಲಣ ಭಾವಿ ಮುಟ್ಟಿದುದರಿಂದ ಅಂಗ ಸಂಗಿಯಾಗಿಹರು . ಇವರು ಪ್ರಥಮ ವೇದವ ನಂಬಿದ ಭಾವುಕರು. ಇದು ಕಾರಣ ಇವರು ಅಂಗ ಸಂಗಿಗಳು . ನಡುವಣ ಭಾವಿ, ಕುರುಹಿಲ್ಲದ ಭಾವಿ . ಮೌನ ಮುದ್ರೆ ಧರಿಸಿಹ ಭಾವಿ, ಲಿಂಗ ಭಾವಿ. ಈ ಲಿಂಗ ಭಾವದಲ್ಲಿ ಕುಲವುಂಟು, ಛಲವುಂಟು, ಫಲವುಂಟು, ಪದವುಂಟು, ಭವ ಉಂಟು . ಈ ನಡುವಿನ ಭಾವಿ ಮುಟ್ಟಿದಾತ ಉತ್ಪತ್ತಿ , ಸ್ಥಿತಿ , ಲಯ ಕ್ಕೊಳಗಾದನು . ಲಿಂಗ ಘನವು ಕಾರಣವು ಜಗವು ಕಾರ್ಯವು , ಪಿಂಡಾಂಡ ಬ್ರಹ್ಮಾಂಡವು ಕಾರ್ಯವು . ಜಗತ್ತಿಗೂ ಜೀವಿಗಳಿಗೂ ಲಿಂಗವೆ ಸಂರಕ್ಷಣ ಕರ್ತನು , ಲಿಂಗದ ಕೃಪೆಯೆ ಸಕಲಕ್ಕೂ ಕಾರಣವು , ಕೃಪೆಯಿಂದ ಜೀವ ಜಗತ್ತಾಗಿಹುದು, ಉತ್ಪತ್ತಿ, ಸ್ಥಿತಿ ಲಯಕ್ಕೊಳಗಾದುದು ಕೃಪೆಯಲ್ಲಿಯೆ ಎಂದು ತಿಳಿದು ನಡುವಣ ಭಾವಿ ಮುಟ್ಟಿದುದರಿಂದ ಅದವೆ ಜ್ಞಾನವಾಗಿ ಅದರ ಭಾವಿಯಾಗಿ ಲಿಂಗಾರ್ಚಕನಾದ ಕುಲವುಳ್ಳವನಾದ , ಛಲವುಳ್ಳವನಾದ , ಫಲ ಪದಂಗಳುಳ್ಳವ ನಾದುದರಿಂದ ಉತ್ಪತ್ತಿ , ಸ್ಥಿತಿ , ಲಯ

ಕ್ಕೊಳಗಾದುದರಿಂದ ಭವ ಉಂಟು ಎಂದು ಹೇಳಿಹರು.

ಮೇಲಣ ಭಾವಿ ಮುಟ್ಟಿದಾತ ಜೀವನ್ಮುಕ್ತನಾದ: ಮೇಲಣ ಭಾವಿ ಆವುದು ? ಮೇಲಣ ಭಾವಿ ಅದು ಅಂಗ ಸಂಗಿಯಾದುದಕ್ಕಿಂತ ಮೇಲಿನದು . ಲಿಂಗ , ಲಿಂಗ , ಎಂಬ ಲಿಂಗಾರ್ಚಕ ಭಾವಕ್ಕಿಂತ ಮೇಲಿನದು ಇದು ಅರುವಿನ ಭಾವಿ . ಅರುವಿನ ಲಕ್ಷಣಾತ್ಮಕ ಭಾವಿ ಅಂಗವನ್ನು ಸಚ್ಚಿದಾನಂದನನ್ನಾಗಿ ಕಂಡ ಭಾವಿ ,ಲಿಂಗವನ್ನು ಸಚ್ಚಿದಾನಂದವಾಗಿ ಕಂಡ ಭಾವಿ ಇದು ಮೊದಲಣ ಭಾವಿ , ನಡುವಣಭಾವಿ,ಮೇಲಣ ಭಾವಿ ಈ ಮೂರೊಂದಾಗಿ ಕಂಡ ಭಾವಿ.ಸಚ್ಚಿದಾನಂದ ಭಾವ ಪೂರ್ಣಭಾವ, ಅಖಂಡಭಾವ, ಭರಿತಭಾವ,ತುಂಬಿ ತುಳಕದ ಭಾವವಾದುದರಿಂದ ಪ್ರಪಂಚ, ಪ್ರತೀತಿ ಸಹಿತ, ಬ್ರಹ್ಮಾಕಾರವಾಗಿಹುದೆ ಜೀವನ್ಮುಕ್ತಿ ಎಂದು ಹೇಳಿದೆ.

ಇವ ತಟ್ಟದೆ ಮುಟ್ಟದೆ ಹೋದರು ನೋಡಾ ಪರಬ್ರಹ್ಮವ ದಾಂಟಿ ಗುಹೇಶ್ವರ ಲಿಂಗದಲ್ಲಿ ಹಂಗು ಹರಿದ ಶರಣರು ಗುಹೇಶ್ವರ ಲಿಂಗದಲ್ಲಿ ಹಂಗು ಹರಿದ ಶರಣರು,ಅಪ್ರತಿಮರು , ಅಪ್ರಮಾಣಗಮ್ಯರು.ಇವರು ಅಚಿಂತ್ಯರು , ಅನುಪಮರು ಅಕಲ್ಪಿತ ಘನವೆ ತನ್ನಿರುವಿನ ಅರುವಾದುದರಿಂದ ಗುಹೇಶ್ವರ ಲಿಂಗ ಹಂಗು ಹರಿದವರು . ಇವರು ಮೂರು ಭಾವಿಯ ಹಂಗು ಹರಿದವರು, ಇವ ತಟ್ಟದೆ ಮುಟ್ಟದೆ ಪರಬ್ರಹ್ಮವ ದಾಂಟಿದ ಮಹಾಂತರು ಮಹಿಮರು.

ತಟ್ಟದೆ ಮುಟ್ಟದೆ ಇದ್ದವುಗಳು ಆವು ? ಮೊದಲನೆ ಕುರುಹಿನ ಭಾವಿಯ ತಟ್ಟಲಿಲ್ಲ , ಮುಟ್ಟಲಿಲ್ಲ ನಡುವಣ ಕುರುಹಿಲ್ಲದ ಭಾವಿ ತಟ್ಟಲಿಲ್ಲ ಮುಟ್ಟಲಿಲ್ಲ ಮೇಲಣ ಅರುವಿನ ಭಾವಿ ಮುಟ್ಟಲಿಲ್ಲ ಅಂಗದ ಧರೆಯ ಮೇಲೆ ಮೂರು ಭಾವಿಗಳು ಎಂಬುದು ತಟ್ಟಲಿಲ್ಲ ಮುಟ್ಟಲಿಲ್ಲ. ಪರಬ್ರಹ್ಮ ಪರಬ್ರಹ್ಮ ಎಂಬುದ ದಾಂಟಿದ ಮಹಾಂತರು. ತನ್ನಿಂದ ತನ್ನ ಕಂಡ ಮಹಾಂತರು. ಗುಹೇಶ್ವರ ಲಿಂಗದಲ್ಲಿ ಹಂಗು ಹರಿದ ಶರಣರು.

ಭಾವಕ್ಕಗಮ್ಯವಾದ ತತ್ವದಲ್ಲಿ ಮೂರು ಭಾವಂಗಳು ಪುಶಿ , ಮರವಿನಿಂದುಕ್ತನಾಗಿ ಅಂಗ ಸಂಗಿಯಾಗಿರಲು ಶ್ರದ್ಧೆ , ಭಕ್ತಿಯಿಂದುಕ್ತನಾಗಿಹ ಲಿಂಗ ಭಾವಿಯಾಗಿರಲಿ , ಅರುವಿನಿಂದುಕ್ತನಾಗಿ ಪ್ರಂಪಚ ಸಹಿತ ಬ್ರಹ್ಮಾಕಾರವುಳ್ಳ ಜೀವನ್ಮುಕ್ತನಾಗಿರಲಿ, ಇವಾವುಗಳ ತಟ್ಟದೆ ಮುಟ್ಟದೆ ತಾನಾರೆಂದರಿತು ತನ್ನ ಸ್ವಮಹಿಮೆಯಲ್ಲಿದ್ದ ಘನ ಮಹಿಮನು , ಏನೊಂದುಸರಲು ಎಡೆಯಿಲ್ಲದ ಘನಕ್ಕೆ ಘನನು ಗುಹೇಶ್ವರ ಲಿಂಗದಲ್ಲಿ ಹಂಗು ಹರಿದ ಶರಣರೆಂದು ಹೇಳಿದ್ದಾರೆ.

7

ಅರಿದೆ ನೆಂಬುದು ತಾ ಬಯಲು ,
ಅರಿಯೆನೆಂಬುದು ತಾ ಬಯಲು ,
ಅರುವಿನ ಕುರುಹಿನ ಮರಹಿನೊಳಗೆ
ಗುಹೇಶ್ವರ ನೆಂಬುದು ತಾ ಬಯಲು . ॥ 673 ॥

ತಾತ್ಪರ್ಯ : ಅರಿದೆನೆಂಬುದು ತಾ ಬಯಲು : ತಾನಾರೆಂದರಿತ ಶರಣಂಗೆ ಅರಿದೆ ನೆನ್ನುವದು ವ್ಯರ್ಥವು , ನಿರರ್ಥಕವು . ಏಕೆಂದರೆ ಅರುವಿಂಗರುವಾದುದು , ಅದನೆಂತು ಅರಿವುದು? ದೇಹಿಗೆ ದೇಹಿಯಾಗಿರ್ದುದ ಅದನೆಂತು ಅರಿದೆನೆನ್ನುವುದು ? ಅರಿಯದರುವು ಏನೆಂದೆನಲಿಲ್ಲದ ಅರುವು ಅದನೆಂತು ಅರಿವುದು ? ಅರಿದರುಹಿಸಿಕೊಂಬುದಕ್ಕೆ ಮೀರಿದ ಘನ ಅದನೆಂತು ಅರಿದೆ, ಅದು ದೃಶ್ಯ ದೃಕ್‌ವೆನಲಿಲ್ಲದ ಅರುವು, ದೃಶ್ಯದ ಸಾಪೇಕ್ಷತೆಯಿಂದ . ದೃಕ್ ಎಂಬ ನಾಮವು ಬಂದಿದೆ. ದೃಶ್ಯವರಿಯುವದಕ್ಕೆ ದೃಕ್ ಎಂಬ ನಾಮ ದೃಶ್ಯವೆ ಇಲ್ಲ, ಇಲ್ಲವೆಂಬುದಿಲ್ಲದಿರುವಾಗ ದೃಕ್ ಎಂಬುದಿಲ್ಲ

ದೃಶ್ಯ , ದೃಕ್ ಎಂಬುದಕ್ಕೆ ಸಂದಿಲ್ಲದಿಪ್ಪ ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದ ನಿಜಲಿಂಗೈಕ್ಯಂಗೆ ದೃಶ್ಯವೆಂದು ಭಾವಿಸಲಿಲ್ಲಾಗಿ ದೃಕ್ ಎಂದು ಅರಿಯಲಿಲ್ಲಾ .ಅರಿಯದರುವೆ ತನ್ನಿರುವಾಗಿ ಏನೆಂದಲಿಲ್ಲದ ಅರುವಿಂಗೆ ಅರಿದೆನೆಂಬುದು ತಾ ಬಯಲು ನೋಡಾ .

ಬಹು ಅಧ್ಯಾತ್ಮವಂತರು ಅರಿದೆನೆನ್ನುವರು ಇವರು ಏನನ್ನು ಅರಿದು ಅರಿದೆನೆನ್ನುವರು? ಇವರು ಪುರುಷಾರ್ಥ ಜ್ಞಾನಿಗಳು , ಸಾಪೇಕ್ಷ ಜ್ಞಾನಿಗಳು ಕಲ್ಪಿತ ಪುರುಷರಾಗಿ , ಸಾಮಾನ್ಯ ಜ್ಞಾನ ಕಲ್ಪಿತ ವಿಶೇಷವೆಂಬ ಜ್ಞಾನದವರಿರುತ್ತಾರೆ . ಇವರಿಗೆ , ಸತ್ಸಂಗ ಅಥವಾ ಸದ್ಗುರುಗಳ ಬೋಧೆಯಿಂದ ವಿಶೇಷವೆಂಬ ಪುರುಷಾರ್ಥಜ್ಞಾನ ಇದು ಸಾಪೇಕ್ಷಜ್ಞಾನವಾಗುವದು ತನುತ್ರಯಂಗಳಿಗೆ ಸಾಕ್ಷಿ , ತ್ರಿಪುಟಿಗೆ ಸಾಕ್ಷಿ , ಗುಣತ್ರಯಂಗಳಿಗೆ ಸಾಕ್ಷಿ , ಭಾವತ್ರಯಂಗಳಿಗೆ ಸಾಕ್ಷಿ , ಅವಸ್ಥಾ ದಿಗಳಿಗೆ ಸಾಕ್ಷಿ , ಅಸಂಗ ಸ್ವಯಂಪ್ರಕಾಶ ಕೂಟಸ್ಥ ಪ್ರತ್ಯಗಾತ್ಮ ಪರಮಾತ್ಮನು ನೀನೆಂಬ ವಿಶೇಷ ಜ್ಞಾನವಾಗುವದು . ಇಲ್ಲಿ ಅರಿಸಿಕೊಳ್ಳುವ ಅನಾತ್ಮವಿದೆ, ಅರಿಯುವ ದೃಕ್‌ರೂಪ ನಿರುವನು, ಈ ದೃಕ್ ಆತ್ಮನೆ ತಾನೆಂಬುದು ನನ್ನನಾ ನರಿದೆನೆನ್ನುವದು . ಪುರುಷಾರ್ಥಜ್ಞಾನವಲ್ಲದೆ ನಿರ್ವಿಶೇಷವಾಗಿಹ ಅನುಪಮವಾಗದು ಇದು ಕಾರಣ ಅರಿದೆನೆಂಬುದು ತಾ ಬಯಲು ಎಂದು ಹೇಳಿದೆ.

ಅರಿಯೆ ನೆಂಬುದು ತಾ ಬಯಲು : ತನ್ನ ತಾನರಿಯೆ ನೆಂಬುದು ವ್ಯರ್ಥವಾದುದು . ತಾನು ನಿರಂತರ ವಾಗಿರುವ ಮಂಗಳಮಯ ಪರಮ ಸತ್ ತಾನಿಲ್ಲದ ಕಾಲ ದೇಶ , ವಸ್ತುವಿಲ್ಲ . ಏಲ್ಲೆಲ್ಲೂ ತಾನೆ ತನ್ನವಿನಃ ಅನ್ಯ ವಸ್ತುವಿಲ್ಲ ತನ್ನೊಡನೆ ಸೇರಿದುದು ಇಲ್ಲ . ತನ್ನ ಸಮಾನವು ಇಲ್ಲ ತಾನೊಂದೆ ಅಂದು ಇಂದು ಎಂದೆಂದೂ ಇದ್ದುದು. ತಾನು ಅಬಾಧಿತ ಸ್ವಯಂ ಜ್ಯೋತಿ ತನ್ನಿಂದ ತನ್ನ ಸತ್ತೆಯಿಂದಲೆ, ತತ್ವ ಅತತ್ವಗಳು ಸಿದ್ಧವಾಗುವವು ಇವುಗಳು ಸಿದ್ಧಿಸಬೇಕಾದರೆ ತಾನು ಸ್ವತಃ ಸಿದ್ಧನಾಗಿ ಸ್ವಯಂಜ್ಯೋತಿಯಾಗಿ ಬೆಳಗುಳ್ಳ ಮಹಾ ಬೆಳಗು ಆಗಿ ಬೆಳಗುವದರಿಂದ ತನ್ನ ಬೆಳಕಿನಲ್ಲಿ ಕಾಣಿಸಿ ಕೊಳ್ಳುವವು . ತಾನು ಅಪ್ರಮಾಣಗಮ್ಯವಾಗಿ ಅಚಲ , ಅಚಿಂತ್ಯ ನಿರಂತರ ವಾಗಿರುವಲ್ಲಿ ತನ್ನ ಅರಿಯೆನೆಂಬುದು ವ್ಯರ್ಥವಲ್ಲವೆ ? ಆವನೊ ಒಬ್ಬನು ತನ್ನ ನಾಲಿಗೆ ಯಿಂದ ತಾ ಮಾತನಾಡಿ ನನಗೆ ನಾಲಿಗೆ ಇದ್ದರೆ ಬಹು ಮಾತಾಡುತ್ತಿದ್ದನಂದಂತೆ. ಅರಿದೆ ಅರಿಯೆನೆಂಬುದು ಇವೆರಡು ತನ್ನಿಂದ ಸಿದ್ಧಸುವಲ್ಲಿ ತಾನು ಇವೆರಡಕ್ಕೂ ಮೀರಿದ ಘನನಿದ್ದು ಅರಿದೆ ನೆನ್ನುವುದು ಹೇಗೆ ನಿಷ್ಪ್ರಯೋಜಕವೋ ಹಾಗೆ ಅರಿಯೆನೆಂಬುದು ನಿಷ್ಪ್ರಯೋಜಕವು.ಅರಿದೆನೆಂಬುದು ಬುದ್ಧಿಯ ಸತ್ವಗುಣದ ಕಾರ್ಯ ಅರಿಯೆ ನೆಂಬುದು ಬುದ್ಧಿಯ ಮಲಿನ ಸತ್ವಗುಣದ ಕಾರ್ಯ .ಇವೆರಡು ಕಲ್ಪಿತ ಪುರುಷನ ಆಭಾಸ ಜ್ಞಾನ .ತಾನು ಏನೊಂದಾಗದ ಘನ, ಸ್ವಯಂ ಜ್ಯೋತಿ, ಅದು ತಾನು ಸ್ವಯಂಜ್ಯೋತಿ ಎನಬಹುದೆ? ಸ್ವಯಂ ಜ್ಯೋತಿ ಅದು ಸ್ವಯಂ ಜ್ಯೋತಿ ಅನಲಿಲ್ಲ, ಅನ್ನದಿರುವಲ್ಲಿ ಅದು ಅರಿದೆನೆಂದುದು ಆವಾಗ? ಅರಿಯೆನೆಂದುದು ಆವಾಗ ? ಇದು ಅರಿಯೆನೆಂಬುದು ವ್ಯರ್ಥವೆಂದು ಹೇಳಿದ್ದಾರೆ.

ಅರುವಿನ ಕುರುಹಿನ ಮರಹಿನೊಳಗೆ ಗುಹೇಶ್ವರ ನೆಂಬುದು ತಾ ಬಯಲು :ನಿಶಬ್ದ ನಿಲುವುಳ್ಳುದನ್ನು ಶಬ್ದ ಸಂಭ್ರಮದಿಂದ ಬಳಸುವುದು ಹೇಗೆ ? ಶಬ್ದದಿಂದ ಕಥನ ಮಾಡುವದೆಂದಲ್ಲಿ ಅದು ನಿರರ್ಥಕವಾದುದು ವ್ಯರ್ಥವಾದುದು,ಅರುವಿನ ಕುರುಹು.ಅದು ಅರುವ ಅರಿಯ ಹೋದವರಿಗೆ ವಿದಿತವಾಗಿಹ ಕುರುಹು, ನಿಶಬ್ದವೇದಿಗಳ ಕುರುಹು ಅದು ಗುರು ಕರುಣಿಸಿದ ಸಕೀಲದಿಂದ ಅರಿದವರ ಕುರುಹ ಲಿಂಗವದು , ಲಿಂಗವೆನಲು ಬಾರದ ಕುರುಹು. ಶಬ್ದ ಮುಗ್ದವಾಗಿಹ ಕುರುಹು. ಇದು ಮುನ್ನ ಮುನ್ನಲಾದ ತನ್ನಿಂದ ತಾನಾದ ಘನವು.ಇಲ್ಲಿ ಅರುವೆಂಬುದು ನಿರರ್ಥಕವು ಅರುವಿನ ಕುರುಹೆಂಬುದು ನಿರರ್ಥಕವು. ಮರಹು ಎಂಬುದು ನಿರರ್ಥಕವು. ಗುಹೇಶ್ವರ ನೆಂಬುದು

ನಿರರ್ಥಕವಾದುದು.ಇದು ಕಾರಣ ಅರಿದೆನೆಂಬ ಜ್ಞಾನವು ವ್ಯರ್ಥವು . ಅರಿಯೆನೆಂಬ ಜ್ಞಾನವು ವ್ಯರ್ಥವು ಅರುವು ಅರುವು ಎಂಬುದು ವ್ಯರ್ಥವು . ಅರುವಿನ ಕುರುಹಿನೊಳಗೆ ಮರಹು ಎಂಬ ಜ್ಞಾನವು ವ್ಯರ್ಥವು ಗುಹೇಶ್ವರನೆಂಬುದು ವ್ಯರ್ಥವು ಎಂದು ಹೇಳಿಹರು .

8

ಅರಿದರಿದು ಅರುವು ಬಂಜೆಯಾಯಿತ್ತು
ಮರ ಮರೆದು ಮರಹು ಬಂಜೆಯಾಯಿತ್ತು
ಗುಹೇಶ್ವರನೆಂಬ ಶಬ್ದ ಸಿನೆ ಬಂಜೆಯಾಯಿತ್ತು . ॥ 675 ॥

ತಾತ್ಪರ್ಯ : ಅರಿದರಿದು ಅರುವು ಬಂಜೆಯಾಯಿತ್ತು : ಅರುವು ಎಂಬುದು ನಿಷ್ಫಲ ವಾಗ ಬೇಕಾದರೆ ಅರುವ ಅರಿದರಿದು ನೋಡುವದು . ಅರುವರಿದರಿದು ನೋಡುವುದು ಹೇಗೆ ?

ಅರುವೆಂಬುದನ್ನು ತಾನು ಅರಿಯುವನೊ ? ಅಥವಾ ಅರುವೆಂಬುದು ತನ್ನನ್ನು ಅರಿಯುವುದೊ ಎಂಬುದನ್ನು ಅರಿದರಿವುದು . ಅರುವೆಂಬ ಅರುವು ನುಡಿಯಿಂದುಕ್ತವಾದುದು, ತನ್ನಿಂದ ತಿಳಿಸಿಕೊಳ್ಳುವರೊ? ಅಥವಾ ತಾನು ನುಡಿಯಿಂದುಕ್ತವಾದ ಅರುವಿನಿಂದ ತಿಳಿಸಿಕೊಳ್ಳುವರೊ? ಎಂಬುದನ್ನು ಅರಿದರಿದು ನೋಡು ನೋಡುವಡೆ ಅರುವೆಂಬುದನ್ನು ತಾನೆ ಅರಿವನಲ್ಲದೆ ತನ್ನನ್ನು ಇದು ಅರಿಯದು,ಏಕೆಂದರೆ ನುಡಿಯಿಂದುಕ್ತವಾದುದು ತನ್ನಿಂದ ತಿಳಿಸಿಕೊಳ್ಳುವದಾಗಿದೆ ತಾನು ಅದನ್ನು ತಿಳಿಯುವವನಾಗಿದ್ದಾನೆಂದಲ್ಲಿ, ಅರುವೆಂಬುದು ತನ್ನ ಅರಿಯಲಿಲ್ಲ ತಾನೆ ಅದನ್ನು ಅರಿಯುವವನಾದ, ತನ್ನ ಅರಿಯದ ಅರುವು . ನಿಷ್ಪಲವು ತಾನು ಅರಿದರಿದು ನೋಡದದ್ದರಿಂದ ಅರುವೆಂಬ ನುಡಿ ಪ್ರಯೋಜನವಾಗಿತ್ತು ಆವಾಗ ತನ್ನಿಂದ ತಾನು ಅರಿದರಿದು ನೋಡಿದಾಗ ನುಡಿಯಿಂದುಕ್ತವಾದ ಅರುವು ನಿಷ್ಪಲವಾದುದು . ಹೀಗೆ ಅರುವಿನ ವಿಷಯದಲ್ಲಿ ತನ್ನಿಂದ ಅರಿದರಿದು ನೋಡಿದ ಮಹಾಂತರು ಕಡಿಮೆ ಇದ್ದಾರೆ.

ಆದಿ ಪುರಾತನರ ತತ್ವವಿಡಿದವರು ಮಾತ್ರ ಅರಿದರಿದು ನೋಡಿದವರು.ಅವರು ಶಬ್ದ ಸಂಭ್ರಮಕ್ಕೆ ಮೀರಿ ನಿಂತವರು . ಅವರು ಆಗಮ ಜ್ಞಾನದಲ್ಲಿ ಸಿಲುಕಲಿಲ್ಲ ಶೃತಿವಂತರಾಗಲಿಲ್ಲ ಮಿಗೆ ಮಿಗೆ ಮೀಸಲ ತತ್ವವರಿತ ಮಹಾಂತರು .ಇದು ಕಾರಣ ಅವರು ಅರಿದರಿದು ಅರಿವು ಬಂಜೆಯಾಯಿತ್ತು ಎಂದು ಹೇಳಿದರು .

ಮರ ಮರೆದು ಮರಹು ಬಂಜೆಯಾಯಿತ್ತು : ಇಲ್ಲದ ನಾಮರೂಪಂಗಳ ಕಲ್ಪಿಸಿಕೊಂಡು ಇದ್ದ ತನ್ನ ಸ್ವರೂಪವನರಿಯದೆ ಮರವುಳ್ಳವನೆಂದು ತಾನೆ ಕಲ್ಪಿಸಿಕೊಂಡ. ಮರವ ಕಳೆಯಲು , ತಾನು ಅರುಸ್ವರೂಪನೆಂಬ ಚಿದಹಂ ಕಲ್ಪಿಸಿಕೊಂಡು ಪುನಃ ಇವೆರಡಕ್ಕೂ ಮೀರಿ ನಿಂತು ತಾನೆ ಅರಿದರಿದು ನೋಡಿದ . ಆಗ ಮರವೆಂಬುದು ತನ್ನೊಳಿಲ್ಲದ ಕಲ್ಪಿತವೆಂದು , ತನ್ನಿಂದ ತನಗೆ ನಿಷ್ಫಲವೆನಿಸಿ ಸಿದ್ಧವಾಯಿತ್ತು. ಇದಲ್ಲದೆ ನಾನು ಅರುಸ್ವರೂಪನೆಂಬ ಚಿದಹಂ ಎಂಬುದು ಮರವೆಂಬುದು ನಿಷ್ಫ ಲವೆನಿಸಿ ವಿದಿತವಾಯಿತ್ತು . ಇದ ಕಂಡು ತನ್ನಿಂದ ತಾನೆ ನಿರಂತರವಾಗಿರುವ ಮಂಗಳಮಯ ಪರತತ್ವವೆಂಬುದು ತನಗದು ವೇದ್ಯವಾಯಿತು. ಆಗ ಮರವೆಂಬುದು ಮರೆತು ಹೋಯಿತ್ತು . ಅರುವೆಂಬುದು ಮರವೆನಿಸಿ ಇದು ಮರೆತು ಹೋಯಿತ್ತು.ಮರ ವರುವಿಗೆ ಬೀಜವಾದುದು , ಅರಿದರಿದು ನೋಡಿದ ಆಗ ತಾನೆ ಅನುಪಮ , ಅಚಿಂತ್ಯ , ಅಕಲ್ಪಿತ ನೆಂಬುದು ಸಿದ್ಧವಾಗಿ ಮರವೆಂಬ ಕಲ್ಪಿತವೂ ಇಲ್ಲಾದುದು . ಅರುವೆಂಬ ಕಲ್ಪಿತವು ಇಲ್ಲಾದುದು, ವೇದ್ಯವಾಗಿ ಮರ ಮರೆದ ಮರಹು

ಬಂಜೆಯಾಯಿತ್ತು ಎಂದು ಹೇಳಿಹರು.

ಗುಹೇಶ್ವರನೆಂಬ ಶಬ್ದಸಿನೆ ಬಂಜೆಯಾಯಿತ್ತು : ಕಲ್ಪಿತನ ಸಾಮಾನ್ಯ ಜ್ಞಾನ, ವಿಶೇಷ ಜ್ಞಾನಕ್ಕೂ ನಿಲುಕದ ಗುಹೇಶ್ವರನೆಂಬ ಶಬ್ದ ಪೂರ್ಣ ನಿಷ್ಫಲವಾದುದು. ಏಕೆಂದರೆ ತಾನು ತನ್ನ ಯತಾರ್ಥ ತಿಳಿವುಡೆ ತಾನು ಆವಾವುದಕ್ಕೂ ಎಡೆಗೊಡದ ತೆರಹಿಲ್ಲದ ಘನವಾಗಿಹ ತನ್ನಿರವು ತನಗೆ ವೇದ್ಯವಾಗಲು, ಅಲ್ಲಿ ಶಬ್ದವೆ ಮೀಸಲವಾಗಿರುವಲ್ಲಿ ಅಕಲ್ಪಿತ, ಭಾವಕ್ಕಗಮ್ಯ ಅಚಿಂತ್ಯ, ನುಡಿಗೆಡೆಗೊಡದ ಘನನೆಂದು ಸರಲು ಬಾರದಿರುವದರಿಂದ ಗುಹೇಶ್ವರನೆಂಬ ಶಬ್ದ ಪೂರ್ಣವಾಗಿ ನಿಷ್ಫಲವಾದುದು.

ತನ್ನ ಅಕಥನೀಯ ನಿಲುವಿನಲ್ಲಿ ಗುಹೇಶ್ವರನೆಂಬ ಕಥನವು ವಿಸ್ಮಯವು. ಶಬ್ದ ಮುಗ್ಧ ನಿಲುವಿನಲ್ಲಿ ಗುಹೇಶ್ವರನೆಂಬ ಶಬ್ದವು ಪೂರ್ಣ ನಿಷ್ಫಲವಾದುದು ಎಂದು ಪ್ರಭುದೇವ ಬಿತ್ತರಿಸಿದ ಗುಹೇಶ್ವರ ನೆಂಬ ಶಬ್ದ ಸಿನೆ ಬಂಜೆಯಾಯಿತ್ತೆಂದುದು ನಿರ್ವಿವಾದ ಸಂಜ್ಞೆ.

ಈ ನಿರ್ವಿವಾದ ಸಂಜ್ಞೆ ಯಾರು ಅರಿದಿಹರು ಅವರಿಗೆ ಬ್ರಹ್ಮವು ಬಂಜೆಯಾಯಿತ್ತು. ಮರದಿಹನೆಂಬ ಮರಹು ಅರಿದೆನೆಂಬ ಅರುವಿನ ಮರಹು ಇವೆರಡು ಪ್ರಭುವಿನ ನಿರ್ವಿವಾದ ಸಂಜ್ಞೆಯರಿತು ಮರ ಮರೆದು ಮರಹು ಬಂಜೆಯಾಯಿತ್ತು. ಕೊನೆಗೆ ನಿರ್ವಿವಾದ ಸಂಜ್ಞೆಯರಿತು, ನಿರ್ವಿವಾದ ಸಂಜ್ಞೆಯೆಂಬುದು ನೆನಿಸಿ ಬಂಜೆಯಾಯಿತ್ತು, ಇದು ನಿಶಬ್ದವೇದಿಗಳ ನಿಲವು. ತನ್ನಿಂದ ತನ್ನಕಂಡು, ತಾನೆ ತಾನಾಗಿ ನಿಂತ ನಿಜದಿರುವು. ನಿಜ ನಿಜವೆಂಬುವಂಗೆ ಕಾಣದ ನಿಲವು, ನಿಜವೆನ್ನದವಂಗೆ ತಾನೆ ಆಗಿಹ ನಿಲವು ಉಪಮಿಸಲುಂಟೆ?

9

ಕಾಣಬಹುದೆ ನಿರಾಕಾರವ! ಕಾಣಬಹುದೆ
ಮಹಾಘನವು! ಕಂಡೆನೆಂದು ಭ್ರಮೆಗೊಂಡು ಹೋದರೆಲ್ಲರು!
ಕೂಡಲ ಚೆನ್ನಸಂಗನ ಅನುಭಾವವ ಲಿಂಗೈಕ್ಯನೆ ಬಲ್ಲ. ॥ 750 ॥

ತಾತ್ಪರ್ಯ : ಕಾಣಬಹುದೆ ನಿರಾಕಾರ! ಕಾಣಬಹುದೆ ಮಹಾಘನ : ತನ್ನಿಂದ ಕಾಣಿಸಿಕೊಳ್ಳುವದನ್ನು ಕಾಣುವವರು ಉಂಟು, ಕಾಣದುದನ್ನು ಕಾಣುವವರು ಉಂಟೆ? ತನ್ನ ಕಾಣುವವರು ಉಂಟೆ? ಕಾಣಿಸಿಕೊಳ್ಳುವ, ತೋರಿ ಇಲ್ಲವಾಗುವ, ಮಾಯಿಕವಾದ ಅತತ್ವ ಕಾಣುವವರು ಬಹು ಜನ ಇದ್ದಾರೆ ಕಾಣುದುದ ಕಂಡು, ಕಾಣದುದ ಕಂಡಿಹೆವೆಂಬುವವರು ಬಹು ಜನರಿದ್ದುದರಿಂದ ಪ್ರಭುದೇವ ಕಾಣಬಹುದೆ ನಿರಾಕಾರ! ಕಾಣಬಹುದೆ ಮಹಾಘನವೆಂದು ಪ್ರಶ್ನಿಸಿಹನು.

ನಿರಾಕಾರವಾದುದು ಕಾಣದುದು, ಮಹಾಘನವು ಕಾಣದುದು. ಮಹಾಘನವದು ತೋರದಡಗದ ಘನ, ನಿರ್ಮಾಯ ನಿರಾಳ ನಿರಂತರ ಮಂಗಳಮಯ ವಾಗಿಹ ಪರತತ್ವ ಕಾಣದುದು ಕಂಡೆವೆಂದು ಭ್ರಮೆಗೊಂಡು ಹೋದರೆಲ್ಲರು. ಕಂಡೆನೆಂಬುದು ಕಂಗೆ ಮರವು ಕಾಣೆನೆಂಬುದು ಮನದ ಮರವು, ಕೂಡಿದೆನೆಂಬುದು ಅರುವಿನ ಮರವು ಅಗಲಿದೆನೆಂಬುದು ಮರುಹಿನ ಮರವೆ ಇವರು ಕಂಡುದೆಂತು? ಇವರು ಕಂಡುದು ತೋರಿ ಇಲ್ಲವಾಗುವ ಮಾಯಿಕ ಆಭಾಸ ಕಂಡರಲ್ಲದೆ ನಿರಂತರವಾಗಿರುವ ಮಂಗಳಮಯ ಪರತತ್ವ ಅದು ಘನ ಗಂಭೀರ ಮಹಾ ಘನ ಕಂಡವರೆ? ಕಂಡವರು ಕಂಡೆವೆನಲಿಲ್ಲ, ಕಂಡೆನೆನ್ನುವವರು ಶಬ್ದ ಸಂಭ್ರಮದವರು. ಇವರು ಅರಿದೆ, ಕಂಡೆನೆನ್ನುವವರು ಅನುಭವ ಮದ ವುಳ್ಳವರು. ಅದಾವ ಮದವುಳ್ಳವರು? ಚಿದಹಮ್ಮಿನ ಮದವುಳ್ಳವರು, ನಿರ್ಧರಿಸಿಹೆ ವೆಂಬುವವರು ಬುದ್ಧಿಗತವಾದ ಅನುಭವವುಳ್ಳವರು ಲಿಂಗಾರ್ಚಕರು, ಲಿಂಗಾನುಸಂಧಾನವುಳ್ಳವರು,

ಜಂಗಮಾರ್ಚಕರು ಜಂಗಮಾನು ಸಂಧಾನವುಳ್ಳವರು , ಸಚ್ಚಿದಾನಂದ, ಸಚ್ಚಿದಾನಂದವೆನ್ನುವವರು . ಅರುವಿನ ಪ್ರೇಮಿಗಳು ಶೃತಿವಂತರು, ಇವರು ಕಂಡೆನೆಂದು ಭ್ರಮೆಗೊಂಡು ಹೋದರು . ಇವರು ಕಲ್ಪಿತರು ಕಲ್ಪಿತವ ಕಂಡರಲ್ಲದೆ , ಕಲ್ಪಿತವಲ್ಲದ ಮಹಾಘನವ ಕಂಡರೆ ? ಅತತ್ವ ಕಂಡವರು , ಶಬ್ದ ಸಂಭ್ರಮವ ಕಂಡವರು ಮಾಯಿಕ ಕಂಡುದರಿಂದ ತತ್ತ್ವವೇತ್ತರಲ್ಲ.

" ತತ್ವವೆಂಬುದು ನೀನೆತ್ತ ಬಲ್ಲೆಯೊ ? ಇಂದೆ ಮಾನವಾ ಸತ್ತು ಮುಂದೆ ನೀನೇನು ಕಾಣುವಿ, ತತ್ತ್ವವೆಂಬುದು ಶಿವಾಚಾರದ ಸರಿದೊಡಕು ಬೀದಿಯ ಮಾತಲ್ಲ , ರಚ್ಚೆಯ ಮಾತಲ್ಲ . ಏಕೋ ರಾತ್ರಿ ಬಿಂದು ಗುಹೇಶ್ವರ ಲಿಂಗವ ಕೂಡಿದ ಕೂಟ ಇಂದು ಸುಖ ಮುಂದೆ ಲೇಸು ".

ತತ್ತ್ವ ಬಲ್ಲವರು ನಿಶಬ್ದವೇದಿಗಳು ಶಬ್ದಸಂಭ್ರಮದ ಹಂಗಿಗರಲ್ಲ ಅರುವಿನ ಬಿಂದು ಅರುವಾಗಿ ಅರಿವುದು, ಖಂಡಾಖಂಡ ಸಂಯೋಗವಿಲ್ಲದ ಅಖಂಡಿತವಾಗಿಹ ಬಿಂದು. ಇದುವೆ ಮಹಾಘನ ತಿಳಿದಿದ್ದರೆ ಕಲ್ಪಿತ ಪುರುಷರಾಗುತ್ತಿದ್ದಿಲ್ಲ. ಕಂಡೆನೆಂದು ಭ್ರಮೆಗೊಳ್ಳುತ್ತಿದ್ದಿಲ್ಲ , ಇವರು ತತ್ತ್ವ ತಿಳಿಯ ಹೋಗದವರು ಇದು ಕಾರಣ ಮಾಯಿಕ ಕಂಡರಲ್ಲದೆ ಮಹಾಘನ ಅರಿಯ ಹೋಗಲಿಲ್ಲ ತನ್ನ ತಾ ಅರಿಯಲಿಲ್ಲಾ.

ಕಾಣಬಹುದೆ ನಿರಾಕಾರ ? ಕಾಣಬಹುದೆ ಮಹಾಘನ ? ಕೂಡಲಚೆನ್ನಸಂಗನ ಅನುಭಾವ ಲಿಂಗೈಕ್ಯನೆ ಬಲ್ಲ: ಕೂಡಲ ಚೆನ್ನಸಂಗನ ಅನುಭಾವ ಎಂಜಲ ಮಾತ ನುಡಿವ ರಂಜಕರದಲ್ಲ. ಅದು ಮಿಗೆ ಮಿಗೆ ಮೀಸಲವಾಗಿದ್ದ ತತ್ವ , ಅದು ಲಿಂಗ ಸಕೀಲ ಸಂಯೋಗದ ವರ್ಮಸ್ಥಲ ವರಿತವರ ತತ್ವ . ಶಬ್ದ ಸಂಭ್ರಮದ ಹಂಗಿಗೊಳಪಟ್ಟುದಲ್ಲ ಅರಿದರಿದು ಅರುವು ಬಂಜೆಯಾದವರ ತತ್ವ ಬಲ್ಲವರು ಮರ ಮರೆದು ಮರಹು ಬಂಜೆಯಾಗಿರುವದನು ಬಲ್ಲವರು . ಗುಹೇಶ್ವರನೆಂಬ ಶಬ್ದ ಸಿನೆ ಬಂಜೆ ಯಾದವರು ಬಲ್ಲವರು , ಇವರು ಲಿಂಗೈಕ್ಯರು. ಅರಿವು ಅರಿದರಿದು ಶಬ್ದ ಮೀಸಲವಾದವರು ಲಿಂಗೈಕ್ಯರು. ಏಕೆಂದರೆ ಲಿಂಗೈಕ್ಯಂಗೆ ಅರುವೆಂಬ ನುಡಿ ನಿಷ್ಪ್ರಯೋಜಕವಾಗಿದೆ . ಅವರು ಸುಖ ಸ್ವರೂಪರು ಸುಖದೇಕ ಸುಖವುಳ್ಳವರು ಅಕ್ಷಯ ಸುಖವೆಂಬ ಸುಖಾಂಬುಧಿಗಳು, ನಿಸ್ಸೀಮರು. ಅಲ್ಲಿ ಕಾಣಿಸಿಕೊಳ್ಳುವ ಮಾಯಿಕವಿಲ್ಲ ಕಾಣುವ ಕಲ್ಪಿತ ಪುರುಷನಿಲ್ಲ .

ಲಿಂಗೈಕ್ಯ ನಿಲವು , ಲಿಂಗ ಲಿಂಗ ಎನ್ನದ ನಿಲುವು. ತನ್ನಿಂದ ತನ್ನ ಕಂಡು ಲಿಂಗಕ್ಕೆ ಲಿಂಗವಾಗಿಹ ನಿಲವು ಘನಗಂಭೀರ ಮಹಾಘನದೊಳಗೆ ಘನಕ್ಕೆ ಘನವಾಗಿರ್ದೆನಯ್ಯ ಕೂಡಲ ಸಂಗಯ್ಯನೆಂಬ ಬೆಳಗಿನೊಳಗೆ ಬೆಳಗಾಗಿರ್ದು ಶಬ್ದಮುಗ್ದವಾದುದನೇನೆಂಬೆ ? ಲಿಂಗೈಕ್ಯ ನಿಲವು ಲಿಂಗವೆಂಬ ಮಹಾಘನವು ಹೆತ್ತರಿವು ಆಗಿದೆ. ತಾನು ಸ್ವಯಮೇವ ಅರಿವು ಆಗಿಹನು. ಲಿಂಗವೆಂಬುದು ಎರವಲ ಅರಿವು . ತನ್ನದು ಆರಿಂದಲೂ ಬಂದುದಲ್ಲ ಹೋದುದಲ್ಲ ಕೂಡದಗಲದ ಘನ ತಾನೆ ಇರುವಲ್ಲಿ ಘನಕ್ಕೆ ಘನನಾಗಿರ್ದೆನಯ್ಯಾ ಎಂದು ಹೇಳಿಹರು . ಕೂಡಲ ಸಂಗಯ್ಯನು ಬೆಳಗುಳ್ಳವನಾಗಿದ್ದರೂ ತನ್ನನ್ನು ಬೆಳಗಲಿಲ್ಲ ತಾನೆ ಬೆಳಗಿದುದರಿಂದ ಬೆಳಗಿನೊಳಗೆ ಬೆಳಗಾಗಿರ್ದು ಶಬ್ದಮುಗ್ದವಾದುದು ಹೇಳಿದರೆ ಅದಕ್ಕದೆ ಕೊರತೆ, ಇದು ಕಾರಣ ಲಿಂಗ ಸಕೀಲ ಸಂಯೋಗದ ವರ್ಮವರಿತವರೆ ಲಿಂಗೈಕ್ಯರು. ಅವರು ಎಂಜಲ ಮಾತ ಸೇರದವರು . ಅವರ ಶಬ್ದ ಅವರಿಗೆ ಹಗೆಯಾದುದರಿಂದ ಶಬ್ದಮೀಸಲವಾಗಿಹರೆ ಲಿಂಗೈಕ್ಯರು. ಇವರೆ ಕೂಡಲಚೆನ್ನಸಂಗನ ಅನುಭಾವಿಗಳು ಎಂದು ಹೇಳಿಹರು .

10

ಲಿಂಗ ಗುಣದಿಂದ ಲಿಂಗೈಕ್ಯವೆಂಬರು
ಲಿಂಗ ಗುಣದಿಂದ ಲಿಂಗೈಕ್ಯವಿಲ್ಲ ನೋಡಾ

ಭಾವಾದ್ವೈತಂ ಪರಹಿತಂ ಕೂಡಲಚೆನ್ನಸಂಗಾ ಲಿಂಗೈಕ್ಯವು.

ತಾತ್ಪರ್ಯ : ಲಿಂಗಗುಣದಿಂದ ಲಿಂಗೈಕ್ಯವೆಂಬರು: ಇವರು ಲಿಂಗವರಿಯದವರು. ಲಿಂಗಸಕೀಲ ಸಂಯೋಗ ವರ್ಮಸ್ಥಲ ನರಿಯದ್ದರಿಂದ ಲಿಂಗ ಗುಣದಿಂದುಕ್ತವಾದುದು ಎಂದು ತಿಳಿದಿಹರು.

ವೇದಾಂತಗಳಿಗೆ ಅಸಾಧ್ಯವಾಗಿಹ ಅನುಪಮ ಲಿಂಗವ ತಂದು ಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ , ನಾದ ಬಿಂದು ಕಳೆಗಳಿಗ ಭೇದ್ಯವಾಗಿಹ ಅಚಲಿತ ಲಿಂಗವ ತಂದು ಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ ವಾಙ್ಮನಕ್ಕ ಸಾಧ್ಯವಾಗಿಹ ಅಖಂಡಿತ ಲಿಂಗವ ತಂದು ಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ ಇನ್ನು ನಾನು ಬದುಕಿದೆನು ನಾ ಬಯಸಿದ ಬಯಕೆ ಕೈ ಸಾರಿತಿಂದು ಕೂಡಲಸಂಗಮದೇವಾ .

ಆರು ಸದ್ಗುರು ಕೃಪೆಯಿಂದ ವೇದಕ್ಕೂ ವೇದಾಂತಕ್ಕೂ ಮಿಕ್ಕಿ ಮೀರಿದ ಅನುಪಮ ಲಿಂಗವ ಪಡೆದಿಹರು ಅವರು ಲಿಂಗವರಿಯ ಹೋಗಿ ಲಿಂಗಗುಣದಿಂದ ಲಿಂಗೈಕ್ಯವಿಲ್ಲ ವೆಂದಿಹರು . ಬಹು ವೀರಶೈವರು ಲಿಂಗವ ರೂಪಾಗಿ ಕಂಡವರು ಹೆಚ್ಚು . ಆವುದು ರೂಪ ರಂಜನೆಯಿಂದುಕ್ತವಾಗಿದೆ ,ಅದು ಗುಣದಿಂದುಕ್ತವಾಗಿದೆ. ಅದರ ಗುಣಗಾನ ಮಾಡುವದರಿಂದ ದೇವನು ಒಲಿಯುವನೆಂದು ಅವರ ಭಾವ. ಅವರು ಶ್ರದ್ಧಾವಂತರು ನಿಷ್ಠಾವಂತರು ಆಸ್ತೀಕರು ಜಂಗಮ ಲಿಂಗದಿಂದ ಲಿಂಗಜ್ಞಾನವ ಪಡೆದು ಲಿಂಗ ಕಾರಣ, ಜಗವು ಕಾರ್ಯ , ಲಿಂಗ ಇಷ್ಟಾರ್ಥ ಪೂರ್ತಿಮಾಡುವ ದೇವ, ಭಕ್ತ ದೇವನ ಒಲಿಸಿ ತನ್ನ ಇಷ್ಟಾರ್ಥವ ಸಿದ್ಧಿಸಿಕೊಳ್ಳುವ ಸೇವಕ. ಲಿಂಗ ಪೂಜ್ಯ , ಭಕ್ತ ಪೂಜಕ. ಲಿಂಗ ಸ್ವತಂತ್ರ ಭಕ್ತ ಪರತಂತ್ರ ಲಿಂಗ ಸಾಲೋಕ್ಯ , ಸಾಯುಜ್ಯ , ಸಾಮೀಪ್ಯ , ಸಾರೂಪ್ಯ ಪದವಿಗಳ ಒಡೆಯ , ಭಕ್ತ ಫಲ ಪದವಿಗಳ ಪಡೆಯುವವ , ಹೀಗೆ ತಿಳಿದು ಲಿಂಗಾನುಸಂದಾನ ಮಾಡಿ ಲಿಂಗದಲ್ಲಿ ಮನವು ಲೀನ ಮಾಡುವದೆ ಲಿಂಗೈಕ್ಯವೆಂದು ತಿಳಿದಿಹರು. ಅದು ಲಿಂಗೈಕ್ಯವಲ್ಲ. ಲಿಂಗವದು ನಿರೂಪ, ನಿರುಪಮ, ಅಖಂಡ, ಅಚಲವೆಂದು ಸದ್ಗುರುವಿನಿಂದ ಲಿಂಗ ಸಕೀಲ ಸಂಯೋಗ ವರ್ಮಸ್ಥಲವರಿತು ಶಬ್ದ ಮೀಸಲವಾದವರು ಲಿಂಗೈಕ್ಯರು .

ಲಿಂಗೈಕ್ಯರು , ಲಿಂಗ ಒಂದಾಗಿರ್ದ ಜಂಗಮ ಘನವಂತರು, ಅವರ ಇರವು ಅರಿವು . ಲಿಖಿತಕ್ಕೊಳಪಡಲಿಲ್ಲ , ಶಬ್ದಕ್ಕೊಳ ಪಡಲಿಲ್ಲ , ಅವರ ನಿಲವು ಅಪ್ರತಿಮವಾಗಿಹ ಸುಖದೇಕ ಸುಖ, ಅದಕ್ಕೆ ಪ್ರತಿಯಿಲ್ಲವಾದುದರಿಂದ ವರ್ಣಾತೀತ . ಸ್ತೋತ್ರ ಧ್ಯಾನಾದಿಗಳಿಗಿಂಬಿಲ್ಲವಾದುದರಿಂದ ವಾಙ್ಮನೋತೀತ ಅಚಿಂತ್ಯಾತ್ಮವಿರುವಲ್ಲಿ ಲಿಂಗಾನು ಸಂದಾನದಿಂದ ಲಿಂಗೈಕ್ಯವಿಲ್ಲ ವೆಂದು ಹೇಳಿಹರು .

ಭಾವಾದ್ವೈತಂ ಪರಹಿತಂ ಕೂಡಲ ಚೆನ್ನಸಂಗಾ ಲಿಂಗೈಕ್ಯವು : ಲಿಂಗೈಕ್ಯನು ಲೀಲಾ ಮಯನು ಮಹಾಂತನ ಲೀಲೆ ಅದು ಪರಹಿತಕ್ಕಾಗಿ ಅದ್ವೈತಭಾವಿಯಂತೆ ತೋರುವನು . ತಾನು ಭಾವಕ್ಕಗಮ್ಯವಾಗಿದ್ದು, ತನ್ನ ಲೀಲೆ ಅದ್ವೈತ ಭಾವದಿಂದುಕ್ತ ವಾಗಿಹುದು . ಈ ಲೀಲೆ ಭಕ್ತರ ಕಲ್ಯಾಣದ ಲೀಲೆ ಜಗತ್ಕಲ್ಯಾಣದ ಲೀಲೆ. ಲಿಂಗೈಕ್ಯನು ಸಕಲ ಭಾವಂಗಳಿಗೆ ಮಿಕ್ಕಿ ಮೀರಿ ನಿಂತಾಗ ಭಾವಾದ್ವೈತವು ಸಕಲರ ಹಿತದ್ದಾಗುವದು . ಅಂಗ ಭಾವ ವಿರಲಿ , ಲಿಂಗ ಭಾವ ವಿರಲಿ , ಜಂಗಮ ಭಾವವಿರಲಿ . ಈ ಮೂರಕ್ಕೂ ಮಿಕ್ಕಬೇಕು , ಮೀರಿ ನಿಲ್ಲ ಬೇಕು ಆಗ ಭಾವಕ್ಕಗಮ್ಯವಾಗಿಹ ನಿಲವು ತನ್ನದಾಗುವದು . ಈ ನೆಲೆಯುಳ್ಳ ನಿಲುವೆ ಅಚಿಂತ್ಯ ಪದವು , ಇದು ತನ್ನ ಪದ ತನ್ನಿರವು ಕರಿಗೊಂಡ ನಿಶಬ್ದ ಘನದ ನಿಲುವು ತನ್ನದಾದ ಪರಾನಂದ ಪ್ರತಿಯಿಲ್ಲದ ಸುಖವೆ ತಾನು ತನ್ನ ಸ್ವರೂಪವಾದ್ದರಿಂದ ಮಹಾಂತನ ಭಾವಾದ್ವೈತವು ಪರಹಿತಕ್ಕಾಗಿ ಅದೆ.

ಲಿಂಗೈಕ್ಯನು ನಿರ್ವಾಣನಾಗಿಹ ಪರಮಾನಂದಮಯನು . ಜ್ಞಾನಾಮೃತನು ಸ್ವಯಂಜ್ಯೋತಿ ಯಾಗಿಹ ಘನ ಮಹಿಮಂಗೆ ಒಡಲೆಲ್ಲಿಯದು . ಒಡಲು ಕಂಡರೂ,ಒಡಲಾಗದ ಒಡಲು ಅರುವಿಂಗರುವಾಗಿಹ ಅರಿಯದರವು ,ಏನೆಂದೆನಲಿಲ್ಲದ ಅರವುಳ್ಳ ಸುಖ.ನಿಸ್ಸೀಮ

ಸುಖದವನಾಗಿದ್ದರೂ , ಭಾವಾದ್ವೈತವು ಪರಹಿತದ ಅಭಿನಯವಾಗಿದೆ , ಲಿಂಗೈಕ್ಯರ ಬಾವಾದ್ವೈತವು ಭಾವ ಬರಿತವಾದುದು.

ಮರುಳು ತಲೆ, ಹುರುಳು ತಲೆ ನೀನೆ ದೇವಾ, ಹೆಂಗೂಸು , ಗಂಡು ಗೂಸು ನೀನೆ ದೇವಾ. ಎಮ್ಮಕ್ಕನ ಗಂಡನು ನೀನೆ ದೇವಾ , ಕೂಡಲಸಂಗಮದೇವಾ , ಭ್ರಾಂತಳಿದು ಭಾವ ನೆಲೆಗೊಂಡಿತ್ತಾಗಿ ಲಿಂಗೈಕ್ಯರಾಗಿಹ ಬಸವರಸರ ಭಾವಾದ್ವೈತ,ಪರಹಿತದ ಅದ್ವೈತ ಭಾವ ನಿಸ್ಸೀಮಭಾವ,ಭರಿತ ಭಾವ ಅಖಂಡ ಭಾವ ಎಲ್ಲೆಲ್ಲೂ ಕೂಡಲ ಸಂಗಮನಾಥನ ಕಂಡ ಭಾವ ಅಜ್ಞಾನಿ ತಲೆ, ಸುಜ್ಞಾನಿ ತಲೆ ಕೂಡಲಸಂಗಯ್ಯನಾಗಿ ಕಂಡವೆ ? ಗಂಡು , ಹೆಣ್ಣು, ಶಿವ ಶಕ್ತಿ ಸಂಗಯ್ಯ ನಾಗಿ ಕಂಡವೆ ? ಪೂರ್ಣ ಭಾವ, ಅಖಂಡ ಭಾವ , ಲಿಂಗ, ಲಿಂಗ ಎಂಬುದು ಭಾವ ಸಚ್ಚಿದಾನಂದನೆಂಬ ಭಾವವು ಕೂಡಲಸಂಗಯ್ಯನಾಗಿ ಕಂಡಲ್ಲಿ ಭ್ರಾಂತಿ ತರದು , ಭಾವ ಏತರದು ಈ ಭಾವಬರಿತ ವಾದುದ್ದು ಭಾವದ್ವೈತವು ಇದು ಪರಹಿತಕ್ಕಾಗಿ ಜಗತ್ಕ ತ್ಯಾಣಕ್ಕಾಗಿ ಅಭಿನಯಿಸಿದ ಲಿಂಗೈಕ್ಯರ ಭಾವವು ಎಂದು ಹೇಳಿದೆ.

11

ಒಡಲುಗೊಂಡು ಒಡಲು ವಿಡಿಯದೆ ,
ಒಡಲಿಲ್ಲದ ನಿಜವ ಬೆರಸೆಲವೊ,
ನರರು ಸುರರು ಕಿನ್ನರರು ಖೇಚರರು
ಪರಮ ಪದವಿಯ ನರಿಯದ ಕಾರಣ
ಭವದೊಳಗೆ ಸಿಲುಕಿದರು . ಕೂಡಲ ಚೆನ್ನಸಂಗನ
ನಿಜರೂಪವ ಬೆರಸಿರೊ ಮುಮುಕ್ಷುಗಳಿರಾ. ॥ 695 ॥

ತಾತ್ಪರ್ಯ : ಒಡಲು ಗೊಂಡು ಒಡಲು ವಿಡಿಯದೆ ಒಡಲಿಲ್ಲದ ನಿಜ ಬೆರಸೆಲವೊ? ಮುಮುಕ್ಷುಗಳಿರಾ : ಓ , ಮೋಕ್ಷಾ ಪೇಕ್ಷ ವಂತರೆ! ಮೋಕ್ಷವೆಂಬುದು ಸಕಲರ ಸ್ವಾತಂತ್ರ ಪದ ನಿಜಪದ , ತನ್ನದಾದ ಪದ ತನಗೆ ಲಭ್ಯವಿಲ್ಲವೆ ? ತಾನಾರೆಂದು ತಿಳಿಯಲು ಸಕಲರಿಗೂ ಸ್ವತಃ ಸಿದ್ಧ ಅಧಿಕಾರವದೆ ಮೋಕ್ಷ ವೆಂಬುದು ಮುಕ್ತಾಯದ ಮುಕ್ತಾಯ . ಅಜನ್ಮ ಸ್ಥಿತಿ , ಅಚಿಂತ್ಯ ನಿಲವು. ನೆನಹಿಂಗೂ ನಿರ್ಣಯಕ್ಕೂ ಮೀರಿದ ನಿಲವು ಅರಿವುಡೆ ವರ್ಣಾತೀತ.

ಓ ! ಮುಮುಕ್ಷುಗಳಿರಾ ! ನಾವು ಮುಮುಕ್ಷುಗಳು ಎಂಬುದು ತಮ್ಮ ಹೃದಯ ತಾವು ನೋಡಿ ಕೊಳ್ಳುವದು. ಮುಮುಕ್ಷು ಗಳೆಂದಲ್ಲಿ ಸುಖವನ್ನೆ ಬಯಸುವ ಸುಖಾಸಕ್ತರು. ಆಧುನಿಕ ಸಮಯದಲ್ಲಿ ಕೇವಲ ಸುಖವನ್ನು ಬಯಸುವ ಸುಖಾಸಕ್ತಿಗಳು ಸಿಕ್ಕುವದು ವಿರಳ , ಸುಖ ಆರಿಗೂ ಬೇಡವಾಗಿಲ್ಲ ಸುಖಕ್ಕಾಗಿ ಸಕಲ ಪ್ರಯತ್ನ ನಡೆದದ್ದೇನು ನಿಜ, ಸುಖ ಪಡೆಯುವ ಮಾರ್ಗ ಬೇರಾಗಿದೆ . ಸುಖ ಹೊರಗಿಲ್ಲ ಅದು ಪ್ರವೃತಿ ನಿವೃತ್ತಿಯಲ್ಲಿಯೂ ಇಲ್ಲ .

ಲೋಕವು ಸುಖ ಇಲ್ಲದ ಸ್ಥಾನದಲ್ಲಿ ನೋಡುತ್ತದೆ .ಪ್ರವೃತ್ತಿ ಮಾರ್ಗದವರು ಪ್ರಪಂಚದ ಇಂದ್ರಿಯ ಜನ್ಯ ವಿಷಯ ಬೋಗೋಪ ಭೋಗದಲ್ಲಿ ಹುಡುಕುವರು . ಸನ್ಯಾಸಿಯು ತನ್ನ ತ್ಯಾಗದಲ್ಲಿ ನೋಡುವನು ಸಂಗೀತ ಗಾರನು ತನ್ನ ಸುನಾದದಲ್ಲಿ ಹುಡುಕುವನು ಮುಮುಕ್ಷುಗಳು ಗುರುನಾಥನ ಅಶೀರ್ವಾದದಲ್ಲಿ ಜಿಜ್ಞಾಸುಗಳು ನಿತ್ಯಾನಿತ್ಯ ವಿಚಾರದಲ್ಲಿ , ಅನುಭವಿಗಳು ಶಬ್ದ ಸಂಭ್ರಮದಲ್ಲಿ ಹುಡುಕುವರು . ಹೀಗಾಗಿ ತಾವಾರೆಂದು ತಮ್ಮನರಿಯದ ಕಾರಣ ತ್ರಿವಿಧ ತಾಪವಂತ ರಾದರಲ್ಲದೆ ಭವ

ವಿರಹಿತ ರಾಗಲಿಲ್ಲ.

ದಯಾಳುವಾದ ಷಟ್‌ಸ್ಥಲ ಚಕ್ರವರ್ತಿ ಚೆನ್ನಬಸವರಾಜ ದೇವರು ಒಡಲುಗೊಂಡು ಒಡಲು ವಿಡಿಯದೆ ಒಡಲಿಲ್ಲದ ನಿಜವ ಬೆರಸೆಲವೊ ಎಂದು ತನ್ನ ಕರುಣೆಯ ತೋರಿದ . ಮುಮುಕ್ಷುಗಳೆಂದರೆ ಒಡಲು ಗೊಂಡವರು . ಒಡಲೆಂಬುದು ತಾನಾಗದ ತನ್ನದಾಗದ ಇಪ್ಪತ್ತೈದು ತತ್ತ್ವಗಳುಳ್ಳ ಉಪಾಧಿಯು , ಕೆಲಬರು ಕರಣಂಗಳಿಗೆ ಒಡಲು ಎನ್ನುವರು .

ಕೆಲಬರು ಒಡಲ ವಿಡಯದವರಾಗಲು ಮರವಿನ ಭಾವ ಬಿಟ್ಟು ಅರುವಿನ ಭಾವದವರಾಗುತ್ತಾರೆ. ಓಂ ಅಸತೋ ಮಾ ಸದ್ಗಮಯ , ತಮಸೊ ಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂಗಮಯ ವೆಂದು , ಅಸತ್ಯದಿಂದ ಸತ್ಯದ ಕಡೆಗೆ, ಅಜ್ಞಾನದಿಂದ ಬಿಡುಗಡೆಯಾಗಿ ಜ್ಞಾನದ ಕಡೆ ಮೃತ್ಯುವಿನಿಂದ ಬಿಡುಗಡೆಯಾಗಿ ಅಮೃತತ್ವ ಕಡೆಗೆ ಪ್ರವೃತ್ತರಾಗುವದೆ ಒಡಲವಿಡಿಯದವರೆನ್ನುವರು . ಇನ್ನು ಕೆಲಬರು ಅರುವಿನ ಭಾವದವರಾಗಿ ಸಾಕ್ಷಿ ನಾನು , ಸ್ವಯಂ ಪ್ರಕಾಶ ನಾನು , ಅಸಂಗ ನಾನು ಸಚ್ಚಿದಾನಂದಾತ್ಮ ನಾನು ಎಂಬ ಚಿದಹಂ ಭಾವಿಗಳಾಗಿ ಒಡಲುವಿಡಿಯದವರು ಎಂದು ತಿಳಿದಿಹರು .

ಓ ಅಣ್ಣಯ್ಯಗಳಿರಾ , ಅಪ್ಪಯ್ಯಗಳಿರಾ , ನೀವು ಒಡಲು ವಿಡಿಯದವರಾಗಿರುವಿರಿ ಎಂದಲ್ಲಿ ಒಡಲಿಲ್ಲದ ನಿಜವ ಬೆರಸಿರುವಿರಾ ? ನಿಮ್ಮ ಹೃದಯವ ನೀವೆ ನೋಡಿ ಕೊಳ್ಳುವುದು ಎಲ್ಲಿಯವರೆಗೆ ಚಿಂತಕರು , ಭಾವಿಕರು ಒಂದು ಬಿಡುವುದು ಮತ್ತೊಂದು ಹಿಡಿವುದು . ಕೆಲವು ಸಮಯ ಸುಖಿಗಳು , ಕೆಲವು ಸಮಯ ದುಃಖಿಗಳು ಆದಲ್ಲಿ ನಿಜದಲ್ಲಿ ಬೆರೆತುದು ಹೇಗಾಗುವುದು, ಅಲ್ಲಿ ಅಚಿಂತ್ಯ ಪದ ಅಳವಟ್ಟುದೆಂದು ಹೇಗೆ ತಿಳಿಯುವದು ? ಸೀಮಿತನಾದಲ್ಲಿ ನಿಜಪದ ಹೇಗೆ ಸಾಧ್ಯ ಇದು ಕಾರಣ ನರರು, ಸುರರು ಕಿನ್ನರರು, ಖೇಚರರು ಪರಮ ಪದವಿಯ ನರಿಯದ ಕಾರಣ ಭವದಲ್ಲಿ ಸಿಲುಕಿದರು .

ಪೂರ್ವದಲ್ಲಿ ತಪಸ್ವಿಗಳಾಗಿಹ ಎಷ್ಟೊ ನರರು . ನೈಷ್ಠಿ ಬ್ರಹ್ಮಚರ್ಯವಂತರು , ಅಣಿಮಾದಿ ಸಿದ್ಧಿಗಳನ್ನು ಪಡೆದ ಸಿದ್ಧಿ ಪುರುಷರು ಕಾಮಧೇನು , ಕಲ್ಪವೃಕ್ಷ , ಚಿಂತಾರತ್ನಗಳನ್ನು ಪಡೆದ ದೇವತೆಗಳು, ಸಂಗೀತದಲ್ಲಿ ಸುನಾದವ ಮಾಡಿ ಶಾರದೆಯನ್ನು ಒಲಿಸಿಕೊಂಡ ಕಿನ್ನರರು , ಗಗನದಲ್ಲಿ ಹಾರಾಡುವ ಖೇಚರರು ಇವರುಗಳು ಕೂಡ ಪರಮ ಪದವಿಯ ನರಿಯದ ಕಾರಣ ಹುಟ್ಟು ಸಾವುಗಳಿಗೀಡಾದರು.

ಪುನರಪಿ ಜನನಂ, ಪುನರಪಿ ಮರಣಂ, ಪುನರಪಿ ಜನನೇ ಜಠರೇ ಶಯನಂ. ಹುಟ್ಟಿದುದು ಏತಕ್ಕೆ ಮರಣವಾಗಲಿಕ್ಕೆ , ಮರಣವಾಗುವದು ಏತಕ್ಕೆ ತಾಯಿಯ ಗರ್ಭದಲ್ಲಿ ವಾಸಿಸಲು . ಈ ಭವದಿಂದ ಬಿಡುಗಡೆ ಯಾಗಲು ಸದ್ಗುರು ದೇವನ ಕೃಪೆಯೆ ಕಾರಣವು . ಈ ಮಹಾಂತನು ಒಡಲು ಗೊಂಡ ಮುಮುಕ್ಷುಗಳಿಗೆ ಒಡಲು ವಿಡಿಯದ ಅನುವ ತೋರಿಸಿ ಕೊಡುವನು . ಮೋಕ್ಷಪೇಕ್ಷವಂತರು ಗುರು ಘನನನ್ನು ಒಲಿಸಿಕೊಂಡು ಆ ಅನುವ ಪಡೆದಾಗ ಆಗ ಒಡಲು ವಿಡಿಯದ ನಿಸಂಗತ್ವ ಸಹಜ ತನ್ನಿಂದ ತನಗೆ ಗೊತ್ತಾಗುವದು . ಇದು ಜ್ಞಾನಾರ್ಜನೆ , ತತ್ತ್ವಜ್ಞರಾಗಿ ಅರು ಹೃದಯರಾಗಿ ಅರುವ ಅರಿಯ ಹೋದವರಿಗೆ ಇದು ಸಾಧ್ಯವು. ಕ್ರಿಯಾಚಾರದ ಕ್ರಿಯೆ ನಿಷ್ಠರಿಗೆ ಕಠಿಣವು, ಜ್ಞಾನಾಚಾರವುಳ್ಳ ಅರು ಸ್ವರೂಪರಿಗೆ ಸಹಜವಾಗಿದೆ .

ಅರಸುವ ಮತಿ ಕ್ರಿಯಾಮತಿ , ಅರಿಯುವ ಮತಿ ಅರುಸ್ವರೂಪ ವಾಗಿಹ ಸುಮತಿ ಅರಸುವ ಚಿಂತಿಸುವ ಭಾವಿಸುವ ನಿತ್ಯಾನಿತ್ಯ ವಿಚಾರವುಳ್ಳವರು ಇವರುಗಳು ಒಡಲುಳ್ಳವರು ಒಡಲ ವಿಡಿಯದವರಾಗ ಬೇಕಾದಲ್ಲಿ ಮಹಾತ್ಮರ ಮಹಾನುಭವವುಳ್ಳ ನಾ ನೀನೆನ್ನದಿಹ ಶಬ್ದ ಸುಖಿಗಳು ಲಿಂಗೈಕ್ಯರು ಲಿಂಗ ಗೂಢಾಗಿಪ್ಪವರ ತೋರಾ ಎನಗೆ , ಅಹೋ ರಾತ್ರಿ ಅವರ ಸೇವೆಯಲ್ಲಿರಿಸು ಕೂಡಲ

ಸಂಗಮ ದೇವಾ ಎಂದು ಬಿತ್ತರಿಸಿದುದು ನೋಡಿದಡೆ ಒಡಲು ವಿಡಿಯದವರಾಗಲು ಲಿಂಗೈಕ್ಯರ ಕೃಪೆ ಅವಶ್ಯವಾಗಿ ಬೇಕು.

ಮಹಾಂತರೆಂದರೆ ನಾ ನೀನೆನ್ನದಿಹ ಶಬ್ದ ಸುಖಿಗಳು. ಅವರು ದಯಾಮಯರಾಗಿ ಒಡಲು ವಿಡಿಯದ ಅನುವು ತೋರಿಸಿದಾಗ ಜಿಜ್ಞಾಸುವಿಗೆ ಒಡಲು ವಿಡಿಯದ ನಿಸ್ಸಂಗತ್ವ ನಿರಾಲಂಬತ್ವ ಲಭ್ಯವಾಗುವುದು. ಇದು ತತ್ವ ದೃಷ್ಟಿಯ ಕಾರ್ಯವಾದುದರಿಂದ ಒಡಲು ಗೊಂಡುದು ಆವುದು ? ಒಡಲು ವಿಡಿಯದೆ ಇದ್ದುದ್ದು ಆವುದು ? ಎಂಬುದನ್ನು ತತ್ವ ದೃಷ್ಟಿಯುಳ್ಳವರಾಗಿ ನೋಡುವುದು.

ಒಡಲು ಗೊಂಡುದು ನೋಡಿರೆ ದೇಹೋಹಂ,ಕೋಹಂ, ಸೋಹಂ, ಚಿದಹಂ, ದಾಸೋಹಂ ಎಂಬುವವರು ನಾ ನೀನೆನ್ನುವ ಶಬ್ದ ಸಂಭ್ರಮದ ಹಂಗಿಗರು. ಇವರು ಒಡಲುಗೊಂಡವರು. ಒಡಲ ವಿಡಿಯದೆ ಇದ್ದುದು ಆವುದು ? ಸ್ಥಲವೆಂದೆನ್ನೆ ನಿಸ್ಥಲವೆಂದೆನ್ನೆ ನಿರ್ಣಯವೆನಗಾದ ಬಳಿಕ ಏನೆಂದರಿಯೆನಯ್ಯ, ಇದು ಕಾರಣ ಕೂಡಲಚೆನ್ನಸಂಗಯ್ಯ ಲಿಂಗೈಕ್ಯವೆಂದೆನ್ನೆ!

ಒಡಲು ವಿಡಿಯದೆ ಇದ್ದುದು ತಾನು ತನ್ನನ್ನು ತನ್ನಿಂದ ಯತಾರ್ಥವರಿತಾಗ ಒಡಲ ವಿಡಿಯದವನಾಗುತ್ತಾನೆ. ನಿಜರೂಪನ ಬೆರಸಿದವನಾಗುತ್ತಾನೆ. ನಿಜರೂಪನ ಬೆರಸಿದವರು ಸಹಜವೆನ್ನದೆ ನಿಜ ವೆನ್ನದೆ ಅಚಲವೆನ್ನದೆ ಅಖಂಡಿತ ವೆನ್ನದೆ ಶೂನ್ಯವೆನ್ನದೆ ನಿಶೂನ್ಯವೆನ್ನದೆ ಏನೂ ಎನ್ನದೆ ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು.

ಒಡಲ ವಿಡಿಯದವರು ಇವರು ನೆನಹಿಂಗೂ ಚಿಂತನಕ್ಕೂ ಭಾವಕ್ಕೂ ಕಲ್ಪನೆಗೂ ಮೀರಿದವರು. ಎಲ್ಲಿಯವರೆಗೆ ಕಲ್ಪಿತ ಪುರುಷನಾಗಿ ಕಲ್ಪನೆಯಿಂದುಕ್ತನಾಗಿಹನು ಅಲ್ಲಿಯ ವರೆಗೆ ಒಡಲುಳ್ಳವನು . ಒಡಲ ವಿಡಿಯದವನಾಗ ಬೇಕಾದಲ್ಲಿ ತತ್ವದೃಷ್ಠಿಯುಳ್ಳವನಾಗಿ ತನ್ನಿಂದ ತಿಳಿಸಿಕೊಳ್ಳುವ ಅನಾತ್ಮ ಭಾವವೆ ಇರಲಿ,ಆತ್ಮ ಭಾವವೆ ಇರಲಿ ಇವೆರಡು ತಾನಾಗದವ ನೆಂಬುದು ತನ್ನಿಂದ ತನಗೆ ತಿಳಿವಳಿಕೆ ಆಗಬೇಕು . ಆಗ ಚಿಂತಿಸುವ ಚಿಂತಕನಾಗಲು ಸಹಜವೆ ಒಪ್ಪುವದಿಲ್ಲ ಆವಾವುದನ್ನು ನೆನೆಯಲು ಒಪ್ಪುವದಿಲ್ಲ ಇದರಿಂದ ಒಡಲು ವಿಡಿಯದ ಘನತ್ವ ತನ್ನಿಂದ ತನಗೆ ತಿಳಿಯುವದು.

ಒಡಲಿಲ್ಲದ ನಿಜರೂಪ ವೆಂದರೆ ಕೂಡಲ ಚೆನ್ನಸಂಗನ ನಿಜರೂಪ ಅರಿವುಡೆ ತನ್ನ ರೂಪ , ಕಲ್ಪಿತನಾಗಿ ಒಡಲುಳ್ಳವ ನೆನಿಸಿ ತನುಭಾವಿ , ಇಂದ್ರಿಯಂಗಳ ಭಾವಿ , ಪ್ರಾಣಂಗಳ ಭಾವಿ, ಕರಣಂಗಳ ಭಾವಿ , ಇದಲ್ಲದೆ ಆತ್ಮ ಭಾವಿಯೂ ಆಗಿದ್ದನು . ತನ್ನ ತಾನರಿವುಡೆ ಉಪಾಧಿ ಮನ, ಉಪಾಧಿರಹಿತ ಮನಕ್ಕೂ ಮೀರಿದವ ತಾನೆ. ನೆನಹು ನಿರ್ಣಯಕ್ಕೂ ಮೀರಿದವನು ತಾನೆ ಭಾವಕ್ಕಗಮ್ಯ ತಾನೆಂಬುದು ತನಗೆ ಸಿದ್ಧವಾಗುವುಡೆ ಆಗ ಅಕಲ್ಪಿತ ಘನ ತಾನೆ, ಕೂಡಲ ಚೆನ್ನ ಸಂಗನ ನಿಜರೂಪವೆ ತನ್ನದು ಎಂಬುದು ತನ್ನಿಂದ ತನಗದು ಸಹಜ ವೇದ್ಯವಾದುದು ಕೂಡಲ ಚೆನ್ನಸಂಗನ ನಿಜರೂಪನಲ್ಲಿ ಬೆರೆತ ಮುಮುಕ್ಷುಗಳು ಎಂದು ಹೇಳಿಹರು. ಈ ಮುಮುಕ್ಷುಗಳು ಕೇವಲ ಸುಖಾಸಕ್ತಿಯವರು ಸುಖಕ್ಕಾಗಿ ಕೂಡಲ ಚೆನ್ನಸಂಗನ ನಿಜರೂಪದಲ್ಲಿ ಬೆರತವರು ,ಅವರು ಸುಖರೂಪ ಸುಖಿಗಳು ಸವೆಯದ ಸುಖಿಗಳು . ಪರತತ್ವ ನಿಜ ಸಂಯುಕ್ತರು. ನಾ ನೀನೆನ್ನದಿಹ ಶಬ್ದ ಸುಖಿಗಳು ಲಿಂಗೈಕ್ಯ ಸುಖಿಗಳು ಎಂದು ಹೇಳಿಹರು.

12

ಬಯಲು ರೂಪು ಮಾಡಬಲ್ಲಾತನೆ ಶರಣ,
ಆ ರೂಪ ಬಯಲು ಮಾಡ ಬಲ್ಲಾತನೆ ಲಿಂಗಾನುಭಾವಿ.
ಆ ಬಯಲ ರೂಪ ಮಾಡಲರಿಯ ದಿರ್ದಡೆ ಎಂತು ಶರಣನೆಂಬೆ
ಆ ರೂಪು ಬಯಲ ಮಾಡಲರಿಯದಿರ್ದಡೆ ಎಂತು ಲಿಂಗಾನುಭವಿ ಯೆಂಬೆ

ಈ ಉಭಯ ಒಂದಾಗಿ ಅರಿದೊಡೆ, ನಿಮ್ಮಲ್ಲಿ ತೆರಹುಂಟೆ? ಕೂಡಲಸಂಗಮದೇವಾ.

ತಾತ್ಪರ್ಯ : ಬಯಲು ರೂಪು ಮಾಡ ಬಲ್ಲಾತನೆ ಶರಣ ಆ ರೂಪ ಬಯಲ ಮಾಡಬಲ್ಲಾತನೆ ಲಿಂಗಾನುಭಾವಿ : ಬಯಲೆಂದರೆ ನಿರೂಪ, ನಿಸ್ಸೀಮ, ನಿರಾಲಂಬ, ನಿರುಪಮ, ನಿರವಯ, ಅಚಲ ಎಂದಾಗವದು. ರೂಪವದು ನಿರೂಪದ ರೂಪ, ನಿರೂಪವದು ಅಪಾರ. ಅಪಾರವಾದುದು ನಿಸ್ಸೀಮ ನಿಸ್ಸೀಮವಾವುದು ಅದು ನಿರಾಲಂಬ. ನಿರಾಲಂಬವಾವುದು ಅದು ನಿರುಪಮ. ನಿರುಪಮವಾವುದು ಅದು ನಿರವಯ, ನಿರವಯವಾವುದು ಅದು ಅಚಲ, ಇದು ಬಯಲೆ ರೂಪಾದ ಸಂಜ್ಞೆಯು. ಈ ಸಂಜ್ಞೆ ಗುರು ಅರುವ ಅರಿಯ ಹೇಳಿದ ಸಂಜ್ಞೆ (ಲಿಂಗ).

ಬಯಲ ರೂಪ ಮಾಡಬಲ್ಲಾತನೆ ಶರಣ, ನಿರೂಪ ರೂಪ ಮಾಡಬಲ್ಲಾತ ಶರಣ. ಈ ಶರಣ ಅಘಟಿತ ಘಟಿತ, ಸಮರ್ಥವಂತ. ನಿರೂಪ ರೂಪ ಮಾಡುವ ಅಪೂರ್ವಿಕ. ಮನ ಮೇರೆ ದಪ್ಪಿದ ನಿಲುವಿನ ಸಂಕೇತ ಮಾಡುವವನು ಸಾಮಾನ್ಯನೆ ! ಅನುಪಮದ ಸಂಜ್ಞೆಯ ಕರುಣಿಸುವವನು ಸಾಮಾನ್ಯನೆ? ಲಿಂಗವದು ನಿರುಪಮ, ನಿರಾಲಂಬ, ನಿರೂಪ ನಿಸ್ಸೀಮ, ಸ್ವಯಂ ಜ್ಯೋತಿ ಚಿಜ್ಯೋತಿ. ಅಚಲ ಅಚಿಂತ್ಯತ್ವದ ಘನದಿರುವಿನ ಕರುಣಿಸುವ ಸಂಜ್ಞೆ.

ರೂಪ ಬಯಲು ಮಾಡಬಲ್ಲಾತನೆ ಲಿಂಗಾನುಭವಿ : ಲಿಂಗಾನುಭವಿ ಆರು? ರೂಪ ನಿರೂಪ ಮಾಡಬಲ್ಲಾತನು. ಲಿಂಗವೆಂಬ ರೂಪ ಸ್ವಗತ ಭೇದ, ಸಜಾತಿ ಭೇದ, ವಿಜಾತಿ ಭೇದ ಮೂರು ಭೇದಗಳಿಲ್ಲದ ಅಖಂಡಿತ ಘನ ಪೂರ್ಣವಪ್ಪ ಪರತತ್ವದ ಸಂಜ್ಞೆಯಿಂ ಪ್ರಜ್ವಲಿಸುವ ಘನವು. ಈ ರೂಪ ಪಿಂಡಾಂಡರೂಪ, ಬ್ರಹ್ಮಾಂಡ ರೂಪ ಆಗದು. ಬ್ರಹ್ಮಾದಿಗಳ ರೂಪವು ಆಗದು, ಅರೂಪವಾಗದು. ರೂಪ ಅರೂಪವೆನ್ನಲು ಮೀರಿದ ಘನವಾವುದೊ ಅದರ ರೂಪ. ಇದು ಸತ್, ಅಸತ್ ಎನ್ನಲು ಬಾರದ ರೂಪ. ಚಿತ್ ಅಚಿತ್ ಎನ್ನಲು ಬಾರದ ರೂಪವಾದ್ದರಿಂದ ಶೃತಿಗಗೋಚರವಾದ ಸಂಜ್ಞೆಯುಳ್ಳುದು. ಮೌನ ಮುದ್ರಿತವಾದ ಸಂಜ್ಞೆಯು. ಇದು ಪೂಜಕನ ಪೂಜೆಗೆ ಮೀರಿದುದು, ಪೂಜಕನ ನೆನಹಿಂಗೂ ಚಿಂತನಕ್ಕೂ ಭಾವಕ್ಕೂ ಅರಿವೆನೆಂಬ ಅರುವಿಂಗೂ ಇಂಬು ಕೊಡದ್ದರಿಂದ ಅನುಪಮ ಅಖಂಡ ವೆಂದು ಹೇಳಿಹರು, ಅಚಿಂತ್ಯವೆಂದೂ ಹೇಳಿಹರು. ಲಿಂಗರೂಪ ಅನುಪಮ, ಅಖಂಡವಾದುದರಿಂದ ಲಿಂಗ ಸಗುಣವು ಅಲ್ಲ ನಿರ್ಗುಣವು ಅಲ್ಲ. ನಾದಕ್ಕೂ ಬಿಂದಿಗೂ ಕಲೆಗಳಿಗೂ ಅವಕಾಶ ಕೊಡದ್ದರಿಂದ ಅಖಂಡ ವೆಂದು ಹೇಳಿದೆ.

ಸತ್ ಅಸತ್ ಎಂಬ ಕಥನಕ್ಕೂ ಎಡೆಗೊಡದ್ದರಿಂದ ಅಚಲ, ಚಿತ್ ಅಚಿತ್ ಎಂಬ ಲಕ್ಷಣಕ್ಕೂ ಸಂದು ಕೊಡದ್ದರಿಂದ ಅಚಲವೆಂದು ಹೇಳಿದೆ. ವರ್ಣನೆಗಿಂಬು ಕೊಡ್ದರಿಂದ ವರ್ಣಾತೀತ, ಗಣನೆಗೆ ನಿಲುಕದ್ದರಿಂದ ಅಗಣಿತ, ಚಿಂತನೆಗೆ ನಿಲುಕದ್ದರಿಂದ ಅಚಿಂತ್ಯನೆಂದು ಹೇಳಿದೆ. ಹೀಗೆ ರೂಪ ಬಯಲ ಮಾಡಬಲ್ಲಾತ ನಾಗಿರುವದರಿಂದ ಲಿಂಗಾನುಭವಿ ಎಂದು ಹೇಳಿದೆ. ರೂಪವದು ಗುರು ಅರುವ ಅರಿಯ ಹೇಳಿದ ಕುರುಹ (ಲಿಂಗ) ಲಿಂಗ ನಿರೂಪ ಮಾಡಬಲ್ಲಾತನಾಗಿರುವದರಿಂದ ಲಿಂಗಾನುಭವಿ ನಿರೂಪ ಲಿಂಗ, ಅನುಪಮ ಮಾಡಬಲ್ಲಾತ ನಾಗಿರುವದರಿಂದ ಲಿಂಗಾನುಭವಿ. ನಿರೂಪ ಲಿಂಗ, ನಿಸ್ಸೀಮ, ನಿಸ್ಸಂಗ,ನಿರಾಲಂಬ, ಅಚಿಂತ್ಯ ಅಖಂಡ ಮಾಡಬಲ್ಲಾತ ನಾಗಿರುವುದರಿಂದ ಲಿಂಗಾನುಭವಿ ಎಂದು ಹೇಳಿದೆ.

ಆ ಬಯಲು ರೂಪ ಮಾಡಲರಿಯದಿರ್ದಡೆ ಎಂತು ಶರಣನೆಂಬೆ : ಬಯಲು, ಅದು ನಿರೂಪ. ನಿರೂಪ ರೂಪ ಮಾಡಲರಿಯದಿರ್ದಡೆ ಅವರಿಗೆ ಶರಣರೆಂದು ಹೇಗನ್ನುವದು. ಲಿಂಗವದು ರೂಪವಾಗಿ ಲಿಂಗಾರ್ಚಕರಿಗೆ ಕಂಡರೂ ಅದು ವೇದ ವೇದಾಂತಗಳಿಗ ಸಾಧ್ಯವಾದ ಅನುಪಮ ರೂಪ

ಮಾಡಲರಿಯದಿರ್ದಡೆ ಅವರಿಗೆ ಶರಣರೆನ್ನಲು ಬರದು. ಲಿಂಗವದು ಭಕ್ತರ ಕರ ಕಮಲದಲ್ಲಿ ಕಂಡರೂ. ನಾದ ಬಿಂದು ಕಲೆಗಳಿಗಭೇದ್ಯವಾಗಿಹ, ಅಖಂಡಿತ ಘನಪೂರ್ಣವಪ್ಪ ತನ್ನಿರುವು ಮಾಡಲರಿಯದಿರ್ದಡೆ ಎಂತು ಶರಣರಾಗಿಹರು.

ರೂಪಲಿಂಗವದು , ಅಚಿಂತ್ಯ , ಅಚಲ , ಇದು ವರ್ಣನೆಗೂ ಚಿಂತನೆಗೂ ನಿಲುಕದ್ದು ಮಾಡಲರಿಯದಿದ್ದಡೆ ಎಂತು ಶರಣರೆನ್ನುವದು. ಶರಣ ನಿರೂಪ ರೂಪ ಮಾಡಬಲ್ಲಾತ, ಪರತತ್ವವನ್ನೆ ರೂಪ ಮಾಡಬಲ್ಲಾತ , ಚಿಜ್ಯೋತಿಯನ್ನೆ ರೂಪ ಮಾಡಬಲ್ಲಾತ ಅರುವೆ ಕುರುಹ ಮಾಡಬಲ್ಲಾತ , ವಿಶ್ವಾತೀತವನ್ನೆ ವಿಶ್ವವನ್ನಾಗಿ ಮಾಡಬಲ್ಲಾತ ಅ ಶಬ್ದವ ಶಬ್ದ ಮಾಡಬಲ್ಲತ , ಅಸ್ಪೃಶ್ಯ , ಸ್ಪೃಶ್ಯ ಮಾಡಬಲ್ಲಾತ, ಚಿದ್ರಸ , ರಸವ ಮಾಡಬಲ್ಲತ ಇವಾವು ಮಾಡಲರಿಯದಿರ್ದಡೆ ಶರಣರೆನ್ನಲು ಬರದು.

ರೂಪ ಬಯಲು ಮಾಡದಿರ್ದಡೆ ಎಂತು ಲಿಂಗಾನುಭವಿ ಎಂಬೆ , ರೂಪ ಲಿಂಗ ಮಾಡದಿರ್ದಡೆ ಲಿಂಗಾನುಭವಿಗಳಾಗಲಾರರು. ಶಬ್ದ ಲಿಂಗ ಮಾಡಿದಿರ್ದಡೆ ಎಂತು ಲಿಂಗಾನು ಭವಿ ಗಳಾಗುವರು? ಸ್ಪರ್ಶ ಲಿಂಗ ಮಾಡಿದಿರ್ದಡೆ ಎಂತು ಲಿಂಗಾನುಭವಿಗಳು ? ರಸ ಚಿದ್ರಸ ಮಾಡದಿರ್ದಡೆ ಎಂತು ಲಿಂಗಾನುಭವಿ ? ಸೋಂಕು ಮಹಾಘನ , ತೆರಹಿಲ್ಲದ ಘನದ ಸೋಂಕು ಮಾಡದಿರ್ದಡೆ ಎಂತು ಲಿಂಗವರಿತವರು ? ರೂಪವದು ಪಿಂಡಾಂಡ ಬ್ರಹ್ಮಾಂಡಗಳ ಮಾಡದೆ ಬ್ರಹ್ಮಾದಿಗಳು ಮಾಡದೆ ಅಭಾವ ಮಾಡದೆ ಭಾವಕ್ಕಗಮ್ಯ ಮಾಡದಿರ್ದಡೆ ಲಿಂಗಾನುಭವಿ ಎನ್ನಲು ಬರದು. ರೂಪ, ಸತ್ ಎನ್ನದೆ ಅಸತ್ ಎನ್ನದೆ ನುಡಿಗೆಡೆಗೊಡದ ಘನದಿರುವು ಮಾಡದಿರ್ದಡೆ ಲಿಂಗದ ಅನುಭವಿಗಳೆನಿಸರು.

ರೂಪ, ನೆನಹು, ನಿರ್ಣಯ, ಚಿಂತನ ಕ್ಕೊಳಪಡದ ಅಚಿಂತ್ಯಾತ್ಮನ ಮಾಡದಿರ್ದಡೆ ಹೇಗೆ ಲಿಂಗವರಿತವರೆನಿಸುವರು, ಎಂದು ಹೇಳಿದೆ.

ಉಭಯ ಒಂದಾಗಿ ಅರಿದಡೆ ನಿಮ್ಮಲ್ಲಿ ತೆರಹುಂಟೆ? ಕೂಡಲ ಸಂಗಮದೇವಾ : ಬಯಲೆಂದರೆ ರೂಪ, ರೂಪೆಂದರೆ ಬಯಲು, ಬಯಲು ಅದು ಲಿಂಗ, ರೂಪವದು ಲಿಂಗ, ಲಿಂಗವಾಗಿ ತಿಳಿಯುವದೆ ಉಭಯ ಒಂದಾಗಿ ಅರಿದಾಗ ಲಿಂಗವದು ಅರ್ಚಕರ ಲಿಂಗವಾಗಲಿಲ್ಲ ಬಯಲು ಅಭಾವದ ಭಾವವಾಗಲಿಲ್ಲ . ಲಿಂಗ ಬಯಲೆಂದರೂ ಅಖಂಡಿತ ಅನುಪಮ , ಅಚಲವಪ್ಪ ಪರಿಪೂರ್ಣ ಪರತತ್ವವದು, ಘನಗಂಭೀರ ಮಹಾ ಘನವದು, ಅಲ್ಲಿ ಆವಾವ ಭಾವಕ್ಕೂ ಇಂಬಿಲ್ಲ ನುಡಿಗಿಂಬಿಲ್ಲ. ಏಕೆಂದರೆ ಎರಡು ಒಂದಾಗಿ ಅರಿತ ನಿಲುವು ನಿಸ್ಸೀಮವಾಗಿದೆ . ಬಯಲು ಅದರ ಇರುವು ಅವರ್ಣೀಯವು. ರೂಪ ನಿರೂಪವಾದ್ದರಿಂದ ಅವರ್ಣೀಯವಾಗಿದೆ . ಅವರ್ಣೀಯವಾದುದು ಅನುಪಮ, ಅಚಿಂತ್ಯ . ನಿಲುವುಳ್ಳದ್ದಾಗಿದೆ ಇದು ಅರಿತವರ ನಿಲವು ತನ್ನಿಂದ ತನ್ನ ಅರಿತವರ ನಿಲುವು ಲಿಂಗೈಕ್ಯರ ನಿಲುವು. ಲಿಂಗ, ಲಿಂಗ ಎಂದು ಹಲಬುವವರ ನಿಲುವು ಅಲ್ಲ. ಅಖಂಡ ಲಿಂಗವರಿತವರ ನಿಲುವು ಎಂದು ಹೇಳಿದೆ.

13

ಗುರು ಸ್ಥಲ ನಾಸ್ತಿಯಾದಲ್ಲದೆ ಶಿಷ್ಯನಲ್ಲ,
ಲಿಂಗಸ್ಥಲ ನಾಸ್ತಿಯಾದಲ್ಲದೆ ಭಕ್ತನಲ್ಲ
ಜಂಗಮ ಸ್ಥಲ ನಾಸ್ತಿಯಾದಲ್ಲದೆ ಶರಣನಲ್ಲ.
ಇದು ಕಾರಣ ಕೂಡಲ ಚೆನ್ನಸಂಗಾ ಈ

ತ್ರಿವಿಧ ನಾಸ್ತಿಯಾಗಿ ಭಕ್ತ ಕೆಟ್ಟು ಭವಿಯಾದನಲ್ಲದೆ ಲಿಂಗೈಕ್ಯನಲ್ಲ.

ತಾತ್ಪರ್ಯ : ಗುರು ಸ್ಥಲ ನಾಸ್ತಿಯಾದಲ್ಲದೆ ಶಿಷ್ಯನಲ್ಲ : ಶಿಷ್ಯನೆಂದರೆ , ಗುರುಸ್ಥಲ ನಾಸ್ತಿಯಾದವನು ಶಿಷ್ಯನು , ಗುರುಸ್ಥಲವಾಗಿರುವದು ಶಿಷ್ಯರ ಮರವು , ಮಾಯೆ ಪ್ರಪಂಚ , ಕರ್ಮ ರೂಪಿ ಸಂಚಿತ ಆಗಾಮಿ , ಪ್ರಾರಬ್ಧ ಕಳೆಯಲು , ಅರು ಹೃದಯ ಮಾಡಲು ಮರವಿಂಗೆ ಗುರು ಉಂಟು. ಅರುವಿಂಗೆ ಗುರು ಉಂಟೆ ? ಅರು ಹೃದಯ ಸೀಮಾತೀತ ಹೃದಯ ಬಂಧ ಮೋಕ್ಷಂಗಳ ಕಾಣದ ಹೃದಯ,ಅಜ್ಞಾನ ಜ್ಞಾನ ಕಾಣದ ಹೃದಯ, ಅರು ಹೃದಯ ಕಣ್ತೆರೆಯ ಬೇಕೆಂದು ಗುರುವೆಂದು ಕಲ್ಪಿಸಿಕೊಂಡೆ , ಗುರುವಿಂಗೆ ಶಿಷ್ಯನೆಂಬುದುಂಟೆ ? ಶಿಷ್ಯಂಗೆ ಗುರುವೆಂಬುದುಂಟೆ? ಗಮನಾ ಗಮನ ನಾಸ್ತಿಯಾದ ಲಿಂಗಕ್ಕೆ ಅಂಗವೆಲ್ಲಿಯದೊ ? ಗುಹೇಶ್ವರ ಎಂಬ ಪ್ರಭುವಿನ ಪ್ರಸಾದ ವಾಣಿ ನೋಡುವುಡೆ ಅರುವಿನ ಹೃದಯ ಮಾಡುವ ಗೋಸ್ಕರ ಗುರುವೆಂದು ಕಲ್ಪಿಸಿಕೊಂಡೆ , ಇಲ್ಲದುದು ಮರವು . ಈ ಮರುವಿನಿಂದ ಮಾಯೆ ಪ್ರಪಂಚ , ತ್ರಿವಿಧ ರೂಪ ಕರ್ಮ ಪಾಶ , ಇವು ಇಲ್ಲ ಮಾಡಲು ಅರು ಹೃದಯ ಮಾಡಲು ಗುರುವೆಂಬ ನಾಮ , ಗುರುಸ್ಥಲ ಉಂಟಾಗಿದೆ. ಗುರುದೃಷ್ಟಿಯಲ್ಲಿ ಮಾತ್ರ ಶಿಷ್ಯನೆಂಬುದಿಲ್ಲ ಮರವು , ಮಾಯೆ ಇಲ್ಲ, ಗುರು ಘನನ ಜ್ಞಾನ ಸಹಜ. ಅಜ , ಅಚಿಂತ್ಯ ವಾಗಿಹ ಸುಜ್ಞಾನ. ಪರಾತ್ಪರ ಜ್ಞಾನ . ನಿಸ್ಸೀಮ ಜ್ಞಾನ , ಅರುವರಿತ ಜ್ಞಾನ , ಅದು ಅರು ಹೃದಯ ಮಾಡುವ ಜ್ಞಾನ. ಅಲ್ಲಿ ಗುರುವಿಂಗೆ ಶಿಷ್ಯನೆಂಬುದಿಲ್ಲ ಶಿಷ್ಯಂಗೆ ಗುರುವೆಂಬುದಿಲ್ಲ. ತನ್ನಿಂದ ತನ್ನ ತಾ ನರಿಯುವ ಅರಿವು ನಿಜದರುವಿನ ಅರುವು. ಇಲ್ಲಿ ಅರುವೆಂಬುದಕ್ಕೂ ಮೀರಿದ ತನ್ನಿರವು ಘನಕ್ಕೆ ಘನವಾಗಿಹದು. ಇಲ್ಲಿ ಗುರುವಿನಿಂದ ಪಡೆದು ಕೊಂಡುದಿಲ್ಲ ಶಿಷ್ಯ ಕಳಕೊಂಡುದಿಲ್ಲ .

ಇದ್ದಂತಿರುವ ಸಹಜ ನಿರಂತರವಾಗಿರುವ ಮಂಗಳ ಮಯ ಪರತತ್ವ ಅರಿವುಡೆ ತಾನು ತಾನೆ ಲಿಂಗವಾಗಿರುವಲ್ಲಿ, ತಾನು ತಾನೆ ತನಗಾವ ಲಿಂಗ ? ಲಿಂಗಕ್ಕೆ ಲಿಂಗವಾಗಿಹ ತಾನು . ತನಗೆ ಅದಾವ ಲಿಂಗ ? ತಾನೆ ಅರಿಯ ದರುವು ಇರುವಲ್ಲಿ ತನಗಾವ ಅರುವ ಕಲ್ಪಿಸುವದು ? ಇದು ಕಾರಣ '' ಮುಟ್ಟದ ಮುನ್ನ ಗುರುವುಂಟು, ಲಿಂಗವುಂಟು , ಜಂಗಮ ಉಂಟು ಮುಟ್ಟಿದ ಬಳಿಕ ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ ಪ್ರಸಾದವಿಲ್ಲ ಕೂಡಲ ಚೆನ್ನಸಂಗಾ ಸ್ವಯವಲ್ಲದೆ ಪರವಿಲ್ಲ ''.

ತನ್ನ ತನ್ನಿಂದ ಮುಟ್ಟದವನು ಗುರು ಲಿಂಗ ಜಂಗಮ ಮುಟ್ಟಿದರೇನು ? ತನ್ನ ಅರಿಯದವ ಏನ ನರಿದಡೇನು ? ಏನ ಭಾವಿಕ ನಾದರೇನು ? ಗುರು, ಗುರು ಎಂಬ ಭಾವಿಕ ನಾದರೇನು ? ಭಕ್ತ ನಾದರೇನು ? ಲಿಂಗ ಲಿಂಗ ಎಂಬ ಭಾವಿಕರಾದರೇನು ? ಲಿಂಗ ನಿಷ್ಠೆಯುಳ್ಳವರಾದರೇನು , ಜಂಗಮ ಜಂಗಮ ವೆಂಬ ಭಾವಿಕರಾದರೇನು , ನಿಷ್ಠೆಯವರಾದ ರೇನು ; ಈ ಭಾವ , ಭಕ್ತಿ , ನಿಷ್ಠೆ ತನ್ನ ಮರವು ಮಾಯೆ , ಪ್ರಪಂಚ ತ್ರಿವಿಧ ಕರ್ಮ ಪಾಶ ಕೆಡಿಸವು . ಗುರು ಭಾವಿಕರು, ಲಿಂಗ ಭಾವಿಕರು, ಜಂಗಮ ಭಾವಿಕರು ಸಿಕ್ಕುತ್ತಾರೆ . ಗುರು ಘನವ ಶಿಷ್ಯ ನರಿಯ , ಲಿಂಗ ಘನವ ಭಕ್ತ ನರಿಯ , ಜಂಗಮ ಘನವ ಶರಣ ನರಿಯ .

ಗುರು ಘನವ ನರಿತಲ್ಲಿ ಶಿಷ್ಯತ್ವವಿಲ್ಲ. ಗುರು ಘನವದು ಭೋಧ , ಬೋಧಕತ್ವ ವ್ಯವಹಾರಕ್ಕೆಲ್ಲ ಬೆಳಗುವ ಸ್ವಯಂಜ್ಯೋತಿ. ಜ್ಞಾನ ಸ್ವರೂಪ ಗುರುವಾದದು. ಈ ಜ್ಞಾನ ಸ್ವರೂಪ ಚಿದ್ಘನವೆ ಗುರುಸ್ವರೂಪವೆಂದು ತಿಳಿವದು ವಿರಳ . ಹೀಗೆ ತಿಳಿದ ಶಿಷ್ಯರು ವಿರಳ. ಇದು ಸೀಮಾತೀತ ನಿಲವು . ಇವರಿಗೆ ಬೋಧ ಬೋಧಕತ್ವ ವ್ಯವಹಾರವುಳ್ಳ ಗುರುವು ನಾಸ್ತಿಯಾದ್ದರಿಂದ ಗುರುಸ್ಥಲ ನಾಸ್ತಿಯಾದಲ್ಲದೆ ಶಿಷ್ಯನಲ್ಲವೆಂದು ಹೇಳಿಹರು .

ಮರವಿಂಗೆ ಗುರು ಉಂಟು ಲಿಂಗ? ಉಂಟು ಜಂಗಮಉಂಟು : ಕತ್ತಲೆಗೆ ಬೆಳಕಿನ ಅವಶ್ಯಕತೆ

ಇದೆ . ಬೆಳಕಿಂಗೆ ಬೆಳಕಾದುದಕ್ಕೆ ಅದಕ್ಕಾವ ಬೆಳಕು ! ಅರುವಿಂಗರುವಾದುದಕ್ಕೆ ಅದಕ್ಕಾವ ಅರುವು ಎಲ್ಲಿಯವರೆಗೆ ತಾನು ಮರವುಳ್ಳವನೆಂದು ನಂಬಿಹನು, ಅಲ್ಲಿಯವರೆಗೆ ಕಲ್ಪಿತ ಪುರುಷನಾಗಿಹನು. ಆವಾಗ ತನ್ನಿಂದ ತನ್ನ ಕಂಡು ತಾನೆ ಅಕಲ್ಪಿತ ಘನನೆಂಬ ಅರಿವು ಪ್ರಜ್ವಲಿಸುವುದು , ಆಗ ಲಿಂಗಸ್ಥಲ ನಾಸಿಯಾಯಿತ್ತು. ಲಿಂಗಸ್ಥಲ ನಾಸ್ತಿಯಾದವನೆ ನಿಜವಾದ ಭಕ್ತ . ಇದು ಕಾರಣ ಲಿಂಗ ಸ್ಥಲ ನಾಸ್ತಿಯಾದಲ್ಲದೆ ಭಕ್ತನಲ್ಲವೆಂದು ಹೇಳಿಹರು. ಶಿಷ್ಯ ಸ್ಥಲ ನಾಸ್ತಿಯಾದುದು ಗುರುಘನವನರಿತ ಸಂಕೇತ. ಲಿಂಗ ಸ್ಥಲ ನಾಸ್ತಿಯಾದಲ್ಲದೆ ಭಕ್ತನಲ್ಲ, ಲಿಂಗಸ್ಥಲ ನಾಸ್ತಿಯಾಗಬೇಕಾದರೆ ಲಿಂಗವರಿಯಬೇಕು . ಲಿಂಗವರಿಯಬೇಕಾದಲ್ಲಿ ಲಿಂಗಪೂಜಿಸ ಹೋಗುವ ಅವಸರವಿಲ್ಲ . ಆಚಾರವನೆ ಕಂಡು ವಿಚಾರವನೆ ಕಾಣರು. ಲಿಂಗಪೂಜಿಸುವ ಆಚಾರವುಳ್ಳವರು ಶಿಕ್ಕುತ್ತಾರೆ . ಲಿಂಗವೆಂದರೇನು ? ಎಂಬ ವಿಚಾರ ಮಾಡುವವರು ಶಿಗುವುದು ವಿರಳ.

" ಲಿಂಗ ಒಳಗೊ ಹೊರಗೊ ಬಲ್ಲಡೆ ನೀವು ಹೇಳಿರೆ ಲಿಂಗ ಎಡನೊ ಬಲನೊ ಬಲ್ಲಡೆ ನೀವು ಹೇಳಿರೊ! ಲಿಂಗ ಮುಂದೊ ಹಿಂದೊ ಬಲ್ಲಡೆ ನೀವು ಹೇಳಿರೊ! ಲಿಂಗ ಸ್ಥೂಲವೊ ಸೂಕ್ಷ್ಮವೊ ಬಲ್ಲಡೆ ನೀವು ಹೇಳಿರೆ? ಲಿಂಗ ಪ್ರಾಣವೊ ? ಪ್ರಾಣ ಲಿಂಗವೊ ? ಬಲ್ಲಡೆ ನೀವು ಹೇಳಿರೆ ಗುಹೇಶ್ವರ ಲಿಂಗವನು ಹೀಗೆ ವಿಚಾರಮಾಡ ಹೋದಾಗ ಅರುವ ಅರಿಯ ಹೋದಾಗ " ತನುವಿಂಗೆ ತನುವಾಗಿ ಮನಕ್ಕೆ ಮನವಾಗಿ ಜೀವಕ್ಕೆ ಜೀವವಾಗಿ ಇದ್ದುದನಾರು ಬಲ್ಲರೊ ? ಅದು ದೂರವೆಂದು ಸಮೀಪವೆಂದು ಮಹಾಂತ ಗುಹೇಶ್ವರನು ಒಳಗೆಂದು ಹೊರಗೆಂದು ಬರು ಸೂರೆ ಹೋದರು . "ಲಿಂಗವರಿಯಲು ಸದ್ಗುರುವಿನ ಕಾರುಣ್ಯದಿಂದ ಲಿಂಗ ಸಕೀಲ ಸಂಯೋಗದ ವರ್ಮ ಸ್ಥಲವರಿವದು . ಈ ವರ್ಮಸ್ಥಲವರಿತವರಾದಲ್ಲಿ ಲಿಂಗ ತನ್ನ ತನುವಿನ ತನು, ಮನದ ಮನವಾಗಿ, ಜೀವಕ್ಕೆ ಜೀವವಾಗಿ ಇದ್ದವ ತಾನೆಂಬುದು ತನ್ನಿಂದ ತನಗದು ವಿದಿತವಾದಲ್ಲಿ ಲಿಂಗವದು ತನಗಿಂತ ಅನ್ಯವಾಗಿ ಕಾಣದ್ದರಿಂದ ಲಿಂಗಸ್ಥಲ ನಾಸ್ತಿಯಾದುದು, ಭಕ್ತಂಗೆ ಎಂದು ಹೇಳಿದ್ದಾರೆ". ಭಕ್ತಂಗೆ ಉತ್ಪತ್ತಿ ಸ್ಥಿತಿ ಇಲ್ಲಾಗಿ ಲಯವಿಲ್ಲ ಮುನ್ನೆಲ್ಲಿಂದ ಬಂದನಲ್ಲಿಗೆ ಹೋಗಿ ನಿತ್ಯನಾಗಿರ್ಪನಯ್ಯ ಗುಹೇಶ್ವರಾ ನಿಮ್ಮ ಶರಣ".

ಮರವಿಂಗೆ ಗುರುವುಂಟು ಲಿಂಗ ಉಂಟು ಜಂಗಮ ಉಂಟು, ಕತ್ತಲೆಗೆ ಬೆಳಕುಂಟು ಬೆಳಗುಳ್ಳ ಘನಕ್ಕೆ ಬೆಳಕು ಏತರದು? ಅರುವಿಂಗರುವಾಗಿಹ ಘನಕ್ಕೆ ಅದಾವ ಲಿಂಗಸ್ಥಲ ? ಎಲ್ಲಿಯವರೆಗೆ ಮರವುಳ್ಳವನಾಗಿಹನು, ಅಲ್ಲಿಯ ವರೆಗೆ ಕಲ್ಪಿತ ಪುರುಷ ನಾಗಿಹನು . ಆವಲ್ಲಿ ಅಕಲ್ಪಿತ ಘನನೆಂಬ ತನ್ನಿರುವಿನ ಅರುವು ಪ್ರಜ್ವಲಿಸುವದು . ಆಗ ಲಿಂಗಸ್ಥಲ ನಾಸ್ತಿಯಾದುದರಿಂದ ನಿಜಭಕ್ತನೆಂದು ಹೇಳಿಹರು.

ಜಂಗಮ ಸ್ಥಲ ನಾಸ್ತಿಯಾದಲ್ಲದೆ ಶರಣನಲ್ಲ : ಜಂಗಮಸ್ಥಲ ನಾಸ್ತಿಯಾದವರು ಇವರು ಅರುವ ಅರಿಯ ಹೇಳಿ ಕುರುಹ ಕೊಟ್ಟ ಗುರು ಕಾರುಣ್ಯರೂಪಿ ಅನುಪಮ ಲಿಂಗವರಿತು ಲಿಂಗ ಜಂಗಮನಾಗಿಹ ಘನವಂತ. ಈ ಮಹಾಂತ ಲಿಂಗ ಜಂಗಮ ತನಗಿಂತ ಅನ್ಯವಾಗಿ ಕಾಣದ ಶರಣ ನಡೆಗೆಡೆಗೊಡದ ಘನ ಜಂಗಮ ತಾನಾಗಿರುವದರಿಂದ ಜಂಗಮಸ್ಥಲ ನಾಸ್ತಿಯಾಗಿದೆ. ಶರಣ ತನ್ನೊಳಗೆ ಗುರುಘನವ ಕಂಡವನು, ಲಿಂಗಘನ ಜಂಗಮಘನವ ಕಂಡು ತನಗಿಂತನ್ಯವ ಕಾಣದ್ದರಿಂದ ಭೋಧ ಭೋಧಕತ್ವ ವ್ಯವಹಾರ ರೂಪಿ ಗುರುಸ್ಥಲ ನಾಸ್ತಿಯಾಯಿತ್ತು , ಪೂಜ್ಯ ಪೂಜಕ ಭಾವರೂಪಿ ಲಿಂಗಾರ್ಚಕರ ಲಿಂಗಸ್ಥಲ ನಾಸ್ತಿಯಾದುದು. ಅರ್ಪಿತ ಅನರ್ಪಿತವೆಂಬ ಭಕ್ತ ಜಂಗಮಸ್ಥಲ ನಾಸ್ತಿಯಾಯಿತ್ತು ಗುರುಸ್ಥಲ ನಾಸ್ತಿಯಾದ ಶಿಷ್ಯನೆ ಪೂರ್ವನಾಮವಿಲ್ಲದ ಶಿಷ್ಯ ಲಿಂಗಸ್ಥಲ ನಾಸ್ತಿಯಾದ ಭಕ್ತಂಗೆ ಹೆಸರಿಲ್ಲದ ಲಿಂಗ , ಜಂಗಮಸ್ಥಲ ನಾಸ್ತಿಯಾದ ಶರಣ , ನಿಜೈಕ್ಯ ಶರಣ. ಈ ಮಹಾಂತ ಗಮನವುಳ್ಳ ಜಂಗಮವ

ಕಾಣಲಿಲ್ಲ . ಈ ತ್ರಿವಿಧ ನಾಸ್ತಿಯಾಗಿ ಭಕ್ತಕೆಟ್ಟು ಭವಿಯಾದನಲ್ಲದೆ ಲಿಂಗೈಕ್ಯನಲ್ಲ , ಸೀಮಿತ ದೃಷ್ಠಿ ಸೀಮಿತ ಭಾವ ಸೀಮಿತ ಜ್ಞಾನಿಯಾದವಂಗೆ ಅಸಾಧ್ಯವು ನಿಸ್ಸೀಮಂಗೆ ತ್ರಿವಿಧವು ನಾಸ್ತಿಯಾದುದು ಸಹಜವು, ಗುರುತ್ವವು ಕೆಡುವುದು ಸಹಜ, ಪೂಜಾಲಿಂಗ ಕೆಡುವುದು ಸಹಜ, ಗಮನವುಳ್ಳ ಜಂಗಮವು ಕೆಡುವುದು ಸಹಜ , ಸಹಜ , ಅಜ , ಅಚಿಂತ್ಯವು ತನ್ನಿರುವಾಗಿಹ ಅರುಸ್ವರೂಪ , ಏನೆಂದೆನಲಿಲ್ಲದ ಅರುಸ್ವರೂಪ ನಾದುದರಿಂದ ತ್ರಿವಿಧ ನಾಸ್ತಿಯಾಗಿ ಭಕ್ತ ಕೆಟ್ಟು ಭವಿಯಾದುದರಿಂದ ಲಿಂಗೈಕ್ಯನೆಂದು ಹೇಳಿಹರು .

14

ಎಮ್ಮವರಿಗೆ ಸಾವು ಇಲ್ಲ, ಎಮ್ಮವರು ಸಾವನರಿಯರು,
ಸಾವೆಂಬುದು ಸ್ವಯವಲ್ಲ, ಲಿಂಗದಲ್ಲಿ ಉದಯವಾದ
ಲಿಂಗೈಕ್ಯಂಗೆ ಆ ಲಿಂಗದಲ್ಲಿಯಲ್ಲದೆ ಬೇರೆ ಮತ್ತೊಂದೆಡೆ
ಉಂಟೆ ಕೂಡಲಸಂಗಮದೇವಾ.

ತಾತ್ಪರ್ಯ : ಎಮ್ಮವರಿಗೆ ಸಾವು ಇಲ್ಲ , ಎಮ್ಮವರು ಸಾವನರಿಯರು ಸಾವು ಸ್ವಯವಲ್ಲ : ಎಮ್ಮವರು ನಿಭ್ರಾಂತರು ಲಿಂಗವರಿತ ಲಿಂಗೈಕ್ಯರು , ಇಲ್ಲದ್ದು ಉಂಟು ಮಾಡಿಕೊಳ್ಳುವವರೆಲ್ಲ ಸಾವುಳ್ಳವರು, ಇಲ್ಲದ್ದು ಇಲ್ಲ ಮಾಡಿ ಇದ್ದ ನಿಜಪದವರಿತು ನಿಜವೆನ್ನದವರು, ಎಮ್ಮವರು ಅಳಿದವರಲ್ಲ ಉಳಿದವರಲ್ಲ ಘನಕ್ಕೆ ಗಮನನಲ್ಲ, ಮನಕ್ಕೆ ಸಾಧ್ಯನಲ್ಲ , ತನ್ನ ತಪ್ಪಿಸಿ ಇದಿರ ನೊಪ್ಪಿಸಿದೆನೆಂಬ ಭಿನ್ನಭಾವಿಯಲ್ಲ. ಗುಹೇಶ್ವರನ ಶರಣ ಅಜಗಣ್ಣನ ಅಂತಿಂತೆನಬಾರದು .

ಎಮ್ಮವರೆಂದಲ್ಲಿ ಅಳಿದವರು ಅಲ್ಲ, ಉಳಿದವರು ಅಲ್ಲ, ಆರು ದೇಹವಾಗಿಹರು ಅವರು ಅಳಿಯುವುದುಂಟು , ಉಳಿದವರಾಗಿ ತೋರಿದುದು ಉಂಟು. ತೋರದಿದ್ದುದು ಉಂಟು. ಬುದ್ದಿಗೆ ಗೋಚರನಲ್ಲ, ಆವುದು ಮರವರುವಿನಿಂದುಕ್ತವಾಗಿಹುದು , ಅದನ್ನು ಬುದ್ದಿಯು ತಿಳಿಯಬಲ್ಲದು,. ಮರವರುವಿಂಗೆ ಮೀರಿದ ಘನಕ್ಕೆ ಘನವಾದುದನ್ನು, ಬುದ್ದಿ ನಿರ್ಣಯ ಮಾಡಲು ಅದೆಂತು ಸಾಧ್ಯ? ಮನಸ್ಸಿಗೆ ಸಾಧ್ಯವಲ್ಲ , ಸಂಕಲ್ಪ ವಿಕಲ್ಪಕೊಟ್ಟದನ್ನು ಮನವು ತನ್ನ ಕಲ್ಪನೆಯ ಮಾತಿನಿಂದ ಕಲ್ಪಿಸಬಹುದು, ಕಲ್ಪಿತವಲ್ಲದ ಅಕಲ್ಪಿತವಲ್ಲದ, ಅಕಲ್ಪಿತ ಘನವು ಮನಕ್ಕದೆಂತು ಸಾಧ್ಯ . ನಾನೆನ್ನುವವನಲ್ಲ ನೀನೆನ್ನುವವನಲ್ಲ ಅಜ್ಞಾನಿಯಲ್ಲ ತಾನಾಗದ್ದು ತಾನೆನ್ನುವವನಲ್ಲ ಮಾಯಾಧೀನ ಮುನ್ನವನಲ್ಲ . ನಾನೀನೆನ್ನದ ಅಪ್ರಮಾಣಅಗಮ್ಯ ಶರಣ ವಾಙ್ಮನೋತೀತ ಶರಣ,ಸ್ವಯಂಜ್ಯೋತಿ ಶರಣ ವರ್ಣಾತೀತನಾದುದರಿಂದ ಸಾವನರಿಯ .

ಸಾವೆಂಬುದು ಸ್ವಯವಲ್ಲ , ಸಾವೆಂಬುದು ತಾನಲ್ಲ ತಾನೆಂಬುದು ನಿರಂತರವಾಗಿರುವ ಮಂಗಳಮಯ ಪರತತ್ವ . ಇದು ಕಾರಣ ಸಾವೆಂಬುದು ವಿಪರೀತ ಕಲ್ಪನೆ. ಭ್ರಮುಗತ ದೃಷ್ಠಿ ಭ್ರಮಗತ ಭಾವ , ಭಾವಕ್ಕಗಮ್ಯನಾದವಂಗೆ ಭಾವವುಂಟೆ ? ಭಾವವೆ ಪುಶಿಯಾದಲ್ಲಿ, ಪುಶಿಭಾವ, ಪುಶಿರೂಪ ಪುಸಿ ದೃಷ್ಠಿ, ಪುಸಿ ಜ್ಞಾನ , ಪುಸಿ ನಾಮ ಇಲ್ಲದುದು, ಭ್ರಾಂತಿ ಇಲ್ಲದುದು ಇದ್ದುದು ಹೇಗೆ ? ಇದ್ದುದು ಅಂದು , ಇಂದು , ಎಂದೆಂದೂ ಇದ್ದುದು . ಇದ್ದ ತತ್ವಕ್ಕೂ ಉತ್ಪತ್ತಿ ನಾಶವಿಲ್ಲ, ಇಲ್ಲದ ಅತತ್ವ ಇಲ್ಲವೆ ಇಲ್ಲ ,ಇಲ್ಲದುದಕ್ಕೂ ಉತ್ಪತ್ತಿ ನಾಶವಿಲ್ಲ ಶರಣ ನಿಶಬ್ದವೇದಿ ಅರುವಿಂಗರುವಾಗಿಹ ಏನೆಂದನಲಿಲ್ಲದರುವು. ಪರತತ್ವ ನಿಜಸಂಯುಕ್ತನಾಗಿಹ ಅನುಪಮ ಉಪಮಾತೀತಂಗೆ ಇದ್ದವನೆನ್ನುವದಕ್ಕು ಮೀರಿದ ಘನ ಇಲ್ಲದವನೆನ್ನುವುದಕ್ಕೂ ಮೀರಿದ ಘನ. ಅಲ್ಲಿ ನಾಶ ಅವಿನಾಶ

ಎನಲುಂಟೆ ? ಕ್ಷರಾ ಕ್ಷರ ಮೀರಿದ ಘನ.

ಕ್ಷರವೆನಲು ಸಂದಿಲ, ಅಕ್ಷರವೆನ್ನಲು ಸಂದಿಲ್ಲದ ಘನಕ್ಕೆ ಏನನ್ನಬೇಕು?ಇದು ಕಾರಣ ಸಾವೆಂಬುದು ತಾನಲ್ಲ ತನ್ನದಲ್ಲವೆಂದು ಹೇಳಿಹರು. ನಿರಂತರ ಮಂಗಳಮಯ ತಾನಿರುವಲ್ಲಿ ತನ್ನ ಹೊರತು ಅನ್ಯ ಆವಾವುದು ಇಲ್ಲದಿರುವಾಗ ಸಾವು ಆರಿಗೆ ಹೇಳುವುದು. ಸಾವು ಎನ್ನುವುದು ಕಲ್ಪನೆ .ಇದು ಅಕಲ್ಪಿತ ಘನದಲ್ಲಿ ಕಂಡುದು ಆಶ್ಚರ್ಯ, ನಿರಂತರವಾಗಿರುವ ಮಂಗಳಮಯವಾಗಿಹ ಪರತತ್ವದಲ್ಲಿ ಸಾವು ಎಂಬ ಕಲ್ಪನೆಗಾದರೂ ಸಂದುಂಟೆ ? ತಾನು ಆವಾವುದಕ್ಕೂ ಸಂದು ಕೊಡದ ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ ಘನ ಪರಿಪೂರ್ಣ ಪರಮಾನಂದ ಪರಂಜ್ಯೋತಿಯಾಗಿಹ ಪರತತ್ವ . ಅಲ್ಲಿ ಸಾವು ಎಂಬ ನುಡಿ ಹುಟ್ಟಿದುದು ಆಶ್ಚರ್ಯ. ಶರಣನೆಂದರೆ ಪರತತ್ವ ನಿಜಸಂಯುಕ್ತನಾಗಿಹ ಅನುಪಮ, ಸಾವನರಿಯ ಸಾವು ಎಂಬುದು ತನ್ನದಲ್ಲ ತಾನಲ್ಲ ಎಂದು ಹೇಳಿಹರು.

ಲಿಂಗದಲ್ಲಿ ಉದಯವಾದ ಲಿಂಗೈಕ್ಯಂಗೆ ಆ ಲಿಂಗದಲ್ಲಿಯಲ್ಲದೆ ಬೇರೆ ಮತ್ತೊಂದೆಡೆಯುಂಟೆ ಕೂಡಲಸಂಗಮದೇವಾ.

ಶರಣ ಲಿಂಗದಲ್ಲಿ ಉದಯವಾದ ಲಿಂಗೈಕ್ಯ ,ಅರುವಿನಲ್ಲಿ ಉದಯವಾದ ಅರುವು, ಅರು ಹೃದಯ. ಶರಣ ಅರುವಿಂಗರುವಾಗಿಹ ಶರಣ ಅರುವರಿತ ಘನಕ್ಕೆ ಘನ ಈ ಮಹಾಂತ ಲಿಂಗದಲ್ಲಿ ಉದಯಿಸಿದ ನಿಶ್ಚಿಂತ ಲಿಂಗೈಕ್ಯನ ಉಪಮಿಸುವುದೆಂತು? ಅಚಿಂತ್ಯವೆ ತಾನಾಗಿಹ ಸ್ವಮಹಿಮ ಚಿಂತೆ ಕೆಟ್ಟು ಸ್ಥಿರವಾಗಿ ನಿಂತ ನಿರ್ವಾಣ, ನಾಮ ನಿರ್ನಾಮ ಮಾಡಿದ ನಿರುಪಮ. ಮುನ್ನವು ಅಚಿಂತ್ಯನು ಶರಣನಾಗಿ ಉದಯಸಿದರೂ ಅಚಿಂತ್ಯ ಘನನು. ತನ್ನಿಂದ ತನ್ನ ಕಂಡು ನಿಶಬ್ದವೇದಿಯಾಗಿಹ ಶಬ್ದಮುಗ್ಧ. ಒಡಲುಗೊಂಡವನಾಗಿ ಕಂಡರೂ ಒಡಲಿಡಿಯದೆ ಒಡಲಿಲ್ಲದ ನಿಜ ಪದದಲ್ಲಿ ತನ್ಮಯನಾದ ಮಹಾಂತನ ಉಪಮಿಸುವದದೆಂತು? ಏನೆಂದೆನಲಿಲ್ಲದ ಅಖಂಡ ಪರಿಪೂರ್ಣ ಪರಮಾನಂದ ಪರಬ್ರಹ್ಮ ತಾನೆಂಬುದು ನಿಷ್ಪತ್ತಿಯಾದ ನಿರಾಳಂಗೆ ಏನನ್ನಬೇಕು ? ಲಿಂಗವು ಅಕಲ್ಪಿತ ಘನವು ಲಿಂಗದಲ್ಲಿ ಉದಯವಾದ ಲಿಂಗೈಕ್ಯನು ಕಲ್ಪಿತವಲ್ಲದ ಅಕಲ್ಪಿತನಾಗಿರುವಲ್ಲಿ ಕಲ್ಪನೆಗೆ ಇಂಬುಂಟೆ? ಅಲ್ಲಿ ಕಲ್ಪಿತಪುರುಷನ ಕಲ್ಪಿಸಲುಂಟೆ ? ಕಲ್ಪಿಸಲು ಸಂದಿಲ್ಲದಿರುವಾಗ ಆ ಲಿಂಗದಲ್ಲಿಯಲ್ಲದೆ ಬೇರೆ ಮತ್ತೊಂದೆಡೆಯುಂಟೆ ? ಮಹಾಕಾಶದಲ್ಲಿ ಉದಯವಾದ ಘಟಾಕಾಶ ಮಠಾಕಾಶಂಗಳ ನಿವಾಸ ಮಹಾಕಾಶದಲ್ಲಿದ್ದಂತೆ ವಿಚಾರಿಸಲು ಮಹಾಕಾಶವು ಲಿಂಗದಲ್ಲಿ ಉದಯವಾದ ಲಿಂಗೈಕ್ಯನು . ಆ ಲಿಂಗದಲ್ಲಿಯಲ್ಲದೆ ಬೇರೆ ಮತ್ತೊಂಡೆಯುಂಟೆ ಕೂಡಲಸಂಗಮದೇವಾ , ನಿರಂತರವಾಗಿರುವ ಮಂಗಳಮಯ ತತ್ವದಲ್ಲಿ ಉದಯವಾದ ಲಿಂಗೈಕ್ಯ ಮಂಗಳಮಯನಲ್ಲದೆ ಅನ್ಯನಲ್ಲ ರೂಪನಾಗಿ ಕಂಡರೂ ಮಂಗಳಮಯನು, ನಿರೂಪನಾಗಿಯೂ ಮಂಗಳಮಯನು ಮುನ್ನ ಮುನ್ನಲಾದವನು ತನ್ನಿಂದ ತಾನಾದವನು , ನಿಶಬ್ದವೇದಿಯು ಶಬ್ದಮುಗ್ಧವಾಗಿಹ ಅಚ್ಯುತ ನಿಲಯವುಳ್ಳ ಲಿಂಗೈಕ್ಯನು ಎಂದು ಬಸವರಸರು ಬಿತ್ತರಿಸಿಹರು.

15

ಬೆಳಗು ಕತ್ತಲೆಯ ನುಂಗಿ ,
ಒಳಗೆ ನಾನೊಬ್ಬನೆಯಾದ
ಕಾಂಬ ಕತ್ತಲೆಯ ಕಳೆದುಳಿದು
ನಿಮಗಾನು ಗುರಿಯಾದೆ ಗುಹೇಶ್ವರಾ . ॥ 675 ॥

ತಾತ್ಪರ್ಯ : ಬೆಳಕು ಕತ್ತಲೆಯ ನುಂಗಿ: ಕತ್ತಲೆಯ ನುಂಗಿದ ಬೆಳಕಾವುದು ? ಕತ್ತಲೆ ಆವುದು? ಕಾಂಬ ಕತ್ತಲೆಯ ನುಂಗಿದ ಬೆಳಕಿಗೆ ಬೆಳಕೆನ ಬೇಕೆ ? ಎನಲಾಗದು ಬೆಳಕು ತೋರಿ ಇಲ್ಲವಾಗುವ ಬೆಳಕು ಇದು ಪರ ಪ್ರಕಾಶವಾದ್ದರಿಂದ , ಇದಕ್ಕೆ ಬೆಳಕೆನ್ನಬೇಕೊ ? ಕತ್ತಲೆಯ ನುಂಗಿದ ಬೆಳಕಿಗೆ ಏನನ್ನಬೇಕು ? ಹಾಗಾದರೆ ಇದಾವ ಬೆಳಕು ? ತಾನಾರೆಂದರಿತ ತನ್ನಯ ಬೆಳಕು ತಾನೆ ಬೆಳಕು . ಬೆಳಕು ಬೇರೆ , ತಾನು ಬೇರೆನ್ನಲು ನುಡಿಗಿಂಬುಗೊಡದ ಬೆಳಕು . ಬೆಳಕು ತಾನು ಒಂದೆನ್ನಲು ಇಂಬುಗೊಡದ ಬೆಳಕು, ನುಡಿಗಳಿಗಿಂಬುಗೊಡದ ಬೆಳಕು . ಬೆಳಕೆಂಬುವದಕ್ಕೂ ಸಂದುಕೊಡದ ಬೆಳಕು ಶಬ್ದ ಸಂಭ್ರಮಕ್ಕೆ ಸಿಲುಕದ ಬೆಳಕು ಶೃತಿವಂತರಿಗೂ ಸಿಲುಕದ ಘನವು ಎಂಜಲಮಾತು ನುಡಿದವವರಿಗೆ ಲಭ್ಯವಾಗದ ಬೆಳಕು , ಮಿಗೆಮಿಗೆ ಮೀಸಲವಾಗಿದ್ದವರಿಗೆ ವಿದಿತವಾದುದು .ಹೋ ! ಬೆಳಕು ! ಇದು ಬೆಳಕನ್ನದ ಘನವು , ನಿಶಬ್ದ ಘನವು ತಾನೆ ತಾನಾಗಿ ಪ್ರಜ್ವಲಿಸಿಹ ಘನಕ್ಕೆ ಘನವಾದುದ ನೇನೆಂಬೆ! ಕತ್ತಲೆಂದರೆ ಮರವು ಭ್ರಾಂತಿ ತಾನಾಗದುದನ್ನು ತಾನೆನ್ನುವುದು ಇದು ಕತ್ತಲೆ ಶಬ್ದಸಂಭ್ರಮದವರು ಭ್ರಾಂತರು ಗುರು ಗುರು ಲಿಂಗ ಲಿಂಗ, ಜಂಗಮ ಜಂಗಮ , ಪ್ರಸಾದ ಪ್ರಸಾದ , ಎಂದೆನ್ನುವವರು ಇವರದು ಕತ್ತಲೆಯಲ್ಲಿಯೇ ವಾಸ, ನುಡಿ ನುಡಿದು ನಡೆ ನಡೆದವರೆಲ್ಲರದು ಕತ್ತಲೆಯಲ್ಲಿ ವಾಸ ,ತನಗಿಂತ ಭಿನ್ನವಾಗಿ ತೋರುವ ಮರವೆಂಬುದಾಗಲಿ ಅರುವೆಂಬುದಾಗಲಿ ಅಂಬುದೆಲ್ಲವು ಕತ್ತಲೆಯಲ್ಲಿ, ಈ ಕತ್ತಲೆಯ ನುಂಗಿ ಒಳಗೆ ನಾನೊಬ್ಬನೆ ಆದೆ . ಉಪಾಧಿಕ ಮನ ಉಪಾದಿ ರಹಿತ ಮನ ನಿಂದಲ್ಲಿ ನಿವಾತವಾಯಿತ್ತು . ಲಿಂಗೋದ್ಭವವು ಪ್ರಜ್ವಲಿಸುತ್ತಿತ್ತು ಗುಹೇಶ್ವರ ಲಿಂಗ ತಾನಾಗಿ ಎಂದು ಪ್ರಭು ತಾನೆ ಬೆಳಕಾಗಿ ಕತ್ತಲೆಯ ನುಂಗಿದ ಅಪ್ರತಿಮ ಬೆಳಕು ಮಹಾಂತರ ದೃಷ್ಠಿಯಲ್ಲಿ ಪ್ರವೃತ್ತಿಯುಳ್ಳ ಮನ ನಿವೃತ್ತಿ ಮನ ಅನಾತ್ಮಾಕಾರ ಮನ ಮರವುಳ್ಳ ಮನ ಆತ್ಮಕಾರ ಮನ , ಅರುವುಳ್ಳ ಮನ ಇವುಗಳು ಕತ್ತಲೆಯು, ಶಬ್ದ ಸಂಭ್ರಮಕ್ಕೆ ಮೀರಿ ನಿಂತುದೇ ಬೆಳಕು . ಕತ್ತಲೆಯ ನುಂಗಿದುದು ಏಕೆಂದರೆ , ಗುರು ವೆಂದರಿದವನು ತಾನೆ ಲಿಂಗ ವೆಂದರಿದವನು ತಾನೆ ಜಂಗಮವೆಂದರಿದವನು ತಾನೆ ಪ್ರಸಾದವೆಂದರಿದವನು ತಾನೆ ಸ್ವಯ ಪರವೆಂದರಿದವನು ತಾನೆ ಇವೆಲ್ಲ ತಾನೆ ಅರಿದನಲ್ಲದೆ ತನ್ನನ್ನು ಇವುಗಳಾವು ಅರಿಯಲಿಲ್ಲ. ಇವುಗಳ ಹೆತ್ತರಿವು ತಾನೆ ಸ್ವಯಂಜ್ಯೋತಿಯಾದುದರಿಂದ ಬೆಳಕು ಕತ್ತಲೆಯ ನುಂಗಿ ಒಳಗೆ ನಾನೊಬ್ಬನೆಯಾದೆ ಎಂದು ಹೇಳಿಹರು .

ನಾನೊಬ್ಬನೇ ಆದುದು ಉಪಮಾತೀತ ನಿಲುವು , ತಾನೊಬ್ಬನೆ ಆದುದು ಅದನಾರು ವರ್ಣಿಸುವುದು? ಅವರ್ಣೀಯ ಘನವ ವರ್ಣಿಸುವದದೆಂತು. ತಾನೊಬ್ಬನೆ ಆದ ನಿಲುವಿಂಗೆ ಅಂಗನೆನಬೇಕೆ ಲಿಂಗನೆನಬೇಕೆ ಲಿಂಗಾಂಗ ವೆನಬೇಕೆ ? ಲಿಂಗಾಂಗ ಸಮರಸ ವೆನಬೇಕೆ ? ಆಯಿತೆನ ಬೇಕೆ ಆಗದ್ದೆನ ಬೇಕೆ ? ಏನೂ ಅನ್ನಲು ಬಾರದ ಅಕಥನೀಯ ನಿಲುವಿನಲ್ಲಿ ನಿಂತ ತಾನೊಬ್ಬನೆ ಅಲ್ಲಿ ಉಸುರಿದರದಕ್ಕದೆ ಕೊರತೆ.

ಕಾಂಬ ಕತ್ತಲೆಯ ಕಳೆದುಳಿದು ನಿಮಗಾನು ಗುರಿಯಾದೆ ಗುಹೇಶ್ವರಾ : ಕಾಂಬ ಕತ್ತಲೆಯು ಆವುದು ? ತನಗಿಂತ ಭಿನ್ನವಾದುದೆಲ್ಲವೂ ಕಾಂಬ ಕತ್ತಲೆಯು. ತನಗಿಂತ ಭಿನ್ನವಾದುದು ಆವುದು ? ಮರವು ಮರವಿನ ಕಾರ್ಯ, ತತ್ವಾನು ಸಂಧಾನ, ಶ್ರವಣ ಮನನ ನಿದಿಧ್ಯಾಸ ಇವೆಲ್ಲವು ತನಗಿಂತ ಭಿನ್ನವಾದುದು. ಇವುಗಳು ತನ್ನನ್ನು ಬೆಳಗುವ ಬೆಳಗು ಅಲ್ಲ. ಇವುಗಳ ನಂಬುವವರೆಲ್ಲ ತಮ್ಮ ಘನವನ್ನು ಕಾಣದಂತೆ ಮಾಡಿದ್ದರಿಂದ ಇವುಗಳು ಕಾಂಬ ಕತ್ತಲೆ ಎಂದು ಹೇಳಿಹರು . ಕಳೆದುಳಿದು ನಿಮಗಾನು ಗುರಿಯಾದೆ ಗುಹೇಶ್ವರಾ , ಕಳೆದುದು ಆವುದು, ಉಳಿದುದು ಆವುದು? ಮರೆವು ಅರಿವೆಂಬೆರಡು ಕಳೆದುದು ಇವೆರಡಕ್ಕೂ ಮಿಕ್ಕಿ ಮೀರಿ ನಿಂತುದೇ ಉಳಿದುದು ಇವುಗಳನ್ನು ಕಳೆದುದು ಹೇಗೆ ಉಳಿದುದು ಹೇಗೆ ತಾನು ಅರುವಿಂಗರುವಾಗಿ ನಿಂತು ನೋಡಿದವಂಗೆ ಮರವರವು ಕಳೆಯುವುದು ಹಗುರ ,

ಉಳಿಯುವದು ಹಗುರ , ಆರು ಅರಿಯದರುವು ಆಗಿಹರು ಅವರಿಗೆ ಸಹಜ , ಏಕೆಂದರೆ ತಾನು ಅರಿಸಿಕೊಳ್ಳುವವನು ಆಗಿಲ್ಲ, ಅರಿಯುವವನು ಆಗಿಲ್ಲ. ಏನೊಂದಾಗದ ಅನುಪಮ ನಾಗಿರುವುದರಿಂದ ಕಾಂಬ ಕತ್ತಲೆ ಕಳೆದುಳಿಯಲು ಸಹಜವಾಗಿದೆ.

ಆರು ತನ್ನಿಂದ ತಿಳಿಸಿಕೊಳ್ಳುವ ತನು ಭಾವ, ಮನ ಭಾವ, ಅಹಂ ಭಾವ, ಜೀವ ಭಾವ, ಅಂತರಾತ್ಮ ಭಾವ , ಪರಮಾತ್ಮ ಭಾವ , ಆವಾವ ಭಾವಕ್ಕೊಳಪಡದವನು ಆಗಲಿಲ್ಲ. ಆಗ ಕಳೆದ ಮತ್ತು ಭಾವಕ್ಕಗಮ್ಯನಾಗಿ ನಿಂತನು. ಆಗ ಉಳಿದು ನಿಂತನು ನಿಮಗಾನು ಗುರಿಯಾದೆ ಗುಹೇಶ್ವರಾ.

ಓ ಗುಹೇಶ್ವರಾ ನಿಮಗಾನು ಗುರಿ, ನೀನು ಅಕಲ್ಪಿತನಾದರೆ ಅದುವೆ ನನ್ನಯ ಇರುವುಳ್ಳ ಅರಿವು . ನೀನು ಅಚಿಂತ್ಯಾತ್ಮನಾದರೆ ಅದುವೆ ನನ್ನಯ ಇರುವು ಅರುವು . ನೀನು ನಿಶಬ್ಧ ಘನ ಗಂಭೀರನಾದರೆ ನನ್ನಯ ಇರುವು ಅರಿವು ಅದುವೆ ಆದುದರಿಂದ ನಿಮಗಾನು ಗುರಿ . ಗುಹೇಶ್ವರ ನೆಂಬುದು ನನಗಿಂತ ಬೇರಲ್ಲವೆಂದು ನನ್ನ ಇರವು ಅರಿವು ಆದುದರಿಂದ ನಿಮಗಾನು ಗುರಿಯಾದೆ ಗುಹೇಶ್ವರ ಎಂದು ಹೇಳಿದುದು.

16

ಅರುಹಿ ನೊಳಗಣ ಕುರುಹು ಮರಹಿಂಗೆ ಬೀಜ
ಕುರುಹಿನ ಮರಹ ಅರುವು ನುಂಗಿ
ಘನಕ್ಕೆ ಘನ ವೇದ್ಯವಾದ ಬಳಿಕ ನಿತ್ಯಪರಿಪೂರ್ಣ ತಾನೆ
ಕಲಿದೇವರ ದೇವನು ವಾಙ್ಮನಕ್ಕಗೋಚರನು.

ತಾತ್ಪರ್ಯ : ಅರುಹಿನೊಳಗಣ ಕುರುಹು ಮರಹಿಂಗೆ ಬೀಜ : ಬೆಳಕಿನೊಳಗೆ ಕತ್ತಲೆ ಕಾಣುವದು ಅದು ಮರಹಿಂಗೆ ಬೀಜ. ಸೂರ್ಯನ ಅಂಗಾಂಗಗಳಲ್ಲಿ ಕತ್ತಲೆ ಕಾಣುವದು ಅದು ಮರಹಿಂಗೆ ಬೀಜವಲ್ಲವೆ? ಜ್ಯೋತಿಯಲ್ಲಿ ಕತ್ತಲೆ ಕಾಣುವುದು ಆಶ್ಚರ್ಯ. ಅರುಹಿನೊಳಗೆ ಕುರುಹ ಕಾಣುವದು ಇದು ಆಶ್ಚರ್ಯ. ಮಾನವ ಬೆಳಕಿನೊಳಗೆ ಕತ್ತಲೆ ಕಾಣುವ ದೃಷ್ಠಿಯುಳ್ಳದ್ದಾಗಿದೆಯಲ್ಲ ಇದೆಂಥ ಆಶ್ಚರ್ಯ ಅರು ಸ್ವರೂಪ ತಾನಾಗಿಯೂ , ತನ್ನೊಳಗೆ ಕುರುಹ ಕಾಣುವುದು ಆಶ್ಚರ್ಯ. ಜಗವೆಲ್ಲ ಸಚ್ಚಿದಾನಂದಮಯ ಅರುಸ್ವರೂಪ ಲಿಂಗ ಸ್ವರೂಪ ವಾಗಿದ್ದರೂ ಅದರಲ್ಲಿ ಕುರುಹ ಕಾಣುವದು ಅಜ್ಞಾನಕ್ಕೆ ಬೀಜವಲ್ಲವೆ ? ಶ್ರೀಗುರು ಕರುಣಿಸಿದ ಕುರುಹು ಅದು ಅರುವಿನ ಅರುವು ಶಬ್ಧ ಮುಗ್ಧ, ಕಲ್ಪಿತ ವಲ್ಲದ. ಅಕಲ್ಪಿತ ಘನ, ಅಚಿಂತ್ಯಾತ್ಮ ಈ ನಿಶ್ಚಿಂತ ನಿಧಿ ಕರುಣಿಸಿದರೂ ಅದರಲ್ಲಿ ಕುರುಹ ಕಾಣುವನಲ್ಲ ಇದೆಂತಹ ದೃಷ್ಠಿ ? ಕಣ್ಣಿಲ್ಲದವಂಗೆ ಬೆಳಕಿನ ಘನವ ಕಾಣದಿರುವದು ಸಹಜ ಕಣ್ಣಿದ್ದು ಕುರುಡನಾದನೆ ? ಶ್ರೀ ಗುರು ಕರುಣೆ ಉಳ್ಳವರೆಲ್ಲ ಕಣ್ಣುಳ್ಳವರು. ಕಣ್ಣುಳ್ಳವರು ಕುರುಹ ಕಾಣುತ್ತಾರೆಂದಲ್ಲಿ ಇದೆಂಥಹ ವಿಪರೀತ ದೃಷ್ಠಿ? ಇವರು ಲಿಂಗವ ತಿಳಿಯದವರು , ಅರುವು ಅರುವು, ಎಂಬ ಶಬ್ಧ ಸಂಭ್ರಮದವರು. ಕುರುಡನು ಬೆಳಕು ಬೆಳಕು ಅನ್ನುತ್ತಾನೆ. ಅನ್ನುವ ಮಾತ್ರದಿಂದ ಅವನು ಬೆಳಕಿನ ಘನವ ತಿಳಿದನೆ ? ಅವಂಗೆ ಕತ್ತಲೆ ಕಾಣದಂತಾಯಿತೆ ? ಅರುಸ್ವರೂಪ , ಮಾನವ, ಅರುವ ಅರಿಯದ್ದರಿಂದ ಇವನು ಕಣ್ಣಿದ್ದು ಕುರುಡನಾಗಿಹನು. ಇವನು ಅರುವು ಅರುವು ಎಂದು ಅರುಸುತ್ತಾನೆ ಅನುಸಂಧಾನ ಮಾಡುತ್ತಾನೆ ಮಾಡಿದರೂ ಅವನಿಗೆ ಕುರುಹೆ ಕಾಣುವದೆಂದಲ್ಲಿ ತನ್ನನ್ನು ತಾನು ಕಾಣನು. ನುಡಿಯು ಅರುವಾಗಿದೆಯಲ್ಲದೆ ತನ್ನರಿವು ಆಗಲಿಲ್ಲ, ತಾನು ಆಗಲಿಲ್ಲ. ಇದು ಕಾರಣ ಶಬ್ಧ ಸಂಭ್ರಮದವರು ಹಿಂದು ಗಾಣರು , ಮುಂದು ಗಾಣರು , ತಮ್ಮ ತಾವರಿಯದ್ದರಿಂದ ಕುರುಹೆ

ಕಾಣುವವರಾದರು.

ಕುರುಹಿನ ಮರಹ ಅರುವು ನುಂಗಿ, ಘನಕ್ಕೆ ಘನ ವೇದ್ಯವಾದ ಬಳಿಕ ನಿತ್ಯಪರಿಪೂರ್ಣ ತಾನೆ: ಕುರುಹು ಕುರುಹು ಎಂಬುದು ಮರಹ. ಈ ಮರಹ ಇಲ್ಲವಾಗಬೇಕಾದರೆ ತಾನು ಅರುವ ಅರಿಯಲು ಹೋದಾಗ, ನುಡಿಯಿಂದುಕ್ತವಾದ ಅರುವು ಸ್ವಭಾವತಃ ಅದು ಇಲ್ಲದ್ದಾಗುವುದು. ಆಗ ಘನಕ್ಕೆ ಘನ ನೆಂಬುದು ತನ್ನಿಂದ ತನಗದು ತಿಳುವಳಿಕೆಯಾದಲ್ಲಿ ತನ್ನರಿವು ಇದ್ದಂತಿರುವ ಇರವು. ತನ್ನೊಳಗೆ ಕುರುಹ ಕಾಣಲು ಇಂಬಿಲ್ಲ, ಮುಂದೆ ತಾನೆ, ಮೇಲೆ ತಾನೆ, ಕೆಳಗೆ ತಾನೆ, ಎಡ ತಾನೆ, ಬಲ ತಾನೆ, ಒಳಗು ತಾನೆ, ಹೊರಗು ತಾನೆ, ಹಿಂದೆ ತಾನೆ, ಸ್ಥಾವರ ತಾನೆ, ಜಂಗಮ ತಾನೆ, ಅಖಂಡಿತ ಘನ ಪೂರ್ಣವಪ್ಪ ಪರಮಾನಂದ ತಾನೆ, ಪರಾತ್ಪರ ಅರಿವು ತಾನೆ. ಇದು ಅರುವರಿತ ತನ್ನಿರವು. ನುಡಿಗೆ ಮೀರಿದ ತನ್ನಿರವು ತಾನೆ, ಘನಕ್ಕೆ ಘನ ತಾನೆ, ಶೃತಿಗಳಿಗೆಲ್ಲ ಬೆಳಗುವ ಜ್ಯೋತಿ ಸ್ವಯಂಜ್ಯೋತಿ ತಾನಾಗಿರುವಲ್ಲಿ ಘನಕ್ಕೆ ಘನವೆಂದು ಹೇಳಿಹರು.

ಅರಿವೆಂಬುದು ಘನ ಗಂಭೀರ ಮಹಾಘನ, ಇದನ್ನು ಅರಿತುದೆ ಘನಕ್ಕೆ ಘನ. ಅರಿವೆಂಬುದು ಅಳತೆ ಮಾಡಿದ ಮಹಾಂತ ಅರುವರಿತು ಸ್ವಮಹಿಮನಾದುದರಿಂದ ಘನಕ್ಕೆ ಘನ. ನಿತ್ಯಪರಿಪೂರ್ಣವೆಂಬುದು ನುಡಿಯಿಂದುಕ್ತವಾದುದಲ್ಲ, ನೆನಹಿಂಗೂ, ಚಿಂತನಕ್ಕು ಭಾವಕ್ಕಿಂಬು ಗೊಡದ ನಿತ್ಯ ಪರಿಪೂರ್ಣವಾದ ತನ್ನ ಸಹಜ, ಅಜ, ಅಚಿಂತ್ಯನಾಗಿಹ ತನ್ನಿರವು. ಅರು ಅರುವೆಂಬುದು ತನ್ನಸ್ವರೂಪವಲ್ಲ, ಅರುವೆಂಬುದಕ್ಕೂ ನಿಲುಕದ ನಿಲುವೇ ಮನ ಮೇರೆದಪ್ಪಿದ ನಿಲುವು. ನಿಜವೆಂಬುದು ತನ್ನಿಂದ ತನ್ನರಿತು ಅರುವಿಂಗರುವಾಗಿಹುದೆ ನಿತ್ಯ ಪರಿಪೂರ್ಣತ್ವವು.

ಕಲಿದೇವರ ದೇವನು ವಾಙ್ಮನಕ್ಕಗೋಚರನು. ದೇವ ತಾನಾರೆಂದರಿವುಡೆ ತನ್ನ ಸ್ವರೂಪ. ತನ್ನ ಸ್ವರೂಪ ಬೇರಲ್ಲ ಕಲಿದೇವರ ದೇವನು ಬೇರಲ್ಲ, ತಾನಾಗಲಿ ಕಲಿದೇವರ ದೇವನಾಗಲಿ ವಾಙ್ಮನಕ್ಕಗೋಚರನು. ವಾಣಿಗೂ ಅವೇದ್ಯವು, ಮನಕ್ಕೂ ಅವೇದ್ಯವು, ನಿರ್ಣಯಕ್ಕೂ ಅವೇದ್ಯವು ಆದುದರಿಂದ ವಾಙ್ಮನಕ್ಕಗೋಚರನೆಂದು ಹೇಳಿಹರು.

ಆರಿಗೆ ತಾನು ವಾಙ್ಮನಕ್ಕಗೋಚರ ನೆಂಬುದು ವೇದ್ಯವಾಗಿದೆ, ತಿಳಿದಿದೆ, ಅವರು ಅರುಹಿನೊಳಗಣ ಕುರುಹ ಕಂಡವರಲ್ಲ. ಅರುವ ಅರಿತುದರಿಂದ ಮರಹಿಂಗೆ ಇಂಬಿಲ್ಲ. ಅವರು ಮತಿಗೆ ಮೀರಿದ ಮಹಾಂತರು. ಇದು ಕಾರಣ ಕುರುಹ ಕಾಣದವರು. ಅವರ ದಿವ್ಯ ದೃಷ್ಟಿ ಅದು ಕುರುಹೆಂಬುದನ್ನೆ ನುಂಗಿದುದು. ಅಲ್ಲಿ ಮರಹೆಂಬುದಿಲ್ಲ ಇಲ್ಲವಾದುದರಿಂದ ಅರುವೆಂಬುದ ನುಂಗಿದ ಘನಕ್ಕೆ ಘನ ವಾದವನು ತಾನೆ. ಅಂದು ಇಂದು ಎಂದೆಂದೂ ಇದ್ದಂತಿರುವ ಸ್ವಮಹಿಮ ನಿತ್ಯಪರಿಪೂರ್ಣ ತಾನೆಂದು ದೇವರ ದೇವ ತಾನೆ ವಾಙ್ಮನಕ್ಕೆ ಅಗೋಚರನು ಶೃತಿಗಗೋಚರನು ಎಂದು ಹೇಳಿಹರು.

17

ನೋಡಿಹೆನೆಂದರೆ ದೃಷ್ಟಿ ಕೊಳ್ಳದು,
ಪೂಜಿಸಿಹೆನೆಂದರೆ ಪೂಜೆ ಕೊಳ್ಳ ದಿನ್ನೆಂತೊ?
ಅರಿದೆ ನೆಂದರೆ ಏನೂ ಇಲ್ಲ,
ಘನದೃಷ್ಠಿ ಕೂಡಲ ಚೆನ್ನಸಂಗಯ್ಯ ಲಿಂಗೈಕ್ಯನು. ॥ 834 ॥

ತಾತ್ಪರ್ಯ : ನೋಡಿಹೆ ನೆಂದರೆ ದೃಷ್ಠಿ ಕೊಳ್ಳದು : ನೋಡಿಹೆನೆಂದರೆ, ಆರನ್ನು? ಆರು ದೃಷ್ಠಿ ಗೊಳಪಡರು ದೃಷ್ಠಿಗಗೋಚರರು. ಅವರನ್ನು, ಅವರು ಆರು? ಲಿಂಗೈಕ್ಯರು. ಲಿಂಗೈಕ್ಯರು, ಲಿಂಗ ಲಿಂಗ,

ಜಂಗಮ ,ಜಂಗಮ , ಪ್ರಸಾದ , ಪ್ರಸಾದ ವೆಂದೆನ್ನುವ ದೃಷ್ಟಿಗೂ ನಿಲುಕದವನು ಜಂಗಮನ ನೆನಹಿಂಗೂ ನಿಲುಕದವನು ಆರಾರ ಭಾವಕ್ಕೂ ನಿಲುಕದ ನಿರ್ಭಾವಿಯಾಗಿರುವಲ್ಲಿ ಆ ಮಹಾಂತನು ದೃಷ್ಟಿ ಕ್ಕೊಳಪಡುವದದೆಂತು ? ರೂಪನಲ್ಲ, ಅರೂಪನಲ್ಲ, ನಿರೂಪನೆಂಬುವದಕ್ಕೂ ನಿರ್ಣಯವಾಗದ ಲಿಂಗೈಕ್ಯ ಅವನೆಂತು ದೃಷ್ಟಿಗೆ ಕಾಣುವನು ? ಲಿಂಗವೆನ್ನದ ಲಿಂಗೈಕ್ಯ , ಜಂಗಮ ವೆನ್ನದ, ಪ್ರಸಾದವೆನ್ನದ ಲಿಂಗೈಕ್ಯ . ಈ ತ್ರಿವಿಧ ಸ್ಥಲ ಒಂದಾದ ಘನಕ್ಕೆ ಘನ , ತೆರಹಿಲ್ಲದ ಘನ , ಅವನೆಂತು ನೋಡುವುದು ಆದಿಯಿಂದತ್ತತ್ತ ಅನಾದಿಯಿಂದತ್ತತ್ತ ಆದಿಯೆಂಬೆನೆ ಕುರುಹಿನಿಂದತ್ತತ್ತ, ಅನಾದಿ ಎಂಬೆನೆ ಶಬ್ಧಿಂದತ್ತತ್ತ. ಈ ಮಹಾಂತನ ಕಾಣುವದದೆಂತು ? ಕಾಣದುದ ಕಂಡು ತಾನು ಕಾಣದಂತಾದ ಘನ . ಈ ಮಹಿಮನ ಕಾಣುವದದೆಂತು? ಇದು ಕಾರಣ ನೋಡಿಹೆ ವೆಂದವರೆಲ್ಲ ಬರುಸೂರೆ ಹೋದರು .

ಪೂಜಿಸಿಹೆ ನೆಂದರೆ ಪೂಜೆಗೊಳ್ಳದಿನ್ನೆಂತೊ : ಪೂಜಿಸಿಹೆನೆಂಬ ಭಕ್ತಂಗೆ, ಪೂಜೆಗೆ ಒಳಪಡದವನು. ಕಲ್ಪಿತವಾಗದ ಘನಮಹಿಮನು ಕಲ್ಪಿತ ಕಾಣುವದದೆಂತು ? ಕಾಣುದದ ಕಂಡ ಕ್ಷರಾ ಕ್ಷರ ಮೀರಿದ ಘನ ನಲ್ಲಿ ಪೂಜ್ಯನಾರು ? ಪೂಜಕನಾರು ? ಭಾವಕ್ಕಿಂಬುಕೊಡದ ನಿರ್ಭಾವಿ ಅಪ್ರತಿಮನ ಪೂಜಿಸುವದದೆಂತು ? ನಾನೀನೆಂಬ ಸಂದಳಿದ ಸ್ವಯಂ ವೇದ್ಯ ಅಪ್ರಮಾಣನ ಪ್ರಮಾಣಿಸುವದದೆಂತು? ನಾನೆಂಬುದಿದ್ದಲ್ಲಿ ನೀನೆಂಬ ಕುರುಹು ಉಂಟು . ನೀನೆಂದಲ್ಲಿ ನಾನು,ನಾನೆಂದಲ್ಲಿ ನೀನು , ಈ ಉಭಯ ಭಾವಂಗಳಿಗೆ ಸಂದಿಲ್ಲದಿಪ್ಪ ಘನದಿರುವು ಕರಿಗೊಂಡ ಮಹಾಂತಂಗೆ ಪೂಜಿಸಿಕೊಳ್ಳುವದದೆಂತು ? ಇದು ಕಾರಣ ಪೂಜ್ಯ ಪೂಜಕವೆಂಬ ಭಾವಿಕತೆಗೆ , ಭಾವಕ್ಯಗಮ್ಯನು ಅಪ್ರತಿಮನಾದ್ದರಿಂದ ಪೂಜೆಗೆ ಒಳಪಡನು . ಲಿಂಗ ತಾನು ಒಂದಾಗಿರ್ದ ನಿಶಬ್ಧವೇದಿ ತಾನೆ . ತಾನೆ ನಿರುಪಾಧಿ ಜಂಗಮ , ತಾನೆ ನಿರಾಲಂಬ ತಾನೆ ಶುದ್ಧ , ಸಿದ್ಧ , ಪ್ರಸಿದ್ದವಂತ ಮಹಾಪ್ರಸಾದಿ ತ್ರಿವಿಧ ಒಂದಾಗಿರ್ದ ಅನುಪಮ ಅನುಪಮನು . ನಿರೂಪನು , ಶಬ್ದಮುಗ್ಧನು , ನಿರ್ಭಾವಿಯು , ಕಾಂಬಡೆ ಅಂಗವಿಲ್ಲದ ಅನಂಗ ಚಿದಂಗ ನೆನೆಯುವುಡೆ ಮನಕ್ಕೆ ದೂರನು . ಈ ಘನ ಮಹಿಮನ ಪೂಜಿಸುವದದೆಂತು . ಅರಿದೆನೆಂದರೆ ಏನೂ ಇಲ್ಲ ಅರುವಿನಿಂದ ಅರಿದಿಹೆನೆಂದಡೆ ಅರುವು ಮರಹಿಂಗೊಳಗಾಯಿತ್ತಾಗಿ ಆ ಅರಿವಿನಿಂದ ಅರಿದಿಹೆವೆಂಬ ಅಜ್ಞಾನಿಯ ಮಾತ ಕೇಳಲಾಗದು. ಭಾವದಿಂದ ಭಾವಿಹಿಸಿಹೆನೆಂದಡೆ ಭಾವ ಭ್ರಾಂತಿಗೊಳಗಾಗಿತ್ತಾಗಿ ಆ ಭಾವದಿಂದ ಭಾವಿಸಿಹೆನೆಂಬ ಭ್ರಮಿತನ ಮಾತ ಕೇಳಲಾಗದು ಕೂಡಲಚೆನ್ನಸಂಗ ನಿಮ್ಮ ಶರಣನ ಘನ ದೃಷ್ಟಿ

ಲಿಂಗೈಕ್ಯನು ಅರಿಯದರಿವು ಏನೊಂದಾಗದ ಅನುಪಮ, ಅದಾವ ಅರುವಿನಿಂದ ಅರಿವುದು , ಅರುವೆಂಬುದಕ್ಕು ಮೀರಿದ ಘನವು ಅದನೆಂತು ಅರಿವುದು? ಹೆತ್ತರಿವು ನಿಜದರುವ ಅರಿಯಬಹುದೆ? ನಿಜದರುವು ನುಡಿಗೆಡೆಗೊಡದ ಘನವು , ಹೆತ್ತರಿವು ನುಡಿಯಿಂದುಕ್ತವಾದುದು ವಾಣಿಯು ಮೂಕನ ಮೌನ ವರ್ಣಿಸಬಹುದೆ ? ಭಾವಕ್ಕಗಮ್ಯವಾದುದು ಭಾವವುಳ್ಳದ್ದಾಗಬಹುದೆ? ನಿಸ್ಸೀಮನು ಸೀಮಿತವ ಕಾಣನು. ಸೀಮಿತ ದೃಷ್ಟಿ ಸೀಮಿತ ಭಾವ , ಸೀಮಿತ ಜ್ಞಾನ , ಕಲ್ಪಿತ ಪುರುಷನ ಗುಣಮಯಿ ಕಾರ್ಯ , ತಾನಾರೆಂದು ತನ್ನ ನರಿಯದ ಕಾರ್ಯ. ಇದು ಕಾರಣ ಅರುವು ಮರಹಿಂದುಕ್ತವು ಅರುವಿನಿಂದ ತನ್ನ ಅರಿದೆನೆಂಬ ಅಜ್ಞಾನಿಯ ಮಾತ ಕೇಳಲಾಗದು .

ಭಾವದಿಂದ ಭಾವಿಸಿಹೆನೆಂಬುದು ಭ್ರಾಂತಿಗಳ ಭಾವ ,ಭಾವಕ್ಕಗಮ್ಯವಾದುದನ್ನು ಅದಾವ ಭಾವದಿಂದ ಭಾವಿಸುವುದು . ಮರವಿನ ಭಾವಿಯಾದ ಜೀವ ಭಾವವಿರಲಿ ನಿತ್ಯಾನಿತ್ಯವೆಂಬ ವಿವೇಕವುಳ್ಳ ಅಂತರಾತ್ಮ ಭಾವವಿರಲಿ, ಅರುವಿನ ಚಿದಹಂ ಭಾವವಿರಲಿ , ಇವಾವು ಭಾವಕ್ಕಗಮ್ಯವಾಗಿಹ ಘನದಿರುವಿನ ಅರುವು ಆಗದು . ನಿರ್ಭಾವವು ಭಾವವುಳ್ಳದ್ದಾಗದು. ಭಾವವದು ಭ್ರಾಂತು, ಇದು ಕಾರಣ ಭಾಂತನ ಮಾತು ಕೇಳಲಾಗದು . ಜ್ಞಾನದಿಂದ ಲಿಂಗೈಕ್ಯನ ಅರಿದಿಹೆನೆಂದಲ್ಲಿ ಏನೆಂದೆನಲಿಲ್ಲ

ಅರುವು ಶಬ್ದ ಮೀಸಲಾಗಿಹ ಘನವು ಮುನ್ನ ಮುನ್ನಲಾದುದು ಶಬ್ಧವೇದ ಖಂಡಾಖಂಡ ಸಂಯೋಗವಲ್ಲದ ಅಖಂಡಿತವು ತಾನೆ ತಾನಾಗಿಪ್ಪಸ್ವಯಾನಂದ ಅದಾವ ಜ್ಞಾನದಿಂದ ಅರಿವುದು,ಜ್ಞಾನ ತನ್ನೊಳಗೆ ಅಜ್ಞಾನ ತನ್ನೊಳಗೆ, ಎರಡುವನರಿಯದ ಸಹಜ ಸುಜ್ಞಾನಿ ಲಿಂಗವಶಗತ ವಾಗಿರ್ದನಯ್ಯ ಕೂಡಲಚನ್ನ ಸಂಗಮದೇವಾ , ಜ್ಞಾನ , ಅಜ್ಞಾನ ತನ್ನಿಂದ ಸಿದ್ಧವಾಗುವಲ್ಲಿ ತಾನು ಏನೊಂದಾಗದ ಘನಮಹಿಮ ಆವಾವುದನ್ನು ಅರಿಯದ, ಅರಿಯದರವು ಜ್ಞಾನದಿಂದ ಅರಿದೆನೆಂಬ ಅಜ್ಞಾನಿಯ ಮಾತ ಕೇಳಲಾಗದು . ಘನ ದೃಷ್ಠಿ ಕೂಡಲಚೆನ್ನಸಂಗಯ್ಯ ಲಿಂಗೈಕ್ಯನ ದೃಷ್ಠಿ ಘನದೃಷ್ಠಿ . ಈ ಘನ ದೃಷ್ಠಿಗೇನನ್ನಬೇಕು ? ಉಪಮಿಸಲು ಇಂಬಿಲ್ಲದ ದೃಷ್ಠಿ ಘನದೃಷ್ಠಿ ಏನೊಂದುಸರಲು ಇಂಬಿಲ್ಲದ ದೃಷ್ಠಿ ಘನದೃಷ್ಠಿ ನೆನಹು ನಿರ್ಣಯಕ್ಕಿಂಬುಕ್ಕೊಡದ ದೃಷ್ಠಿ ಘನದೃಷ್ಠಿ ಅರಿದರುಹಿಸಿ ಕೊಂಬುದಕ್ಕೂ ಮೀರಿದ ಘನವಾವುದೊ ಅದುವೆ ತಾನಾಗಿಹ ತನ್ನ ದೃಷ್ಠಿ ಘನ ದೃಷ್ಠಿ ಏನೆಂದೆನಲಿಲ್ಲದ ಅರುವಿನ ದೃಷ್ಠಿ , ಘನದೃಷ್ಠಿ, ತನ್ನದೃಷ್ಠಿ, ತಾನೆ ದೃಷ್ಠಿ , ತನ್ನದಾದ ಪರಾತ್ಪರ ದೃಷ್ಠಿಯೆ ಲಿಂಗೈಕ್ಯನು ಎಂದು ಹೇಳಿಹರು .

18

ಲಿಂಗ ವಿಡಿದು ಲಿಂಗ ಮಹೇಶ್ವರ ನೆನಿಸಿಕೊಂಬೆ,
ಲಿಂಗ ವಿಡಿದು ಲಿಂಗ ಪ್ರಾಣ ಎನಿಸಿಕೊಂಬೆ,
ಲಿಂಗ ವಿಡಿದು ಲಿಂಗ ವೆನಿಸಿಕೊಂಬೆ,
ಅರುವರಿತು ಕ್ರಿಯಾನುಭವ ಮೀರಿ,
ಕೂಡಲಸಂಗಮ ತಾನಾದ. ॥ 707 ॥

ತಾತ್ಪರ್ಯ : ಲಿಂಗ ವಿಡಿದು ಲಿಂಗ ಮಹೇಶ್ವರನೆನಿಸಿ ಕೊಂಬೆ : ಲಿಂಗ ವಿಡಿದವರು ಲಿಂಗ ಮಹೇಶ್ವರ ರೆನಿಸಿಕೊಳ್ಳುವದು ಸಹಜ, ಲಿಂಗ ವಿಡಿದವರು ಲಿಂಗ ವಂತರಾಗಬಹುದೆ ? ಅಂಗದ ಮೇಲೆ ಲಿಂಗ ಧರಿಸಿದ ಲಿಂಗಾರ್ಚಕರು, ಅಂಗವಿಡಿದು ಭಕ್ತರಾಗಿಹರು ಮಹೇಶ್ವರ ಪ್ರಸಾದಿಗಳಾಗಿಹರು ಇವರು ಲಿಂಗವರಿಯದ ಲಿಂಗಾರ್ಚಕರು ಲಿಂಗ ವಿಡಿಯಬಹುದೆ?

ಲಿಂಗ ವಿಡಿದವರು ಅರುವ ಅರಿಯ ಹೇಳಿ ಸದ್ಗುರು ಕುರುಹ ಕೊಟ್ಟ ಅದನು ಅರುವೆಂದು ಅರುವಿಡಿದವರು ಅರುವ ಅರಿಯಹೋಗಿ ಅನುಪಮ ಲಿಂಗ , ಅಖಂಡಿತ ಲಿಂಗ , ಅಚಲಿತ ಲಿಂಗವೆಂದು ಅಚಿಂತ್ಯಾತ್ಮರು . ಈ ಮಹಾಂತರು ಅರುವಿಡಿದು ಅರುವರಿದು ಅರುವೆನೆಂಬ ಭ್ರಾಂತಿ ಇಲ್ಲದವರು .ಲಿಂಗ ವಿಡಿದು ಲಿಂಗವರಿತು, ಲಿಂಗನಾನೆಂಬ ಭ್ರಾಂತರು ಅಲ್ಲ ನಿಭ್ರಾಂತರು .

ಲಿಂಗವಿಡಿದು ಲಿಂಗ ಮಹೇಶ್ವರ ನೆನಿಸಿಕೊಂಬೆ : ಲಿಂಗ ವಿಡಿದು ಲಿಂಗ ಮಹೇಶ್ವರ ನೆನಿಸಿಕೊಂಡಿಹೆ ನೆಂದಲ್ಲಿ ಲಿಂಗ ವಿಡಿದುದು ಹೇಗೆ ?

ಲಿಂಗ ವೆಂಬುದು ಅಖಂಡಿತ ಘನ ಪರಿಪೂರ್ಣವಪ್ಪ ಪರಾತ್ಪರ ಅರಿವು . ಈ ಅರಿವು ವಿಡಿದವರು ಲಿಂಗ ವಿಡಿದವರು . ಇವರದು ನಿಸ್ಸೀಮ ನಿಲವು , ನಿಜ ನಿಲವು . ಲಿಂಗ ವಿಡಿದ ಘನವಂತ ಕಾಲ ತ್ರಯಂಗಳ ಜೀವತ್ರಯಂಗಳ ನೊಂದುಮಾಡಿ ಸುಖ ದುಃಖ ಸಗುಣ ನಿರ್ಗುಣ ವೆಂಬುಭಯ ಲಿಂಗದಲ್ಲಿ ಏಕ ಮಾಡಿದ ಅನುಪಮನಾದ್ದರಿಂದ ಮಹಾಂತನ ಮಹದರವು ಕಾಂಡ ತ್ರಯಂಗಳ ಕಾಣದ ಅರಿವು . ಭಾವಕ್ಕಗಮ್ಯವಾದ ಅರಿವು , ಲಿಂಗದಲ್ಲಿ ಉದಯವಾದ ಘನ ಲಿಂಗವಾದುದರಿಂದ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ ಪೂರ್ಣಾಮುದಚ್ಯತೆ ಎಂದೆನ್ನುವ ಅಹಮವಿಡಿದು ಅರಿಯದರುವ ಲಿಂಗಮಹೇಶ್ವರ ನೆನಸಿ ಕೊಂಡಿಹನೆಂದು ಹೇಳಿಹರು .

ಲಿಂಗವಿಡಿದು ಲಿಂಗ ಪ್ರಾಣಿ ಎನಿಸಿಕೊಂಬೆ: ಪ್ರಾಣವಿಡಿದವರುಂಟು, ಪ್ರಾಣವಿಡಿದು

ಮಹೇಶ್ವರರೆನಿಸಿ ಕೊಂಡವರು ಉಂಟು, ಇವರು ಪ್ರಾಣದಲ್ಲಿ ಉದಯವಾಗಿ ಪ್ರಾಣವೆ ತಾವಾಗಿದ್ದವರು ಇವರು ಲಿಂಗವಿಡಿದುದು ಹೇಗೆ ? ಕೆಲಬರು ಪ್ರಾಣವೆ ಲಿಂಗವೆಂದು ಪ್ರಾಣವಿಡಿಯಲು ಪ್ರಾಣಾಯಾಮ ಮಾಡಿ ಕುಂಭಕ ಯೋಗ ಬಲಿಸಿ ಆಯುಷ್ಯವೃದ್ಧಿ ಮಾಡಿ ಅರಿಯದ ಲೌಕಿಕರಿಗೆ ಲಿಂಗವಿಡಿದವರು ನಾವೆಂದು ಹೇಳುವುದು . ಆದಿ ಪುರಾತನರ ಪಥಕ್ಕೆ ಸರಿಯಾದುದಲ್ಲ , ಗುರು ತೋರಿದ ಲಿಂಗವೆ ಮನಸ್ಥಲವಾಗಿರಲು ಪವನ ಭೇದದಿಂದ ಅರಿದೆನೆಂದಡೆ ಅದೇ ದ್ರೋಹ . ಈಡಾ , ಪಿಂಗಳಾ , ಸುಷುಮ್ನನಾಳವಿಡಿದು ಅರಿದೆ ನೆಂದಡೆ ಕೂಡಲಸಂಗಮದೇವ ಮೂಗ ಕೊಯ್ಯದೆ ಬಿಡನು ಮಾಣ್ಬನೆ ಎಂದು ಬಸವರಸರು ಬಿತ್ತರಿಸಿದುದು ನೋಡಿದರೆ ಇವರು ಗುರು ತೋರಿದ ಲಿಂಗ ವಿಡಿದವರಲ್ಲ, ಮೂಗ ಕೊಯ್ಯದೆ ಬಿಡನು ಎಂದು ಹೇಳಿದ ಆದಿಪುರಾತನರ ಪಥವೇ ಸೀಮಾತೀತ ಪಥ. ಇವರು ಲಿಂಗವಿಡಿದವರು, ಅರುವಿಡಿದು, ಅರುವರಿತ ಅರುವಿಂಗರುವಾಗಿಹ ಘನವಂತರು. ಲಿಂಗವರಿಯ ಹೋಗಿ ಲಿಂಗಕ್ಕೆ ಲಿಂಗವಾಗಿಹ ಶಬ್ದ ಮುಗ್ಧರು. ಶಬ್ಧ ಮೀಸಲವಾಗಿಹ ಮೌನ ಮುದ್ರಿತರು, ಇವರು ಲಿಂಗವಿಡಿದು ಲಿಂಗ ಮಹೇಶ ನೆನಿಸಿಕೊಂಬೆ ಎಂದು ಹೇಳಿಹರು .

ಲಿಂಗ ವಿಡಿದು ಲಿಂಗ ಪ್ರಾಣಿ ಎನಿಸಿಕೊಂಬೆ : ಲಿಂಗ ವಿಡಿದವರು ಸಾಮಾನ್ಯರೆ ? ಗುರುತೋರಿದ ಅನುವ ವಿಡಿದುದನೇನೆಂಬೆ ಏನೆಂಬೆ? ಕ್ಷರಾ ಕ್ಷರವೆಂಬುದಕ್ಕೂ ಮೀರಿದ ಘನವಿಡಿದರೆ, ಎರಡಲ್ಲದ ಘನವಿಡಿದರೆ ಮಿಕ್ಕ ಮೀರಿನಿಂದ ನಿಲವುಳ್ಳವರು ಲಿಂಗವಿಡಿದು ಅಚ್ಚಸುಖದ ಸುಖಿಯಾಗಿ ಅಚಲಾನಂದ ದಲ್ಲಿದ್ದವನು ಲಿಂಗ ಪ್ರಾಣಿ ಎನಿಸಿಕೊಂಬ ಎಂದು ಹೇಳಿಹರು .

ಲಿಂಗವಿಡಿದು ಲಿಂಗನೆನಿಸಿಕೊಂಬೆ ,ಲಿಂಗವಿಡಿದುದು ಹೇಗೆ ? ಲಿಂಗನೆನಸಿ ಕೊಂಡುದು ಹೇಗೆ? ಲಿಂಗವದು ಘನಗಂಭೀರ ಮಹಾಘನ ,ಕ್ಷರವೆನ್ನಲು ಸಂದು ಕೊಡದ ಘನ. ಅಕ್ಷರ ವೆನ್ನಲು ಸಂದು ಕೊಡದ ಘನ. ಅಖಂಡಿತ ಘನವ ಅಖಂಡಿತನಾಗಿ ವಿಡಿದುದು , ಘನ ಗಂಭೀರನಾಗಿ ಮಹಾಲಿಂಗ ವಿಡಿದುದು. ಶೃತಿಗೆ ಮಿಕ್ಕಿ ಮೀರಿ ನಿಂತದುದೆ ಲಿಂಗವಿಡಿದ ಸಂಕೇತ . ಲಿಂಗ , ಲಿಂಗ ಎನ್ನದವನಾಗಿ ವೇದ ವೇದಾಂತಗಳಿಗೆ ಅಸಾಧ್ಯವಾದ ಅನುಪಮದ ಅನುವುಳ್ಳವನಾಗಿ ಲಿಂಗವರಿಯ ಹೋದುದು ಲಿಂಗವಿಡಿದುದು . ಘನ ಗಂಭೀರ ಮಹಾಘನದೋಳ ಘನಕ್ಕೆ ಘನವಾಗಿರ್ದನಯ್ಯ ಕೂಡಲ ಸಂಗಯ್ಯನೆಂಬ ಬೆಳಗಿನೊಳಗೆ ಬೆಳಗುಳ್ಳವನಾಗಿ ಶಬ್ದ ಮುಗ್ಧನಾದುದ ನೇನೆಂಬೆ ಏನೆಂಬೆ ? ಲಿಂಗವಿಡಿದು ಲಿಂಗನೆನಿಸಿಕೊಂಬೆ, ಲಿಂಗವದು ಸಚ್ಚಿದಾನಂದ, ಅಖಂಡ ಪರತತ್ವ ಚಿಜ್ಯೋತಿ, ಸ್ವಯಂ ಪ್ರಕಾಶವದು ಘನ ಗಂಭೀರ ಮಹಾಘನವುಳ್ಳ ತತ್ವವರಿಯ ಹೋಗಿ ಘನಕ್ಕೆ ಘನ ತಾನಾದುದು. ನುಡಿಗೆಡೆಗೊಡದ ಘನ ತಾನಾದುದು. ಇದು ನಿಶಬ್ಧನಿಲುವಿನಲ್ಲಿ ನಿಂತ ಅನಾಮಯವಾಗಿಹ ನಿರ್ವಾಣ. ಮೂಕನ ಮೌನ ಶಬ್ಧಮುಗ್ಧ . ಶಬ್ಧವೆ ಮೀಸಲವಾದುದರಲ್ಲಿ ವರ್ಣಿಸುವದದೆಂತು? ಉಪಮಿಸುವುದದೆಂತು .

ಅರುವರಿತು ಕ್ರಿಯಾನುಭವ ಮೀರಿ ಕೂಡಲಸಂಗಮತಾನಾದ : ಅರುವರಿತವರೆ ಕ್ರಿಯಾನುಭವ ಮೀರಿದ ನಿಷ್ಕ್ರಿಯರು , ಶಬ್ಧ ಸಂಭ್ರಮದವರು ಕ್ರಿಯಾನುಭವವುಳ್ಳವರು. ಮಿಗೆ ಮಿಗೆ ಮೀಸಲ ವಾಗಿಹ ತತ್ವ ತಿಳಿಯದವರು . ಅರುವರಿತವರು ಲಿಂಗ ಸಕೀಲ ಸಂಯೋಗವರ್ಮ ಸ್ಥಲವರಿತವರು ಕೂಡಲಚೆನ್ನಸಂಗಯ್ಯ ತಾನೆ ಆದವರು . ಅರಿಯದರುವು , ಏನೆಂದನಲಿಲ್ಲದ ಅರುವು, ಇವರು ಲಿಂಗವರಿತು ಲಿಂಗವೆ ತಾನಾದ ಮಹಾ ಮಹಿಮರು , ಅನುಪಮರು ಆದುದರಿಂದ ಅರುವರಿತು ಕ್ರಿಯಾನುಭವ ಮೀರಿ ಕೂಡಲಚೆನ್ನಸಂಗ ತಾನಾದ ನಿಲುವುಳ್ಳವರು ಕ್ರಿಯಾನುಭವ ಮೀರಿದವರು ಇವರು ನೆನಹು ನಿರ್ಣಯಕ್ಕೆ ಮೀರಿದ ಅಗಮ್ಯರು , ಚಿಂತನಕ್ಕೆಡೆಗೊಡದ ಅಚಿಂತ್ಯಾತ್ಮರು ಲಿಂಗೈಕ್ಯರು

ಭಾವಕ್ಕಿಂಬು ಕೊಡದವರು, ನುಡಿಗೆಡೆಗೊಡದವರು ಕ್ರಿಯಾನುಭವ ಮೀರಿ ಕೂಡಲಸಂಗಯ್ಯ ತಾನಾದ ಎಂದು ಹೇಳಿಹರು.

19

ನೆನೆಯಲರಿಯೆ, ನಿರ್ಧರಿಸಲರಿಯೆ
ಮನವಿಲ್ಲಾಗಿ ಭಾವಿಸಲರಿಯೆ,
ಭಾವ ನಿರ್ಭಾವ ವಾಯತ್ತಾಗಿ,
ಧ್ಯಾನ ಮೌನವನರಿಯೆ,
ಧ್ಯಾನಾತೀತ ತಾನೆಯಾಯಿತ್ತಾಗಿ,
ಜ್ಞಾತೃ, ಜ್ಞಾನ, ಜ್ಞೇಯಗಳೆಲ್ಲವ ಮೀರಿ,
ಅಭಿನವ ಮಲ್ಲಿಕಾರ್ಜುನನಲ್ಲಿ ಪರಮಸುಖಿಯಾಗಿರ್ದೆ.

ತಾತ್ಪರ್ಯ : ನೆನೆಯಲರಿಯೆ ನಿರ್ಧರಿಸಲರಿಯೆ : ಆರನ್ನು ? ಆರಿಗೆ ಒಡಲಿಲ್ಲ ಅವರನ್ನು ನೆನೆಯಲರಿಯೆ, ನಿರ್ಧರಿಸಲರಿಯೆ. ನಿಜಪದವ ಬೆರಸದವರಿಗೆ ಮನವಿಲ್ಲಾಗಿ ಭಾವಿಸಲರಿಯೆ. ಆರು ನೆನಹು ನಿರ್ಣಯಕ್ಕೆ ನಿಲುಕದವರು, ಅವರನ್ನು ನೆನೆಯಲರಿಯೆ ನಿರ್ಧರಿಸಲರಿಯೆ ನೆನಹಿಂಗೆ ನಿಲುಕದವರು, ಇವರಾರು ? ನಿರ್ಣಯಕ್ಕೆ ನಿಲುಕದವರು ಇವರಾರು? ಪೂರ್ವನಾಮವಿಲ್ಲದ ಶಿಷ್ಯ, ಪೂರ್ವನಾಮ ವಿಲ್ಲದ ಗುರು, ಪೂರ್ವ ನಾಮವಿಲ್ಲದ ಲಿಂಗ ಮರವು ಕಾಣದವನು ಶಿಷ್ಯನಾದುದೆಂದು ? ಅರುವೆಂಬುದ ಕಾಣದವನು, ಗುರುವಾದುದೆಂದು ? ಪೂಜೆ ಕಾಣದವನು ನೆನಹಿಂಗೆ ನಿಲುಕದವನು ಪೂಜಾ ಲಿಂಗವಾದುದೆಂದು ? ಈ ತ್ರಿವಿಧ ಸ್ಥಲವರಿತವರು, ನೆನೆಯದವರು ನಿರ್ಧರಿಸದವರು.

''ಭವಿಯ ತಂದು ಪೂರ್ವಾಶ್ರಯವ ಕಳೆದು ಭಕ್ತನ ಮಾಡಿದ ಬಳಿಕ ಪೂರ್ವವ ನೆತ್ತಿ ನುಡಿವ ಶಿವದ್ರೋಹಿಗಳ ಮಾತ ಕೇಳಲಾಗದು. ಗುರುವ ನರನೆಂದು ಭಾವಿಸಿ ಗುರುವಿನ ಹೆಸರಿಟ್ಟು ಕರೆವ ಗುರುದ್ರೋಹಿಗಳ ಮಾತು ಕೇಳಲಾಗದು. ಹೆಸರಿಲ್ಲದ ಅಪ್ರಮಾಣ ಮಹಿಮನನ್ನು ಹೆಸರಿಟ್ಟು ಕರೆವ ಲಿಂಗ ದ್ರೋಹಿಯ ಮಾತ ಕೇಳಲಾಗದು. ಪೂರ್ವವಿಲ್ಲದ ಶಿಷ್ಯ, ನೇಮವಿಲ್ಲದ ಗುರು, ಹೆಸರಿಲ್ಲದ ಲಿಂಗ ಈ ತ್ರಿವಿಧವ ನರಿಯದೆ ಕೆಟ್ಟರು ಕೂಡಲ ಚೆನ್ನಸಂಗಮದೇವಾ''.

ಪೂರ್ವಾಶ್ರಯ ಕಳೆದ ಭಕ್ತನ ಘನವ ನೇನೆಂಬೆ? ''ಭಕ್ತಂಗೆ ಉತ್ಪತ್ತಿ ಸ್ಥಿತಿ ಇಲ್ಲ, ಸ್ಥಿತಿ ಇಲ್ಲಾಗಿ ಲಯವಿಲ್ಲ, ಮುನ್ನೆಲ್ಲಿಂದ ಬಂದನಲ್ಲಿಗ್ಗೆ ಹೋಗಿ ನಿತ್ಯನಾಗಿರ್ಪನಯ್ಯ ಗುಹೇಶ್ವರ ನಿಮ್ಮ ಶರಣ''. ಭಕ್ತನು ಮುನ್ನೆಲ್ಲಿಂದ ಬಂದನಲ್ಲಿಗ್ಗೆ ಹೋಗಿ ನಿತ್ಯನಾಗಿರ್ಪ,ಈ ಘನವಂತನೆ ಪೂರ್ವವಿಲ್ಲದ ಶಿಷ್ಯ, ಅರುವಿನ ಪರಿಮಳವಾಗಿಹ ಗುರು, ಲಿಂಗಕ್ಕೆ ಲಿಂಗವಾಗಿಹ ಲಿಂಗವಾದುದು. ಇದು ಕಾರಣ ನೆನೆಯಲರಿಯೆ ನಿರ್ಧರಿಸಲರಿಯೆ ಎಂದು ಹೇಳಿಹರು.

ಲಿಂಗೈಕ್ಯಂಗೆ ಗುರುವ ನೆನೆಯಲು ತನಗಿಂತ ಬೇರಾಗಿ ಗುರುವಿಲ್ಲ. ಲಿಂಗವ ನೆನೆಯಲು ತನಗಿಂತನ್ಯವಲ್ಲ ಜಂಗಮ ನೆನೆಯಲು ತನಗಿಂತನ್ಯವಿಲ್ಲ ತಾನಾರೆಂದರಿಯದ ಮುನ್ನ ತನ್ನಯ ಮರವೆ ಲಿಂಗ, ಜಂಗಮ, ಗುರು, ತನಗಿಂತನ್ಯವಾಗಿ ಕಂಡಿತ್ತು. ತಾನಾರೆಂದರಿಯುವುಡೆ ತಾನೆ ಗುರುವಿಂಗೆ ಗುರುವಾಗಿ ಗುರುಪ್ರಸಾದವ ಕೊಂಡ ಘನಕ್ಕೆ ಘನ, ಲಿಂಗಕ್ಕೆ ಲಿಂಗವಾಗಿ ಲಿಂಗ ಪ್ರಸಾದ ಕೊಂಡ ಮಹಾಘನ. ಜಂಗಮಕ್ಕೆ ಜಂಗಮವಾಗಿ ಜಂಗಮ ಪ್ರಸಾದಕೊಂಡ ನಿರ್ಭಾವಿ ಪ್ರಸಾದಕ್ಕೆ ಪ್ರಸಾದವಾಗಿ

ಪ್ರಸಾದ ಕೊಂಡ ಮಹಾ ಪ್ರಸಾದಿ ಎಂಬುದು ತನ್ನಿಂದ ತನಗದು ವಿದಿತವಾಗಿಹ ಅರಿಯದರವು , ಏನೆಂದೆನಲಿಲ್ಲದ ಅರವು ತಾನೆ ಆದವನು ನೆನೆಯಲರಿಯೆ, ನಿರ್ಧರಿಸಲರಿಯೆ, ಎಂದು ಹೇಳಿಹರು.

ಮನ ವಿಲ್ಲಾಗಿ ಭಾವಿಸಲರಿಯೆ , ತಾನಾರೆಂದರಿತ ಅನುಪಮ. ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದ ನಿಜ ಲಿಂಗೈಕ್ಯ ಊಹಿಸಲಿಲ್ಲಾಗಿ ಭಾವಿಸಲಿಲ್ಲ. ಭಾವಕ್ಕಗಮ್ಯವಾಗಿಹ ಅರಿಯ ದರುವು, ಅಲ್ಲಿ ಮನ ವೇತರದು , ಭಾವ ವೇತರದು , ಸಂಕಲ್ಪದ ಸುಳಿವು ಇಲ್ಲ, ವಿಕಲ್ಪದ ಭ್ರಮವಿಲ್ಲ, ಭ್ರಮ ರಹಿತಂಗೆ ಕಲ್ಪಿತನಿಲ್ಲ , ಕಲ್ಪನೆಯಿಲ್ಲ , ಲಿಂಗೈಕ್ಯಂಗೆ ಒಡಲು ಇಲ್ಲ ನೆಳಲು ಇಲ್ಲ, ಕರಣಂಗಳಿದ್ದಲ್ಲಿ ಒಡಲುಂಟು , ವಾಸನೆ ಇದ್ದಲ್ಲಿ ನೆಳಲು ಉಂಟು , ಮನ ವಿಲ್ಲದ್ದರಿಂದ ಒಡಲು ಇಲ್ಲ. ನಿರ್ವಾಸನೆ ಮಹಾಂತಂಗೆ ಭಾವ ವಿಲ್ಲವೆಂದು ಹೇಳಿಹರು . ಭಾವಕ್ಕಗಮ್ಯ ನಾದವಂಗೆ . ಭಾವವದು ಭ್ರಾಂತಿಯಾದುದರಿಂದ ಭಾವವಿಲ್ಲ ಭಾವ ನಿರ್ಭಾವ ವಾಯಿತ್ತಾಗಿ ಧ್ಯಾನ ಮೌನವನರಿಯೆ , ಭಾವಂಗಳು ಸತ್ಯವಾದವಂಗೆ ಭಾವ ನಿರ್ಭಾವ ವಾಗವು. ಆವನು ಕಲ್ಪಿತ ಪುರುಷನಾಗಿಹನು ಅವನಿಗೆ ಭಾವ ಸತ್ಯವಾಗಿರುವವು. ಭಾವಂಗಳು ಸತ್ಯವಾಗಿರುವದರಿಂದ ಬಂಧ ಮೋಕ್ಷದ ವಿನಿರ್ಮುಕ್ತ ನಾಗಲರಿಯ ಪ್ರವೃತ್ತಿ ರೂಪವಾದ ಪ್ರಪಂಚದ ಭಾವಕ್ಕೊಳಪಟ್ಟಲ್ಲಿ ಬಂಧನದಿಂದುಕ್ತನು ಪರಮಾರ್ಥ ಭಾವದಿಂದುಕ್ತನಾದಾಗ ಮೋಕ್ಷ ಕ್ಕೊಳಪಟ್ಟವನು . ಇಲ್ಲಿ ಭಾವ ನಿರ್ಭಾವವಾಗಲಿಲ್ಲ. ಭಾವ ನಿರ್ಭಾವವಾಗಬೇಕಾದರೆ ತನ್ನ ತಾನರಿಯಬೇಕು. ಅರಿದರುಹಿಸಿ ಕೊಂಬುದಕ್ಕೆ ಮೀರಿದ ಘನವೆ ತನ್ನಿರುವಾಗಿ ಘಟ್ಟಿಗೊಂಡಲ್ಲಿ ಅನಾತ್ಮ ಭಾವ , ಆತ್ಮ ಭಾವ , ನಿರ್ಭಾವವಾಗಿ ತಾನು ಸಹಜ ಅಜ ಅಚಿಂತ್ಯನೆಂಬುದು ಸಹಜ . ತನ್ನಿಂದ ತನಗದು ವೇದ್ಯವಾಗಿ ಧ್ಯಾನ ಮೌನವ ನರಿಯೆ ಎಂದು ಹೇಳಿಹರು.

ಧ್ಯಾನ ಮೌನವ ನರಿಯೆ : ಧ್ಯಾನ ಆರ ಧ್ಯಾನ ಮೌನ ಆದಾರ ಮೌನ , ಮರವಿಂಗೆ ಧ್ಯಾನ ಉಂಟು , ಮೌನ ವುಂಟು , ಅರು ವಿಂಗರುವುವಾಗಿಹ ಮಹಾಂತನು ಮೌನ ಮಾಡುವದು ಅದೆಂತು ? ಸ್ವತಃ ಸಿದ್ಧನಾಗಿಹ ಅನಾಮಯ ವಾಗಿಹ ನಿರ್ವಾಣ ಮಾತಾಡಿದುದೆಂದು ? ಅವನು ಮಾತಾಡಿ ಮೌನವ ಮಾಡುವನು , ನಿರಂತರ ಅಚಿಂತ್ಯಾತ್ಮನು ಅಜನು ಆಗಿರುವಲ್ಲಿ ಧ್ಯಾನ ಮೌನಗಳೆರಡು ಲಜ್ಜಾ ಸ್ಪದವು .

''ಧ್ಯಾನಾತೀತ ತಾನೆ ಯಾಯಿತ್ತಾಗಿ ಜ್ಞಾತೃ, ಜ್ಞಾನ ಜ್ಞೇಯಂಗಳೆಲ್ಲವ ಮೀರಿ ಅಭಿನವ ಮಲ್ಲಿಕಾರ್ಜುನ ನಲ್ಲಿ ಪರಮ ಸುಖಿ ಯಾಗಿರ್ದೆ''. ಲಿಂಗೈಕ್ಯ ಧ್ಯಾನಾತೀತ ಭಾವಾತೀತ ಅಚಿಂತ್ಯಾತ್ಮ ನಾಗಿರುವದರಿಂದ ಲಿಂಗ ವೆನಲಿಲ್ಲ ಲಿಂಗೈಕ್ಯ ವೆನಲಿಲ್ಲ , ಸಂಗಿ ಎನಲಿಲ್ಲ , ಏನೆಂದೆನಲಿಲ್ಲ ಅರುವೆ ತಾನಾಗಿಹ ಮಹಾಂತ , ಅರುವು ಅರುವು ಎಂದು ಧ್ಯಾನಿಸುವ ದಾದರೂ ಹೇಗೆ ? ಸಚ್ಚಿದಾನಂದ ನಿತ್ಯ ಪೂರ್ಣವೆಂದು ಧ್ಯಾನಿಸುವ ದಾದರೂ ಏತಕ್ಕೆ ತಾನೆ ಅಚಿಂತ್ಯ ನಾಗಿರುವಲ್ಲಿ ಸ್ವರೂಪ ಚಿಂತನ ಮಾಡುವ ದಾದರೂ ಅದೇತಕ್ಕೆ ? ಧ್ಯಾನ ಮೌನ ವೆಂಬುದು ಪರ ಪ್ರಕಾಶ . ಧ್ಯಾನಾತೀತ ಭಾವಾತೀತ ವದು ಸ್ವಯಂ ಪ್ರಕಾಶ , ಅರುವಿನ ಅರುವು ಅರಿಯ ದರುವು ತಾನೆ ಆಗಿರುವಲ್ಲಿ ಜ್ಞಾತೃ ವದು ಅರುಹಿಸುವದೆಲ್ಲಿ? ಜ್ಞಾನ ವದು ಅರಿವು ದೆಲ್ಲಿ ? ಜ್ಞೇಯ ವದು ನಿಶ್ಚಿಯಿ ಸುವದೆಲ್ಲಿ ? ತಾನು ಕಲ್ಪಿತ ನಿಗೆ ಮಿಕ್ಕಿ ಮೀರಿದ ಘನ ವಾದುದರಿಂದ ಅಭಿನವ ಮಲ್ಲಿಕಾರ್ಜುನನಲ್ಲಿ ಪರಮ ಸುಖಿಯಾಗಿರ್ದೆ ನೆಂದು ಹೇಳಿಹರು .

20

ಅರಿಯ ಲಿಲ್ಲದ ಅರುವು ,ಮರೆಯಲಿಲ್ಲದ ಮರವು ,
ನೋಡಲಿಲ್ಲದ ನೋಟ ,ಕೂಡ ಲಿಲ್ಲದ ಕೂಟ ,

ಬೆರೆಸ ಲಿಲ್ಲದ ಬೆರಗು ನಿಂದುದು,
ಕೂಡಲ ಚೆನ್ನಸಂಗಾ ಲಿಂಗೈಕ್ಯಂಗೆ. ॥ 762 ॥

ತಾತ್ಪರ್ಯ : ಅರಿಯಲಿಲ್ಲದ ಅರುವು : ಇದಾರ ಅರುವು ? ಲಿಂಗೈಕ್ಯನ ಅರುವು , ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿಯ ಹೋದವರ ಅರುವು,ಅರುವಿಂಗರುವಾದವರ ಅರುವು ತಾನಾರೆಂದರಿತು ತಾನೆ ತಾನಾಗಿಹ ಸ್ವಯ ಅರುವು ತನ್ನತಾನರಿಯದ ಮುನ್ನ ಮರವುಳ್ಳವನಾಗಿ ತಾನು ದೃಶ್ಯ ರೂಪನಾಗಿದ್ದ ಅಂತರಿಂದ್ರಿ ಬಹಿರಿಂದ್ರಿಯಂಗಳಾಗಿದ್ದ ಪ್ರಾಣಾದಿಗಳಾಗಿದ್ದ. ಅಂಗ ಸಂಗಿಯಾಗಿದ್ದನು . ಗುರು ಶಾಸ್ತ್ರ ಸಂಗಿಯಾಗಿ ನಿಸ್ಸಂಗಿಯು ಆಗಿದ್ದ, ದೃಕ್ ರೂಪ ನಾಗಿದ್ದ, ಅಲ್ಲೆನ್ನುವವನಾಗಿದ್ದ ಅಹುದೆನ್ನುವವನು ಆಗಿದ್ದ ನಾಶವುಳ್ಳನಾಗಿದ್ದೆನಲಿಲ್ಲ ಅವಿನಾಶಿ ಎಂದ, ಭಯ ರಹಿತನೆಂದ, ಮರವುಳ್ಳನಾಗಿ ಬದ್ಧನೆಂದ, ಕಾಲ ತ್ರಯಕ್ಕೊಳ ಪಟ್ಟವನೆಂದ, ವಿಶ್ವನೆಂದ ತೈಜಸ ನೆಂದ, ಪ್ರಾಜ್ಞನೆಂದ, ಪ್ರಥಮ ವೇದಿಯಾಗಿ ಗತಿಗೊಳಪಟ್ಟವನೆಂದ, ಮಧ್ಯಮ ವೇದಿಯಾಗಿ ಅತೀತ ಅನಾಗತ ನೆಂದು ಮತಿಗೊಳ ಪಟ್ಟ, ಅರುವುಳ್ಳವನಾಗಿ ಕಾಲತ್ರಂಯಕ್ಕೊಳ ಪಡದವನೆಂದ. ಅಂತ ರಾತ್ಮ ನೆಂದ ಪರಮಾತ್ಮನೆಂದ ಶೃತಿ ಪರಾಯಣ ನಾಗಿ ಚಿದ ಹಮ್ಮುಳ್ಳವ ನಾದ ಇವುರುಗಳು ಲಿಂಗೈಕ್ಯರೆ ಅಲ್ಲ.

ಲಿಂಗೈಕ್ಯರು ಅರಿಯಲಿಲ್ಲದ ಅರುವು ಏನೊಂದಾಗದ ಘನ ನುಡಿಗೆಡೆ ಗೊಡದ ಘನ, ಭಾವಕ್ಕಿಂಬಿಲ್ಲ ಶಬ್ಧಮೀಸಲಾಗಿರುವದರಿಂದ ಶಬ್ಧ ಮುಗ್ಧರು ಏನೆಂಬೇನೆಂಬೆ ಅರಿಯಲಿಲ್ಲದ ಅರುವು ನಿಸ್ಸೀಮವು ತನ್ನ ಹೊರ್ತು ಅನ್ಯಆವಾವುದನ್ನು ಕಾಣದ ಅರುವು ಸ್ವಯಂ ಅರುವು ಅರಿಯದ ಮುನ್ನ ಅರಿಸಿ ಕೊಳ್ಳುವವನಾಗಿದ್ದ , ತನ್ನಿಂದ ತನ್ನ ಅರಿವುಡೆ ಅರಿಸಿಕೊಳ್ಳುವವ ನಾಗಲಿಲ್ಲ ಆಗದ್ದರಿಂದ ಅರಿಯುವವ ನಾಗಲಿಲ್ಲ. ಅರಿಯಲಿಲ್ಲದ ಅರುವಾಗಿ ಸತ್ ಎನಲಿಲ್ಲ ಅಸ ತ್ ಎನಲಿಲ್ಲ ಚಿತ್ ಎನಲಿಲ್ಲ ಅಚಿತ್ ಎನಲಿಲ್ಲ ಆನಂದ ಎನಲಿಲ್ಲ ನಿರಾನಂದ ಎನಲಿಲ್ಲ ಅನಿತ್ಯ ಎನಲಿಲ್ಲ , ಪೂರ್ಣ ಎನಲಿಲ್ಲ ಎನಲಿಲ್ಲ ವೆಂಬುದು ಇಲ್ಲವಾಗಿ ನುಡಿಗೆಡೆ ಗೊಡದ ಘನದಿರುವೆ ತಾನಾದ ಘನಕ್ಕೆ ಘನ ವರ್ಣಾತೀತ ನೋಡಾ ಇದು ಕಾಣದುದ ಕಂಡ ತನ್ನರುವಿನ ಅರುವು ಇದು ಮೂಕ ಸಕ್ಕರೆ ಮೆದ್ದ ರುಚಿಯು , ಶಿಶು ಕಂಡ ಸುಖ ಅದನೆಂತು ವರ್ಣಿಸುವದು ? ಅರುವರಿತು ಅರಿಯ ಲಿಲ್ಲದ ಅರುವು ಅದು ಶಿಶು, ಉಪಮಾತೀತ ನೋಡಾ .

ಮರೆಯಲಿಲ್ಲದ ಮರಹು : ಮರೆಯಲು ಬಾರದುದನ್ನು ಮರೆತ ಮರಹು , ಇದಾವ ಮರಹು? ಮರವು ಮರೆಯಬಹುದು. ದೇಹ ತಾನೆಂಬುದು ಮರವು , ಈ ಮರವು ಮರೆಯ ಬಹುದು ಅರುವು ನಾನು , ಸಚ್ಚಿದ್ರೂಪ ನಾನು ಅವಿನಾಶಿ ನಾನು , ಎಂಬುದು ಅರುವಿನ ಮರವು. ಇದು ಚಿದಹಮ್ಮು .ಮರೆಯಲು ಬಾರದ್ದು ನಿರಾಲಂಬದಲ್ಲಿ ನಿಜ ಲಿಂಗ ನಾನೆನ್ನುವ ಮಹದಹಂಕಾರ ಮರೆಯಲು ಬಾರದ್ದು , ತಾನು ನೆನಹಿಂಗೂ ನಿರ್ಣಯಕ್ಕೂ ಚಿಂತನಕ್ಕೂ ಭಾವಕ್ಕೂ ಅಹಮಿಗೂ ಮೀರಿದ ಘನನು. ಅಪ್ರಮಾಣಗಮ್ಯನು ಅಚಿಂತ್ಯನು ಶೃತಿಗಗೋಚರನು ಎಂಬರಿವು ಮರೆಯಲು ಬಾರದುದು. ಶಬ್ಧ ಸಂಭ್ರಮದಿಂದುಕ್ತವಾದುದೆಲ್ಲ ಹೆತ್ತರಿವು, ತಾನೆ ಸ್ವಯಂಜ್ಯೋತಿ ಎಂಬುದು ಮರೆಯಲು ಬಾರದುದು. ಇದು ಮರೆತು ಹೋದುದರಿಂದ ಮರೆಯಲಿಲ್ಲದ ಮರಹು ಎಂದು ಹೇಳಿಹರು .

ಗುರು, ಲಿಂಗ, ಜಂಗಮ, ಪಾದೋದಕ ಪ್ರಸಾದ ವೆಂಬ ಅರುವಿನ ಅರವು ಇವು ಮರೆಯಲು ಬರದವು . ತನ್ನಿಂದ ತನ್ನ ಅರಿವುಡೆ ತನ್ನ ಹೊರ್ತು ಅನ್ಯವ ಕಾಣದ್ದರಿಂದ ಎಲ್ಲೆಲ್ಲೂ ತನ್ನ ಕಂಡುದರಿಂದ ತೆರಹಿಲ್ಲದ ಗನನಾಗಿಹುದೆ ಮರೆಯಲಿಲ್ಲದ ಮರಹು ಎಂದು ಹೇಳಿಹರು .

ನೋಡಲಿಲ್ಲದ ನೋಟ : ನೋಡಲಿಲ್ಲದ ನೋಟವದು ತನ್ನ ನೋಡಿದ ನೋಟ ಆವಾವುದನ್ನು ನೋಡದ ನೋಟ, ಪೂರ್ವಾಶ್ರಯ ವುಳ್ಳವನಾಗಿ ಕಲ್ಪಿತ ಪುರುಷನಾಗಿ ಕಂಡುದನು ಕಂಡು ನೋಡುವವನಾಗಿದ್ದ ತಾನಾರೆಂದರಿತು ಅರಿಯ ದರುವೆ ತಾನಾಗಿ ತನ್ನನ್ನೆ ನೋಡಿದ, ಅದು ನೋಡಲಿಲ್ಲದ ನೋಟ.

ಸೂರ್ಯ , ಕತ್ತಲೆಯ ಎಂದಾದರೂ ಕಂಡಿಹನೆ ? ಜಗವಾದರೂ ಕಂಡಿಹನೆ ? ಪ್ರಕಾಶ , ಪ್ರಕಾಶ ಮಯನಾಗಿ ಪ್ರಜ್ವಲಿ ಸುತ್ತಿರುವನೋ ಹಾಗೆ ಅರುವಿಂಗರು ವಾಗಿಹ ಘನ , ತನ್ನ ವಿನಃ ತತ್ವ ಅತತ್ವವೆಂಬ ಶಬ್ಧದ ಸಂದಿಲ್ಲದೆ ಬೆಳಗುಳ್ಳ ಮಹಾ ಬೆಳಗು. ಏನನ್ನೂ ನೋಡದ ಬೆಳಗು, ತಾನೆ ತಾನಾದ ಸ್ವಯ ಮೇವ ಬೆಳಗು ಆಗಿರುವದರಿಂದ ನೋಡಲಿಲ್ಲದ ನೋಟ ಎಂದು ಹೇಳಿಹರು. ಕೂಡಲಿಲ್ಲದ ಕೂಟ; ಇದಾರ ಕೂಟ ? ಇದು ತನ್ನ ಕೂಟ , ಗಗನವು ಆವಾವುದರಲ್ಲಾದರೂ ಕೂಡಿದೆಯಾ ? ಗಗನವು ಗಗನವಾಗಿದೆ, ಅದು ಗಗನವಾಗಿಯೆ ಇದ್ದ ಕೂಟ. ಇದು ಆವಾವುದರೋಳ್ ಕೂಡದ ಕೂಟ, ಗಗನವು ಆವಾವುದರಲ್ಲಿಯೂ ಕೂಡದ ನಿರಾಲಂಬ, ತಾನು ಗಗನಕ್ಕಿಂತಲೂ ಸಹಸ್ರಾರು ಪಾಲು ಅತ್ಯಂತ ಸೂಕ್ಷ್ಮವಾದುದು, ತನ್ನೊಳ ಗಗನವೆ ಕೂಡದಿರುವಾಗ ತಾನು ನಿರಾಲಂಬವಿರುವಲ್ಲಿ, ತಾನು ಆವುದರಲ್ಲಿ ಕೂಡದವನು. ತನ್ನ ಘನವಾಗಿಹ ತೆರಹಿಲ್ಲದ ಘನದಿರುವು ತಿಳಿಯದ ಮುನ್ನ ಮರ ವಿನಿಂದುಕ್ತನಾಗಿ ಕೂಡುವವನಾಗಿದ್ದ ಅಗಲುವವನಾಗಿದ್ದ, ಅರಿವುಡೆ ತನಗಿಂತನ್ಯ ವಸ್ತವಿಲ್ಲ ಸಮಾನ ವಸ್ತುವಿಲ್ಲ , ತಾನೊಂದೆ ಪರಮ ಸತ್ಯ ವೆಂಬುದು ತನಗದು ವೇದ್ಯ ವಾದುದ ರಿಂದ ಕೂಡಲಿಲ್ಲದ ಕೂಟ ತನ್ನದು . ತನ್ನೊಳ ಅಂಗ ನೆಂಬುದು ಪುಶಿ ಲಿಂಗವೆಂಬುದು ಪುಶಿ, ಶಬ್ಧಿಂದುಕ್ತವಾದ , ತತ್ತ್ವ , ಅತತ್ವ ಸಮೂಹ ವೆಲ್ಲವು ಪುಶಿ. ತಾನೊಂದೆ ಪರಮ ಸತ್ಯ ಅರುವಿಂಗ ರುವಾಗಿಹ ಘನಕ್ಕೆ ಘನ. ತನ್ನೊಳ ಕೂಡಿದುದು ಪುಶಿ ಅಗಲಿದುದು ಪುಶಿ, ತನ್ನದು ಕೂಡಲಿಲ್ಲದ ಕೂಟ ವೆಂದು ಹೇಳಿಹರು .

ಬೆರಸಲಿಲ್ಲದ ಬೆರಗು ನಿಂದುದು ಕೂಡಲಚೆನ್ನಸಂಗಾ ಲಿಂಗೈಕ್ಯಂಗೆ: ಲಿಂಗೈಕ್ಯ ನಿಂದುದು ಬೆರಸ ಲಿಲ್ಲದ ಬೆರಗು ನಿಂದುದು ಆಶ್ಚರ್ಯ. ಮಹಾಕಾಶವದು ಬಯಲು. ಬಯಲು ಅಂದು ಇಂದು ಏಂದೆಂದೂ ಬಯಲಾಗಿಯೆ ಇದ್ದುದು, ಅದು ಘಟಾಕಾಶದಲ್ಲಿ ಬೆರೆಯಲಿಲ್ಲ ಮಠಾಕಾಶದಲ್ಲಿ ಬೆರೆಯಲಿಲ್ಲ ಮೇಘಾಕಾಶದಲ್ಲಿ ಬೆರೆಯಲಿಲ್ಲ. ಅದು ಇದ್ದಂತಿಂದ್ದ ನಿಸ್ಸೀಮವು. ಘನಕ್ಕೆ ಘನವಾದುದರಿಂದ ಘಟಾಕಾಶ ಮಠಾಕಾಶ ಮೇಘಾಕಾಶ ಇಲ್ಲದವುಗಳು ಇವು ಪುಶಿ ನಾಮ . ಪುಶಿ ತೋರಿಕೆ , ಪುಶಿ ಭಾವ , ಪುಶಿ ಜ್ಞಾನ , ಪುಶಿ ದೃಷ್ಠಿ ಇದು ಕಾರಣ ಬಯಲು ಬಯಲೆ ಇವುಗಳಾವು ಕಾಣದ್ದರಿಂದ ಬೆರಸಲಿಲ್ಲದ ಬೆರಗು ಹಾಗೆ ಅರಿಯದರುವು ತನ್ನ ದಾಗಿರುವದರಿಂದ ಅರಿಸಿಕೊಳ್ಳುವ ಮಾಯಿಕ ಕಾಣಲಿಲ್ಲ ಅರಿಯದ ದೃಕ್ಕೆಂಬುದ ಕಾಣಲಿಲ್ಲ ಸತ್ ಅಸತ್ ಚಿತ್ , ಅಚಿತ್ , ಆನಂದ ನಿರಾನಂದ ಎಂಬುದಕ್ಕೂ ಸಂದಿಲ್ಲದಿಪ್ಪ ಅಖಂಡಿತ ಘನ ಪೂರ್ಣವಪ್ಪ ಪರಾನಂದ ಪರಬ್ರಹ್ಮ ತಾನೆಂಬರುವಿಂಗೂ ಮೀರಿ ಬೆಳಗುವ ಬೆಳಗುಳ್ಳ ಘನವೆ ತನ್ನಿರುವಾಗಿರುವದರಿಂದ ಬೆರಸಲಿಲ್ಲದ ಬೆರಗು ನಿಂದುದು ಇದು ಲಿಂಗೈಕ್ಯನ ನಿಲುವು . ಅರಿಯಲಿಲ್ಲದ ಅರುವಾಗಿ ನಿಂದುದು , ಮರೆಯ ಲಿಲ್ಲದ ಮರುಹಾಗಿ ನಿಂದುದು , ಇದು ಆವಾವುದನ್ನು ನೋಡದ ನೋಟ ತನ್ನಿಂದ ತನ್ನ ನೋಡಿದ ನೋಟ ತನ್ನ ಕೂಟವದು ತಾನು ಅದು ಇದು ಆವಾವುದರಲ್ಲಿ ಕೂಡದ ಕೂಟ, ತನ್ನ ಕೂಟ ಬೆರೆಸಲಿಲ್ಲದ ಬೆರಗು. ಕೂಡಲ ಚೆನ್ನಸಂಗಾ ಲಿಂಗೈಕ್ಯರ ನಿಲುವು ಎಂದು ಹೇಳಿಹರು .

21

ಜ್ಞಾತೃವೆ ಅರುಹಿಸುವದು, ಜ್ಞಾನವೆ ಅರಿವುದು,
ಜ್ಞೇಯವೆ ನಿಶ್ಚಯಿಸುವದು,
ಈ ಜ್ಞಾತೃ ಜ್ಞೇಯ ಜ್ಞಾನವೆಂಬ, ತ್ರಿವಿಧ ಸಾಧನದಿಂದ
ಲಿಂಗವ ನರಿಸಿ, ಲಿಂಗವ ನರಿದು, ಲಿಂಗವ ಬೆರಸಿ
ಲಿಂಗ ವಾದ. ಮತ್ತೆ ಜ್ಞಾತೃ, ಜ್ಞಾನ, ಜ್ಞೇಯ ವೆಂಬ
ತ್ರಿ ವಿಧ ಭ್ರಾಂತಿ ಸೂತಕ ಹೋಯಿತ್ತು, ನಿಜವಾಯಿತ್ತು
ಕಾಣಾ ಗುಹೇಶ್ವರಾ.

ತಾತ್ಪರ್ಯ : ಜ್ಞಾತೃವೆ ಅರುಹಿಸುವುದು, ಜ್ಞಾನವೇ ಅರಿವುದು, ಜ್ಞೇಯವೆ ನಿಶ್ಚಯಿಸುವದು: ಈ ಜ್ಞಾತೃ, ಜ್ಞಾನ, ಜ್ಞೇಯ ಪ್ರಸಾದ, ರೂಪವು ಇಲ್ಲಿ ಗುರುಕರುಣೆಯಿಂ ಲಭ್ಯವಾದ ಕರುಣಾ ಜಲವುಂಟು. ಲಿಂಗ ವರಿಯುವ ವಿನಯ ಜಲವು ಉಂಟು, ಲಿಂಗ ಬೆರಸಿ ಲಿಂಗವಾದ ಸಮತಾ ಜಲವುಂಟು, ಇವು ಲಿಂಗವ ನರಸಿ, ಲಿಂಗವ ನರಿದು, ಲಿಂಗವ ಬೆರಸಿ ಲಿಂಗವಾಗಲು, ತ್ರಿವಿಧ ಸಾಧನಂಗಳು. ಇವು ವೇದ ವೇದಾಂತಗಳಿಗಸಾಧ್ಯವಾದ ಅನುಪಮ ಅರುವಿನ ಸಾಧನಗಳು. ಅದನೆಂತು ವರ್ಣಿಸುವದು ? ಜ್ಞಾತೃ ಜ್ಞಾನಜ್ಞೇಯಂಗಳೆಂಬಿವು ಅನುಪಮ ಲಿಂಗವನು ಅರುಹಿಸುವ ಅನುಪಮ ಲಿಂಗವನು ಅರಿವ ಅನುಪಮ ಲಿಂಗವ ಬೆರಸಿ ಅದುವೆ ಆಗುವ ತ್ರಿವಿಧ ಸಾಧನ.

ಇವು ಸದ್ಗುರು ಕರುಣೆಯಿಂ ಲಭ್ಯವಾಗುವ ಅಪ್ರಮಾಣ ಸಾಧನ. ಈ ತ್ರಿವಿಧ ಸಾಧನ ಗಳೆಂದರೆ ಭಕ್ತನ ಕರ ಕಮಲದಲ್ಲಿ ಬೆಳಗುವ ಲಿಂಗ ದೇವನ ಅರುಹಿಸುವ ಜ್ಞಾತೃವಾಗಿಹನು. ಈ ಚಿಜ್ಯೋತಿ ಲಿಂಗವರಿದ ಸದ್ಗುರುವಿನ ಸಕೀಲವದು ಜ್ಞಾನವಾಗಿಹುದು. ಅರಿದರಿದು ನಿಶ್ಚಯಿಸುವ ಅರು ಹೃದಯ ಜ್ಞೇಯವಾಗಿದೆ. ಇವು ಸದ್ಗುರು ದೇವ ಅರುವ ಅರಿಯ ಹೇಳಿದ ತ್ರಿವಿಧ ಸಂಜ್ಞೆಗಳು. ಈ ಸಂಜ್ಞೆ ಕರ್ಮ ಕಾಂಡಕ್ಕೂ ಮೀರಿದುದು. ಈ ಶಾರ್ಪಣ ಮಾಡುವ ಭಕ್ತ ಕಾಂಡಕ್ಕೂ ಮೀರಿದುದು ಸಕಲ ಕರ್ಮ ಗಳಿಗೆ ಸಾಕ್ಷ ನಾನೆನ್ನುವ ಜ್ಞಾನ ಕಾಂಡಕ್ಕೂ ಮೀರಿದುದು. ಕಾಂಡ ತ್ರಯವಿಲ್ಲದ ಅಖಂಡಿತ ಲಿಂಗದ ಸಂಜ್ಞೆ. ಮೌನ ಮುದ್ರಿತ ಸಂಜ್ಞೆ. ಲಿಂಗ ಲಿಂಗ ಎಂಬುವವರ ಸಂಜ್ಞೆ ಯಲ್ಲ ಅರುವ ಅರಿಯ ಹೇಳಿದ ಸದ್ಗುರು ದೇವನ ಸಂಜ್ಞೆ.

'' ರೂಪವನೆ ಕಂಡು ನಿರೂಪನೆ ಕಾಣರು, ತನುವನೆ ಕಂಡು ಅನುವನೆ ಕಾಣರು, ಆಚಾರ ವನೆ ಕಂಡು ವಿಚಾರವನೆ ಕಾಣರು ಗುಹೇಶ್ವರಾ ನಿಮ್ಮ ಕುರುಹನೆ ಕಂಡು ಕೂಡಲರಿಯದೆ ಕೆಟ್ಟರು ''. ಲಿಂಗಾರ್ಚಕರು ಲಿಂಗ ಕಂಡರೂ ರೂಪವಾಗಿಯೆ ಕಂಡರು, ನಿರೂಪವನ್ನಾಗಿ ಕಾಣಲಿಲ್ಲ. ಕಾಣದ್ದರಿಂದ ಲಿಂಗ ಪೂಜಿಸಿ ಕೊಳ್ಳುವ ಪೂಜಾಲಿಂಗವಾಯಿತ್ತಲ್ಲದೆ, ಪೂಜೆಗೆ ಬಾರದ ಅಪ್ರತಿಮ ಲಿಂಗ ವಾಗಲಿಲ್ಲ. ಪತ್ರ ನೇಮದವರು ಸಿಕ್ಕುತ್ತಾರೆ ಲಿಂಗಾರ್ಚನೆಯ ನಿಯಮದವರು ಸಿಕ್ಕುತ್ತಾರೆ ಜಂಗಮ ನೇಮದವರು ಸಿಕ್ಕುತ್ತಾರೆ. ತನ್ನತಾ ತಿಳಿಯುವ ನೇಮದವರು ವೀರಶೈವರಲ್ಲಿ ಅಗ್ರ ಗಣ್ಯರು ಏಕೆಂದರೆ ಲಿಂಗ ವರಿಯಲು ಅರುವ ಅರಿಯ ಹೋದವರು ಲಿಂಗವ ನರಸಿ ಲಿಂಗವರಿದು ಲಿಂಗವ ಬೆರಸಿ ಲಿಂಗವಾದರು.

ಲಿಂಗವಾದವರು ಆರು ಗೊತ್ತೆ ? ಆದಿ ಪುರಾತನರು ತಮ್ಮ ತಾವರಿತವರು, ಲಿಂಗವೆನ್ನ ಲಿಂಗೈಕ್ಯವೆನ್ನ, ಸಮರಸ ವೆನ್ನ ಆಯಿತೆನ್ನ ಆಗದೆನ್ನ ಚೆನ್ನ ಮಲ್ಲಿಕಾರ್ಜುನ ನಲ್ಲಿ ಏನೂ ಎನ್ನದೆ ಶಬ್ದ ಮುಗ್ಧ ವಾದುದ ನೇನೆಂಬೆ, ಅಕ್ಕ, ಲಿಂಗವ ನರಿಸಿ, ಲಿಂಗವ ನರಿದು ಲಿಂಗವ ಬೆರತು ಲಿಂಗವಾದ ಮಹಾ ಶಕ್ತಿ.

ಲಿಂಗವಾದ ಮಹಾಭಾಗ್ಯ ಏನೆಂಬೇನೆಂಬೆ? ಲಿಂಗವಾಗಲು ಲಿಂಗವ ನರಿದು, ಲಿಂಗವೆ ಬೆರೆದು ಲಿಂಗವಾಗಿಹ ಅದೆಂತು ವರ್ಣಿಸುವದು, ಅರುವ ಅರಿಯ ಹೋಗಿ ವಾಙ್ಮನಕ್ಕೆ ನಿಲುಕದ ತಾವಾಗಿ ಲಿಂಗವೆನಲಿಲ್ಲ ಲಿಂಗೈಕ್ಯರೆನಲಿಲ್ಲವಾಗಿ ಏನೂ ಎನ್ನದೆ ಶಬ್ಧ ಮುಗ್ಧವಾದುದು ಅದು ವರ್ಣಾತೀತ. ಲಿಂಗವರಿಯ ಹೋಗಿ ಲಿಂಗಕ್ಕೆ ಲಿಂಗವಾಗಿ, ಅರುವಿಂಗರುವಾಗಿ ಘನಕ್ಕೆ ಘನನಾಗಿದ್ದು ಸ್ವಯಂ ಜ್ಯೋತಿ ಯಾಗಿ ಬೆಳಗುಳ್ಳಾದ್ದಾದ ತನ್ನಿರುವ ತನ್ನಿಂದ ತನಗೆ ವೇದ್ಯವಾಗಿ ಶಬ್ಧ ಮುಗ್ಧವಾದುದು.

ಲಿಂಗವರಿದುದು: ಆದಿ ಪುರಾತನರು ಇವರು ಶೃತಿಗೆ ಮೀರಿ ನಿಂತು ಲಿಂಗವರಿತವರು, ಎಂಜಲ ಮಾತ ನುಡಿವ ರಂಜಕರಲ್ಲ, ಶಬ್ಧ ಸಂಭ್ರಮ ದವರಲ್ಲ, ಮಿಗೆ ಮಿಗೆ ಮೀಸಲ ವಾಗಿಹ ತತ್ವ ತಿಳಿದವರು. ಲಿಂಗ ಸಕೀಲ ಸಂಯೋಗ ವರ್ಮಸ್ಥಲ ವರಿತವರು, ಪೂಜಾಲಿಂಗ ಪೂಜಿಸ ಹೋದವರಲ್ಲ, ಲಿಂಗಕ್ಕೆ ಲಿಂಗ, ಲಿಂಗ ಎಂದು ನೆನೆಯಲಿಲ್ಲ ಚಿಂತಿಸಲಿಲ್ಲ ಭಾವಿಸಲಿಲ್ಲ ಲಿಂಗವದು, ಸಚ್ಚಿದಾನಂದ ಅಖಂಡ ಅಚಿಂತ್ಯ ಅಚಲವಾಗಿಹ ಗುರು ಸಂಜ್ಞೆಯ ಅರಿಯ ಹೋಗಿ ನುಡಿಗೆಡೆ ಗೊಡದ ಘನದಿರುವೆ ತನ್ನಿರುವಾಗಿ ಶಬ್ಧ ಮುಗ್ದ ವಾದವರು. ವೇದ, ವೇದಾಂತ ಗಳಿಗೆ ಅಸಾಧ್ಯವಾಗಿಹ ಅನುಪಮ ಲಿಂಗ ವರಿಯ ಹೋಗಿ ನಾನೀನೆಂಬುದಕ್ಕೆಡೆಗೊಡದ ತೆರಹಿಲ್ಲದ ಘನವಾದಲ್ಲಿ ಜ್ಞಾತೃ, ಜ್ಞಾನ, ಜ್ಞೇಯ ವೆಂಬ ಭ್ರಾಂತಿ ಸೂತಕ ಹೋಯಿತ್ತು ನಿಜ ವಾಯಿತ್ತು ಕಾಣಾ ಗುಹೇಶ್ವರಾ, ಜ್ಞಾತೃ ರೂಪಿ ಲಿಂಗವರಿವ ಸಕಾಲ; ಅರಿದರಿದು ನಿಶ್ಚಿಯಿಸುವ ಬುದ್ಧಿ ತನ್ನಿಂದ ಸಿದ್ಧವಾಗುವದಲ್ಲದೆ ತನ್ನ ಸಿದ್ಧ ಮಾಡಲರಿಯವು. ಜ್ಞಾತೃ ವೆಂದರಿದವನು ತಾನೆ ಜ್ಞಾನ ವೆಂಬುದ ನರಿದವನು ತಾನೆ ಜ್ಞೇಯ ವೆಂದರಿದವನು ತಾನೆ, ಇವೆಲ್ಲವು ಹೆತ್ತರಿವು, ತಾನು ಸ್ವಯ ಮೇವ ಅರುವು ಆಗಿರು ವಲ್ಲಿ ನಿಜ ವಾಯಿತ್ತು ಕಾಣಾ ಗುಹೇಶ್ವರ ಎಂದು ಹೇಳಿಹರು.

22

ನೋಡಿ ನೋಟವ ಮರೆದು, ಕೂಡಿ ಕೂಟವ ಮರೆದು,
ಬಯಲು ಸಮರಸಕ್ಕೆ ಮರುಳಾಯಿತಲ್ಲ ಜೀವ,
ಪ್ರಾಣನ ಭೇದ ವಳಿದು ನಿಜವದಕ್ಕಾಯಿತಲ್ಲ,
ಅನ್ಯ ಚಿನ್ಹೆ ವಳಿದು ತನ್ನ ತಾ ಮರೆಯಿತ್ತು,
ಕೂಡಲ ಚೆನ್ನ ಸಂಗಾ ನೀನೆಂದೆ ನಿಂದಿತ್ತೆಲ್ಲ. ॥ 763 ॥

ತಾತ್ಪರ್ಯ : ನೋಡಿ ನೋಟವ ಮರೆದು ಕೂಡಿ ಕೂಟವ ಮರೆದು : ಬಯಲು ಸಮರಸಕ್ಕೆ ಮರೆಯ ಬೇಕು. ಏನನ್ನು ನೋಡ ಬೇಕು ? ಕೂಡಲ ಸಂಗಯ್ಯ ನೆಂಬ ಬೆಳಗಿನೊಳಗೆ ಬೆಳ ಗಾಗಿರ್ದ ಶಬ್ದ ಮುಗ್ದ ವಾದುದ ನೇನೆಂಬೆ ಎಂದು ಬಸವರಸರು ಸೂಚಿಸಿದ ಮಹಾಪ್ರಸಾದ ದಂತೆ ಬೆಳಗಿನೊಳಗೆ ಬೆಳಗಾಗಿರ್ದುದ ನೋಡುವುದು. ಬೆಳಗಿ ನೊಳಗೆ ಬೆಳಗಾಗಿರ್ದುದ ನೋಡುವ ಭಾಗ್ಯ ಅದಾರಿಗೆ? ಲಿಂಗೈಕ್ಯರಿಗೆ .ಲಿಂಗ ವರಿತು ಲಿಂಗವಾದವರಿಗೆ .ಆ ಮಹಾಂತರೆ ತನ್ನಿಂದ ತನ್ನ ನೋಡಿದವರು, ನೋಡದುದ ನೋಡಿದವರು ನೋಡದ ನೋಟ ತನ್ನದಾಗಿ ನೋಡವ ನೋಟ ಮರೆದವರು. ನೋಡುವ ನೋಟ ಮಾಯಿಕ ನೋಟ ತನ್ನ ತಾ ನೋಡದ ನೋಟ ಮಾಯಿಕ ವಾದ್ದರಿಂದ ಬಹು ವಿಪರೀತವು . ಅಹಂ ಇದಂ ರೂಪ ಮಾಯಿಕ ತಾನು ಅನ್ಯವಾಗಿ ಕಾಣುವ ನೋಟ ಮಾಯಿಕ ಹಠಯೋಗಿ ತನ್ನ ಅಭ್ಯಾಸದ್ವಾರಾ ತನ್ನೊಳ ಕಾಣುವ ಆರು ತರದ ಪ್ರಕಾಶ ಗಳು ನಾದಗಳು ಮಾಯಿಕ, ತತ್ವ ಅತತ್ವ ವೆಂದು ವಿಭಾಗಿಸಿ ಕಾಣುವ ವಿವೇಕ ಮಾಯಿಕ, ಜೀವ ಪರಮೈಕ್ಯ ಸಂಧಾನವದು

ಮಾಯಿಕ ಇದಲ್ಲ ಅಲ್ಲವೆಂಬ ನೇತಾತ್ಮಕ ಮಾಯಿಕ ಸೋಹಂ ಮಾಯಿಕ ಚಿದಹಂ ಮಾಯಿಕ , ಈ ಮಾಯಿಕ ನೋಟದವರು ತನ್ನ ನೋಡಿದ ನೋಟವಾಗದ್ದರಿಂದ , ಮಾಯಿಕ ನೋಟ ಮರೆಯುವದದೆಂತು ?

ನೋಡಿ ನೋಟವ ಮರೆದವರು : ತನ್ನ ನೋಡಿ ಲಿಂಗ ನೋಟವ ಮರೆತವರು, ಲಿಂಗ ಬೆಳಗುಳ್ಳ ದ್ದಾದರೆ ತಾನು ಬೆಳಗಿ ನೊಳಗೆ ಬೆಳಗಾಗಿದ್ದವನು ತನ್ನನ್ನೇ ನೋಡಿದ ನಲ್ಲದೆ , ಲಿಂಗ ನೋಡಲಿಲ್ಲ , ಲಿಂಗ ವೆಂಬ ಅರುವನ್ನು ತಾನೆ ಅರಿದ ನಲ್ಲದೆ ಲಿಂಗ ಅರಿವುದೆ ? ಇದು ಕಾರಣ ಗುರು ಕಾರುಣ್ಯ (ಲಿಂಗ) ಘನ ಗಂಭೀರವಾದರೆ ತಾನು ಅದನ್ನು ಅರಿಯ ಹೋಗಿ ತನ್ನದು ಘನಕ್ಕೆ ಘನವಾದುದನ್ನು ತನ್ನಿಂದರಿದು ತನ್ನಂ ನೋಡಿ ನೋಟವ ಮರೆದು ತನ್ನ ತಾ ಕೂಡದ ಮುನ್ನ ಶರಣ ಸತಿ ಲಿಂಗ ಪತಿ ಎಂಬ ಲಿಂಗಾಂಗ ಸಮರಸ ಜ್ಞಾನದಿಂದ ಲಿಂಗ ವೆಂಬ ಪತಿಯಲ್ಲಿ ಶರಣನೆಂಬ ಸತಿ ಸಮರಸವಾಗಿದ್ದಳು ತನ್ನ ಕೂಡಿದ ಮೇಲೆ ತನಗಿಂತ ಅನ್ಯ ಆವಾವುದು ಇಲ್ಲ, ಇಲ್ಲ ಇಲ್ಲವೆಂಬುದಕ್ಕೂ ಸಂದಿಲ್ಲದಿಪ್ಪ ತೆರಹಿಲ್ಲದ ಘನವಾದ ತನ್ನಿರವು ತನಗದು ವೇದ್ಯವಾಗಿ ತನ್ನ ಕೂಡಿ ಕೂಟವ ಮರೆದುದ ನೇನೆಂಬೆ?

ತಾನು ಕೂಡದಗಲದ ಘನವಾಗಿರುವಲ್ಲಿ ತನ್ನ ಕೂಟ , ನಿಜ ಕೂಟ , ಅಲ್ಲಿ ಅಂಗನೆಂಬ ಶರಣ ರೂಪಿ ಸತಿ ಇಲ್ಲ ಲಿಂಗ ನೆಂಬ ಪತಿ ಇಲ್ಲ ಸಂಗ ವೆಂಬುದಿಲ್ಲ ಸಮರಸ ವೆಂಬುದಿಲ್ಲ ಏನೊಂದು ಸರಲು ಎಡೆಗೊಡದ ಕೂಟ , ತನ್ನ ಕೂಟ . ಆ ಕೂಟವು , ಕೂಡದ ಕೂಟವು ಆವಾವುದರಲ್ಲಿಯೂ ಬೆರೆಯಲಿಲ್ಲದ ಕೂಟ ಕೂಡಿ ಕೂಟವನ್ನೆ ಮರೆದ ಎರಡೊಂದಾಗಿ ಕೂಡುವ ಕುಟವನ್ನೆ ಮರೆದ ಇದು ಅಂಗ ಲಿಂಗವೆಂಬ ಎರಡೊಂದಾಗಿ ಕೂಡುವ ಕೂಟವಲ್ಲ ತತ್ವ ಮಸಿಯಿಂದ ಒಂದಾದ ಕೂಟವಲ್ಲ. ಅಹಂ ಬ್ರಹ್ಮಾಸ್ಮಿ ಎಂಬ ಚಿದಹಮ್ಮಿನ ಕೂಟವಲ್ಲ, ಅಹ ಮಿಲ್ಲದ ಚಿದ್ಘನದ ಕೂಟ . ನೆನಹು ನಿರ್ಣಯಕ್ಕೂ ಮೀರಿದ ಕೂಟ. ಭಾವಕ್ಕಗಮ್ಯವಾದ ಕೂಟ ನಿಷ್ಪತ್ತಿ ನಿರಾಲಂಬ ಆಳವಟ್ಟ ಕೂಟವಾದ್ದರಿಂದ ಎರಡೊಂದಾಗಿ ಕೂಡುವ ಕೂಟವನ್ನೇ ಮರೆದಿದ್ದಾನೆ .

ಬಯಲು ಸಮರಸಕ್ಕೆ ಮರಳಾಯಿತಲ್ಲ ಬಯಲು ಸಮರಸಕ್ಕೆ ಮರುಳಾಗ ಬೇಕಾದರೆ ಬಯಲ ಕಂಡು ಬಯಲಾದ ಬಯಲೆ ಮರುಳಾಗ ಬೇಕಲ್ಲದೆ , ಅನ್ಯ ತತ್ವ ಮರುಳಾಗುವದದೆಂತು? ಓ ಹೋ ! ಬಯಲ ಸಮರಸ , ಬಯಲ ಶಬ್ಧ ಮುಗ್ಧ , ಬಯಲ ಸಮರಸ , ಶಬ್ಧ ಮುಗ್ಧ ಸಮರಸ , ಬ್ರಹ್ಮ ಕ್ಕೆನಾ ಬ್ರಹ್ಮ ವೆಂಬುದು ಘಟಿಸದ ಸಮರಸ ನಿರಾಳವೆಂಬ ಕೂಸಿನ ಸಮರಸ ಇದು ಶಬ್ಧ ಸಂಭ್ರಮದವರ ಸಮರಸವಲ್ಲ , ಮಿಗೆ ಮಿಗೆ ಮೀಸಲ ತತ್ವವರಿತು ಅದುವೆ ಆದವರ ಸಮರಸ ಅಖಂಡಿತ ಘನ ಪೂರ್ಣವಪ್ಪ ಪರಮಾನಂದ ಪರಾತ್ಪರ ಅರುವರಿತು ಶಬ್ಧ ಮುಗ್ಧ ವಾದವರ ಸಮರಸ , ಸಮರಸ ಸವೆಯದ ಸುಖ ಸುಖಕ್ಕೆ ಮರುಳಾಯಿತಲ್ಲ ಇದು ಖಂಡಾಖಂಡ ಸಂಯೋಗ ವಿಲ್ಲದ ಅಖಂಡ ಸುಖಕ್ಕಾಗಿ ಮರುಳಾಯಿತಲ್ಲ, ಈ ಭಾಗ್ಯ ಮಹಾ ಭಾಗ್ಯ , ಇದಾರ ಮಹಾಭಾಗ್ಯ ವೆನಬೇಕು? ತನ್ನಿಂದ ತನ್ನನರಿದು ತಾನಾದ ಭಾಗ್ಯ ಮಹಾ ಭಾಗ್ಯ . ಜೀವ ಪ್ರಾಣನ ಭೇದ ವಳಿದ ನಿಜವದ ಕ್ಕಾಯಿತಲ್ಲ ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಪರಾತ್ಪರ ಅರಿವು ಎಂದರಿತ ಮೇಲೆ , ಜೀವ ಬೇರೆ ಪ್ರಾಣ ಬೇರೆಂಬ ಭೇದ ವೆಲ್ಲಿಯದು? ಆಕಾಶವತ್ ಆಕಾಶವಾಗಿಹ ಅನುಪಮದಲ್ಲಿ, ಘಟಾಕಾಶ ಮೇಘಾಕಾಶವದು ತುಣು ತುಣುಕಾಗಿ ಬೇರಾಗಿರುವಡೆ , ಘಟ ಮಠಗಳ ಉಪಾಧಿಯಿಂದುಕ್ತವಾಗಿ ಕಂಡರೂ ಅದು ಆವಾವುದಕ್ಕೂ ಅಂಜದೆ , ತಾನಿದ್ದಂತಿದ್ದ ಘನವು ಅದು ಉಪಾಧಿ ರಹಿತವಾಗಿ ಮಹಾಕಾಶವೆನಿಸಿಕೊಂಡರೂ ಇದ್ದಂತಿಹುದು ಅದು ಆಕಾಶ ಹೊರ್ತು ಅನ್ಯವುಂಟೆ ? ಹಾಗೆ ಅರಿವು

ಉಪಾಧಿಯಿಂದುಕ್ತವಾಗಿ ಕಂಡರೂ ಅರಿವು ಅರುವೆ ಉಪಾಧಿ ರಹಿತವಾಗಿ ಕಂಡರೂ ಅರುವೆ ಅರುವಿನಲ್ಲಿ ಅನ್ಯವುಂಟೆ ಹಾಗೆ ಲಿಂಗ ವೆಂಬ ಅನುಪಮ ಅರಿವು ಅಖಂಡಿತ ಅರಿವು ಅಲ್ಲಿ ತೋರುವ ಜೀವ , ಪ್ರಾಣವೆಂಬ ಕಲ್ಪಿತ ಅದಿಷ್ಠಾನ ವಲ್ಲದೆ ಅನ್ಯ ವಲ್ಲವು ಈ ಯತಾರ್ಥ ಅರುವಿನ ಉದಯ ನಿಜದುದಯ ತನ್ನ ಉದಯ ತಾನೆ ಆದುದರಿಂದ ನಿಜ ವದಕ್ಕಾಯಿತ್ತು ಎಂದು ಹೇಳಿಹರು .

ಅನ್ಯ ಚಿನ್ಹವಳಿದು ತನ್ನ ತಾ ಮರೆಯಿತ್ತು ಕೂಡಲ ಚೆನ್ನಸಂಗಾ ನೀನೆಂದೆ ನಿಂದಿತ್ತಲ್ಲಾ : ಕೂಡಲ ಚೆನ್ನಸಂಗಾ ನೀನೆಂದೆ ನಿಂದ ನಿಲುವು , ಸಕಲ ಚಿನ್ಹವಳಿದ ನಿಲವು. ನಿನಗಿಂತ ಬೇರಾಗಿ ಕಂಡ ಚಿನ್ಹವಳಿದ ನಿಲಯ .ಅಲ್ಲಿ ತಾನೆಂಬುದೆ ಇಲ್ಲವಾದ್ದರಿಂದ ತನ್ನ ತಾ ಮರೆಯಿತ್ತು .

ಕೂಡಲ ಚೆನ್ನಸಂಗಾ ನೀನೆಂದ ನಿಲವು ಅದಾರಯ್ಯ ಹೀಗೆ ಎಂದು ವರ್ಣಿಸುವುದು ? ಸ್ಥಾವರ ಜಂಗಮ ನೀನೆಂದೆ ನಿಂದ ನಿಲವು , ಸತ್ತುದು ಬದುಕಿದುದು ನೀನೆಂದೆ ನಿಂದ ನಿಲುವು , ಕಾಲ ತ್ರಯಂಗಳು, ಭಾವ ತ್ರಯಂಗಳು , ಜೀವ ತ್ರಯಂಗಳು ನೀನೆಂದೆ ನಿಂದ ನಿಲುವು ಸಗುಣ ನಿರ್ಗುಣ ನೀನೆಂದೆ ನಿಂದ ನಿಲುವು, ಅದು ಅಪ್ರಮಾಣಗಮ್ಯವು ಅದನೆಂತುಸರುವದು ? ಸಕಲವು ನೀನೆಂದೆ ನಿಂದ ನಿಲುವಿನಲ್ಲಿ ಸ್ಥಾವರವಾವುದು , ಜಂಗಮವಾವುದು ? ಸತ್ತುದೆಲ್ಲಿ ಬದುಕಿದು ದೆಲ್ಲಿ ,ಕಳೆದು ಹೋದ ಕಾಲವಾವುದು ,ನಡೆಯುವ ಕಾಲವಾವುದು , ಮುಂದೆ ಬರುವ ಕಾಲವಾವುದು, ವಿಶ್ವ , ತೈಜಸ, ಪ್ರಾಜ್ಞ ರೆಲ್ಲಿ? ಜೀವಾತ್ಮನಾರು , ಅಂತರಾತ್ಮನಾರು ಪರ ಮಾತ್ಮನಾರು ? ಇಲ್ಲಾದುದಿಲ್ಲಾದುದು ಎಲ್ಲಿಪ್ಪುದು , ಇಲ್ಲಾದುದಿಲ್ಲಾದುದು ಎಂದಿಪ್ಪುದು , ಅನುವರಿತು ತನುವ , ಮರದಡೆ ಭಾವರಹಿತ ಗುಹೇಶ್ವರ ಬಯಲು ಎಂದಂತೆ ಭಾವಕ್ಕ ಗಮ್ಯವಾದುದು ಎನೆಂಬೆ ಏನೆಂಬೆ ಇದು ಕೂಡಲ ಚೆನ್ನ ಸಂಗಾ ನೀನೆಂದೆ ನಿಂದಿತ್ತಲ್ಲಾ ಎಂದು ಹೇಳಿಹರು .

23

ದೃಷ್ಟ ನಷ್ಟವಾದುದ ಕ್ಕೇನು ದೃಷ್ಟ ?
ಭಾವ ನಷ್ಟವಾದುದೆ ದೃಷ್ಟ
ಸ್ವಯ ಪರ ವೆಂದೆನ್ನ ದಿಹುದೆ ದೃಷ್ಟ ,
ಸ್ವಯ ಪರ ವೆಂದನ್ನ ದಿಹುದ ಕ್ಕೇನು ದೃಷ್ಟ ?
ಕೂಡಲಚೆನ್ನ ಸಂಗಾ ಎಂದು ಎನ್ನದಿಹುದೆ ದೃಷ್ಟ. ॥ 844 ॥

ತಾತ್ಪರ್ಯ : ದೃಷ್ಟ ನಷ್ಟ ವಾದುದಕ್ಕೇನು ದೃಷ್ಟ ; ನೋಡದ ನೋಟವಾದುದರಿಂದ ದೃಷ್ಟ ನಷ್ಟ ವಾದ ಸಂಜ್ಞೆ , ತನ್ನಿಂದ ತನ್ನ ನೋಡದ ದೃಷ್ಟಿಯೇ ದೃಷ್ಟಿ ನಷ್ಟವಾದ ದೃಷ್ಟಿ . ತನ್ನದು ನೋಡದ ನೋಟ , ತನ್ನ ವಿನಹ ಆವಾವುದನ್ನು ಕಾಣದ ನೋಟ ನಿಸ್ಸೀಮ ನೋಟ , ಸೀಮಿತ ದೃಷ್ಟಿಯೆ ನಷ್ಟ ವಾದ ದೃಷ್ಟಿ ಇಲ್ಲಿ ಸರ್ವವು ತಾನೆ. ಬೇಧವೂ ಇಲ್ಲ ಅಬೇಧವೂ ಇಲ್ಲ . ಇದು ಉಪಮಿಸದ ನೋಟವಾದ್ದರಿಂದ ಇದು ಅಸ್ತಿ ನಾಸ್ತಿ ಎನ್ನುವದಕ್ಕೂ ಸಂದಿಲ್ಲದ ನೋಟವಾದ್ದರಿಂದ ಗುರು ,ಲಿಂಗ ಜಂಗಮವೆಂಬ ಬೇಧ ದೃಷ್ಟಿಯೆ ನಷ್ಟವಾಗಿದೆ. ಬೇಧ ದೃಷ್ಟಿ ಸೀಮಿತ ದೃಷ್ಟಿ ನಷ್ಟವಾದ ಘನವ ನೇನೆಂಬೆ ? ಅರಿಸಿಕೊಳ್ಳುವ ಅನಾತ್ಮವ ಕಾಣದ ದೃಷ್ಟಿ ಮರ ವರುವು ಕಾಣದ ದೃಷ್ಟಿ , ಇದು ಅರಿದರುಹಿಸಿ ಕೊಂಬುದಕ್ಕೂ ಮೀರಿದ ಘನ ದೃಷ್ಟಿ ಯಾದುದರಿಂದ ಅರಿಸಿ ಕೊಳ್ಳುವ ಅನಾತ್ಮ ದೃಷ್ಟಿಯೂ ನಷ್ಟ ಅರಿಯದ ದೃಕ್ ರೂಪಾತ್ಮ ತಾನೆಂಬ ದೃಷ್ಟಿಯೂ ನಷ್ಟ . ಅಂಗ ನಾನು ಲಿಂಗ ನಾನು ಅಕಲ್ಪಿತ ನೀನು , ಕರ್ತೃ ನಾನು , ಅಕರ್ತೃ ನೀನು , ಅಪೂರ್ವಿಕ ನಾನು ಎಂಬ ಸೀಮಿತ ದೃಷ್ಟಿ ನಷ್ಟ ದೃಷ್ಟಿ ನಷ್ಟ ವಾದ

ಚಿನ್ಹವೆಂದರೆ ಭಾವ ನಷ್ಟವಾದ ಗುರುತು. ಭಾವ ನಷ್ಟವಾದ್ದರಿಂದ ಸ್ಥಾವರ ವೆನಲಿಲ್ಲ, ಜಂಗಮ ವೆನಲಿಲ್ಲ , ಅಂಗ ನೆನಲಿಲ್ಲ, ಭವಿ ಎನಲಿಲ್ಲ, ಭಕ್ತ ನೆನಲಿಲ್ಲ, ಗುರು ಎನಲಿಲ್ಲ, ಶಿಷ್ಯ ಎನಲಿಲ್ಲ, ಕರ್ತ ನೆನಲಿಲ್ಲ, ಅಕರ್ತ ನೆನಲಿಲ್ಲ , ಮುಕ್ತ ನೆನಲಿಲ್ಲ, ಅಲ್ಲೆನಲಿಲ್ಲ, ಅಹುದೆನಲಿಲ್ಲ ಆಸ್ತಿ ಎನಲಿಲ್ಲ, ನಾಸ್ತಿ ಎನಲಿಲ್ಲ, ನೆನಹು ನಿರ್ಣಯಂಗಳೆ ನಷ್ಟವಾಗಿರುವಾಗ ಭಾವಿಸುವದದೆಂತು? ಭಾವಕ್ಕಗಮ್ಯ ತಾನೆಂಬುದು ಕರಿಗೊಂಡ ಮಹಾಂತಂಗೆ ಭಾವ ವೆಂಬುದು ಭ್ರಮಿತ ಕ್ಕೊಳಗು , ಭಾವಿಸುವ ನೆಂದಲ್ಲಿ ತಾನು ಆರಾಗಿ ಭಾವಿಸುವುದು ?

ತಾನು ಆದಿ ಅನಾದಿಯಿಂದತ್ತತ್ತ , ವಾಙ್ಮನೋತಿತ , ವರ್ಣಾತೀತ , ಸ್ವಯಂ ಜ್ಯೋತಿ ಅರಿದರುಹಿಸಿ ಕೊಂಬುದಕ್ಕೂ ಮೀರಿದ ಘನ ಜ್ಯೋತಿಯಾಗಿರುವಲ್ಲಿ ಭಾವಿಸುವದದೆಂತು ? ಇದು ಕಾರಣ ಭಾವ ನಷ್ಟವಾದುದೆ ದೃಷ್ಟ. ಭಾವ ನಷ್ಟವಾದುದಕ್ಕೇನು ದೃಷ್ಟ ? ಜ್ಞಾನ ನಷ್ಟವಾದುದೆ ದೃಷ್ಟ ಭಾವ ನಷ್ಟವಾದ ಗುರುತೆಂದರೆ ಜ್ಞಾನ ನಷ್ಟವಾದುದೆ ಗುರುತು , ಜ್ಞಾನ ನಷ್ಟ? ಅದಾವ ಜ್ಞಾನ ನಷ್ಟ, ಭೇದ ಜ್ಞಾನವು ನಷ್ಟ , ಅಭೇದ ಜ್ಞಾನವು ನಷ್ಟ , ಜೀವ ಬ್ರಹ್ಮ ಬೇರೆಂಬ ಭೇದ ಜ್ಞಾನವು ನಷ್ಟ , ಜೀವ ಜೀವವು ಬೇರೆ , ಜೀವ ಜಡ ಬೇರೆ , ಈಶ್ವರ ಜಡ ಬೇರೆ , ಜಡ ಜಡ ಬೇರೆ , ಹೀಗೆ ಪಂಚ ಪ್ರಕಾರದ ಭೇದ ಜ್ಞಾನವು ನಷ್ಟ, ಜೀವ ಪರಮರೊಂದೆಂಬ ಅಭೇದ ಜ್ಞಾನವು ನಷ್ಟ , ತತ್ವಮಸಿ ಅಯಮಾತ್ಮ ಬ್ರಹ್ಮ, ಪ್ರಜ್ಞಾನಂ ಬ್ರಹ್ಮ ಅಹಂ ಬ್ರಹ್ಮಾಸ್ಮಿ ಎಂಬ ಮಹಾವಾಕ್ಯ ಗಳಾಗಿಹ ಶೃತಿ ಜ್ಞಾನವು ನಷ್ಟ. ಏಕೆಂದರೆ ಕಲ್ಪಿತ ಪುರುಷ ನಿಜವಾಗಿದ್ದಲ್ಲಿ ಮರವಿನಲ್ಲಿ ಕಾಣಿಸಿಕೊಳ್ಳುವ ಭೇದ ಜ್ಞಾನವು ಉಂಟು . ಇದನ್ನು ನಷ್ಟ ಮಾಡಲು ಅರುವಿನ ಅಭೇದ ಜ್ಞಾನವು ಉಂಟು. ಮರವರುವಿಂಗೆ ಮೀರಿದ ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂಬುದು ಕರಿಗೊಂಡ ಮಹಾಂತನಾದುದರಿಂದ ಜ್ಞಾನ ನಷ್ಟವಾಗಿಹ ಮಹಾಂತನೆಂದರೆ, ಸ್ವಯ ಪರವೆನ್ನದಿಹುದೆ ಗುರುತು, ಕಲ್ಪಿತ ಪುರುಷನೆ ತಾನಾಗದ ಮಹಾಂತ ಸ್ವಯ ವೆನಲಿಲ್ಲ, ಪರವೆನಲಿಲ್ಲ, ಜ್ಞಾನ ವೆಲ್ಲಿ, ಭಾವ ವೆಲ್ಲಿ, ದೃಷ್ಟಿ ಎಲ್ಲಿ, ದೃಷ್ಟಿಯೆ ಇಲ್ಲವಾಗಿರುವಲ್ಲಿ, ಭಾವವು ನಷ್ಟ , ಭಾವ ನಷ್ಟ ವಾದುದರಿಂದ ಜ್ಞಾನ ನಷ್ಟ , ಜ್ಞಾನ ನಷ್ಟವಾದುದರಿಂದ ಸ್ವಯ ಪರವೆಂಬುದು ನಷ್ಟ.

ತಾನು ಅನ್ಯವೆಂಬುದು ನಷ್ಟವಾದುದಕ್ಕೇನು ದೃಷ್ಟ ಕೂಡಲ ಚೆನ್ನಸಂಗಾ ಎಂದು ಎನ್ನದಿಹುದೆ ದೃಷ್ಟ . ಅಕಲ್ಪಿತ ಘನವು , ತನ್ನಿರುವ ಅರುವು ಕರಿಗೊಂಡುದೆ ತಾನು ಅನ್ಯವೆಂಬುದು ನಷ್ಟ , ಸ್ವಯ ಪರ ವೆಂದನ್ನದಿಹುದಕ್ಕೇನು ಗುರುತು , ಕೂಡಲ ಚೆನ್ನ ಸಂಗಾ ಎಂದು ಎನ್ನದಿಹುದೆ ದೃಷ್ಟ , ತಾನು ಅನ್ಯವೆನ್ನ ದಿರುವುದಕ್ಕೇನು ಗುರುತು . ಕೂಡಲ ಚೆನ್ನ ಸಂಗಾ ಎಂದು ಎನ್ನದಿಹುದೆ ಗುರುತು ಅಕಲ್ಪಿತ, ಅಚಿಂತ್ಯ ಅಪ್ರಮಾಣಗಮ್ಯ ಅನುಪಮ ಎಂದು ಎನ್ನದಿಹುದೆ ಗುರುತು , ಶಬ್ಧ ಮುಗ್ಧನಾದುದೆ ಗುರುತು. ಅಕಲ್ಪಿತ ಘನ ತಾನಾದ ಚಿನ್ಹ. ವಾಙ್ಮನೋತೀತವಾದ ಚಿನ್ಹ ತನ್ನ ತಾನಾರಿತ ಚಿನ್ಹ ಅರುವರಿತು ಮರಹು ನಷ್ಟವಾಗಿ ತನ್ನಲ್ಲಿ ತಾನು ಸನ್ನಿಹಿತವಾದ ಚಿನ್ಹ , ಮೌನ ಮುದ್ರಿತ ಚಿನ್ಹ. ಶಬ್ಧ ನಿಲುವುಳ್ಳ ಚಿನ್ಹ ಅಕಥನೀಯ ನಿಲುವುಳ್ಳ ಚಿನ್ಹ . ನುಡಿ ನಡೆಯುಳ್ಳವರಿಗೂ ಮೀರಿದ ಚಿನ್ಹ .

24

ಅರುಹಿಂದಲಾದ ಮರಹಿನ ಶಬ್ಧವನರಿಯಲಾಗದು
ಅರಿದಡೆ ಅದಕ್ಕದೆ ಭಂಗ , ಅರುವರಿತು ಮರಹು ನಷ್ಟವಾಗಿ
ಜ್ಞಾನ ಬೆಂದಲ್ಲಿ, ನಿರ್ಣಯ ವಿಲ್ಲವಯ್ಯಾ.
ಜ್ಞಾನದೊಳಗಣ ಬುದ್ಧಿಯ ಭಸ್ಮ ವಾಗಿ ಧರಿಸಿದಲ್ಲಿ

ಕೂಡಲ ಚೆನ್ನಸಂಗಯ್ಯ ಸರ್ವ ನಿವಾಸಿಯಾದೆ.

ತಾತ್ಪರ್ಯ : ಅರುಹಿಂದಲಾದ ಮರಹಿನ ಶಬ್ದವ ನರಿಯಲಾಗದು : ಅರುಹಿಂದ ಲಾದುದು ಆವುದು ? ಮರಹಿನ ಶಬ್ಧ ವಾವುದು ? ಸಕಲವು ಅರುಹಿಂದ ಲಾದುದು . ಅರುವೆ ಲಿಂಗದಿಂದುಯವಾದುದು ಲಿಂಗವೆ ಸ್ಥಾವರ , ಜಂಗಮ ಜಗವು ಅರುಹಿಂದ ಲಾದುದು . ಪ್ರವೃತ್ತಿ ನಿವೃತ್ತಿ ಅರುಹಿಂದ ಲಾದುದು , ಪ್ರಪಂಚ ಪರಮಾರ್ಥ ಅರುಹಿಂದ ಲಾದುದು . ಗುರು , ಲಿಂಗ, ಜಂಗಮ , ಅರುಹಿಂದ ಲಾದುದು , ಸ್ಥಾವರ ಜಂಗಮ ಜಗವು ಅರುಹಿಂದ ಲಾದುದು . ಅರುವೆ ನೆಲಿಸಿ ಸ್ಥಾವರವಾಗಿದೆ, ಅರುವೆ ಚರಿಸಿ ಜಂಗಮವಾಗಿದೆ. ಅರುವೆ ತೋರಿ ಜಗವೆನಿಸಿದೆ, ಅರುವೆ ತನ್ನಲೀಲೆಯಿಂದ ಪ್ರವೃತ್ತಿ ನಿವೃತ್ತಿಯಾಗಿದೆ. ಬಂಗಾರವೆ ನಾನಾ ಆಭರಣ ವಾಗಿ ಪ್ರವೃತ್ತವಾಗಿದೆ, ಬಂಗಾರ ವದು ಬಂಗಾರ ವಾಗಿರುವದರಿಂದ ನಿವೃತ್ತವಾಗಿದೆ, ಅರುವು ತೋರದಡಗದ ಘನವಾಗಿದ್ದರೂ ನಾಮ ರೂಪವಾದಂತಾಗಿ ತೋರುವದರಿಂದ ಪ್ರಪಂಚ ವೆನಿಸಿದೆ . ತೋರಿದರೂ ತಾನು ತೋರ ದಡಗದ ಘನ ವಾಗಿಹುದೆ ಪರಮಾರ್ಥವಾಗಿದೆ .

ಅರಿವೆ ಗುರು ಅರಿವೆ ಲಿಂಗ, ಅರುವೆ ಜಂಗಮವಾಗಿಹುದು , ಅರುವಿನ ಇರುವ ತಿಳಿಸಿ ಅರುವೆ ಗುರುವೆನಿಸಿದೆ , ಅರುವೆ ಗುರು ಅರುವೆ ಲಿಂಗ , ಅರುವೆ ಜಂಗಮವಾಗಿಹುದು ಅರುವಿನ ಇರುವ ತಿಳಿಸಿ ಅರುವೆ ಗುರುವೆನಿಸಿದೆ. ಅರುವೆ ಅರುವಿಂಗರುವಾಗಿ ನೆಲೆಸಿ ಲಿಂಗವೆನಿಸಿದೆ. ಅರಿಯ ಬಾರದ ಘನವರಿತು ಅರುವೆ ಚರಿಸಿ ಜಂಗಮವೆನಿಸಿದೆ. ಮರಹಿನ ಶಬ್ಧವಾವುದು ? ಅರುವ ಅರಿಯದೆ ಕಥನ ಮಾಡಿದುದೆಲ್ಲವು ಮರಹಿನ ಶಬ್ಧ ಆನು ಅರಿದೆ ಮರದೆ ಅಳಿದೆ ಉಳಿದೆ ಸ್ಥೂಲ ಸೂಕ್ಷ್ಮ ಅಂತರ್ಮುಖ ಬಹಿರ್ಮುಖ ವೆನ್ನುವುದು, ತತ್ವ ಅತತ್ವ ವೆನ್ನುವುದು, ಪುಣ್ಯ ,ಪಾಪ ,ಸ್ವರ್ಗ, ನರಕ, ಬಂಧ ,ಮೋಕ್ಷವೆಂಬುದು ಪರಮ ರೈಕ್ಯ ಯೋಗ ವಿಯೋಗ ನಿತ್ಯ ಅನಿತ್ಯ ವೆನ್ನುವುದು, ನಾಹಂ ಕೋಹಂ ಸೋಹಂ ಚಿದಹಂ ಎನ್ನುವರು . ಮರಹಿಂದಲಾದ ಶಬ್ಧ, ಈ ಶಬ್ಧ ಅರುಹಿಂದಲಾದ ಸ್ಥಾವರ ಜಂಗಮ ಜಗವ ಅರಿಯುವದದೆಂತು ? ಅದರ ಪ್ರವೃತ್ತಿಯಾಗಲು ನಿವೃತ್ತಿಯಾಗಲು ಮರವೇನು ಬಲ್ಲದು? ಗುರು , ಲಿಂಗ , ಜಂಗಮ , ಅರು ಹಿಂದಲಾದುದು. ಮರವಿನಿಂದುಕ್ತವಾದ ಬೋಧ ಬೋಧಕತ್ವ ಅರುವಿನ ಘನವೇನು ಬಲ್ಲದು. ಪೂಜ್ಯ ಪೂಜಕ ದೃಷ್ಟಿ ಮರುಹಿಂದಲಾದುದು , ಅನುಪಮ ಲಿಂಗದ ಘನವೇನು ಬಲ್ಲದು ? ಭಾವಕ್ಕಗಮ್ಯ ವಾಗಿಹ ಜಂಗಮ ಘನ ಲಿಂಗ ಒಂದಾಗಿರ್ದ ಜಂಗಮ , ಅಲ್ಲಿ ಜಾತಿ ಅರಸುವುದು ಮರಹಿಂದಲಾದ ಶಬ್ಧ ನಿಶಬ್ಧವೇದಿಯ ಘನವ ಅದೇನು ಬಲ್ಲದು ?

ಆನು ಅರಿದೆ ಮರದೆ ನೆನ್ನುವ ಮರಹಿನ ಶಬ್ಧ ಅರುವ ಅರಿಯಲಾಗದು , ಮರವಿನಿಂದ ಅರಿದೆ ಮರದೆ ನೆನ್ನುವದಾಗಿದೆ . ಈ ಮರವಿನ ಅರುವಿನಿಂದ ಅರುವ ಅರಿಯುವದೆಂತು ? ಅರಿವುದು ಅರಿಯ ಬಾರದ ಘನ , ಘನಕ್ಕೆ ಘನ ವಾಙ್ಮನೋತೀತ ನಿಸ್ಸೀಮ , ಅಖಂಡಿತ ಘನ ಪೂರ್ಣವಪ್ಪ ಪರಾ ತ್ಪರ ಅರಿವು ತಾನೆ , ತಾನೆ ತನ್ನ ಅರಿಯಲು ತನಗಿಂತ ಭಿನ್ನನೆಂದು ಅರಿವುದೆ ? ತಾನು ತನಗೆ ಅಭಿನ್ನನೆಂದು ಅರಿವುದೆ ? ತಾನು ದೃಶ್ಯ ನೆಂದು ತನ್ನ ಅರಿವುದೆ, ತಾನು ದೃಕ್ ಎಂದು ಅರಿವುದೆ ? ತಾನು ಅರಿದರುಹಿಸಿ ಕೊಂಬುದಕ್ಕೂ ಮೀರಿದ ಘನವಾಗಿರುವಲ್ಲಿ , ತನ್ನನ್ನು ದೃಶ್ಯನೆಂದು ಹೇಗೆ ತಿಳಿಯುವುದು ? ದೃಕ್ ಎಂದು ಹೇಗೆ ತಿಳಿಯುವುದು ? ತಾನೆ ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವಾಗಿರುವಲ್ಲಿ, ತಾನು ತನಗಿಂತ ಭಿನ್ನನೆಂಬುದು ಹಾಸ್ಯಾಸ್ಪದ .ಇದು ಕಾರಣ ಆನು ಅರಿದೆ ಮರದೆನೆನ್ನುವ ಮರಹಿನ ಶಬ್ಧ ಇದು ಏನೆಂದೆನಲಿಲ್ಲದ ಅರುವ ಅರಿಯಲಾಗದು .

ಅಳಿದೆ ಉಳಿದೆ ನೆನ್ನುವುದು ಮರಹಿನ ಶಬ್ಧ ದೇಹವೆ ಅಳಿದುದಾಗಿ ಉಳಿದುದಾಗಿ ಕಾಣಿಸುವದು

ಸ್ಥೂಲ ಸೂಕ್ಷ್ಮ ವೆಂಬುದು ತನುಭಾವ ಇದು ಮರಹಿ ನಿಂದಾದ ಶಬ್ಧ. ಅಂತರ್ಮುಖ ಬಹಿರ್ಮುಖವೆಂಬುದು ಮನದ ಮುಖ. ಮನವು ಅರುವಿನ ಅನುಸಂಧಾನದಲ್ಲಿರಲು ಅಂತರ್ಮುಖ ಅದು ವಿಷಯಾಕಾರವಾಗಲು ಬಹಿರ್ಮುಖ. ತತ್ವ ಅತತ್ವ ವೆಂಬ ವಿಭಾಗ ದೃಷ್ಟಿ ನಿಸ್ಸೀಮವಾದ ತೆರಹಿಲ್ಲದ ಘನದಲ್ಲಿ ಪುಣ್ಯವಾವುದು ಪಾಪ ವಾವುದು ? ತತ್ವವಾವುದು ? ಅ ತತ್ವವಾವುದು ? ಸ್ವರ್ಗ ನರಕ, ಬಂಧ ಮೋಕ್ಷ ಇವು ಮರಹಿನಿಂದಾದ ಶಬ್ಧ, ನಿಶಬ್ಧ ಬ್ರಹ್ಮವ ಅರಿಯಬಹುದೆ ? ಜೀವ ಪರಮ ರೈಕ್ಯ ವೆಂಬುದು ಮರಹಿನ ಶಬ್ಧ ಅಖಂಡಿತ ಘನ ಪೂರ್ಣವಪ್ಪ ಪರಾನಂದ ಪರಂಜ್ಯೋತಿಯಲ್ಲಿ ಜೀವವಾವುದು , ಪರಮವಾವುದು ? ಇವೆರಡು ಶಬ್ಧ ಸಂದಣಿಗೆ ಇಂಬಿಲ್ಲದಿರುವಾಗ ಇವೆರಡರ ಸಮರಸ ವೆಂಬುದು ಮರಹಿನಿಂದಾದ ಶಬ್ಧ ಕೂಡಿದುದು ಆವುದು ಅಗಲಿದುದು ಆವುದು? ಕೂಡ ದಗಲದ ಘನದಲ್ಲಿ ಯೋಗ ವಿಯೋಗವೆಂಬಿವು ಮರಹಿ ನಿಂದಾದವು. ಇದು ಅರಿಯಬಾರದು, ನಿತ್ಯ ಅನಿತ್ಯ ವೆನ್ನುವುದು ಮರವಿನ ಶಬ್ಧ ಏನೆಂದೆನಲಿಲ್ಲದ ಅರುವು ಅದರಲ್ಲಿ ನಿತ್ಯವಾವುದು ಅನಿತ್ಯ ವಾವುದು? ಕೋಹಂ ಆವುದು ನಾಹಂ ಆವುದು ಸೋಹಂ ಆವುದು ಚಿದಹಮು ಆವುದು ? ಖಂಡಾ ಖಂಡ ಸಂಯೋಗವಿಲ್ಲದ ಅಖಂಡಿತ ಘನದಲ್ಲಿ ಖಂಡಿತಕ್ಕೆ ಸಂದುಂಟೆ? ಚಿದಾಕಾಶ ದೋಳ್ ಸೋಹಂ ಆವುದು, ಚಿದಹಮು ಆವುದು ? ಇದು ಕಾರಣ ಮರಹಿಂದಾದ ಶಬ್ಧ, ಅರುಹಿಂದಲಾದ ಘನವ ಅದೇನುಬಲ್ಲದು, ಅರಿದಡೆ ಅದಕ್ಕದೆ ಭಂಗ ಅರಿಯ ಬಾರದ ಘನವ ಅರಿದೆ ನೆನ್ನುವ ಅರುವಿಂಗೆ ಅದೆ ಭಂಗ. ಅರಿತೆ ನೆಂದಲ್ಲಿಯು ಅರಿಯದಂತಿದ್ದ ಅರಿಯದರವು, ಅರಿಯೆ ನೆಂದಲ್ಲಿಯು ಅರಿಯದಂತಿದ್ದ ಅರಿಯದರಿವು ಅದನ್ನು ಅರಿದ ಪರಿ ಎಂತು, ಇದು ಕಾರಣ ಅರಿದಡೆ ಅದಕ್ಕದೆ ಭಂಗ ವೆಂದಿಹರು.

ಅರು ವರಿತು ಮರವು ನಷ್ಟವಾಗಿ ಜ್ಞಾನ ಬೆಂದಲ್ಲಿ ನಿರ್ಣಯ ವಿಲ್ಲವಯ್ಯ : ಅರುವರಿತು , ಇದಾವ ಅರುವು , ಅರು ವೆಂಬುದು ನುಡಿಯುಂದುಕ್ತ ವಾದುದು . ಇದು ತನ್ನಿಂದ ತಿಳಿಸಿ ಕೊಳ್ಳುವ ಅರುವು . ಇದನ್ನು ಯತಾರ್ಥ ತಿಳಿಯದ ವಿನಃ ಮರಹು ನಷ್ಟ ವಾಗದು , ನುಡಿಯಿಂದುಕ್ತ ವಾದ ಮರವು ಆಗಲಿ, ಅಜ್ಞಾನ ವಾಗಲಿ, ಅರುವಾಗಲಿ ನಾಮ ರೂಪುಳ್ಳ ಜಗವಾಗಲಿ, ಪಿಂಡಾಂಡವಾಗಲಿ, ಪರಮಾರ್ಥ ತತ್ವ ವಿಚಾರ ವಾಗಲಿ, ತಾನೆ ಅರಿಯುವವ ನಲ್ಲದೆ , ತನ್ನನ್ನು ಇವಾವು ಅರಿಯವು. ತಾನೆಂಬುದು ನುಡಿಗೆಡೆಗೊಡದ ಘನ , ನುಡಿಯಿಂದುಕ್ತವಾದ ಅರುವು ಹೇಗಾಗುವುನು ? ಅರುವೆಂಬುದನ್ನು ಅರಿಯುವ ಅರುವಿನ ಅರುವು, ಅರಿಯದರುವು ಇದು ತನ್ನಿರವು ಎಂಬುದು ತನ್ನಿಂದ ತನಗೆ ತಿಳಿದಾಗ ಅರುವ ಅರಿತಂತೆ ಆಗಿ ಮರಹು ತನ್ನೊಳ ತಪ್ಪಾಗಿ ತಿಳಿಯಲು ಸಂದುಟೆ ? ಇಲ್ಲದ ಮರಹು ಇಲ್ಲವಾದುದು ಮರಹು ನಷ್ಟ ವಾದಂತೆ, ಜ್ಞಾನ ಬೆಂದಲ್ಲಿ ನಿರ್ಣಯವಿಲ್ಲ ವಯ್ಯಾ ತಾನು ಅರಿಸಿ ಕೊಳ್ಳುವ ಅನಾತ್ಮ ವಾಗಿಲ್ಲ ಅರಿಯುವ ದೃಕ್ ಆಗಿಲ್ಲ ಆಗ ನಾಮ ರೂಪಕ್ಕೂ ಮುಖ್ಯತೆ ಕೊಟ್ಟಿಲ್ಲ ದೃಕ್ ರೂಪ ಆತ್ಮ ನೆಂಬುದಕ್ಕೂ ಮುಖ್ಯತ್ವವಿಲ್ಲ , ಇದಲ್ಲದೆ ತಾನು ಅಖಂಡಿತ ಪರಿಪೂರ್ಣ ಪರಮಾನಂದ ವೆಂಬ ಜ್ಞಾನವು ತನ್ನಿಂದ ತಿಳಿಸಿ ಕೊಳ್ಳುವದೆಂಬ ತನ್ನರಿವು ತನವು ಪ್ರಜ್ವಲಿಸುವಲ್ಲಿ, ಶಬ್ಧ ಸಂದಣಿಗೆ ಇಂಬಿಲ್ಲವಾಗಿ ಏನೆಂದೆನಲಿಲ್ಲದ ಅರುವಿನ ಇರುವಿನಲ್ಲಿ ನಿಂತುದೆ , ಜ್ಞಾನ ಬೆಂದು ನಿರ್ಣಯವಿಲ್ಲ ದಂತಾಯಿತ್ತು .

ಜ್ಞಾನದೊಳಗಣ ಬುದ್ಧಿಯ ಭಸ್ಮವಾಗಿ ಧರಿಸಿದಲ್ಲಿ ಕೂಡಲಚೆನ್ನಸಂಗಯ್ಯ ಸರ್ವ ನಿವಾಸಿಯಾದೆ: ಜ್ಞಾನದೊಳಗಣ ಬುದ್ಧಿ ಆವುದು ಅದು ಭಸ್ಮ ವಾದುದು ಹೇಗೆ ? ಸಕಲವು ಅರುಹಿಂದ ಲಾದುದು ಎಂಬುದು ಜ್ಞಾನ (ದೊಳಗಣ ಬುದ್ಧಿ) ಇದು ಅಖಂಡಿತ ಘನ ಪರಿಪೂರ್ಣ ಪರಬ್ರಹ್ಮ ತಾನೆಂಬುದು ಜ್ಞಾನದೊಳಗಣ ಬುದ್ಧಿ, ಇದನ್ನು ಅರಿದರಿದು ನೋಡುವುಡೆ ತನ್ನೊಳ ಗಿದು ನಷ್ಟವಾಗಿ

ಕಥನಕ್ಕೆ ಇಂಬಿಲ್ಲದಂತಾದುದು , ಜ್ಞಾನ ದೊಳಗಣ ಬುದ್ಧಿಯ ಭಸ್ಮವಾಗಿ ಧರಿಸಿದುದು . ಕೂಡಲ ಚೆನ್ನಸಂಗಯ್ಯ ಸರ್ವ ನಿವಾಸಿಯಾದ ; ಕೂಡಲ ಚೆನ್ನ ಸಂಗಯ್ಯನದು ಶಬ್ದ ಮುಗ್ಧವಾದ ನಿಲವು ಉಪಮಿಸದ ನಿಲವು, ಎಲ್ಲೆಲ್ಲೂ ತಾನೆ, ಉಪಮಿಸದ ನಿಲವು ಸರ್ವ ನಿವಾಸ, ಕೂಡಲ ಚೆನ್ನಸಂಗಯ್ಯ ನಿವಾಸ , ಸರ್ವನಿವಾಸ ವಾಗಿರುವುದರಿಂದ ಅಲ್ಲಿ ಅನ್ಯ ಆವಾವುದಕ್ಕೂ ಇಂಬುಗೊಡದವಾಸ , ಅಲ್ಲಿ ನಾನೀನೆಂಬುದಕ್ಕೆಡೆಗೊಡದ ತೆರಹಿಲ್ಲದ ಘನದ ವಾಸ, ಸರ್ವ ನಿವಾಸ.

25

ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವ ಕೂಡಿ ,
ಅಚಲಾನಂದ ದೊಳಿಪ್ಪ ಪರಮ ನಿರ್ಲೇಪಿಗೆ ,
ಭಾವ ವಿಲ್ಲವಾಗಿ ಜ್ಞಾನವಿಲ್ಲ. ಜ್ಞಾನವಿಲ್ಲವಾಗಿ ,
ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು .

ತಾತ್ಪರ್ಯ : ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವ ಕೂಡಿ ಅಚಲಾನಂದ ದೊಳಿಪ್ಪ ಪರಮ ನಿರ್ಲೇಪಿಗೆ ಭಾವವಿಲ್ಲ : ಭಾವಕ್ಕಗಮ್ಯವಾದ ಲಿಂಗವ ಕೂಡಿದವಂಗೆ ಭಾವ ವೇತರದು ? ಭಾವಕ್ಕ ಗಮ್ಯವಾದ ಲಿಂಗವಾವುದು ? ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವೆ ಭಾವಕ್ಕಗಮ್ಮವಾಗಿಹ ಲಿಂಗ, ಇದು ಅರುವ ಅರಿಯ ಹೇಳಿದ ಸದ್ಗುರುನಾಥ ಕರುಣಿಸಿದ ಮೌನ ಮುದ್ರಿತ ಲಿಂಗ. ವಾಙ್ಮನಕ್ಕೆ ನಿಲುಕದ ಲಿಂಗ, ಸಕಲರ ಹೃದಯದೊಳ ನ್ಯಸ್ತ ವಾಗಿಹ ಲಿಂಗ .ಇದು ಒಳ ಹೊರಗೆನ್ನದೆ ಬೆಳಗುವ ಚಿಜ್ಯೋತಿ ಲಿಂಗ . ಲಿಂಗ ಲಿಂಗ ಎನ್ನುವವರ ಲಿಂಗವಲ್ಲ . ಚಿಜ್ಯೋತಿ ಚಿಜ್ಯೋತಿ ಎನ್ನುವವರ ಲಿಂಗವಲ್ಲ , ನೆನೆಯುವವರ, ಚಿಂತಿಸುವವರ, ಭಾವಿಸುವವರ ಲಿಂಗವೂ ಅಲ್ಲ, ಅರುವ ಅರಿಯ ಹೋಗಿ ಅದವೆ ಆಗಿಹ ಮೌನ ಮುದ್ರಿತ ವಾದವರ ಲಿಂಗ . ಲಿಂಗ , ಲಿಂಗ ಎನ್ನದವರ ಲಿಂಗ , ನೆನಹು ನಿರ್ಣಯಕ್ಕೆ ಮೀರಿ ಘನದಿರುವಿನ ಅರುವಾಗಿಹರ ಲಿಂಗ, ಇದು ಅಪ್ರತಿಮ ಲಿಂಗವಾದ್ದರಿಂದ ಇದರ ಸಮಾನವಾದುದು ಮತ್ತೊಂದು ಲಿಂಗವಿಲ್ಲ . ಇದು ಉಪಮಾನ ಉಪಮೇಯಕ್ಕೂ ಮೀರಿರುವದರಿಂದ ಅನುಪಮ ಲಿಂಗ , ಚಿಂತನಕ್ಕೆಡೆಗೊಡದ್ದರಿಂದ ಅಚಿಂತ್ಯ ಲಿಂಗವಾದುದರಿಂದ ಅಪ್ರತಿಮ ಲಿಂಗವೆಂದು ಹೇಳಿಹರು .

ಅಪ್ರತಿಮ ಲಿಂಗವ ಕೂಡಿದುದು ಹೇಗೆ ? ಲಿಂಗವು ವಾಙ್ಮನಕ್ಕೆ ಬಾರದ ಅಪ್ರತಿಮ ತಾನು ವಾಙ್ಮನದಿಂದುಕ್ತವಾದ ಪ್ರತಿಮೆ , ಅಪ್ರತಿಮೆ , ಪ್ರತಿಮೆ ಒಂದಾದುದು ಹೇಗೆ? ಪ್ರತಿಮೆ ವರ್ಣನೆಯಿಂ ದುಕ್ತವಾದುದು, ಅಪ್ರತಿಮೆಯು ವರ್ಣಾತೀತವು . ಪ್ರತಿಮೆ , ಕಲ್ಪಿತವು ಅಪ್ರತಿಮ ಕಲ್ಪನಾತೀತವು. ಇದು ಕಾರಣ ಗುರು ತೋರಿಸಿದ ಅನುವು ಅರುವ ಅರಿಯ ಹೇಳಿದ ಅನುವು ಈ ಅನುವಿನಿಂದ ನೋಡುವುಡೆ ಲಿಂಗವು ಹೇಗೆ ವಾಙ್ಮನಕ್ಕೆ ಬಾರದ ಅಪ್ರತಿಮವಾಗಿದೆ ಹಾಗೆ ಅರುವ ಅರಿಯ ಹೋಗುವುಡೆ , ತಾನು ವಾಙ್ಮನಕ್ಕೆ ಬಾರದ ಅಪ್ರತಿಮ ವೆಂಬುದು ಸಹಜ ಸಿದ್ಧವಾಗುವುದು . ಲಿಂಗದರಿವು ತನ್ನರಿವು ಒಂದಾದುದೆ ಲಿಂಗವ ಕೂಡಿದಂತೆ .

ಲಿಂಗವು ಏನೊಂದೆನಲಿಲ್ಲದ ಅರುವು ತಾನು ಏನೊಂದೆನಲಿಲ್ಲದ ಅರವು , ಇದು ಅರುವಿಂಗರು ವಾಗಿಹ ಘನವು . ಇದರ ಘನವು ವಾಙ್ಮನಕ್ಕೆ ಬಾರದ ಅಪ್ರತಿಮವಾಗಿದೆ . ತನ್ನರಿವು ವಾಙ್ಮನಕ್ಕೆ ನಿಲುಕದ ಘನವಾಗಿಹುದು , ಲಿಂಗವೆ ತನ್ನಿರುವು , ತನ್ನಿರುವೆ ಲಿಂಗದಿರುವು ಆಗಿರುವುದೆ ಲಿಂಗವ ಕೂಡಿ ಎಂದು ಹೇಳಿದ್ದಾರೆ.

ಅಚಲಾನಂದದೊಳಿಪ್ಪ ಪರಮ ನಿರ್ಲೇಪಿಯ ಲಿಂಗವ ಕೂಡಿದ ಆನಂದ ಇದು ಬರ ಹೋಗುವ ಆನಂದವಲ್ಲ. ವೃತ್ತಿಯಿಂದುಕ್ತವಾದ ಆನಂದ ಬರ ಹೋಗುವ ಆನಂದ, ವೃತ್ತಿ ರಹಿತವಾದ ಆನಂದ ಅಚಲಾನಂದ. ಇದು ತನ್ನ ಆನಂದ ನಿಜಾನಂದ, ನೆನಹಿನಿಂದುಕ್ತವಾದ ಆನಂದ. ಅದು ಅಚಲಾನಂದವಾಗದು, ಭಾವದಿಂದುಕ್ತವಾದ ಅಚಲಾನಂದವಾಗದು, ಕಲ್ಪಿತ ಪುರುಷನ ಆನಂದ ವೃತ್ತಿಯಿಂದುಕ್ತವಾದ ಆನಂದ, ಅದು ಅಚಲಾನಂದವಾಗದು, ಅರಿಯದರುವಿನ ಆನಂದ ಅದು ಅಚಲಾನಂದ ಲಿಂಗವೆಂಬುದು ಅರಿಯುವ ಅರುವಲ್ಲ ಅರಿಯದರವು. ಇದು ಕಾರಣ ವಾಙ್ಮನೋತೀತವು ಅರಿಯದರುವುಳ್ಳ ಆನಂದ. ಅಚಲಾನಂದ ,ತನ್ನ ಆನಂದ . ಈ ನಿಜಾನಂದ ದೊಳಿಪ್ಪ ಘನ ಮಹಿಮನು ಪರಮ ನಿರ್ಲೇಪಿಯು. ನಡೆ ನುಡಿಗೂ ಮೀರಿದ ಘನ ನೆಂಬುದಕ್ಕೂ ಮೀರಿದ ನುಡಿಗೆಡೆಗೊಡದ ಘನ ನಾಗಿರುವದರಿಂದ ಪರಮ ನಿರ್ಲೇಪಿಯು ಎಂದು ಹೇಳಿಹರು.

ನೆನಹಿಂಗೂ ಚಿಂತನಕ್ಕೂ ಭಾವಕ್ಕೂ ಅವಕಾಶ ಕೊಡದವನಾದುದರಿಂದ ಪರಮ ನಿರ್ಲೇಪಿಯು, ಪರಮ ನಿರ್ಲೇಪಿಗೆ ಭಾವವಿಲ್ಲ ಭಾವಾತೀತಂಗೆ ಭಾವವೇತರದು ? ಜೀವ ನೆಂಬುದಿಲ್ಲ ಅಂತರಾತ್ಮನೆಂಬುದಿಲ್ಲ ಪರಮಾತ್ಮನೆಂಬುದಿಲ್ಲ ಆವಾವ ಭಾವಕ್ಕಿಂಬು ಕೊಡದ ನಿರ್ಭಾವಿ ಯಾದುದುರಿಂದ ಜ್ಞಾನವಿಲ್ಲ, ಕಲ್ಪನಾತೀತಂಗೆ ಜ್ಞಾನವಾವುದು ಅಜ್ಞಾನವಾವುದು ? ಕಲ್ಪಿತ ಪುರುಷಂಗೆ ಜ್ಞಾನವುಂಟು ಅಜ್ಞಾನವುಂಟು. ಅಕಲ್ಪಿತ ಘನನಿಗೆ ಜ್ಞಾನವಾವುದು ? ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ, ಇಲ್ಲ, ನಿಲ್ಲು, ಮಾಣು. ಪರತತ್ವ ನಿಜ ಸಂಯುಕ್ತರಿಗೆ ಚಿಕ್ಕಯ್ಯ ಪ್ರಿಯ ಸಿದ್ಧ ಲಿಂಗ ಇಲ್ಲ, ಇಲ್ಲವೆಂಬುದೆ ಇಲ್ಲ ವಾಗಿರುವಾಗ ಶಬ್ಧ ಮುಗ್ಧನಾದುದೆ ಸರಿಯಾದುದು.

26

ಉಂಡಡೇನೊ ? ಉಣದಿರ್ದಡೇನೊ ?
ಸೋಂಕಿತ ವೇನೊ ? ಅಸೋಂಕಿತ ವೇನೊ?
ಹುಟ್ಟುದಿಲ್ಲಾಗಿ ಹೊಂದಲಿಲ್ಲ,
ಸತ್ತು ಬದುಕಿ ನಿಶ್ಚಿಂತ ವಾಯಿತ್ತು ಗುಹೇಶ್ವರಾ. ॥ 575 ॥

ತಾತ್ಪರ್ಯ : ಸತ್ತು ಬದುಕಿ ನಿಶ್ಚಿಂತ ವಾಯಿತು : ನಿಶ್ಚಿಂತರು ಯಾರು ? ಸತ್ತು ಬದುಕಿದವರು. ಆರಿಗೆ ಸತ್ತು ಬದುಕಿರಲು ಬಂದಿದೆ, ಬದುಕಿ ಆರು ಸತ್ತಿಹರು ಅವರಿಗೆ ಅಮರತ್ವವು ನಿಶ್ಚಿಯವಾಗಿದೆ, ನಿಶ್ಚಿಂತನಾಗಬೇಕಾದರೆ ಅಚಿಂತ್ಯ ಪದ ಕರಗತವಾಗಬೇಕು, ಅದು ಕರಿಗೊಳ್ಳಬೇಕಾದರೆ ತಾನು ಚಿಂತನಕ್ಕೆ ಡೆಗೊಡದವನೆಂಬುದು ತನ್ನರಿವು ತನಗೆ ಅಳವಡಬೇಕು. ಆಗ ತಾನು ಅಂಗನೆಂಬ ಚಿಂತನವು ನಷ್ಟವಾಗು ವುದು, ಲಿಂಗನೆಂಬುದು ಕೆಡುವುದು, ಎರಡು ನಷ್ಟ ವಾದುದರಿಂದ ತಾನು ಸಹಜ, ಅಜ, ಅಚಿಂತ್ಯಾತ್ಮನು, ಅಕ್ರಿಯನು ನಿರವಯನು, ಪೂರ್ಣಾನಂದಮಯನು, ಪರತತ್ವವರಿತ ಪರಂಜ್ಯೋತಿ, ಸ್ವಯಂ ಜ್ಯೋತಿ ಯಾದುದರಿಂದ ಸತ್ತು ಬದುಕಿದ ನಿಶ್ಚಿಂತ.

ಸತ್ತುದು ಏನು ಬದುಕಿದುದು ಏನು ? ಇಲ್ಲದುದು ಇಲ್ಲಾಗಿದೆ. ಇದ್ದುದು ನಿರಂತರ ಸ್ವತಃ ಸಿದ್ದವಾಗಿದೆ. ಇಲ್ಲದ ತೋರಿಕೆ ಪಿಂಡಾಂಡ ಬ್ರಹ್ಮಾಂಡಗಳ ತೋರಿಕೆ, ಸ್ಥಾವರ ಜಂಗಮ ಜಗತ್ತಿನ ತೋರಿಕೆ, ದೃಷ್ಟಿಯ ತೋರಿಕೆ ಹಾಗೂ ಪರಮಾರ್ಥದಲ್ಲಿ ತೋರುವ ತತ್ವ ಅತತ್ವವೆಂಬ ವಿಭಾಗ ದೃಷ್ಠಿಯ ತೋರಿಕೆ ಇಲ್ಲವಾಗಿದೆ. ಇಲ್ಲಾದು ದಿಲ್ಲಾದುದು ಇಲ್ಲವಾಗಿರುವದರಿಂದ ಮಹಾಂತರ ದಿವ್ಯ ದೃಷ್ಟಿಗೆ ಅಂಗ ಭಾವವು ಸತ್ತು ಹೋಗಿದೆ. ಲಿಂಗ ಭಾವವು ಸತ್ತು ಹೋಗಿದೆ. ಇವುಗಳ ಅಭಿಮಾನವು ಕರಗಿ ಹೋಗಿದೆ

. ಇವುಗಳ ನೆನಹು ನಿರ್ಣಯ ಕೆಟ್ಟು ಹೋಗಿದೆ. ಕುರುಹು ಕೂನವು ಕೆಟ್ಟು ಹೋದುದರಿಂದ ಸತ್ತು ಹೋಗಿದೆ ಎಂದು ಹೇಳಿದ್ದಾರೆ.

ಹುಟ್ಟುದಿಲ್ಲ ಹೊಂದುದಿಲ್ಲ ಸತ್ತು ಬದುಕಿದ ನಿಶ್ಚಿಂತ : ಕಲ್ಪನಾತೀತ , ಭಾವಾತೀತ , ಅತೀತ ಪದವೆಂಬುದು ಅವರ್ಣಿೀಯ ಪದ , ಭಾವ ನಷ್ಟವಾಗಿ ನಿರ್ಭಾವಿಯಾಗಿಹ ನಿಷ್ಪತ್ತಿ ನಿರಾಳ. ಇದು ಕಾರಣ ಹುಟ್ಟುದಿಲ್ಲ ಹೊಂದುದಿಲ್ಲ ಶಾಂತಾತ್ಮನು , ಸಯ ಸುಖಿಯು , ಅಲ್ಲಿ ಅಂಗ ನೆಂಬುದಕ್ಕಿಂಬಿಲ್ಲ ಏನೊಂದಾಗದ ಘನಮಹಿಮ ನಿಭ್ರಾಂತನು ಹುಟ್ಟುವದದೆಂತು, ಹೊಂದುವದದೆಂತು ? ಭ್ರಮಿತನು ಬಯಕೆಯಿಂದುಕ್ತನು. ಬಯಕೆ ಇದ್ದಲ್ಲಿ ಕಾಮಾದಿಗಳುಂಟು ವಾಸನೆಯುಂಟು ಮತಿ ಉಂಟು ಗತಿ ಉಂಟು . ಮತಿ ಗತಿ ಕಾಣದ ಅತಿ ಕಾಮಿಗೆ ಸ್ವಸುಖದ ರತಿಯೆ ರತಿ , ಅಲ್ಲಿ ಒಡಲೆಲ್ಲಿ? ಒಡಲಿಲ್ಲದವಂಗೆ ಬಯಕೆ ಇಲ್ಲ , ಬಾಯಾರಿಕೆ ಇಲ್ಲವಾದ್ದರಿಂದ ಹುಟ್ಟುದಿಲ್ಲಾಗಿ ಹೊಂದಲಿಲ್ಲ. ಇದು ಕಾರಣ ಸ್ವಸುಖದ ಸುಖಿಯು ಅಲ್ಲಿ ಅಹಂ ಮಮನಷ್ಟವಾಗಿರುವುದರಿಂದ ಸತ್ತಿದ್ದಾನೆ . ತನ್ನ ನಿರಂತರವಾಗಿಹ ಮಂಗಲಮಯ ಪದದಲ್ಲಿ ಎಚ್ಚೆತ್ತು ಅದುವೆ ತಾನಾದುದರಿಂದ ಬದುಕಿದ್ದಾನೆ ಎಂದು ಹೇಳಿದ್ದಾರೆ.

ಉಂಡಡೇನೊ ? ಉಣದಿರ್ದಡೇನೊ ? ನಿರುಪಾದಿ ನಿರ್ವಿಕಾರಿ ಒಡಲಿಲ್ಲದ ಮಹಾಂತ ಕುರುಹು ಕೂನವ ಕಾಣದ ಮಹಾಂತ . ಉಂಡವ ತಾನಲ್ಲ ಉಣದಿರ್ದಡೂ ತಾನಲ್ಲ ಭೋಗವ ಬೋಗಿಸಿದ ವ ತಾನಲ್ಲ ತ್ಯಾಗ ಮಾಡಿದ ತ್ಯಾಗಿ ತಾನಲ್ಲ ಉಂಡುದು ಅಗ್ನಿ ಉಣದಿರ್ದುದು ಅಗ್ನಿ ಅಗ್ನಿಯೆ ಉಂಡಿತ್ತು . ಅಗ್ನಿಯೆ ಉಣದಂತಿದ್ದಿತ್ತು , ತತ್ವವರಿತ ತತ್ತ್ವವೇತ್ತ ನಿರುಪಾಧಿ ನಿಸ್ಸಂಗಿ ನಿಜೈಕ್ಯ ನಿಜವರಿತ ನಿಜೈಕ್ಯನ ದಿವ್ಯದೃಷ್ಟಿಗೆ ಅಳಿದುದು ಉಳಿದುದು ದೇಹ ಅನಾತ್ಮ ಇದು ಭ್ರಮಾತ್ಮ ದೃಷ್ಠಿ .

ನಿರುಪಾದಿಗೆ ಅದಾವ ಉಪಾದಿ ? ಇಲ್ಲದ ಉಪಾಧಿಯು ಇಲ್ಲ, ಇಲ್ಲದ ತಾದಾತ್ಮ್ಯತ್ವವಿಲ್ಲ ನಿಸ್ಸಂಗಿಗೆ ಅದಾವ ಸಂಗದೋಷ , ಸಂಗ ಭ್ರಾಂತಿ ? ಅಗ್ನಿ ಅದು ಉಂಡರೇನು , ಉಣದಿರ್ದಡೇನು ತಾನಾಗಬಲ್ಲನೆ ?

ಸೋಂಕಿತ ವೇನೊ ಅಸೋಂಕಿತ ವೇನೊ : ಗಗನಕ್ಕೆ ಅದಾವ ಘಟ ಮಠಗಳ ಸೋಂಕಿತ ಅಸೋಂಕಿತ ಬಯಲು , ಬಯಲೆ ಚಿತ್ ಸ್ವರೂಪನರಿತ ಮಹಾಂತ ಚಿದಾಕಾಶ ತಾನೆ . ಚಿತ್ ಎನಲಿಲ್ಲ ಚಿದಾಕಾಶ ಎನಲಿಲ್ಲ, ಶಬ್ಧ ಮುಗ್ಧ ನಿಶಬ್ಧವೇದಿಗೆ ಅದಾವುದು ಸೋಂಕಿತ ಅಸೋಂಕಿತ ?

ಅವಧೂತಗೀತ – ಶ್ಲೋಕ : ನ ಮಾನಸಂ ಕರ್ಮ ಶುಭಾ ಶುಭಂ ಮೆ ನ ಕಾಯಿಕಂ ಕರ್ಮ ಶುಭಾಶುಭಂಮೆ ! ನ ವಾಚಕಂ ಕರ್ಮ ಶುಭಾಶುಭಂ ಮೆ । ಜ್ಞಾನಾಮೃತಂ ಶುದ್ಧ ಮತೀಂದ್ರಿಯೋ ಽ ಹಮ ॥ 8 ॥ ಶುಭಾ–ಶುಭಗಳನ್ನು ಕೊಡುವ ಮಾನಸಿಕ ಕರ್ಮ ನನಗಿಲ್ಲ ಶುಭಾ–ಶುಭಗಳನ್ನು ಕೊಡುವ ಕಾಯಕ ಕರ್ಮ ನನಗಿಲ್ಲ ವಾಚಕ ಕರ್ಮನನಗಿಲ್ಲ ಶುದ್ಧವಾದ ಅತೀಂದ್ರಯವಾದ ಜ್ಞಾನಾಮೃತವೇ ನಾನು.

ಶುದ್ಧವಾದ ಅತೀಂದ್ರಯವಾದ ಜ್ಞಾನಾಮೃತನಿಗೆ ಅದಾವ ಮನದ ಅಶುಭವು ಮುಟ್ಟವು , ಶುಭವು ಮುಟ್ಟವು . ಕಾಯಕ ಕರ್ಮಂಗಳಾಗಿಹ ಶುಭ ಕರ್ಮವು ತಟ್ಟವು , ಅಶುಭ ಕರ್ಮವು ಮುಟ್ಟವು. ಚಿದಾಕಾಶವೇ ತಾನಾಗಿಹ ಶಬ್ಧಮುಗ್ಧಂಗೆ ವಾಣಿಯ ಕರ್ಮವಾಗಿಹ ಶುಭ ಕರ್ಮವು ತಟ್ಟವು , ಅಶುಭ ಕರ್ಮವು ಮುಟ್ಟವು . ಲಿಂಗದಲ್ಲಿ ಉದಯವಾದ ಲಿಂಗೈಕ್ಯಂಗೆ ಅಂಗನು ಉಂಡರೇನು ? ಉಣದಿರ್ದಡೇನು ? ತ್ಯಾಗಿಯಾಗಿ ಏನನ್ನು ಮುಟ್ಟದಿರ್ದಡೇನು ; ಭೋಗಿಯಾಗಿ ಮುಟ್ಟಿದಡೇನು?

ಇಲ್ಲದ ಅಂಗನೆಂಬುದಿಲ್ಲವಾಗಿ ಲಿಂಗೈಕ್ಯನಾಗಿಹ ಮಹಾಂತ ಸತ್ತು ಬದುಕಿ ನಿಶ್ಚಿಂತವಾಯಿತ್ತು .

27

ಬಯಲು ಬಯಲನೆ ಬಿತ್ತಿ , ಬಯಲು ಬಯಲನೆ ಬೆಳೆದು ,
ಬಯಲು ಬಯಲಾಗಿ ಬಯಲಾಯಿತ್ತಯ್ಯ ಬಯಲು ಜೀವನ
ಬಯಲು ಭಾವನೆ , ಬಯಲು ಬಯಲಾಗಿ ಬಯಲಾಯಿತ್ತಯ್ಯ.
ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು .
ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ . ॥ 639 ॥

ತಾತ್ಪರ್ಯ : ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು ಬಯಲು ಬಯಲಾಗಿ ಬಯಲಾಯಿತ್ತಯ್ಯಾ : ಓಹೋ ! ಬಯಲು ಬಯಲನೆ ಬಿತ್ತಿದ ಘನವದಾರು ಬಲ್ಲರು? ತಾನು ಬಯಲಾದವಂಗೆ ಬಯಲು ಬಿತ್ತುವುದು ಸಾಧ್ಯ . ಬಯಲು ಅದು ಶಬ್ಧಮುಗ್ಧವು ಶಬ್ಧಮುಗ್ಧವದು ನಿಃಶಬ್ದ ಬ್ರಹ್ಮವು . ಆರು ನಿಶಬ್ಧ ವೇದಿಗಳು ಅವರು ಬಯಲಾದವರು . ಅದು ಮೂಕನ ನಿರ್ವಾಣ , ಶೃತಿಗೋಚರ , ಅನಿಮಿಷ ದೇವ ತಾನು ಬಯಲಾಗಿ ಬಯಲನೆ ಬಿತ್ತಿದ ಘನ ವದೆಂತು ಹೇಳುವುದು? ಇದು ಲಿಂಗವರಿತ ಲಿಂಗೈಕ್ಯನ ಬಿತ್ತಿಗೆ . ಆ ಲಿಂಗದಲ್ಲಿಯಲ್ಲದೆ ಬೇರೆ ಮತ್ತೊಂದೆಡೆಯುಂಟೆ ಕೂಡಲ ಸಂಗಮದೇವಾ . ಬಸವರಾಜ ದೇವರು ನಿಶಬ್ಧವೇದಿಗಳು , ನಿಶಬ್ಧ ಘನವರಿತು ಶಬ್ಧಮುಗ್ಧರಾಗಿ ನಿಶಬ್ಧಘನವ ಬಿತ್ತಿದರೆ ? ಘನಕ್ಕೆ ಘನವಾಗಿಹುದನ್ನು ಬೆಳೆದು ಶಬ್ಧಮುಗ್ಧರಾದರೆ ? ಇದನಾರಯ್ಯ ಕಲಿಯುಗದೊಳಗಣ ಬೆಳೆಸುವ ಘನವಂತ ರಿನ್ನಾರಯ್ಯಾ, ಇದು ಲಿಂಗ ಸಕೀಲ ಸಂಯೋಗ ವರ್ಮ ಸ್ಥಲ ನರಿತವರ ಬಿತ್ತಿಗೆ. ಲಿಂಗ ಲಿಂಗ ಎನ್ನುವ ಜಂಗಮ ಜಂಗಮ ಎನ್ನುವ, ಪ್ರಸಾದ ಪ್ರಸಾದ ಎಂದು ಹಲಬುವರು ಬಯಲ ಬಿತ್ತಲಿಲ್ಲ . ಮಿಗೆ ಮಿಗೆ ಮೀಸಲವಾಗಿಹ ತತ್ತ್ವ ಬಲ್ಲವರ ಬಿತ್ತಿಗೆ. ಲಿಂಗವರಿದು , ಲಿಂಗವ ಬೆರೆದು , ಲಿಂಗವಾದವರ ಬಿತ್ತಿಗೆ. ಇದು ಶಬ್ಧ ಸಂಭ್ರಮದವರಿಗೆ ನಿಲುಕುವ ಬಿತ್ತಿಗೆ ಯಲ್ಲ, ತನ್ನ ವಚನ ತನಗೆ ಹಗೆಯಾದವರ ಬಿತ್ತಿಗೆ. ಪ್ರಥಮ ವೇದಿಗಳಿಗೂ ಮತಿವಂತರಿಗೂ ಆಗಮವಂತರಿಗೂ , ಬಯಲು ಬಿತ್ತಲು ಬರಲಿಲ್ಲ . ಇದು ಕಾರಣ ಅವರು ವ್ಯರ್ಥವಾಗಿ ಹೋದರು . ಶಬ್ಧವೇಧಿಗಳಿಗೆ ಲಿಂಗೈಕ್ಯ ನಿಲುವು ಅದೆಂತು ಸಾಧ್ಯ .

ಬಯಲು ಬಯಲನೆ ಬಿತ್ತುವದೆಂದಲ್ಲಿ, ತಾನು ಬಯಲು. ತನ್ನ ಬಿತ್ತಿಗೆ ಬಯಲು . ಇದು ಸಮನಿಲಯ ಸಮಗೋಷ್ಠಿ . ನಾ ನೀನೆನ್ನದಿಹ ಶಬ್ಧ ಸುಖಗಳು ಇದನೆಂತು ಪಮಿಸುವುದು ? ಲಿಂಗ ಒಂದಾಗಿರ್ದ ಜಂಗಮ ಗೋಷ್ಠಿ , ಜಂಗಮ ಒಂದಾಗಿರ್ದ ಲಿಂಗಗೋಷ್ಠಿ ಸಮ ಗೋಷ್ಠಿ . ವಾಙ್ಮನೋತೀತ ನಿರ್ವಾಣನು ನಿರ್ವಾಣ ಬಿತ್ತಿಗೆ ಬಿತ್ತುವುದು ಸಹಜ . ಅದನೆಂತುಸುರುವುದು ? ನಿರ್ವಾಣನ ಬೆಳೆ ಶಬ್ಧಮುಗ್ಧನಾಗಿ ನಿಶಬ್ಧ ಘನದಿರುವಿನ ಅರುವಾಗಿ ನಿಂತುದನೆಂತು ಬಣ್ಣಿಸುವುದು? ಇದು ಗುರುವಾಗಿ ಶಿಷ್ಯರನ್ನಾಗಿ ಕಂಡು ಭೋಧಿಸಿದ ಬಿತ್ತಿಗೆಯಲ್ಲ, ಗುರುವೆಂಬುದು ಬಯಲಾಗಿ ಶಿಷ್ಯರೆಂಬುದು ಬಯಲಾಗಿ, ಭಾವಕ್ಕಗಮ್ಯನಾಗಿ ನಿರ್ಭಾವದಲ್ಲಿ ನಿಂತು ನಿಜವನ್ನೆ ಬಿತ್ತಿದ ಬಯಲು . ಅಹಹ, ಇಲ್ಲಿ ಗುರು ಶಿಷ್ಯ ಒಂದಾದನಿಲವು. ಜ್ಯೋತಿಯ ಲೊದಗಿದ ಜ್ಯೋತಿಯ ಘನ ಅದನೆಂತು ವರ್ಣಿಸುವದು.

ಗುರು ಜ್ಯೋತಿ , ಶಿಷ್ಯನು ಜ್ಯೋತಿ . ಇದು ಬಯಲು ಬಯಲನೆ ಬಿತ್ತಿದ ಘನತ್ವ . ಜ್ಯೋತಿ ತಾನು ಜ್ಯೋತಿ ಎಂದು ಹೇಳಿದುದುಂಟೆ ? ಇದು ಅರುವರಿಯ ಹೋಗಿ ಅದುವೆ ಆದ ಜ್ಯೋತಿ . ಬಯಲು , ಅರುವ ಅರಿಯಹೋಗಿ ಅದುವೆ ಆದ ಬಯಲು . ಈ ಬಯಲು ಬಯಲನೆ ಬೆಳೆದು ,

ಬಯಲು ಬಯಲಾಯಿತ್ತಯ್ಯ ,ಉಪಮೆಗೆ ಮೀರಿದ ಘನವೆ ಆಯಿತ್ತಯ್ಯ ನುಡಿಗೆಡೆ ಗೊಡದಂತಾಯಿತ್ತು . ನಡೆಗೆಡೆಗೊಡದಂತಾಯಿತ್ತು , ನೆನಹು ನಿರ್ಣಯಕ್ಕೆ ಮಿಕ್ಕಿ ಮೀರಿ ನಿಂದ ನಿಲುವುಳ್ಳದ್ದಾಯಿತು . ಇದು ಗುರು ಶಿಷ್ಯ ಒಂದಾದ ನಿಲುವು . ಭಕ್ತ ಜಂಗಮ ರೊಂದಾದ ನಿಲುವು ಇದು ಘನಗಂಭೀರ ಮಹಾ ಘನದೊಳಗೆ ಘನಕ್ಕೆ ಘನವಾದುದ ನೆಂತು ವರ್ಣಿಸುವುದು ? ಕೂಡಲ ಸಂಗಯ್ಯ ನೆಂಬ ಬೆಳಗಿನೊಳಗೆ ಬೆಳಗಾಗಿರ್ದು ಶಬ್ಧಮುಗ್ಧವಾದುದ ನೇನೆಂಬೆ ? ಇದು ಮೂಕನ ಮೌನ, ಶಿಶುಕಂಡ ವೇದ ಬಣ್ಣಿಸುವದದೆಂತು ? ಮಿಗೆ, ಮಿಗೆ, ಮೀಸಲ ತತ್ವವರಿತವರ ಮಹದರುವು ಅದನೆಂತುಸುರುವುದು.

ಬಯಲು ಜೀವನ, ಬಯಲು ಭಾವನೆ , ಬಯಲು ಬಯಲಾಗಿ , ಬಯಲಾಗಿತ್ತಯ್ಯ : ಓ ಬಯಲು ಜೀವನೆ , ಶೃತಿಗಗೋಚರನಾಗಿಹ ಘನ ನೀನಾವಾಗ ಶೃತಿಗೆ ಒಳಪಟ್ಟೆ? ನೀನು ಶಬ್ಧಮುಗ್ಧ. ಮುನ್ನ ಮುನ್ನಲಾದ ಘನ ಲಿಂಗದಲ್ಲಿ ಉದಯವಾದ ಲಿಂಗೈಕ್ಯ ,ಆ ಲಿಂಗದಲ್ಲಿಯಲ್ಲದೆ ಬೇರೆ ಮತ್ತೊಂದಡೆಯುಂಟೆ ? ಓ ಬಯಲು ಜೀವನೆ ನಿನ್ನನ್ನು ವೇದ ತಿಳಿಯದು, ನಿನ್ನಿರುವ ಶಾಸ್ತ್ರಸಾಧಿ ಸದು .ಶೃತಿಗೆ ಮಿಕ್ಕಿ ಮೀರಿ ನಿಂತ ಘನ ಶಬ್ಧಮುಗ್ಧ ಅರಿಯದರುವು ಏನೊಂದೆನಲಿಲ್ಲದ ಅರುವು ಭಾವಕ್ಕಗಮ್ಯನಾದುದರಿಂದ ಬಯಲ ಜೀವನ , ಬಯಲು ಭಾವನೆ , ಬಯಲಾಗಿ ಬಯಲು ಬಯಲಾಯಿತ್ತಯ್ಯ ಎಂದು ಹೇಳಿಹರು . ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು , ಓ ಲಿಂಗಯ್ಯ , ಲಿಂಗದೇವನೆ ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು , ಅರುವ ಅರಿಯ ಹೋಗಿ ಅರಿಯ ದರುವು ಆದವರು, ಲಿಂಗವರಿತು ಲಿಂಗವ ಬೆರೆತು , ಲಿಂಗವೆ ಆದವರು ನಿಮ್ಮ ಪೂಜಿಸಿದವರು, ಅವರು ಮುನ್ನವೆ ಬಯಲಾದವರು . ಅನಿಮಿಷ ದೇವ ನಿಮ್ಮ ಪೂಜಿಸ ಹೋಗಿ ಮುನ್ನವೆ ಬಯಲಾದರು. ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ . ಓ ಗುಹೇಶ್ವರಾ ನಾ ನಿಮ್ಮ ನಿರೂಪವ ನಂಬಿದೆ, ನಿರೂಪವ ಹಿಡಿದು ಸ್ವರೂಪವ ನಂಬಿದೆ. ಸ್ವರೂಪವ ಹಿಡಿದು ಅರಿದರಿದು ಅರಿಯದರುವು, ಏನೆಂದೆನಲಿಲ್ಲದ ಅರುವುಳ್ಳ ಅಚಿಂತ್ಯತ್ವದಲ್ಲಿ ಬಯಲಾದೆ.

28

ಸಮ ಸುಖ ಸಂಧಾನ ವಿಲ್ಲದ ಸಂಗ ನೋಡಾ ,
ತಾಗು ನಿರೋಧ ವಿಲ್ಲದ ಸಂಗ ನೋಡಾ ,
ಆವಂಗೆ ಆವಂಗೆ ಅನುಭಾವ ವಿಲ್ಲದ ಸಂಗ ನೋಡಾ ,
ಕೂಡಲ ಚೆನ್ನಸಂಗಮ ದೇವಾ ಲಿಂಗೈಕ್ಯ ಸಂಗ ನೋಡಾ . || 749 ||

ತಾತ್ಪರ್ಯ : ಸಮ ಸುಖ ಸಂಧಾನ ವಿಲ್ಲದ ಸಂಗನೋಡಾ : ಸಮ ಸುಖವದು ಅವರ್ಣಿಯವು ಸರ್ವವು ಸಮವಾದ ನಿಲುವು , ಸುಖದೇಕ ರಸವು , ಅಲ್ಲಿ ಮೋಹವು ಇಲ್ಲ ನಿರ್ಮೋಹವೂ ಇಲ್ಲ ಮರವೆಂಬುದಿಲ್ಲ ಅರುವೆಂಬುದಿಲ್ಲ, ಗುರು ಶಿಷ್ಯರ ವಿಭಾಗವೆ ಇಲ್ಲ. ಇಲ್ಲಿ ಅಸತ್ಯ ಎಂಬುದಕ್ಕಿಂಬಿಲ್ಲ ಸತ್ಯವೆಂಬುದಕ್ಕಿಂಬಿಲ್ಲದ ನಿಸ್ಸಿಮ ನಿಲವು . ನಾನೆಂಬುದಿಲ್ಲದ ನಿಲವು. ನೀನೆಂಬುದಿಲ್ಲದ ನಿಲವು . ಇದು ಅಚಿಂತ್ಯ ನಿಲವು , ಇಲ್ಲಿ ಗುರುವಾದವನು ಸಹಜನು , ಅಜನು, ಅಚಿಂತ್ಯನು , ಶಿಷ್ಯನಾದವನು ಸಹಜ, ಅಜ , ಅಚಿಂತ್ಯನು ಅಗಿರುವಲ್ಲಿ ಈರ್ವರದು ಸಮ ನಿಲವು. ಸುಖದ ಸುಖ , ಇದು ಸಂಧಾನವಿಲ್ಲದ ಸಂಗ ನೋಡಾ ಎಂದು ಹೇಳಿದ್ದಾರೆ.

ಸಮತೆ ಸಯವಾದ ಶರಣಂಗೆ ಅರುವು ಮರವುಗಳುಂಟೆ ? ಉಪಮೆ , ನಿಸ್ಥಲವಾದ ಶರಣಂಗೆ

ಶಬ್ದ ಸಂದಣೆಯುಂಟೆ ? ಅಖಂಡಿತ ಲಿಂಗಕ್ಕೆ ಅಪ್ರಮಾಣ ಶರಣಂಗೆ ಸೀಮೆ ಸಂಬಂಧವೆಂಬ ಸಂಕಲ್ಪವುಂಟೆ ? ಸಮ ಸುಖ ತನ್ನ ಸುಖ , ತಾನೆ ಸುಖ. ಸುಖ ಸ್ವರೂಪವೆ ತಾನಾಗಿರುವಲ್ಲಿ ತನಗೆ ಪ್ರತಿಕೂಲವಿಲ್ಲ, ಅನುಕೂಲವಿಲ್ಲ. ತನ್ನವಿನಃ ಆವಾವುದು ಅದೆ , ಇಲ್ಲವೆಂಬುದಕ್ಕೂ ಸಂದಿಲ್ಲದಿಪ್ಪ ಅಖಂಡಿತ ಘನ ಪೂರ್ಣವಪ್ಪುದೆ ತನ್ನಿರುವಾಗಿರುವಲ್ಲಿ ನನ್ನದು ಸಂಧಾನವಿಲ್ಲದ ಸಂಗ, ಅಡೆತಡೆಯಿಲ್ಲದ ಸಂಗ , ಸೀಮಾತೀತ ಸಂಗ . ಮರವೆಂಬುದಕ್ಕೂ ಮೀರಿದ ಘನನು , ಅರುವೆಂಬುದಕ್ಕೂ ಮೀರಿದ ಘನನು . ಅನುಪಮನಾಗಿಹ ನನಗೆ ಷಟ್‌ಸ್ಥಲವಿಲ್ಲ , ನಿಶಬ್ಧವೇದಿಗೆ ಶಬ್ದ ಸಂಬ್ರಮದ ಸಡಗರವೇಕೊ! ಸುಖದ ಸುಖಿಯಾಗಿಹ ಮೂಕಂಗೆ ಮಾತಿನ ಮಥನವೇಕೆ ? ಪ್ರೇಮ ವೇಕೆ ? ಖಂಡಾ-ಖಂಡ ಸಂಯೋಗವಿಲ್ಲದ ಅಖಂಡ ಸುಖಿಗೆ ಲಿಂಗ ಲಿಂಗ ಎಂಬ ಸದ್ಭಾವದ ಸಂಗವಿಲ್ಲ . ಸಚ್ಚಿದಾನಂದ ಸಚ್ಚಿದಾನಂದವೆಂಬ ಚಿದಹಮ್ಮಿನ ಸಂಗವಿಲ್ಲ, ಅರುವರಿತವರಾದುದರಿಂದ ಸಚ್ಚಿದ್ರೂಪ ವರಿತುದರಿಂದ ಲಿಂಗವೆನಲಿಲ್ಲ ಲಿಂಗೈಕ್ಯವೆನಲಿಲ್ಲ , ಸಂಗವೆನಲಿಲ್ಲ , ಸಮರಸವೆನಲಿಲ್ಲ ಏನೂ ಎನಲೊಲ್ಲದೆ ಶಬ್ಧಮುಗ್ಧರಾಗಿ ಸವೆಯದ ಸುಖದ ಸುಖವಾಗಿಹುದೆ ಸಮ ಸುಖ ಸಂಧಾನವಿಲ್ಲದ ಸಂಗನೋಡಾ ಎಂದು ಹೇಳಿಹರು . ಲಿಂಗವು ಶಬ್ಧಮುಗ್ಧ ತಾನು ಶಬ್ಧಮುಗ್ಧ ಲಿಂಗವು ಮೌನ ಮುದ್ರಿತವು , ತಾನು ಮೌನ ಮುದ್ರಿತನು. ಈರ್ವರದು ಸಮ ನಿಲವು , ಸಮ ಸುಖ, ಅಚ್ಚಸುಖ , ಇದು ಸಂಧಾನ ವಿಲ್ಲದ ಸಂಗವು. ಇದು ತಾಗು ನಿರೋಧವಿಲ್ಲದ ಸಂಗ ನೋಡಾ.

ಲಿಂಗೈಕ್ಯ ಸಂಗ , ಆವಾವುದರ ಅಡೆತಡೆಯಿಲ್ಲದ ಸಂಗ , ಯೋಗ ವಿಯೋಗವಿಲ್ಲದ ಸಂಗ , ಇಲ್ಲಿ ಅಗಲಿದ ಸಂಗವೆನ್ನಲು ಇಂಬಿಲ್ಲ. ಕೂಡಿದ ಸಂಗವೆನ್ನಲು ಇಂಬಿಲ್ಲ. ಇದು ಪೂರ್ವದಲ್ಲಿ ಇದರಿಂದ ಅಗಲಿದ್ದೆ ನೆನ್ನುವ ಸಂಗವಲ್ಲ. ಮರವು ಮರವಿನ ಕಾರ್ಯವಾಗಿಹ ಅನಾತ್ಮಭಾವ ಅಂಗಭಾವ , ಲಿಂಗೈಕ್ಯಸಂಗದಿಂದ ಅಗಲಿಸಿತ್ತು, ಪರಮಾರ್ಥದ ಅರುವು ಬಂದು ಕೂಡಿಸಿತ್ತು ಎನ್ನುವ ಸಂಗವಲ್ಲ ಆವಾವುದನ್ನು ತಟ್ಟದ ಮುಟ್ಟದ ಸಂಗ. ಇಲ್ಲಿ ಕರ್ಮಕಾಂಡ ಉಪಾಸನಾ ಕಾಂಡ ಕೀಳಾಗಿ ಕಂಡುದಿಲ್ಲ ಜ್ಞಾನಕಾಂಡ ಶ್ರೇಷ್ಟವಾಗಿ ಕಂಡುದಿಲ್ಲ , ಎಲ್ಲವನ್ನು ಸಮನಾಗಿ ಕಂಡ . ನಿರುಪಮ ನಿಲವು ನಿರಾಲಂಬ ನಿಲವು ನಿಜನಪ್ಪಿದ ನಿಲವು. ಇದು ತಾಗು ನಿರೋಧವಿಲ್ಲದ ಸಂಗ ನೋಡಾ ಎಂದು ಹೇಳಿಹರು.

ಆವಂಗೆ ಆವಂಗೆ ಅನುಭಾವ ವಿಲ್ಲದ ಸಂಗನೋಡಾ , ಶಬ್ಧ ಸಂಭ್ರಮದಿಂದುಕ್ತರಾದವರು ಆರೆ ಇರಲಿ ಪ್ರಥಮ ವೇದಿಗಳಿರಲಿ, ಅತೀತ ಅತೀತ ಎನ್ನುವ ಅನಾಗತರಿರಲಿ ಶೃತಿವಂತರಿರಲಿ ಇವರಾರು ನಿಶಬ್ಧ ಘನದನುವರಿತವರಲ್ಲ, ಇವರು ಶಬ್ಧ ಸಂಭ್ರಮದ ರಾಗ ವಿರಾಗ ದಾಂಟಿ ಮಿಗೆ ಮಿಗೆ ಮೀಸಲವಾಗಿಹ ತತ್ವವರಿಯುವ ಸಮರ್ಥರಲ್ಲ ನುಡಿಯಲ್ಲಿ ಜಾಣರು, ನಡೆಯಲ್ಲಿ ಜಾಣರು , ಅರುವರಿತು ಅರಿಯದರುವು ಆಗಿಹ ಪ್ರಾಜ್ಞರಲ್ಲ, ಅರುವೆಂದು ನುಡಿಯುವ ಪ್ರಾಜ್ಞರು . ಇವರಿಗೆ ನುಡಿಗೆಡೆಗೊಡದ ಘನದಿರುವಿನ ಸ್ವಾನುಭಾವವಿಲ್ಲ, ಇದು ಕಾರಣ ಜ್ಞಾನದೊಳಗಣ ಬುದ್ಧಿ ಭಸ್ಮವಾಗಲಿಲ್ಲವಾದ್ದರಿಂದ ಆವಂಗೆ ಆವಂಗೆ ಅನುಭಾವ ವಿಲ್ಲದ ಸಂಗನೋಡಾ ಎಂದು ಹೇಳಿಹರು . ಇದು ಮೂಕನಿಂದ ಕಾವ್ಯ ಕೇಳಿದುದು ಶ್ರವಣೇಂದ್ರಿಯಂಗಳಿಲ್ಲದೆ ಶ್ರವಣ ಮಾಡಿದುದು . ಕರಣಂಗಳೆ ಲಿಂಗ ಕಿರಣಂಗಳಾಗಿ ಅರುವರಿತು ಶಬ್ಧಮುಗ್ಧನಾದವನ ಅನುಭಾವ . ಇದು ನಿರಾಲಂಬ ಸಂಗವಾಗಿಹ ಅಚಿಂತ್ಯದ ಸಂಗ , ನುಡಿದು ಹೇಳದ ಸಂಗ, ನಡೆದು ತೋರಿಸದ ಸಂಗ. ಇದು ಆವಂಗೆ ಆವಂಗೆ ಅನುಭಾವ ವಿಲ್ಲದ ಸಂಗ ಕೂಡಲ ಚೆನ್ನಸಂಗಾ ಲಿಂಗೈಕ್ಯ ಸಂಗ ನೋಡಾ .

ಲಿಂಗೈಕ್ಯ ಸಂಗವುದು ಲಿಂಗ ವರಿತು , ಲಿಂಗ ಬೆರಸಿ , ಲಿಂಗವಾದವರ ಸಂಗ ಲಿಂಗವೆಂಬುದು ಅರುವ ಅರಿಯ ಹೇಳಿದ ಸಂಜ್ಞೆ ಅದು ನೆನಹು ನಿರ್ಣಯಕ್ಕೆ ನಿಲುಕದ ಸಂಜ್ಞೆ, ಅಚಿಂತ್ಯ ಸಂಜ್ಞೆ, ಈ

ಸಂಜ್ಞೆಯರಿತು ತಾನು ಅಚಿಂತ್ಯದಲ್ಲಿ ಬೆರೆತು ನಿಶ್ಚಿಂತನಾದುದೆ ಲಿಂಗೈಕ್ಯ ನಿಲವು ಅದು ಲಿಂಗೈಕ್ಯ ಸಂಗ. ಲಿಂಗವದು ಶಬ್ಧಮುಗ್ಧ ಮೌನ ಮುದ್ರಿತ, ಅರುವರಿತ ಸಂಜ್ಞೆಯ ಶಬ್ಧಮುಗ್ಧ ಶಬ್ಧಮುಗ್ಧನಾಗಿ ನಿಶಬ್ಧಘನ ದರುವಾಗಿ ಘನಕ್ಕೆ ಘನವಾಗಿ ನಿಂತುದೆ ಲಿಂಗೈಕ್ಯವು. ನಿಶಬ್ಧ ಘನವೆ ತನ್ನಿರುವಾಗಿ ತಾನೆ ತಾನಾಗಿಪ್ಪುದೆ ಲಿಂಗೈಕ್ಯರ ಸಂಗ ನೋಡಾ ಎಂದು ಹೇಳಿಹರು.

29

ಕೆಟ್ಟುದ ನರಸಹೋಗಿ ತಾನೆ ಕೆಟ್ಟಿತ್ತು, ಹೇಳಲೆಂತು ಬಾರದು,
ಕೇಳಲೆಂತು ಬಾರದು, ಎಂತಿರ್ದುದಂತೆ ಸಹಜ ಸ್ವಾನುಭಾವ,
ಸಮ್ಯ ಜ್ಞಾನವ ಅಜ್ಞಾನಿ ಬಲ್ಲನೆ ಗುಹೇಶ್ವರಾ. ॥ 676 ॥

ತಾತ್ಪರ್ಯ : ಕೆಟ್ಟುದ ನರಸ ಹೋಗಿ ತಾನೆ ಕೆಟ್ಟಿತ್ತು : ಕೆಟ್ಟುದು ಆವುದು ? ಅರಸ ಹೋದುದು ಆವುದು? ತಾನೆ ಕೆಟ್ಟದು, ಆವುದು ? ಕೆಟ್ಟದು ಆವುದೆಂದಲ್ಲಿ ನಾಮರೂಪದಿಂದುಕ್ತವಾಗಿ ಕಾಣಿಸಿಕೊಳ್ಳವುದು ಅದು ಕೆಟ್ಟದು . ವಾಣಿ ಮನಕ್ಕೊಳಪಟ್ಟುದೆಲ್ಲವು ಕೆಟ್ಟುದು . ನೆನಹು ನಿರ್ಣಯದಿಂದುಕ್ತವಾದುದೆಲ್ಲವು ಕೆಟ್ಟದು . ಚಿತ್ ಕಾರ್ಯ ಕಾರಣದಿಂದುಕ್ತ ವಾದುದೆಲ್ಲವು ಕೆಟ್ಟದು ಕಲ್ಪಿಸಿದ ಕಲ್ಪಿತವೆಲ್ಲವು ಕೆಟ್ಟದು. ಅರಸ ಹೋದುದು ಆವುದು ? ಕಲ್ಪಿತ ಪುರುಷ ಅರಸ ಹೋದವನು . ಉಪಾಧಿಮನವುಳ್ಳವ ನಾಗಿ ಅರಸ ಹೋದ . ಉಪಾಧಿ ರಹಿತ ಮನದವನಾಗಿ ಅರಸ ಹೋದ . ಅಂಗನೆಂಬ ಕಲ್ಪಿತನು, ಜೀವನೆಂಬ ಕಲ್ಪಿತ ಅರಸ ಹೋಗಿ ತಾನೆ ಕೆಟ್ಟನು .

ಏನ ಅರಸ ಹೋದನು ? ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವ ಲಿಂಗ ಲಿಂಗ ಎಂದು ಅರಸ ಹೋಗಿ ತಾನೆ ಕೆಟ್ಟನು . ಲಿಂಗಾನು ಸಂಧಾನ ಮಾಡ ಹೋಗಿ ತಾನೆ ಕೆಟ್ಟನು . ಚಿದಾಕಾಶ ನಾನು ಚಿತ್ಪ್ರಕಾಶ ನಾನು ಸೋಹಂ ನಾನು , ಸಚ್ಚಿದಾನಂದ ನಾನು ಎಂದು ತಾನೆ ಕೆಟ್ಟನು . ಲಿಂಗ ಸಕೀಲ ಸಂಯೋಗ ವರ್ಮಸ್ಥಲ ವರಿತವರು ಕೆಟ್ಟುದ ಅರಸ ಹೋಗಿ ತಾನೆ ಕೆಟ್ಟಿತು ಎಂದು ಹೇಳಿದುದು ನೋಡುವುಡೆ , ಬಹು ಆಶ್ಚರ್ಯ ! ತತ್ತ್ವ ಜ್ಞರಿಗೂ , ಕಲ್ಪಿತ ಪುರುಷನಾಗಿಹ ಜೀವರುಗಳಿಗೂ ಎಷ್ಟು ಅಂತರ ? ಬೆಳಕು ಕತ್ತಲೆಗಿರುವಷ್ಟು ಅಂತರ , ಇದ್ದುದು ಇದ್ದಂತೆ ಅರಿತವರು ತತ್ತ್ವ ಜ್ಞರು, ವಿಪರೀತವಾಗಿ ತಿಳಿದವರು ಕಲ್ಪಿತರು . ನಾಮದಿಂದುಕ್ತವಾದುದು ನಿರ್ನಾಮವ ಅರಸುವದದೆಂತು? ರೂಪದಿಂದುಕ್ತವಾದುದು ನಿರೂಪವ ಅರಸುವದದೆಂತು ? ವಾಣಿಯು ನಿರ್ವಾಣನ ಅರಸುವದದೆಂತು ? ಸಂಕಲ್ಪ ವಿಕಲ್ಪ ರೂಪಿ ಮನ ಅಕಲ್ಪಿತ ಘನವ ಅರಸುವದದೆಂತು ? ನೆನೆಹಿಂಗೆ ಮೀರಿದ ಘನವ ನೆನೆಯುವ ದದೆಂತು ? ಮರವರುವಿಂಗೆ ಮೀರಿದುದನ್ನು ಮತಿಯು ನಿರ್ಣಯಿಸುವದದೆಂತು ? ಅಚಿಂತ್ಯವ ಚಿಂತನಕ್ಕೊಳ ಪಟ್ಟುದು ಅದೆಂತು ? ಭಾವಕ್ಕಗಮ್ಯವಾದುದನ್ನು ಭಾವದಿಂದ ಭಾವಿಸುವದದೆಂತು ? ಅರಿಯ ಬಾರದ ಘನ ಅರಿದುದದೆಂತು ? ಕಲ್ಪಿತ ಪುರುಷನಾಗಿ ಅರಿಯ ಹೋದವನಿಗೆ ಅಕಲ್ಪಿತ ಘನ ವರಿಯುವದದೆಂತು? ಅರಿಯಬಾರದ ಘನ ಕಲ್ಪಿತ ಪುರುಷ ಅರಿದನೆಂದು ತಾನೆ ಕೆಟ್ಟನು . ಅರುವ ಅರಿಯ ಹೋದ ಮಹಾಂತರು ಅರಿಯದರುವೆ ತಾನೆ ಆಗಿ ಕೆಟ್ಟುದ ನರಸ ಹೋಗಿ ತಾನೆ ಕೆಟ್ಟಿತು ಎಂದು ಹೇಳಿಹರು.

ಹೇಳಲು ಬಾರದಿದ್ದಲ್ಲಿ ಅವರ್ಣನೀಯವೆಂದು, ನುಡಿಗೆಡೆಗೊಡದ ಘನವೆಂದು ಶಬ್ದ ಮುಗ್ಧವೆಂದು ನಿಶಬ್ದ ಬ್ರಹ್ಮವೆಂದು ಅಕಥನೀಯವೆಂದು ನುಡಿಯಲಿಂಬಿಲ್ಲವೆಂದು ನಾ ನೀ ನೆಂಬುದಕ್ಕೂಸಂದಿಲ್ಲದಿಪ್ಪಗಮ್ಯ ಅಪ್ರಮಾಣವೆಂದು , ಅಚಿಂತ್ಯನೆಂದು ಹೇಗೆ ಹೇಳುವದು . ಉಸರಲು ವಾಣಿ ಗಿಂಬಿಲ್ಲವೆಂದಲ್ಲಿ ಕಿವಿಯಿಂದ ಕೇಳಿದುದಾದರೂ ಅದೆಂತು ? ಇದು ಅರುವರಿತವರಿಗೆ

ಸಹಜವೇದ್ಯವಲ್ಲದೆ ಇನ್ನುಳಿದವರಿಗೆ ದುಸ್ತರವು. ಇದು ತಾನಾರೆಂದರಿತವರ ಅರುವಿನ ಅರುವು ಏನೆಂದನಲಿಲ್ಲದ ಅರುವು ಆಗಿಹ ಘನದಿರುವು ಹೇಳಲೆಂತು ಬಾರದು ಕೇಳಲೆಂತು ಬಾರದು ಎಂತಿರ್ದುದಂತೆ ಸಹಜ ಸ್ವಾನುಭವದ ಸಮ್ಯಜ್ಞಾನವ ಅಜ್ಞಾನಿ ಬಲ್ಲನೆ ಗುಹೇಶ್ವರಾ.

ತಾನಾರೆಂದರಿತ ಘನವಂತ ಎಂತಿರ್ದುದಂತೆ ಸಹಜ ಸ್ವಾನುಭವದ ಸಮ್ಯಜ್ಞಾಯ ಸಮ್ಯಜ್ಞಾನಿಯೆ ಬಲ್ಲನಲ್ಲದೆ ಅಜ್ಞಾನಿ ತಿಳಿಯಬಹುದೆ? ಎಂತಿರ್ದುದಂತೆ ತನ್ನ ಸಹಜತ್ವ ತಾನಾರೆಂದು ತನ್ನ ತಿಳಿಯದ ಮುನ್ನವೂ ಹಾಗೆ ಎಂತಿರ್ದುದಂತೆ ಅದೆ ತಿಳಿಯಬೇಕೆಂಬ ತವಕದಲ್ಲಿಯೂ ಎಂತಿರ್ದುದ ಅದೆ ಪ್ರಣವಾನುಸಂದಾನದಲ್ಲಿ ಪ್ರಣವದರ್ಥದನುಸಂದಾನದಲ್ಲಿಯೂ ಅರಿತೆನೆನ್ನುವಲ್ಲಿಯೂ ಅರಿಯನೆನ್ನು ವಲ್ಲಿಯೂ ಎಂತಿರ್ದುದಂತೆ ಅದೆ ಅಂದು ಇಂದು ಏಂದೆಂದೂ ಇದ್ದಂತಿರುವದರಿಂದ ಇದ್ದಕ್ಕಿದ್ದಂತೆ ತಿಳಿದುದರಿಂದ ಎಂತಿರ್ದುದಂತೆ ಸಹಜ ಸ್ವಾನುಭಾವ ಈ ಮಹಾನುಭವವುಳ್ಳ ಮಹಾಂತನನ್ನು ಅರಿತೆನೆನ್ನುವ ಚಿದಹಮ್ಮುಳ್ಳವನು ತಿಳಿಯನು ಅರಿತೆನೆನ್ನುವವನೆ ತಿಳಿಯದಿರುವಲ್ಲಿ ಅರಿಯೆನೆನ್ನುವ ಮರನುಳ್ಳವನು ಹೇಗೆ ತಿಳಿಯುನು? ತಿಳಿಯಬೇಕೆಂಬ ತವಕವುಳ್ಳ ಜಿಜ್ಞಾಸು ಅರುವಿನ ಅನುಸಂದಾನದಲ್ಲಿ ಕಾಣುವ ಸುಖಾನುಭವಿಗಳು ಇವರು ಇದ್ದಕ್ಕಿದ್ದಂತಿಹ ಸಹಜತ್ವ ತಿಳಿಯರು ಇದು ಕಾರಣ ಇವರೆಲ್ಲರು ಶಬ್ದಸಂಭ್ರಮದ ಹಂಗುಳ್ಳವರಾದುದರಿಂದ ಅಜ್ಞಾನಿಗಳು ಸಮ್ಯಜ್ಞಾನಿ ಶಬ್ದಸಂಭ್ರಮದ ಹಂಗು ಹರಿದು ನಿಶಬ್ದ ಘನವರಿತ ಮಹಾಂತ ಇದು ಮೂಕನ ಸ್ವಾನುಭವ ಎಂತಿರ್ದುದಂತೆ ಇದ್ದ ನಿರ್ವಾಣ ಅಜ್ಞಾನಿ ಬಲ್ಲನೆ ಎಂದು ಹೇಳಿಹರು.

30

ಸ್ವಸ್ಥಾನ ಸ್ವಸ್ಥಿರದ ಸುಮನ ಮಂಟಪದೊಳಗೆ
ನಿತ್ಯ ನಿರಂಜನ ಪ್ರಭೆಯ ಬೆಳಗು ಶಿವಯೋಗಾನುಭಾವ
ವೇಕಾರ್ಥವಾಗಿ ಗುಹೇಶ್ವರಾ
ನಿಮ್ಮ ಶರಣ ಅನುಪಮ ಸುಖಿಯಾಗಿರ್ದನು. ॥ 287 ॥

ತಾತ್ಪರ್ಯ : ಸ್ವಸ್ಥಾನ ಸ್ವಸ್ಥಿರದ ಘನವದನೆಂತು ವರ್ಣಿಸುವದು ? ಗಗನದ ಸ್ವಸ್ಥಾನ ಅಲ್ಲಿ ಎಂದು ಹೇಗೆ ಹೇಳುವದು ? ಗಗನ ಸ್ವಸ್ಥಿರ . ಅದು ಸ್ವಭಾವತಹ ಸ್ಥಿರವಾಗಿರುವಲ್ಲಿ ಅಲ್ಲಿ ಸ್ಥಿರ–ಅಸ್ಥಿರವೆಂದು ಹೇಗೆ ಹೇಳುವದುಗಗನದ ಸ್ಥಾನ ಮೇಲೆ ಕೆಳಗೆ ಎಂದು ಹೇಳಬಹುದೆ? ಅದರ ಸ್ಥಾನ ಸ್ವದೇಶಿ, ಪರದೇಶವೆಂದು ಹೇಗೆ ಹೇಳುವದು. ಗಗನದ ಸ್ಥಾನ ಮೇಲೆ ಕೆಳಗೆ ಎಂದು ಹೇಳಬಹುದೆ? ಅದಕ್ಕೆ ಪೂರ್ವ, ಪಶ್ಚಿಮ , ಉತ್ತರ , ದಕ್ಷಿಣ ದಿಕ್ಕುಗಳಾದರೂ ಹೇಳಲು ಬರುವುದೆ ? ಅದು ಇರದ ಸ್ಥಾನವೆ ಇಲ್ಲದಿರುವಾಗ ಎಲ್ಲೆಲ್ಲೂ ಅದುವೆ ತುಂಬಿರುವಲ್ಲಿ , ಅಲ್ಲಿ ಇಲ್ಲಿ ಎಂದೆನ್ನಲು ಬಾರದ ಸಂದಿಲ್ಲದಿಪ್ಪ ಸ್ಥಾನ , ಗಗನ ಸ್ಥಾನ . ಮೇಲೆ ಕೆಳಗೆನ್ನಲು ಸಂದಿಲ್ಲದಿಪ್ಪ ಸ್ಥಾನ . ಗಗನ ಸ್ಥಾನ ಸ್ವದೇಶ ಪರದೇಶ ವೆನ್ನಲು ಸಂದಿಲ್ಲದಿಪ್ಪ ಸ್ಥಾನ . ಎಡ ಬಲ , ಒಳ ಹೊರಗನ್ನಲು ಸಂದಿಲ್ಲದಿಪ್ಪ ಸ್ಥಾನ ಗಗನ ಸ್ಥಾನ ಹೇಗೊ ಹಾಗೆ ಸ್ವಸ್ಥಾನ . ತನ್ನ ಸ್ಥಾನ ತಾನಿಲ್ಲದ ಸ್ಥಾನವೆ ಇಲ್ಲ ಜ್ಞಾನ ತನ್ನೊಳಗೆ ಅಜ್ಞಾನ ತನ್ನೊಳಗೆ , ಸಗುಣ ತನ್ನೊಳಗೆ ನಿರ್ಗುಣ ತನ್ನೊಳಗೆ ಪಿಂಡಾಂಡ ಬ್ರಹ್ಮಾಂಡ ತನ್ನೊಳಗೆ . ತತ್ವ ಅತತ್ವ ವಿವೇಚನ ತನ್ನೊಳಗೆ ಸಾಕಾರ ನಿರಾಕಾರ ತನ್ನೊಳಗೆ ಅಂಗ ತನ್ನೊಳಗೆ ಲಿಂಗತನ್ನೊಳಗೆ ಲಿಂಗಕ್ಕೆ ಲಿಂಗವಾಗಿಹ ತಾನು ಖಂಡಾ ಖಂಡ ಸಂಯೋಗ ವಿಲ್ಲದ ಅಖಂಡಿತ ಘನ ಪೂರ್ಣವೆ ತನ್ನಿರುವೆಂದರಿತ ಮಹಾಂತಂಗೆ ಸ್ವಸ್ಥಾನವೆಂಬುದು ಉಪಮಿಸದ ಸ್ಥಾನ , ತುಂಬಿ ತುಳಕದ ಸ್ಥಾನ . ಎಲ್ಲೆಲ್ಲೂ ತನ್ನ ಸ್ಥಾನ , ತಾನಿಲ್ಲದ ದೇಶವಿಲ್ಲ ಕಾಲವಿಲ್ಲ

ತಾನಿಲ್ಲದ ವಸ್ತುಗಳಿಲ್ಲ, ತಾನಿಲ್ಲದ ಧ್ಯಾನ ಮೌನವಿಲ್ಲ. ತಾನೆ ಸರ್ವಾತ್ಮ ತಾನೇ ನೇತಾತ್ಮ . ತಾನಿಲ್ಲದಿರೆ ಗುರು ,ಲಿಂಗ, ಜಂಗಮ , ಪ್ರಸಾದವೆಂಬುದಿಲ್ಲ. ತನ್ನಿಂದ ಗುರು , ತನ್ನಿಂದ ಲಿಂಗ, ತನ್ನಿಂದ ಜಂಗಮ, ತನ್ನಿಂದ ಪ್ರಸಾದ, ತನ್ನಿಂದ ಸಕಲ ಸಿದ್ಧವು.

ಸ್ವಸ್ಥಿರ ಗಗನವು ಅಲುಗಾಡದೆ ಇರುವುದರಿಂದ ಅದು ಸಹಜ , ಅಚಲವೂ ಹೇಗೋ ಹಾಗೆ ಅರುವರಿತ ಮನ ಮಹಾಂತ . ಇದ್ದಕ್ಕಿದ್ದಂತಿದ್ದ ಸ್ವಸ್ಥಿರವ ಅದೆಂತು ವರ್ಣಿಸುವುದು ? ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿಯ ಹೋಗಿ ಲಿಂಗಕ್ಕೆ ಲಿಂಗವಾಗಿಹ ಘನಮಹಿಮನ ಸ್ವಸ್ಥಿರವದೆಂತು ವರ್ಣಿಸುವುದು ?

ಸ್ಥಿರ ಅಸ್ಥಿರ ತನ್ನೊಳು ಕಂಡ ಮಹಾಂತಂಗೆ ಅದಾವ ಸ್ಥಿರವ ಹೇಳುವುದು ? ತುಂಬಿದವನು ತುಳು ಕಾಡುವುದೆಂತು ? ಅಖಂಡಿತ ಘನ ಪರಿಪೂರ್ಣವಪ್ಪ ಮಹಾಘನವು ಅಲುಗಾಡಬಹುದೆ ? ಘನ ಗಂಭೀರ ಮಹಾಘನವರಿತು ಘನಕ್ಕೆ ಘನವಾದ ಮಹಾಂತನ ಸ್ವಸ್ಥಿರವದೆಂತು ವರ್ಣಿಸುವುದು. ಕ್ರಿಯಾಕ್ರಿಯೆ ವೆಂಬುದಕ್ಕೂ ಮೀರಿ ನಿಷ್ಕ್ರಿಯನಾಗಿರುವ ಸ್ವಸ್ಥಿರವ ನಡೆಯಿಂದ ಹೇಳಲೆಂತು ಬಾರದು, ಕೇಳಲೆಂತು ಬಾರದು . ವರ್ಣಾತೀತನ ಸ್ವಸ್ಥಾನ ಬಣ್ಣಿಸಿದಡದಕ್ಕದೆ ಕೊರತೆ ಅಕಲ್ಪಿತ ಘನದ ಸ್ವಸ್ಥಿರವ ಕಲ್ಪಿಸಿ ಹೇಳುವದೆಂತು .

ಸುಮನ ಮಂಟಪದೊಳಗೆ ನಿತ್ಯ ನಿರಂಜನ ಪ್ರಭೆಯ ಬೆಳಗು ? ಓಹೋ ! ಸುಮನ ಮಂಟಪ ಸುಮನ ಮಂಟಪವೆಂಬುದು ಉಪಾಧಿಕ ಮನ, ಉಪಾಧಿ ರಹಿತನಿಂದ ನಿವಾತ ನಿಲುವೆ ಸುಮನ ಮಂಟಪ, ಮರವರುವಿಂಗೂ ಮೀರಿದ ಮನ ಸುಮನ . ಬಂಧ ಮೋಕ್ಷವ ಕಾಣದ ಮನ ಸುಮನ ಸತ್ ಅಸತ್ ಎಂದು ವಿಭಾಗಿಸಲು ಇಂಬುಗೊಡದ್ದು ಆವುದೋ ಅದುವೆ ಸುಮನ. ಅರುವರಿತು ಶಬ್ದ ಮುಗ್ಧವಾದುದೆ ಸುಮನ ಈ ಸುಮನ ಮಂಟಪದೊಳಗೆ ನಿತ್ಯನಿರಂಜನ ಪ್ರಭೆಯ ಬೆಳಗು .

ಈ ಬೆಳಗು ಮಾತು ಮನಂಗಳಿಂದ ವರ್ಣಿಸುವ ಬೆಳಗು ಅಲ್ಲ, ಅವರ್ಣೀಯ ಬೆಳಗು ! ಮಾತು ಮನಂಗಳನ್ನು ಇದುವೆ ಬೆಳಗುವದಲ್ಲದೆ, ಇದನ್ನಾವು ಬೆಳಗವು . ಇದು ಆರಾರ ಬೆಳಗು ಅಲ್ಲ ಸ್ವಯಮೇವ ಬೆಳಗು , ತನ್ನ ಬೆಳಗಿನ ಬೆಳಗು . ತಾನೆ ಎಂದೆಂದೂ ಇದ್ದವನಾದುದರಿಂದ ನಿತ್ಯ ಅವರ್ಣೀಯ ಪ್ರಭೆಯಾದುದರಿಂದ ನಿರಂಜನ ಪ್ರಭೆಯ ಬೆಳಗು ಎಂದು ಹೇಳಿಹರು .

ಶಿವಯೋಗಾನುಭಾವ ವೇಕಾರ್ಥವಾಗಿ ಗುಹೇಶ್ವರಾ ನಿಮ್ಮ ಶರಣ ಅನುಪಮ ಸುಖಿಯಾಗಿರ್ದನು : ಸ್ವಸ್ಥಾನ ಬೇರಲ್ಲ ಶಿವ ಸ್ಥಾನ ಬೇರಲ್ಲ, ಸ್ವಸ್ಥಿರವ ಬೇರಲ್ಲ ಶಿವನ ಸ್ಥಿರ ಬೇರಲ್ಲ ಶಿವಯೋಗನುಭಾವ ವೇಕಾರ್ಥವಾಗ ಬೇಕಾದರೆ ತತ್ತ್ವವರಿತು ತತ್ತ್ವ ದೃಷ್ಠಿಯುಳ್ಳವನಾಗುವದು. ಸ್ವಸ್ಥಾನವೆ ಶಿವಸ್ಥಾನ , ಶಿವಸ್ಥಾನವೆ ಸ್ವಸ್ಥಾನ . ಶಿವನೆಂಬುದು ತಾನು, ತಾನೆಂಬು ಶಿವ . ಶಿವ , ಭೇದಾ ಭೇದ ವಿನಿರ್ಮುಕ್ತ ಶಿವ, ಶಿವ ತನಗಿಂತ ಬೇರೆಂಬುದಿಲ್ಲ ಶಿವ ತಾನು ಒಂದೆಂಬುದಿಲ್ಲ ನಾನೀನೆಂಬುದಕ್ಕೂ ತೆರಹಿಲ್ಲದ ಘನದ ಶಿವ . ಇದು ಕಾರಣ ಸ್ವಸ್ಥಾನ ತೆರಹಿಲ್ಲದ ಘನವೆ ಸ್ವಸ್ಥಾನ ಅದುವೆ ಶಿವ ಸ್ಥಾನ .

ಸ್ವಸ್ಥಿರವೆ ಶಿವನ ಸ್ಥಿರ , ಶಿವನ ಸ್ಥಿರವೆ ತನ್ನ ಸ್ಥಿರ , ಶಿವನು ನಿತ್ಯ ನಿರಂಜನ . ತಾನು ನಿತ್ಯ ನಿರಂಜನ ಈ ಜ್ಞಾನಪ್ರಭೆ ಬೆಳಗುವದೆಲ್ಲ ಸುಮನ ಮಂಟಪದಲ್ಲಿ, ಸುಮನ ಮಂಟಪವಾವುದು ? ಅರುವರಿತ ಹೃದಯವಾವುದೊ ಅದುವೆ ಸುಮನ ಮಂಟಪ . ಈ ಸುಮನ ಮಂಟಪವು ತನ್ನದಾದ ಮಂಟಪ . ಈ ಮಂಟಪದೊಳಗೆ ನಿತ್ಯ ನಿರಂಜನ ಪ್ರಭೆಯ ಬೆಳಗು ಅದು ತನ್ನ ಬೆಳಗು ಶಿವನ ಬೆಳಗು ಒಂದೆಂಬುವ ನಿಲವು ,ಶಿವ ಯೋಗಾನುಭಾವ ವೇಕಾರ್ಥವಾದುದರಿಂದ ಗುಹೇಶ್ವರಾ ನಿಮ್ಮ ಶರಣ ಅನುಪಮ ಸುಖಿಯಾಗಿರ್ದನು .

ಶರಣನ ಸ್ವಸ್ಥಾನ ಅನುಪಮ , ಸ್ವಸ್ಥಿರ ಅನುಪಮ .ಸುಮನ ಅರುವರಿತ ಸುಮನವು ಅನುಪಮ ಇಲ್ಲಿ ನಿರಂಜನ ಪ್ರಭೆಯ ಬೆಳಗು ಮಾತು ಮನಂಗಳಿಗೆ ಮೀರಿದುದು ಇದು ಶಿವಯೋಗಾನು ಭಾವ ವೇಕಾರ್ಥವಾದ ಮಹಾಂತ , ಇಲ್ಲಿ ನಾ ನೀನೆಂಬುದಕ್ಕೂ ತೆರೆಹಿಲ್ಲದ ಘನಾನುಭಾವ ವಾದ್ದರಿಂದ ಅನುಪಮನೆಂದಿಹರು . ತಾನು ಅನುಪಮ , ತನ್ನ ಸ್ಥಾನ ಅನುಪಮ, ಶಿವಯೋಗಾನುಭಾವ ಅನುಪಮವಾದ್ದರಿಂದ ಇದು ಏಕಾರ್ಥ ನಿಲಯ ಒಂದಾದ ನಿಲಯ ಅಖಂಡಿತ ಘನ ಪೂರ್ಣವಪ್ಪ ತನ್ನಿರುವು ಶಿವನ ಇರುವು ಒಂದಾದ ಇರುವು ಇಲ್ಲಿ ಶಿವ ನೆಂಬುದಿಲ್ಲ ತಾನೆಂಬುದಿಲ್ಲ , ಶಬ್ದ ಸಂದಣಿಗಿಂಬಿಲ್ಲ . ಶಬ್ದ ಮುಗ್ಧವಾಗಿಹ ನಿಶಬ್ದ ಬ್ರಹ್ಮ ನೆಲೆಗೊಂಡ ನಿಲವುಳ್ಳದ್ದಾದುದರಿಂದ ಅನುಪಮ ಸುಖಿ ಎಂದು ಹೇಳಿಹರು .

31

ತುಂಬಿ ಪರಿಮಳವ ನುಂಡುದೊ ?
ಪರಿಮಳ ತುಂಬಿಯ ನುಂಡುದೊ ?
ಲಿಂಗ ಪ್ರಾಣವಾಯಿತೊ ?
ಪ್ರಾಣ ಲಿಂಗವಾಯಿತೊ ?
ಗುಹೇಶ್ವರ ಇವರ ಈ ಉಭಯದ ಭೇದವ ನೀನೆ ಬಲ್ಲೆ . ॥ 679 ॥

ತಾತ್ಪರ್ಯ : ತುಂಬಿ ಪರಿಮಳವ ನುಂಡುದೊ ? ಪರಿಮಳವ ತುಂಬಿಯ ನುಂಡುದೊ: ತುಂಬಿ ಪರಿಮಳವ ನುಂಡ ಸಂಬಂಧ ಪರಿಮಳವ ತುಂಬಿಯ ನುಂಡ ಸಂಬಂಧ ಆದಾರು ಬಲ್ಲರು? ತುಂಬಿ ! ಆನು ಪರಿಮಳವ ನುಂಡೆನೆಂದು ಹೇಳಲು ಅದಕ್ಕೆ ವಾಣಿಯಿಲ್ಲ. ಪರಿಮಳ ! ಆನು ತುಂಬಿಯ ನುಂಡೆನೆಂದು ಹೇಳಲು ಇದಕ್ಕೆ ವಾಣಿ ಇಲ್ಲ . ನುಡಿಯಲು ಬಾರದಂತಿದ್ದ ಉಂಡ ಸುಖವ ಉಂಡುಂಡು ಸುಖದಲ್ಲಿ ತನ್ಮಯವಾದರು . ನುಡಿಯ ಹೋದವರು ಉಂಡೇ ಇಲ್ಲ ಉಂಡವರು ನುಡಿಯದಂತಾದ ಘನವ ಅದೆಂತು ವರ್ಣಿಸುವುದು .

ಪುಷ್ಪದ ಪರಿಮಳ ಘ್ರಾಣೇಂದ್ರಿ ಉಂಡುದೊ ? ಘ್ರಾಣೇಂದ್ರಿ ಘ್ರಾಣ ಪರಿಮಳ ಉಂಡುದೊ? ಇದಾರು ಹೇಳುವರು ? ಪರಿಮಳ ಘಾಣೇಂದ್ರಿಯುಂಡುದು ಶಬ್ದ ಮುಗ್ಧ ಘಾಣೇಂದ್ರಿ ಘ್ರಾಣೇಂದ್ರಿಯ ನುಂಡುದು ಕಂಡ ಪರಿಮಳವು ಕೂಡಾ ಶಬ್ದ ಮುಗ್ಧ . ಮೂಕ ಮೂಕನ ನಿರ್ವಾಣ ಸುಖ ಅದಾರು ನಿರ್ಣಯಿಸುವದು .

ಘ್ರಾಣೇಂದ್ರಿಯು ಪರಿಮಳವನುಣ ಹೋಗಿ ಪರಿಮಳದಲ್ಲಿ ತಲ್ಲೀನವು. ಪರಿಮಳವ ಘಾಣೇಂದ್ರಿಯ ನುಂಡರೂ ಘಾಣೇಂದ್ರಿಯಲ್ಲಿ ತಲ್ಲೀನವು . ಒಂದಕ್ಕೊಂದು ತಮ್ಮನೆ ಮರೆತು ತಲ್ಲೀನವಾದ ಸುಖವು ಅದೆಂತು ವರ್ಣಿಸುವುದು ? ಇದು ಅರಿವಿನ ಸಂಗಮ ಜ್ಞಾನವ ಜ್ಞಾನ ಬಲ್ಲುದು. ನೋಡಲು ಎರಡಾಗಿ ಕಂಡರೂ ಇಷ್ಟಮಾತ್ರ ಒಂದೆ ಒಂದಾದ ಘನವು ಎರಡಾಗಿ ಕಾಣುವವರಿಗೆ ಆದೆಂತು ಸಾಧ್ಯ . ಒಂದಾದ ಘನವು ಹೇಳಲೆಂತು ಬಾರದು ಕೇಳಲೆಂತು ಬಾರದು , ಎಂತಿರ್ದುದಂತೆ ಸಹಜತ್ವ . ಲಿಂಗ ಪ್ರಾಣ ವಾಯಿತೊ ? ಪ್ರಾಣ ಲಿಂಗವಾಯಿತೊ? ಗುಹೇಶ್ವರ ಈ ಉಭಯದ ಭೇಧವ ನೀನೆ ಬಲ್ಲೆ?

ಲಿಂಗವಾಗಿದ್ದ ಪರಿಮಳವದು ನೀನು ಪ್ರಾಣವಾಗಿರುವಿ ಎಂದು ಹೇಳಲು ಅದಕ್ಕೆ ವಾಕ್ಕ್ ಇಲ್ಲ ಪ್ರಾಣವಾಗಿರುವ ತುಂಬಿಗೆ ನೀನು ಲಿಂಗವಾಗಿರುವಿ ಎಂದು ಹೇಳಲು ಅದಕ್ಕೆ ವಾಣಿಯಿಲ್ಲ. ಸೋಹಂ

ಎಂಬ ಸುನಾದವ ಲಿಂಗ ವೆಂಬ ಪರಿಮಳ ಬಲ್ಲುದೊ ? ಲಿಂಗವೆಂಬ ಪರಿಮಳವ ಸೋಹಂ ಎಂಬ ಪ್ರಾಣರೂಪಿ ತುಂಬಿ ಬಲ್ಲದೊ ? ಅದಾರು ನಿರ್ಣಯ ಮಾಡುವುದು ? ಲಿಂಗವದು ಪ್ರಾಣ ಬಲ್ಲದೊ ? ಪ್ರಾಣವದು ಲಿಂಗ ಬಲ್ಲುದೊ? ಲಿಂಗವೆಂಬುದು ಅರುವಿನ ಪರಿಮಳ ಅರುವರಿತು ಅರುವ ಬೆರೆತು ಅರಿಯ ದರುವು ಆದ ಪರಮಾನಂದ ಪೂರ್ಣನಂದ ಚಿನ್ಮಯಾನಂದ ಪ್ರಾಣವದು ಪೂರ್ವದಲ್ಲಿದ್ದುದು ಆವುದೊ ? ಈಗಲೂ ಅದುವೆ ಆದುದು ಲಿಂಗದಲ್ಲಿ ಉದಯವಾದುದು ಲಿಂಗವು ಅದಕ್ಕೆ ಬೇರೆ ಮತ್ತೊಂದೆಡೆ ಯುಂಟೆ ?ಅಖಂಡಿತ ಘನ ಪೂರ್ಣವಾಗಿಪ್ಪದು ಲಿಂಗ ಈ ಘನ ಲಿಂಗದಲ್ಲಿ ಪ್ರಾಣ ಬೇರಾಗಿರಲು ಸಂದುಂಟೆ ? ಪ್ರಾಣ ಲಿಂಗ ಬೇರಾಗಿರಲು ಸಂದಿಲ್ಲದಿರುವಲ್ಲಿ ಬಹು ಲಿಂಗಾರ್ಚಕರಿಗೂ , ಪ್ರಾಣಾಯಾಮ ಮಾಡಿ ಕುಂಭಕ ಯೋಗ ಸಾಧಿಸುವ ಹಠಯೋಗಿಗಳಿಗೂ ಲಿಂಗ ವರಿಯುವ ಹೃದಯ ವಿಲ್ಲವಾಗಿದೆ. ಹೀಗಾಗಿ ಪ್ರಾಣ , ಲಿಂಗದ ರಹಸ್ಯ ಭೇದ ತಿಳಿಯದಂತಾಗಿದೆ. ಆರು ಸದ್ಗುರು ಕೃಪೆಯಿಂದ ಅರುವ ಅರಿಯ ಹೇಳಿದ ಕುರುಹು (ಲಿಂಗ) ಇದನಾರು ತಿಳಿಯಹೋದರು ಅವರಿಗೆ ಲಿಂಗವು ಘನವಾಗಿ ಕಂಡು ವೇದ ವೇದಾಂತಗಳಿಗೆ ಸಾಧ್ಯವಾಗಿಹ ಅನುಪಮ ಲಿಂಗವಾಗಿ ಕಂಡರು ವಾಙ್ಮನಕ್ಕೆ ಬಾರದ ಅಖಂಡಿತ ಲಿಂಗವಾಗಿ ಕಂಡರು. ನಾದ ಬಿಂದು ಕಲೆಗಳಿಗಳಿಗಭೇದ್ಯವಾದ ಅಚಲಿತ ಲಿಂಗವಾಗಿ ಕಂಡರು. ಅವರದು ನಿಸ್ಸೀಮ ದೃಷ್ಠಿ ಅಲ್ಲಿ ಸೀಮಿತ ದೃಷ್ಠಿ ಗಿಂಬಲ್ಲ , ಪ್ರಾಣ ಲಿಂಗವಾಯಿತ್ತೊ? ಲಿಂಗ ಪ್ರಾಣವಾಯಿತ್ತೊ ? ಪ್ರಶ್ನಿಸಿಹರು.

ಆರು ಲಿಂಗವರಿತು ಲಿಂಗವ ಬೆರೆತು ಲಿಂಗೈಕ್ಯರಾಗಿಹರು ಅವರು ಗುಹೇಶ್ವರ ಸ್ವರೂಪಿಗಳು. ಶಬ್ದ ಮುಗ್ದ ಸ್ವರೂಪಿಗಳು ಶಬ್ದ ಸಂಭ್ರಮಕ್ಕೆ ಸಿಲುಕದವರು , ತಮ್ಮ ವಚನ ತಮಗೆ ಹಗೆಯಾದವರು ಅಚ್ಚಸುಖಿಗಳು , ಅಖಂಡಿತ ಘನ ಪರಿಪೂರ್ಣವಪ್ಪ. ಪರಮಾನಂದಮಯರು . ಅವರು ಮಾತ್ರ ಈ ಉಭಯದ ಭೇದವ ಬಲ್ಲರು ಅವರು ಪರಿಮಳವೆಂಬ , ಲಿಂಗ , ತುಂಬಿ ಎಂಬ ಪ್ರಾಣ ಈ ಉಭಯ ಭೇದ ಬಲ್ಲವರು ಏಕೆಂದರೆ ಅರುವಿಂಗರುವಾಗಿಹ ಸಂಜ್ಞೆಯುಳ್ಳ ಲಿಂಗ ಪರಿಮಳವಾಗಿದೆ. ಅರುವೆ ತುಂಬಿ ರೂಪಿ ಪ್ರಾಣವಾಗಿದೆ . ಇದು ಕಾರಣ ಪ್ರಾಣ ಸ್ವಾಸೋಛ್ವಾಸ ಮೇಲೆ ಹೋಗುವಾಗ ಸೋ ಎಂದು ಕೆಳಗೆ ಇಳಿಯುವಲ್ಲಿ ಹಂ ಎಂಬುದು ಸಿದ್ದವಾಗುವದು ಅದಕ್ಕಾಗಿ ಪ್ರಾಣವು ಸೋಹಂ ರೂಪಾಗಿದೆ ಸೋಹಂ ಎಂಬುದ ಬ್ರಹ್ಮಸ್ಮಿ ಆಗಿದೆ.ಪ್ರಜ್ಞಾನಂ ಬ್ರಹ್ಮವಾಗಿದೆ, ಈ ಪರಬ್ರಹ್ಮದಿರುವುಳ್ಳದು ಲಿಂಗರೂಪಿ ಪರಿಮಳವಾಗಿದೆ. ಅರುವಿಂಗರುವಾಗಿಹ ಲಿಂಗರೂಪಿ ಪರಿಮಳವು ಅರು ಸ್ವರೂಪವಾದ (ತುಂಬಿಯ ಭೇದ ಕಂಡದು) ತುಂಬಿರೂಪ ಪ್ರಾಣ ದಾಸೋಹ ಭೇದ , ಲಿಂಗ ಪ್ರಾಣವಾಯಿತ್ತೊ ? ಪ್ರಾಣ ಲಿಂಗವಾಯತ್ತೊ ? ಗುಹೇಶ್ವರ ಈ ಉಭಯದ ಭೇದವು ನೀನೆ ಬಲ್ಲೆ ಎಂದು ಹೇಳಿಹರು.

32

ಲಿಂಗಾರ್ಚನೆಯ ಮಾಡುವ ಮಹಾಮಹಿಮರೆಲ್ಲರೂ ಸಲಿಗೆವಂತರಾಗಿ
ಒಳಗೈದಾರೆ ಆನು ದೇವಾ ಹೊರಗಣವನು . ಸಂಬೋಳಿ , ಸಂಬೋಳಿ ,
ಎನ್ನುತ್ತ ಇಂಬಿನಲ್ಲಿ ಇದ್ದೇನೆ ಕೂಡಲಸಂಗಯ್ಯ ನಿಮ್ಮ ನಾಮ ಎಂದು
ನಾನು ಅನಾಮಿಕನಾದೆನು .

ತಾತ್ಪರ್ಯ : ಲಿಂಗಾರ್ಚನೆ ಮಾಡುವ ಮಹಾಮಹಿಮರೆಲ್ಲರೂ ಸಲಿಗೆವಂತರಾಗಿ ಒಳಗೈದಾರೆ: ಬಸವರಸರು ಲಿಂಗಾರ್ಚನೆಯ ಮಾಡುವವರನ್ನು ಮಹಾ ಮಹಿಮರು , ಲಿಂಗದೇವನ ಸಲಿಗೆವಂತರು , ಲಿಂಗದೊಳಗೆ ಇದ್ದವರು ಎಂದು ಹೇಳಿದುದು . ಲಿಂಗಾರ್ಚನೆಯ ಘನವಂತ ಲಿಂಗದ

ನೆಲೆ ಕಲೆ ಅರಿತು ಲಿಂಗವಾಗಿಹ ಮಹಾಮಹಿಮ. ಲಿಂಗೈಕ್ಯನಾಗಿದ್ದರೂ ತನ್ನ ಹಿರಿಮೆಯ ಹೇಳಿಕೊಳ್ಳದೆ ಲಿಂಗಾರ್ಚಕರ ಕೊಂಡಾಡುವದು ಆ ಮಹಾಂತನಿಗೆ ಶರಣರ ಕಂಡರೆ ಆಗುವ ಭಾವಾವೇಶ.

ಲಿಂಗಾರ್ಚನೆ ಮಾಡುವವರು ಆರು ? ಮಹಾಮಹಿಮರು ಆರು ? ಬ್ರಹ್ಮ , ವಿಷ್ಣು , ರುದ್ರಪದದ ಪ್ರೇಮಿಗಳಿಗೆ ಮಹತ್ವ ಕೊಡದೆ , ನಿರ್ಮಲ ಲಿಂಗದಲ್ಲಿ ಸಂಬಂಧವಾದ ಶರಣರು . ನಿರ್ಮಲ ಲಿಂಗವಾವುದು ?

ಲಿಂಗವ ಸ್ಥೂಲವೆಂಬರು ಕೆಲವರು , ಲಿಂಗ ಸ್ಥೂಲವಲ್ಲ. ಲಿಂಗ ಸೂಕ್ಷ್ಮವೆಂಬರು ಕೆಲಬರು ಲಿಂಗ ಸೂಕ್ಷ್ಮವಲ್ಲ. ಸ್ಥೂಲ ಸೂಕ್ಷ್ಮದ ಮೇಲಣ ಜ್ಞಾನರೂಪು ಪರಾನಂದ, ಪರಬ್ರಹ್ಮವೆ ಲಿಂಗವೆಂದರಿದ ಅರುವು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ನಿಲವು ತಾನೆ ಬೇರಿಲ್ಲ . '' ಬಹು ಭಾವಿಕರು ಲಿಂಗದ ನೆಲೆಕಲೆ ಅರಿಯದೆ ಲಿಂಗ ಪೂಜಿಸುವ ಲಿಂಗಾರ್ಚಕರು ಬಹಳುಂಟು''. ಇವರು ಲಿಂಗ ಲಿಂಗ ಎನ್ನುವ ಭಾವಿಕರಲ್ಲದೆ . ಲಿಂಗ ನೆಲೆ ಕಲೆ ಅರಿಯದ್ದರಿಂದ ಅದು ಕುರುಹಾಗಿ ಕಂಡಿತು. ಕುರುಹಾಗಿ ಲಿಂಗವ ಕಂಡವರು ಕುರುಡರು .

ಕುರುಡ ಕನ್ನಡಿ ಹಿಡಿದರೇನು ತನ್ನ ಮುಖವ ತಾ ಕಾಣಲರಿಯದಂತೆ, ಶಿವಜ್ಞಾನವಿಲ್ಲದವನ ಕೈಯಲ್ಲಿ ಲಿಂಗವಿದ್ದಡೇನು ಲಿಂಗದಲ್ಲಿ ತನ್ನ ನಿಜವ ತಾ ಕಾಣಲರಿಯ . ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ. ನರಿಯದವರು ಲಿಂಗ ಹಿಡಿದಡೇನು ವ್ಯರ್ಥ ಕಾಣಿರಣ್ಣಾ ಎಂದು ಹೇಳಿದುದು ನೋಡಿದಡೆ ಲಿಂಗ ಪೂಜಿಸುವ ಲಿಂಗಾರ್ಚಕರು ಪ್ರಥಮ ಲಿಂಗದ ನೆಲೆ ಕಲೆ ಅರಿತರೆ ಬಹುಲಾಭ . ಅದರಿಂದ ತಾನಾರೆಂದರಿಯಲು ಸಹಜ . ಲಿಂಗದ ನೆಲೆ ಕಲೆ ಅರಿದಲ್ಲದೆ ಭಕ್ತಿ ವಿರಕ್ತಿ ನೆಲೆಗೊಳ್ಳವು. ಲಿಂಗದ ನೆಲೆ ಕಲೆ ಅರಿದಲ್ಲದೆ ಜ್ಞಾನಾನಂದವು ದೊರಕೊಳ್ಳವು ನೋಡಾ ಎಂದು ಬಿತ್ತರಿಸಿದುದು ನೋಡಿದಡೆ ಲಿಂಗಾರ್ಚಕರೆಂದರೆ ಲಿಂಗದ ನೆಲೆಕಲೆ ಅರಿತವರು , ಅವರಲ್ಲಿ ಭಕ್ತಿ ಉಂಟು , ವಿರಕ್ತಿ ಉಂಟು. ಅಲ್ಲಿ ಜ್ಞಾನಾನಂದವು ಉಂಟು . ಏಕೆಂದರೆ ಅವರು ಲಿಂಗವ ಸೂಕ್ಷ್ಮವೆನಲಿಲ್ಲ, ಸ್ಥೂಲವೆನಲಿಲ್ಲ ಅದನ್ನು ಜ್ಞಾನಸ್ವರೂಪ, ಸಚ್ಚಿದಾನಂದ , ಅಖಂಡಿತ ಘನ ಪರಿಪೂರ್ಣವೆ ತನ್ನಿರುವೆಂದರಿದ ಲಿಂಗಾರ್ಚಕರು ಇವರು, ಲಿಂಗವರಿತು ಲಿಂಗದಲ್ಲಿ ಬೆರೆತ ಲಿಂಗಾರ್ಚಕರು ಇವರು ಮಹಾಮಹಿಮರು. ಇವರ ಲಿಂಗಾನುಸಂಧಾನ ಸಾಮಾನ್ಯವೆ ?ಲಿಂಗಾನುಸಂಧಾನ ಮಾಡುತ್ತ ಜ್ಞಾನಾನಂದಮಯರಾದರು. ಇದು ಕಾರಣ ಅವರ ಚಿಂತನ ನೆನಹು ಭಾವ ಅಪ್ರತಿಮವು . ಚಿಂತನ ಮಾಡುತ್ತ ಮಾಡುತ್ತ ಚಿಂತನ ಮಾಡದ ಅಚಿಂತ್ಯರಾದುದು ಸಾಮಾನ್ಯವೆ ? ನೆನೆಯುತ್ತ , ನೆನೆಯುತ್ತ ನೆನಹಿಂಗೆ ಮೀರಿದ ಘನರಾದುದು . ಭಾವದವರಾಗಿ , ಭಾವಿಸದವರಾಗಿ , ಭಾವಕ್ಕಗಮ್ಯರಾದುದು, ಅಸಾಧ್ಯವ ಸಾಧಿಸಿದುದು ಅವರ ದಿವ್ಯ ದೃಷ್ಟಿಗೆ ಬ್ರಹ್ಮಪದ , ವಿಷ್ಣು ಪದ ,ರುದ್ರಪದ ಕಿಂಚಿತ್ತಾಗಿ ಕಂಡಿರುವಾಗ ಜಗದ ಕಾರ್ಯವು ಕಾಣಲಿಲ್ಲ. ಕಾರಣವೂ ಕಾಣಲಿಲ್ಲ. ಚತುರ್ವಿಧ ವಾಗಿಹ ಸಾಯುಜ್ಯ, ಸಾಲೋಕ್ಯ , ಸಾಮಿಪ್ಯ , ಸಾರೋ ಪ್ಯಗಳ ಗಣನೆ ಮಾಡದೆ ಅಗಣಿತವಾಗಿಹ, ಅಖಂಡಾನಂದರೂಪಿ ಜ್ಞಾನಾಮೃತ ಸ್ವರೂಪವೆ ತಾನಾಗಿಹರು .

ಲಿಂಗಾರ್ಚನೆ ಮಾಡುವ ಮಹಾ ಮಹಿಮರು ಲಿಂಗ ಮುಂತಾಗಿ ನಡೆವರು, ಶರಣ ಲಿಂಗ ಮುಂತಾಗಿ ನುಡಿವರು , ಶರಣ ಲಿಂಗ ಮುಂತಾಗಿ ರುಚಿಸುವರು ಶರಣ , ಲಿಂಗ ಮುಂತಾಗಿ ನೋಡುವವರು ಶರಣ , ಲಿಂಗ ಮುಂತಾಗಿ ಸಂಗ ಮಾಡುವರು , ಶರಣ ಲಿಂಗ ಮುಂತಾಗಿ ತೃಪ್ತಿಯ ನೈದುವರು . ಶರಣ ಲಿಂಗ ಕಾಯ ಶರಣ , ಶರಣ ಕಾಯ ಲಿಂಗ ಕೂಡಲಚೆನ್ನಸಂಗಯ್ಯ ನಮ್ಮ ಶರಣ ಸರ್ವಾಂಗ ಲಿಂಗಿ .

ಲಿಂಗಾರ್ಚನೆ ಮಾಡುವ ಮಹಾ ಮಹಿಮರು ಇವರು ಸರ್ವಾಂಗ ಲಿಂಗಿಗಳು. ಇವರ ಕಾಯ ಲಿಂಗ, ಇವರ ನಡೆ ಲಿಂಗ, ನುಡಿ ಲಿಂಗ, ನೋಟ ಲಿಂಗ, ರುಚಿಸುವುದು ಲಿಂಗ ಅವರ ಸಂಗ ಲಿಂಗ ಸಂಗ, ಅವರ ತೃಪ್ತಿ ಲಿಂಗ ತೃಪ್ತಿಯ ತೃಪ್ತಿ . ಇವರು ಮಹಾ ಮಹಿಮರು ನೋಡುವ ನೋಟ ನೀವೆಂದೆ ಅರಿದವರು, ಕೇಳುವ ಶ್ರೋತ್ರ ನೀವೆಂದೆ ಅರಿದವರು. ಇವರು ಘ್ರಾಣದ ಘಾಣವಾದವರು. ತ್ವಕ್ಕಿನ ತ್ವಕ್ಕಾದವರು . ಜಿಹ್ವೆಯ ಜಿಹ್ವೆಯಾದವರು . ಕರಣಂಗಳ ಕಿರಣಂಗಳ ಮಾಡಿದವರು . ಇವರು ಮಹದರುವುಳ್ಳ ಮಹಾನುಭಾವಿಗಳಾದುದರಿಂದ ಇವರು ಸಲಿಗೆವಂತರಾಗಿ ಒಳಗಿದ್ದವರು ಆರು ಸಲಿಗೆವಂತರು ? ಆರು ಒಳಗಿದ್ದವರು ? ಲಿಂಗದ ಸಲಿಗೆ ವಂತರು , ಲಿಂಗದೊಳಗೆ ಇದ್ದವರು ಲಿಂಗವೆಂಬ ಜ್ಞಾನಾನಂದ ಸಲಿಗೆವಂತರು ಅಖಂಡಿತ ಘನಪೂರ್ಣವಪ್ಪ ಲಿಂಗದೊಳಗೆ ಇದ್ದವರು.

ಆನುದೇವಾ ಹೊರಗಣವನು ಸಂಬೋಳಿ ಸಂಬೋಳಿ ಎನ್ನುತ್ತ ಇಂಬಿನಲ್ಲಿ ಇದ್ದೇನೆ : ಬಸವರಸರು ಸಕಲರನ್ನು ಪೂಜ್ಯರ ಮಾಡಿ ತಾನು ಪೂಜಕನಾದ ನಿರಾಡಂಬರ ಮೂರ್ತಿ. ಲಿಂಗ, ಲಿಂಗ ಪೂಜೆ ಮಾಡುವ ಲಿಂಗಾರ್ಚಕರನ್ನು ಪೂಜ್ಯರನ್ನಾಗಿ ಮಾಡಿ , ತಾನು ಏನನ್ನು ಅರಿಯದ ಮುಗ್ಧನಂತೆ ಭಾವಿಕನಂತೆ ಲಿಂಗದ ನೆಲೆ ಕಲೆ ಅರಿಯದವನಂತೆ ಲಿಂಗದರಿವು ತನಗೆ ಯತಾರ್ಥ ವೇದ್ಯ ವಾಗಿಲ್ಲವೇನೊ ಎನ್ನುವಂತೆ ಆನುದೇವಾ ಹೊರಗಣವನ್ನು ಸಂಬೋಳಿ ಸಂಬೋಳಿ , ನನ್ನನು ರಕ್ಷಿಸು ಸಂರಕ್ಷಿಸು , ನಿಮ್ಮ ಆಶ್ರಯದಲ್ಲಿಯೆ ಇಟ್ಟುಕೊಳ್ಳಿ, ನಿಮ್ಮ ನಿಷ್ಪತ್ತಿ ನಿರಾಳವಾದ ನಿಶ್ಚಿಂತತತ್ವದಲ್ಲಿ ಇಟ್ಟುಕೊಳ್ಳಿಏಕೆಂದರೆ ನಾನು ದೇವಾ ಹೊರಗಣವನು ಲಿಂಗದ ನೆಲೆಯ ಅರಿಯದಿದ್ದವನು ಲಿಂಗ ಪೂಜಾ ರಹಸ್ಯವರಿಯದವನು ಲಿಂಗಾರ್ಚನೆ ಮಾಡುವ ಮಹಾಮಹಿಮರಂತೆ ಎನ್ನ ನೊಟವಿಲ್ಲ ನಡೆ ಇಲ್ಲ, ನುಡಿ ಇಲ್ಲ ಸರ್ವಾರ್ಪಿತವಿಲ್ಲ ಲಿಂಗ ಭೋಗೋಪ ಭೋಗಿಯಲ್ಲ, ಎನ್ನ ಕಾಯ ಲಿಂಗವಾಗಿಲ್ಲ ನನ್ನವು ಸರ್ವಾಂಗ ಲಿಂಗವಾಗದ್ದರಿಂದ ನಾನು ಹೊರಗಣವನು ಎಂದು ತನ್ನನ್ನೆ ಕಿಂಕರರ ಕಿಂಕರನನ್ನಾಗಿ ಲಿಂಗಾರ್ಚಕರನ್ನು ಶಂಕರನನ್ನಾಗಿ ಕಾಣುವ ಈ ಮಹಾಮಹಿಮನ ವರ್ಣನೆ ಅದೆಂತು ವರ್ಣಿಸುವುದು.

ಕೂಡಲಸಂಗಯ್ಯ ನಿಮ್ಮ ನಾಮ ವಿಡಿದು ಅನಾಮಿಕನಾದೆನು ಎಂದು ನುಡಿದುದು ನೋಡಿದಡೆ ಲಿಂಗರ್ಚನೆ ಮಾಡುವ ಮಹಾಮಹಿಮರು ಲಿಂಗ ಲಿಂಗ ವೆನ್ನುವ ನಾಮಿಕರಾಗಿಹರು ಶಬ್ಧ ಮುಗ್ಧವಾಗಲಿಲ್ಲ. ಲಿಂಗವದು ಇವರಿಗೆ ಅನಾಮಿಕವಾಗಲಿಲ್ಲ, ಬಸವರಸರು ಕೂಡಲಸಂಗಯ್ಯ ನಿಮ್ಮ ನಾಮ ವಿಡಿದು ಅನಾಮಿಕನಾದೆನು ಎಂದು ಬಿತ್ತರಿಸಿದುದು ನೋಡುವುಡೆ, ಬಸವರಾಜ ಜಂಗಮ ಒಂದಾಗಿರ್ದ ಲಿಂಗ , ಲಿಂಗ ಒಂದಾಗಿರ್ದ ಜಂಗಮ , ಉಪಮೆಗೆ ತಂದು ಎರಡೆನ್ನ ಬಹುದೆ? ಮಹಾಘನ ನಿರಾವರಣ ನಿರ್ಜನಿತ ನಿರ್ಲೇಪ ನಿಃಕಪಟ ನಿರ್ವಚನೀಯನುಪಮಿಸಲಿಲ್ಲ ನಿಲ್ಲೊ? ನಿರಾಳ ನಿರ್ಮಾಯ . ನಿಸ್ಸಂಗಿ ನಿರ್ಲಿಖಿತ ನಿರವಯನ ಅವಯವಕ್ಕೆ ತರಲಿಲ್ಲ ನಿಲ್ಲೋ ಸಿಮ್ಮಲಿಗೆಯ ಚೆನ್ನರಾಮನೆಂಬ ಜಂಗಮ ಲಿಂಗವನುಪಮಿಸಲಿಲ್ಲ ನಿಲ್ಲೊ ಕೂಡಲಸಂಗಯ್ಯನೆಂಬುದು ಜಂಗಮ ಲಿಂಗ , ಅದು ಲಿಂಗ ಒಂದಾಗಿರ್ದ ಜಂಗಮ , ಅದು ಉಪಮಾತೀತವಾದ್ದರಿಂದ ನಿಮ್ಮ ಅನುಪಮ ನಾಮ ವಿಡಿದು ನಾನು ಅನಾಮಿಕನಾದೆನು ಎಂದು ಬಸವರಸರು , ಲಿಂಗ ಒಂದಾಗಿರ್ದ ಜಂಗಮ ಭಕ್ತ . ಆ ಜಂಗಮ ದೇವನು ನಿರ್ವಚನೀಯ ಜಂಗಮ , ನಿರ್ಲಿಖಿತ ಜಂಗಮ , ಮಹಾಮಹಿಮನ ನಾಮ ವಿಡಿದು ಅನಾಮಿಕನಾದೆನು ಎಂದು ಹೇಳಿಹರು .

33

ಕಾಯ ಗುಣವಳಿದು ಜೀವನ್ಮುಕ್ತನಾದ ಬಳಿಕ
ಸಮ್ಯಜ್ಞಾನವೆಂಬ ಶಾಂತಿದೊರ ಕೊಂಡಿತ್ತು ನೋಡಿರೆ,

ಅಂತ ರಂಗ ಬಹಿರಂಗ ವೆಂಬುದ ನರಿಯನಾಗಿ
ದ್ವೈತಾ ದ್ವೈತವ ನಿಃಕರಿಸಿ ನಿರ್ವಾಣ ನಿಷ್ಪತ್ತಿಯಾಗಿ
ಗುಹೇಶ್ವರಾ ನಿಮ್ಮ ಶರಣ ಅನುಪಮ.

ತಾತ್ಪರ್ಯ : ಕಾಯ ಗುಣವಳಿದು ಜೀವನ್ಮುಕ್ತನಾದ ಬಳಿಕ ಸಮ್ಯಜ್ಞಾನವೆಂಬ ಶಾಂತಿದೊರ ಕೊಂಡಿತ್ತು ನೋಡಿರೆ : ಕಾಯಗುಣವಳಿದುದು ಹೇಗೆ ? ಕಾಯಗುಣವಳಿಯ ಬೇಕಾದರೆ ಆದಿ ಪುರಾತನರು ಮಾಡಿದ ಪಥ ವಿಡಿದಾಗ ಕಾಯಗುಣವಳಿಯಲು ಬರುತ್ತದೆ.

" ನಡೆ ನುಡಿ ಚೈತನ್ಯವುಳ್ಳನ್ನ ಬರ ಒಡಲ ಗುಣಗಳಾರಿಗೆಯು ಬಿಡವು ನೋಡಾ. ನೋಡುವ ನಯನ ಕೇಳುವ ಶ್ರೋತ್ರ ವಾಸಿಸುವ ಘ್ರಾಣಕ್ಕೆ ಗಂಧಾದಿಗಳು ತಾಗಿದ ವೆನಬೇಡ , ನೋಡುತ್ತ, ನಡೆಯುತ್ತ, ಕೇಳುತ್ತ, ಲಿಂಗಾರ್ಪಿತ ಮಾಡುವ ಲಿಂಗ ಭೋಗಪ ಭೋಗಿಗೆ ಸರ್ವಾಂಗ ಶುದ್ಧವೆಂಬುದು ಇದೆ ಕಂಡಯ್ಯ".

ಕಾಲತ್ರಯಂಗಳ ಜೀವತ್ರಯಂಗಳ ಭಾವ ತ್ರಯಂಗಳ ನೊಂದುಮಾಡಿ ಸುಖ ದುಃಖ ಸಗುಣ ನಿರ್ಗುಣವೆಂಬುಭಯ ಲಿಂಗದಲ್ಲಿ ಏಕ ಮಾಡಿ, ಅಹುದು ಅಲ್ಲ ಬೇಕು ಬೇಡ ಎಂಬ ಸಂದು ಸಂಶಯ ಕಳೆದಿಪ್ಪುದು ಕೂಡಲಚೆನ್ನಸಂಗಯ್ಯನಲ್ಲಿ ಆದಿಪುರಾತನರು ಮಾಡಿದ ಪಥವು.

ಕಾಯಗುಣವಳಿಯಲು ಮೊದಲು ಲಿಂಗಾರ್ಪಿತ ಮಾಡಿ, ಲಿಂಗಭೋಗೋಪ ಭೋಗಿಯಾ ಗುವುದು. ಇದರಿಂದ ನಡೆ ಶುದ್ಧ, ನುಡಿ ಶುದ್ಧ, ಮಾಟ ಶುದ್ಧ, ಕೂಟ ಶುದ್ಧ, ಭಾವಂಗಳು ಶುದ್ಧ, ಕರಣಗಳು ಶುದ್ಧ, ನೋಡುತ್ತ ನಡೆಯುತ್ತ ಕೇಳುತ್ತ ಲಿಂಗಾರ್ಪಿತ ಮಾಡುವುದರಿಂದ ಇಲ್ಲದುದು ಇಲ್ಲವಾಗಿ ಇದ್ದ ಆಬಾಧಿತ ಪದ ಸಿದ್ಧವಾಗುವುದು. ಆಗ ಇಲ್ಲವೆಂಬುದು ಇಲ್ಲವಾಗಿ ಅನುಪಮದರಿವು ತನ್ನೊಳು ಪ್ರಜ್ವಲಿಸುವುದು. ಏಕೆಂದರೆ ಈ ಘನವಂತನು ಕಾಲತ್ರಯಂಗಳ ಜೀವತ್ರಯಂಗಳ ಭಾವತ್ರಯಂಗಳ ನೊಂದುಮಾಡಿ ಸುಖದುಃಖ ಸಗುಣ ನಿರ್ಗುಣವೆಂಬುಭಯ ಲಿಂಗದಲ್ಲಿ ಏಕಮಾಡಿದ ಮಹಾ ಮಹಿಮ. ಅಖಂಡಿತ ಘನಪೂರ್ಣವದು ತನ್ನಿರುವೆಂದರಿದಿರುವದರಿಂದ ಈ ಮಹಾ ಮಹಿಮ ಸಕಲವು ಲಿಂಗವಾಗಿ ಕಾಣುವ ಪಿಂಡಾಂಡ ಬ್ರಹ್ಮಾಂಡ ಲಿಂಗವಾಗಿ ಕಂಡ.

ಜೀವತ್ರಯಂಗಳ ಲಿಂಗವಾಗಿ ಕಂಡ, ಭಾವ ತ್ರಯಂಗಳ ಲಿಂಗವಾಗಿ ಕಂಡ, ಸುಖ ದುಃಖ, ಸಗುಣ ನಿರ್ಗುಣಗಳನ್ನು ಲಿಂಗವಾಗಿ ಕಂಡ , ಏಕೆಂದರೆ ಅಖಂಡಿತ ಘನಪೂರ್ಣವೆ ತನ್ನಿರುವೆಂದರಿದವಂಗೆ , ಖಂಡಿತವಾಗಿಹ ಭಾವಿಕಾಲ , ಭವಿಷ್ಯತ್ಕಾಲ , ವರ್ತಮಾನ ಕಾಲ ಕಾಣುವುದುಂಟೆ ? ವಿಶ್ವ ತೈಜಸ , ಪ್ರಾಜ್ಞರುಗಳೆಂಬ ಜೀವರುಗಳಾದರು ಉಂಟೆ ? ಜೀವ ಭಾವ ಅಂತರಾತ್ಮನೆಂಬ ಭಾವ , ಪರಮಾತ್ಮನೆಂಬ ಭಾವಂಗಳ ಕಾಣಲುಂಟೆ ? ಸುಖ ದುಃಖ ವೆಂಬಿವು ಸೀಮಿತವು . ಸುಖ ವಿದ್ದಾಗ ದುಃಖ ವಿಲ್ಲ , ದುಃಖ ವಿದ್ದಾಗ ಸುಖವಿಲ್ಲ . ನಿಸ್ಸೀಮವಾಗಿಹ ಪರಿಪೂರ್ಣಗೆ ಸುಖವಾವುದೊ, ದುಃಖವಾವುದು ? ಖಂಡಾ ಖಂಡ ಸಂಯೋಗವಿಲ್ಲದೆ ಅಖಂಡಿತಂಗೆ ಸಗುಣವಾವುದು ? ನಿರ್ಗುಣವಾವುದು ? ಗುಣದಿಂದುಕ್ತವಾದುದು ಆವುದು ಗುಣ ರಹಿತ ವಾದುದು ಆವುದು ? .

ಕಾಯಗುಣವಳಿದ ಚಿನ್ಹವದು ಸರ್ವಪ್ರಪಂಚ ನಿವೃತ್ತವಾಗಿಹ ಚಿನ್ಹ . ಅಖಂಡಿತ ಘನಪೂರ್ಣ ವಪ್ಪ ತನ್ನಿರುವೆ ಅರುವೆಂದರಿದುದು ಜೀವನ್ಮುಕ್ತನಾದ ಚಿನ್ಹ. ಆವಲ್ಲಿ ತಾನೆಂಬ ತೋರಿಕೆ ಹುಟ್ಟದಿಹುದು ಅದು ಸಮ್ಯಜ್ಞಾನದ ಚಿನ್ಹ. ಸಮಜ್ಞಾನವು ಆವಲ್ಲಿ ಬೆಳಗುತ್ತಿಹುದು ಅಲ್ಲಿ ಶಾಂತಿ ದೊರಕೊಂಡ ನಿಲಯ, ಆವಲ್ಲಿ ಪರಮಶಾಂತಿಯ ನಿಲಯವಾಗಿಹುದು ಅದು ನಿಶ್ಚಿಂತದ ನಿಜಧಾಮವು. ಆವಲ್ಲಿ ನಿಶ್ಚಿಂತ

ನಿಜಧಾಮವಾಗಿಹುದು ಅಲ್ಲಿ ಅಂತರಂಗ ಬಹಿರಂಗವೆಂಬುದ ನರಿಯರಾಗಿ ದ್ವೈತಾ ದ್ವೈತವ ನಿಃಕರಿಸಿ ನಿರ್ವಾಣ ನಿಷ್ಪತಿಯಾಗಿ ಗುಹೇಶ್ವರ ನಿಮ್ಮ ಶರಣ ಅನುಪಮನೆಂದರು. ಶರಣ ಅನುಪಮನಾದರಿಂದ ದ್ವೈತವ ಮೀರಿದವನು ಅದ್ವೈತವ ಮೀರಿದವನು ಭೇದಾ ಭೇದ ವಿಮುಕ್ತ ಸುಖಮಯನು, ಆ ಸುಖ ಸ್ವರೂಪದ ಘನವ ಅದಾವ ಭಾಷೆಯಿಂದ ವರ್ಣಿಸುವುದು, ಇದು ಕಾರಣ ಗುಹೇಶ್ವರಾ ನಿಮ್ಮ ಶರಣ ಜೀವಬ್ರಹ್ಮ ಬೇರೆಂಬುದು ಕಾಣದವನು, ಜೀವ ಬ್ರಹ್ಮ ಒಂದೆಂಬುದು ಕಾರಣದವನು ಏಕೆಂದರೆ ಏನೆಂದೆನಲಿಲ್ಲದ ಅಖಂಡ ಪರಿಪೂರ್ಣ ಪರಮಾನಂದವೆ ತಾನೆಂಬರುವಿನ ಅಹಂಕಾರವಿಲ್ಲದವನಾದುದರಿಂದ ಅದ್ವೈತ ಮೀರಿದವನು ಸರ್ವಜ್ಞ ನೀನು, ಅಲ್ಪಜ್ಞ ನಾನು, ನಾನು ಪರತಂತ್ರ, ನೀನು ಸ್ವತಂತ್ರ. ನೀನು ಪರೋಕ್ಷ ನಾನು ಅಪರೋಕ್ಷ ನೀನು ಸರ್ವಶಕ್ತಿವುಳ್ಳ ಸಮರ್ಥ ನಾನು ಅಸಮರ್ಥನೆಂಬ ಗಜಿಬಿಜಿಯಲ್ಲಿ ಸಿಲುಕದವನಾದುದರಿಂದ ದ್ವೈತಿಯಲ್ಲ ನಾ ನೀನೆಂಬುದಕ್ಕೆಡೆಗೊಡದ ಘನ ಮಹಿಮನು ಆಗಿರುವದರಿಂದ ದ್ವೈತಾ ದ್ವೈತವ ನಿಃಕರಿಸಿ ನಿರ್ವಾಣ ನಿಷ್ಪತಿಯಾಗಿ ಗುಹೇಶ್ವರ ನಿಮ್ಮ ಶರಣ ಅನುಪಮ ನೆಂದಿಹರು.

34

ಅರಿಯಲಿಲ್ಲದ ಅರಿವು ಅವಗ್ರಹಿಸಿತ್ತಾಗಿ ಅರಿಯಲಿಲ್ಲ ಮರೆಯಲಿಲ್ಲ.
ನಿಜವು ನಿಂದಿತ್ತಾಗಿ ನಿರ್ನಾಮವಾಯಿತ್ತಾಗಿ ನಿಷ್ಪತ್ತಿಯಾಯಿತ್ತು.
ಅಗಮ್ಯದಲ್ಲಿ ಗಮನ ಕೆಟ್ಟಿತ್ತು. ನಿಂದಲ್ಲಿ ನಿರಾಳವಾಯಿತ್ತು.
ಕೂಡಲ ಸಂಗಮದೇವರಲ್ಲಿ ಶಬ್ದ ಮುಗ್ಧವಾಯಿತ್ತು.

ತಾತ್ಪರ್ಯ : ಅರಿಯಲಿಲ್ಲದ ಅರಿವು ಅವಗ್ರಹಿಸತ್ತಾಗಿ ಅರಿಯಲಿಲ್ಲ ಮರೆಯಲಿಲ್ಲ; ಅರಿಯಲಿಲ್ಲದ ಅರುವು ? ಇದಾರ ಕೃಪೆಯಿಂದ ಲಭ್ಯವಾದ ಅರುವು ? ಕಾಣಬಾರದ ಗುರು ಘನ ಕಣ್ಗೆ ಗೋಚರವಾದುದೆನ್ನಲೆ ? ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗದ್ದೆನ್ನಲೆ ? ಲಿಂಗ ಒಂದಾಗಿರ್ದ ಜಂಗಮ ಘನದ್ದೆನ್ನಲೆ ? ಪ್ರಸಾದದ ಪರಿಣಾಮ ವೆನ್ನಲೆ ? ಇದಾವುದೆನ್ನಬೇಕು ?

ಅರಿಯಲಿಲ್ಲದ ಅರುವು ಎರಡಾಗಿ ಕಂಡವರದಲ್ಲ ಒಂದಾಗಿ ಕಂಡವರದು ಅಲ್ಲ. ತನ್ನ ಕಂಡವರದು ತಾನೆ ತಾನಾಗಿಪ್ಪ ಘನಕ್ಕೆ ಘನವಾಗಿಹ ತನ್ನಿರುವು. ಈ ಅರಿಯಲಿಲ್ಲದ ಅರಿವು ಅವಗ್ರಹಿಸಿದುದು ಏನೆಂಬೇನೆಂಬೆ ಇದುವೆ ಎನ್ನನ್ನು ಆಕ್ರಮಿಸಿತೊ ? ನಾ ಇದನ್ನು ಆಕ್ರಮಿಸಿದೆನೊ ? ಇದಾರು ಬಲ್ಲರು.

ಅರಿಯಲಿಲ್ಲದ ಅರುವಿನ ಗಳಿಕೆ ಎಂದೆಂದೂ ಗಳಿಸದ ಗಳಿಕೆ. ತನ್ನ ಗಳಿಕೆ ತನ್ನ ಗಳಿಕೆ ತನಗಾದುದು ಏನೆಂಬೇನೆಂಬೆ ಇದು ಅಚಿಂತಾತ್ಮ ತಾನೆ ಆದ ನಿಲಯ ತನ್ನ ತಾನೆ ಆವರಿಸಿತೆ ? ಅಹಹ ಎನ್ನ ಭಾಗ್ಯ ಮಹಾ ಭಾಗ್ಯ, ಇದುವೆ ತಾನಾದಲ್ಲಿ ಇನ್ನೇ ನಿನ್ನೇನು ? ಅರಿಯಲಿಲ ಮರೆಯಲಿಲ ತನಗಿಂತನ್ಯ ಆವಾವುದು ಇಲ್ಲ ತನ್ನ ಸಮಾನವಾದುದು ತಾನೆ ಇಲ್ಲ ಇಲ್ಲಾದು ದಿಲ್ಲಾದುದು ಎಲ್ಲಿಪ್ಪುದೊ? ಇಲ್ಲಾದುದಿಲ್ಲಾದುದೆಂದಿಪ್ಪುದೊ ? ಇಲ್ಲವೆಂಬುದು ಇಲ್ಲವೆನ್ನಲು ಸಂದಿಲ್ಲದಿರುವಲ್ಲಿ ಕಾಣಬಾರದ ಗುರು ಘನ ಕಣ್ಗೆ ಗೋಚರವಾದುದು ತಾನೆ, ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವು ತಾನೆ.

ಲಿಂಗ ಒಂದಾಗಿರ್ದ ಜಂಗಮ ತಾನೆ, ಮಹಾಪ್ರಸಾದಿಯ ಪರಮ ಪ್ರಸಾದವು ತಾನೆ ತಾನೆಂಬುದು ಅರಿಯಬಾರದ ಘನ ಅದನೆಂತು ಅರಿವುದು ಮರೆವುದು, ಅರಿತವನು ಮರೆಯುವುದುಂಟು, ಮರೆತವನು ಅರಿಯುವುದುಂಟು ಮರೆಯುವುದು ಅರಿಯುವುದು

ಮಾಯಿಕ ನಿಲುವು . ಇದು ಒಮ್ಮೆ ಮರೆತವನಾಗುವುದು ಮತ್ತೊಮ್ಮೆ ಅರಿತವನಾಗುವುದು. ಪೂರ್ವದಲ್ಲಿ ಮರೆತವನಾಗಿದ್ದನು ಈಗ ಅರಿತವನಾಗಿಹನು ಇದು ಅರಿಯಲಿಲ್ಲದ ಅರಿವು ಅವಗ್ರಹಿಸದ ನಿಲುವು ಇದು ತಾನಿದ್ದು ತನ್ನನ್ನು ಮರೆತಿರುವೆನೆಂಬುದು ಅರಿತಿರುವೆನೆಂಬುದು ಆಶ್ಚರ್ಯ, ತನ್ನನ್ನು ಅರಿಯಲು ಮರೆಯಲು ಬರುವುದೆ ? ಮರುವರುವಿಗೆ ಮೀರಿದ ಘನಕ್ಕೆ ಘನ ತಾನು . ಈ ಮರವರುವು ಅರಿಯಬಹುದೆ, ಮರೆಯಬಹುದೆ ?ಅರಿದರುಹಿಸಿ ಕೊಂಬುದಕ್ಕೆ ಮೀರಿದ ಘನನಾದುದರಿಂದ ಅರಿಯಲಿಲ್ಲದ ಅರುವು ತಾನೆ, ಅರಿಯಲಿಲ್ಲ ಮರೆಯಲಿಲ್ಲ.

ನಿಜವು ನಿಂದಿತ್ತಾಗಿ ನಿರ್ನಾಮವಾಯಿತ್ತು ನಿಷ್ಪತ್ತಿಯಾಯಿತ್ತು : ನಿಜವು ನಿಂದುದು , ನಿರ್ನಾಮವಾದ ನಿಲವು ಸಕಲದರ ಮುಕ್ತಾಯ ಮುಕ್ತಾಯದ ಮುಕ್ತಾಯ, ಪರಮಶಾಂತಿ, ನಿಜವು ನಿಂದ ಚಿನ್ಹ. ಹೀಗೆ ಎಂದು ಹೇಗೆ ವಿವರಿಸುವುದು. ಮೂಗ ಮೂಗರ ಮೌನ, ಇವರೀರ್ವರ ನಿರ್ವಾಣ ಹೇಳಲೆಂತು, ಕೇಳಲೆಂತು ? ಇದು ಕಾರಣ ತಾನೆ ತಾನಾಗಿ ನಿಂದುದು ಹೇಳಲೆಂತೊ? ಹೇಳಲು ಬಾರದಿದ್ದಲ್ಲಿ ಕೇಳಲೆಂತೂ ? ಅವರ್ಣೀಯವ ವರ್ಣಿಸುವದದೆಂತು ? ಪರಿಪೂರ್ಣನಲ್ಲ ಪ್ರಾದೇಶಿಕನಲ್ಲ ನಿರತಿಶಯ ದೊಳತಿಶಯ ತಾ ಮುನ್ನಲ್ಲ , ಶರಣನಲ್ಲ ಐಕ್ಯನಲ್ಲ ಪರಮನಲ್ಲ ಜೀವನಲ್ಲ ಸಾಯುವನಲ್ಲ ಇಹ ಪರವೆಂಬುಭಯದೊಳಿಲ್ಲದವನು , ನಿರಾಲಯ ನಿಜಗುರು ಶಾಂತೇಶ್ವರನ ಶರಣನ ನಿಲುವು ಉಪಮಿಸಬಹುದೆ ತಾನು ಅನುಪಮನು.

ಶರಣನ ನಿಲುವು ಉಪಮೆಗೆ ತರಬಹುದೆ, ತಾನನುಪಮವಾಗಿರುವಲ್ಲಿ ಉಸುರುವುದೆಲ್ಲಿ? ಉಪಮೆಗೆ ಒಳಪಟ್ಟುದು ಅಲ್ಲವೆಂದರೂ ಉಪಮೆಗೊಳಪಟ್ಟುದು ಇದ್ದುದ್ದೆನ್ನಲಿ ಇಲ್ಲದ್ದೆನ್ನಲಿ ಪರಿಪೂರ್ಣನೆನ್ನಲಿ, ಪ್ರಾದೇಶಿಕ ನೆನ್ನಲಿ , ಶರಣನೆನ್ನಲಿ , ಐಕ್ಯನೆನ್ನಲಿ , ಜೀವನೆನ್ನಲಿ , ಪರಮನೆನ್ನಲಿ , ಏನೆಎನ್ನಲಿ , ಉಸಿರಿದುದೆಲ್ಲವು ಉಪಮೆಗೊಳಪಟ್ಟದು. ಅನುಪಮನು ಇಹ ಪರದೊಳಿಲ್ಲದವನು ನಿಜವೆಂದರೆ ತಾನು . ತಾನು ನಿಂದುದು ಉಸುರುವುದು ಪರಿಸಮಾಪ್ತಿಯಾದ ಚಿನ್ಹ. ಉಸಿರದಿದ್ದುದೆ ನಿರ್ನಾಮವಾದ ಚಿನ್ಹ. ಅಲ್ಲ ಅಹುದೆಂಬುದಕ್ಕೆ ಮೀರಿದ ಚಿನ್ಹ. ನಿರ್ನಾಮವಾದ ಚಿನ್ಹ, ಬೋಧ ನಾಚಿ ಏನೊಂದುಸರದಂತಾದುದೆ ನಿಷ್ಪತ್ತಿಯಾದ ಚಿನ್ಹ. ಇದು ನಿಜವು ನಿಂದ ಚಿನ್ಹ, ಅರಿಯಲಿಲ್ಲದ ಅರುವು ತಾನಾದ ಚಿನ್ಹ.

ಅಗಮ್ಯದಲ್ಲಿ ಗಮನ ಕೆಟ್ಟಿತ್ತು ನಿಂದಲ್ಲಿ ನಿರಾಳವಾಯಿತ್ತು : ಅಗಮ್ಯವೆಂಬುದು ತಾನು ತಾನೆಂಬುದು ವಾಙ್ಮನೋತೀತವು ವಾಕ್ ಮನಸ್ಸಿಗೆ ಆವುದು ಅಗೋಚರವು ಅದಕ್ಕೆ ಅಗಮ್ಯವೆಂದು ಹೇಳಿದೆ . ತನ್ನನ್ನು ವಾಣಿಯು ವರ್ಣಿಸದು , ಮನವು ನೆನೆಯದು , ಬುದ್ಧಿ ನಿರ್ಧರಿಸದು ಚಿತ್ತಾ ಚಿಂತಿಸದು . ಇದು ಉಪಾಧಿಯಿಂದುಕ್ತ ಮನವಿರಲಿ , ಉಪಾಧಿ ರಹಿತ ಮನವಿರಲಿ ಭ್ರಾಂತಿಯುಳ್ಳದಿರಲಿ , ಭ್ರಾಂತಿರಹಿತವಾದುದಿರಲಿ ಅದು ಅವಿಚಾರದಿದ್ದಿರಲಿ ವಿಚಾರದ್ದಿರಲಿ ಅದು ವಾಕ್ ಮನದಿಂದುಕ್ತವಾದುದು ಅಗಮ್ಯವೆಂದು ಹೇಗೆ ಹೇಳುವದು.

ಅಗಮ್ಯವೆಂಬುವುದು ಪ್ರವೃತ್ತಿ ರೂಪವಾದ ಪ್ರಪಂಚದ ಕಥನಕ್ಕೂ ಮೀರಿದುದು , ನಿವೃತ್ತಿ ರೂಪಮಾದ ಪರಮಾರ್ಥ ಬೋಧಕ್ಕೂ ಮೀರಿದುದು , ಮೀರಿದ ಘನವೆ ತಾನು ತಾನು ಅಗಮ್ಯನೆಂಬುದು. ಅರಿಯಲಿಲ್ಲದ ಅರುವಾಗಿಹ ಘನವಾದ್ದರಿಂದ ತನ್ನೊಳ ಮರವರುವಿನ ಗಮನ ಕೆಟ್ಟಿತ್ತು . ಅಂಗ ಲಿಂಗವೆಂಬ ಬುದ್ಧಿ ಗಮನ ಕೆಟ್ಟಿತ್ತು . ಅಚಿಂತ್ಯಾತ್ಮ ತಾನಾಗಿರುವದರಿಂದ ಚಿಂತನದಸುಳುಹೆ ಕೆಟ್ಟಿತ್ತು ನಿಂದಲ್ಲಿ ನಿರಾಳವಾಯಿತ್ತು.

ಅಚಿಂತ್ಯತ್ವ ನಿಂದುದು ತನ್ನ ನಿಶ್ಚಿಂತ ಪದ ನಿರ್ಭಯ ಪದ ನಿರಾಲಂಬ ಪದ ಅವಾವುದು ತಟ್ಟದ

ಪದ , ಮುಟ್ಟದ ಪದ , ಇದು ಅಪ್ರಮಾಣಗಮ್ಯವಾಗಿಹ ಸುಖ ಸ್ವರೂಪವಾಗಿಹ ಪದ . ಇದು ಪ್ರಶಾಂತಾತ್ಮ ತಿಲುವುಳ್ಳ ಧಾಮವು , ಕೂಡಲ ಸಂಗಮದೇವರಲ್ಲಿ ಶಬ್ದ ಮುಗ್ಧವಾಯಿತ್ತು .

ಕೂಡಲ ಸಂಗಮದೇವರೆಂಬದು ಏನೆಂದೆನಲಿಲ್ಲದ ಅರುವು , ಇದು ಅಚಿಂತ್ಯಾತ್ಮ ತಾನಾಗಿಹ ಘನವುಳ್ಳದ್ದಾದುದರಿಂದ ಕೂಡಲಸಂಗಮ ದೇವರಲ್ಲಿ ಶಬ್ದ ಮುಗ್ಧವಾಯಿತ್ತು ಎಂದು ಹೇಳಿಹರು. ಅದು ಏನನ್ನು ಅರಿಯದರುವು ಅರಿವುಡೆ ಸ್ವಾಭಾವತಃ ಶಬ್ದ ಮುಗ್ಧವಾಯಿತ್ತು ತಾನೆ ಅರಿಯದರುವು ಆಗಿ ನಿಂದಲ್ಲಿ ತನಗದು ವೇದ್ಯವು . ಇದು ಮಿಗೆ ಮಿಗೆ ಮೀಸಲವಾಗಿಹ ತತ್ವ ಬಲ್ಲವರ ಅರುವು ಲಿಂಗ ಸಕೀಲ ಸಂಯೋಗ ವರ್ಮಸ್ಥಲ ವರಿತು ಅದುವೆ ಆದವರ ಅರುವು ಶಬ್ದ ಮುಗ್ಧವಾಗಿಹ ಅರುವು ಇದು ಕೂಡಲಸಂಗಮದೇವರಲ್ಲಿ ಶಬ್ದ ಮುಗ್ಧವಾದ ಚಿನ್ಹವೆಂದು ಹೇಳಿಹರು .

35

ಭಾವಕ್ಕಿಂಬಿಲ್ಲ , ಶಬ್ದ ಮೀಸಲು ನೋಡಾ ,
ನುಡಿಗೆಡೆಯಿಲ್ಲ ಎಡೆಗೆ ಕಡೆಯಿಲ್ಲ
ಗುಹೇಶ್ವರ ಲಿಂಗ ವೇಧಿಸ ಲೊಡನೆ. ||673 ||

ತಾತ್ಪರ್ಯ : ಪ್ರಭುದೇವ , ಭಾವಕ್ಕಿಂಬಿಲ್ಲ ಶಬ್ದ ಮೀಸಲು ನೋಡಾ : ಎಂದು ಬಿತ್ತರಿಸಿದ ಮಹಾಪ್ರಸಾದ ಅದೆಷ್ಟು ಮಹಾಂತರಿಗೆ ದಕ್ಕುವದು . ಗುಹೇಶ್ವರ ಲಿಂಗ ವೇಧಿಸಿದವರಿಗಿದು ದಕ್ಕುವದು ಮತಿವಂತರಿಗಿದು ದಕ್ಕುವ ಪ್ರಸಾದವಲ್ಲ ಅರಿದರಿದು ನೋಡಿದವರ ಮಹಾಪ್ರಸಾದ ಏನನ್ನು ? ಅರಿದರರದ ಘ ನ ಪ್ರಸಾದ . ತಾನಾರೆಂದು ತನ್ನಿಂದ ತನ್ನ ಅರಿದರಿದು ನೋಡಿದ ಮಹದರುವು ತೆರ ಹಿಲ್ಲದ ಘನವು ಪ್ರಸಾದ .ಆವಾವುದಕ್ಕಿಂಬು ಕೊಡದ ಪ್ರಸಾದ ಭಾವಿಕರಿಗೆ ವೇದ್ಯವಾಗದು ಏಕೆಂದರೆ ಮಹದುಪಕಾರಿ ಪ್ರಭು ಅಂದರೆ ಸಾಲದು , ಮಹಾಪ್ರಭು ದೇವ ದೇವ ಗುಹೇಶ್ವರ ಲಿಂಗ ವರಿಯುವವರಿಗೆ ಮಾಡಿದ ಒಂದಿಸುವ ವಾಕ್ ವರ್ಣಿಸಲ ಸಾಧ್ಯವು .

ಗುಹೇಶ್ವರ ಲಿಂಗ ವೇಧಿಸಲೊಡನೆ ಭಾವಕ್ಕಿಂಬಿಲ್ಲ , ಶಬ್ದ ಮೀಸಲು ಎಂಬ ಸಂಜ್ಞೆ ಇದು ವಾಣಿಗೆ ಅವರ್ಣನೀಯವೆಂಬುದು ನಾಚಿಕೆ . ಗುಹೇಶ್ವರ ಲಿಂಗ ತಿಳಿದಾಗ ಭಾವಕ್ಕಿಂಬಿಲ್ಲ ವೆನ್ನುವದು ತನಗದು ಯತಾರ್ಥವು . ಶಬ್ದ ಮೀಸಲು ಎನ್ನುವದು ಯತಾರ್ಥವು . ಗುಹೇಶ್ವರ ಲಿಂಗವದು ತಾನು ತನ್ನ ತಾನು ಅರಿವುಡೆ, ಗುಹೇಶ್ವರ ಲಿಂಗ ವೇಧಿಸಿದಂತೆ , ಆಗ ಪ್ರಭುವಿನ ಮಹಾ ಪ್ರಸಾದ ತನ್ನಂತೆ ಮಾಡಿತ್ತು . ಪ್ರಭುವನ್ನೆ ಮಾಡಿತ್ತು ಇದನೆಂತು ವರ್ಣಿಸುವದು .

ಕೆಲಬರು ಪ್ರಭುವಿನ ಪ್ರಬೋಧದಂತೆ ಭಾವಕ್ಕಿಂಬ್ಬಿಲ್ಲ ಶಬ್ದ ಮೀಸಲು ನೋಡಾ ಎಂದು ಬೋಧಿ ಸುವದರಲ್ಲಿಯೆ ಸರಿಹೋಗಿ ಅಗಮ್ಯ ನಿಧಿ ತಿಳಿಯದಿದ್ದದು ಅಪರಾಧ , ಅಚಿಂತ್ಯ ರತ್ನವ ತಿಳಿಯದೆ ಪರರಿಗೆ ಬೋಧ ಮಾಡುವ ಪ್ರತಿಷ್ಠೆಗೆ ಒಪ್ಪಿ , ತನಗೆ ಹಗೆ ಮಾಡಿಕೊಳ್ಳುವ ಹೃದಯಕ್ಕೆ ಈ ಮಹಾಂತನ ಮಹದುಪಕಾರ ತಿಳಿಯದು .

ಪ್ರಭುವಿನ ಮಹದುಪಕಾರ ಸಾರ್ಥಕ ಮಾಡಿದವರೆಂದರೆ ಭಾವಕ್ಕಿಂಬಿಲ್ಲವೆಂದು ತಿಳಿದು ತಾನು ಆವಾವ ಭಾವ ಮಾಡದವನು ಅಲ್ಲಿ ಜೀವನೆಂಬುವುದಿಲ್ಲ ಪರಮನೆಂಬುದಿಲ್ಲ ಎರಡೆಂಬುದಿಲ್ಲ ಒಂದೆಂಬುದಿಲ್ಲ ಅಂಗನೆನಲಿಲ್ಲ ಲಿಂಗ ನೆನಲಿಲ್ಲ ಲಿಂಗೈಕ್ಯನೆನಲಿಲ್ಲ ಸಂಗಿ ಎನಲಿಲ್ಲ ಏನೂ ಎನಲಿಲ್ಲ . ನುಡಿಯಿಂದುಕ್ತವಾದುದು ಹೆತ್ತರಿವು ಆಗುವದರಿಂದ ಭಾವಕ್ಕಿಂಬಿಲ್ಲವೆಂದು ಶಬ್ದ ಮೀಸಲು ಎಂದುದು ತಿಳಿವುಡೆ ಸಕಲ ಭಾವಂಗಳ ಅವಸಾನ ಶಬ್ದದ ಅವಸಾನ . ಸತ್ತವನೆಂದಾದರೂ ಮಾತನಾಡಬಹುದೆ ?

ಸತ್ ತಿಳಿವುಡೆ ಸತ್ ಎಂಬುವ ಶಬ್ದವೆ ಅವಸಾನವಾದುದೆ ಶಬ್ದ ಮೀಸಲು, ಚಿತ್ ಅರಿವುಡೆ ಚಿತ್ ಎಂಬುವ ಶಬ್ದವೆ ಅವಸಾನವಾದುದೆ ಶಬ್ದ ಮೀಸಲು ಶಬ್ದ ಪ್ರಯೋಗ ಇಲ್ಲ ಇಲ್ಲವೆಂಬುದೆ ನಾಚಿ ಹೋಗಿದೆ ಇದನ್ನು ಲಿಖಿತ ದೃಷ್ಠಿಯಿಂದ ನೋಡಲಾಗದು ನಿರ್ಲಿಖಿತವಾದುದು ಯತಾರ್ಥವು.

ನುಡಿಗೆ ಎಡೆಯಿಲ್ಲ ಎಡೆಗೆ ಕಡೆಯಿಲ್ಲ ಗುಹೇಶ್ವರ ಲಿಂಗ ವೇಧಿಸಲೊಡನೆ : ಓ ಪ್ರಭುವೆ, ಗುಹೇಶ್ವರ ಲಿಂಗ ತಿಳಿಯಲು ನುಡಿಗೆ ಅವಕಾಶವಿಲ್ಲದಂತೆ ನುಡಿಯನ್ನೆ ನಿರರ್ಥಕ ಮಾಡಿದೆಯಾ ಓ ಘನ ಮಹಿಮನೆ ನಿನ್ನಯ ಕರುಣಾಂಬುಧಿ ಅಳತೆಯಾಗದು ನಿನ್ನ ನುಡಿಯನ್ನೆ ನೀನೆ ಅವಸಾನ ಮಾಡಿದೆಯಾ , ಗುಹೇಶ್ವರ ಲಿಂಗ ತಿಳಿಯಲೆಂಬುದೆ ನಿನ್ನ ಕಳ ಕಳಿ ಎನ್ನಲೆ , ನಿನ್ನ ಸಹಜತ್ವ ಏನ್ನಲೆ ಅರು ಹೃದಯದ ಹಿರಿಮೆ ಎನ್ನಲೆ ? ಅರಿಯದರವು ಮಾಡುವ ಕರುಣಾ ರಸವೆ ನಿನ್ನದಾಗಿರುವಲ್ಲಿ ಅದನೆಂತು ವರ್ಣಿಸುವದು , ನಿನ್ನ ಕೃಪೆ ಅಪಾರ ವಾಗಿರುವದರಿಂದ ನಿಶಬ್ದ ವೇದಿಗಳ ಮಾಡಲು ಶಬ್ದವೇದಕ್ಕೆ ಮಿಗೆ ಮಿಗೆಯಾಗಿಹ ಮೀಸಲ ತತ್ವವರಿಯಲು ಲಿಂಗ ಸಕೀಲ ಸಂಯೋಗ ವರ್ಮಸ್ಥಳ ವರಿಯುವಂತೆ ಮಾಡಿದುದು ನಿನ್ನ ಕೃಪೆ . ತನ್ನ ವಚನ ತನಗೆ ಹಗೆಯಾದುದು ನಿನ್ನ ಕೃಪೆಯಲ್ಲವೆ ? ನುಡಿಗೆಡೆಗೊಡದ ಘನದಿರುವು ಪ್ರಜ್ವಲಿಸಲು ನುಡಿಯ ಘನತ್ವವಿಲ್ಲದಂತೆ ಮಾಡಿದೆಯಾ ? ಎಡೆಗೆ ಕಡೆಯಿಲ್ಲವೆಂಬುವುದು ಗುಹೇಶ್ವರ ಲಿಂಗ ನಿಲಯ, ನಿಜ ನಿಲಯ, ತನ್ನ ನಿಲಯ.

ಅದು ಅಪಾರ ಮಹಾಕಾಶದ ಅವಕಾಶ ಆರಾದರೂ ಗಣನೆ ಮಾಡಬಹುದೆ ? ಮೂಗ ಮೂಗರ ಮೌನ ಅದೆಷ್ಟು ಕಾಲವ ಹೇಳಬಹುದೆ ? ಅವರಿದ್ದುದೆ ಮೌನವಿರುವಲ್ಲಿ ನುಡಿಗೆ ಅವಕಾಶ ವಿಲ್ಲವೆಂದಲ್ಲಿ ನುಡಿಯುವದದೆಂತು , ನುಡಿದುದೆಂದು ? ಇದು ಕಾರಣ ಗುಹೇಶ್ವರ ಲಿಂಗ ವೇದಿಸಿದವರಿಗೆ ತನ್ನಿಂದ ತನಗೆ ತಿಳಿಯುವದು.

36

ತನು ನಷ್ಟ, ಮನ ನಷ್ಟ, ನೆನಹು ನಷ್ಟ, ಭಾವ ನಷ್ಟ, ಜ್ಞಾನ ನಷ್ಟ
ಇಂತೀ ಪಂಚನಷ್ಟದೊಳಗೆ ನಾನು ನಷ್ಟವಾದೆನು.
ಆ ನಷ್ಟದೊಳಗೆ ನೀನು ನಷ್ಟವಾದೆ
ಕಲಿದೇವರ ದೇವಾ ಎಂಬ ನುಡಿ
ನಿಃಶಬ್ದ ಬ್ರಹ್ಮ ಮುಚ್ಯತೆ ಎನ್ನುತ್ತಿದ್ದಿತ್ತು.

ತಾತ್ಪರ್ಯ : ತನು ನಷ್ಟ, ಮನ ನಷ್ಟ, ನೆನಹು ನಷ್ಟ, ಭಾವ ನಷ್ಟ, ಜ್ಞಾನ ನಷ್ಟ ಇಂತೀ ಪಂಚನಷ್ಟದೊಳಗೆ ನಾನು ನಷ್ಟವಾದೆನು, ಆ ನಷ್ಟದೊಳಗೆ ನೀನು ನಷ್ಟವಾದೆ ಕಲಿದೇವರ ದೇವಾ ಎಂಬ ನುಡಿ ನಿಃಶಬ್ದ ಬ್ರಹ್ಮ ಮುಚ್ಯತೆ ಎನ್ನುತ್ತಿದ್ದಿತ್ತು :

ಎಂದು ಬಿತ್ತರಿಸಿದ ಮಹದನುವ ನೋಡಿರೆ ? ಇದು ನಷ್ಟ ಮಾಡುವ ಅನುವ ಶಬ್ದ ಬ್ರಹ್ಮಕ್ಕೆ ಮಿಕ್ಕಿ ಮೀರಿ ನಿಂದ ನಿಲುವು ನೋಡಿರೆ ? ಇದು ಅರಿದರಿದು ನೋಡಿ ನಿಂತ ನಿಲುವ , ಇದು ಅರುವ ಅರಿದು ನೋಡಿದ ನಿಲುವು ಮಾತಿನ ಮಹಾಂತರ ಮಹಾನು ಭವಕ್ಕೆ ನಿಲುಕುವ ನಿಲುವಲ್ಲ, ಇದು ವಾಙ್ಮನೋತೀತವು ವಾಙ್ಮನೋತೀತವೆಂಬೆನೆ ? ನುಡಿದ ನುಡಿ ಎದ್ದು ತೋರುತ್ತಿದೆಯಲ್ಲ ಇದೇನು ಆಶ್ಚರ್ಯ . ನುಡಿಯದುದು ನುಡಿಯಂತೆ ? ಪರಮಾಶ್ಚರ್ಯ ನಿಃಶಬ್ದ ಬ್ರಹ್ಮ , ನುಡಿಯಿಂದುಕ್ತವಾಗಿ ನುಡಿದ ನುಡಿ ನುಡಿದು ನುಡಿಯದಂತಿದ್ದ ಪರಬ್ರಹ್ಮ ನೋಡಾ , ಅದು ನಿಃಶಬ್ದ ಬ್ರಹ್ಮ ನೋಡಾ .

ಸತ್ತ ಹೆಣ ಮಾತಾಡಿದುದುಂಟೆ ? ಮಾತಾಡಿದಲ್ಲಿ ಸತ್ತುದೆಂದು ಹೇಗೆ ತಿಳಿವುದು ಕಲಿದೇವರ

ದೇವನೆಂಬ ನೀನು ನಷ್ಟವಾದುದು , ಅಲ್ಲಿನಾ ನೀನೆಂಬುದು ನಷ್ಟವಾದ ನಿಲಯ ನಿಜದ ನಿಲಯ ಅಲ್ಲಿ ಸಕಲವು ನಷ್ಟವಾದ ನಿಲಯ , ಸತ್ತ ನಿಲಯ , ಸತ್ಸ್ವರೂಪ ತಾನಾದ ನಿಲಯವುಳ್ಳವರದು ಬದುಕಿದವರ ನಿಲಯವುಳ್ಳವರದು , ಬದುಕಿದವರ ನಿಲಯವುಳ್ಳದ್ದಾಗುವದೆಂದಲ್ಲಿ ಇದು ಮಹದಾಶ್ಚರ್ಯ , ಬದುಕಿದವರ ನಿಲವು ಮಾತಿನ ಮಹಾಂತರ ನಿಲವು , ಶಬ್ದಸಂಭ್ರಮದ ನಿಲುವುಳ್ಳವರಿಗೆ ನಿಃಶಬ್ದ ಬ್ರಹ್ಮ ಮುಚ್ಯತೆ ಎನ್ನುವ ಸಂಜ್ಞೆ ದಕ್ಕದು . ಶಬ್ದ ಸಂಭ್ರಮಕ್ಕೆ ಮೀರಿದು ದು ಶಬ್ದವುಳ್ಳದ್ದಾಗ ಬಹುದೆ ? ಬದುಕಿದುದು ಸತ್ತದು ಕಾಣದ ನಿಲುವಿನಲ್ಲಿ ಬದುಕಿದುದು ಕಂಡಿಲ್ಲ ಸತ್ತದು ಕಂಡಿಹೆವು ಎನ್ನುವದು ಆಶ್ಚರ್ಯವಲ್ಲವೆ ? ಉಸರದವನಾಗಿ ಉಸುರಿದುದು ಆಶ್ಚರ್ಯ ಮೂಕನು ಮೂಕ ನಾಗಿರುವೆನೆಂದು ಹೇಳಿದುದು ಆಶ್ಚರ್ಯ , ಸಕಲವು ನಷ್ಟವಾದ ಮಾಹಾಂತಂಗೆ ಕಲಿದೇವರ ದೇವ ಎಂಬ ನುಡಿ ನಿಃಶಬ್ದ ಬ್ರಹ್ಮ ಮುಚ್ಯತೆ ಎನ್ನುತ್ತಿದ್ದಿತ್ತು ಎಂಬುದು ಇದಾವ ತನುವಿನಿಂದ ಹೊರಬಂದ ನುಡಿ ಎನಬೇಕೆ? ಮನದಿಂದ ಬಂದುದೆನಬೇಕೆ ? ನೆನಹು ಭಾವದಿಂದ ಬಂದುದೆನ ಬೇಕೆ? ಜ್ಞಾನದಿಂದ ಬಂದುದೆನ ಬೇಕು ಪೂರ್ವದ ತನು , ಮನ , ನೆನಹು , ಭಾವ , ಜ್ಞಾನದಿಂದು ಬಂದವು ಎನ್ನಲಾಗದು ಏಕೆಂದರೆ ತನು ನಷ್ಟ, ಮನ ನಷ್ಟ, ನೆನಹು ನಷ್ಟ , ಭಾವ ನಷ್ಟ , ಜ್ಞಾನ ನಷ್ಟವೆಂದು ಹೇಳಿಹರು ನಾನೆಂಬ ಚಿದಹಮ್ಮು ಇದರಿಂದ ಬಂದುದೆನ ಬೇಕೆಂದರೆ ನಾನು ನಷ್ಟವೆಂದು ಹೇಳಿದ್ದಾರೆ ಸಕಲವು ನೀನೆಂಬ ನಿರಹಂಭಾವದ ನುಡಿಯಿಂದ ಬಂದವೆನ್ನಲೆ? ನೀನು ನಷ್ಟವಾದೆ ಎಂದು ಹೇಳಿಹರು .

ಸಕಲವು ನಷ್ಟವಾದ ಮೇಲೆ ಬರುವ ನುಡಿ ಅದು ಕಲಿದೇವರ ದೇವ ನುಡಿ ಅಲ್ಲಿಯೆ ಆವಾವ ಶಬ್ದದ ಹಂಗಿಲ್ಲದೆ ನಿಂತ ನಿಲವು.

'' ಪೂರ್ವ ಬೀಜನಲ್ಲ ಪೂರ್ವಪ್ರಾಣಿಯಲ್ಲ , ಪೂರ್ವ ವ್ಯವಹಾರಿಯಲ್ಲ , ಪೂರ್ವಾದಿಗಳೆಲ್ಲವನು ಉತ್ತರಿಸಿ ಕಳೆದು ಲಿಂಗ ಗರ್ಭಿತನಾದ ಕೂಡಲ ಚೆನ್ನಸಂಗಾ ನಿಮ್ಮ ಶರಣ '' ಲಿಂಗ ಗರ್ಭಿತನಾದ ಶರಣ , ಲಿಂಗದಲ್ಲಿ ಲೀಯ ವಾದ ಘನವಂತ ಇದು ಕಾರಣ ಲಿಂಗ್ಯಕ್ಯರ ನುಡಿ ಲಿಂಗ ನುಡಿ ಮಾತೆಂಬುದು ಜ್ಯೋತಿರ್ಲಿಂಗ ನುಡಿದು ನಿಃ ಶಬ್ದ ಬ್ರಹ್ಮರಾಗಿರುವದರಿಂದ ಅವರದು ಪೂರ್ವತನು ನಷ್ಟ, ಮನ ನಷ್ಟ, ನೆನಹು ನಷ್ಟ, ಭಾವ ನಷ್ಟ, ಜ್ಞಾನ ನಷ್ಟ ಪೂರ್ವ ವ್ಯವಹಾರವೆಲ್ಲ ನಷ್ಟ, ನಾನು ನೀನು ಎಂಬುದು ಉತ್ತರಿಸಿ ಕಳೆದ ಮಹಾಂತನಾದುದರಿಂದ ಲಿಂಗ ಗರ್ಭಿತ ಎಂದು ಹೇಳಿದ್ದಾರೆ.

ಲಿಂಗೈಕ್ಯ ನಿಲುವಿನಲ್ಲಿ ನಿಂತು ಮರವಿನ ನಾನು, ಅರುವಿನ ನಾನು, ಮರವಿನ ನೀನು, ಅರುವಿನ ನೀನು , ಎಂಬುದು ನಿಃಶಬ್ದ ಬ್ರಹ್ಮವಾಗಿ ನಿಂತು ನೋಡಿದಾಗ ನಾನು ನಷ್ಟವಾದುದು . ನೀನು ನಷ್ಟವಾದುದು, ತನ್ನಿಂದ ತನಗೆ ವಿದಿತವಾದುದರಿಂದ ಉತ್ತರಿಸಿ ಕಳೆದನೆಂದು ಹೇಳಿಹರು . ಇದು ಕಾರಣ ಲಿಂಗ ಗರ್ಭಿತ ಶರಣ ಲಿಂಗ ವಾಗಿ ನುಡಿದ ನುಡಿ ಲಿಂಗವಾಗಿಪ್ಪವರದು ವೇದವು .

ಕಲ್ಪಿತ ಪರುಷನಾಗಿ ತನು ನಷ್ಟ , ಮನ ನಷ್ಟ, ನೆನಹು ನಷ್ಟ , ಭಾವ ನಷ್ಟ , ಜ್ಞಾನ ನಷ್ಟ ಮಾಡಿದವರುಂಟು , ಚಿದಹಂ ನಷ್ಟ ಮಾಡಿದವರುಂಟೆ ? ಈ ನಾನು ನಷ್ಟ ಮಾಡಿ , ದಾಸೋಹಂ ಭಾವಿಗಳಾದವರುಂಟೆ ? ಇವೆರಡು ನಷ್ಟ ಮಾಡಿ ನಿಃಶಬ್ದ ಬ್ರಹ್ಮವಾಗಿ ಸಕಲ ಉತ್ತರಿಸಿ ಕಳೆದ ಕಾರಣ ಲಿಂಗ ಗರ್ಭಿತರ ನುಡಿ ಲಿಂಗವಾಗಿ ನುಡಿದ ನುಡಿ ಲಿಂಗವಾಗಿ ನೋಡಿದ ನೋಟವೆಂದು ಹೇಳಿಹರು .

37

ನಿರ್ವಿಕಲ್ಪವೆಂಬ ನಿಜದೊಳಗೆ ನಿರಹಂಭಾವದಲ್ಲಿರ್ದ ನೋಡಿರೆ!

ನೋಡಿಹೆನೆಂದಡೆ ನೋಡಲಿಲ್ಲ ಕೇಳಿಹೆನೆಂದಡೆ ಕೇಳಲಿಲ್ಲ,

ಘನನಿರಂಜನದ ಬೆಳಕಿಗಿಂಬಾದುದ ನೇನೆಂಬೆನು ಗುಹೇಶ್ವರಾ. ॥ 692 ॥

ತಾತ್ಪರ್ಯ : ನಿರ್ವಿಕಲ್ಪವೆಂಬ ನಿಜದೊಳಗೆ ನಿರಹಂಭಾವದಲ್ಲಿರ್ದ್ದೆ ನೋಡಿರೆ : ನಿರ್ವಿಕಲ್ಪವೆಂಬ ನಿಜದೊಳಗಿರ ಬೇಕಾದರೆ ನಿರಹಂಭಾವದಲ್ಲಿರ್ದ್ದೆ ನೋಡಿರೇ , ಎಂದು ಪ್ರಭು ಹೇಳಿದುದು ನೋಡಿದಡೆ, ಕಲ್ಪಿತ ಪರುಷನ ಸಹಜ ಸ್ವಭಾವ ಅಹಂಭಾವ, ಅವನಿಗೆ ನಿರಹಂಭಾವದ ಘನವ ತಿಳಿಯದು , ತಿಳಿಯದ್ದರಿಂದ ನಿರ್ವಿಕಲ್ಪವೆಂಬ ನಿಜವು ಸಾಧ್ಯವಾಗದು . ಕಲ್ಪಿತ ಪುರುಷ ಮರವರುವಿನಿಂದುಕ್ತನಾದವನು. ಅವನ ನೆನದು ನೆನಹು, ಭಾವಸಿದ ಭಾವ ಅರಿದ ಅರುವು ನಿಜವು ಆಗದು ನಿರಹಂ ಭಾವವು ಆಗದು. ಅಂಗನು ಮರುವಿನಿಂದುಕ್ತನಾಗಿ ತನು, ಇಂದ್ರಿ, ಪ್ರಾಣ, ಮನ ಬುದ್ಧಿ ಮೊದಲಾದವುಗಳ ಅಹಂಭಾವಿಯಾಗುತ್ತಾನೆ. ಇದರಿಂದ ತನುಭಾವಿ ಇಂದ್ರಿಯಂಗಳ ಭಾವಿ ಪ್ರಾಣಂಗಳ ಬಾವಿ ಕರಣಂಗಳ ಭಾವಿಯಾಗಿ ಶೋಕ ಮೋಹವುಳ್ಳವನಾಗುತ್ತಾನೆ. ಇದರಿಂದ ಬದ್ಧನಾಗಿ ಅಜ್ಞಾನಿ ಎನಿಸಿಕೊಳ್ಳುವನು ಅರುವಿನ ಭಾವಿಯಾಗಿ ಸಾಕ್ಷಿ, ದೃಕ್, ಪ್ರತ್ಯಗಾತ್ಮ ಆಸಂಗ ಪರಬ್ರಹ್ಮ ಸ್ವಯಂ ಪ್ರಕಾಶ ನಾನೆನ್ನುವ ಭಾವ ಹೀಗಾಗಿ ಭಾವಂಗಳ ಭಾವಿಯಾಗಿ ಅಹಂಭಾವಿಯಾಗಿ ಜೀವಿಸುತ್ತಾನೆ . ಕಲ್ಪಿತ ಪುರುಷನ ಇರುವಿಕೆ (ಆಸ್ತಿತ್ವ)ಅಹಂಬಾವಿಯಾಗಿಯೆ ಇರುವುದೆ ಅವನ ಇರುವಿಕೆ, ಭಾವಭರಿತವಾಗಿಹ ಭಾವ ನಿರಹಂಭಾವ ಇದರ ಘನವೇನು ಬಲ್ಲನು ? ನಿರಹಂಭಾವದ ಹಿರಿಮೆ ತಿಳಿಯದವಂಗೆ ನಿರ್ವಿಕಲ್ಪವೆಂಬ ನಿಜದೊಳಗಿದ್ದ ನಿಶ್ಚಂತತೆ ಅದೆಂತು ಸಾಧ್ಯ. ನಿರ್ವಿಕಲ್ಪವೆಂಬ ನಿಜ ಅದು ನಿಸ್ಸೀಮ ನಿಲುವು, ಸೀಮಿತಕ್ಕೆ ಹೇಗೆ ನಿಲುಕುವುದು.

ಕಲ್ಪಿತನು ಸದಾ ಕಲ್ಪಿಸಿ ನೋಡುವ ಸ್ವಭಾವ, ಅಕಲ್ಪಿತ ಘನನಾಗಿ ತನ್ನ ನೋಡುವದು ಆವಾಗ? ತನ್ನ ಕಲ್ಪಿತ ಸ್ವಭಾವ ಬಿಟ್ಟಾಗ ಕಾಣದುದು ಕಂಡುದು, ತಾನೆ ತನ್ನ ಕಂಡುದು ನಿರ್ವಿಕಲ್ಪವೆಂಬ ನಿಜವದು ತಾನೆ.

ತಾನೆ ತನ್ನ ಕಂಡವರುಂಟೆ ಹೇಳಿರಯ್ಯ ಕಂಡೆವೆಂಬುವವರೆಲ್ಲ ಬಂಜೆಯ ಮಕ್ಕಳು ಕಲ್ಪಿತ ಪುರುಷನೆ ಬಂಜಿಯ ಮಗ. ಇವನು ಅಕಲ್ಪಿತ ಘನವ ತಿಳಿಯುವದದೆಂತು ? ಇದ್ದವನನ್ನು ಇಲ್ಲದವನು ತಿಳಿಯಬಹುದೆ ? ತೋರಬಾರದ ಘನವ ತೋರುವವ ತಿಳಿಯಬಹುದೆ ? ಅಹಂಭಾವದಲ್ಲಿ ಉದಯವಾದವರೆಲ್ಲ ಬಂಜಿಯ ಮಕ್ಕಳು , ಇವರಿಗೆ ಆಸತ್ಯವೆ ಸತ್ಯವಾಗಿದೆ ಅಜ್ಞಾನವೆ ಜ್ಞಾನವಾಗಿದೆ . ಇದು ಕಾರಣ ಇವರ ನಿವಾಸ ಕತ್ತಲಲ್ಲಿಯೆ , ಭ್ರಾಂತಿಯಲ್ಲಿಯೇ . ಇದ್ದುದ ಮರೆತು ಇಲ್ಲದುದ ಕಲ್ಪಿಸಿ ನೆನಹು ಭಾವಂಗಳಲ್ಲಿರುವವರು ಭಾವಕ್ಕಗಮ್ಯವಾದ ನಿರ್ವಿಕಲ್ಪವೆಂಬ ನಿಜವು ಇವರಿಗೆ ದೂರಾತಿ ದೂರವು.

ನಿರ್ವಿಕಲ್ಪವೆಂಬ ನಿಜದೊಳಗಿರಬೇಕಾದಲ್ಲಿ ಪ್ರಥಮ ನಿರಹಂಭಾವಿಯಾಗಬೇಕು ನಿರಹಂಭಾವವೆಂಬುದು ಭರಿತ ಭಾವವು, ಭಾವ ಬರಿತವು. ಪೂರ್ಣಮದಃ ಪೂರ್ಣಮಿದಂ ಎಂದೆನ್ನುವ ಭಾವ ಅಖಂಡ. ಅಲ್ಲಿ ಸೋಹಂ ಭಾವಕ್ಕೂ ಮುಖ್ಯತೆ ಇಲ್ಲ ಶಿವೋಹಂ ಎಂಬುದಕ್ಕೂ ಮುಖ್ಯತೆಯಿಲ್ಲ ಅಲ್ಲಿ ನಾನೆಂಬುವ ಭಾವಕ್ಕಿಂಬಿಲ್ಲ ನೀನೆನ್ನುವ ಭಾವಕ್ಕಿಂಬಿಲ್ಲ ನಿಸ್ಸೀಮ ನಿಲುವು . ಅಹುದು ಅಲ್ಲವೆನ್ನುವದಕ್ಕೂ ಸಂದಿಲ್ಲದಿಪ್ಪ ಭಾವ ಅಖಂಡಿತ ಘನ ಪೂರ್ಣವುಳ್ಳ ಬಾವ ಇದು ನಿರಹಂಭಾವ.

ಈ ಭರಿತ ಭಾವ ಮೊದಲು ದೃಢವಾಗಬೇಕು. ಇದರಿಂದ ಸೀಮಿತ ದೃಷ್ಠಿ ನಷ್ಟವಾಗಿ ನಿಸ್ಸೀಮತ್ವ ಬೆಳೆಯುವದು . ಇಲ್ಲಿ ಕ್ಷರಾ ಕ್ಷರ ವೆಂಬುದಕ್ಕೂ ಮೀರಿದ ಘನ ಭಾವ , ತುಂಬಿ ತುಳಕದ ಭಾವ ಸಂದೇಹಕ್ಕಿಂಬು ಕೊಡದ ಭಾವ, ಆಗ ಇಲ್ಲದುದು ಎಂಬುದು ಇದ್ದುದು ಎಂಬುದು ನಷ್ಟವಾಗುವದಲ್ಲದೆ ಮರಣ ಅಮರಣವೆಂಬುದಕ್ಕೂ ಮೀರಿ ನಿಲ್ಲುವನು . ಅಲ್ಲಿ ಅಂಗನೆಂಬುದಕ್ಕಿಂಬಿಲ್ಲ ಲಿಂಗ ನೆಂಬುದಕ್ಕಿಂಬಿಲ್ಲ ಭಾವಬರಿತನು ಅಸ್ತವ್ಯಸ್ತ ಭಾವಿಯಾಗ ಬಹುದೆ? ನಿಸ್ಸಂದೇಹಿಯು

ಸಂದೇಹವುಳ್ಳವನಾಗಬಹುದೆ ? ಆಗ ನಿರಹಂಭಾವದಲ್ಲಿರ್ದ ಹೃದಯವು ಪರಿಶುದ್ಧ ಹೃದಯವೆಂಬುದು ವಿದಿತವಾಗಿ ತಾನೆ ತನ್ನ ನೋಡುವನು ತನ್ನಿಂದ ತಾನೆ ತನ್ನ ನೋಡುವುದೆ ತನ್ನ ಉದಯ, ಉದಯದ ಉದಯವಾಗಲು ಭರಿತ ಭಾವ ಅಖಂಡಿತ ಘನ ಪೂರ್ಣವೆಂಬ ಭಾವ. ತನ್ನ ಸ್ವರೂಪವಾಗದು. ಏಕೆಂದೆರೆ ಲಿಂಗಕ್ಕೆ ಲಿಂಗವಾಗಿಹ ತಾನು ಲಿಂಗ ಬೆಳಗು ಆದರೆ ತಾನು ಬೆಳಗಿನೊಳಗೆ ಬೆಳಗಾಗಿರುವಲ್ಲಿ ಘನಕ್ಕೆ ಘನ ತಾನೆಂಬುದು ತನ್ನಿಂದ ತನಗೆ ಉದಯವಾಗುವುಡೆ ಅದುವೆ ನಿರ್ವಿಕಲ್ಪವೆಂಬ ನಿಜವು ಅವಾವ ಭಾವಕ್ಕೂ ಸಂದು ಕೊಡದುದು ಆವೂದೊ ಅದು ನಿರ್ವಿಕಲ್ಪವೆಂಬ ನಿಜವು ಎಂಬುದು ತನ್ನಿಂದ ತನಗೆ ಜಾಗ್ರತವಾಗುವುಡೆ ಆಗ ಅದು ಸಹಜ ಬೆಳಗು ಇದು ಬೆಳಗುಳ್ಳ ಸೀಮಾತೀತ ನಿಲುವು . ನಿರ್ವಿಕಲ್ಪವೆಂಬ ನಿಜ ನುಡಿದು ಹೇಳುವ ತತ್ವ ಇದಲ್ಲ , ತನಗಿಂತ ಇದು ಬೇರಲ್ಲ ತಾನೆ ತಾನಾಗಿ ಬೆಳಗುವ ನಿಸ್ಸೀಮ.

ಸೂರ್ಯನು ತಾನು ಸೂರ್ಯನೆಂದು ಎಂದಾದರೂ ನುಡಿದುದುಂಟೆ? ಕಂಬು ಕಂಣೆಂದು ನುಡಿದುದುಂಟೆ? ಪರಪ್ರಕಾಶವೆ ನುಡಿಯದಿರುವಲ್ಲಿ ಸ್ವ ಪ್ರಕಾಶ ನುಡಿಯಬಹುದೆ? ಅರಿದರಿದು ನೋಡಲು ತಾನು ಪರ ಪ್ರಕಾಶ ಸ್ವಪ್ರಕಾಶನೆಂಬುದಕ್ಕೂ ಸಂದಿಲ್ಲದಿಪ್ಪಅಗಮ್ಯ ಅಪ್ರಮಾಣ ಅಚಿಂತ್ಯವ ಪ್ರಮಾಣಂಗಳಿಂದ ಚಿಂತನದಿಂದ ಕಾಣಬಹುದೆ? ಇದು ಅರುವ ಅರಿಯ ಹೋಗಿ ಅದುವೆ ತಾವಗಿಹ ಅನುಪಮರು.

ನಿರ್ವಿಕಲ್ಪವೆಂಬ ನಿಜವ ನೋಡಿಹೆ ನೆಂದಡೆ ಏನನ್ನಾಗಿ ನೋಡುವುದು ? ಜೀವ ತ್ರಯಂಗಳಿಗೂ ಅಸಾಧ್ಯ , ಭಾವತ್ರಯಂಗಳಿಗೆ ಅಸಾಧ್ಯ , ಏನೊಂದಾಗದ ಘನವ , ಎಂದಾದರೂ ಒಂದಾಗಿ ನೋಡಿದರೆ ಅದೆಂತು ಸಾಧ್ಯ ತನುವಿಂಗೆ ತನುವಾದವನ ತನುವ ನೋಡುವದದೆಂತು ? ಕಣ್ಣಿಂಗೆ ಕಣ್ಣಾದವನ ಅರುವಿಂಗರುವಾದವನ ನೋಡುವದದೆಂತು ಅಚಿಂತ್ಯನ ಚಿಂತಿಸುವದದೆಂತು? ತೋರಬಾರದ ಘನವ ಹೇಳುವದದೆಂತು ಹೇಳಬಾರದ ಘನವ ತೋರಲೆಂತೊ ? ಇದು ಕಾರಣ ನೋಡಲಿಲ್ಲ, ಕೇಳಲಿಲ್ಲವೆಂದಿಹರು. ಘನ ನಿರಂಜನದ ಬೆಳಗಿಂಬಾದುದ ನೇನೆಂಬೆ?

ಈ ಸಂಜ್ಞೆಯ ಅರಿಯ ಹೋದವರಿಗೆ ನುಡಿದು ಹೇಳಲು ಬಾರದುದು, ಏಕೆಂದರೆ ನುಡಿದು ಹೇಳುವದಕ್ಕೆಲ್ಲ ಇಂಬಾದುದು ಅದನೆಂತು ನುಡಿದು ಹೇಳುವದು? ನೆನಹು ನಿರ್ಣಯಕ್ಕೂ ನಿಲುಕದ ಘನವೆಂದರೂ ನುಡಿಗೊಳಪಟ್ಟಿದೆ , ಭಾವಕ್ಕಗಮ್ಯನು ಅಚಿಂತ್ಯಾತ್ಮನೆಂದರೂ ನುಡಿಗೊಳಪಟ್ಟಿದೆ ನುಡಿಗೆಡೆಗೊಡದ ಘನವೆಂಬುದಕ್ಕಿಂಬಾದುದ ನೇನೆಂಬೆ? ಇಲ್ಲಿ ಬೋಧವು ಮುಕ್ತಾಯಗೊಂಡಿದೆ, ಸಂಜ್ಞೆಯು ನಾಚಿದೆ , ತಾನು ನಿರಹಂಭಾವದಲ್ಲಿದ್ದು ತನ್ನಿಂದ ತಾನೆ ತನ್ನ ಕಂಡು ಘನ ನಿರಂಜನದ ಬೆಳಗಿಂಬಾದುದ ವರ್ಣಿಸುವರೆ ಅವರ್ಣೀಯವು ಎಂದು ಹೇಳಿಹರು.

38

ಮನದ ಕೊನೆಯ ಮೇಲೆ ನೆನೆದ ನೆನಹು
ಜನನ ಮರಣವ ನಿಲಿಸಿ ಜ್ಞಾನ ಜ್ಯೋತಿಯ
ಉದಯ ಭಾನು ಕೋಟಿಯ ಮೀರಿತ್ತು
ಸ್ವಾನುಭವದ ಜ್ಞಾನ ಶೂನ್ಯದಲಡಗಿದ ಘನವ ನೇನೆಂಬೆ ಗುಹೇಶ್ವರಾ. ॥ 679 ॥

ತಾತ್ಪರ್ಯ : ಮನದ ಕೊನೆ ಆವುದು ಅದರ ಮೇಲೆ ನೆನದ ನೆನಹು ಅದಾವುದು ! ಜನನ ಮರಣವ ನಿಲಿಸಿ ಜ್ಞಾನ ಜ್ಯೋತಿ ಆವುದು ? ಅದು ಉದಯ ಭಾನು ಕೋಟಿಯ ಮೀರಿತ್ತೆ ? ಮನದ

ಕೊನೆ; ಸಂಕಲ್ಪ ವಿಕಲ್ಪದ ಮುಕ್ತಾಯ , ಅರಿವ ಅರುಹಿಸಿಕೊಂಬ ಈ ಉಭಯ ನಷ್ಟವಾಗಿ ಅರಿಯಲಿಲ್ಲದ ಅರುವ ತಾನಾದುದು ಅರಸುವ ಮನ ಅರಸದಂತಾಗುವದು , ಕಲ್ಪಿಸುವ ಮನ ಕಲ್ಪಿಸದಂತಾಗುವುದು, ನೆನೆಯುವ ಮನ ನೆನೆಯದಂತಾಗುವುದು .

ಎಲೆ ಮನವೆ , ನೀ ತಿಳಿವುಡೆ ಆ ನಿನ್ನ ನಿಜವ ಹೇಳುವೆ ಕೇಳು , ಅದು ಕೇವಲ ಜ್ಯೋತಿ . ಅದು ವರ್ಣಾತೀತ . ನೀನದ ನರಸುವಾಗ ನೀನಗಾವಲ್ಲಿ ನಿಶ್ಚಯ ತೋರಿತ್ತು ಅದೀಗ, ನಿನ್ನ ಪರಿ ಪೂರ್ಣತ್ವದ ನೆಲೆ . ನಿನ್ನ ನೀ ನಿಶ್ಚೈಸಿ ನಿರ್ಗಮನಿಯಾದಲ್ಲಿ ಅದೆ ನಿನ್ನ ಸಮ್ಯಜ್ಞಾನದ ತೋರಿಕೆ ಆ ತೋರಿಕೆಯ ಅಖಂಡ ಬೆಳಗಿನ ಹೊಳಹಿನೊಳಗೆ ನೀ ನಮ್ಮ ಗುಹೇಶ್ವರ ಲಿಂಗದ ಶ್ರೀ ಚರಣವ ಸ್ಮರಿಸಿ ಕೊಂಡು ನಿಶ್ಚಿಂತ ನಾಗೆಲೆ ಮನವೆ , ಮನದ ಕೊನೆಯಾಗಲು ತಾನೆ ತನ್ನ ಮನಸ್ಸಿಗೆ ನಿನ್ನ ನಿಜವ ತಿಳಿ ಎಂದು ಹೇಳುವದು, ತನ್ನ ಮನಸ್ಸಿಗೆ ತಾನೆ ಗುರುವಾದುದು , ಗುರು ವಾಣಿ , ಆಕಾಶವಾಣಿ ಅಪ್ರತಿಮ ವಾಣಿ . ಎಲೆ ಮನವೆ ನಿನ್ನ ನಿಜವ ತಿಳಿವುಡೆ ಆ ನಿನ್ನ ನಿಜವ ಹೇಳುವೆ ಕೇಳು ಅದು ಕೇವಲ ಜ್ಯೋತಿ , ಅದು ವರ್ಣಾತೀತ ನೀನದ ನರಸುವಾಗ ನಿನಗಾವಲ್ಲಿ ನಿಶ್ಚಯ ತೋರಿತ್ತು ಎಂದು ಮನಕ್ಕೆ ಜಾಗ್ರತ್ ಮಾಡಿದ ಘನವದಾರಯ್ಯ , ಈ ಆಕಾಶವಾಣಿ , ಇದು ಗುರುವಾಗಿ ಹೇಳಿದುದು ಎನಬೇಕೆ ? ಎನ್ನಲಾಗದು . ಶಿಷ್ಯನಾಗಿ ಕೇಳಿದುದು ಎನೆಬೇಕೆ ? ಎನಲಾಗದು ಕೇವಲ ಇದ್ದಕ್ಕಿದ್ದಂತೆ ಬೋಧಿಸುವ ದಿವ್ಯದೃಷ್ಠಿಯುಳ್ಳ ಪ್ರಭು , ಅದನಾರಯ್ಯ ಹೀಗೆಯೆ ಎಂದು ವರ್ಣಿಸುವುದು ? ಇದು ತನ್ನೊಳ ಗುರುವಿನ ಉದಯವೆ! ಅಹಹ ! ಈ ಭಾಗ್ಯ ಘನದುದಯದ ಭಾಗ್ಯ , ತಾನೆ ಗುರುವಾಗಿ ಮನವ ಜಾಗ್ರತಗೊಳಿಸುವದೆಂದರೆ ಇದೆಂಥ ಜಾಗ್ರತೆ . ಗುರುರೂಪಿ ಆಕಾಶವಾಣಿ ಕೇವಲ ಜ್ಯೋತಿ ಎಂದು ಸುಮ್ಮನಾಗಲಿಲ್ಲ ಅದು ವರ್ಣಾತೀತ ವೆಂದು ಕರುಣಿಸಿತೆ ? ಇದಲ್ಲದೆ ನೀನದ ನರಸುವಾಗ ನಿನಗಾವಲ್ಲಿ ನಿಶ್ಚಯ ತೋರಿತ್ತು ಎಂದು ಜಾಗ್ರತ್ ಗೊಳಿಸಿದ ಜಾಗ್ರತ್ ತನ್ನಂತೆ ಮಾಡುವ ಜಾಗ್ರತ್ ಕರುಣೆಯ ಕರುಣಾಂಬುಧಿಗೆ ಆದಿ ಅಂತ್ಯವಿದೆಯಾ ಇದು ಶ್ರೀಗುರು ಕರುಣೆ.

ಓ ಮನವೆ ನೀನೆ ಧನ್ಯ ಧನ್ಯ ! ಗುರು ಘನನ ಕರುಣಾಂಬುಧಿಯಲ್ಲಿ ಬೆಳೆದು ನಿನ್ನ ನಿಜವ ನಿಶ್ಚೈಸುವ ನೀನೆ ಧನ್ಯ . ಇದು ಕಾರಣ ನಿನ್ನ ನೀ ಅರಿಯುವ ಭಾಗ್ಯ ನಿನಗೆ ಸಂಧಿಸಿದೆ ಅಲ್ಲವೆ ? ನೋಡು! ಆಕಾಶವಾಣಿ ಕೇವಲ ಜ್ಯೋತಿ ಎಂದಲ್ಲಿ ನೀನು , ಕೇವಲ ಜ್ಯೋತಿ ನಾನು ಎಂದು ವರ್ಣನೆಗೊಳಪಟ್ಟೆಯಾ ? ಅರಸುವವವನಾದೆಯಾ ? ಏಕೆಂದರೆ ಬೆಳಗಿಸಿ ಕೊಳ್ಳುವದು ಅರಸುವದು ಬೆಳಗುವ ಜ್ಯೋತಿ ಆಗದು ವರ್ಣನೆ ಗೊಳಪಟ್ಟುದು ಬೆಳಗುವ ಜ್ಯೋತಿ ಆಗದೆಂದು ನೀನರಿತ ಭಾಗ್ಯ ಇದು ಮನದ ಕೊನೆಯ ಮೇಲೆ ನಿಂತು ನೋಡಿದ ನಿಲುವು , ಪೂರ್ವ ಸ್ವಭಾವವಾಗಿಹ ಅರಸುವದು, ವರ್ಣನೆ ಮಾಡುವುದು , ನೆನೆಯುವುದು ಬಿಟ್ಟ ಸಂಕೇತ . ಆಗ ತಾನೆ ಕೇವಲ ಜ್ಯೋತಿಯಾಗಿ ಬೆಳಗುಳ್ಳ ಮಹಾಘನವಾಯಿತ್ತು . ಇದು ತನ್ನ ನಿಜ ನಿಶ್ಚೈಸಿ ನಿರ್ಗಮನಿಯಾದ ಸಂಕೇತ ತನ್ನ ನಿಜವ ನೆನೆದ ನೆನವು ಅದು ಪರಿಪೂರ್ಣತ್ವವಾಗಿಹ ನೆಲೆ . ಅಖಂಡಿತ ಘನ ಪೂರ್ಣದುವಪ್ಪ ತನ್ನಿರುವೆಂದರಿದ ಅರುವು ಇದು ಮನದ ಕೊನೆಯ ಮೇಲೆ ನೆನೆದ ನನವು . ಇದುವೆ ಜನನ ಮರಣವ ನಿಲಿಸಿದುದು , ಈ ಜ್ಞಾನ ಜ್ಯೋತಿಯ ಉದಯಭಾನು ಕೋಟಿ ಮೀರಿತ್ತು . ಈ ಜ್ಞಾನ ಜ್ಯೋತಿ ಸಾಮನ್ಯವೆ ? ನಿಜವು ನಿಶ್ಚೈಸಿ ಕೇವಲ ಜ್ಯೋತಿ ತಾನೆಂದರಿತು ಅರಿಯದಂತಿದ್ದು ಏನೆಂದೆನಲಿಲ್ಲದ ಅರುವಾಗಿ ತನ್ನ ಪೂರ್ವನಿಜವಬಿಟ್ಟು ನಿಶ್ಚಿಂತವಾಗಿ ಅಂಚಿತ್ಯಾತ್ಮ ತಾನಾಗಿಹ ಜ್ಯೋತಿ ! ಇದು ಅಸಾಮಾನ್ಯ ಜ್ಞಾನ ಜ್ಯೋತಿ . ಈ ಜ್ಞಾನ ಜ್ಯೋತಿ ಧ್ಯಾನ ಮೌನವ ಮರೆತ ಜ್ಞಾನ ಜ್ಯೋತಿ . ಸ್ವಯಂ ಜ್ಯೋತಿಗೆ ಜನನ ಮರಣ ಇಲ್ಲದಂತೆ ಮಾಡುವದು ಅಂಥ ಘನವಾದುದಲ್ಲ , ಇಲ್ಲಿ ನಿತ್ಯವೆಂಬುದಿಲ್ಲ ಅನಿತ್ಯವೆಂಬುದಿಲ್ಲ

ಕ್ಷರಾ ಕ್ಷರ ವೆಂಬುದಕ್ಕೂ ಮೀರಿದ ಘನವೆ ತಾನಾಗಿ ಉದಯ ಭಾನುಕೋಟಿ ಮಿರಿತ್ತು . ಉದಯ ಭಾನುಕೋಟಿ ಇದು ಉದಯಾಸ್ತದಿಂದುಕ್ತವಾದ ಭಾನುಕೋಟಿ ಅಲ್ಲ ಉದಯಾಸ್ತವಾಗದ ಭಾನುಕೋಟಿ ಸ್ವಯಂ ಭಾನುಕೋಟಿ ಇದು ಘನಜ್ಯೋತಿ ಉದಯ ಅಸ್ತಂಗಳ ಕಾಣದ ಜ್ಯೋತಿಗೆ ಉದಯವಾವುದು ಅಸ್ತವಾವುದು ?

ಸ್ವಾನುಭಾವದ ಜ್ಞಾನ ಶೂನ್ಯದಲಡಗಿದ ಘನವ ನೇನೆಂಬೆ! ಗುಹೇಶ್ವರ ಸ್ವಾನುಭಾವದ ಜ್ಞಾನ ಶೂನ್ಯದಲಡಗಿದುದ ನೇನೆಂಬೆ , ಇದು ಮೂಗ ಮೂಗರ ನಿರ್ವಾಣ , ನಿಶಬ್ದ ವೇದಿಗಳ ಸ್ವಾನುಭವದ ಜ್ಞಾನ ಇದು ನಿರಂತರವಾಗಿಹ ಜ್ಯೋತಿ , ಸಮ ಸ್ವರೂಪವಾಗಿಹ ಜ್ಯೋತಿ , ಸಕಲಕ್ಕೂ ಬೆಳಗುವ ಜ್ಯೋತಿ . ಬೋಧ ಅಬೋಧ, ಬೋಧಾ ಬೋಧಕ್ಕೂ ಮೀರಿ ಬೆಳಗುವುದು ಆವುದೋ ಅದುವೆ ಬೆಳಗುವ ಜ್ಯೋತಿ ಎಂಬುದು ತನ್ನಿಂದರಿತುದೋ ಸ್ವಾನುಭಾವ ಜ್ಯೋತಿ ಶೂನ್ಯದಲಡಗಿದುದು ಹೇಳಲೆಂತು ಬಾರದ ಶೂನ್ಯದ ಸಂಜ್ಞೆ ಏನೊಂದಾಗದ ಘನದ ಸಂಜ್ಞೆ ಶೂನ್ಯವದು ಅನುಪಮ ಘನದಲ್ಲಿ ಭಾವದ ಜ್ಞಾನ ಲೀಯವಾದುದು ಏನೆಂಬೇನೆಂಬೆ ಎಂದು ಹೇಳಿಹರು .

39

ಉದಕದೊಳಗಣ ಕಿಚ್ಚಿನಂತೆ
ಲಿಂಗೈಕ್ಯವು ವಾಯು ನುಗಿಂದ ಪರಿಮಳದಂತೆ
ಲಿಂಗೈಕ್ಯವು ಉರಿಯೊಳಡಗಿದ ಕರ್ಪುರದಂತೆ
ಲಿಂಗೈಕ್ಯವು ಭಾವ ನಟಿಸಿದ ಬಯಲಿನಂತೆ
ಲಿಂಗೈಕ್ಯವು ಅರುವು ನುಂಗಿದ ಮರಹಿನಂತೆ
ಲಿಂಗೈಕ್ಯವು ಯತೋವಾಚ್ಯೊ ನಿವರ್ತಂತೆ
ಅಪ್ರಾಪ್ಯಮನಸಾ ಸಹ ಎಂದುದಾಗಿ ವಾಙ್ಮನಕ್ಕ ಗೋಚರವಾದ
ಮಹಾ ಘನ ಶರಣನ ನೊಳಕೊಂಡು ಥಳ ಥಳಿಸಿ ಬೆಳ ಬೆಳಗಿ ಹೊಳೆವುತ್ತ
ನಿಃಶಬ್ದ ಬ್ರಹ್ಮವಾಗಿರ್ದನಯ್ಯ ನಮ್ಮ ಶಂಭು ಜಂಭುಕೇಶ್ವರನು .

ತಾತ್ಪರ್ಯ : ಲಿಂಗೈಕ್ಯ ನಿಲವು ನಿಃಶಬ್ದ ಬ್ರಹ್ಮವಾಗಿರ್ದ ನಿಲವು. ನಿಃಶಬ್ದ ಬ್ರಹ್ಮವೆಂಬುದು ಶಬ್ದದಂತಾಗಿ ಕಂಡರೂ ಶಬ್ದ ಮುಗ್ದ ಸಂಕೇತವ ಸೂಚಿಸುವದು . ಶಬ್ದವನ್ನೆ ನಿಷೇಧಿಸುವದು ಅದನೆಂತು ವರ್ಣಿಸುವುದು ? ಲಿಂಗವೆ ಲಿಂಗೈಕ್ಯ ನಿಲುವು ಸೂಚಿಸಿದರೂ ಅದನಾರೂ ಅರಿಯರು, ಗುರು ಕರುಣಿಸಿದ ಲಿಂಗ ಲಿಂಗೈಕ್ಯ ನಿಲುವುಳ್ಳ ಸಂಕೇತ . ಲಿಂಗಾರ್ಚಕರ ಲಿಂಗ ಲಿಂಗ ಎಂದು ಹಲಬುವವರ ಸಂಕೇತವನ್ನು ಲಿಂಗವರಿತು ಲಿಂಗವಾದವರ ಸಂಕೇತ . ಶ್ರೀಗುರು ಕರುಣಿಸಿದ ಕರುಣಾಂಬುಧಿಗೆ ಏನನ್ನಬೇಕು ಲಿಂಗೈಕ್ಯದ ಸಂಜ್ಞೆ ತೋರಿಸುವದಾಗಿದೆ ಎಂದಲ್ಲಿ ಶಬ್ದ ಮುಗ್ಧವಾಗುವ ನಿಜದ ನಿಲುವನ್ನೆ ಸೂಚಿಸುವ ಸಂಜ್ಞೆಯುಳ್ಳದ್ದಾಗಿದೆಯಲ್ಲ, ನುಡಿದು ನುಡಿಯದಂತಿದ್ದ ನಿಲುವಿಂಗೆ ಏನನ್ನ ಬೇಕು ಶಬ್ದವೆ ನಟಿಸಿ ನಿಃಶಬ್ದ ಬ್ರಹ್ಮವಾಗಿಹ ನಿಜವರುಹುವ ಕರುಣೆಯ ಕರುಣಾಂಬುಧಿ ಮತಿಗೆ ಮೀರಿರುವದಲ್ಲಾ, ಪ್ರಪಂಚ ಪರಮಾರ್ಥದರುವಿಂಗೆ ನಿಲುಕದನುವ ಅದನ್ನು ಸಕಲರಿಗೆ ತಿಳಿಯುವ ನುಡಿಯಲ್ಲಿ ನುಡಿಯಿತೆ

ಉದಕದೊಳಗಣ ಕಿಚ್ಚಿನಂತೆ ಲಿಂಗೈಕ್ಯವು : ಉದಕ ಗೋಚರ ಉದಕದೊಳಗಣ ಕಿಚ್ಚು ಅಗೋಚರ . ಗೋಚರ ಅಗೋಚರ ಆಶ್ಚರ್ಯ, ಗೋಚರ ಆವುದು ? ಕಣ್ಣಿಂಗೆ ಉದಕ ಗೋಚರ ಉದಕದೊಳಗಣ ಕಿಚ್ಚು ಕಣ್ಣಿಂಗೆ ಅಗೋಚರ . ಅಗೋಚರವೆಂಬೆನೆ ? ತ್ವ ಕ್ಕೇಂದ್ರಿಗೆ ಗೋಚರ ಕಣ್ಣು

ಹೇಳಲಿಲ್ಲ, ತ್ವಕ್ಕೇಂದ್ರಿ ಹೇಳಲಿಲ್ಲ, ವಾಣಿ ಹೇಳಿದುದು ಕಂಡಿಯೆ ಇಲ್ಲ ಹೇಗೊ ಹಾಗೆ ಉದಕವೆಂದರೆ ಜ್ಞಾನ. ಕಿಚ್ಚು ಅಮೃತ ಅಚಿಂತ್ಯ ಅಕಲ್ಪಿತ. ಇದು ಉದಕದೊಳಗಣ ಕಿಚ್ಚಿನಂತೆ ಇದ್ದುದು . ಜ್ಞಾನಾಮೃತ ಜ್ಞಾನಾನಂದ ಅಚಿಂತ್ಯ ಅನುಪಮ ವಾಙ್ಮನೋತೀತ ಅರುವೆಂಬ ಕಂಙು ಜ್ಞಾನ ಕಂಡದು . ಈ ಜ್ಞಾನದ ಅನುಭಾವ ಅರಿದರಿದು ನೋಡಿದ ಅರಿವು ಇದು ಅಗೋಚರ ಅರುವ ಅರಿದು ಅರಿಯದರುವು ಉದಕದೊಳಗಣ ಕಿಚ್ಚಿನಂತೆ ಲಿಂಗೈಕ್ಯವು ಎಂದು ಹೇಳಿಹರು.

ವಾಯು ನುಂಗಿದ ಪರಿಮಳದಂತೆ ಲಿಂಗೈಕ್ಯವು : ವಾಯು ಗೋಚರ , ವಾಯು ನುಂಗಿದ ಪರಿಮಳ ಅಗೋಚರ . ವಾಯು ತ್ವಕ್ಕೇಂದ್ರಿ ಗೋಚರ , ವಾಯು ನುಂಗಿದ ಪರಿಮಳ , ಶಬ್ದ ಮುಗ್ಧ ಅಗೋಚರ . ವಾಯು ಆವುದು ? ವಾಯು ನುಂಗಿದ ಪರಿಮಳ ಆವುದು ? ಲಿಂಗಾನು ಸಂಧಾನ ವಾಯು . ಸ್ವರೂಪಾನು ಸಂಧಾನ ವಾಯು . ಸಚ್ಚಿದಾನಂದ ಸಚ್ಚಿದ್ದಾನಂದವೆಂಬ ಜ್ಞಾನಾನಾರ್ಜನೆ ವಾಯು , ಅಖಂಡಿತ ಘನ ಪೂರ್ಣವೆಂಬುದೆ ವಾಯು , ಲಿಂಗ ಲಿಂಗವೆಂಬುದೆ ವಾಯು , ಏನೆಂದೆನಲಿಲ್ಲದ ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದುದು ವಾಯು ನುಂಗಿದ ಪರಿಮಳ , ನುಡಿಯು ನುಡಿಗೆಡೆಗೊಡದ ಘನದಲ್ಲಿ ಲೀಯವಾದುದು ವಾಯು ನುಂಗಿದ ಪರಿಮಳದಂತೆ ಲಿಂಗೈಕ್ಯವೆಂದು ಹೇಳಿಹರು.

ಉರಿಯೊಳಡಗಿದ ಕರ್ಪುರದಂತೆ ಲಿಂಗೈಕ್ಯವು. ಉರಿ ಗೋಚರ ಕರ್ಪುರ ಅಗೋಚರ, ಉರಿ ಆವುದು ? ಕರ್ಪುರ ಆವುದು ? ತಾನೆ ಉರಿ, ಬೆಳಗುವ ಬೆಳಗು, ತನ್ನಿಂದ ತನ್ನ ಕಂಡು ತಾನೆನ್ನದಂತಾದರೆ ಕರ್ಪುರವು . ಉರಿ ಜ್ಞಾನ ಜ್ಯೋತಿ , ಜ್ಞಾನ ಜ್ಯೋತಿ ಅರಿಯ ಹೋಗಿ ಏನೂ ಎನ್ನದೆ ಶಬ್ದಮುಗ್ಧವಾಗಿ ಜ್ಞಾನದ ಜ್ಞಾನ ಸತ್‌ದ ಸತ್ ಚಿತ್ತದಚಿತ್ ಪ್ರಜ್ವಲಿಸುವಡೆ ಉರಿಯೊಳಡಗಿದ ಕರ್ಪುರದಂತೆ ಲಿಂಗೈಕ್ಯವು ಶಬ್ದವೆ ಉರಿ . ಮಿಗೆ ಮಿಗೆ ಮೀಸಲವಾಗಿಹ ತತ್ವದಿರುವೆ ಕರ್ಪುರ . ನಿಶಬ್ದ ಬ್ರಹ್ಮವೆಂಬುದೆ ಕರ್ಪುರ ಶಬ್ದ ಬ್ರಹ್ಮ ಇದು ನಿಶಬ್ದದಲ್ಲಿ ಲೀನವಾದುದು ಉರಿಯೊಳಗಣ ಕರ್ಪುರದಂತೆ ಲಿಂಗೈಕ್ಯವು.

ಭಾವ ನಟಿಸಿದ ಬಯಲಿನಂತೆ ಲಿಂಗೈಕ್ಯವು : ಬಯಲೆ ಭಾವ ರೂಪವಾದುದು ಆಶ್ಚರ್ಯ . ನಟನು ನಟಿಸಿದ ಭಾವವು ಆಶ್ಚರ್ಯ, ಭಾವ ಬಯಲಾಗಬಹುದೇ ? ಬಯಲೆ ಭಾವ ರೂಪ ಆದುದ ನೇನೆಂಬೆ ಬಯಲೆ ಬಯಲು ಅದು ಘಟಾಕಾಶ ಭಾವವಾಗಿ ನಟಿಸಿದುದು ಆಶ್ಚರ್ಯವಲ್ಲವೆ ? ಅದುವೆ ಮಠಾಕಾಶ , ಮೇಘಾಕಾಶ, ಭಾವವಾಗಿ ನಟಿಸಿದುದು ಆಶ್ಚರ್ಯವಲ್ಲವೆ ? ಆಕಾಶವತ್ ಆಕಾಶವಾಗಿದ್ದರೂ ಘಟಾಕಾಶ , ಮಠಾಕಾಶ , ಮೇಘಾಕಾಶವೆಂದು ಹೇಳಿಸಿಕೊಂಡುದು ಆಶ್ಚರ್ಯವಲ್ಲವೆ ?

ನಿಸ್ಸೀಮ ತಾನಾಗಿದ್ದರೂ ಸೀಮಿತನಂತೆ ನಟಿಸಿದ ಭಾವ ಆಶ್ಚರ್ಯ ಭಾವಕ್ಕಗಮ್ಯನಾಗಿಹ ತಾನು ಜೀವಾತ್ಮನೆಂದು ಅಂತರಾತ್ಮನೆಂದು ಪರಮಾತ್ಮನೆಂದು ಭಾವ ನಟಿಸಿದುದು ಬಯಲಿನಂತೆ ಲಿಂಗೈಕ್ಯವು ನಿಶಬ್ದ ಬ್ರಹ್ಮ ತಾನಾಗಿದ್ದು . ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನೆಂಬ ಭಾವ ನಟಿಸಿದ ಬಯಲಿನಂತೆ ಲಿಂಗೈಕ್ಯವು . ವಾಙ್ಮನಕ್ಕೆ ಬಾರದ ಅನುಪಮನಾಗಿಹ ಘನವಾಗಿದ್ದು ಗುರು , ಲಿಂಗ ಜಂಗಮ ಭಾವ ನಟಿಸಿದ ಬಯಲಿನಂತೆ ಲಿಂಗೈಕ್ಯವು . ಲಿಂಗೈಕ್ಯಂಗೆ ಭಾವವದು ನಟಿಸಿದ ನಟನೆ ಯಾಗಿಪ್ಪುದು ಇದು ಕಾರಣ ಭಾವ ನಟಿಸಿದುದು ಬಯಲಿನಂತೆ ಲಿಂಗೈಕ್ಯಂನೆಂದು ಹೇಳಿಹರು.

ಅರುವು ನುಂಗಿದ ಮರಹಿನಂತೆ ಲಿಂಗೈಕ್ಯವು : ಅರುವು ಅರುವು ಎಂಬುದನ್ನೆ ನುಂಗಿದುದು, ಅರಿಯದರುವು ತಾನೆ. ಅರುವು ಅರುವು ಎಂಬುದನ್ನು ನುಂಗಿದವ ತಾನು , ಇದು ಅರುವ ಅರಿದರಿದು ಅರಿಯದರುವು ಆದುದರಿಂದ ಅರುವ ನುಂಗಿದ ಮರಹಿನಂತೆ ಲಿಂಗೈಕ್ಯವೆಂದು ಹೇಳಿದುದು .

ಅರಿಯದರವು ತನ್ನಿರುವು ಆಗಿಹುದರಿಂದ ಅರುವು ಅರುವು ಎಂಬುದನ್ನು ನುಂಗಿ ಶಬ್ದ ಸಂಭ್ರಮವನ್ನೆ ಮರೆತಿದೆ ಇದು ಕಾರಣ ಮರಹಿನಂತೆ ಲಿಂಗೈಕ್ಯವೆಂದು ಹೇಳಿಹರು.

ಯತಾ ವಾಚ್ಯೊ ನಿವರ್ತಂತೆ ಅಪ್ರಾಪ್ಯ ಮನಸಾಸಹ ಎಂದುದಾಗಿ ವಾಙ್ಮನಕ್ಕ ಗೋಚರವಾದ ಮಹಾ ಘನ ಶರಣ ನೊಳಕೊಂಡು ಥಳ ಥಳಿಸಿ ಬೆಳ ಬೆಳಗಿ ಹೊಳೆವುತ್ತ ನಿಶಬ್ದ ಬ್ರಹ್ಮವಾಗಿರ್ದನಯ್ಯ.

ವಾಣೆಗೊಳಪಟ್ಟುದು ಬ್ರಹ್ಮವಲ್ಲ, ಕಲ್ಪನೆ ಗೊಳಪಟ್ಟುದು ಬ್ರಹ್ಮವಲ್ಲ, ನೆನಹಿಂಗೊಳಪಟ್ಟುದು ಬ್ರಹ್ಮವಲ್ಲ. ಆವುದು ವಾಙ್ಮನಕ್ಕೆ ಅಗೋಚರವಾಗಿದೆ ಶೃತಿಗಗೋಚರವಾಗಿದೆ ಅದು ನಿಃಶಬ್ದ ಬ್ರಹ್ಮವು. ಅಲ್ಲಿ ಭಾವಕ್ಕಿಂಬಿಲ್ಲ, ಶಬ್ದ ಮೀಸಲು ನೋಡಾ ನುಡಿಗೆಡೆಯಿಲ್ಲ ಅದು ನಿಃ ಶಬ್ದ ಬ್ರಹ್ಮವು . ವಾಙ್ಮನಕ್ಕೆ ಅಗೋಚರವಾದ ಮಹಾಘನ ಶರಣನ ಹೃದಯ ಥಳ ಥಳಿಸಿ ಬೆಳ ಬೆಳಗಿ ಹೊಳೆವುತ್ತ ನಿಃ ಶಬ್ದ ಬ್ರಹ್ಮ ವಾಗಿರ್ದಿತ್ತಯ್ಯ ಎಂದರು . ಶರಣೆನೆಂದರೆ ನಿಃಶಬ್ದ ಬ್ರಹ್ಮ ತಾನೆ ತಾನಾಗಿ ಥಳ ಥಳಿಸಿ ಬೆಳ ಬೆಳಗಿ ಹೊಳೆಯುತ್ತಿಪ್ಪಸ್ವಯಂ ಜ್ಯೋತಿ ಎಂಬುದು ತನ್ನಿಂದ ತನಗದು ವೇದ್ಯವು ನೋಡಾ ಎಂದು ಹೇಳಿಹರು

40

ತೆರೆಹಿಲ್ಲದ ಘನವು ಕುರುಹಿಂಗೆ ಬಾರದ ಮುನ್ನ ತೋರಿದವರಾರೊ
ಮಹಾಘನ ಲಿಂಗೈಕ್ಯವನು ಆರೂಢಿಯ ಕೂಟದಲ್ಲಿ ನಾನಾರುವ ಸಾಕ್ಷಿಯ ಕಾಣೆನು
ಬೇರು ಮಾಡಿ ನುಡಿಯ ಬಹುದೆ ಪ್ರಾಣಲಿಂಗವನು
ಅರಿವು ಸ್ವಯವಾಗಿ ಮರುಹು ನಷ್ಟವಾದರೆ
ಗುಹೇಶ್ವರಾ ನಿಮ್ಮ ಶರಣನುಪಮಾತೀತನು. **॥ 687 ॥**

ತಾತ್ಪರ್ಯ : ತೆರೆಹಿಲ್ಲದ ಘನವು ಕುರುಹಿಂಗೆ ಬಾರದ ಮುನ್ನತೋರಿದವರಾರು ಹೇಳಾ : ತುಂಬಿ ತುಳಕದ ಘನವು ತುಳಕದ ಮುನ್ನ ತುಂಬಿದುದು ತುಳಕದು ಎಂದು ತೋರಿದವರಾರು ಹೇಳಾ.

ತೋರದಡಗದ ಘನ ತೋರದ ಮುನ್ನ ತೋರದಡಗದ ಘನವೆಂದು ತೋರಿದವರಾರು ಹೇಳಾ? ನಿಃಕಲ ಲಿಂಗ ಕಲೆಯುಳ್ಳದ್ದಾಗದ ಮುನ್ನ ನಿಃಕಲ ಲಿಂಗವೆಂದು ತೋರಿದವರಾರು ಹೇಳಾ ಅಚಿಂತ್ಯ ಘನವು ಚಿಂತನಗೆ ಒಳಪಡದ ಮುನ್ನ ಅಚಿಂತ್ಯಾತ್ಮನೆಂದು ತೋರಿದವರಾರು ಹೇಳಾ ಅಪ್ರಮಾಣಗಮ್ಯದ ಪ್ರಮಾಣ, ಪ್ರಮಾತೃ, ಪ್ರಮೇಯವಾದಗ ಮುನ್ನ ಅಪ್ರಮಾಣಗಮ್ಯದ ಘನವ ತೋರಿದವರಾರು ನಿರ್ಭಾವ ನಿಷ್ಪತಿ, ನಿಲುವುಳ್ಳ ಲಿಂಗವು ಭಾವಕ್ಕೆ ಬಾರದ ಮುನ್ನ ನಿರ್ಭಾವ ನಿಷ್ಪತಿ ನಿಲುವುಳ್ಳ ಲಿಂಗವು ಅಪ್ರಮಾಣಗಮ್ಯದ ಘನವ ತೋರಿದವರಾರು ಹೇಳಾ . ಅದು ಪ್ರಮಾತೃ, ಪ್ರಮಾಣ, ಪ್ರಮೇಯವಾಗದ ಮುನ್ನ ಅದರ ಘನವ ತೋರಿದವರಾರು ಹೇಳಾ

ಮಹಾ ಲಿಂಗೈಕ್ಯವು ಅರಿವನರಿಯುವ ಅರಿವು ತಾನೆ ತಾನಾದ ಘನಕ್ಕೆ ಘನ . ಇದು ಮುನ್ನ ಮುನ್ನಲಾದ ಘನ ತನ್ನಿಂದ ತಾನಾದ ಘನ , ಅರಿಯದರುವು ಅಖಂಡೈಕರಸ '' ಪರತತ್ವನಿಜ ಸಂಯುಕ್ತರ ಆನು ನೀನೆನ್ನದಿಹ ಶಬ್ದ ಸುಖಿಗಳ ತೋರಾ ಎನಗೆ ಮಹಾನುಭಾವಿಗಳ ತೋರಾ ಎನಗೆ ಎಲೆ ಲಿಂಗವೆ ಲಿಂಗೈಕ್ಯರ ಲಿಂಗ ಸಂಗಿಗಳ ಲಿಂಗ ಗೂಢಾಗಿಪ್ಪವರ ತೋರಾ ಎನಗೆ ಅಹೋ ರಾತ್ರಿ ಅವರ ಸೇವೆಯಲ್ಲಿರಿಸು ಕೂಡಲ ಸಂಗಮದೇವಾ ! ಬಸವರಸರು ಕೂಡ ಪ್ರಭುದೇವರಂತೆ ಮಹಾಘನ ಲಿಂಗೈಕ್ಯರ ತೋರಾ ಎನಗೆ ಎಂದುದು ಸಕಲ ಶರಣರಿಗೆ ಸಮ್ಮತವಾದುದು. ತಾನಾರೆಂದರಿತ ಅನುಪಮನೆ ಮಹಾಘನ ಲಿಂಗೈಕ್ಯನು . ಆ ಅನುಪಮನಲ್ಲಿ ಆನೆಂಬುದಿಲ್ಲ ನೀನೇಂಬುದಿಲ್ಲ ಮರವೆಂಬುದಿಲ್ಲ ಅರುವೆಂಬುದಿಲ್ಲ ಅಹುದಾದುದಿಲ್ಲ ಅಲ್ಲಾದುದಿಲ್ಲ , ಅಕಲ್ಪಿತ ಘನ ತಾನೆ, ಸುಖ

ಸುಖಿ ತಾನೆ ಸುಖದ ಸುಖಿ ತಾನೆ ಅರುವು ತಾನೆ ಅರುವಿನರುವು ತಾನೆ ಅರಿಯದರುವು ತಾನೆ ಆದ ಆರೂಢ ಕೂಟದಲ್ಲಿ ನಾನಾರನು ಕಾಣೆ ಇದು ಅನುಪಮ ಶರಣನ ನಿಲುವು ಕಲ್ಪಿತನಾಗಿ ಕಾಣುವ ಆರೂಢಿಯ ಕೂಟ ಇದಲ್ಲ ಇದು ಅಕಲ್ಪಿತ ತಾನಾದ ನಿಲುವು ತೆರೆಯಿಲ್ಲದ ಘನವು , ತೋರಿ ಇಲ್ಲವಾಗುವ ಕಲ್ಪಿತ ಮಾಯಿಕವಾಗಬಹುದೆ ? ದಿಟವು ಅಸಿಯ ಸ್ವಭಾವದ್ದಾಗಬಹುದೆ ? ನಿಜವ ತೋರಿ ಇಲ್ಲವಾಗುವ ಕಲ್ಪಿತನಾಗಬಹುದೆ ? ನಿಜವು ತನಗಿಂತ ಬೇರು ಮಾಡಿ ನುಡಿಯಬಹುದೆ ಪ್ರಾಣಲಿಂಗವನು, ತಾನೆ ತೆರೆಹಿಲ್ಲದ ಘನವಾಗಿರುವಾಗ ತನಗೆ ತಾನೆ ತನ್ನನ್ನು ಬೇರು ಮಾಡಿ ನುಡಿಯಬಹುದೆ?

ತಾನೆಂಬುದು ಪ್ರಾಣ ಲಿಂಗ, ಪ್ರಾಣ ಲಿಂಗವದು ನಿಜ ಚೈತನ್ಯ ಅಖಂಡ್ಯೆಕರಸ, ಅಖಂಡ್ಯೆಕರಸ ತಾನಿದ್ದು ತನಗೂ ಅಖಂಡಿತ ಘನಕ್ಕೂ ಬೇರು ಮಾಡಿ ನುಡಿಯಬಹುದೆ? ಅರುವೆ ತಾನಿದ್ದು ಅರುವಿಂಗೂ ತನಗೂ ಬೇರು ಮಾಡಿ ನುಡಿಉಬಹುದೆ ? ಅರುವು ಸ್ವಯವಾಗಿ ಮರಹು ನಷ್ಟವಾದರೆ, ಗುಹೇಶ್ವರ ಲಿಂಗ ತಾನೆ ನೋಡಾ. ತಾನೆ ಅರುವೆಂಬುದು ತನ್ನಿಂದ ತನಗದು ವೇದ್ಯವಾಗಿ ಅಜ್ಞಾನ ನಷ್ಟವಾದರೆ ಗುಹೇಶ್ವರ ಲಿಂಗ ತಾನೆ ನೋಡಾ.

ಅಜ್ಞಾನವಾಗಲಿ, ಮರುವಾಗಲಿ, ತನ್ನೊಳ್ಳಿ ಇದೆಯೊ ಇಲ್ಲವೊ ಎಂಬುದು ತಾನೆ ನೋಡುವದು. ತಾನೆ ತೆರೆಹಿಲ್ಲದ ಘನವೆಂಬುದು ತನ್ನಿಂದ ತನಗದು ವೇದ್ಯವಾಗಲು , ತನ್ನೊಳ ಮರುವಿಗಿಂಬುಂಟೆ? ಅಜ್ಞಾನಕ್ಕಿಂಬುಂಟೆ? ಸಂದಿಲ್ಲದಿಪ್ಪ ಅಖಂಡಿತ ಘನ ಪರಿಪೂರ್ಣವೆ ತನ್ನಿರುವು ಎಂದರಿದ ಮಹಾಂತ , ಆ ಮಹಾಂತಂಗೆ ಮರವು ಇದ್ದುದು ಇಲ್ಲದುದು ಎಂಬ ಶಬ್ದ ಸಂದಣಿಗೆ ಸಂದಿಲ್ಲ ನೋಡಾ, ಮರವೆಂಬ ಶಬ್ದ ಸಂದಣಿಗೆ ಸಂದಿಲ್ಲವೆಂದಲ್ಲಿ ಅಜ್ಞಾನಕ್ಕಾಸ್ಪದವೆಲ್ಲಿ? ಇದು ಕಾರಣ ಅಜ್ಞಾನ ನಷ್ಟವೆಂದಿದ್ದಾರೆ, ಆಗ ಗುಹೇಶ್ವರ ಲಿಂಗ ತಾನೆ. ತಾನೊಂದೆ ಇದ್ದುದಾಗಿ ತನ್ನ ಹೊರತು ಅನ್ಯ ಆವಾವುದು ಇಲ್ಲದ್ದಾಗಿ ಅರಿಯದರುವೆ ನಿಜದ ನಿಲುವಾಗಿ ಅಖಂಡ್ಯೆಕರಸ ಪ್ರಜ್ವಲಿಸಿದುದೆ ಗುಹೇಶ್ವರ ಲಿಂಗ ತಾನೆ.

ಇಂತು ಉಪದೇಶದಿಂದ ಮುನ್ನವೆ ಸಂಸಾರವಸ್ಥೆಯಿಂತೊಲಗಿಸಿ ತನಗೆ ತಾನೆ ಲಿಂಗದಲ್ಲಿ ಲೀಯವಾಗಬೇಕೆಂಬ ಬುದ್ಧಿ ಹುಟ್ಟಿದ ಬಳಿಕ ಬಂದು ಗುರೂಪಾವಸ್ಥೆಯಿಂ ಮಾಡಿದ ಶಿಷ್ಯರು,(ಶರಣನು) ತನ್ನಿಂದ ತಾನೆ ತಿಳಿದು ತನ್ನ ತಾನೇ ಶಿವನೆಂದರಿಯಬೇಕು. ಭಿನ್ನವಾಗಿ ಅರಸಲಾಗದು ಅರಸುವದು ತಾನೆ ಶಿವನಾದ ಚಿನ್ಹವಲ್ಲ, ಅರ್ಚಿಸುವದು ತಾನೆ ಶಿವನಾದ ಚಿನ್ಹವಲ್ಲ.

ಶಿವನಾದವನು ಪೂಜಿಸುವನೆಂತು? ಮರುವಿಂಗೆ ಅರ್ಚಿಸುವದುಂಟು, ಆರಾಧಿ ಸುವುದುಂಟು, ಅರುವಿಂಗರುವಾಗಿಹ ಮಹಾಂತ ವಾಙ್ಮನೋತೀತ, ಅವನೆಂತು ಧ್ಯಾನ ಮೌನವ ಮಾಡುವನು ! ಧ್ಯಾನಾತೀತ ತಾನೆ, ಅದುವೆ ಶಿವನಾದ ನಿಲುವು.

41

ನುಡಿಯಿಂದ ನಡೆ ಕೆಟ್ಟಿತ್ತು ನಡೆಯಿಂದ ನುಡಿ ಕೆಟ್ಟಿತ್ತು ,
ಭಾವದ ಗುಸುಟು , ತಾನೆ ನಾಚಿ ಮಾದುದು ನೋಡಾ,
ಗುಹೇಶ್ವರನೆಂಬ ಅರಿವು ಸಿನೆ ಬಂಜೆಯಾದುದಲ್ಲ. **॥ 691 ॥**

ತಾತ್ಪರ್ಯ : ನುಡಿಯಿಂದ ನಡೆ ಕೆಟ್ಟಿತ್ತು : ನಡೆ ಕೆಡುವ ನುಡಿ ಅದಾವ ನುಡಿ ? ಉಪನಿಷದ್ ನುಡಿಯಿಂದ ನಡೆ ಕೆಟ್ಟಿತ್ತು , ಓಂ ಅಸತೋಮಾ ಸದ್ಗಮಯ, ತಮಸೋಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂಗಮಯ , ಓಂ ಶಾಂತಿಃ ಶಾಂತಿಃ ಶಾಂತಿಃ : ಸತ್ಯದ ನುಡಿಯಿಂದ ಅಸತ್ಯದ

ನಡೆ ಕೆಟ್ಟಿತ್ತು. ಜ್ಞಾನದ ನುಡಿಯಿಂದ ಅಜ್ಞಾನದ ನಡೆ ಕೆಟ್ಟಿತ್ತು. ಜ್ಞಾನಾಮೃತ ನುಡಿಯಿಂದ ಮೃತ್ಯು ನಡೆ ಕೆಟ್ಟಿತ್ತು, ಅರುವಿನ ನುಡಿಯಿಂದ ಮರುವಿನ ನಡೆ ಕೆಟ್ಟಿತ್ತು. ನುಡಿಯಿಂದ ನಡೆ ಕಟ್ಟಿದ್ದು ಹೇಗೆ? ಅಯ್ಯಾ ಎಂಬ ನುಡಿಯಿಂದ ಎಲೆ ಎಂಬ ನಡೆ ಸ್ವಭಾವತಃ ಕೆಡುವುದು, ಹಾಗೆ ಸಚ್ಚಿದಾನಂದ ನಾನು ಎಂಬ ನುಡಿಯಿಂದ ನಾಮರೂಪ ತಾನಾಗಿ ನಡೆಯುವ ನಡೆ ಕೆಟ್ಟಿತ್ತು, ಸಾಕ್ಷಿನಾನು ಎಂಬ ಅರುವಿನ ನುಡಿಯಿಂದ ತನುವು, ತಾನಾಗಿಹ ನಡೆ ಕೆಟ್ಟಿತ್ತು. ಸಾಕ್ಷಿ ನಾನೆಂಬ, ಅರುವಿನಿಂದ ನುಡಿಯಿಂದ , ಕಾಯದ ಶುಭಾ ಶುಭ ಕರ್ಮ ತಾನಾಗಿ ನಡೆಯುವ ನಡೆ ಕೆಟ್ಟಿತ್ತು. ಮನದ ಶುಭಾ ಶುಭ ಕರ್ಮ ತಾನಾಗಿ ನಡೆಯುವ ನಡೆ ಕೆಟ್ಟಿತ್ತು. ಶುಭಾ ಶುಭದಿಂದುಕ್ತವಾಗಿ ಮಾತಾಡುವ ವಾಣಿಯ ನಡೆ ಕೆಟ್ಟಿತ್ತು. ನಿರ್ಗುಣ ತಾನೆಂಬ ನುಡಿಯಿಂದ , ಗುಣತ್ರಯಂಗಳು ತಾನಾಗಿಹ ನಡೆಯುವ ನಡೆ ಕೆಟ್ಟಿತ್ತು. ಅರಿಸಿಕೊಳ್ಳುವ ಅನಾತ್ಮ ನಾನಲ್ಲ. ಅರಿಯುವ ಅರುವೆ ನಾನೆಂಬ ನುಡಿಯಿಂದ , ಅನಾತ್ಮ ತಾನಾಗಿ ನಡೆಯುವ ನಡೆ ಕೆಟ್ಟಿತ್ತು. ಅವಸ್ಥಾದಿಗಳಿಗೆ ಸಾಕ್ಷಿ ನಾನೆಂಬ ಅರುವಿನ ನುಡಿಯಿಂದ ಅವಸ್ಥಾದಿಗಳು ತಾನಾಗಿಹ ಭ್ರಾಂತಿ ನಡೆ ಕೆಟ್ಟಿತ್ತು. ಸಾಕ್ಷಿಯಾಗಿಹ ನಾನು , ಅಸಂಗನು ದೃಶ್ಯ ರೂಪನು, ಪ್ರತ್ಯಗಾತ್ಮನು ಪರಬ್ರಹ್ಮನಾನು ಎಂಬ ನುಡಿಯಿಂದ, ತನ್ನಿಂದ ತಿಳಿಸಿಕೊಳ್ಳುವ ಸ್ಥೂಲ ಶರೀರ, ಸೂಕ್ಷ್ಮ ಶರೀರ, ಕಾರಣ ಶರೀರ ತಾನಾಗಿಹ ಅಧ್ಯಾಸ (ಭ್ರಾಂತಿ) ನಡೆ ಕೆಟ್ಟಿತ್ತು. ಷಡಕ್ಷರಿ ತಾನೆಂಬ ನುಡಿಯಿಂದ, ಷಡ್ ಧಾತು ರೂಪಿ ಮಲಮಯ ಶರೀರ ತಾನೆಂಬ ನಡೆ ಕೆಟ್ಟಿತ್ತು.

ಸಮದೃಷ್ಠಿ, ಸಮಭಾವ , ಸಮಜ್ಞಾನದ ನುಡಿಯಿಂದ, ವಿಷಮ ದೃಷ್ಠಿ, ವಿಷಮ ಬುದ್ಧಿ, ವಿಷಮ ಜ್ಞಾನ, ವಿಷಮ ಭಾವದ ನಡೆ ಕೆಟ್ಟಿತ್ತು, ವ್ಯಷ್ಠಿ ಸಮಷ್ಠಿ ದೃಷ್ಠಿಯು ಕೆಟ್ಟಿತ್ತು.

ಅಪರೋಕ್ಷ ನುಡಿಯಿಂದ ಪರೋಕ್ಷ ನಡೆ ಕೆಟ್ಟಿತ್ತು. ಅಹಂ ಬ್ರಹ್ಮಾಸ್ಮಿ ನುಡಿಯಿಂದ , ಬ್ರಹ್ಮ ಇದ್ದಾನೆ, ವ್ಯಾಪಕವಾಗಿದ್ದಾನೆ, ಸಚ್ಚಿದಾನಂದವಾಗಿ ಇದ್ದಾನೆ, ಚೈತನ್ಯನಾಗಿ ಇದ್ದಾನೆ ಎಂಬ ಪರೋಕ್ಷದ ನಡೆ ಕೆಟ್ಟಿತ್ತು. ಪರಬ್ರಹ್ಮ ತಾನೆಂಬುದು , ಸಿದ್ಧವಾಯಿತ್ತು. ಜೀವ ಬ್ರಹ್ಮರೇಕತ್ವ ಜ್ಞಾನದಿಂದ ಪಂಚ ಪ್ರಕಾರವಾಗಿ ಭೇದ ಜ್ಞಾನದ ನಡೆ ಕಟ್ಟಿತ್ತು.

ನಡೆಯಿಂದ ನುಡಿ ಕೆಟ್ಟಿತ್ತು : ಇದಾವ ನಡೆಯಿಂದ, ಇದಾವ ನುಡಿ ಕೆಟ್ಟಿತ್ತು. ಅಹಮಿಲ್ಲದ ಚಿದ್ಘನವರಿಯುವದರಿಂದ , ಕಲ್ಪಿತ ಪುರುಷನ , ಮರುವಿನ ನಾಮ ರೂಪಾಗಿ ಮಾತಾಡುವ ನುಡಿಯುವ ನುಡಿ ಕೆಟ್ಟಿತ್ತು.ಅರುವಿನ ಅಭಿಮಾನಿ ಮಾತಾಡುವ ಅಹಂ ಬ್ರಹ್ಮಾಸ್ಮಿ, ಸಚ್ಚಿದಾನಂದ ನಾನಿದ್ದೇನೆ, ನಿತ್ಯ ನಾನಿದ್ದೇನೆ, ಪೂರ್ಣ ನಾನಿದ್ದೇನೆ ಎಂಬ ಚಿದಹಂ ನುಡಿ ಕೆಟ್ಟಿತ್ತು, ಅರುವ ಅರಿಯುವದರಿಂದ, ಪ್ರಜ್ಞಾನಂ ಬ್ರಹ್ಮವೆಂಬ ನುಡಿ ಕೆಟ್ಟಿತ್ತು, ಅರುವೆ ನಾನೆಂಬ ನುಡಿ ಕೆಟ್ಟಿತ್ತು , ಅಖಂಡ ಜ್ಞಾನಾಮೃತವರಿಯುವದರಿಂದ, ಅಯಮಾತ್ಮ ಬ್ರಹ್ಮವೆಂಬ ನುಡಿ ಕೆಟ್ಟಿತ್ತು. ಸಚ್ಚಿದ್ರೂಪವರಿಯುವದರಿಂದ, ಸಚ್ಚಿದಾನಂದ ನಾನೆಂಬ ನುಡಿ ಕೆಟ್ಟಿತ್ತು. ತಾನಾರೆಂದು, ತನ್ನ ತಾನರಿಯುವದರಿಂದ ಸರ್ವಂಖಿಲ್ವಿದಂ ಬ್ರಹ್ಮ ಎಂಬ ನುಡಿ ಕೆಟ್ಟಿತ್ತು. ನಿಶಬ್ದವೇದಿಯಾಗಿ ತಾನನುಪಮನೆಂಬುದು ತನ್ನಿಂದ ತನಗೆ ವೇದ್ಯವಾಗಲು ನಿಃಶಬ್ದ ಬ್ರಹ್ಮಮುಚ್ಯತೆ ಎಂಬ ನುಡಿ ಕೆಟ್ಟಿತ್ತು.

ಭಾವ ಗುಸುಟು ತಾನೆ ನಾಚಿ ಮಾದುದು ನೋಡಾ : ತನ್ನ ತಾನರಿಯುವುಡೆ ತಾನೆ ಶೃತಿಗಗೋಚರ ಭಾವಕ್ಕಗಮ್ಯನೆಂಬುದು ತನ್ನಿಂದ ತನಗದು ವೇದ್ಯವಾದಲ್ಲಿ, ಸಕಲ ಭಾವನೆಯ ಗುಸುಟು ನಾಚಿ ತಾನೆ ನಷ್ಟವಾದುದು . ನಿರ್ಭಾವ ದರಿವು ತನಗದು ತಿಳಿಯದ್ದರಿಂದ ಭಾವಂಗಳು ಸತ್ಯವಾಗಿದ್ದವು. ಅನಾತ್ಮ ಭಾವ , ಆತ್ಮ ಭಾವ ಸತ್ಯವಾಗಿದ್ದವು , ಭಾವಕ್ಕಗಮ್ಯವಾಗಿಹ ಘನ ದರುವಿನ ಅರುವು ತಿಳಿವುಡೆ ಸಕಲ ಭಾವಂಗಳು ತಾನೆ ನಾಚಿ ಹೋದುದು ನೋಡಾ.

ಭವದ ಗುಸುಟು , ಬಹು ಕೆಟ್ಟುದು ಇದು ವ್ಯವಾಹಾರದಿಂದುಕ್ತ ವಾಗಿರುವದರಿಂದ, ಕೆಡ ಕುಳ್ಳುದು ಎಂದು ತಿಳಿಯ ಕೂಡದು. ಇದು ತ್ಯಾಗದಲ್ಲಿ, ಯೋಗದಲ್ಲಿ, ಭಕ್ತಿಯಲ್ಲಿ ಕೂಡಿ, ಭ್ರಾಂತಿಯನ್ನುಂಟು ಮಾಡಿದೆ ಇಷ್ಟೆ ಅಲ್ಲ, ಪರಮಾರ್ಥದಲ್ಲಿಯೂ ಕೂಡ ಭಾವದ ಗುಸುಟು ಹುದುಗಿ ಕೊಂಡಿಹುದು. ಭಾವ ವೆಂಬುದು ಜನ್ಮಕ್ಕೆ ಈಡು ನಿರ್ಭಾವ ವೆಂಬುದು ಜನ್ಮಕ್ಕೆ ಕಾಡು ಗಿಚ್ಚು, ಎಂದು ಮಹಾತ್ಮರ ಮಹಾನುಭಾವ ವಿದೆ ಮಾಡಿ ಮಾಡಿ ಹೋದರು, ನೋಡಿ ನೋಡಿ ಹೋದರು, ನೀಡಿ ನೀಡಿ ಹೋದರು, ಮಾಡದೆ ನೀಡದೆ ನೋಡದೆ ಹೋದವರನು ಆರನು ಕಾಣೆ ಕಪಿಲ ಸಿದ್ಧ ಮಲ್ಲಿಕಾರ್ಜುನ.

ಎಲ್ಲಿಯವರೆಗೆ ಕಲ್ಪಿತ ಪುರುಷ ತಾನು ಆಗಿಹನು , ಅಲ್ಲಿಯವರೆಗೆ, ಭಾವಕ್ಕೊಳಪಟ್ಟವನು ಆದುದರಿಂದ ಮಾಡುವವನು, ನೀಡುವವನು, ನೋಡುವವನು, ಆಗಿಹನು. ಶುಭಾ ಶುಭಾ ಕರ್ಮ ಮಾಡುವವನು, ಜಪಮಾಡುವವನು, ತಪವ ಮಾಡುವವನು, ಧ್ಯಾನ ಮಾಡುವವನು, ದಾನ ಮಾಡುವವನು ಆಗಿಹನು.

ಗುಡಿಯ ನೋಡಲಿ, ಗುಡಿಯಲ್ಲಿರುವ ದೇವರ ನೋಡಲಿ, ಲಿಂಗ ನೋಡಲಿ, ಗುರುವರನ ನೋಡಲಿ, ಜಂಗಮ ದೇವನ ನೋಡಲಿ, ನೋಡುವವನಾಗಿಹನು, ಪ್ರಸಾದವ ನೀಡಲಿ, ಗುರುವಿಂಗೆ ತನುವ ನೀಡಲಿ, ಧನವ ನೀಡಲಿ, ಇವರೆಲ್ಲರು ಭಾವ ಭ್ರಮಿತರು.

ಭಾವರೂಪ ಭ್ರಾಂತಿಯು ಬಹು ಸೂಕ್ಷ್ಮರೂಪದಲ್ಲಿ ಹುದುಗಿಹುದು. ತಾನಾರೆಂದು ತಿಳಿಯದ್ದರಿಂದ ತ್ಯಾಗ ಮಾಡುವವನಾಗಿದ್ದರೂ ತ್ಯಾಗ ಮಾಡುವವ ತಾನಾರೆಂದು ತಿಳಿಯಲಿಲ್ಲ. ಲಿಂಗಾರ್ಚಕನು ಲಿಂಗವ ನೋಡುವವನಾಗಿದ್ದರೂ ಲಿಂಗವರಿಯಲಿಲ್ಲ, ಲಿಂಗವ ನೋಡುವ ತನ್ನ ಅರಿಯಲಿಲ್ಲ, ಭಕ್ತಿ ಭಾವದಿಂದುಕ್ತವಾಗಿಹನಲ್ಲದೆ ಭಾವಕ್ಕಗಮ್ಯವಾಗಿಹ ತನ್ನ ಘನವರಿಯಲಿಲ್ಲ ಇತ್ತ ಪರಮಾರ್ಥದಲ್ಲಿಯಾದರೂ ಗುರು, ಶಿಷ್ಯರೆಂಬ ಭಾವ, ಆಸ್ತಿಕ ನಾಸ್ತಿಕ ರೆಂಬ ಭಾವ, ಮಮುಕ್ಷು, ಅಭ್ಯಾಸಿ, ಅನುಭಾವಿಗಳೆಂಬ ಭಾವ, ಅಷ್ಟೆ ಸತ್ಯವಾಗಿರುವವು. ಅರುವಿನ ಸಾಧನ ಮಾಡುವ ಸಾಧಕರಲ್ಲಿಯೆ ಭಾವ ದೃಢವಾದಮೇಲೆ, ಅಜ್ಞಾನಿಗಳ ಪಾಡೇನು. ಇದು ಕಾರಣ ಅರುವ ಅರಿಯುವುಡೆ ಆಗ ತಾನು ಭಾವಕ್ಕಗಮ್ಯ ನೆಂಬುದು ತನ್ನಿಂದ ತನಗದು ಸಿದ್ಧವಾಗುವುಡೆ ಭಾವಂಗಳು ಸತ್ಯವಾಗವು ಗುಹೇಶ್ವರನೆಂಬ ಈ ಜ್ಞಾನವು ಕೂಡ ವ್ಯರ್ಥವು.

ಬಂಜೆಯ ಶರೀರ ವೆಷ್ಟು ನಿರರ್ಥಕವು, ಅಷ್ಟೆ ಗುಹೇಶ್ವರನೆಂಬ ಅರಿವು ಸಿನೆ ಬಂಜಿಯಾದುದು. ಗುಹೇಶ್ವರ, ಗುಹೇಶ್ವರನೆಂಬ ಭಾವ, ನೆನಹು ಅರಿವು ಇದು ಕೂಡಾ ವ್ಯರ್ಥವಾದುದು.

42

ಆನು ನೀನೆಂಬುದು ತಾನಿಲ್ಲ, ತಾನರಿದ ಬಳಿಕ ಏನೂ ಇಲ್ಲ ಇಲ್ಲ.
ಇಲ್ಲದ ಇಲ್ಲವೆ ಎಲ್ಲಿಂದ ಬಪ್ಪುದೊ?
ಅನುವರಿದು, ತನುವ ಮರೆದ ಭಾವ ರಹಿತ ಗುಹೇಶ್ವರ. **॥ 305 ॥**

ತಾತ್ಪರ್ಯ : ಆನು ನೀನೆಂಬುದಿಲ್ಲ : ಇದೇನಾಶ್ಚರ್ಯ, ಪೂರ್ವದಲ್ಲಿ, ನಾನು ನೀನೆಂಬುದು ಅಷ್ಟು ನಿಜವಾಗಿತ್ತು. ಈಗ ಅಷ್ಟೆ! ಸುಳ್ಳಾಯಿತೆ ? ನಾನು ನೀನೆಂದು ಕಾಂಬ ದೃಷ್ಟಿ ಗೇನನ್ನಬೇಕು? ತನ್ನ ತಾನರಿಯದ ದೃಷ್ಟಿ ಮಾಯಿಕ ದೃಷ್ಟಿ ನಾನಾಗಿ ಕಂಡಿತೇ, ನೀನಾಗಿ ಕಂಡಿತು. ಇದರಿಂದ ವಿಷಮ ದೃಷ್ಟಿಯುಂಟಾಗಿ ಜ್ಞಾನ ಅಜ್ಞಾನವಾಯಿತ್ತು, ಇದರಿಂದ ನಾನಾ ವಿಧ ಪ್ರಪಂಚವಾಗಿ ತೋರಿತ್ತು.

ಈ ತೋರುವ ಪ್ರಪಂಚವೆ ಮಾಯಿಕ ನೋಡಾ . ನಾನು ನೀನೆಂಬುದು ಸತ್ತರೆ ಜ್ಞಾನ ಅಜ್ಞಾನ ಸತ್ತಿತ್ತು . ಈ ಜ್ಞಾನ ಅಜ್ಞಾನ ಸತ್ತು ನಾನಾ ವಿಧವಾಗಿ ತೋರುವ ಪ್ರಪಂಚವು ಸತ್ತಿತ್ತು .ಇದು ಕಾರಣ ನಾನೆಂಬ ಅಹಂಭಾವ ಇಲ್ಲವಾಗಬೇಕು. ನೀನೆಂಬ ನಿರಹಂಭಾವ ಇಲ್ಲವಾಗಬೇಕು , ಇದು ಇಲ್ಲಾಗುವದು ಆವಾಗ ? ತಾನಾರೆಂದು ಅರಿತಾಗ ಎಲ್ಲಿಯವರೆಗೆ ತಾನಾರೆಂದು ಅರಿಯುವದಿಲ್ಲ ಈ ನಾನು ನೀನು ನಾನಾವಿಧದಲ್ಲಿ ತೋರುತ್ತದೆ.

ಅವಿದ್ಯಾ ರೂಪದಲ್ಲಿ ತೋರುವ ನಾನು ನೀನು ಬೇರೆ. ವಿದ್ಯಾ ರೂಪದಲ್ಲಿ ತೋರುವ ನಾನು ಬೇರೆ, ವಿದ್ಯಾವಿದ್ಯಾ ರೂಪದಲ್ಲಿ ತೋರುವದು ಬೇರೆ. ಈ ನಾನು ನೀನು ವಿಶ್ವ ರೂಪವಾಗಿದೆ. ಇದುವೆ ಪೂಜ್ಯ ಪೂಜಕ ರೂಪವಾಗಿದೆ. ಇದುವೆ ಜ್ಞಾನ ರೂಪ ವಾಗಿದೆ, ಬಂಧನ ರೂಪವಾಗಿದೆ, ಮೋಕ್ಷ ರೂಪವಾಗಿದೆ, ಬದ್ಧನಾಗಿದೆ, ಬುದ್ಧನಾಗಿದೆ, ಗುರುವಾಗಿದೆ, ಭವಿಯಾಗಿದೆ, ಭಕ್ತನಾಗಿದೆ, ಅರಿತವನಾಗಿದೆ, ಅರಿಯದವನಾಗಿದೆ .

ಈ ನಾನು ನೀನೆ ದೇಹೋಹಂ ಆಗಿದೆ, ಸೋಹಂ ಆಗಿದೆ, ಚಿದಹಂ ಆಗಿದೆ, ನಾನು ನೀನೆನ್ನುವ ಆಡಳಿತ ಪ್ರಪಂಚದಲ್ಲಿ ಅಷ್ಟೆ ಅಲ್ಲ, ಪರಮಾರ್ಥದಲ್ಲಿ ಇದರಾಡಳಿತ ನಡೆಯುವದು . ಇದು ಶಬ್ದ ಸಂಭ್ರಮಕ್ಕೆ ಬಹು ಮೆಚ್ಚಿದೆ . ಇದು ಕಾರಣ ಪ್ರಥಮ ವೇದಿಗಳು ಇದರ ಗುಲಾಮರು. ಮತಿವಂತರು,ಇದರ ಗುಲಾಮರೆ ! ಶೃತಿವಂತರೆಲ್ಲ ಇದರ ಕೈಯಾಳುಗಳು. ಆರು ಲಿಂಗ ಸಕೀಲ ಸಂಯೋಗ ವರ್ಮಸ್ಥಲ ವರಿತಿಹರು , ಅಲ್ಲಿ ನಾನು ನಾನೆಂಬುದು ಸತ್ತಿದೆ, ಇಲ್ಲವಾಗಿದೆ .

ಪೂರ್ವದಲ್ಲಿ, ಗುರು ,ಶಿಷ್ಯ, ಭಕ್ತ, ಜಂಗಮ ಅವರ ಬೋಧಕತ್ವ ಅಷ್ಟೆ ಸತ್ಯವಾಗಿತ್ತು . ಈಗ ಅಷ್ಟೆ ಇಲ್ಲವಾದುದು , ಇದೆಷ್ಟು ಆಶ್ಚರ್ಯ. ತನ್ನ ತಾನರಿತಲ್ಲಿ , ಗುರುವೆಂಬುದಿಲ್ಲ ನೀನು ಶಿಷ್ಯನೆಂಬುದಿಲ್ಲ, ತಾನು ಭಕ್ತನೆಂಬುದಿಲ್ಲ ನೀನು ಜಂಗಮನೆಂಬುದಿಲ್ಲ, ಅಂಗನೆಂಬುದಿಲ್ಲ,ಲಿಂಗನೆಂಬುದಿಲ್ಲ, ಸ್ವಾಮಿ ಇಲ್ಲ, ಸೇವಕ ನಿಲ್ಲ, ಪೂಜ್ಯ ನಿಲ್ಲ, ಪೂಜಕನಿಲ್ಲ, ನೀನು ಸರ್ವಜ್ಞ ನೆಂಬುದಿಲ್ಲ, ನಾನು ಅಲ್ಪಜ್ಞ ನೆಂಬುದಿಲ್ಲ ವ್ಯಾಪ್ತನೆಂಬುದಿಲ್ಲ, ವ್ಯಾಪಕನೆಂಬುದಿಲ್ಲ, ನಾನು ಪ್ರತ್ಯ ಗಾತ್ಮ ನೆಂಬುದಿಲ್ಲ ನೀನು ಪರಮಾತ್ಮನೆಂಬುದಿಲ್ಲ, ಇಲ್ಲ ಇಲ್ಲವೆನ್ನುವ ಕಲ್ಪಿತ ಪುರುಷ ಮೊದಲು ತಾನಿಲ್ಲ . ಇಲ್ಲದ ಕಲ್ಪಿತ ಪುರುಷ ನುಂಟಾಗಿ ಪ್ರವೃತ್ತಿ, ನಿವೃತ್ತಿ ಇದ್ದವುಗಳಾಗಿದ್ದವು. ಉಪಕ್ರಮ, ಉಪಸಂಹಾರ ,ಇದ್ದವುಗಳಾಗಿದ್ದವು, ಅಭ್ಯಾಸ , ಫಲ ಇದ್ದವುಗಳಾಗಿದ್ದವು, ಇಲ್ಲದ ಕಲ್ಪಿತ ಪುರುಷ ತಾನೆ ಇಲ್ಲವಾಗುವುಡೆ, ಇವನಿಂದ ತೋರುವ ಅಜ್ಞಾನವೂ ಇಲ್ಲ, ಜ್ಞಾನವೂ ಇಲ್ಲ ಅಜ್ಞಾನ ದೃಷ್ಠಿ ಇಲ್ಲ ಜ್ಞಾನ ದೃಷ್ಠಿ ಇಲ್ಲ, ತಾನರಿದ ಬಳಿಕ ಏನೂ ಇಲ್ಲ ಕಲ್ಪಿತ ಪರುಷನೂ ಇಲ್ಲ, ಅವನ ಮರುವೂ ಇಲ್ಲ, ಅರುವು ಇಲ್ಲ, ಅವಿದ್ಯೆಯೂ ಇಲ್ಲ, ವಿದ್ಯೆಯೂ ಇಲ್ಲ, ಇವುಗಳ ಕಾರ್ಯರೂಪದಲ್ಲಿ ಕಾಣಿಸುವ ಮಾಯಿಕ ಇಲ್ಲ, ಭಾವ ವಿಲ್ಲ. ಬೋಧವಿಲ್ಲ, ಅಬೋಧವಿಲ್ಲ ಬೋಧಾಬೋಧ ಮಿಶ್ರವು ಇಲ್ಲ, ಈ ಇಲ್ಲವೆಂಬುದು ಹೇಳಿಹರು.

ಇಲ್ಲದುದು, ಇಲ್ಲದುದು ಎಲ್ಲಿಪ್ಪದೊ ? ಬಂಜೆ ಮಗ ಇಲ್ಲದುದು ಇಲ್ಲದುದು ಎಲ್ಲಿಪ್ಪದೊ? ಮೊಲದ ಕೋಡು, ಗಗನ ಕುಸುಮ ಇಲ್ಲದುದು ಎಲ್ಲಿಪ್ಪದೊ ? ಇದ್ದುದಾದಲ್ಲಿ ಹೇಳಬಹುದು , ಇಲ್ಲಾದುದು, ಇಲ್ಲಾದುದು ಎಲ್ಲಿಪ್ಪದೊ ಎಂದು ಪ್ರಶ್ನಿಸಿದಲ್ಲಿ ಹೇಳಲು ಬರುವದಿಲ್ಲ. ಗಗನ ಕುಸುಮ ಮೊದಲೆ ಇಲ್ಲಾದುದು, ಇಲ್ಲವೆಂದಲ್ಲಿ ಕೆಳಗೂ ಇಲ್ಲ, ಮೇಲೆಯೂ ಇಲ್ಲ, ಮಧ್ಯಮದಲ್ಲಿಯೂ ಇಲ್ಲ, ಇಲ್ಲದುದು ಇಲ್ಲವೆ ಇಲ್ಲ ಹೇಗೊ ಹಾಗೆ. ನಾನು ,ನೀನು ಇದು ಕಲ್ಪಿತ ಬಂಜೆ ಮಗ , ಇವರ ತಾಯಿ ಬಂಜೆ, ಬಂಜೆ ಎಂಬುದು ಮರುವು . ನಾನಾರು, ನೀನಾರು ಎಂದು ಅರಿಯದಿದ್ದುದೆ ಮರುವು . ಎಲ್ಲಿ

ಮರುವು ಇದೆ, ಅಲ್ಲಿಯೆ , ನಾನು , ನೀನು ಇದರ ನಿವಾಸ ಇದು ಕಾರಣ, ಮರುವೆಂಬ ತಾಯಿ ಇವಳ ಮಕ್ಕಳೆ ನಾನು, ನೀನು . ತಾನಾರೆಂದರಿಯಲು ಮೊದಲು ಮರುವೆಂಬ ತಾಯಿಯು ಇಲ್ಲವೆಂದಲ್ಲಿ ಮಕ್ಕಳೆಲ್ಲಿ? ನಾನು ನೀನು ಅಂದು ಇಲ್ಲ ಇಂದು ಇಲ್ಲ, ಎಂದೆಂದೂ ಇಲ್ಲ, ಇಲ್ಲಾದುದು ಎಲ್ಲಿಪ್ಪುದೊ ? ಪ್ರವೃತ್ತಿ ನಿವೃತ್ತಿ ಇಲ್ಲದುದು ಗುರು ಶಿಷ್ಯ ಇಲ್ಲದುದು, ಈ ಇಲ್ಲೆಂಬುಂದು , ಇಲ್ಲದುದು ಎಲ್ಲಿಪ್ಪುದು.

ಅಖಂಡಿತ ಘನ ಪರಿಪೂರ್ಣವೆ ತನ್ನರಿವು ಎಂದರಿದ ಮಹಾಂತ ಶಬ್ದ ಮುಗ್ಧ ಏನೊಂದುಸರಲು ಎಡೆಗೊಡದ ಘನ ಪರ ತತ್ವ . ಅಲ್ಲಿ ನಾನು ಇಲ್ಲ, ತಾನಿಲ್ಲ ಏನೂ ಇಲ್ಲ ಈ ಇಲ್ಲೆಂಬುದು ತಾವರಿದ ಬಳಿಕ ಇಲ್ಲದುದು ಇಲ್ಲದುದು ಎಲ್ಲಿಪ್ಪುದು ಎಂದು ಶಬ್ದ ಸಂಭ್ರಮತ್ವ ಅಲ್ಲಗಳೆಯುತ್ತಿದ್ದಾನೆ.

ಅರುವ ಅರಿದರಿದು ಸ್ವಯ ಸುಖವ ಸವಿದು ತಾನೆ ತಾನಾಗಿದ್ದುದು, ತನ್ನಿಂದ ತನಗೆ ವಿದಿತವಾಗಿ, ಈ ಶಬ್ದ ಸಂಭ್ರಮವನ್ನೆ ತಿರಸ್ಕರಿಸುತ್ತಾನೆ. ಪ್ರಥಮ ವೇದ ಇಲ್ಲದುದು. ಅತೀತ ಅನಾಗತ ಇಲ್ಲದುದು, ಶೃತಿಗಳು ಇಲ್ಲದುದು, ಕಲ್ಪಿತ ಪುರುಷ ಇಲ್ಲದುದು ಮರುವು ಇಲ್ಲದುದು,ಇವುಗಳೆ ಇಲ್ಲವೆಂದಲ್ಲಿ ಇವರ ಗತಿಯೂ ಇಲ್ಲ. ಮತಿಯೂ ಇಲ್ಲ. ಇವರೆ ಇಲ್ಲದಿರುವಾಗ, ಇವರಿಗೆ ಆವರಣವೆಲ್ಲಿ ಆವರಣವೆ ಇಲ್ಲದಿರುವಾಗ ಕಳೆಯು ಶೃತಿಗಳು ಇಲ್ಲ. ಇಲ್ಲದುದು ಇಲ್ಲ ಎಂದಲ್ಲಿ ಬಂಜೆ ಮಗ ಎಲ್ಲಿ. ಇಲ್ಲಾದುದಿಲ್ಲಾದುದು ಎಂದಿಪ್ಪುದು ಪ್ರಭುದೇವ ನಿವೃತ್ತಿಯ ನಿರಾಳ ನಿರಾಲಂಬದಲ್ಲಿ ನಿಂತ ನಿಜಗುರು. ಸಕಲವನ್ನು ಉಪಸಂಹಾರ ಮಾಡುವ ನಿವೃತ್ತಿನಾಥ. ಬಂಜೆ ಮಗ ಇಲ್ಲಾದವನು ಎಂದಲ್ಲಿ ಪುನಃ ಅವನು ಹೇಗಿರುವನು ಎಂದು ಕೇಳಿದರೆ ಹಾಸ್ಯಾಸ್ಪದವಲ್ಲವೆ ? ಹಾಗೆ ಕಲ್ಪಿತನಾಗಿ ತೋರುವ ಈ ಮೂಲ ದೃಶ್ಯ ಅದು ಪ್ರವೃತ್ತಿ ರೂಪ ಮಾದ ಪ್ರಪಂಚದ್ದಿರಲಿ, ನಿವೃತ್ತಿ ರೂಪ ಮಾದ ಪರಮಾರ್ಥದ್ದಿರಲಿ, ಇದು ಇಲ್ಲಾದುದಿಲ್ಲಾದುದು ಹೇಗಿದೆ ಎಂದು ಕೇಳಿದರೆ, ಗಗನ ಕಸುಮ ಹೇಗಿದೆ ಮೊಲದ ಕೋಡು ಹೇಗಿದೆ ಹಾಗೆಯೆ, ಎಂದು ಉತ್ತರ ಶಿಕ್ಕುವದು . ಈ ಗಗನ ಕುಸುಮ, ಮೊಲದ ಕೋಡು ಎಂದಿಪ್ಪುದು, ಇದು ಕಾರಣ. ಇಲ್ಲಾದುದಿಲ್ಲಾದುದು ಹೊಂದಿಪ್ಪುದೊ, ಪ್ರಪಂಚ ಪರಮಾರ್ಥ ರೂಪಿ ಗಗನ ಕುಸುಮ ಮೊದಲೆ ಇಲ್ಲಾದುದಿಲ್ಲಾದುದು ಎಂದಿಪ್ಪುದೊ ಎಂದು ಹೇಳಿದರು.

ಅನುವರಿತು ತನುವ ಮರೆದರೆ ಭಾವ ರಹಿತ ಗುಹೇಶ್ವರ ಬಯಲು : ಇದು ಕಾರಣ ತನ್ನ ಅರಿವುದು, ಸ್ವರೂಪ ಅರಿವುದು, ಅನ್ಯಅರಿವುದು ಎಂದು ಹೇಳಿಲ್ಲ, ತನ್ನನ್ನೆ ಅರಿವುದು , ಇಲ್ಲದ ತನುವ ಇಲ್ಲದ ತನುವೆ ಮರದಡೆ ಭಾವಕ್ಕಗಮ್ಯ ಗುಹೇಶ್ವರ ಬಯಲು ಎಂದು ಹೇಳಿದ್ದಾರೆ.

43

ಆನು ನೀನೆಂಬ ಮೋಹ ವೆಲ್ಲಿಯದು,
ಭಾವ ನಿರ್ಭಾವ ವೆಂಬ ಪ್ರಸಂಗ ವೆಲ್ಲಿಯದು ಹೇಳಾ!
ಮನಲೀಯ ಮನಲೀಯ ಉಭಯ ಭಾವ ರಹಿತ
ಕೂಡಲ ಚೆನ್ನಸಂಗಾ ಲಿಂಗೈಕ್ಯವು. **॥ 743 ॥**

ತಾತ್ಪರ್ಯ : ಆನು ನೀನೆಂಬ ಮೋಹ ವೆಲ್ಲಿಯದೊ : ಭಾವ , ನಿರ್ಭಾವ ಪ್ರಸಂಗ ವೆಲ್ಲಿಯದೊ ಆನು ನೀನೆಂಬ ಮೋಹ ವೆಲ್ಲಿಯದೊ ? ಎಂದು ಪ್ರಶ್ನಿಸುವುದನ್ನು ನೋಡಿದರೆ , ಈ ನಾನು ನೀನೆಂಬ ಮೋಹ ಕಂಡವನಲ್ಲವೆಂಬುದು ಸಿದ್ಧವಾದಂತೆ ತೋರುತ್ತದೆ. ಲಿಂಗೈಕ್ಯಂಗೆ,

ಆನೆಂಬುದಿಲ್ಲ ನೀನೆಂಬುದಿಲ್ಲ ಅನ್ನುವದೆ ಇಲ್ಲವೆಂದಲ್ಲಿ, ಮೋಹ ಆರಿಗೆ ಹೇಳುವುದು ? ನಾ ನೀನೆಂಬುದು ಇದ್ದಲ್ಲಿ ಮೋಹವ ಹೇಳಬಹುದು , ನಾ ನೀನೆಂಬುದೆ ಇಲ್ಲವೆಂದಲ್ಲಿ, ಮೋಹ ವೆಲ್ಲಿಯದು .

ಭಾವ ನಿರ್ಭಾವ ಪ್ರಸಂಗ ವೆಲ್ಲಿಯದೊ: ಲಿಂಗೈಕ್ಯಂಗೆ ಭಾವ ನಿರ್ಭಾವ ಪ್ರಸಂಗ ಇಲ್ಲದುದು, ಪ್ರಸಂಗ ಎರಡು; ಒಂದು ಮರವಿನ ಪ್ರಸಂಗ, ಮತ್ತೊಂದು ಅರುವಿನ ಪ್ರಸಂಗ. ಒಂದು ಅಂಗ ಪ್ರಸಂಗ, ಮತ್ತೊಂದು ಲಿಂಗ ಪ್ರಸಂಗ . ಒಂದು ಭ್ರಾಂತಿಯಿಂದುಕ್ತವಾದ ಪ್ರಸಂಗ. ಇನ್ನೊಂದು ಭ್ರಾಂತಿ ರಹಿತ ಪ್ರಸಂಗ , ಭ್ರಾಂತಿ ಪ್ರಸಂಗ, ನಾಮ ರೂಪದಿಂದುಕ್ತವಾದುದು, ಇನ್ನೊಂದು ಒಂದು ಬದ್ಧ ಪ್ರಸಂಗ , ಇನ್ನೊಂದು ಮುಕ್ತಾತ್ಮ ಪ್ರಸಂಗ, ಒಂದು ಪ್ರವೃತ್ತಿ ಪ್ರಸಂಗ, ಇನ್ನೊಂದು ನಿವೃತ್ತಿ ಪ್ರಸಂಗ, ಲಿಂಗೈಕ್ಯಂಗೆ ಭಾವ ಪ್ರಸಂಗ ವಿಲ್ಲ, ನಿರ್ಭಾವ ಪ್ರಸಂಗವಿಲ್ಲ.

ಲಿಂಗ, ಲಿಂಗ ಎನ್ನುವಂಗೆ ಲಿಂಗ ವಿಲ್ಲ, ಜಂಗಮ ಜಂಗಮ ಎನ್ನುವಂಗೆ ಜಂಗಮ ವಿಲ್ಲ, ಪ್ರಸಾದ ಪ್ರಸಾದ ಎನ್ನುವಂಗೆ ಪ್ರಸಾದ ವಿಲ್ಲ. ಲಿಂಗ ಎನ್ನುವಂಗೆ ಲಿಂಗವುಂಟು, ಜಂಗಮ ಎನ್ನುವಂಗೆ ಜಂಗಮ ಉಂಟು, ಪ್ರಸಾದ ಎನ್ನುವಂಗೆ ಪ್ರಸಾದ ಉಂಟು , ಲಿಂಗವೆ ತಾನಾದವಂಗೆ ಭಾವ, ನಿರ್ಭಾವ ಪ್ರಸಂಗ ವೆಲ್ಲಿಯದು, ಸೀಮಿತಂಗೆ ಭಾವ ನಿರ್ಭಾವ ಪ್ರಸಂಗ ಉಂಟು, ನಿಸ್ಸೀಮಂಗೆ ಅದಾವ ಭಾವ? ಅದಾವ ನಿರ್ಭಾವ ? ಲಿಂಗೈಕ್ಯನು, ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದ ನಿಜ ಲಿಂಗೈಕ್ಯ . ಅಲ್ಲಿ ಭಾವ ಪ್ರಸಂಗ ವೇತರದು, ನಿರ್ಭಾವ ಪ್ರಸಂಗ ವೇತರದು.

ಮನ ಲೀಯ , ಮನ ಲೀಯ, ಉಭಯ ಭಾವ ರಹಿತ ಕೂಡಲ ಚೆನ್ನಸಂಗಾ ಲಿಂಗೈಕ್ಯವು : ಲಿಂಗೈಕ್ಯಂಗೆ , ಮನ ಲೀಯ , ಮನ ಲೀಯವಾದವೆ ? ಅವಿವೇಕ ಮನ ಲೀಯವು, ವಿವೇಕ ಮನ ಲೀಯವು , ಉಪಾಧಿಕ ಮನವು ಲೀಯವು, ಉಪಾಧಿ ರಹಿತ ಮನವು ಲೀಯವು. ಅಂಗ ವೆನ್ನುವ ಮನವು ಲೀಯವು,ಲಿಂಗ ವೆನ್ನುವ ಮನವು ಲೀಯವು, ಅನಾತ್ಮಾಕಾಶ ಮನವು ಲೀಯವು ಆತ್ಮಾಕಾಶವುಳ್ಳ ಮನವು ಲೀಯವು, ಭೋಗದಾಶೆಯುಳ್ಳ ಮನವು ಲೀಯವು, ತ್ಯಾಗದಾಸೆಯುಳ್ಳ ಮನವು ಲೀಯವು. ಅಂಗದಾಸೆಯುಳ್ಳ ಮನವು ಲೀಯವು, ಲಿಂಗದಾಸೆಯುಳ್ಳ ಮನವು ಲೀಯವು, ಬೋದ ರೂಪವುಳ್ಳ ಮನವು ಲೀಯವು, ಅಭೋಧ ವುಳ್ಳ ಮನವು ಲೀಯವು,ವ್ಯಾಪ್ತವೆಂಬ ಮನವು ಲೀಯವು, ವ್ಯಾಪಕವೆಂಬುವ ಮನವು ಲೀಯವು, ಆದುದರಿಂದ ಉಭಯ ಭಾವ ವಿರಹಿತ ಕೂಡಲ ಚೆನ್ನ ಸಂಗಾ ಲಿಂಗೈಕ್ಯವು.

ಲಿಂಗೈಕ್ಯವು ಉಭಯ ಭಾವ ವಿರಹಿತವು : ಭಾವ ಭಾಕ್ಕಿಂಬಿಲ್ಲದ ನಿಲುವು, ಶಬ್ದ ಮೀಸಲು ವಾಗಿಪ್ಪ ನಿಲವು, ಇದನ್ನು ಮಾತಿನಿಂದ ವಿವರಿಸುವದದೆಂತು ? ಹೀಗೆಯೆ ಎಂದು ಅದರಿಂದ ವಿವರಿಸುವದು ಇದು ಕಾರಣ , ಉಭಯ ಭಾವ ಕಾಣದ ನಿಲವು ಅಲ್ಲಿ ಜೀವನೆಂಬ ಭಾವ ಪರಿಸಮಾಪ್ತಿ ಯಾಗಿಹುದು ಪರನೆಂಬ ಭಾವವು ಪರಿಸಮಾಪ್ತಿಯಾಗಿಹುದು.

ಎರಡೆಂಬುದು ಪರಿಸಮಾಪ್ತಿ ಯಾಗಿಹುದು, ಒಂದೆಂಬುದು ಪರಿಸಮಾಪ್ತಿ ಯಾಗಿಹುದು, ಕೂಡದಗಲದ ಘನವೆ ತನ್ನಿರುವಾಗಿ ನೆಲೆಗೊಂಡ ನಿಜಧಾಮ ಲಿಂಗೈಕ್ಯವದು, ಲಿಂಗೈಕ್ಯವೆಂಬುದಿಲ್ಲ, ಅಂಗನೆಂಬುದಿಲ್ಲ, ಲಿಂಗಾಂಗ ಸಮರಸ ವೆಂಬುದಿಲ್ಲ , ಇಲ್ಲ ಇಲ್ಲ ವೆಂಬುದಕ್ಕೂ ಸಂದಿಲ್ಲ ದಿಪ್ಪ. ಅಚಿಂತ್ಯತ್ವವೆ ತನ್ನಿರುವಾದ ಮಹಾಂತ ನಾದುದರಿಂದ ಉಭಯ ಭಾವ ವಿರಹಿತನೆಂದು ಹೇಳಿಹರು.

ಏನೊಂದೆನಲಿಲ್ಲದ ಅಖಂಡಿತ ಘನ ಪರಿಪೂರ್ಣ ಪರಮಾನಂದನೆ ತನ್ನಿರುವಾಗಿಹ ಮಹಾಂತ ಲಿಂಗೈಕ್ಯ , ಅಲ್ಲಿ ಅಖಂಡಿತ ಘನ ಪರಿಪೂರ್ಣ ಪರಬ್ರಹ್ಮ ನಾನೆಂಬ ಭಾವವು ಇಲ್ಲ.

ಈ ಇಲ್ಲ ಇಲ್ಲವೆಂಬುದಕ್ಕೂ ಸಂದಿಲ್ಲದಿಪ್ಪ ತನ್ನಿರುವೆ ಥಳ ಥಳಿಸಿ ಬೆಳೆ ಬೆಳಗಿ ಹೊಳೆಯುವ ಘನಕ್ಕೆ ಘನವು ಉಸುರಿದರದಕ್ಕದೆ ಕೊರತೆ, ಲಿಂಗೈಕ್ಯವೆಂಬುದು ಅಚಿಂತ್ಯತ್ವ ಅಕಲ್ಪಿತ ಘನವೆಂದು ಹೇಳಿದರೂ ಸರಿ ಹೋಗದು, ಏಕೆಂದರೆ ನುಡಿಗೆಡಗೊಡದ ಘನವು ತನ್ನಿರುವು ಆಗಿರುವದರಿಂದ ಶಬ್ದ ಮೀಸಲು ಆಗದು, ಎಂಜಲ ಮಾತು ನುಡಿದುದು ಲಿಂಗೈಕ್ಯವಲ್ಲ. ಲಿಂಗ ಸಕೀಲ ಸಂಯೋಗ ವರ್ಮಸ್ಥಲ ವರಿತುದೆ ಲಿಂಗೈಕ್ಯವು ಎಂದು ಹೇಳಿಹರು.

44

ಏನೆಂಬೆ ನೇನೆಂಬೆ, ನೊಂದೆರಡಾದುದ,
ಏನೆಂಬೆ ನೇನೆಂಬೆ ನೆರಡೊಂದಾದುದ,
ಆವಿಗಳೆ ಘನ ಲಿಂಗೈಕ್ಯವ ಮಹಾದಾನಿ,
ಕೂಡಲಸಂಗಮದೇವಾ ತಾನೆ ಬಲ್ಲ.

ತಾತ್ಪರ್ಯ : ಏನೆಂಬೆ ನೇನೆಂಬೆ ನೊಂದೆರಡಾದುದ ; ಏನೆಂಬೆ ನೇನೆಂಬೆ ನೆರಡೊಂದಾದುದ, ಏನನ್ನುವದು ಏನನ್ನುವದು ಒಂದೆರಡಾದುದ, ಎರಡೊಂದಾದುದ ಏನನ್ನುವದು, ಕಥನಕ್ಕೆ ನಿಲುಕದ ಘನವ ಏನನ್ನುವದು, ಮೂಗ ಮೂಗರ ಸಂಭಾಷಣೆ , ತೆರೆಹಿಲ್ಲದ ಸಂಭಾಷಣೆ ಏನನ್ನುವದು, ಒಂದೆರಡಾದುದ ಎರಡೊಂದಾದುದ ಏನೆನ್ನುವದು.

ಒಂದೆರಡಾದುದ ಆವುದು ? ಎರಡೊಂದಾದುದು ಆವುದು ? ನೋಡುವ ಕಂಣು ಎರಡಾಗಿ ಕಂಡರೂ ದೃಷ್ಠಿ ಒಂದೆ! ದೃಷ್ಠಿ ಒಂದಾಗಿದ್ದರೂ, ಕಣ್ಣು ಎರಡಾಗಿಹವು, ಕಣ್ಣು ಎರಡೆಂಬೆನೆ ? ನೋಡುವ ನೋಟ ಒಂದಾಗಿಹುದು, ಒಂದೆಂದಲ್ಲಿ ಎರಡಾಗಿಹುದು, ಎರಡೆಂದಲ್ಲಿ ಒಂದಾಗಿಹುದು ಕಣ್ಣು ಎರಡಾಗಿ ನೋಡುವ ನೋಟ ಒಂದಾದ ಘನವ ಅದಾರು ಬಲ್ಲರು.

ಕಣ್ಣಿನ ಘನವ ವಾಣಿಯು ಹೇಳಲೆಂತು ಬಾರದು . ಕಣ್ಣು ಇದು ಮಾತಾಡದ ಕಣ್ಣು ಮೌನ ಮುದ್ರೆ ಧರಿಸಿದ ಕಣ್ಣು, ಕಣ್ಣು ಎಂದು ವಾಣಿ ಕಥನ ಮಾಡಿದರೂ, ತಾನು ಮೌನ ಮುದ್ರೆ ಧರಿಸಿದ ಕಣ್ಣು ಒಂದೆರಡಾಗಿಹುದೆಂದರೂ ತಾನು ಶಬ್ದ ಮುಗ್ದ ಎರಡೊಂದಾಗಿಹುದೆಂದರೂ ಶಬ್ದ ಮುಗ್ದ. ಈ ಶಬ್ಧ ಮುಗ್ಧ ನಿಲವು ಲಿಂಗೈಕ್ಯ ನಿಲವು.

ಕಣ್ಣೆಂದರೆ ತಾನು .ಅಂದು ಇಂದು ಎಂದೆಂದೂ ತಾನೆ, ಇದ್ದಂತಿರುವ ತಾನು ತನ್ನದು ಬದಲಾವಣೆ ಯಾಗದ ಇರುವು , ಎಂದೆಂದೂ ಇದ್ದಂತಿರುವ ಘನವ ಇದನಾರಯ್ಯ ಹೀಗೆಯೆ ಎಂದು ವರ್ಣಿಸುವದು. ಒಂದೆರಡಾದುದು, ಎರಡೊಂದಾದುದು ಅನುಪಮವು. ಉಪಮೆಗೊಳಪಟ್ಟುದು ಒಂದೆರಡಾದುದು. ಅವರ್ಣೀಯವು ವರ್ಣನೆಯಿಂದುಕ್ತವಾಯಿತೆ ? ನಿಶಬ್ದ ಬ್ರಹ್ಮವು ಶಬ್ದ ಬ್ರಹ್ಮವಾಯಿತೆ? ಶಬ್ದ ಬ್ರಹ್ಮವೆನ್ನಲು ಹೋದರೆ, ನಿಶಬ್ದ ಬ್ರಹ್ಮದ ನಿಲುವುಳ್ಳದ್ದಾಗಿದೆಯಲ್ಲ, ಇದನೆಂತು ವರ್ಣಿಸುವದು !

ಅನುಪಮವು ಉಪಮೆಗೊಳಪಟ್ಟುದು ಆವುದು , ಅನುಪಮ ತಾನೆ ಉಪಮೆಗೊಳಪಟ್ಟುದು ತಾನೆ. ಗುರು ಶಿಷ್ಯ ಇವರೀರ್ವರ ಇರವು ಒಂದೆ! ಒಂದೆಂದಲ್ಲಿ ಗುರುವಾಗಿಹುದು, ಶಿಷ್ಯನಾಗಿಹುದು. ಅರಿಯುವ ಅರಿವೆ ಅರಿಯುವದರುವು ಆಗಿಹುದು . ಇದು ಅನಿಮಿಷ, ಪ್ರಭು ದೇವರ ನಿಲವು ನೋಡಾ ಇದು ಭಕ್ತ ಜಂಗಮ ನಿಲವು ನೋಡಾ ಭಕ್ತನೆಂಬ ಬಸವರಸ, ಪ್ರಭುವೆಂಬ ಜಂಗಮ ನಿಲವು ನೋಡಾ. ಒಂದೆರಡಾದುದು ಎರಡೊಂದಾದುದು ಒಂದೆಂಬುದು ಇವರೀರ್ವರು ನಿಂತ ನಿಶಬ್ದ ಬ್ರಹ್ಮದ ನಿಲುವು

ಒಂದೆ. ಎರಡಾಗಿ ಕಂಡರೂ ಅದುವೆ , ಒಬ್ಬರದು ಭಾವ ಭರಿತವಾದುದು. ಇನ್ನೊಬ್ಬರದು ಭಾವಕ್ಕಗಮ್ಯವಾದುದು.

ಬಸವರಸ ಭಾವಭರಿತ ನೆಂದರೂ ಭಾವಕ್ಕಗಮ್ಯವಾದ ನಿಲುವುಳ್ಳವನು . ಪ್ರಭು ಭಾವಕ್ಕಗಮ್ಯರು ಇಬ್ಬರದು ಅವಿರಳ ಘನ ಲಿಂಗೈಕ್ಯ. ಇಬ್ಬರದು ಲಿಂಗೈಕ್ಯ ನಿಲುವು ಅಲ್ಲಲ್ಲ, ಅವಿರಳ ಘನ ಲಿಂಗೈಕ್ಯ ಅನಿಮಿಷ, ಪ್ರಭುವಿನದು ಅವಿರಳ ಘನ ಲಿಂಗೈಕ್ಯ ನಿಲವು, ಲಿಂಗೈಕ್ಯ ನಿಲುವು ಸಕಲರಿಗೂ ಅಸಾಧ್ಯ. ಐಕ್ಯವಲ್ಲ ಐಕ್ಯನೈಕ್ಯ ನಿಲವು, ಇದು ಕಾರಣ. ಅವಿರಳ ಘನ ಲಿಂಗೈಕ್ಯವೆಂದು ಹೇಳಿಹರು.

ಸಕಲ ಗುರು ಶಿಷ್ಯರ ವ್ಯವಹಾರದಂತೆ ಇವರ ವ್ಯವಹಾರವಲ್ಲ. ಏಕೆಂದರೆ ಸಕಲರ ವ್ಯವಹಾರ ನಡೆ ನುಡಿಯಿಂದುಕ್ತವಾಗಿದೆ . ನಡೆ ನುಡಿಗೆ ಮೀರಿದ ಸಕಲ ಭಕ್ತ ಜಂಗಮರ ನಿಲುವುಳ್ಳ ನಿಲುವಿನ ಭಕ್ತ ಜಂಗಮರು ಇವರಲ್ಲ, ಇವರು ಅಪೂರ್ವಿಕ ಭಕ್ತ, ಅಪೂರ್ವಿಕ ಜಂಗಮ.

ಲಿಂಗ ಒಂದಾಗಿಹ ಜಂಗಮ, ಲಿಂಗ ಒಂದಾಗಿಹ ಭಕ್ತ. ಇವರದು ತನು ಲೀಯ ಮನ ಲೀಯ ನೆನೆಹು ಲೀಯ, ಭಾವ ಲೀಯ, ಜ್ಞಾನ ಲೀಯ ವಾದ ಲಿಂಗೈಕ್ಯ ನಿಲುವು . ಶಬ್ದ ಮುಗ್ಧ ನಿಲವು . ಲಿಂಗದಲ್ಲಿ ಉದಯವಾಗಿ ಲಿಂಗದಲ್ಲಿ ಲೀಯವಾದ ಲಿಂಗೈಕ್ಯ ನಿಲವು , ಗುರು ಶಿಷ್ಯರದು ಲಿಂಗೈಕ್ಯ ನಿಲುವು ಭಕ್ತ ಜಂಗಮರದು ಲಿಂಗೈಕ್ಯ ನಿಲವು.

ಗುರು ಶಿಷ್ಯರ ಲಿಂಗೈಕ್ಯ ನಿಲವು , ಅದನೆಂತು ವರ್ಣಿಸುವದು ? ಒಂದೆಂಬೆನೆ ಎರಡಾಗಿದೆ. ಎರಡೆಂಬೆನೆ ಒಂದಾಗಿದೆ , ಒಂದೆರಡೆಂಬ ಸಂದೇಹ ವಿದೇನೊ ? ಅಗಲಲಿಲ್ಲದ ಕೂಟಕ್ಕೂ ಬಿಚ್ಚಿ ಬೇರಾಗದ ಗುರು ಶಿಷ್ಯರೆಂಬ ಭಾವಕ್ಕೆ ಭಿನ್ನ ಉಂಟೆ ಗುಹೇಶ್ವರಾ.

ಒಂದೆಂಬೆನೆ ಎರಡಾಗಿದೆ , ಎರಡೆಂಬೆನೆ ಒಂದಾಗಿದೆ , ಒಂದೆಂಬುದು ಅರಿಯದರುವು, ಇದು ಒಂದು . ಅವನು ಅರಿಯಲು ಬಂದ ಅರುವು ಇನ್ನೊಂದು, ಅರಿಯಲಿಲ್ಲದ ಅರುವು ಮರೆಯಲಿಲ್ಲದ ಮರಹು ನೋಡಲಿಲ್ಲದ ನೋಟ, ಕೂಡಲಿಲ್ಲದ ಕೂಟ, ಬೆರಸಲಿಲ್ಲದ ಬೆರಗು ಒಂದಾದ ಒಂದು ಇದು ಒಂದೆಂಬೆನೆ ಎರಡಾಗಿದೆ. ಅರಿಯದರುವು ಒಂದಾಗಿದ್ದರು ಅದನು ಅರಿಯಲು ಬಂದ ಅರುವಾದುದರಿಂದ ಎರಡಾಗಿದೆ . ಅರಿಯದರುವು ಅದು ಏನನ್ನು ಅರಿಯದ ಅರುವು ಅರಿಯದರುವನ್ನು ಅರಿಯಲು ಬಂದುದು, ಅರಿಯುವ ಅರುವಾದುದರಿಂದ ಎರಡಾಗಿದೆ.

ಎರಡೆಂಬೆನೆ ಒಂದಾಗಿದೆ . ಅರಿಯದರುವು ಒಂದು, ಅದನ್ನು ಅರಿಯಲು ಬಂದ ಅರುವು ಬೇರಾಗಿ ಕಂಡರೂ , ಅರಿಯದರುವು ಅರಿಯ ಹೋಗಿ ಅದು ಅರಿಯದರುವು ಆದುದರಿಂದ ಎರಡೆಂಬೆನೆ ಒಂದಾಗಿದೆ ಎಂದು ಹೇಳಿಹರು.

ಒಂದೆ ಒಂದಾದ ಘನದಲ್ಲಿ ಒಂದೆರಡೆಂಬ ಸಂದೇಹವೇಕೆ ? ಕೇವಲ ಅರುವು . ಅದರಲ್ಲಿ ಅರಿಯದರುವು ಅರಿಯಲು ಬಂದ ಅರಿವು ಎರಡೆಂಬ ಅನುಮಾನ ವೇಕೇ ? ಸಂದು ಸಂಶಯವೇಕೆ ? ಅರುವರಿತಲ್ಲಿ ಅರಿಯದರುವು ಅದುವೆ , ಅರಿಯಲು ಬಂದ ಅರುವು ಅದುವೆ ಅರುವರಿತ ನಿಲುವು ಉಪಮಿಸಲಳವಲ್ಲ ನೋಡಾ.

ಅಗಲಲಿಲ್ಲದ ಕೂಟಕ್ಕೆ ಬಿಚ್ಚಿ ಬೇರಾಗದ ಉಪದೇಶ : ಅರುವು ತನ್ನ ಇರುವಿಕೆಯಿಂದ ಅಗಲದ ಅರುವ ಅರುವು ಅರುವಾಗಿಯೆ ಇದೆ. ಬೋಗಿ, ತ್ಯಾಗಿ, ಯೋಗಿ, ಶಬ್ದ ಬ್ರಹ್ಮರು ತಮ್ಮ ತಮ್ಮ ಮತಿಗನುಸಾರ ಅದನ್ನು ಉಪಯೋಗ ಮಾಡಿಕೊಂಡರೂ , ಅದು ತನ್ನ ಇರುವಿಕೆಯಿಂದ ಬದಲಾಗದೆ, ಇದ್ದಂತಿರುವದರಿಂದ ನಿರ್ವಿಶೇಷ, ನಿರುಪಮ, ನಿರಾಲಂಬ ವೆಂಬ ,ಸಂಜ್ಞೆಯ ತೋರಿಸಿ ಶಬ್ದ ಮುಗ್ದರಾದರು.

ಬಿಚ್ಚಿ ಬೇರಾಗದ ಉಪದೇಶ, ಪ್ರಪಂಚದ ತೋರಿಕೆಯ ಬಿಚ್ಚುತ್ತಾರೆ, ಪರಮಾರ್ಥದ ತೋರಿಕೆಯ ಬಿಚ್ಚುತ್ತಾರೆ. ಕೊನೆಗೆ ಅರುವಿಂಗರುವಾದುದು ತನಗಿಂತ ಬೇರಾಗದಂತೆ ಸಿದ್ಧ ಮಾಡುತ್ತಾರೆ.ಅದು ತನ್ನ ಮುನ್ನ ಮುನ್ನಲಾದ ಸ್ವರೂಪವೆ ಸ್ವತಃ ಸಿದ್ಧವೆಂದು ಸಿದ್ಧಿಸುವುದೆ ಬಿಚ್ಚಿ ಬೇರಾಗದಂತೆ ಮಾಡುವುದು ಮಹಾಂತರ ದಿವ್ಯ ದೃಷ್ಠಿ, ಇದುವೆ ಪರಮ ಗುರುವಿನ ಕಳಕಳಿ.

ಗುರು ಶಿಷ್ಯರೆಂಬ ಭಾವಕ್ಕೆ ಭಿನ್ನ ಉಂಟೆ ಗುಹೇಶ್ವರಾ : ಗುರು ಶಿಷ್ಯರ ಭಾವ ಭಾವಾತೀತ ಭಾವ , ಭಾವಕ್ಕಗಮ್ಯವಾದ ನಿರ್ಭಾವ , ಈರ್ವರು ನಿಷ್ಪತ್ತಿ ನಿಲವುಳ್ಳವರು . ಅನುಪಮ ನಿಲವುಳ್ಳ ಸ್ವಯಂ ಜ್ಯೋತಿ . ಇವರದು ಮತಿಯಲಿಲ್ಲದ ಮರಹು , ಭೇದವೆಂಬುದು ಮರೆಯಲು ಬಾರದುದು. ಗುರು ಶಿಷ್ಯರಲ್ಲಿ ಭೇದ ಮರೆಯಲು ಬಾರದ್ದು, ಮರ ವರುವೆಂಬ ಭೇದ ಮರೆಯಲು ಬಾರದ್ದು , ಬಂಧ ಮೋಕ್ಷವೆಂಬ ಭೇದ ಮರೆಯಲು ಬಾರದ್ದು . ಆದರೂ ಅದು ಮರೆತು ಹೋಗಿದೆ, ಅರುವರಿತು ಅರಿಯದರುವು ನಿಶ್ಚಯವಾದುದರಿಂದ ಭೇದವೆಂಬ ಮರುವು ಮರೆಯಲು ಬಾರದ ಮರವು. ಮರೆತು ಹೋದುದಕ್ಕಾಗಿ ಎರಡೊಂದಾದ ಘನವು ಉಪಮಿಸಲಳವಲ್ಲ.

ನೋಡಲಿಲ್ಲದ ನೋಟ : ಗುರು ಘನ ನೋಡಲಿಲ್ಲದ ನೋಟದವನು . ಶಿಷ್ಯ ನೋಡುವ ನೋಟದವನು . ನೋಡದ ನೋಟ ನೋಡ ಹೋಗಿ, ತಾನು ಅದುವೆ ಆಗಿಹ ಘನ ಉಪಮಿಸಲಳವಲ್ಲ ಏಕೆಂದರೆ ನೋಟವದು ಎರಡಲ್ಲ, ಅದು ತನ್ನ ಘನದರುವಿಂದ ಬದಲಾಗಲಿಲ್ಲವಾದ್ದರಿಂದ ನೋಟವದು ನೋಡಲಿಲ್ಲದ ನೋಟ, ಅದು ಅಗಲಲಿಲ್ಲದ ಕೂಟವೆಂದು ಹೇಳಿದೆ.

ಕೂಡಲಿಲ್ಲದ ಕೂಟ ಗುರು ಶಿಷ್ಯರದು ಕೂಡಲಿಲ್ಲದ ಕೂಟ , ಮರವೆಯಲ್ಲಿಯೂ ಕೂಡಿದವರಲ್ಲ ಅರುವಿನಲ್ಲಿ ಕೂಡಿದವರಲ್ಲ, ಎರಡಾಗಿಲ್ಲ, ಒಂದಾಗಿಲ್ಲ, ತಾನೆ ಗುರು ತಾನೆ ಶಿಷ್ಯನಾದುದೆ ಕೂಡಲಿಲ್ಲದ ಕೂಟ , ಇದು ಸ್ವಯ ಕೂಟ ತಾನೆ ತಾನಾದ ಕೂಟ . ಇದುವೆ ಆವುದುರಲ್ಲಿಯೂ ಕೂಡಲಿಲ್ಲಿದ ಕೂಟ, ತನ್ನ ಕೂಟ ವೆಂದು ಹೇಳಿಹರು.

ಬೆರಸಲಿಲ್ಲದ ಬೆರಗು ನಿಂದುದು ಆವುದು, ಅರಿಯದರುವು ಬೆರಸಲು ಬರಬಹುದೆ ? ಅಗಲಿದವನು ಬೆರೆಯಬಹುದು, ಬೆರತವನು ಅಗಲಬಹುದು . ಅರಿಯದರುವುಳ್ಳವನಾಗಿ ನಿಂತುದೆ ಬೆರೆಯಲಿಲ್ಲದ ಬೆರಗು, ಗುರು ಶಿಷ್ಯರ ಭಾವಕ್ಕೆ ಭಿನ್ನವುಂಟೆ ? ಗುಹೇಶ್ವರಾ , ಈರ್ವರದು ನೆಲೆಯಿಲ್ಲದ ನಿಲುವದು , ಉಪಮೆಗೆ ಮೀರಿದ ಅನುಪಮರು , ಭಾವಕ್ಕಗಮ್ಯರು ಆದುದರಿಂದ ಗುರುವೆಂಬುದು ಶಿಷ್ಯರ ಶಿಷ್ಯನೆಂಬುದು ಇವರ ಗುರು ಇರುವೆ ಎರಡೊಂದಾದುದು, ಒಂದೆರಡಾದುದು . ಅವಿರಳ ಘನ ಲಿಂಗೈಕ್ಯ ನಿಲುವು , ಮಹಾದಾನಿ ಕೂಡಲಸಂಗಮದೇವಾ ತಾನೆ ಬಲ್ಲ . ಇದು ತನಗೆ ವೇದ್ಯ ವಲ್ಲದೆ ನುಡಿಯುವವರಿಗೆಂತು ಸಾಧ್ಯ ? ಭಕ್ತ ಜಂಗಮರ ನಿಲವು ಒಂದೆರಡಾಗಿ ಕಂಡರೂ ಇರುವು ಒಂದೆ. ಜಂಗಮದೇವ ಲಿಂಗವರಿತು ಲಿಂಗವಾಗಿಹರ ಜಂಗಮ , ಭಕ್ತನಾದರೂ ಲಿಂಗವರಿತು ಲಿಂಗವಾಗಿಹ ಭಕ್ತ ಈರ್ವರದು ಅರುವರಿತ ಇರುವು ಶಬ್ದ ಮುಗ್ಧ ನಿಲವು.

ಘನಗಂಭೀರ ಮಹಾ ಘನದೊಳಗೆ ಘನಕ್ಕೆ ಘನವಾಗಿರ್ದರಯ್ಯ , ಕೂಡಲ ಸಂಗಯ್ಯನೆಂಬ ಬೆಳಗಿನೊಳಗೆ ಬೆಳಗಾಗಿರ್ದು ಶಬ್ದ ಮುಗ್ಧ ರಾದುದನೇನೆಂಬೇನೆಂಬೆ ಎಂದು ಬಿತ್ತರಿಸಿದಾಗ ಪ್ರಭು ಹರ್ಷಸಿ , ‘‘ ಆದಿಯ ಲಿಂಗವ ತೋರಿದ ಅನಿಮಿಷನ ಕಂಡೆನಯ್ಯ ಇಂದು . ಕೃತಯುಗದ ಸ್ಕಂದ ನೆಂಬ ಗಣೇಶ್ವರನ ಕಂಡೆನಯ್ಯ ಇಂದು, ದ್ವಾಪರ ಯುಗದ ವೃಷಭನೆಂಬ ಗಣೇಶ್ವರನ ಕಂಡೆನಯ್ಯ ಇಂದು. ಕಲಿಯುಗದ ಬಸವ ಅನಿಮಿಷನೆಂಬ ಗಣೇಶ್ವರನ ಕಂಡೆನಯ್ಯ ಇಂದು. ಎನ್ನ ಕಂಡವರನು

ನಿನ್ನ ಕಂಡವರನು ಇಂದು ಕಂಡೆ ಕಾಣಾ ಗುಹೇಶ್ವರ''. ಎಂದು ಭಕ್ತ ಜಂಗಮ ಒಂದಾದ ನಿಲುವುಳ್ಳ ಘನತ್ವವ ತಮ್ಮ ಪ್ರಸಾದ ವಾಣಿಯಿಂದ ತಾವೇ ಬಿತ್ತರಿಸಿಹರು. ಒಂದೆರಡಾದ ಘನವು ಎರಡೊಂದಾದ ಘನ ಲಿಂಗೈಕ್ಯ ನಿಲವು ಮಹಾದಾನಿ ಕೂಡಲ ಸಂಗಮದೇವ ತಾನೆ ಬಲ್ಲನೆಂದು ಬಸವಣ್ಣನವರು ಹೇಳಿಹರು.

45

ಸಹಜವೆನ್ನದೆ, ನಿಜವೆನ್ನದೆ ಅಚಲವೆನ್ನದೆ ಶೂನ್ಯವೆನ್ನದೆ
ಅಖಂಡಿತ ಪರಿಪೂರ್ಣವೆನ್ನದೆ, ಏನೂ ಎನ್ನದೆ
ಕೂಡಲ ಚೆನ್ನಸಂಗಾ ಲಿಂಗೈಕ್ಯವು. **॥ 842 ॥**

ತಾತ್ಪರ್ಯ : ಲಿಂಗೈಕ್ಯದ ಅನುವ ಕರುಣಿಸಿದ ಸಂಜ್ಞೆ. ಈ ಘನವಂತ ಲಿಂಗೈಕ್ಯದ ಮಹತ್ವವನು ತಾನು ಲಿಂಗೈಕ್ಯವಾಗದ ಮುನ್ನವೆ ಶರಣ ಗಣ ತಿಂಥಿಣಿಗೆ ತೋರಿಸಿದನೆ ? ಲಿಂಗೈಕ್ಯವಾದ ಮೇಲೆ ಕರುಣಿಸಿದನೆ ?

ಬಹು ಜನ ಲಿಂಗೈಕ್ಯರು ಲಿಂಗೈಕ್ಯವ ಅಪಾರ್ಥ ತಿಳಿದ ಮತಿವಂತರು. ಲಿಂಗೈಕ್ಯವೆಂದರೆ ಈ ಪಾರ್ಥೀವ ಶರೀರ ಬಿಟ್ಟುದಕ್ಕೆ ಲಿಂಗೈಕ್ಯವೆಂದು ತಿಳಿದಿಹರು. ಲಿಂಗ ಸಕೀಲ ಸಂಯೋಗವ ವರ್ಮ ಸ್ಥಲ ನರಿತವರ ತಿಳುವಳಿಕೆ ಅಲ್ಲ.

ಲಿಂಗೈಕ್ಯವದು ತನ್ನಿಂದ ತನ್ನ ಕಂಡು ತಾನೆನ್ನದಿದ್ದುದೆ ಲಿಂಗೈಕ್ಯವು. ಚನ್ನ ಬಸವರಾಜ ತಾನಾರೆಂದರಿದ ಘನಕ್ಕೆ ಘನ ನುಡಿ ತಾನಾದವರಿಗೆ ಇದು ತಿಳಿಯದ ರಹಸ್ಯ. ಬಹು ಜನ ನುಡಿ ತಾವಾಗಿ ಏನೆಂದೆನಲಿಲ್ಲದ ಅಖಂಡಿತ ಘನ ಪೂರ್ಣ ಪರಮಾನಂದದ ನಿಲುವುಳ್ಳ ಸಹಜಾನಂದದ ಘನತ್ವದಿಂದ ವಂಚಕರಾದುದ ಕಂಡು, ನುಡಿ ತಾನಾಗದೆ ಇದ್ದ, ನುಡಿಗೆಡೆಗೊಡದ ಘನವು ಕೂಡಲ ಚನ್ನಸಂಗಯ್ಯನಲ್ಲಿ ಲಿಂಗೈಕ್ಯವು ಎಂದು ತಿಳಿಸಿದುದು ಲಿಂಗೈಕ್ಯ ಸಂಜ್ಞೆ, ಹಸು ಗೂಸಾದ ಸಂಜ್ಞೆ ಕೂಸು ಮಾತಾಡಬಹುದೆ ? ಮಾತಾಡಿದರೂ ಮಾತಿನ ಅಭಿಮಾನವಿಲ್ಲ.

ಓಹೋ! ಲಿಂಗೈಕ್ಯ ನಿಲುವುಳ್ಳ ಹಸುಗೂಸು, ಶೃತಿಯನ್ನೆ ಮಿಕ್ಕಿ ಮೀರಿ ನಿಂತ ಹಸುಗೂಸು, ನಿರಹಂಭಾವದಲ್ಲಿರ್ದ ನಿರ್ವಿಕಲ್ಪದ ನಿಜವ ನೋಡಿರೆ! ಲಿಂಗವರಿತು ಲಿಂಗವಾಗಿಹ ಲಿಂಗ ಘನವ ನೋಡಿರೆ! ಇದು ಏನೂ ಎನ್ನದಿದ್ದ ಲಿಂಗೈಕ್ಯ ನೋಡಿರೆ! ಸಹಜನೆನ್ನದಿದ್ದ ಸ್ವಯಂ ಜ್ಯೋತಿ ನೋಡಿರೆ! ನಿಜ ವೆನ್ನದಿದ್ದ ನಿರ್ವಿಕಲ್ಪ ಘನ ನೋಡಿರೆ! ಪರತತ್ವ ವರಿತು ನಾ ನೀನೆನ್ನದಿಹ ಸಯ ಸುಖವುಳ್ಳದು ಇದು, ಸ್ವಯಂ ಜ್ಯೋತಿ. ಈ ಘನ ಜ್ಯೋತಿ, ತಾ ಜ್ಯೋತಿ ಎನ್ನದ ಜ್ಯೋತಿ ಯಾದುದು ಲಿಂಗೈಕ್ಯವು.

ಸಹಜ ವೆನ್ನದೆ ನಿಜ ವೆನ್ನದೆ ಅಚಲ ವೆನ್ನದೆ ಖಂಡಿತ ವೆನ್ನದೆ ಶೂನ್ಯ ಎನ್ನದೆ ನಿಶೂನ್ಯ ವೆನ್ನದೆ, ಏನೂ ಎನ್ನದೆ ಕೂಡಲ ಚನ್ನಸಂಗಯ್ಯನಲ್ಲಿ ಲಿಂಗೈಕ್ಯವು ಎಂದು ಹೇಳಿದುದು ಆಶ್ಚರ್ಯ. ಲಿಂಗ ವರಿತು ಲಿಂಗವಾಗಿದ್ದುದು ಅದೆಂತು ಹೇಳಿದುದು, ಲಿಂಗ ಘನ ನುಡಿಯಬಹುದೆ ? ಸತ್ತ ಹೆಣ ಕೂಡಬಹುದೇ? ಸತ್ ಅರಿತವ ಸತ್ ಸ್ವರೂಪನು, ವಾಙ್ಮನೋತೀತವು. ವಾಙ್ಮನವುಳ್ಳದು ಸತ್ ಸ್ವರೂಪ ವಾಗದು, ವಾಙ್ಮನವು ಸತ್ ಸ್ವರೂಪದ ಸಂಜ್ಞೆ ತೋರಿಸಿದುದು ಆಶ್ಚರ್ಯ ವಲ್ಲವೆ ? ಆಶ್ಚರ್ಯವಲ್ಲ ಸಹಜವಾಗಿಯೆ ಇದೆ. ಕೃತ್ರಿಮಕ್ಕೆ ಆಶ್ಚರ್ಯವಾಗಿ ತೋರುತ್ತದೆ. ವಾಙ್ಮನವೆ ಲಿಂಗವಾಗಿದೆ ಎಂಬುವವರ ಮತಿಗೆ ಆಶ್ಚರ್ಯ ವಾಗಿದೆ. ಲಿಂಗ ಸಕೀಲ ಸಂಯೋಗ ವರ್ಮ ಸ್ಥಲ ವರಿತವರಿಗೆ ಸಹಜವಾಗಿದೆ. ಎಂಜಲ ಮಾತು ನುಡಿಯವವರಿಗೆ, ಸದ್ಗುರು ಕೃಪೆಯಿಲ್ಲದ ವಂಚಕರಿಗೆ

ಇದು ಬಹು ದುಸ್ತರವಾಗಿದೆ.

ದೋಷ ಹೃದಯವುಳ್ಳವರಿಗಿದು ಅಸಾಧ್ಯವಾಗಿದೆ. ಆರಿಗೆ ಸದ್ಗುರು ಕೃಪೆ ಅಪಾರವಿದೆ. ಅವರಿಗೆ ಲಿಂಗೈಕ್ಯ ದರುವು ಲಭ್ಯವಾಗಿದೆ. ಚೆನ್ನ ಬಸವರಾಜ ದೇವರು ಸದ್ಗುರು ಕೃಪೆಯಲ್ಲಿಯೆ ಬೆಳೆದು ನಿರಹಂಭಾವದಲ್ಲಿರ್ದ ಶಿಶು. ಜಗ ಜ್ಯೋತಿ ಬಸವರಸ ಕಾರುಣ್ಯದ ಶಿಶು, ಅದಾರಿಗೂ ಗುರು ವಾಗದ ಬಸವಜ್ಯೋತಿ ಸಕಲರಿಗೂ ಲಿಂಗೈಕ್ಯದನುವ ತೋರಿಸಿದ ಪ್ರಥಮಾಚಾರ್ಯ ಈ ಗುರು ಘನನ ಕರುಣೆಯ ಕರುಣಾಂಬುಧಿಯಲ್ಲಿ ಬೆಳೆದ ಅಖಂಡಿತ ಬೆಳಗಿನ ಬೆಳಗು ಆದುದರಿಂದ ನುಡಿಯುವ ನುಡಿ ಲಿಂಗೈಕ್ಯ ವಾಗದು . ನುಡಿಯುವ ನುಡಿ ತನ್ನಿಂದಲೆ ತಾನೆ ಕೆಡಸಿ ಸಹಜನೆನ್ನದೆ ನಿಜವೆನ್ನದೆ ಖಂಡಿತವೆನ್ನದೆ ಅಚಲವೆನ್ನದೆ ಶೂನ್ಯ ಎನ್ನದೆ ನಿಶೂನ್ಯ ವೆನ್ನದೆ ಏನೂ ಎನ್ನದೆ ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗ್ಯಕ್ಯವು ಎಂದು ಹೇಳಿದುದು ಲಿಂಗ ಹೇಳಲಿಲ್ಲ. ಸದ್ಗುರು ಕೃಪೆಯಲ್ಲಿ ಬೆಳೆದ ನಿರಹಂಭಾವದ ಶಿಶು ಲಿಂಗೈಕ್ಯದನುವ ತಿಳಿಸಿದುದು ನೋಡುವುಡೆ , ಲಿಂಗ ಘನವೆ ಲಿಂಗವರಿತು , ಲಿಂಗವಾಗಿಪ್ಪ ಘನ ಲಿಂಗವಾಗಿದ್ದರೂ ಲಿಂಗವರಿಯುವ ಅನುವ ಲಿಂಗಾಂಗಿಗಳಿಗೆ ಲಭ್ಯವಾಗುವುದು ಹಿತಕರವೆಂದು ಸದ್ಗುರು ಪ್ರೇರಣೆಯಾಗಿ ನುಡಿಯದ ಲಿಂಗ ನುಡಿದಿರಬಹುದು. ಇದು ನುಡಿಯದವರನ್ನಾಗಿ ಮಾಡುವ ಆನಂದ ಕರುಣಿಸಿದುದು, ನುಡಿದು ನುಡಿಯದಂತಿದ್ದ ಲಿಂಗ ಘನ ಕೆಟ್ಟುದಿಲ್ಲಾ. ನಿಷ್ಕಳಂಕ ಲಿಂಗ ಅದಕ್ಕೆ ಕಳಂಕ ವೇತರದು? ಅದು ನಿಷ್ಕಳಂಕವಾಗಿಯೆ ಇದೆ, ಇದು ಅರುವರಿತವರಿಗೆ ಸಹಜ ವೇದ್ಯವಾಗುವದು.

46

ನೆನಹಿನ ಸುಖವ ನೋಟ ನುಂಗಿತ್ತು ,
ನೋಟದ ಸುಖವ ಕೂಟ ನುಂಗಿತ್ತು ,
ಕೂಟದ ಸುಖವ ಆಲಿಂಗನ ನುಂಗಿತ್ತು ,
ಆಲಿಂಗನದ ಸುಖವ ಸಂಗ ನುಂಗಿತ್ತು ,
ಸಂಗದ ಸುಖವ ಸಮರತಿ ನುಂಗಿತ್ತು ,
ಸಮರತಿ ಸುಖವ ಪರವಶ ನುಂಗಿತ್ತು ,
ಪರವಶದ ಸುಖವ ಕೂಡಲ ಚೆನ್ನಸಂಗಯ್ಯ ,
ತಾನೆ ಬಲ್ಲ ನಹಿನ ಸುಖ ಇದು . ॥ 761 ॥

ತಾತ್ಪರ್ಯ : ನೆನಹಿನ ಸುಖದವರು ಯಾರು ? ನುಂಗಿದ ನೋಟವಾವುದು ? ಕಲ್ಪಿತ ಪುರುಷನೆ ನೆನಹಿನ ಸುಖದವನು . ಇದನ್ನು ನುಂಗಿದ ನೋಟವೆಂದರೆ, ಕಲ್ಪಿತ ಪುರುಷ ತಾನಾರೆಂದು ತನ್ನನರಿತಾಗ, ತಾನು ಅಕಲ್ಪಿತ ಘನ ನೆಂಬುದು ತನ್ನಿಂದ ತನಗದು ತಿಳುವಳಿಕೆ ಯಾಗಿ , ನೆನಹು ನೆನೆಯುವದು ಇದು ಮನದ ಕಾರ್ಯ ನೆನಹಿನಲ್ಲಿ ತೋರುವ ಸುಖವು ನಿಜ ಸುಖವಲ್ಲ ಇದು ಆಭಾಸ ಸುಖ ನೆನಹಿಂಗೆ ಮೀರಿ ಬೆಳಗುವ ತಾನು , ಬೆಳಕಿನ ಬೆಳಕು, ಅರುವಿನರುವು ಸುಖದ ಸುಖ.

ನೆನಹಿನಲ್ಲಿ ತೋರುವ ಪ್ರತಿಬಿಂಬವಾಗಿರುವದರಿಂದ ಅಲ್ಲಿ ತೋರುವ ಸುಖ ಕಲ್ಪಿತ ಪುರುಷನ ಸುಖವಾದ್ದರಿಂದ ತಾನು ಅದನ್ನು ಕಾಣುವವನಾದ್ದರಿಂದ ತಾನು ಅರುವಿನರುವು ಸುಖದ ಸುಖ ಎಂಬ ಜ್ಞಾನವಾಗಿ ನೆನಹಿನ ಸುಖಕ್ಕೆ ಮಹತ್ವ ಕೊಡದೆ ನೆನಹಿಂಗೆ ಮೀರಿ ನಿಂತು ತನ್ನ ನೋಡುವುಡೆ ನೆನಹಿನ ಸುಖ ನಿಜ ವೆನಿಸದು ಆಗ ಸ್ವಭಾವತಃ ನೆನಹಿನ ಸುಖಕ್ಕೆ ಮೀರಿ ತನ್ನನ್ನೆ ನೋಡುವದರಿಂದ ನೆನಹಿನ ಸುಖ ನೋಟ ನುಂಗಿತ್ತು ಎಂದು ಹೇಳಿಹರು.

ನೋಟದ ಸುಖ ಕೂಟ ನುಂಗಿತ್ತು : ನೋಟದ ಸುಖವದು ನೋಡದ ನೋಟದ ಸುಖ, ಸುಖವೆ ತಾನಾದ ನೋಟ ಏಕೆಂದರೆ ತಾನು ಸುಖ ಸ್ವರೂಪ, ತನ್ನ ಸ್ವರೂಪ ಸುಖ ಎಂದೂ ಕಂಡುದಿಲ್ಲ, ಕಾಣದ ಸುಖ ಕಂಡುದರಿಂದ ಈಗ ಸ್ವರೂಪ ತಾನೆಂಬುದು ದಿಟವಾಗಿ ತನ್ನ ನೋಡಿದ ನೋಟ ಇದು ನೋಡದ ನೋಟ, ಇದುವೆ ನೆನಹಿನ ಸುಖವ ನುಂಗಿತ್ತು.

ನೋಟದ ಸುಖವ ಕೂಟವ ನುಂಗಿತ್ತು : ತನ್ನ ನೋಟ ಸುಖ, ಸುಖವು ಸುಖವೆ. ಇದು ಸವೆಯದ ಸುಖ ಬೇಸರ ವಾಗದ ಸುಖ. ಅಖಂಡ ಸುಖ, ಪರಮಾನಂದಮಯ ವಾದುದರಿಂದ ಈ ಕೂಟ, ಕೂಡದಗಲದ ಕೂಟ. ಪೂರ್ವದಲ್ಲಿ ಕೂಡುವ ಅಗಲುವ ಕೂಟದವನಾಗಿದ್ದ. ಈಗ ತನ್ನದು ಕೂಡದಗಲದ ಕೂಟ ನಿಜ ಕೂಟ, ತನಗಿಂತ ಭಿನ್ನವಾದುದು ಇಲ್ಲ. ಸಮಾನವಾದುದು ಇಲ್ಲ. ತಾನೊಂದೆ ಪರಮಸತ್ಯ ನಾದುದರಿಂದ ತಾನು ಚಿದಾಕಾಶ ನಾದುದರಿಂದ ತನ್ನಂಥ ಇನ್ನೊಂದು ಸ್ವರೂಪವಿಲ್ಲ ತಾನೊಂದೆ ಇದ್ದುದರಿಂದ ತನ್ನ ಕೂಟ ತಾನೆ ತಾನಾಗಿ ನಿಂತ ಕೂಟ ಉಪಮಿಸದ ಕೂಟ, ಈ ಕೂಟ ಸುಖವ ಆಲಿಂಗನ ನುಂಗಿತ್ತು. ಸವೆಯದ ಸುಖ ನಿಸ್ಸೀಮ ಸುಖ ಆಲಿಂಗನ ನುಂಗಿತ್ತು ಎಂಬುದು ತನ್ನ ತಾ ಅಪ್ಪಿಕೊಳ್ಳುವುದು, ಬಹು ಜನ್ಮಂಗಳಲ್ಲಿ ತನಗಿಂತ ಭಿನ್ನವಾದುದು ಅಪ್ಪಿಕೊಂಡಿದ್ದನು. ತನ್ನ ತಾ ಅಪ್ಪಿಕೊಂಡಿದ್ದಿಲ್ಲ ಈಗ ತನ್ನ ತಾ ಅಪ್ಪಿಕೊಂಡ ಸುಖ, ಅಖಂಡ ಸುಖವ ಅಪ್ಪಿಕೊಂಡ ಸುಖ. ಆಲಿಂಗನ ಈ ಕೂಟದ ಸುಖವ ಆಲಿಂಗನ ನುಂಗಿತ್ತು ಎಂದು ಹೇಳಿಹರು.

ಆಲಿಂಗನ ಸುಖವ ಸಂಗ ನುಂಗಿತ್ತು ; ಸಂಗ ಸುಖವ ಸಮರತಿ ನುಂಗಿತ್ತು, ಸಮರತಿ ಸುಖವ ಪರವಶ ನುಂಗಿತ್ತು, ಪರವಶಸುಖವ ಕೂಡಲ ಚೆನ್ನ ಸಂಗಯ್ಯ ತಾನೆ ಬಲ್ಲ; ಆ ಲಿಂಗನ ಸುಖವದು ತಾನು ಅರಿಯದರುವುಳ್ಳವನಾಗಿ, ಏನೊಂದು ಅರಿಯದಂತಿದ್ದುದೆ ಸ್ವ ಸುಖ, ಅಚ್ಚ ಸುಖ, ಬೇಸರವಾಗದ ಸುಖ, ಸವೆಯದ ಸುಖದವಾನಾಗಿದ್ದುದೆಂದು ಹೇಳಿಹರು.

ಆ ಲಿಂಗನ ಸುಖ, ಸಂಗ ನುಂಗಿತ್ತು : ಸಂಗ ! ಇದಾವ ಸಂಗ ? ಅರಿಯಲಿಲ್ಲದರುವಿನ ಸಂಗ. ಏನೆಂದೆನಲಿಲ್ಲದ ಅರುವಾಗಿ ಅರಿಯದರುವಾಗಿದ್ದದೆ ಸಂಗ, ಸಂಗನ ಸಂಗ, ಕೂಡಲ ಚೆನ್ನಸಂಗನ ಸಂಗ, ಈ ಸಂಗ ಸುಖವ ಸಂಗ ನುಂಗಿತ್ತು ಎಂದು ಹೇಳಿಹರು.

ಸಂಗ ಸುಖ ಸಮರತಿ ನುಂಗಿತ್ತು; ಏನೆಂದೆನಲಿಲ್ಲದ ಅರುವು ಅರಿಯದರುವಿನ ಸಮರತಿ ಇದನಾರಯ್ಯ ಹೀಗೆ ಎಂದು ವಿವರಿಸುವದು, ಶಬ್ದ ಮುಗ್ದವಾಗಿಹ ಅರುವು ಏನೆಂದನಲಿಲ್ಲದ ತಾನು, ಅರಿಯದರುವು. ಆಗಿಹ ಘನವ ಅದೆಂತಯ್ಯ ವರ್ಣಿಸುವದು, ಮುನ್ನ ಮುನ್ನಲಾದ ತಾನೆ, ಏನೆಂದನಲಿಲ್ಲದ ಅರುವು ತಾನೆ, ತನಗೆ ತಾನೆ, ತನ್ನಿಂದ ತನಗೆ ಯತಾರ್ಥ ವೇದ್ಯವಾಗಿ ಅರಿಯದರುವು ಆಗಿಹುದೆ ಸಮರತಿ ಈ ಸಂಗ ಸುಖ, ಸಮರತಿ, ನುಂಗಿತ್ತು ಎಂದು ಹೇಳಿಹರು.

ಸಮರತಿ ಸುಖವ ಪರವಶ ನುಂಗಿತ್ತು : ಓಹೋ ! ಸಮರತಿ ಸುಖ ಪರವಶ ನುಂಗಿದುದು, ಹೇಳಲೆಂತು ಬಾರದು, ತೋರಬಾರದ ಘನ ಹೇಳಲೆಂತು ? ಹೇಳ ಬಾರದ ಘನ ತೋರಲೆಂತು, ತಾನು ಪರವಶ, ಅರಿಯದರುವು ಪರವಶ, ಅರಿಯದರುವಾಗಿ ತನ್ನ ಸುಖದಲ್ಲಿ ತಾನು ಲೀಯವಾದುದು, ಪರವಶ ಸುಖ, ಇದು ಕೂಡಲಚೆನ್ನಸಂಗಾ ತಾನೆ ಬಲ್ಲ ಎಂದು ಹೇಳಿಹರು.

47

ಲೋಕ ವಳುತ್ತಿದೆ ಇದ ಬೇಕು ಬೇಡಂಬುವರ ನೊಬ್ಬರನು ಕಾಣೆ,
ದೇಹ ವೆಂಬುದು ವಿಮಾನವ ಮಾಡಿ,

ದೇವರೆಂಬುದೊಂದು ಹೆಣನ ಮಾಡಿ ಕುಳ್ಳಿರಿಸಿ ದೇವರು ಸತ್ತರು,
ತಮ್ಮಡಿ ಉಳಿದಡೆ ದೇಗುಲ ಹಾಳಾಯಿತ್ತೆ ಅಂಡಜದವರೆಲ್ಲ ಮುಂಡೆಯರಾದರು,
ನಿಮ್ಮ ಕಂಡವರುಳಿದರೆ ಗುಹೇಶ್ವರಾ. ॥ 1491 ॥

ತಾತ್ಪರ್ಯ : ಲೋಕವಳುತ್ತಿದೆ: ಇದ ಬೇಕೆಂದು ಅಳುವ ಲೋಕ, ಇದ ರೂಪಾಗಿ ತೋರುವ ವಿಷಯಾದಿಗಳ ಬೇಕೆಂಬ ಲೋಕ. ಅಳುವ ಲೋಕ. ಕಂಡದ್ದೆಲ್ಲ ಬೇಕೆಂಬುವುದು, ಹೆಣ್ಣೆ ಕಾಣಲಿ, ಮಣ್ಣೆ ಕಾಣಲಿ, ಹೊನ್ನೆ ಕಾಣಲಿ ಧಾನ್ಯವೆ ಕಾಣಲಿ, ರಾಜ್ಯವೆ ತೋರಲಿ, ಮನೋರಂಜಕವಾದುದು ಆವುದೆ ಕಾಣಲಿ, ಅದನೆಲ್ಲ ಬೇಕೆಂಬ ಬಯಕೆಯಿಂದುಕ್ತ ವಾದುದಾವುದೊ ಅದುವೆ ಅಳುವ ಲೋಕ.

ಹೊನ್ನನ್ನು ಹೆಣ್ಣನ್ನು ಕಣ್ಣಿಲೆ ಕಂಡು ಮನದಲ್ಲಿ ಬಯಸದ ಅಣ್ಣಗಳು ಯಾರು ಸರ್ವಜ್ಞನೆಂದು, ಇಂದ್ರಿಯ ಜನ್ಯ ವಿಷಯ ಭೋಗೋಪ ವಸ್ತುಗಳು ಆವುದೆ ತೋರಲಿ ಅದನ್ನು ಬಯಸದೆ ಬಿಡದು, ಈ ಮನಸ್ಸು ವಾಸನಾ ರೂಪಿ ಮನಸ್ಸು. ವಿಷಯಾಕಾರ ಮನಸ್ಸು ಕಾಮನೆಯಿಂದುಕ್ತವಾಗಿಹ ಮನಸ್ಸು, ಇದು ಶಬ್ದ,ಸ್ಪರ್ಶ, ರೂಪ, ರಸ, ಗಂಧ ವೆಂಬ ಪಂಚ ವಿಷಯವಾಸನೆಯ ಒಳಗಿಟ್ಟುಕೊಂಡು ಒಳಗೆ ಸದಾ ಕಾಮಾಕಾರ ಮಾಡುವ ಮನಸ್ಸು, ಇದುವೆ ಲೋಕ ವನ್ನೆಲ್ಲ ಅಳುಸುತ್ತಿದೆ.

ಈ ಕಾಮಾಕಾರ ವುಳ್ಳ ವಿಷಯ ವಾಸನಾ ನರರುಗಳಲ್ಲಿ ಅಷ್ಟೆ ಇದೆ ಎಂತಲ್ಲ. ಸುರರಲ್ಲಿ ಅಸುರರಲ್ಲಿ ಮನು ಮುನಿಗಳಲ್ಲಿ ತಪಸ್ವಿತ್ಯಾಗಿಗಳಲ್ಲಿಯು ಸಹ ಇದ ಬೇಕೆಂಬ ಫಲ ಪದಂಗಳಾಷೆಯ ಗುರಿ ಇಟ್ಟುಕೊಂಡೆ ಇವರ ತಪಸ್ಸಿನ ಕಾರ್ಯಾರಂಭವಾಗಿದೆ.

ನರರಿಗೆ ಈ ಲೋಕದ ಭೋಗ ಭಾಗ್ಯದ ಬಯಕೆ ಇದ್ದರೆ ಸುರಾಸುರರಿಗೆ ದೇವಲೋಕದ ಇಂದ್ರನ ಉಪಭೋಗ ಬೇಕಾಗಿದೆ. ಮನು ಮುನಿಗಳಿಗೆ ತಮ್ಮ ತಮ್ಮ ಇಚ್ಛಾನುಸಾರ, ಬ್ರಹ್ಮ ಪದ ವಿಷ್ಣುಪದ ರುದ್ರಪದದ ಇಚ್ಛೆ ಇಟ್ಟುಕೊಂಡು ತಪಸ್ಸು, ತ್ಯಾಗ ಮಾಡಿಹರು ಇವರೆಲ್ಲರು ಇದ ಬೇಕೆಂಬ ದಾಹಕವುಳ್ಳವರೆ ಇವರು ಕೂಡಾ ಅಳುವ ಲೋಕದಲ್ಲಿದ್ದಾರೆ ನೋಡುವರ ದೃಷ್ಠಿಗೆ ಮನು ಮುನಿಗಳು ತ್ಯಾಗಿಗಳಾಗಿ ಕಂಡರೂ ಪರಲೋಕದ ಸುಖದ ಆಸಕ್ತಿವುಳ್ಳವರು, ಇಹಲೋಕದ ಅನಾಸಕ್ತರು .ಈ ಕಾರಣದಿಂದ ಇವರು ಗಳಿಸಿದ ಪುಣ್ಯದ ಗಾತ್ರದ ಮೇಲಿಂದ ಇವರಿಗೆ ಪದ ಫಲಗಳ ಭೋಗವಿದೆ. ಇಹಲೋಕದಲ್ಲಿ ಕನಿಷ್ಠ, ಮಧ್ಯಮ, ಉತ್ತಮ, ಭೋಗ ಭಾಗ್ಯ ಅಧಿಕಾರವಂತರಾಗಿ ಕಾಣುವರೊ ಹಾಗೆ ಸ್ವರ್ಗ ಲೋಕದಲ್ಲಿ, ಇವರು ಗಳಿಸಿದ ಪುಣ್ಯದ ಮೇರೆಗೆ ಇವರಿಗೂ ಕನಿಷ್ಠ, ಮಧ್ಯಮ, ಉತ್ತಮ ಪದವಿಗಳು ಸಿಗುವದಾಗಿದೆ. ಎಂದಲ್ಲಿ ಇಲ್ಲಿ ಹೇಗೆ ಏರಿಳಿತವು ಅಲ್ಲಿಯು ಹಾಗೆಯೆ! ಈ ಕಾರಣದಿಂದ, ಈ ಲೋಕದಿಂದ ಹಿಡಿದು , ಬ್ರಹ್ಮಲೋಕದವರಿಗೆ ಅನಿತ್ಯ ಮಾದ ವಿಷಯೋಪ ಬೋಗದ ಬಯಕೆಯುಳ್ಳವರು ಇದ್ದಾರೆ. ಅಂದಲ್ಲಿ ಅಳುವ ಲೋಕದವರೆಂದು ಹೇಳುವದಾಗಿದೆ.

ಅಳದ ಲೋಕದವರು ಯಾರು ? ಅಳದವರು ಯಾರು ? ಅಳದ ಲೋಕದವರೆಂದರೆ ಆಧ್ಯಾತ್ಮ ಲೋಕದವರು . ಸದ್ಗುರು ಕರುಣೆಯಲ್ಲಿ ಬೆಳೆದ ಅರುವಿನ ಮಹದರುವುಳ್ಳ ಲೋಕದವರು. ಲಿಂಗಾಂಗ ಸಮರಸ ಜ್ಞಾನದ ಹಿರಿಮೆಯುಳ್ಳವರು. ಅವರು ಪರತತ್ವದ ಪರಮಾನುಭವಿಗಳು ಇವರು ಅಳದ ಲೋಕದವರು ಅಳದವರು ಶರಣರು ಸಾಧಕರು, ಜಿಜ್ಞಾಸುಗಳು ದ್ವಿಜಾತಿರಾಗಿಹ ಗುರು ಪುತ್ರರು ಗುರು ಹೃದಯದಿಂದ ಹುಟ್ಟಿದವರು ಇವರು.

''ಕರಿಯನಿತ್ತ ಡೊಲ್ಲೆ ಹಿರಿದಿಪ್ಪ ರಾಜವ ನಿತ್ತ ಡೊಲ್ಲೆ ಬ್ರಹ್ಮಪದ, ವಿಷ್ಣು ಪದ, ರುದ್ರ ಪದವ ನೊಲ್ಲೆ ನಾನಾ ಪದವಿಯ ನೊಲ್ಲೆ ನಿಮ್ಮ ಶರಣರ ಸೂಳ್ನುಡಿಯಿತ್ತಡೆ. ನಿಮ್ಮ ನಿತ್ತಂತೆ ಕಾಣಾ ರಾಮನಾಥ'' ಎಂಬ ವಚನಕಾರರಲ್ಲಿ ಮೊದಲಿಗರಾದ ಹಿರಿಯ ದೇವರ ದಾಸಿಮಯ್ಯ ತಂದೆ ಬಿತ್ತರಿಸಿದಂತೆ ಶರಣರೊಂದೆ

ಬೇಡೆನೆನ್ನದವರು ಅವರಿಗೆ ಶರಣರ ಸೂಳ್ನುಡಿ ಒಂದೆ ಬೇಕಾಗಿದೆ ಯಲ್ಲದೆ, ಇನ್ನುಳಿದುದು ಆವಾವುದು ಬೇಡೆನೆನ್ನುವವರೆ ಅಳದವರು . ಅವರು ಈ ಅಳುವ ಲೋಕದಿಂದ ಹೊರಗಾದವರು ಶರಣರ ಸೂಳ್ನುಡಿಯಿಂದ ಸಿಗುವ ಸ್ವಾನುಭಾವವು ಅವರು ಇರುವ ಲೋಕವು.

ಭಕ್ತಿಯೆ ಲಿಂಗ ಪೂಜೆಯಾಗಿ ಅಳವಡಿಸಿಕೊಂಡ ಬಸವೇಶ ವೈರಾಗ್ಯವೆ ಲಿಂಗ ಪೂಜೆಯಾಗಿ ಅಳವಡಿಸಿಕೊಂಡು ಅಲ್ಲಮೇಶ , ಜ್ಞಾನ ಕ್ರಿಯೆಯೆ(ಪೂಜೆ) ಲಿಂಗ ಪೂಜೆಯಾಗಿ ಅಳವಡಿಸಿಕೊಂಡ ಚೆನ್ನ ಬಸವೇಶ, ಅನುಭಾವವೆ ಲಿಂಗ ಪೂಜೆಯಾಗಿ ಅಳವಡಿಸಿಕೊಂಡ ಬಾಲಕೇಶ ಆರಿಗೆ ಭಕ್ತಿಯೆಂಬ ಜ್ಞಾನ ಜ್ಞೇಯ ಒಂದಾದ ಲಿಂಗ ಪೂಜೆ ಯಾಗಿದೆ . ಅವರು ಬೇಡೆನ್ನುವವರು . ವೈರಾಗ್ಯವೆ ಲಿಂಗ ಪೂಜೆಯಾದುದರಿಂದ ಲಿಂಗದ ಹೊರ್ತು ಆವುದು ಇಲ್ಲ ಇಲ್ಲ ವೆಂಬುದು ಕೂಡ ಅಲ್ಲವಾದ ಅಲ್ಲಮಯ್ಯನ ವೈರಾಗ್ಯ. ವೈರಾಗ್ಯ ದೋಳ್ ಹಿರಿದಾದುದರಿಂದ ವೈರಾಗ್ಯ ಚಕ್ರವರ್ತಿ ಆವಾವುದು ಬೇಡೆನ್ನುವಾತ ಲಿಂಗಾಂಗ ಸಮರಸ ಜ್ಞಾನದ ಜ್ಞಾನ ಕ್ರಿಯೆಕ್ಕೆ ಚಕ್ರವರ್ತಿಯಾಗಿಹ ಚನ್ನ ಬಸವಣ್ಣ ಅನುಪಮ ಲಿಂಗವರಿತು ಅನುಪಮನಾಗಿಹ ಸಮ್ಯ ಜ್ಞಾನ ಚಕ್ರವರ್ತಿಗೆ ಆವಾವುದು ಬೇಡವಾಗಿದೆ. ಲಿಂಗೈಕ್ಯದನುವುಳ್ಳ, ಬಾಲಕೇಶ ಈ ಮಹಾಂತನಿಗೆ ಅನುಭಾವವೆ ಲಿಂಗ ಪೂಜೆ ಯಾಗಿಹ ಆ ನೀನೆನ್ನದಿಹ ಅಖಂಡ ಸುಖಿ. ಸುಖವು ಸುಖವೆ ಆಗಿರುವದರಿಂದ ಆವಾವುದು ಬೇಡವಾಗಿದೆ, ಇವರೆ ಅಳದ ಲೋಕದವರು, ಸಯ ಸುಖ ಲೋಖದಲ್ಲಿದ್ದವರು.

ದೇಹವೆಂಬುದೊಂದು ವಿಮಾನ ಮಾಡಿ, ದೇವರೆಂಬುದೊಂದು ಹೆಣನ ಮಾಡಿ ಕುಳ್ಳಿರಿಸಿ ದೇವರು ಸತ್ತರು, ತಮ್ಮಡಿ ಉಳಿದಡೆ ದೇಗುಲ ಹಾಳಾಯಿತ್ತು ಕಂಡೆ. ದೇಹವೆಂಬುದೊಂದು ವಿಮಾನ ಮಾಡಿದವರು ಯಾರು? ದೇವರೆಂಬುದೊಂದು ಹೆಣನ ಮಾಡಿ ಕುಳ್ಳಿರಿಸಿದ ದೇವರು ಯಾರು? ದೇವರು ಸತ್ತರು ಎಂದವರು ಯಾರು ? ತಮ್ಮಡಿ ಉಳಿದವರು ಯಾರು ? ದೇಗುಲ ಹಾಳಾದುದು ಕಂಡವರು ಯಾರು ? ತಮ್ಮಡಿ ಉಳಿದವರು ಯಾರು? ದೇಗುಲ ಹಾಳಾದುದ ಕಂಡವರು ಆರು?

ಲಿಂಗಾಂಗದ ಸಮರಸ ಜ್ಞಾನಿ ಶರಣರು, ಲಿಂಗೈಕ್ಯ ಶರಣರು ಇವರು ಲಿಂಗದಲ್ಲಿ ಉದಯವಾದ ಲಿಂಗ ಸ್ವರೂಪಿಗಳು . ಇವರು ದೇಹವೆಂಬುದೊಂದು ವಿಮಾನ ಮಾಡಿ ಅದರೊಳಿರುವ ದೇವರೆಂಬುದೊಂದು ಹೆಣ ಮಾಡಿ ಕುಳ್ಳರಿಸಿದವರು ಅವರ ದಿವ್ಯ ದೃಷ್ಠಿಗೆ ಈ ನಾ ನೀನೆಂಬ ಭೋದರೂಪ ದೇವರೆಲ್ಲ ಸತ್ತವುಗಳು ಜ್ಞಾನ ವಾನ್ ಜನ್ಮ ಬಂದ ಮೇಲೆ ಲಿಂಗಾಂಗ ಸಮರಸ ಜ್ಞಾನಿಯಾಗಬೇಕು ಆದಲ್ಲಿ ಅಂಗ, ಲಿಂಗ ವೆಂಬೆರಡರ ಸಂದೇಹ ಉಳಿಯಬಾರದು . ಸಮುದ್ರದಲ್ಲಿ ಸೇರಿದ ಹೊಳೆ ಹಳ್ಳ ನದಿಗಳಿಗೆ ಆವುದು ಹಳ್ಳ, ಹೊಳೆ ನದಿ ಎನಬೇಕು . ಹಾಗೆ ಆರಿಗೆ ಜೀವಾತ್ಮ ಅಂತರಾತ್ಮ ಪರಮಾತ್ಮನೆನಬೇಕು ?

ಅಖಂಡಿತ ಲಿಂಗ , ಅನಪಮ ಲಿಂಗ ದರ್ಶನ ವಾಗದ್ದರಿಂದ ಅಂಗ ಬೇರೆ, ಲಿಂಗ ಬೇರೆಂಬ, ಭಾವದಿಂದುಕ್ತನಾಗಿದ್ದನು . ಸದ್ಗುರು ಕೃಪೆಯಿಂದ ವೇದ ವೇದಾಂತಗಳಿಗಸಾಧ್ಯವಾದ ಅನುಪಮ ಲಿಂಗ ವಾಕ್ ಮನಕ್ಕೆ ಅಸಾಧ್ಯವಾದ ಅಖಂಡಿತ ಲಿಂಗದ ಕರುಣೆಯಾದ ಬಳಿಕ ಅಂಗ, ಲಿಂಗ ಬೇರೆಂಬ ಸಂಕಲ್ಪ ಉಂಟೆ ? ಇವರು ಅನುಪಮ ಲಿಂಗವರಿತು ಅನುಪಮರಾಗಿಹ ಶರಣರು . ಇವರ ದಿವ್ಯ ದೃಷ್ಠಿಗೆ ಲೋಕದವರು ಅಂತಿಮ ಯಾತ್ರೆಗೆ, ಹೆಣ ತೆಗೆದುಕೊಂಡು ಹೋಗಲು ವಿಮಾನ ಮಾಡುತ್ತಾರೆ ಅದರಲ್ಲಿ ಸತ್ತ ಹೆಣವ ಕುಳ್ಳರಿಸುತ್ತಾರೆ. ಕೊನೆಗೆ ಸತ್ತ ಹೆಣವನ್ನು ಸ್ಮಶಾನಕ್ಕೆ ಒಯ್ದು ಹೆಣವ ಹೂಳಿಟ್ಟು ವಿಮಾನವ ಬಿಸಾಡಿ ತಾವುಗಳೆಲ್ಲ ಇತ್ತ ಬರುತ್ತಾರೆ. ಹಾಗೆ ಸಮ್ಯಕ ಶರಣ, ಲಿಂಗೈಕ್ಯ ಶರಣರಿಗೆ ದೇಹವದು, ಹೆಣ ಹೊತ್ತುಕೊಂಡು ಹೋಗುವ ವಿಮಾನ ಎದ್ದ ಹಾಗೆ . ದೇಹದೊಳಗಿರುವ ಕಲ್ಪಿತ ದೇವರು

ಹೆಣವಿದ್ದ ಹಾಗೆ ದೇಹ ದೇಹ ದೊಳಗಿರುವ ಕಥೆಯ ಕಾಣಿರೆ? ಪ್ರಾಣಾಯಾಮ ಅಭ್ಯಾಸವ ಮಾಡಿ ಷಟ್ ಚಕ್ರವ ಸಾಧಿಸಿ ದೇವರು ಕಂಡ ಹಗರಣವ ನೋಡಿರೆ? ಇಡಾ ಪಿಂಗಳ, ಸುಶುಮ್ನ ನಾಳದಿಂದ ಕುಂಭಕ ಯೋಗವ ಸಾಧಿಸಿ ದೇವರುಗಳ ಕಲ್ಪಿಸಿಹ ಕಲ್ಪಿತ ದೇವರುಗಳ ಇಡಾ ನಾಡಿ, ಪಿಂಗಳಾ ನಾಡಿ, ಸುಖುಮ್ನ ನಾಡಿ ಈ ನಾಡಿಗಳ ದೇವತಾ ಹರಿ, ಬ್ರಹ್ಮ, ರುದ್ರರು, ಬಲನೇತ್ರ ಇದಕ್ಕೆ ಅಧಿ ದೇವತಾ, ಇಂದ್ರ ಎಡ ನೇತ್ರದ ಆಧಿದೇವತಾ, ವರುಣ, ಬಲ ಕರ್ಣದ ಆಧಿದೇವತಾ ಈಶ್ವರ, ಎಡ ಕರ್ಣದ ಆಧಿದೇವತಾ ಬ್ರಹ್ಮ, ಇನ್ನೂ ಆ ಇಂದ್ರಿಯಂಗಳಿಗೆ ಆಯಾ ಚಕ್ರಗಳಿಗೆ ಆಯಾ ಆಧಿದೇವತೆಯ ಸ್ಥಾಪಿಸಿ ದೇವರೆಂಬ ಹೆಣ ಮಾಡಿ ಕುಳ್ಳಿರಿಸಿ ತಮಗಿಂತನ್ಯ ದೇವನಿಹನು ಎಂಬ ಭೇದ ಜ್ಞಾನ, ಭೇದ ಭಾವ, ಭೇದ ದೃಷ್ಠಿಯುಳ್ಳ ದೇವರು ಸತ್ತರು . ಸ್ವರೂಪ ಜ್ಞಾನ ವಾಗಿಹ ತಾನೊಂದೆ ಉಳಿದುದಕ್ಕೆ ದೇಗುಲ ಹಾಳಾಯಿತ್ತುದನು ನಾ ಕಂಡೆ ಎಂದು ಹೇಳಿಹರು.

ಲಿಂಗವರಿತು ಲಿಂಗವಾಗಿಹ ಶರಣ ಕ್ಷರಾ ಕ್ಷರ ವೆಂಬುದಕ್ಕೂ ಮೀರಿದ ಘನ, ಘನವಂತನ ದಿವ್ಯ ದೃಷ್ಠಿಗೆ ಕಲ್ಪಿತವಾದ ದೇಗುಲವಿಲ್ಲ ಕಲ್ಪಿತ ನಾಡಿಗಳಿಲ್ಲ ನಾಡಿಗಳಿಲ್ಲದಿರುವಾಗ ನಾಡಿಗಳ ಅಧಿ ದೇವತೆಗಳೆಲ್ಲಿ? ಅಧಿದೇವತೆಗಳು ಇಲ್ಲವೆಂದ ಮೇಲೆ, ಇವುಗಳಿಗೆ ಕಾರಣನಾದ ದೇವನು ತಾನೊಂದೆ ಅನುಪಮ , ತಮ್ಮಡಿ ಎಂದಲ್ಲಿ ಪಾದ, ಜ್ಞಾನ ಸ್ವರೂಪ ಉಳಿದು , ದೇಗುಲ ಹಾಳಾಯಿತ್ತು ನಾ ಕಂಡೆ ಈ ಅಂಡಜದವರೆಲ್ಲ ಮುಂಡೆಯರಾದರು. ನಿಮ್ಮ ಕಂಡವರು ಉಳಿದರು ಗುಹೇಶ್ವರಾ ಎಂದು ಹೇಳಿಹರು. ಇವರು ಬ್ರಹ್ಮವೆಂಬ ಅಂಡಜದಲ್ಲಿ ಹುಟ್ಟಿದವರೆಲ್ಲ ವಿಧವೆಯರಾದರು . ಗುಹೇಶ್ವರ ನನ್ನು ಅರಿತವರಷ್ಟೆಮಾತ್ರ ನಿಮ್ಮವರು ನಿಮ್ಮ ಕಂಡವರು ಉಳಿದರು ಗುಹೇಶ್ವರಾ.

48

ಕಾಯ ಲಿಂಗೈಕ್ಯವೆ? ಅಲ್ಲ ನಿಲ್ಲು, ಜೀವ ಲಿಂಗೈಕ್ಯವೆ? ಅಲ್ಲ ನಿಲ್ಲು,
ಕಾಯದ ಜೀವ ಸಂದ ಬಲ್ಲಡೆ ಆತ ಲಿಂಗೈಕ್ಯ.
ಒಂಬತ್ತು ದ್ವಾರಮುಂ ಕಳೆದು , ಹತ್ತನೆಯ ದ್ವಾರದಲ್ಲಿ ನಿಲ ಬಲ್ಲಡೆ,
ಆತನೆ ಗುರು ಕಾಣಾ ಗುಹೇಶ್ವರಾ. ॥ 1091 ॥

ತಾತ್ಪರ್ಯ : ಕಾಯ ಲಿಂಗೈಕ್ಯವೆ ? ಅಲ್ಲ ನಿಲ್ಲು ; ಕಾಯ ಮೂರು ಬಗೆಯಾಗಿಹುದು, ಸ್ಥೂಲವೆಂತಲು, ಸೂಕ್ಷ್ಮ ವೆಂತಲು , ಕಾರಣ ವೆಂತಲೂ, ಇದಲ್ಲದೆ, ಇನ್ನೊಂದು ಮಹಾ ಕಾರಣ ವೆಂತಲೂ ಹೇಳುವರು . ಕಾಯ ಸ್ಥೂಲ ವದು ಲಿಂಗೈಕ್ಯ ಹೇಗಾಗುವದು ? ಕಾಯ ಸೂಕ್ಷ್ಮ ಅದು ಲಿಂಗೈಕ್ಯವಾಗದು ಕಾಯ ಕಾರಣ ಆಗದುದು ಮಹಾಕಾರಣವು, ಲಿಂಗೈಕ್ಯ ವಾಗದು, ಲಿಂಗೈಕ್ಯವೆಂಬುದು , ಏನೊಂದುಸರಲು ಎಡೆಗೊಡದೆ ಘನದಿರುವುಳ್ಳ ಅರಿವು . ಅನುಪಮ ಶಬ್ದ ಮೀಸಲು, ಮಾತು ಮನಂಗಳಿಂದತ್ತತ್ತ , ನುಡಿಗೆಡೆಗೊಡದ ಘನವು ಭಾವಕ್ಕಿಂಬು ಕೊಡದ ಘನ ಅದು ಕಾಯ ಹೇಗಾಗುವುದು.

ತಾನು ಲಿಂಗೈಕ್ಯ ತಾನಾರೆಂದರಿತ ತನ್ನಿರುವಿನ ಅರುವು, ಅದು ಅರುವರಿತು ಅರಿಯದರುವಿನ ಇರುವು ಅದು ವರ್ಣಾತೀತ. ಅದು ಲಿಂಗೈಕ್ಯ ಲಿಂಗವರಿತು ಲಿಂಗವಾಗಿಹ ನಿಃಶಬ್ದ ಬ್ರಹ್ಮದ ಘನದಿರುವು ಲಿಂಗೈಕ್ಯ ವೆತ್ತ, ಕಾಯ ವೆತ್ತ, ದಿಟ ವೆತ್ತ ,ಪುಸಿ ವೆತ್ತ ಪುಸಿಯು ದಿಟವಾಗಬಹುದೆ?

ಕಾಯವದು ಪುಸಿ , ಲಿಂಗೈಕ್ಯವದು ದಿಟ ಹಗ್ಗವು ಹಾವಾಗಬಹುದೆ? ಹಗ್ಗವು ದಿಟ, ಹಾವು ಪುಸಿ ಪುಸಿ ತೋರಿಕೆ ಎತ್ತ , ತೋರದಡಗದ ಘನ ವೆತ್ತ, ಲಿಂಗೈಕ್ಯ ನಿರಂತರ, ಕಾಯ ಕ್ಷಣ ಕಾಲ, ತೋರಿದರೂ

ಭ್ರಾಮಕವು ಕ್ಷಣ ಕಾಲ ತೋರಿದ ಭ್ರಾಮಕ ಕಾಯವೆತ್ತ? ಲಿಂಗೈಕ್ಯವಾಗಿಹ ನಿರಂತರ ನಿಃಶಬ್ದ ಬ್ರಹ್ಮವೆತ್ತ ಲಿಂಗೈಕ್ಯ ನಿರಪೇಕ್ಷ ಸ್ವಯಂ ಜ್ಯೋತಿ, ನಿರಂತರ ಬೆಳಗುಳ್ಳ ಜ್ಯೋತಿ , ಬೆಳಕಿದ್ದಲ್ಲಿ ಕತ್ತಲುಂಟೆ ? ನಿರಂತರವಾಗಿಹ ಲಿಂಗೈಕ್ಯ ಜ್ಯೋತಿ ಇದ್ದಲ್ಲಿ, ಭ್ರಾಮಕದಲ್ಲಿ ತೋರುವ ಕಾಯ ರೂಪಿ ಕತ್ತಲುಂಟೆ ? ಕಾಯವದು ಜಡ, ಲಿಂಗೈಕ್ಯವದು ಚಿನ್ಮಯವೆ ತಾನಾಗಿಹ ಘನವು ಶಬ್ದಮುಗ್ಧಶಬ್ದವೆ ಮೀಸಲು .

ಅನಿಮಿಷದೃಷ್ಠಿ ಲಿಂಗೈಕ್ಯ ದೃಷ್ಠಿ, ಶಬ್ಧ ಮುಗ್ಧನಾಗಿಹ ಅನಿಮಿಷ, ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿತು, ಅಚಲಾನಂದ ನಾಗಿಹ ಅನಿಮಿಷ ನೋಟ , ಲಿಂಗವಾಗಿಹ ಅನಿಮಿಷ ಆತನ ಕಾಯ ಲಿಂಗೈಕ್ಯವೆನಬೇಕೆ ? ಎನಲಾಗದು, ಏಕೆಂದರೆ ಕಾಯ ಲಿಂಗವಾಗಿದ್ದಲ್ಲಿ ಪ್ರಭು,ಗುರು, ಅನಿಮಿಷನ ಕರಕಮಲದಲ್ಲಿದ್ದ ಲಿಂಗವ ತೆಗೆದುಕೊಳ್ಳಲು ಕಾಯವೇಕೆ ನಶ್ವರವಾಯಿತು. ಲಿಂಗದಾಶ್ರಯದಲ್ಲಿದ ಕಾಯ, ಆಶ್ರಯ ವಿಲ್ಲದಿರೆ ಕಾಯ ನಷ್ಟವು ಇದು ಕಾರಣ. ಕಾಯ ಲಿಂಗೈಕ್ಯವಾಗದು ಕಾಯ ಲಿಂಗೈಕ್ಯವೆ? ಅಲ್ಲನಿಲ್ಲು, ಎಂದು ಪ್ರಭು ಹೇಳಿದುದು. ಜೀವ ಲಿಂಗೈಕ್ಯವೆ! ಅಲ್ಲನಿಲ್ಲು, ಜೀವ ಲಿಂಗೈಕ್ಯವಾಗದು.

ಜೀವ ಸಿದ್ಧಿಸಬೇಕಾದರೆ ಕಾರ್ಯ, ಕಾರಣ,ಅಧಿಷ್ಠಾನ ಕೂಟಸ್ಥ ಚೇತನ ಸೇರಿ ಜೀವ ಪದ ಸಿದ್ಧವಾಗುವದು. ಜೀವನ ಕಾರ್ಯವಾವುದು ! ಸ್ಥೂಲ, ಸೂಕ್ಷ್ಮ, ಕಾರಣ ದೇಹಂಗಳು ವಿಶ್ವ ತೈಜಸ, ಪ್ರಾಜ್ಞವೆಂಬ ಮೂರು ಜೀವರು . ಜಾಗೃತ, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳು, ಈ ಒಂಬತ್ತು ಸೇರಿ ಕಾರ್ಯವೆನಿಸುತ್ತದೆ.

ಜೀವನಿಗೆ ಕಾರಣವಾವುದು, ಅವಿದ್ಯೆ , ಅಧಿಷ್ಠಾನ ಕೂಟಸ್ಥ ಚೇತನ ಇವು ಜೀವನಿಗೆ ಕಾರಣ ಜೀವನು ಸಿದ್ಧಿಸಬೇಕಾದಲ್ಲಿ ಅಲ್ಲಿ ಅವಿದ್ಯೆಯು ಅಥವಾ ಅಂತಃಕರಣವು ಬೇಕು ಅಧಿಷ್ಠಾನ ಕೂಟಸ್ಥ ಚೇತನವು ಬೇಕು, ಅಂತಃಕರಣದಲ್ಲಿ ಪ್ರತಿ ಫಲಿತವಾದ ಅಭಾಸ ಚೇತನ ಇವು ಮೂರು ಕೂಡಿ ಜೀವನೆಂಬುದು ಸಿದ್ಧವಾಗುವದು.

ಅಂಗ ಕಲ್ಪಿತ, ಲಿಂಗ ಅಕಲ್ಪಿತ, ಜೀವ ಕಲ್ಪಿತ, ಪರಬ್ರಹ್ಮ ಅಕಲ್ಪಿತ . ಲಿಂಗೈಕ್ಯವೆಂಬುದು ಕಲ್ಪಿತ, ಅಕಲ್ಪಿತ ವೆನ್ನಲು ಇಂಬಿಲ್ಲದ ಘನಕ್ಕೆ ಘನವಾದ ತನ್ನಿರುವೆ ಉಪಮಿಸದ ನಿಲುವು.

ಕಲ್ಪಿತ ಜೀವ ನೆತ್ತ ಅಕಲ್ಪಿತ ನೆನ್ನಲು ಬಾರದ ಉಪಮಿಸದ ಲಿಂಗೈಕ್ಯವೆತ್ತ ಎತ್ತಣದಿಂದೆತ್ತ ? ಅವಿಚಾರ ರೂಪಿ ಜೀವನೆತ್ತ ಅವಿಚಾರ ವಿಚಾರಕ್ಕೆ ನಿಲುಕದ ನಿಜ ನಿಲುವೆತ್ತ ? ನಾಮವೆತ್ತ, ನಿರ್ನಾಮವೆತ್ತ , ನಾಮವು ನಿರ್ನಾಮವಾಗಬಹುದೆ? ನಿರ್ನಾಮವು ನಾಮವಾಗಬಹುದೆ? ಚೇತನ ರೂಪಿ ಜೀವನೆತ್ತ, ಅರುವಿಂಗರುವಾಗಿಹ ನಿಃಶಬ್ದ ಬ್ರಹ್ಮವೆತ್ತ , ಇದು ಕಾರಣ , ಜೀವನ ಲಿಂಗೈಕ್ಯವಾಗಲಾರನು , ಪ್ರಭುದೇವ ಜೀವ ಲಿಂಗೈಕ್ಯವೆ? ಅಲ್ಲನಿಲ್ಲುಎಂದು ಹೇಳಿಹರು.

ಕಾಯ ಜೀವ ದ ಸಂದ ಬಲ್ಲಡೆ ಆತ ಲಿಂಗೈಕ್ಯನೆಂದು ಹೇಳಿದುದು ಅತಿ ರಹಸ್ಯವು . ಲಿಂಗೈಕ್ಯನ ಘನವಂತನ ದೃಷ್ಠಿ, ದಿವ್ಯ ದೃಷ್ಠಿ, ನಿಶಬ್ದವೇದಿ, ಶಬ್ದಸಂಭ್ರಮಕ್ಕೆ ನಿಲುಕದ ನಿಃಶಬ್ದ ಬ್ರಹ್ಮ, ಸೂರ್ಯಂಗೆ ಕತ್ತಲೆಯ ದರ್ಶನವೆ? ನಿಃಶಬ್ದ ಬ್ರಹ್ಮಕ್ಕೆ ಶಬ್ದದ ದರ್ಶನವೆ? ವಾಙ್ಮನೋತೀತಕ್ಕೆ ವಾಙ್ಮನದ ದರ್ಶನವೆ ಅನುಪಮ ಲಿಂಗವರಿತು ಶಬ್ಧ ಮುಗ್ಧ ನಾಗಿಹ ಘನವಂತನಿಗೆ ಕಾಯದ ದರ್ಶನವೆ ? ಜೀವದ ದರ್ಶನವೆ ? ಆಕಾಶಕ್ಕೆ ಘಟ ಮಠಗಳ ದರ್ಶನವೆ ? ಆಕಾಶವು ಆಕಾಶವಾಗಿಹ ಪರಮ ಶೂನ್ಯವು , ಅದು ಏನನ್ನಾದರು ಕಂಡುದು ಹೇಗೆ?

ಲಿಂಗೈಕ್ಯವಾಗಿಹ ಅನಿಮಿಷ ಕಾಯ ಜೀವ ಸಂದ ಬಲ್ಲಡಾತ, ಆತನ ದಿವ್ಯ ದೃಷ್ಠಿಯಲ್ಲಿ ಕಾಯಕ್ಕೂ ಉತ್ಪತ್ತಿ ನಾಶವಿಲ್ಲ. ಜೀವಕ್ಕೂ ಉತ್ಪತಿ ನಾಶವಿಲ್ಲ, ಕಾಯವು ಇಲ್ಲದುದು, ಜೀವ ಇಲ್ಲದುದು ಇಲ್ಲದ ಬಂಜಿ ಮಗನಿಗೂ ಉತ್ಪತ್ತಿ ನಾಶವಿಲ್ಲ. ಭ್ರಮ ದೃಷ್ಠಿಗೆ ಕಾಯವು ಕಾಣುತ್ತಿದೆ, ಜೀವನು

ತೋರುತ್ತಾನೆ . ಮಣ್ಣಿನಲ್ಲಿ ಗಡಿಗೆ ತೋರುತ್ತಿದೆ, ಸ್ವಪ್ನದಲ್ಲಿ ಜೀವನ ತೋರುತ್ತಾನೆ ನಾಟಕದಲ್ಲಿ ಪಾತ್ರಧಾರಿಯು ತೋರುತ್ತಾನೆ. ಪಾತ್ರಧಾರಿಯು ನಿಜವೆ ? ಸ್ವಪ್ನವು ನಿಜವೆ ? ನಾಟಕವು ನಿಜವೆ ? ಸ್ವಪ್ನದಲ್ಲಿರುವ ಜೀವನು ನಿಜವೆ ? ಮಣ್ಣಿನಲ್ಲಿ ತೋರಿದ ಘನ ಮಣ್ಣಲ್ಲದೆ ಅನ್ಯವಲ್ಲ. ಲಿಂಗೈಕ್ಯ ದೃಷ್ಠಿಗೆ ಅನುಪಮ ಲಿಂಗವಲ್ಲದೆ ಅನ್ಯವಿಲ್ಲ ಇಷ್ಟಲಿಂಗವೆಂಬುದಿಲ್ಲ ಭಾವ ಲಿಂಗವೆಂಬುದಿಲ್ಲ.

ತಾನು ಅನುಪಮ, ಅನುಪಮ ಸುಖ ಸಾರಾಯದಲ್ಲಿರುವ ಮಹಾಂತಂಗೆ, ಕಾಯವು ಇಲ್ಲದುದು. ಜೀವವು ಇಲ್ಲದುದು, ಇಲ್ಲವೆಂಬ ಜ್ಞಾನವು ಇಲ್ಲದುದು ಆಗಿರುವದರಿಂದ ಆತ ಲಿಂಗೈಕ್ಯನೆಂದು ಹೇಳಿದ್ದಾರೆ.

ಒಂಭತ್ತು ದ್ವಾರಮಂ ಕಳೆದು ಹತ್ತನೆಯ ದ್ವಾರದಲ್ಲಿ ನಿಲ ಬಲ್ಲಡೆ ಆತ ಗುರು ಕಾಣಾ ಗುಹೇಶ್ವರಾ; ಹತ್ತನೆಯ ದ್ವಾರದಲ್ಲಿ ನಿಲ್ಲ ಬಲ್ಲ ಗುರು ಘನನ ವರ್ಣನೆ ಅವರ್ಣಿಯವು ನೋಡಾ. ಕಾಯದಲಾದ ಮೂರ್ತಿಯಲ್ಲ ಜೀವದಲಾದ ಮೂರ್ತಿಯಲ್ಲಾ, ಪ್ರಾಣದಲಾದ ಮೂರ್ತಿಯಲ್ಲಾ, ಮುಕ್ತಿಯಲಾದ ಮೂರ್ತಿಯಲ್ಲ, ಯುಗದಲಾದ ಮೂರ್ತಿಯಲ್ಲಾ, ಜಗದಲಾದ ಮೂರ್ತಿಯಲ್ಲಾ, ಶಿವನಲಾದ ಮೂರ್ತಿಯಲ್ಲ, ಶಕ್ತಿಯಲಾದ ಮೂರ್ತಿಯಲ್ಲ, ಇದೆಂತಹ ಮೂರ್ತಿಯೆಂದುಪಮಿಸುವೆ, ಕಾಣಬಾರದ ಕಾಯ ನೋಡಬಾರದ ತೇಜ, ಉಪಮಿಸಬಾರದ ನಿಲುವು , ಕಾರಣ ವಿಡಿದು ಕಣ್ಗೆ ಗೋಚರವಾದ ಸುಖವನೇನೆಂದು ಹೇಳುವೆ ಗುಹೇಶ್ವರಾ.

ಕಾಯದಲಾದ ಮೂರ್ತಿಯನ್ನು ಆರಾದರೂ ಉಪಮಿಸಬಹುದು ಜೀವದಲಾದ ಮೂರ್ತಿಯನ್ನು ಪ್ರಾಣದಲಾದ ಮೂರ್ತಿಯನ್ನು , ಮುಕ್ತಿಯಲಾದ, ಯುಗದಲಾದ, ಶಿವದಲಾದ,ಶಕ್ತಿಯಲಾದ ಮೂರ್ತಿಯನ್ನು ವರ್ಣಿಸಬಹುದು ಇದು ಕಾಣಬಾರದ ಕಾಯ. ಅದೆಂತು ವರ್ಣಿಸುವರು,ನೋಡಬಾರದ ತೇಜ, ಅದೆಂತು ವರ್ಣಿಸಬಹುದು ಹತ್ತನೆಯ ದ್ವಾರದಲ್ಲಿ ನಿಲಬಲ್ಲ , ಶ್ರೀ ಗುರು ನಿರಾಲಂಬ ದ್ವಾರದಲ್ಲಿ ನಿಲಬಲ್ಲ ಘನವಂತ, ಅರಿಯದರುವುಳ್ಳ ಅರಿವಿನ ದ್ವಾರದಲ್ಲಿ ನಿಲ್ಲ ಬಲ್ಲ,ಮಹಾಂತ. ಅಚಿಂತ್ಯತ್ವ ದ್ವಾರದಲ್ಲಿ ನಿಲ ಬಲ್ಲ ನಿಶ್ಚಿಂತ . ಏನೊಂದಾಗದ ಘನ ದ್ವಾರದಲ್ಲಿ ನಿಲ ಬಲ್ಲ ಬೆಳಗಿನ ಬೆಳಗು, ಇದು ಕಾಣಬಾರದ ಕಾಯ, ನೋಡಬಾರದ ತೇಜದಲ್ಲಿ ನಿಂತ ನಿಜವೆನ್ನದ ನಿರ್ವಾಣ, ಉಪಮಿಸದ ನಿಲುವುಳ್ಳ ಮಹಾಮಹಿಮನೆ ಗುರು ಘನನು ಕಾಣಾ ಎಂದು ಹೇಳಿಹರು.

49

ದ್ರವ್ಯ ನೀನು , ದ್ರವ್ಯಾರ್ಥ ನೀನು, ಪದ ನೀನು , ಪದಾರ್ಥ ನೀನು ,
ಸಕಲ ನೀನು , ನಿಷ್ಕಲ ನೀನು, ಸಕಲ ನಿಷ್ಕಲಾತ್ಮಕ ಪರಿಪೂರ್ಣ ಶಿವನಲ್ಲದೆ,
ಅನ್ಯ ಭಿನ್ನ ಭಾವ ವುಂಟೆ ? ಸಕಲ ನಿಷ್ಕಲ ತತ್ವಂಗಳು ,
ನಿಮ್ಮೊಳಗೆ ಸಾಮರಸ್ಯವನೆಯ್ದುವೆಂದು ತಮ್ಮ ತಮ್ಮ ಅಂಗದ ಮೇಲೆ
ಸರ್ವ ಪದಾರ್ಥಂಗಳ ಹೆಸರಿಟ್ಟು ,ಹೊತ್ತು ಕೊಂಡೈದಾವೆ ನೋಡಾ,
ಅದೆಂತೆಂದೊಡೆ, ದ್ರವ್ಯಾರ್ಥಂಚ ಮಹಾದೇವೋ, ದ್ರವ್ಯ ರೂಪ,ಮಹೇಶ್ವರಃ
ಇತಿ ಮೇ ಭೇದನಂ ನಾಸ್ತಿ , ಸರ್ವರೂಪ ಸದಾ ಶಿವಃ, ಇಂತೆಂದುದಾಗಿ ,
ನಾದ ನೀನು, ಬಿಂದು ನೀನು , ಕಳೆ ನೀನು , ಕಳಾ ತೀತ ನೀನು ಗುಹೇಶ್ವರಾ. ॥ 1258 ॥

ತಾತ್ಪರ್ಯ : ದ್ರವ್ಯ ನೀನು , ದ್ರವ್ಯಾರ್ಥ ನೀನು , ಪದ ನೀನು , ಪದಾರ್ಥ ನೀನು , ಸಕಲ

ನೀನು , ನಿಷ್ಕಲ ನೀನು , ಸಕಲ ನಿಷಷ್ಕಲಾತ್ಮಕ ಪರಿಪೂರ್ಣ ಶಿವನಲ್ಲದೆ, ಅನ್ಯ ಭಿನ್ನ ಭಾವ ವುಂಟೆ ? ಪ್ರಭುವಿನ, ದಿವ್ಯ ದೃಷ್ಠಿ , ನಿಸ್ಸೀಮ ದೃಷ್ಠಿ, ಅಖಂಡಿತ ಘನ ಪರಿಪೂರ್ಣವಪ್ಪ ಪರಾತ್ಪರ ಪರಶಿವನ ಇರುವಿನ ಅರುವುಳ್ಳ ದೃಷ್ಠಿ, ಈ ಸಮ್ಯಕ ದೃಷ್ಠಿ ಪ್ರಭುವಾಗಿ ಬಂದ ಅಲ್ಲಯ್ಯನ ದೃಷ್ಠಿ , ಎಲ್ಲಿ ನೋಡಿದಡಲ್ಲಲ್ಲಿ ನೀನು. ಈ ನೀನು ಅದಾವ ನೀನು ? ದೇಹೋಹಂ ಕೋಹಂ ಸೋಹಂ ಚಿದಹಂ ನಷ್ಟ ಮಾಡಿದ ನೀನು ! ದಾಸೋಹಂಭಾವ ನಷ್ಟ ಮಾಡಿದ ನೀನು ಆವಾವ ಭಾವ ತಟ್ಟದ ಮುಟ್ಟದ ಘನವರಿತು ಘನಕ್ಕೆ ಘನವಾಗಿರ್ದ ತನ್ನಂ ಮರೆಯಿಸಿ ನೀನೆಂಬುದು ತೋರಿಸುವ , ನಿರಾಡಂಬರ ನಿರಾಳ ಹೃದಯಕ್ಕೇನೆನ್ನಬೇಕು . ಇದು ನುಡಿದು ನಿಃಶಬ್ಧ ಘನದಿರುವಿನ ನೆರೆ ಅರುವಿನಲ್ಲಿ ನಿಂತ ನಿರ್ವಾಣ. ನೀನೆಂಬುದು ನಿಸ್ಸೀಮ ಈ ನಿಸ್ಸೀಮ ಸೀಮಿತವ ಕೆಡಿಸಿತ್ತು ನಾ ನೀನೆಂಬುದಕ್ಕೆ ತೆರೆಹಿಲ್ಲದ ಘನವ ಸದ್ಧಿಸಿತ್ತು .

ದ್ರವ್ಯ ನೀನು ದ್ರವ್ಯಾರ್ಥ ನೀನು , ಓಹೋ ! ಇದಾವ ದ್ರವ್ಯ ? ಇದು ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದ ನಿಸ್ಸೀಮ ದ್ರವ್ಯ , ಇಲ್ಲಿ ಕ್ಷರ ಅಕ್ಷರವೆಂಬುದಕ್ಕಿಂಬಿಲ್ಲದ ದ್ರವ್ಯ ದ್ರವ್ಯಾರ್ಥ, ಎಲ್ಲಿ ರೂಪಲ್ಲಿಯೆ ಲಿಂಗ ಸ್ವಾಯತ ಮಾಡಿದ ಪರಾತ್ಪರ ದ್ರವ್ಯ , ಪರಮ ಜ್ಞಾನ ರೂಪಿ ಮಹಾ ದರುವುಳ್ಳ ದ್ರವ್ಯ, ಮಹದರುವೆ ಮಹಾನುಭಾವವಾಗಿಹ ದ್ರವ್ಯಾರ್ಥ . ಇದು ತೆರೆಹಿಲ್ಲದ ನೀನು, ಪದ ನೀನು, ಪದಾರ್ಥ ನೀನು . ಲಿಂಗ ನೀನು, ಭಕ್ತ ನೀನು , ಸಾವಯವ ನೀನು , ನಿರವಯ ನೀನು , ಸಗುಣ ನೀನು , ನಿರ್ಗುಣ ನೀನು , ಪುರ ನೀನು , ಪುರಷ ನೀನು , ಪುರುಷೋತ್ತಮ ನೀನು , ಅಂಗ ನೀನು , ಲಿಂಗ ನೀನು, ಲಿಂಗೈಕ್ಯ ನೀನು . ಸಕಲ ನಿಷ್ಕಲ ನೀನಾದ ನಡೆ ತೆರಹಿಲ್ಲದ ನಡೆ ತೆರಹಿಲ್ಲದ ನುಡಿ , ತೆರಹಿಲ್ಲದ ಸಂಭಾಣೆ, ಈ ಮೂರೊಂದಾದ ಘನ ದಿರುವಿನ ಅರುವೆ ದ್ರವ್ಯ ನೀನು ದ್ರವ್ಯಾರ್ಥ ನೀನು , ಇದು ಸುಖರೂಪ ದ್ರವ್ಯ , ಸುಖ ರೂಪ ದ್ರವ್ಯಾರ್ಥವಾದುದರಿಂದ ಸುಖ ಸುಖವೆ! ಸುಖವೆ ಸುಖವಾದುದರಿಂದ , ತೆರೆಹಿಲ್ಲದ ದ್ರವ್ಯ ತೆರೆಹಿಲ್ಲದ ದ್ರವ್ಯಾರ್ಥ ,ತೆರೆಹಿಲ್ಲದ ಸಂಭಾಷಣೆಯ ಸುಖದಿಂದುಕ್ತವಾದ ಘನ ನಿಲುವುಳ್ಳ ಅನುಪಮ ದ್ರವ್ಯ , ಅನುಪಮ ದ್ರವ್ಯಾರ್ಥ. ಇದು ಕಾರಣ ಎಲ್ಲೆಲ್ಲೂ ನಿನ್ನನ್ನೆ ಕಂಡು ನುಡಿದು ನಿಃಶಬ್ಧ ಬ್ರಹ್ಮವಾಗಿಹ ಅನುಪಮ ಲಿಂಗ.

ಲೋಕವಾಗಲಿ , ಪರಮಾರ್ಥವಾಗಲಿ ಸೀಮಿತವಾಗಿಹುದು. ಲೋಕ ಕಂಡುದು ಪರಮಾರ್ಥ ಕಾಣಲಿಲ್ಲಿ. ಪರಮಾರ್ಥ ಕಂಡುದು ಲೋಕ ಕಾಣಲಿಲ್ಲಿ, ಕತ್ತಲೆಯಲ್ಲಿ ಕಂಡುದು , ಬೆಳಕಿನಲ್ಲಿ ಇಲ್ಲ ಬೆಳಕಿನಲ್ಲಿ ಕಂಡುದು ಕತ್ತಲೆಯಲ್ಲಿ ಇಲ್ಲ. ಕತ್ತಲೆಯಲ್ಲಿ ಕಂಡ ಹಾವು ಬೆಳಕಿನಲ್ಲಿ ಇಲ್ಲ. ಬೆಳಕಿನಲ್ಲಿ ಕಂಡ ಹಗ್ಗ ಕತ್ತಲೆಯಲ್ಲಿ ಇಲ್ಲ. ಪರಮಾರ್ಥದಲ್ಲಿ ಕಂಡ ಜ್ಞಾನ ರೂಪ ಸಚ್ಚಿದ್ದಾನಂದ ಪ್ರವೃತ್ತಿಯಲ್ಲಿ ಇಲ್ಲ. ಪ್ರವೃತ್ತಿ ರೂಪ ಪ್ರಪಂದಲ್ಲಿ ಕಂಡ ನಾಮ ರೂಪ ಪರಮಾರ್ಥದಲ್ಲಿ ಇಲ್ಲ, ಪ್ರಭು ಹೃದಯ , ಅರಿಯದರುವುಳ್ಳ ಹೃದಯ ಪ್ರಪಂಚವ ಕಾಣಲಿಲ್ಲ. ಪರಮಾರ್ಥವ ಕಾಣಲಿಲ್ಲ, ಎಲ್ಲೆಲ್ಲೂ ಅಖಂಡಿತ ಘನ ವಪ್ಪ ಪರಿಪೂರ್ಣ ಪರತತ್ಪರೂಪಿ ಪರಶಿವನ ಕಂಡನಲ್ಲದೆ ಅನ್ಯವ ಕಾಣಲಿಲ್ಲ. ಎಲ್ಲೆಲ್ಲೂ ನಿಸ್ಸೀಮವಾದ ಶಿವ ಕಂಡ. ಆ ಮಹಾಂತನ ದಿವ್ಯ ದೃಷ್ಠಿಗೆ ದ್ರವ್ಯ ಬೇರೆ ದ್ರವ್ಯಾರ್ಥ ಬೇರೆ, ಪದ ಬೇರೆ ಪದಾರ್ಥ ಬೇರೆ, ಸಕಲ ಬೇರೆ ನಿಷ್ಕಲ ಬೇರೆ ಆಗಲಿಲ್ಲ. ಪರಿಪೂರ್ಣವಾಗಿಹ ಪರಶಿವನನ್ನು ಎಲ್ಲೆಲ್ಲೂ ಕಂಡ.

ಪ್ರಭುದೇವ, ಧನವು ನೀನಾಗಿ ಕಂಡ, ಧನಪತಿ ನೀನಾಗಿ ಕಂಡ, ನೀನಾಗಿ ಕಂಡ ಧನ ನಿಸ್ಸೀಮ ನೀನಾಗಿ ಕಂಡ ಧನಪತಿ ನಿಸ್ಸೀಮ, ಇದು ತೆರೆಹಿಲ್ಲದ ಧನ, ತೆರೆಹಿಲ್ಲದ ಧನಪತಿ ಇದು ಪ್ರವೃತ್ತಿ ಧನ ನಿವೃತ್ತಿ ಧನವೆಂಬ ಖಂಡಿತ ದೃಷ್ಠಿಗಿಂಬಿಲ್ಲ, ಇದಕ್ಕೆ ಮಹಾ ಲಿಂಗದ ಧನ , ಮಹಾಲಿಂಗದ ಧನಪತಿಯ ಧನ ಎನಲಾಗದು . ಇದು ಬಚ್ಚ ಬರಿಯ ನಿರಾಳ ದ್ರವ್ಯ, ಬಚ್ಚ ಬರಿಯ ನಿರಾಳ ಧನ ಪತಿ ಏಕೆಂದರೆ

ತೆರೆಹಿಲ್ಲದ ದ್ರವ್ಯ, ತೆರೆಹಿಲ್ಲದ ದ್ರವ್ಯಾರ್ಥ.

ಪದ ನೀನು ಪದಾರ್ಥ ನೀನು, ಇದಾವ ಪದ ಇದಾವ ಪದಾರ್ಥ ? ನೀನಾದ ಪದ! ನೀನಾದ ಪದಾರ್ಥ . ಚಿದಹಮ್ಮಳಿದ ಪದ ಚಿದಹಮ್ಮಳಿದ ಪದಾರ್ಥ , ಇದು ನಾಶ ನಾಶ ರಹಿತವೆಂಬುದಕ್ಕೂ ಗಣನೆಗಿಂಬುಗೊಡದ ಪದ.ಇದು ಕ್ಷರ ಪದವೂ ಅಲ್ಲ, ಅಕ್ಷರ ಪದವೂ ಅಲ್ಲ, ಕ್ಷರಾ ಕ್ಷರವೆಂಬುದಕ್ಕೂ ಮೀರಿದ ಘನದಿರುವುಳ್ಳ ಪದ. ಮಿಕ್ಕಿ ಮೀರಿ ನಿಂದ ಘನದಿರುವುಳ್ಳ ಪದಾರ್ಥ ಇದು ಕಾರಣ ತೆರೆಹಿಲ್ಲದ ಪದ, ತೆರೆಹಿಲ್ಲದ ಪದಾರ್ಥ. ಇದು ನಿಸ್ಸೀಮವಾಗಿಹ ಪದ. ಅಂಗವು ನಿಸ್ಸೀಮವಾಗಿಹ ಪದ, ಲಿಂಗವು ನಿಸ್ಸೀಮ ವಾಗಿಹ ಪದ. ಇಲ್ಲಿ ಅಂಗ ಬೇರೆ ,ಲಿಂಗ ಬೇರೆ ಎಂಬ ಭಿನ್ನ ದೃಷ್ಠಿಗಿಂಬಿಲ್ಲ, ಇದು ಅನುಪಮ ಪದ, ಅನುಪಮ ಪದಾರ್ಥ ಪದ, ಅನುಪಮ ಪದವಾಗಿಹ ನೀನು, ಅನುಪಮ ಪದಾರ್ಥವಾಗಿಹ ನೀನು. ಸಕಲ ನೀನೆ ನಿಷ್ಕಲ ನೀನೆ, ಉಪಾದಿ ಬ್ರಹ್ಮ ನೀನೆ , ನಿರುಪಾಧಿ ಬ್ರಹ್ಮ ನೀನೆ , ಸಾಕಾರ ನೀನೆ ನಿರಾಕಾರ ನೀನೆ, ವ್ಯಕ್ತ ಬ್ರಹ್ಮ ನೀನೆ, ಅವ್ಯಕ್ತ ಬೊಮ್ಮನು ನೀನೆ, ರೂಪ ನೀನೆ, ನಿರೂಪ ನೀನೆ, ಸಗುಣ ನೀನೆ ನಿರ್ಗುಣ ನೀನೆ, ಘಟ್ಟದುಪ್ಪ, ತಿಳಿದುಪ್ಪ ಬೇರೆಯೆ ? ಸಕಲ ನಿಷ್ಕಲ ಬೇರೆಯೆ ? ಹಾಲು ಬೇರೆಯೆ ಹಾಲೊಳಿರುವ ಮಾಧುರ್ಯ ಬೇರೆಯೆ , ಲಿಂಗೈಕ್ಯದ ನಿಲುವು , ಸುಖ ಸ್ವರೂಪದ ನಿಲವು . ಸುಖೈಖ ರಸ ಸಾವಯವ ನಿರವಯ ಒಂದೆಯಾಗಿ ಕಂಡ, ಅಖಂಡಿತ ಘನವಪ್ಪ ನಿಲವು. ಅಚಲಿತ ನಿಲುವು ಅನುಪಮ ನಿಲವು, ಇದು ತಾನಾರೆಂದರಿತವರ ನಿಲವು, ಅವರಲ್ಲಿ ನಿಸ್ಸೀಮತ್ವ ಸಹಜವಾಗಿಹುದು.

ಸಕಲ ನಿಷ್ಕಲಾತ್ಮಕ ಪರಿಪೂರ್ಣ ಶಿವನಲ್ಲದೆ ಅನ್ಯಭಾವ ವುಂಟೆ ? ಎಂದು ತಮ್ಮಿರವು ಸಿದ್ಧಿಸಿಕೊಂಡ ಸ್ವತಃ ಸಿದ್ಧರು. ಇವರು ದೃಶ್ಯವೆನಲಿಲ್ಲ ದೃಶ್ಯ ಎನಲಿಲ್ಲ. ಅರಿಸಿಕೊಳ್ಳುವ ಅನಾತ್ಮ ಕಾಣಲಿಲ್ಲ. ಅರಿಯುವ ದೃಕ್ ಕಾಣಲಿಲ್ಲ, ಇವೆರಡಕ್ಕೂ ಮಿಕ್ಕಿ ಮೀರಿದ ಪರಿಪೂರ್ಣ ಪರಶಿವನನ್ನೆ ಕಂಡರೂ ಶಿವತತ್ವದ ಹೊರತಾಗಿ ಆವಾವ ಭಾವಗಳಾಗಲಿಲ್ಲ, ಭಾವಕ್ಕಗಮ್ಯವಾಗಿಹ ನಿರುಪಮ ಭಾವಿಗಳು ನಿಸ್ಸೀಮರು, ನಿಸ್ಸೀಮರು ಸೀಮಿತವ ಕಾಣರು.

ಸಕಲ ನಿಷ್ಕಲ ತತ್ವರುಗಳು ನಿಮ್ಮೊಳಗೆ ಸಾಮರಸ್ಯವ ನೆಯ್ದೆವೆಂದು, ತಮ್ಮ ತಮ್ಮ ಅಂಗದ ಮೇಲೆ ಸರ್ವ ಪದಾರ್ಥಂಗಳ ಹೆಸರಿಟ್ಟು, ಹೊತ್ತು ಕೊಂಡೈದಾವೆ ನೊಡಾ. ಅದೆಂತೆಂದೊಡೆ; ದ್ರವ್ಯಾರ್ಥಂಚ ಮಹಾದೇವೊ! ದ್ರವ್ಯ ರೂಪ ಮಹೇಶ್ವರ, ಇತಿ ಬೇಧನಂ ನಾಸ್ತಿ ಸರ್ವ ರೂಪ ಸದಾಶಿವಃ ಇಂತೆಂದುದಾಗಿ ಈ ಗುಟ್ಟು ತಿಳಿದ ಮಹಾಂತನೆಂದರೆ ಪ್ರಭು ಸಕಲ ನಿಷ್ಕಲ ತತ್ವಂಗಳು ತಮ್ಮ ತಮ್ಮ ಅಂಗದ ಮೇಲೆ ಸರ್ವ ಪದಾರ್ಥಂಗಳು ಹೆಸರಿಟ್ಟು ಹೊತ್ತು ಕೊಂಡುದು ಏತಕ್ಕಾಗಿ ? ನಿಮ್ಮೊಳ ಸಮರಸವ ನೆಯ್ದುವದಕ್ಕಾಗಿ ಅದು ಸಾಕಾರವಾಗಿರಲಿ ನಿರಾಕಾರ ವಾಗಿರಲಿ, ಈ ತತ್ವಂಗಳು ತಮ್ಮ ಅಂಗದ ಮೇಲೆ ನಾನಾ ಹೆಸರು ಇಟ್ಟು ಕೊಂಡುದು ನಿಃಶಬ್ಧ ಬ್ರಹ್ಮದಲ್ಲಿ ಸಮರಸ ವಾಗುವದಕ್ಕೋಸುಗುವಲ್ಲದೆ ಅನ್ಯವಿಲ್ಲ , ಈ ರಹಸ್ಯ ತಿಳಿದಾತ ಪ್ರಭು. ದ್ರವ್ಯಾರ್ಥವು ಮಹಾದೇವವ! ದ್ರವ್ಯ ರೂಪ ಮಹೇಶ್ವರ ಭೇದವೆಂಬುದು ತಿಲಾಂಶವು ಇಲ್ಲ.ಸರ್ವ ರೂಪ ಸದಾಶವಃ ರೂಪವು . ಇಂತಾದ ಕಾರಣ ನಾದ ನೀನೆ ಬಿಂದು ನೀನೆ ಕಳಾ ನೀನೆ ಕಳಾತೀತ ನೀನೆ ಎಂದು ತನ್ನ ನಿಸ್ಸೀಮತ್ವವನ್ನೆ ಸಿದ್ಧ ಮಾಡಿದ ಘನಕ್ಕೆ ಘನ , ಈ ಘನವಂತನಿಗೆ ನಾದ ಬೇರಾಗಲಿಲ್ಲ, ಬಿಂದು ಬೇರಾಗಲಿಲ್ಲ, ಕಳೆಯು ಬೇರಾಗಲಿಲ್ಲ, ಕಳಾತೀತ್ಮವು ಬೇರಾಗಲಿಲ್ಲ, ಏಕೆಂದರೆ ಪ್ರಭುವಿನದು ತೆರಹಿಲ್ಲದ ಘನ ದೃಷ್ಠಿ, ನಾದವು ತೆರೆಹಿಲ್ಲದ ಘನವಾಗಿ ಕಂಡ , ಬಿಂದು ಕಲೆ ತೆರೆಹಿಲ್ಲದ ಘನವಾಗಿ ಕಂಡ. ಕಳಾತೀತವು ತೆರೆಹಿಲ್ಲದ ಘನವಾಗಿ ಕಂಡನು , ಏನನ್ನು ಕಂಡರೂ ತೆರಹಿಲ್ಲದ ಘನವಾಗಿ ಕಂಡ ನೀನೆಂಬುದು ತೆರೆಹಿಲ್ಲದ ಘನವಾಗಿ ಕಂಡ ಗುಹೇಶ್ವರಾ ಎಂದು ಪ್ರಭು ಬಿತ್ತರಿಸಿದುದು.

50

ತೆರೆಹಿಲ್ಲದ ಘನವ ಅರಸಿಹೆ ನಂದಡೆ ಕಾಣಬಾರದು ,
ಅದೇನು ಕಾರಣ ವೆಂದಡೆ, ಆ ಅರಸುವಾತನು ತಾನೆ ವಸ್ತುವಾದ ಕಾರಣ.
ವಿಚಾರಕ್ಕೆ ಬಾರದುದು ನಿಶ್ಚಲ ಬ್ರಹ್ಮ ವೆಂದುದು ಗುಹೇಶ್ವರ. ॥ 1244 ॥

ತಾತ್ಪರ್ಯ : ತೆರೆಹಿಲ್ಲದ ಘನವ ನರಸಿಹೆ ನೆಂಡಡೆ ಕಾಣಬಾರದು : ಪ್ರಭುದೇವ ತೆರೆಹಿಲ್ಲದ ಘನವ ನರಸಿಹೆ ನೆಂದಡೆ ಕಾಣಬಾರದು ಎಂದು ಬಿತ್ತರಿಸಿದುದು ನೋಡಿದಡೆ, ತೆರೆಹಿಲ್ಲದ ಘನವ ಹುಡಕ ಹೋದವರು , ಕಂಡು ಬಂದತೆ ಕಾಣುತ್ತದೆ . ಹುಡಕ ಹೋದವರು ಆರು ? ಬಯಲು ತಾನಿದ್ದು, ತನ್ನ ನೋಡ ಹೋದುದು ? ಕಣ್ಣುತಾನಿದ್ದು ಕಣ್ಣು ಹುಡಕ ಹೋದಂತೆ, ಕಣ್ಣು ತಾನಿದ್ದುದರಿಂದ ತಾನೆ ಎಲ್ಲವನ್ನ ಕಾಣುತ್ತದೆ , ಕಾಣುವದರಿಂದ ತಾನು ಕಣ್ಣು ತನ್ನ ಘನತ್ವ ತಿಳಿಯದೆ ಕಣ್ಣು ಕಣ್ಣು ಎಂದು ಹುಡುಕಿದರೆ ಕಣ್ಣು ಸಿಗಬಹುದೆ?

ತೆರೆಹಿಲ್ಲದ ಘನವ ನರಸಿಹೆ ನೆಂದಡೆ ಕಾಣಬಾರದು, ತಾನು ಕಲ್ಪಿತ ಪುರುಷನಾಗಿ ತೆರೆಹಿಲ್ಲದ ಘನವ ಹುಡುಕಿದರೆ ಕಾಣದುದು . ಏಕೆಂದರೆ ತೆರೆಹಿಲ್ಲದ ಘನವು . ಕಲ್ಪಿತ , ಅಕಲ್ಪಿತನೆಂಬುದಕ್ಕೂ ಎಡೆಗೊಡದ ಘನ ; ಏನಾಗಿ ಹುಡುಕುವುದು ? ಕೆಲಬರು ಸೋಹಂ ಸೋಹಂ ಎಂದು ಹುಡುಕ ಹೋದುವರು, ಕೆಲಬರು ಶಿವೋಹಂ ಶಿವೋಹಂ ಎಂದು ಹುಡಕ ಹೋಗಿಹರು , ಕೆಲಬರು ತತ್ವಮಸಿ, ಅಯಮಾತ್ಮ ಬ್ರಹ್ಮ ಪ್ರಜ್ಞಾನಂ ಬ್ರಹ್ಮ ಅಹಂ ಬ್ರಹ್ಮಾಸ್ಮಿ ಎಂದು , ಇನ್ನು ನಾನಾ ಬಗೆಯಿಂದ ಹುಡುಕ ಹೋಗುವರು . ತೆರೆಹಿಲ್ಲದ ಘನವು ಹುಡುಕಿದರೆ ಶಿಗದ ಪದ , ಅರಿತವರಿಗೆ ತಾನೆ ಆಗಿಹ ತನ್ನ ಪದ ಅಚಿಂತ್ಯ ಪದ ತಾನಿದ್ದು, ತನ್ನನ್ನು ಆರಾದರೂ ಹುಡಕ ಹೋಗಬುದೆ ? ತೆರೆಹಿಲ್ಲದ ಘನವೆ ತಾನಿದ್ದು ಮಹಾವಾಕ್ಯ ಶ್ರವಣ ಮಾಡಿ ಮಹಾವಾಕ್ಯದಲ್ಲಿ, ತನ್ನ ಹುಡುಕುವವನಾಗಿಹನು . ಮನನ ನಿಧಿ ಧ್ಯಾಸಗಳ ಮಾಡಿ ತಾನಾಗತ್ತಿಹನು . ತಾನಿದ್ದು ಮಹಾವಾಕ್ಯಾದಿಗಳ ಶ್ರವಣಾದಿಗಳ ಮಾಡಿ , ಮಾಡಿ ತನಗೆ ತಾನಾಗಲು ಬರುವುದೆ ? ಎಂದೆಂದೂ ತಾನಾಗಿದ್ದವನು ತಾನಿಲ್ಲದುದು ಆವಾಗ ? ಮಹಾವಾಕ್ಯ ಶ್ರವಣ ಮಾಡದ ಮುನ್ನ ತಾನಿದ್ದಿಲ್ಲವೆ? ತಾನು ನಿರಂತರ ಇದ್ದವನು ತನ್ನಿಂದ ತಾನು ತನ್ನನ್ನು ಯತಾರ್ಥ ತಿಳಿದಾಗ, ತನ್ನ ತೆರೆಹಿಲ್ಲದ ಘನತ್ವ ಸಿದ್ಧಿಸುವದು.

ತೆರೆಹಿಲ್ಲದ ಘನವದು ವಾಙ್ಮನಗಳಿಗೆ ಅವಕಾಶ ಕೊಡದ ಘನ , ನುಡಿಯುವದಕ್ಕೂ ನೆನೆಯುವದಕ್ಕೂ ನಿರ್ಧರಿಸುವದಕ್ಕೂ ಚಿಂತಿಸುವದಕ್ಕೂ ಇಂಬು ಕೊಡದ ಘನ, ಅದು ಅವಾಂತರವಾಕ್ಯ ಮಹಾವಾಕ್ಯಕ್ಕು ಇಂಬು ಕೊಡದ ಘನ . ವೇದಕ್ಕೂ ಅವಕಾಶ ಕೊಡದ್ದರಿಂದ ವೇದ ವೇಧಿಸಲರಿಯದೆ ಕಟ್ಟಿತ್ತು ಎಂದು ಹೇಳಿಹರು, ಶೃತಿಗೆ ಅವಕಾಶ ಕೊಡದ ಘನವಾದ್ದರಿಂದ ಶೃತಿಗಗೋಚರವೆಂದು ಹೇಳಿಹರು.

ತೆರೆಹಿಲ್ಲದ ಘನ ಗುರುವಿಡಿದ ಅರುವಿಂಗೂ ಅವಕಾಶ ಕೊಡದ ಘನ, ಲಿಂಗ ವಿಡಿದ ಅರುವಿಂಗೂ ಅವಕಾಶ ಕೊಡದ ಘನ ವಾದ್ದರಿಂದ ಲಿಂಗಾನುಸಂದಾನಕ್ಕೂ ಇಂಬು ಕೊಡದ ಘನ, ಸ್ವರೂಪ ಚಿಂತನಕ್ಕೂ ಅವಕಾಶ ಕೊಡದ ಘನ , ಪ್ರಣವಾನುಸಂದಾನಕ್ಕೆ ಇಂಬು ಕೊಡದ ಘನ ವಾದ್ದರಿಂದ , ಪ್ರಣವ ಪ್ರಭೆಯ ಮೇಲಣ ಪರಂಜ್ಯೋತಿ ತಾನಾರೆಂದರಿದವನು , ತೆರೆಹಿಲ್ಲದ ಘನ ವಾಗಿಹನು . ಅದೇನು ಕಾರಣ ವೆಂದಡೆ ಅರಸುವಾತನು ತಾನೆ ವಸ್ತುವಾದ ಕಾರಣ, ವಿಚಾರಕ್ಕೆ ಬಾರದುದು.

ಅರಸುವಾತ ತಾನಲ್ಲ ಏಕೆಂದರೆ , ಅರಸುವಾತ ತನ್ನ ಅರಿಯಲಿಲ್ಲ , ಅರಿಯದ ಕಾರಣ ತನ್ನ ಹುಡುಕುವದಕ್ಕೆ ತಾ ಕಾರಣ . ತ್ವಂಪದ ನಾನಲ್ಲ ತ್ವಂಪದ ಸಾಕ್ಷಿ ನಾನು ಎನ್ನುತ್ತಾನೆ, ತತ್ಪದ ಈಶ್ವರನಲ್ಲ, ತತ್ಪದ ಸಾಕ್ಷಿಯೆ ಪರಮಾತ್ಮ ಎನ್ನುತ್ತಾನೆ . ತ್ವಂಪದ ಸಾಕ್ಷಿಯೆ ತತ್ಪದ ಸಾಕ್ಷಿ, ತತ್ಪಧ ಸಾಕ್ಷಿ ಒಂದಾದುದ ಅಸಿ ಪದ ಸಿದ್ಧವಾದಂತೆ . ಅಸಿ ಪದ ವಾದರೂ ಸಾಕ್ಷಿ ಪದದಿಂದ ಸಿದ್ಧವಾದುದು, ಇದು ಕಾರಣ ಅಸಿ

ಪದ ನಾನಲ್ಲ ಅಸಿ ಪದಕ್ಕೆ ಲಕ್ಷನೆಂದು. ಹೀಗೆ ಒಂದು ಅಲ್ಲ ಮಾಡಿ, ಒಂದನ್ನು ಅಹುದು ಮಾಡುತ್ತಾನೆ. ಅದು ತೆರೆಹಿಲ್ಲದ ಘನ ಹೇಗಾಗುವದು.

ಅಯಮಾತ್ಮ ಬ್ರಹ್ಮನೆಂದು ಪಂಚಕೋಶವಾಗಿಹ, ಅನ್ನಮಯ ಪ್ರಾಣಮಯ ಮನೋಮಯ ವಿಜ್ಞಾನಮಯ ಆನಂದ ಮಯ ಹೀಗೆ ಪಂಚಕೋಶಗಳ ಸುಳ್ಳು ಮಾಡಿ ಅದಕ್ಕೆ ಸಾಕ್ಷಿಯಾದ ಆತ್ಮನೆ ನಾನು ಎಂದು ನಿರ್ಧರಿಸುವದು, ಇದು ಕೂಡ ವಿಚಾರದಿಂದುಕ್ತವಾದುದು. ಇಲ್ಲದ ಪಂಚಕೋಶಗಳ ಕಲ್ಪಿಸಿ ಅದಕ್ಕೆ ಸಾಕ್ಷಿಯೆಂಬ ಆತ್ಮನ ಮಾಡಿ, ಒಂದು ಕ್ಷರ ಒಂದು ಅಕ್ಷರ ಎಂದು ಭಾವಿಸುವದು, ಭಾವಕ್ಕಗಮ್ಯವಾದುದು ತೆರೆಹಿಲ್ಲದ ಘನವು. ಇದು ಕಾರಣ ಅಕ್ಷರ ರೂಪಿ ಅಯಮಾತ್ಮ ಬ್ರಹ್ಮ ಅಕ್ಷರಾಕ್ಷರವೆಂಬುದಕ್ಕೂ ಮೀರಿದ ಘನ, ತೆರೆಹಿಲ್ಲದ ಘನ, ಅದು ಕ್ಷರವೆನ್ನುವುದಕ್ಕೂ ಇಂಬುಗೊಡದ ಘನ. ಅಕ್ಷರವೆಂಬುದಕ್ಕೂ ಇಂಬುಗೊಡದ ಘನ, ತೆರೆಹಿಲ್ಲದ ಘನ ಅದು ಅಯಮಾತ್ಮ ಬ್ರಹ್ಮವಾಗದು.

ಪ್ರಜ್ಞಾನಂ ಬ್ರಹ್ಮ, ಅರುವೆ ಬ್ರಹ್ಮವೆಂದು ಅರುವಿನ ಘನವ ಇಲ್ಲಿ ಹೇಳಿದೆ. ಇದು ನಿರಂಜನ ನಿಜ ಚಿದ್ರೂಪವಾಗದು. ನುಡಿಯಿಂದುಕ್ತವಾದುದು ನುಡಿಗೆಡೆಗೊಡದ ಘನ ಹೇಗಾಗುವದು. ಕಲ್ಪಿತ ಅರುವು ಅಕಲ್ಪಿತ ಘನವಾಗದು. ಅರುವಿಂಗರುವಾಗಿಹ ಘನವು ಅದು ಪ್ರಜ್ಞಾನಂ ಬ್ರಹ್ಮವೆಂದು ನುಡಿಯಲಿಲ್ಲ.ಆವುದು ಅರುವಿಂಗರು ವಾಗಿಹ ಘನ ಅದು ನಿರಂತರ ಅಪಾರ ನಿಸ್ಸೀಮ ಅದು ಚಿದಹಮ್ಮಿನಿಂದುಕ್ತವಾದುದಲ್ಲ, ಅದು ಅಹಮಿಲ್ಲದ ಚಿದ್ಘನ, ತಾನೆ ತಾನಾದ ಚಿದ್ಘನವು ಅದು ಪ್ರಜ್ಞಾನಂ ಬ್ರಹ್ಮವೆಂಬ ಹೆತ್ತರಿವು ಆಗದು, ಏಕೆಂದರೆ ಬೋಧಕ್ಕಿಂತ ಮುನ್ನವೆ ಇದ್ದುದು ಅದನ್ನು ನುಡಿಯಿಂದ ಬೋಧಿಸಿದುದು ಹೇಗೆ? ಬೋಧದ ಬೋಧ ಅದನ್ನು ಬೋಧಿಸಿದುದು ಹೇಗೆ? ಅದು ನಿರಂತರ ಅಲ್ಲಿ ಬೋಧವೂ ಇಲ್ಲ ಅಬೋಧವೂ ಇಲ್ಲ. ಬೋಧಾ ಬೋಧದ ಮಿಶ್ರವೂ ಇಲ್ಲ ಅದನ್ನು ಪ್ರಜ್ಞಾನಂ ಬ್ರಹ್ಮವೆಂದು ಹೇಗೆ ಹೇಳುವದು.

ಕೆಲಬರು ಅಹಂಬ್ರಹ್ಮಾಸ್ಮಿ ಎಂದು ನುಡಿಯುತ್ತಿಹರು, ಬ್ರಹ್ಮಕ್ಕೆ ನಾ ಬ್ರಹ್ಮವೆಂಬುದು ಫಲಿಸದಾಗಿ ಬ್ರಹ್ಮ ತಾ ಬ್ರಹ್ಮ ವೆನ್ನಲಿಲ್ಲ ಬ್ರಹ್ಮ ಬ್ರಹ್ಮವೆಂಬುದು ಬ್ರಹ್ಮವಾಗದು, ನಾನು ಬ್ರಹ್ಮನೆಂಬುದು ಚಿದಹಮ್ಮಿನ ಜ್ಞಾನ, ಅಹಮಿಲ್ಲದ ಚಿದ್ಘನ ಚಿದಹಮ್ಮಿನಿಂದುಕ್ತವಾದುದು ಹೇಗಾಗುವದು ? ಅಲ್ಲಿ ಭಾವಕ್ಕಿಂಬಿಲ್ಲ ನುಡಿಗೆಡೆಯಿಲ್ಲ ಶಬ್ದ ಮೀಸಲವಾದುದು , ತೆರೆಹಿಲ್ಲದ ಘನವು , ತೆರೆಹಿಲ್ಲದ ಘನವದು ನನ್ನ ನಾ ಅರಿಯೆನೆಂಬ ಮರವಿಂಗೂ ಅವಕಾಶ ಕೊಡದ ಘನ. ನನ್ನ ನಾ ಅರಿತೆನೆಂಬ ಅರುವಿಂಗೂ ಅವಕಾಶ ಕೊಡದ ಘನ , ಖಂಡಾ ಖಂಡ ಸಂಯೋಗವಿಲ್ಲದ ಅಖಂಡಿತ ಘನ ಪೂರ್ಣವಪ್ಪ ತನ್ನರುವೆ ಅರುವೆಂದುದರಿದುದು ತೆರೆಹಿಲ್ಲದ ಘನ, ಅದಾವ ಮರವು, ಅದಕ್ಕಾವ ಅರುವು ಇವೆರಡು ತೋರಿ ಇಲ್ಲವಾಗುವವು . ಒಂದು ಬದ್ಧ ದೆಶೆಯುಳ್ಳ ಬುದ್ಧಿ ಇನ್ನೊಂದು ಮುಕ್ತನೆಂಬ ದೆಶೆಯುಳ್ಳ ಬುದ್ಧಿ ತೆರೆಹಿಲ್ಲದ ಘನವು ಬದ್ಧ ದೆಶೆಯುಳ್ಳ ಬುದ್ಧಿಗೂ ಅವಕಾಶ ಕೊಟ್ಟುದಿಲ್ಲ, ಮುಕ್ತ ದೆಶೆಯುಳ್ಳ ಬುದ್ಧಿಗೂ ಅವಕಾಶ ಕೊಟ್ಟುದಿಲ್ಲ, ಅದು ನಿಸ್ಸೀಮವಾದುದರಿಂದ ತೆರೆಹಿಲ್ಲದ ಘನವೆಂದು ಹೇಳಿಹರು.

ಇದು ವಿಚಾರಕ್ಕೆ ಬಾರದುದು, ನಾಮರೂಪದಿಂದುಕ್ತವಾದುದು ಅವಿಚಾರ. ಅಸ್ತಿ, ಭಾತಿ, ಪ್ರಿಯವೆಂಬುದು ವಿಚಾರವು ನಾಮರೂಪದಿಂದುಕ್ತವಾಗಿಹ ಅವಿಚಾರ ಖಂಡದಿಂದುಕ್ತವು , ಅಸ್ತಿ, ಭಾತಿ, ಪ್ರಿಯವೆಂಬು ವಿಚಾರ ಅಖಂಡದಿಂದುಕ್ತವು. ಖಂಡಾ ಖಂಡ ಸಂಯೋಗ ವಿಲ್ಲದ ಅಖಂಡಿತ ಘನ.ತೆರೆಹಿಲ್ಲದ ಘನ ಅದು ಅವಿಚಾರಕ್ಕೂ ಅವಕಾಶ ಕೊಡದ್ದು ವಿಚಾರಕ್ಕೂ ಅವಕಾಶ ಕೊಡದ್ದರಿಂದ ವಿಚಾರಕ್ಕೆ ಬಾರದುದು ಎಂದು ಹೇಳಿಹರು.

ನಿಶ್ಚಲ ಬ್ರಹ್ಮ ವೆಂಬುದು ಗುಹೇಶ್ವರ : ನಿಶ್ಚಲ ಬ್ರಹ್ಮವದು ಮನದ ಸಾಧನೆಯಿಂದ ನಿಶ್ಚಲ

ಬ್ರಹ್ಮ ವಾದುದು . ಬುದ್ಧಿಯು ನಿರ್ಣಯ ಮಾಡಿ ನಿಶ್ಚಲ ಬ್ರಹ್ಮ ಮಾಡಿದುದಲ್ಲ. ನಿಶ್ಚಲ ಬ್ರಹ್ಮ ವಾಙ್ಮನೋತೀತವು , ಅಚಿಂತ್ಯವು ಶೃತಿಗಗೋಚರವು ಆದುದು , ಕಲ್ಪಿತ ಪುರುಷ ಬಂಜಿ ಮಗ, ಇವನೆಂತು ನಿಶ್ಚಲವಾಗುವನು . ಗಗನಕ್ಕೆ ಆರಾದರೂ ನಿಶ್ಚಲ ಮಾಡಿರುವರೆ ? ವಾಯು ಎಷ್ಟು ನಿಸ್ಪಂದವಾಗಿದ್ದರೂ ಗಗನದಂತೆ ನಿಶ್ಚಲವಾಗಬಹುದೆ? ಗಗನ ಚಲಿಸುವದು ಕಂಡಿಲ್ಲ ವಾಯುವಿಂಗೆ ನಿಶ್ಚಲ ಕಂಡಿಲ್ಲ. ಹಾಗೆ ಕಲ್ಪಿತನಾದವಂಗೆ ನಿಶ್ಚಲ ಬ್ರಹ್ಮ ಗೊತ್ತಾಗದು. ಆವುದು ಅನುಪಮವಾದುದು ಅದು ತೆರೆಹಿಲ್ಲದ ಘನವಾಗಿದೆ. ಅದುವೆ ನಿಶ್ಚಲ ಬ್ರಹ್ಮ ಬಾಗಿದೆ. ಅರಿದರಿದು ನೋಡುವುಡೆ ತಾನು ಸ್ವಭಾವತಃ ನಿಶ್ಚಲ ಬ್ರಹ್ಮವೆ ಇದ್ದದ್ದು ,ಇದು ಕಾರಣ ನಿಶ್ಚಲ ಬ್ರಹ್ಮವೆಂಬುದು ಗುಹೇಶ್ವರ ನೆಂದಿಹರು.

51

ತನ್ನ ತಾನರಿದ ಬಳಿಕ ಅನ್ಯವಿಲ್ಲ , ಕಾಬ ಮರವು ನಷ್ಟವಾಯಿತ್ತು ,
ಆ ಮರವೆ ನಷ್ಟವಾದ ಬಳಿಕ ಅರುವಿನ ಮರವೆಯು ,
ನೆರೆ ಮರೆದ ಬಳಿಕ ಅಲ್ಲಿ ನಿಶಬ್ಧ ವಾಯಿತ್ತು ಗುಹೇಶ್ವರಾ. ॥ 1207 ॥

ತಾತ್ಪರ್ಯ : ತನ್ನ ತಾನರಿದ ಬಳಿಕ ಅನ್ಯವಿಲ್ಲ : ಅರಿಯದ ಮುನ್ನ ಕಾಂಬಡೆಲ್ಲವು ಇತ್ತು. ಅರಿತ ಬಳಿಕ ಕಾಂಬುಡೆಲ್ಲ ತಾನೆ ತಾನಿಲ್ಲದ ಮುನ್ನ ಗುರು ವೆಲ್ಲಿಯದೊ ಲಿಂಗ ವೆಲ್ಲಿಯದೊ ಜಂಗಮ ವೆಲ್ಲಿಯದೊ ಪ್ರಸಾದ ವೆಲ್ಲಿಯದೊ ಸ್ವಯಂ ವೆಲ್ಲಿಯದೊ ಪರವೆಲ್ಲಿಯದೊ ? ಗುರು ವೆಂದರಿದವನು ತಾನೆ , ಲಿಂಗ ವೆಂದರಿದವನು ತಾನೆ , ಜಂಗಮ ವೆಂದರಿದವನು ತಾನೆ , ಪ್ರಸಾದ ವೆಂದರಿದವನು ತಾನೆ, ಸ್ವಯ ವೆಂದರಿದವನು ತಾನೆ, ಪರವೆಂದರಿದವನು ತಾನೆ ಇವೆಲ್ಲವು ಹೆತ್ತರಿವು. ಸ್ವಯಂ ಜ್ಯೋತಿ ತಾನೆ ಕಲ್ಲೇಶ್ವರಾ . ಇದು ತನ್ನ ತಾನರಿದ ಚಿನ್ಹೆ. ತಾನು ಘನಕ್ಕೆ ಘನವಾದ ಚಿನ್ಹೆ , ಬೆಳಗಿನೊಳಗೆ ಬೆಳಗಾಗಿದ್ದು ಶಬ್ಧ ಮಗ್ಧನಾದ ಚಿನ್ಹೆ ಅರಿದರುಹಿಸಿಕೊಂಬುದಕ್ಕೂ ಮೀರಿದ ಘನವರಿತು ಘನಕ್ಕೆ ಘನವಾದ ಚಿನ್ಹೆ . ಅರಿಯದರುವುತಾನಾದ ಚಿನ್ಹೆ ಆನು (ಗುರು) ಮಾಡಲು ಗುರುವಾದೆನಲ್ಲದೆ, ಗುರು ಮಾಡಲು ಆ ನಾದೆನೆ? ಗುರು ಮಾಡಲು ಲಿಂಗ ವಾಯಿತ್ತಲ್ಲದೆ, ಲಿಂಗ ಮಾಡಲು ಗುರು ವಾದನೆ ? ಈ ಉಭಯ ಕುಳ ಸ್ಥಳದರಿವು , ಕೂಡಲ ಚೆನ್ನಸಂಗಾ ನಿಮ್ಮ ಶರಣ ಬಲ್ಲ. ತಾನೆಂದರೆ ಘನವಲ್ಲ ಘನಕ್ಕೆ ಘನ ತಾನು , ಗುರು ಘನ , ಜಂಗಮ ಘನ , ಪ್ರಸಾದ ಘನ, ಸ್ವಯವೆಂಬುದು ಘನ , ಪರವೆಂಬುದು ಘನ , ಇವು ಹೆತ್ತರಿವು . ತನ್ನಿಂದ ತಿಳಿಸಿಕೊಳ್ಳತಕ್ಕವುಗಳು ತಾನೆ ಇವುಗಳನ್ನು ಅರಿಯುವವನಾಗಿದ್ದಾನೆ.

ಗುರುವು ಅರುವು , ಲಿಂಗವು ಅರುವು ಜಂಗಮವು ಅರುವು, ಪ್ರಸಾದವು ಅರುವು , ಸ್ವಯವೆಂಬುದು ಅರುವು , ಪರವೆಂಬುದು ಅರುವು, ತಾನು ಅರುವಿನ ಅರುವು ಇದು ಕಾರಣ . ತಾನು ಘನಕ್ಕೆ ಘನವಾಗಿ , ಅರುವಿನ ಘನವ ತಿಳಿಸಿ ಗುರು ವೆನಿಸಿತ್ತು .ಅರುವಿಂಗರುವಾದುದು ನೆಲಸಿ ಲಿಂಗ ವಾಯಿತ್ತು. ಅರಿಯದರುವೆ ಚರಿಸಿ ಜಂಗಮ ವೆನಿಸಿತ್ತು . ಅರಿಯದರುವಿನ ಸ್ವಾನುಭಾವವೆ ಪ್ರಸಾದ ವೆನಿಸಿತ್ತು . ಈ ಅರುವೆ ಸ್ವಯವಾಗಿತ್ತು , ಪರ ವೆನಿಸಿತ್ತು , ಇದನ್ನು ಅರಿವುಡೆ ತಾನೆ ಗುರುವಿನ ಗುರು , ಜ್ಞಾನದ ಜ್ಞಾನ ,ಚಿತ್ತದ ಚಿತ್ ಆಗಿರುವದರಿಂದ ಗುರು ಶಿಷ್ಯರ ವಿಚಾರವು ಹೋಯಿತು , ಉಪದೇಶವು ಹೋಯಿತ್ತು , ತಾನೆ ನಿರಂತರ ವಾಗಿರುವ ಮಂಗಳಮಯ ಪರಮ ಸತ್ಯ ಗುರುವೆಂದರಿದವನು ತಾನೆ ಎಂದು ಹೇಳಿದೆ.

ಲಿಂಗಂವೆದರಿದವನು ತಾನೆ , ಲಿಂಗವು ಮೌನ, ಲಿಂಗದರಿವು ಮೌನ . ಲಿಂಗವು

ಮಾತಾಡುವದಿಲ್ಲ. ಈ ಮೌನ ಸಂಜ್ಞೆಯುಳ್ಳ ಲಿಂಗದರಿವು ಮಾತಾಡುವದಲ್ಲ, ಲಿಂಗ ಸಂಜ್ಞೆಯುಳ್ಳ ಮೌನ ದರುವನ್ನು ತಾನು ಮೌನವಾಗಿ ಅರಿಯುವವ ನಾದುದುರಿಂದ ತಾನು ಲಿಂಗದ ಲಿಂಗವಾಗಿದ್ದಾನೆ. ಮೌನದ ಮೌನವಾಗಿದ್ದಾನೆ. ಅದು ಮೌನ ಮುದ್ರಿತವಾಗಿ ಬೆಳಗಿದರೆ ತಾನು ಮೌನದ ಮೌನವಾಗಿ ಮೌನ ಮುದ್ರಿತ ಲಿಂಗವನ್ನು ಅರಿಯುವವನಾದ್ದರಿಂದ, ಅದು ನಿಃಶಬ್ಧ ಸಂಜ್ಞೆ ಲಿಂಗವಾದರೆ ತಾನು ನಿರಂತರವಾಗಿರುವ ಮಂಗಳಮಯನಾಗಿಹನು, ಇದು ಕಾರಣ ತಾನು ಲಿಂಗದ ಲಿಂಗವಾಗಿಹನು.

ಜಂಗಮವೆಂಬುದು ಸಮ ಗೋಷ್ಠಿ ಜಂಗಮ, ಸಮ ದೃಷ್ಠಿ ಜಂಗಮ, ಸಮರಸ ಜಂಗಮ ಸಮಗೋಷ್ಠಿಯ ತಾನೆ ಅರಿಯುವವನಾಗಿಹನು, ತಾನೆಂದರೆ ಸಮಗೋಷ್ಠಿಗೆ ಮೀರಿದ ಘನ, ಸಮ ದೃಷ್ಠಿ ಎಂಬುದಕ್ಕು ಮೀರಿದ ಘನ ನಾದುದರಿಂದ ತಾನೊಂದೆ ಪರಮ ಸತ್ಯ. ತನ್ನೊಳ ಎರಡೆಂಬುದಿಲ್ಲ, ವಾದ್ದರಿಂದ ಇವೆರಡನ್ನೂ ಸಮ ಮಾಡುವದು ತನ್ನೊಳ ಇಲ್ಲ. ಇಲ್ಲ ಇಲ್ಲವೆಂಬುದು ಸಹ ಇಲ್ಲವಾಗಿರುವಾಗ ತಾನು ಅನುಪಮ ನಾದುದರಿಂದ ಜಂಗಮದ ಜಂಗಮ ತಾನೆ.

ಪ್ರಸಾದ ವೆಂಬುದು ಪರಮ ಜ್ಞಾನ, ಪರಮಾಮೃತ, ವಾಙ್ಮನೋತೀತ, ಇದುವೆ ಗುರು ಲಿಂಗ ರೂಪವಾಗಿಹುದು. ಇದನ್ನು ತಾನೆ ಅರಿಯುವವ ನಾದುದರಿಂದ ತಾನು ತೆರೆಹಿಲ್ಲದ ಘನ. ಇದು ಕಾರಣ ಪ್ರಸಾದದ ಪ್ರಸಾದಿ ತಾನೆ, ಪರಮಜ್ಞಾನ ವೆನ್ನಲಿ, ಪರಮಾಮೃತ ವೆನ್ನಲಿ, ವಾಙ್ಮನೋತೀತ ವೆನ್ನಲಿ ಇವು ಹೆತ್ತರಿವು, ನುಡಿಗೊಳಪಟ್ಟುದೆಲ್ಲವೂ ಹೆತ್ತರಿವು. ಈ ಹೆತ್ತರಿವು ತಾನೆ ಅರಿಯುವವ ನಾದುದರಿಂದ ನಿರುಪಮನು. ನಿರುಪಮನಾದ ತನಗೆ ಗುರು ವೆನ್ನಲು ಬರದು, ಲಿಂಗ ವೆನ್ನಲು ಬರದು ಜಂಗಮ ವೆನ್ನಲು ಬರದು ಪ್ರಸಾದ ವೆನ್ನಲು ಬರದು ಇವುಗಳೆಲ್ಲವು ತಾನೆ ಅರಿಯುವವನಾದುದರಿಂದ ಸ್ವಯ ವೆಂದರೆ ತಾನು ಸ್ವಯ ವೆಂಬುದು ತನ್ನಿಂದ ತಿಳಿಯುವವನಾದುದರಿಂದ ಸ್ವಯ ವೆಂಬುದು ಹೆತ್ತರಿವು ಆಯಿತು, ತನ್ನಿರುವು ಪರವಾಯಿತ್ತು ಶ್ರೇಷ್ಠವಾಯಿತ್ತು, ಶ್ರೇಷ್ಠವೆಂಬ ಘನವು ಇದು ಕೂಡಾ ತನ್ನಿಂದ ತಿಳಿಸಿಕೊಳ್ಳುವದೆ ಆಯಿತ್ತಲ್ಲದೆ ಸ್ವಯಂ ಜ್ಯೋತಿ ಆಗಲಿಲ್ಲ . ಸ್ವಯಂ ಜ್ಯೋತಿ ನುಡಿಗೆಡಗೊಡದ ಘನದ ಇರುವು, ತನ್ನಿಂದ ತಾನರಿತ ಅರುವರಿತ ಅರುವು. ಇದುವೆ ತನ್ನ ತಾನರಿದ ಬಳಿಕ ಅನ್ಯವಿಲ್ಲ ವೆಂದಿಹದು . ಸ್ವಯಂ ಜ್ಯೋತಿ ಯಾದುದು ನಾನು ಸ್ವಯಂ ಜ್ಯೋತಿ ಎಂದು ನುಡಿಯಲಿಲ್ಲ, ಅರಿವುಡೆ ಸ್ವಯಂ ಜ್ಯೋತಿ ತಾನೆ, ತನ್ನ ಹೊರ್ತು ಅನ್ಯವಿಲ್ಲ, ಗುರು ವೆಂಬುದಿಲ್ಲ ಲಿಂಗ ವೆಂಬುದಿಲ್ಲ, ಜಂಗಮ ವೆಂಬುದಿಲ್ಲ, ಪ್ರಸಾದ ವೆಂಬುದಿಲ್ಲ, ಸ್ವಯ ಪರ ವೆಂಬುದಿಲ್ಲ, ತಾನೆ ತೆರೆಹಿಲ್ಲದ ಘನ ವೆಂದು ಹೇಳಿಹರು.

ಆ ಮರವೆಯ ನಷ್ಟವಾದ ಬಳಿಕ ಅರುವಿನ ಮರೆವೆಯ ನೆರೆ ಮರೆದ ಬಳಿಕ ಅಲ್ಲಿ ನಿಶಬ್ಧ ವಾಯಿತ್ತು. ಕಾಂಬ ಮರವೆ ನಷ್ಟವಾಯಿತ್ತು, ಕಾಂಬ ಮರವು ನಷ್ಟವಾಗಿ ಅರುವಿನ ಘನವರಿದ ಬಳಿಕ ನಿಶಬ್ದವಾದುದ ನೇನೆಂಬೇನೆಂಬೆ.

ಹುಟ್ಟಿ ತಾ ತನ್ನ ತಾನರಿವ ಅರಿವು ತಿಳಿದ ಮೇಲೆ ಇನೇನಿನ್ನೇನಿನ್ನೇನೊ ? ಜೀವ ಮನ್ನಿಸಿ ಮೂಕಾದ ಮೇಲೆ ಇನ್ನೇ ನಿನ್ನೇನೊ ? ತಾನೆ ದೃಷ್ಠಿ ಅಪ್ಪು ತೇಜ ವಾಯು ಆಕಾಶಾತ್ಮ ತಾನೆ ಸೂರ್ಯ ಚಂದ್ರ ತಾರೆ ತಾನೆ ಬ್ರಹ್ಮಾಂಡದ ಮೇಲೆ ಇನ್ನೇ ನಿನ್ನೇ ನ್ನಿನ್ನೇನೊ.

ತಾನೆ ಪ್ರಾಣ ಜೀವ ನೇತ್ರ ತಾನೆ ಲೋಕ ಸುತುವ್ವ ಹೃದಯ ತಾನೆ, ಕರಣ ಹರಣ ತಾನೆ, ಪಿಂಡಾಂಡದ ಮೇಲೆ ಇನ್ನೇ ನಿನ್ನೇ ನಿನ್ನೇನೊ ? ತಾನೆ ಲಕ್ಷ, ಸಾವಿರ ನೂರು, ತಾನೆ ಹತ್ತೊಂಬತ್ತೆಂಟೇಳು ತಾನೆ. ಆರು, ಐದು ನಾಲ್ಕು ತಾನೆ, ಎರಡೊಂದಾದ ಮೇಲೆ ತಾನೆ. ನೀನು ತಾನೆ ಅಲ್ಲಾ ತಾನೆ

ಮಹಾಂತ ತಾನೆ ತಾನು ತಾನೆ ಹನ್ನೊಂದಾದ ಮೇಲೆ ಇನ್ನೇ ನಿನ್ನೇ ನಿನ್ನೇನೊ.

ತಾನು ತನ್ನ ತಿಳಿದ ಬಳಿಕ ಅನ್ಯಿವಿಲ್ಲ ಕಾಂಬುವ ಮರವು ನಷ್ಟವಾದುದು. ತನಗಿಂತ ಭಿನ್ನವಾಗಿ ಕಾಣಿಸಿ ಕೊಳ್ಳವದು ತನ್ನಯ ಮರವು ಈ ಮರವು ನಿಲವರಿತ ತತ್ವವೇತ್ತನಿಗೆ ನಷ್ಟವಾಗಿಹುದು, ಇದು ಕಾರಣ ಕಾಂಬದೆಲ್ಲವು ತಾನೆ. ತಾನು ತನ್ನ ತಿಳಿದ ಮೇಲೆ ಇನ್ನೇ ನಿನ್ನೇ ನಿನ್ನೇನೊ, ತಾನೆ ಸರ್ವಾತ್ಮ, ತಾನೆ ನೇತಾತ್ಮ ಎಂಬು ದಿನ್ನೇನಿನ್ನೇನೊ, ಸಕಲ ಜೀವಿಗಳ ತಾನೆಂದರಿತು, ತಾನೆ ಎಂದು ಒಪ್ಪಿ ನಿರ್ವಾಣನಾದ ಮೇಲೆ ಆತ್ಮನೆಂಬುದೇನು ಅನಾತ್ಮನೆಂಬುದೇನು ಅಹುದೆಂಬುದೇನು ಅಲ್ಲೆಂಬುದೇನು ಸಾವಯವ ನಿರವಯ ವೆಂಬುದಿನ್ನೇನೊ?

ತಾನೆ ಪೃಥ್ವಿ, ಅಪ್ಪು, ತೇಜ, ತಾನೆ ವಾಯು ಆಕಾಶಾತ್ಮ, ಓಹೋ! ತಾನೆಂಥ ದಿವ್ಯ ದೃಷ್ಠಿ ಪೃಥ್ವಿ ಅಪ್ಪು ತೇಜ ವಾಯು ಆಕಾಶಾತ್ಮಕ ತೆರೆಹಿಲ್ಲದ ಘನವಾದವೆ! ಜಡ, ಚೇತನವೆಂಬುದಕ್ಕೆ ಮೀರಿದವುಗಳಾಗಿವೆ! ತತ್ವ ಅತತ್ವವೆಂಬ ವಿಭಾಗ ದೃಷ್ಠಿಗಿಂಬಿಲ್ಲವಾದವೆ? ಬ್ರಹ್ಮ ಪರಬ್ರಹ್ಮವೆಂಬುದಕ್ಕೆ ಮೀರಿ ಮೌನ ಮುದ್ರಿತ ನಿಲುವುಳ್ಳ ಘನವಾದುವೆ? ಜಡವೆನ್ನಬೇಕೆ ಅಜಡವೆನ್ನಬೇಕೆ? ಮತಿಗೆ ಮೀರಿದ ಘನಕ್ಕೆ ಘನವಾದುದನೇನೆಂಬೆ.

ಅಪ್ಪು ತನ್ನಾನಂದ ಪರಮಾನಂದ ಜ್ಞಾನಾಮೃತವಾಗಿ ಕಂಡಿತೆ? ಅಖಂಡವಾಗಿ ಕಂಡಿತೆ! ತೇಜ! ಓಹೋ ಇದಾವ ತೇಜ! ಘನಕ್ಕೆ ಘನ ವಾದುದಕ್ಕೇನನ್ನಬೇಕು. ಪರ ಪ್ರಕಾಶ ಸ್ವಪ್ರಕಾಶವೆನ್ನಲು ಮೀರಿದ ಅಗಣಿತ ತೇಜ. ಕಾಮಾಗ್ನಿ, ಜ್ಞಾನಾಗ್ನಿ, ಚಿದಗ್ನಿವೆಂಬದಕ್ಕು ಮೀರಿದ ಅಪ್ರಮಾಣದ ತೇಜ ಅಖಂಡಿತ ತೇಜ, ಇದು ತೇಜವೆನ್ನದ ತೇಜ.

ಅರಿದರುಹಿಸಿಕೊಂಬುದಕ್ಕು ಮೀರಿದ ಘನ ತೇಜ ವಾಯಿತೆ? ನಾಶ ಅವಿನಾಶ ಎಂಬುದಕ್ಕು ಮೀರಿ ನಿಂತಿತೆ! ಮೀರಿದ ಘನದಿರುವಿನ ಅರುವಾಗಿಪ್ಪ, ತನ್ನ ತೇಜವ ಅಂತಿಂತೆನಬಾರದು.

ವಾಯು! ಇದಾವ ವಾಯು, ಚಿದ್ ವಾಯು, ಪರಾಪರವಾಗಿ ಕಂಡಿತೆ? ಎಲ್ಲೆಲ್ಲೂ ಎಡೆ ಯಿಲ್ಲದ ಪರಿ ಪೂರ್ಣವಾಗಿ ಕಂಡಿತೆ? ಅಕ್ಷರೇಶ್ವರವಾಗಿ ಕಂಡಿತೆ? ಪ್ರಣವ ಪ್ರಭೆಯ ಮೇಲಣ ಪರಂಜ್ಯೋತಿಯಾಗಿ ಕಂಡಿತೆ, ಅನುಪಮವಾಗಿ ಕಂಡಿತೆ.

ಆಕಾಶಾತ್ಮವದು! ಆಹಹ ಏನೆಂಬೇನೆಂಬೆ! ಮೌನ ಮುದ್ರಿತ ವಾದುದನೇನೆಂಬೇಂನೆಂಬೆ? ಬ್ರಹ್ಮ ನಾ ಬ್ರಹ್ಮವೆಂಬುದಂತಾಗಿ, ಶೃತಿಗಗೋಚರವಾದ ಘನವಾಗಿ ಕಂಡಿತೆ! ತಾನೆ ತಾನಾಗಿ ನಿಂತಿತೆ! ನಿಶಬ್ದವೇದಿಯಾಗಿ ನಿಂತಿತೆ! ಅಚಿಂತ್ಯ ಘನವಾಗಿ ನಿಂತಿತೆ! ಸಕಲವು ತಾನಾಗಿ ನಿಂತ ನಿಲುವು ಕಂಡು, ತನ್ನಿರುವಿನ ಅರುವಾದುದನ್ನು ಉಪಮಿಸಲಳವಲ್ಲ. ನಿಶಬ್ದ ಘನದಿರುವ ಶಬ್ದದಿಂದ ವರ್ಣಿಸುವದೆಂತು ಮೂಕನ ಮೌನ ವಾಚಾಳಿಯು ಹೇಳಲೆಂತು ಬಾರದು, ಹೇಳಲು ಬಾರದಿದ್ದಲ್ಲಿ ತೋರಿಸುವದದೆಂತು?

ತಾನೆ ಸೂರ್ಯ, ತಾನೆ ಚಂದ್ರ, ತಾನೆ ತಾರೆ, ತಾನೆ ಬ್ರಹ್ಮಾಂಡದ ಘನವದೆಂತು ವರ್ಣಿಸುವದು? ಸೂರ್ಯ ಸೂರ್ಯವೆನ್ನದವನು, ಚಂದ್ರವೆನ್ನದವನು ಚಂದ್ರ! ಚಂದ್ರನೆನ್ನದ ಪ್ರಕಾಶ, ತಾರೆ ತಾರೆ ಎನ್ನದ ದೃಷ್ಠಿ ಬೆಳಗುಳ್ಳ ದೃಷ್ಠಿ ಇಲ್ಲಿ ಬೆಳಗಿಸಿಕೊಳ್ಳುವ ಜಗವ ಕಂಡುದಿಲ್ಲ, ಬೆಳಗುವ ಚಂದ್ರ, ಸೂರ್ಯರ ಕಂಡುದಿಲ್ಲ ಬೆಳಗಿನ ಬೆಳಗಾಗಿರ್ದುದ ಅದನೆಂತು ವರ್ಣಿಸುವದು, ತಾನೆ ಬ್ರಹ್ಮಾಂಡ ವಾದುದು, ಅದ ನಾರಯ್ಯ ವಿವರಿಸುವದು, ಬ್ರಹ್ಮಾಂಡವೆ ಅನುಪಮ ಲಿಂಗ ವಾಗಿ ಕಂಡಮೇಲೆ ಸ್ಥಾವರವು ಅವರ್ಣೀಯವು ಸ್ಥಾವರವಾಗಿ ಕಂಡುದದು ಅಚಲಿತ ಲಿಂಗ ವಾಯಿತೆ? ಜಂಗಮ ಜಗವು ತೆರೆಹಿಲ್ಲದ ಘನ ವಾಯಿತೆ! ಕಾಂಬ ಜಗವು, ಕಾಣಬಾರದ ಘನವಾಗಿ ನಿಂತಿತೆ! ನಿರ್ವಾಣವಾಗಿ ನಿಂತಿತೆ! ನಿರ್ಲಿಖಿತ ಜಂಗಮವಾಗಿ ನಿಂತಿತೆ! ನಿರ್ನಾಮ ಜಂಗಮ ಲಿಂಗವಾಗಿ

ಕಂಡಿತೆ! ಪರತತ್ವವಾಗಿ ಪ್ರಜ್ವಲಿಸಿತೆ! ಇದೆಂಥ ತನ್ನಿಂದ ತಾನರಿತು ತಾನು ತಾನಾದ ಘನ ದೃಷ್ಟಿ ಎಲ್ಲಿ ನೋಡದಡಲ್ಲಲ್ಲಿ ತನ್ನ ಕಂಡುದಕ್ಕೇನನ್ನಬೇಕು , ಓಹೋ ! ಚಿತ್ ಸೂರ್ಯ ವೆನ್ನಲು ಬಾರದಂತಾಗಿ ಅದ್ವಿತೀಯ ಘನವಾಗಿ ಕಂಡ ಮೇಲೆ ಇನ್ನೆ ನಿನ್ನೆ ನಿನ್ನೇನೊ .

ಎಲ್ಲಿ ಚಂದ್ರ ಎಲ್ಲಿ ತಾರೆ ಎಲ್ಲಿ ಬ್ರಹ್ಮಾಂಡ ಎಲ್ಲೆಲ್ಲೂ ತನ್ನ ಕಂಡಮೇಲೆ ಎಲ್ಲಿಯ ಮನ ? ಎಲ್ಲಿಯ ಸುಮನ ! ಎಲ್ಲಿಯ ತಾರೆ ಎಲ್ಲಿಯ ತಾರಕ ಎಲ್ಲಿಯ ಮಂತ್ರ ಎಲ್ಲಿಯ ಮಹಾ ಮಂತ್ರ , ಎಲ್ಲೆಲ್ಲೂ ಪರತತ್ವ ತೆರೆಹಿಲ್ಲದ ಘನವ ಕಂಡಮೇಲೆ ಇನ್ನೇ ನಿನ್ನೇ ನಿನ್ನೇನೊ !.

ತಾನೆ ಪ್ರಾಣ ಜೀವ ನೇತ್ರ , ತಾನೆ ಲೋಕ ಸುತ್ತುವ ಹೃದಯ , ತಾನೆ ಪಿಂಡಾಂಡವಾದ ಮೇಲೆ ಇನ್ನೇ ನಿನ್ನೇ ನಿನ್ನೇನೊ ! ತಾನೆ ಪ್ರಾಣವಾದುದಕ್ಕೇನನ್ನಬೇಕು , ಮರಣ ಅಮರಣ ದಾಂಟಿದ ಘನಕ್ಕೇನನ್ನಬೇಕು ! ಸೋಹಂ , ಶಿವೋಹಂ , ಮೀರಿದ ಘನಕ್ಕೇನನ್ನಬೇಕು ! ಬಂಧ ಮೋಕ್ಷವ ದಾಂಟಿದ ದೃಷ್ಟಿಗೇನನ್ನಬೇಕು ! ಲೋಕ ಪರ ಲೋಕ ಕಾಣದೆ ಎಲ್ಲೆಲ್ಲೂ ತನ್ನನ್ನೆ ಕಾಣುವ ಲೋಕಕ್ಕೇನನ್ನಬೇಕು , ಪ್ರವೃತ್ತಿ ಲೋಕ ವೆನ್ನಲೆ ! ನಿವೃತ್ತಿ ಲೋಕ ವೆನ್ನಲೆ ? ಸುಗುಣ ಲೋಕ ವೆನ್ನಲೆ ! ನಿರ್ಗುಣ ಲೋಕ ವೆನ್ನಲೆ , ಸತ್ ಅಸತ್ ಎನ್ನುವದಕ್ಕು ಮೀರಿದುದು ತನ್ನದಾದುದು ಘನಕ್ಕೆ ಘನವಾದ ಲೋಕ , ತನ್ನ ಲೋಕ ಎಲ್ಲೆಲ್ಲೂ ತನ್ನ ಕಂಡ ಲೋಕಕ್ಕೇನನ್ನಬೇಕು! ತಾನೆ ಸುತುವ್ತ ಹೃದಯವಾದ ಹೃದಯಕ್ಕೇನನ್ನಬೇಕು, ತಾನೆ ಸು ಹೃದಯ , ತನ್ನನೆ ಸುತ್ತಿದ ಹೃದಯ , ಅಖಂಡಿತ ಘನವಪ್ಪ ಪೂರ್ಣವಾಗಿಹ ತನ್ನಿರುವೆ ಅರುವೆಂದರಿದ ಹೃದಯ ತನ್ನ ಸುತ್ತವ ಹೃದಯ , ಇದು ಕಲ್ಪಿತ ಸುತ್ತಿದ ಹೃದಯವಲ್ಲ . ಅರುವು ಅರಿದು ಅರುವೆ ಆಗಿಹ ಹೃದಯ ಸುತ್ತು ಹೃದಯ ಪೂರ್ಣ ಅಪೂರ್ಣವೆಂಬುದರಲ್ಲಿ ತನ್ನನ್ನೆ ಕಂಡ ಹೃದಯ ಸುತ್ತು ಹೃದಯ ಅಪರಿಮಿತ ಹೃದಯ ಪರಿಮಿತ ಮಾಡುವರೆ ? ತನ್ನ ಹೃದಯ ತಾನಾಗಿ ಕಂಡ ಹೃದಯಕ್ಕೇನನ್ನಬೇಕು , ತಾನೆ ಪಿಂಡಾಂಡ ವಾಗಿಹ ಪಿಂಡಾಂಡ ಅದನೆಂತು ವರ್ಣಿಸುವದು .

ಈ ಪಿಂಡಾಂಡ ಜ್ಞಾನಮಯ ವಾಗಿಹ ಪಿಂಡಾಂಡ ಚಿದ್ಘನವಾಗಿಹ ಪಿಂಡಾಂಡ ಅರುದರುಹಿಸಿ ಕ್ಕೊಂಬುದಕ್ಕು ಮೀರಿದ ಘನದಿರುವಿನ ಪಿಂಡಾಂಡಕ್ಕೇನನ್ನಬೇಕು , ಅರಿಯದರುವಾಗಿಹ ಪಿಂಡಾಂಡ ತಾನೆ ಏನೆಂದೆನಲಿಲ್ಲದ ಅರುವಾಗಿಹ ಪಿಂಡಾಂಡ, ತಾನೆ ಆದುದ ತಿಳಿದ ಮೇಲೆ ಇನ್ನೇ ನಿನ್ನೇ ನಿನ್ನೇನೊ ತಾನೆ ಲಕ್ಷ ಸಾವಿರ ನೂರ ತಾನೆ ಹತ್ತೊಂಭತ್ತೆಂಟೇಳು ತಾನೆ , ಆರು, ಐದು ನಾಲ್ಕು ತಾನೆ ಎರಡೊಂದಾದ ಮೇಲೆ ತಾನೆ ನೀನು , ತಾನೆ ಅಲ್ಲ, ತಾನೆ ಮಹಾಂತ,ತಾನೆ ಹನ್ನೊಂದಾದ ಮೇಲೆ ಇನ್ನೇ ನಿನ್ನೇ ನಿನ್ನೇನೊ . ತಾನೆ ಲಕ್ಷಣ ತಾನೆ ಲ್ಷಣ ಸಾವಿರ ನೂರು ತಾನೆ ಹತ್ತು ತಾನೆ ಒಂಭತ್ತು, ತಾನೆ ಎಂಟು, ತಾನೆ ಏಳು , ತಾನೆ ಆರು, ತಾನೆ ಐದು , ತಾನೆ ನಾಲ್ಕು , ತಾನೆ ಎರಡು, ತಾನೆ ಒಂದು , ತಾನೆ ನೀನು , ತಾನೆ ಮಹಾಂತ ತಾನೆ ಹನ್ನೊಂದಾದ ಮೇಲೆ ಇನ್ನೇ ನಿನ್ನೇ ನಿನ್ನೇನೊ .

ಅಲಕ್ಷ ತಾನಾದವನು , ಲಕ್ಷ ತಾನಾದನೆ ! ಲಕ್ಷಣ ವಾದನೆ ? ತಾನೆ ಸಾವಿರ ನೂರು ತತ್ವಂಗಳಾದನೆ ! ತಾನೆ ದಶನಾದವಾದನೆ ? ನವ ವಿಧ ಭಕ್ತಿಯು ತಾನೆ, ತಾನೆ ಬಹಿರ ಅಷ್ಟಾವರಣ ಅಂತರ ಅಷ್ಟಾವರಣ , ತಾನೆ ಸಪ್ತ ಭೂಮಿಕೆ , ತಾನೆ ಷಟ್ ಸ್ಥಲ , ತಾನೆ ಪಂಚಾಚಾರ ತಾನೆ ಗುರು, ಲಿಂಗ, ಜಂಗಮ , ಪ್ರಸಾದ ತಾನೆ ಜೀವ , ಪುನಃ ಜೀವ ಶಿವನೊಂದಾದನೆ ತಾನೆ ತಾನಾದನೆ? ತಾನೆ ತ್ವಂ ಆದುದು , ತಾನೆ ಏನೊಂದಾಗದ ಘನ, ತಾನೆ ಅಲ್ಲಾ ತಾನೆ ಮಹಾಂತ . ತಾನೆ ಕ್ಷರನಾಗಿಹ ನವದ್ವಾರ ಪುರ , ತಾನೆ ಅಕ್ಷರ, ತಾನೆ ಅಕ್ಷರೋತ್ತಮ ನಾದ ಮೇಲೆ ಇನ್ನೇ ನಿನ್ನೇ ನಿನ್ನೇನೊ ಅಲ್ಲಿ ನಿಶಬ್ಧ

ವಾಯಿತ್ತು ಗುಹೇಶ್ವರ ಎಂದು ಹೇಳಿಹರು.

52

ಮುಕ್ತಿಗೆ ಮುಖವಾಗಿ ಮುಕ್ತಿಗೆ ಹೊರಗಾಗಿ
ಅರುವಿಂಗರುವಾಗಿಪ್ಪ ಭೇದ ಕಾಣ ಬಂದಿತ್ತು ನೋಡಾ
ಅರುವರಿತು ಮರಹು ನಷ್ಟವಾಗಿಪ್ಪುದು ನಿನ್ನಲ್ಲಿ ಸನ್ನಿಹಿತ ವಾಯಿತ್ತು
ಗುಹೇಶ್ವರನ ಶರಣ ಅಜಗಣ್ಣನ ನಿಲವು
ಬಯಲ ಬೆರಸಿದ ಮರೀಚಿಯಂತಾಯಿತ್ತು ಬೆರಸಿ ನೋಡಾ ಬೇರಿಲ್ಲದೆ || 1448 ||

ತಾತ್ಪರ್ಯ : ಮುಕ್ತಿಗೆ ಮುಖವಾಗಿ ಯುಕ್ತಿಗೆ ಹೊರಗಾಗಿ ಅರುವಿಂಗರುವಾಗಿಪ್ಪ ಭೇದ ಕಾಣ ಬಂದಿತ್ತು . ಮುಕ್ತ ಯುಕ್ತ ನಿನ್ನ ಜ್ಞಾನ ಹಿಗಾಗಿದೆ , ನಿನ್ನರುವು ಹೀಗಾಗಿದೆ , ಮುಕ್ತಿಗೆ ಮುಖವಾದುದೆಂದರೆ, ಮನವು ನೆನಹಿನ ಮುಕ್ತಾಯದ ಮುಖವಾಗಬೇಕು . ಇನ್ನು ನಿನ್ನ ಮನವು ನೆನಹಿಂದುಕ್ತವಾಗಿದೆ. ಅದು ಮುಕ್ತಾಯದ ಮುಖ ಹೇಗಾಗುವದು.

ಉಪಾಧಿಕ ಮನ ಉಪಾಧಿಕ ರಹಿತ ಮನ, ಇವೆರಡು ಮನ ನೆನಹಿಂದುಕ್ತವಾದವುಗಳು ಇವುಗಳು ನೆನಹಿನ ಮುಕ್ತಾಯದ ಮುಖವಾಗಬೇಕು , ನೆನಹಿನ ಆತ್ತಾಚೆಯ ಮುಖದ್ದಾಗಬೇಕು ವಿಚಾರಕ್ಕೆ ನಿಲುಕದ್ದಾಗಿರಬೇಕು ಅಂದರೆ ಯುಕ್ತಿಗೆ ಹೊರಗಾಗಬೇಕು.

ಯುಕ್ತಿಗೆ ಮೀರಿರಬೇಕು , ಉಪನಿಷದ ಕಾರಕ ಯುಕ್ತಿಗೂ , ಆಗಮ ಕಾರಕ ಯುಕ್ತಿಗೂ ಮೀರಿರ ಬೇಕು , ಕ್ರಮ ಸಮುಚ್ಚಮವಾದ , ಸಮ ಸಮುಚ್ಚಮವಾದ ಇವೆರಡು ಯುಕ್ತಿಗೂ ಮೀರಿರಬೇಕು , ಉಪನಿಷದ ಕಾರಕ ಯುಕ್ತಿ ಕರ್ಮ ಗೌಣ ಮಾಡಿ ಜ್ಞಾನ ಪ್ರಸಂಶೆ ಮಾಡುವದು ಆಗಮ ಕಾರಕದ, ಕರ್ಮ ಜ್ಞಾನಗಳೆರಡನ್ನು ಪ್ರಶಂಸಿಸುವದು ಕ್ರಮ ಸಮಚ್ಚಮ ವಾದಿಗಳ ಇವರೀರ್ವರ ಯುಕ್ತಿಗೂ ಮೀರಿರಬೇಕು. ಎಲ್ಲಿ ಯುಕ್ತಿ ಇದೆ ಅಲ್ಲಿ ವಿಮರಶಾತ್ಮಕ ಬುದ್ಧಿ ಇದೆ ಅಲ್ಲಿ ಲಕ್ಷ್ಮಣ ಲಕ್ಷ, ಭಾಗ , ತ್ಯಾಗ , ತಟಸ್ಥ ಹೀಗೆ ಸಂಕೇತವುಳ್ಳವುಗಳು ಆಗಿವೆ , ಈ ಭಾಗ್ಯ ತ್ಯಾಗ ಲಕ್ಷಣಕ್ಕೂ ತಟಸ್ಥ ಲಕ್ಷಣಕ್ಕೂ ನಿಲುಕದಿರುವುದೆ, ಯುಕ್ತಿಗೆ ಹೊರಗಾದಂತೆ,

ಅರುವಿನ ಅರುವಾಗಿಪ್ಪ , ಭೇದ ಕಾಣ ಬಂದಿತ್ತು ನುಡಿಯಿಂದುಕ್ತವಾದ ಅರುವು ಅರುವಲ್ಲ ನುಡಿಗಡೆಗೊಡದ ಘನವು ಅದನ್ನು ನುಡಿದು ಹೇಗೆ ಹೇಳುವದು ಎಂಬುದೆ ನಿನ್ನ ತಿಳುವಳಿಕೆ ಅಲ್ಲವೆ! ಇದುವೆ ನಿನ್ನ ತಳಮಳ ಅಲ್ಲವೆ! ಇದುವೆ ನಿನ್ನ ಭೇದಕ್ಕೆ ಕಾರಣ ವಲ್ಲವೆ!

ಅರುವರಿತು ಮರುವು ನಷ್ಟವಾಗಿಪ್ಪುದು ನನ್ನಲ್ಲಿ ಸನ್ನಿಹಿತವಾಗಿಪ್ಪದು . ಅರುವರಿತುದುದು ಘನಕ್ಕೆ ಘನವು ಅಲ್ಲಿ ಅನುಸಂಧಾನ ಮಾಡುವದು , ಶ್ರವಣಾಧಿಗಳ ಮಾಡುವದು , ಧಾರಣ , ಧ್ಯಾನ , ಸಮಾಧಿಯು ತನಗನ್ಯವೆಂಬ ನೇರ ತಿಳುವಳಿಕೆಯಾದುದೆ ಅರುವರಿತ ಚಿನ್ಹೆ ಮರಹು ನಷ್ಟವಾದ ಸಂಕೇತವೆಂದರೆ ತನ್ನಿಂದ ತಿಳಿಸಿಕೊಳ್ಳುವದೆಲ್ಲವು ತನ್ನೊಳಗೆ ಇಲ್ಲದುದು , ಅದು ಪ್ರಪಂಚದ ತೋರಿಕೆಯಾಗಿರಲಿ ಪರಮಾರ್ಥದ ಶಬ್ದ ಸಂಭ್ರಮದ ತೋರಿಕೆಯಾಗಿರಲಿ ಇವುಗಳಿಗೆ ಮುಖ್ಯತೆ ಕೊಡದೆ ಇರುವದು ಏಕೆಂದರೆ ಇವು ತೋರಿ ಇಲ್ಲವಾಗುವವು, ಇದು ಕಾರಣ ನನ್ನ ಸ್ವರೂಪವಾಗಿವು ಎಂಬ ಯತಾರ್ಥ ತಿಳುವಳಿಕೆಯಾಗುವುದೆ ಆಗ ಮರುಹು ಸಹಜ ನಷ್ಟವಾಗುವರಿಂದ ನಿನ್ನಲ್ಲಿ ಸನ್ನಿಹಿತ ವಾಗಿಪ್ಪುದು ತನ್ನ ಸ್ವಂತ ಮಹಿಮೆಯಲ್ಲಿ ನೆಲಸಿಹುದು ತನ್ನ ಸ್ವರೂಪ ಇದ್ದಂತಿದ್ದ ಘನ , ತನ್ನಿಂದ ತನಗೆ ಯತಾರ್ಥ ವೇದ್ಯವಾಗಿ ಅದುವೆ ತಾನಾಗಿ ತನ್ನ ಮಹಿಮೆಯೊಳ್ ತಾನಿದ್ದುದೆ ನಿನ್ನ

ಸನ್ನಿಹಿತವಾಗವುದು .

ಗುಹೇಶ್ವರ ಶರಣ ಅಜಗಣ್ಣನ ನಿಲವು ಬಯಲ ಬೆರಸಿದ ಮರೀಚಿಯಂತಾಯಿತ್ತು . ಬೆರಸಿ ನೋಡಾ ಬೇರಿಲ್ಲದಂತೆ ಗುಹೇಶ್ವರನ ಶರಣ ಅಜಗಣ್ಣನ ನಿಲುವು ಬಯಲು ಬೆರಸಿದಂತಾದ ನಿಲವು ಅಲ್ಲವೆ! ಆ ಮಹಾಂತ ಬಯಲಲ್ಲಿ ಏಕನಾಗಿಹನಲ್ಲವೆ? ಹಾಗೆ ನೀನು ಗುರು ಘನನಂತೆ ಬಯಲಲ್ಲಿ ಬೆರೆದು ಬಯಲಾಗು .

ಬಯಲೆಂಬುದು ನಿನ್ನಯ ಇರುವು , ಅದು ನಿನ್ನ ಸ್ವರೂಪ ಅದು ನುಡಿಗೆಡೆಗೊಡದ ಘನವು ಹಾಗೆ ನೀನು ನುಡಿಗೆಡೆಗೊಡದ ಘನದಲ್ಲಿ ಲೀನ ವಾಗು , ಆಗ ಬೆರಸಿ ನೋಡಾ ಬೇರಿಲ್ಲದಂತೆ ಆಗ ನಿನ್ನ ಅಣ್ಣ ಅಜಗಣ್ಣ ನುಡಿಗೊಳಪಡದ ಘನನು , ಶಬ್ದ ಮುಗ್ದನು , ನೀನು ನುಡಿಗೊಳಪಡದವಳು ಶಬ್ದ ಮುಗ್ದಳು, ಈರ್ವರದು ಸಮ ನಿಲಯ ಸಮ ಗೋಷ್ಠಿಯ ಉಪಮಿಸಲಸಾಧ್ಯವು , ಅಳತೆ ಮೀರಿದ ನಿಲವು ಗಣನೆ ಗತೀತವು, ಬೆರಸಿ ನೋಡಾ, ಬೇರಿಲ್ಲದಂತೆ. ತಾನು ಗಣನೆ ಗತೀತವಾದುದೆ ತನ್ನ ಬೆರಸಿದಂತೆ ಆಗ ಅಜಗಣ್ಣ ಬೇರೆ ನೀನು ಬೇರೆಯೆ . ಆ ಮಹಾಂತನ ಇರುವು ಬೇರೆ ನಿನ್ನಯ ಇರುವು ಬೇರೆಯೆ ? ನನ್ನಯ ಇರುವು ಬೇರೆಯೇ ? ನಿಮ್ಮಯ ಇರುವು ಬೇರೆಯೆ ? ಇದ್ದುದೊಂದು ಚಿದಾಕಾಶ ನಿರಂಜನ ನಿಜ ಚಿದ್ರೂಪ ಅದು ವಾಙ್ಮನೋತೀತವು. ನುಡಿಯಿಂದುಕ್ತವಾಗಿ ಬೇರಾಗಿದ್ದಂತೆ ಭಾಸವಾಗಿತ್ತು. ಅರಿವುಡೆ ತನ್ನ ಸ್ವರೂಪ ತಾನು ಇದ್ದಕ್ಕಿದ್ದಂತಿದ್ದ ಘನವು ತನ್ನಿಂದ ತನಗೆ ವೇದ್ಯವಾದುದೆ ಬೆರಸಿ ಬೇರಿಲ್ಲದಂತಿದ್ದುದು ಎಂದು ತಿಳಿವುದು .

53

ಕಂಗಳ ಸೂತಕ ಕಾಮಿಸಲಾಗಿ ಹರಿಯಿತ್ತು ,
ಮನದ ಸೂತಕ ಮುಟ್ಟವಾಗಿ ಬಿಟ್ಟಿತ್ತು .
ನಾನೆಂಬ ಭಾವ ಗುಹೇಶ್ವರ ಲಿಂಗದಲ್ಲಿ ಐಕ್ಯವಾಯಿತ್ತು . ॥ 1029 ॥

ತಾತ್ಪರ್ಯ : ಕಂಗಳ ಸೂತಕ ಕಾಮಿಸಲಾಗಿ ಹರಿಯಿತ್ತು : ಇದೆಂಥ ವಿಚಿತ್ರ ಇದೆಂಥ ಬೆಡಗು , ಇದೆಂಥ ರಹಸ್ಯದಿಂದುಕ್ತವಾದುದು ? ಮುನ್ನವೆ ಸೂತಕವಿದ್ದ ಕಂಗಳು ಅದು ಕಾಮಿಸಲಾಗಿ ಹರಿಯಿತ್ತು ಎಂದು ಹೇಳಿದುದು, ಇದು ಬಿಚ್ಚದ ಗಂಟು . ಪ್ರಭುವಿನ ಮುಂಡಿಗೆ ಪ್ರಭುವೆ ಬಿಡಿಸುವದು.

ನರಕ ಕಂಗಳು ದೋಷಯುಕ್ತ ಕಂಗಳು , ಅದು ರೂಪವ ಕಾಮಿಸಿ , ಕಾಮಿಸಿ ದೋಷ ದೃಷ್ಠಿ ಹೆಚ್ಚಾಗಿರುವಾಗ ಅದು ನಿರ್ದೋಷವಾಗುವ ಬಗೆ ಆವುದು. ದೋಷಯುಕ್ತವಾದ ಕಣ್ಣಿಗೆ ಪುನಃ ಕಾಮಿಸಲು ಅಪ್ಪಣೆ ಕೊಟ್ಟಾಗ ಅದು ನಿರ್ದೋಷ ವಾಗುವದೆಂದಲ್ಲಿ ಆಶ್ಚರ್ಯವಲ್ಲವೆ ?

ಮಾನವರ ಕಣ್ಣು ಮೊದಲೆ ನಂಜುಳ್ಳ ಕಣ್ಣು . ಕುರುಹಿಂಗೆ ರೂಪವ ನೋಡಿ ನೋಡಿ ಅದನ್ನೆ ಸತ್ಯವೆಂದು ಅಪ್ಪಿ , ಅದು ತೀರಾ ಮಂಜಾದ ಕಣ್ಣು . ಇದಲ್ಲದೆ ಅದಕ್ಕೆ ಕಾಮನಾ ರೂಪಿ ಅಮವಾಸಿ ಕತ್ತಲೆಯ ಕವಿದಲ್ಲಿ ಆ ಕಣ್ಣಿನ ದೋಷ ಪರಿಹಾರ ವಾಗುವದೆಂದು ? ಶೂರರೆ ಇರಲಿ ಅಶೂರರೆ ಇರಲಿ, ಮನು ಮುನಿಗಳಿರಲಿ ತಪಸ್ವಿ ತ್ಯಾಗಿಗಳಿರಲಿ , ಆರಿದ್ದರೂ ಭೇದ ಜ್ಞಾನದಿಂದುಕ್ತವಾದ ದೃಷ್ಠಿ ಭಿನ್ನ ಭಾವದ ದೃಷ್ಠಿ. ಅದು ದೋಷದಿಂದುಕ್ತವಾಗಿಹ ಕಣ್ಣು , ದೃಷ್ಠಿ ರೇವ ದೃಷ್ಠಿ ಎಂದಂತೆ ತನ್ನ ದೃಷ್ಠಿಯಂತೆ ಸೃಷ್ಠಿ.

ಇದ್ದೊಂದ ಗೋವು ಹಾದಿ ಹಿಡಿದು ಹೋಗುವಲ್ಲಿ ಅದನ್ನು ಮಚಿಗಾರನು ಕಂಡು ಇದರಲ್ಲಿ 50 ಜೋಡು ಚಮ್ಮಾವುಗೆ ಆಗುತ್ತವೆಂದ ಇವನು ಕಂಡ ಆಕಳವನು ಕಟಕ ಕಂಡ, ಓಹೋ ಇದು ಮಾಂಸದಿಂದ ತುಂಬಿದೆ ಇದರಲ್ಲಿ ಒಂದು ಕ್ವಿಂಟಲ್ಲಿಗೂ ಮೇಲು ಮಾಂಸ ಸಿಕ್ಕುತ್ತಿದೆ ಎಂದನು . ಪುನಃ ಗೌಳಿಗ ಕಂಡ

ಇದು ಪ್ರತಿ ಸಲ 15-30 ಲೀಟರಿಗೆ ಕಡಿಮೆ ಹಾಲು ಕೊಡುವುದಿಲ್ಲವೆಂದನು, ಅದೇ ಆಕಳನ್ನು ಒಕ್ಕಲಿಗ ಕಂಡು ಇದು ಎರಡು ಹೋರಿ ಕೊಟ್ಟರೆ ಸಾಕು ಎಂದ. ಇದನ್ನೆ ಒಬ್ಬ ಬ್ರಹ್ಮವೇತ್ತ ಮಹಾ ಪುರುಷ ಕಂಡು, ಆ ಮಹಾಂತ ಓ ಪರಬ್ರಹ್ಮವೆ ಎಂದು ಸಂಬೋಧಿಸಿದನು. ಒಂದೆ ಆಕಳು ಅವರವರ ದೃಷ್ಠಿಗನುಸಾರ ಅವರಿಗೆ ಭಾವಿಸಿತು. ಇದು ಕಾರಣ ದೃಷ್ಠಿ ಬಹು ದಿವಸ ರೂಪವ ಕಂಡು , ಅದನ್ನೆ ಸತ್ಯವೆಂದು ನಂಬಿದ ಕಣ್ಣು. ಒಳಗೊಳಗೆ ಇಂದ್ರಿಯ ಜನ್ಯ ವಿಷಯೋಪ ಭೋಗದ ಗುರಿಯನ್ನಿಟ್ಟುಕೊಂಡೆ ಕಂಡ ಕಣ್ಣು ಇದಕ್ಕೆ ಕಾಮಿಸಿ ನೋಡುವದೆಂದರೆ ಬಹು ನಷ್ಟ. ಬ್ರಹ್ಮ ವೇತ್ತನ ನೋಟ ಬೇರೆ, ಮಾನವರ ನೋಟ ಬೇರೆ , ತಪಸ್ವಿ ತ್ಯಾಗಿ ನೋಟ ಬೇರೆ, ಪ್ರಭುವಿನ ನೋಟ ಬೇರೆ. ಆ ಮಹಾಂತನ ಕಾಮನೆಯು ಬೇರೆ. ಇದು ಕಾರಣ ಕಂಗಳ ನೋಟ ಕಾಮಿಸಲಾಗಿ ಹರಿಯಿತ್ತು ಎಂದು ಹೇಳಿಹರು.

ಪ್ರಭುವಿನ ಕಂಗಳ ನೋಟ ಅನಿಮಿಷನನ್ನು ಕಂಡ ನೋಟ , ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿತು,ಲಿಂಗದಲ್ಲಿ ಲೀಯವಾದ ನೋಟ , ಅಚಲಾನಂದ ನೋಟ , ಅನಿಮಿಷನ ನೋಟ. ಕಂಗಳು ಲಿಂಗದತ್ತತ್ತ ಸಾಗಿ ಲಿಂಗದಲ್ಲಿ ಲೀಯವಾದ ನೋಟ ನೋಡದ ನೋಟ, ಲಿಂಗ ತಾನು ಒಂದಾದ ನೋಟ ಇದು ನಿಜದಲ್ಲಿ ಲೀಯವಾಗಿಹ ನಿಬ್ಬೆರಗು. ತಾನು ಲಿಂಗ, ತನ್ನ ನೋಟ ಲಿಂಗ, ತಾನು ಲಿಂಗವೆ ,ನೋಟ ಲಿಂಗವೆ , ಲಿಂಗ ,ಲಿಂಗವೆ ಮೂರೊಂದಾದ ನೋಟ ಅನಿಮಿಷ ನೋಟ , ಕರ ಕಮಲದಲ್ಲಿ ಬೆಳಗುಳ್ಳ ಬೆಳಗಿನ ಲಿಂಗದಲ್ಲಿ ಲೀಯವಾದ ಕಂಗಳು, ಲಿಂಗದಲ್ಲಿ ಲೀಯವಾದುದ ಕಂಡು ನಿಃಶಬ್ದ ಘನದಿರುವಿನಲ್ಲಿ ಲೀನವಾಗಿ ತಾನು ನಿಃಶಬ್ದ ಘನವಾಗಿ ಶಬ್ದ ಮಗ್ಧ ಘನವಾಗಿಹ ದರ್ಶನ ಗುರು ದರ್ಶನ. ಇದು ಕಾಣಬಾರದ ಗುರು ದರ್ಶನ ಕಣ್ಗೆ ಗೋಚರವಾದರೆ ಹೇಳಲಿಲ್ಲದ ಭಿನ್ನಪ. ಮುಟ್ಟಲಿಲ್ಲದ ಹಸ್ತಮಸ್ತಕ ಸಂಯೋಗ, ಹೂಸಲಿಲ್ಲಿದ ವಿಭೂತಿ ಪಟ್ಟ, ಕೇಳಲಿಲ್ಲದ ಕರ್ಣ ಮಂತ್ರ. ಪೂಜೆಗೆ ಬಾರದ ಲಿಂಗ, ಆಗಮ ವಿಲ್ಲದ ದೀಕ್ಷೆ ಸಂಬಂಧ ವಿಲ್ಲದ ಸಮವಪ್ಪ ಆನುಗೊಂಬಂತೆ ಮಾಡಾ ಗುಹೇಶ್ವರ ಎಂದು ಪ್ರಭುದೇವ, ಕಾಣಬಾರದ ಗುರು ದರ್ಶನ, ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿತು ಲಿಂಗದಲ್ಲಿ ಲೀಯವಾದ ನೋಟ ಕಂಡು, ಕಾಮಿಸದ, ಶ್ರೀಗುರು ನೋಟ ಕಾಮಿಸಲಾಗಿ ಕಂಗಳ ಸೂತಕ ಹರಿಯಿತ್ತು ಎಂದರು , ಭಿನ್ನ ಜ್ಞಾನ, ಭಿನ್ನ ದೃಷ್ಠಿ ಭಿನ್ನ ಭಾವದಿಂದುಕ್ತವಾದ ಕಂಗಳು ಸೂತಕ ಕಂಗಳು, ಈ ಕಂಗಳು ಗುರು ಲಿಂಗ, ಲಿಂಗದಲ್ಲಿ ಲೀಯವಾದ ನೋಟವ ಕಂಡು, ಕಾಮಿಸಲಾಗಿ ಭಾವ ಹರಿಯಿತ್ತು, ಕೇಳಿಲಿಲ್ಲದ ಕರ್ಣಮಂತ್ರವರಿತುದು, ಭಿನ್ನ ಭಾವ ಹರಿಯಿತ್ತು, ಪೂಜೆಗೆ ಬಾರದ ಲಿಂಗ ಆಗಮವಿಲ್ಲದ ದೀಕ್ಷೆ ಸುಜ್ಞಾನದಿಂದ ಕಂಡು ಎನ್ನ ಭಾವ ಹರಿಯಿತ್ತು ಎಂದು ಹೇಳಿಹರು.

ಮನದ ಸೂತಕ ಮುಟ್ಟಹೋಗಿ ಹರಿಯಿತ್ತು, ಪೂಜೆಗೆ ಬಾರದ ಲಿಂಗ ಮುಟ್ಟಹೋಗಿ, ತಾನು ಮನವೆಂಬುದು ಬಿಟ್ಟಿತ್ತು. ಮನವೆಂಬ ಸಂಕಲ್ಪವನ್ನೆ ಬಿಟ್ಟಿತ್ತು. ಬಹು ದಿನಗಳಿಂದಲೂ ಪೂಜೆಗೊಂಬುವ ಲಿಂಗವ ಮುಟ್ಟಿ, ತಾನು ಮನವಾಗಿಯೆ ಉಳಿದಿತ್ತು. ಲಿಂಗಾನುಸಂಧಾನ ಮಾಡುತಿತ್ತು, ಲಿಂಗ ಲಿಂಗ ಎಂದು ಸದಾ ಲಿಂಗಧ್ಯಾನದಲ್ಲಿ ನಿರತವಾಗಿರುತ್ತಿತ್ತು ನೆನಹಿಂಗೆ ಮೀರುವದಾಗಲಿಲ್ಲ. ಚಿಂತನೆಗೆ ಮೀರಿ ನಿಲ್ಲುವದು ಆಗಲಿಲ್ಲ. ಭಾವವುಳ್ಳದ್ದಾಗುತ್ತಿತ್ತು. ಇದು ಕಾರಣ ತಾನು ಮನವೆಂಬುದು ದೃಢವಾಗಿತ್ತು . ಕಾಣ ಬಾರದ ಗುರು ದರ್ಶನ ,ವಾಕ್ ಮನಕ್ಕೆ ಬಾರದ ಅಪ್ರತಿಮ ಲಿಂಗವರಿತು, ಲಿಂಗದಲ್ಲಿ ಲೀಯವಾದ ಅನಿಮಿಷನ ದೃಷ್ಠಿ ದರ್ಶನ ಕಿವಿಗೆ ಕೇಳದ ಮಂತ್ರದ ಘನವು, ಆಗಮವಿಲ್ಲದ ದೀಕ್ಷವ ಸುಜ್ಞಾನದಿಂ ಅರಿವುಡೆ, ತಾನು ಮನವೆಂಬ ಸಂಕಲ್ಪವ ಬಿಟ್ಟಿತ್ತು . ಲಿಂಗವೆಂಬ ಕಲ್ಪಿತವ ಬಿಟ್ಟಿತ್ತು ಗುರುವೆಂಬ ಕಲ್ಪಿತವ ಬಿಟ್ಟಿತ್ತು ಇದು ಲಿಂಗವರಿತು ಲಿಂಗ ವಾಗಿಹ ಚಿನ್ಹೆ.

ಬಹು ಲಿಂಗಾರ್ಚಕರಲ್ಲಿ ಇಷ್ಟಲಿಂಗವನ್ನು ಅನುಪಮ ಲಿಂಗ, ಅಚಲಿತ ಲಿಂಗವೆಂದು ಅರಿದರಿದು

ನೋಡುವವರು ಶಿಕ್ಕುವದು ತೀರಾ ವಿರಳ. ಲಿಂಗಲಿಂಗ ಅನ್ನುವ ಸಾಕಷ್ಟು ಅರ್ಚಕರು ಶಿಕ್ಕುತ್ತಾರೆ. ಲಿಂಗವದು ಅಖಂಡ ಅನುಪಮ ಅಚಲ, ಇದು ವೇದ ವೇದಾಂತಗಳಿಗೆ ಅಸಾಧ್ಯವಾದುದರಿಂದ ಅನುಪಮವಾಗಿದೆ. ನಾದಬಿಂದು ಕಳೆಗಳಿಗಭೇದ್ಯವಾದುದರಿಂದ ಅಚಲಿತ ಲಿಂಗವಾಗಿದೆ .ವಾಙ್ಮನಕ್ಕೆ ನಿಲುಕದ್ದಾಗಿರುವದರಿಂದ ಅಖಂಡಿತ ಲಿಂಗವಾಗಿದೆ ಎಂದು ಅನ್ನುವವರೆ ಶಿಕ್ಕದಿರುವಾಗ ತಿಳಿಯ ಬೇಕೆಂಬುವವರು , ತಿಳಿದವರು ಶಿಕ್ಕುವದು ತೀರಾ ವಿರಳ . ಇದು ಕಾರಣ ಮನವು ಮನವಾಗಿಯೆ ಉಳಿದಿದೆ. ಪ್ರವೃತ್ತಿ ಮನ ಬೇಡವಾದಲ್ಲಿ ನಿವೃತ್ತಿ ಮನವಾಗಿ ಉಳಿಸಿಕೊಳ್ಳುತ್ತಿದೆ . ಮನವೆಂಬ ಸಲ್ಲು ಮಾತ್ರ ಹಾಗೆ ಉಳಿಯುತ್ತಿದೆ , ಪ್ರಭುವಿಂಗೆ ಮನವೆಂಬುದು ನಷ್ಟವಾಗಿ ಬಿಟ್ಟಿತ್ತು.

ಆಗಮವಿಲ್ಲದ ದೀಕ್ಷೆ; ಅದು ನಿಃಶಬ್ದ ಬ್ರಹ್ಮದ ದೀಕ್ಷೆ, ಶೃತಿಗಳಿಗಗೋಚರವಾದ ದೀಕ್ಷೆ, ಬೋಧ ನಷ್ಟಮಾಡುವ ದೀಕ್ಷೆ, ಇದು ಶಬ್ದ ಮುಗ್ದ ದೀಕ್ಷೆ ತನ್ನಿಂದ ತನ್ನ ಅರಿದರಿದು ನೋಡುವ ದೀಕ್ಷೆ ಈ ದಿಕ್ಷಾ ಕ್ರಮ , ಅನುಪಮವಾಗಿದೆ , ಗುರುವಾಗಿ ಕೊಡುವುದಿಲ್ಲ ಶಿಷ್ಯನಾಗಿ ಕೊಂಡುದಿಲ್ಲ ಗುರುವಾಗಿಯೂ ಗುರುವಾಗದೆ ಕೊಡುವ ಗುರ್‍ವಾನುಗ್ರಹದ ಸಂಕೇತ ಅನಿಮಿಷ ದೃಷ್ಠಿ, ಅದು ಗುರ್ವಾನುಗ್ರಹ ದೃಷ್ಠಿ. ಇದು ಶಿಷ್ಯನಾಗದೆ ಗುರುವಾಗಿ ಗುರ್‍ವಾನುಗ್ರಹ ಕೊಂಬುದು , ತನ್ನಿಂದ ತಾನೆ ಕೊಂಬುದು ಹೃದಯದ ದೀಕ್ಷೆ ಅದು ಹೃದಯವಾಗಿ ಅರುವಿನ ಘನವ ತನ್ನಿಂದ ತಾನೆ ಅರಿವ ನಿಲುವು ಅನುಪಮ ಅರುವಿನ ಘನವ ತನ್ನಿಂದ ತಾನರಿಯುವದರಿಂದ ಮನದ ಸೂತಕ ಮುಟ್ಟವಾಗಿ ಬಿಟ್ಟಿತ್ತು ಎಂದು ಹೇಳಿಹರು.

ನಾನೆಂಬ ಭಾವ ಗುಹೇಶ್ವರ ಲಿಂಗದಲ್ಲಿ ಐಕ್ಯವಾಯಿತ್ತು : ಗುಹೇಶ್ವರ ಲಿಂಗವೆಂಬುದು ನಿಃಶಬ್ದ ಬ್ರಹ್ಮದಿರುವುಳ್ಳ ಸಂಜ್ಞೆಯ ಲಿಂಗ , ಅರಿವುಡೆ ತಾನು ನಿಃಶಬ್ದ ಬ್ರಹ್ಮವು , ಆಗ ತಾನು ಭಾವಕ್ಕಗಮ್ಯನೆಂಬುದು ಸಂದಿಲ್ಲದಿರುವಾಗ , ನಾನೆಂಬ ಭಾವ ವೇತರದು ? ಪ್ರಭುವೆಂಬ ಭಾವ ಏತರದು ? ಗುಹೇಶ್ವರ ಲಿಂಗದಲ್ಲಿ ಐಕ್ಯವಾದ ನಿಲವು ಎಂದು ಹೇಳಿಹರು .

54

ಕಣ್ಣೊಳಗಣ ಕಸ , ಕಾಲೊಳಗಿನ ಮುಳ್ಳು ,
ಮನದೊಳಗಿನ ಶಂಕೆ ಹರಿಯಿತ್ತು ,
ಗುಹೇಶ್ವರನೆಂಬ ಭಾವ ನಿರಾಳವಾದಲ್ಲಿ. **|| 1042 ||**

ತಾತ್ಪರ್ಯ : ಕಣ್ಣಿನೊಳಗಣ ಕಸ, ಕಾಲೊಳಗಿನ ಮುಳ್ಳು : ಕಸ ಇದಾವ ಕಸ ? ಕಣ್ಣಿನೊಳಗಣ ಕಸ ? ಕಾಲೊಳಗಿನ ಮುಳ್ಳು ಕಂಡವರುಂಟು ತೆಕ್ಕೊಂಡವರುಂಟು . ಹೊರಗಿನ ಕಸ ಹೊರಗಿನ ಮುಳ್ಳು ತೆಗೆದುಕೊಂಡವರ ಮನದ ಸಂಶಯ ಪರಿಹಾರ ವಾಗದು , ಕಣ್ಣಿನೊಳಗಣ ಕಸ, ಲೋಕದವರ ಕಣ್ಣಿನೊಳಗಿದ್ದ ಕಸ. ಭಕ್ತರ ಕಣ್ಣಿನೊಳಗಿರುವ ಕಸ, ಜ್ಞಾನಿ ಕಣ್ಣಿನೊಳಗಿದ್ದ ಕಸ.

ಲೋಕದವರ ಕಣ್ಣಿನೊಳಗಿರುವ ಕಸ , ಕಾಯ ನಾನೆನ್ನುವ ಕಸ . ಇವರಿಗೆ ಕಣ್ಣಾವುದೊ ಕಸವಾವುದೊ ಇದನರಿಯರು , ಇವರಿಗೆ ಕಣ್ಣಿನ ಪರಿಚಯವಿಲ್ಲ ಕಸದ ಪರಿಚಯವಿಲ್ಲ , ಇವರಿಗೆ ಶ್ರೀಗುರುವಿನ ದರ್ಶನವಿಲ್ಲ, ಕಣ್ಣು ತಿಳಿಯದ್ದರಿಂದ ಕಣ್ಣಿನೊಳಗಣ ಕಸದಿಂದುಕ್ತರಾಗಿ ವಿಪರೀತ ಜ್ಞಾನವುಳ್ಳವರು . ಇವರಿಗೆ ಇಲ್ಲದುದು ಇದ್ದುದಾಗಿದೆ, ಇದ್ದುದು ಇಲ್ಲವಾಗಿದೆ. ಕಪ್ಪಚಿಪ್ಪು ಅದರಲ್ಲಿ ತೋರುವ ಬೆಳ್ಳಿ ಇದ್ದುದಾಗಿದೆ . ಇದ್ದರು ಕಪ್ಪಚಿಪ್ಪು , ಇಲ್ಲದುದಾಗಿದೆ . ಇಲ್ಲದುದು ಬೆಳ್ಳಿ ; ಇದು ಇದ್ದುದಾಗಿದೆ, ಇದ್ದ ಕಪ್ಪ ಚಿಪ್ಪು ಸದಾ ಇದ್ದುದು .

ಇಲ್ಲದ ನಾಮ ರೂಪ ಇದುದ್ದಾಗಿದೆ , (ಇದ್ದ ಭಾತಿ) ಪ್ರಿಯವಾದ ವಸ್ತುವಿನಲ್ಲಿ ಇಲ್ಲದ

ನಾಮ ರೂಪ ಕಾಣುವವರು ಕಣ್ಣಿನೊಳಗಣ ಕಸವುಳ್ಳವರು . ಇದ್ದ ಅಧಿಷ್ಠಾನವ ಮರೆತು ಇಲ್ಲದ ಕಲ್ಪಿತವ ಕಲ್ಪಿಸುವವರೆಲ್ಲ ಕಣ್ಣಿನೊಳಗಣ ಕಸವುಳ್ಳವರು . ಈ ದೋಷವುಳ್ಳ ದೃಷ್ಟಿ ವಂತರು ಇಲ್ಲದ ಮಾಯಿಕ, ಅವಿದ್ಯೆಯ ಕಲ್ಪಿಸಿ ಇದ್ದುದೊಂದೆ ಚೈತನ್ಯೆದಲ್ಲಿ ಈಶ್ವರ, ಜೀವ ಕಲ್ಪಿಸುವರು ಜೀವ ಜೀವ, ಜೀವ ಜಡ, ಈಶ್ವರ ಜಡ, ಜಡ ಜಡ ಹೀಗೆ ಪಂಚ ಪ್ರಕಾರ ಭೇದ ಕಲ್ಪಿಸುವರು. ಇದಲ್ಲದೆ ಕಾರ್ಯ ಕಾರಣಗಳೆ ಕಲ್ಪಿಸಿ, ನಾನಾ ಭೇದ ದೃಷ್ಠಿಯುಳ್ಳವರಾಗಿ, ಭಗವದರ್ಪಣ ಮಾಡುವರು.

ಉಪಾಸನೆ ಮಾಡುವ ಶೈವೋಪಾಸಕರಿರಲಿ, ವಿಷ್ಣೋಪಾಸಕರಿರಲಿ, ಪ್ರಣವ ಉಪಾಸಕರಿರಲಿ ಓಂಕಾರ ಧ್ಯಾನಾಸಕ್ತರಾಗಿರಲಿ ಇವರು ಭೇದ ಜ್ಞಾನಿಗಳು. ಇವರು ಅರ್ಪಿತದ ರಹಸ್ಯವರಿಯುದ್ದರಿಂದ ಶಿವ, ವಿಷ್ಣು, ಪ್ರಣವ ಅರಿಯದವರು. ಅರುವಿನ ಘನತ್ವ ಅರಿಯದ್ದರಿಂದ ಇವರು ಕಣ್ಣಿನೊಳಗಣ ಕಸವುಳ್ಳವರು . ಕಾಯ ನಾನೆಂದರೆ ಕರ್ಮ ಕಾಂಡಿ, ಈಶಾರ್ಪಣವೆಂದರೆ ಭಕ್ತಕಾಂಡಿ, ಸಕಲ ಕರ್ಮಂಗಳಿಗೆ ಸಾಕ್ಷಿ ನಾನಾಂದರೆ ಜ್ಞಾನ ಕಾಂಡಿಗಳು ಕಾಂಡತ್ರಯ ವಿಲ್ಲದ ಅಖಂಡನ ತೋರಾ ಕಪಿಲ ಸಿದ್ಧಮಲ್ಲಿಕಾರ್ಜುನ. ಸೀಮಿತ ಜ್ಞಾನಿಗಳು ಅಭಿಮಾನಿಗಳು ಕರ್ಮಿಯು ಕಾಯದಭಿಮಾನಿಯಾದರೆ ಭಕ್ತರು ಈಶಾರ್ಪಣದಭಿಮಾನಿ ಜ್ಞಾನಿಯು ಸಾಕ್ಷಿಯ ಅಭಿಮಾನಿ,ಚಿದಹಮ್ಮಿನ ಅಭಿಮಾನಿ ಯಾದ್ದರಿಂದ ಕಣ್ಣಿನೊಳಗಣ ಕಸವುಳ್ಳವರು . ಏಕೆಂದರೆ ಕಣ್ಣಿನ ಘನವ ತಿಳಿಯದವರು ಕಣ್ಣು ತಾನೆಂದರು, ಸಚ್ಚಿದಾನಂದ ನಾನು ಅಂದರು, ಕಣ್ಣು ಅದು ಕಣ್ಣೆಂದು, ನುಡಿದು ಹೇಳಿಲ್ಲ, ಅದು ಕಣ್ಣೆಂದರೇನು ಅನ್ನದಿದ್ದರೇನು ಕಣ್ಣಾಗಿಯೆ ಇದೆ, ಕಣ್ಣೆಂಬುದು ನಿರಂತರ, ಮೌನ, ಅದು ಶಬ್ಧ ಮುಗ್ಧ ಹಾಗೆ ತಾನು ನಿಃಶಬ್ಧ ಬ್ರಹ್ಮ ಅದು ನಿಃಶಬ್ಧ ಬ್ರಹ್ಮವೆಂದು ನುಡಿದು ಹೇಳಿಲ್ಲ. ಬ್ರಹ್ಮವದು ಬ್ರಹ್ಮವೆಂದರೂ ಮೌನ. ಲಿಂಗ, ಲಿಂಗ ವೆಂದರೂ ಮೌನ, ನಿಃಶಬ್ಧ ಬ್ರಹ್ಮವೆಂದರೂ ಮೌನ, ಬ್ರಹ್ಮಕ್ಕೆ ನಾ ಬ್ರಹ್ಮವೆಂಬುದು ಘಟಿಸದ್ದರಿಂದ ನಿರಂತರ ಮೌನ, ಅಲ್ಲಿಗೆ ಗುರುಗಳ ಉಪದೇಶ ಬರದು, ಅಜ್ಞಾನವು ಬರದು, ಕಲ್ಪಿತನ ಅವಿಚಾರವು ಬರದು ವಿಚಾರವು ಬರದು, ನಿರಂತರ ಇದ್ದಕ್ಕಿಂದ್ದತೆಯೆ ಇದೆ. ಅದನ್ನು ಇದ್ದಂತೆ ತಿಳಿವುದು ಆರು ಇದ್ದಂತೆ ತಿಳಿವುದಿಲ್ಲ ಅವರೆಲ್ಲ ಕಣ್ಣಿನೊಳಗಣ ಕಸವುಳ್ಳವರು. ಪ್ರಭುದೇವ, ಗುಹೇಶ್ವರನೆಂಬ ಭಾವ ನಿರಾಳ ವಾದುದರಿಂದ ಅವರ ದಿವ್ಯ ದೃಷ್ಠಿಗೆ ಕಲ್ಪಿತ ಪುರುಷನ ಕಾರ್ಯವೆಲ್ಲ ಕಣ್ಣಿನೊಳಗಣ ಕಸವೆಂದು ಹೇಳಿಹರು.

ಕಾಲೊಳಗಿನ ಮುಳ್ಳು : ಇದು ಭವದ ಮುಳ್ಳು, ಹುಟ್ಟು ಸಾವಿನ ಭೀತಿಯ ಮುಳ್ಳು, ಇದು ಗತಿ ಮತಿಯಿಂದುಕ್ತವಾದುದರಿಂದ, ಕಾಲೊಳಗಿನ ಮುಳ್ಳು. ನಾಹಂ, ಕೋಹಂ, ಸೋಹಂ, ಚಿದಹಮ್ಮ ಎನ್ನುವವರು ಕಾಲೊಳಗಿನ ಮುಳ್ಳು, ಇದು ಶಬ್ದ ಸಂಭ್ರಮದ ಮುಳ್ಳು, ತಾನಾರೆಂದರಿವುಡೆ, ತಾನು ನಿಃಶಬ್ಧ ವೇದಿ ಶೃತಿಗಗೋಚರನಾಗಿರುವಲ್ಲಿ, ವೇದ ಶಾಸ್ತ್ರ ಪುರಾಣಾಗಮಂಗಳಿಂದ ಶಬ್ಧವೇದಿ ಹೇಗಾಗುವನು ? ತಾನು ಕ್ಷರಾಕ್ಷರ ಮೀರಿದ ಘನ ಶಬ್ಧ ಮುಗ್ಧ. ನಿಜವರಿತವರು ನಿಜವೆನ್ನದವರು ಉಳಿದವುಗಳೆಲ್ಲ ಕಾಲೊಳಗಿನ ಮುಳ್ಳು . ಲಿಂಗ,ಲಿಂಗ, ಎಂಬುವ ಲಿಂಗ ಸೂತಕಮಯ್ಯ, ಜಂಗಮ, ಜಂಗಮ, ಎಂಬುವ ಜಂಗಮ ಸೂತಕಮಯ್ಯ ಪ್ರಸಾದ ,ಪ್ರಸಾದ, ಎಂಬುವ ಪ್ರಸಾದಿ ಸೂತಕಮಯ್ಯ. ಈ ತ್ರಿವಿಧ ಸೂತಕವೆ ಹೇಳಲಾಗದು. ತ್ರಿವಿಧ ಸಮವೆಂಬುದು ಸೂತಕ ಈ ಸೂತಕ ಕೇಳಲಾಗದು. ಸರ್ವ ಸೂತಕ ನಿರ್ವಯಲಾಯಿತ್ತು ಕೂಡಲಚೆನ್ನಸಂಗಮದೇವಾ ನಿಮ್ಮ ಶರಣಂಗೆ ಶರಣರು ಮಾತ್ರ ಕಾಲೊಳಗಿನ ಮುಳ್ಳು ತೆಗೆದವರು. ಮರವರುವಿಗೆ ಮೀರಿದ ಘನವುಳ್ಳ ಜ್ಞಾನಿಗಳು. ಬುದ್ಧಿಗತ ವುಳ್ಳ ಜ್ಞಾನಕ್ಕೆ ಬರದವರು ಜ್ಞಾನದೊಳಗಣ ಬುದ್ಧಿ, ಭಸ್ಮ ಮಾಡಿದವರು, ಅವರ ಜ್ಞಾನ ಲಿಂಗವರಿತ ಜ್ಞಾನ ಜಂಗಮವರಿತ ಜ್ಞಾನ, ಪ್ರಸಾದವರಿತ ಜ್ಞಾನ, ಅರುವಿಂಗರುವಾದವರು, ನಿಃಶಬ್ಧ ಘನ ಗಂಭೀರದಲ್ಲಿ ನೆರೆ ನಿಂತವರು. ಅವರಿಗೆ

ಅಂಗವೆಂಬುದಿಲ್ಲ ಇಲ್ಲವಾದುದರಿಂದ ಸಂಸಾರವೆಂಬುದಿಲ್ಲ, ಸಂಸಾರವೆ ಕಾಣದ್ದರಿಂದ ತನುವ ಕಾಣದು, ಕಾಣದುದ ಕಂಡ ಮಹಾಂತ ಅನುಪಮ , ಖಂಡಾ ಖಂಡ ಸಂಯೋಗ ವಿಲ್ಲದ ಅಖಂಡಿತ ಘನ, ನಿರಂತರ ವಾದದು ಮಂಗಳಮಯನ ಜ್ಞಾನ ಉದಯಾಸ್ತವಿಲ್ಲದ ಜ್ಞಾನ, ಅದು ತರ್ಕದಿಂದುಕ್ತವಾದುದಲ್ಲ ಸಮಾಧಿ ಯೋಗವೂ ಅಲ್ಲ ಗುರುಪದೇಶವೂ ಅಲ್ಲ ಅದು ಸಹಜ ಸ್ಥಿತಿ.

ಜ್ಞಾನ ! ಜ್ಞಾನದಂತಿದ್ದಿತ್ತು ಬಯಲೆಂಬುದು ಬಯಲು , ಬಯಲಿನಂತೆ ಇಪ್ಪುದು , ಅದು ಬಯಲಾಗಿದ್ದವರಿಗೆ ವಿದಿತವು . ಚಿದ್ಘನವದು ಚಿದ್ಘನದಂತೆ ಇಪ್ಪುದು , ಇಲ್ಲಿ ಚಿತ್ ಸ್ವರೂಪ ತಾನೆಂಬ ಮಮತೆಗೆಡೆಯಿಲ್ಲ, ಇದು ಕಾರಣ ಅರಿವುಡೆ ಚಿದ್ಘನ ತಾನು ತಾನೆ ತಾನೆ ತನ್ನಿಂದ ಅರಿವುದು ಇದು ಎರವಲ ಜ್ಞಾನದಿಂದ ಲಭ್ಯವಾಗುವದಲ್ಲ.

ಮನದೊಳಗಿನ ಶಂಕೆ ಹರಿಯಿತ್ತು : ಮನದೊಳಗಿನ ಸಂದೇಹ ಮನಕ್ಕೆ ಮೀರಿದ ಘನದಿರುವಿನ ಅರುವು ತನ್ನಿರುವು ಆಗಬೇಕು , ಘನಕ್ಕೆ ಘನ ತಾನಾಗಬೇಕು ನಿಃಶಬ್ಧ ಬ್ರಹ್ಮದಿರುವೆ ತನ್ನಯ ಇರುವು ಆಗಬೇಕು , ಆಗ ಮನದೊಳಗಣ ಶಂಕೆ ಹರಿಯುತ್ತದೆ.

ಕಲ್ಪಿತ ಪುರುಷನಿಗೆ ತಾನೆಂಬ ಶಂಕೆ ಇದೆ , ಕಣ್ಣಿನೊಳಗಣ ಕಸವಿದ್ದರೂ ಕಾಲೊಳಗಣ ಮುಳ್ಳು ಇದ್ದರು, ಕಲ್ಪಿತ ಜ್ಞಾನ ಬರುವ ಹೋಗುವ ಜ್ಞಾನ ಮತಿಗತಿ ಗೊಳಪಟ್ಟ ಜ್ಞಾನ, ಇದು ಕಾರಣ ತಾನಾರೆಂದು ತನ್ನಿಂದ ಅರಿಯಲು ತಾನು ಅರುವಿಂಗರುವು ಎಂಬುದು ವಿದಿತ ವಾಗುವುಡೆ , ಕಲ್ಪಿತ ಪುರುಷ ತಾನಾಗದ್ದರಿಂದ ಕಣ್ಣಿನೊಳಗಣ ಕಸವು ಹೋಯಿತ್ತು. ಕಾಳಿನೊಳಗಣ ಮುಳ್ಳು ಹೋಯಿತ್ತು. ಆಗ ಮನದೊಳಗಿನ ಶಂಕೆ ಹರಿಯಿತ್ತು , ಗುಹೇಶ್ವರನೆಂಬ ಭಾವ ನಿರಾಳವಾಯಿತ್ತು.

ಗುಹೇಶ್ವರನೆಂಬ ಘನಲಿಂಗ ಏನೊಂದುಸರಲು ಎಡೆಗೊಡದ ಬೆಳಗುಳ್ಳ ಬೆಳಗು . ಅದನ್ನಾರು ಬೆಳಗಲಿಲ್ಲ. ಬಹು ಸಾಧಕರು ಸಿದ್ಧರು ನಿಃಶಬ್ಧ ಬ್ರಹ್ಮದಲ್ಲಿ ಲೀಯವಾದವರು ಶಿಕ್ಕುವದು ವಿರಳ. ಇವರು ಕೋಟಿಗೊಬ್ಬರು ಗುಹೇಶ್ವರ ನೆನ್ನುವರು ಶಿಕ್ಕುತ್ತಾರೆ . ಘನ ಲಿಂಗ ಎನ್ನುವವರು ಶಿಕ್ಕುತ್ತಾರೆ. ಘನಲಿಂಗ ಎಂಬುದನ್ನು ಆವುದು ಬೆಳಗುತ್ತದೆ, ಅದರಲ್ಲಿ ಲೀಯವಾಗಿರುವ ಮಹಾಂತರು ಶಿಕ್ಕವುದು ವಿರಳ.ಇದು ಕಾರಣ ,ಗುಹೇಶ್ವರನೆಂಬ ಭಾವ ನಿರಾಳವಾಗಬೇಕು . ಶಬ್ಧ ಮುಗ್ಧ ವಾಗಬೇಕು , ನಿಃಶಬ್ಧ ಬ್ರಹ್ಮ ದರಿವು ತನ್ನದಾಗ ಬೇಕು ,ಎಂದು ಹೇಳಿಹರು .

55

ಕಾಲು , ಕರ, ಜೀವದೊಳಗಾಡುವ ಭಾವವವು ದೈವವೇ ?
ನಾನು ಎಂಬುದು ತಾನಳಿದಲ್ಲಿ ಗುಹೇಶ್ವರ ಲಿಂಗವು ತಾನೆ. ॥ 1111 ॥

ತಾತ್ಪರ್ಯ : ಕಾಲು , ಕರ , ಜೀವದೊಳಗಾಡುವ ಭಾವವವು ದೈವವೆ : ಇದಾವ ಕರ ಕಾಲು ಜೀವದೊಳಗಾಡುವ ಭಾವವ ದೈವ ವೆನಬೇಕು ? ಕಲ್ಪಿತ ಪುರುಷನ ಪ್ರವೃತ್ತಿ ಪರವಾದ ಕ್ರಿಯಾಚಾರ ಧರ್ಮಾಚಾರ ಭಾವಾಚಾರ ವೆನಬೇಕೆ ? ಅಥವಾ ನಿವೃತ್ತಿ ಪರವಾದ ಜ್ಞಾನಾಚಾರ ವೆನಬೇಕೆ ? ಪ್ರವೃತ್ತಿ ಪರವಾದ ಕ್ರಿಯಾಚಾರ ವಿರಲಿ , ಭಾವಾಚಾರ ವಿರಲಿ ಅಂತಃ ಕರಣ ಶದ್ಧಿಗೋಸ್ಕರ , ಮಾಡುವ ಸತ್ಯ , ಅಹಿಂಸೆ, ಬ್ರಹ್ಮಾಚರ್ಯ, ಆಸ್ತೇಯ , ಅಪರಿಗ್ರಹ ಇವುಗಳಿಗೆ ಕಾಲು ಎನಬೇಕೆ ? ಕರ ಎನಬೇಕೆ ? ದೈವ ವೆನಬೇಕೆ ? ನಿವೃತ್ತಿ ಪರವಾದ ಜ್ಞಾನನ ಕ್ರಿಯೆ ದಿಂದುಕ್ತವಾದ ಧರ್ಮಾಚಾರಕ್ಕೆ ಕಾಲು ಎನಬೇಕೆ? ನಿತ್ಯಾನಿತ್ಯ ವಿಚಾರಕ್ಕೆ ಕರ ಎನಬೇಕೆ ? ಕುರುಹುನಿಂದುಕ್ತವಾದುದು ದೈವವೆನಬೇಕೆ ? ಗುರುಭಾವವು ದೈವವೆ ? ಲಿಂಗ ಭಾವವು ದೈವವೆ? ಜಂಗಮ ಭಾವವು ದೈವವೆ ? ಪ್ರಸಾದವು ದೈವವೆ ? ವಿಭೂತಿ

ದೈವವೆ ? ರುದ್ರಾಕ್ಷಿ ದೈವವೆ? ಇವು ಬಹಿರ್ ಅಷ್ಟಾವರಣ ದಿಂದುಕ್ತವಾದ ಭಾವ ದೈವವೆ?

ಅಂತರಂಗ ಅಷ್ಟಾವರಣವುಳ್ಳ ಸುಜ್ಞಾನ, ಸದ್ಭಾವ, ಸಮದೃಷ್ಠಿ, ಕರಣಂಗಳ ಪೂರ್ವ ಸ್ವಭಾವ ಕೆಟ್ಟು, ಅರುವಿನ ಕಿರಣಂಗಳಾಗಿಹ ಜ್ಞಾನೋದಕ, ಜ್ಞಾನ ಗಂಗಾ, ಏಕಾತ್ಮಜ್ಞಾನ, ಷಡಕ್ಷರಿ ಪಂಚಾಕ್ಷರಿ ಎರಡಕ್ಷರ ಮಂತ್ರ ಇವುಗಳ ಭಾವದಲಾದುವದು ದೈವವೆ? ಪ್ರವೃತ್ತಿ ಪರವಾದ ಮಲ ವಿಕ್ಷೇಪ ದೋಷ ಕಳೆದು ಕೊಳ್ಳುವ ಕ್ರಿಯಾಚಾರಕ್ಕೆ ದೈವ ವೆನಬೇಕೆ ? ನಿವೃತ್ತಿ ಪರವಾದ ಜ್ಞಾನ ಮಾರ್ಗ , ಆವರಣ ಕಳೆದು ಕೊಳ್ಳುವ ಜ್ಞಾನಾಚಾರಕ್ಕೆ ದೈವವೆನಬೇಕೆ? ಆವುದಕ್ಕೆ ದೈವ ಎನಬೇಕು, ಇಲ್ಲಿ ವಿವೇಕ ವಿದೆ, ವೈರಾಗ್ಯ ವಿದೆ, ನಿತ್ಯಾನಿತ್ಯಗಳ ವಿಚಾರವಿದೆ ಕ್ಷರ ಭಾವಕ್ಕೆ ತಿರಸ್ಕೃತ ವಿದೆ, ಅಕ್ಷರ ಭಾವಕ್ಕೆ ಪ್ರಾಧಾನ್ಯತೆ ಇದೆ . ಬಹಿರ ಮುಖಕ್ಕೆ ಪ್ರಾಧಾನ್ಯತೆ ಇಲ್ಲ ಅಂತರ್ಮುಖಕ್ಕೆ ಪ್ರಾಧಾನ್ಯತೆ ಇದೆ . ಜೀವ ಪರಮರೇಕತ್ವನುಸಂಧಾನಕ್ಕೆ ಬಹು ಮುಖ್ಯತೆ ಇದೆ, ಇಲ್ಲಿ ಆನು ಅರಿದೆನೆನ್ನುವ ಭಾವ ಇದೆ. ದೇಹ ಭಾವ ನಷ್ಟವಾದುದಾಗಿದೆ. ಇದು ಕಾರಣ ದೇಹ ಭಾವ ಅಳಿದು ಲಿಂಗಭಾವಿಯಾಗಿ ಉಳಿದೆನೆನ್ನುವ ಭಾವವಿದೆ . ತಾನು ಅಣುವಿಗಿಂತಲು ಅಣುವಾಗಿ, ಮಹತ್ತಿ ಗಿಂತಲೂ ಮಹತ್ ಸ್ವರೂಪ ನೆಂಬ ಭಾವವು ಇದೆ. ಪ್ರಪಂಚ ಪ್ರತೀತಿಯಾದರೂ ಬ್ರಹ್ಮಾಕಾಶ ವುಳ್ಳವನಾಗಿ ಅಂತಃರ್ಮುಖ ವಾಗಿದ್ದಾನೆ ಇದು ಕಾಲು, ಸಚ್ಚಾರಿತ್ರ ಕಾಲು, ಕಾಲನನ್ನು ಗೆದ್ದ ಕಾಲ. ಮರಣವ ಗೆದ್ದ ತಾ ಅಮರನೆನ್ನುವ ಸಚ್ಚಾರಿತ್ರ ಕಾಲು. ಅನಾತ್ಮ ಭಾವಕ್ಕೆಡೆಗೊಡದ ಆತ್ಮ ಭಾವ ವುಳ್ಳವನಾಗಿರುವ ಕಾಲು.

ತನುವಿನಲ್ಲಿ ನಿರ್ಮಮ, ಮನದಲ್ಲಿ ನಿರಹಂಕಾರ , ಪ್ರಾಣದಲ್ಲಿ ಉದಾಸೀನ ಜ್ಞಾನದಲ್ಲಿ ಸಚ್ಚಿದಾನಂದ ಭಾವ ಇವು ಲಿಂಗವಂತನ ಸಚ್ಚಾರಿತ್ರ್ಯಂಗ ಅಂತರ ದಲ್ಲಿ ತತ್ವ, ಅತತ್ವೆ ವೆಂಬ ವಿವೇಕ ಭಾವ ಅತತ್ವಕ್ಕೆ ಮುಖ್ಯತೆ ಕೊಡದಿರುವುದು, ತತ್ವದ ಭಾವಿ ಯಾಗಿರುವುದು ಇದು ಸದ್ಭಾವದ ಕರ.

ಪುಣ್ಯದ ಕಾಯ, ನಿಗ್ರಹ ಕಾಯ , ಸುಸಂಯಮಿ ಕಾಯ , ಬ್ರಹ್ಮಚರ್ಯ ಕಾಯ , ಧ್ಯಾನಸ್ಥ ಕಾಯ , ಲಿಂಗಾಂಗ ಸಮರಸ ಭಾವದಿಂದುಕ್ತವಾದ ಕಾಯ , ಪ್ರಣವಾನುಸಂಧಾನ ಕಾಯ, ನಿರಂತರ ಸೋಹಂ ಭಾವದಲ್ಲಿದ್ದ ಕಾಯ , ಬಹಿರಂಗದಲ್ಲಿ ದಾಸೋಹಂ ಭಾವಿಯಾಗಿದ್ದ ಕಾಯ , ಇದು ಕಲ್ಪಿತ ಪುರುಷನ ಆವರಣ ನಿರಸನ ಮಾಡುವ ಶ್ರವಣ , ಮನನ , ನಿಧಿಧ್ಯಾಸದ ಕಾಯ , ಗುರು ಸೇವೆಯಲ್ಲಿ ತತ್ಪರವಾದ ಕಾಯ, ಇದು ಸಚ್ಚಾರಿತ್ರ ಈ ಸಚ್ಚರಿತ್ರವೆ ಕಾಲು ಆಗಿದೆ.

ಲಿಂಗಾಂಗ ಸಮರಸ ಜ್ಞಾನ ದಿಂದುಕ್ತವಾದ ಸದ್ಭಾವವೆ ಕರವಾಗಿದೆ, ಚಿದಹಮ್ಮಿನಿಂದುಕ್ತವಾದ ತೂರ್ಯ ಕಾಯವೆ ಕಾಯವಾಗಿದೆ. ಇದು ದ್ವಿ ಜಾತಿ ಎರಡು ಸಾರೆ ಹುಟ್ಟಿ ಬರುವರು , ಗುರುಹೃದಯದ ತತ್ವದಿಂದ ಹುಟ್ಟಿದವರು ತತ್ವ ನಿಷ್ಠೆಯುಳ್ಳವರು . ತತ್ವಾನು ಸಂಧಾನ ಮಾಡುವವರು , ಇವರು ಲಿಂಗ ಅಂಗ ಒಂದೆಂಬ ಸದ್ಭಾವಿಗಳು , ಇದು ಕಾರಣ ಕಾಲು ಕರ ಕಾಯ ಜೀವದೊಳಗಾಡುವ ಭಾವವ ದೈವವೆ ಎಂದು ಪ್ರಭು ದೇವ ಪ್ರಶ್ನಿಸಿದ್ದಾನೆ.

ಜೀವ ಭಾವವುಳ್ಳವನಾಗಿದ್ದಾನೆ , ತಾನು ಜೀವನೆಂದು ತಿಳಿದು ಲಿಂಗಾಂಗ ಸಮರಸ ಜ್ಞಾನಿ ಎಂದರು ಒಳಗೆ ತಾನು ಕಲ್ಪಿತ ಪುರುಷ ನೆಂಬುದು ಒಪ್ಪಿದುದಕ್ಕಾಗಿ ನಿವೃತ್ತಿ ಪರವಾಗಿಹ ವೈರಾಗ್ಯ, ಜ್ಞಾನ , ಕ್ರಿಯೆ , ಮುಖ್ಯವೆಂದು , ಅರುವಿನ ಅಭಿಮಾನಿ ಪ್ರಪಂಚ ಪ್ರತೀತ ಬ್ರಹ್ಮಾಕಾಶವುಳ್ಳವನಾಗಿ ಜೀವನ್ಮುಕ್ತ ನೆನೆಸಿಕೊಂಡು ಅರುವಿನ ಚಾರಿತ್ರೆವುಳ್ಳವನಾಗಿ ಅವನ ಕರ ಅರುವಿನ ಕರ, ಅವನ ಕಾಲು ಅರುವಿನ ಕಾಲು ಅರುವಿಗಾಗಿ ಅರುವಿನ ಸುಖಕ್ಕಾಗಿ ನಿರಂತರ ಬ್ರಹ್ಮಾಕಾರವುಳ್ಳವನು. ಅದು ಅವನ ಸ್ವರೂಪವಾಗಬಹುದೆ ? ನಿಃಶಬ್ದ ಬ್ರಹ್ಮದಿರುವುಳ್ಳ ಅರುವು ಆಗಬಹುದೆ ? ಇದರಿಂದ ತಾನಾರು? ತನ್ನಸ್ವಮಹಿಮೆಯಲ್ಲಿ ನೆಲಸಬಹುದೆ? ತನ್ನತಾನರಿತವಂಗೆ ಕಾಲು ಇರಬಹುದೆ? ಕರ ಇರಬಹುದೆ?

ಕಾಯ ಇರಬಹುದೆ ? ಇಲ್ಲಿ ಮರವಿನ ಕಾಲು ಕೈಯಿ ಕಾಯ ಹೇಳಿಲ್ಲ. ಅರುವಿನ ಕಾಲು , ಕರ , ಕಾಯ ಹೇಳಿದೆ. ಇವರು ಅರುವ ಅರಿಯದವರು ಗುರು ಘನನು ಅರುವ ಅರಿಯ ಹೇಳಿ ಕುರುಹ ಕೊಟ್ಟರೂ ಅದನ್ನು ಮರೆತು ಲಿಂಗಾನು ಸಂಧಾನ ದಲ್ಲಿದ್ದವರು . ಇದು ಕಾರಣ ಸಚ್ಚಾರಿತ್ರ ಪುರುಷರಾದರು ಸದ್ಭಾವಂಗಳೆ ಇವರ ಕೈಗಗಳಾದವು. ಚಿದಹಮ್ಮು ಇವರ ಕಾಯ ವಾಯಿತ್ತು , ಇವರಿಗೆ ಅರುವಿಂಗರುವಾಗಿಹ ಅನುಪಮ ಸುಖ ಕಾಣದಾಯಿತ್ತು.

ನಾನೆಂಬುದು ತಾನಳಿದಲ್ಲಿ ಗುಹೇಶ್ವರ ಲಿಂಗ ತಾನೆ: ಚಿದಹಮ್ಮು ಇದು ತತ್ವ ವಿಚಾರದಿಂದ ಬಂದ ಅಹಮ್ಮು, ಇದು ತಾನಾರೆಂದು ತನ್ನ ಅರಿತಾಗ ನಾನೆಂಬುದು ತಾನಳಿಯಲು ಬರುತ್ತದೆ. ತಾನು ಎಲ್ಲಿಯ ವರೆಗೆ ಕಲ್ಪಿತ ಪುರುಷನಾಗಿ ನೋಡುವನು ಆಗ ನಾನೆಂಬುದು ಅಳಿಯುವದು ದುಸ್ತರ . ಈ ಚಿದಹಮ್ಮು ಕಳೆದು ಕೊಳ್ಳಲು ಕೆಲಬರು ಬಹು ಪ್ರಯತ್ನ ಮಾಡಿಹರು , ಮಾಡಿದರೂ ಅದನ್ನು ಅಳಿಯುವ ವರ್ಮ ಗೊತ್ತಾಗದ್ದರಿಂದ , ಚಿದಹಮ್ಮು ಭಾವಿಗಳಾದರು , ಇದು ಲಿಂಗ ಸಕೀಲ ಸಂಯೋಗ ವರ್ಮಸ್ಥಲ ನರಿತವರ ರಹಸ್ಯವಲ್ಲ.

ಆರಿಗೆ ಕಾಣಬಾರದ ಗುರು ಕಣ್ಗೆ ಗೋಚರವಾಗಿಹನು , ಆ ಮಹಾಂತನ ಮುಟ್ಟಲಿಲ್ಲದ ಹಸ್ತ ಮಸ್ತಕ ಸಂಯೋಗವಾಗಿದೆ , ಪೂಜೆಗೆ ಬಾರದ ಲಿಂಗ, ಕಿವಿಗೆ ಕೇಳದ ಮಂತ್ರ ಆಗಮವಿಲ್ಲದ ದೀಕ್ಷೆಯಾಗಿದ್ದುದ ಅರಿತಿರುವದರಿಂದ ಗುಹೇಶ್ವರ ಲಿಂಗ ತಾನಾದ ಮಹಾಂತ. ಈ ಘನವಂತನದು ನಿಸ್ಸೀಮ ದೃಷ್ಠಿ ಅರಿಯದರುವು , ಶಬ್ಧ ಮುಗ್ಧ ನಿಲುವುಳ್ಳ ಗುರು ಘನ , ವೇದ ವೇದಾಂತಗಳಿಗ ಸಾಧ್ಯವಾಗಿಹ ,ಅನುಪಮ ಲಿಂಗ , ಅದು ಪೂಜೆಗೆ ಬಾರದ ಲಿಂಗ , ವಾಙ್ಮನಕ್ಕೆ ಬಾರದ ಅಖಂಡಿತ ಜ್ಞಾನ ಘನವೆ ಕಿವಿಗೆ ಕೇಳದ ಮಂತ್ರ , ಇವುಗಳ ಅರಿಯ ಹೋಗುವುಡೆ ನಾನೆಂಬುದು ಸಹಜ ತಾನಾಗಿಯೆ ಅಳಿಯುತ್ತದೆ. ಆಗ ಗುಹೇಶ್ವರ ಲಿಂಗ ತಾನೆ ಎಂಬುದು ತನ್ನಿಂದ ತನಗೆ ವಿದಿತವಾಗುವುಡೆ ತಾನೆಂಬುದು ತಾನಳಿಯುತ್ತದೆ.

56

ಉದಯ ಬಿಂದು ರೂಪಾಯಿತ್ತು , ಅಂತರ ಬಿಂದು ನಿರೂಪ ವಾಯಿತು .
ಊರ್ಧ್ವ ಬಿಂದು ನಿಃಶೂನ್ಯ ವಾಯಿತ್ತು , ತ್ರಿವಿಧ ಲಿಂಗವ ಕೂಡಿ ಬಯಲಾಯಿತ್ತು
ಗುಹೇಶ್ವರ ಲಿಂಗದಲ್ಲಿ . ॥ 957 ॥

ತಾತ್ಪರ್ಯ : ಉದಯ ಬಿಂದು ರೂಪಾಯಿತ್ತು : ಇದಾವ ಬಿಂದು ? ಉದಯ ಬಿಂದು ಸೂರ್ಯಂಗೆ ಉದಯ ಬಿಂದು ಎನ್ನಲೆ ? ಇದು ಜಗದ ಕಣ್ಣಿಂಗೆ ರೂಪಾಗಿ ತೋರುತ್ತದೆ . ಉದಯಾಸ್ತದಿಂದುಕ್ತವಾದುದು ಉದಯದಲ್ಲಿ ಒಂದು ಬಗೆ ಮಧ್ಯಾನದಲ್ಲಿ ಇನ್ನೊಂದು ಬಗೆ ಬಿಂದು ಸಾಯಂಕಾಲದಲ್ಲಿ ಒಂದು ಬಗೆ, ಇದು ಇದ್ದಂತಿರುವದಲ್ಲ. ಪರಿವರ್ತನೆಯುಳ್ಳದು ಬ್ರಹ್ಮ,ವಿಷ್ಣು, ರುದ್ರ ಗಣ ಇವರುಗಳಿಗೆ ಉದಯಬಿಂದು ಎನ್ನಬಹುದೆ ? ಇವು ಮಾಯಿಕ ತನು, ಉದಯ ಬಿಂದು ರೂಪದಿಂದುಕ್ತವಾದ ಬಿಂದುವಾಗದು.

ಉದಯ ಬಿಂದು ಇದಾವ ಬಿಂದು ರೂಪಾಯಿತ್ತು? ವೇದ ವೇದಾಂತಗಳಿಗೆ ಅಸಾಧ್ಯವಾದ ಅನುಪಮ ಚಿದ್ಬಿಂದು, ಗುರು ಕೃಪೆಯಿಂದ ಹೊರ ಬಂದು ಭಕ್ತರ ಕರ ಕಮಲದಲ್ಲಿ ಪ್ರಜ್ವಲಿಸುವ ಜ್ಞಾನ ಘನ, ಉದಯಾಸ್ತಂಗಳಿಗೆ ಬೆಳಗುವ ಲಿಂಗ ತಾನಾರೆಂದು ತನ್ನ ಅರಿಯುವ ಅರುವುಳ್ಳ ಉದಯಬಿಂದು ಇದು ಅರುವು ಅರಿಯ ಹೇಳಿ ಸದ್ಗುರು ನಾಥ, ಕುರುಹ ಕೈಯಲ್ಲಿ ಕೊಟ್ಟ ಜ್ಞಾನೋದಯ ಬಿಂದು. ಅರಿದರಿದು

ನೋಡುವುಡೆ, ಉದಯ ಬಿಂದು ವೆನ್ನಲು ಬಾರದ ಅನುಪಮ. ಇದು ಗುರುವಿನಿಂದ ಬಂದುದು ಎನ್ನಲು ಬರದು, ಏಕೆಂದರೆ ಗುರುವಿನಿಂದ ಲಭ್ಯವಾಗದ ಮುನ್ನವೆ ತನ್ನ ಅಂತರಂಗದೋಳ ನೆಲೆ ನಿವಾಸವಾಗಿಹ ಲಿಂಗ, ಇದಕ್ಕೆ ರೂಪ ವೆನ್ನಲು ಬರದು, ಅರೂಪ ವೆನ್ನಲು ಬರದು, ನಾದ ಬಿಂದು ಕಲೆಗಳಿಗ ಭೇದ್ಯವಾಗಿಹ ಅಚಲಿತ ಲಿಂಗ. ಇದು ಅಂತರಂಗ ದೋಳ್ ಬೆಳಗುವ ಚಿಜ್ಯೋತಿ, ತನ್ನ ಅಚಲಿತ ಲಿಂಗ, ಈ ಘನ ಲಿಂಗಕ್ಕೆ ನಾದವೆನ್ನಲು ಬರದು ಬಿಂದು ವೆನ್ನಲು ಬರದು . ಕಳೆಯಿಂದುಕ್ತವಾದುದು ಎನ್ನಲು ಬರದು. ಇದು ಚಲಿಸ್ಯಾಡದ ಲಿಂಗ ವಾದುದರಿಂದ ಅಂತರ ಬಿಂದು ನಿರೂಪವಾಯಿತ್ತು ಎಂದು ಹೇಳಿಹರು.

ಅಂತರ ಬಿಂದು ನಿರೂಪ ಬಿಂದು ಗುರು ಕಾರುಣ್ಯದಿಂದ ಲಭ್ಯವಾದುದು. ಉದಯ ಬಿಂದು, ಚಿದ್ಬಿಂದು. ಭಕ್ತರ ಕರ ಕಮಲದಲ್ಲಿ ಬೆಳಗಿ ರೂಪಾಗಿ ಕಂಡುದು . ಅದುವೆ ಅರಿದು ನೋಡುವುಡೆ ತನ್ನಂತರಂಗದೋಳ್ ಪ್ರಜ್ವಲಿಸಿರುವ ಅಸ್ವರೂಪವಾಗಿಹ ಬಿಂದು ಅಂತರಂಗ ಬಿಂದು ವೆನಿಸಿ ನಿರೂಪವಾಗಿಹುದು . ಇದು ಬ್ರಹ್ಮ ಪದ ವಿಷ್ಣು ಪದ, ರುದ್ರ ಪದ , ಗಣನೆಗೆಡೆಗೊಡದ ಘನ ಲಿಂಗ , ತನ್ನೊಳಗೆ ಇದ್ದ ಲಿಂಗ ನಿಷ್ಕಳಂಕ ಲಿಂಗ ಇದು ಕಾರಣ ನಿರೂಪ ವಾಯಿತ್ತು ಎಂದು ಹೇಳಿಹರು.

ಊರ್ಧ್ವ ಬಿಂದು, ನಿಃಶೂನ್ಯ ವಾಯಿತ್ತು ಇದು ವಾಙ್ಮನೋತೀತವು. ಏಕೆಂದರೆ ಅವರ್ಣೀಯವು ಚಿಂತಿಸುವರೆ ಅಚಿಂತ್ಯವು ಭಾವಿಸುವರೆ ನಿರ್ಭಾವವು ಅರಿವರೆ ಅರಿಯಬಾರದ ಘನವು, ಅರಿಯುವದದೆಂತು ಅಕಥನೀಯವು, ಕಥನಕ್ಕೊಳ್ಳ ಪಡಬಹುದೆ? ಅಖಂಡಿತವು ಖಂಡ ಖಂಡ ವಾಗುವದದೆಂತು ? ಅಖಂಡಿತ ಘನವು ಆವಾವುದಕ್ಕು ಸಂದುಕೊಡದ ಲಿಂಗ, ಇದು ತನ್ನಿಂದ ತಾನು ಅರಿದರಿದು ನೋಡಿದ ದಿವ್ಯ ದೃಷ್ಠಿ, ಸುಜ್ಞಾನ ತೇಜ, ಅರಿಯದರುವಾಗಿ ನಿಂತು ನೋಡಿದ ದೃಷ್ಠಿ ಊರ್ಧ್ವ ಬಿಂದು ಇದು ನಿಶೂನ್ಯ ವಾಯಿತ್ತು. ಇದು ತಾನೆ ತಾನಾದ ತತ್ವ ಜ್ಞಾನ ಸ್ವರೂಪ , ತನ್ನಿಂದ ತನ್ನ ಅರಿದರಿದ ಅರುವು ಇದು ತನ್ನಯ ಬಿಂದು . ಊರ್ಧ್ವ ಬಿಂದು ತಾನು ತಾನೆ ಯಾಯಿತ್ತು.

ತ್ರಿವಿಧ ಲಿಂಗವ ಕೂಡಿ ಬಯಲಾಯಿತ್ತು ಗುಹೇಶ್ವರ ಲಿಂಗದಲ್ಲಿ : ವೇದ ವೇದಾಂತಗಳಿಗೆ ಅಸಾಧ್ಯವಾದ ಅನುಪಮ ಲಿಂಗ, ಇದು ಉದಯ ಬಿಂದುವೆ ಇಷ್ಟಲಿಂಗ. ಸದ್ಗುರು, ಅರುವ ಅರಿಯ ಹೇಳಿ ಕುರುಹ ಕೈಯಲ್ಲಿ ಕೊಟ್ಟ ಲಿಂಗ , ಇದು ರೂಪಾಗಿ ಕಂಡುದರಿಂದ ಉದಯ ಬಿಂದು , ಉದಯ ದಿಂದ ಉದಯವಾದ ಉದಯ ಬಿಂದು , ವೇದಗಳಿಂದ ಲಭ್ಯವಾದ ಲಿಂಗವೂ ಅಲ್ಲ, ವೇದಾಂತಗಳಿಂದಲೂ ಲಭ್ಯವಾದ ಲಿಂಗವೂ ಅಲ್ಲ . ಶಾಸ್ತ್ರ ಸಾಧಿಸದಲಾದ ಲಿಂಗ , ಅನುಪಮ ಲಿಂಗ , ಶಬ್ಧದಿಂದ ಅರಸದ ಲಿಂಗ , ಶಬ್ಧಸಂಭ್ರಮದ ವರಿಗೆ ನಿಲುಕದ ಲಿಂಗ, ಲಿಂಗ ಲಿಂಗ, ವೆನ್ನದ ಲಿಂಗ ಶಬ್ಧ ಮುಗ್ಧ ಲಿಂಗ , ಅನಾಮಯ ವಾಗಿರುವ ನಿರ್ವಾಣದ ಲಿಂಗ, ಅರಿದರಿದು ನೋಡುವುಡೆ ತನ್ನಂತರಂಗದೋಳ್ ಪ್ರಕಾಶಿಸುವ ಸ್ವಪ್ರಕಾಶ, ಉದಯಾಸ್ತವ ಕಾಣದ ಘನ ತೇಜ . ಮರು ವರು ವೆನ್ನದೆ, ಪ್ರಜ್ವಲಿಸುವಲಾಗ ಇದು ಅಂತರಂಗ ಬಿಂದು ವಾದುದರಿಂದ ನಿರೂಪವೆಂದು ಹೇಳಿದೆ.

ಊರ್ಧ್ವಬಿಂದು ವಾಕ್ ಮನಕ್ಕೂ ನಿಲುಕದ್ದರಿಂದ ವಾಕ್ಕಾತೀತ ವೆನ್ನಲು ಸಂದಿಲ್ಲದೆ ಬೆಳಗುವದರಿಂದ ನೆನಹಿಂಗೂ ಸಂದು ಕೊಡದೆ ಬೆಳಗುಳ್ಳದ್ದಾದುದರಿಂದ ಮಹಾಲಿಂಗವು ನಿಃಶೂನ್ಯ ವಾಯಿತ್ತು .

ಈ ತ್ರಿವಿಧ ಲಿಂಗವ ಕೂಡಿ ಬಯಲಾದ ಘನವದೆಂತು ವರ್ಣಿಸುವದು ? ಸುಖ ಸುಖ ಸುಸಂಗ ವಾದುದ ಅದನೆಂತು ವರ್ಣಿಸುವದು , ಸುಖವೆ ಉದಯ ಬಿಂದು ವಾಯಿತ್ತು , ಸುಖಿಯೆ ಅಂತರ ಬಿಂದು ವಾಯಿತ್ತು . ಸುಸಂಗವೆ ಊರ್ಧ್ವ ಬಿಂದು ವಾಯಿತ್ತು , ಈ ಮೂರೊಂದಾದ ನಿಲುವು ತಾನೆ , ಸುಖ ತಾನೆ ಸುಸಂಗಿ ತಾನೆ , ತಾನೆ ತಾನಾಗಿ ಮಹಾ ಘನ ಲಿಂಗವಾಯಿತ್ತು. ಗುಹೇಶ್ವರ ಲಿಂಗದಲ್ಲಿ ಎಂದು ಹೇಳಿಹರು.

ಸುಖ ಇಷ್ಟಲಿಂಗ, ಸುಖಿ ಪ್ರಾಣ ಲಿಂಗ, ಸ್ವ ಸುಖವಾದುದು ಜ್ಞಾನ ಲಿಂಗ, ಸುಖ ಲಿಂಗ ಸುಖಿ ಶರಣ ಸುಖಾನುಭಾವ ಅನುಪಮ , ಈ ಮೂರೊಂದಾದುದು ಗುಹೇಶ್ವರ ಲಿಂಗದಲ್ಲಿ ನಿಃಶಬ್ದವಾದ, ಘನಕ್ಕೆ ಘನವಾದ ತನ್ನಲ್ಲಿ ಏನೆಂದೆನಲಿಲ್ಲದ ಅರುವು ತನ್ನಯ ಇರುವು ಇದು ಗುಹೇಶ್ವರ ಲಿಂಗದಲ್ಲಿ ಎಂದು ಹೇಳಿದ್ದಾರೆ.

57

ಗುರು ವಿಡಿದ ಅರಿವು ಅರುವಲ್ಲ, ಲಿಂಗ ವಿಡಿದ ಅರಿವು ಅರುವಲ್ಲ,
ಇಲ್ಲದ ಗುರು, ಇಲ್ಲದ ಲಿಂಗ, ಕಲ್ಪಿತಕ್ಕೆ ಅರಿವಹುದೆ!
ತನ್ನಿಂದ ತಾನರಿವುಡೆ ಅರಿವು ಗುಹೇಶ್ವರ. **॥ 1158 ॥**

ತಾತ್ಪರ್ಯ: ಗುರು ವಿಡಿದ ಅರುವು ಅರುವಲ್ಲ, ಲಿಂಗ ವಿಡಿದ ಅರಿವು ಅರುವಲ್ಲ : ಇಲ್ಲದ ಗುರು, ಇಲ್ಲದ ಲಿಂಗ ಕಲ್ಪಿತಕ್ಕೆ ಅರಿವಹುದೆ: ಗುರು ವಿಡಿದ ಅರುವು ಆವುದು ? ಪಾದವುಳ್ಳ ಗುರು, ತಲೆವುಳ್ಳ ಶಿಷ್ಯ , ಆಚಾರವುಳ್ಳ ಗುರು, ವ್ರತವುಳ್ಳ ಶಿಷ್ಯರು. ಈ ಗುರು ಶಿಷ್ಯರು ಮಾಯಿಕರು, ಉಪಾಧಿಕರು, ಆಭಾಸ ಚೇತನರು ಇದನ್ನು ನಿಜವೆಂದು ನಂಬಿದುದಕ್ಕಾಗಿ ತಮ್ಮ ಮುನ್ನ ಮುನ್ನಲಾದ ಘನವ ಕಾಣದ್ದರಿಂದ ಅರುವಿನ ವಿಸ್ಮೃತಿಯುಳ್ಳವರಾಗಿಹರು . ಇವರಿಗೆ ಗುರು ಶಿಷ್ಯತ್ವವೆ ನಿಜವಾಗಿದೆ . ಬೋಧಿಸುವ ಬೋಧೆಯೆ ನಿಜವಾಗಿದೆ. ಇವರು ಶಬ್ಧ ಸಂಭ್ರಮದವರು, ಶಬ್ಧ ಸಂಭ್ರಮದ ಅರುವು ಅರುವಲ್ಲ, ಶೃತಿವಂತರೆಲ್ಲ ಗುರುವಿಡಿದ ಅರುವುಳ್ಳವರು ಅದು ನಿಜದರುವು ಅಲ್ಲ.

ಜೀವ ಭಾವಕ್ಕೆ ಭಿನ್ನವಾಗಿ ನೀನೆ ಪರಮಾತ್ಮನೆಂದು ಹೇಳುವುದೆ ತತ್ವಮಸಿ ಮಹಾವಾಕ್ಯವೆಂದು ದೇಹಾದಿ ಅನಾತ್ಮ ದೆಶೆ ಅವಸ್ಥೆಗೆ ಬೇರಾಗಿ , ಆತ್ಮ ರೂಪ ನೀನೆ ಬ್ರಹ್ಮನಿದ್ದೀಯೆಂದು ಅಯಮಾತ್ಮ ಬ್ರಹ್ಮವೆಂಬ ಮಹಾವಾಕ್ಯವನ್ನು ಅರಿಸಿಕೊಳ್ಳುವದೆಲ್ಲವು ಅರಿಯುವಂಥ ನಿನ್ನ ಸ್ವರೂಪ ವಾದ್ದರಿಂದ ಅರುವಾದ ನೀನೆ ಬ್ರಹ್ಮನಿದ್ದೀಯೆಂಬ ಪ್ರಜ್ಞಾನಂ ಬ್ರಹ್ಮವೆಂಬ ಮಹಾವಾಕ್ಯವನ್ನು ಅಹಂ ವೃತ್ತಿಗೆ ಸಾಕ್ಷಿಯಾಗಿ ನೀನೆ ಬ್ರಹ್ಮ ನಿದ್ದೀಯೆಂದು, ಅಹಂ ಬ್ರಹ್ಮಾಸ್ಮಿ ಎಂಬ ಮಹಾವಾಕ್ಯಗಳನ್ನು ಬೋಧಿಸಿದರು . ಇವು ಗುರು ವಿಡಿದ ಅರುವು ತನ್ನಿಂದ ತಾನರಿದ ಅರಿವು ಆಗವು . ನೀನು ನಿಷ್ಕ್ರಿಯ ಅದ್ವಯಾತ್ಮನೆ ಇರುವಿ , ಹೇಗೆಂದರೆ ಅಂತಃಕರಣ ವೃತ್ತಿಯಿಂದೊಡಗೂಡಿ ಭೇದವಾಗಿದ್ದಂತೆ ದೇಹೇಂದ್ರಿಯಾದಿಗಳೊಡನೆ ಬೆರೆತು ಕ್ರಿಯಾರೂಪ ನಿರುವಿಯೆಂದು ಭಾವಿಸಿರುವಿ ಅರ್ಥಾತ್ ತಿಳಿದುಕೊಂಡಿರುವಿ , ಆದರೆ ದೇಹೇಂದ್ರಿಯಾದಿ ಅಹಮಾಕಾರ ವೃತ್ತಿಗಳನ್ನೆಲ್ಲ ನೀನು ಇದಿರಿಟ್ಟು ಅರಿಯುವದರಿಂದ ಇವುಗಳಿಗೆ ಸಾಕ್ಷಿಯಾಗಿರುವಿ, ಆದ್ದರಿಂದ ನೀನು ನಿಷ್ಕ್ರಿಯ . ಅದ್ವಯ ಲಕ್ಷಣನಾಗಿರುವಿ ಬ್ರಹ್ಮವಾದರೂ ವಿಚಾರ ಮಾಡಲಾಗಿ ಅದು ನಿಷ್ಕ್ರಿಯ ಅದ್ವಯ ವಾಗಿರುವುದು , ಬ್ರಹ್ಮ ಲಕ್ಷಣ ನಿನ್ನ ಲಕ್ಷಣ ಒಂದೆ ಆದ್ದರಿಂದ ನೀನು ಬ್ರಹ್ಮನಿರುವಿ ಬ್ರಹ್ಮವಿತ್ ಬ್ರಹ್ಮೈವ ಭವತಿ ಬ್ರಹ್ಮವನ್ನು ಅರಿವವನು ಬ್ರಹ್ಮನೆ ಆಗುವನು ಎಂದು ಶೃತಿಯು ಇರುತ್ತದೆ.

ಬೆಂಕಿಯನ್ನು ಕಾಣದಕ್ಕೆ ಹೋದ ತೃಣವು ಬೆಂಕಿಯಾಗುವಂತೆ ಬ್ರಹ್ಮವು ಜಗತ್ ಸಾಕ್ಷಿಯಾದಂತೆ ನೀನು ಅಹಂ ವೃತ್ತಿಗೆ ಸಾಕ್ಷಿಯಾದ್ದರಿಂದ ನೀನೆ ಬ್ರಹ್ಮನಿದ್ದೀಯೆಂಬುದಾಗಿ ಅಹಂ ಬ್ರಹ್ಮಾಸ್ಮಿ ಎಂಬ ಮಹಾವಾಕ್ಯವ ಬೋಧಿಸಿದರೆಂಬ ಭಾವವು ಇದು ಗುರು ವಿಡಿದ ಅರುವು ತನ್ನಿಂದ ಅರಿದ ಅರುವು ಆಗದು . ಇಲ್ಲಿ ಜಗತ್ ಸಾಕ್ಷಿ ಬ್ರಹ್ಮ ಬ್ರಹ್ಮವೆಂಬುದು ಲಿಂಗವೆಂಬುದು ಬೋಧಿಸಿದುದರಿಂದ ನೀನು ಅಹಂ ವೃತ್ತಿಗೆ ಸಾಕ್ಷಿ , ಲಿಂಗ ಜಗತ್ತಿಗೆ ಸಾಕ್ಷಿ ಎಂದು ಕಲಿಸುವದರಿಂದ, ಇದು ಗುರು ವಿಡಿದ ಅರಿವು

ಆಗಿದೆ. ಲಿಂಗ ವಿಡಿದ ಅರುವು ಆಗಿದೆ. ತಾನು ನಿಷ್ಕ್ರಿಯ ಅದ್ವಯನು, ಲಿಂಗ ನಿಷ್ಕ್ರಿಯ ಅದ್ವಯವು ಎರಡು ಒಂದೆ ಎಂದು ಬೋಧಿಸಿದುದರಿಂದ ಇದು ಕಲ್ಪಿತವಾಗಿದೆ, ಕಲ್ಪಿತದಿಂದುಕ್ತವಾದುದು ತನ್ನರುವು ಆಗದು.

ಬಾಲ್ಯದೆಶೆಯನ್ನ ಬಿಟ್ಟು, ಯೌವನದೆಶೆಕ್ಕೆ ಬಂದಂತೆ, ಅವಿಚಾರ ಕಾಲದಲ್ಲಿ ಅನಾತ್ಮಗಳಾದ ಅನ್ನಮಯಾದಿ ಆನಂದ ಮಯ ಪರ್ಯಂತರ ಐದು ಕೋಶದಲ್ಲಿನಾನು ಎಂದು ವ್ಯವಹರಿಸುವದೆ ಅನಾತ್ಮದೆಶೆಯು. ಪಂಚಕೋಶದ ವಿಚಾರ ಮಾಡಲಿಕ್ಕೆ ಇವು ತನ್ನಿಂದ ತಿಳಿಸಿ ಕೊಳ್ಳತಕ್ಕವುಗಳು, ನಾನಲ್ಲ ಇವುಗಳಿಗೆ ಸಾಕ್ಷಿ ಪ್ರತ್ಯಾಗಾತ್ಮನೆಂಬ ಅನುಭವವಾಗುತ್ತಿದೆ. ಆ ಕಾಲಕ್ಕೆ ಅನಾತ್ಮ ದೆಶೆ ಬಿಟ್ಟು ಆತ್ಮ ದೆಶೆಗೆ ಬರುತ್ತಾನೆ .ಅ ನಂತರ ಈ ದೇಹದಲ್ಲಿ ಸಾಕ್ಷಿಯಾದ ನೀನೆ ಪರಮಾತ್ಮ ನಿರುವಿ ಯೆಂಬುದಾಗಿ ಅಯಮಾತ್ಮ ಬ್ರಹ್ಮವೆಂಬ ಮಹಾ ವಾಕ್ಯದರ್ಥವನ್ನು ಬೋಧಿಸುವುದೆ ದಶಾಂತರ ಬೋಧ ಯೆನಿಸುತ್ತದೆ. ಈ ದಶಾಂತರ ಬೋಧೆ ಗುರು ವಿಡಿದ ಅರುವು, ಇದು ಕಲ್ಪಿತ ಅರುವು ಇದು ತನ್ನಿಂದ ತಾನರಿದ ಅರುವು ಆಗದು . ಇದು ತನ್ನೊಳಿಲ್ಲದ ಗುರು , ಇಲ್ಲದ ಬೋಧೆ ಇಲ್ಲದ ಕಲ್ಪಿತವಾಗಿದೆ . ಇದು ಕಾರಣ ಇದು ತನ್ನಿಂದ ತನ್ನರಿತ ಅರುವು ಆಗದು.

ಜೀವಾತ್ಮ ನೀನಲ್ಲ ಎಂದು , ಪರಮಾತ್ಮ ಭಾವವನ್ನುಂಟು ಮಾಡಿ ಬಳಿಕ ಪರಮಾತ್ಮನೆಂಬ ಭಾವವನ್ನು ಕಳೆದು ಭಾವತೀತನೆಂದು ಬೋಧಿಸುವುವದೆ , ಭಾವಾಂತರ ಬೋಧೆ , ಇದು ಗುರು ವಿಡಿದ ಅರುವೆ.

ಮೊದಲು ಅಜ್ಞಾನಾವಸ್ಥೆಯಲ್ಲಿ ಅಹಂಕಾರದಲ್ಲಿತಾದಾತ್ಮ್ಯ ಅಧ್ಯಾಸವುಳ್ಳವನಾದ್ದರಿಂದ ನೀನು ಕರ್ತಾ ಭೋಕ್ತಾ ಸಂಸಾರಿಯೆಂಬ ಭಾವ ಜೀವನಿಗೆ ಬಂದಿರುವದು , ಬಳಿಕ ಗುರು ಶಾಸ್ತ್ರಗಳಿಂದ ಜನ್ಯವಾದ ಜ್ಞಾನಾವಸ್ಥೆಯಲ್ಲಿ ನಾನು ಕರ್ತಾ ಬೋಕ್ತಾರೂಪ ಜೀವನಲ್ಲ ಕಿಂತು ಅಕರ್ತಾ ಅಭೊಕ್ತಾ, ಅಸಂಗ, ಅದ್ವಯ ಲಕ್ಷಣಾತ್ಮಕ ಪರಮಾತ್ಮ ರೂಪ ನಿದ್ದೇನೆಂಬ ಭಾವ ಉಂಟಾಯಿತು. ಆದ್ದರಿಂದ ಈ ಬೋಧಕ್ಕೆ ಭಾವಂತರವೆಂಬ ಹೆಸರು ಬಂದಿದೆ . ಕರ್ಣನಲ್ಲಿ ರಾಧ ಪುತ್ರನೆಂಬ ಭಾವನೆಯಂತೆ , ಜೀವನೆಂಬ ಭಾವವು ಬಂದಿರುವುದೆ ಹೊರತು ಜೀವವೆಂಬುದು ಇಲ್ಲ. ಕಿಂತು ನಾನು ಪರಬ್ರಹ್ಮರೂಪನೆ ಇರುವೆನು. ಅಜ್ಞಾನ ಕಲ್ಪಿತ ಜೀವ ಭಾವಕ್ಕೆ ಬೇರಾಗಿ ನೀನು ಪರಮಾತ್ಮನೆಂದು ಹೇಳುವ ಬೋಧವು, ತತ್ವಮಸಿ ಮಹಾವಾಕ್ಯದ ಅರ್ಥವನ್ನು ಬೋಧಿಸುವದಾಗಿರುತ್ತದೆ ಆದರೂ ನಾನು ಜೀವನೆಂಬ , ಪರಮಾತ್ಮನೆಂಬ ಎರಡು ಭಾವನೆಗಳು ತನ್ನಲ್ಲಿ ಇಲ್ಲ. ಏಕೆಂದರೆ ಈ ಎರಡು ಭವನೆಗಳು ಜ್ಞಾನ ಮತ್ತು ಅಜ್ಞಾನ ಈ ಉಪಾಧಿಗಳ ಮೂಲಕ ಬಂದಿರುತ್ತವೆ. ಆದ್ದರಿಂದ ತನ್ನ ನಿಜದಲ್ಲಿ ಆವಾವ ಭಾವನೆಯೂ ಇಲ್ಲ, ಅವು ಸುಳ್ಳಾಗಿರುತ್ತವೆ.

ನಿಜ ಸ್ವರೂಪ ಸಕಲ ಭಾವನೆಗಳಿಗೆ ಅತೀತ ವಾಗಿರುತ್ತದೆಂಬ ಭಾವವು ಇದು ಸತ್ವ ಗುಣದ ಜ್ಞಾನ ಕಾಂಡದಲ್ಲಿ ಅತಃ ಪಾತಿಯಾದ ಭೋದವಾದ್ದರಿಂದ ಇದು ಗುರುವಿಡಿದ ಅರುವು ಆಗಿದೆ. ಈ ಅರುವು ತನ್ನ ನಿಜ ದರುವು ಆಗದು.

ತ್ವಂಪದ,ತತ್ವದ ವಾಚ್ಯಾರ್ಥಗಳು ಚೈತನ್ಯಸ್ವರೂಪವಾದ ತನಗೆ ಬೇಕಾಗಿರುವವು ಆದ್ದರಿಂದ ಅವು ಕಲ್ಪಿತ ಗಳಾಗಿವೆ . ಆ ಕಲ್ಪಿತ ವಸ್ತುವಿಗೆ ಅಧಿಷ್ಟಾನ ಸ್ವರೂಪನು ಆಗಿರುವನು , ಆದರಿಂದ ಈ ವಾಚ್ಯಾರ್ಥಗಳು ಲಕ್ಷ ರೂಪ ಅಖಂಡ ಚೈತನ್ಯ ರೂಪ , ಅಧಿಷ್ಟಾನದಲ್ಲಿ ಕಲ್ಪಿತಗಳಾದ್ದರಿಂದ ಅವು ಅಧಿಷ್ಟಾನ ಸ್ವರೂಪಗಳಾಗಿರುತ್ತವೆ . ಅಧಿಷ್ಟಾನ ತಾನೆ ಸತ್ಯನಾಗಿರುವನು ಅಂದರೆ ಅರು ರೂಪನಾದ ತನಗಿಂತಲೂ ಅರಸಿಕೊಳ್ಳುವದು ಸ್ವಪ್ನದಂತೆ ಬೇರೆಯಲ್ಲ. ಹೀಗೆ ಹೇಳುವದರಿಂದ ಈ ಬೋಧವು

ಪ್ರಜ್ಞಾನಂ ಬ್ರಹ್ಮವೆಂಬ ವಾಕ್ಯದ ಅರ್ಥವನ್ನು ಬೋಧಿಸುವದಾಗಿರುತ್ತದೆ. ಅನ್ಯವೆಲ್ಲ ತನ್ನ ಸ್ವರೂಪವಾಗಿ ಬೋಧಿಸುವದರಿಂದ ಈ ಬೋಧಕ್ಕೆ ಅನ್ಯೂಪದೇಶವೆಂದು ಹೆಸರನ್ನು ಕೊಟ್ಟಿರುವರು. ಇದು ಗುರು ವಿಡಿದ ಅರಿವು ಆಗಿದೆ ಇದು ಕಾರಣ ಇದು ತನ್ನರವು ಆಗದು. ಇಲ್ಲದ ಗುರು, ಇಲ್ಲದ ಅರುವು, ಇಲ್ಲದ ಲಿಂಗ ಇದ್ದ ತನ್ನಸ್ವರೂಪ ಹೇಗಾಗುವದು? ಈ ವಿಧಗಳಾದ ಬೋಧಗಳ ಭ್ರಾಂತಿ ರೂಪಗಳೆಂದು ತಿಳಿಯತಕ್ಕದ್ದು ಇದು ಕಾರಣ. ಶ್ರೀ ಮನ್ನಿಜಗುಣರ ಇಂತೀ ಪರಿಯ ನಾಲ್ಕು ತೆರದ ಬೋಧಗಳು, ಭ್ರಾಂತಿ ಬೋಧ ಚತುಷ್ಟಯವೆಂದು ಕಾಂತೆ ನೀನರಿವುದೋರಂತೆ, ಪರಾತ್ಮ, ಅನಂತ, ಅದ್ವಿತೀಯ, ಚಿನ್ಮಯನಾಗಿ ಎಂದು ಇಲ್ಲಿಯವರೆಗೆ ಹೇಳಿದ ಮುಖಾಂತರಾಧಿ ಬೋಧೆಗಳಾದರೂ ನಿಜವಲ್ಲ, ಅವು ಮಿಥ್ಯೆಗಳಾಗಿರುತ್ತವೆಂದು ತಿಳಿ.

ವನವನ್ನು ದಹಿಸಿದ ಅಗ್ನಿಯು ತಾನು ನಾಶವಾಗುವಂತೆ ಈ ನಾಲ್ಕು ಬೋಧೆಗಳು ನಾಶವಾಗುತ್ತವೆ. ಆದ್ದರಿಂದ ಈ ಬೋಧಗಳು ಭ್ರಾಂತಿಗಳೆಂದು ತಿಳಿ, ಬೋಧಗಳು ಭ್ರಾಂತಿಗಳಾದರೆ ಭ್ರಮ ರೂಪ ಬಂಧನವನ್ನು ಹೇಗೆ ನಾಶ ಮಾಡುವವು, ಎಂದು ಕೇಳಿದರೆ ಅದನ್ನು ಹೀಗೆ ನಿವೃತ್ತಿ ಮಾಡಿಕೊಳ್ಳಬೇಕು, ಮುಳ್ಳು ಮುಳ್ಳಿನಿಂದ ತೆಗೆಯುವಂತೆ ಭ್ರಾಂತಿಯಿಂದಲೆ ಭ್ರಾಂತಿಯನ್ನು ನಾಶ ಮಾಡಬೇಕಾಗಿದೆ.

ಸ್ವಪ್ನದಲ್ಲಿ ನಾಯಿ ಕಚ್ಚಿದ ಗಾಯಕ್ಕೆ ಸ್ವಪ್ನದಲ್ಲಿದ್ದ ವೈದ್ಯನಿಂದ ಕೊಟ್ಟ ಮುಲಾಮು ಉಪಯೋಗವಾಗುವಂತೆ, ಜಾಗ್ರತ ವೈದ್ಯರ ಔಷಧ ಉಪಯೋಗವಾಗದಂತೆ ಮಿಥ್ಯಾಗಾಯಕ್ಕೆ ಮಿಥ್ಯಾ ಔಷಧವೆ ಬೇಕಾದಂತೆ ಸುಳ್ಳಾದ ಬಂಧಕ್ಕೆ ಸುಳ್ಳಾದ ಬೋಧಗಳೆ ಬೇಕಾಗಿರುತ್ತವೆ, ಇದು ಕಾರಣ. ಗುರು ವಿಡಿದ ಅರುವು ಅರುವಲ್ಲ ಎಂದು ಹೇಳಿದ್ದಾರೆ.

ಲಿಂಗ ವಿಡಿದ ಅರುವು ಅರುವೆಲ್ಲವೆಂದು ಹೇಳಿದ್ದಾರೆ. ಲಿಂಗ ವಿಡಿದ ಅರುವು ಅದಾವುದು? ಲಿಂಗಕ್ಕೆ ಲಕ್ಷಣವ ಕಲ್ಪಿಸುವದೆ ಲಿಂಗ ವಿಡಿದ ಅರುವಾಗಿದೆ. ಲಿಂಗಕ್ಕೆ ಪರಾತ್ಮ ಅನಂತ, ಅದ್ವಿತೀಯ, ಚಿನ್ಮಯ ಲಕ್ಷಣವ ಕಲ್ಪಿಸುವಡೆ ಲಿಂಗ ವಿಡಿದ ಅರುವು ಅರುವಲ್ಲ ವೆಂದು ಹೇಳಿದ್ದಾರೆ. ಇದಲ್ಲದೆ ಗುರುವಿನಲ್ಲಿ ಚಾರಿತ್ರ ಲಿಂಗದಲ್ಲಿ ಲಕ್ಷಣವ, ಜಂಗಮದಲ್ಲಿ ಜಾತಿ ಅರಸುವನ್ನಕ್ಕರ ಅವನು ದೋಷಾರ್ಥಿ ಎಂದು ಚನ್ನ ಬಸವಣ್ಣನವರು ನಿರೂಪಿಸಿಹರು.

ಲಕ್ಷಣ ಲಕ್ಷವೆಂಬುದಕ್ಕು ಇಂಬುಗೊಡದ ಘನ ಗಂಭೀರ ಲಿಂಗ. ಅದಕ್ಕೆ ಪರಾತ್ಮ ಅನಂತ ಅದ್ವಿತೀಯನೆಂದು ಕಲ್ಪಿಸುವದು ನಿಜವಾದ ಅರುವು ಆಗದು ಎಂದು ಪ್ರಭುದೇವ ಹೇಳಿದುದು, ಏಕೆಂದರೆ ತನ್ನಿಂದ ತಾನರಿವುಡೆ ಅರುವು ಗುಹೇಶ್ವರಾ ಎಂದು ಬಿತ್ತರಿಸಿದುದು ನೋಡಿದಡೆ ತನ್ನಿಂದ ತಿಳಿಸಿಕೊಳ್ಳುವದೆಲ್ಲವು ಕಲ್ಪಿತವುಗಳೆ! ಗುರುವೆಂಬುದು ಕಲ್ಪಿತ ಗುರುವಿನಿಂದ ಲಭ್ಯವಾದ ಬೋಧಂಗಳು ಕಲ್ಪಿತ.

ಲಿಂಗ, ಲಿಂಗವೆಂಬುದು ಕಲ್ಪಿತ. ಕಲ್ಪಿಸಿದವುಗಳೆಲ್ಲ, ಅವು ಕಲ್ಪಿತ ಅರುವುಗಳು. ಅವು ತನ್ನ ನಿಜದರುವು ಆಗವು. ಏಕೆಂದರೆ ಗುರುವೆಂದು ಕಲ್ಪಿಸಿದವನು ತಾನೆ ಲಿಂಗವೆಂದು ಕಲ್ಪಿಸಿದವನು ತಾನೆ ತಾನು ಮಾತ್ರ ಕಲ್ಪನೆಗೆ ನಿಲುಕದ ಘನಕ್ಕೆ ಘನ. ಗುರುವೆಂಬುದನ್ನು ಅರಿಯುವವನು ತಾನೆ ಲಿಂಗವೆಂಬುದುನ್ನು ಅರಿಯುವವ ತಾನೆ, ಬೋಧವ ಅರಿಯುವವ ತಾನೆ, ಲಿಂಗದ ಲಕ್ಷಣವ ಅರಿಯುವವನ ತಾನೆ ತಾನು ಅರಿಯದರುವು. ಏನೆಂದೆನೆಲಿಲ್ಲದ ಅರುವು ಅಲ್ಲಿ ಶಬ್ದ ಮೀಸಲು ನುಡಿಗೆಡೆಗೊಡದ್ದರಿಂದ ತನ್ನಿಂದ ತಾನೆ ಅರಿವುದೆ ಅರುವು ಗುಹೇಶ್ವರಾ ಎಂದು ಹೇಳಿಹರು.

ತಾನು ಆವಾವ ಬೋಧಕ್ಕೂ ಇಂಬುಗೊಡದ ಘನ, ಅಬೋಧಕ್ಕೂ ಇಂಬುಗೊಡದ ಘನ,

ಬೋಧಾಬೋಧಕ್ಕೂ ಇಂಬುಗೊಡದ ಘನ ನಾದುದರಿಂದ , ಶಬ್ದವೆ ಮೀಸಲಾಗಿರುವುದು. ಇದು ಕಾರಣ ತನ್ನಿಂದ ತಾನೆ ಅರಿವುದೆ ಅರುವು ಗುಹೇಶ್ವರಾ ಎಂದು ಪ್ರಭು ಬಿತ್ತರಿಸಿದುದು , ಲಿಂಗವದು ಪರಾತ್ಮ ಅನಂತ , ಅದ್ವಿತೀಯ ಚಿನ್ಮಯ , ಹೇಳಿದ ಲಕ್ಷಣ ಲಕ್ಷಕ್ಕು ಇಂಬುಗೊಡದ ತನ್ನಿರುವಾಗಿಹ ಅರುವು ಏನೆಂದನಲಿಲ್ಲದ ಅರುವು, ಇದು ತನ್ನಿಂದ ತಾನೆ ಅರಿವುದೆ ಅರುವು , ನಿಜವಾದ ಅರುವು ಎಂದು ಪ್ರಭು ಹೇಳಿದುದು .

58

ಮುನ್ನ ಎಂತಾಯಿತ್ತು , ಆಗದಡೆಂತಾಯಿತ್ತು ,
ತನ್ನ ತಾನರಸುತ್ತಿದ್ದಿತ್ತು , ತನ್ನ ಬಚ್ಚಿಟ್ಟ ನಿಧಾನವ ಕಂಡು ,
ತಾನೆ ಮಹವೆಂದು ತಿಳಿದುದು ನೋಡಾ,
ಗುಹೇಶ್ವರ ಲಿಂಗವ , ತನ್ನುವ ತನ್ನಂತೆ ಮಾಡಿತ್ತು . ॥ 1451 ॥

ತಾತ್ಪರ್ಯ : ಮುನ್ನ ಎಂತಾಯಿತ್ತು : ಮುನ್ನ ಎಂತಾದುದ ಅದನಾರಯ್ಯ ಹೀಗೆ ಎಂದು ವರ್ಣಿಸುವದು , ಕಲ್ಪಿಸುವದು , ಆದಿ ಆಧಾರ ವಿಲ್ಲದಂದೆ ಇದ್ದ ಘನವ , ಶೂನ್ಯ ನಿಶೂನ್ಯ ವಿಲ್ಲದಂದೆ ಇದ್ದ ಘನವದು ಸಾಕು ಹೀಗೆಯೆಂದು ಬೋಧಿಸುವದು , ಸಚರಾಚಾರ ರಚನೆಗೆ ಬಾರದಂದೆ ಇದ್ದ ಘನವನಾರು ಹೀಗೆ ಎಂದು ಚಿಂತಿಸುವದು , ಗುಹೇಶ್ವರಾ ನಿನೊಬ್ಬನೆ ಇದ್ದೆಯಲ್ಲ ಇಲ್ಲದಂತೆ . ಗುಹೇಶ್ವರ ನೀನೊಬ್ಬನೆ ಇದ್ದು ಇಲ್ಲದಂತಿದ್ದುದನು ಅದನಾವ ಭಾಷೆಯಿಂದ ವಿಸ್ತರಿಸುವದು .

ಮುನ್ನ ಎಂತಾಯಿತ್ತೆಂದಡೆ ಆದಿ ಅನಾದಿ ಇಲ್ಲದುದನು ಮುನ್ನ ಎಂತಾಯಿತ್ತು ಎಂದರೆ ಅದನೆಂತು ಹೀಗೆ ಎಂದು ಹೇಳುವದು . ಮಹಾಶೂನ್ಯ ವಿಲ್ಲದಂದು , ರೂಪ ನಿರೂಪ ಇಲ್ಲದಂದು ಸ್ಥೂಲ ಸೂಕ್ಷ್ಮ ವಿಲ್ಲದಂದು ಸಾಕಾರ ನಿರಾಕಾರ ನೆಂಬ ವಾಕ್ ಹುಟ್ಟದಂದು , ದ್ವೈತಾದ್ವೈತ ವಾಗದಂದು ಶಂಕರ ಶಶಿಧರ ಈಶ್ವರನೆಂಬ ಗಣಾಧೀಶ್ವರ ರಿಲ್ಲದಂದು , ವರ್ತನೆ ನಿವರ್ತನೆಯಿಲ್ಲದಂದು ಉಮೆಯ ಕಲ್ಯಾಣವಾಗದಂದು ಇವರಾರು ಒಬ್ಬರ ನಾಮ ಯಿಲ್ಲದಂದು , ನೀನು ಉಲ ಹಡಗಿರ್ದೆಯಲ್ಲ ಕಲಿದೇವಯ್ಯ .

ಮುನ್ನ ಎಂತಾಯಿತ್ತೆಂಡೆ ಇದು ಉಪಮಿಸದ ನಿಲುವು ಅದನೆಂತು ಬಗ್ಗಿಸುವದು . ಅಪರ ವಿಲ್ಲದಂದು ಪರಬ್ರಹ್ಮ ವಿಲ್ಲದಂದು ಅನಾದಿ ಇಲ್ಲದಂದು ಆದಿ ಇಲ್ಲದಂದು ಸದಾಶಿವನಿಲ್ಲದಂದು ಆನು ನೀನೆಂಬುದು ತಾನು ಇಲ್ಲದಂಡು ಕೂಡಲಚೆನ್ನಸಂಗಯ್ಯ ಏನು ಎನ್ನದಿರ್ದದಂದು ಮುನ್ನ ಎಂತಾಯಿತ್ತು ಎಂದರೆ ಘಟಾಕಾಶ ಮಠಾಕಾಶ ಮೇಘಾಕಾಶ ಮಹಾಕಾಶ ವೆಂದು ಹೆಸರಿಡದ ಮುನ್ನ ಆಕಾಶ ಎಂತಾಯಿತ್ತು ಎಂದು ಕೇಳಿದಡೆ ಅದು ತಾನು ಹೀಗೆ ಎಂದು ಆಕಾಶ ನುಡಿಯಲಿಲ್ಲ . ನುಡಿಯದ ಆಕಾಶದ ಸುದ್ದಿ ನುಡಿಯುವ ನಾಲಿಗೆಯ ನಡಿಗೆಯ ನುಡಿಗೆ ನಿಲುಕದು ನೋಡಾ ಆಕಾಶ ವೆಂಬುದು ಮಹಾಕಾಶ ಅದೆ ಇಲ್ಲದಂದೆ ಇದ್ದ ಘನ ಅದನೆಂತು ಹೇಳುವದು ,ಮೇಘಾಕಾಶ, ಮಠಾಕಾಶ, ಘಟಾಕಾಶ ಅದೆ ಇಲ್ಲದಂದೆ ಇದ್ದ ಘನ ಅದನೆಂತು ವರ್ಣಿಸುವದು .

ಬಯಲು , ಅದು ರೂಪ ನಿರೂಪ ಇಲ್ಲದಂದು ಇದ್ದ ಘನ . ಸ್ಥೂಲ ಸೂಕ್ಷ್ಮ ಇಲ್ಲ ದಂದು ಸಾಕಾರ ನಿರಾಕಾರವೆಂಬ ವಾಕ್ ಹುಟ್ಟುದಂದು , ದ್ವೈತಾ ದ್ವೈತವಾಗದಂದು , ಶಂಕರ ಶಶಿಧರನೆಂಬ ಗಣೇಶ್ವರ ರಿಲ್ಲದಂದು , ವರ್ತನೆ ನಿವರ್ತನೆ ಇಲ್ಲದಂದು , ಉಮೆಯ ಕಲ್ಯಾಣವಾಗದಂದು , ಇವರಾರು ಒಬ್ಬರು ಇಲ್ಲದಂದೆ ಇದ್ದು ನೀನು ಉಲುಹಡಗಿರ್ದೆಯಲ್ಲ.

ಬಯಲು ಅದು ಮುನ್ನ ಎಂತಾಯಿತ್ತು ,ಅದು ಆನು ನೀನೆಂಬುದು ತಾನು ತಾನು ಇಲ್ಲದಂದು, ಕೂಡಲ ಚೆನ್ನಸಂಗಯ್ಯ ಏನೂ ಎನ್ನದಿರ್ದನಂದು. ಇದು ಮುನ್ನ ಎಂತಾಯಿತ್ತು ಅಲ್ಲಿ ಆನೆಂಬುದಿಲ್ಲ ನೀನೆಂಬುದಿಲ್ಲ ತಾನು ಇಲ್ಲ ಕೂಡಲ ಚೆನ್ನಸಂಗಯ್ಯ ಎನ್ನದಿರ್ದನಂದು ಕೂಡಲ ಚೆನ್ನಸಂಗಯ್ಯನೆಂಬುದು ಕೂಡ ಏನೂ ಎನ್ನದಿರ್ದನಂದೇ ಇದ್ದರು. ಮುನ್ನ ಎಂತಾದುದು ನೋಡಾ, ಗುಹೇಶ್ವರಾ ನೀನೊಬ್ಬನೆ ಇದ್ದೆಯಲ್ಲಾ ಇಲ್ಲದಂತೆ . ಬಯಲು ಅದು , ಬಯಲೆಂದು ಎಂದೂ ಹೇಳಲಿಲ್ಲ ಗುಹೇಶ್ವರ ನೆಂಬುದು ತಾನು ಗುಹೇಶ್ವರನೆಂದು ಎಂದೂ ಹೇಳಲಿಲ್ಲ . ಬಯಲೆಂಬುದು ತಾನೊಂದೆ ಇದ್ದುದು ಇಲ್ಲದಂತೆ . ಏಕೆಂದರೆ ಅದು ತಾನೊಂದೆ ಇದ್ದುದು ಎಂದು ಹೇಳಲಿಲ್ಲ . ಹೇಳದೆ ಇದ್ದುದು ನಿಃಶಬ್ದ ಬ್ರಹ್ಮವಾಗಿದೆಯಲ್ಲ ಇಲ್ಲದಂತೆ ಎಂದು ಹೇಳಿದ್ದಾರೆ.

ಆಗದಡೆಂತಾಯಿತ್ತು ; ಬಯಲು ಬಯಲೆ . ಅದು ಇದ್ದಂತಿದ್ದ ಘನ . ಅದು ಮಹಾಕಾಶ ವೆಂಬುದು ಆಗದ್ದು , ಘಟಾಕಾಶ ಮೇಘಾಕಾಶ ವಾಗದ್ದು , ಆಗದ್ದೆಂತಾಯಿತ್ತು , ಅದು ಆಧಾರ ವಿಲ್ಲದಂದೆ ಇದ್ದ ಘನ , ಅದು ಆದಿ ಆಗದ್ದು ಆಧಾರ ವಾಗದ್ದು ಅದು ಹೇಗಾಯಿತ್ತು , ಏಕೆಂದರೆ ಅದು ಆದಿ ಇಲ್ಲದಂದೆ ಇದ್ದ ಘನ ಅದು ಆದಿ ಆಗದು , ಆಧಾರ ಇಲ್ಲದಂದೆ ಇದ್ದ ಘನ ಆಧಾರ ಆಗದು ,ಅದು ಹೇಗಾಯಿತ್ತು ? ಮುನ್ನ ಎಂತಾದುದು ಅದು ಗುಹೇಶ್ವರ ನೀನೊಬ್ಬನೆ ಇದ್ದೆಯಲ್ಲ ಇಲ್ಲದಂತೆ, ಗುಹೇಶ್ವರನೊಬ್ಬನೆ ಇದ್ದ ಘನ ಅದು ಸುರಾಳ ನಿರಾಳ ಇಲ್ಲದಂದೆ. ಇದ್ದ ಘನ. ಇಲ್ಲದಂತೆ ಇದ್ದುದು , ಅದು ಸಗುಣ ನಿರ್ಗುಣ ವಾಗದ್ದು ಸಾಕಾರ , ನಿರಾಕಾರ ಆಗದ್ದು ವ್ಯಕ್ತ ಅವ್ಯಕ್ತ ಆಗದ್ದು . ಅದು ಆದುದು ಹೇಗೆ , ಅದು ಶೂನ್ಯ ನಿಶೂನ್ಯ ಇಲ್ಲದಂದು ಇದ್ದ ಘನ ಇಲ್ಲದಂತೆ . ಶೂನ್ಯವದು ಪಂಚಭೂತಗಳಾಗದ್ದು ಚೇತನ ವಾಗದ್ದು ಪಂಚಭೂತಗಳಾತ್ತಾಚೆ ಏನು ಅದೆ ಎಂದಡೆ ಶೂನ್ಯವದೆ ಶೂನ್ಯದತ್ತಾಚೆ ಏನು ಅದೆ ನಿಶೂನ್ಯವದೆ ಎಂದು ಹೇಳುವಲ್ಲಿ ಕಂಡು ಹೇಳುವಿರಾ , ಕಾಣದೆ ಹೇಳುವಿರಾ ಎಂದು ಪ್ರಶ್ನಿಸಿದಲ್ಲಿ ಅದು ಆಕಾಶ ವಾಗಿದ್ದಲ್ಲಿ ಕಂಡನೆಂದು ಹೇಳಲು ಬರುತ್ತಿತ್ತು , ಕಾಣದೆ ಹೇಳುವರು. ಅದು ಹೇಗೆ ? ಯತಾರ್ಥವನ್ನು ಶೂನ್ಯ ವದ್ರು ವ್ಯಕ್ತವು ಅಲ್ಲ ಅವ್ಯಕ್ತವು ಅಲ್ಲ ಇವೆರಡರ ಮಧ್ಯಾವಸ್ಥೆ. ಅಲ್ಲಿ ವ್ಯಕ್ತವೂ ಇಲ್ಲವೆಂಬ ಸಂಜ್ಞೆಯಿಂದುಕ್ತವಾಗಿದೆ . ಶೂನ್ಯ ಇಲ್ಲವೆಂಬುದಕ್ಕೂ ಇಲ್ಲ ವಾದುದು, ನಿಶೂನ್ಯವೆಂದು ಹೇಳಿದೆ . ಇದು ಭಾವ ರೂಪ ವಲ್ಲ ಅಭಾವವಲ್ಲ ಜಡವಲ್ಲ ಚೇತನವಲ್ಲ ಇದು ಜಡದತ್ತಾಚೆ ಪಂಚಭೂತಗಳತ್ತಾಚೆ ಇದ್ದುದು ಶೂನ್ಯ ವಾಗದು ನಿಶೂನ್ಯ ವಾಗದು ಏಕೆಂದರೆ ಅದು ಶೂನ್ಯ ಇಲ್ಲದಂತೆ ಇದ್ದ ಘನ , ನಿಶೂನ್ಯ ಇಲ್ಲದಂದು ಇದ್ದ ಘನ ಅದು ಹೇಗಾಗುವದು ? ಸಚರಾಚರ ರಚನೆಗೆ ಬಾರದಂದು ಇದ್ದು ಇಲ್ಲದಂತೆ ಇದ್ದ ಘನ , ಅದು ಚರಾಚರ ರಚನೆಗೆ ಬಂದುದು ಹೇಗೆ ಆಯಿತ್ತು. ಸಚಾರಾಚರ ಆಗದ್ದು ಅದು ಹೇಗಾಯಿತ್ತು . ವೇದ ವೇದಾಂತಗಳಿಗೂ ಅಸಾಧ್ಯ ವಿಲ್ಲದಂದು ಇದ್ದುದು ಅದು ಮುನ್ನ ಎಂತಾಯಿತ್ತು . ಆಗದಡೆಂತಾಯಿತ್ತು , ಭೇದ ಜ್ಞಾನ ಅಭೇಧ ಜ್ಞಾನಕ್ಕೂ ಸಾಧ್ಯ ಅಸಾಧ್ಯ ಆಗದ್ದು, ಅದು ಆದುದು ಹೇಗೆ ? ರೂಪ ನಿರೂಪ ಇಲ್ಲದಂದು ಇದ್ದುದ ಮುನ್ನ ಅದು ಎಂತಾಯಿತ್ತು . ಈಗ ಆಗದಡೆಂತಾಯಿತ್ತು ಎಂದು ಹೇಗೆ ಹೇಳುವದು ? ರೂಪ , ನಿರೂಪವಾಗದೆ ಇದ್ದಾಗಲೂ ಹಾಗೆ ಇದೆ, ರೂಪ ನಿರೂಪ ಅನ್ನುವಾಗಲೂ ಹಾಗೆ ಇದ್ದುದು . ರೂಪ ನಿರೂಪ ಇಲ್ಲದಂದು ಹಾಗೆ ಇದ್ದುದು , ಇದು ಮುನ್ನ ಎಂತಾಯಿತ್ತು ಎಂದು ಹೇಗೆ ಹೇಳುವದು ? ಅದು ರೂಪವೂ ಆಗದ್ದು ನಿರೂಪವೂ ಆಗದ್ದು ಇಲ್ಲೆಂಬುದು ಆಗದ್ದು ಏನೊಂದಾಗದ್ದು ಇದು ಇದ್ದಂತಿದ್ದುದು ಇಲ್ಲದಂತೆ ಅದನ್ನು ವರ್ಣಿಸುವದೆಂತು ? ಸ್ಥೂಲ ಸೂಕ್ಷ್ಮ ಇಲ್ಲದುದು , ಇದ್ದುದು ಸ್ಥೂಲ ಸೂಕ್ಷ್ಮ ವೆನ್ನುವಾಗಲು ಇದ್ದಂತೆ ಇದೆ , ಸ್ಥೂಲ, ಸೂಕ್ಷ್ಮ ಇಲ್ಲವೆನ್ನುವಾಗಲು ಇದ್ದಂತಿದೆ , ಅದು ಸ್ಥೂಲವೂ

ಆಗದು ಸೂಕ್ಷ್ಮವೂ ಆಗದು, ಇಲ್ಲವೆಂಬುದು ಆಗದು ಏನೊಂದಾಗದ್ದು ಇದ್ದಂತಿದ್ದುದು ಇಲ್ಲದಂತೆ. ಸಾಕಾರ ನಿರಾಕಾರವೆಂಬ ವಾಕ್ ಹುಟ್ಟದಂದು , ದ್ವೈತ ಅದ್ವೈತ ವಾಗದಂದು, ಶಂಕರ, ಶಶಿಧರ ಈಶ್ವರನೆಂಬ ಗಣಾಧೀಶ್ವರ ಇಲ್ಲದಂದು ವರ್ತನೆ ನಿವರ್ತನೆ ಇಲ್ಲದಂದು ಉಮೆಯ ಕಲ್ಯಾಣವಾಗದಂದು ಇವರಾರು ಒಬ್ಬರ ನಾಮ ಸೀಮೆ ಇಲ್ಲದಂದೆ ಉಲುಹಡಗಿರ್ದನಯ್ಯ ಕಲಿದೇವಯ್ಯಾ .

ಕಲಿದೇವನು ನಿಸ್ಸೀಮನು. ಸಾಕಾರ ನಿರಾಕಾರ ಎಂಬ ಸೀಮೆ ಇಲ್ಲದಂದೆ ಇದ್ದ ಗುಪ್ತ ನಿಧಿ. ದ್ವೈತ ಅದ್ವೈತವಾಗದಂತೆ ಇದ್ದ ಗುಪ್ತ ನಿಧಿ , ಶಂಕರ ಶಶಿಧರ, ಈಶ್ವರನೆಂಬ ಗಣೇಶ್ವರ ಇಲ್ಲದಂದೆ ಇದ್ದ ಗುಪ್ತ ನಿಧಿ ವರ್ತನೆ ನಿವರ್ತನೆ ಇಲ್ಲದಂದೆ ಇದ್ದ ಗುಪ್ತ ನಿಧಿ, ಆದಿ ಆಧಾರ ವಿಲ್ಲದಂದೆ ಇದ್ದ ಗುಪ್ತ ನಿಧಿ, ಸುರಾಳ ನಿರಾಳ ಇಲ್ಲದಂದೆ ಇದ್ದ ಗುಪ್ತನಿಧಿ, ಸಚರಾಚರ ರಚನೆಗೆ ಬಾರದಂದೆ ಇದ್ದ ಗುಪ್ತ ನಿಧಿ ಶೂನ್ಯ ನಿಶೂನ್ಯ ಇಲ್ಲದಂದೆ ಇದ್ದ ಗುಪ್ತ ನಿಧಿ ಆದಿ ಅನಾದಿ ಇಲ್ಲದಂದೆ ಇದ್ದ ಗುಪ್ತ ನಿಧಿ , ಸಾಧ್ಯ ಅಸಾಧ್ಯ ಇಲ್ಲದಂದೆ ಗುಪ್ತ ನಿಧಿ ರೂಪ ನಿರೂಪ ಇಲ್ಲದಂದೆ ಇದ್ದ ಗುಪ್ತ ನಿಧಿ ಅಪರ ವಿಲ್ಲದಂದು ಪರಬ್ರಹ್ಮ ವಿಲ್ಲದಂದು, ಸದಾಶಿವನಿಲ್ಲದಂದು ಆನು ತಾನು ಇಲ್ಲದಂದು ಏನೂ ಎನ್ನದಿರ್ದನು ಇದ್ದ ಗುಪ್ತ ನಿಧಿ. ಇದು ಮುನ್ನ ಹೀಗೆ ಆದುದು ಎಂದು ಹೇಗೆ ಹೇಳುವದು ? ಆದುದೆಲ್ಲವೂ ಕೃತ್ರಿಮ . ಕೃತ್ರಿಮವದು ಇಲ್ಲದುದು ಇದಕ್ಕೆ ಮುನ್ನ ಆದುದು ಎಂದು ಹೇಗೆ ಹೇಳುವದು ! ಹೇಳಲು ಬಾರದಿರುವಲ್ಲಿ ಏನೊಂದಾಗದ್ದು. ಸಾಕಾರ ನಿರಾಕಾರ, ದ್ವೈತಾ ದ್ವೈತ ಶಂಕರ ಶಶಿಧರ ಈಶ್ವರ ಈ ನಾಮ ವರ್ತನೆ ನಿವರ್ತನೆ ಸುರಾಳ ನಿರಾಳ ಹೇಗೆ ಆಯಿತ್ತು? ಬ್ರಹ್ಮ ಪರಬ್ರಹ್ಮ ಸದಾಶಿವ ಆನು, ತಾನು ಎಂಬುದು ಹೇಗೆ ಆಯಿತ್ತು ? ಉಪಕ್ರಮ, ಉಪಸಂಹಾರ ಹೇಗೆ ಆಯಿತ್ತು .

ತನ್ನ ತಾ ಅರಸುತ್ತಿದ್ದಿತ್ತು : ಅರಸುವುದು ಆವುದು, ತಾನಿದ್ದು ತನ್ನ ಮರೆಯ ಹುಡುಕುವುಡೆ ಇದು ತನ್ನ ತಾ ಅರಸುತ್ತಿದ್ದಿತ್ತು, ತಾ ಮುನ್ನ ಎಂತಾಯಿತ್ತು ಎಂದು ಹೇಳಲು ಬಾರದು . ಅದನ್ನು ಹೀಗೆ ಎಂದು ಕಥನಕ್ಕೀಡು ಮಾಡುವವರೆಲ್ಲ ತನ್ನ ತಾ ಅರಸುವವರು .

ಆರು ಅರಸದವರು ಹುಡುಕದವರು ಅವರು ಅವರ್ಣೀಯರು. ಅಲ್ಲಿ ಮುನ್ನ ಎಂತಾಯಿತ್ತು ಎಂಬುವದಕ್ಕಿಂಬಲ್ಲ ಆಗದಡೆಂತಾಯಿತ್ತು ಎಂಬುವದಕ್ಕಿಂಬಿರುವದಿಲ್ಲ ತಾನು, ಮುನ್ನನೆಂಬುದಕ್ಕಿಂಬಿಲ್ಲ ತನಗೆ ಆದುದೆನ್ನಲು ಇಂಬಿಲ್ಲ ಆಗದೆನ್ನಲು ಇಂಬಿಲ್ಲ ನಿರಂತರ ಇದ್ದುದಕ್ಕೇನನ್ನಬೇಕು .

ಅದು ತನ್ನ ಬಚ್ಚಿಟ್ಟ ಬಯಕೆ, ನಿಧಾನವ ಕಂಡು ತಾನೆ ತಿಳಿದುದು ನೋಡಾ ! ತಾನು ಮುನ್ನವೆ ಇದ್ದ ತನ್ನ ನಿಜದ ನಿಲವು ಅದು ಬಚ್ಚಿಟ್ಟ ಬಯಕೆ ನಿಧಾನವ ಕಂಡಂತೆ ತಾನೆ ತನಗೆ ಮಹವೆಂದು ತಿಳಿದುದು ನೋಡಾ, ಗುಹೇಶ್ವರ ಲಿಂಗವು ತನ್ನವ ತನ್ನಂತೆ ಮಾಡಿತ್ತು . ಗುಹೇಶ್ವರ ಲಿಂಗವದು ಉಪಮಿಸದ ನಿಲುವು ಅದನ್ನು ಅರಿಯ ಹೋದವರಿಗೆ ಅದು ತನ್ನುವ ತನ್ನಂತೆ ಮಾಡಿತ್ತು . ಅದು ಬಾರದಂತಾಯಿತ್ತು ಎಂದು ಹೇಳಿಹರು .

59

ನಿಶ್ಚಲವೆಂಬ ಭಾಜನದಲ್ಲಿ , ನಿಜ ಜ್ಞಾನವೆಂಬ ಅಕ್ಕಿಯ ತುಂಬಿ ,
ಪರಮಾನಂದವೆಂಬ ಜಲವನೆರೆದು , ಸ್ವಯಂ ಪ್ರಕಾಶ ವೆಂಬ ಅಗ್ನಿಯಿಂದ ,
ಪಾಕವಾದ ಲಿಂಗದೋಗರವು , ಮಹಾ ಘನದಲ್ಲಿ ನಿಂದು ,
ಘನ ತೃಪ್ತಿಯ ನೀವುತಿದ್ದಿತ್ತು ಕಾಣಿರೆ! ಅದ ಕಣ್ಣಿಲ್ಲದೆ ಕಂಡು ,

ಕೈಯಿಲ್ಲದೆ ಕೊಂಡು ಬಾಯಿಲ್ಲದೆ ಉಂಡ ತೃಪ್ತಿಯ
ಅರುವಿಲ್ಲದರುವಿನಿಂದರಿದು,
ಸುಖಿಯಾದೆ ನಾನು ಗುಹೇಶ್ವರಾ. ‖ 1297 ‖

ತಾತ್ಪರ್ಯ : ನಿಶ್ಚಲ ವೆಂಬ ಭಾಜನದಲ್ಲಿ ನಿಜ ಜ್ಞಾನ ವೆಂಬ ಅಕ್ಕಿ ತುಂಬಿ ಪರಮಾನಂದ ವೆಂಬ ಜಲವ ನೆರೆದು ಸ್ವಯಂ ಪ್ರಕಾಶವೆಂಬ ಅಗ್ನಿಯಿಂದ ಪಾಕವಾದ ಲಿಂಗದೋಗರವು ಮಹಾ ಘನದಲ್ಲಿ ನಿಂದು ಘನ ತೃಪ್ತಿಯ ನೀವು ತಿದ್ದಿತ್ತು ಕಾಣಿರೆ: ಇದೆಂತ ಲಿಂಗ ದೋಗರವು ? ಬಹು ಲಿಂಗಾರ್ಚಕರು ಲಿಂಗಕ್ಕೆ ನೈವೇದ್ಯವ ಮಾಡುವರು . ಪಂಚ ಪಕ್ವಾನ್ನದಿಂದುಕ್ತ ವಾಗಿಹ ನೈವೇದ್ಯವು ಬೇರೆಯೆ ಮಾಡುವರು. ಪ್ರಭಾವಿನ ಲಿಂಗ ದೋಗರ ಬೇರೆಯೆ! ಹಾಲು, ತುಪ್ಪ, ಸಕ್ಕರೆ, ಗೋದಿಹಿಟ್ಟು, ದ್ರಾಕ್ಷಿ, ವಾಡಂಬಿ ,ಕೇರ ಬೀಜಗಳಿಂದುಕ್ತವಾಗಿ ಪಾಕವಾಗಿಹ ಪಂಚಾಮೃತ ಲಿಂಗಾರ್ಚಕರದು . ನಿಜ ಜ್ಞಾನ ವೆಂಬ ಅಕ್ಕಿ ಪರಮಾನಂದ ವೆಂಬ ಜಲ , ಸ್ವಯಂ ಪ್ರಕಾಶ ವೆಂಬ ಅಗ್ನಿಯಿಂದ ಪಾಕವಾದ ಜ್ಞಾನಾಮೃತ ಪ್ರಭುವಿನದು ಮರವಿನ ಪಂಚಾಮೃತ ವೆತ್ತ ಅರುವಿನ ಜ್ಞಾನಾಮೃತ ವೆತ್ತ ? ಜ್ಞಾನಾಚಾರದಿಂದ ತನ್ನೊಳ ಸ್ವಾನುಭವದಿಂದ ಮಾಡಿದ ಜ್ಞಾನ ದೋಗರ ವೆತ್ತ ? ಬಿಸಿಯಾಗಿ ಆರಿ ತಂಗಳವಾಗಿ ಕೊನೆಗೆ ಹಳಸುವ ಪಕ್ವಾನ್ನವೆತ್ತ, ಬಿಸಿಯಾಗದ ಆರದ ತಂಗಳವಾಗದ ಎಂದೆಂದೂ ಹಳಸದ ಇದ್ದಂತಿದ್ದ ಲಿಂಗದೋಗರ ವೆತ್ತ!

ಲಿಂಗಾರ್ಚಕರು , ಲಿಂಗಯ್ಯಗೆ ನೈವೇದ್ಯ ಮಾಡುವ ಪಾತ್ರೆ ಎತ್ತ, ಪ್ರಭುವಿನ ನಿಶ್ಚಲವೆಂಬ ಪಾತ್ರೆ ಎತ್ತ ? ಇವರ ಮಸೂರಿ ಅಕ್ಕಿ , ಸೋನಾಮಸೂರಿ ಅಕ್ಕಿ ,ಗೋದಿ ಎತ್ತ , ನಿಜ ಜ್ಞಾನ ವೆಂಬ ಅಕ್ಕಿ ಎತ್ತ ? ಇವರ ಬಾವಿಯೊಳಗಿನ ಮಡಿ ನೀರು ಎತ್ತ ಪರಮಾನಂದ ಜಲ ವೆತ್ತ ! ಇವರು ಕಟ್ಟಿಗೆಯಿಂದ ಹೊತ್ತಿಸಿದ ಅಗ್ನಿ ಎತ್ತ, ಇದರಿಂದ ಕುದಿಸಿ ತಯ್ಯಾರಾದ ಪಾಕ ವಾದ ನೈವೇದ್ಯ ವೆತ್ತ ? ಸ್ವಯಂ ಪ್ರಕಾಶ ವೆಂಬ ಅಗ್ನಿಯಿಂದ ಪಾಕವಾದ ಜ್ಞಾನಾಮೃತ ವೆತ್ತ ? ಇವರ ಜಠರಾಗ್ನಿಯಲ್ಲಿ ನಿಂದು ಹಸಿವಿನ ಅನ್ನವವುಂಡು ತೃಪ್ತಿಯಾಗಿ ಪುನಃ ಹಸಿವೆಯಾಗಿ ಅನ್ನ ಮತ್ತು ಆತ್ಮ ಬಯಸುವ ತೃಪ್ತಿ ಎತ್ತ ? ಮಹಾ ಘನದಲ್ಲಿ ನಿಂದ ಘನ ತೃಪ್ತಿಯ ನೀವುದು ಎತ್ತ!

ಎತ್ತಣ ದಿಂದೆತ್ತ , ಕತ್ತಲೆ ಎತ್ತ , ಬೆಳಕೆತ್ತ , ಮರವಿನಿಂದ ಪಾಕವಾದ ಪಕ್ವಾನ್ನವೆತ್ತ? ಜ್ಞಾನಾನುಭವದಿಂದ ಸಿದ್ಧವಾದ ಜ್ಞಾನಾಮೃತ ವೆತ್ತ ಉಂಡುಂಡು ಹಸಿವಿನಿಂದ ಬಳಲುವ ಊಟವೆತ್ತ ಘನತೃಪ್ತಿಯ ನೀವ ತೃಪ್ತ ರೂಪ ತೃಪ್ತಿ ಎತ್ತ!

ನಿಶ್ಚಲವೆಂಬ ಭಾಜನ : ಇದಾವ ಭಾಜನ , ಇದಾವ ಭಾಂಡ , ನಿಶ್ಚಲ ಭಾಂಡ , ಇದು ಪಿಂಡವೆಂಬ ಭಾಂಡ ಅಲ್ಲ. ಚಿದಹಮ್ಮ ಭಾಂಡವೂ ಅಲ್ಲ , ಅಖಂಡಿತ ಘನ ಪೂರ್ಣವಪ್ಪ ತನ್ನ ಇರುವೆ ಅರುವೆಂದರಿದ ನಿಜದ ಭಾಂಡ! ಈ ಭಾಂಡೆಯಲ್ಲಿ ನಿಜ ಜ್ಞಾನ ವೆಂಬ ಅಕ್ಕಿ ತುಂಬಿ , ಇದು ಜ್ಞಾನ ರೂಪ ಅಕ್ಕಿ , ತರ್ಕದಿಂದುಕ್ತವಾದ ಜ್ಞಾನರೂಪ ಅಕ್ಕಿಯ ಅಲ್ಲ, ಯೋಗದಿಂದುಕ್ತವಾದ ಜ್ಞಾನರೂಪ ಅಕ್ಕಿ ಅಲ್ಲ, ಸಮಾಧಿಯಿಂದುಕ್ತವಾದ ಜ್ಞಾನರೂಪ ಅಕ್ಕಿ ಅಲ್ಲ. ಗುರೂಪದೇಶದಿಂದುಕ್ತವಾದ ಅಕ್ಕಿಯು ಅಲ್ಲ, ಜ್ಞಾನ ಸ್ವರೂಪ ಅಕ್ಕಿ ಜ್ಞಾನದಂತಿದ್ದುದು ಎಲ್ಲಿ ನಿಶ್ಚಲ ವೆಂಬ ಭಾಜನ ವದೆ ಅಲ್ಲಿ ನಿಜ ಜ್ಞಾನವೆಂಬ ಅಕ್ಕಿ ಇದೆ. ಅಲ್ಲಿ ಪರಮಾನಂದ ವೆಂಬ ಜಲವು ಇದೆ , ಪರಮಾನಂದ ರೂಪಿ ಜಲದಾನಂದ ಅಪಾರ , ಗಣನೆಗತೀತವಾದುದು ನೆರೆದು ಸ್ವಯಂ ಪ್ರಕಾಶ ವೆಂಬ ಅಗ್ನಿಯಿಂದ ಪಾಕವಾದ ಲಿಂಗದೋಗರವು! ಇದೆಂಥ ಓಗರ, ಇದೆಂಥ ಪ್ರಸಾದ , ಪರಾತ್ಪರ ಪ್ರಸಾದ ಪರಮಾಮೃತ, ಪರಮಜ್ಞಾನ ಇದು ವಾಙ್ಮನೋತೀತ ವಾಗಿಪ್ಪ ಲಿಂಗದೋಗರ ತನ್ನಿಂದ ತನೊಳಗೆ ತಾನೆ ಪಾಕ ಮಾಡಿದ ಘನವು , ತನ್ನೊಳಗೆ ನಿಶ್ಚಲ ಭಾಜನ ನಿಜ ಜ್ಞಾನ , ತನ್ನೊಳಗೆ ಪರಮಾನಂದ ತನ್ನೊಳಗೆ ಸ್ವಯಂ ಪ್ರಕಾಶ ರೂಪಿ ಅಗ್ನಿ

ತನ್ನಿಂದ ತಾನೆ ಪಾಕ ಮಾಡಿ, ತಾನೆ ಲಿಂಗದೋಗರವಾದುದು ಇದನಾರಯ್ಯ ವರ್ಣಿಸುವದು!

ಮಹಾ ಘನದಲ್ಲಿ ನಿಂದು ಘನ ತೃಪ್ತಿಯ ನೀವುತ್ತಿದ್ದಿತು ಕಾಣಿರೇ : ತಾನು ಘನಕ್ಕೆ ಘನವಾಗಿದ್ದುದು ಅರಿತುದೆ ಮಹಾಘನದಲ್ಲಿ ನಿಂದುದು. ನಿಃಶಬ್ದ ಬ್ರಹ್ಮವಾಗಿ ನಿಲ್ಲುವದೆ ಮಹಾ ಘನವಾದಲ್ಲಿ ನಿಂತ ಸೂಚನೆ ಅದು ತೃಪ್ತಿ ರೂಪ ತೃಪ್ತಿ, ಸವೆಯದ ಸುಖ, ಅಚ್ಚ ಸುಖ, ಬೇಸರವಾಗದ ಸುಖವೆ ಘನ ತೃಪ್ತಿಯ ನೀವುತ್ತಿದ್ದ ಸೂಚನೆ ಇದು ತನ್ನೊಳ ತಾನು ಕಾಣುವದು.

ಕಣ್ಣಿಲ್ಲದೆ ಕಂಡು, ಕೈಯಿಲ್ಲದೆ ಕೊಂಡು ಬಾಯಿಲ್ಲದೆ ಉಂಡು, ಅರುವಿಲ್ಲದರುವಿನಿಂದ ಸುಖಿಯಾದೆ ನಾನು ಗುಹೇಶ್ವರ : ಲಿಂಗದೋಗರವು ಕಣ್ಣಿಲ್ಲದೆ ಕಂಡುದು, ಲಿಂಗ ಪ್ರಸಾದ ಅರಿದರುಹಿಸಿ ಕೊಂಬುದಕ್ಕೆ ಮೀರಿದ ಘನದರಿವುಳ್ಳ ಅರುವು, ಲಿಂಗಪ್ರಸಾದ ಅರಿದರುಹಿಸಿಕೊಂಬುದಕ್ಕೆ ಮೀರಿದ ಘನದರುವು ಅದನ್ನು ಈ ಅನ್ನ ಬ್ರಹ್ಮ ಅರಿಸಿಕೊಳ್ಳುವದಾಗಿಲ್ಲ, ಅರಿಯುವದಾಗಿಲ್ಲ. ದೃಶ್ಯವೆನಲಿಲ್ಲ ದೃಕ್ ಎನಲಿಲ್ಲದ ಮುನ್ನ ಅಖಂಡಿತ ಘನ ಪರಿಪೂರ್ಣವಪ್ಪ ತನ್ನಿರುವೆಂದರಿದ ಜ್ಞಾನ ಸ್ವರೂಪ ಪ್ರಸಾದ ರೂಹಿಸದ ಉಪಮಿಸಲಿಲ್ಲಾಗಿ ಇದು ಕಣ್ಣಿಲ್ಲದೆ ಕಂಡು ಹೇಳಿಹರು.

ಭಿನ್ನ ಜ್ಞಾನ ವಿಲ್ಲದೆ ಕಂಡುದು ಕಣ್ಣಿಲ್ಲದೆ ಕಂಡುದು ಲಿಂಗದೋಗರವು. ಲಿಂಗ ತಾನು ಬೇರೆಂಬುದಿಲ್ಲ ತಾನೆಂಬುದಿಲ್ಲ. ಏಕೆಂದರೆ ಅರಿಯಲಿಲ್ಲದರುವೆ ತಾನಾದ ಘನವನು ಏನೆಂದು ವರ್ಣಿಸುವುದು ? ಕೈಯಿಲ್ಲದೆ ಕೊಂಡ ಲಿಂಗದೋಗರವು ಕೈಗೆ ಸಿಕ್ಕುವ ಪದಾರ್ಥವಲ್ಲ, ಇದು ರೂಹಿಲ್ಲದ ಪದಾರ್ಥ ಇದು ಕೈಯಿಲ್ಲದೆ ಕೊಂಡುದು. ತಾನು ಲಿಂಗವಾಗಿ ಲಿಂಗದೋಗರವ ಕೊಂಡುದು. ಲಿಂಗಕ್ಕೂ ಅವಯವಗಳಿಲ್ಲ ಇಂದ್ರಿಯಗಳಿಲ್ಲ ಹಸ್ತಾದಿಗಳಿಲ್ಲ, ತನಗೂ ಅವಯವಗಳಿಲ್ಲ ಹಸ್ತಾದಿಗಳಿಲ್ಲ, ಇವಾವುಗಳಿಲ್ಲವಾದ್ದರಿಂದ ಲಿಂಗಕ್ಕೂ ಕಣ್ಣಿಲ್ಲ ಕೈಯಿಲ್ಲ ತನಗೂ ಕಣ್ಣಿಲ್ಲ, ಕೈಯಿಲ್ಲ ಲಿಂಗದೋಗರವು ಜ್ಞಾನಾಮೃತವಾದ್ದರಿಂದ ಅದನ್ನು ಭಿನ್ನ ಜ್ಞಾನ ವಿಲ್ಲದೆ ಕೊಂಡುದು ಎಂದು ಹೇಳಿದ್ದಾರೆ.

ಬಾಯಿಲ್ಲದೆ ಉಂಡುದು : ಬಾಯಿ ಇದ್ದಲ್ಲಿ ಶಬ್ದವದೆ, ಶಬ್ದ ವಿದ್ದಲ್ಲಿ ಬಾಯಿ ಇದೆ ಶಬ್ದ ವಿದ್ದಲ್ಲಿ ಅಹಂವೃತ್ತಿ ಇದೆ, ಇಲ್ಲ ವೆಂದಲ್ಲಿ ಶಬ್ದ ವಿಲ್ಲ ಬಾಯಿಲ್ಲ. ಏನೊಂದುಸರದೆ ಶಬ್ದ ಮುಗ್ಧ ನಾಗಿಹ ಉಂಡ ಊಟ ಸವೆಯದ ಸುಖ. ಸುಖವ ಸುಖ ಉಂಡುದು, ಸುಖ ಸ್ವರೂಪ ಸುಖವು ಸುಖವೆ ಇರುವಲ್ಲಿ ಅದನಾರು ಹೀಗೆ ಎಂದು ವರ್ಣಿಸುವದು!

ತೃಪ್ತಿ! ಇದಾರ ತೃಪ್ತಿ ರೂಪ ತೃಪ್ತಿ, ಅರುವಿಲ್ಲದರುವಿನಿಂದರಿದ ತೃಪ್ತಿ. ಇದು ಘನ ತೃಪ್ತಿ ಘನ ಸುಖ ಸುಖದ ಸುಖ. ಅಖಂಡ ಸುಖ, ನಿಸ್ಸೀಮ ಸುಖ, ಇದು ಮಹಾ ಘನದಲ್ಲಿ ನಿಂದ ನಿಲುವು ತಾನು ಲಿಂಗವೆಂಬುದಕ್ಕೂ ಮೀರಿದವನಾಗಿ ನಿಂತುದು ಏನೊಂದುಸುರಲು ಬಾರದವನಾಗಿ, ತಾನೆ ತಾನಾಗಿ ನಿಂತುದು, ಮಹಾ ಘನದಲ್ಲಿ ನಿಂತುದು ಎಂದು ಹೇಳಿಹರು. ಅಲ್ಲಿಯ ತೃಪ್ತಿ ಘನ ತೃಪ್ತಿ ಎಂದು ಹೇಳಿಹರು.

ಕಣ್ಣಿಲ್ಲದೆ ಕಂಡು ಕೈಯಿಲ್ಲದೆ ಕೊಂಡು ಬಾಯಿಲ್ಲದೆ ಉಂಡ ಘನವದೆಂತು ವರ್ಣಿಸುವದು: ಅಖಂಡ ದೃಷ್ಠಿಯೆ ಕಣ್ಣಿಲ್ಲದೆ ಕೊಂಡುದು. ಅಖಂಡ ಭಾವ ಅಖಂಡ ಜ್ಞಾನವು ಕೈಯಿಲ್ಲದೆ ಕೊಂಡುದು. ಅಖಂಡವೆಂಬುದಿಲ್ಲ ನಾನೆಂಬುದಿಲ್ಲ ನೀನೆಂಬುದಿಲ್ಲ ಇಲ್ಲ ಇಲ್ಲ ವೆಂಬುದು ಇಲ್ಲವಾಗಿ ಶಬ್ದ

ಮುಗ್ಧನಾದುದೆ ಬಾಯಿಲ್ಲದೆ ಉಂಡುದು. ಇದರಿರುವಿಲ್ಲದರುವಿನಿಂದರಿದು ಸುಖಿಯಾದೆ ನಾನು ಗುಹೇಶ್ವರಾ. ಗುರು, ಲಿಂಗ, ಜಂಗಮ, ಪ್ರಸಾದ, ಸ್ವಯ ಪರವೆಂಬುದು ಹೆತ್ತರಿವು ಈ ಹೆತ್ತರಿವು ಇಲ್ಲದುದೆ ಅರುವಿಲ್ಲದರುವಿನಿಂದರಿದುದು ಸ್ವಯ ಮೇವ ಅರುವಿನಿಂದರಿದು, ನಾನು ಸುಖಿಯಾದೆ ಗುಹೇಶ್ವರಾ ಎಂದು ಹೇಳಿಹರು.

60

ಭಕ್ತ ಪ್ರಸಾದ ವ ಕೊಂಡು ಪ್ರಸಾದವಾದ,
ಪ್ರಸಾದ ಭಕ್ತನ ನುಂಗಿ ಭಕ್ತ ವಾಯಿತ್ತು,
ಭಕ್ತನು ಪ್ರಸಾದವೂ ಏಕಾರ್ಥವಾಗಿ ಲಿಂಗವ ಮರೆದು,
ಭಕ್ತನೆ ಭವಿಯಾದ ಪ್ರಸಾದವೆ ಓಗರ ವಾಯಿತ್ತು
ಮತ್ತೆ ಓಗರವೆ ಭವಿ, ಭವಿಯೆ ಓಗರ ವಾಯಿತ್ತು,
ಓಗರ ಭವಿ ಎಂಬೆರಡೂ ಇಲ್ಲದೆ ಓಗರ ವಾಯಿತ್ತು ಗುಹೇಶ್ವರ. **॥ 1395 ॥**

ತಾತ್ಪರ್ಯ: ಭಕ್ತ ಪ್ರಸಾದವ ಕೊಂಡು ಪ್ರಸಾದವಾದ: ಪ್ರಸಾದವ ಕೊಂಡು ಪ್ರಸಾದವಾದ ಭಕ್ತನಾರು? ಭಕ್ತನೆಂದರೆ ಮರಳು ತಲೆ ಹುರುಳು ತಲೆ ನೀನೆ ದೇವಾ, ಹೆಂಗೂಸು, ಗಂಡುಗೂಸೂ ನೀನೆ ದೇವಾ ಎಮ್ಮಕ್ಕನ ಗಂಡ ನೀನೆ ದೇವಾ. ಬ್ರಾಂತಳಿದು, ಭವನೇತಿ ಗೊಂಡಿತ್ತಾಗಿ ಕೂಡಲಸಂಗಮದೇವಾ ಎಂಬ ದಾಸೋಹಂ ಭಾವಿ ಸಕಲವು ನೀನೆಂಬುವ ಭರಿತ ಭಾವಿ. ಪೂರ್ಣ ಭಾವಿ, ಅಜ್ಞಾನ ಸುಜ್ಞಾನ ನೀನೆನ್ನುವ ಭಾವಿ ಶಿವ ಶಕ್ತಿ ನೀನೆನ್ನುವ ಭಾವಿ ಆಕಾರ ನಿರಾಕಾರ ನೀನೆನ್ನುವ ಭಾವಿ, ಈ ಭರಿತ ಭಾವವು ನೀನೆನ್ನುವ ನಿರಹಂಭಾವಿ ಕೂಡಲಸಂಗಮದೇವಾ, ನಿನ್ನ ಹೊರತಾಗಿ ಮತ್ತೊಂದು ಕಾಣದಿಹ ಮಹದ್ಭಕ್ತನು ಪ್ರಸಾದವ ಕೊಂಡು ಪ್ರಸಾದವಾದ.

ಪ್ರಸಾದ ಕೊಂಡು ಪ್ರಸಾದವಾದ: ಪ್ರಸಾದವಾವುದು! ಭಾವಕ್ಕಿಂಬಿಲ್ಲ ಶಬ್ದ ಮೀಸಲು ನುಡಿಗೆಡೆಯಿಲ್ಲ ಎಡೆಗೆ ಕಡೆಯಿಲ್ಲ ಗುಹೇಶ್ವರ ಲಿಂಗ ವೇಧಿಸಲೊಡನೆ ಪ್ರಸಾದ ಕೊಂಡು ಪ್ರಸಾದವಾದ ಘನವ ಅದನೆಂತು ಸುರುವುದು. ಭವಕ್ಕಿಂಬಿಲ್ಲದ ಪ್ರಸಾದ ಭಾವಿಸುವದದೆಂತು ಲಿಂಗ ಲಿಂಗವೆಂಬ ಭಾವಕ್ಕಿಂಬು ಕೊಡದ ಪ್ರಸಾದ, ಸ್ವಯ ಪರ ವೆಂಬುದಕ್ಕಿಂಬುಕೊಡದ ಪ್ರಸಾದ, ಪ್ರಸಾದವೆನ್ನದ ಪ್ರಸಾದ ಪ್ರಸಾದ ರೂಪಿ ಪರಮಜ್ಞಾನ ವರಿತ ಪರಮ ಪ್ರಸಾದ, ಪರಮಾಮೃತ, ವಾಙ್ಮನೋತೀತವು. ಪ್ರಸಾದವೆ ಗುರು, ಪ್ರಸಾದವೆ ಲಿಂಗ, ಪ್ರಸಾದವೆ ಜಂಗಮ, ಪ್ರಸಾದವೆ ಪರಾತ್ಪರ, ಪ್ರಸಾದವೆ ಪರಮ ಜ್ಞಾನ, ಪ್ರಸಾದವೆ ವಾಙ್ಮನೋತೀತ.

ಅಗ್ನಿ ಮುಟ್ಟುಲು ತೃಣವಗ್ನಿ ವಪ್ಪದು ತಪ್ಪದಯ್ಯ. ಗುರು ಪ್ರಸಾದ ಅಂಗಕ್ಕೆ ಸೋಂಕಿ ಗುರುವಪ್ಪದು ತಪ್ಪದಯ್ಯ. ಲಿಂಗ ಪ್ರಸಾದ ಮನ ಸೋಂಕಿದಲ್ಲಿ ಮನ ಲಿಂಗವಪ್ಪದು ತಪ್ಪದಯ್ಯ ಜಂಗಮ ಪ್ರಸಾದ ಅರಿವು ಸೋಂಕಿದಲ್ಲಿ ಅಖಂಡಿತ ಪ್ರಸನ್ನ ಪ್ರಸಾದವಪ್ಪದು ತಪ್ಪದಯ್ಯ. ಅಖಂಡಿತ ಪ್ರಸಾದವ ಕೊಂಡು ಪ್ರಸಾದವಾದ. ಪ್ರಸಾದ ಭಕ್ತನ ನುಂಗಿ ಭಕ್ತನಾಯಿತ್ತು. ಅಖಂಡ ಪ್ರಸನ್ನ ಪ್ರಸಾದ ರೂಪಿ ಪರಮಜ್ಞಾನವ ಭಕ್ತ ನುಂಗಿ ಭಕ್ತನಾಯಿತ್ತು. ಓಹೋ! ಈ ಮಹಾ ಪ್ರಸಾದ ಭಕ್ತನ ನುಂಗಿತ್ತೆ! ನುಂಗಿದ ಭಕ್ತ ಈತನಾರು? ಸಕಲವೂ ನೀನೆನ್ನುವ ದಾಸೋಹಿ ಭರಿತ ಪೂರ್ಣ ಭಾವಿ, ನೀನೆನ್ನುವ ಭಾವ ರೂಪಿ ಭಕ್ತನ ನುಂಗಿತ್ತು. ತಾನೆ ಭಕ್ತನಾಯಿತ್ತು ಭಕ್ತನಾದ ಘನ ವಾವುದು?

ಘನ ಗಂಭೀರ ಮಹಾ ಘನದೊಳಗೆ ಘನಕ್ಕೆ ಘನವಾಗಿರ್ದನಯ್ಯ ಕೂಡಲಸಂಗಯ್ಯನೆಂಬ

ಬೆಳಗಿನೊಳಗೆ ಬೆಳಗಾಗಿರ್ದು ಶಬ್ದ ಮುಗ್ದವಾದುದ ನೇನೆಂಬೆ ಈ ಮಹದರುವು ಬಸವರಸನೆಂಬ ಭಕ್ತನ ನುಂಗಿದ ಮಹಾ ಪ್ರಸಾದ. ತೆರೆಹಿಲ್ಲದ ಘನವೆ ಭಕ್ತನಾಯಿತ್ತು ನೋಡಾ. ಘನ ಗಂಭೀರವದು, ಅರುವೆ ಘನಗಂಭೀರವು ಅದು ಮಹಾ ಘನವು, ಅದು ಏನೆಂದೆನಲಿಲ್ಲದ ಅರುವು. ಇದು ಅರುವೆನ್ನದ ಅರುವು, ಅನುಪಮ ಲಿಂಗ, ಅಖಂಡಿತ ಲಿಂಗ, ಅಚಲಿತ ಲಿಂಗ ಅರಿಯ ಹೋಗಿ ತಾನು ಘನಕ್ಕೆ ಘನ ವಾಗಿರ್ದನಯ್ಯ ಕೂಡಲ ಸಂಗಯ್ಯನೆಂಬುದು ಬೆಳಗು, ಅದನರಿಯ ಹೋಗಿ ಬೆಳಗಿನೊಳಗೆ ಬೆಳಗಾಗಿರ್ದ ಸ್ವಯಂ ಬೆಳಗು ಶಬ್ದಮುಗ್ದ ವಾದುದನೇಂಬೆ ಎಂದು ಬಸವರಸ ಅಕಥನೀಯ ನಿಲುವುಳ್ಳ ಏಕತ್ವ ನಿಲುವು ಇರುವೆ ಭಕ್ತನಾಯಿತ್ತು ಎಂದು ಹೇಳಿಹರು.

ಭಕ್ತನು ಪ್ರಸಾದವು ಏಕಾರ್ಥವಾಗಿ ಲಿಂಗ ಸಂಗವ ಮರೆದು ಭಕ್ತನೆ ಭವಿಯಾದ. ಭಕ್ತನೂ ಪ್ರಸಾದವೂ ಏಕಾರ್ಥವಾದುದನೆಂತು ವರ್ಣಿಸುವದು . ಭಕ್ತನು ಆವಾವ ಭಾವಕ್ಕಿಂಬು ಕೊಡದ ಘನ. ಪ್ರಸಾದವು ಭಾವಕ್ಕಿಂಬುಕೊಡದ ಘನ, ಭಕ್ತನು ಶಬ್ದ ಮುಗ್ದ ಪ್ರಸಾದ, ವಾಙ್ಮನೋತೀತ ಭಕ್ತನು ಶಬ್ದ ಮೀಸಲು ಪ್ರಸಾದವು ನುಡಿಗೆಡೆಗೊಡದ ಘನ ಭಕ್ತನು ಅನುಪಮ ಪ್ರಸಾದ ನಾನೀನೆಂಬುದಕ್ಕೆಡೆಗೊಡದ ಘನ, ಭಕ್ತ. ಪ್ರಸಾದ ಭಕ್ತ ಪ್ರಸಾದ ಪ್ರಸಾದ ಭಕ್ತ ಒಂದೆಂಬುದು ಎರಡು ಎರಡೆಂಬುದು ಒಂದು. ಒಂದೆರಡಾಗಿ ಕಂಡರೂ ಅದು ಅನುಪಮ ನಿಲವು. ಇದು ಕಾರಣ ಲಿಂಗ ಸಂಗವ ಮರೆದು ಭಕ್ತನೆ ಭವಿಯಾದ.

ಪ್ರಸಾದ ರೂಪಿ ಭಕ್ತ ಗುಹೇಶ್ವರ ಲಿಂಗ ವೇಧಿಸಿ ಲಿಂಗ ಲಿಂಗ ವೆಂಬ ಭಾವ ರೂಪ ಸಂಗವ ಮರೆತಿದ್ದಾನೆ . ಲಿಂಗ ಲಿಂಗವೆಂಬ ಭಾವ ರೂಪ ಸಂಗವ ಮರೆತು ಚಿಂತನವ ಮರೆತು ವಾಙ್ಮನೋತೀತವಾದ ಅಪ್ರತಿಮ ಲಿಂಗವರಿತು ಅಚಲಾನಂದಮಯನಾದ ಭಕ್ತ , ಆತ ಅಚಲಾನಂದನು ಲಿಂಗವರಿತ ಘನ ಲಿಂಗ, ವಾಙ್ಮನೋತೀತವಾದ ಅಪ್ರತಿಮ. ಇದು ಕಾರಣ ಭಕ್ತನು ಭವಿ ಯಾದ ಎಂದು ಹೇಳಿಹರು. ನಿಃಶಬ್ದ ಬ್ರಹ್ಮವದು ತಾನೆ ನೋಡಾ.

ಪ್ರಸಾದವೆ ಓಗರ ವಾಯಿತ್ತು : ಪ್ರಸಾದ ರೂಪಿ ಜ್ಞಾನಾಮೃತ ಓಗರವಾದ ಘನವದೇನು ಹೇಳುವದು ? ನಿಶ್ಚಲವೆಂಬ ಭಾಜನ, ನಿಜ ಜ್ಞಾನವೆಂಬ ಅಕ್ಕಿ, ಪರಮಾನಂದ ವೆಂಬ ಜಲ ಸ್ವಯ ಪ್ರಕಾಶ ವೆಂಬ ಅಗ್ನಿಯಿಂದ ಪಾಕ ಮಾಡಿದ ಲಿಂಗ ಪ್ರಸಾದ ಓಗರ ವಾಯಿತ್ತು. ಇದು ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದಲ್ಲಿ ನಿಶ್ಚಲವೆ ನಿಶ್ಚಲ ಈ ನಿಶ್ಚಲ ರೂಪಿ ಭಾಂಡ ಅದರಲ್ಲಿ ಅರಿಯದರುವುಳ್ಳ ಜ್ಞಾನರೂಪ ಅಕ್ಕಿ ವೃತ್ತಿ ರಹಿತ ಜ್ಞಾನಾನಂದ ಉದಯಾಸ್ತ ವಿಲ್ಲದ ಸ್ವಪ್ರಕಾಶರೂಪಿ ಪಾಕ ಮಾಡಿದ ಪರಮಾಮೃತ ಲಿಂಗ ದೋಗರ ಇದು ವಾಙ್ಮನೋತೀತ ವಾಗಿಹ ಲಿಂಗ ದೋಗರ .

ಮತ್ತೆ ಓಗರವೆ ಭವಿ ಭವಿಯೆ ಓಗರವಾಯಿತ್ತು : ಈ ಓಗರ ವೆಂಬುದು ಪರಮಾಮೃತ ಅದು ವಾಙ್ಮನೋತೀತವು, ನುಡಿಗೆಡೆಗೊಡದ ಪರಮಾಮೃತ. ಇದರ ಸುಖ ಅಪಾರ. ಸುಖ ಸ್ವರೂಪ ಸುಖದ ಸುಖ , ಓಗರ ಸುಖದೈಕರಿಸ ಭವಿ ಸುಖಾಮೃತವೆ ಸುಖ ದೈಕರಸವಾಗಿದೆ . ಓಗರ ವದು ಸುಖಾಮೃತ ಭವಿಯು ಸುಖದೇಕರಸ, ಸುಖದೇಕರಸ ವೆ ಸುಖಾಮೃತವಾಯಿತ್ತು. ಸುಖಾಮೃತವದು ಸುಖದೇಕರಸ ವಾಯಿತ್ತು, ಓಗರ , ಭವಿ ಎಂಬೆರಡು ಇಲ್ಲದೆ ಓಗರವೆ ಆಯಿತ್ತು ಗುಹೇಶ್ವರ ಲಿಂಗದೋಗರ ,ಸಂಜ್ಞೆ ಇಲ್ಲ ಸುಖಾಮೃತವೆ ಆಯಿತ್ತು . ಗುಹೇಶ್ವರ ನಿಶ್ಚಲ, ಭಾಜನ ನಿಜ ಜ್ಞಾನ ಪರಮಾನಂದ ರೂಪ ಜಲ, ಸ್ವ ಪ್ರಕಾಶ ವೆಂಬ ಪಾಕವ ಮಾಡಿದ ಲಿಂಗ ದೋಗರವು ಇಲ್ಲ ಭವಿ ಎಂಬ ಲಿಂಗವೂ ಇಲ್ಲ, ಕೇವಲ ಓಗರವಾಯಿತ್ತು , ಓಗರವದು ವಾಙ್ಮನೋತೀತವಾದ ಪರತತ್ವ ವಾಯಿತ್ತು ಎಂದು ಹೇಳಿಹರು.

61

ಅರುವಿನ ಹೃದಯ ಕಂದೆರೆಯ ಬೇಕೆಂದು ಗುರು ವೆಂದು ಕಲ್ಪಿಸಿಕೊಂಬರಲ್ಲದೆ,
ಗುರುವೆಂದೆನಲುಂಟೆ? ಶಿಷ್ಯಂಗೆ, ಶಿಷ್ಯನೆಂದೆನಲುಂಟೆ?
ಗುರುವಿಂಗೆ ಗಮನಾ ಗಮನ ನಾಸ್ತಿಯಾದ ಲಿಂಗಕ್ಕೆ
ಅಂಗವೆಲ್ಲಿಯದು ಹೇಳಾ ಗುಹೇಶ್ವರಾ. ॥ 835 ॥

ತಾತ್ಪರ್ಯ: ಅರುವಿನ ಹೃದಯ ಕಂದೆರೆಯ ಬೇಕೆಂದು ಗುರುವೆಂದು ಕಲ್ಪಿಸಿ ಕೊಂಬರಲ್ಲದೆ ಗುರುವೆಂದು ಕಲ್ಪಿಸಿಕೊಂಡುದು ಏತಕ್ಕಾಗಿ? ಅರುವಿನ ಹೃದಯ ಕಣ್ಣು ತೆರೆಯುವದಕ್ಕಾಗಿ ಅಲ್ಲವೆ? ಅರುವಿನ ಹೃದಯ ಕಣ್ಣು ತೆರೆಯ ಲೋಸುಗ ಅದೆಷ್ಟು ಆಧ್ಯಾತ್ಮ ಜಿಜ್ಞಾಸುಗಳು ಗುರುವೆಂದು ಕಲ್ಪಿಸಿಕೊಂಡಿದ್ದಾರೆ. ಗುರು ಶಿಷ್ಯ ಸಾಂಪ್ರದಾಯ ಬಹುವಾಗಿ ಹುಟ್ಟಿದೆ. ಅದರಲ್ಲಿ ಅರುವಿನ ಹೃದಯ ಕಣ್ಣುತೆರೆಯುವ ತೆರೆಯಿಸುವ ಕಡೆ ಲಭ್ಯವಿದ್ದವರು ಬಹು ಕಡಿಮೆ ಇದ್ದಂತೆ ಕಾಣುತ್ತದೆ. ಏಕೆಂದರೆ ಅರುವಿನ ಹೃದಯ ಕಣ್ತೆರೆದವರಿಗೆ ಗುರುವಿಂಗೆ ಶಿಷ್ಯನೆಂಬುದಿಲ್ಲ, ಶಿಷ್ಯಂಗೆ ಗುರುವೆಂಬುದಿಲ್ಲ ಇದು ಅನಿಯಮದ ಬೆಡಗು.

ಅರುವಿನ ಹೃದಯ ಕಣ್ದೆರೆಯಿಸುವ ಗುರು ಘನನು ನಡೆ ನುಡಿಗೆ ಮೀರಿದ ಘನನು ಮರವರುವಿಂಗೆ ಮೀರಿದ ಘನನು. ನೆನಹು ನಿರ್ಣಯಕ್ಕೆ ಒಳಪಡದ ಘನನು. ಬಂಧ ಮೋಕ್ಷವ ಕಾಣದ ಗುರು, ಗುರು ಘನನು ಆಚಾರ ಅನಾಚಾರ ಕಾಣದ ಪರಿಶುದ್ಧನು. ಸೀಮೆ ಸಾಯಜ್ಯವ ಮೀರಿದ ಘನನು ನಿಸ್ಸೀಮನು. ಈ ಮಹಾಂತ ಕಾಣಬಾರದ ಗುರು ಘನನು, ಏಕೆಂದರೆ ಕಲ್ಪಿತ ಪುರುಷ ಅಕಲ್ಪಿತ ಘನ ತಾನಾಗಿ ಅರು ಹೃದಯ ಕಣ್ದೆರೆಯಿಸುವುದುಂಟೆ?

ಕಲ್ಪಿತ ಪುರುಷಂಗೆ ಬೋಧ ಹೇಳುವ ಆಚಾರ್ಯರುಂಟು; ಅರುವಿನ ಹೃದಯ ಕಣ್ಣು ತೆರೆಯಿಸುವವರುಂಟೆ ? ಅರು ಹೃದಯವದು ಸೀಮಾತೀತ ಹೃದಯ, ಅಲ್ಲಿ ಗುರು ಶಿಷ್ಯರೆಂಬುದಕ್ಕಿರುವುದಿಲ್ಲ. ಗುರು ಘನನು ಶಿಷ್ಯನನ್ನು ಕಾಣನು. ಶಿಷ್ಯನು ಗುರು ಘನನನ್ನು ಕಾಣನು ಅನುಪಮರು ಉಪಮೆಯುಳ್ಳವರು ಹೇಗಾಗವರು? ಅಖಂಡಿತ ತುಣು ತುಣುಕು ಆಗುವುದೆ ಬಿಡಿ ಬಿಡಿ ವಿಭಾಗವಾಗಬಹುದೆ? ಅಕಲ್ಪಿತ ಘನ ಕಲ್ಪಿತವಾಗಬಹುದೆ? ಅರುವು? ಅದು ಮರುವು ಅರುವು ಹೇಗಾಗುವುದು, ಅರುವದು ಪೂರ್ಣಾತ್ ಪೂರ್ಣವು. ಅಲ್ಲಿಜ್ಞಾನ ಅಜ್ಞಾನ ಹೇಗೆ ಇರಬಲ್ಲವು, ತತ್ವ ಅತತ್ವ ಹೇಗೆ ಇರಬಲ್ಲವು. ಅಕ್ಷರೋತ್ತಮ, ಅಲ್ಲಿ ಕ್ಷರವೆಂಬುದಕ್ಕಿಂಬಿಲ್ಲವಾದ್ದರಿಂದ ಬೆಳಗುಳ್ಳ ಬೆಳಗು ಜ್ಯೋತಿಯ ಮುಂದೆ ಕಾಣಬಹುದೆ, ಗುರು ಘನನು ಪ್ರಕಾಶಮಯನು ಅಗ್ನಿ ಮುಟ್ಟಿದ ತೃಣ ಅಗ್ನಿಯು ಗುರು ಪ್ರಸಾದ ತನು ಸೋಂಕಿದಲ್ಲಿ ಶಿಷ್ಯನು ಗುರು ಘನನು, ಜ್ಯೋತಿಯಲೊದಗಿದ ಜ್ಯೋತಿಯು.

ಗುರು ಘನನು ನಿಶಬ್ದ ವೇದಿ. ಶಿಷ್ಯನು ನಿಶಬ್ದ ವೇದಿ. ಗುರು ಘನನು ಶೃತಿಗಗೋಚರ ಶಿಷ್ಯನು ಶೃತಿಗಗೋಚರನ, ಬಯಲು ಬಯಲೆ, ಅಖಂಡಿತ ಘನ ವಪ್ಪ ಪೂರ್ಣ ಗುರುವೆಂದನಲುಂಟೆ? ಶಿಷ್ಯನ ಶಿಷ್ಯ ಗುರುವೆಂದನಲುಂಟೆ? ಗುರುವೆಂಬುದು ಶಿಷ್ಯನೆಂದಲ್ಲಿಯೆ ಹೋಯಿತ್ತು. ಶಿಷ್ಯನೆಂಬುದು ಗುರುವೆಂದಲ್ಲಿಯೆ ಹೋಯಿತ್ತು.

ಗಮನಾ ಗಮನ ನಾಸ್ತಿಯಾದ ಲಿಂಗಕ್ಕೆ ಅಂಗವೆಲ್ಲಿಯದು ಗುಹೇಶ್ವರ : ಆಕಾಶವು ಘಟದಲ್ಲಿರಲಿ ಮಠದಲ್ಲಿರಲಿ ಅದು ಮೇಘದಲ್ಲಿರಲಿ ಅದು ಗಮನಾ ಗಮನ ನಷ್ಟವಾಗಿಹ ನಿಲುವುಳ್ಳುದು. ಹಾಗೆ ಗುರು ಶಿಷ್ಯರ ನಿಲುವು ನುಡಿಗೆಡೆಗೊಡದ ಘನವಾದ್ದರಿಂದ, ಅರುವರಿತು

ಗಮನಾ ಗಮನ ನಾಸ್ತಿಯಾಗಿಹ ನಿಜದಿರುವು . ಇದು ಮತಿ ಗತಿಗೆ ಮೀರಿದ ನಿಲವು . ಅರುವು ಅರುವು ಎಂಬುವ ಭಾವಿಕರ ನಿಲುವೂ ಅಲ್ಲ ಅರುವಿನ ಅರುವುಳ್ಳವರ ನಿಲವು. ಅರುವಿಂಗರುವಾಗಿಹ ಘನವು, ತಾನೆ ತಾನಾಗಿಹ ಮಹಾಂತಂಗೆ ಸೋಹಂ ಸೋಹಂ ಎಂಬುವ ಗಮನಾ ಗಮನವುಳ್ಳ ಅರಿವು ನಷ್ಟವು. ಸಚ್ಚಿದಾನಂದ ನಾನೆಂಬ ಚಿದಹಮ್ಮ ಗಮನಾ ಗಮನವುಳ್ಳ ಅರುವು ನಷ್ಟವಾದ್ದರಿಂದ ಇದು ವೃತ್ತಿಯಿಂದುಕ್ತವಾದ ಜ್ಞಾನ ವಲ್ಲ.

ಆವುದು ಗಮನಾ ಗಮನ ನಾಸ್ತಿಯಾದ ಅರುವಾಗಿದೆ . ಅದು ತನ್ನಿಂದ ತನ್ನ ಅರಿದ ಅರುವಾಗಿದೆ. ಅರಿದು ನೆನೆಯಲಿಲ್ಲ ಮರೆದು ಪೂಜಿಸಲಿಲ್ಲ, ತೆರಹಿಲ್ಲದ ಘನಕ್ಕೆ ಕುರುಹು ಮುನ್ನಿಲ್ಲ ತನಗೆ ಗುರುವಿಲ್ಲ, ಗುರುವಿಂಗೆ ತಾನಿಲ್ಲ. ಗುರುವಿಂಗೆ ಶಿಷ್ಯನು ಹೊರವಡುವ ಕಾರಣ ಮುನ್ನಿಲ್ಲ ಬಯಲು ಬಿತ್ತಲಿಲ್ಲ ಬೆಳೆಯಲಿಲ್ಲ ಒಕ್ಕಲಿಲ್ಲ, ತೋರಲಿಲ್ಲ ಗುಹೇಶ್ವರ ಲಿಂಗಕ್ಕೆ ಕುರುಹು ಮುನ್ನಿಲ್ಲ. ಗಮನಾ ಗಮನ ನಾಸ್ತಿಯಾದ ಲಿಂಗ ಅದು ಗುಹೇಶ್ವರ ಲಿಂಗ . ಅದು ಲಿಂಗವರಿತವರ ಲಿಂಗವಾಗಿಹ ಲಿಂಗ , ನಿಃಶಬ್ದ ಬ್ರಹ್ಮಬಾಗಿಹ ಲಿಂಗ , ಮೌನ ಮುದ್ರೆ ಧರಿಸಿದ ಲಿಂಗ . ಅದು ನಿರಂಜನ ನಿಜ ಚಿದ್ರೂಪವಾಗಿಹ ಲಿಂಗ. ಅಲ್ಲಿ ಅರುವು ತಾನೆಂಬ ಮಮತೆಯೆ ಇಂಬಿಲ್ಲದಿರುವಲ್ಲಿ ಅಂಗವೆಲ್ಲಿಯದು ಹೇಳಾ .

ತೆರೆಹಿಲ್ಲದ ಘನಕ್ಕೆ ಕುರುಹು ಮುನ್ನಿಲ್ಲ : ಗುರುವೆಂಬ ಕುರುಹು ಇಲ್ಲ, ಶಿಷ್ಯನೆಂಬ ಕುರುಹು ಇಲ್ಲ ಕುರುಹು ಇಲ್ಲದಿರುವಲ್ಲಿ ಅರ್ಚನೆಯಿಲ್ಲ ಅರ್ಪಿತವಿಲ್ಲ ಶಬ್ದಕ್ಕೆ ತೆರಹಿಲ್ಲ ಬಯಲು ಅದೆಂದು ಬಿತ್ತಿದೆ ಅದೆಂದು ಬೆಳೆದಿದೆ ? ಅದೆಂದು ಕೂಡುಹಾಕಿದೆ ? ಅದೆಂದು ತೋರಿದೆ , ಬಯಲಿನ ಕಾಶಿ , ಬಯಲು ಬಯಲೆ , ತೆರೆಹಿಲ್ಲದ ಘನಕ್ಕೆ ತೆರೆಹಿಲ್ಲದ ಜ್ಞಾನ , ಅಲ್ಲಿ ತನ್ನಿಂದ ತನ್ನ ಕಂಡ ಜ್ಞಾನ ಅಲ್ಲಿ ಗುರುವಾಗಿ ಬೋಧಿಸಿದುದು ಇಲ್ಲ. ಶಿಷ್ಯನಾಗಿ ಶ್ರವಣ ಮಾಡಿದುದು ಇಲ್ಲ , ಮನನ ನಿಧಿಧ್ಯಾಸ ಮಾಡಿದುದು ಇಲ್ಲವಾದ್ದರಿಂದ, ಗುರುವಾಗಿ ಬಿತ್ತಿದುದು ಇಲ್ಲ ಶಿಷ್ಯನಾಗಿ ಬೆಳಿಸಿದುದು ಇಲ್ಲ, ತನ್ನ ಸಾಧನ ಸಾಮಾಗ್ರಿಗಳಿಂದ ರಾಶಿ ಕೂಡಿ ಹಾಕಿದುದು ಇಲ್ಲ, ಇದು ನಿಃಶಬ್ದ ಬ್ರಹ್ಮವೆ ತಾನಾಗಿಹ ನಿಜದಿರುವುಳ್ಳ ಅರುವು ಶಬ್ದ ಸಂಭ್ರವದವರಿಗೆ ಕಾಣದ ಘನವು ಇದು . ಕಾರಣ ಅವರಿಗೆ ದಕ್ಕದ ಜ್ಞಾನ ಕಲ್ಪಿತ ಪುರುಷನು ನಷ್ಟ, ಅವನ ಜ್ಞಾನವು ನಷ್ಟವು ಇದಲ್ಲದೆ ಗತಿಮತಿಯು ನಷ್ಟ, ಭಾವ ನಷ್ಟ ,ನೆನೆಹು ನಿರ್ಣಯ ನಷ್ಟ. ನಷ್ಟವೆಂಬುದು ನಷ್ಟವಾದವಂಗೆ ಇದರ ರಹಸ್ಯವು ತಿಳಿಯುವುದು . ಇಲ್ಲಿ ಗುರುವಿಂಗೂ ಅಂಗವಿಲ್ಲ, ಶಿಷ್ಯಂಗೂ ಅಂಗವಿಲ್ಲ ಅಂಗವಿಲ್ಲವಾದುದರಿಂದ ಕಲ್ಪಿತ ಪುರುಷನೆಂಬ ಅಂಗನೆಂಬುದು ನಷ್ಟವೆಂದು ಹೇಳಿದೆ.

ಕಲ್ಪಿತ ಪುರುಷನೆಂಬ ಅಂಗ ಇಲ್ಲದಿರುವಲ್ಲಿ ತನುವೆಲ್ಲಿಯದು ? ಇಲ್ಲದ ಗುರು ಶಿಷ್ಯನು ಇಲ್ಲ, ಅವರ ಅಂಗವೂ ಇಲ್ಲ, ಇಲ್ಲದಿರುವಲ್ಲಿ ಬೋಧಿಸುವ ಬೋಧ ಅದಾರಿಗೆ? ಅಬೋಧ ವಂತನಾಗಿದ್ದುದು ಅದು ಆವಾಗ, ಅಜ್ಞಾನ ವಿದ್ದಲ್ಲಿ ಜ್ಞಾನದಿಂದದು ಸಹಜ ಕೆಡುವುದು .

ಗುರು ಘನನು, ತೆರೆಹಿಲ್ಲದ ಘನನು . ಮರವರುವಿಂಗೆ ಮೀರಿದ ಘನನು , ಅರಿದರುಹಿಸಿಕೊಂಬುದಕ್ಕೂ ಮೀರಿದ ಘನನು , ಅಲ್ಲಿ ಅಜ್ಞಾನ , ಜ್ಞಾನ ಸೋಂಕುವು ದೃಶ್ಯ ದೃಕ್ ಎಂಬ ಕಥನಕ್ಕೂ ನಿಲುಕದು . ಪ್ರಕಾಶಿತ ಪ್ರಕಾಶಿತ ವೆಂಬ ತತ್ವ ಜ್ಞಾನ ಸೋಂಕುವು ಅಕಲ್ಪಿತ ಘನನಿಗೆ,ಕಲ್ಪಿತ ಘನ ಕಾಣದು, ಇದು ಕಾರಣ ಗಮನಾ ಗಮನ ನಾಸ್ತಿಯಾದ ಲಿಂಗ ವೆಂಬುದು ಗುರು ಶಿಷ್ಯರೀರ್ವರ ಇರುವು ಅರುವು . ಇವರು ಅಕ್ಷರಾಕ್ಷರಕ್ಕೂ ಮೀರಿದ ಘನವಾದ ಸಜ್ಞೆಯ ಸೂಚಿಸಿಹರು .

ಸಹ ಭಾಜನ, ಸಹ ಭೋಜನ ವೆಂದೆಂಬರು,
ಭಾಜನ ವಾವುದು ಭೋಜನವಾವುದು ಎಂದರಿಯರು.
ಭಾಜನವೆ ಅಂಗ, ಭೋಜನವೆ ಲಿಂಗ.
ಭಾಜನ ಸಹಿತ ಭೋಜನ ಮಾಡುವ ಹಿರಿಯರು,
ಭಾಜನವನಿರಿಸಿ ಹೋದಡೆ ಅದೆ ಭಂಗ ಗುಹೇಶ್ವರ. ॥ 1556 ॥

ತಾತ್ಪರ್ಯ : ಸಹ ಭಾಜನ , ಸಹ ಭೋಜನ ವೆಂಬರು ; ಭಾಜನ ವಾವುದು ಭೋಜನ ವಾವುದೆಂದರಿಯರು : ಹನ್ನೆರಡನೇ ಶತಮಾನದಲ್ಲಿ ಸಹಭಾಜನ , ಸಹ ಭೋಜನದ ಮರ್ಮ ತಿಳಿಯದುದಕ್ಕಾಗಿ ಮಹಾ ಕ್ರಾಂತಿಯಾಗಿ ಹೋಯಿತು. ಈಗ ಸಧ್ಯ ನಡೆಯುವ ಪ್ರಜಾ ಪ್ರಭುತ್ವದಲ್ಲಿ ಸಹ ಭಾಜನ ಸಹ ಭೋಜನ ಕಾರ್ಯ ಜ್ಯಾತ್ಯತೀತ ರಾಷ್ಟ್ರವೆನಿಸಿಕೊಂಡು ಸಹಜವಾಗಿ ಸಹ ಭೋಜನ ಎಲ್ಲೆಲ್ಲೂ ನಡೆದಿದೆ.

ಪೂರ್ವದಲ್ಲಿ ಶರಣ ಗಣ ತಿಂಥಿಣಿ ತಿಳಿದ ಸಹ ಭಾಜನ, ಸಹ ಬೋಜನದ ಜ್ಞಾನಕ್ಕೂ ಬಹು ವಿಪರೀತ ತಿಳಿದಂತಾಗಿದೆ. ಈಗ ನಡೆದಿರುವ ಜಾತಿ ಆಂದೋಲನ ಇದೊಂದು ಪಿಡುಗು ರೋಗ. ಶರಣರ ಮಹಾನುಭಾವ ತಿಳಿಯದ್ದರಿಂದ ಈಗ ಜಾತಿ ರೋಗ ಮಾನವ ಜನಾಂಗಕ್ಕೆಲ್ಲ ಹಬ್ಬಿದೆ.

'' ನೆಲನೊಂದೆ ಹೊಲೆಗೇರಿ ಶಿವಾಲಯಕ್ಕೆ , ಜಲ ಒಂದೆ ಶೌಚಾಚಮನಕ್ಕೆ, ತನ್ನ ತಾನರಿದ ಶರಣಂಗೆ ಕುಲ ಒಂದೆ ಕೂಡಲಸಂಗಮದೇವಾ ''. ಬಸವರಸ ಮಹಾನುಭಾವ . ಮಾನವ ಎಲ್ಲಿಯವರೆಗೆ ಸಹ ಭಾಜನ ಸಹ ಭೋಜನಕ್ಕೆ ಕೆಲವರು ಒಪ್ಪಿಕೊಳ್ಳುದಿರುವರು ಕೆಲಬರಿಗೆ ಇದು ಒಳ್ಳೆ ಅನುಕೂಲವಾಗಿದೆ, ಕೆಲಬರಿಗೆ ಅನಾನುಕೂಲ ವಾಗಿಹುದು .

ಸ್ವೇಚ್ಛಾಚಾರಿಗಳಿಗೆ ಸಹ ಭೋಜನ ಬಹು ಅನುಕೂಲವಾಗಿದೆ . ಮಿಥ್ಯಾಚಾರಿಗಳಿಗೂ ಡಾಂಭಿಕರಿಗೂ ಮೂಢ ಭಾವಿಕರಿಗೂ ಅನಾನುಕೂಲವಾಗಿದೆ. ಸಕಲರು ಸಮಾನ ಪಂಕ್ತಿಯಲ್ಲಿ ಸಹ ಭೋಜನ ಮಾಡಲು ಬಹು ವಿರುದ್ಧವಾಗಿದೆ , ಬಹುಪ್ರಯಾಸವಾಗಿದೆ . ಕೆಲಬರಿಗೆ ಬಹುಪ್ರಿಯವಾಗಿದೆ ಅದರಲ್ಲಿ ಅಡಿಗೆಯ ಸಾಮಾನುಗಳು ಪಾತ್ರೆಗಳು ಸಹ ಭಿನ್ನ ಭಿನ್ನ ಕುಲದವರು ಆಗಿದೆ ,ಪಾತ್ರೆಗಳಲ್ಲಿ ಸಹ ಜಾತ್ಯಾಂಧತೆ ನೆಲಸಿ ಹೋಗಿದೆ . ಮನೆ ನೆಲ , ನೀರಲ್ಲಿ ಸಹ ಜಾತಿ ಸೇರಿದೆ . ಅಡಿಗೆ ಅವರವರದಾಗಿದೆ . ಸರಿಯಾದ ಜ್ಞಾನ ವಿಲ್ಲದ್ದರಿಂದ ಇಷ್ಟು ವಿಕಲ್ಪ ವಂತನಾಗಿಹನು . ಈ ವಿಕಲ್ಪ ಬುದ್ಧಿ ಮಾನವ ತತ್ವ ದೃಷ್ಠಿಯುಳ್ಳವನಾಗನು ತತ್ವ ದೃಷ್ಠಿಯಿಂದ ಜಡ ಚೇತನದ ಯತಾರ್ಥ ಅರಿವು ಆಗುವುದು . ಆಗ ವಿಷಮ ದೃಷ್ಠಿ ಸಂಕುಚಿತ ಸ್ವಭಾವ ಸಹಜ ನಷ್ಟವಾಗುವದು , ಆಗ ನೆಲನೊಂದೆ ಹೊಲೆಗೇರಿ ಶಿವಾಲಯಕ್ಕೂ ಎಂಬ ಅರಿವು ಆಗಿ ನಷ್ಟವಾಗುವದು . ಬಹು ಜನ ವಚನ ಹೇಳುತ್ತಾರೆ . ಹೇಳಿದರೂ ಅವರಿಗೆ ತತ್ವ ದೃಷ್ಠಿ ಇಲ್ಲದ್ದರಿಂದ ಭೇದದೃಷ್ಠಿ ಬಿಡದಂತಾಗಿದೆ . ಜಲವೊಂದೆ ಶೌಚ ಅಚಮನಕ್ಕೆ ಶೌಚಾಚಮನಕ್ಕೆ ಜಲ ಒಂದೆ ಆಗಿದೆ . ಹಾಗೆ ಸಕಲರ ಭಾಜನ ಭೋಜನ ಒಂದೆಯಿದೆ ತತ್ವ ತಿಳಿಯದ್ದರಿಂದ ವಿಷಮ ದೃಷ್ಠಿ ಹೋಗದಂತಾಗಿ ಈಶ್ವರ ದೃಷ್ಠಿಯ ಸಮ ಕಲೆ ತಿಳಿಯದಂತಾಗಿದೆ . ತಿಳಿದು ನೋಡಲು ಈಶ್ವರ ಸೃಷ್ಠಿಯೆ ಸಹ ಭಾಜನವಾಗಿದೆ . ಸೃಷ್ಠಿಯೋಳ ಒಳ ಹೊರಗೆನ್ನದೆ ನೆಲಸಿಹುದೆ ಸಹ ಭೋಜನವಾಗಿದೆ.

ಪ್ರಭುದೇವ ಸಕಲರಿಗೂ ತತ್ವ ದೃಷ್ಠಿಯಿಂದ ನೋಡಿಕೊಳ್ಳಲೆಂದು ಭಾಜನವೆ ಅಂಗ ಭೋಜನವೆ

ಲಿಂಗವೆಂದು ಬಿತ್ತರಿಸಿದುದು ನೋಡಿದಡೆ ಭಾಜನ ಬಿಟ್ಟು ಭೋಜನವಿಲ್ಲ, ಭೋಜನ ಬಿಟ್ಟು ಭಾಜನ ವಿಲ್ಲ ಅಂಗ ಬಿಟ್ಟು ಲಿಂಗ ವಿಲ್ಲ. ಲಿಂಗ ಬಿಟ್ಟು ಅಂಗವಿಲ್ಲ ಇದು ಸಹ ಭಾಜನವಾಗಿದೆ ಸಹ ಭೋಜನವಾಗಿದೆ ಇದನ್ನು ತಿಳಿಯದೆ ವ್ಯರ್ಥ ಮಿಥ್ಯಾಚಾರಿಯುಳ್ಳ ಮಾನವರು ಜಾತಿ ಬ್ರಷ್ಟರಾದರು. ನೀತಿ ಬ್ರಷ್ಟರಾದರು ಕ್ರಿಯಾ ಬ್ರಷ್ಟರಾದರು , ಧರ್ಮ ಬ್ರಷ್ಟರಾದರು ಎನ್ನುವರು .

ತತ್ವ ದೃಷ್ಠಿಯಿಂದುಕ್ತರಾಗಿ ಭಾಜನ ಸಹಿತ ಭೋಜನ ಮಾಡುವ ಗುರು ಹಿರಿಮೆಯಹ ಭಾಜನವ ನಿರಿಸಿ ಹೋದಡೆ ಅದೆ ಭಂಗ ಗುಹೇಶ್ವರಾ. ಭಾಜನವೆ ಅಂಗ ಭೋಜನವೆ ಲಿಂಗ ಇದನ್ನು ತತ್ವ ದೃಷ್ಠಿಯುಳ್ಳವರಾಗಿ ನೋಡಿದಡೆ ಯತಾರ್ಥ ಜ್ಞಾನ ವೇದ್ಯ ವಾದುದು. ತತ್ವ ದೃಷ್ಠಿ ಯುಳ್ಳವರು ಸಿಕ್ಕುವದು ವಿರಳ . ಭಾಜನವದು ಅಂಗ : ಈ ಅಂಗ ಸಹ ಭಾಜನವಾಗಿ ಕಂಡರೂ ಇದು ಮರವಿನ ದೃಷ್ಠಿಯವರಿಗದು ನಾನಾ ವಿಧವಾಗಿ ತೋರುತ್ತದೆ. ಆಕಾಶ ನಿರಾಕಾರ ವೆಂಬೆರಡೂ ಸ್ವರೂಪಂಗಳು ಒಂದು ಆಹ್ವಾನ ,ಒಂದು ವಿಸರ್ಜನ . ಒಂದು ವ್ಯಾಕುಲ ಒಂದು ನಿರಾಕುಲ ಉಭಯ ಕುಳ ರಹಿತ ಗುಹೇಶ್ವರ ನಿಮ್ಮ ಶರಣ ನಿಶ್ಚಿಂತ.

ಆಕಾರ ನಿರಾಕಾರ ವೆಂಬೆರಡೂ ಸ್ವರೂಪಂಗಳು ಒಂದನ್ನು ವಿಸರ್ಜಿಸುವದು , ಮತ್ತೊಂದಕ್ಕೆ ಸ್ವೀಕರಿಸುವದು ದೇಹವು ಮಲಮಯವು . ಮಲಮಯವಾದ ದೇಹವನ್ನು ತ್ಯಜಿಸುವದು ದೇಹ ರೂಪಾತ್ಮನನ್ನು ಸ್ವೀಕರಿಸುವದು . ದೇಹವು ಅಶುದ್ಧವು ದೇಹಿಯು ಶುದ್ಧನು , ಈರ್ವರ ಧರ್ಮವು ವಿರುದ್ಧವು. ಅಶುದ್ಧವಾದ ದೇಹದಲ್ಲಿ ಶದ್ಧವಾಗಿಹ ದೇಹಿಯು ಇರುವದು ಹೇಗೆ, ದೇಹಿ ಹೊಲೆಯರ ಮನೆಯಲ್ಲಿ ಸಜ್ಜನ ಇರುವದು ಹೇಗೆ, ಆ ಸಂಗವು ಹಾಗೆ. ಈ ಮಲಯ ದೇಹದಲ್ಲಿ ವಿಮಲನಾಗಿಹ ಯೋಗಿಯು ಇರುವದು ಅಸಂಗತವು .

ಹೊಲೆಯನು ಸಜ್ಜನನು ಒಂದೆ ಪಂಕ್ತಿಯಲ್ಲಿ ಊಟ ಮಾಡವುದನ್ನು ಲೋಕವು ನಿಷೇಧವಾಗಿ ಕಾಣತ್ತದೆ. ಇವರು ಜೊತೆ ಮಾಡಿ ಇರುವದನ್ನು ಕಂಡು ಲೋಕ ಮತ್ತಷ್ಟು ವಿರೋಧವಾಗಿ ಕಾಣುತ್ತದೆ.

ದೇಹ ರೂಪಿ ಹೊಲಗೇರಿಯಲ್ಲಿ ಪವಿತ್ರವಾಗಿರುವ ಸದ್ರೂಪಾತ್ಮ ನಿರಂತರ ಜೊತೆಗೂಡಿದ್ದಾನೆ. ಈ ಸದ್ರೂಪಾತ್ಮನು ಈ ದೇಹ ರೂಪಿ ಮಲಮಯದಲ್ಲಿ ಇಲ್ಲದಿದ್ದರೆ ದೇಹವೆ ನಾಶವಾಗುತ್ತದೆ . ಇದು ಕಾರಣ ದೇವನಿರುವ ದೇಹ ಮಲಮಯವಲ್ಲ. ಅದು ದೇವಾಲಯ! ದೇವನಿರುವ ದೇವಾಲಯ ! ಸಕಲ ದೇಹಂಗಳು ದೇವಾಲಯಂಗಳು ! ದೇವನು ಸದ್ರೂಪಾತ್ಮನು ದೇಹಂಗಳು ಸದ್ರೂಪಾತ್ಮನ ಸತ್ತಾ ಸ್ವರೂಪಂಗಳು . ಈ ಸತ್ತಾ ಸ್ವರೂಪ ತಿಳಿಯದ್ದರಿಂದ ಭಾಜನ ಸಹಿತ ಭೋಜನ ಮಾಡಿದ ಹಿರಿಯರಾದ್ದರಿಂದ ಭಾಜನವ ನಿರಿಸಿ ಹೋದಡೆ ಅದೆ ಭಂಗ ಗುಹೇಶ್ವರ ಎಂದು ಹೇಳಿಹರು. ಭಾಜನವೆ ಅಂಗ , ಬೋಜನವೆ ಲಿಂಗ , ಭಾಜನ ಸಹಿತ ಭೋಜನ ಮಾಡುವ ಹಿರಿಯರು ಇವರು ಲಿಂಗಾಂಗ ಸಮರಸ ಜ್ಞಾನವುಳ್ಳವರು ಭಾಜನಸಹಿತ ಭೋಜನ ಮಾಡುವ ಹಿರಿಯರು ಇವರದು ಪೂರ್ಣ ದೃಷ್ಠಿ. ಅಂಗವೆ ಲಿಂಗ, ಲಿಂಗವೆ ಅಂಗ ವೆಂದರಿತಲ್ಲಿ ಅಲ್ಲಿಯೆ ಕಾಣಿರೊ ಕೂಡಲ ಚೆನ್ನ ಸಂಗಯ್ಯ ಲಿಂಗ ನಿರಂತರ ಎಂದು ಬಿತ್ತರಿಸಿದುದು ಸದ್ಗುರು ಕೃಪೆಯಿಂದ ಚೆನ್ನಾಗಿ ತಿಳಿದುಕೊಂಡಲ್ಲಿ ತತ್ವ ದೃಷ್ಠಿಯುಳ್ಳವ ನಾಗುವನು . ಆಗ ಅಂಗ ಕಲ್ಪಿತ ಲಿಂಗ ಕಲ್ಪಿತ ವೆಂಬು ಭಯ ದೃಷ್ಠಿ ನಷ್ಟವಾಗುವದು. ಜೀವನು ಕೀಳು , ಶಿವನು ಶ್ರೇಷ್ಟನು ಎಂಬ ಹಿರಿದು ಕಿರಿದು ನಷ್ಟವಾಗುವವು, ಸದ್ಗುರು ಕೃಪೆ ಪಡೆದು ತತ್ವ ದೃಷ್ಠಿಯುಳ್ಳವನಾಗದಿದ್ದಲ್ಲಿ , ಈ ಭೇದ ದೃಷ್ಠಿ ಹೋಗದು ಅಂಗನು ಉಪಾಧಿಯಿಂದುಕ್ತನು, ಲಿಂಗವು ನಿರುಪಾಧಿಯು , ಒಂದು ಸಂಗದಿಂದುಕ್ತವು ಇನ್ನೊಂದು ನಿಸ್ಸಂಗವು , ಒಂದು ಭವದಿಂದುಕ್ತವು ಇನ್ನೊಂದು ಭವ ವಿರಹಿತವು , ಒಂದು ವ್ಯಾಕುಲ , ಇನ್ನೊಂದು ನಿರಾಕುಲ

ಹೀಗೆ ವಿಭಾಗ ಮಾಡಿ ತಾವಾರೆಂದು ಯತಾರ್ಥವರಿಯದ್ದರಿಂದ ಉಭಯ ಕುಳ ರಹಿತರು ಆಗದ್ದರಿಂದ ಅಚಿಂತ್ಯಾತ್ಮರಾಗಲಿಲ್ಲ . ಇದು ಕಾರಣ ಪ್ರಭುವಿನ ಸಮ್ಮತಿಯಿಲ್ಲ ಏಕೆಂದರೆ ಭಾಜನ ಸಹಿತ ಬೋಜನ ಮಾಡುವ ಹಿರಿಯರು ಭಾಜನವ ನಿರಿಸಿ ಹೋದಡೆ ಅದೆ ಭಂಗ ಗುಹೇಶ್ವರ ಎಂದು ಬಿತ್ತರಿಸಿದುದು ನೋಡಿದಡೆ ಸೀಮಿತ ದೃಷ್ಠಿಯುಳ್ಳವರಾಗಬಾರದು . ರಾಗ ವಿರಾಗ ಮೀರಿದ ದೃಷ್ಠಿಯುಳ್ಳರಾಗುವರು, ಇತ್ತ ನೇತಾತ್ಮ ದೃಷ್ಠಿವಂತರಾಗಬಾರದು ಸರ್ವಾತ್ಮ ದೃಷ್ಠಿವಂತರಾಗಬಾರದು ಅನುಪಮ ದೃಷ್ಠಿವಂತರಾಗುವರು. ಪ್ರಭುವಿನ ದೃಷ್ಠಿ ಅನುಪಮ ದೃಷ್ಠಿ ಎಂಬುದೆ ತನ್ನ ದೃಷ್ಠಿ, ಎಲ್ಲೆಲ್ಲೂ ತನ್ನಕಂಡ ದೃಷ್ಠಿ. ತನ್ನೊಳ ಅಲ್ಲವೆನ್ನಲಿಂಬಿಲ್ಲ ಅಹುದೆಂಬುವದಕ್ಕಿಂಬಿಲ್ಲ, ಆವಾವುದಕ್ಕೂ ಇಂಬುಕೊಡದ ತನ್ನಿರುವುಳ್ಳ ಅರಿವು ತನ್ನಿಂದ ತನಗೆ ವೇದ್ಯವಾದುದೆ ಇದು ಭಾಜನವ ನಿರಿಸಿ ಹೋದವರಲ್ಲ.

ಇವರು ವ್ಯಾಕುಲ ಕಾಣಲಿಲ್ಲ, ನಿರಾಕುಳ ಕಾಣಲಿಲ್ಲ ಉಭಯ ಕುಳರಹಿತರು ಇವರು ತ್ನನ್ನನ್ನೆ ಕಂಡವರು, ತಾನೆಂಬುದು ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದ ನಿಜ ಲಿಂಗೈಕ್ಯನ ಉಪಮಿಸಲಿಲ್ಲಾಗಿ, ರೂಹಿಸಲಿಲ್ಲಾ ರೂಹಿಸಲಿಲ್ಲಾಗಿ ಭಾವಿಸಲಿಲ್ಲಾಗಿ ಅರಿಯಲಿಲ್ಲ ಅರಿಯಲಿಲ್ಲದರುವೆ ತಾನಾಗಿ ಗುಹೇಶ್ವರನೆಂಬುದು ಬೇರಿಲ್ಲ, ಇದು ಪ್ರಭುವಿನ ಸಹ ಭಾಜನದ ಸಹ ಬೋಜನದ ದಿವ್ಯ ದೃಷ್ಠಿ ಸಹ ಭಾಜನ ರೂಪ ಅಂಗ ವಿದ್ದಲ್ಲಿ ಸಹ ಬೋಜನರೂಪ ಲಿಂಗ ಸ್ವತಃ ಸಿದ್ಧವಾಗಿದ್ದುದು ಇಂಥ ಪರಾತ್ಪರವಾದ ಲಿಂಗೈಕ್ಯ ನಿಲುವೆ ಜಾತ್ಯಾತೀತ್ಯ ರಾಷ್ಟ್ರ. ಅದು ಪ್ರಜಾಪ್ರಭುತ್ವ ಪ್ರಜೆಗಳು ಒಂದಾದುದು ನಿಜ ಲಿಂಗೈಕ್ಯ ನಿಲವು . ಉಪಮಿಸಲಿಲ್ಲಾಗಿ ರೂಹಿಸಲಿಲ್ಲವೆಂದಲ್ಲಿ ಇದು ಸಹ ಭಾಜನ ಇದು ಭೋಜನವೆಂದು ರೂಹಿಸಲಿಲ್ಲ. ರೂಹಿಸಲಿಲ್ಲವಾದ್ದರಿಂದ ಭಾವಿಸಲಿಲ್ಲಾ ಭಾವಿಸದಿದ್ದರಿಂದ ಇದು ಸಹ ಭಾಜನವೆಂದು ಅರಿಯಲಿಲ್ಲ ,ಇದು ಸಹ ಬೋಜನವೆಂದು ಅರಿಯಲಿಲ್ಲ , ಅರಿಯಲಿಲ್ಲದರುವೆ ತಾನಾಗಿರುವದರಿಂದ ಗುಹೇಶ್ವರ ಲಿಂಗ ಬೇರಿಲ್ಲವೆಂದು ಪ್ರಭು ದೇವರು ಸಹ ಭಾಜನ ಸಹ ಬೋಜನದ ಘನತ್ವ ವಿವರಿಸಿಹರು .

63

ಮುಕ್ತಿಗೆ ಮುಖವಾಗಿ , ಯುಕ್ತಿಗೆ ಹೊರಗಾಗಿ ,
ಅರುವಿಂಗೆ ಅರುವಾಗಿಪ್ಪ ಭೇದವು ಎನಗೆ ಕಾಣಬಂದಿತ್ತು ನೋಡಾ ,
ನಿನ್ನೊಳಗೆ ನೊರೆದು ನೋಡಿದಡೆ ಬರೆಯಿಲ್ಲದ ಚಿನ್ನದ ಪರಿಮಳ ,
ಮನವನಾವರಿಸಿ ಪರಮ ಸುಖದ ಪರಿಣಾಮವ ನೊಳಕೊಂಡಿತ್ತು ನೋಡಾ ,
ಈ ಕುರುಹಿನ ಮೊಳೆಯ ಬರಿಯೆ ಬಯಲು ನಿಲಿಸಿ ನೋಡಿ ಕೂಡಾ ,
ನಮ್ಮ ಗುಹೇಶ್ವರನ ಶರಣ ಅಜಗಣ್ಣನೊಳಗೆ ನೀನು ನಿರಾಳ ಸಂಗಿಯಾಗಿ! ॥ 1448 ॥

ತಾತ್ಪರ್ಯ : ಮುಕ್ತಿಗೆ ಮುಖವಾಗಿ : ಮುಕ್ತಿ , ಬಿಡುಗಡೆ. ಮುಕ್ತಿಗೆ ಮುಖವಾಗಿ ಬಿಡುಗಡೆಯ ಮುಖವು , ಇದಾವ ಬಿಡುಗಡೆಯ ಮುಖವಾಗಿ ಆನು ಅರಿದೆನೆಂಬ ಅಭಿಮಾನದಿಂದ ಬಿಡುಗಡೆಯ ಮುಖವಾಗಿ , ಅಂತರ್ಮುಖವೆಂಬ ಅಭಿಮಾನದಿಂದ ಬಿಡುಗಡೆಯಾದಾಗ ಆಗ ಸ್ವರೂಪದ ಕಡೆ ಮುಖ ವಾಗುವದು. ತತ್ವ ಅತತ್ವವೆಂಬ ವಿವೇಕದ ಅಭಿಮಾನದಿಂದ ಬಿಡುಗಡೆಯಾದಾಗ ಸ್ವರೂಪದ ಕಡೆ ಮುಖವಾಗುವದು ಪ್ರವರ್ತಕ ನಿವರ್ತಕ ಎಂಬ ಭಾವದ ಭ್ರಮೆಯಿಂದ ನಿರಸನವಾದಾಗ ಸ್ವರೂಪದ ಕಡೆ ಮುಖವಾಗುವಾಗುವದು . ಜೀವ ಪರಮೈಕ್ಯವೆಂಬ ಸಂಧಾನ ಭ್ರಮೆಯಿಂದ ಬಿಡುಗಡೆಯಾದಾಗ ಸೋಹಂ ವೃತ್ತಿಯಿಂದ ಬಿಡುಗಡೆ , ಚಿದ್ರೂಪವೆ ನಾನೆಂಬ ಚಿದಹಮ್ಮಿನ

ಅಭಿಮಾನದಿಂದ ಬಿಡುಗಡೆಯಾದಾಗ ಸ್ವರೂಪದ ಕಡೆ ಮುಖಖವಾಗುವದು.

ಯುಕ್ತಿಗೆ ಹೊರಗಾಗಿ ಗಗನ ಸದೃಶವೆಂಬ ಯುಕ್ತಿಗೂ ಹೊರಗಾಗಿ ದೃಶ್ಯಾದಿಗಳಿಗೆ ಸಾಕ್ಷಿ ಎಂಬುವ ಯುಕ್ತಿಗೂ ಹೊರಗ್ಗಾಗಿ ತ್ರಿಪುಟಿಗಳಿಗೆ ಸಾಕ್ಷಿ ಎಂಬ ಯುಕ್ತಿಗೂ ಹೊರಗಾಗಿ ಗುಣತ್ರಯಂಗಳಿಗೆ ಸಾಕ್ಷಿ ಅವಸ್ಥಾದಿಗಳಿಗೆ ಸಾಕ್ಷಿ ಎಂಬ ಯುಕ್ತಿಗೂ ಹೊರಗಾಗಿ ಕಲ್ಪಿತ ಪುರುಷನೆಂಬ ನಾಮಕ್ಕೂ ಹೊರಗಾಗಿ, ಅಸಂಗ, ಸಮ, ಎಂಬುವ ಯುಕ್ತಿಗೂ ಹೊರಗಾಗಿ ಬೇರಾಗಿ ನೋಡುವದು, ವಾಙ್ಮನೋತೀತವೆಂಬ ಯುಕ್ತಿಗೂ ಹೊರಗಾಗಿ ನೋಡುವದು. ತ್ರಿಕಾಲ ಅಬಾಧಿತ ಎಂಬ ಯುಕ್ತಿಗೂ ಹೊರಗಾಗಿ ನೋಡುವದು ನಿತ್ಯಾನಿತ್ಯ ವಿವೇಕಕ್ಕೂ ಹೊರಗಾಗಿ ನೋಡುವದು.

ಅಪ್ರಮಾಣ ವಸ್ತುವಿಗೆ ಪ್ರಮಾಣಗಳಿಂದ ಹೇಳುವುದು ಯುಕ್ತಿಗಳಿಂದ ಹೇಳಿದಂತಾಗುವದೆಂದು ತಿಳಿದು ಯುಕ್ತಿಗೆ ಹೊರಗಾಗಿ ಎಂದು ಹೇಳಿದ್ದಾರೆ. ಯುಕ್ತಿಯಲ್ಲಿ ವಿಚಾರ ಪ್ರಧಾನ ವಾಗಿದೆ, ಎಲ್ಲ ನಿತ್ಯಾನಿತ್ಯ ವಿಚಾರ ವದೆ ಅಲ್ಲಿ ಸತ್ಯ ಬುದ್ಧಿ ಇದೆ. ಈ ಬುದ್ಧಿಯಿಂದುಕ್ತವಾದ ಜ್ಞಾನ ಮೀರುವದೆ ಯುಕ್ತಿಗೆ ಹೊರಗಾದಂತೆ ಎಂದು ತಿಳಿಯುವದು.

ಅರುವಿಂಗೆ ಅರುವಾಗಿಪ್ಪ ಭೇದವು ಎನಗೆ ಕಾಣಬಂದಿತ್ತು: ಮುಕ್ತಾಯಕ್ಕನ ಅನುಭವದಿಂದ ಅಜಗಣ್ಣನ ಘನವ ತಿಳಿದ ಪ್ರಭುದೇವ, ಶಬ್ದ ಮುಗ್ದ ನಿರಾಳ ಸಂಗಿಯಾದ ಅಜಗಣ್ಣನಂ ತಿಳಿದು ಮುಕ್ತಾಯಕ್ಕ ನಮ್ಮ ಗುಹೇಶ್ವರ ಶರಣ. ಮುಕ್ತಿಗೆ ಮುಖವಾದ ಶರಣ, ಯುಕ್ತಿಗೆ ಹೊರಗಾದ ಶರಣ ಅರುವಿಂಗರುವಾಗಿಪ್ಪ ಘನವು ಎನಗೆ ಕಾಣಬಂದಿತ್ತು ಎಂದು ಹೇಳಿದ ಪ್ರಸಾದವಾಣಿ ಅರುವಿಂಗೆ ಅರುವಾಗಿಪ್ಪುದು ಅದನೆಂತು ವರ್ಣಿಸುವದು.

ಮೌನದ ಮೌನ ಮಾತಿಂಗೆ ನಿಲುಕದು. ಅರುವಿಂಗೆ ಅರುವಾಗಿಪ್ಪ ಘನತ್ವ ಶಬ್ದ ಸಂಭ್ರಮಕ್ಕೆ ನಿಲುಕದು. ನಿಃಶಬ್ಧ ಬ್ರಹ್ಮವು ಶಬ್ಧ ಬ್ರಹ್ಮದಿಂದ ವೇದ್ಯವಾಗಬಹುದೆ? ನುಡಿಯುಳ್ಳ ಬ್ರಹ್ಮಾನುಭವಿಗಳು ಸಿಕ್ಕುವರು ನುಡಿಗೆಡೆಗೊಡದ ಘನಾನುಭವಿಗಳು ಸಿಕ್ಕವದು ವಿರಳ. ಶೃತಿವಂತ ಮಹಾನುಭವಿಗಳು ಸಿಕ್ಕುವರು ಶೃತಿಗಗೋಚರವಾಗಿಹ ಮಹಾದರುವುಳ್ಳ ಮಹಾಂತರು ಸಿಕ್ಕುವದು ವಿರಳ.

ಅರುವು ಅರುವು ಎಂಬ ಮತಿಯುಳ್ಳ ಮಹಾಂತರು ಅರುವಿಂಗೆ ಅರುವಾಗಿಪ್ಪ ಘನವರಿಯುವದದೆಂತು ಸಾಧ್ಯ. ಅರುವಿಂಗೆ ಅರುವಾಗಿಪ್ಪ ಘನಮಹಿಮರು ಅಪ್ರಮಾಣರು ಅಚಿಂತ್ಯರು, ನಿಶಃಬ್ಧ ಘನವೆ ತನ್ನರುವಾಗಿಹ ಶಬ್ಧಮುಗ್ಧರು ಅವರು ವಾಙ್ಮನೋತೀತರು, ನುಡಿದು ನಿಃಶಬ್ಧರು, ನಡೆದು ನಿರ್ಗಮನಿಗಳು ಅವರ ಮಾತು ಮಾತಲ್ಲ ನಿಃಶಬ್ಧ ಘನದಿರುವುಳ್ಳ ಸಂಜ್ಞೆಯ ಸೂಚಿಸುವ ಮೌನ ಮುದ್ರಿತರು ಅವರ ಘನವ ವರ್ಣಿಸುದವದೆಂತು ? ಶೃತಿಯು ಆರಾರನ್ನು ಬೆಳಗಲಿಲ್ಲ. ಅವರೆ ಶೃತಿಗೆ ಬೆಳಗುವ ಬೆಳಗುಳ್ಳ ಘನ. ಅವರು ಶೃತಿಯು ಆಗರು ಪರಬ್ರಹ್ಮವೆಂಬುದರ ಪರಾತ್ಪರ ಬ್ರಹ್ಮ, ಪೂರ್ಣವೆಂಬುದರ ಪೂರ್ಣಾತ್ ಪೂರ್ಣ, ಅಖಂಡವೆಂಬುದರ ಸಂದಿಲ್ಲದಿಪ್ಪ ಅಖಂಡಿತ ಘನವು ನಿಃಶಬ್ದ ಬ್ರಹ್ಮವೆಂಬುದರ ಶಬ್ಧ ಮುಗ್ಧ ನಿರ್ವಾಣ ನಿಲುವು ಅದನೆಂತು ವರ್ಣಿಸುವದು.

ಮುಕ್ತಾಯಕ್ಕ ನಿನ್ನ ಸ್ವಾನುಭವರೂಪಿ ಸೂಚನೆಯಿಂದ ನಿನ್ನ ಅಜಗಣ್ಣ ಎಂಥಾ ಮಹಾ ಮಹಿಮನು, ಎಂಬುದು ಎನಗೆ ಕಾಣಬಂದಿತ್ತು. ನಿನ್ನೊಳಗೆ ಒರೆದು ನೋಡಿದಡೆ ಒರೆಯಿಲ್ಲದ ಚಿನ್ನದ ಪರಿಮಳವ ಎನ್ನ ಮನವ ನಾವರಿಸಿ ಪರಮಸುಖದ ಪರಿಣಾಮವನೊಳಕೊಂಡಿತ್ತು ನೋಡಾ.

ನಿನ್ನ ಅಣ್ಣ ಅಜಗಣ್ಣನ ನಿಲುವು, ನೀನು ಬೇರೆ ಕಡೆಗೆ ನೋಡದಿರು. ನಿನ್ನನ್ನೆ ಅರಿದರಿದು ನೋಡು. ಆಗ ನೀನೆ ಶಬ್ಧ ಮುಗ್ಧ ನಿಲುವುಳ್ಳ ಮಹಾ ಘನ ಅದು ನಿನ್ನೊಳ ತಾನೆ ತಾನಾಗಿ ಬೆಳಗುತ್ತಿದೆ

ನೋಡಿಕೊ ಅದು ಒರೆಯಿಲ್ಲದ ಚಿನ್ನದ ಘಟ್ಟಿ. ಅದಕ್ಕೇಕೆ ಒರೆಗಲ್ಲು. ನಿನ್ನಯ ಇರವು, ಅದು ಆರಾರ ಹಂಗಿಲ್ಲ ಇರವು ಅದಕ್ಕೆ ಇನ್ನೊಬ್ಬರ ಮತವೇಕೆ ಬೇಕು? ಸೂರ್ಯನಿಗೆ ತಾ ಸೂರ್ಯನಾಗಿದ್ದು ಸ್ವತಃ ಸಿದ್ಧವಾಗಿರುವಲ್ಲಿ ಸೂರ್ಯನೆನ್ನುವ ಇನ್ನೊಬ್ಬರ ಮತದ ಹಂಗೇಕೆ ? ಒಪ್ಪಿಗೆಯ ಮಾತಿಗೂ ಒಪ್ಪದ ಮಾತಿನ ಮತಕ್ಕೂ ಮೀರಿ ಹಂಗಿಲ್ಲದೆ ಬೆಳಗುವ ಘನವೆ ತಾನಾಗಿರುವಾಗ ಶಬ್ಧ ಸೂತಕರ ಹಂಗೇಕೆ! ಹಾಗೆ ನಿನ್ನಯ ಅರುವು, ಶೃತಿಗಳಿಗೊಳಪಟ್ಟ ಅರುವು ಅಲ್ಲ, ಗುರುವಿಡಿದ ಅರುವು ಅಲ್ಲ, ಲಿಂಗವಿರದ ಅರುವು ಅಲ್ಲ , ಕಲ್ಪಿತಕ್ಕೊಳ ಪಟ್ಟ ಜ್ಞಾನವೆ ಆಗದಿರುವಾಗ ಅದು ನಿನ್ನಯ ಘನ ಅಂಥ ಸ್ವಯ ಮೇವ ಘನವು ಎನ್ನ ಮನವ ನಾವರಿಸಿದುದುರಿಂದ ಪರಮ ಸುಖವೆ ಎನ್ನ ಪರಿಣಾಮ , ಅದುವೆ ಎನ್ನ ಹೃದಯದ ನಿಜ ನಿವಾಸವಾಗಿಹುದುರಿಂದದು ಎನ್ನ ಒಪ್ಪಿಗೆ ನೋಡಾ ಅದುವೆ ನಿನ್ನ ಘನದ ಘನವಾಗಿಹುದು.

ಈ ಕುರುಹಿನ ಮೊಳೆಯ ಬರಿಯ ಬಯಲಲಿ ನಿಲಿಸಿ ನೋಡಿ ಕೂಡ : ಮುಕ್ತಾಯಕ್ಕಾ ! ಕುರುಹಿನ ಮೊಳೆ ಇದಾವ ಕುರುಹಿನ ಮೊಳೆ ಸದ್ಗುರು ಕರುಣಿಸಿದ ಕುರುಹಿನ ಮೊಳೆ ಅರುವರಿಯಲು ಹೇಳಿದ ಕುರುಹಿನ ಮೊಳೆ ಶಬ್ದ ಮುಗ್ಧವಾಗಿಹ ಅರುವಿನ ಕುರುಹ, ಮುಕ್ತಿಗೆ ಮುಖವಾಗಿ ಯುಕ್ತಿಗೆ ಹೊರಗಾಗಿ ಅರುವಿಂಗೆ ಅರುವಾಗಿಪ್ಪ ಶಬ್ಧ ಮುಗ್ಧ ಕುರುಹ , ಇದು ನಿರ್ವಾಣ ಕುರುಹ, ನಿಜ ನಿಲುವುಳ್ಳ ಕುರುಹಿನ ಮೊಳೆ, ಇದನ್ನು ನಿಃಶಬ್ಧ ಬ್ರಹ್ಮದಲ್ಲಿ ನಿಲಿಸಿ ನೋಡಿ ಕೂಡಾ, ಶಬ್ಧ ಬ್ರಹ್ಮವ ದಾಂಟಿ ಶೃತಿಗಳನ್ನೆ ಮಿಕ್ಕಿ ಮೀರಿ ನಿಂತು ನೋಡಿ ಕೂಡಾ , ನಿನ್ನ ನಿಜ ಪದದೋಳ್ ನೀನೆ ನೀನಾಗಿ ಕೂಡಾ ಬ್ರಹ್ಮವೆಂಬುದು ಹೆತ್ತರಿವು ಇದಕ್ಕೆ ಮೀರಿದ ಘನವೆ ಅದು ಬರಿಯ ಬಯಲು , ಏನೊಂದುಸರಲು ಎಡೆಗೊಡದ ನಿಷ್ಕಲಘನವು . ಅರಿಯಲಿಲ್ಲದ ಅರುವು ಏನೆಂದನಲಿಲ್ಲದ ತಾನೆ ತಾನಾದ ಅರಿಯದರುವು ಅದುವೆ ಆಗಿ ನಿಂತು ನೋಡಿ ಕೂಡಾ ನಮ್ಮ ಗುಹೇಶ್ವರ ಶರಣ ಅಜಗಣ್ಣನೊಳಗೆ ನೀನು ಸಂಗಿಯಾಗಿ, ಶರಣ ಅಜಗಣ್ಣನೆಂದರೆ ನಮ್ಮ ಗುಹೇಶ್ವರ ನರಿತು ಗುಹೇಶ್ವರನಾಗಿಹ ನಿರಾಳ ಶರಣ, ಈ ಮಹಾಂತ ನಿರಾಳ ಸಂಗಿ, ನೀನು ನಿರಾಳ ಸಂಗಿಯಾಗು. ಆಗ ನೀನು ಅಜಗಣ್ಣ ಅನ್ಯನಲ್ಲ. ನಾನು , ಅಜಗಣ್ಣ ಬೇರಲ್ಲ, ಇದ್ದುದೊಂದೆ ನಿರಾಳ ತತ್ವ , ಅದರ ಹೊರ್ತು ಅನ್ಯ ಆವುದು ಇಲ್ಲ. ಅದು ತನಗೆ ವೇದ್ಯವಾಗದ್ದರಿಂದ, ಅಜಗಣ್ಣ ನಿಲುವು , ಪ್ರಭುವಿನ ನಿಲುವು ತನ್ನ ನಿಲುವು ಬೇರಾಗಿ ಕಂಡಿತ್ತು. ತಿಳಿವಡೆ ಅಜಗಣ್ಣನದು ಶಬ್ಧ ಮುಗ್ಧ ನಿಲುವು , ತನ್ನ ನಿಲುವು ನನ್ನ ನಿಲುವು ಸಕಲ ಸಂತರ ನಿಲವು ಒಂದೆ ಅದು ಅನುಪಮ, ಉಪಮೆಗೆ ತರಬಾರದು, ತರಬಾರದು ನೋಡಾ ಎಂದು ಹೇಳಿಹರು.

64

ತೆರೆಹಿಲ್ಲದ ಘನವ ಮನ ಒಳಕೊಂಡು ,
ಆ ತಲೆಯಿಲ್ಲದ ಮನವ ಘನ ಒಳಕೊಂಡು ,
ತನಗೆ ತಾ , ತರಹರವಾದ ಬಳಿಕ ಇನ್ನು ಮರಳಿ ಇಂಬುಗೊಡಲುಂಟೆ ?
ಗುಹೇಶ್ವರ ಲೀಲೆ ಮಾಬನ್ನಕ್ಕರ ಉರಿಯೊಳಗಣಕರ್ಪುರ
ದಂತಿರಬೇಕು ಕಾಣಾ , ಸಿದ್ಧರಾಮಯ್ಯ. **॥ 1245 ॥**

ತಾತ್ಪರ್ಯ : ತೆರೆಹಿಲ್ಲದ ಘನವ ಮನ ಒಳಕೊಂಡು ಆ ತಲೆಯಿಲ್ಲದ ಮನವ ಘನವ ಒಳಕೊಂಡು ತನಗೆ ತಾ ತರಹರ ವಾದ ಬಳಿಕ ಇನ್ನು ಮರಳಿ ಇಂಬುಗೊಡಲುಂಟೆ ?

ತೆರೆಹಿಲ್ಲದ ಘನವ , ಮನ ಅಪ್ಪಿಕೊಂಡಂತೆ ! ಲೀನ ವಾಯಿತೆ ? ಅಹುದು ಇದರ ಸಾಹಸ

ಅಪ್ರತಿಮ ಸಾಹಸ ಅಸಾಧ್ಯವ ಸಾಧಿಸಿದ ಸಾಹಸ ಕಾಣದುದು ಕಂಡ ಸಾಹಸ ಇದರ ಸಾಹಸಕ್ಕೆ ಪ್ರತಿಯಿಲ್ಲ.

ತೆರೆಹಿಲ್ಲದ ಘನವೆಂದು ಮನ, ಇದು ತನ್ನ ಪೂರ್ವಾಶ್ರಯ ಮಾಡಿಕೊಂಡ ಸಂಕಲ್ಪ ವಿಕಲ್ಪಗಳ ಮರೆಯಿತೆ! ಕುರುಹು ಕಾಣುವ ಭ್ರಾಂತಿಯಿಂದ ನಿವೃತ್ತಿ ವಾಯಿತೆ? ನಾಹಂ ಎಂಬ ಭ್ರಾಂತಿಯಿಂದ ನಿವೃತ್ತಿ ವಾಯಿತೆ! ಸೋಹಂ ನೆನಹಿಂದ ನಿವೃತ್ತಿ ವಾಯಿತೆ! ಚಿದಹಮ್ಮಿನಿಂದ ನಿವೃತ್ತಿ ವಾಯಿತೆ! ಪ್ರವೃತ್ತಿ ನಿವೃತ್ತಿಯೆಂಬ ದುಗುಡತನ ಬಿಟ್ಟು ಉಪಮಿಸದ ಘನವ ಅಪ್ಪಿಕೊಂಡು ನಿಶ್ಚಿಂತ ವಾದೆಯಾ! ಓ ಮನವೆ ತೆರೆಹಿಲ್ಲದ ಘನವೆಂದು ಅಪ್ಪಿಕೊಂಡಿಯಾ! ಅಹುದು ನಿನ್ನ ಜಾಣತನ.

ತೆರೆಹಿಲ್ಲದ ಘನವೆಂದು ಆ ಘನವು ಎಂದು ನುಡಿಯಲಿಲ್ಲ, ಸಂಕಲ್ಪ ವಿಕಲ್ಪ ರೂಪಿ ತಲೆಯುಳ್ಳ ಮನ ಈಗ ತಲೆಯಿಲ್ಲದ ಮನವಾಗಿ ತೆರೆಹಿಲ್ಲದ ಘನವ ಒಪ್ಪಿಕೊಂಡೆಯಾ! ಅದರೋಳ್ ನೀನು ಲೀನ ವಾದೆಯಾ! ಅದುವೆ ನಿನ್ನಯ ನಿಜೈಕ್ಯದ ನಿಜಧಾಮ ವಾಯಿತೆ!

ಆಕಾಶವದು ಸೀಮಾತೀತ ಅದು ಬಯಲು ಅದು ಶಬ್ದ ಮುಗ್ಧನೆನಲಿಲ್ಲ. ಅದರೋಳ್ ಘಟಾಕಾಶ, ಮಠಾಕಾಶ, ಮೇಘಾಕಾಶ ವೆಂಬ ಕಲ್ಪನೆ ತಂದುದು ಮನವು ಪುನಃ ಆಕಾಶದ ಘನವ ತಿಳಿದು ಘಟಾಕಾಶ, ಮಠಾಕಾಶ ಮೇಘಾಕಾಶ ವೆನಲಿಲ್ಲ ಅದು ಆವಾವ ಆಕಾಶವೆಂಬದಕ್ಕೂ ಅವಕಾಶಕೊಡದೆ ಇದ್ದಂತಿದ್ದ ಆಕಾಶ, ಈ ತೆರೆಹಿಲ್ಲದ ಆಕಾಶ ದ ಘನವ ಅದೆಂತು ವರ್ಣಿಸುವುದು.

ಅಖಂಡಿತ ಘನವೆಂಬುದು, ಲಿಂಗ ಲಿಂಗ ಎಂಬುದು, ಜಂಗಮ ಜಂಗಮ ಎಂಬುದು, ಪ್ರಸಾದ ಪ್ರಸಾದ ಎಂಬುದು, ತೆರೆಹಿಲ್ಲದ ಘನ ವೆನ್ನಬೇಕೆ? ಅಚಲಿತ ಘನ, ಅನುಪಮ ಘನ ವೆಂಬುದು ತೆರೆಹಿಲ್ಲದ ಘನ ವೆನ್ನಬೇಕೆ? ಆವಾವ ಶಬ್ಧಕ್ಕೂ ಸಂದು ಕೊಡದ ಘನ ಕುರುಹಿಂಗೆ ಸಂದು ಕೊಟ್ಟುದು ಹೇಗೆ! ಅದು ಆದಿ, ಅನಾದಿ ಎಂಬುದಕ್ಕೂ ಸಂದು ಕೊಟ್ಟುದಲ್ಲ ರೂಪ ನಿರೂಪವೆಂಬುದಕ್ಕೂ ಸಂದು ಕೊಟ್ಟುದಲ್ಲ ಸ್ಥೂಲ ಸೂಕ್ಷ್ಮವೆಬುದಕ್ಕೂ ಸಂದು ಕೊಟ್ಟುದಲ್ಲ ಸಾಕಾರ ನಿರಾಕಾರ ವೆಂಬುದಕ್ಕೂ ಸಂದು ಕೊಟ್ಟುದಲ್ಲ ದ್ವೈತ ವೆಂಬುದಕ್ಕೂ ಅದ್ವೈತವೆಂಬುದಕ್ಕೂ ಸಂದು ಕೊಟ್ಟುದಲ್ಲ, ಸಮ ಎಂಬುದಕ್ಕೂ ಸಂದು ಕೊಟ್ಟುದಲ್ಲ ಶಂಕರ ಶಶಿಧರ ಈಶ್ವರ ನೆಂಬ ಗಣಾಧಿಶ್ವರ ರೆಂಬುದಕ್ಕೂ ಸಂದು ಕೊಟ್ಟುದಲ್ಲ. ಇವರ ವರ್ತನೆ ನಿವರ್ತನೆ ಎಂಬುದಕ್ಕೂ ಸಂದು ಕೊಟ್ಟುದಲ್ಲ, ಜೀವನೆಂಬುದಕ್ಕೂ ಅಂತರಾತ್ಮನೆಂಬುದಕ್ಕೂ ಪರಮಾತ್ಮ ನೆಂಬುದಕ್ಕೂ ಸಂದು ಕೊಟ್ಟುದಲ್ಲ, ಜೀವ ಪರಮರೈಕ್ಯಶ್ಯವೆಂಬುದಕ್ಕೂ ಸಂದು ಕೊಟ್ಟುದಲ್ಲ, ಸಂಗಿ ನಿಸ್ಸಂಗಿ ಎಂಬುದಕ್ಕೂ ಸಂದು ಕೊಟ್ಟುದಲ್ಲ ಬ್ರಹ್ಮ ಪರಬ್ರಹ್ಮ ನೆಂಬುದಕ್ಕೂ ಸಂದು ಕೊಟ್ಟುದಲ್ಲ, ಸ್ವಯ ವೆಂಬುದಕ್ಕೂ ಪರವೆಂಬುದಕ್ಕೂ ಸಂದು ಕೊಟ್ಟುದಲ್ಲ, ತತ್ವ ಅತತ್ವ ವೆಂಬುದಕ್ಕೂ ಸಂದು ಕೊಟ್ಟುದಲ್ಲ, ತೆರಹಿಲ್ಲದ ಘನವದು ಬಿಡುವಿಲ್ಲದ ಘನ ಆವಾವುದಕ್ಕೂ ಅವಕಾಶ ಕೊಡದ ಘನ ಇದು ಕಾರಣ ಅಲ್ಲಿ ಪ್ರಮಾತೃ, ಪ್ರಯಾಣ ಪ್ರಮೇಯವೆಂಬ ತ್ರಿಪುಟಿಗಿಂಬಿಲ್ಲ ವಾದ್ದರಿಂದ ಕಲ್ಪಿತ ಪುರುಷನಿಗಿಂಬಿಲ್ಲನೋಡಾ.

ಲಿಂಗವೆನ್ನೇ ಲಿಂಗೈಕ್ಯವೆನ್ನ ಸಂಗಿ ಎನ್ನೆ, ಸಮರಸವೆನ್ನೆ, ಆಯಿತೆನ್ನ ಆಗದೆನ್ನೆ ಚನ್ನ ಮಲ್ಲಿಕಾರ್ಜುನನಲ್ಲಿ ಏನೂ ಎನ್ನದೆ ಶಬ್ಧ ಮುಗ್ಧವಾದುದು ನೀನೆಂಬೆ ಏನೆಂಬೆ. ತೆರೆಹಿಲ್ಲದ ಘನವದು ಏನೂ ಎನ್ನದೆ ತನ್ನಲ್ಲಿ ತಾನು ಶಬ್ಧ ಮುಗ್ಧ ವಾದುದ ಹೇಳಲುಬಾರದು ಅಂತಪ್ಪ ಘನವದು ತೆರೆಹಿಲ್ಲದ ಘನವ ಮನ ಒಳಕೊಂಡುದು ನೋಡಾ.

ಆ ತಲೆಯಿಲ್ಲದ ಮನವ ಘನ ಒಳಕೊಂಡು, ಒಹೋ! ತಲೆಯಿಲ್ಲದ ಮನಕ್ಕೆ ಘನವ ಅಪ್ಪಿಕೊಂಡಿತೆ ತೆರೆಹಿಲ್ಲದ ಘನವ ತಲೆಯಿಲ್ಲದ ಮನಕ್ಕೆ ಅಪ್ಪಿಕೊಂಡಿತೆ! ಸಕ್ಕರೆ ನೀರು ಒಂದಾದುದು ನೀರು ಸಕ್ಕರೆ ಅಪ್ಪಿಕೊಂಡುದು, ಸಕ್ಕರೆ ನೀರು ಅಪ್ಪಿಕೊಂಡುದು ಬಿಚ್ಚಿ ಬೇರು ಮಾಡುವದೆಂತು!

ಒಂದಾದುದು ಶಬ್ದಕ್ಕೆ ತೆರೆಹಿಲ್ಲನೋಡಾ.

ಸಕ್ಕರೆ ನೀರನಪ್ಪಿ ನೀರಾದುದು, ನೀರು ಸಕ್ಕರೆಯಪ್ಪಿ ತಾನು ಸಿಹಿಯಾದುದು ಇವೆರಡೊಂದಾದುದು ಅದನೆಂತು ವರ್ಣಿಸುವದು. ಇವೆರಡೊಂದಾದುದು ಅದನೆಂತು ವರ್ಣಿಸುವದು, ನೀರು ಸಕ್ಕರೆ ಅಪ್ಪಿ ಎರಡು ಕಾಣದಾದ ಘನವ ಅದೆಂತು ವರ್ಣಿಸುವದು, ಸಕ್ಕರೆ ನೀರು ಅಪ್ಪಿ ಎರಡು ಕಾಣದಾದ ಘನ ಅದನೆಂತು ವರ್ಣಿಸುವದು, ತೆರೆಹಿಲ್ಲದ ಘನವ ತಲೆಯಿಲ್ಲದ ಮನವ ನಪ್ಪಿ, ಕಾಣದಾದ ಘನವ ವರ್ಣಿಸುವ ದೆಂತು, ಅದು ಉಪಾಧಿದಕ ಎರಡೂ ಮನ, ಉಪಾಧರಹಿತ ಮನವಾಗಿದೆ, ಮತ್ತೇನೂ ಎನಲೊಲ್ಲದೆ ಇದ್ದ ಮನ ಶಬ್ಧ ಮುಗ್ಧ ಮನ, ನಿರ್ವಾಣ ಮನ, ಅನಾಮಯವಾಗಿಹ ಮನ ಇದು ತಲೆಯಿಲ್ಲದ ಮನ ಇದು ತೆರೆಹಿಲ್ಲದ ಘನವಪ್ಪಿ,ಎರಡು ಕಾಣದಾದ ಘನವದೆಂತು ವರ್ಣಿಸುವದು.

ತನಗೆ ತಾ ತರಹರವಾದ ಬಳಿಕ ಇನ್ನು ಮರಳಿ ಇಂಬುಗೊಡಲುಂಟೆ ? ಇದು ತನಗೆ ತಾ ನಿಶ್ಚಯವಾದ ನಿಶ್ಚಲತ್ವ. ಈ ನಿಶ್ಚಲತ್ವ ಅಚಲತ್ವ ಅದಾರಿಗೆ! ತೆರೆಹಿಲ್ಲದ ಘನವ ಮನ ಒಳಕೊಂಡವರಿಗೆ. ಆ ತಲೆಯಿಲ್ಲದ ಮನ, ತೆರೆಹಿಇಲ್ಲದ ಘನ ಒಳಕೊಂಡವರಿಗೆ ಇವೆರಡು ಒಂದಾದಲ್ಲಿ ಅಚಲತ್ವ, ತಾನೆ ತೆರೆಹಿಲ್ಲದ ಘನವಾಗಿ ನಿಲ್ಲುವದು. ಅದು ನಿಶ್ಚಯ ವಾದ ಬಳಿಕ ಮರಳಿ ಇಂಬುಗೊಲುಂಟೆ? ಪುನಃ ಭ್ರಾಂತಿ ಮನ ಭ್ರಾಂತಿ ರಹಿತ ಮನವೆಂಬುದಕ್ಕೆ ಅವಕಾಶ ಕೊಡಬಹುದೆ?

ಪ್ರವೃತ್ತಿ ರೂಪ, ಪ್ರಪಂಚ ಸತ್ಯ ಮಿಥ್ಯೆ ಎಂಬುದಕ್ಕೂ ಅವಕಾಶ ಕೊಡಬಹುದೆ? ನಿವೃತ್ತಿ ರೂಪ ಮಾದ ಪರಮಾರ್ಥ ಸತ್ಯ ಮಿಥ್ಯೆ ಎಂಬುದಕ್ಕೂ ಅವಕಾಶ ಕೊಡಬಹುದೆ!

ಸಮ, ಸಮ ಎಂಬುವ ನುಡಿಗೆಡೆಗೊಡಬಹುದೆ! ತೆರೆಹಿಲ್ಲದ ಘನದ ಸುಖದ ಸುಖಿ ಯಾದ ಬಳಿಕ ಪುನಃ ಅದು ಹಾಗೆ, ಹೀಗೆ ಎಂದು ಸುತ್ತಾಡಬಹುದೆ?

ಗುಹೇಶ್ವರ ಲೀಲೆ ಮಾಬಸ್ಣಕ್ಕರ ಉರಿಯಂಡ ಕರ್ಪುರದಂತಿರಬೇಕು ಕಾಣಾ ಸಿದ್ಧರಾಮಯ್ಯ. ತನ್ನ ತಾನರಿತು ಅರುವು ಸಯವಾದ ಬಳಿಕ ಶರಣ ಲೀಲಾಮಯನು. ಪ್ರಭು ಲೀಲಾಮಯನು, ಬಸವಣ್ಣ ಲೀಲಾಮಯನು. ಚೆನ್ನಬಸವಣ್ಣ ಲೀಲಾಮಯನು ಅಕ್ಕಮಹಾದೇವಿ, ನೀಲಾಂಬಿಕೆ ,ಮಹಾದೇವಮ್ಮ, ಲಕ್ಕಮ್ಮ ಮಡಿವಾಳಮ್ಮ ಲೀಲಾಮಯರು, ಅವರು ಉರಿಯುಂಡ ಕರ್ಪೂರದಂತಿದ್ದ ಘನ ಮಹಿಮರಾದ್ದುರಿಂದ ಶರಣ ಶರಣೆಯರೆಲ್ಲಾ ಲೀಲಾಮಯರು.

ನಿರಹಂಭಾವಿಗಳು ಭರಿತ ಭಾವಿಗಳು ನಿರಾಡಂಬರರು. ಉಂಡು ಉಪವಾಸಿಗಳು ಬಳಸಿ ಬ್ರಹ್ಮಾಚಾರಿಗಳು ನುಡಿದು ನಿಃಶಬ್ಧರು ನಡೆದು ನಿರ್ಗಮನಿಗಳು. ಲಿಂಗ ನೋಟ,ಲಿಂಗ ಮಾಟ ಲಿಂಗ ಕೂಟ,ಲಿಂಗವರಿತು ಲಿಂಗವಾಗಿಹ ಅಚಲಾನಂದಮಯರು, ಅವರು ಅಳಿದವರಲ್ಲ, ಉಳಿದವರಲ್ಲ, ಘನಕ್ಕೆ ಗಮನರಲ್ಲ. ತನ್ನ ತಪ್ಪಿಸಿ ಇದರ ನೊಪ್ಪಿಸದವರು ಅವರು ಗಣನೆ ಗತೀತರು, ಉರಿಉಂಡ ಕರ್ಪೂರದಂತಿದ್ದ ಘನವಂತರು ಎಂದು ಪ್ರಭು ದೇವರು ಹೇಳಿಹರು.

65

ಮನ,ಮನ, ಒಂದಾಗಿ ಅರಿವು ಸಮವಾದ ಬಳಿಕ ಕೊಂಡಾಡಲಿಕ್ಕಿಂಬುಂಟೆ ಹೇಳಾ?
ಶಬ್ದಕ್ಕೆ ತೆರೆಹಿಲ್ಲ!ಗುಹೇಶ್ವರ ಲಿಂಗದಲ್ಲಿ ಬೆರಸಿ,
ಬೇರಿಲ್ಲ ಕಾಣಾ ಸಂಗನಬಸವಣ್ಣಾ. ॥ 1426 ॥

ತಾತ್ಪರ್ಯ : ಮನ, ಮನ ಒಂದಾಗಿ; ಮನ, ಮನ ಒಂದಾಗಿ ಎಂದು ಎರಡು ಸಾರೆ ಮನವ

ತೆಗೆದು ಕೊಂಡಿದ್ದಾನೆ. ಮನ, ಮನ ಒಂದಾದ ಮನ ಅದಾವುಗಳು ಭಕ್ತರ ಮನ, ದಾಸೋಹಂ ಮನ, ಇದು ಭರಿತ ಭಾವ ರೂಪ ಮನ ,ಅದುವೆ ಜ್ಞೇಯದಂತೆ ಜ್ಞಾನವಾದ ಮನ ಪೂರ್ವಮನ , ಮನ ಉತ್ತರ ಮನ ಪ್ರವೃತ್ತಿ ಮನ, ನಿವೃತ್ತಿ ಮನ, ಲಿಂಗವೆನ್ನುವ ಮನ ಎರಡೊಂದಾಗಿ ಅರಿವು ಸಮವಾದ ಬಳಿಕ ಕೊಂಡಾಡಲಿಕ್ಕಿಂಬುಂಟೆ ? ಗುರುವಿನ ಮನ, ಶಿಷ್ಯನ ಮನ, ಒಂದಾದ ಬಳಿಕ ಕೊಂಡಾಡಲಿಕ್ಕಿಂಬುಂಟೆ ? ಭಕ್ತನ ಮನ , ಜಂಗಮನ ಒಂದಾದ ಬಳಿಕ ಕೊಂಡಾಡಲಿಕ್ಕಿಂಬುಂಟೆ ? ಇವರೀರ್ವರ ಮನ ಒಂದಾದುದು ಅರಿವು ಸಯವಾಗಿ ಅಂಗ ನೆನಲಿಲ್ಲ ಗುರುವೆನಲಿಲ್ಲ ಲಿಂಗನೆನಲಿಲ್ಲ, ಶಿಷ್ಯನೆನಲಿಲ್ಲ, ಭಕ್ತ ನೆನಲಿಲ್ಲ, ಜಂಗಮ ನೆನಲಿಲ್ಲ ಅರುವಿಂಗರುವಾಗಿಹ ಘನವು ತನ್ನದಾದ ಬಳಿಕ ಕೊಂಡಾಡಲಿಕ್ಕಿಂಬುಂಟೆ ? ಮರವಿನ ಅರವಿನ ಮನ ಒಂದಾಗಿ ಅರಿವು ಸಮವಾದ ಬಳಿಕ ಕೊಂಡಾಡಲಿಕ್ಕಿಂಬುಂಟೆ ? ಬದ್ಧರೂಪಿ ಮನ ಮೋಕ್ಷರೂಪ ಮನವಾಗಿ ಅರಿವು ಸಯವಾದ ಬಳಿಕ ಕೊಂಡಾಡಲಿಕ್ಕಿಂಬುಂಟೆ ?

ಉಪಾಧಿ ಮನ ಉಪಾಧಿರಹಿತ ಮನ ಒಂದಾಗಿ ಅರಿವು ಸಯವಾದ ಬಳಿಕ ಕೊಂಡಾಡಲಿಕ್ಕಿಂಬುಂಟೆ ? ಎರಡೊಂದಾದ ಬಳಿಕ ಅರ್ಚನೆ ಹಿಂಗಿತ್ತು. ಎರಡೊಂದಾದ ಬಳಿಕ ಅರ್ಪಿತ ಹಿಂಗಿತ್ತು . ಎರಡೊಂದಾದ ಬಳಿಕ ಆಚಾರ ಹೆಂಗಿತ್ತುಎರಡೊಂದಾದ ಬಳಿಕ ಅವಧಾನ ಹಿಂಗಿತ್ತು. ಎರಡೊಂದಾದ ಬಳಿಕ ಶಬ್ದಕ್ಕೆ ಇಂಬಿಲ್ಲ, ರೂಹಿಸಲೆಡೆಯುಂಟೆ ಗುಹೇಶ್ವರಾ.

ಮನ, ಮನ ಎರಡು ಒಂದಾದ ಘನ ಆದಾರು ಬಲ್ಲರು, ಗುರುವೆಂಬುದು ಮನವೆ ! ಶಿಷ್ಯನೆಂಬುದು ಮನವೆ ! ಅಬೋಧರೂಪಿ ಮನ ಶಿಷ್ಯನ ಮನ, ಬೋಧರೂಪಿ ಮನ ಗುರುವಿನ ಮನ. ಭಕ್ತನೆಂಬುದು ಮನ, ಇದು ದಾಸೋಹಂ ಮನ, ಜಂಗಮನ ನಿರ್ಭಾವ ಮನ, ಮನವು ಇಲ್ಲದ್ದು ಎಲ್ಲಿಯವರೆಗೆ ಕಲ್ಪಿಸುತ್ತದೆ ಇದ್ದುದ ಅರಿಯವದಿಲ್ಲ, ಅದಕ್ಕೆ ಹಲಬುವದು ಬಿಡುಗಡೆಯಿಲ್ಲ. ಇದ್ದುದ ನರಿಯ ಹೋಗಿ ಅರುವಿಂಗೆ ಅರುವಾಗಿಹ ಘನವು ತನ್ನಿರುವು ಎಂಬುದು ವೇದ್ಯವಾಯಿತ್ತು. ಆಗ ಅದು ಮನವಾಗಲಿಲ್ಲ ಅರಿವು ಸಯ ವಾಯಿತ್ತು ಅರುವೆ ತಾನಾಯಿತ್ತು , ಆಗ ಇಲ್ಲದ ಮನಯಿಲ್ಲವಾಯಿತ್ತು.

ಗುರುವೆಂಬ ಮನವು ಇಲ್ಲವಾಯಿತ್ತು ,ಶಿಷ್ಯನೆಂಬ ಮನವು ಇಲ್ಲವಾಯಿತ್ತು, ಭಕ್ತನೆಂಬ ಮನವು ಇಲ್ಲವಾಯಿತ್ತು , ಜಂಗಮನೆಂಬ ಮನವು ಇಲ್ಲ ವಾಯಿತ್ತು, ಇಲ್ಲೆಂಬುದು ಇಲ್ಲವಾದಾಗ ಅಲ್ಲಿ ಪೂಜ್ಯ ಪೂಜಕನೆಂಬ ಭಾವಕ್ಕಿಂಬುಂಟೆ ? ಅರ್ಪಿಸಿಕೊಳ್ಳುವನಿಲ್ಲಿ ಅರ್ಪಿತ ವಿಲ್ಲ ಆಚಾರ ವಿಲ್ಲ, ಅನಾಚಾರ ವಿಲ್ಲ , ಮರವಿಲ್ಲ, ಅರುವಿಲ್ಲ , ಎಲ್ಲಿಯವರೆಗೆ ಕಲ್ಪಿತ ಪುರುಷ ತಾನೆಂಬುದಂಟು ಅಲ್ಲಿಯವರೆಗೆ ಶಬ್ಧಕ್ಕೆ ಇಂಬುಂಟು , ಮನವು ಕಲ್ಪಿತವು, ಈ ಕಲ್ಪಿತ ರೂಪ ಮನವು ಇಲ್ಲದುದು ಎಂಬುದು ಇಲ್ಲವಾದಾಗ ಆಗ ಅದು ಎರಡೊಂದಾದ ಸಂಕೇತ.

ಅರಿವು ಸಯವಾದ ಸಂಕೇತ ಪ್ರವೃತ್ತಿರೂಪಿಯಾಗಿರುವ ಪ್ರಪಂಚದಲ್ಲಿ ನಾಮರೂಪ ಸತ್ಯವಾಗಿದೆ . ನಿವೃತ್ತಿ ಪರ ವಾಗಿರುವ ಪರಮಾರ್ಥದಲ್ಲಿ ಅಸ್ತಿ, ಭಾತಿ ಸತ್ಯವಾಗಿದೆ. ಇವೆರಡು ಮನದ ಕಲ್ಪನೆ , ಪ್ರಪಂಚವೆಂಬುದು ಮನದ ಕಲ್ಪನೆ. ಪರಮಾರ್ಥವೆಂಬುದು ಮನದ ಕಲ್ಪನೆ, ಸತ್ಯವೆಂಬುದು ಮನದ ಕಲ್ಪನೆ , ಮಿಥ್ಯವೆಂಬುದು ಮನದ ಕಲ್ಪನೆ , ಮನಸ್ಸು ಎಲ್ಲಿಯವರೆಗೆ ಕಲ್ಪನೆಯಿಂದುಕ್ತವಾಗಿದೆ . ಅದು ಒಂದಾಗಲಾರದು . ಒಮ್ಮೆ ಮರವಿನ ಮನವಾಗುವದು , ಒಮ್ಮೆ ಅರುವಿನ ಮನವಾಗುವದು ,ಒಮ್ಮೆ ಅರಿಸಿಕೊಳ್ಳುವದೆ ತಾನಾಗುವದು , ಒಮ್ಮೆ ಅರಿಯವುದೆ ತಾನಾಗುವದು , ಒಮ್ಮೆ ಬದ್ಧನೆಂದು ಒಪ್ಪಿಕೊಳ್ಳುವದು , ಒಮ್ಮೆ ಮುಕ್ತನೆಂದು ಒಪ್ಪಿಕೊಳ್ಳುವದು, ಒಮ್ಮೆ ದಾಸೋಹಂ ಎಂದು ಒಪ್ಪಿಕೊಳ್ಳುವುದು ಒಮ್ಮೆ ಸೋಹಂ ಎಂದು ಒಪ್ಪಿಕೊಳ್ಳುವದು, ಒಮ್ಮೆ ನಾಹಂ ಎಂದು ಒಪ್ಪಿಕೊಳ್ಳುವದು , ಇದು ಒಪ್ಪಿಕೊಂಡು

ಎಲ್ಲವ ತಿರಸ್ಕರಿಸುವದು ಒಮ್ಮೆ ಚಿದಹಮ್ಮು ಒಪ್ಪಿಕೊಳ್ಳುವದು , ಹೀಗೆ ಒಂದು ಬಿಟ್ಟು ಮತ್ತೊಂದು ಭಾವ ಧರಿಸುವದು ಮನದ ಕಾರ್ಯವು, ಇದು ಮನ, ಮನ ಒಂದಾದ ನಿಲುವು ಅಲ್ಲ. ಇದೆಲ್ಲವು ನೀನೆಂಬ ದಾಸೋಹಂಭಾವವು ಕೂಡ ಮನ,ಮನ ಒಂದಾದ ನಿಲುವಲ್ಲ ಇದು ಕೂಡಾ ಮನದ ಕಾರ್ಯವು .

ಮನ, ಮನ ಒಂದಾದ ಸಂಕೇತವದು ಅರಿವು ಸಮವಾದ ಸಂಕೇತವು, ಅಲ್ಲಿ ಮನದ ಕಾರ್ಯವು ಅತ್ಯಂತಾಭಾವವಾಗಿದೆ. ಅದು ಪ್ರವೃತ್ತಿಯದ್ದಿರಲಿ, ನಿವೃತ್ತಿಯಲ್ಲಿರಲಿ, ಅದರ ಕಾರ್ಯವು ಅತ್ಯಂತಾಭಾವವಾಗಿದೆ. ಕೊಂಡಾಡುವ ಮನವೆ ಇಲ್ಲವಾದಲ್ಲಿ ಕೊಂಡಾಡಲಿಕ್ಕಿಂಬುಂಟೆ? ಗುರುವಾಗಿ ಕಾಣುವ ಮನ ಶಿಷ್ಯನೆಂದೆನಿಸಿಹ ಮನ ಜಂಗಮ ವಾಗಿ ಕಾಣುವ ಮನ ಭಕ್ತನೆಂದೆನಿಸಿಹ ಮನ , ಈ ದ್ವಂದ್ವ ದೃಷ್ಟಿಯುಳ್ಳ ಮನವು ನಷ್ಟವಾಗಿರುವದರಿಂದ ಕೊಂಡಾಡಲಿಕ್ಕಿಂಬುಂಟೆ? ಎಂದು ಹೇಳಿದ್ದಾರೆ.

ಕಾಯನಾನೆನ್ನುವ ಮನ, ಈ ಶಾರ್ಪಣ ಮಾಡುವ ಮನ , ಸಕಲ ಕರ್ಮಂಗಳಿಗೆ ಸಾಕ್ಷಿ ನಾನೆನ್ನುವ ಮನ ಇದು ಕಾಂಡತ್ರಯ ವಿಲ್ಲದ ಅಖಂಡನ ಕಾಣದ ಮನ,ಏಕೆಂದರೆ ಇದು ಕಲ್ಪಿತ ಮನ. ಕಲ್ಪಿತ ಮನ, ಕಲ್ಪಿತ ಪುರುಷನೆಂಬುದು ಭ್ರಾಂತು ಇದು ಅರಿವು ಸಯವಾಗದ ಸೂಚನೆ.

ಆಧ್ಯಾತ್ಮಜ್ಞಾನಿಗಳಲ್ಲಿ ಅರುವು ನಾನೆನ್ನುವವರುಂಟು ಅರುವರಿತು ಅರಿವು ಸಯವಾದವರುಂಟೆ? ಅರುವು ತಾನಾದ ಘನವಂತ ಅರುವು ತಾನೆಂದು ನುಡಿದು ಹೇಳಲಿಲ್ಲ. ಜ್ಯೋತಿ ಅದು ಜ್ಯೋತಿ ತಾ ಎನಲಿಲ್ಲ ಇನ್ನೊಬ್ಬರಿಂದ ಹಚ್ಚಿದ ಜ್ಯೋತಿಯು ಜ್ಯೋತಿ ಎಂದು ನುಡಿಯದಿರುವಲ್ಲಿ ಜ್ಯೋತಿಗೆ ಜ್ಯೋತಿಯಾಗಿಹ ಸ್ವಯಂ ಜ್ಯೋತಿ ಅದು, ಸ್ವಯಂ ಜ್ಯೋತಿ ಎಂದು ನುಡಿಯಲಿಲ್ಲ ಅರಿವು ಸ್ವಯವಾಗುವಡೆ ತಾನೆ ಅರುವು ತಾನಾಗಿರುವಲ್ಲಿ ತನಗೆ ಕೊಂಡಾಡಲು ಮನವಿಲ್ಲ. ಪ್ರವೃತ್ತಿ ಇಲ್ಲ, ನಿವೃತ್ತಿ ಇಲ್ಲ, ಭೇದವೂ ಇಲ್ಲ, ಅಭೇದವೂ ಇಲ್ಲ, ಇಲ್ಲ, ಇಲ್ಲವೆಂಬುದು ಇಲ್ಲವಾಗಿರುವಲ್ಲಿ ಕೊಂಡಾಡಲಿಕ್ಕಿಂಬುಂಟೆ? ಎಂದು ಪ್ರಶ್ನಿಸಿದಲ್ಲಿ ಇದರ ಉತ್ತರ ಕೊಡಲು ಶಬ್ದಕ್ಕೆ ತೆರಹಿಲ್ಲವೆಂಬುದು ಹೇಳಿಹರು.

ಶಬ್ದಕ್ಕೆ ತೆರೆಹಿಲ್ಲದಿರುವಲ್ಲಿ ಮನವೆಲ್ಲಿಯದು ? ಮನ ವಿದ್ದಲ್ಲಿ ದೋಷವುಳ್ಳ ಮನವು ಇದೆ. ಅಲ್ಲಿ ಮಲಿನ ಸತ್ವಗುಣವುಳ್ಳ ಮನವು ಇದೆ. ಶುದ್ಧಸತ್ವ ಗುಣವುಳ್ಳ ಮನವು ಇದೆ , ಮನವೆ ಇಲ್ಲವೆಂದಲ್ಲಿ ಆವರಣವುಳ್ಳ ಮನ ಆವುದು ? ನಿರಾವರಣವುಳ್ಳ ಮನವು ಇದೆ , ವಿಷಮಾಕಾಶವುಳ್ಳ ಮನವು ಇದೆ , ಬ್ರಹ್ಮಾಕಾರವುಳ್ಳ ಮನವೂ ಇದೆ. ಮನೆವೆಂಬುದಕ್ಕೂ ಅವಕಾಶ ವಾಗದಿರುವುದೆ ಅರಿವು ಸಯವಾದ ಸಂಕೇತ.

ದಾಸೋಹಂ ಎನ್ನುವ ಮನ, ಸೋಹಂ ಎನ್ನುವ ಮನ ಇವೆರಡು ಅತ್ಯಂತಾಭಾವ ವಾಗುವದೆ ಮನ, ಮನ ಒಂದಾದ ಸಂಕೇತ . ಗುಹೇಶ್ವರ ಲಿಂಗದಲ್ಲಿ ಬೆರಸಿ ಬೇರಿಲ್ಲ, ಕಾಣಾ ಸಂಗನ ಬಸವಣ್ಣ, ಸಂಗನ ಬಸವಣ್ಣ ಆರು ಗುಹೇಶ್ವರ.

ಲಿಂಗದಲ್ಲಿ ಬೆರಸಿದ್ದಾರೆ, ಅವರು ಗುಹೇಶ್ವರ ಲಿಂಗವೆ ಬೇರಲ್ಲ , ಗುಹೇಶ್ವರ ಲಿಂಗವೆಂಬುದು ಗುಹೇಶ್ವರ ಲಿಂಗವೆನ್ನದ ನಿಃಶಬ್ಧ ಘನ ಲಿಂಗವು . ನಿಃಶಬ್ದ ಘನ ಲಿಂಗವರಿತು ಅದುವೆ ತಾನಾದುದರಿಂದ ಬೇರಿಲ್ಲ ಕಾಣಾ ಸಂಗನ ಬಸವಣ್ಣ.

66

ನೀರು ಕ್ಷೀರದಂತೆ ಕೂಡಿದ ಭೇದವ ನಾರಿಗೆ ಹೇಳಲಿಲ್ಲ, ಕೇಳಲಿಲ್ಲ,
ಬೆಳುಗಾರ ಬೆರಸಿದ ಬೆಚ್ಚ ಬಂಗಾರಕ್ಕೆ ಸಂದುಂಟೆ ಹೇಳಾ ?
ಉರಿಯುಂಡ ಕರ್ಪುರದ ಪರಿಯೆಂತಿರ್ದುದನು
ಇದಿರಿಂಗೆ ಕೊಂಡಾಡಿ, ಹೇಳಲುಂಟೆ ?

ಅಥಂತಿರಲಿ ನಮ್ಮ ಗುಹೇಶ್ವರ ಲಿಂಗದ ಕಣ್ಣು ಮುಂದೆ,
ನಿಮ್ಮ ದರ್ಮದಿಂದ ಲೊಂದು ಆಶ್ಚರ್ಯವ ಕಂಡು
ಬದುಕಿದೆನು ಕಾಣಾ ಸಂಗನ ಬಸವಣ್ಣ. ॥ 1305 ॥

ತಾತ್ಪರ್ಯ : ನೀರು ಕ್ಷೀರದಂತೆ ಕೂಡಿದ ಭೇದವ ನಾರಿಗೆ, ಹೇಳಲಿಲ್ಲ ಕೇಳಲಿಲ್ಲ , ಪ್ರಭುದೇವ ನೀರು ಕ್ಷೀರದಂತೆ ಕೂಡಿದ ಘನವ ಮಂಡಿಸಿದುದು , ಬಹು ಗೂಡಾರ್ಥವು , ನೀರಿರುವ ಸ್ಥಾನ ಬೇರೆ , ಹಾಲಿರುವ ಸ್ಥಾನ ಬೇರೆ, ನೀರು ಹಾಲು ಕೂಡವದು ತಮ್ಮಷ್ಟಕ್ಕೆ ತಮಗೆ ಹೇಗೆ ಸಾಧ್ಯ.

ನೀರು ಕೂಡಿಸಿದುದು ಬಹು ಜನರಿಗೆ ಗೊತ್ತುಂಟು, ನೀರು ಹಾಲು ಕೂಡಿದ ಘನತ್ವ ಅವುಗಳಿಗೆ ಗೊತ್ತು. ಇದು ಕಾರಣ ಇಲ್ಲಿ ನೀರು ಕ್ಷೀರದಂತೆ ಕೂಡಿದ ಭೇದವ ನಾರಿಗೆ ಹೇಳಲಿಲ್ಲ ಕೇಳಲಿಲ್ಲ ಎನ್ನುವ ದೃಷ್ಟಾಂತ ನೋಡುವುಡೆ ಅವೆರಡು ಕೂಡಿದುದು ಅವು ಹೇಳಲಿಲ್ಲ.

ನೀರು ಎಂದಡೆ ಮನಸ್ಸು , ಮನವೆಂದಡೆ ಪವಿತ್ರ ಮನಸ್ಸು ಶುದ್ಧ ನೀರು ಹಾಲಲ್ಲಿ ಕೂಡುವದಲ್ಲದೆ ರಬಡಿ ನೀರು ಕೂಡದು . ಹಾಗೆ ಶುದ್ಧ ಮನ, ಯೋಗ ಮನ ಧ್ಯಾನಾತ್ಮ ಮನ , ಸ್ವರೂಪಾನು ಸಂಧಾನ ಮನಸ್ಸು. ಕ್ಷೀರ ವೆಂದರೆ , ದುದ್ಗಾಮೃತ , ಜ್ಞಾನಾಮೃತ , ಪರಮಾಮೃತ, ಚಿನ್ಮಯಾನಂದ ಸ್ವರೂಪಾನು ಸಂಧಾನವುಳ್ಳ ಮನ ಬ್ರಹ್ಮಾಕಾರ ಮನ , ಬ್ರಹ್ಮದೋಳ್ ಕೂಡಿದುದು ಅದು ಹೇಳಲಿಲ್ಲ ಕೇಳಲಿಲ್ಲ.

ಬಹು ಜಿಜ್ಞಾಸುಗಳು ಪ್ರಾಜ್ಞರು , ಇವರು ಚಿದ್ಘನದ ಪ್ರೇಮಿಗಳು , ಚಿದ್ರೂಪದನುಸಂಧಾನ ವುಳ್ಳವರು , ಸಿಕ್ಕುತ್ತಾರೆ. ಚಿದ್ರೂಪ ವೆನ್ನಲು ಬಾರದ, ನಿಃಶಬ್ದ ಬ್ರಹ್ಮದೋಳ್ ಲೀನವಾಗುವ ಏಕವಾಗುವ ಘನಕ್ಕೆ ಘನ ವಾದವರು ಸಿಕ್ಕುವದು ವಿರಳ, ಎಂಜಲ ಮಾತನಾಡುವವರು ಸಿಕ್ಕುತ್ತಾರೆ, ಮಿಗೆ ಮಿಗೆ ಮೀಸಲವಾಗಿಹ ತತ್ವ ತಿಳಿದವರು ಸಿಕ್ಕುವದು ವಿರಳ . ಇವರು ಲಿಂಗ ಸಕೀಲ ಸಂಯೋಗ ವರ್ಮಸ್ಥಲ ವರಿತವರು ಸಿಕ್ಕುವದು ಅಪರೂಪ, ಅವರಿಗೆ ಸಹಜ ಸಾಧ್ಯವು ಇನ್ನುಳಿದವರಿಗೆ ಅಸಾಧ್ಯ . ಅವರು ಸ್ವರೂಪಾನುಸಂಧಾನ ಮಾಡುತ್ತಿದ್ದರೂ ಅದು ಮನವಾಗಿಯೆ ಇರುತ್ತದಲ್ಲದೆ, ಕ್ಷೀರ ರೂಪ ದುಗ್ಧಾಮೃತ ಚಿನ್ಮಾಯಾನಂದದೋಳ್ ಲೀನವಾಗಲು ಕಠಿಣವಾಗಿದೆ .

ಇತ್ತ ಪ್ರಭುದೇವ , ಚೆನ್ನ ಬಸವಣ್ಣ , ಅಣ್ಣ ಬಸವಣ್ಣ ಇನ್ನೂ ಅನೇಕ ಶರಣ ಶರಣೆಯರಿಗೆ ಇದರ ರಹಸ್ಯ ಗೊತ್ತುಂಟು ಅವರಿಗೆ ಇದರ ಘನವು ಇದ್ದಕ್ಕಿದ್ದಂತೆ ವೇದ್ಯವಾದುದರಿಂದ ಅವರ ಹೃದಯ ಬಳ್ಳಿ ಇದರ ರಹಸ್ಯ ತಿಳಿಸಿದಾಗ ಸಹಜ ವೇದ್ಯವಾಗುವದು.

ಸ್ವರೂಪಾನುಸಂಧಾನವುಳ್ಳ ಮನ ನೆನವುಳ್ಳ ಮನ , ಇದು ಚಿದ್ರೂಪಾನುಸಂಧಾನವುಳ್ಳ ಮನ ಇದು ಹಾಲಿನೊಳಗೆ ಅಂದರೆ ಚಿನ್ಮಯಾನಂದದೊಳಗೆ ಬೆರೆಯದು. ಒಂದು ನೆನೆಯುಳ್ಳ ಮನ, ಒಂದು ನೆನೆಯುಳ್ಳದ ಘನ . ಅರಸಿದರೂ ಕಾಣದ ಘನ, ಅರಸುವ ಮನ , ಇವೆರಡು ಕೂಡವು ಬೆರೆಯವು ! ಇದು ಕಾರಣ ನೆನೆಯದ ಮನವಾಗಬೇಕು. ಚಿದ್ರೂಪಾನು ಸಂಧಾನದಿಂದ ಮನ ನಿವೃತ್ತಿಯಾಗಬೇಕು. ಆಗ ಏನೊಂದುಸರಲು ಬಾರದ ಘನದೋಳ್ ಬೆರೆತು ತಾನು ಅದು ಒಂದೆ ಆದಾಗ ಹೇಳಲಿಲ್ಲ, ಕೇಳಲಿಲ್ಲ. ಮನವು ಮುದ್ರೆ ಧರಿಸಿದಂತಾಗಬೇಕು. ನಿಃಶಬ್ದ ಬ್ರಹ್ಮ ಅದು ಸ್ವಭಾವತಃ ಮೌನ ಮುದ್ರಿತ. ಆಗ ಇವೆರಡು ಕೂಡಿದ ಘನ ಹೇಳಲಿಲ್ಲ, ಕೇಳಲಿಲ್ಲ . ಇದು ನಿಜವರಿತ ಶರಣನ ಸದು ಹೃದಯವಾಗಿಹ ಪ್ರಸನ್ನ ಮುಖದ ಪರಮಾಮೃತ ಅದನೆಂತು ವರ್ಣಿಸುವದು.

ಬೆಳೆಗಾರ ಬೆರಸಿದ ಬೆಚ್ಚ ಬಂಗಾರಕ್ಕೆ ಸಂದುಂಟೆ :ಇದು ಅಕ್ಕ ಸಾಲಿಗನ ಕಾರ್ಯ , ಬೆಳೆಗಾರನೆಂಬ ಟಂಕವ ಬೆರಸಿ ಮಿಶ್ರ ಮಾಡಿ ಬೆರೆದ ಬಂಗಾರಕ್ಕೆ ಸಂದು ಇರದು , ಅದು ಹೇಗೆ ಸಂದು

ಬಿಡದೆ ಬಂಗಾರ ಏಕವಾಗಿದೆಯೊ ಹಾಗೆ, ತುಣುಕು ತುಣುಕಾದ ಬಂಗಾರ ಒಂದು ಮಾಡಲು ಅಕ್ಕಸಾಲಿಗನು ಬೇಕು, ಮೇಲೆ ಟಂಕವ ಬೆರೆಸಿ ಬೆಸೆಯುವ ಕಲೆ ಬೇಕು ಇಷ್ಟೆಲ್ಲ ಕೂಡಿದಾಗ ಆಗ ಸಂದು ಬಿಡದ್ದು ಬೆಸೆದ ಬಂಗಾರವೆನ್ನದಂತೆ. ಏಕ ಭಂಗಾರವಾಗಿದ್ದದು ಸಕಲರಿಗೂ ಕಂಡು ಬರುತ್ತಿದೆ.

ಇಲ್ಲಿ ಪ್ರಭುವೆಂಬ ಅಕ್ಕ ಸಾಲಿಗ ಲಿಂಗವೆಂಬ ಜ್ಞಾನವು ಇದು ಸೀಮಿತವಾಗಿದೆ. ಇದನ್ನು ಅಖಂಡಿತ ಘನ ಪೂರ್ಣವ ಮಾಡಲು ವೇದ ವೇದಾಂತಗಳಿಗೆ ಅಸಾಧ್ಯವಾದ ಅಖಂಡಿತ ಜ್ಞಾನ ಮಾಡಲು ಪ್ರಭು ರೂಪಿ ಅಕ್ಕ ಸಾಲಿಗ ಅವಶ್ಯವಾಗಿ ಬೇಕು. ಆಧುನಿಕ ಸಮಯದಲ್ಲಿ ಸೀಮಿತ ಜ್ಞಾನಿಗಳಾಗಿಹ ಪ್ರಾಜ್ಞರು ಗುರಗಳು ಸಿಕ್ಕುತ್ತಾರೆ. ಸೀಮಿತ ಜ್ಞಾನವು ಪುರುಷಾರ್ಥ ಜ್ಞಾನವಾಗಿದೆ. ಈ ಚಿದಹಮ್ಮುಳ್ಳ ಶಬ್ದ ಬ್ರಹ್ಮರು ಸಿಕ್ಕುತ್ತಾರೆ, ಚಿದಹಂಕಾರ ದ್ವೈತ್ವ ಮಾಡುವ ಪ್ರಭುವು ದೊರೆಯುವದು ದುಸ್ತರವಾಗಿದೆ. ಈ ಅಕ್ಕಸಾಲಿಗನಿದ್ದಲ್ಲಿ ಟಂಕ ಹಾಕುವ ಬೆಳೆಗಾರನು ಇದೆ. ಅದನ್ನು ಹೀಗೆ ಮಿಶ್ರ ಮಾಡಿ ಹೇಗೆ ಬೆಸೆಯ ಬೇಕೆಂಬ ಕಲೆಯು ಇದೆ. ಈ ಅನುಗಾರನೆಂದರೆ ಅನುಪಮ ಜ್ಞಾನಿಗಳು ಇವರು ನಿಃಶಬ್ಧ ವೇದಿಗಳು.

ನಿಃಶಬ್ದ ವೇದಿಗಳಾಗದಿದ್ದರಿಂದ ತತ್ವಮಸಿ ಮಹಾವಾಕ್ಯ ಹೊರಗಣ ಬಳಸುವದು ನಡೆದಿದೆ ನುಡಿಯ ತಾವಾಗಿ ನುಡಿಯುವದರಿಂದ ನುಡಿಗೆಡ ಗೊಡದ ಘನ ತಾವಾಗದಂತಾಗಿದೆ. ಇದು ಕಾರಣ ಶಬ್ಧಸಂಭ್ರಮದವರೆ ಸಿಕ್ಕುವರು. ನಿತ್ಯ ನಿರಂಜನ ತಾನೆಂದರಿಯದೆ ಅಹಂ ಬ್ರಹ್ಮಾಸ್ಮಿ ಎನ್ನುವವರು ಬಹು ಜನ ಇದ್ದಾರೆ. ಈ ನುಡಿಯೆಂಬ ಕಲ್ಪಿತವ ಕೆಡಿಸಿ ಲಿಂಗ ಸಕೀಲ ಸಂಯೋಗವೆಂಬ ವರ್ಮ ರೂಪಿ ಟಂಕದಿಂದ ಬೆರೆದು ಅನುಪಮವಂತರನ್ನಾಗಿ ಮಾಡದವರು. ಇವರೆ ಆಚಾರ್ಯರೆಂದೆನಿಸಿಕೊಂಡು ಸೀಮಿತ ಜ್ಞಾನ ನುಡಿಯಿಂದುಕ್ತವಾದುದೆ ಘನವಾಗಿಹುದು. ಇದು ಕಾರಣ ನಿಃಶಬ್ದ ವೇದಿಗಳಾಗುವದರಿಂದ ಕಲ್ಪಿತ ಜ್ಞಾನ ನಿರಸನವಾಗದು ಅದು ನಿಃಶಬ್ಧ ವೇದಿಗಳು ಅವರೆ ಲಿಂಗ ಸಕೀಲ ಸಂಯೋಗ ವರ್ಮಸ್ಥಲ ವರಿತವರು, ಅಲ್ಲಿ ಮಹಾ ವಾಕ್ಯಗಳನ್ನೆ ಕರಗಿಸುವ ಕಲೆಯಿದೆ ಬೆಳುಗಾರುವ ಬೆರಸಿ ಟಂಕ ಬೆಸೆದು ಬಂಗಾರ ಏಕ ಮಾಡುವ ಅಖಂಡಿತ ಜ್ಞಾನ ಪೂರ್ಣವಪ್ಪ ತನ್ನಿರವೆ ಅರುವೆಂದರಿಯುವ ಅನುಪಮರು, ಅವರು ಕರುಣಿಸಿದಾಗ ಕಲ್ಪಿತ ಜ್ಞಾನ ನಿರಸನವಾಗಿ ಆಗ ಅಕಲ್ಪಿತ ಘನದಿರುವುಳ್ಳ ಅರುವು ತನ್ನಿಂದ ತನಗೆ ಹೇಳಲಿಲ್ಲ ಕೇಳಲಿಲ್ಲ.

ಉರಿಯುಂಡ ಕರ್ಪೂರದ ಪರಿಯಂತಿದ್ದುದನು ಇದಿರಿಂಗೆ ಕೊಂಡಾಡಿ ಹೇಳಲುಂಟೆ? ಸದ್ವಾಸನೆಯೆಂಬ ಕರ್ಪೂರ ಸದ್ ಜ್ಞಾನ ಭರಿತ ರೂಪಿ ಉರಿ, ಈ ಉರಿಗೆ ಸದ್ವಾಸನಾ ರೂಪಿ ಕರ್ಪೂರ ತಾಕಿದಡೆ, ಇವೆರಡು ಏಕವಾದ ಬೆಳಗುಳ್ಳ ಘನವನ್ನು ಅದಾವ ಭಾಷೆಯಿಂದ ಕೊಂಡಾಡಿ ಹೇಳಲು ಬಾರದು, ಏಕೆಂದರೆ ಉರಿಯುಂಡ ಕರ್ಪುರದಂತಿಪ್ಪುದು, ಅದು ಅದರ ಲೀಲೆ, ತನ್ನಸ್ವ ಮಹಿಮೆಯಲ್ಲಿ ಉರಿಯುವ ಘನವು ಅದನೆಂತು ವರ್ಣಿಸುವದು! ಏನೊಂದಾಗದ ಘನ ನುಡಿಗೆಡೆಗೊಡದ ಘನ, ನಡೆಗೆಡೆಗೊಡದ ಘನ ಅದನ್ನು ಕಂಡುದು ಹೇಳುವದೆಂದರೆ ಸರಿಯಾಗದು. ಏಕೆಂದರೆ ಅದು ಕಾಣಿಸಿಕೊಳ್ಳುವದಾಗಿಲ್ಲ ಕಾಣುವದಾಗಿಲ್ಲ, ಅರಿಸಿಕೊಳ್ಳುವದಾಗಿಲ್ಲ ಅರಿಯುವದಾಗಿಲ್ಲ ಅರಿದರುಹಿಸಕೊಂಬಕ್ಕೆ ಮೀರಿದ ಘನದಿರುವೆ ತನ್ನರಿವು; ಅನುಪಮ ಉಪಮಿಸುವದೆಂತು? ಇದು ಕಾರಣ ಇದಿರಿಂಗೆ ಕೊಂಡಾಡಿ ಹೇಳಲುಂಟೆ? ಎಂದು ಹೇಳಿದ್ದಾರೆ.

ಅದಂತಿರಲಿ ನಮ್ಮ ಗುಹೇಶ್ವರ ಲಿಂಗದ ಕಣ್ಣ ಮುಂದೆ ನಿಮ್ಮ ಧರ್ಮದಿಂದಲೊಂದು ಆಶ್ಚರ್ಯ ಕಂಡು ಬದುಕಿದೆನು ಕಾಣಾ ಸಂಗನ ಬಸವಣ್ಣ:

ಹೀಗೆ ಪ್ರಭು ದೇವರು ನಿರೂಪಿಸಲು ಬಸವರಾಜದೇವರು ನೀವು ಕಂಡ ಆಶ್ಚರ್ಯವಾವುದೆಂದು ದೇವ ದೇವ, ಮಹಾ ಪ್ರಕಾಶ ನೀವೆಂದಂತೆ, ನಿಮ್ಮ ಚರಣದಲ್ಲಿ ಸಂದು

ಭೇದವಿಲ್ಲದೆ ಇಪ್ಪೆನಲ್ಲದೆ, ಬೇರೆ ಭಿನ್ನ ವಾಗಿರ್ದೆನಾದರೆ ನೀವೆ ಸಾಕ್ಷಿ ನಿಮ್ಮ ಶ್ರೀಪಾದವ ಕಂಡೆನ್ನುವ ಭವಂ ನಾಸ್ತಿಯಾಯಿತು, ಕೂಡಲಸಂಗಮದೇವಾ ನಿಮ್ಮದೊಂದಾಶ್ಚರ್ಯವಿಲ್ಲ ವೆಂದು ಶೃತಿ ಹೊಗುಳುತ್ತಿರಲಾಗಿ ನೀವು ಕಂಡಾಶ್ಚರ್ಯ ವಾವು ದೆನಗೊಮ್ಮೆ ನಿರೂಪಿಸಾ ಪ್ರಭುವೆ.

ಓ ಸಂಗನ ಬಸವಣ್ಣ ಮರಳು ಶಂಕರ ದೇವರೆಂಬ ಮಹಾನ್ ಶರಣ ಗೋಪ್ಯದಳಿರ್ದು ಪೊರೆ ಮಡುವದು ಕಂಡು ಆಶ್ಚರ್ಯಂಬಟ್ಟು ಅನುಭಾವದ ಬೆಡಗಿನಿಂ ಕೊಂಡಾಡಿದುದು.

ಓಹೋ! ನಮಃ ಶಿವಾಯ ಮಹಾದಾಕಾಶದ ಮರೆಯಲ್ಲಿದ್ದ ಶಾಂತರ್ಕನ ನಿಲವೋ! ದಶ ಮರುತನ ಹೋಯಲಿಲ್ಲದೆ ತಾನೆ ಲಿಂಗದ ಜ್ಞಾನ ಜ್ಯೋತಿಯ ನಿಲವೋ! ತನ್ನಿಂದ ತಾನಾಗಿ ಮುಕ್ತಿಯ ಕರಿಗೊಂಡ ಮುಕ್ತಿಯ ಮತ್ತಿನ ಧವಳದ ಕಾಂತಿಯ ನಿಲವೋ? ರುದ್ರಾಕ್ಷಿಯ ಹಂಗು ಬೇಡವೆಂದು ಹೊದ್ದ ಚರ್ಮದ ಹೊದಕೆಯ ತೆಗೆದ ಗಿಟಿ ಗಿಟಿ ಮಂತ್ರದ ನಿಲವೋ? ಅಲ್ಲಿ ತನ್ನ ನಿಲುವನರಿಯದೆ ವಾದಿಸುತಿರಲು ಉರಿಲಿಂಗೋದ್ಭವವಾದ ಉರಿಲಿಂಗದ ನಿಲವೋ? ಆವ ನಿಲವೆಂದರಿಯಬಾರದು ಗುಹೇಶ್ವರನ ಕಂಗಳಿಗೆ ಒಂದಾಶ್ವರ್ಯವ ತೋರಿತ್ತು. ಕಾಣಾ ಸಂಗನ ಬಸವಣ್ಣನೆಂದು ಮರುಳು ಶಂಕರ ದೇವರ ಮಹಾ ಪ್ರಸಾದಿಯಾದ ತೆರೆಹಿಲ್ಲದ ಘನದ ಹಿರಮೆ ಕಂಡು ಪ್ರಭು ಆಶ್ಚರ್ಯವ ಕಂಡೆನೆಂದು ಕೊಡಾಡುತ್ತಿದ್ದಾನೆ ಮಹಾಕಾಶದ ಮರೆಯಲ್ಲಿರ್ದ ಶಾಂತಾಕರನ ನಿಲವೊ? ಮರುಳು ಶಂಕರ ದೇವರ ಮಹಾನುಭವ ಆವ ನಿಲುವೆಂದರಿಯ ಬಾರದು ಆ ಮಹಿಮನು ಅನುಪಮನೆಂದು ಕೊಂಡಾಡಿದ್ದಾನೆ.

67

ಕರಸ್ಥಲದ ಲಿಂಗ, ಮನಸ್ಥಲಕ್ಕೆ ವೇದ್ಯವಾಗಿ,
ಮನಸ್ಥಲದ ಲಿಂಗ ವೆನ್ನ ಸರ್ವಾಂಗದಲ್ಲಿ ವೇದ್ಯವಾದ ಬಳಿಕ,
ಇನ್ನು ಭಿನ್ನ ಭಾವಕ್ಕೆ ತೆರಹುಂಟೆ? ಗುಹೇಶ್ವರ ಲಿಂಗವ ಬೆರಸಿ,
ಸಮರಸ ವಾದ ಬಳಿಕ ಎರಡೆಂಬುದಿಲ್ಲ ನೋಡಾ ಚನ್ನಬಸವಣ್ಣ. **॥ 368 ॥**

ತಾತ್ಪರ್ಯ : ಕರ ಸ್ಥಲದ ಲಿಂಗ ಮನಸ್ಥಲಕ್ಕೆ ವೇದ್ಯವಾಗಿ : ಕರಸ್ಥಲ ,ಕರಸ್ಥಲ ಎನ್ನುವರು ಕರಸ್ಥಲದ ನಿಜವರಿತವರು ವಿರಳ. ಕರಸ್ಥಲದ ಲಿಂಗ ವೆನ್ನುವರು, ಈ ಲಿಂಗವರಿತವರು ವಿರಳ. ಬಾಹ್ಯದೃಷ್ಠಿ ಯುಳ್ಳವರಿಗಿದು ಮೀರಿದ ಘನ ವಾಗಿದೆ. ಏಕೆಂದರೆ ಇವರಿಗೆ ಕರ ಕಮಲವೆ ಕರಸ್ಥಲವಾಗಿದೆ. ಕರಕಮಲದಲ್ಲಿ ಬೆಳಗುವ ಇಷ್ಟಲಿಂಗವೆ ಕರಸ್ಥಲದ ಲಿಂಗವಾಗಿದೆ.

ಲಿಂಗಾರ್ಚಕರ ದೃಷ್ಠಿಗೂ ಲಿಂಗೈಕ್ಯರೆನಿಸಿಹ ಶರಣರ ದೃಷ್ಠಿಗೂ ಬೆಳಕು ಕತ್ತಲೆಗೆ ಇರುವಷ್ಟು ವ್ಯತ್ಯಾಸವು ಕರಸ್ಥಲವೆಂದರೆ ಇವರು ತಿಳಿದುದು ಬಾಹ್ಯದ ಕೈಗಳೆ ಕರಗಳೆಂದು ತಿಳಿದುದು ಶರಣರು ತಿಳಿದ ಪರಿ ಬೇರೆ.

ಶರಣರ ದೃಷ್ಠಿ ದಿವ್ಯದೃಷ್ಠಿ, ಲಿಂಗಾರ್ಚಕರ ದೃಷ್ಠಿ ಲೋಕದ ದೃಷ್ಠಿ, ಜಡದೃಷ್ಠಿ ಅನಾತ್ಮ ದೃಷ್ಠಿ, ಘನ ಶರಣರ ದೃಷ್ಠಿ, ಅರುವಿಂಗರುವಾಗಿಹ ದೃಷ್ಠಿ. ಅವರು ಕರಸ್ಥಲವೆಂದರೆ ಸದ್ಭಾವ ಹಸ್ತ ಕರಸ್ಥಲ ಲಿಂಗವೆಂದರೆ ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗ ಅದುವೆ ವೇದ ವೇದಾಂತಗಳಿಗೆ ಅಸಾಧ್ಯವಾದ ಅನುಪಮ ಲಿಂಗ ತಂದು ಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ ಎಂದು ಬಸವರಾಜ ದೇವರು ಬಿತ್ತರಿಸಿದುದು ನೋಡುವುಡೆ ಸದ್ಗುರು ಕೃಪೆಯಿಂದ ಲಭ್ಯವಾದ ಲಿಂಗ ಇದು ಅನುಭಾವದಗಮ್ಯವು, ಅರುವಿನ ವಿಶ್ರಾಮವು ನಿಜದ ನಿಲವು ಪರಿಣಾಮದ ಮೇರುವೆ ಮನದ ಮಹಿಮನೆ ನಿಮ್ಮ ಸುಳುಹು

ಎತ್ತಲಡಗಿತ್ತು ಎಲೆ ಲಿಂಗವೆ ನಿಮ್ಮ ನಾಮವೆತ್ತ ನಿರ್ನಾಮವಾಯಿತ್ತು. ಪರಮ ಗುರುವೆ ಕೂಡಲ ಚೆನ್ನಸಂಗಯ್ಯ ಉರಿಯುಂಡ ಕರ್ಪುರದಂತಾದೆಯಲ್ಲ ಪ್ರಭುವೆ.

ಈ ಕರ ಸ್ಥಲದ ಲಿಂಗ ದರುವು, ಅದೆಷ್ಟು ವೀರಶೈವರಿಗೆ ಮನಸ್ಥಲಕ್ಕೆ ವೇದ್ಯವಾಗಿರುವದು. ಮನಸ್ಥಲಕ್ಕೆ ವೇದ್ಯವಾದ ಮೇಲೆ ಅಲ್ಲಿ ಮನವೆಂಬ ಸಂಕಲ್ಪ ವಿಕಲ್ಪ ಉಳಿಯಬಹುದೆ ? ಉಪಾಧಿ ಮನವಿರಲಿ ಉಪಾಧಿ ರಹಿತ ಮನವಿರಲಿ, ಇವು ಇದ್ದವುಗಳೆಂಬುದು ಆರ ಹೃದಯದಲ್ಲಿ ದಿಟವಾಗಿವೆ ಅವರಲ್ಲಿ ಕರಸ್ಥಲದ ಲಿಂಗ ಮನಸ್ಥಲಕ್ಕೆ ವೇದ್ಯವಾಗಿಲ್ಲವೆಂದು ತಿಳಿವುದು.

ಕರಸ್ಥಲದ ಲಿಂಗ ಮನಸ್ಥಲಕ್ಕೆ ವೇದ್ಯವಾದುದು ಪ್ರಭು ದೇವರಿಗೆ. ಕರಸ್ಥಲದ ಲಿಂಗ : ಕಲ್ಪಿತ ಪುರುಷನ ಅನುಭಾವಕ್ಕೆ ನಿಲುಕದ ಲಿಂಗ, ಲಿಂಗ ಲಿಂಗ ಎಂದು ಹಲಬುವವರಿಗೆ ನಿಲುಕದ ಲಿಂಗ, ಲಿಂಗವರಿತು ಲಿಂಗವಾಗಿದ್ದವರ ಲಿಂಗ, ಘನ ಲಿಂಗ ವಾದ್ದರಿಂದ ಇದು ಅನುಭಾವದಗಮ್ಯವು ಅಕಲ್ಪಿತ ಘನದರುವೆ ಮನಸ್ಥಲಕ್ಕೆ ವೇದ್ಯವಾದುದೆ ಕರಸ್ಥಲದ ಲಿಂಗ ನುಡಿಗೂ ನಡೆಗೂ ಮಿಕ್ಕಿ ಮೀರಿ ನಿಂತು ತಾನೆ ತಾನಾಗಿ ಪ್ರಜ್ವಲಿಸುವುದು, ಅದು ಕರಸ್ಥಲದ ಲಿಂಗ. ಆ ಲಿಂಗವೆ ಮನಸ್ಥಲಕ್ಕೆ ವೇದ್ಯವಾದ ಚಿನ್ಹ ಕರಸ್ಥಲ ಲಿಂಗವರಿತು ಮನವು ಅರುವಿನ ವಿಶ್ರಾಮದಲ್ಲಿ ನೆಲೆ ನಿವಾಸ ವಾಗಿಹುದು, ಅದು ಮನಸ್ಥಲಕ್ಕೆ ವೇದ್ಯವಾದ ಚಿನ್ಹ. ಆವಾವ ಭವಕ್ಕೂ ಇಂಬುಗೊಡದೆ ಅರಿಯದರುವು ಪ್ರಜ್ವಲಿಸಿಹುದು ಕರಸ್ಥಲದ ಲಿಂಗ ಮನಸ್ಥಲಕ್ಕೆ ವೇದ್ಯವಾದ ಚಿನ್ಹ, ಕರಸ್ಥಲ ಲಿಂಗ ಅರಿಯ ಹೋದವರು ಅರಿಯದರುವು ಆದುದು ಮನಸ್ಥಲಕ್ಕೆ ವೇದ್ಯವಾದುದು. ಇಲ್ಲಿ ತಾನೆಂಬ ತೋರಿಕೆ ಹುಟ್ಟದ್ದರಿಂದ ಇದು ಅರಿಯದರುವು ಆದುದು ಇಲಿ ಕೇವಲ ನಿಶ್ಚಿಂತತ್ವವು ನಿವಾಸವಾಗಿಹುದು, ಇದು ಕಾರಣ ಮನಸ್ಥಲದ ಲಿಂಗವೆನ್ನ ಸರ್ವಾಂಗದಲ್ಲಿ ವೇದ್ಯವಾದ ಬಳಿಕ ಭಿನ್ನಭಾವಕ್ಕೆ ತೆರಹುಂಟೆ?

ಮನಸ್ಥಲದ ಲಿಂಗವದು, ಮನಸ್ಥಲಕ್ಕೆ ಬೆಳಗುವ ಬೆಳಗುಳ್ಳ ಬೆಳಗು, ಮನಸ್ಥಲ ವದು ಮನ ವೆನ್ನದಸ್ಥಲ, ಸಂಕಲ್ಪ ಕಟ್ಟ ಸ್ಥಲ ಅದು ಸುಮನ ಸ್ಥಲ ಘನ ಲಿಂಗವು ಬೆಳಗುವ ಬೆಳಕು ಏನೆಂದೆನಲಿಲ್ಲದ ಅರುವೆ ಪ್ರಜ್ವಲಿಸುವ ಪ್ರಭುವೆ ಏನೆಂದುಸರಲು ಎಡೆಗೊಡದ ಘನಕ್ಕೆ ಘನವಾದ ಪ್ರಭೆ. ಅದು ಘನಕ್ಕೆ ಘನ ವೆನ್ನಲಿಲ್ಲ ಅದು ನಿಃಶಬ್ಧ ಬ್ರಹ್ಮದ ನಿಲುವುಳ್ಳ ನಿಲವು, ಅದು ಉದಯಾಸ್ತವೆನ್ನದೆ ಬೆಳಗುವ ಬೆಳಗು, ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವಾಗಿಹ ಶಬ್ಧ ಮುಗ್ಧ, ಇದು ಶಬ್ಧ ಸಂಭ್ರಮದವರಿಗೂ ಕಾಣದ ಘನ. ಏಕೆಂದರೆ ವೇದ ವೇದಾಂತಗಳಿಗೆ ಅಸಾಧ್ಯವಾಗಿಹ ಅನುಪಮ ಲಿಂಗ, ಇದು ಲಿಂಗವರಿತವರ ಇರುವು ಅರುವು, ಇದು ಮನಸ್ಥಲದ ಲಿಂಗ, ಸರ್ವಾಂಗದಲ್ಲಿ ವೇದ್ಯವಾದ ಬಳಿಕ ಇನ್ನು ಭಿನ್ನಭಾವಕ್ಕೆ ತೆರೆಹುಂಟೆ?

ಮನಸ್ಥಲದ ಲಿಂಗ, ಅರಿದರಿದು ನೋಡುವುಡೆ ಸರ್ವಾಂಗದಲ್ಲಿ ಅದು ತಾನೆ ಪ್ರಜ್ವಲಿಸುವದು ತನ್ನಿಂದ ತನಗೆ ವೇದ್ಯವಾಗಬೇಕು, ಆಗ ಭಿನ್ನ ಭಾವಕ್ಕೆ ಎಡೆ ಇರದು. ಏಕೆಂದರೆ ಲಿಂಗಮಯವು ಲಿಂಗವು ಲಿಂಗದ ವಿನಹ ಆವಾವ ಭಾವಕ್ಕಿಂಬು ಇರದು ,ಲಿಂಗವರಿಯದ್ದರಿಂದ ಅರುವ ಅರಿಯ ಹೇಳಿದ. ಲಿಂಗ ವರಿಯದ್ದರಿಂದ ಅದು ಅನುಪಮ ಲಿಂಗವಾಗಲಿಲ್ಲ, ನಾದ ಬಿಂದು ಕಳೆಗಳಿಗಭೇದ್ಯವಾದ ಅಚಲಿತ ಲಿಂಗವಾಗಲಿಲ್ಲ, ವಾಙ್ಮನಕ್ಕೆ ಬಾರದ ಅಖಂಡಿತ ಲಿಂಗವಾಗಲಿಲ್ಲ ಅದು ಸದ್ಗುರು ಕೃಪೆಯಿಂದ ಲಭ್ಯವಾದ ಕರಸ್ಥಲದ ಲಿಂಗ ಅರಿಯಹೋಗಿ ಮನಸ್ಥಲಕ್ಕೆ ವೇದ್ಯವಾಯಿತ್ತು ಮನಸ್ಥಲದ ಲಿಂಗ ಅರಿದರಿದು ನೋಡುವುಡೆ ಅಚಲಿತ ಲಿಂಗವಾಗಿ ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವಾಗಿ ಸರ್ವಾಂಗದಲ್ಲಿ ವೇದ್ಯವಾದಾಗ ಅನುಪಮ ಲಿಂಗದ ವಿನಃ ಭಿನ್ನ ಭಾವಕ್ಕಿಂಬಿಲ್ಲವೆಂದು ಹೇಳಿದ್ದಾರೆ.

ಅಖಂಡಿತ ಲಿಂಗ ಬಿಡಿ ಬಿಡಿ ಲಿಂಗ ವಾಗದ್ದರಿಂದ ಸರ್ವಾಂಗವೆಂಬುದು ಲಿಂಗಮಯವು ಲಿಂಗವೆಂಬುದು ಶಬ್ಧ ಮುಗ್ಧವು ಮೌನ ಮುದ್ರಿತವು. ವಿವರಿಸಿ ನೋಡುವುಡೆ ಸರ್ವಾಂಗಗಳು ಮೌನ ಮುದ್ರಿತವು. ಶಬ್ಧ ಮುಗ್ಧುವುಳ್ಳ ವದುದರಿಂದ ಇದು ಸರ್ವಾಂಗದಲ್ಲಿ ವೇದ್ಯವಾದ ಚಿನ್ಹ.

ಗುಹೇಶ್ವರ ಲಿಂಗ ಬೆರಸಿ ಸಮರಸವಾದ ಬಳಿಕ ಎರಡೆಂಬುದಿಲ್ಲ ನೋಡಾ ಚನ್ನ ಬಸವಣ್ಣ : ಆರು ಗುಹೇಶ್ವರ ಲಿಂಗ ವೆಂಬ ಮಹಾ ಘನ ವರಿತು ಸಮರಸವಾದ ಬಳಿಕ ಅಂಗವೆಂಬುದಿಲ್ಲ ಲಿಂಗವೆಂಬುದಿಲ್ಲ ಮರುವೆಂಬುದಿಲ್ಲ ಅರುವೆಂಬುದಿಲ್ಲ ಕಲ್ಪಿತವೆಂಬುದಿಲ್ಲ ಅಕಲ್ಪಿತವೆಂಬುದಿಲ್ಲ ಅರಿತೆ ನೆನಲಿಲ್ಲ ಅರಿಯೆ ನೆನಲಿಲ್ಲ ನಾನೆನಲಿಲ್ಲ ನೀನೆನಲಿಲ್ಲ ಅರಿತುದಿಲ್ಲ ಅರಿಯದುದಿಲ್ಲ ಗುಹೇಶ್ವರ ಲಿಂಗವದು, ಏನೆಂದೆನಲು ಇಂಬು ಗೊಡದ ಘನ ಲಿಂಗ. ಅದು ತಾನೆ ತಾನಾಗಿಹ ಸ್ವಯಂಜ್ಯೋತಿ ಅದು ಸ್ವಯಂ ಜ್ಯೋತಿ ಎನ್ನದ ಜ್ಯೋತಿ ಅದು ಅರಿಯ ಹೋದವರ ಇರುವುಳ್ಳ ಅರುವು ತಾನೆ.

ಗುಹೇಶ್ವರ ಲಿಂಗವೆಂಬುದು, ನಿಃಶಬ್ದ ಘನ ಲಿಂಗ, ಇದು ನಿಃಶಬ್ಧಘನವಾಗಿ ಅರಿವುಡೆ ತಾನೆ ಗುಹೇಶ್ವರ ಲಿಂಗ ಬೆರಸಿ ಸಮರಸವಾದಂತೆ, ಅಲ್ಲಿ ಎರಡೆಂಬುದಿಲ್ಲ ನೋಡಾ ಚನ್ನಬಸವಣ್ಣ ಎಂದು ಪ್ರಭುದೇವರು ಹೇಳಿದುದು.

68

ಕೂಡಲಿಲ್ಲದ, ಅಗಲಲಿಲ್ಲದ ಘನವ ಕೂಡುವ ಪರಿ ಎಂತವ್ವಾ!
ಗುಹೇಶ್ವರ ಲಿಂಗವ ಬೇರೆ ಮಾಡಿ ಬೆರಸಬಾರದು ಕೇಳಾ, ಕೆಳದಿ. ॥ 1120 ॥

ತಾತ್ಪರ್ಯ : ಕೂಡಲಿಲ್ಲದ ಅಗಲಲಿಲ್ಲದ ಘನವ ಕೂಡುವ ಪರಿ ಎಂತವ್ವಾ : ಕೂಡ ಲಿಲ್ಲದ ಅಗಲಲಿಲ್ಲದ ಘನವಾವುದು ? ಗಗನವು ಅಖಂಡವು ಅದು ಆವುದರೋಳ್ ಕೂಡಲಿಲ್ಲದುದು, ಮತ್ತು ತನ್ನಿರುವಿಕೆಯಿಂದ ಅಗಲಲಾರದ್ದು. ಗಗನ ದಂಥ ಇನ್ನೊಂದು ಗಗನವು ಇಲ್ಲ. ಗಗನವು ತುಣು ತುಣುಕಾದುದಲ್ಲ ಅದು ಆವುದಕ್ಕೂ ಸಂದು ಕೊಟ್ಟುದಲ್ಲ ಅದು ಭರಿತವು. ತುಂಬಿದುದು ತುಳಕದು ನೋಡಾ, ಆವುದು ಪೂರ್ಣಾತ್ ಪೂರ್ಣವಾಗಿದೆ ಅಖಂಡವಾಗಿದೆ ಅದರ ನಿಲವು ಅನುಪಮವಾಗಿದೆ ಅದು ಇದ್ದಕ್ಕಿದ್ದ ಹಾಗೆ ಅಚಲಿತವಾಗಿದೆ ಅದರೋಳ್ ಕೂಡುವ ಪರಿ ಆವುದು ?

ಗಗನದೋಳ್ ಘಟಾಕಾಶ, ಮಠಾಕಾಶ, ಮೇಘಾಕಾಶವಾಗಿ ಕೂಡಿದುದೆಲ್ಲಿ ? ಹೋದಲ್ಲಿ ಎಲ್ಲಿ ಅದುವೆ ತುಂಬಿದೆ ಮಠದಲ್ಲಿಯೂ ಅದುವೆ ತುಂಬಿದೆ ಮೇಘದಲ್ಲಿಯೂ ಅದುವೆ ತುಂಬಿದೆ. ಇದು ಕಾರಣ ತುಂಬಿದುದು ತುಳಕದು ಎಂದು ಹೇಳಿಹರು. ಗಗನವು, ಘಟಾಕಾಶ ಮಠಾಕಾಶವಾಗಲು ಅದು ಅವಕಾಶ ಕೊಡದ್ದರಿಂದ ಅದಕ್ಕೆ ಆಕಾಶವತ್ ಆಕಾಶವು ಎಂದು ಕರೆಯುವರು. ಗಗನದ ಘನವ ತಿಳಿಯದ್ದರಿಂದ ನಾನಾ ಕಲ್ಪಿತವಾಗಿ ಕಂಡರೂ, ಅದು ಕಲ್ಪನೆಗೆ ನಿಲುಕದೆ ಇದ್ದಂತೆಯೆ ಇದೆ. ಗಗನವು ಮೌನವು, ಅದು ತಾ ಗಗನವೆಂದು ಎಂದೂ ಹೇಳಲಿಲ್ಲ. ತಾ ಅಖಂಡ ಅನಂತ ಅಪಾರ ಅನುಪಮವು ಎಂದು ಅದು ನುಡಿದುದಲ್ಲ. ಶಬ್ಧ ಮುಗ್ಧವಾಗಿ ಹೇಗಿದೆಯೋ ಹಾಗೆ ಕೂಡಲಿಲ್ಲದ ಘನ ಅಗಲಲಿಲ್ಲದ ಘನ ತಾನು ಏನೆಂದುಸರಲಿಲ್ಲದ ಅರುವು, ತಾನು ತನ್ನನ್ನು ಕಲ್ಪಿತ ಪುರುಷನಾಗಿ ಆತ್ಮಾನಾತ್ಮಾ ವಿಚಾರದಿಂದಲೂ ಕೂಡಲಲಿಲ್ಲದ ಘನ, ಅಂಗ ಲಿಂಗ ಬೇರೆಂಬ ವಿಚಾರದಿಂದಲೂ ಕೂಡಲಿಲ್ಲದ ಘನ, ಭೋಗ ತ್ಯಾಗದಿಂದಲೂ ಕೂಡಲಲಿಲ್ಲದ ಘನ ಲಿಂಗಾರ್ಚನೆಯಿಂದಲೂ ಕೂಡಲಿಲ್ಲದ ಘನ, ಲಿಂಗ ವಿಚಾರ ವಂತರಿಗೂ ಕೂಡಲಿಲ್ಲದ ಘನ ವಿರುವಲ್ಲಿ ಅವಿಚಾರದಿಂದ ಕೂಡುವ ಪರಿ ಎಂತು ?

ಅಂಗ ಲಿಂಗ ಒಂದೆಂಬ ಭಾವಿಕರಿಗೂ ಕೂಡಲಿಲ್ಲದ ಘನ ಇದು ಹೀಗೆಯೆ ಎಂದು ತಿಳಿಸಲು

ಬಾರದ ಅಕಥನೀಯ ಘನವಾದುದರಿಂದ ಅದು ಕೂಡಲಿಲ್ಲದ ಘನ ಅದರೊಳ್ ನೀ ಕೂಡಿದ ಪರಿ ಎಂತು ಅಕ್ಕಾ ನೀನು ಶರಣಸತಿಯಾಗಿ ಲಿಂಗ ಪತಿಯಮಾಡಿ ಕೂಡ ಹೋದರೂ ಅದು ಕೂಡಲಿಲ್ಲದ ಘನವು ಅಕ್ಕಾ.

ಕೂಡಲಿಲ್ಲದ ಘನಕ್ಕೆ ಶರಣ ಸಂಗತಿ ಅಷ್ಟೆ, ಲಿಂಗ ಸಂಗತಿ ಅಷ್ಟೆ. ನಿಸ್ಸಂಗವದು ಸಂಗದ ಸಂಗತಿಗೆ ನಿಲುಕುವುದೆ? ಕೂಡಲಿಲ್ಲದ ಘನ ಅದು ಆವಾವುದರೊಳ್ ಕೂಡದ ಘನ ಸತ್ತೆವೆಂದರೂ ಅಸತ್ಯವೆಂದರೂ ಕೂಡದ ಘನ, ವಿಚಾರವಂತರಿಗೂ ನಿಲುಕದ ಘನ ಅವಿಚಾರ ವಂತರಿಗೂ ನಿಲುಕದ ಘನ ಅಂಗವೆಂದರೂ, ಲಿಂಗ ವೆಂದರೂ ಕೂಡದ ಘನ ಇವೆಲ್ಲವೂ ಕಲ್ಪಿತವು ಶಬ್ದ ಸಂಭ್ರಮಕ್ಕೆ ನಿಲುಕದ ಘನವು ಕೂಡಲಿಲ್ಲದ ಘನವು ತಾನು, ತಾನು ಆವಾವುದರೊಳ್ ಕೂಡದ ಘನ ತನ್ನಿರುವಿಕೆಯಿಂದ ಅಗಲಲಿಲ್ಲದ ಘನ ಅದರೊಳ್ ನೀ ಬೇರು ಮಾಡಿ ಕೂಡುವ ಪರಿ ಎಂತು? ಕೂಡಲಿಲ್ಲದ ಘನವದು ಏಕ, ಏವ ಅದ್ವಿತೀಯವು ಎಂಬ ಶೃತಿಗೂ ನಿಲುಕದ ಘನ, ಅಲ್ಲಿ ಅವಿಚಾರ ವಿಚಾರದ ಮುಕ್ತಾಯವು ಅದು ಕಲ್ಪಿತವಾಗಿಲ್ಲ. ಅಲ್ಲಿ ಒಂದೆಂಬ ವಿಚಾರಕ್ಕಿಂಬಿಲ್ಲ ಎರಡೆಂಬ ಅವಿಚಾರಕ್ಕಿಂಬಿಲ್ಲ ಮಾಯೆ ಇಲ್ಲ ಮಾಟವು ಇಲ್ಲ ಕಾರ್ಯವು ಇಲ್ಲ ಕಾರಣವು ಇಲ್ಲ ಇಲ್ಲವೆಂಬುದು ಇಲ್ಲವಾಗಿರುವಲ್ಲಿ ಅದನೆಂತು ವರ್ಣಿಸುವದು.

ಇದ್ದುದು,ಅಂದು ಇಂದು ಎಂದೆಂದೂ ಇದ್ದಂತಿದ್ದುದು, ಅದರೊಳ್ ಇಲ್ಲದುದು ಇದ್ದಂತಾಗಿ ಇದ್ದದರೊಳ್ ಮೊದಲು ಶರಣಸತಿ ಬೇರಾಗಿ ಹಿಂದಿನಿಂದ ಲಿಂಗವೆಂಬ ಪತಿಯೊಳ್ ಒಂದಾದ ಪರಿ ಎಂತು?

ದೇವ ದೇವ ಘನಕ್ಕೆ ಘನ ಅಕ್ರಿಯೆ ಅದು ಕ್ರಿಯೆದಿಂದುಕ್ತವೆ? ಇಲ್ಲಿ ಸಂಗವೆಂಬುದಕ್ಕಿಂಬಿಲ್ಲ ನಿಸ್ಸಂಗವೆಂಬುದಕ್ಕಿಂಬಿಲ್ಲ. ಪರವಿಲ್ಲ ಸಂಧಿ ಇಲ್ಲ ಏನೇನೂ ಇಲ್ಲ ಅರಸಲಿಲ್ಲ ಅರಿಯಲಿಲ್ಲ, ಅರಿಯದರುವು ತಾನಾಗಿಹ ಘನಕ್ಕೆ ಘನ, ಅದು ಆವುದರೊಳ್ ಕೂಡದ ಘನ ಅದರೊಳ್ ನೀ ಕೂಡಿದ ಪರಿ ಎಂತವ್ವಾ.

ಕೂಡಲಿಲ್ಲದ ಘನ, ಅದು ತನಗಿಂತ ಬೇರಾದುದಲ್ಲ. ಅದು ಆವಾವುದರೊಳ್ ಬೆರೆಯದ ಘನ ತಾನೇ ತಾನು. ಅಲ್ಲಿ ಆವಾವ ಭಾವಕ್ಕಿಂಬಿಲ್ಲ ಕಲ್ಪನೆಗಿಂಬಿಲ್ಲ ಕೂಡಲಿಲ್ಲದ ಘನವು ತನಗಿಂತ ಭಿನ್ನವೆನ್ನಲು ಬರದು ಅದನ್ನು ನೀ ಬೇರುಮಾಡಿ ಬೆರೆಸುವ ಪರಿ ಎಂತು ಹೇಳಾ ಕೆಳದಿ.

ಕೂಡಲಿಲ್ಲದ ಘನ, ಅಗಲಲಿಲ್ಲದ ಘನವದು ಅವರ್ಣೀಯವು. ಅದು ಸತ್ಯವೆಂಬ ವರ್ಣನೆಗೂ ನಿಲುಕದ್ದದು. ಅಸತ್ಯವೆಂಬ ವರ್ಣನೆಗೆ ನಿಲುಕದ್ದದು, ಖಂಡ ಅಖಂಡವೆಂಬ ಭಾವಕ್ಕೆ ನಿಲುಕದ್ದದು ಚಿಚ್ಛಕ್ತಿಚಿದಾಭಾಸವವೆಂಬ ವಿಭಾಗ ದೃಷ್ಠಿಗೂ ದೂರವು. ಬಂಧ ಮೋಕ್ಷಗಳ ವಿಚಾರಕ್ಕೂ ಮೀರಿದುದು.

ಅವರ್ಣೀಯವು ವರ್ಣಿಸುವದದೆಂತು ? ನುಡಿಗೆಡೆಗೊಡದ ಘನ. ನಡೆಗೆಡೆಗೊಡದ ಘನವು ಇದ್ದಂತಿದ್ದ ಘನ ಆವುದರೊಳ್ ಕೂಡಲಿಲ್ಲದ ಘನ, ನೀ ಕೂಡಿದ ಪರಿ ಎಂತವ್ವಾ ? ನಿರಾಲಂಬವ ಆವುದರೊಳ್ ಕೂಡಲಿಲ್ಲದ ಘನ ಅದರ ಇರುವು ಕೂಡಲಿಲ್ಲದ ಅಗಲಲಿಲ್ಲದ ಘನ ವಿರುವಲಲ್ಲಿ ಆಸ್ತಿಕನಾಗಿ ಬಂದು ಕೂಡಿಹೆನೆಂದರೂ ಕೂಡದ ಘನ ಸರ್ವಸಂಗ ಪರಿತ್ಯಾಗಿಯಾಗಿ ಕೂಡಿಹೆನೆಂದರೂ ಕೂಡದ ಘನ ಏಕೆಂದರೆ ಅದು ಅನಾಮಯ ವಾಗಿರುವ ನಿರ್ವಾಣ, ಅದರ ಸ್ವರೂಪ ವಿರುವಲ್ಲಿ ನೀನು ಸಂವಾದ ಮಾಡಿ ಕೂಡಿಹೆನೆಂದರು ಕೂಡದೆ ಇರುವಾಗ ತರ್ಕ ಮಾಡಿ ಆವಾಗ ಕೂಡುವುದು? ಅಚಿಂತ್ಯ ಘನವು ಅಂಗನಾಗಿ ಚಿಂತನ ಮಾಡಿದರೂ ಕೂಡದ ಘನ ಲಿಂಗ

ಚಿಂತನ ಮಾಡಿ ಕೂಡಿಹೆನೆಂದರೂ ಕೂಡದ ಘನ ಲಿಂಗಾಂಗ ಸಮರಸ ಮಾಡಿ ಕೂಡಿಹೆನೆಂದರೂ ಕೂಡಲಿಲ್ಲದ ಘನ, ಅರಿದರಿದು ನೋಡುವುಡೆ ಅದು ತನ್ನಿಂದ ಅಗಲಲಿಲ್ಲದ ಘನ ನೀ ಬೇರು ಮಾಡಿ ಕೂಡಿದ ಪರಿ ಎಂತವ್ವಾ.

ಅಚಿಂತ್ಯ ಘನವು ಚಿಂತನಕ್ಕೊಳಪಡದು ಭಾವಕ್ಕೊಳಪಡದು ನೆನಹು ನಿರ್ಣಯಕ್ಕೂ ಒಳಪಡದು , ಕರ್ಮಮಾರ್ಗಕ್ಕೂ ಒಳಪಡದು ದೀಪ್ತಿ ಮಾರ್ಗಕ್ಕೂ ಒಳಪಡದು ಅಂದರೆ ಚಿದಹಮ್ಮಿಗೂ ಒಳಪಡದು .

ಖಂಡಿತ ವಿಲ್ಲದ ಅಖಂಡಿತವು ಅಲ್ಲಿ ಕಾಣಿಸಿಕೊಳ್ಳುವ ದೃಶ್ಯವೂ ಇಲ್ಲ. ಕಾಣುವ ದೃಕ್ ಇಲ್ಲ, ಇಲ್ಲ, ಇಲ್ಲವೆಂಬುದು ಇಲ್ಲವೆನ್ನಲು ಇಂಬಿಲ್ಲದರೋಳ್ ನೀ ಬೇರು ಮಾಡಿ ಕೂಡಿದ ಪರಿ ಎಂತವ್ವ. ಹೇಳಿದರದಕ್ಕದೇ ಕೊರತೆ ಕೂಡಲಿಲ್ಲದ ಘನ ಅದು ಗಗನಾಕಾಶ ದಂತೆ ಅಂದು, ಇಂದು, ಎಂದೆಂದೂ ಇದ್ದಂತಿದ್ದ ಜ್ಞಾನಾಮೃತ ಬಯಲಿನಂತೆ ನಿಸ್ಸೀಮವಾದುದು , ಅದನ್ನು ಇನ್ನೊಬ್ಬನಾಗಿ ಕಾಣುವದೆಂತು, ಕೂಡುವುದೆಂತು ಗುಹೇಶ್ವರ ಲಿಂಗದಲ್ಲಿ ಬೇರು ಮಾಡಿ ಅದನ್ನು ನೀ ಕಂಡುದೆಂತು ಕೂಡಿದುದದೆಂತು?

ಪೂರ್ಣವಾದ ಜ್ಞಾನಾಮೃತ ಆಕಾಶದಂತೆ ನಿರಂತರವಾಗಿದೆ . ಅದು ಶುದ್ಧಾಶದ್ದವೆನ್ನುವದಕ್ಕೂ ಮೀರಿದ ಘನ , ನಿರ್ಮಾಯೆ ಘನ , ನಿರಂತರ ಘನ ಅಲ್ಲಿ ಪ್ರಕೃತಿಯೂ ಇಲ್ಲ ಪುರುಷನೂ ಇಲ್ಲ ಪಂಚಭೂತಂಗಳಿಲ್ಲ ಪಂಚತನ್ಮಾತ್ರಗಳಿಲ್ಲ ವಾದ್ದರಿಂದ ಕೆಡಿಸುವ ಮಾಯಿಕವಿಲ್ಲ ಸಜಾತಿ ಇಲ್ಲ ವಿಜಾತಿ ಇಲ್ಲ , ವಿಷಮತ್ವವೂ ಇಲ್ಲ , ಸಮತ್ವವೂ ಇಲ್ಲ ,ವಾಚ್ಯ ವಿಲ್ಲ ಲಕ್ಷ್ಯವಿಲ್ಲ ಏನೇನೂ ಇಲ್ಲವೆಂಬುದಕ್ಕಿಂಬಿಲ್ಲದ ಗುಹೇಶ್ವರ ಲಿಂಗದಲ್ಲಿ ಬೇರು ಮಾಡಿ ಬೆರಸುವ ಪರಿ ಎಂತವ್ವಾ. ಇರುವುದೆಲ್ಲ ಆದಿ ಮಧ್ಯ ಅಂತ್ಯವಾಗದೆ ಇದ್ದಂತಿರುವ ನಿರಂತರವಾಗಿರುವ ನಿರಾತಂಕವಿಲ್ಲದ ಬೆಳಗುವ ಚಿನ್ಮಯ. ಅಲ್ಲಿ ಕೂಡಿದುದು ಇಲ್ಲ ಅಗಲಿದುದಿಲ್ಲ ಅಲ್ಲಿ ಯೋಗವಾವುದು ವಿಯೋಗ ವಾವುದು ? ವಿಭಾಗಕ್ಕಿಂಬಿಲ್ಲದ ಗುಹೇಶ್ವರ ಲಿಂಗದಲ್ಲಿ ನೀ ಬೇರು ಮಾಡಿ ಬೆರಸ ಬಾರದು ಕೇಳಾ ಕೆಳದಿ.

69

ನಾ ಸತ್ತೆನೆಂದು ಹೆಣ ಕೂಗಿದುದುಂಟೆ?
ಬೈಚಿಟ್ಟ ಬಯಕೆ ಕರೆದುದುಂಟೆ?
ಹೆಪ್ಪಿಟ್ಟ ಹಾಲು ಸಿಹಿ ಯಪ್ಪುದೆ?
ಈ ಮಾತು ಒಪ್ಪವಲ್ಲ ಗುಹೇಶ್ವರ ಲಿಂಗಕ್ಕೆ. **|| 1281 ||**

ತಾತ್ಪರ್ಯ : ನಾ ಸತ್ತೆನೆಂದು ಹೆಣ ಕೂಗಿದುದುಂಟೆ : ಎಲೆ ಅವ್ವಾ ಹೆಣವೇನಾದರೂ ನಾ ಸತ್ತೆನೆಂದು ಎಂದಾದರೂ ಕೂಗಿದುದುಂಟೆ ? ಕೂಗಿದಲ್ಲಿ ಅದು ಹೆಣವೆನಸಿಕೊಳ್ಳದು . ಹೆಣ ಕೂಗಿದುದು ಇದು ಆಶ್ಚರ್ಯ ನೋಡಾ , ಹೆಣ ಆವುದು ಗೊತ್ತೆ ? ತಾನಾರೆಂದರಿತ ಮಹಾಂತರಲ್ಲಿ ನಾ ಎಂಬುದು ಸತ್ತುದರಿಂದ ಅವರಲ್ಲಿ ಭಿನ್ನ ದೃಷ್ಟಿ ಸತ್ತಿದೆ. ಭಿನ್ನಜ್ಞಾನ ಸತ್ತಿದೆ. ಓ ಅಕ್ಕ ಚೆನ್ನಮಲ್ಲಿಕಾರ್ಜುನ ನೆಂಬ ಗಂಡನ ಒಳಹೊಕ್ಕು ಬೆರಸಿದವಳಿಗೆ ಷಡೂರ್ಮಿಯಿಲ್ಲ ಷಡ್ರಿಪುಗಳಿಲ್ಲ ನಾನೆಂಬುದಿಲ್ಲ ಏನೆಂಬುದಿಲ್ಲ ಏನೆಂಬುದೇನೂ ಇಲ್ಲದಿಹುದೆ ಚಿದಹಂಕಾರದೈಕ್ಯವಯ್ಯ ಗುಹೇಶ್ವರ.

ಹೆಣಕ್ಕೆ ಷಡೂರ್ಮಿಗಳುಂಟೆ? ಅದಕ್ಕೆ ಕ್ಷುತ್ತು ಪಿಪಾಸೆಗಳುಂಟೆ ? ಶೋಕ, ಮೋಹವುಂಟೆ? ಹೆಣ ಸತ್ತುದು ಮತ್ತೊಮ್ಮೆ ಸಾವುದುಂಟೆ ? ನೀರಿಗೆ ನೀರಡಿಕೆ ಯುಂಟೆ ? ಸತ್ತ ಹೆಣಕ್ಕೆ ಸಾವಿನ

ಅಂಜಿಕೆಯೆ? ಅಲ್ಲಿ ಕಾಮಾದಿ ವೈರಿಗಳುಂಟೆ? ಅಲ್ಲಿ ನಾನೆಂಬುದಿಲ್ಲ ನೀನೆಂಬುದಿಲ್ಲ ಅಹಂಕಾರವಿಲ್ಲ ನಿರಹಂಕಾರ ವಿಲ್ಲ ಅಹುದೆಂಬುದು ಅಲ್ಲವೆಂಬುದು ಇದ್ದವನೆನಲಿಲ್ಲ ಇಲ್ಲದವನೆನಲಿಲ್ಲ, ಇಲ್ಲವೆಂಬುದು ಇಲ್ಲವೆನ್ನಂತಾದುದೆ ಸತ್ತ ಹೆಣದ ಲಕ್ಷಣ ಅದು ದೇಹೋಹಂ ನಷ್ಟವಾದ ಲಕ್ಷಣ. ಆತ್ಮೋಹಂ ಎಂಬುದು ನಿರಸನವಾದ ಲಕ್ಷಣ , ಅಲ್ಲಿ ಉದಯವಾದುದಿಲ್ಲ ಅಸ್ತವಾದುದಿಲ್ಲ ಮರೆತುದಿಲ್ಲ ಅರಿತುದಿಲ್ಲ ಒಳಗೆಂಬುದಿಲ್ಲ ಹೊರಗೆಂಬುದಿಲ್ಲ ದೃಶ್ಯವ ಕಂಡುದಿಲ್ಲ ದೃಕ್ ತಾನಾದುದಿಲ್ಲ ಅಲ್ಲಿ ನೀನು ಒಳಹೊಕ್ಕುದು ಹೇಗೆ ? ಒಳಹೊಕ್ಕು ಬೆರೆಸಿದ ಮೇಲೆ ನೀ ಕಥನ ಮಾಡಿದುದು ಆಶ್ಚರ್ಯ ನೋಡವ್ವಾ .

ನಿಷ್ಕಳಂಕ ನಿತ್ಯ ನಿಜ ಘನ ಅದು ಸೀಮಾತೀತವು . ಅನುಪಮ ಉಪಮಿಸಬಹುದೆ ? ಅವಿಲಕ್ಷ್ಯವು ವಿಲಕ್ಷವುಳ್ಳದ್ದಾಗದು. ನಿಃಶಬ್ಧ ಘನ ಗಂಭೀರವು ಶಬ್ದ ಸಂಭ್ರಮಕ್ಕೆ ನಿಲುಕದು. ನಿರ್ಭಯ ಚೆಲುವುಳ್ಳ ಘನವು ಭಯವುಳ್ಳುದು ಚೆಲುವುಳ್ಳದು ಆಗದು , ಘನವು ಆಗದು . ಅಮರತ್ವವದು ಅಮರವೆ! ಅಲ್ಲಿ ಸಾವಿನ ಕಲ್ಪನೆ ಬರದು. ಸಾವು ಸಯವಲ್ಲ .

ಭಾಗ ತ್ಯಾಗ ಲಕ್ಷಣವಾಗದು ಸ್ವರೂಪ ವಾಗದು ಏಕೆಂದರೆ ಅವಿಲಕ್ಷ್ಯವು ಅಲ್ಲಿ ಖಂಡಾ ಖಂಡ ಸಂಯೋಗವಿಲ್ಲ ವೆಂದಲ್ಲಿ ದೃಶ್ಯವಾವುದು ದೃಕ್ ಆವುದು ಆಸ್ತಿ ಆವುದು ನಾಸ್ತಿ ಆವುದು ನಿಸ್ಸೀಮವು . ಅಲ್ಲಿ ಸೀಮಿತ ದೃಷ್ಠಿ ಸೀಮಿತ ಭಾವಕ್ಕಿಂಬಿಲ್ಲ. ಚೆನ್ನಮಲ್ಲಿಕಾರ್ಜುನ ಲಿಂಗವೆಂಬುದು ಅಲಕ್ಷ್ಯಮದ್ವಯಂ ಶೂನ್ಯ ಮಮೂರ್ತಂ ಪರಮ ವ್ಯಯಮ್ ಅನಾಮ ಮಕುಲ ಶುದ್ಧ ಅಸಾಧ್ಯ, ಶಿವ ಮುಚ್ಯತೆ , ಆದಿ ಮಧ್ಯಾಂತಂ ಶೂನ್ಯಂ ಚ ವ್ಯೂಮಾವೋಮ ವಿವರ್ಜತಂ ಧ್ಯಾನ ಜ್ಞಾನ ದ್ವಯೋರ್ಹೀನಂ ಶೂನ್ಯ ಲಿಂಗ ಮನಾಶ್ರಯಮ್ .

ಅಲಕ್ಷ್ಯವು! ಅಲ್ಲಿ ಲಕ್ಷಣವಾವುದು? ಲಕ್ಷ್ಯವಾವುದು ? ಅಲ್ಲಿ ತಟಸ್ಥ ಲಕ್ಷಣವಾವುದು ಭಾಗ ತ್ಯಾಗ ಲಕ್ಷಣ ವಾವುದು ಸ್ವರೂಪ ಲಕ್ಷಣ ವಾವುದು . ಆವಲ್ಲಿ ಲಕ್ಷಣಗಳ ಸಂಜ್ಞೆ ಇದೆ ಅಲ್ಲಿ ಲಕ್ಷವು ಇದೆ ಅಲಕ್ಷವದು, ಘನಕ್ಕೆ ಘನವು ಅಲ್ಲಿ ಲಕ್ಷಣಗಳಿಗೆ ಘನತ್ವವೆಲ್ಲಿಯದು .

ಅಲಕ್ಷವಾದ ಘನವು ಅದ್ವಯವಾಗಿದೆ, ಅಲ್ಲಿ ಸಂಜ್ಞೆಗಳ ತೋರಿಸುವದೆ ನಿರುಪಯೋಗ ವಾಗಿದೆ. ಅಮೂರ್ತವಾಗಿದೆ ಪರಮ ಅವ್ಯಯವಾಗಿದೆ. ಅದು ಅನಾಮಯ ವಾಗಿರುವ ನಿರ್ವಾಣ ವಾಗಿರುವಲ್ಲಿ, ಸ್ವಗತ ಭೇದ ಸಜಾತಿ ಭೇಧ ವಿಜಾತಿ ಭೇದ ವಿಲ್ಲವಾದ್ದರಿಂದ ಅಕುಲ ವಾಗಿದೆ. ಮರವಿಂಗೆ ಕುಲವುಂಟು ಅರುವಿಂಗೆ ಅರುವಾಗಿಪ್ಪ ಘನಕ್ಕೆ ಅದಾವ ಕುಲವುಂಟು ? ಅದು ಶುದ್ಧಾತಿ ಶುದ್ಧವು, ಅಲ್ಲಿ ಆದಿ ಇಲ್ಲ ಮಧ್ಯವಿಲ್ಲ ಅಂತ್ಯವಿಲ್ಲ. ಅದು ಗಗನದಂತಿದೆ ಇಲ್ಲವೆಂಬುದಕ್ಕೂ ಬೇಕಾಗಿರುವಾಗ ಅದು ಧ್ಯಾನಕ್ಕೆ ಮೀರಿದುದು, ಅದಕ್ಕಾವ ಆಶ್ರಯವೂ ಇಲ್ಲ ಇಂತಪ್ಪ ಸ್ವಮಹಿಮೆಯುಳ್ಳ ಲಿಂಗದ ಒಳಹೊಕ್ಕು ಸಮರಸವಾಗಿ ನೀನು ಕೂಡಿದುದು ಇದು ಆಶ್ಚರ್ಯ ನೋಡಾ .

ಬಯಚಿಟ್ಟ ಬಯಕೆ ಕರೆದುದುಂಟೆ ? ಹೂಳಿಟ್ಟ ಹೆಣ ಆರನ್ನಾದರೂ ಕರೆದುದುಂಟೆ ? ಚೆನ್ನಮಲ್ಲಕಾರ್ಜುನ ರೂಪಿ ಘನ ಲಿಂಗ ಜ್ಞಾನ ಇದು ಬೈಚ್ಚಿಟ್ಟ ಬಯಕೆ ಅಲ್ಲವೆ? ಇದು ನಿನ್ನ ಬೈಚ್ಚಿಟ್ಟ ಬಯಕೆ ಅಲ್ಲವೆ! ಇದು ನಿನ್ನ ಖಂಡಾ ಖಂಡ ಸಂಯೋಗ ವಿಲ್ಲದ ಅಖಂಡಿತ ಜ್ಞಾನ ರೂಪ ನಿಧಾನ, ದ್ವಿಪದ ಕಾಣದ ನಿಧಾನ ವಾಚ್ಯ ಲಕ್ಷ್ಯ ಕಾಣದ ನಿಧಾನ, ಸಂಗ ನಿಸ್ಸಂಗ ಕಾಣದ ನಿಧಾನ ಧ್ಯಾನಾತೀತ ನಿಧಾನ ಭಾವಕ್ಕಿಂಬುಕೊಡದ ನಿಧಾನ, ಶಬ್ಧವೆ ಮೀಸಲುವಾಗಿಹ ನಿಧಾನ ನಿಃಶಬ್ಧ ವೇದಿಗಳ ನಿಧಾನ ಈ ಪರಾತ್ಪರ ಜ್ಞಾನ ರೂಪಿ ನಿಧಾನಕ್ಕೆ ವಿದ್ಯಾ ಅಷ್ಟೆ ಅವಿದ್ಯಾ ಅಷ್ಟೆ ವಿದ್ಯಾವಿದ್ಯೆವಷ್ಟೆ ಅಂಗವೆಂಬುದಷ್ಟೆ ಲಿಂಗವೆಂಬುದಷ್ಟೆ ನಾನೆಂಬುದಷ್ಟೆ ನೀನೆಂಬುದಷ್ಟೆ ಸರ್ವ ಸಮವಾಗಿರುವ ಸತ್ಯ ಜ್ಞಾನಾನಂದ ರೂಪಿ

ನಿದಾನ ಅಗಮ್ಯ ನಿದಾನ ಅಪ್ರಮಾಣ ನಿದಾನ ಅಚಿಂತ್ಯ ನಿದಾನ ಇದು ಕರೆದುದುಂಟೆ?

ಹೆಪ್ಪಿಟ್ಟ ಹಾಲು ಸಿಹಿಯಾದುದುಂಟೆ? ಹೆಪ್ಪಿಟ್ಟ ಹಾಲು ಕೆಡುವುದು ಸಹಜ. ನಿನ್ನ ಮಾತು ಹೆಪ್ಪಿಟ್ಟ ಹಾಲು, ಸಿಹಿ ಎಂದಂತಾಗುವದವ್ವಾ ಅಂಗವೆಂಬ ಭಾವರೂಪಿ ಹಾಲು ಲಿಂಗ ಜ್ಞಾನ ಮುಟ್ಟಿದ ಮೇಲೆ ಅಂಗ ಅನಂಗವಾಯಿತ್ತು ಅದು ಕೆಟ್ಟಿತ್ತು ಮನವೆಂಬ ಸಂಕಲ್ಪ ರೂಪಿ ಹಾಲು ಅರುವೆಂಬ ಜ್ಞಾನವ ಮುಟ್ಟಲು ಅದು ಕೆಟ್ಟಿತ್ತು. ಭಾವವೆಂಬ ಹಾಲು ತೃಪ್ತ ರೂಪ ತೃಪ್ತಿ ಮುಟ್ಟಲು ಅದು ಕೆಟ್ಟಿತ್ತು. ಕೆಟ್ಟ ಅಂಗ ಕೆಟ್ಟ ಮನ ಕೆಟ್ಟ ಭಾವ ಅದು ಪುನಃ ಸಿಹಿಯಾದುದು ಹೇಗವ್ವಾ? ನೀನು ಸಿಹಿಯಾದುದು ಎಂದು ಹೇಳಿದಲ್ಲಿ ಅದು ಒಪ್ಪಿಗೆ ಯಾದುದಲ್ಲ ಸಮ್ಮತವಾದುದಲ್ಲ ಗುಹೇಶ್ವರ ಲಿಂಗಕ್ಕೆ.

ಸತ್ತ ಹೆಣವದು ಸತ್ ಸ್ವರೂಪವರಿತ ಘನವಂತ, ಸತ್ ಎಂಬುದಕ್ಕೂ ಮೀರಿದ ಘನದಿರುವು ಅದನ್ನು ಮಾತಿನ ಮೂಲಕ ವಿವರಿಸುವದಕ್ಕೂ ಆಗುವದಿಲ್ಲ. ವಿವರಿಸಲಿಕ್ಕಾಗದನ್ನು ಸತ್ಯಎಂದು ಕೂಗಿದುದು ಹೇಗೆ? ಇದು ಕಾರಣ ಸತ್ತ ಹೆಣ ಎಂದಾದರೂ ಕೂಗಿದುದುಂಟೆ? ಸತ್ಯ ವರಿತ ಅರುವೆ ಬೈಚಿಟ್ಟ ಬಯಕೆ ಅದು ಅರುವಿಂಗೆ ಅರುವಾಗಿಪ್ಪುದು , ಅದು ಸತ್ಯವೆನಲಿಲ್ಲ ಚಿತ್ ಎನಲಿಲ್ಲ ಶಬ್ದ ಮುಗ್ಧ ನಿಧಿ. ಅದು ಬೈಚ್ಚಿಟ್ಟ ಬಯಕೆ. ಅದು ಕರೆದುದು ಹೇಗೆ? ಭಾವರೂಪಿ ಹಾಲಿಂಗೆ ಭಾವಕ್ಕಗಮ್ಯವಾಗಿಹ ಜ್ಞಾನವು ತಟ್ಟಲು ಶರಣ ಸತಿ ಲಿಂಗ ಪತಿ ಎಂಬ ಭಾವ ಕೆಡುವದು. ಕೆಟ್ಟ ಮೇಲೆ ಪುನಃ ಸಿಹಿಯಾಗದು ಎಂಬುದು ಪ್ರಭುವಿನ ಪರೀಕ್ಷೆಯಾಗಿಹುದು ಎಂದು ಹೇಳಿದುದು.

70

ಕಾಯ ದೊಳಗೆ ಕಾಯವಾಗಿ, ಪ್ರಾಣದೊಳಗೆ ಪ್ರಾಣವಾಗಿ,
ಮನದೊಳಗೆ ಮನವಾಗಿ, ಭಾವದೊಳಗೆ ಭಾವವಾಗಿ,
ಅರುವಿನೊಳಗೆ ಅರುವಿನ ತಿರುಳಾಗಿ, ಮರಹು ಮಾರಡೆ ಇಲ್ಲದೆ,
ನಿಜ ಪದವು ಸಾಧ್ಯವಾದ ಬಳಿಕ
ಆವುದು ಧರ್ಮ ಆವುದು ಕರ್ಮ ಆವುದು ಬೋಧೆ ಆವುದು ಸಂಬಂಧ,
ನಾ ಹೇಳಲಿಲ್ಲ, ನೀ ಕೇಳಲಿಲ್ಲ,
ಅದೇನು ಕಾರಣ ವೆಂದು ಬೆಸಗೊಂಬರೆ, ತೆರೆಹಿಲ್ಲವಾಗಿ
ಗುಹೇಶ್ವರ ಲಿಂಗದಲ್ಲಿ ತೆರೆಮರೆ ಯಾವುದು ಹೇಳಯ್ಯಾ ಬಸವಣ್ಣ? ॥ 1090 ॥

ತಾತ್ಪರ್ಯ : ಕಾಯದೊಳಗೆ ಕಾಯವಾಗಿ: ಕಾಯದೊಳಗೆ ಕಾಯವಾದ ಕಾಯ, ಅದಾವ ಕಾಯ? ಅದು ಅಧಿಷ್ಟಾನವಾದ ಕಾಯ. ನಿರಾಲಂಬ ಕಾಯ. ತನ್ನ ಮಹಿಮೆಯಲ್ಲಿ ತಾನಿದ್ದುದು, ಅದಕ್ಕೆ ದೇಹೋಹಂ ಎನ್ನಲು ಬಾರದು ನಾಹಂ ಎನ್ನಲು ಬರದು ಸೋಹಂ ಎನ್ನಲು ಬರದು ಚಿದಹಮ್ಮುಳ್ಳ ಕಾಯ ಎನ್ನಲು ಬರದು , ಇದು ಕಾರಣ ಕಾಯ ದೊಳಗೆ ಕಾಯ! ಇದಾವ ಕಾಯ? ಇದು ಅನುಪಮ ಕಾಯವಾದುದರಿಂದ ಚಿತ್ಕಾಯ ಎನ್ನಲು ಬರದು. ಏನೆಂದುಸರಲು ಎಡೆಗೊಡದ ಕಾಯ, ಶಬ್ಧ ಮುಗ್ಧ ಕಾಯ ಅಚಿಂತ್ಯ ಕಾಯವೆ ಕಾಯದೊಳಗೆ ಕಾಯವಾಗಿದ್ದು ಪ್ರಾಣದೊಳಗೆ ಪ್ರಾಣವಾಗಿಹ ಇದಾವ ಪ್ರಾಣ? ಪ್ರಾಣದೊಳಗೆ ಪ್ರಾಣವಾದುದು , ಇದು ವಾಯು ವಿಕಾರದ ಪ್ರಾಣವು ಅಲ್ಲ. ಪ್ರಾಣ ನಿರೋಧ ಪ್ರಾಣವು ಅಲ್ಲ , ಕುಂಭಕ ಪ್ರಾಣವು ಅಲ್ಲ, ಪ್ರಪಂಚ ಕ್ರೀಡೆಯುಳ್ಳ ಪ್ರಾಣವು ಅಲ್ಲ ಉಪ ಪ್ರಾಣವು ಅಲ್ಲ ಪಂಚ ಪ್ರಾಣವು ಅಲ್ಲ ಇದು ಮೂಲವೆ ಪ್ರಾಣ ಅಧಿಷ್ಟಾನವೆ ಪ್ರಾಣ ಚೈತನ್ಯವೆ ಪ್ರಾಣ, ಚೈತನ್ಯ ಪ್ರಾಣವದು ಚೈತನ್ಯ ಪ್ರಾಣ ವೆನಲಿಲ್ಲ ಶಬ್ಧ ಮುಗ್ಧ, ಸುಖಾಮೃತವ

ನುಂಡು ಸುಖವಾಗಿಹ ಪ್ರಾಣ ಇದು ಶರಣನ ಪ್ರಾಣ ಪ್ರಾಣಶರಣ ಎರಡೊಂದಾದ ನಿಲವು ಅದನಾರಯ್ಯ ವರ್ಣಿಸುವದು.

ಮನದೊಳಗೆ ಮನವಾಗಿ : ಮನವೆಂಬ ಭಿನ್ನಸ್ಮರಣೆಯ ಕಳೆದ ಮನ, ಸಂಕಲ್ಪವೆಂಬ ಪೂರ್ವಸ್ವಭಾವ ಮರೆತ ಮನ, ಈ ಮನ ಅವಿಚಾರಕ್ಕೆಡೆ ಗೊಡದ ಮನ ವಿಚಾರಕ್ಕೆಡೆಗೊಡದ ಮನ ಪ್ರಪಂಚ ಸತ್ಯವೆಂಬ ಮರವಿಂಗೆಡೆಗೊಡದ ಮನ, ಪ್ರಪಂಚ ಮಿಥ್ಯವೆಂಬ ಅರುವಿಂಗೆಡೆಗೊಡದ ಮನ,ಪರಮಾರ್ಥ ಸತ್ಯ ಮಿಥ್ಯೆ ನಿವೃತ್ತಿ ಗೆಡೆಗೊಡದಮನ ಇದು ನೆನಹು ನಿರ್ಣಯಕ್ಕೆಡೆಗೊಡದ ಮನ, ಇದು ಸೋಹಂ ಎಂಬ ನೆನಹಿಂಗೂ ಮಿಕ್ಕಿ ಮೀರಿ ನಿಂತ ಮನ. ಚಿದಹಮ್ಮಿಗೂ ಮಿಕ್ಕಿ ಮೀರಿ ನಿಂತ ಮನ ಅರಸದ ಮನ ಆರಾಧಿಸದ ಮನ ಅಖಂಡಿತ ಘನ ಪೂರ್ಣ ವಾಗಿಪ್ಪ ಘನ ಮನ, ಇದು ಅಪಾರ. ಆವಾವ ಕಲ್ಪನೆಗೆಡೆಗೊಡದ ಮನವೆ ಮನದೊಳಗೆ ಮನವಾಗಿ ಎಂದು ಹೇಳಿಹರು.

ಭವದೊಳಗೆ ಭಾವವಾಗಿಹ ಭಾವ : ಇದಾವ ಭಾವ ? ಮರವಿನಿಂದುಕ್ತವಾದ ಭ್ರಾಂತಿ ಭಾವವು ಅಲ್ಲ, ಅರುವಿನಿಂದುಕ್ತವಾದ ಚಿದಹಮ್ಮಿನ ಭಾವವೂ ಅಲ್ಲ, ಪ್ರವೃತ್ತಿ ಭಾವವೂ ಅಲ್ಲ ನಿವೃತ್ತಿ ಭಾವವೂ ಅಲ್ಲ. ವ್ಯಷ್ಠಿ ಸಮಷ್ಠಿ ಭಾವವೂ ಅಲ್ಲ. ಅಲ್ಪಜ್ಞ ಭಾವವೂ ಅಲ್ಲ , ಸರ್ವಜ್ಞ ಸರ್ವಾಂತರ್ಯಾಮಿ ಭಾವವೂ ಅಲ್ಲ. ಅಂಶ ಭಾವವೂ ಅಲ್ಲ ಪ್ರತ್ಯಗಾತ್ಮ ತಾನೆಂಬ ಭಾವವೂ ಅಲ್ಲ, ಪರಮಾತ್ಮ ತಾನೆಂಬ ಭಾವವೂ ಅಲ್ಲ ಆವಾವ ಭಾವಕ್ಕು ಸಂದು ಕೊಡದ ಅಖಂಡಿತ ಘನದಿರುವುಳ್ಳ ಭಾವ. ಇದು ಕರ್ಮಿಗಳ ಭಾವವೂ ಅಲ್ಲ. ಸರ್ವಾರ್ಪಣ ಭಾವವೂ ಅಲ್ಲ, ಸಕಲ ಕರ್ಮಿಗಳಿಗೆ ಸಾಕ್ಷಿ ನಾನೆನ್ನುವ ಜ್ಞಾನ ಕಾಂಡಿಗಳ ಪುರುಷಾರ್ಥ ಭಾವವೂ ಅಲ್ಲ. ಇವೆಲ್ಲಕ್ಕೂ ಮೀರಿ ನಿಂದ ಬೆಳಗುಳ್ಳ ಬೆಳಕು ಅದು ತನ್ನಯ ಭಾವ ನಿಜ ಭಾವ, ಭಾವಕ್ಕಗಮ್ಯವಾಗಿಹ ಭಾವ ನಿರ್ಭಾವ, ಭಾವ ನಿಬ್ಬೆರಗುಳ್ಳ ಭಾವ , ಎಲ್ಲೆಲ್ಲೂ ತನ್ನನ್ನೆ ಕಾಣುವ ಭಾವ , ತಾನೆ ಆದ ಭಾವ , ಇದು ಪರಮಾನಂದ ವಾಗಿಹ ಭಾವಾಮೃತ. ಅಖಂಡಿತ ಘನ ದಿರುವುಳ್ಳ ಭಾವ. ಈ ಭಾವಮೃತವೆ ಭರಿತ ಭಾವ, ತುಂಬಿ ತುಳಕದ ಭಾವ. ತನ್ನ ನಂಬಿದ ಭಾವ, ತನ್ನನ್ನೆ ಒಲಿಸಿಕೊಂಡ ಭಾವವೆ ಭಾವದೊಳಗೆ ಭಾವವೆಂದು ಹೇಳಿಹರು.

ಅರುವಿನೊಳಗೆ ಅರುವಿನ ತಿರಳಾಗಿ : ಓಹೋ ! ಅರುವಿನೊಳಗೆ ಅರುವಿನ ತಿರುಳಾಗಿ ಇದೆಂಥ ಘನಕ್ಕೆ ಘನವಾಗಿಹ ತಿರುಳು ! ಅರುವು ಅರುವೆಂದು ಭಾವಿಸುವ ಜಿಜ್ಞಾಸುಗಳು ಸಿಕ್ಕುವರು. ಪ್ರಜ್ಞಾನಂ ಬ್ರಹ್ಮವೆನ್ನುವ ಪ್ರಜ್ಞಾವಂತರು ಸಿಕ್ಕುವರು. ಅರುವರಿತವರು ಸಿಕ್ಕುವರೆ! ಅರುವರಿತವರು ಅರುವಿನೊಳಗೆ ಅರುವಿನ ತಿರುಳಾಗಿಹ ಮಹಾಂತರು ಅದು ನಿಜದ ತಿರುಳು , ತಿಳಿಯ ಬೇಕಾದ ತಿರುಳು ಇದು ತನ್ನದಾದ ತಾನಾದ ತಿರುಳು ತಿಳುವುಡೆ ತಾನೆ ಅರುವಿನೊಳಗಿಹ ಅರುವಿನ ತಿರುಳು. ತಾನೆ ದಿಟ, ತಾನೆ ಪರಮ ಸತ್ಯ .

ಬಹು ಪ್ರಾಜ್ಞರಿಗೆ ಚಿದಹಮ್ಮು ನಷ್ಟವಾಗದ್ದರಿಂದ ಅರುವಿನೊಳಗಿಹ ಅರುವಿನ ತಿರುಳು ಬೆಳಗದ್ದರಿಂದ ಸೀಮಿತ ಜ್ಞಾನಿಗಳು, ಸೀಮಿತರಾದುದರಿಂದ ಅರಿತವರು, ಅರಿಯದವರೆಂದು ವಿಭಾಗ ಮಾಡಿ ಕಾಣುವರು, ಒಂದು ಮಲಿನ ಹೃದಯ ಒಂದು ಶುದ್ಧ ಹೃದಯವಾಗಿ ಕಾಣುತ್ತಾರೆ ಅರುವಿಂಗೆ ಒಡಲುಂಟೆ? ಸಕಲ ಕರಣಂಗಳಿಗೆ ಬೆಳಗುವ ಬೆಳಗುಳ್ಳ ಘನ, ನಿರಂತರ ಬೆಳಗುಳ್ಳ ಬೆಳಕು. ಅದು ಒಡಲಾದುದುಂಟೆ? ಅರುವು ಅರುವು ಎಂಬುವ ಮತಿ ಮಹಾಂತರು ಇವರು ಸತ್ಯರು ನಿತ್ಯರು ಮುಕ್ತರೆಂಬುವವರು ನಿಜವರಿತವರಲ್ಲ.

ನಿಜವರಿತವರು ನಿಜವೆನಲಿಲ್ಲ, ವಾಙ್ಮನೋತೀತವಾದ ನಿಜಪದ, ಅದು ನುಡಿಗೊಳಪಡದು. ನೆನಹು ನಿರ್ಣಯಕ್ಕೊಳಪಡದು , ಗತಿ ಮತಿಗೆ ಮೀರಿದ ಘನ ತನ್ನಿಂದ ತಿಳಿಸಿ ಮಾಯಿಕ ಅರಿವು

ಆಗಿಲ್ಲ, ತಾನೊಂದೆ ಪರಮಸತ್ಯ ಅಖಂಡಿತ ಘನ ಪೂರ್ಣವಪ್ಪರುವೆ ತನ್ನಿರುವೆಂದರಿದು, ಅದು ಅರುವಿನೊಳಗೆ ಅರುವಿನ ತಿರುಳು ಎಂದು ಹೇಳಿಹರು. ಏಕೆಂದರೆ ಅಲ್ಲಿ ಮರಹು ಮಾರಡೆ ಯಿಲ್ಲದೆ ನಿಜ ಪದವು ಸಾಧ್ಯವಾದ ಬಳಿಕ ಆವುದು ಧರ್ಮ ಆವುದು ಕರ್ಮ ಆವುದು ಬೋಧ, ಆವುದು ಸಂಬಂಧ ? ನಾ ಹೇಳಲಿಲ್ಲ, ನೀ ಕೇಳಲಿಲ್ಲ, ಓಹೋ ! ಮರಹು ಮಾರಡೆಯಿಲ್ಲದೆ, ನಿಜಪದ ಸಾಧ್ಯವಾದ ಘನ ನಾರು ವರ್ಣಿಸುವದಯ್ಯಾ.

ಎಲ್ಲಿ ಮರಹು ಇದೆ ಅಲ್ಲಿ ಮಾಯೆಯು ಇದೆ ಅಲ್ಲಿ ವರ್ಣನೆ ಇದೆ. ಏಕೆಂದರೆ ಕಲ್ಪಿತ ಪುರುಷ ತಾನೆಂಬ ಭಾವವುಂಟು. ಅಲ್ಲಿ ಮರಹು ಇದೆ ಮಾಯೆ ಇದೆ ಭಾವಕ್ಕಿಂಬಿಲ್ಲದಿರುವಲ್ಲಿ ಪ್ರವೃತ್ತಿರೂಪ ಪ್ರಪಂಚವೆಂಬ ಮರಹು ಇಲ್ಲ ನಿವೃತ್ತಿ ರೂಪ ಪರಮಾರ್ಥವೆಂಬ ಮಾಯೆಯು ಇಲ್ಲವಾದಲ್ಲಿ ಅದು ನಿಜ ಪದ ಅದು ನಿಜ ಲಿಂಗೈಕ್ಯ; ಉಪಮಿಸಲಿಲ್ಲ ಉಪಮಿಸಲಿಲ್ಲಾಗಿ ರೂಹಿಸಲಿಲ್ಲ. ರೂಹಿಸಲಿಲ್ಲಾಗಿ ಭಾವಿಸಲಿಲ್ಲ ಭಾವಿಸಲಿಲ್ಲಾಗಿ ಅರಿಯಲಿಲ್ಲ ಅರಿಯಲಿಲ್ಲದರುವೆ ತಾನಾಗಿ ಗುಹೇಶ್ವರ ನೆಂಬುದು ಬೇರಿಲ್ಲ. ಅರಿಯಲಿಲ್ಲದರುವೆ ತನ್ನ ನಿಜ ಪದ ವಾಗಿರುವಲ್ಲಿ ಆವುದು ಧರ್ಮ ಗಗನಕ್ಕದಾವ ಧರ್ಮ ಅದಾವ ಕರ್ಮ ಅದಾವ ಬೋಧ ಅದಾವ ಸಂಬಂಧ ಅದಕ್ಕಾಚರವಿಲ್ಲ ಕ್ರಿಯೆ ಇಲ್ಲ ಅದು ಹೇಳಲಿಲ್ಲ ಕೇಳಲಿಲ್ಲ.

ಈ ದೃಷ್ಟಾಂತ ಸಹಜ ವಿದಿತ ವಾಗುವ ದೃಷ್ಟಾಂತ ಗಗನ ತಾನಲ್ಲ ಗಗನ ಸದೃಶವಾಗಿಹ ಅರುವಿಂಗರುವಾಗಿಹ ನಿಃಶಬ್ಧ ಘನ ಘನಕ್ಕೆ ಘನವಾಗಿಹ ತಾನು , ತನ್ನದು ನಿಜವೆನ್ನದ ನಿಜಧಾಮವದು ನಿಜ ಲಿಂಗೈಕ್ಯ, ತನಗಾವ ಧರ್ಮ ? ತನಗಾವ ಕರ್ಮ ? ತನಗಿಂತ ಭಿನ್ನವಾಗಿ ತೋರುವ ಧರ್ಮ ಅದು ಕಲ್ಪಿತ ವರ್ಣಾಶ್ರಮ ನಿಜವಲ್ಲ. ಜಾತಿ ದರ್ಮ ನಿಜವಾಗವು. ಇವು ಕ್ರಿಯೆ ದಿಂದ ಜನ್ಯವಾದವುಗಳು. ತಾನು ಅಕಲ್ಪಿತ ಘನನಾಗಿರುವಲ್ಲಿ ತನಗಾವ ಧರ್ಮ, ತನಗಾವ ಸಂಚಿತ ಕರ್ಮ, ತನಗಾವ ಆಗಾಮಿ ಕರ್ಮ, ತನಗಾವ ಪ್ರಾರಬ್ಧ ಕರ್ಮ, ತಾನು ಸಮಸ್ವರೂಪನಾಗಿರುವಲ್ಲಿ ತನಗಾವ ದ್ವೈತ ಬೋಧ? ತನಗಾವ ಅದ್ವೈತ ಬೋಧ? ದ್ವೈತಾದ್ವೈತ ಸಮ ಸ್ವರೂಪ ನಾಗಿರುವ ತನಗೆ ಅದಾವ ಬೋಧೆ? ಆವುದರ ಸಂಬಂಧ? ನಿರಾಲಂಬಕ್ಕೆ ಆವುದರ ಸಂಗ ಅಲ್ಲಿ ಪ್ರಕೃತಿ ಇಲ್ಲ ಪುರುಷ ಇಲ್ಲ, ಇಲ್ಲವೆಂಬುದು ಇಲ್ಲವಾಗಿಪ್ಪ ಘನಮಹಿಮಂಗೆ ನಾ ಹೇಳಲ್ಲಿಲ್ಲ ನೀ ಕೇಳಲಿಲ್ಲ.

ನಿಃಶಬ್ಧ ಘನ ಗಂಭೀರವು ಮೌನ ವೆಂಬುದರ ಮೌನವು, ಅದು ಮಾತಾಡಿದುದೆಂದು ? ಅದೇನು ಕಾರಣವೆಂದು ಬೆಸಗೊಂಬರೆ ತೆರೆಹಿಲ್ಲವಾಗಿ ಗುಹೇಶ್ವರ ಲಿಂಗದಲ್ಲಿ ತೆರೆಯು ಮರೆವು ಆವುದು ಹೇಳಯ್ಯಾ? ಗುಹೇಶ್ವರ ಲಿಂಗದಲ್ಲಿ ಮುಚ್ಚಿಡುವುದು ಇಲ್ಲ ಬಚ್ಚಿಡುವುದು ಇಲ್ಲ. ಮೂಕನಿಗೆ ಮುಚ್ಚಿಡುವುದು ಆವುದು ಬಚ್ಚಿಡುವುದು ಆವುದು ? ನಿಶಃಬ್ಧ ಘನ ಗಂಭೀರವಾದ ಘನಕ್ಕೆ ವ್ಯಕ್ತವು ಇಲ್ಲ ಅವ್ಯಕ್ತವು ಇಲ್ಲ. ಸ್ಪುಟವಾದುದಿಲ್ಲ, ಗೌಪ್ಯವಾದುದಿಲ್ಲ.

71

ನಾನೆಂಬುದು ಪ್ರಮಾಣ, ನೀನೆಂಬುದು ಪ್ರಮಾಣ,
ಸ್ವಯವೆಂಬುದು ಪ್ರಮಾಣ, ಪರವೆಂಬುದು ಪ್ರಮಾಣ,
ಪ್ರಮಾಣವೆಂಬುದು ಪ್ರಮಾಣ, ಗುಹೇಶ್ವರ ನೆಂಬುದು ಅಪ್ರಮಾಣ. **॥ 1280 ॥**

ತಾತ್ಪರ್ಯ : ನಾನೆಂಬುದು ಪ್ರಮಾಣ , ನೀನೆಂಬುದು ಪ್ರಮ್ಾಣ : ತತ್ವ ವೇತ್ತರು, ತತ್ವದರ್ಶಿಗಳ ಮಾಡಲು ಹಲವು ಬಗೆಯಲ್ಲಿ ಹೇಳಿದ್ದಾರೆ . ಅದನ್ನಾರು ಯಥಾರ್ಥವಾಗಿ

ತಿಳಿಯುತ್ತಾರೆ ಅವರು ಅಪ್ರಮಾಣ ಘನವು, ತನ್ನಿರುವೆಂಬುದು ತನ್ನಿಂದ ತನಗೆ ವಿದಿತ ವಾಗುವದು. ಇಲ್ಲವಾದರೆ ಪ್ರಮಾಣ ವನ್ನೆ ಅಪ್ರಮಾಣವೆಂದು ತಿಳಿದು ಮೋಸ ಹೋಗುತ್ತಾನೆ. ಈ ಮೋಸ (ತಪ್ಪು ತಿಳುವಳಿಕೆ) ಶರಣ ಹೃದಯಕ್ಕೆ ಆಗಬಾರದೆಂದೆ, ಪ್ರಭುದೇವ ಪ್ರಮಾಣ ಅಪ್ರಮಾಣಗಳ ದಿವ್ಯ ದೃಷ್ಠಿಯನ್ನು ಇಲ್ಲಿ ಸಿದ್ಧಮಾಡಿ ಬಿತ್ತರಿಸಿದ್ದಾನೆ.

ನಾನೆಂಬುದು ಪ್ರಮಾಣ; ಇದಾವ ಪ್ರಮಾಣ?

ಅಬೋಧ ಬೋಧೋ ಮಮ ನೈವ ಜಾತೊ ಬೋಧ ಸ್ವರೂಪ ಮಮ ನೈವ ಜಾತಮ್! ನಿರ್ಬೋಧ ಭೋಧಂ ಚ ಕಥಂ ವದಾಮಿ. ಸ್ವರೂಪ ನಿರ್ವಾಣ ಮನಾ ಮಯೋ ಅಹಮ್.

ಮುಂಚೆ ಅಬೋಧವಾಗಿ ಈಗ ಯಾವುದು ಬೋಧವಾಗಿಲ್ಲ ನನ್ನಲ್ಲಿ ಬೋಧ ಸ್ವರೂಪವೂ ಹುಟ್ಟಿಲ್ಲ. ಅದನ್ನು ಹೇಗೆ ಬೋಧ ಅಥವಾ ನಿರ್ಬೋಧ ವೆಂದು ಹೇಳಲಿ? ಅನಾಮಯ ವಾಗಿರುವ ನಿರ್ವಾಣವೆ ನಾನು. ಇದು ನನ್ನ ಸ್ವರೂಪ ವೆಂಬುದು ನಾನೆಂಬುದು ಪ್ರಮಾಣ.

ನೀನೆಂಬುದು ಪ್ರಮಾಣ, ಇದಾವ ಪ್ರಮಾಣ? ಸೋಹಂ ನೀನೆ ಎಲೆ ಅಯ್ಯ ಕೋಹಂ ತತ್ವ ತೂರ್ಯಾರ್ಥವು ನೀನೆ ಅಯ್ಯಾ, ನಾಹಂ ನಾಹಂ ನೀನೆ ಅಯ್ಯಾ ಆನೆಂಬುದೊಂದು ಭ್ರಾಂತುಂಟೆ? ಕಪಿಲ ಸಿದ್ಧ ಮಲ್ಲಿಕಾರ್ಜುನಯ್ಯ. ಗುರುವಿನ ಕೈಯಲ್ಲಿ ನಾನು ಸತ್ತು ಹುಟ್ಟಿದ ಬಳಿಕ ಆನು ನೀನೆಂಬ ಸಂದಳಿದೆ. ಇದು ನೀನೆಂಬುದು ಪ್ರಮಾಣದ ಘನತ್ವ ವ ಇಲ್ಲಿ ಮಂಡಿಸಿದ್ದಾನೆ.

ಪ್ರಮಾಣವೆಂಬುದು ಪ್ರಮಾಣ, ಪ್ರಮಾಣಗಳೆಂಬುವು ಪ್ರಮಾಣ, ನಾನೆಂಬುದು ಪ್ರಮಾಣ ನೀನೆಂಬುದು ಪ್ರಮಾಣ ಇದು ಕಲ್ಪಿತವ ಕೆಡಿಸಿ ಭರಿತ ಭಾವದಿಂದುಕ್ತವಾದುದರಿಂದ ಸೋಹಂ ಎಂಬ ಕಲ್ಪಿತವು ಅಖಂಡಿತ ಘನವಾಗಿದೆ. ಕೋಹಂ ತತ್ವ ತೂರ್ಯಾರ್ಥವು ಅಖಂಡಿತ ಘನವಾಗಿದೆ. ನಾಹಂ ನಾಹಂ ಎಂಬುದು ಅಖಂಡಿತ ಘನವಾಗಿದೆ. ಈ ಅಖಂಡಿತ ಘನವು ಭಾವ ಭರಿತವಾದುದು. ಭಾವಕ್ಕಗಮ್ಯವಾಗಿಹ ತನ್ನಿರುವು ತನಗೆ ವಿದಿತ ವಾಗಬೇಕೆಂದಲ್ಲಿ ಗುರುವಿನ ಕೈಯಲ್ಲಿ ನಾನು ನಷ್ಟವಾಗಿ ಪುನಃ ಹುಟ್ಟಿದ ಬಳಿಕ, ಅಲ್ಲಿ ನಾನೆನಲಿಂಬಿಲ್ಲ ನೀನೆನಲಿಂಬಿಲ್ಲವಾಗಿ ತೆರೆಹಿಲ್ಲದ ಘನದರುವೆ ತನ್ನಿರುವಾಗಿ ಪ್ರಜ್ವಲಿಸುವದು.

ಸ್ವಯವೆಂಬುದು ಪ್ರಮಾಣ: ಇದು ಸ್ವಯದ ಪ್ರಮಾಣ, ಹೊರಗಿದ್ದಾನೆಂಬೆನೆ? ಒಳಗೂ ತಾನೆ ನೋಡಾ, ಒಳಗಿದ್ದಾನೆಂಬನೆ? ಹೊರಗೂ ತಾನೆ ನೋಡಾ. ಒಳ ಹೊರಗು ಸರ್ವಾಂಗ ಸನ್ನಿಹಿತವಾಗಿರ್ದ ಸಮರಸದ ಮಹಿಮನ ತಿಳಿದು ನೋಡಾ ಅಗಲಲಿಲ್ಲದ ಘನವ ನಗಲಿದೆನೆಂಬ ಮಾತು ಶಿವ ಶರಣನ ಮನಕ್ಕೆ ಬಹುದೆ! ಮರಣವಿಲ್ಲದ ಮಹಿಮನ ನಿಲವ ತನ್ನಲ್ಲಿ ನೋಡಿ ಶರಣೆಂಬುದಲ್ಲದೆ ಮರೆಯಬಹುದೆ? ತೆರೆಹಿಲ್ಲದ ನಿಲವು ಕಲಿದೇವರ ದೇವನು ಕರಸ್ಥಲ ದೊಳೈದಾನೆ ಕಾಣಾ ಚೆನ್ನ ಬಸವಣ್ಣ. ಇದು ಸ್ವಯವೆಂಬ ಪ್ರಮಾಣವು ಪರವೆಂಬುದು ಪ್ರಮಾಣ, ಇದು ಶ್ರೇಷ್ಟವಾಗಿಹ ಪ್ರಮಾಣ. ಇದರ ಘನವು ನೋಡಿರೆ? ತೆರೆಹಿಲ್ಲದ ಘನವೆಂಬುದು ಶ್ರೇಷ್ಟ ಪ್ರಮಾಣ, ಇದುವೆ ಪರವೆಂಬುದು ಪ್ರಮಾಣ. ಇದು ಆವಾವುದಕ್ಕೂ ಅವಕಾಶ ಕೊಡದ ಘನವು.

ಕೇವಲಂ ತತ್ವ ನಿರಂತರ ಸರ್ವಕಂ ಯೋಗ ವಿಯೋಗ ಕಥ ವಾಹ ಗರ್ವಮ್.

ಏವಂ ಪರಮ ನಿರಂತರ ಸರ್ವಂ! ಏವಂ ಕಥವಾಹ ಸಾರ ವಿಸಾರಮ್!

ಇರುವುದೆಲ್ಲ ನಿರಂತರವಾಗಿರುವ ಒಂದೆ ತತ್ವ ಅಲ್ಲಿ ಯೋಗ ಅಥವಾ ವಿಯೋಗದ ಗರ್ವವೆಲ್ಲಿ? ಎಲ್ಲವೂ ಪರಮ ನಿರಂತರವಾಗಿದೆ. ಈ ಸ್ಥಿತಿಯಲ್ಲಿ ಸಾರ ಅಥವಾ ಅಸಾರ ಹೇಗೆ ಸಾಧ್ಯ ಇದು ಪರವೆಂಬ ಪ್ರಮಾಣವು.

ನಾನೆಂಬುವ ಪ್ರಮಾಣ: ಅನಾಮಯ ವಾಗಿರುವ ನಿರ್ವಾಣ ನಾನು, ಇದು ನನ್ನ ಸ್ವರೂಪ ವೆಂಬ ಘನದಿದ್ದಿರಲಿ ಇದು ಪ್ರಮಾಣವೆ ಅನಿಸುವುದು.

ನೀನೆಂಬುವ ಪ್ರಮಾಣ ಸ್ವಯವೆಂಬ ಪ್ರಮಾಣ ; ಇವೆರಡು ಭಿನ್ನ ಭಿನ್ನವಾಗಿವೆ . ಇಲ್ಲಿ ನೀನೆಂಬುವ ಪ್ರಮಾಣವನ್ನು ಬಿತ್ತರಿಸಿದೆ. ಮರಳು ತಲೆ ನೀನೆ, ಹುರುಳು ತಲೆ ನೀನೆ, ಶಿವ ನೀನೆ, ಶಕ್ತಿ ನೀನೆ ಎಮ್ಮಕ್ಕನ ಗಂಡ ನೀನೆ , ಭ್ರಾಂತಳಿದು ಭಾವ ನೆಲೆ ಗೊಡಿತ್ತಾಗಿ ಕೂಡಲ ಸಂಗಯ್ಯನೆಂಬುದು ನೀನೆಂಬುವ ಪ್ರಮಾಣ.

ಸ್ವಯವೆಂಬ ಪ್ರಮಾಣ ಗುರುವೆಂದರಿದವನು ತಾನೆ, ಲಿಂಗವರಿದವನು ತಾನೆ, ಜಂಗಮ ವೆಂದರಿದವನು ತಾನೆ , ಪ್ರಸಾದವೆಂದರಿದವನು ತಾನೆ, ಇದು ಸ್ವಯ ತಾನೆಂಬುದು ಪ್ರಮಾಣವಾಗಿಹುದು.

ಇನ್ನು ಪರವೆಂಬುದು ಪ್ರಮಾಣ ವದು ನಿರಂತರವಾಗಿರುವ ಮಂಗಳಮಯ ಪರಮಸತ್ಯ ವೆಂಬುದು, ಪರವೆಂಬ ಪ್ರಮಾಣ. ಇವೆಲ್ಲವು ಶಬ್ಧದಿಂದುಕ್ತವಾದವುಗಳು. ಲಕ್ಷಣದಿಂದುಕ್ತವಾದವುಗಳು ಇವು ತನಗೆ ಇದಿರಾಗಿ ತೋರುವದರಿಂದ ಮಾಯೆ ಯಿಂದುಕ್ತವಾದವುಗಳು. ಮತ್ತು ತನ್ನಿಂದ ತಿಳಿಸತಕ್ಕ ಹೆತ್ತರಿವು ಇದು ಕಾರಣ ತನ್ನಿರುವು ಆಗಲರಿಯವು . ತನ್ನಿರುವು ಎಂಬುದು ಗುಹೇಶ್ವರ , ಈ ಗುಹೇಶ್ವರನೆಂಬುದು ಅಪ್ರಮಾಣ ವೆಂದು ಹೇಳಿಹರು.

ಪ್ರಭುದೇವ ಅಪ್ರಮಾಣವಂತ . ಶೃತಿವಂತರು ಸಿಕ್ಕವರು , ಶೃತಿಗಗೋಚರವಾಗಿಹ ಘನವಂತವರು ಸಿಕ್ಕುವುದು ವಿರಳ. ಶರಣ ಶರಣೆಯರೆಲ್ಲ ನಿಃಶಬ್ಧ ವೇದಿಗಳು . ಶೃತಿಗಳಮೀರಿದ ಅಪ್ರಮಾಣವಂತರು . ಪ್ರಭು ಸಂಚರಿಸಿ ಅಪ್ರಮಾಣವಂತರ ಕಂಡು ನಮೋ ನಮೋ ಎಂದು ಕೊಂಡಾಡಿದ್ದಾನೆ. ಅವರನ್ನು ಭಕ್ತರನ್ನಾಗಿ ಕಾಣಲಿಲ್ಲ, ಜ್ಞಾನ ಕ್ರಿಯೆವುಳ್ಳ ರನ್ನಾಗಿ ಕಾಣಲಿಲ್ಲ.

ವೈರಾಗ್ಯವಂತರನ್ನಾಗಿ ಕಾಣಲಿಲ್ಲ , ಅವರ ಸ್ವಾನುಭವದಿಂದ ಅವರ ನಿಃಶಬ್ದ ಘನದಿರುವ ತಿಳಿದು ಅವರಿಗೆ ನಮೋ ನಮೋ ಎಂದು ಕೊಂಡಾಡಿದ . ಅವರನ್ನು ಅಪ್ಪಿಕೊಂಡ ತನ್ನದಾದ ದೇವ ದೇವ ಎಂದುಕೊಂಡ! ಇದು ಕಾರಣ ಪೂರ್ವಿಕ ಶರಣ ಶರಣೆಯರು ಅಪೂರ್ವಿಕರು . ಈಗಿನವರು ಪೂರ್ವಿಕರು . ಪೂರ್ವಿಕರೆತ್ತ , ಅಪೂರ್ವಿಕರೆತ್ತ ? ಶಬ್ದ ಸಂಭ್ರಮದವರು, ಪೂರ್ವಿಕರು, ನಿಶಬ್ದವೇದಿಗಳು ಅಪೂರ್ವಿಕರು ಇವರು ಅಂದು ಇದ್ದವರು ಇಂದು ಇದ್ದವರು ಎಂದೆಂದೂ ಇದ್ದ ಅಬಾಧಿತ ತತ್ತ್ವವೇತ್ತರು ನುಡಿದು ನಿಃಶಬ್ದರು ನಡೆದು ನಿರ್ಗಮನಿಗಳು ಅವರ ಕಾರುಣ್ಯ ಜ್ಯೋತಿರ್ಲಿಂಗ ಇದು ಕಾರಣ ನಿಸ್ಸೀಮರು , ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದ ಮಹಾಂತರು ಅನುಪಮರು ಅಚ್ಚಸುಖಿಗಳು . ಪ್ರಮಾಣಂಗಳ ಹಂಗಿಲ್ಲದವರು ಅವರು ಶೃತಿಗಳ ಬೆನ್ನು ಹತ್ತಿದವರು ಲಿಂಗವರಿತು ಲಿಂಗರಾಗಿಹ ಶಬ್ದಮುಗ್ಧರು , ನಿಜೈಕ್ಯರಾದುದರಿಂದ ಗುಹೇಶ್ವರ ಅಪ್ರಮಾಣವೆಂದು ಹೇಳಿದ್ದಾರೆ.

72

ಸರ್ವಶೂನ್ಯ ಆದಿ, ಅನಾದಿ ಭಕ್ತಸ್ಥಲ, ನಾದ ಬಿಂದು ಮಹೇಶ್ವರ ಸ್ಥಲ, ಕಳೆಬೆಳಗು
ಪ್ರಸಾದಿ ಸ್ಥಲ, ಅರಿವು ನಿರವಯ ಪ್ರಾಣಲಿಂಗ ಸ್ಥಲ,
ಜ್ಞಾನ ಸುಜ್ಞಾನ ಶರಣ ಸ್ಥಲ
ಭಾವವಿಲ್ಲದ ಬಯಲು, ಬಯಲಿಲ್ಲದ ಭಾವ, ಅಗಮ್ಯದ ಐಕ್ಯ ಸ್ಥಲ,

ಇಂತೀ ಷಡುಸ್ಥಲದ ಕೊರಡ ಮೆಟ್ಟಿ ನಿಂದವಗೆ
ಹೆಸರಿಲ್ಲ ಕರುಹಿಲ್ಲ ತನಗೆ ತಾನಿಲ್ಲ ಗುಹೇಶ್ವರಾ. ॥ 1552 ॥

ತಾತ್ಪರ್ಯ: ಸರ್ವಶೂನ್ಯ ಆದಿ ಅನಾದಿ ಭಕ್ತಸ್ಥಲ : ಸರ್ವಶೂನ್ಯ ? ಸಕಲ ನಾಮ ಶೂನ್ಯ. ಸಕಲ ರೂಪಂಗಳು ಶೂನ್ಯ, ಪ್ರವೃತ್ತಿ ಶೂನ್ಯ, ನಿವೃತ್ತಿ ಶೂನ್ಯ, ಸಕಲ ತೋರಿಕೆ ಶೂನ್ಯ, ಬಂಧ ಶೂನ್ಯ, ಮೋಕ್ಷ ಶೂನ್ಯ, ಬೋಧ ಶೂನ್ಯ, ಅಬೋಧ ಶೂನ್ಯ, ಬೋಧಾ ಬೋಧ ಶೂನ್ಯ, ರೂಪ ನಿರೂಪವಾಗಿ ಕಂಡುದು , ನಾಮ ನಿರ್ನಾಮವಾಗಿ ಕಂಡುದು . ನಿರೂಪವದು ನಿರಂತರವಾಗಿಹ ಘನವು ಅದು ಆದಿ. ಶಬ್ದವೆ ನಿಶಬ್ದ ಘನವಾಗಿ ಕಂಡುದು ಅದು ಅನಾದಿ. ಇದು ಕಾರಣ ಆದಿ ಎನಲಿಲ್ಲ ಅನಾದಿ ಎನಲಿಲ್ಲ ಏನೇನೂ ಏನಲಿಲ್ಲದ ಇದ್ದ ನಿಲವು ಭಕ್ತಸ್ಥಲ . ಕೂಡದಗಲದಂತಾದುದೆ ಭಕ್ತಸ್ಥಲ ಲಿಂಗವರಿಯ ಹೋಗಿ ತಾನು ಕೂಡದಗಲದ ಘನನಾಗಿಹುದೆ ಭಕ್ತಸ್ಥಲ, ಲಿಂಗವದು ಅದ್ವೈತ ಶಿಶು , ಶಿಶು ನುಡಿದುದುಂಟೆ? ನುಡಿಗೆಡೆಗೊಡದ ಘನವ ಹಿಡಿದುದು ಶಿಶು. ಲಿಂಗವದು ಶಿಶು ಭಕ್ತನು ಶಿಶು. ಲಿಂಗವು ಅದ್ವೈತ ಶಿಶು, ಭಕ್ತನು ನುಡಿಗೆಡೆಗೊಡದ ಶಿಶು . ಅಲ್ಲಿ ನಾನು ಇಲ್ಲ ನೀನು ಇಲ್ಲ ಏನೇನೂ ಇಲ್ಲವೆಂಬುದು ಇಲ್ಲವಾದುದರಿಂದ ಭಾವಕ್ಕಿಂಬಿಲ್ಲ ಶಬ್ದ ಮೀಸಲಾಗಿರುವುದು ಅದು ಭಕ್ತಸ್ಥಲವೆಂದಿಹರು.

ನಾದ ಬಿಂದು, ಮಹೇಶ್ವರ ಸ್ಥಲ : ನಾದ ಇದಾವ ನಾದ , ಸುನಾದ ! ಇದಾವ ಬಿಂದು ಚಿದ್ಬಿಂದು! ಇದು ಸ್ವಸುಖದ ನಾದ , ಸ್ವಸುಖದ ಬಿಂದು. ಸತ್ಯ ಜ್ಞಾನಾನಂದವಾಗಿಹ ನಾದ . ಇದು ಚಿದಮೃತದ ಬಿಂದು . ಇದು ಸ್ವಸುಖದಲ್ಲಿ ಹಾರಾಡುವ ತುಂಬಿ. ಗಗನ ಸಂಚಾರಿಯಾಗಿಹ ತುಂಬ ಚಿದಾಕಾಶದಲ್ಲಾಡುವ ತುಂಬಿ ,ಅಚಲ ತುಂಬಿ. ಇದು ಅಚಲತ್ವದಲ್ಲಿ ನಿಂದ ನಾದ . ಅಚಲನಾಗಿಹ ಬಿಂದು , ಅಖಂಡಿತ ನಾದ , ಅಖಂಡಿತ ಬಿಂದು , ಮರಹು ಮಾರಡೆಯಿಲ್ಲದ ನಾದ. ಮರವು ಅರವು ಕಾಣದ ಬಿಂದು , ಚೈತನ್ಯಬಿಂದು ಅಮರ ಬಿಂದು, ತತ್ತ್ವರೂಪಿ ಬಿಂದು, ತತ್ತ್ವಗೋಷ್ಠಿಯುಳ್ಳುದು ಸುನಾದ ಇಲ್ಲಿ ಲಿಂಗಕ್ಕೆ ಆಹ್ವಾನವಿಲ್ಲ ವಿಸರ್ಜನೆಯಿಲ್ಲ , ಗಗನವು ಬಂದುದಲ್ಲ ಹೋದುದಲ್ಲ ಗಗನ ಸದೃಶ್ಯವಾಗಿಹ ಜ್ಞಾನಾಮೃತ ಬಂದುದಿಲ್ಲ ಹೋದುದಿಲ್ಲವೆಂಬ ನಿರ್ಗಮನ ಅರುವು ಮಹೇಶ್ವರ ಸ್ಥಲ.

ಕಳೆಬೆಳಗು ಪ್ರಸಾದಿಸ್ಥಲ : ಕಳೆ ಇದಾವ ಕಳೆ ! ಬೆಳಗು ಇದಾವ ಬೆಳಗು ! ಕಳೆ ನಾದ ಕಳೆಯು ಅಲ್ಲ, ಬಿಂದು ಕಳೆಯು ಅಲ್ಲ, ಕಳೆ ಬರ ಹೋಗುವ ಕಳೆಯು ಅಲ್ಲ . ಇದು ಅತೀತ ಕಳೆ , ಅತೀತ ಬೆಳಗು ತನ್ನ ಕಳೆ ತನ್ನ ಬೆಳಗು . ಇದು ಪರ ಪ್ರಕಾಶವಲ್ಲ ತನ್ನದು ಸ್ವಪ್ರಕಾಶ . ಉದಯ ಅಸ್ತಗಳ ಕಾಣದ ಬೆಳಗು ನಿರಂತರವಾಗಿಹ ಕಳೆ . ನಿರಂತರವಾಗಿಹ ಬೆಳಗು . ಇದು ಗುರುವಾಗಿಹ ಬೆಳಗು ಲಿಂಗವಾಗಿಹ ಬೆಳಗು ಜಂಗಮವಾಗಿಹ ಬೆಳಗು ಪ್ರಸಾದವಾಗಿಹ ಬೆಳಗು ಅಖಂಡ ಬೆಳಗು ಪರಮಜ್ಞಾನವಾಗಿಹ ಬೆಳಗು ಪರಮಾಮೃತವಾಗಿಹ ಬೆಳಗು ಇದು ಚಿತ್ಕಲೆ ಚಿದ್‌ಬೆಳಗು ಜ್ಞಾನಸ್ವರೂಪವಾಗಿಹ ಸಮ್ಯತೆ ಕಲೆ ಸಮ್ಯತೆ ಬೆಳಗು ಇದು ಅರುವರಿಯ ಹೋಗಿ ತನ್ನಿಂದ ತನ್ನ ಕಂಡ ಕಲೆ ಅರುವಿನ ಅರುವಾಗಿಹ ಬೆಳಕು, ಸೂರ್ಯಕಿರಣ, ಸೂರ್ಯ ಪ್ರಕಾಶ ಸೂರ್ಯನೆ ಎಂಬುದು ಕಣ್ಣಿಗೆ ಗೊತ್ತು ನೋಡಿದ ಕಣ್ಣು ಸೂರ್ಯನ ಘನವ ಹೇಳಲಿಲ್ಲ, ಬೆಳಗುಳ್ಳ ರವಿ ತಾನು ಬೆಳಗುವ ಸೂರ್ಯನೆನಲಿಲ್ಲ, ವಾಙ್ಮನೋತೀತ ಪ್ರಸಾದವದು ಪ್ರಸಾದವೆನಲಿಲ್ಲ ಪ್ರಸಾದವರಿಯ ಹೋದ ಅರುವು ಪ್ರಸಾದವೆ ತಾನಾಗಿ ಪ್ರಸಾದವೆನಲಿಲ್ಲ. ಪ್ರಸಾದವೆಂಬುದು ಅರುವ ಅರಿಯ ಹೋದವರ ಅರಿವು , ಅರುವೆನ್ನದ ಅರಿವು , ತಾನೆ ಆದ ಅರಿವು , ಈ ಅರಿವು ಶುದ್ಧ ಪ್ರಸಾದ ಅಹುದು, ಸಿದ್ಧಪ್ರಸಾದವು ಅಹುದು ಪ್ರಸಿದ್ಧಪ್ರಸಾದವು ಅಹುದು. ಮೂರೊಂದಾದ ಪ್ರಸಾದವಾದ್ದರಿಂದ ಕಳೆ ಬೆಳಗು ಪ್ರಸಾದಿ ಸ್ಥಲವೆಂದಿಹರು.

ಅರಿವು ನಿರವಯ ಪ್ರಾಣಲಿಂಗಸ್ಥಲ, ಪ್ರಾಣಲಿಂಗವದು ಅರಿವು. ಈ ಅರಿವು ಶ್ರೇಷ್ಠಾತಿ ಶ್ರೇಷ್ಠವು, ಏಕೆಂದರೆ ಇದು ಅಣು , ರೇಣು , ತೃಣ , ಕಾಷ್ಟದೊಳ ಕೂಡಿದ ಅರಿವು . ಅಖಂಡ ಅರಿವು ಇದುವೆ ಪರಿಪೂರ್ಣ ಶಿವ. ಭೇದಾ ಭೇದ ವಿನಿರ್ಮುಕ್ತ ಶಿವ, ಅಪ್ರಮಾಣ ಶಿವ ಅನುಪಮ ಶಿವನೆಂದು ತನ್ನಿಂದ ತಾನರಿದು ತಾನೆ ಶಿವನೆಂದು ತನ್ನ ಅಂತರಂಗ ದೋಳ್ ತಾನೆ ತಿಳಿವುಡೆ, ಆಗ ಅಗಣಿತ ತಾನೆ ಅಕ್ಷರೇಶ್ವರ ತಾನೆ ಪ್ರಣವ ಪ್ರಭೆಯ ಮೇಲಣ ಪರಂಜ್ಯೋತಿ ತಾನೆಂದರಿದ ಶರಣ ಅನುಪಮ ಶರಣ . ಈ ಶರಣ ಅರಿವು ಅರಿದಿಹ ಸ್ವಯಂ ಜ್ಯೋತಿ . ಇದು ಪ್ರಾಣಲಿಂಗಸ್ಥಲವು . ಈ ಪ್ರಾಣಲಿಂಗಿಗೆ ನೆನಹು ನೆನೆವ ಮನದಲ್ಲಿಲ್ಲ , ತನುವಿನಾಸೆ ಮುನ್ನಿಲ್ಲ, ಮನ ಮನವನೊಳಕೊಂಡ ಘನವನೇನೆಂಬೆ, ತನ್ನಲ್ಲಿ ತಾನಾಯಿತ್ತು . ನೆನೆಯಲಿಲ್ಲದ ನಿಂದ ನಿರಾಳ ತನ್ನಿಂದ ತನಗದು ವೇದ್ಯವಾಗಿ ಬೆರಗಾಹುದ ನೇನೆಂಬೆ, ಅಂತು ಇಂತು ಎನಲಿಲ್ಲ ಚಿಂತೆಯಿಲ್ಲದ ಮಹಾಘನವು ತನಗಿಂತ ಬೇರಾಗಿ ಅರಸದಿಹುದೆ ಪ್ರಾಣಲಿಂಗಿ ಸ್ಥಲ.

ಜ್ಞಾನ ಸುಜ್ಞಾನ ಶರಣಸ್ಥಲ : ಶರಣರ ಜ್ಞಾನ ಸುಜ್ಞಾನವದು ಶರಣಸ್ಥಲ. ಈ ಸ್ಥಲ ಸ್ವಯ ಸ್ಥಲ. ಸಮತಾ ಸ್ಥಲ, ಸಮತಾ ಸಯವಾದ ಸ್ಥಲ. ಅರವು ಮರವಿಂಗೆ ಮೀರಿಹ ಜ್ಞಾನ ಅರಿದರುಹಿಸಿಕೊಂಬುದಕ್ಕೆ ಮೀರಿದ ಘನದಿರುವೆ ತನ್ನಿರುವಾಗಿಹ ಅರುವು . ಇದು ಸಮತೆಯ ನಿಧಿ ಭಕ್ತಿಯ ಬೆಳೆಸಿರಿ ಮುಕ್ತಿಯ ತವ ನಿಧಿ ಸತ್ಯದ ನಿಧಿ ಅದುವೆ ಲಿಂಗಲಕ್ಷಣವುಳ್ಳ ಜ್ಞಾನ ಅದುವೆ ಜ್ಞಾನೈಶ್ವರ್ಯವು ಜ್ಞಾನಗಂಗಾ ಜ್ಞಾನಾಮೃತ. ಇದು ಅರುವಿನೊಳಗಿಹ ಅರುವಿನ ತಿರುಳುಳ್ಳ ಜ್ಞಾನ. ಇದು ಅರಿಯ ಹೋಗಿ ಜಂಗಮನ ಲಕ್ಷಣವಾಗಿಹ ಸುಜ್ಞಾನ. ನಿರಾಲಂಬ ಜ್ಞಾನವದು ಸುಜ್ಞಾನ ನಿಸ್ಸಂಗವದು ಸುಜ್ಞಾನ. ಮರಹು ಮಾರಡೆಯಿಲ್ಲದುದು ಸುಜ್ಞಾನ ನಿರ್ಜನಿತವಾದುದು ಸುಜ್ಞಾನ. ನಿರ್ಲೇಪವದು ಸುಜ್ಞಾನ ಅನುಪಮುವದು ಸುಜ್ಞಾನ ನಿರಾಳವದು ಸುಜ್ಞಾನ . ನುಡಿಗೆಗೊಡದಘನವದು ಸುಜ್ಞಾನ ನಿರ್ಲಿಖಿತವಾದುದು ಸುಜ್ಞಾನ. ಜ್ಞಾನ ತನ್ನೊಳಗೆ ಅಜ್ಞಾನ ತನ್ನೊಳಗೆ ಎರಡುವನರಿಯದ ಸಹಜ ಸುಜ್ಞಾನಿಯಾಗಿ ಲಿಂಗ ವಶವಾಗಿದ್ದಲ್ಲಿ ಪರಿಣಾಮಿ ಕೂಡಲಚೆನ್ನಸಂಗಾ ನಿಮ್ಮ ಶರಣನು .

ಇದು ಶರಣಸ್ಥಲ ಇಲ್ಲಿ ಸಮತೆ ಸಯವಾದುದು ಅರವು ಮರವುಗಳಿಲ್ಲದ ನಿಲಯ ಉಪಮೆ ನಿಸ್ಥಲವಾಗಿಹ ಘನಮಹಿಮನಾದುದರಿಂದ ನಿಶಬ್ದವೇದಿ. ಶರಣನದು ಅಖಂಡಿತ ಲಿಂಗ ತಾನು ಅಪ್ರಮಾಣವಂತ. ಸೀಮೆ ಸಂಬಂಧ ಕಾಣದ್ದರಿಂದ ಶರಣ ಅಜಾತನು ಆದುದರಿಂದ ಸುಜ್ಞಾನಿ ಶರಣ ಸ್ಥಲವೆಂದು ಹೇಳಿಹರು.

ಭಾವವಿಲ್ಲದ ಬಯಲು, ಬಯಲಿಲ್ಲದ ಭಾವ ಅಗಮ್ಯದ ಐಕ್ಯಸ್ಥಲ : ಭಾವವಿಲ್ಲದ ಬಯಲು; ಇದನೆಂತು ಭಾವಿಸುವದು ? ಭಾವಕ್ಕಿಂಬು ಕೊಡದ ಘನ ಶಬ್ದವೆ ಮೀಸಲವಾಗಿರುವಲ್ಲಿ ನೆನೆಯಲರಿಯೆ ನಿರ್ಧರಿಸಲರಿಯೆ! ಮನವಿಲ್ಲಾಗಿ ಭಾವಿಸಲರಿಯೆ ಬೆರಸಲರಿಯೆ ಭಾವ ನಿರ್ಭಾವವಾಯಿತ್ತಾಗಿ,ಧ್ಯಾನ ಮೌನವ ನರಿಯೆ, ಧ್ಯಾನಾತೀತ ತಾನೆಯಾಯಿತ್ತಾಗಿ ಜ್ಞಾತೃ, ಜ್ಞಾನ ಜ್ಞೇಯಂಗಳೆಲ್ಲವ ಮೀರಿ ಅಭಿನವ ಮಲ್ಲಿಕಾರ್ಜುನನಲ್ಲಿ ಪರಮಸುಖಿಯಾಗಿರ್ದೆ.

ಭಾವವಿಲ್ಲದ ಬಯಲು ನೆನೆಯಲರಿಯೆ ನಿರ್ಧರಿಸಲರಿಯೆ ನೆನಹಿಂಗೆ ಮೀರಿದ ಘನ ನಿರ್ಣಯಕ್ಕೆ ಮೀರಿದ ಘನ . ಇದು ಅರಿಯಲಿಲ್ಲದ ಅರುವು ಮರೆಯಲಿಲ್ಲದ ಮರಹು ಇಲ್ಲ ಮನವಿಲ್ಲಾಗಿ ಭಾವಿಸಲರಿಯೆ, ಏಕೆಂದರೆ ಇದು ನೋಡಲಿಲ್ಲದ ನೋಟ ಕೂಡಲಿಲ್ಲದ ಕೂಟವಾದ್ದರಿಂದ ಭಾವ ನಿರ್ಭಾವವಾಯಿತ್ತಾಗಿ ಧ್ಯಾನ ಮೌನವ ನರಿಯೆ . ಇದು ಧ್ಯಾನಾತೀತ ತಾನೆಯಾಯಿತ್ತಾಗಿ

ಬೆರಸಲಿಲ್ಲದ ಬೆರಗು ನಿಂದುದು ವಿವರಿಸುವರೆ ಅಗಮ್ಯವು ಐಕ್ಯಸ್ಥಲವೆಂದು ಹೇಳಿಹರು.

ಇಂತಿ ಷಡುಸ್ಥಲದ ಕೊರಡ ಮೆಟ್ಟಿನಿಂದುದೆ ಹೆಸರಿಲ್ಲ ಕುರುಹಿಲ್ಲ ತನಗೆ ತಾನಿಲ್ಲ ಗುಹೇಶ್ವರ: ಇದು ಅನುಪಮವು ,ಈ ಷಡುಸ್ಥಲ ತನಗಿಂತ ಭಿನ್ನವಾದವುಗಳು , ಹೆತ್ತರಿವು . ತನಗೆ ಮೋಟಮರದಂತೆ ತಿಳಿಸಿಕೊಳ್ಳುವ ಮಾಯಿಕವೆಂದು ತನ್ನಿಂದ ತನ್ನ ನೋಡಿ ಇವುಗಳಿಗೆ ಮುಖ್ಯತೆ ಮಾಡದಿರುವುದೆ ಮೆಟ್ಟಿನಿಂದುದು , ಆಗ ತನ್ನಿರುವಿಂಗೆ ಹೆಸರಿಲ್ಲ ಕುರುಹು ಇಲ್ಲ ತನಗೆ ತಾನೆಂಬುದು ಇಲ್ಲವೆಂದು ಪ್ರಭುದೇವ ಹೇಳಿದುದು.

73

ಸತ್ತು ಹುಟ್ಟಿ ಕೆಟ್ಟವರೆಲ್ಲರು ದೇವಲೋಕಕ್ಕೆ ಹೋದರೆಂಬ
ಬಾಲ ಭಾಷೆಯ ಕೇಳಲಾಗದು.
ಸಾಯದ ಮುನ್ನ ಸ್ವಯವ ನರಿದಡೆ ದೇವನೊಲಿವ ನಮ್ಮ ಗುಹೇಶ್ವರನು .

ತಾತ್ಪರ್ಯ: ಸತ್ತು ಹುಟ್ಟಿ ಕೆಟ್ಟವರೆಲ್ಲರು : ಇವರಾರು? ತನ್ನ ಮರೆದು ದೇವರ ಕಂಡಿಹೆನೆಂಬ ಕಾರಣ ಹರಿಸುರ ಬ್ರಹ್ಮಾದಿಗಳೆಲ್ಲರು ತಲೆ ಕೆಳಗಾಗಿ ಹೋದರು. ಆ ದೇವರ ಮರೆದು ತನ್ನ ನರಿದುದುಂಟಾದರೆ ತಾನೆ ದಿಟವೆಂದ ನಂಬಿಗ ಚೌಡಯ್ಯ . ತಾನಾರೆಂದರಿಯದೆ ತನ್ನನ್ನು ಮರೆತವರೆಲ್ಲರು ಕೆಟ್ಟವರು , ದೇವರ ಕಂಡಿಹೆನೆಂಬವರೆಲ್ಲರು ಕೆಟ್ಟವರು, ಹರಿಸುರ ಬ್ರಹ್ಮಾದಿಗಳೆಲ್ಲ ಕೆಟ್ಟವರು . ಇವರು ನರರೆ ಇರಲಿ, ಸುರರೆ ಇರಲಿ, ಅಸುರರಿರಲಿ, ಮುನಿಗಳಿರಲಿ, ತಪಸ್ವಿಗಳಿರಲಿ, ತ್ಯಾಗಿಯೋಗಿಗಳಿರಲಿ ಆರೆ ಇರಲಿ, ಸಕಾಮ ಭಕ್ತರಿರಲಿ, ನಿಷ್ಕಾಮ ಕರ್ಮಿಗಳಿರಲಿ. ಶಿವ ವಿಷ್ಣು, ಬ್ರಹ್ಮನ ಉಪಾಸಕರಿರಲಿ, ಗಣಪತಿಯ ಉಪಾಸಕರಿರಲಿ ಆರಿದ್ದರೂ ತಾವಾರೆಂದರಿಯದವರು . ಇಷ್ಟದೇವತೆಯ ಉಪಾಸನೆ ಮಾಡಿ ದೇವಲೋಕಕ್ಕೆ ಹೋಗುವೆವು ಎನ್ನುವವರೆಲ್ಲ ಶ್ರೀ ಗುರುವಿನ ದರ್ಶನವಿಲ್ಲದವರು . ಅವರು ಲಿಂಗ ಸಕೀಲ ಸಂಯೋಗ ವರ್ಮಸ್ಥಲ ಅರಿಯದವರು ಪೂರ್ವದಲ್ಲಿ ನಾರದ ಮಹರ್ಷಿಗಳು ವೇದಪಾಠ ಮಾಡಿದವರು. ದಿನಾಲು ದೇವ ಸಭೆಗೆ ಹೋಗಿ ಬರುವವರೆಂದು ಪುರಾಣಂಗಳಲ್ಲಿ ಪ್ರಸಿದ್ಧವದೆ . ಇತ್ತ ನಾಮದೇವ ಪುರಂದರ ದಾಸರಾದಿಗಳು ಇದಲ್ಲದೆ ಕಣ್ಣು ಕೊಟ್ಟ ಕಣ್ಣಪ್ಪ, ಮಗುವನ್ನೆ ಕೊಟ್ಟ ಚಂಗಳೆಯರು, ದೋಸೆಯನ್ನೆ ಉಣಬಡಿಸಿದ ಪಿಡ್ಡವ್ವ , ಮೊದಲಾದವರು ದೇವರ ಅನನ್ಯ ಭಕ್ತರೆನಿಸಿಕೊಂಡಿಹರು. ಇವರು ದೇವರನೊಲಿಸಿ ಕೊಂಡವರೆಂದು ಪುರಾಣ ಕೀರ್ತನಂಗಳಲ್ಲಿ ಪ್ರಸಿದ್ಧವಾಗಿವೆ . ಈ ಭೇದ ಜ್ಞಾನಿ ಭಕ್ತರು , ದೇವರು ಬೇರೆ ತಾನು ಬೇರೆಂಬ ಭಾವ ಭ್ರಮಿತರು . ಅಂಗ ಬೇರೆ ಲಿಂಗ ಬೇರೆಂಬ ಭಾವುಕರು , ಇವರು ಸದ್ಗುರು ದೇವನ ಕಾಣಹೋದವರಲ್ಲ. ಇದು ಕಾರಣ ಲಿಂಗಾಂಗ ಸಮರಸ ಜ್ಞಾನಿಗಳಾಗಲಿಲ್ಲ, ಲಿಂಗವರಿಯಲಿಲ್ಲ . ಪತ್ರೆ ನೇಮದವರು, ಲಿಂಗಾರ್ಚನೆ ನೇಮದವರು, ಜಂಗಮ ತೃಪ್ತಿಯ ನೇಮದವರು ತನ್ನ ತಾ ತಿಳಿಯುವ ನಿಯಮದವರಾಗದ್ದರಿಂದ ಶೈವರೆನೆಸಿಕೊಂಡರಲ್ಲದೆ ವೀರಶೈವರೆನಿಸಿಕೊಳ್ಳಲಿಲ್ಲ. ಇವರು ಇಷ್ಟ ದೇವತೆಯ ಉಪಾಸನೆ ಮಾಡಿ ದೇವರ ಕಂಡು ದೇವ ಲೋಕಕ್ಕೆ ಹೋದೆವೆಂಬುದು ಇದು ಬಾಲಭಾಷೆ, ಈ ಮಾತು ಕೇಳಲಾಗದು ಎಂದು ಹೇಳಿದ್ದಾರೆ.

ಜ್ಞಾನವಿಲ್ಲದ ಮಗು ಮಾತಾಡುವದು ಬಾಲಭಾಷೆ ಅನ್ನುವರು . ಹಾಗೆ ಉಪಾಸಕರು ಉಪಾಸ್ಯದೇವನ ಜ್ಞಾನವಿಲ್ಲದೆ ಮಾತಾಡುವವರದು ಬಾಲಭಾಷೆ ಎಂದು ತಿಳಿವುದು . ಲಿಂಗ ಪೂಜ್ಯ ಭಕ್ತ ಪೂಜಕ, ಗುರು ಪೂಜ್ಯ , ಶಿಷ್ಯ ಪೂಜಕ , ಜಂಗಮ ಪೂಜ್ಯ , ಭಕ್ತ ಪೂಜಕ , ದೇವಗಣ, ರುದ್ರಗಣ,

ಪ್ರಮಥಗಣ ಪೂಜ್ಯರು, ನರರು, ಸುರರು , ಅಸುರರು , ಮನುಮುನಿಗಳು , ತಪಸ್ವಿ ತ್ಯಾಗಿಗಳು ಪೂಜಕರು. ಮಾಯಿಕ ಶರೀರವು ಪೂಜ್ಯವು . ಅವಿದ್ಯಾ ಉಪಾಧಿ ಚೇತನರೂಪಿ ನರರುಗಳಾಗಲಿ ಆರೆ ಆಗಲಿ ಅವರು ಪೂಜಕರು . ಹೀಗೆ ಭೇದಜ್ಞಾನ ಮಾಡುವ ಮತಿವಂತರು ಬಾಲ ಭಾಷೆಯುಳ್ಳವರು.

ಜೀವನು ಅಲ್ಪಜ್ಞ, ಅಲ್ಪ ಶಕ್ತಿಯುಳ್ಳವ. ಪರತಂತ್ರ ಅಪರೋಕ್ಷ ಬಂಧ ಮೋಕ್ಷ ಸಹಿತ, ಆನಂದ ಸ್ವರೂಪ ಶಿವನು ಸರ್ವೇಶ್ವರ, ಸರ್ವಜ್ಞ, ಸರ್ವಶಕ್ತಿಯುಳ್ಳವ ಸ್ವತಂತ್ರ, ಸರ್ವಾಂತರ್ಯಾಮಿ, ಬಂಧ ಮೋಕ್ಷ ರಹಿತ ಆನಂದ ಸ್ವರೂಪ. ಹೀಗೆ ಉಪಾಧಿ ದೃಷ್ಟಿಯುಳ್ಳ ಮಂದ ಮತಿವಂತರು ಇವರು ಬಾಲಭಾಷೆ ವುಳ್ಳವರು. ಇವರುಗಳು ಅಣಿಮಾದಿ ಸಿದ್ಧಿ ಪಡೆದ ಆವ ಶರಣರೆ ಇರಲಿ ಅವರು ಭೇದ ಜ್ಞಾನಿಗಳು ಅವರು ಬಾಲಭಾಷೆವುಳ್ಳವರು ಅವರ ಮಾತು ಕೇಳಲಾಗದು.

''ತಮ ತಮಗೆಲ್ಲ ನೊಸಲ ಕಣ್ಣುಳ್ಳವರು, ತಮ ತಮಗೆಲ್ಲ ನಂದಿ ವಾಹನರು . ತಮ ತಮಗೆಲ್ಲ ಖಟ್ವಾಂಗ ಕಪಾಲ, ತ್ರಿಶೂಲಧರರು, ದೇವರಾರು, ಭಕ್ತರಾರು ಹೇಳಿರಯ್ಯಾ ಕೂಡಲಸಂಗಮದೇವಾ? ನಿಮ್ಮ ಶರಣರು ಸ್ವತಂತ್ರರು ಎನ್ನ ಬಚ್ಚಬರಿಯ ಬಸವ ನೆನಿಸಯ್ಯಾ'' ಎಂದು ಬಿತ್ತರಿಸಿದುದು. ನೋಡಿದಡೆ ಇವರು ದೇವರಾರು ಭಕ್ತರಾರು ಎಂದು ಅರಿತಿರುವರಾ?

ದೇವನು ನೊಸಲ ಕಣ್ಣಾದರೂ ಧರಿಸುವದೇಕೆ ? ನಂದಿವಾಹನವನ್ನಾದರೂ ಹತ್ತುವದೇಕೆ? ಹುಲಿಚರ್ಮವನ್ನಾದರೂ ಹಚ್ಚಿಕೊಳ್ಳುವದೇಕೆ? ವಿಷಧರನನ್ನಾದರೂ ಕಂಠಾಭರಣ ಮಾಡಿಕೊಳ್ಳುವುದೇಕೆ? ಕೈಯಲ್ಲಿ ಡಮರುಗ ತ್ರಿಶೂಲವ ಧರಿಸುವುದೇಕೆ? ಇವನು ದೇವನೆನ್ನಬೇಕೆ? ಈ ದೇವನ ಕಂಡವರು, ದೇವನ ಅರಿತವರೆನಬೇಕೆ? ಇಂಥವನು ದೇವನ ಭಕ್ತನೆನಬೇಕೆ? ಕೈಯಲ್ಲಿ ಶಂಖ ಚಕ್ರಧರಿಸುವುದೇಕೆ? ವಿಷಧರನ ಮೇಲೆ ಕೂಡ್ರುವುದೇಕೆ ? ಇವು ದೇವನನ್ನು ಅರಿತ ಚಿನ್ಹವೆ! ದೇವನು ದೇವರಾದ ಚಿನ್ಹವೆ ? ಈ ಚಿನ್ಹಗಳ ನೋಡಿ ಭಕ್ತರಾದವರು ನಮ್ಮನ್ನು ದೇವರೆಂದು ತಿಳಿಯಲಿ, ಇದಲ್ಲದೆ ತಮ್ಮ ಘನವು ಭಕ್ತರಿಗೆ ತಿಳಿಯಲಿ ಎಂಬ ಉದ್ದೇಶದಿಂದಲ್ಲವೆ ? ನಿರಾಲಂಬ ದೇವನಿಗೆ ಭಕ್ತರ ಅವಲಂಬವೇಕೆ? ಭಕ್ತನಾದವನು ನಿರಾಲಂಬನು , ನಿರಾಲಂಬ ಭಕ್ತನಿಗೆ ದೇವನ ಅವಲಂಬವೇಕೆ? ಇದು ಭಕ್ತನ ಘನತ್ವ . ಭಕ್ತನು ಕೂಡದಗಲದ ಘನವಂತನು, ಶಿವನು ಭೇದಿಸಬಾರದಿಪ್ಪ ಅಭೇದ್ಯ ಶಿವ ಈರ್ವರೊಂದಾದಲ್ಲಿ ಅರ್ಚನೆಯಿಲ್ಲ , ಅರ್ಪಿತವಿಲ್ಲ ಅವಧಾನವಿಲ್ಲ ಶಬ್ದಕ್ಕೆ ತೆರಹಿಲ್ಲ, ಭಕ್ತ ದೇವರೊಂದಾದಲ್ಲಿ ನಾ ನೀನೆಂಬುದಕ್ಕೆ ತೆರಹಿಲ್ಲ. ಇದು ದೇವನರಿತ ಚಿನ್ಹ ,ತನ್ನ ಅರಿತ ಚಿನ್ಹ. ಇದು ಕಾರಣ ಬಸವರಸರು ದೇವರಾರು , ಭಕ್ತರಾರು ? ಎನ್ನ ಬಚ್ಚಬರಿಯ ಬಸವ ನೆನಿಸಯ್ಯ ಎಂದು ಬಿತ್ತರಿಸಿಹರು.

ಕೃತಯುಗ, ತ್ರೇತ್ರಾಯುಗ, ದ್ವಾಪರಯುಗ, ಕಲಿಯುಗಂಗಳು ಭವರಾಟಾಳದಲ್ಲಿ ತಿರುಗುತಿಪ್ಪಲ್ಲಿ ಅನಂತಕೋಟ್ಯಾನ ಕೋಟಿ ಯುಗಂಗಳು ಮಡಿದು ಹೋದವು . ಅನಂತ ಜಲ ಪ್ರಳಯಂಗಳು ಸರಿ ಸರಿದು ಹೋದವು. ಹದಿನಾಲ್ಕು ಲೋಕಂಗಳೆಂಬ ಅನಂತ ಕೋಟಿ ಬ್ರಹ್ಮಾಂಡಗಳೆಲ್ಲ ಲಯವಾಗಿ ಹೋದವು ಇದರೊಳಗೆ . ಆವಲೋಕದಲ್ಲಿ ಆವ ಯುಗದಲ್ಲಿ ಪ್ರಾಣಲಿಂಗ, ಲಿಂಗಪ್ರಾಣವೆಂಬ ಭೇದವ ನರುಹಿದವರಾರು ಹೇಳಾ ! ಗಂಗೆ ಗೌರಿ ವಲ್ಲಭರು ಮೊದಲಾದ ಅನಂತ ಕೋಟಿ ರುದ್ರಾದಿಗಳೆಲ್ಲರೂ ಪ್ರಾಣಲಿಂಗ ಸಂಬಂಧದ ಹೊಲಬ ನರಿಯದೆ ಅಣಿಮಾದಿ ಚತುರ್ವಿಧ ಫಲ ಪ್ರಾಪ್ತಿಗೆ ಒಳಗಾದರು . ಶಿವಾಚಾರದ ವಿಚಾರವನರಿಯದೆ ಜಗವು ಕೆಟ್ಟಿಹುದೆಂದು ಪರಮ ಪುರುಷಾರ್ಥ ಕಾರಣವಾಗಿ ಮರ್ತ್ಯಲೋಕದಲ್ಲವತರಿಸಿ ಗುರು ಲಿಂಗ ಜಂಗಮ ಪಾದೋದಕ ಪ್ರಸಾದವೆಂಬ ಪಂಚಾಚಾರವ ನೆಲೆಗೊಳಿಸಿ, ಷಟ್‌ಸ್ಥಳವೆಂಬ ಮಹಾನುಭಾವವಮಂ ಕರ

ತಳಾಮಳಕವಾಗಿ ಸ್ಥಲಗೊಳಿಸಿ , ಪ್ರಾಣಲಿಂಗ ,ಲಿಂಗಪ್ರಾಣವೆಂಬ ಭೇದವೆನಗೆ ತಿಳುಹಿ , ಎನ್ನ ಭ್ರಾಂತಿ ಸೂತಕ ಬಿಡಿಸಿ ಲಿಂಗೈಕ್ಯವೆಂಬುದ ನನಗೆ ತೋರಿದೆಯಾಗಿ ನಿನ್ನಿಂದಲಾನು ಸಂಗನ ಬಸವಣ್ಣನೆಂಬ ಹೆಸರು ಪಡೆದೆನು ಕೂಡಲಸಂಗಮದೇವರ ಸಾಕ್ಷಿಯಾಗಿ ಎನಗೆ ನೀನು ಪರಮಾರಾಧ್ಯ ಕಾಣಾ ಚೆನ್ನಬಸವಣ್ಣ.

ಸಾಯದ ಮುನ್ನಸ್ವಯ ನರಿದಡೆ ದೇವನೊಲಿವ ನಮ್ಮ ಗುಹೇಶ್ವರ : ಬಸವರಸರೆ, ನಾಲ್ಕು ಯುಗಂಗಳು ಭವರಾಟಾಳದಲ್ಲಿ ತಿರುಗುತ್ತಿರುವಲ್ಲಿ ಅನಂತ ಕೋಟ್ಯಾನು ಕೋಟಿ ಯುಗಂಗಳು ಮಡಿದವಲ್ಲದೆ ಹದಿನಾಲ್ಕು ಲೋಕಂಗಳು ಸಹಿತ ಲಯವಾಗಿ ಹೋದುದಲ್ಲದೆ ಗಂಗೆ ಗೌರಿ ವಲ್ಲಭರು ಸಹಿತ ಪ್ರಾಣಲಿಂಗ ಸಂಬಂಧವನರಿಯದೆ ಅಣಿಮಾದಿ ಚತುರ್ವಿಧ ಫಲಪ್ರಾಪ್ತಿಗೆ ಒಳಗಾದರು. ಅವರು ಶಿವಾಚಾರದ ವಿಚಾರವರಿಯಲಿಲ್ಲ ಷಟ್‌ಸ್ಥಲ ಚಕ್ರವರ್ತಿಯೆಂದೆನಿಸಿದ ದೇವ ದೇವ . ಜಗತ್ಕಲ್ಯಾಣಕ್ಕಾಗಿ ಪರಮ ಪುರುಷಾರ್ಥ ಕರತಳವ ಮಾಡುವುದಕ್ಕೆ ಮರ್ತ್ಯಲೋಕದಲ್ಲವತರಿಸಿ ಗುರು ಲಿಂಗ ಜಂಗಮ ಪಾದೋದಕ ಪ್ರಸಾದವೆಂಬ ಪಂಚಾಚಾರ, ಷಟ್‌ಸ್ಥಳವೆಂಬ ಮಹಾನುಭವ ಕರತಳವ ಮಾಡಿ , ಪ್ರಾಣವು ಸಚ್ಚಿದಾನಂದ ಲಿಂಗವು ಸಚ್ಚಿದಾನಂದ , ಇದ್ದುದು ಅಖಂಡಿತ ಘನವಪ್ಪ ಪೂರ್ಣಲಿಂಗ ಅನುಪಮ ಲಿಂಗ ಅಚಲಿತ ಲಿಂಗವೆಂಬ ಘನದಿರುವ ಅರುಹಿ , ಲಿಂಗಪ್ರಾಣ ಪ್ರಾಣಲಿಂಗದಿರುವ ತಿಳುಹಿ, ಎನ್ನ ಭ್ರಾಂತಿ ಸೂತಕ ಬಿಡಿಸಿ ಲಿಂಗೈಕ್ಯವೆಂಬುದು ಎನಗೆ ತೋರಿದೆಯಾಗಿ ನಿನ್ನಿಂದ ಲಾನು ಸಂಗನ ಬಸವಣ್ಣನೆಂಬ ಹೆಸರು ಪಡೆದೆನು ಎಂದು ಚನ್ನಬಸವಣ್ಣನ ಸ್ತುತಿಸಿದ್ದಾರೆ.

ಲಿಂಗೈಕ್ಯವೆಂಬುದು ಲಿಂಗ ಲಿಂಗ ಎಂಬ ಮಾತಿನ ರಂಜಕರ ಅನುಭವವಲ್ಲ . ಅನಿಮಿಷದೇವನ ಮಹಾನುಭವ , ಮೌನಮುದ್ರಿತನಾಗಿಹ ಘನದೃಷ್ಟಿ . ಅದು ಅನಿಮಿಷ ದೃಷ್ಟಿ ಮೂಕನ ನಿರ್ವಾಣ ಪದ. ಅದು ಮಿಗೆ ಮಿಗೆ ಮೀಸಲವಾದ ತತ್ವ ಬಲ್ಲವರ ಇರವು ಲಿಂಗೈಕ್ಯರ ನಿಲುವು . ಇಂಥ ಲಿಂಗೈಕ್ಯ ನಿಲುವುಳ್ಳವರೆ, ಸಾಯದ ಮುನ್ನಸ್ವಯವರಿತವರು ಅವರಿಗೆ ದೇವನೊಲಿವ ನಮ್ಮ ಗುಹೇಶ್ವರ ಎಂದು ಪ್ರಭು ಕೊಂಡಾಡಿದ.

74

ಲಿಂಗವಂತಂಗೆ ಲಿಂಗದ ವಾರ್ತೆಯ ನುಡಿವುದೆ
ಭಂಗ ಹಂಗು ನೋಡಾ , ಹಂಗಿನ ಶಬ್ದ ನೋಡಾ,
ಕೊಡನ ತುಂಬಿದ ಹಾಲನೊಡೆಯ ಹಾಯ್ಕಿ , ಇನ್ನು ಉಡುಗಿಹೆನೆಂದಡೆ
ಉಂಟೇ ? ಗುಹೇಶ್ವರಾ.

ತಾತ್ಪರ್ಯ: ಲಿಂಗವಂತಂಗೆ ಲಿಂಗದ ವಾರ್ತೆಯ ನುಡಿವುದೆ ಭಂಗ ಹಂಗು ನೋಡಾ : ಲಿಂಗದ ವಾರ್ತೆಯ ನುಡಿಯದ ನಿಷ್ಕಳಂಕರು , ತನ್ನಿಂದ ತನ್ನ ಅರಿದ ಲಿಂಗವಂತರು ಅದೆಷ್ಟು ಜನ ಸಿಕ್ಕಬಹುದು? ವಿರಳ. ಪ್ರಭುವಿನಂತ ಲಿಂಗವಂತ ಅನಿಮಿಷನಂಥ ಲಿಂಗವಂತ ಬಸವಣ್ಣ ಚೆನ್ನಬಸವಣ್ಣನಂಥ ಲಿಂಗವಂತರು ಸಿಕ್ಕುವುದು ವಿರಳ . ಅವರ ಮಹದನುವ ನೋಡಿ ಅದಕ್ಕೆ ಒಪ್ಪುವವರಾದರೂ ಸಿಕ್ಕುವುದು ವಿರಳ ತತ್ತ್ವವೇತ್ತರು ಒಪ್ಪುವರು .

ಆಧುನಿಕ ಸಮಾಜ, ನಾನಾ ಪಕ್ಷದ ಸಮಾಜವಾಗುತ್ತಿದೆಯಲ್ಲ. ಅಷ್ಟೆ ಜಾತೀಯತೆ ಬೆಳೆಯುತ್ತದೆಯಲ್ಲ . ಇದಲ್ಲದೆ ಭಿನ್ನ ಜ್ಞಾನ , ಭಿನ್ನ ದೃಷ್ಠಿ , ಭಿನ್ನ ಭಾವಕ್ಕಿಂಬಾಗುತ್ತಿದೆಯಲ್ಲ ಇದಲ್ಲದೆ ಜ್ಯಾತ್ಯಾತೀತಕ್ಕೆ ಬಹುಜನ ಒಪ್ಪುತ್ತಾರೆ. ಜಾತೀಯತೆ ಬಿಡಲು ಒಪ್ಪರು . ಅಜಾತ ತತ್ವಕ್ಕೆ ಒಪ್ಪುವ ಲಿಂಗವಂತರು ಗುರು, ವಿರಕ್ತರು, ಜಂಗಮಯ್ಯಗಳು ಜಗದ್ವಂದ್ಯರು .ಇವರುಗಳಿಗೆ ಪಕ್ಷಾತೀತ ತತ್ವಕ್ಕೆ

ಸಮ್ಮತಿ ಇಲ್ಲವಾಗಿದೆ.

ಗುರುವೆಂಬುದು ಒಂದು ಪಕ್ಷ. ವಿರಕ್ತರೆಂಬುದೊಂದು ಪಕ್ಷ. ಜಂಗಮರದೊಂದು, ಭಕ್ತರದೊಂದು, ಶಿಷ್ಯರದೊಂದು ಹೀಗೆ ಸೀಮಿತವಾಗಿ ನಿಸ್ಸೀಮವಾಗಿಹ ಘನ ಲಿಂಗದಿರುವು ಸಕಲರ ಇರುವು ಸ್ವರೂಪವೆಂದರೂ ತಮ್ಮ ತಾವರಿಯುವ ಭಾಗ್ಯವಿಲ್ಲವಾಗಿದೆ. ಇವರೆಲ್ಲರು ಗುರು ಕಾರುಣ್ಯಮಯರು. ಇವರಿಗೆ ತಮ್ಮಯ ನಿಜದಿರುವು ಸಿದ್ಧಿಸಿಕೊಳ್ಳದಿದ್ದಲ್ಲಿ ಇನ್ನುಳಿದ ಅಜ್ಞರಿಗೆ ಭಿನ್ನದೃಷ್ಠಿ ಭಿನ್ನ ಭಿನ್ನ ಭಾವ, ಭಿನ್ನಜ್ಞಾನದಿಂದುಕ್ತವಾದ ವಿಷಮ ದೃಷ್ಠಿಯನ್ನಾಶ್ರಯಿಸಿದ ಪಕ್ಷ ಪಂಗಡ ನಷ್ಟವಾಗುವದದೆಂತು ?

ಗುರುಗಳಾದವರು ಶಿಷ್ಯಂಗೆ ಬೋಧಿಸುವಲ್ಲಿ ಮೊದಲು ಮಾಂಸಪಿಂಡವ ಕಳೆದು ಮಂತ್ರ ಪಿಂಡವ ಸಿದ್ಧಿಸಿ ನಂತರ ತನ್ನ ಬೋಧವ ಕೆಡಿಸಿ ಸಮ ಪ್ರಕಾಶ ಮಾನವಾದ ತತ್ವ ಸಿದ್ಧಿಸಬೇಕು. ಈ ತತ್ವ ಸಿದ್ಧಿಸುವುದರಿಂದ ಗುರು ಶಿಷ್ಯರೊಂದಾದುದು ಭಕ್ತ ಜಂಗಮರೊಂದಾದುದು ಅಲ್ಲಿ ಶಬ್ದಕ್ಕೆ ತೆರಹಿಲ್ಲವೆಂಬುದು ತನ್ನಿಂದ ತನಗೆ ವಿದಿತವಾದರೆ, ಲಿಂಗ ಸಕೀಲ ಸಂಯೋಗ ವರ್ಮಸ್ಥಲವನರಿತ ಲಿಂಗವಂತ, ಲಿಂಗವಂತರ ದೃಷ್ಠಿ, ಅನಿಮಿಷ ದೃಷ್ಠಿ ಬ್ರಹ್ಮವೆ ತಾನಾಗಿಹ ಮೌನ ಮುದ್ರೆ ನಿರ್ವಾಣವಾದ ಗುಟ್ಟು, ಇದು ಮನಮೇರೆದಪ್ಪಿದ ಘನ. ಲಿಂಗವಂತರು ಆರು ಗೊತ್ತೆ? ''ವೇದ ವೇದಾಂತಗಳಿಗೆ ಅಸಾಧ್ಯವಾಗಿಹ ಅನುಪಮ ಲಿಂಗವೆ ತಂದು ಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ ನಾದ ಬಿಂದು ಕಳೆಗಳಿಗಭೇದ್ಯವಾದ ಅಚಲಿತ ಲಿಂಗವ ತಂದುಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ ವಾಙ್ಮನಕ್ಕೆ ಬಾರದ ಅಖಂಡಿತ ಲಿಂಗವ ತಂದು ಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ ಇನ್ನು ನಾನು ಬದುಕಿದೆನಯ್ಯ ನಾ ಬಯಸುವ ಬಯಕೆ ಕೈ ಸಾರಿತಿಂದು ಕೂಡಲಸಂಗಮದೇವಾ''.

ಲಿಂಗವಂತರೆಂದರೆ ಸದ್ಗುರು ತಮ್ಮ ಕರಸ್ಥಲಕ್ಕೆ ಕರುಣಿಸಿದ ಅನುಪಮ ಲಿಂಗವರಿತು ಅನುಪಮ ಎನಲಿಲ್ಲ. ಅಚಲಿತ ಲಿಂಗವರಿತು ಅಚಲಿತ ಎನಲಿಲ್ಲ. ಅಖಂಡಿತ ಲಿಂಗವರಿತು ಅಖಂಡಿತ ಎನಲಿಲ್ಲ. ಮಾತು ಮನಂಗಳಿಂದ ಉಪಮಿಸಲು ಬಾರದ ಸಂಜ್ಞೆಯೆ ಲಿಂಗವಂತರ ಇರವು. ಅದು ಲಿಂಗದಿರುವು, ನಿಜದಿರುವು. ತನ್ನಿಂದ ತಾನರಿದ ಅರುವಾದುದರಿಂದ ನುಡಿದು ಹೇಳಲಿಲ್ಲ.

ಲಿಂಗವಂತರು ಲಿಂಗವರಿತು ಲಿಂಗವಾಗಿಹ ಸುಖಮಯರು. ಅವರ ಸುಖ ನಾ ನೀ ನೆನ್ನದಿಹ ಸುಖ, ಸುಖ ಸುಖ ಎನಲಿಲ್ಲ. ಸುಖವೆಂದುದು ಸುಖಸ್ವರೂಪವಾಗದು. ಲಿಂಗವಾರ್ತೆ ಎಂಬುದು ಸುವಾರ್ತೆ, ನುಡಿಗೆಡೆಗೊಡದ ವಾರ್ತೆ, ಭಾವಕ್ಕಿಂಬುಕೊಡದ ವಾರ್ತೆ, ಶಬ್ದ ಮೀಸಲವಾಗಿಹ ವಾರ್ತೆ, ಲಿಂಗವರಿತವರ ವಾರ್ತೆ ಇದು ಲಿಂಗವಾರ್ತೆಯಿಂದುಕ್ತವಾದ ಮೌನ ಮುದ್ರಿತ ಲಿಂಗ. ಇದನಾರು ಅರಿಯರಲ್ಲಾ ಅರಿಯದಿರೆ ಲಿಂಗವಾರ್ತೆ ಸುವಾರ್ತೆಯಾಗದ್ದರಿಂದ ಶಬ್ದ ಸಂಭ್ರಮಕ್ಕೆ ಕಾರಣವಾಯಿತ್ತು. ಅರಿತಲ್ಲಿ ನುಡಿಗೆಡೆಗೊಡದ ಘನಲಿಂಗ ನುಡಿದುದೆಂತು?

ಓ ಅಪ್ಪಯ್ಯಗಳಿರಾ! '' ಅಂಗದ ಮೇಲಣ ಲಿಂಗವು ಲಿಂಗವಲ್ಲ. ಮನದ ಮೇಲಣ ಲಿಂಗವು ಲಿಂಗವಲ್ಲ, ಭಾವದ ಮೇಲಣ ಲಿಂಗವು ಲಿಂಗವಲ್ಲ ಅಂಗದ ಮೇಲಣ ಲಿಂಗ ವ್ಯವಹಾರ, ಮನದ ಮೇಲಣ ಲಿಂಗಸಂಕಲ್ಪ. ಭಾವದ ಮೇಲಣ ಲಿಂಗ ಭ್ರಾಂತು ತತ್ವ. ಆಳಿನ ಆಳು ಅರಸನಪ್ಪನೆ? ಆಳನಾಳುವ ಅರಸನಲ್ಲದೆ ಅಂಗ ಪ್ರಾಣ ಭಾವಂಗಳ ನೊಳಕೊಂಡಿರ್ಪುದೆ ಲಿಂಗ ಕಾಣಾ ಮಸಣಯ್ಯ ಪ್ರಿಯ ಗಜೇಶ್ವರಾ''.

ಅಂಗ ಪ್ರಾಣ ಭಾವಂಗಳ ನೊಳಕೊಂಡಿರ್ಪುದು ಲಿಂಗವೆಂದಲ್ಲಿ ಅದು ಅಂಗದ ಮೇಲಣ ಲಿಂಗ ಹೇಗಾಗುವುದು ? ಪ್ರಾಣದ ಮೇಲಣ ಲಿಂಗ ಹೇಗಾಗುವುದು ? ಭಾವದ ಮೇಲಣ ಲಿಂಗ ಹೇಗಾಗುವುದು? ಲಿಂಗವದು ಅಂಗದ ಅಂಗವಾಗಿಹ ಘನಾಂಗ, ಚಿದಂಗ ಚಿದ್ಲಿಂಗ ಅದನ್ನು ಪೂಜಾ

ವ್ಯವಹಾರಕ್ಕೊಳಪಡಿಸುವುದದೆಂತು ? ಅದನ್ನು ಸೋಹಂ ಎಂದು ಹೇಗೆ ನೆನೆವುದು . ಚಿದಹಂ ಎಂದು ಹೇಗೆ ನಿರ್ಣಯಿಸುವುದು? ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗ . ಲಿಂಗ ಲಿಂಗ ಎಂದು ಅನ್ನುವುದಾದರೂ ಹೇಗೆ ? ಕಲ್ಪಿಸುವುದಾದರೂ ಹೇಗೆ ? ಭಾವಿಸುವುದಾದರೂ ಹೇಗೆ ? ತನ್ನಿಂದ ತನ್ನ ಅರಿದರಿದು ನೋಡಿ , ತಾನೆ ಆಗಿಹ ಲಿಂಗ ಭೇದಿಸಬಾರದಿಪ್ಪ ಅಭೇದ್ಯ ಶಿವ ಭೇದಿಸುವುದದೆಂತು? ಅಚಿಂತ್ಯಾತ್ಮ ಘನ , ಚಿಂತನಕ್ಕೊಳಪಡಿಸುವುದದೆಂತು ? ಇದು ಕಾರಣ ಕಟ್ಟಿದಾತ ಭಕ್ತನಪ್ಪನೆ? ಕೆಡಿಹಿದಾತ ದ್ರೋಹಿಯಪ್ಪನೆ? ಲಿಂಗವ ಕಟ್ಟಲಿಕ್ಕೆ ತನ್ನ ಕೈಯೊಳಗಿಪ್ಪುದೆ ? ಕೆಡಹಲಕ್ಕೆ ಬೀಳಬಲ್ಲುದೆ? ಆ ಲಿಂಗ ಬಿದ್ದ ಬಳಿಕ ಜಗತ್ತು ಉಳಿಯ ಬಲ್ಲುದೆ, ಪ್ರಾಣಲಿಂಗ ಬಿದ್ದ ಬಳಿಕ ಪ್ರಾಣ ಉಳಿಯ ಬಲ್ಲುದೆ ? ಲಿಂಗ ಬಿದ್ದಿತ್ತೆಂಬುದು ಸೂತಕ ಶಬ್ದ , ಭ್ರಾಂತುವಿನ ಪುಂಜ , ಅಂತು ಅದು ಕೇಳಲಾಗದು. ಯುಗ ಜುಗಂಗಳು ಗತವಹವಲ್ಲದೆ ಲಿಂಗಕ್ಕೆ ಗತವುಂಟೆ ? ಲಿಂಗವು ಬಿದ್ದಿತ್ತೆಂದು ನಿಂದಿಸಿ ನುಡಿವ ದ್ರೋಹಿಯ ಮಾತು ಕೇಳಲಾಗದು ಕಾಣಾ ಗುಹೇಶ್ವರಾ .

ಪ್ರಭುದೇವ ಲಿಂಗಕ್ಕೆ ಲಿಂಗವಾಗಿ ಅರಿದರಿದು ನೋಡಿದ ಅಪ್ರತಿಮ , ನಿಃಶಬ್ದವೇದಿ. ಕಿವಿಗೆ ಕೇಳದ ಮಂತ್ರವರಿದ ಮಹಾಮಹಿಮ. ಪೂಜೆಗೆ ಬಾರದ ಲಿಂಗವ ಕಂಡ ಅಘಟಿತ ಘಟಿತನು ಆಗಮವಿಲ್ಲದ ದೀಕ್ಷೆಯನುಂಡ ಜ್ಞಾನಾಮೃತನಾಗಿರುವ ಘನ ಮಹಿಮನನು ಅರಿಯದ ಕಾರಣ ಕುರುಹಿಡೆದೆನಲ್ಲದೆ ಅರಿದ ಬಳಿಕ ಇನ್ನೆಂತೋ ? ಬಿಟ್ಟಡೆ ಸಮಯ ವಿರೋಧ ,ಬಿಡದಿದ್ದಡೆ ಜ್ಞಾನ ವಿರೋಧ. ಗುಹೇಶ್ವರ ಲಿಂಗವು ಉಭಯ ದಳದ ಮೇಲಿದ್ದಾನೆ ಕಾಣಾ ಸಿದ್ಧರಾಮಯ್ಯ .

ಓ ! ಲಿಂಗವಂತರೇ , ಅರಿಯದ ಮುನ್ನ ಕುರು ಹಿಡಿದಂತಾಗಿತ್ತು ನೋಡಿರೆ ? ಅರಿದ ಬಳಿಕ ಇನ್ನೆಂತೋ? ಲಿಂಗವದು ಲಿಂಗವಾರ್ತೆ ತಂದಿಹುದು ನೋಡಿರೆ , ಅರಿದರಿದು ನೋಡಿರೆ , ನಿಮ್ಮ ಕರಕಮಲದೊಳ್ ಪ್ರಜ್ವಲಿಸುವ ಗುಹೇಶ್ವರ ಲಿಂಗವು ಬಿಟ್ಟಡೆ ಸಮಯ ವಿರೋಧ, ಬಿಡದಿದ್ದಡೆ ಜ್ಞಾನ ವಿರೋಧ , ಲಿಂಗಧರಿಸಿಹೆವೆಂಬವರ ಲಿಂಗ ಬಿಟ್ಟಿಹೆವೆಂಬವರ ಈ ಉಭಯರ ದಳದ ಮೇಲೆ ಪ್ರಜ್ವಲಿಸುವ ನಿಮ್ಮ ಘನದಿರುವ ನೋಡಿರೆ , ಗುಹೇಶ್ವರ ಲಿಂಗವು ಈರ್ವರ ದಳದ ಮೇಲಿದ್ದಾನೆ ನೋಡಾ.

ಇದು ವೇದ ವೇದಾಂತಗಳಿಗೆ ಅಸಾಧ್ಯವಾದ ವಾರ್ತೆ ತಂದಿಹುದು ನೋಡಿರೆ ! ಈ ಲಿಂಗ ವಾರ್ತೆ ಮೂಕನ ವೇದ ನೋಡಿರೆ ! ಇದು ವೇದ ವೇದಾಂತಗಳಲ್ಲಿ ಬರೆದ ವಾರ್ತೆ ಆಗದ್ದರಿಂದ ಅಲ್ಲಿ ಲಿಂಗ ತತ್ವ ಹುಡುಕಹೋಗಿ ಕೆಡಬೇಡಿರೆ! ಇದನ್ನು ವೇದ ವೇಧಿಸಲರಿಯದ್ದರಿಂದ ಅಲ್ಲಿ ಹುಡುಕ ಹೋಗಿ ದಿನವ ಕಳೆಯ ಬೇಡಿರೊ . ನಿಮ್ಮಿಂದ ನೀವೆ ಅರುವ ಅರಿದರಿದು ನೋಡಿರೋ? ಅರಿವು ನಿಮ್ಮಲ್ಲಿ ತದ್ಗತವಾಗಿದೆ, ಅನ್ಯವಿಲ್ಲ ಕಾಣಿರಂಣಾ . ತನ್ನಲ್ಲಿ ತಾನರಿಯಬಲ್ಲಡೆ ತನ್ನಲ್ಲಿ ತನ್ಮಯನು ಎಂಬ ಸಂಜ್ಞೆಯೆ ನಮ್ಮಲ್ಲಿ ಅರಿದರಿದು ನೋಡುವುಡೆ ಲಿಂಗವಂತಂಗೆ ಲಿಂಗದ ವಾರ್ತೆ ನುಡಿವುದೆ ಭಂಗವೆಂಬುದು ತನ್ನಿಂದ ತನಗೆ ವೇದ್ಯವಾಗುವುದು. ಆಗ ನುಡಿವುದೆಲ್ಲ ಹಂಗಾಗುತ್ತದೆ ಹಂಗಿನ ಶಬ್ದವಾಗುತ್ತದೆ. ಲಿಂಗವೆಂಬುದೆ ಹಂಗು , ಹಂಗಿನ ಶಬ್ದ . ಇದು ಕಾರಣ ಲಿಂಗದಿರುವು ತನ್ನಿಂದ ತಾನೆ ಅರಿದರಿದು ನೋಡುವುದು , ಆಗ ನುಡಿದುದೆಲ್ಲವು ಹೆತ್ತರಿವು ಆಗುವಲ್ಲಿ ಅದನ್ನು ವಾಣಿಯಿಂದ ವಿಸ್ತರಿಸಲು ಅದೆಂತು ಸಾಧ್ಯ.

ಕೊಡನ ತುಂಬಿದ ಹಾಲು , ಅದನ್ನು ಒಡೆದು ಹಾಯ್ಕಿದರೆ ಮುಂದೆ ಸಿಕ್ಕಬಹುದೆ? ಅಲ್ಲಿ ಕೂಡವಾದರೂ ಉಂಟೆ? ಹಾಲಾದರೂ ಉಂಟೆ ? ಕೊಡವು ನಷ್ಟ, ಹಾಲು ನಷ್ಟವಾಗುವಲ್ಲಿ ಸಕಲವು ನಿರರ್ಥಕ ಹೇಗೋ ಹಾಗೆ . ಶ್ರೀ ಗುರು ಅರುವ ಅರಿಯ ಹೇಳಿ ಕರುಣಿಸಿದ ಲಿಂಗ ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗ, ನಿರೂಪ ಲಿಂಗ. ಇದು ಕೊಡನ ತುಂಬಿದ ಹಾಲು ಅದನ್ನು ಅರಿದರಿದು ನೋಡುವದು

ಬಿಟ್ಟು ಲಿಂಗವ ಕುರುಹೆಂದು ತಿಳಿದು ಪೂಜಾಲಿಂಗ ಮಾಡಿ , ಅಷ್ಟವಿದಾರ್ಚನೆ ಮಾಡ ಹತ್ತಿರುವದೆ ಕೊಡನ ತುಂಬಿದ ಹಾಲು ಒಡೆ ಹಾಕಿ ಹಾಲು, ಹಾಲು ಎಂದರೆ ಶಿಕ್ಕಬಹುದೆ ? ಎಂದಂತೆ ಅಕ್ರಿಯೆ ಲಿಂಗ ಕ್ರಿಯೆಕ್ಕೊಳಪಡಿಸಿ ನೋಡುವುದೆ ಕೊಡ ತುಂಬಿದ ಹಾಲು ಒಡೆ ಹಾಕಿದಂತೆ.

ನರ ಜನ್ಮ , ಅರುವಿನ ಜನ್ಮ , ಅರುವೆ ತಾನಾಗಿಹ ಘನವು ಇದು ಕೊಡ ತುಂಬಿದ ಹಾಲು ಕೊಡವು ಮೌನ , ಹಾಲು ಮೌನ , ಮಾತಡಿದುದು ಹಾಲು ಅಲ್ಲ ಕೊಡವು ಅಲ್ಲ ಶ್ರೀಗುರು ಕರುಣೆ ಕೊಡ ತುಂಬಿದ ಹಾಲನ್ನೆ ದಯಪಾಲಿಸಿದರೂ ಅದನ್ನು ಸವಿಯುವ ಭಾಗ್ಯ ಇವರ ದಾಗಲಿಲ್ಲ. ಕೆಲಬರು ಇದು ಕೊಡ ತುಂಬಿದ ಹಾಲು ; ಹಾಲು ಇದು ಬಹು ಮಧುರಾಮೃತವೆಂದಲ್ಲಿ ಕೂಡಿದಂತಾಯಿತೆ ! ತೃಪ್ತಿ ಹೊಂದಿದನೆ? ಲಿಂಗರೂಪಿ ಕೊಡ ಅದು ಹಾಲು ತುಂಬಿದ ಕೊಡ ಪರಮಾಮೃತ ಜ್ಞಾನಾಮೃತ ತುಂಬಿದ ಕೊಡ. ಅದು ಲಭ್ಯವಾದ ಮೇಲೆ ಅದನ್ನು ಬಹು ಭದ್ರತೆಯಲ್ಲಿಟ್ಟು ಸೇವಿಸಬೇಕು . ಸೇವಿಸದೆ ಒಡೆ ಹಾಕಿದರೆ ಕೊಡವೂ ಇಲ್ಲ , ಹಾಲೂ ಇಲ್ಲ. ಇನ್ನು ಪುನಃ ಸಿಗಬಹುದೆ?

ಗುರು , ಅರುವ ಅರಿಯ ಹೇಳಿ ಕರುಣಿಸಿದ ಲಿಂಗ ಅರಿದರಿದು ನೋಡುವುದು ಬಿಟ್ಟು , ಲಿಂಗ ಲಿಂಗ ಎಂದು ಹಲುಬುತ್ತ ಕೂತರೆ ಲಿಂಗದರಿವು ತನಗೆ ವಿದಿತವಾಯಿತೆ ? ತನ್ನಿರವು ಲಿಂಗದಿರುವು ಒಂದಾದುದು ತನ್ನಿಂದ ತನಗೆ ವಿದಿತವಾಯಿತೆ ? ಆಗದು . ಇದು ಕಾರಣ ಇವರು ಕೊಡನ ತುಂಬಿದ ಹಾಲು ಒಡೆ ಹಾಕಿದವರು . ಅದನ್ನು ಸೇವಿಸಿ ತೃಪ್ತಿ ಹೊಂದುವ ಭಾಗ್ಯವಿಲ್ಲದವರು . ಆರು ಹಲಬುವದು ಬಿಟ್ಟು ಆರಾಧಿಸುವದು ಬಿಟ್ಟು ಸ್ತುತಿಸುವದು ಬಿಟ್ಟು ಅರಿದರಿದು ನೋಡಿಹರು , ಅವರು ಕೊಡ ತುಂಬಿದ ಹಾಲು ತಮ್ಮ ಕರಕಮಲದಲ್ಲಿ ಕಂಡವರು . ಕೊಡವು ಮೌನ, ಹಾಲು ಮೌನ, ಹಾಗೆ ಲಿಂಗವ ಅರಿದರಿದು ನೋಡಿದವರು ಲಿಂಗವು ಮೌನ . ಅರಿದರಿದು ನೋಡಿದ ತಾನು ಮೌನ . ತನ್ನಿರುವಿನ ಅರುವು ಮೌನವೆಂಬುದು ತನ್ನಿಂದ ತನಗದು ವೇದ್ಯವಾಯಿತ್ತು .

75

ಉರವಣಿಸುವ ಮನ , ಮುಟ್ಟುವನ್ನ ಬರ ಕಾಡುವುದು,
ಘನ ಘನದಲ್ಲಿ ಮನ ನಂಬುವನ್ನ ಬರ ಕಾಡುವುದು.
ಮಹಾಂತ ಗುಹೇಶ್ವರನೆಂಬ ಶಬ್ದವುಳ್ಳನ್ನಬರ ಕಾಡುವುದು. ॥ 610 ॥

ತಾತ್ಪರ್ಯ : ಉರವಣಿಸುವ ಮನ ಮುಟ್ಟುವನ್ನ ಬರ ಕಾಡುವುದು : ಇದು ವಿಷಯಾಕಾರದಿಂದ ಅಬ್ಬರಿಸುವ ಮನ . ಪ್ರವೃತ್ತಿ ಮನ , ಕಾಡುವ ಮನ ತಾನಾರೆಂಬ ತನ್ನ ನಿರ್ಣಯ ತನಗಾಗಗೊಡದಂತೆ ಕಾಡುವುದು . ಸ್ಥಲವೆನ್ನೆ ನಿಸ್ಥಲವೆನ್ನೆ ನಿರ್ಣಯವೆನಗಾದ ಬಳಿಕ ಏನೊಂದರಿಯೆನಯ್ಯ ಕೂಡಲ ಚೆನ್ನಸಂಗಮದೇವಾ ಲಿಂಗೈಕ್ಯವೆನ್ನೆ . ಈ ನಿರ್ಣಯ ತನಗಾದ ನಿರ್ಣಯ, ತಾನಾರೆಂದರಿತು ತನ್ನ ನಿರ್ಣಯ ತನಗಾದ ಮೇಲೆ ಇನ್ನೇನಿನ್ನೇನು. ಉಪಮಿಸಲು ಬಾರದಂತಾದ ತನ್ನಿರುವಿನರುವು ತನಗಾದ ಬಳಿಕ ಲಿಂಗೈಕ್ಯವೆಂದೆನ್ನೆ ಎಂದು ಬಿತ್ತರಿಸಿದುದು ನೋಡುವುಡೆ ಯತಾರ್ಥವಾದ ತನ್ನಿರುವಿನ ಅರುವು ತನ್ನಿಂದ ತನಗೆ ವಿದಿತವಾಗುವ ತನಕ ಪ್ರವೃತ್ತಿ ಮನ ನಿವೃತ್ತಿ ಮನ ಕಾಡುವುದು . ಆನು ಅರಿದೆ ಮರದೆ ಅಳಿದೆ ಉಳಿದೆ ನೆನ್ನುವ ಮನ. ಇದು ಉರವಣಿಸುವ ಮನ . ಈ ಮನ ತಾನಾರೆಂಬ ತನ್ನ ಯತಾರ್ಥ ಜ್ಞಾನ ಆಗಗೊಡದಂತೆ ಕಾಡುವುದು. ಇದು ಅಂಗ ನಾನೆಂದು ಅಬ್ಬರಿಸುವುದು . ಒಮ್ಮೆ ಲಿಂಗ ನಾನೆಂದು ಆರ್ಭಟಿಸುವುದು. ಇದು ಉಪಾಧಿಕ ಮನವುಳ್ಳದ್ದಾಗಿ ನಿರುಪಾಧಿಕ ಮನವುಳ್ಳದ್ದಾಗುವುದು . ಒಮ್ಮೆ ಬ್ರಹ್ಮಾಕಾರವುಳ್ಳದ್ದಾಗಿ ರಭಸದಿಂದ ಅರಿದೆನೆನ್ನುತ್ತದೆ .

ಒಮ್ಮೆ ವಿಷಯ ಚಿಂತನದಿಂದುಕ್ತವಾಗಿ ಮರದೆನೆನ್ನುತ್ತದೆ. ದೃಶ್ಯವೆಲ್ಲ ಅಳಿದುದು ಎನ್ನುತ್ತದೆ. ದೃಕ್ ಉಳಿದುದು ಎನ್ನುತ್ತದೆ, ಇದು ಹೀಗೆ ಬಹು ಕಾರ್ಯಗತವುಳ್ಳುದು.

ಉರವಣಿಸುವ ಮನ : ಇದಾವ ಮನ ? ಮರವರುವಿನಿಂದುಕ್ತವಾದ ಮನ . ಲಿಂಗವ ಮುಟ್ಟದ ಮನ . ಏಕೆಂದರೆ ಲಿಂಗವರಿಯದ ಮನ . ತನ್ನ ತಾನರಿಯದ್ದರಿಂದ ಉರವಣಿಸುವ ಮನ ಇದು ಒಮ್ಮೆ ಸ್ಥೂಲಕ್ಕೆ ಒಪ್ಪುತ್ತದೆ. ಮತ್ತೊಮ್ಮೆ ಸೂಕ್ಷ್ಮಕ್ಕೆ ಒಪ್ಪುತ್ತದೆ. ಒಮ್ಮೆ ಸಾಕಾರಕ್ಕೆ ಅಪ್ಪಿಕೊಳ್ಳುತ್ತದೆ. ಮಗದೊಮ್ಮೆ ನಿರಾಕಾರಕ್ಕೆ ಅಪ್ಪಿಕೊಳ್ಳುತ್ತದೆ . ಇತ್ತಿಂದತ್ತ, ಅತ್ತಿಂದಿತ್ತ ಹೀಗೆ ಕಾಡುವ ಮನ , ಇದು ನಷ್ಟವಾಗುವವರೆಗೆ ತನ್ನ ತಾ ಮುಟ್ಟನು ತಿಳಿಯನು.

ತಿಳಿಯದ ಮನ, ಕಾಡುವ ಮನ. ಬಹಿಮುರ್ಖವಾಗಿ ಕಾಡುವುದು ಅಂತರ್ಮುಖವಾಗಿ ಕಾಡುವುದು ಅವಿಚಾರವುಳ್ಳದ್ದಾಗಿ ಕಾಡುವುದು, ವಿಚಾರವುಳ್ಳದ್ದಾಗಿ ಕಾಡುವುದು. ಬ್ರಹ್ಮಾಕಾರವೆಂಬುದು ಅಂತರ್ಮುಖ , ವಿಷಯಾಕಾರವೆಂಬುದು ಬಹಿರ್ಮುಖ . ಇವು ಹಗಲು ರಾತ್ರಿಗಳಿದ್ದಂತೆ. ಒಂದು ಇದ್ದಾಗ ಇನ್ನೊಂದು ಇಲ್ಲ. ಇವು ತನ್ನ ಅರಿಯದ್ದರಿಂದ ಕಾಡುವ ಮನವೆಂದು ಹೇಳಿಹರು.

ತತ್ವ, ಅತತ್ವವೆಂದು ವಿಭಾಗಿಸುವ ಮನ. ತತ್ವ ತಿಳಿಯದ ಮನ. ಅತತ್ವವೆಂಬುದನ್ನಾದರೂ ತಿಳಿಯದ ಮನ, ಇದು ಅರಿಸಿಕೊಳ್ಳುವದು ಅತತ್ವ , ಅರಿಯುವದೆ ತತ್ವವೆಂದು ವಿಭಾಗಿಸಿದ ಮನ. ಈ ಮನ ತತ್ವ ಮುಟ್ಟದ್ದರಿಂದ ಕಾಡುವ ಮನವೆಂದು ಹೇಳಿಹರು.

ಪುಣ್ಯ, ಪಾಪ , ಸ್ವರ್ಗ, ನರಕ , ಬಂಧ , ಮೋಕ್ಷ ಪ್ರವರ್ತಕ ನಿವರ್ತಕವೆಂಬ ದ್ವಂದ್ವಗಳ ಕಲ್ಪಿಸುವ ಮನ ಪುಣ್ಯಕ್ಕೆ ಸೇರುವ ಮನ. ಪ್ರೀತಿಸುವ ಮನ, ಪಾಪಕ್ಕೆ ಸೇರದ ಮನ, ಸ್ವರ್ಗವನ್ನು ಅಪ್ಪಿಕೊಳ್ಳುವ ಮನ. ನರಕವ ಹೇಯವಾಗಿ ಕಾಣುವ ಮನ. ಬಂಧನಕ್ಕೆ ಸೇರದ ಮನ, ಮೋಕ್ಷಕ್ಕೆ ಆತುರ ಮಾಡುವ ಮನ . ಒಮ್ಮೆ ಪ್ರವರ್ತಕವಾಗಿ ಆರ್ಭಟಿಸುತ್ತಿದೆ . ಒಮ್ಮೆ ರಭಸದಿಂದ ನಿರ್ವತಕದ ಕಡೆ ಓಡುತ್ತದೆ. ಹೀಗೆ ಅತಿವೇಗದ ಮುಖವುಳ್ಳದ್ದಾಗಿ ತಾನಾರೆಂಬ ತನ್ನ ನಿರ್ಣಯ ತನಗಾಗ ಗೊಡದಂತೆ ಕಾಡುವುದು.

ಓ ಮನ, ನಿನಗೇನನ್ನಬೇಕು ? ಪೂರ್ವದಲ್ಲಿ ಜೀವ ಬ್ರಹ್ಮರ ಭೇದ ಜ್ಞಾನಕ್ಕೆ ಅಷ್ಟೆ ಒಪ್ಪಿಕೊಂಡು ವಿಷವು ದೃಷ್ಠಿಯುಳ್ಳದ್ದಾಗಿದೆ ! ಈಗ ಜೀವ ಬ್ರಹ್ಮರೇಕತ್ವ ಜ್ಞಾನಕ್ಕೆ ಅನು ಸಂದಾನಕ್ಕೆ ಒಪ್ಪಿಕೊಂಡಿರುವೆಯಲ್ಲ ಇದೇನು ಸೋಜಿಗ . ಭೇದ ದೃಷ್ಠಿಯುಳ್ಳದ್ದಾಗ್ಗಿ , ಹಿರಿದು ಕಿರಿದು ಮಾಡಿ , ಪೂಜ್ಯ ಪೂಜಕ ಭಾವ ನಿರ್ಮಿಸಿ , ಫಲಪದಾದಿಗಳ ಬಯಕೆಯುಳ್ಳದ್ದಾಗಿ ಕಾರ್ಯೋನ್ಮುಖವಾಗಿ ಕಾಡಿದೆ . ಈಗ ಅಭೇದ ಜ್ಞಾನವುಳ್ಳದ್ದಾಗಿ ಜೀವಪರಮರೈಕ್ಯವೆಂಬ ಅನುಸಂದಾನಕ್ಕೆ ಒಪ್ಪಿ , ಅಷ್ಟೆ ಆರ್ಭಟಿಸುವಿಯಲ್ಲ! ಏನಿದು ನಿನ್ನ ವಿಚಿತ್ರ ಸ್ವಭಾವ ? ಇದಲ್ಲದೆ ಅನುಸಂಧಾನವೆ ಪ್ರಧಾನ ಮಾಡಿ ಒಳ್ಳೆ ರಭಸದಿಂದ ಇದುವೆ ನನ್ನ ನಿಜದಿರುವು ಎಂದು ನಂಬಿ ಅಷ್ಟೆ ಆರ್ಭಟಿಸಿ ಕಾಡುವಿಯಲ್ಲ? ಏನಿದು ನಿನ್ನ ಮಾಯಿಕ ತನವ , ಯೋಗದಾಶೆ ಹುಟ್ಟಿಸಿ , ಯೋಗವನ್ನು ಪ್ರಧಾನ ಮಾಡಿ , ನಿರಂತರ ಚಿಂತನದಲ್ಲಿರುವಂತೆ ಮಾಡಿ ಅಂಚಿತ್ಯ ಪದದಿಂದ ದೂರ ಮಾಡಿ ಕಾಡುವೆಯಲ್ಲ. ಓ ಮನವೆ ನಿನಗೆ ವೈರಿ ಎನ್ನಲೆ ? ಹಿತದವನೆನ್ನಲೆ ? ಅರಸುವದೆ ನಿನ್ನ ಸ್ವಭಾವವಾದ್ದರಿಂದ ಕಾಡುವ ಮನ ವೈರಿ ಮನವಾದುದು ಯತಾರ್ಥವು .ಇದು ನಷ್ಟವಾಗದ ವಿನಃ ತಾನಾರೆಂದರಿಯನು .

ಓ ಮನವೆ? ಉರವಣಿಸುವ ಮನವೆ ! ಒಮ್ಮೆ ದ್ವೈತ ಮತಕ್ಕೆ ನಿನ್ನ ಮತವ ನೀಡುವೆ. ಒಮ್ಮೆ ಅದ್ವೈತಕ್ಕೆ ಮತವ ನೀಡುವೆ. ಒಮ್ಮೆ ಆ ಪಕ್ಷವನ್ನು ಒಪ್ಪಿಕೊಂಡು ಜಯ ಜಯಕಾರ ಮಾಡುವೆ ಒಮ್ಮೆ

ಈ ಪಕ್ಷವನ್ನು ಒಪ್ಪಿಕೊಂಡು ಜಯ ಜಯಕಾರ ಮಾಡುವೆ . ನಿನ್ನ ದಾವ ನಿಶ್ಚಿತ ಮತ . ಸಮ ಸ್ವರೂಪವಾಗಿಹ ತತ್ವ ಅರಿಯದ್ದರಿಂದ ನೀನು ಕಾಡುವ ಮನ , ಆರ್ಭಟಿಸುವ ಮನ . ನೀನು ಸಮ ತತ್ವ ತಿಳಿಯದ ತನಕ ಕಾಡುವ ಮನವೆಂದು ಹೇಳಿಹರು.

ಉರವಣಿಸುವ ಮನ : ಒಮ್ಮೆ ಯಂತ್ರಕ್ಕೆ ಒಪ್ಪಿಕೊಳ್ಳುತ್ತದೆ. ಒಮ್ಮೆ ತಂತ್ರಕ್ಕೆ ಒಪ್ಪಿಕೊಳ್ಳುತ್ತದೆ. ಒಮ್ಮೆ ಯಂತ್ರ ತಂತ್ರ ಇದ್ದವುಗಳೆಂದು ಒಪ್ಪಿಕೊಳ್ಳುತ್ತದೆ. ಒಮ್ಮೆ ಇಲ್ಲದವುಗಳೆಂದು ಒಪ್ಪಿಕೊಳ್ಳುತ್ತದೆ. ಒಮ್ಮೆ ಕೋಹಂ ಎಂದು ಗಾಬರಿಗೊಳ್ಳುತ್ತದೆ . ಒಮ್ಮೆ ಸೋಹಂ ಎಂದು ರಭಸದಿಂದ ಜಪ , ತಪ , ಧ್ಯಾನ ಮಾಡಲುದ್ಯುಕ್ತವಾಗುವುದು . ಒಮ್ಮೆ ಸಚ್ಚಿದಾನಂದ ನಾನೆಂದು ಆರ್ಭಟಿಸುತ್ತದೆ . ಹೀಗೆ ಕಲ್ಪಿತಕ್ಕೆ ಪ್ರಧಾನತ್ವ ಮಾಡಿ ರಭಸದಿಂದ ವೃತ್ತಿಯನ್ನೆ ಅವಲಂಬಿಸಿ ನಿರಾಲಂಬ ತತ್ವ ತಿಳಿಯದಂತೆ ವೃತ್ಯಾತ್ಮಕ್ಕೆ ಒಪ್ಪಿ ವೃತ್ತಿರಹಿತವಾದ ತನ್ನ ನಿಜದಿರುವಿನ ಅರುವ ಮುಟ್ಟಗೊಡದಂತೆ ಮಾಡಿದ್ದರಿಂದ ಕಾಡುವ ಮನವೆಂದು ಹೇಳಿಹರು.

ಘನ ಘನದಲ್ಲಿ ಮನ ನಂಬುವನ್ನ ಬರ ಕಾಡುವದು . ಓಹೋ , ಉರವಣಿಸುವ ಮನದ ಸಾಹಸ ಹೇಳುವದದೆಂತು ? ಪ್ರವೃತ್ತಿ ನಿವೃತ್ತಿ ಪ್ರವರ್ತಕ ನಿವರ್ತಕವನೆಲ್ಲ ಹಿಂದಕ್ಕೆ ತಳ್ಳಿ ಇವಾವುಗಳಿಗೆ ಲೆಕ್ಕಿಸದೆ ಘನವೆಂಬುದರಲ್ಲಿಯೂ ನಂಬುಗೆ ಮಾಡದೆ ಘನ ಘನದಲ್ಲಿ ನಂಬಿತೆ? ಮನ ನಂಬಿದರೇನಾಯಿತು. ಘನಕ್ಕೆ ಘನವೆಂದು ಹೇಳಿಕೊಂಡುರೇನಾಯಿತು ಹಲುಬುವುದೆ ತನ್ನಿರವು ಆಯಿತೇ ! ಘನಕ್ಕೆ ಘನವೆಂದು ನೆನಹಿನಿಂದುಕ್ತವಾದುದಾಯಿತ್ತಲ್ಲದೆ , ಮೀರಿದ ಘನದಿರುವಿನ ಅರುವಾಗಲಿಲ್ಲ. ಇದು ಕಾರಣ ಘನ ಘನವೆಂಬುದು ಇದು ಕಲ್ಪಿತವಲ್ಲ ನೆನಹಿಂಗೆ ನಿಲುಕದ ತತ್ವ, ನಿರ್ಣಯಕ್ಕೆ ಮೀರಿದ ಇರುವುಳ್ಳ ಅರಿವು. ಇದು ಮನಕ್ಕೆ ಮೀರಿದುದು ಎಂದು ತಿಳಿಯಲಿಲ್ಲ ತಿಳಿಯಲಿಲ್ಲವಾದ್ದರಿಂದ ಘನ ಘನವೆಂಬುದು. ಚಿಂತಿಸುವ ಚಿಂತನವೆ ತನ್ನಿರುವು, ಎಂದು ನಂಬಿದ್ದರಿಂದ ಇದು ಕಾಡುವ ಮನವಾಯಿತಲ್ಲದೆ ತನ್ನಯ ಸ್ವರೂಪವಾಗಲಿಲ್ಲ. ಕಲ್ಪಿತಕ್ಕೆ ನಂಬಿತಲ್ಲದೆ ಏನೊಂದುಸರಲು ಬಾರದ ತನ್ನಿರವು ತನಗೆ ವೇದ್ಯವಾಗಲಿಲ್ಲ. ಅದಕ್ಕಾಗಿ ಘನ ಘನದಲ್ಲಿ ಮನ ನಂಬುಗೆಯುಳ್ಳದ್ದಾದುದರಿಂದ ಇದು ಕಾಡುವ ಮನವಾಯಿತಲ್ಲದೆ ನಿಶ್ಚಿಂತ ನಿರಾಳದಿರುವು ಆಗಲಿಲ್ಲ.

ಮಹಾಂತ ಗುಹೇಶ್ವರನೆಂಬ ಶಬ್ದವುಳ್ಳನ್ನ ಬರ ಕಾಡುವುದು : ಈ ಮನಕ್ಕೆ ತನಗಿಂತ ಬೇರಾದ ಒಬ್ಬ ಮಹಾಂತನಿರುವನೆಂಬುದು ಇದಕ್ಕೆ ಗಟ್ಟಿಗೊಂಡುದೆ ತನ್ನ ಶಬ್ದ ತನಗೆ ಕಾಡುತ್ತಿಹುದು. ತನ್ನ ತಾನರಿತಲ್ಲಿ ತನಗಿಂತ ಬೇರಾದ ಮಹಾಂತನಿಲ್ಲ ಶೇಷ್ಠನಿಲ್ಲ. ಕೀಳನಿಲ್ಲ ಚಿದಹಮ್ಮು ಇಲ್ಲ ದಾಸೋಹಂ ಇಲ್ಲ. ಇಲ್ಲದುದು ಇಲ್ಲಾಗುವ ತನಕ ಶಬ್ದ ಸೂತಕ ವಿದ್ದುದು. ನಿರಂತರವಿದ್ದ ಘನಕ್ಕೆ ಘನ. ನುಡಿಗೆಡೆಗೊಟ್ಟುದಲ್ಲವೆಂಬುದು ತನ್ನಿಂದ ತನಗೆ ವಿದಿತವಾಗುವುಡೆ ಆಗ ತನ್ನೊಳಗೆ ಗುಹೇಶ್ವರ ಶಬ್ದವು ಇಲ್ಲದುದು. ಇದ್ದ ತಾನು ಇದ್ದಂತಿರುವುದರಿಂದ ತನ್ನೊಳ ಆವಾವ ಶಬ್ದಕ್ಕಿಂಬಿಲ್ಲ. ಉರವಣಿಸುವ ಮನಕ್ಕಿಂಬಿಲ್ಲ ಭಾವಕ್ಕಿಂಬಿಲ್ಲ ತಾನೆಂಬುದು ಶಬ್ದಮೀಸಲು ನೋಡಾ ತನಗೆ ತಾನೆನಲಿಲ್ಲ ಇಲ್ಲದ ಶಬ್ದಂಗಳ ಕಲ್ಪಿಸಿ ಕಾಡುವುದು ಎಂದು ಹೇಳಿಹರು .

76

ಕದನದೊಳಗಣ ಕಂಣು ಕೆಂಪು
ಕದನದೊಳಗಣ ಮನದ ಕೆಂಪು
ಇದಾವನಾವನ ಕಾಡದಯ್ಯ
ಪದುಮ ದೊಳಗೆ ಬಿಂದು ಸಿಲುಕಿ ಅಲ್ಲಿಯೆ ಅದೆ ನೋಡಿರೆ!

ಗುಹೇಶ್ವರನೆಂಬ ಅನುಗ್ರಹ ತನ್ನನುಂಗಿ ಲಿಂಗವಿಲ್ಲೆನುತಿದ್ದೆನು.

ತಾತ್ಪರ್ಯ : ಕದನದೊಳಗಣ ಕಣ್ಣು ಕೆಂಪು : ಕದನದೊಳಗಣ ಮನದ ಕೆಂಪು, ಇದಾವ ನಾವನ ಕಾಡದಯ್ಯ ಕದನ: ಇದಾವ ಕದನ, ದೈತ್ಯರಿಗೂ ದೇವತೆಗಳಿಗೂ ನಡೆದ ಕದನ ವೆನಬೇಕೆ? ಎನಲಾಗದು ಮಾನವ ಮಾನವರಲ್ಲಿ ನಡೆದ ಕದನ ವೆನಬೇಕೆ ? ಎನಲಾಗದು . ಕದನ ವೆಂದಲ್ಲಿ ಒಬ್ಬರನ್ನೊಬ್ಬರು ಕಾದುವ ಕದನ, ಕುಗ್ಗಿಸುವ ಕದನ, ಕಂದಿಸುವ ಕುಂದಿಸುವ ಕದನ . ಈ ಕದನಕ್ಕೆ ಇದಾವ ನಾವನ ಕಾಡದಯ್ಯಾ ಎನಬೇಕೆ? ಎನಲಾಗದು! ಇದು ಹೊರಗೆ ನಡೆಯುವ ಕದನವಲ್ಲ.ತನ್ನೊಳ ನಡೆಯುವ ಪ್ರಕೃತಿ ಕದನ ವೆನಬೇಕೆ? ಗುಣಮಯಿ ಕದನ ವೆನಬೇಕೆ? ಸತ್ವಗುಣ ರಜೋಗುಣವ ಸೇರದು. ರಜೋಗುಣ ಸತ್ವಗುಣ ಸೇರದು. ತಮೋಗುಣ ಇವೆರಡನ್ನು ಸೇರದು . ಧರ್ಮ ಅಧರ್ಮವ ಸೇರದು. ಅಧರ್ಮ ಧರ್ಮವ ಸೇರದು ಧರ್ಮಾಧರ್ಮ ಇವೆರಡು ಸೇರದು . ಗುಣಮಯಿ ವ್ಯವಹಾರ, ವಿಷಯ ವ್ಯವಹಾರ ಭೋಗ ತ್ಯಾಗವ ಸೇರದು . ತ್ಯಾಗ ಭೋಗವ ಸೇರದು . ಯೋಗ ಇವೆರಡನ್ನು ಸೇರದು ಆಸಕ್ತಿ ಅನಾಸಕ್ತಿ ಸೇರದು . ಮರವು ಅರುವನ್ನು ಸೇರದು. ಅರುವನ್ನು ಮರವು ಸೇರದು ಪ್ರವೃತ್ತಿ ನಿವೃತ್ತಿ ಸೇರದು. ನಿವೃತ್ತಿ ಪ್ರವೃತ್ತಿಯ ಸೇರದು. ಬೆಳಕು ಕತ್ತಲೆಯ ಸೇರದು . ಇದು ಪಿಂಡದಲ್ಲಿ ನಡೆದಿಹ ಪ್ರಕೃತಿಯ ಕಾರ್ಯ. ತನ್ನ ಪಿಂಡದೊಳಗೆ ತನ್ನಿಂದ ತನಗೆ ತೋರುವದು ವ್ಯಷ್ಠಿ ಕಾರ್ಯ. ಬ್ರಹ್ಮಾಂಡದೊಳಗೆ ತನ್ನಿಂದ ಸಕಲ ಶರೀರದೊಳಗೆ ತೋರುವುದು ಸಮಷ್ಠಿ ಕಾರ್ಯ . ಇಲ್ಲಿ ಕದನದೊಳಗಣ ಕಂಣು ಕೆಂಪು ಎಂದು ಹೇಳಲಿಲ್ಲ.

ಕದನದೊಳಗಣ ಕಂಣು ಕೆಂಪು ಕದನದೊಳಗಣ ಮನದ ಕೆಂಪು : ಇದಾವ ನಾವನಕಾಡದಯ್ಯಾ ಎಂದು ಬಿತ್ತರಿಸಿರುವಲ್ಲಿ ಪಿಂಡಾಂಡ ಬ್ರಹ್ಮಾಂಡ ಇವು ಕದನದಿಂದುಕ್ತವು .ಇದು ಕಾರಣ ಹಗಲು ರಾತ್ರಿ ಸೇರದು . ಅವಸ್ಥೆಗಳು ಒಂದಕ್ಕೊಂದು ಸೇರವು ಜಾಗೃತ ವ್ಯವಹಾರ ಸ್ವಪ್ನ ಸೇರದು. ಸ್ವಪ್ನ ವ್ಯವಹಾರ ಸುಷುಪ್ತಿ ಸೇರದು . ಈ ಮೂರರ ವ್ಯವಹಾರ ತೂರ್ಯವು ಸೇರದು . ಇದು ಕಾರಣ ಈ ವಿಷಯ ಇಲ್ಲಿ ಹೇಳಿರುವದಿಲ್ಲ.

ಕದನದೊಳಗಣ ಕಣ್ಣು ಕೆಂಪು : ಕದನದೊಳಗೆ ಕಣ್ಣು ಇದೆ. ಇದರ ಕಂಣು ಕೆಂಪು. ಗುಣತ್ರಯಂಗಳು , ಅವಸ್ಥಾ ತ್ರಯಂಗಳು ,ತನು ತ್ರಯಂಗಳು, ನೋಡಿ ಕೆಂಪಾದ ಕಣ್ಣಲ್ಲ ಇದು. ಕದನದೊಳಗಿದ್ದರೂ ತಾನು ನಿಸ್ಸಂಗವಾಗಿ ನಿರಾಲಂಬನಾಗಿ ಇದ್ದಂತಿರುವ ಕಂಣು ಕೆಂಪು, ಸೂರ್ಯಪ್ರಕಾಶಮಯ ದಾಹಕ ಶಕ್ತಿಯುಳ್ಳ ಘನ ಮಣಿ . ಅದು ಜಗದ ವ್ಯವಹಾರ ನೋಡಿ ದಾಹಕ ಶಕ್ತಿಯುಳ್ಳದ್ದಾಗಿರುವುದಿಲ್ಲ . ಕೆಂಪು ಆಗಿಲ್ಲ , ಪ್ರಕಾಶಮಯನು ಆಗಿಲ್ಲ. ಜಗದ ವ್ಯವಹಾರ ಅದಕ್ಕೆ ಅಂಟಿಲ್ಲ . ಅದುವೆ ನಿಸ್ಸಂಗವಾಗಿರುವಲ್ಲಿ ಅದು ದಾಹಕ ಶಕ್ತಿಯಿಂದ ಸುಡುವ ಉದ್ದೇಶವಿಲ್ಲ. ಪ್ರಕಾಶಮಯನಾಗಿ ಜಗತ್ತಿಗೆ ಶೋಭೆಯನ್ನುಂಟು ಮಾಡುವ ಉದ್ದೇಶವಿಲ್ಲ . ಅದು ಜಗದ ಕಾರ್ಯವಾಗಿಹ ಫಲ ಪದಂಗಳಿಗೆ ವಿರಹಿತ ಜಗತ್ತು ಕೊಡುವ ಗೌರವ ಅದಕ್ಕೆ ಬೇಕಿಲ್ಲ . ಸೂರ್ಯನ ಭಕ್ತರಾಗಿಹ ಅವರು ಕೊಡುವ ಫಲವು ಬೇಕಿಲ್ಲ . ಸಮ ಪ್ರಕಾಶವಾಗಿಹ ಘನ ಮಣಿ . ಪಿಂಡಾಂಡ ಬ್ರಹ್ಮಾಂಡ ನಡೆಯುವದು ನಿರಂತರ ಕದನ .ಈ ಕದನದೊಳಗಣ ಕಣ್ಣ ಕೆಂಪು , ಈ ಕಣ್ಣು ಕಣ್ಣಿನ ಕಣ್ಣು ಅನಿಮಿಷ ಕಣ್ಣು, ಇದು ನೋಡದ ನೋಟ . ನಿರ್ವೈರ ನೋಟ , ಸಮ ಸ್ವರೂಪವಾಗಿಹ ನೋಟ . ಇದಕ್ಕೆ ತನ್ನವರಿಲ್ಲ. ಅನ್ಯರಿಲ್ಲ ಹಿತದವರಿಲ್ಲ ಅಹಿತದವರಿಲ್ಲ ಈ ಕಣ್ಣು ಕೆಂಪು ಇದು ಚಿದಗ್ನಿ, ಚಿತ್ ಸ್ವರೂಪ. ಕದನದೊಳಗಣ ಕಣ್ಣು ಕೆಂಪು .ಇದು ಕಣ್ಣಿನ ಕಣ್ಣಾದ ಕಣ್ಣು . ತನ್ನಿಂದ ಬೆಳಗಿಸುವ ಕಣ್ಣು ಅಲ್ಲ. ಬೆಳಗಿನ ಬೆಳಗುಳ್ಳ ಕಣ್ಣು . ಈ ಕಣ್ಣು ಕೆಂಪು .ಇಲ್ಲಿ ಪ್ರಕಾಶ ಪ್ರಕಾಶಿತವೆಂಬ ವಿಭಾಗ ಇಲ್ಲ. ಇದು ಅಖಂಡಿತ

ಘನವಪ್ಪ ಪರಿಪೂರ್ಣವೆ ತನ್ನಿರುವೆಂದರಿದ ಕೆಂಪು ಕಣ್ಣು. ಆದುದರಿಂದ ಇದಾವ ನಾವನ ಕಾಡದಯ್ಯ.

ಕದನದೊಳಗಣ ಮನದ ಕೆಂಪು : ಈ ಮನದ ಕೆಂಪು ಕದನದೊಳಗಿದ್ದರೂ ಕದನಕ್ಕೆ ಅಂಟದೆ ಇದ್ದ ಕೆಂಪು . ಕದನ ತಾನಾಗದೆ ಇದ್ದ ಕೆಂಪು ಇದೆಂಥ ಮನದ ಕೆಂಪು ? ಈ ಮನದ ಕೆಂಪು ಉಪಾಧಿಕ ಮನವೂ ಆಗದು . ಉಪಾಧಿ ರಹಿತ ಮನವೂ ಆಗದು ಭ್ರಾಂತಿಯಿಂದುಕ್ತವಾದ ಮನವೂ ಭ್ರಾಂತಿ ರಹಿತ ಮನವೂ ಆಗದು . ಅಂಗ ಭೋಗೋಪ ಭೋಗವೂ ಆಗದು , ಲಿಂಗ ಭೋಗೋಪ ಭೋಗವೂ ಆಗದು , ಅಂಗ ಭಾವದ ಮನವೂ ಆಗದು , ಲಿಂಗ ಭಾವದ ಮನವೂ ಆಗದು , ಪ್ರವೃತ್ತಿ ಮನವೂ ಆಗದು ನಿವೃತ್ತಿ ಮನವೂ ಆಗದು , ಅರಸುವ ಮನವೂ ಆಗದು , ಆಲಾಪಿಸುವ ಮನವೂ ಆಗದು , ಆವಾವ ಚಿಂತೆಯಿಲ್ಲದ ಅಚಿಂತ್ಯದ ಮನವೆ ಮನದ ಕೆಂಪು ಎಂದು ಹೇಳಿದೆ .

ಮನದ ಕೆಂಪು ಸಂಕಲ್ಪ ವಿಕಲ್ಪ ಸುಟ್ಟ ರುದ್ರಾಗ್ನಿ,ಅಗ್ನಿ , ಅದು ಕಲ್ಪಿತ ಭ್ರಮ ನಷ್ಟ ಮಾಡುವ ಚಿದಗ್ನಿ . ಭಾವ ಭ್ರಾಂತಿಯ ನಷ್ಟ ಮಾಡವ ಜ್ಞಾನಾಗ್ನಿ . ಇದು ಕೂಟಸ್ಥ ತಾನಾಗಿಹ ಅಗ್ನಿ. ಇದು ಸಮ ನಿಲಯ. ಅವಿಚಾರ ವಿಚಾರ ಕದನದೊಳಗಿದ್ದರೂ ಕದನ ಕಾಣದ ಸುಮನವೆ ಮನದ ಕೆಂಪು , ಸುಜ್ಞಾನವೆ ಮನದ ಕೆಂಪು ಇದು ಕಾರಣ ಇದಾವ ನಾವನ ಕಾಡದಯ್ಯ . ಆವುದು ಕಲ್ಪಿತವಾಗಿಹುದು , ಅದು ಕಾಡುವುದು ಸಹಜ . ಕಲ್ಪಿತವಲ್ಲದ ಅಕಲ್ಪಿತ ಘನದಿರುವಿನ ಅರುವಿಂಗೆ ಒಪ್ಪಿದ ಮನವಾದ್ದರಿಂದ ಇದಾವನಾವನ ಕಾಡದಯ್ಯ ಎಂದು ಹೇಳಿದ್ದಾರೆ.

ಪದುಮದೊಳಗೆ ಬಿಂದು ಸಿಲುಕಿ ಅಲ್ಲಿಯೆ ನೋಡಿರೆ! ಗುಹೇಶ್ವರನೆಂಬ ಅನುಗ್ರಹ ತನ್ನನುಂಗಿ ಲಿಂಗವಿಲ್ಲೆನುತಿದ್ದೆನು:

ಬ್ರಹ್ಮದೊಳಗೆ ನಿಃಶಬ್ದ ಘನ ದನುವ ದೊರೆತುದು ಮಹಾಭಾಗ್ಯ . ಮೌನ ಮುದ್ರೆಯೊಳಗೆ ನಿರಂತರ ಮೌನವಾಗಿಹ ಮೌನೇಶನನುವ ಸಿಕ್ಕುದು ಮಹಾಭಾಗ್ಯ ನಿರ್ಬೋಧಕನಲ್ಲಿ ಬೋಧ ನಷ್ಟ ಮಾಡುವ ಸಜ್ಞೆಯ ಸಿಕ್ಕುದು ಮಹಾಭಾಗ್ಯ ಅಲ್ಲಿಯೆ ಅದೆ ನೋಡಿರೆ!

ಗುಹೇಶ್ವರನಲ್ಲಿ ಅನಿಮಿಷ ದೃಷ್ಟಿ ಕಂಡುದು ಅಲ್ಲಯ್ಯನ ಮಹಾಭಾಗ್ಯ. ಗುರು ಶಿಷ್ಯರ ಮಧ್ಯದಲ್ಲಿ ಸ್ವಯಂಜ್ಯೋತಿ ಕಂಡುದು ಮಹಾಭಾಗ್ಯ . ಈ ಜ್ಯೋತಿಗೆ ಎನನ್ನಬೇಕು? ಅರಿಸಿಕೊಳ್ಳದ ಜ್ಯೋತಿ . ಅರಿಯದ ಜ್ಯೋತಿ ಅರಿದಿಹೆನೆಂದಡೆ ಅರುವಿಂಗಸಾಧ್ಯವಾಗಿಹ ಜ್ಯೋತಿ ನೆನಹಿಂಗೆ ನಿಲುಕದ ಜ್ಯೋತಿ , ಭಾವಕ್ಕಿಂಬುಕೊಡದ ಜ್ಯೋತಿ ಈ ಸ್ವಯಂ ಜ್ಯೋತಿ ಸ್ವಯಂ ಜ್ಯೋತಿ ಎನಲಿಲ್ಲದ ಜ್ಯೋತಿ ಈ ಉಪಮಿಸದ ಜ್ಯೋತಿ ತನ್ನಿಂದ ಕಂಡುದು ಮಹಾಭಾಗ್ಯ . ಇದು ತಾನಾರೆಂದು ತನ್ನಿಂದ ತನ್ನ ಅರಿದರಿದು ಕಂಡ ಜ್ಯೋತಿ .

ಪದಮದೊಳಗೆ ಬಿಂದು ಸಿಲುಕಿ ಅಲ್ಲಿಯೆ ಅದೆ ನೋಡಿರೆ : ಎಂಬ ಅಲ್ಲಯ್ಯನ ಪರಮ ಕರುಣೆಯ ಪರಮಾಮೃತವು ಇದನಾರಯ್ಯ ಹೀಗೆ ಎಂದು ವಿವರಿಸುವುದು? ಪದ್ಮವು ಮೌನ. ಪದುಮದೊಳಗಿರುವ ಬಿಂದುವು ಮೌನವು. ಬ್ರಹ್ಮವು ಮೌನ, ಬ್ರಹ್ಮ ಗುಟ್ಟು ಮೌನವು, ಏನೆಂದೆನಲಿಲ್ಲದ ಅರುವು ಮೌನವು ಅದನು ಅರಿಯ ಹೋದ ಅರಿವು ಅರಿದರಿದುದು ಮೌನವು . ಬ್ರಹ್ಮವು ಮೌನ, ಬ್ರಹ್ಮದ ಬಿಂದು ಮೌನ, ಮೌನ ಮೌನದಂತಿದೆ. ಇದು ನುಡಿಗೆಡೆಗೊಡದ ಘನವಾದುದರಿಂದ ನಡೆ ನುಡಿಗೆ ಮೀರಿದ ಸಂಜ್ಞೆಯು ಅರಿವುಡೆ ಅರಿಯದರುವಿನ ಘನವು ಇದನೆಂತುಪಮಿಸುವದು.

ಪರಬ್ರಹ್ಮವದು ಮಾತು ಮನಂಗಳಿಂದತತ್ತ ವಾಗಿರುವಲ್ಲಿ ಅದು ಪರಬ್ರಹ್ಮವೆನಲಿಲ್ಲ ಪರಬ್ರಹ್ಮವರಿತು ಪರಬ್ರಹ್ಮವಾಗಿಹ ಅನಿಮಿಷದೃಷ್ಟಿ ಅದು ಏನೆಂದೆನಲಿಲ್ಲ ಪರಬ್ರೊಮ್ಮ ಅರಿಯಲಿಲ್ಲದ ಅರುವು ಮರೆಯಲಿಲ್ಲದ ಮರಹು ನೋಡಲಿಲ್ಲದ ನೋಟ ಕೂಡಲಿಲ್ಲದ ಕೂಟ ಬೆರಸಲಿಲ್ಲದ ಬೆರಗು

ನಿಂದುದು ಅಲ್ಲಿಯೆ ಅದೇ ನೋಡಿರೆ! ಗುಹೇಶ್ವರನೆಂಬ ಅನುಗ್ರಹ. ಇದು ಅರಿದರಿದು ನಿಂತವರ ನಿಜಧಾಮ, ನುಡಿದು ನಡೆದು ತೋರಿಸುವವರ ಅನುಗ್ರಹ ಇದಲ್ಲ. ತನ್ನ ಅನುಗ್ರಹ ತನಗೆ ತಾನೆ ತನ್ನ ಅನುಗ್ರಹ ತಾನೆ ಮಾಡಿಕೊಳ್ಳುವುದು, ತನ್ನ ತಾನೆ ನುಂಗಿಕೊಳ್ಳುವುದು ಆಗ ಲಿಂಗವುಂಟೆಂಬುದು ತಾನೆ ನಷ್ಟವಾಗಿಹುದು. ಇದು ಪ್ರಭು ಕಂಡ ಅನುಗ್ರಹ ಪ್ರಭುವಾದವರಿಗೆ ಪ್ರಭುವಿನ ಅನುಗ್ರಹ. ಅಲ್ಲಯ್ಯನಾದವನಿಗೆ ಅಲ್ಲಯ್ಯನ ಅನುಗ್ರಹ ದೊರೆತುದಲ್ಲದೆ ಅನ್ಯರಿಗೆ ಅಸಾಧ್ಯ. ಶಬ್ದಸೂತಕವುಳ್ಳವರಿಗೆ ಇದು ಅಸಾಧ್ಯವು. ಆರು ನಿಶಬ್ದವೇದಿಗಳು ಅವರಿಗೆ ಸಾಧ್ಯವು.

ಗುರು ಶಿಷ್ಯರಾಗಿ ಅನುಗ್ರಹ ಪಡೆಯುವ ಅನುಗ್ರಹಿಸುವ ವೃಂದ ಸಾಕಷ್ಟು ಶಿಕ್ಕುತ್ತಾರೆ. ಇವರು ಶಬ್ದವೇದಿಗಳಾದುದರಿಂದ ಕರ್ಮ, ಉಪಾಸನೆ, ಜ್ಞಾನ ಈ ಮೂರು ವೇದ ವೇದಾಂತಗಳಿಂದಲೂ ಉಪನಿಷತ್ ಆಗಮಗಳಿಂದಲೂ ಲಭ್ಯವಾದ ಜ್ಞಾನ. ಉಪಾಸನೆ ಕರ್ಮಂಗಳು ಇವುಗಳನ್ನು ಹೇಳುವ ಕೇಳುವ ಗುರು ಶಿಷ್ಯ ವೃಂದವದೆ. ಈ ಬೋಧ ನಷ್ಟ ಮಾಡುವ ನಷ್ಟಮಾಡಿದ ಗುಹೇಶ್ವರ ಗುಹೇಶ್ವರನೆಂಬ ಗುರ್ವಾನುಗ್ರಹವುಳ್ಳ ಅನಿಮಿಷ ದೃಷ್ಠಿ ಶಿಕ್ಕುವುದು ಅಪರೂಪವೇ. ದೊರೆತರೂ ಅನಿಮಿಷ ದೃಷ್ಠಿ ಅದು ಶಿಕ್ಕುವುದು ಅಪರೂಪ. ದೊರೆತರೂ ಅನಿಮಿಷ ದೃಷ್ಠಿ ಅದು ಗುರ್ವಾನುಗ್ರಹವೆಂದು ತಿಳಿಯುವ ಶಿಷ್ಯರು ಅಪರೂಪ. ಇದು ಅನಿಯಮದ ಬೆಡಗು, ಇಲ್ಲಿ ಮೌನ ಗುರುವಿನ ನಿರ್ಬೋಧ ಕಿವಡ ಶಿಷ್ಯನ ಶ್ರವಣ ಇದಾರಿಗೆ ವಿದಿತವಾಗುವುದು. ಕಲ್ಪಿತವಲ್ಲದ ಅನಿಮಿಷ ದೃಷ್ಠಿಯ ಮೌನ ಗುರು. ಅಕಲ್ಪಿತ ಘನದಿರುವಿನ ಅರುವು ಅರಿದರಿದು ತಾನೆ ತಾನಾಗಿ ನಿಂತು ನೋಡುವ ಕಿವುಡ ಶಿಷ್ಯ ಇವರೀರ್ವರದು ನಿರ್ವಿವಾದ ನಿಲವು. ನಿರಂಜನ ನಿಜ ಚಿದ್ರೂಪ ತಾವಾದ ಮಹಾಂತರ ಅನುಪಮ ನಿಲವು. ಅನುಪಮನಾಗಿ ತಿಳಿವುದು ಇದು ಗುಹೇಶ್ವರನೆಂಬ ಅನುಗ್ರಹ ತನ್ನ ನುಂಗಿ ಲಿಂಗವಿಲ್ಲೆನುತ್ತಿದ್ದೆನು ಎಂದು ಹೇಳಿಹರು.

77

ಭಾವವಳಿಯದೆ ಬಯಕೆ ಸವೆಯದೆ ಐಕ್ಯವು ಆವ ಘನವೆಂದಡಹುದೆ?
ಶಬ್ದಸಂಭ್ರಮದ ಮದವಳಿಯದೆ ತನ್ನ ಇದಿರಲ್ಲಿ ಪ್ರತಿಯುಳ್ಳಡೆ,
ಏನೆಂದಡೂ ಅಹುದೆ? ಗುಹೇಶ್ವರನೆಂಬ ಶಬ್ದಸಂದಳಿಯದೆ
ಬೇಸತ್ತು ಬಯಲಾದಡೆ ಆಯತವಹುದೆ? ॥ 612 ॥

ತಾತ್ಪರ್ಯ : ಭಾವವಳಿಯದೆ ಬಯಕೆ ಸವೆಯದೆ ಐಕ್ಯವು ಆವ ಘನವೆಂದಡಹುದೆ: ಭಾವ ವಳಿದವರು ಯಾರು? ಅಂಗದ ಧರೆಯ ಮೇಲೆ ಮೂರು ಭಾವಿಗಳುಂಟು, ಮೊದಲನೆಯ ಭಾವಿ ಮುಟ್ಟಿದಾತ, ಅಂಗ ಸಂಗಿಯಾದ ನಡುವಣ ಭಾವಿ ಮುಟ್ಟಿದಾತ ಉತ್ಪತ್ತಿ ಸ್ಥಿತಿ ಲಯಕ್ಕೊಳಗಾದನು ಮೇಲಣ ಭಾವಿ ಮುಟ್ಟಿದಾತ ಜೀವನ್ಮುಕ್ತನಾದನು. ಇವ ತಟ್ಟದೆ ಮುಟ್ಟದೆ ಹೋದರು ನೋಡಾ ಪರಬ್ರಹ್ಮವದಾಟಿ ಗುಹೇಶ್ವರ ಲಿಂಗದಲ್ಲಿ ಹಂಗು ಹರಿದ ಶರಣರು.

ಭಾವವಳಿದವರೆಂದರೆ ಮೂರು ಭಾವಿಗಳ ತಟ್ಟದೆ ಮುಟ್ಟದೆ ಹೋದವರು. ಅವರು ಪರಬ್ರಹ್ಮವ ದಾಂಟಿದವರು. ಗುಹೇಶ್ವರ ಲಿಂಗದಲ್ಲಿ ಹಂಗು ಹರಿದ ಶರಣರೆ ಭಾವವಳಿದವರು ಎಂದು ಹೇಳಿದ್ದಾರೆ. ಅವರು ಭಾವಕ್ಕಗಮ್ಯರು. ಇದು ಕಾರಣ ಭಾವವಳಿದವರು. ಭಾವವಳಿಯ ಬೇಕಾದರೆ ತಾನು ಭಾವಕ್ಕಗಮ್ಯನೆಂಬುದು ಅರಿದರಿದು ನೋಡಿದ ಶರಣಂಗೆ ಸಾಧ್ಯವಲ್ಲದೆ ಭಾವುಕರಿಗೆ ಭಾವ ಅಳಿಯುವದು ದುಸ್ತರ ವಾಗುತ್ತದೆ. ಕಲ್ಪಿತ ಪುರುಷ ತಾನೆಂದು ಒಪ್ಪಿಕೊಂಡುದರಿಂದ ಅಂಗ ಭಾವಿಯು

ಆಗಿರುವಲ್ಲಿ ಲಿಂಗ ಭಾವಿಯು ಆಗಿರುತ್ತಾನೆ. ಇವೆರಡು ಒಂದೆ ಅನ್ನುವ ಬ್ರಹ್ಮಭಾವಿಯು ಆಗಿರುತ್ತಾನೆ. ಪ್ರಥಮ ಮರವಿನಿಂದುಕ್ತನಾಗಿ ಅಂಗ ಭಾವಿಯು, ಆಸ್ತೀಕನಾಗಿ ಲಿಂಗ ಭಾವಿ ಅರುವಿನ ಭಾವಿಯಾಗಿ ಬ್ರಹ್ಮಭಾವಿಯು ಈ ಪ್ರಜ್ಞಾನಂಬ್ರಹ್ಮವೆಂಬ ಅರುವಿನ ಪ್ರಜ್ಞೆಯಾಗಿರುವದರಿಂದ ಪ್ರಪಂಚ ಪ್ರತೀತಿಯಾದರೂ ಬ್ರಹ್ಮಾಕಾರ ವೃತ್ತಿಯಿಂದುಕ್ತನಾಗಿಹನು. ಇದು ಕಾರಣ ಜೀವನ್ಮುಕ್ತನೆನಿಸುವನು. ಈತನಾದರೂ ತನ್ನನ್ನು ಯತಾರ್ಥವರಿಯಲಿಲ್ಲ. ಅರಿಯದ್ದರಿಂದ ಅಖಂಡ ಜ್ಞಾನಿಯಾಗಲಿಲ್ಲ.

ಒಂದನ್ನು ತ್ಯಜಿಸದೆ ಒಂದನ್ನು ಸ್ವೀಕರಿಸದೆ. ಕ್ಷರ ಭಾವವ ತ್ಯಜಿಸಿದ ಅಕ್ಷರ ಭಾವಿಯಾದೆ. ಎಲ್ಲಿ ನೋಡಿದಡೂ ಅಕ್ಷರ ಭಾವ ಘಟ್ಟಿಗೊಂಡಿತಲ್ಲದೆ ಕ್ಷರಾಕ್ಷರವೆಂಬುದಕ್ಕು ಮೀರಿದ ಘನದರುವಿನ ಅರುವಾಗಲಿಲ್ಲ. ಇದು ಕಾರಣ ಭಾವವಳಿಯುವದು ದುಸ್ತರವಾಯಿತ್ತು. ಇದು ಕಾರಣ ಮೊದಲನೆ ಭಾವಿಯು ಜೀವಭಾವಿಯು, ನಡುವಣ ಭಾವಿಯು ಅಂತರಾತ್ಮ ಭಾವಿಯು, ಮೇಲಣಭಾವಿಯು, ಪರಮಾತ್ಮ ಭಾವಿಯು ಎಂದು ದೃಢವಾಗಿಹವು. ಭಾವ ವಳಿಯ ಬೇಕಾದರೆ ಬಯಕೆ ನಷ್ಟವಾಗಬೇಕಾದರೆ ತಾನಾರು ಎಂದು ತನ್ನ ತಿಳಿಯ ಬೇಕೆಂಬ ತೀವ್ರೇಚ್ಛೆ ಮೊದಲು ಬೇಕು. ನಂತರ ಯತಾರ್ಥ ಜ್ಞಾನ ಮಾಡಿಕೊಡುವ ಸದ್ಗುರು ಬೇಕು. ಆ ಗುರುಲಿಂಗದಲ್ಲಿ ಅಪಾರ ಶ್ರದ್ಧೆ, ವಜ್ರೋಪ ಸಮಾನವಾದ ನಿಷ್ಠೆ ಬೇಕು ಇವರೀರ್ವರು ಸತ್ತವರು.

ಸತ್ತ ಗುರುವಿನ ಕಾರುಣ್ಯವ ಸತ್ತಕೊಂಬ ಶಿಷ್ಯ. ಇವರು ಅಹಮ್ ಇಲ್ಲದವರು. ಅವರದು ಏಕತ್ವನಿಲವು. ಈರ್ವರೊಂದಾದ ನಿಲವು. ಅನಿಮಿಷ ದೃಷ್ಠಿ ಗುರು ಅದನ್ನು ಸಂಪಾದಿಸಿಕೊಂಡು ಅದುವೆ ತಾನಾಗಿಹ ಶಿಷ್ಯ. ಇವರು ಮಾತ್ರ ಭಾವ ಅಳಿದವರು, ಬಯಕೆ ನಷ್ಟವಾದವರು. ಅವರಲ್ಲಿಯೆ ಐಕ್ಯದ ಘನತ್ವ ಪ್ರಜ್ವಲಿಸುತ್ತಿದೆ. ಭಾವ ದಿಟವಾದ ಅವನು ನಿಃಕಾಮಿಯಾಗಲಾರ, ನಿಃಕಾಮಿಯಾಗದೆ ಐಕ್ಯಘನವೆಂಬುದು ಬರೀ ಮಾತಲ್ಲದೆ ಅರಿದರಿದ ಮಾತಲ್ಲ. ಭಾವವೆಂಬುದು ಭ್ರಮವು. ಈ ಭ್ರಮ ನಷ್ಟವಾಗಬೇಕಾದರೆ ತಾನು ಅಕಲ್ಪಿತ ಘನವೆಂಬರಿವು ದೃಢಗೊಳ್ಳಬೇಕು. ಇದರಿಂದ ನಿಃಶಬ್ದವೇದಿಯಾಗುವನು. ಆಗ ಗರುವಿಡಿದರಿವು ಅರುವಲ್ಲ ಲಿಂಗವಿಡಿದರುವು ಅರುವಲ್ಲ. ಗುರುವೆಂಬುದು ಕಲ್ಪಿತ. ಲಿಂಗವಿಡಿದರುವು ಅರುವಲ್ಲ ಅದು ಕಲ್ಪಿತ. ಕಲ್ಪಿತಕ್ಕೆ ಅರುವಹುದೆ! ತನ್ನಿಂದ ತಾನರಿವುಡೆ ಅರುವು ಗುಹೇಶ್ವರ.

ಐಕ್ಯವು ಘನವಾಗುವಲ್ಲಿ ಗುರುವಿಡಿದ ಅರುವು ಆಗನು. ಲಿಂಗವಿಡಿದ ಅರುವು ಆಗನು. ಶೃತಿಗಗೋಚರ ತಾನೆಂಬುದು ಘಟ್ಟಿಗೊಂಡುದು. ತನ್ನಿಂದ ತನ್ನ ತಾನರಿದುದು ಎಂದು ತಿಳಿಯುವುದು. ಆಗ ಆವ ಭಾವಂಗಳೆ ಇರಲಿ ಅವುಗಳೆಲ್ಲವೂ ಭ್ರಮವೆಂಬುದು ತನ್ನಿಂದ ತನಗೆ ವಿದಿತವಾಗುವುದು. ಇದು ಕಾರಣ ಜೀವಭಾವವಿರಲಿ, ಅಂತರಾತ್ಮ ಭಾವವಿರಲಿ ಪರಮಾತ್ಮ ಭಾವವಿರಲಿ, ಭಾವಕ್ಕಗಮ್ಯವಾಗಿಹ ತನ್ನ ಘನದಿರುವು ಅರಿದರಿದು ನೋಡಲಿಲ್ಲ. ತನ್ನ ಅಚಿಂತ್ಯಪದ ತನಗೆ ಸಿದ್ಧಿಸಲಿಲ್ಲ. ಏಕೆಂದರೆ ಸಕಲ ಭಾವಂಗಳ ಅಧಿಷ್ಠಾನ ತಾನು ಘನಗಂಭೀರದೊಳ್ ಘನಕ್ಕೆ ಘನವಾಗಿರ್ದ ತಾನು ತನ್ನ ಅಧಿಷ್ಠಾನದ ಪರಿಚಯವಿಲ್ಲದ್ದರಿಂದ ಭಾವ ವಿರಹಿತನಾಗುವದು ದುಸ್ತರವಾಗಿದೆ. ನಿಃಕಾಮಿಯಾಗುವುದು ಕಠಿಣವಾಗಿದೆ. ಇಂಥವನು ಲಿಂಗೈಕ್ಯ ವಿಷಯ ಮಾತಾಡುವದು ಯತಾರ್ಥವಲ್ಲ. ಲಿಂಗವರಿತು ಲಿಂಗವಾಗಿಹ ಅಚಲಾನಂದವು ಅಲ್ಲಿ ಇಲ್ಲ ಸುಖ, ಆನಂದ ಅರಿವು ವಾಣಿಯ ಅಳತೆಗೆ ನಿಲುಕುವಷ್ಟು ಬರುವದಲ್ಲ. ಅದನ್ನು ವಾಣಿಯಲ್ಲಿಯೆ ಕಥನ ಮಾಡಿ ಸರಿಮಾಡುವುದೆಂದರೆ ಲಿಂಗೈಕ್ಯವದು ಮಾತಿನ ಮಲ್ಲರದಲ್ಲ. ಮೀಸಲ ತತ್ವವರಿತವರ ಇರವು ಅಲ್ಲಿಗೆ ಭಾವಂಗಳು ಬರವು ಬಯಕೆಯು ಬರದು ಇದು ಕಾರಣ ಅಲ್ಲಿ ಲಿಂಗೈಕ್ಯವೆಂಬುದು ಘನಕ್ಕೆ

ಘನವಾಗಿದ್ದುದು.

ಶಬ್ದ ಸಂಭ್ರಮದ ಮದವಳಿಯದೆ ತನ್ನ ಇದಿರಲ್ಲಿ ಪ್ರತಿ ಉಳ್ಳಡೆ ಏನೆಂದಡೂ ಅಹುದೆ: ಶಬ್ದ ಸಂಭ್ರಮದವರೆಂದರೆ ವೇದ ವೇದಾಂತವನೋದಿದವರು. ಶಾಸ್ತ್ರಪುರಾಣಂಗಳ ಪಠಣ ಪಾರಾಯಣ ಮಾಡಿದವರು, ಉಪನಿಷದ್ ಆಗಮಗಳ ಮತಿವಂತರು. ಇವರು ಶಬ್ದಸಂಭ್ರಮದ ಮದವುಳ್ಳವರು. ಇವರು ವೇದ ವೇದಾಂತವನೋದಿದರಲ್ಲದೆ ತನ್ನ ಅರಿಯಲಿಲ್ಲ. ಉಪನಿಷದ್ ಆಗಮಗಳಲ್ಲಿರುವ ಯುಕ್ತಿ, ಪ್ರಯುಕ್ತಿ, ಲಕ್ಷಣ, ಲಕ್ಷ್ಯವ ಕಂಡರಲ್ಲದೆ ತನ್ನ ಕಾಣಲಿಲ್ಲ. ಷಟ್‌ಶಾಸ್ತ್ರವಿರಲಿ, ದಶುಪನಿಷದ್‌ಗಳೆ ಇರಲಿ ಇಪ್ಪತ್ತೆಂಟು ಆಗಮಂಗಳಿರಲಿ ಅವುಗಳ ಅಭ್ಯಾಸಮಾಡಿ ಸೂಕ್ಷ್ಮ ಮತಿವಂತರುಗಳಾಗಿ ಶಬ್ದಸಂಭ್ರಮದ ಮದವುಳ್ಳವರಾಗಿಹರಲ್ಲದೆ ತನ್ನ ತಾನರಿಯಲಿಲ್ಲ. ತನ್ನ ಅರಿಯದ್ದಕ್ಕೆ ತನ್ನ ಇದರಲ್ಲಿ ಪ್ರತಿ ಉಳ್ಳದ್ದಾಗಿ ಭಿನ್‌ದೃಷ್ಠಿ ಉಂಟಾಯಿತಲ್ಲದೆ ನೋಡದ ನೋಟವಾಗಲಿಲ್ಲ. ಕೂಡದ ಕೂಟವಾಗಲಿಲ್ಲ. ಬೆರಸಲಿಲ್ಲದ ಬೆರಗು ಕರಿಗೊಳ್ಳಲಿಲ್ಲವಾದ್ದರಿಂದ ಅದು ಮಾತಿನ ಐಕ್ಯವಾಯಿತ್ತು. ಐಕ್ಯನ ಐಕ್ಯವೆಂಬುದು ಆಯಿತ್ತು. ಸ್ಥಲವೆನ್ನೆ, ನಿಸ್ಥಲವೆನ್ನೆ ತನ್ನ ನಿರ್ಣಯ ತನಗಾದ ಬಳಿಕ ಏನೊಂದರಿಯೆನಯ್ಯಾ ಎಂಬುದು ಮಾತಿನ ಉಗಮವಾಯಿತ್ತು. ಮಾತಿನ ವೃದ್ಧಿಯಾಯಿತ್ತು. ಮಾತೆ ಘನಕ್ಕೆ ಘನವೆಂದಿತ್ತು, ಶಬ್ದಮುಗ್ಧವೆಂದಿತ್ತು, ಅನುಪಮವೆಂದಿತ್ತು. ಏನ ಹೇಳಿದರೂ ನುಡಿಗೊಳಪಟ್ಟುದಾಯಿತ್ತಲ್ಲದೆ ನುಡಿಗೆಡೆಗೊಡದ ಘನವಾಗಿಹ ತನ್ನರಿವು ತಾನಾರೆಂದರಿತ ತನ್ನರಿವಿನ ಅರಿವು ಕರಿಗೊಂಡ ನಿಲುವುಳ್ಳದ್ದಾಗಲಿಲ್ಲ. ಇದು ಕಾರಣ ಶಬ್ದ ಸಂಭ್ರಮದ ಮದವಳಿಯದೆ ತನ್ನ ಇದಿರಿನಲ್ಲಿ ಪ್ರತಿವುಳ್ಳಡೆ ಏನೆಂದರುಹುದೆ? ಎಂದು ಹೇಳಿದ್ದಾರೆ.

ಲಿಂಗೈಕ್ಯವದು ಎಂಜಲ ಮಾತಿನವರದಲ್ಲ : ಮಿಗೆ ಮಿಗೆ ಮೀಸಲವಾಗಿಹ ಘನವ ಅವರೆತ್ತ ಬಲ್ಲರು. ಮಿಗೆ ಮಿಗೆ ಮೀಸಲವಾಗಿಹ ಘನವ ಬಲ್ಲವರು ಅವರು ಲಿಂಗ ಸಕೀಲ ಸಂಯೋಗ ವರ್ಮ ಸ್ಥಲವರಿತವರು ಲಿಂಗೈಕ್ಯರು ಅದು ಗುಹೇಶ್ವರ ಲಿಂಗವರಿತ ಚಿನ್ಹ. ಅಲ್ಲಿ ಭಾವಕ್ಕಿಂಬಿಲ್ಲ. ಶಬ್ದ ಮೀಸಲಾಗಿದೆ ನುಡಿಗೆ ಅವಕಾಶವಿಲ್ಲದಿರುವಲ್ಲಿ ಭಾವಕ್ಕೊಳಪಟ್ಟು ಲಿಂಗೈಕ್ಯ ವಿಷಯ ಕಥನ ಮಾಡುವುದು ಲಜ್ಜಾಸ್ಪದವಲ್ಲವೆ? ಶಬ್ದವೆ ಮೀಸಲುವಾಗಿಹ ತತ್ವದಲ್ಲಿ ಶಬ್ದಗಳುಚ್ಚರಿಸುವದು ಭ್ರಾಂತಿ ಅಲ್ಲವೆ. ಇದು ಕಾರಣ ಲಿಂಗೈಕ್ಯವದು ಭಾವಿಕರ ಭಾವಕ್ಕೊಳಪಟ್ಟುದಲ್ಲ ಬಯಕೆ ಉಳ್ಳವಂಗೂ ಲಭ್ಯವಾಗುವುದಲ್ಲ. ಶಬ್ದಾಭಿಮಾನಿಗಳಿಗೂ ಸಾಧ್ಯವಾಗದ ಘನವು ತಾನಾರೆಂದರಿಯದೆ ತನಗಿಂತ ಬೇರಾದುದು ಶ್ರೇಷ್ಟವದೆ , ಕೀಳು ಅದೆ ,ಮಧ್ಯವರ್ತಿ ಅದೆ ಎಂಬ ಪ್ರತಿ ಉಳ್ಳಡೆ ಅದೆಂಥ ಲಿಂಗೈಕ್ಯವೆನಬೇಕು? ಅದು ನಿಷ್ಪ್ರಯೋಜಕವೆಂದು ಹೇಳಿಹರು.

ಗುಹೇಶ್ವರನೆಂಬ ಶಬ್ದ ಸಂದಳಿಯದೆ ಬೇಸತ್ತು ಬಯಲಾದಡೆ ಆಯತವಹುದೆ: ತಾನಾರೆಂಬ ತನ್ನರುವಿನ ಅರುವು ತನ್ನೊಳು ತನ್ನಿಂದ ತನಗದು ಸಿದ್ಧಿಸಬೇಕಾದಲ್ಲಿ ಗುಹೇಶ್ವರನೆಂಬ ಶಬ್ದಕ್ಕವಕಾಶ ಮಾಡಿಕೊಂಡಿಹನು. ಗುಹೇಶ್ವರ ಶಬ್ದವು ಸತ್ಯವಾಗಿದೆ. ಅದು ತಾನಾರೆಂದರಿತ ಸ್ವರೂಪ ಸಾಕ್ಷಾತ್ಕಾರವಲ್ಲ ತನ್ನಿಂದ ತನ್ನ ಅರಿದರಿದು ನೋಡುವದಾಗಿದೆ .ಇದು ಅಸಾಧ್ಯ ಮಾತೆಂದು ಸೋತವನಾಗಿ ಮನ ಜಿಗುಪ್ಸೆಗೊಂಡು ಸತ್ತರೂ ದೇಹ ತೊರೆದರೂ ಲಿಂಗೈಕ್ಯವೆನಬಹುದೆ? ತನ್ನಿಂದ ತನ್ನ ಅರಿದರಿದು ನೋಡಿದ ಅನುಪಮ ಮಹಾಂತನೆನಬಹುದೆ? ಎನಲಾಗದು ಎಂದು ಹೇಳಿಹರು.

78

ಕೆರೆಯಲುಂಡು ತೊರೆಯ ಹೊಗಳುವುರು.ಅತ್ಯುತ್ಕಟದ

ಪರಬ್ರಹ್ಮವನೆ ನುಡಿವರು .ಸಹಜ ಪಿನಾಕಿಯ
ಬಲೆಯಲ್ಲಿಸಿಲುಕಿ ಭವವ ಹರಿಯಲರಿಯರು .
ರುದ್ರನ ಛತ್ರವನುಂಡು ಇಲ್ಲವೆಯ , ನುಡಿವ
ಹಿರಿಯರಿಗೆ ಮಹದ ಮಾತೇಕೋ ಗುಹೇಶ್ವರಾ ?

ತಾತ್ಪರ್ಯ : ಕೆರೆಯಲುಂಡು ತೊರೆಯ ಹೊಗಳುವರು : ಮಾನವ ! ಡಾಂಭಿಕ ಮಾನವ ತನ್ನಿಂದ ಅಲ್ಪ ಕಾರ್ಯವಾಗಿದ್ದರೂ ಅದನ್ನು ಬಹಿರಂಗ ಪಡಿಸದೆ, ಮಹದ ಸುದ್ದಿ ಹೇಳುವವ ಹೊಗಳುವ ಹೊಗಳಭಟ್ಟ ತಾನು ಕೀಳು ಮಾನವನಾಗಿದ್ದರೂ ಅತಿ ಮಾನವ, ಮಹಾಮಾನವನೆಂದು ಹೇಳಿಕೊಳ್ಳುವ ಕಾರ್ಯ ನೋಡಿದರೆ ವಿಷಯಿ , ವ್ಯಸನಿ ವಿಷಯಭೋಗೋಪಭೋಗಿ ಹೇಳಿಕೊಳ್ಳುವುದು ನೋಡಿದರೆ ತಾನು ನಿರ್ವಿಷಯನು ಲಿಂಗಭೋಗೋಪ ಭೋಗಿ ಎಂದುಕೊಳ್ಳುವದು .

ತನ್ನದು ಸಂಸಾರಾಸಕ್ತ ಜೀವ. ಇಂದ್ರಿಯ ರಾಮ ಅಂಗ ಭೋಗಿಯಾಗಿದ್ದರೂ ಅದನ್ನು ಹೇಳಿಕೊಳ್ಳದೆ ತನ್ನದು ನಿವೃತ್ತಿ ಪರವಾಗಿಹ ಪರಮಾರ್ಥ ಜೀವನ ತಾನು ಅತೀಂದ್ರಿಯು , ಜ್ಞಾನಿಯು ಅಹುದು , ಸುಜ್ಞಾನಿಯು ಅಹುದು. ಕೂಟಸ್ಥನೆ ತಾನೆಂದು ಹೊಗಳುವ ಸ್ವಭಾವಕ್ಕೆ ಮಹದ ಮಾತೇಕೊ? ಎಂದು ಖಂಡಿಸಿದ ಪ್ರಭು ಪ್ರಸಾದವಾಣಿ ಸಕಲರ ಎಚ್ಚರಿಸುವ ಆಕಾಶವಾಣಿ.

ಕೆರೆಯಲುಂಡು ತೊರೆಯ ಹೊಗಳುವುದು ಸರಿಯೆ : ತಾನು ಸಾಮಾನ್ಯವಾಗಿಹ ಕೆರೆಯಲ್ಲಿ ಉಂಡಿದ್ದಾನೆ . ನಿಂತ ನೀರಲ್ಲಿ ಭೋಜನವ ಮಾಡಿ ಗಂಗಾ, ಯಮುನಾ, ಸರಸ್ವತಿ ಎಂಬ ಮೂರು ಮಹಾನದಿಗಳ ಕೂಡಿದ ತ್ರಿವೇಣಿ ಸಂಗಮದಲ್ಲಿನನ್ನ ಊಟವಾಯಿತೆಂದು ಹೇಳುವ ಡಾಂಭಿಕ ಹೃದಯ, ಪೊಳ್ಳು ಹೃದಯ ಸುಳ್ಳನ್ನ ತುಂಬಿಕೊಂಡ ಡಾಂಭಿಕ ಕೆರೆಯೆಂಬುದು ವಿಷಯ ಕೂಪ,ಅನಾತ್ಮ ಕೂಪ. ಹೊನ್ನು ಹೆಣ್ಣು ಮಣ್ಣೆಂಬ ಅನಿತ್ಯವು ಇದು ತೋರಿ ಇಲ್ಲವಾಗುವ ಕೂಪ . ಪಿಂಡಾಂಡ, ಬ್ರಹ್ಮಾಂಡವೆಂಬ ವ್ಯಷ್ಠಿ ಸಮಷ್ಠಿಯ ಕೂಪ ಅಹಂ ಇದಂ ರೂಪಿ ಜೀವಿ ಭ್ರಾಂತಿ ಕೂಪ. ಇದು ಭೋಗಾಂಗ ಕೂಪ . ಈ ಕೆರೆಯಲ್ಲಿ ತಾನುಂಡು ಈ ಅನಿತ್ಯವಾಗಿಹ ವಿಷಯ ಭೋಗೋಪ ಭೋಗಕ್ಕೆ ಒಪ್ಪಿ ಈ ಭೋಗ ಸುಖಕ್ಕೆ ಬಹು ಸುಖವೆಂದು ಇಲ್ಲಿ ರಮಿಸುವದು . ಪುನಃ ಪುನಃ ಭೋಗಿಸಿದುದೆ ಭೋಗಿಸುವುದು , ಇವನು ಇಂದ್ರಿಯ ರಾಮನು ವ್ಯಸನಿ ಆಗಿರುವುದರಿಂದ ಕೆರೆಯಲ್ಲುಂಡವನು ಎಂದು ಹೇಳಿಹರು . ಇಂಥ ಅಧೋಮುಖದವ ತಾನಿದ್ದರೂ ಅದನ್ನು ಬಹಿರಂಗಪಡಿಸದೆ ತಾನು ಸಾಕ್ಷಿಯು ಸ್ವಯಂಪ್ರಕಾಶನು ಅಸಂಗಮ ಸಚ್ಚಿದಾನಂದನು ನಿತ್ಯನು ಎಂದು ಹೇಳಿಕೊಳ್ಳುವವನು ತೊರೆಯ ಹೊಗಳುವವನು ಎಂದು ಹೇಳಿಹರು .

ಅತ್ಯುತ್ಕಟದ ಪರಬ್ರಹ್ಮವನೆ ನುಡಿವರು ಸಹಜ ಪಿನಾಕಿ ಬಲೆಯಲ್ಲಿ ಸಿಲುಕಿ ಭವವ ಹರಿಯ ಲರಿಯರು.ಇಂದೆಂಥ ಹೃದಯ ? ಇದು ಅರುವ ಅರಿಯ ಹೋದ ಹೃದಯವಲ್ಲ ಅರು ಹೃದಯವೂ ಅಲ್ಲ, ಅಲ್ಲವೆನ್ನಬೇಕೆ? ಅರುವಿನ ಘನವ ಹೊಗಳುತ್ತಿಹುದು ನುಡಿಯುತ್ತಿದೆ ನಿಜ. ನುಡಿಯಿಂದ ನಡೆ ಕೆಟ್ಟ ಹೃದಯವಲ್ಲ ನುಡಿದ ಮಾತೆ ನಡೆ ಕೆಡಬೇಕು, ಅದಾವ ನುಡಿ ನುಡಿಯುವುದು? ನುಡಿಯುವುದರಿಂದ ಅದಾವ ನಡೆ ಕೆಡವುದು ? ಸಾಕ್ಷಿ ತಾನೆಂಬ ನುಡಿಯಿಂದ ದೃಶ್ಯದ ಅಭಿಮಾನ ಮೋಹ ಕೆಡಬೇಕು. ನಿಸ್ಸಂಗ ತಾನೆಂಬ ನುಡಿಯಿಂದ ದೃಶ್ಯದ ಅಭಿಮಾನ ಮೋಹ ಕೆಡಬೇಕು. ನಿಸ್ಸಂಗ ತಾನೆಂಬ ನುಡಿಯಿಂದ ವ್ಯಷ್ಠಿ ಶರೀರ , ಸಮಷ್ಠಿ ಶರೀರದ ಅಭಿಮಾನ ಮೋಹ ಕೆಡಬೇಕು ಸಚ್ಚಿದ್ರೂಪ ತಾನೆಂಬ ನುಡಿಯಿಂದ ನಾಮರೂಪ ಅಭಿಮಾನ ಮೋಹ ಕೆಡಬೇಕು . ಆರುವಿನ ನುಡಿಯಿಂದ

ಅರಿಯೆನೆಂಬ ಮರವಿನ ನುಡಿ ಕೆಡಬೇಕು.

ನಡೆಯಿಂದ ನುಡಿ ಕೆಡಬೇಕು . ಭಾವದ ಗುಸುಟು ತಾನೆ ನಾಚಿ ಮಾದುದು ನೋಡಾ ಅದಾವ ನಡೆಯಿಂದ ಅದಾವ ನುಡಿ ಕೆಡಬೇಕು, ಅರುವಿಂಗರುವಾಗಿಹ ನಡೆಯಿಂದ ಅರುವು ತಾನೆಂಬ ನುಡಿ ಕೆಟ್ಟಿತ್ತು . ಶಬ್ದ ಮುಗ್ಧವಾದ ನಡೆಯಿಂದ ಬ್ರಹ್ಮ ನಾನೆಂಬ ನುಡಿ ಕೆಟ್ಟಿತ್ತು . ಅಚಿಂತ್ಯನೆ ತಾನಾಗಿದ್ದ ನಡೆಯಿಂದ ಸಚ್ಚಿದಾನಂದ ನಾನೆಂಬ ನುಡಿ ಕೆಟ್ಟಿತ್ತು . ಭಾವಕ್ಕಗವ್ಯ ತಾನಾದುದರಿಂದ, ತ್ರಿವಿಧಭಾವಂಗಳು ಅವುಗಳ ವಾಸನೆ,ಸಹಜ ನಷ್ಟವಾಗಿಹುದು.

ಕೇವಲ ನುಡಿ ಮಾತ್ರದಿಂದ ಭವ ಹರಿಯದು ಈ ಶಬ್ದಾಭಿಮಾನವು ಇದೊಂದು ಆಳವಾದ ತಗ್ಗು ಈ ತಗ್ಗಿನಲ್ಲಿ ಬಿದ್ದವನಿಗೆ ಅನಂತಾನಂತ ಕಾಲ ತನ್ನ ತಾನರಿಯುವ ಸುಸಂಧಿಯು ದೊರೆಯುವುದು ಕಷ್ಟವು.

ಅತ್ಯುತ್ಕಟದ ಪರಬ್ರಹ್ಮ ನುಡಿವವರು ಯಾರು? ತಮ್ಮ ವಚನ ತಮಗೆ ಹಗೆಯಾದವರು ಶಬ್ದವ ಸೇರದವರು .ಅತೀತ ತತ್ವವೆಂಬುವ ನುಡಿಯ ಸೇರದವರು ಶಬ್ದದ ಹಂಗಿಗರಲ್ಲ ಶೃತಿಯ ಹೆತ್ತರಿವು ಆದ ಘನಗಂಭೀರರು. ಗುರುವಿನಿಂದ ಬಂದ ಅರಿವು ಹೆತ್ತರಿವು ಆಗಿದೆ. ಲಿಂಗದಿಂದ ದೊರೆತ ಸಂಜ್ಞೆಯು ಕಲ್ಪಿತವಾಗಿದೆ. ಇವರು ತನ್ನಿಂದ ತಾನರಿತವರು, ಇವರದು ಸ್ವಯಮೇವ ಅರಿವು ಏನೊಂದೆನಲಿಲ್ಲದ ಅರಿವು ಇದಕ್ಕೇನನ್ನಬೇಕು? ಇಂಥ ಪರಾತ್ಪರ ಪರತತ್ವದ ಪರಮಜ್ಞಾನಿಯು ಹೊಗಳ ಭಟ್ಟನಲ್ಲ ತನ್ನ ಘನತ್ವ ಇಲ್ಲಿ ಹೇಳಿಕೊಳ್ಳುವದು ಅದಾರಿಗೆ, ತನ್ನೊಳ ತಾನೆಂಬುದಿಲ್ಲ ಇದಿರೆಂಬುದಿಲ್ಲ ಏನೇನೂ ಇಲ್ಲವೆಂಬುದು ಇಲ್ಲವಾದವಂಗೆ ತನ್ನ ಪ್ರತಿಷ್ಠೆ ತೋರಿಸುವದಾರೂ ಉಂಟೆ? ಮೂಕನು ತನ್ನ ಪ್ರತಿಷ್ಠೆ ಹೇಳಿಕೊಳ್ಳಲು ವಾಣಿಯೆ ಇಲ್ಲದಿರುವಾಗ ಹೊಗಳುವುದು ಇದೆಯೆ? ಅಂಧಕಂಗೆ ತನಗಾರು, ತನಗಾವುದು ತೋರದಿರುವಾಗ ತನ್ನ ಪ್ರತಿಷ್ಠೆ ತೋರಿಸುವದು ಉಂಟೆ? ತೋರಿಸಲರಿಯ ನೋಡಲರಿಯ , ಏನೊಂದರಿಯದವನನ್ನು ಅರಿತೆನೆಂದು ಹೇಗೆ ಹೇಳುವುದು ಅರಿಯೆನೆಂದು ಹೇಗೆ ಹೇಳುವುದು. ಉಂಡು ತೃಪ್ತಿಯಾದವನು ಪ್ರಸಾದ ಪ್ರಸಾದ ಎಂದು ಹಂಬಲಿಸಬಹುದೆ ? ಅತ್ಯುತ್ಕಟ ಪರಬ್ರಹ್ಮ ಪರಮಜ್ಞಾನ ರೂಪಿ ಪರಮಾಮೃತ ನುಂಡವರು. ಇವರು ನುಡಿ ತಾವಾಗದ ನಿಃಶಬ್ದವೇದಿಗಳು. ಮುಮುಕ್ಷ ಹೃದಯ ಅಭ್ಯಾಸ ಹೃದಯ ಅನುಭವಿ ಹೃದಯಂಗಳನ್ನು ನಿಃಶಬ್ದ ಘನದಿರುವ ಪ್ರಜ್ವಲಿಸಲು ಬಂದ ಪರಾವಾಣಿ ಅದು ಆಕಾಶವಾಣಿ . ಅವರ ಮಾತೆಂಬುದು ಜ್ಯೋತಿರ್ಲಿಂಗ , ಜ್ಯೋತಿ ಎಂದಾದರೂ ನುಡಿದುದುಂಟೆ! ಅದು ಪ್ರಕಾಶಮಯ , ಕತ್ತಲೆ ಕೆಡಿಸುವ ಪ್ರಚಂಡ ಪ್ರಕಾಶ. ಅದು ಅಜ್ಞಾನಾಂಧಕಾರ ಕೆಡಿಸುವ ಚಿತ್‌ಸೂರ್ಯ,ಅದು ಜ್ಞಾನ, ಅಜ್ಞಾನಕ್ಕೆ ಬೆಳಗುವ ನಿಜ ಚಿದ್ರೂಪ . ಇದು ಅವಿರೋಧವು ನಿರಾಲಂಬವು ನಿಸ್ಸೀಮವು ಅಲ್ಲಿ ಶಬ್ದ ಘನದ ಕತ್ತಲೆ ಇರದು. ಇದು ಅತ್ಯುತ್ಕಟ ಪರಬ್ರಹ್ಮ ನುಡಿ ಹೊರಬಂದ ಸಂಕೇತ .

ಅತ್ಯುತ್ಕಟ ಪರಬ್ರಹ್ಮವ ನುಡಿದು ಸಹಜ ಪಿನಾಕಿಯ ಬಲೆಯಲ್ಲಿ ಸಿಲುಕುವದೆಂದರೆ ಆಶ್ಚರ್ಯವಲ್ಲವೆ! ಬೆಳಕಿನಲ್ಲಿ ನಡೆದು ಕತ್ತಲೆಯ ಭಯ ತೋರುವದೆಂದಲ್ಲಿ ಆಶ್ಚರ್ಯವಲ್ಲವೆ! ಅಚಿಂತ್ಯದ ಮಾತಾಡಿ ಚಿಂತನಕ್ಕೊಳಪಟ್ಟುದು . ಆಶ್ಚರ್ಯವಲ್ಲವೆ ಕಲ್ಪಿತವಲ್ಲದ ಘನವರುಹಿ ಕಲ್ಪಿತನಾಗಿ ಭವ ಬಂಧನದಲ್ಲಿ ಸಿಲುಕುವದು ಆಶ್ಚರ್ಯವಲ್ಲವೆ! ಮಾತಿನ ಮಹಾಂತರು ತಮ್ಮ ತಾವರಿಯದವರು ಇವರಿಗೆ ವೇದ, ವೇದಾಂತಗಳಿಂದ ಲಭ್ಯವಾದ ಶಬ್ದಪ್ರಮಾಣಂಗಳೆ ಘನವಾದವಲ್ಲದೆ ತನ್ನಿರವು ಘನವಾಗಲಿಲ್ಲ. ವಾಣಿಯಿಂದ ಬರುವ ಪರಬ್ರಹ್ಮವೆಂಬ ನುಡಿಯೆ ಇವರಿಗೆ ಘನವಾಯಿತಲ್ಲದೆ ತನ್ನರುವಿನ ಅರುವು ಘನವಾಗಲಿಲ್ಲ .ಇವರು ನುಡಿದು ಹೇಳುವವರಾದರಲ್ಲದೆ ತನ್ನ ಅರಿದರಿದು

ನೋಡುವದಾಗಲಿಲ್ಲ , ಈ ಮಾತಿನ ರಂಜನೆ ತನ್ನ ಮನದ ಭ್ರಾಂತಿ ಕಳೆಯದು ಭಾವವಳಿಯದು ಬಯಕೆ ಕೆಡಿಸದು ಇದರಿಂದ ಶಬ್ದ ಸಂಭ್ರಮದ ಮದ ಅಧಿಕವಾಗುವದಲ್ಲದೆ ತನಗೆ ಇದಿರಾಗಿ ತೋರುವ ಮಾಯಿಕವೆ ದಿಟವಾಗುವದಲ್ಲದೆ ಸಟೆಯಾಗದು ಇದನ್ನು ಕಂಡೆ ನಿಃಶಬ್ದ ವೇದಿಗಳು ಶಬ್ದದ ಹಂಗು ಹರಿಯಲು ಹೇಳಿದರಲ್ಲದೆ ,ಶಬ್ದದ ಹಂಗಿನಲ್ಲಿರಲು ಹೇಳಲಿಲ್ಲ. ಅದು ಯತಾರ್ಥ ತಿಳಿಯದ್ದರಿಂದ ಇವರು ಅತ್ಯುತ್ಕಟದ ಪರಬ್ರಹ್ಮವನೆ ನುಡಿದು ಸಹಜ ಪಿನಾಕಿಯ ಬಲೆಯಲ್ಲಿ ಸಿಲುಕಿ ಭವವ ಹರಿಯಲರಿಯರು. ಭವ ಹರಿದ ಸೂಚಕವೆಂದರೆ ಸಹಜ ಅಜ ಅಚಿಂತ್ಯವೆಂಬ ಶೃತಿಯಿಂದ ಲಭ್ಯವಾದ ನುಡಿಯು ದಿಟವಾಗಬಾರದು , ತಾನಾಗಬಾರದು , ಅಂದಲ್ಲಿ ಇವರು ಶಬ್ದ ಸಂಭ್ರಮದ ಜಾಲದಲ್ಲಿ ಬೀಳದವರು , ಅತ್ಯುತ್ಕಟ ಪರಬ್ರಹ್ಮವ ನುಡಿಯ ನಡೆವುಳ್ಳವರು ಎಂದು ತಿಳಿವುದು

ಅತ್ಯುತ್ಕಟ ಪರಬ್ರಹ್ಮವದು ನಿಃಶಬ್ದ ಪರಬ್ರಹ್ಮದ ಸೂಚಕ, ಶಬ್ದಮುಗ್ಧದ ಸೂಚಕ, ನಿರ್ವಾಣದ ಸೂಚಕ . ಅನಾಮಯವಾಗಿಹ ನಿರ್ವಾಣದ ಸೂಚಕವೆ ಸಂಜ್ಞೆಯಾಗಿರುವದರಿಂದ ಅರಿದರಿದು ನೋಡಿದವರ ಇರುವಿನ ಅರುವಾಗಿದೆ .ನುಡಿಗಿಂಬಲ್ಲದುದರಲ್ಲಿ ನುಡಿದ ಇವರು ಭವ ಹರಿಯದವರಾಗಿದ್ದಾಗಿದೆ.

ರುದ್ರನ ಛತ್ರವ ನುಂಡ ಇಲ್ಲವೆಯ ನುಡಿವ ಹಿರಿಯರಿಗೆ ಮಹದ ಮಾತೇಕೊ ಗುಹೇಶ್ವರಾ : ಹದಿನಾಲ್ಕು ಲೋಕಂಗಳಲ್ಲಿರುವ ರುದ್ರನ ಛತ್ರದಲ್ಲಿದ್ದವರು ರುದ್ರನ ಛತ್ರವ ನುಂಡವರು , ಅವನ ಹಂಗಿನಲ್ಲಿದ್ದವರು . ತಾವಾರೆಂದು ತಿಳಿಯದ ಮರವುಳ್ಳವರು. ಅಜ್ಞಾನಿಗಳು. ತಾನಾಗದ ತನ್ನದಾಗದ ದೇಹಾದಿಗಳನ್ನು ದೇಹದ ಧರ್ಮಂಗಳು ತಮ್ಮವೆಂದು ತಿಳಿದ ವಿಶ್ವ ತೈಜ, ಪ್ರಾಜ್ಞರೆಂಬ ಜೀವರುಗಳೆಲ್ಲ ರುದ್ರನ ಛತ್ರದಲ್ಲಿದ್ದವರು . ಈ ಪ್ರಕೃತಿ ಚಕ್ರ ,ರುದ್ರನ ಚಕ್ರ , ರುದ್ರನ ಧರ್ಮಶಾಲೆ. ಈ ಗುಣಮಯಿಯ ತೃಪ್ತಿಯೆ ತನ್ನ ತೃಪ್ತಿಯೆಂದು ತಿಳಿದಿಹರು . ಅವರು ರುದ್ರನ ಛತ್ರವ ನುಂಡವರು ಎಂದು ಹೇಳಿಹರು.

ಇಂಥವರಿಗೆ ಮಹದ ಮಾತೇಕೊ ಗುಹೇಶ್ವರಾ ಎಂದು ಖಂಡಿಸಿದ್ದಾರೆ ಮಹದ ಮಾತೆಂಬುದು ಕ್ಷರಾಕ್ಷರವೆಂಬುದಕ್ಕೂ ಮೀರಿದ ಘನ . ಅಲ್ಲಿ ನಾಶವೆಂಬುದಿಲ್ಲ ಅವಿನಾಶಿ ಎಂಬುದಿಲ್ಲ. ಆತ್ಮನೆಂಬುದಿಲ್ಲ ಅನಾತ್ಮವೆಂಬುದಿಲ್ಲ ಅಂಗನೆಂಬುದಿಲ್ಲ ಲಿಂಗನೆಂಬುದಿಲ್ಲ . ಜೀವನೆಂಬುದಿಲ್ಲ ಪರಮಾತ್ಮೆಂಬುದಿಲ್ಲ ಇಲ್ಲ ಇಲ್ಲವೆಂಬುದಕ್ಕೂ ಸಂದಿಲ್ಲದಿಪ್ಪ ಅನಾಮಯ ತತ್ವವರಿತ ಮಹಾಂತಂಗೆ ನಾಮವೆಂಬುದಿಲ್ಲ ಅನಾಮವೆಂಬುದಿಲ್ಲ . ಏಕೆಂದರೆ ನಿರ್ವಾಣನು ನುಡಿದುದೆಂದು? ನುಡಿದು ಹೇಳುವವರಿಗೆ, ನಿರ್ವಾಣವೆಂಬ ಮಹದ ಮಾತೇಕೊ ಗುಹೇಶ್ವರಾ ? ಎಂದು ಹೇಳಿಹರು .

79

ಪಂಚಭೂತ. ಸಂಗದಿಂದ ಜ್ಯೋತಿಯಾಯಿತ್ತು .
ಪಂಚಭೂತ ಸಂಗದಿಂದ ಕರ್ಪುರವಾಯಿತ್ತು .
ಈ ಎರಡರ ಸಂಗದಿಂದೇನಾಯಿತ್ತು ಹೇಳಾ ?
ವಾಙ್ಮನೋತೀತ ಗುಹೇಶ್ವರಾ **॥ 614 ॥**

ತಾತ್ಪರ್ಯ : ಪಂಚಭೂತ ಸಂಗದಿಂದ ಜ್ಯೋತಿಯಾಯಿತ್ತು : ಇದಾವ ಪಂಚಭೂತ ಸಂಗ, ಪೃಥ್ವಿ ,ಅಪ್ಪು ,ತೇಜ ,ವಾಯು , ಆಕಾಶ ಈ ಪಂಚಭೂತ ಸಂಗದಿಂದ ಜ್ಯೋತಿಯಾಯಿತ್ತೆ ? ಇದೇ ನಾಶ್ಚರ್ಯ? ಜಡ ಪಂಚಭೂತ ಸಂಗದಿಂದ ಜ್ಯೋತಿಯಾಯಿತ್ತೆ ಇದೇನ್ನಾಶ್ಚರ್ಯ, ಪ್ರತ್ಯೇಕ ಜ್ಯೋತಿಯಾದಲ್ಲಿ ಜಡ ಪಂಚಭೂತ ಏನಾಯಿತ್ತು! ಜ್ಯೋತಿಯ ಬೆಳಗುವಲ್ಲಿ ಕತ್ತಲೆ ಇರುವುದುಂಟೆ?

ಪಂಚಭೂತ ಸಂಗದಿಂದ ಪಿಂಡ ಜ್ಞಾನವೆಂಬ ಜ್ಯೋತಿ ಎನ್ನಲೆ? ಬ್ರಹ್ಮಾಂಡವೆಂಬ ಜ್ಯೋತಿ ಏನ್ನಲೆ? ಅದಾರು ನಿರ್ಣಯ ಮಾಡುವುದು? ಪಿಂಡವೆಂಬುದು ಕರ್ಪೂರವೆನ್ನಲೆ ? ಪ್ರತ್ಯಗಾತ್ಮನೆನ್ನುವದು ಜ್ಯೋತಿ ಎನ್ನಲೆ? ಬ್ರಹ್ಮಾಂಡವೆಂಬುದು ಕರ್ಪುರವೆನ್ನಲೆ? ಬ್ರಹ್ಮವೆಂಬುದು ಜ್ಯೋತಿ ಎನ್ನಲೆ? ಇದಾರು ನಿರ್ಣಯ ಮಾಡುವುದು. ಪಂಚಭೂತಸಂಗದಿಂದ ಜ್ಯೋತಿಯಾದ ಮೇಲೆ ಇದಾವ ಪಂಚಭೂತವೆನಬೇಕು. ಇದು ಜಡ ಪಂಚಭೂತವೆನಲಾಗದು, ಇದು ಶರಣನ ಸಕಾಯ ಪಂಚಭೂತ ಸಕಾಯದಲ್ಲಿ ಬೆಳಗುವ ಬೆಳಗು ಜ್ಯೋತಿ ನೋಡಾ ಈ ಘನವ ಶರಣರೆ ಬಲ್ಲರು.

ಪಂಚ ಭೂತವೆಂಬುದು ತತ್ವ, ಇದನ್ನು ಜಡದೃಷ್ಠಿಯಿಂದ ನೋಡಲಾಗದು. ತತ್ವ ದೃಷ್ಠಿಯಿಂದ ನೋಡುವುದು ಯತಾರ್ಥವು.

ಪಂಚಭೂತವೆಂಬುದು ಪೃಥ್ವಿ . ಅಪ್ಪು, ತೇಜ , ವಾಯು, ಆಕಾಶವಲ್ಲವೆ ? ಈ ಐವರ ಸಮ್ಮಿಶ್ರದಿಂದ ಕಾಣಿಸುವ ಪಿಂಡಾಂಡ ವ್ಯಷ್ಠಿ ಸಮಷ್ಠಿ ಬ್ರಹ್ಮಾಂಡವಲ್ಲವೆ ? ಈ ಪಂಚಭೂತಂಗಳ ವಿವರವ ನೋಡಿರೆ ಪಂಚಭೂತ ಮರವಿನಿಂದ ಅಂಗ ಕ್ಷೇತ್ರವೆನಿಸಿತ್ತು. ಅದುವೆ ಅರುವಿನಿಂದ ಲಿಂಗ ಕ್ಷೇತ್ರವೆನಿಸಿತ್ತು. ಅಧೋ ಮುಖದಿಂದ ಪಂಚಭೂತದ ಸಂಗವು ಅಂಗವಾಗಿ ಕರ್ಮ ಇಂದ್ರಿಯಂಗಳಾಗಿ ಜ್ಞಾನೇಂದ್ರಿಯಂಗಳಾಗಿ ಪ್ರಾಣಂಗಳಾಗಿ ಒಡಲಾಗಿ ಜಠರಾಗ್ನಿಯಾಗಿ ತೋರಿತ್ತು.

ಊರ್ಧ್ವಮುಖದ ಸಂಗದಿಂದ ಆಚಾರ ಲಿಂಗವಾಗಿ, ಗುರುಲಿಂಗವಾಗಿ, ಶಿವಲಿಂಗವಾಗಿ, ಜಂಗಮಲಿಂಗವಾಗಿ, ಪ್ರಸಾದ ಲಿಂಗವಾಗಿ ಮಹಾಲಿಂಗವಾಗಿ ಲಿಂಗಕ್ಷೇತ್ರವಾಗಿ ಪ್ರಜ್ವಲಿಸುತ್ತಿಹುದು.

ನ ಕಾರವೆ ಆಚಾರಲಿಂಗ ಮ ಕಾರವೆ ಗುರುಲಿಂಗ ಶಿ ಕಾರವೆ ಶಿವಲಿಂಗ ವ ಕಾರವೆ ಜಂಗಮಲಿಂಗ ಯ ಕಾರವೆ ಪ್ರಸಾದಲಿಂಗ ಓಂ ಕಾರವೆ ಮಹಾಲಿಂಗವೆಂದು, ಆರು ತೆರನಾಗಿಪ್ಪುದು ನೋಡಾ ಕೂಡಲಚೆನ್ನಸಂಗದೇವಾ. ಷಡಕ್ಷರವೆ ಆರು ತೆರನಾಗಿಹ ಲಿಂಗವಾಗಿಹವು ನೋಡಿರೆ ಘ್ರಾಣದ ಘ್ರಾಣವೆ ಆಚಾರ ಲಿಂಗ. ಜಿಹ್ವೆಯ ಜಿಹ್ವೆಯೆ ಗುರುಲಿಂಗ, ನೇತ್ರದ ನೇತ್ರವೆ ಶಿವಲಿಂಗ, ತ್ವಕ್ಕಿನ ತ್ವಕ್ಕೆ ಜಂಗಮಲಿಂಗ , ಶ್ರೋತ್ರದ ಶ್ರೋತ್ರವೆ ಪ್ರಸಾದಲಿಂಗ , ಹೃದಯದ ಹೃದಯವೆ ಮಹಾಲಿಂಗ. ಕೂಡಲಚೆನ್ನಸಂಗಮದೇವಾ ಪಂಚಭೂತವದು ಪರತತ್ವ ಅಲ್ಲಿ ಕಂಗೊಳಿಸುವ ಇಂದ್ರಿಯಂಗಳು ಅತೀಂದ್ರಿಯಂಗಳು ನೋಡಾ, ಅಂಗ ಚಿದಂಗ ನೋಡಾ. ಚಿನ್ಮಯ ಲಿಂಗ ನೋಡಾ. ಮಹಾಲಿಂಗ ನೋಡಾ. ಶರಣಂಗೆ ವಿದಿತವು ನೋಡಾ.

ಪಂಚಭೂತಂಗಳಲ್ಲಿ ಒಂದಾದ ಆಕಾಶವು ಅದು ಆತ್ಮ ತತ್ವ. ಈ ಆತ್ಮ ತತ್ವದ ಮರವೆಯೆ ಆಕಾಶವಾಗಿ ಕಾಣಿಸಿತ್ತು. ಶರಣಂಗೆ ಆಕಾಶವು ಆತ್ಮ ತತ್ವವಾಗಿ ಪ್ರಜ್ವಲಿಸುವದು . ಜಡ ಬುದ್ಧಿಯುಳ್ಳವಂಗೆ ಆಕಾಶವಾಗಿ ಕಾಣುವದು. ಶರಣಂಗೆ ಆಕಾಶವು ನಿಃಶಬ್ದ ಬ್ರಹ್ಮವಾಗಿ ಕಂಗೊಳಿಸಿದರೆ ಅರುವು ಮರುವುಳ್ಳ ಸಾಧಕರಿಗೆ ಆಕಾಶದಂಶವಾದ ಲಜ್ಜಾಭಿಮಾನದಿಂದುಕ್ತವಾದ ಶಬ್ದಾಡಂಬರಗಳಾಗಿ ತೋರುವವು. ಶರಣಂಗೆ ಮಹತೋಮಹಿಯಾನ ಅಣೋ ರಣಿಯಾನ ಆಗಿ ಕಂಗೊಳಿಸುವದು ಚಿದ್ ಬ್ರಹ್ಮಾಂಡವೆಂಬ ಬ್ರಹ್ಮಾಂಡದಲ್ಲಿ ಚಿದಾಕಾಶನಾಗಿ ತೋರುವುದು.

ಗಾಳಿಯೆ ವಿಕಾರ ಹೊಂದಿ ಪ್ರಾಣವಾಯುವಾಗಿದೆ. ಈ ಪ್ರಾಣ ವಾಯುವೆ ಪ್ರಪಂಚದ ಕ್ರೀಡೆ ರೂಪಾಗಿದೆ. ವಿವರಿಸಿ ನೋಡುವುಡೆ ಪ್ರಾಣವು ಲಿಂಗಪ್ರಾಣವಾಗಿದೆ. ಸೋಹಂ ರೂಪಾಗಿ ಲಿಂಗಾಂಗ ಸಮರಸ ಜ್ಞಾನದ ಸಂಜ್ಞೆಯಾಗಿದೆ. ಬ್ರಹ್ಮಾಸ್ಮಿ ಸಂಜ್ಞೆಯುಳ್ಳದ್ದಾಗಿದೆ. ಜೀವ ಬ್ರಹ್ಮದ ಏಕತ್ವ ಸಂಜ್ಞೆಯ ಸೂಚಕವಾಗಿದೆ. ಮರವಿಂಗೆ ಜನನ ಮರಣ ಕ್ರಿಯೆಯಿಂದುಕ್ತವಾದಂತೆ ಭಾಸವಾಗಿದೆ.

ಅಗ್ನಿಯೆಂಬುದು ಹೃದಯದಲ್ಲಿರುವ ಜ್ಞಾನಾಗ್ನಿ. ಅದು ಸ್ವಾನುಭವದ ಪ್ರಭೆ. ಅಲ್ಲಿ

ನಿರೂಪನೆನ್ನಿಸುವ ಜ್ಞಾನಾಗ್ನಿ ಉರಿ ಅಜ್ಞಾನ ಧ್ವಂಸಕ ಲಿಂಗಜ್ಞಾನ . ಶರಣನ ಜ್ಞಾನ ಶಿವಜ್ಞಾನ ಸ್ವರೂಪವಾದ ಜ್ಞಾನ ಪ್ರಭೆಯಿಂದ ಬೆಳಗುವ ಹೃದಯ ಕಮಲ . ಇದು ಉರಿಲಿಂಗ. ಸುಜ್ಞಾನ ಲಿಂಗ, ಮರವಿಂಗೆ ಅಗ್ನಿ ವಿಕಾರದಿಂದ ಭಿನ್ನ ರೂಪ ತಾಪತ್ರಯಾಗ್ನಿ ರೂಪವಾಗಿ ತೋರುತ್ತದೆ. ಆಧ್ಯಾತ್ಮಿಕ ತಾಪ, ಆದಿ ಭೌತಿಕ ತಾಪ, ಆದಿದೈವಿಕ ತಾಪ. ಆಧ್ಯಾತ್ಮಿಕ ತಾಪವೆಂಬುದು ಆತ್ಮವಸ್ತುವಿಗೆ ಸಂಬಂಧಿಸಿದ ತಾಪ. ಸ್ಥೂಲ, ಸೂಕ್ಷ್ಮ ಶರೀರಗಳಲ್ಲಿ ಉಂಟಾಗುವ ಆದಿ ವ್ಯಾಧಿ ಎಂದು ಹೇಳಿಸಿಕೊಳ್ಳುವುದು.

ಆದಿ ಭೌತಿಕ ತಾಪ : ಪ್ರಾಣಿಗಳಿಂದ ಒದಗುವ ತೊಂದರೆ ಪಂಚಭೂತ ಸ್ವಸಂಗಾತಕ್ಕಿಂತ ಭಿನ್ನವಾಗಿದ್ದ ನೇತ್ರಾದಿ . ಇಂದ್ರಿಯಗಳಿಗೆ ಗೋಚರವಾಗುವ ಭೂತಪ್ರಾಣಿಗಳಿಂದುಂಟಾದ ತೊಂದರೆ ಆದಿ ಭೌತಿಕವೆನಿಸುವುದು.

ಆದಿ ದೈವಿಕ ತಾಪ : ಮರವಿಂಗೆ ದೈವಿಕವಾಗಿ ಉಂಟಾಗುವ ಸ್ವಸಂಗಾತಕ್ಕಿಂತ ಭಿನ್ನವಾಗಿರುವ ನೇತ್ರಾದಿ ಇಂದ್ರಿಯಂಗಳಿಗೆ ಗೋಚರವಾಗದ ದೇವತಾದಿಗಳಿಂದಾಗುವ ತೊಂದರೆ, ಇದಲ್ಲದೆ ಉಷ್ಣ ತೃಷ್ಣ ವಿಕಾರ ವಿಷಯಂಗಳ ಬಗೆಗಿನ ಕಾಮೋಷ್ಣೆ, ಆಶೆ, ತೃಷ್ಣೆ ಇದು ಅಗ್ನಿ ವಿಕಾರದಿಂದ ಭಿನ್ನರೂಪವು ಶರಣಂಗೆ ಶಿವಜ್ಞಾನ ಸ್ವಭಾವವಾದ ಏಕರಸವಾದ ಭಾವ ಜ್ಞಾನ ಪ್ರಭೆಯಿಂದ ಬೆಳಗುವ ಹೃದಯ. ಇದು ಸುಜ್ಞಾನಲಿಂಗ. ಅಗ್ನಿಯೆಂಬುದು ಅದು ಉರಿಲಿಂಗ ಅದು ಸುಜ್ಞಾನ ಸ್ವಪ್ರಭೆ.

ಜಲವೆಂಬುದು ಏಕರಸವಾದ ಪರಮಾನಂದ ಇದು ಸುಬುದ್ಧಿ ಎಂಬ ಶಿವಾನಂದ ಜಲ ಇದು ಅಮೃತ ಸುಖರಸ ಆನಂದ, ರಸ ಇದು ಉನ್ಮನಿ ತತ್ವ ಪ್ರಶಾಂತ ಭಾವ. ಅಪ್ಪುವಿನ ವಿಕಾರದಿಂದ ಸಂಸಾರ ರಸವಾಗಿದೆ. ಇದು ಮನ ಪ್ರಾಣದಿಂದುಕ್ತವಾದ ಸಂಸಾರ. ವಿಷ ಕೂಪ ಉದಕ , ಮನಸ್ಸು ಮನದ ನಿಲುವು ಭ್ರಾಂತಿ ನಿಲುವು . ಅಜ್ಞಾನಿಗೆ ಭ್ರಾಂತಿ ನಿಲುವಾದರೆ ಶರಣಂಗೆ ಬ್ರಹ್ಮಜ್ಞಾನ ಬ್ರಹ್ಮಾನಂದ ನಿಲುವು ಆಗಿದೆ.

ಪೃಥ್ವಿ ತತ್ವವೆಂಬುದು ಪರಮಾತ್ಮ ತತ್ವ . ಇದು ಲಿಂಗ ಕ್ಷೇತ್ರ ಶರಣನ ಸರ್ವಾಂಗ ಲಿಂಗಮಯ. ಅಜ್ಞಾನಿಗೆ ಭೂತಪಿಂಡವಾಗಿದೆ . ಭೂತಪಿಂಡವೆಂಬುದು ಭಾವದಿಂದುಕ್ತವಾದ ಪಿಂಡ . ಶರಣಂಗೆ ಭಕ್ತಿ ಪಿಂಡ ಭಾವವಿರಹಿತಪಿಂಡ ಏಕತ್ವ ಪಿಂಡ ಭೂಮಿಯೆಂಬುದು ಅಜ್ಞಾನಕ್ಕೆ ತೋರುವದು ಸುಜ್ಞಾನಿಗೆ ಭೂಮಾ ಆಗಿ ಕಂಗೊಳಿಸುವದು .ಇದುವೆ ಶರಣಂಗೆ ಪಂಚಭೂತಂಗಳ ಪರಮಾರ್ಥ ಪರಿಣಾಮವಾಗಿ ಕಂಗೊಳಿಸುವದು .

ಪಂಚಭೂತ ಸಂಗದಿಂದ ಜ್ಯೋತಿಯಾಯಿತ್ತು ; ಪಂಚಭೂತ ಸಂಗದಿಂದ ಕರ್ಪೂರವಾಯಿತ್ತು; ಏನೊಂದಾಗದ ಘನ ಇದ್ದಂತಿರುವ ಅನುಪಮ ಲಿಂಗವು ಪಂಚಭೂತ ಸಂಗದಿಂದ ಶರಣಂಗೆ ಜ್ಯೋತಿಯಾಯಿತ್ತು . ಇದುವೆ ಪಂಚಭೂತ ಸಂಗದಿಂದ ಕರ್ಪೂರವಾಯಿತ್ತು . ಈ ಜ್ಯೋತಿ ಅರಿದಿಹೆನೆಂದರೆ ಅರುವೆ ಮರಹಿಂಗೊಳಗಾಯಿತ್ತಾಗಿ . ಆ ಅರುವಿನಿಂದ ಅರಿದಿಹೆನೆಂಬ ಅಜ್ಞಾನಿಯ ಮಾತ ಕೇಳಲಾಗದು .ಭಾವದಿಂದ ಭಾವಿಸಿಹೆನೆಂಬುದು ಭಾವ ಭ್ರಮಿತಕ್ಕೊಳಗಾಯಿತ್ತಾಗಿ ಭಾವದಿಂದ ಭಾವಿಸುವ ಭಾವವೂ ಅಲ್ಲ. ಜ್ಞಾನದಿಂದ ಅರಿದಿಹೆನೆಂದಡೆ ಜ್ಞಾನ ಅಜ್ಞಾನಕ್ಕೊಳಗಾಯಿತ್ತಾಗಿ ಜ್ಞಾನವೂ ಅಲ್ಲ. ಇದು ಅಚಿಂತ್ಯ ಘನವಪ್ಪ ಪೂರ್ಣವೆ ತನ್ನಿರುವೆಂದರಿದ ಜ್ಯೋತಿ , ಇದು ಸದ್‌ಜ್ಞಾನ ಭರಿತ ಭಾವ , ಶರಣ ಸದ್ ಜ್ಞಾನ ಭಾವಿಯು ಅಹುದು. ಅಖಂಡಿತ ಜ್ಞಾನವಪ್ಪ ಪರಿಪೂರ್ಣವೆಂದರಿದ ಜ್ಯೋತಿಯು ಅಹುದು. ಇದು ನಿಸ್ಸೀಮ ನಿಲವು ಇದು ಪೂರ್ವಾಚಾರವೆ ಅನಾಚಾರವಾದ ನಿಲುವು . ಇದು ಸೀಮೆಯ ನಿಸ್ಸೀಮವಾದ ನಿಲುವು , ಇದು ಮನಕ್ಕೆ ಮೇರೆದಪ್ಪಿದ ನಿಲುವು . ಇದು ಪಂಚಭೂತ ಸಂಗವಾದ ಹಿರಿಮೆ.

''ಕಾಯದಿಂದ ಗುರುದರ್ಶನ , ಕಾಯದಿಂದ ಲಿಂಗದರ್ಶನ ,ಕಾಯದಿಂದ ಜಂಗಮ

ದರ್ಶನ, ಕಾಯದಿಂದ ನಿಮ್ಮುವ ಕಂಡೆನ್ನ ಮರದೆ ಕೂಡಲ ಚೆನ್ನಸಂಗಮದೇವಾ '' ಕಾಯದ ಘನವ ಇಲ್ಲಿ ಕಾಣಬಹುದು. ಇಲ್ಲಿ ತತ್ವ ಸಾಕ್ಷಾತ್ಕಾರದ ಹಿರಿಮೆಯಾದ್ದರಿಂದ ಚಿತ್ಕಾಯ ಅಜ್ಞಾನ ದೃಷ್ಟಿಗೆ ಪಂಚಭೂತಂಗಳಾಗಿ ಕಂಡರೂ ಮುನ್ನ ಮುನ್ನಲಾದ ಘನವೆ ಬೆಳಗುತ್ತಿಹುದು . ಇದು ಕಾರಣ ಸ್ವ ಪ್ರಭೆಯುಳ್ಳ ಕಾಯ . ಈ ಕಾಯದಲ್ಲಿ ಗುರು, ಲಿಂಗ, ಜಂಗಮ ದರ್ಶನ . ನಿನ್ನ ದರ್ಶನವಾಗಿ ನನ್ನ ಮರತೆ ಎಂದು ಹೇಳಿಹರು.

ಇವೆರಡರ ಸಂಗದಿಂದೇನಾಯಿತ್ತು ಹೇಳಾ ವಾಙ್ಮನೋತೀತ ಗುಹೇಶ್ವರಾ : ಆವ ಪಂಚಭೂತ ಸಂಗದಿಂದ ಜ್ಯೋತಿಯಾದುದೆ ಕರ್ಪುರವಾಗಿದೆ. ಆ ಎರಡರ ಸಂಗದಿಂದೇನಾಯಿತ್ತು ಹೇಳಾ ಎಂದು ಪ್ರಶ್ನಿಸಿದುದು ಆರನ್ನು? ಆವ ಪಂಚಭೂತ ಸಂಗದಿಂದ ಜ್ಯೋತಿಯಾಗಿದೆ, ಕರ್ಪುರವಾಗಿದೆ ಅವರನ್ನು ಪ್ರಶ್ನಿಸಿದ್ದಾರೆ ತನ್ನ ಅರು ಹೃದಯರೂಪಿ ಸಮ್ಯ ಜ್ಞಾನ ರೂಪಿ ಪ್ರಭೆ ಅಖಂಡ ಭಾವರೂಪಿ ಕರ್ಪುರ ವ ಪ್ರಶ್ನಿಸಿದ್ದಾನೆ. ತನ್ನ ಅರು ಹೃದಯರೂಪಿ ಸಮ್ಯಜ್ಞಾನ ರೂಪಿ ಪ್ರಭೆ ಅಖಂಡ ಭಾವ ರೂಪಿ ಕರ್ಪುರವ ಪ್ರಶ್ನಿಸಿದ್ದಾನೆ. **ತಾನೆ ತನ್ನಿಂದ ತನ್ನ ಅರು ಹೃದಯದಿಂದ ಬಂದ ಮರು ಉತ್ತರ ಇದು ಉತ್ತರ ಸಿದ್ಧಾಂತ** ವಾಙ್ಮನೋತೀತ ಗುಹೇಶ್ವರಾ.

ಆವುದು ವಾಕ್ ದಿಂದ ಕಥನ ಮಾಡಲು ಬರುತ್ತದೆ. ಮನಸ್ಸಿನಿಂದ ಊಹಿಸಲು ಬರುತ್ತಿದೆ. ಬುದ್ಧಿಯಿಂದ ನಿರ್ಧರಿಸಲು ಬರುತ್ತದೆ ಅದು ಉತ್ತರಿಸಲು ಬರುತ್ತಿದೆ ಅದು ವಾಙ್ಮನೊತೀತವಾಗಲಾರದು . ಏಕೆಂದರೆ ಜ್ಯೋತಿಯು ಮೌನ , ಕರ್ಪುರವು ಮೌನ , ಇವೆರಡರ ಸಂಗವು ಮೌನವಾದುದರಿಂದ ಅದು ನಿಃಶಬ್ದ ಬ್ರಹ್ಮವಾದುದರಿಂದ ವಾಙ್ಮನೋತೀತ ಗುಹೇಶ್ವರವೆಂದು ಹೇಳಿಹರು.

80

ಎರಡೆಂಬರಯ್ಯ ಕರಣದ ಕಂಗಳಲ್ಲಿ ನೋಡಿದವರು.
ಎರಡುವ ನತಿಗಳೆದು ಒಂದೆಂಬರಯ್ಯ , ಕಾಮಿಸುವರಿಲ್ಲಾಗಿ
ಕಲ್ಪಿಸುವರಿಲ್ಲ ಭಾವಿಸುವರಿಲ್ಲಾಗಿ ಬಯಸುವದು ಇಲ್ಲ ,
ಗುಹೇಶ್ವರನೆಂಬುದಿಲ್ಲಾಗಿ ಬಯಲೆಂಬುದಿಲ್ಲ. ॥ 615 ॥

ತಾತ್ಪರ್ಯ : ಎರಡೆಂಬರಯ್ಯಾ ಕರಣದ ಕಂಗಳಲ್ಲಿ ನೋಡಿದವರು : ಇವರು ಕಲ್ಪಿತರು ಅಂಗವೆಂದು ಕಲ್ಪಿಸಿದರು. ಲಿಂಗವೆಂದು ಕಲ್ಪಿಸಿದರು, ಕರಣದ ಕಂಗಳಲ್ಲಿ ಕಂಡವರು , ಇವರು ಆಭಾಸ ದೃಷ್ಟಿಯುಳ್ಳವರು . ಕನ್ನಡಿಯೊಳಗಿನ ಪ್ರತಿಬಿಂಬ ಕಂಡ ಕಣ್ಣುಳ್ಳವರು . ಇವರಿಗೆ ಕರಣಂಗಳಿಂದ ಕಂಡ ಜ್ಞಾನವೇ ಪ್ರಧಾನ ವಾದುದರಿಂದ ಸುಮತಿಯರಾಗುವ ಭಾಗ್ಯವಿಲ್ಲವಾಗಿದೆ. ಇದು ಕಾರಣ ಎರಡಾಗಿ ಕಂಡವರು . ಎರಡಾಗಿ ಕಂಡವರ ದೃಷ್ಟಿ ನೋಡಿರೆ! ಬಿಂಬ ಪ್ರತಿಬಿಂಬ ದೃಷ್ಟಿ ಯುಳ್ಳವರು, ಅಧಿಷ್ಠಾನ ಅದರ ಆಭಾಸ, ಇವೆರಡು ಸಿದ್ಧಿಸಬೇಕಾದಲ್ಲಿ ಕನ್ನಡಿ ಮತ್ತು ಬಿಂಬರೂಪ ತಾನು ಅವಶ್ಯಕ. ಆಗ ಕನ್ನಡಿಯಲ್ಲಿ ಪ್ರತಿಫಲಿತವಾಗಿಹ ಪ್ರತಿಬಿಂಬ ಹೇಗೆ ಕ್ರಮದಿಂದ ಬಿಂಬ ಪ್ರತಿಬಿಂಬ ಸಿದ್ಧವಾಗುವವು , ಹಾಗೆ ಲಿಂಗ ಅಂಗ ವೆಂಬೆರಡು ಸಿದ್ಧಿಸಬೇಕಾದರೆ ಲಿಂಗವೆಂಬ ಬಿಂಬನು ಕರಣಂಗಳೆಂಬ ಕನ್ನಡಿ ಇವುಗಳಲ್ಲಿ ಪ್ರತಿಫಲಿತ ವಾದುದು ಅಂಗ ನೆಂದು ಹೇಳಿಸಿಕೊಳ್ಳುವವು ಎರಡಾಗಿ ಕಾಣಲು ಅಧಿಷ್ಠಾನ ನಾಗಿಹ ತಾನು ಬಿಂಬರೂಪನು ಕನ್ನಡಿ ರೂಪದಲ್ಲಿರುವ ಅಂತಃಕರಣವು ಕನ್ನಡಿಯಲ್ಲಿ ತೋರುವ ಪ್ರತಿಬಿಂಬದಂತೆ ಅಂತಃಕರಣದಲ್ಲಿ ಪ್ರತಿಫಲಿತವಾದ ಆಭಾಸ ಚೇತನನೆಂಬ ಜೀವ ಹೀಗೆ ಬಿಂಬ, ಪ್ರತಿಬಿಂಬ ನ್ಯಾಯದಂತೆ

ಬಿಂಬರೂಪನಾದ ತಾನು ಆಭಾಸರೂಪ ಜೀವನು ಸಿದ್ಧವಾಗುವದು. ಹೀಗೆ ಕಂಡೆ ಎರಡೆಂಬರಯ್ಯ.

ಬಿಂಬರೂಪಕ್ಕೆ ಲಿಂಗವೆಂದು, ಪ್ರತಿಬಿಂಬಕ್ಕೆ ಅಂಗನೆಂಬ ಲಿಂಗ ಅಂಗವ ಕಲ್ಪಿಸಿ ಎರಡೆಂಬರಯ್ಯ. ಹೀಗೆ ಕೆಲಬರು ಜೀವ ಬ್ರಹ್ಮರೆಂದು ಎರಡೆನ್ನುವರು. ಕಲ್ಪಿತ ಜೀವ ಕಲ್ಪಿತ ಈಶ್ವರನೆಂದು ಹೀಗೆ ಕಲ್ಪಿಸಿ ಎರಡೆನ್ನುವರು ಅವಿದ್ಯಾದಲ್ಲಿ ಪ್ರತಿಫಲಿತವಾದ ಚೇತನ ಜೀವ ಮಾಯೆ ಉಪಾಧಿಯಲ್ಲಿ ಪ್ರತಿಫಲಿತವಾದ ಚೇತನ ಈಶ್ವರ ಹೀಗೆ ಕಲ್ಪಿಸಿ ಹೇಳುವದುಂಟು, ಇದಲ್ಲದೆ ಮಲಿನ ಸತ್ವಗುಣದಲ್ಲಿ ಪ್ರತಿಫಲಿತವಾದುದು ಜೀವ ಚೇತನವೆಂದು, ಶುದ್ಧ ಸತ್ವಗುಣದಲ್ಲಿ ಪ್ರತಿ ಫಲಿತವಾದ ಚೇತನ ರೂಪಿ ಈಶ್ವರನೆಂದು, ಹೀಗೆ ಇವೆರಡು ಇವೆ ಇವೆರಡು ಸಿದ್ಧವಾಗಬೇಕಾದರೆ ಅಧಿಷ್ಠಾನನಾದ ತನ್ನಿಂದ ಸಿದ್ಧವಾಗುವವು. ಇದಲ್ಲದೆ ಉಪಾಧಿಯಿಂದುಕ್ತವಾದ ಚೇತನ. ನಿರುಪಾದಿಯಾಗಿಹ ಚೈತನ್ಯ ಒಂದು ಗುಣಯುಕ್ತವು, ಮತ್ತೊಂದು ಗುಣಾತೀತವು. ಜೀವನು ಗುಣದಿಂದುಕ್ತನು ಪರಬ್ರಹ್ಮ ಗುಣಾತೀತವು . ಅಂಗವು ಭಾವದಿಂದುಕ್ತವು ಲಿಂಗವು ಭಾವಕ್ಕಗಮ್ಯವು ಎಂದು ಎರಡೆಂಬರಯ್ಯ ಇವರು ಸಾಪೇಕ್ಷೆ ಜ್ಞಾನಿಗಳು ಇವರ ದೃಷ್ಠಿಯಲ್ಲಿ ಕರಣಂಗಳಿಂದ ಬೆಳಗಿಸಿಕೊಳ್ಳುವ ಪದಾರ್ಥ. ಒಂದು ಬೆಳಗುವುದು. ಮತ್ತೊಂದು ಕರಣಂಗಳು ಅನಾತ್ಮವಾಗಿವೆ , ಕಂಗಳು ಆತ್ಮವಾಗಿವೆ . ಕರಣದಲ್ಲಿ ಪ್ರತಿಫಲಿತವಾದ ಚೇತನನು ಪ್ರತಿಬಿಂಬನು ಪರಪ್ರಕಾಶನು ಕರಣಂಗಳ ಅಧಿಷ್ಠಾನವು ಬಿಂಬರೂಪವು ಸ್ವಯಂಪ್ರಕಾಶನು ಜೀವನು ಸಿದ್ಧಿಸಬೇಕಾದಲ್ಲಿ ಅವಿದ್ಯೆ ಎಂಬುಪಾಧಿರೂಪ ಕರಣಂಗಳು ಬೇಕು , ಬಿಂಬರೂಪ ಸ್ವಯಂಪ್ರಕಾಶ ಇದ್ದಲ್ಲಿ ಜೀವನು ಸಿದ್ಧವಾಗುವದರಿಂದ, ಕರಣಂಗಳ ಅಪೇಕ್ಷೆಯಿಂದ ಜೀವ ಬ್ರಹ್ಮರು ಎರಡಾಗಿ ಕಾಣುವರು.

ಸ್ವಯಂ ಪ್ರಕಾಶನು ಎರವಲ ಬೆಳಕನ್ನು ತೆಗೆದುಕೊಂಡು ಬೆಳಗುವವನಲ್ಲ , ತಾನೆ ಬೆಳಕು ಸ್ವಯಂ ಬೆಳಕು. ಅದಕ್ಕೇಕೆ ಹಂಗಿನ ಬೆಳಕು ? ಸೂರ್ಯನಿಗೆ ಅದಾವ ಕೈ ದೀವಿಟಿಗೆ ಹಂಗು ? ಚಿತ್ ಪ್ರಕಾಶಕ್ಕೆ ಅದಾವ ಪರಪ್ರಕಾಶದ ಹಂಗು ? ಕರಣಂಗಳನ್ನಾಶ್ರಯಿಸಿ ಬಿಂಬ ಪ್ರತಿಬಿಂಬವೆಂದು, ಜೀವ ಬ್ರಹ್ಮನೆಂದು ಎರಡೆಂಬರಯ್ಯ ಎಂದು ಹೇಳಿದ್ದಾರೆ.

ಕರಣಂಗಳ ಕಣ್ಣಿನಲ್ಲಿ ಕಂಡವರ ದೃಷ್ಠಿಗೆ ಒಂದು ಅರಿಸಿಕೊಳ್ಳುವ ಅನಾತ್ಮವಾಗಿ ,ಒಂದು ಅರಿಯುವ ಅರುವಾಗಿ ಕಂಡುದು. ಇವರು ಅರುವ ಅರಿಯ ಹೋದವರಲ್ಲ. ಇವರ ದೃಷ್ಠಿ ಪ್ರಕಾಶಕ, ಪ್ರಕಾಶಿತ ಎಂಬ ದ್ವಿವಿಧವಾಗಿ ಕಂಡುದರಿಂದ ಎರಡೆಂಬರಯ್ಯ . ಇವರು ಕರಣದ ಕಂಗಳಲ್ಲಿ ನೋಡಿದವರು ಎಂದು ಹೇಳಿದ್ದಾರೆ.

ಎರಡುವನತಿಗಳೆದು ಒಂದೆಂಬರಯ್ಯ : ಒಂದೆಂಬುವವರು ಇವರಾರು? ಇವರು ಎರಡುವ ನತಿಗಳೆದವರು. ಎರಡನ್ನು ಕಾಣದವರು, ಅಂಗವೆಂಬ ಕಲ್ಪಿತನ ಕಾಣದವರು, ಲಿಂಗವೆಂಬುದನ್ನು ಕಾಣದವರು. ಇವರು ಕಾಣದುದ ಕಂಡವರು, ತನ್ನ ಕಂಡವರು, ಎಲ್ಲೆಲ್ಲೂ ತಾನೆ ಕಂಡುದು, ಇದು ಕಾರಣ ತನ್ನ ಹೊರ್ತು ಅನ್ಯವಾವುದನ್ನು ಕಾಣದವರು . ಎರಡುವ ನತಿಗಳೆದು ಒಂದೆಂಬರಯ್ಯ ಎಂದು ಹೇಳಿದರು.

ಒಂದೆಂಬುದದು ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದುದು , ತನ್ನಿಂದ ತನ್ನ ಅರಿದುದು . ಇವರು ಅಪ್ರತಿಮನಗಮ್ಯನು. ಅನುಪಮನು ಆದುದರಿಂದ ಕಲ್ಪಿಸುವದಿಲ್ಲಾಗಿ ಕಲ್ಪಿಸುವದಿಲ್ಲ. ಇವರ ದಿವ್ಯ ದೃಷ್ಠಿಗೆ ನರರು, ಸುರರು, ಕಿನ್ನರರು ಮೊದಲಾದವರು ಪಿಂಡವೆಂಬ ಭಾಂಡದಲ್ಲಿ ಅಡಗಿಹರಾಗಿ ನಾನವರ ರೂಹಿಸಬಲ್ಲೆನೆ ಅಯ್ಯ ? ದೇವಗಣ, ರುದ್ರಗಣ, ಪ್ರಮಥಗಣ ಮೊದಲಾದವರು ಬ್ರಹ್ಮಾಂಡವೆಂಬ ಭಾಂಡದಲ್ಲಿಯೆ ಅಡಗಿಹರಾಗಿ ನಾನವರ ಭಾವಿಸಬಲ್ಲೆ ಅಯ್ಯ ?

ಸತ್ಯರು, ನಿತ್ಯರು, ಮುಕ್ತರು ಎಂಬ ಮಹಾಮಹಿಮರು ಚಿದ್ ಬ್ರಹ್ಮಾಂಡವೆಂಬ ಭಾಂಡದಲ್ಲಿಯೆ ಅಡಗಿಹರಾಗಿ ನಾನವರ ಅರಿಯ ಬಲ್ಲೆನೆ ಅಯ್ಯ ? ಇಂತೀ ತ್ರಿಭಾಂಡವ ನೊಳಕೊಂಡು ಅಖಂಡಿತ ಘನ ಪರಿಪೂರ್ಣವಪ್ಪ ಭಾಂಡವೆ ತನ್ನಿರವೆಂದರಿದ ನಿಜಲಿಂಗೈಕ್ಯನ ಉಪಮಿಸಲಿಲ್ಲಾಗಿ ರೂಹಿಸಲಿಲ್ಲ ರೂಹಿಸಲಿಲ್ಲಾಗಿ ಭಾವಿಸಲಿಲ್ಲ ಭಾವಿಸಲಿಲ್ಲಾಗಿ ಅರಿಯಲಿಲ್ಲ ಅರಿಯಲಿಲ್ಲದ ಅರುವೆ ತಾನಾಗಿ ಗುಹೇಶ್ವರನೆಂಬುದು ಬೇರಿಲ್ಲ.

ಒಂದೆಂಬುವ ನಿಜಲಿಂಗೈಕ್ಯರು ಕಾಮಿಸುವದೆಂತು? ಆ ಮಹಾಂತ ಅರಿಯಲಿಲ್ಲದರುವೆ ತಾನಾಗಿಹ ಘನಕ್ಕೆ ಘನ, ಆತನೆಂತು ಕಾಮಿಸುವನು ? ಘನವಂತನ ದಿವ್ಯದೃಷ್ಠಿಗೆ ನರರಾಗಲಿ, ಸುರರಾಗಲಿ ಕಿನ್ನರರಾಗಲಿ ಅವರು ಪಡೆದ ನಾನ ಫಲ ಪದಂಗಳಿರಲಿ ಹಿರಿದಿಪ್ಪನಾರಾಜ್ಯವಿರಲಿ, ಸ್ವರ್ಗವಿರಲಿ ನಾನಾ ಪದವಿಗಳಿರಲಿ. ಅವು ಆಕಾರವುಳ್ಳವುಗಳಾಗಿಲ್ಲ. ಗಗನ ಕುಸುಮಕ್ಕೆ ಆಕಾರವಿರುವುದೆ? ಗಂಧರ್ವನಗರ ಅದು ದಿಟವೆ? ಬಂಜಿ ಮಗ ಬಹುಸುಂದರನೆಂದು ಆರಾದರೂ ಒಪ್ಪುವರೆ? ಹಾಗೆ ನರರು ಅವರ ರಾಜ್ಯಂಗಳು ಅತ್ಯಂತಾಭಾವವು ಸುರರ ನಾನಾ ಪದವಿಗಳು ಇಲ್ಲದವುಗಳೆ ಕಿನ್ನರರ ನಾನಾ ಸುನಾದಂಗಳು, ಸುರರ ನಾನಾ ಪದವಿಗಳು ಇಲ್ಲದವುಗಳೆ ಇಲ್ಲದವುಗಳು ಇದ್ದಘನ ತತ್ವವಾಗಬಹುದೆ ಆಗದು. ಇದು ಕಾರಣ ಲಿಂಗೈಕ್ಯ ಆವಾವುದನ್ನು ಕಾಮಿಸದವನು ಇವರನ್ನು ನರಕಾಸುರರೆಂದು ಕಿನ್ನರರೆಂದು ಕಲ್ಪಿಸುವುದು ಇಲ್ಲ. ದೇವಗಣ, ರುದ್ರಗಣ, ಪ್ರಮಥಗಣ ಮೊದಲಾದವರು ಮಾಯಿಕವೆ ಮಹದವಾಗಿ ಇವರಿಗೆ ಬ್ರಹ್ಮಾಂಡ ಬ್ರಹ್ಮಾಂಡದ ಕಾರ್ಯಂಗಳ ತೋರಿಕೆ ದಿಟವಾಗಿಹುದು. ಇವರು ಮಾಯಿಕರು. ಮಾಯಿಕವದು ಅತತ್ವವೆಂದು ತಿಳಿಯದ್ದರಿಂದ ಮೋಸ ಹೋದರು.

ಲಿಂಗೈಕ್ಯರು ಇವರನ್ನು ದೇವ ಗಣರೆಂದು ಭಾವಿಸಬಲ್ಲರೆ : ರುದ್ರಗಣ, ಪ್ರಮಥಗಣವೆಂದು ಭಾವಿಸಬಹುದೆ ಭಾವಿಸರು . ಭಾವಕ್ಕಗಮ್ಯವಾದ ಅಖಂಡಿತ ಘನ ಪೂರ್ಣವೆ ತನ್ನಿರುವೆಂದರಿದ ಅರುವುಳ್ಳವರು ನಿಜಲಿಂಗೈಕ್ಯರು ಭಾವಿಸುವದದೆಂತು ? ಅದು ಮಲಿನ ಸತ್ವಗುಣದಲ್ಲಿ ಪ್ರತಿಫಲಿತವಾದ ಚೇತನದುಪಾಧಿಯುಳ್ಳದ್ದಿರಲಿ , ಇದಾವ ಸತ್ವಗುಣದಲ್ಲಿ ಪ್ರತಿಫಲಿತವಾದ ಚೇತನ ಶುದ್ಧ ಉಪಾಧಿ ಯುಳ್ಳದ್ದಿರಲಿ . ಇವೆರಡು ಕಾರ್ಯರೂಪವು ತೋರಿ ಕೆಡುವವು. ಸುಜ್ಞಾನಿಯು ಇವುಗಳ ಭಾವಿಸಬಹುದೆ; ಭಾವಿಸಲರಿಯ. ಬಯಸಲರಿಯ. ಗಂಧರ್ವ ನಗರ ಆರಾದರೂ ಭಾವಿಸಬಹುದೆ? ಸ್ವಪ್ನದಲ್ಲಿ ತಿರುಕ ರಾಜ್ಯವ ಕಂಡರೂ ಅದನ್ನು ಎಚ್ಚೆತ್ತ ನಂತರ ಬಯಸಬಹುದೆ ಬಯಸಲರಿಯ.

ಸತ್ಯರು ನಿತ್ಯರು ಮುಕ್ತರು ಎಂಬ ಮಹಾ ಮಹಿಮರು ಭಾವಿಸದಿರುವಲ್ಲಿ ಬಯಸುವದದೆಂತು? ಇವರು ಚಿದ್‌ಬ್ರಹ್ಮಾಂಡವೆಂಬ ಭಾಂಡದಲ್ಲಿ ಅಡಗಿಹರನ್ನು ಒಪ್ಪುವದದೆಂತು, ತನ್ನಿಂದ ತನ್ನ ಅರಿತವರೆಂದು ತಿಳಿಯುವದಾದರೂ ಅದೆಂತು ? ಇವರು ಚಿದಹಮ್ಮುಳ್ಳವರು. ಇವರಿಗೆ ಚಿದಹಮ್ಮಿಗೆ ಮೀರಿದ ತಮ್ಮ ಘನದಿರುವ ಅರಿಯ ಹೋಗಲಿಲ್ಲ. ಇದು ಕಾರಣ ಇವರು ಸತ್ಯರು ನಿತ್ಯರು ಮುಕ್ತರೆಂಬ ಮತಿಯುಳ್ಳವರಾದರು.

ಇವರ ಮತಿ ಭಸ್ಮವಾಗಲಿಲ್ಲ ಭಾವಕ್ಕಾಗಮ್ಯವಾಗಿಹ ತಮ್ಮಿರುವಿನ ಅರುವು ತಮ್ಮಿಂದ ತಮಗೆ ವೇದ್ಯವಾಗದ್ದರಿಂದ ಇವರನ್ನು ಭಾವಿಸುವದದೆಂತು ಭಾವಿಸದ್ದರಿಂದ ಬಯಕೆಯೂ ಇಲ್ಲ.

ಗುಹೇಶ್ವರ ನೆಂಬುದಿಲ್ಲಾಗಿ ಬಯಲೆಂಬುದಿಲ್ಲ : ಗುಹೇಶ್ವರನೆಂಬುದು ಅರಿತ ಶರಣಂಗೆ ತನಗಿಂತನ್ಯವಾಗಿದ್ದರೆ ಗುಹೇಶ್ವರನೆಂಬ ಹಲುಬಾಟವಿರುತ್ತಿತ್ತು ತಾನಾರೆಂದರಿತ ಶರಣ ಅರಿಯಲಿಲ್ಲದರುವೆ ತಾನಾಗಿರುವಾಗ ಅಲ್ಲಿ ತನಗಿಂತನ್ಯವಾದುದು ಗುಹೇಶ್ವರ ನೆಂಬುದಿಲ್ಲ. ತಾನೆ

ಗುಹೇಶ್ವರನೆಂಬುದು ಇಲ್ಲ. ಉಪಮಿಸಲು ಬಾರದ ಘನಕ್ಕೆ ಘನವಾಗಿಹ ತನ್ನಿರುವಿನ ಅರಿವ ಉಪಮಿಸುವದದೆಂತು ಅನುಪಮನಲ್ಲಿ. ಗುಹೇಶ್ವರನೆಂಬುದಿಲ್ಲ ಬಯಲೆಂಬುದಿಲ್ಲವೆಂದು ಹೇಳಿಹರು.

81

ಹುಲ್ಲ ಕಿಚ್ಚುವ, ಕಲ್ಲ ಬೀಜವ, ನೀರ ನೆಳಲುವ
ಗಾಳಿ ನಾರುವ ಅಗ್ನಿಯ ಹಂಗಿಸುವ ಬಿಸಿಲಿನ ರುಚಿಯ
ತನ್ನ ಬೆಳಗುವ ನಾರು ಬಲ್ಲರು. ಗುಹೇಶ್ವರಾ ನಿಮ್ಮ ಶರಣರಲ್ಲದೆ. || 616 ||

ತಾತ್ಪರ್ಯ : ಹುಲ್ಲ ಕಿಚ್ಚುವ : ನೋಡುವುಡೆ ಹುಲ್ಲು ಇದರೋಳ್ ಹುದುಗಿಹುದು ಕಿಚ್ಚುವ ಇದೆಂಥ ಹುಲ್ಲು ಹುಲ್ಲೋಳ್ ಹುದುಗಿಹ ಕಿಚ್ಚು? ಆಶ್ಚರ್ಯ, ಇದು ವಿಶ್ವವೆಲ್ಲ ವ್ಯಾಪಿಸಿದ ಹುಲ್ಲು ಇದರೋಳ್ ಹುದುಗಿಹ ಕಿಚ್ಚು. ನೋಡುವುಡೆ ಹುಲ್ಲ ಕಾಣಬರುತ್ತಿದೆ. ಮುಟ್ಟುವಡೆ ಕಿಚ್ಚಾಗಿಹುದು. ಇದೆಂಥ ಹುಲ್ಲು? ನೋಡಲು ಮೃದು ಸುಂದರ ಮುಟ್ಟುವರೆ ಕಿಚ್ಚು.

ಸ್ವರ್ಗದೋಳ್ ಇದು ದೇವತಾದೈತ್ಯರಾಗಿಹ ಹುಲ್ಲ . ಹುಲ್ಲು ಹುಲ್ಲಿಗೆ ಘರ್ಷಣವಾಗಿ ಹತ್ತಿಹುದು ಕಿಚ್ಚು . ಮರ್ತ್ಯದೋಳ್. ಪುರುಷ ಸ್ತ್ರೀಯಾಗಿಹುದು . ಈ ಹುಲ್ಲು ಹೊನ್ನಾಗಿ ಹೆಣ್ಣಾಗಿ ಮಣ್ಣಾಗಿಹುದು ಈ ಹುಲ್ಲು. ಇದಲ್ಲದೆ ನಾನಾ ಪದವಿಯಾಗಿಹುದು ಈ ಹುಲ್ಲು. ಹುಲ್ಲೆಂದರೆ ಮೋಹಿಗಳಿಗೆ ಕಿಚ್ಚಾಗಿಹುದು, ಉಪಭೋಗಿಸ ಹೋಗುವುಡೆ ಮರಣಕ್ಕೆ ಆಮಂತ್ರಣ ಕೊಡುವುದು. ಇದರ ಮೋಹಿಯಾಗಿ ಉಪಭೋಗಿಸ ಹೋದ . ನರರುಗಳು ಸುರಾಸುರರು ಮನು ಮುನಿಗಳು ತಪಸ್ವಿ, ತ್ಯಾಗಿಗಳು ಮರಣವ ಕಂಡರಲ್ಲದೆ ಅಮರರಾಗಲಿಲ್ಲ.

ಹುಲ್ಲೆಂದರೆ; ಶಬ್ದ ಸ್ಪರ್ಶ ರೂಪ ರಸ ಗಂಧವೆಂಬ ಪಂಚ ವಿಷಯವೆ ಹುಲ್ಲು. ಇದು ನೋಡಲು ಮನೋಹರ . ಮುಟ್ಟಲು ಹೋಗಿ ಪ್ರಾಣ ತೆಗೆದುಕೊಂಡಿತು. ರೂಪವೆಂಬ ಹುಲ್ಲು ಮುಟ್ಟಲು ಹೋಗಿ ಪತಂಗ, ಪ್ರಾಣ ಕೊಟ್ಟಿತು. ಶಬ್ದವ ಮುಟ್ಟಲು ಹೋಗಿ ಜಿಂಕೆ ಪ್ರಾಣ ಕೊಟ್ಟಿತು. ರಸವ ಮುಟ್ಟಲು ಹೋಗಿ ಮೀನ ಪ್ರಾಣವ ಕೊಟ್ಟಿತ್ತು. ಇದೆ ರೀತಿ ಶಬ್ದ ಶಬ್ದವ ತಾಂಕಿ ಕಿಚ್ಚೆದ್ದು ಕೌರವ ಪಾಂಡವರು ನಷ್ಟವಾದರು. ದ್ರೌಪದಿ ರೂಪಿ ಹುಲ್ಲ ಮುಟ್ಟಲು ಹೋಗಿ , ಕೀಚಕನು ಕಿಚ್ಚ ತಾಕಿ ಮಡಿದನು .ಇದೇ ರೀತಿಯಲ್ಲಿ ಆಶೆಗಾಗಿ ಸತ್ತವರು ಕೋಟಿ ಆಮಿಷಕ್ಕಾಗಿ ಸತ್ತವರು ಕೋಟಿ. ಹೊನ್ನು,ಹೆಣ್ಣು,ಮಣ್ಣಿಗಾಗಿ ಸತ್ತವರು ಕೋಟಿ. ನಿನಗಾಗಿ ಸತ್ತವರನೊಬ್ಬರನ ಕಾಣೆ, ಗುಹೇಶ್ವರಾ.

ಇದು ವಿಷಯ ದಾಟ, ವಿವರಿಸಿ ನೋಡುವಡೆ ವಿಷದಾಟ ಕಿಚ್ಚನಾಟ. ಗಂಡು ಹೆಣ್ಣಿಂಗೆ ಕಿಚ್ಚು, ಹೆಣ್ಣಿಂಗೆ ಗಂಡು ಕಿಚ್ಚು. ಹೆಂಡತಿಗೆ ಗಂಡ ಕಿಚ್ಚು, ಗಂಡಂಗೆ ಹೆಂಡತಿ ಕಿಚ್ಚು, ತೋರುವ ಅಖಿಲ ಜಗವೆಲ್ಲ ನೋಡಲು ಹುಲ್ಲ! ಅದರೋಳ್ ಹುದುಗಿಹುದು ಕಿಚ್ಚು. ಹುಲ್ಲೆಂಬುದು ವಿಷಯಾಸಕ್ತಿ , ವಿಷಯಾಸಕ್ತಿ ಎಂಬುದು ಹುಲ್ಲ ಕಿಚ್ಚು ಇದುವೆ ದೇಹ ವಾಸನೆ , ಲೋಕವಾಸನೆ . ಕೊನೆಗೆ ಶಾಸ್ತ್ರ ವಾಸನೆಯಾಗಿ ವಿವೇಕಿಯ ಅವಿವೇಕಿ ಮಾಡುವುದು. ಜ್ಞಾನಿಯ ಅಜ್ಞಾನಿ ಮಾಡುವುದು. ಈ ವಾಸನಾರೂಪಿ ಕಿಚ್ಚು ತಾನಾರೆಂಬುದು ತಿಳಿಯಗೊಡದಂತೆ ಮಾಡುವುದು . ನೋಡಲು ದೇಹವಾಗಲಿ ಲೋಕವಾಗಲಿ ಶಾಸ್ತ್ರವಾಗಲಿ ಬಹು ರಂಜನೆಯುಳ್ಳುದು. ಇದು ಒಳಗೊಳಗೆ ದಹಿಸುತ್ತ ದಾಹಕತ್ವವೆ ಅಧಿಕವಾಗುವದು ಹುಲ್ಲೆಂಬುದು ವಿಷಯಾಸಕ್ತಿ ವಿಷಯ ವಾಸನೆ . ಹುಲ್ಲ ಕಿಚ್ಚು ಎಂಬುದು ಪಂಚ ವಿಷಯಂಗಳಿಂದ ಕಾಣುವ ಸುಖಾಕಾರ, ದುಃಖಾಕಾರ ಲಾಭ ಹಾನಿ ಮಾನ. ಅಪಮಾನ ಜಯಾಪಜಯಂಗಳೆಂಬ ವಿಷಮದೃಷ್ಟಿ ವಿಷಯ ಭಾವಂಗಳೆ ಹುಲ್ಲ ಕಿಚ್ಚು .ಇದು ಸಮದೃಷ್ಠಿ ಸಮಭಾವವನ್ನೆ ಸುಟ್ಟು ಹಾಕುವುದು

ಇದು ಕಾರಣ, ಹುಲ್ಲ ಕಿಚ್ಚು ಎಂದು ಹೇಳಿದ್ದಾರೆ.

ಕಲ್ಲ ಬೀಜವ : ಬೀಜಂಗಳು ನಾನಾ ಬೀಜಂಗಳು ಇರಬಹುದು , ಕಲ್ಲ ಬೀಜವಿರಬಹುದೆ , ಆಶ್ಚರ್ಯ . ಕಲ್ಲು ಎಷ್ಟು ಕಠಿಣವೊ , ಬೀಜವು ಅಷ್ಟೆ ಕಠಿಣವಾದದ್ದು. ಕಲ್ಲು ಹೇಗೆ ತನ್ನನ್ನು ತಿಳಿಯದು. ಅನ್ಯರನ್ನು ತಿಳಿಯದು. ಈ ಕಲ್ಲ ಬೀಜವಾದರೂ ತಾನು ಬೀಜವೆಂಬುದು ತಿಳಿಯದು. ಅನ್ಯರ ತಿಳಿಯದು. ಹಾಗಾದರೆ ಈ ಬೀಜವಿರುವದೆಲ್ಲಿ? ಇದು ಅಂಗಡಿಗಳಲ್ಲಿ ಒಕ್ಕಲಿಗನಲ್ಲಿ ಶಿಕ್ಕುವ ಬೀಜವಲ್ಲ. ಆರೆ ಆಗಲಿ, ಅಜ್ಞಾನಿಯ ದೇಹದಲ್ಲಿ ಸಿಗುವ ಬೀಜ. ಸುರಾಸುರರಲ್ಲಿ ವಾಸವಾಗಿಹ ಬೀಜ. ಧರ್ಮಿಗಳಲ್ಲಿ ಅಧರ್ಮಿಗಳಲ್ಲಿ ವಾಸವಾಗಿಹ ಬೀಜ. ಗುರು ಕರುಣೆಯಿಲ್ಲದ ನಾಸ್ತಿಕರಲ್ಲಿ ಮುಗ್ಧ ಭಾವಿಕರಲ್ಲಿ ಭವಿಗಳ ಮನೆಯಲ್ಲಿ ಶಿಗುವ ಬೀಜ. ಇದು ಭಕ್ತರ ಪ್ರವೇಶಿಸದ ಬೀಜ. ಭವಿಗಳ ಬೀಜ. ಇದು ಮೃತ್ಯುವಿಗೆ ಹಿರೆ ಮಗನೆಂದರೂ ಅಡ್ಡಿಯಿಲ್ಲ. ಈ ಬೀಜದಿಂದಲೆ ಈರೇಳು ಲೋಕದ ಅಂಕುರ, ಪುಣ್ಯಪಾಪಂಗಳ ಅಂಕುರ ಭೋಗ ತ್ಯಾಗದ ಅಂಕುರ, ಜ್ಞಾನ ಅಜ್ಞಾನದ ಅಂಕುರ , ಬಂಧಮೋಕ್ಷದ ಅಂಕುರ.

ಬೀಜ , ಕಲ್ಲಬೀಜ ! ಆವುದು ಗೊತ್ತೆ ! ಜಡ ಕಲ್ಲು . ಜಡವಾದ ದೇಹವು ಕೂಡಾ ಕಲ್ಲೆ ! ಇದರ ಮೂಲಾಹಂಕಾರವು ಇದರ ಬೀಜ . ಇದಲ್ಲದೆ ಗುಣಮಯಿಯಲ್ಲ, ಅಹಂಕಾರ ತಾದಾತ್ಮೆ ಹೊಂದಿ , ಜೀವನು ಶುದ್ಧ ಅಹಂಕಾರ , ಅಶುದ್ಧ ಅಹಂಕಾರ . ಶುದಾಶುದ್ಧ ಮಿಶ್ರ ಅಹಂಕಾರವಾಗಿ , ತನ್ನನ್ನು ತಿಳಿಯಗೊಡದಂತೆ ಮಾಡಿದೆ . ಅಶುದ್ಧ ಅಹಂಕಾರವದು ತಾನಲ್ಲದ ದೇಹಾದಿಗಳು ದೇಹೋಹಂ ಎಂಬ ರೂಪದಲ್ಲಿ ತೋರುವುದು. ಈ ಅಹಂಕಾರ ಅಪವಿತ್ರವಾಗಿದ್ದು, ಇದು ಪುರಾಣ ಪ್ರವಚನ ಮಾಡುತ್ತಿರಲಿ , ಕೀರ್ತನೆ ಹೇಳುತ್ತಿರಲಿ , ಇದು ಶಿಷ್ಯರಾಗಿರಲಿ, ಗುರುಗಳಾಗಿರಲಿ, ಭಕ್ತರಾಗಿರಲಿ ಭವಿಗಳಾಗಿರಲಿ ಆವರೆಲ್ಲರೂ ಅಹಂಕಾರಿಗಳೆ ಇದ್ದುದರಿಂದ ಕಲ್ಲು ಬೀಜವೆ ಆಗಿಹರು.

ಶುದ್ಧಾ ಶುದ್ದೆವೆಂಬ ಮಿಶ್ರ ಅಹಂಕಾರ . ಈಶಾರ್ಪಣ ಮಾಡುವ ಭಕ್ತನ ಅಹಂಕಾರ , ಈ ಅಹಂಕಾರ ತನು , ಮನ , ಧನವ ಅರ್ಪಿಸಿದುದು ನಿಜ . ಅರ್ಪಿಸಿದ ಅಹಂಕಾರ ಅರ್ಪಿತವಾಗದ್ದರಿಂದ, ಅರ್ಪಿಸಿಕೊಳ್ಳುವ ಈಶನನ್ನು ತಿಳಿಯಲಿಲ್ಲ. ಅರ್ಪಣ ಮಾಡುವ ತನ್ನನ್ನು ತಿಳಿಯಲಿಲ್ಲ.

ತನುವ ಕೊಡುವುಡೆ ಗುರುವಿನದದು , ಮನ ಕೊಡುವುಡೆ ಲಿಂಗದ್ದದು , ಧನ ಕೊಡುವುಡೆ ಜಂಗಮದ್ದದು ಅವರ ಪದಾರ್ಥ ಅವರಿಗೆ ಕೊಟ್ಟು ಭಕ್ತನಾದೆನೆಂಬುದು ಹಿರಿಯ ತನದ ಕೇಡು ನೋಡಾ. ಕಪಿಲಸಿದ್ಧಮಲ್ಲಿಕಾರ್ಜುನ ಎನ್ನುವ ಮಹಾನುಭವದ ರಹಸ್ಯ ಗೊತ್ತಾಗದ್ದರಿಂದ ಈಶಾರ್ಪಣ ಮಾಡುವ ಅಹಂಕಾರ . ಇದು ನಷ್ಟವಾಗದ್ದರಿಂದ ಈಶನನ್ನು ತಿಳಿಯದ ಭಕ್ತ ಜಡ .ಅರ್ಪಿಸಿದ ಪದಾರ್ಥಂಗಳು ತಿಳಿಯದ್ದರಿಂದ ಜಡ . ತಿಳಿಯದೆ ಅರ್ಪಿಸಿದ ಅಹಂಕಾರ ತಾನಾದುದರಿಂದ ತಾನು ಜಡ . ಈ ತ್ರಿವಿಧ ಅಹಂಕಾರಕ್ಕೆ ಮೂಲವಾದುದರಿಂದ ಕಲ್ಲ ಬೀಜವ ಎಂದು ಹೇಳಿಹರು.

ಶುದ್ಧ ಅಹಂಕಾರ ,ಇದು ಆತ್ಮ ನಾನೆನ್ನುವ ಅಹಂಕಾರ . ಆತ್ಮನು ತನು ತ್ರಯಾದಿಗಳಿಗೆ ಸಾಕ್ಷಿ ಅವಸ್ಥಾತ್ರಯಗಳಿಗೆ ಸಾಕ್ಷಿ, ಗುಣತ್ರಯಗಳಿಗೆ ಸಾಕ್ಷಿ, ಪಂಚಕೋಶಗಳಿಗೆ ಸಾಕ್ಷಿ , ಸಾಕ್ಷಿಯಾದ ಆತ್ಮನು ಅಸಂಗನು ಸ್ವಯಂ ಪ್ರಕಾಶನು ಕೂಟ ಸ್ಥನು ಸಚ್ಚಿದ್ರೂಪನು ನಿತ್ಯ ಪೂರ್ಣನು ಅಖಂಡನು ಏಕಮೇವಾದ್ವಿತೀಯನು ಅಚಿಂತ್ಯಾತ್ಮನೆಂದು ಆತ್ಮ ಲಕ್ಷಣಗಳಿಗೆ ಮನವು ನಾನೆಂದು ಅಭಿಮಾನಿಸುವದೆ ಶುದ್ಧ ಅಹಂಕಾರವು. ಇದು ಮುಕ್ತಾತ್ಮನೆಂದು ಪ್ರಪಂಚ ಪ್ರತೀತಿಯಾದರೂ ಬ್ರಹ್ಮಾಕಾರ ವೃತ್ತಿಯಿಂದಿರುವದೆ ಜೀವನ್ಮುಕ್ತನೆಂದು ಹೇಳುವರು . ಇದು ನಿರಾವರಣ ಪರಿಪೂರ್ಣ ಆನಂದ ಸಹಿತ ವೃತ್ತಿ ಯಿಂದುಕ್ತವಾದುದರಿಂದ ಶುದ್ಧ ಅಹಂಕಾರ ಸುಖದ ಅಹಂಕಾರವೆಂದು ವೃತ್ತಿಯಿಂದುಕ್ತವಾದುದರಿಂದ ಸ್ವಸ್ವರೂಪವಾಗದು. ಇದು ಕೂಡ ಯತಾರ್ಥದೃಷ್ಟಿಗೆ ತನ್ನ ಸ್ವರೂಪದ

ವಿಸ್ಮತಿ ಎಂದು ಹೇಳಿಸಿ ಕೊಳ್ಳುವುದರಿಂದ , ವಿಸ್ಮೃತಿಯೆ ಕಲ್ಲು ಆಗಿದೆ . ವೃತ್ತಿಯಿಂದುಕ್ತವಾದ್ದರಿಂದ ಅಹಂಕಾರವದೆ ಅಹಂಕಾರ ಆವಲ್ಲಿ ಇದೆ ಅದು ಬೀಜವೆನಿಸಿದೆ ಎಂದು ಹೇಳಿಹರು.

ನೀರ ನೆಳಲುವ : ನೀರ ಕಂಡವರುಂಟು . ನೆಳಲು ಕಂಡವರುಂಟೆ? ನೀರೆಂಬುದು ಮನಸ್ಸು ನೀರೆಂದರೆ ಪ್ರವಾಹ . ಇದು ಕಾರಣ ನೀರು ಮನಸ್ಸು ಒಂದೆ . ನೀರ ನೆಳಲುವ ನೀರಿನ ಪ್ರತಿಛಾಯೆ ನೀರನೆಳಲು ಮನದ ಪ್ರತಿ ಛಾಯೆ . ನೀರನೆಳಲು ಆಗಿದೆ. ಇದುವೆ ಮನದ ಪ್ರವೃತ್ತಿ ಆಗಿದೆ. ಇದುವೆ ವ್ಯಷ್ಠಿ ಸಮಷ್ಠಿ ಶರೀರವಾಗಿದೆ. ಅಖಿಲ ಪ್ರಪಂಚವು ಆಗಿದೆ ಕಾರಣವು ಆಗಿದೆ.

'' ಜಗವ ಸುತ್ತಿಪ್ಪುದು ನಿನ್ನಯ ಮಾಯೆ . ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಾ. ಜಗಕ್ಕೆ ಬಲ್ಲಿದವ ನೀನು , ನಿನಗೆ ಬಲ್ಲಿದವ ನಾನು . ಕರಿಯ ಕನ್ನಡಿಯೊಳಗಣ ಪ್ರತಿಬಿಂಬದಂತೆ ನೀನೆನೊಳಗಡಗಿದೆ ಕೂಡಲಸಂಗಮದೇವಾ '' ಎಂದು ಬಸವಣ್ಣನವರು ನಿನ್ನ ಮಾಯೆ ಜಗವ ಸುತ್ತಿಪ್ಪುದು , ಆರಲ್ಲಿ ಮನವು ಸತ್ಯವಾಗಿದೆ , ಅವರಲ್ಲಿ ಅದರಿಂದ ತೋರುವ ತೋರಿಕೆ ರೂಪೀ ಜಗವು ಸತ್ಯವಾಗಿದೆ. ಜಗವು ಸತ್ಯವೆಂಬುದು ಭ್ರಮೆ . ಅದುವೆ ನೀರ ನೆಳಲು. ಮಾಯೆ ಅದು ಎಲ್ಲೆಡೆಯಲ್ಲೂ ವ್ಯಾಪಿಸಿದೆ ಆವರಿಸಿ ಬಿಟ್ಟಿದೆ . ಅಜ್ಞಾನಿಗಳಿಗೆ ದೇಹೋಹಂ ಅಷ್ಟೆ ಸತ್ಯವಾಗಿ ಆವರಿಸಿದೆ. ಭಕ್ತರಿಗೆ ಚಿದಹಮ್ಮು ಅಷ್ಟೆ ಆವರಿಸಿದೆ . ಇದು ಯತಾರ್ಥ ತಿಳಿಯದ ಪರಿಣಾಮ ಇದರಿಂದ ಮನವು ಜ್ಞಾನ ಅಜ್ಞಾನವೆಂಬ ಎರಡು ಮುಖವುಳ್ಳದ್ದಾಗಿ , ನೀರ ನೆಳಲು ನಷ್ಟವಾಗದಂತಾಗಿದೆ . ಅಂದರೆ ವೃತ್ತಿಯಿಂದುಕ್ತವಾದುದು ನಷ್ಟವಾಗದಂತಾಗಿದೆ ಮರವರುವಿನ ವೃತ್ತಿಯೆ ಪ್ರಧಾನವಾಗಿದೆ.

ಗಾಳಿ ನಾರುವ : ನಾರುವ ಗಾಳಿ ಇದಾವುದು, ಅಪಾನ ವಾಯುವಿಗೆ ನಾರುವ ಗಾಳಿ ಎನ್ನಬೇಕೆ? ಇದು ಜಠರಾಗ್ನಿ ಮಂದ ಬಿದ್ದಾಗ ಅಪಚನದಿಂದುಂಟಾದ ಗಾಳಿ , ನಾರುವ ಜೀವನಿಗೆ ಗಾಳಿ ಎನಲಾಗಿದೆ. ಇದಲ್ಲದೆ ಬಹು ಜನ್ಮಂಗಳಲ್ಲಿ ಜೀವಿಗೆ ದೇಹ ಬುದ್ಧಿ ದೃಢವಾಗಿ ಅದೆ ಅದು ವಾಸನಾಮಯ ಗಾಳಿ . ಸಕಲ ಜನ್ಮಂಗಳಿಗೆ ಕಾರಣ ಭೂತವಾಗಿಹ ಗಾಳಿ . ಹುಟ್ಟುಸಾವುಗಳ ಭ್ರಮಾತ್ಮಕ ಗಾಳಿ , ಭವ ಪಾಶಕ್ಕೆ ಈಡಾದಗಾಳಿ , ಹುಟ್ಟಿದೆನೆನ್ನುವ ಗಾಳಿ , ಮರಣವಾಗುವೆನೆನ್ನುವ ಗಾಳಿ , ಷಡ್ವಿಕಾರಂಗಳ ಗಾಳಿ , ಮಲತ್ರಯಂಗಳುಳ್ಳ ವಾಸನಾ ಗಾಳಿ , ತಾಯಿಯ ಅಂಶವಾಗಿಹ ರಕ್ತ ವಾಸನೆ ತಂದೆಯ ಅಂಶವಾಗಿಹ ರೇತೋ ಗಾಳಿ , ಇವರೀರ್ವರ ಕಾರ್ಮಿಕ ಮಲವೆ ದೇಹ ನಾನೆಂಬ ವಾಸನಾ ರೂಪಿ ಗಾಳಿ . ಈ ವಾಸನೆಯ ಬುದ್ಧಿಯೆ ಗಾಳಿ ನಾರುವ ಎಂದು ಹೇಳಲಾಗಿದೆ. ಇದುವೆ ಪ್ರಾಣವನ್ನು ಸುತ್ತಿಕೊಂಡಿದೆ. ಇದು ಕಾರಣ ದೇಹಾದಿ ಧರ್ಮಂಗಳು ತನ್ನವಾಗಿರುವುದರಿಂದ ಪ್ರಾಣಾದಿಗಳನ್ನು ಇಂದ್ರಿಯಾದಿಗಳನ್ನು ಮನವನ್ನು ಕೂಡಿಕೊಂಡು , ವಾಸನೆಯ ವಶವಾಗಿ ಅನೇಕ ಭವ ಭವಾಂತರಗಳಲ್ಲಿ ತಿರುಗುವುದೆ, ಗಾಳಿ ನಾರುವ ಎಂದು ಹೇಳಿಹರು.

ಅಗ್ನಿಯ ಹಂಗಿಸುವ ಬಿಸಲು ರುಚಿಯ : ಅಗ್ನಿ ತನುಗುಣ ಸಂಬಂಧದ ದೇಹದಲ್ಲಿ ತುಂಬಿ ಕಾಮಾಗ್ನಿ ಕ್ರೋಧಾಗ್ನಿ ಲೋಭಾಗ್ನಿ ಮದ ಮತ್ಸರಾಗ್ನಿ ಮೋಹಾಗ್ನಿಯ ಸಂಸಾರ ರಸ ಜೀವನವನ್ನು ಚಿಂತೆಯೆಂಬ ಚಿತೆಯಿಂದ ದಹಿಸುತ್ತದೆ . ಇದರ ತಾಪತ್ರಯ ಬೇಗ ಉಗ್ರವಾಗಿದೆ. ಇದು ಕಾರಣ ಈ ಒಡಲಾಗ್ನಿಯ ನಷ್ಟಮಾಡಲು ಬಿಸಿಲಿನ ರುಚಿಯ ಅವಶ್ಯಕವಾದುದು.

ಬಿಸಿಲಿನ ರುಚಿ , ಇದಾವ ಬಿಸಿಲಿನ ರುಚಿ? ಪರ ಪ್ರಕಾಶವಾಗಿಹ ಸೂರ್ಯಬಿಸಿಲಿನ ರುಚಿ ಎನ್ನಬೇಕೆ? ಎನ್ನಲಾಗದು . ಇದು ಉದಯ ಅಸ್ತವಾಗದ ಬಿಸಿಲಿನ ರುಚಿ . ನಿರಂತರ ಇದ್ದಂತಿರುವ ಬಿಸಿಲಿನ ರುಚಿ , ಚಿದ್ರೂಪದ ರುಚಿ , ನಿತ್ಯನಿರಂಜನ ಚಿದ್ರೂಪವಾಗಿಹ ಸಮ್ಯಜ್ಞಾನ ರೂಪಿ ಬಿಸಿಲಿನ ರುಚಿ ಅವಶ್ಯಕವಾದುದು ಈ ಬಿಸಿಲಿನ ರುಚಿ ತನಗೆ ಲಭ್ಯವಾಗಲು ಮೊದಲು ಪ್ರವೃತ್ತಿ ಮಾರ್ಗವಾದ

ಪ್ರಪಂಚದ ವಿಷಯ ಸುಖದಿಂದ ವಿಮುಖನಾಗಿ , ಅರು ಹೃದಯವುಳ್ಳವನಾಗಿ ತನ್ನಿಂದ ತನ್ನ ತಾನೆ ತಿಳಿದು ನೋಡುವುಡೆ ತನ್ನ ಬೆಳಗುವ ಘನವು ತನ್ನಿಂದ ತಾನೆ ವಿದಿತವಾಗುವುದು. ಆಗ ಬೆಳಗಿಸಿಕೊಳ್ಳುವ ಅನಾತ್ಮ ಕಾಣಲಾರ. ತಾನು ಬೆಳಗುವ ಬೆಳಗು ಮಹಾಬೆಳಗು ಸ್ವಯ ಬೆಳಗು ಎಂಬುದು ಶರಣರು ತಿಳಿಯ ಬಲ್ಲರು . ಶರಣನೆಂದರೆ ತಾನಾರೆಂದು ತನ್ನ ತಾ ಅರಿತ ಕಾರಣ ಆತನೆ ಬೆಳಗುವ ಬೆಳಗು ಅಖಂಡಿತ ಘನವಪ್ಪ ಪೂರ್ಣ ಬೆಳಗು . ಸ್ವಯಂ ಬೆಳಗು ಎಂಬುದು ಶರಣರಿಗೆ ವಿದಿತವು ಎಂದು ಪ್ರಭುದೇವ ಹೇಳಿದುದು .

82

ಪೃಥ್ವಿಯೊಳಗಿಲ್ಲ ಆಕಾಶದೊಳಗಿಲ್ಲ
ಚತುರ್ದಶ ಭುವನಾದಿ ಭುವನಂಗಳೊಳಗೆಯೂ ಇಲ್ಲ.
ಹೊರಗೆಯೂ ಇಲ್ಲ ಏನಾಯಿತ್ತೆಂದರಿಯೆನಯ್ಯ .
ಗುಹೇಶ್ವರ ಅಂದೂ ಇಲ್ಲ ಇಂದೂ ಇಲ್ಲ ಎಂದೂ ಇಲ್ಲ. ॥ 621 ॥

ತಾತ್ಪರ್ಯ: ಪೃಥ್ವಿಯೊಳಗಿಲ್ಲ ಆಕಾಶದೊಳಗಿಲ್ಲ, ಚತುರ್ದಶ ಭುವನಾದಿ ಭುವನಂಗಳೊಳಗೆಯೂ ಇಲ್ಲ ; ಹೊರಗೆಯೂ ಇಲ್ಲ ಏನಾಯಿತ್ತೆಂದರಿಯೆನಯ್ಯಾ : ಪ್ರಭು ದೇವ, ದೇವರ ದೇವ, ಈ ಮಹವಕ್ಕೇನನ್ನಬೇಕು ? ಇದು ಆಕಾಶ ವಾಣಿ , ಇದಾವ ಚತುರ್ವರ್ಣಾಶ್ರಮವಾಗಿ ನುಡಿದ ವಾಣಿ ಅನಬೇಕು . ಆವ ಜಗದ್ಗುರುವಾಗಿ ನುಡಿದುದು ಎನಬೇಕು. ಆವ ದೇಶಕ್ಕಾಗಿ ನುಡಿದುದು ಎನಬೇಕು, ಆವ ಕಾಲದ್ದಾಗಿ ನುಡಿದುದೆನಬೇಕೆ ? ಎನಲಾಗದು ಆವ ವಸ್ತುವಾಗಿ ನುಡಿದ ನುಡಿ ಎನಬೇಕು ? ಅನುಪಮಗೆ ಉಪಮೆ ಮಾಡುವುದು ಅಪರಾಧ .

ಆಕಾಶವಾಣಿ ಸೀಮಿತವಾಣಿ ಆಗಬಹುದೆ ? ಅದು ನಿಸ್ಸೀಮ ನಿರಂತರ ನಿರಾಲಂಬ ನಿಃಶಬ್ದ ಬ್ರಹ್ಮ. ಅದು ನುಡಿದು ನುಡಿಯದಂತಿದ್ದ ಘನ. ತಾನೆ ತಾನಾಗಿಹ ಘನ . ಏನನ್ನಬೇಕು? ನಿಜವರಿತ ನಿಜೈಕ್ಯ ನುಡಿಗೆಡೆಗೊಡದ ಘನ , ಈ ಘನವಂತ ನುಡಿದ ನುಡಿ ತಾನಾಗದ ನುಡಿ. ನುಡಿ ಕೆಟ್ಟ ನುಡಿ ನುಡಿದರೂ ತಾನಾಗದ ಘನಮಹಿಮ . ತನ್ನಿರುವಿನ ಅರುವ ಸಂಜ್ಞೆಯಿಂದ ಪ್ರಜ್ವಲಿಸುವ ಕರುಣಾಹೃದಯ ಏನೆನ್ನಬೇಕು? ಆ ಹೃದಯದೊಳ್ ಬೆಳಗಿದ ಬೆಳಗಿನ ಬೆಳಗು ಇದಾರ ಹೃದಯವೆನಬೇಕು ? ಅರು ಹೃದಯ ಇದೆಂಥ ಅರುವು ಎನಬೇಕು ? ಇದಾವ ಶೃತಿಗೊಳಪಟ್ಟ ಜ್ಞಾನ ವೆನಬೇಕು ? ಇದಕ್ಕೆ ಪರಿಹಾರ ಪ್ರಭುವಿನ ಮಹಾ ಪ್ರಸಾದವೆ ಪರಿಹಾರ .

ಈ ಮಹಾ ಪ್ರಸಾದ ವೇದಾಂತ ಜ್ಞಾನವೂ ಅಲ್ಲ, ಆಗಮವಂತರ ಜ್ಞಾನವೂ ಅಲ್ಲ. ಇದಾವ ಮತಿವಂತರ ಜ್ಞಾನವೆನಬೇಕು? ವೇದ ವೇದಾಂತಂಗಳು ಆವುದರಿಂದ ಸಿದ್ಧವಾಗುವವು ಅದು ಮುನ್ನ ಮುನ್ನಲಾದ ಘನವು . ತನ್ನಿಂದ ತಾನಾದ ಘನವು . ಅದು ಅನುಪಮವಾದುದರಿಂದ ಅರುವಿಂಗರುವಾದ ಮಹಾಪ್ರಸಾದ ವೇದದೊಳ್ ಹುಡುಕಿದರೂ ದೊರೆಯದ ಪ್ರಸಾದ . ಶಾಸ್ತ್ರಾಗಮಂಗಳಲ್ಲಿ ಹುಡುಕಿದರೂ ಲಭ್ಯವಾಗದ್ದರಿಂದ ಇದು ಮಹಾ ಪ್ರಸಾದ . ಇದು ಉಪಮಿಸದ ಘನ ಪ್ರಸಾದ , ತನ್ನಿಂದ ತನ್ನ ಅರಿದರಿದು ನೋಡಿದ ಮಹಾದರುವು . ಈ ಮಹದರುವಿಂಗೆ ಗುರುವಿಡಿದ ಅರುವು ಎನಬೇಕೆ? ಲಿಂಗವಿಡಿದ ಅರುವು ಎನಬೇಕೆ? ಇವೆಲ್ಲವು ಕಲ್ಪಿತ , ತನ್ನಿಂದ ತನ್ನ ಅರಿದ ಅರುವೆ ಇಲ್ಲಿ ಮಹಾ ಪ್ರಸಾದವಾಗಿದೆ. ಇದು ಸ್ವಯ ಪ್ರಸಾದವು.

ಕೆಲವು ಶಾಸ್ತ್ರಗಳಲ್ಲಿ ಈಶ್ವರನಿಂದ ಪಂಚಭೂತಂಗಳಾಗಿವೆ. ಈ ಈಶ್ವರನು ತತ್ವದ ವಾಚಾರ್ಥನು.

ಶುದ್ಧ ಸತ್ವ ಗುಣದಲ್ಲಿ ಪ್ರತಿಫಲಿತವಾದ , ಆಭಾಸ ಚೇತನನೆ ಈಶ್ವರನೆಂದು , ಇವನೆ ಕಾರಣನು , ಕಾರ್ಯನು ಇವನೆ. ಇವನಿಂದಲೆ ಪಂಚಭೂತಂಗಳ ಉತ್ಪತ್ತಿ, ಇವನಿಂದಲೆ ಜಗತ್ಕಾರ್ಯವು . ಪಂಚಭೂತಗಳಿಂದ ಇಪ್ಪತ್ತೈದು ತತ್ವವುಳ್ಳ ದೇಹವಾಗಿದೆ. ಹದಿನಾಲ್ಕು ಲೋಕಂಗಳು ಆಗಿವೆ ಎಂದು ಆಕಾಶಭೂತವಾದ ಪಂಚತತ್ವಂಗಳು ಶೋಕ ಮೋಹ ಕಾಮ ಕ್ರೋಧ ಭಯ ವಾಯು ಭೂತದಿಂದ ಪಂಚ ತತ್ವಂಗಳು. ಪ್ರಸರಣ ಧಾವನ ವಲನ ಚಲನ ಮತ್ತು ಆಕುಂಚನ ಅಗ್ನಿ ಭೂತದಿಂದ ಪಂಚ ತತ್ವಗಳು ನಿದ್ರಾ ಆಲಸ್ಯ ತೃಷಾ ಕ್ಷುಧಾ ಶಾಂತಿ ಜಲ ಭೂತದಿಂದ ಪಂಚತತ್ವಗಳು . ರಕ್ತ ಬೆವರು ಲಾಲಾರಸ ಮೂತ್ರ ಕಫ ಪೃಥ್ವಿ ಭೂತದಿಂದ ಪಂಚತತ್ವಂಗಳು ರೋಮ ತ್ವಚೆ ನಾಡಿ ಮಾಂಸ ಮತ್ತು ಅಸ್ಥಿ ಹೀಗೆ ಒಟ್ಟು ಇಪ್ಪತ್ತೈದು ತತ್ವ. ಈ ಪಂಚೀಕರಣ ಆರಿಂದ ಆಯಿತ್ತು ಮತ್ತು ಏಕೆ ಆಯಿತ್ತು ? ಪಂಚೀಕರಣ ಈಶ್ವರನಿಂದಾಯಿತ್ತು. ಈಶ್ವರನು ಜಗತ್ತಿನ ಎಲ್ಲಾ ವ್ಯವಹಾರಂಗಳು ಇಷ್ಟು ಕ್ರಮವಾಗಿ ನಡೆಯುವದನ್ನು ಕಂಡು, ಇದು ಸರ್ವಜ್ಞ ನಾದ ಈಶ್ವರನಿಂದಲೆ ಸೃಷ್ಠಿಸಲ್ಪಟ್ಟಿದೆ ಎಂಬುದಾಗಿ ಹೇಳಬಹುದು .ಈ ಸೃಷ್ಠಿ ಏಕೆ ಉಂಟಾಯಿತೆಂದಲ್ಲಿ, ಜೀವರುಗಳು ಪ್ರಾರಾಬ್ಧವನ್ನು ಭೋಗಿಸಿ ಪುರುಷಾರ್ಥವನ್ನು ಅಂದರೆ ಮೋಕ್ಷವ ಸಂಪಾದಿಸಿ ಕೊಳ್ಳುವದಕ್ಕೋಸ್ಕರ ಉಂಟಾಗಿದೆ ಎಂದು ಹೇಳಬಹುದು.

ಪ್ರಭುದೇವರ ಮಹದರುವು ನೋಡುವುಡೆ ಪೃಥ್ವಿಯೊಳಗಿಲ್ಲ , ಆಕಾಶದೊಳಗಿಲ್ಲ, ಚತುರ್ದಶ, ಭುವನಾದಿ ಭುವನಂಗಳೊಳಗೆಯೂ ಇಲ್ಲ. ಹೊರಗೆಯೂ ಇಲ್ಲವೆಂದು ಹೇಳಿದುದು ನೋಡುವುಡೆ , ಇಲ್ಲಿ ತನು ತ್ರಯಾದಿಗಳಿಗೆ ಸಾಕ್ಷಿ. ಅವಸ್ಥಾದಿಗಳಿಗೆ ಸಾಕ್ಷಿ ಗುಣತ್ರಯಾದಿಗಳಿಗೆ ಸಾಕ್ಷಿಯೆಂದು ಕಲ್ಪಿಸಿ ಕಲ್ಪಿತನಿಗೆ ಸಾಕ್ಷಿಯಾದ ನೀನು ಅಸಂಗನು ಪ್ರತ್ಯಗಾತ್ಮನು ಪರಮಾತ್ಮನೆಂದು ಪುರುಷಜ್ಞಾನ ಮಾಡಿಕೊಡುವ ಸಾಹಸ ಸರಿಯಾದ ಜ್ಞಾನವಾದಂತಾಗಲಿಲ್ಲ.

ಅವಧೂತ ಗೀತೆ ಅಧ್ಯಾಯ 6 ಶ್ಲೋಕ 9. ''ಗಗನಂ ಪವನೋ ನಹಿ ಸತ್ಯ ಮಿತಿ ಧರಣೀ ದಹೋ ನಹಿ ಸತ್ಯಮಿತ ಯದಿಚ್ಛೈಕ ನಿರಂತರ ಸರ್ವಶಿವಂ ಜಲದಶ್ಚ ಕಥ ಸಲಿಲಂ ಚ ಕಥಮ್'' ಗಗನವೂ ಸತ್ಯ ಅಲ್ಲ, ವಾಯು ಸತ್ಯವಲ್ಲ, ಪೃಥ್ವಿಯು ಸತ್ಯವಲ್ಲ, ಅಗ್ನಿಯು ಸತ್ಯವಲ್ಲ ನಿರಂತರವಾದ ಸರ್ವಮಂಗಳ ತತ್ವವೊಂದೆ ಸತ್ಯವಾದರೆ ಮೋಡವೆಲ್ಲಿ ? ನೀರೆಲ್ಲಿ ?

ಅವಧೂತ ಗೀತಾ ಅಧ್ಯಾಯ 6 ಶ್ಲೋ-10. '' ಯದಿ ಕಲ್ಪಿತ ಲೋಕ ನಿರಾಕರಣ ಯದಿ ಕಲ್ಪಿತ ದೇವ ನಿರಾಕರಣಮ್'' ಅರ್ಥ ಕಲ್ಪಿತವಾದ ಲೋಕಗಳನ್ನು ನಿರಾಕರಿಸಿದ ಮೇಲೆ ಕಲ್ಪಿತವಾದ ದೇವತೆಗಳನ್ನು ನಿರಾಕರಿಸಿದ ಮೇಲೆ ನಿರಂತರವಾದ ಸರ್ವಮಂಗಳ ತತ್ವವೊಂದೆ ಸತ್ಯವಾದರೆ ಗುಣದೋಷ ವಿಚಾರವೆಲ್ಲಿ?

ಪ್ರಭುದೇವ ನಿರಂತರವಾದ ಸರ್ವಮಂಗಳಮಯ ತತ್ವ ತಾನಾಗಿಹ ಸ್ವಮಹಿಮ, ಅದಕ್ಕಾಗಿ ಆ ಮಹಾಂತನ ದಿವ್ಯದೃಷ್ಠಿಗೆ ದೇವಗಣ, ರುದ್ರಗಣ, ಪ್ರಮಥಗಣವೆಂಬ ಗಣ ಸಮೂಹವೆಂಬ ವಿಭಾಗದ ಕಲ್ಪನೆಯೂ ಇಲ್ಲ ಲೋಕ ಅಂದರೆ ಸ್ವರ್ಗ ಮರ್ತ್ಯ ಪಾತಾಳವೆಂಬ ಲೋಕವಿಭಾಗ ಕಲ್ಪನೆಯೂ ಇಲ್ಲ. ಇದಲ್ಲದೆ ಈ ಪಿಂಡಗತವಾಗಿಹ ಚತುರ್ದಶ ಭುವನಾದಿ ಭುವನಂಗಳು ಇಲ್ಲ. ಮಂಗಳಮಯ ಪರತತ್ವ ತಾನಾಗಿರುವ ಸ್ವಮಹಿಮನಾಗಿರುವ ತನ್ನ ಘನದಿರುವು ಪೃಥ್ವಿಯೊಳಗಿಲ್ಲ ಆಕಾಶದೊಳಗಿಲ್ಲ ಚತುರ್ದಶ ಭುವನಾದಿ ಭುವನದೊಳಗೆಯೂ ಇಲ್ಲ ಹೊರಗೆಯೂ ಇಲ್ಲವೆಂದು ಹೇಳಿಹರು. ಬಹುಧಾ ಶೃತಯಃ.

ಅ. ಗೀ. ಅ.6. ಶ್ಲೋ.1.ಬಹುಧಾ ಶ್ರುತಯಃ ಪ್ರವದಂತಿವಯಂ.
ದಿಯದಾದಿರಿಯಂ ಮೃಗ ತೋಯ ಸಮಮ್.
ಯದಿ ಚೈಕ ನಿರಂತರ ಸರ್ವಶಿವಂ.

ಉಪಮಮೇಯ ಮಥೊ ಹ್ಯುಪಮೊ ಚ ಕಥಮ್.

ಅರ್ಥ : ಆಕಾಶಾದಿ ಈ ಪ್ರಪಂಚವೆಲ್ಲವು ಒಂದು ಮರೀಚಿ ಜಲದಂತೆ ಎಂದು ಅನೇಕ ಶೃತಿಗಳು ಹೇಳುವವು . ನಿರಂತರವಾದ ಸರ್ವಮಂಗಳ ತತ್ವ ಒಂದೆ ಸತ್ಯವಾದರೆ , ಅಲ್ಲಿ ಉಪಮಾನ ಉಪಮೇಯಗಳು ಹೇಗೆ ಇರಬಲ್ಲವು ? ಪ್ರಭುದೇವ ತಾನಾರೆಂದು ತನ್ನ ಅರಿಯಲು ಮಾಡಿದ ಅನುವು ಮಹದನುವು , ಅರಿದರಿದು ನೋಡಿದವರ್ಗೆ, ಈ ಮಹಾಂತ ತನ್ನಂತೆ ಮಾಡಿದ ಮಹದರುವು . ಇದು ಅರುವಿಂಗರುವಾಗಿಹ ಮಹದನುವು . ಇದು ಗುರು ಶಿಷ್ಯರ ವಿಚಾರಕ್ಕೆ ನಿಲುಕದ ಮಹದರುವು. ಇಲ್ಲಿ ಉಪದೇಶ ನಿರರ್ಥಕವಾಗಿದೆ . ಅರಿದರಿದು ತನ್ನಿಂದ ತನ್ನ ನೋಡಿದಾಗ ತನ್ನ ಇರುವೆ ಯತಾರ್ಥವು ಎಂಬುದನ್ನು ಅನುವು ಮಾಡಿಕೊಟ್ಟುದು ಇದೆಂಥ ನಿರ್ವಚನ ಹೃದಯ ನಿರಾಲಂಬದರುವು.

ಓ ! ತಾವಾರೆಂದು ತಿಳಿಯುವ ಅರುಹೃದಯಂಗಳೆ , ನಿಮ್ಮ ಸ್ವರೂಪ ಪೃಥ್ವಿಯೊಳಗಿಲ್ಲದುದು, ಚತುರ್ದಶ ಭುವನಾದಿ ಭುವನಂಗಳೊಳಗೆಯೂ ಇಲ್ಲದುದು , ಹೊರಗೆಯೂ ಇಲ್ಲದುದು. ಏನಾಯಿತ್ತೆಂದರಿಯೆನಯ್ಯಾ ಗುಹೇಶ್ವರ. ಅಂದು ಇಲ್ಲ ಇಂದೂ ಇಲ್ಲವೆಂದು ಬಿತ್ತರಿಸಿದುದು ನೋಡುವುಡೆ ತಾನಾರೆಂದರಿಯಲು ಪ್ರಭುವಿನ ಮಹದರುವೆ, ಅರಿದರಿದು ನೋಡುವುಡೆ ತಾನು ನಾಶವುಳ್ಳವನೆಂದು ಕಲ್ಪಿಸಲಿಂಬಿಲ್ಲ. ನಾಶರಹಿತನೆಂದು ಕಲ್ಪಿಸಲು ಇಂಬಿಲ್ಲ ಜೀವನೆಂಬ ಭಾವನೆಗಿಂಬಿಲ್ಲ ಅಂತರಾತ್ಮನೆಂಬ ಭಾವನೆಗಿಂಬಿಲ್ಲ. ಪರಮಾತ್ಮನೆಂಬ ಭಾವನೆಗಿಂಬಿಲ್ಲ. ಸತ್ ಎನಲಿಲ್ಲಿ ಅಸತ್ ಎನಲಿಲ್ಲಿ ,ಚಿತ್ ಎನಲಿಲ್ಲಿ ಅಚಿತ್ ಎನಲಿಲ್ಲ ,ಆನಂದ ಎನಲಿಲ್ಲ ನಿರಾನಂದನೆನಲಿಲ,ನಿತ್ಯ ಎನಲಿಲ್ಲ ಅನಿತ್ಯ ಎನಲಿಲ್ಲ ,ಪೂರ್ಣನೆನಲಿಲ್ಲ ಅಪೂರ್ಣನೆನಲಿಲ್ಲ, ಕ್ಷರನೆನಲಿಲ್ಲ ಅಕ್ಷರನೆನಲಿಲ್ಲ ,ಅಕ್ಷರಾಕ್ಷರ ಮೀರಿದ ಘನದಿರುವಿನ ಅರುವೆ ತಾನಾಗಿಹ , ತನ್ನಿರವು ಏನಾಯಿತ್ತೆಂದರಿಯನಯ್ಯಾ . ಕೊನೆಗೆ ಗುಹೇಶ್ವರನೆನ್ನಲು ಇಂಬು ಕೊಡದಿರುವಲ್ಲಿ ಎಂದೆಂದು ಶಬ್ದ ಮೀಸಲು ಆಗಿರುವಲ್ಲಿ ಅಂದು ಇಲ್ಲ ಇಂದೂ ಇಲ್ಲ ಎಂದೂ ಇಲ್ಲ ಎಂದು ಹೇಳಿದುದು .

ಈ ಮಹದರುವ ಅರಿದರಿದು ನೋಡಿದವರಿಗೆ ತಾನೆಂಬುದು ಭಾಷೆಗೆ ನಿಲುಕದ್ದು ಊಹೆಗೂ ನಿಲುಕದ್ದು ಶೃತಿ ಸ್ಮೃತಿಗಳಿಗೂ ನಿಲುಕದಿರುವಾಗ ತನ್ನಿಂದ ತನ್ನ ಅರಿವುದು ತಾನು ಪೃಥ್ವಿಯೊಳಗಿಲ್ಲವೆಂದಲ್ಲಿ ಪೃಥ್ವಿ ಅದು ಕಠಿಣ ಘಟ್ಟಿ , ತಾನು ಕಠಿಣದೊಳಗಿಲ್ಲ ಭೂಮಿಯೊಳಗಿಲ್ಲ ಆಕಾಶದೊಳಗಿಲ್ಲ , ಆಕಾಶವದು ಬಯಲು ನಿರಾಕಾರ . ಸಾಕಾರ ನಿರಾಕಾವೆಂಬುದಕ್ಕೆ ನಿಲುಕದ ನಿರುಪಮ ತಾನು . ಇದು ಆಕಾಶದೊಳಗೆ ಹೇಗೆ ಇರುವುದು. ಚತುರ್ದಶ ಭುವನಾದಿ ಭುವನಂಗಳೊಳಗೆಯೂ ಇಲ್ಲ. ಪಿಂಡಾಂಡ ಬ್ರಹ್ಮಾಂಡವಾಗಿ ತೋರುವ ಹದಿನಾಲ್ಕು ಲೋಕದೊಳಗೆಯೂ ಇಲ್ಲ. ಇದಲ್ಲದೆ ಇದೆ ಪಿಂಡಾಂಡದಲ್ಲಿ ಸೊಂಟದಿಂದ ಕೆಳಕ್ಕೆ ಏಳು ಲೋಕಗಳು ಗರ್ಭಕೋಶದಿಂದ ಹಿಡಿದು ಮೇಲೆ ಏಳು ಲೋಕಂಗಳು . ಹೀಗೆ ಈ ಪಿಂಡವೆಂಬ ಹದಿನಾಲ್ಕು ಲೋಕದಲ್ಲಿಯೂ ಇಲ್ಲ ಏಕೆಂದರೆ ಇಲ್ಲಿ ಸ್ಥಾನಕ್ಕೆ ಬಹು ಪ್ರಧಾನವಿದೆ . ಇದು ಕಾರಣ ಹದಿನಾಲ್ಕು ಸ್ಥಾನಂಗಳ ತೋರಿಸಿಹರು . ಇವು ಸೀಮಿತವಾದವುಗಳು ಒಂದು ಸ್ಥಾನ ಇನ್ನೊಂದು ಆಗವು ತಾನು ಆವಾವ ಸ್ಥಾನದವನಾಗದವನು . ತಾನು ಏನೊಂದಾಗದ ಘನವಾಗಿರುವಲ್ಲಿ ತಾನು ಆವಾವ ಲೋಕಂಗಳು ಆಗದವನು. ತಾನು ಹೊರಗೂ ಇಲ್ಲ ಒಳಗೂ ಇಲ್ಲ ,ದೇವಗಣನಲ್ಲ ರುದ್ರಗಣನಲ್ಲ, ಪ್ರಮಥಗಣನಲ್ಲ , ವ್ಯಾಪಕನೂ ಅಲ್ಲ ವ್ಯಾಪ್ಯನು ಅಲ್ಲ , ಪ್ರತ್ಯಗಾತ್ಮನು ಅಲ್ಲ ಪರಮಾತ್ಮನೆಂಬುದು ಅಲ್ಲ ಏನಾಯಿತ್ತೆಂದರಿಯೆನಯ್ಯಾ , ನುಡಿಗೆಡೆಗೊಡದ ಘನವೆ ತಾನಾಗಿರುವಲ್ಲಿ ತನ್ನನ್ನು ಏನಾಯಿತ್ತೆಂದರಿಯೆನಯ್ಯಾ ಎಂದು ಹೇಳಿಹರು.

ಇಲ್ಲಿ ಉಪಮಾನ ಉಪಮೇಯ ನಡೆಯವು ಕಲ್ಪಿತ ಅಕಲ್ಪಿತ ಎಂಬ ಉಪಮಾನ ನಡೆಯವು ಪ್ರಕಾಶಿತ ಪ್ರಕಾಶಕ ಎಂಬ ಉಪಮಾನ ಉಪಮೇಯ ನಡೆಯವು. ದೃಶ್ಯ ದೃಕ್ ಎಂಬ ಉಪಮಾನ ಉಪಮೇಯ ನಡೆಯದಿರುವಾಗ ಅರಿಯುವದದೆಂತು ? ಅರಿಸಿಕೊಳ್ಳುವ ಅನಾತ್ಮ ಅರಿಯುವ ಆತ್ಮ ಇವೆರಡು ತನ್ನಿಂದ ಸಿದ್ಧವಾಗುವಲ್ಲಿ ,ತನಗಾವ ಉಪಮಾನ ಉಪಮೇಯ ? ಅರಿದರುಹಿಸಿಕೊಂಬುದಕ್ಕೂ ಮೀರಿದ ಘನವೆ ತನ್ನಿರುವು ಇರುವಲ್ಲಿ ತನಗೇನೆನ್ನಬೇಕು. ಭಾವಕ್ಕಿಂಬುಕೊಡದ ಘನವೆ ತನ್ನಿರುವೆಂಬರುವಾಗಿರುವಲ್ಲಿ ಜೀವನೆಂಬುದಾದರೂ ಹೇಗೆ? ಅಂತರಾತ್ಮನೆಂಬುದಾದರೂ ಹೇಗೆ? ಪರಮಾತ್ಮನೆಂಬುದಾದರೂ ಹೇಗೆ? ಶಬ್ದವೆ ಮೀಸಲವಾಗಿರುವಲ್ಲಿ ನಿರವಯ ನಿರಾಳ ನಿರಾಲಂಬ ಪರತತ್ವವ ಸ್ವಯಂಜ್ಯೋತಿ ಎನ್ನವುದಾದರೂ ಹೇಗೆ? ಇದು ಕಾರಣ ಗುಹೇಶ್ವರನೆಂಬುದು ಅಂದೂ ಇಲ್ಲ, ಇಂದೂ ಇಲ್ಲ, ಎಂದೂ ಇಲ್ಲವೆಂದು ಹೇಳಿಹರು.

83

ಹುಟ್ಟುವಾತ ನಾನಲ್ಲಯ್ಯ , ಹೊಂದುವಾತ ನಾನಲ್ಲಯ್ಯ
ಏನೆಂಬೆನಯ್ಯ ಅದೆಂತೆಂಬೆನಯ್ಯ ನಿಜವನರಿದ ಬಳಿಕ
ಮರಳಿ ಹುಟ್ಟಲುಂಟೆ? ಗುಹೇಶ್ವರಾ. || 622 ||

ತಾತ್ಪರ್ಯ : ಹುಟ್ಟುವಾತ ನಾನಲ್ಲಯ್ಯ ಹೊಂದುವಾತ ನಾನಲ್ಲಯ್ಯಾ : ಪ್ರಭು ನಿಜವರಿದ ನಿಜೈಕ್ಯ . ಅನುಪಮನ ಉಪಮಿಸುವದದೆಂತು? ಮಾನವ ಎಷ್ಟೋ ಪುರಾಣಗಳ ಕೇಳುತ್ತಾನೆ ಅಲ್ಲಿ ಪ್ರಭುದೇವನ ಸಿಂಹ ಗರ್ಜನೆ ಕೇಳಿರುವನೆ ? ಪುರಾಣಂಗಳ ಚರಿತ್ರ ನಾಯಕನಾದರೂ ಹುಟ್ಟುವಾತ ನಾನಲ್ಲಯ್ಯ ಹೊಂದುವಾತ ನಾನಲ್ಲಯ್ಯ ಎಂದು ಹೇಳಿರಬಹುದೆ! ಏನೆಂಬೆನಯ್ಯ ಅದೆಂತೆಂಬೆನಯ್ಯ ಎಂದು ಆರಾದರು ಹೇಳಿರುವರೆ ! ಹೇಳಿದಲ್ಲಿ ಪ್ರಭುವಿನ ಸಿಂಹನಾದವೆಂದು ತಿಳಿವುದು , ಅದು ಅಕಥನೀಯ ಸಂಜ್ಞೆ ಎಂದು ತಿಳಿಯುವುದು.

ನಿಜವರಿದ ಬಳಿಕ ಅಕಥನೀಯ ನಿಲವು ತನ್ನಿಂದ ತನಗೆ ಸಿದ್ಧವಾಗಬೇಕು. ಅದು ಪ್ರಭು ಬಿತ್ತರಿಸಿದುದು ಅರಿದರಿದು ನೋಡಿದ ಹಿರಿಮೆ ಪ್ರಭುವಿನದು. ಇದು ನಿಜವರಿತ ಹಿರಿಮೆ , ಇದು ನಿಜೈಕ್ಯದ ನಿಲುವು.

ಹುಟ್ಟುವಾತ ನಾನಲ್ಲಯ್ಯ ಹೊಂದುವಾತ ನಾನಲ್ಲಯ್ಯ : ಎಂದು ಬಿತ್ತರಿಸಿದುದು ನೋಡುವುಡೆ ಹುಟ್ಟುವಾತ ಆರು ಹೊಂದುವಾತ ಆರು ಹುಟ್ಟದಾತ ಆರು ಹೊಂದದಾತ ಆರು '' ತನುವಿಡಿದಿಹುದು ಪ್ರಕೃತಿ . ಪ್ರಕೃತಿ ವಿಡಿದಿಹುದು ಪ್ರಾಣ . ಪ್ರಾಣವಿಡಿದಿಹುದು ಜ್ಞಾನ . ಜ್ಞಾನವಿಡಿಹುದು ಗುರು . ಇಂತೀ ಗುರು, ಲಿಂಗ, ಜಂಗಮ, ಪ್ರಸಾದ ಸಗುಣವೆಂದು ಹಿಡಿದು , ನಿರ್ಗುಣವೆಂದು ಕಂಡ ಸಂದೇಹಿ ವ್ರತಗೇಡಿಗಳ ನೇನೆಂಬೆ ಅವರ ಮುಖವ ತೋರದಿರು ಕೂಡಲ ಸಂಗಮದೇವಾ ''.

ಆರು ತನುವಿಡಿದಿಹರು ಅವರು ಹುಟ್ಟುವವರು ಹೊಂದುವವರು . ಆರು ಪ್ರಕೃತಿವಿಡಿಹರು ಅವರು ಹುಟ್ಟುವವರು , ಗುಣಕರ್ಮದನುಸಾರ ಉತ್ತಮ ಲೋಕ ಮಧ್ಯಮ ಲೋಕ ಕನಿಷ್ಠ ಲೋಕವ ಹೊಂದುವರು . ಆರು ಪ್ರಾಣವಿಡಿದಿಹರು ಅವರು ಹುಟ್ಟುವವರು ಹೊಂದುವವರು. ಆರು ಮಾಯಿಕ ಜ್ಞಾನವಿಡಿದಿಹರು ಅವರು ಹುಟ್ಟುವವರು ಹೊಂದುವವರು , ಆರು ಗುರುವಿಡಿದಿಹರು ಅವರು ಹುಟ್ಟುವವರು ಹೊಂದುವವರು . ಆರು ಲಿಂಗ ಜಂಗಮ ಪ್ರಸಾದ ಸಗುಣವೆಂದು ಹಿಡಿದಿಹರು ಅವರು ಹುಟ್ಟುವವರು ಹೊಂದುವವರು . ಆರು ಸಾಪೇಕ್ಷೆ ಜ್ಞಾನಿಗಳು ಅವರು ಕಾಣಿಸುವುದೆಲ್ಲ ಸಗುಣವೆಂದು ಹಿಡಿದು , ಕಾಣದುದು ನಿರ್ಗುಣವೆಂದು ಕಂಡ ಸಂದೇಹಿಗಳು ವ್ರತಿಗೇಡಿಗಳು . ಅವರ ಮುಖವ ತೋರದಿರು. ಇವರು ಇಲ್ಲದ ಮಾಯೆಯ ಉಂಟು ಮಾಡಿಕೊಂಡವರು. ಇಲ್ಲದ ಮಾಯೆ

ಇಲ್ಲೆನಲರಿಯದವರು, ಇವರು ತಲ್ಲಣಿಸಿ ಬಾಯ ಬಿಡುವವರು, ಎಲ್ಲವ ತನ್ನ ಸ್ವರೂಪವೆಂದು ತಿಳಿದು ನೋಡದವರು , ಇವರು ಗುರು ಲಿಂಗ ಜಂಗಮ ಪ್ರಸಾದವ ಸಗುಣವೆಂದು ಹಿಡಿದು ನಿರ್ಗುಣವ ಕಂಡ ಸಂದೇಹಿಗಳು, ಇವರೆತ್ತ ತಮ್ಮ ನಿಜ ತಾವರಿತವರು.

ಪ್ರಭುದೇವ ಎಂಜಲ ಮಾತ ನುಡಿವ ರಂಜಕನಲ್ಲ. ಮಿಗೆ ಮಿಗೆ ಮೀಸಲಾಗಿಹ ತತ್ತ್ವವಲ್ಲ, ತತ್ತ್ವವೇತ್ನಾದುದರಿಂದ ಹುಟ್ಟುವಾತ ನಾನಲ್ಲಯ್ಯ ಹೊಂದುವಾತ ನಾನಲ್ಲಯ್ಯ ಎಂದು ಬಿತ್ತರಿಸಿದುದು ನೋಡುವುಡೆ ಶೃತಿ ಗಗೋಚರನಾಗಿಹ ಘನವಂತ , ಶೃತಿಗಳಿಗೊಳಪಡುವದೆಂತು . ಶೃತಿಗಳು ಹುಟ್ಟಿದವುಗಳು ಮಹಾವಾಕ್ಯಗಳು ಹುಟ್ಟಿದವುಗಳು ಅವು ಹುಟ್ಟಿದವುಗಳು ಅವು ನಷ್ಟವಾಗುವವು. ಆವುದು ಅನಂತವಾಗಿದೆ ಅದು ಹುಟ್ಟಿದುದೆಂದು? ಪ್ರಭುದೇವ ತನ್ನ ಸ್ವಂತ ಪ್ರಸಾದ ವಾಣಿಯಿಂದ ಹುಟ್ಟುವಾತ ನಾನಲ್ಲಯ್ಯ , ಹೊಂದುವಾತ ನಾನಲ್ಲಯ್ಯ , ಎಂದು ಬಿತ್ತರಿಸಿರುವಲ್ಲಿ ಅಖಂಡಿತ ಘನ ಪೂರ್ಣವಪ್ಪ , ತನ್ನಿರುವೆ ಆರುವೆಂದರಿದ ನಿಜಲಿಂಗೈಕ್ಯ . ಕಾಯ ನಾನೆನ್ನುವ ಕರ್ಮ ಕಾಂಡಿಯಾದಾತನಲ್ಲ. ಈಶಾರ್ಪಣ ಮಾಡುವ ಭಕ್ತ ಕಾಂಡಿಯೂ ಅಲ್ಲ. ಸಕಲ ಕರ್ಮಗಳಿಗೆ ಸಾಕ್ಷಿ ನಾನೆನ್ನುವ ಜ್ಞಾನ ಕಾಂಡಿಯು ಅಲ್ಲ . ಕಾಂಡ ತ್ರಯಂಗಳ ಕಾಣದ ಅಖಂಡ ಶೃತಿ ಗಗೋಚರ ನಾದುದರಿಂದ ಏನೆಂಬೆನಯ್ಯ ಅಂದೆಂತೆಂಬೆನಯ್ಯ ಎಂದು ಬಿತ್ತರಿಸಿದುದು ಯತಾರ್ಥವು , ನಿಜವರಿದವರಿಗೆ ನಿಜವೆಂಬುದು ದೋಷವಾಗಿ, ಶಬ್ದಮುಗ್ಧರಾದವರ ಉಪಮಿಸುವದದೆಂತು! ಇದು ಕಾರಣ ಆರನ್ನಾದರೂ ಉಪಮಿಸಬಹುದು , ಲಿಂಗ ಸಕೀಲ ಸಂಯೋಗ ವರ್ಮಸ್ಥಲವರಿತವರು ಅನುಪಮರು.

ಸ್ಥೂಲವ ಬ್ರಹ್ಮ ನಳವಡಿಸಿಕೊಂಡ, ಸೂಕ್ಷ್ಮವ ವಿಷ್ಣುವ ಅಳವಡಿಸಿಕೊಂಡ , ಕಾರಣವ ರುದ್ರನಳವಡಿಸಿಕೊಂಡ , ನಿಃಕಾಯವ ಈಶ್ವರ ನಳವಡಿಸಿಕೊಂಡ ನಿರಂಜನವ ಸದಾಶಿವ ನಳವಡಿಸಿಕೊಂಡ ನಿರವಯ ವ್ಯೋಮಾತೀತ ನಳವಡಿಸಿಕೊಂಡ . ಈ ಷಡ್‌ಸ್ಥಲದವರೆಲ್ಲ ಬಯಲನಳವಡಿಸಿಕೊಂಡು ಶೃತಿ ಗೊಳಪಟ್ಟುದೆಂದು ಸಿದ್ಧವಾಯಿತ್ತು . ಪ್ರಭು ಅಳವಡಿಸಿಕೊಂಡದು ಶೃತಿ ಸೋತಿತ್ತು ಸಾಹಿತ್ಯ ನಿಂತಿತ್ತು ಶಬ್ದ ಸಂಭ್ರಮಕ್ಕೆ ನಿಲುಕದಂತಾಯಿತ್ತು ಇದೆಂತುಪಮಿಸುವುದು ?

ಹುಟ್ಟುವಾತ ನಾನಲ್ಲಯ್ಯ ಹೊಂದುವಾತ ನಾನಲ್ಲಯ್ಯ ಎಂಬ ಪ್ರಸಾದ ವಾಣಿ ಅಲ್ಲಯ್ಯನ ಮಹದರುವ ಪುರುಷಾರ್ಥ ಜ್ಞಾನಿಯು ಒಪ್ಪಿ , ನಾನು ಅಜಾತನು ಸಾಕ್ಷಿಯು ಅಸಂಗನು ಪ್ರತ್ಯಗಾತ್ಮನು ನಾನಾಗಿರುವುದರಿಂದ ಹುಟ್ಟುವಾತ ನಾನಲ್ಲವೆಂದು ಒಪ್ಪುತ್ತಾನೆ . ನಾನು ಸ್ವಯಂಪ್ರಕಾಶ ಸಚ್ಚಿದಾನಂದನು ನಿತ್ಯನು ಪೂರ್ಣನಿದ್ದುದರಿಂದ ಅಮರನು ಅವಿನಾಶಿಯಾದುದರಿಂದ ಹೊಂದುವಾತ ನಾನಲ್ಲವೆಂದು ಹೇಳುವವರು . ಇವರು ಸತ್ಯರು ನಿತ್ಯರು ಮುಕ್ತರು ಎಂದು ಒಪ್ಪಿಕೊಳ್ಳುವರು . ಇವರು ಚಿದಹಮ್ಮುಳ್ಳವರು . ಇವರು ಏನೆಂಬೆನಯ್ಯ ಅದೆಂತೆಂಬೆನಯ್ಯ ಎಂಬ ಸಂಜ್ಞೆಯ ತಿಳಿದಂತೆ ಕಾಣುವುದಿಲ್ಲ ಇವರು ಆತ್ಮನ ಲಕ್ಷಣಾತ್ಮಕ ಹಂಗಿಗರು . ತನ್ನ ನಿಜಪದವಾಗಿಹ ಅಚಿಂತ್ಯತ್ವ ತಿಳಿದವರಲ್ಲ, ತನ್ನದು ಚಿಂತನೆಗೆಡೆಗೊಡದ ಪದ . ಇದುವೆ ತನ್ನಯ ಇರುವಾಗಿರುವಲ್ಲಿ ಅದನ್ನು ಉಪಮಿಸಬಹುದೆ? ಉಪಮೆಗೊಳಪಟ್ಟವರು ನಿಜವರಿಯದವರು. ಇವರು ಚಿದಹಮ್ಮಿನ ಭಾಂಡದಲ್ಲಿ ಅಡಗಿಹರು . ಶಬ್ದ ಸಂಭ್ರಮದ ಮದವಳಿಯದವರು , ತನ್ನ ಇದಿರಲ್ಲಿ ಪ್ರತಿ ಉಳ್ಳವರು . ಇನ್ನು ಶಬ್ದ ಸಂದಳಿಯದವರು ಇವರು ನಿಜವರಿತವರು ಹೇಗಾಗುತ್ತಾರೆ. ಏನೆಂಬೆನಯ್ಯ ಅದೆಂತೆಂಬೆನಯ್ಯ ಎಂಬುದು ನಿಜವರಿತು , ನಿಜವೆ ತಾನಾಗಿ ನಿಂತ ನಿಬ್ಬೆರಗು . ಇದು ಪ್ರಭುವಿನ ಸಿಂಹಗರ್ಜನೆ . ಅಲ್ಲಿ ಅದಾವ ಪ್ರಾಣಂಗಳ ಶಬ್ದ ಸಂದ ಣಿ ಇರಬಹುದೆ ? ಇರಲರಿಯದು , ಹಾಗೆ

ನಿಜವರಿತ ಮಹಾಂತಂಗೆ ಪಿಂಡಾಂಡ ಕಂಡುದಿಲ್ಲ ,ಬ್ರಹ್ಮಾಂಡ ಕಂಡುದಿಲ್ಲ, ಚಿದ್ ಬ್ರಹ್ಮಾಂಡವ ಕಂಡುದಿಲ್ಲ ತನ್ನ ಕಂಡುದರಿಂದ ಇವುಗಳ ಭಾವವಿಲ್ಲ ಬಯಕೆಯು ಇಲ್ಲ. ಬಯಕೆಯುಳ್ಳವಂಗೆ ಪಿಂಡಾಂಡ ಬ್ರಹ್ಮಾಂಡಗಳ ಭಾವವಿದ್ದುದೆ ? ಸತ್ಯರು ನಿತ್ಯರು ಮುಕ್ತರೆಂಬ ಚಿದಹಮ್ಮಿನ ಭಾವವಿದ್ದುದೆ? ಇದು ಕಾರಣ ಭಾವ ವಳಿಯದೆ ಬಯಕೆ ಸವೆಯದೆ ಐಕ್ಯವು ಆವ ಘನವೆಂದಡಹುದೆ ಎಂದು ಎಚ್ಚರಿಸಿದ ಸಿಂಹನಾಗಿ ಗುಡಿಹಿದ.

ನರರು ,ಸುರರು ,ಭಾವಿಕರು ,ಬಯಕೆ ವುಳ್ಳವರು .ರುದ್ರಗಣ ,ದೇವಗಣ ,ಪ್ರಮಥಗಣ ಬ್ರಹ್ಮಾಂಡವ ಬಯಕೆವುಳ್ಳವರು . ಸತ್ಯರು ,ನಿತ್ಯರು , ಮುಕ್ತರು ಎಂಬ ಮಹಾಮಹಿಮರು .ಇವರು ಚಿದ್‌ಹಮ್ಮಿನ ಭಾವಿಕರು , ಚಿದಾನಂದೈಕರಸದ ಬಯಕೆಯುಳ್ಳವರು .ಇವರಿಗೆಂತು ಐಕ್ಯಘನವು ಗೊತ್ತಾಗುವುದು? ಇವರೆಲ್ಲರು ಎಂಜಲ ನುಡಿವ ರಂಜಕರು , ಮಿಗೆ ಮಿಗೆ ಮೀಸಲಾಗಿಹ ತತ್ವ ಅರಿಯದವರು ಲಿಂಗ ಸಕೀಲ ಸಂಯೋಗ ವರ್ಮವರಿಯದ್ದರಿಂದ ಭಾವನಷ್ಟವಾಗಲಿಲ್ಲ, ಬಯಕೆಯು ನಷ್ಟವಾಗಲಿಲ್ಲ ಎಂತೆಂಬೆನಯ್ಯ ಅದೆಂತೆಂಬೆನಯ್ಯ ಎಂಬ ಐಕ್ಯದ ಸುಳಿವು ಅರಿಯದಂತಾಯಿತ್ತು .

ನಿಜವರಿದ ಬಳಿಕ ಮರಳಿ ಹುಟ್ಟಲುಂಟೆ ಗುಹೇಶ್ವರಾ : ಎಂದು ಪ್ರಭು ಹೇಳಿದುದು ಬಹು ಗಹನಾರ್ಥವಾಗಿದೆ . ಇದು ನಿಜವರಿದವರಿಗೆ ಸಹಜ ವೇದ್ಯವಾಗುವುದು . ಮರಳಿ ಹುಟ್ಟಬೇಕಾದರೆ ಆರು ನಿಜವರಿತಿರುವುದಿಲ್ಲ ಅವರ ತಪ್ಪು ತಿಳುವಳಿಕೆಯೆ ಮರಳಿ ಹುಟ್ಟುವಂತೆ ಮಾಡಿದೆ . ಭಾವರೂಪ ಭ್ರಮೆ ನಷ್ಟವಾಗುವವರೆಗೂ ಒಂದಿಲ್ಲೊಂದು ಬಯಕೆಗಳು ಸುಳಿದಾಡುತ್ತಿರುತ್ತವೆ . ನರರೆ ಇರಲಿ ಸುರರೆ ಇರಲಿ, ದೇವಗಣ ಇರಲಿ ರುದ್ರಗಣ ಇರಲಿ ಪ್ರಮಥಗಣ ಇರಲಿ ಸತ್ಯರು ನಿತ್ಯರು ಮುಕ್ತರೆಂಬ ಮಹಾಮಹಿಮರೆ ಇರಲಿ , ಇವರು ಕಲ್ಪಿತರು . ಅಕಲ್ಪಿತ ಘನವ ಅವರೇನು ಬಲ್ಲರು ? ಅಕಲ್ಪಿತ ಘನವೆಂದು ನುಡಿದ ಮಾತ್ರಕ್ಕೆ ನಿಜವರಿತ ಲಕ್ಷಣವಲ್ಲ.

ನಿಜವರಿತವನೊಬ್ಬನೆ ಹುಟ್ಟುವಾತ ನಾನಲ್ಲಯ್ಯ ಎಂದು ಹೇಳಿದುದಲ್ಲದೆ , ಹೊಂದುವಾತ ನಾನಲ್ಲಯ್ಯವೆಂದು ಹೇಳಿದನಲ್ಲದೆ, ಏನೆಂಬೆನಯ್ಯ ಅದೆಂತೆಂಬೆನಯ್ಯ ಎಂದು ಹೇಳಿದುದು . ಏಕೆಂದರೆ ಅತ್ಯುತ್ಕಟ ಪರಬ್ರಹ್ಮವನೆ ನುಡಿವರು ಸಹಜ ಪಿನಾಕಿ ಬಲೆಯಲ್ಲಿ ಸಿಲುಕಿದ ಭವ ಹರಿಯಲರಿಯರು ಎಂದು ಬಿತ್ತರಿಸಿದುದು . ಶಾಸ್ತ್ರ ವಾಸನೆಯಲ್ಲಿ ಸಿಲುಕಬಾರದೆಂಬುದು ಅವರದು ಕರುಣೆಯ ಕಳವಳ ಶಬ್ದ ಸಂಭ್ರಮವೆಂಬುದು ಸಹಜ ಪಿನಾಕಿಯ ಬಲೆ . ಅದು , ಈ ಬಲೆಯಲ್ಲಿ ಸಿಲುಕಿದವರು ನಿರಾಲಂಬದಲ್ಲಿ ನಿಜಲಿಂಗ ನಾನೆನ್ನುವವರು ಇವರು ಭವವ ಹರಿಯರು ಎಂದು ಹೇಳಿದ್ದಾರೆ.

ನಿಜವರಿತವರೆಂದರೆ ನಿಜವೆನ್ನದವರು . ಶಬ್ದವೆ ಮೀಸಲವಾಗಿಹ ನಿಜೈಕ್ಯರು . ಉಪಮಿಸಲು ಬಾರದ ಘನವರಿತವರು . ತನ್ನ ತಾನರಿತವರು , ತಾನು ಹೀಗೆಯೆ ಎಂದು , ತನ್ನನ್ನು ವೇದಂಗಳು ವೇಧಿಸಲಿಲ್ಲ . ಶಾಸ್ತ್ರ ಸಾಧಿಸಿ ತೋರಿಸಲಿಲ್ಲ. ಪುರಾಣ ಪೂರೈಸದಿರುವುದರಿಂದ, ಇವೆಲ್ಲವುಗಳು ಹೆತ್ತರಿವು . ಇವೆಲ್ಲವುಕ್ಕಿಂತ ತಾನು ಪೂರ್ವಿಕನೆನ್ನಲು ಬಾರದ ಅಪೂರ್ವಿಕ . ತನ್ನನ್ನು ತನ್ನಿಂದ ತಾನರಿಯಬೇಕಲ್ಲದೆ ಹೆತ್ತರುವಿನಿಂದ ಅಸಾಧ್ಯವು.

ತನ್ನನ್ನು ಅರುವಿನಿಂದ ಅರಿದಿಹೆನೆಂದಡೆ , ಅರುವು ಮರೆಹಿಂಗೊಳಗಾಯಿತ್ತಾಗಿ , ಆ ಅರಿವಿನಿಂದ ಅರಿದಿಹೆನೆಂಬ ಅಜ್ಞಾನಿಯ ಮಾತ ಕೇಳಲಾಗದು ಕೂಡಲಚೆನ್ನಸಂಗಾ ನಿಮ್ಮ ಶರಣ ಸದ್‌ಜ್ಞಾನ ಭರಿತ.

ಶರಣ ಅರಿದರುಹಿಸಿಕೊಂಬ ಜ್ಞಾನದಿಂದ ತನ್ನ ತಾ ಅರಿತವನಲ್ಲ. ಅವರು

ಅರಿಯದರುವುಳ್ಳವರು . ಅಲ್ಲಿ ಅರಿಸಿಕೊಳ್ಳುವುದಿಲ್ಲ ,ಅರಿಯುವುದಿಲ್ಲ ,ದೃಶ್ಯವೆಂಬುದಿಲ್ಲ ,ದೃಕ್ ಎಂಬುದಿಲ್ಲ. ನಿರಂತರವಾಗಿರುವ ಮಂಗಳಮಯ ತತ್ವ ಒಂದೆ ಸತ್ಯ . ಅದನ್ನು ಅರಿದರಿದು ನೋಡಿದುದರಿಂದ ಏನೆಂಬೆನಯ್ಯ ಅದೆಂತೆಂಬೆನಯ್ಯ ಎಂದು ಹೇಳಿ ನಿಜವರಿದ ಬಳಿಕ ಮರಳಿ ಹುಟ್ಟಲುಂಟೆ ಗುಹೇಶ್ವರ ಎಂದು ಪ್ರಭುದೇವ ತನ್ನ ಮಹದರುವಿನಿಂದ ಗರ್ಜಿಸಿದುದು ಸಿಂಹನಾದ . ಇದು ತನ್ನಿಂದ ತನ್ನ ಅರಿತ ಏನೆಂದನಲಿಲ್ಲದ ಅರುವು. ನಿಜವರಿತುದು ತನ್ನಿಂದ ತನಗದು ವಿದಿತವು.

84

ಹೊಸ ಮುತ್ತಿನ ಸುಪ್ಪಾಣಿಯಂತೆ ಲಿಂಗೈಕ್ಯವು
ಸ್ಫಟಿಕದ ಘಟದೊಳಗಣ ಪ್ರಭೆಯಂತೆ ಲಿಂಗೈಕ್ಯವು
ವಾಯುವಿನ ಸಂಚದ ಪರಿಮಳದ ನಿಲುವಿನಂತೆ
ಲಿಂಗೈಕ್ಯ ಸಂಬಂಧವದು ಗುಹೇಶ್ವರಾ . || 624 ||

ತಾತ್ಪರ್ಯ : ಹೊಸ ಮುತ್ತಿನ ಸುಪ್ಪಾಣಿಯಂತೆ ಲಿಂಗೈಕ್ಯವು : ಪ್ರಭು ಲಿಂಗೈಕ್ಯದಿರುವು ದೃಷ್ಟಾಂತದೊಂದಿಗೆ , ತನ್ನಿರುವು ಹೊರ ಪಡಿಸುತ್ತಿದ್ದಾನೆ. ಲಿಂಗೈಕ್ಯದಿರುವು ಹೊಸ ಮುತ್ತಿನ ಸುಪ್ಪಾಣಿಯಂತೆ ಎಂದು ಸಂಜ್ಞೆಯ ಸೂಚಿಸಿದುದ ನೋಡುವುಡೆ ಇದೆಂಥ ಶಬ್ದಮುಗ್ಧ ಸಂಕೇತ. ಇದು ತಾನೆ ತಾನಾಗಿ ಬೆಳಗುವ ಬೆಳಗುಳ್ಳ ಹೊಳಪು ; ಮುತ್ತಿನ ಸುಪ್ಪಾಣಿ ನೋಡಲಿಲ್ಲ. ನೋಡಿದುದು ಹೇಳಿಯೆ ಇಲ್ಲ ಹೇಳಿದುದು ನೋಡಿಯೆ ಇಲ್ಲ. ಮುತ್ತಿನ ಸುಪ್ಪಾಣಿಯು ತಾನು ಬಹು ಬೆಲೆಯುಳ್ಳ ಶುಭ್ರವಾದ ಮುತ್ತು ಎನಲಿಲ್ಲ.

ಹೊಸ ಮುತ್ತಿನ ಸುಪ್ಪಾಣಿಯು ಮೌನ ಮುದ್ರಿತವು , ಅದನ್ನು ನೋಡಿದ ಕಣ್ಣು ಮೌನ ಮುದ್ರಿತವು, ಆಶ್ಚರ್ಯ ! ವಾಣಿಯೆಂಬ ಕರುಣಾರಸವು ಹೊಸ ಮುತ್ತಿನ ಸುಪ್ಪಾಣಿಯಂತೆ ಲಿಂಗ್ಯಕ್ಯವು ಎಂಬ ಸಂಜ್ಞೆ ಸೂಚಿಸದಿದ್ದರೆ ಕಣ್ಣಾದರೂ ನೋಡುವುದದೆಂತು .

ಈ ಮೌನ ಮುದ್ರಿತವಾಗಿಹ ಸಂಜ್ಞೆಯ ಅರಿವುಡೆ ವರ್ಣಿಸಿದರದಕ್ಕದೆ ಕೊರತೆ , ಏಕೆಂದರೆ ಅದು ಕೇವಲ ಬೆಳಗುಳ್ಳ ಬೆಳಗು . ಇಲ್ಲಿ ಬೆಳಗಿಸಿಕೊಳ್ಳುವುದಿಲ್ಲ ಬೆಳಗುವುದಿಲ್ಲ , ತಾನೆ ತಾನಾಗಿರುವ ಬೆಳಗುಳ್ಳ ಬೆಳಗು . ಇದು ಅವರ್ಣೀಯವು . ಅರಸುವವರಿಗೆ ನಿಶ್ಚಯವಾಗದು . ಅರಸದವರಿಗೆ ನಿಶ್ಚಯವು ,ವಾಣಿ ಹುಡುಕಿತು ಅದಕ್ಕೆ ನಿಶ್ಚಯವಾಗಲಿಲ್ಲ . ಕಣ್ಣು ಹುಡುಕಲಿಲ್ಲ ಅದಕ್ಕೆ ನಿಶ್ಚಯವಾಗಿರುವದು .

ಹೊಸ ಮುತ್ತಿನ ಸುಪ್ಪಾಣಿ ಆವುದು? ಇದು ಅರುಹೃದಯ ಅರಿಯದರುವೆ ಪ್ರಜ್ವಲಿಸುವ ಹೃದಯ .ಇದು ಏನೆಂದೆನಲಿಲ್ಲದ ಅರುವು .ಇದು ಹೃದಯವೆನಲಿಲ್ಲ, ಅರಿಯದರುವು ಎನಲಿಲ್ಲ. ಅರುವು ಅರುವು ಎಂದು ಅರಸದ ಹೃದಯ . ಅರಿಯದರುವು ತಾನಾಗಿರುವಾಗ ಅದಕ್ಕೆ ಅರಸುವ ಹಂಬಲವಿಲ್ಲ , ಬಯಸುವ ಬಯಕೆಯು ಇಲ್ಲ . ಇದ್ದಂತಿರುವ ಹೊಸ ಮುತ್ತಿನ ಮುತ್ತನು ಸುಪ್ಪಾಣಿ ಇದನ್ನು ವರ್ಣಿಸುವರೆ ಅಗಮ್ಯವು ನೋಡಾ . ಇಲ್ಲಿ ಭಾವಕ್ಕಿಂಬಿಲ್ಲ ಶಬ್ದ ಮೀಸಲು ನೋಡಾ . ಹೊಸ ಮುತ್ತಿಗೆ ನಾನು ಹೊಸ ಮುತ್ತು ಎನ್ನುವುದಿಲ್ಲ . ಅದು ಮುತ್ತು ಎಂದು ಹುಡುಕಲಿಲ್ಲ ಏಕೆಂದರೆ ತಾನೆ ಮುತ್ತಾಗಿಹುದು , ಹಾಗೆ ಅರುಹೃದಯ ಅರಿಯದರುವಾಗಿ ಪ್ರಜ್ವಲಿಸುವಲ್ಲಿ ಅಲ್ಲಿ ಭಾವಕ್ಕಿಂಬಿಲ್ಲ ಏನೆಂದನಲಿಲ್ಲದ ಘನಕ್ಕೆ ಘನ ವಾಗಿರುವುದರಿಂದ ಶಬ್ದ ಮೀಸಲು ನೋಡಾ ಅದನ್ನು ಅರಿಯ ಬಂದ ಹೃದಯ ಅದು ಅರುಹೃದಯವಾದುದರಿಂದ , ಅರಿದರಿದು ನೋಡಿದ ಸಮ್ಯಜ್ಞಾನ ಅದು

ಅರಿಯದರುವೆ. ಪ್ರಭುವಿನ ಹೊಸ ಮುತ್ತಿನ ಸುಪ್ಪಾಣಿಯು ಮೌನ. ಅರಿಯ ಬಂದ ಕಣ್ಣು ಮೌನ ಅರಿವು ಮೌನ ಮೌನವೆಂದರೆ, ಮಾತಾಡದಿರುವುದೆ ಮೌನವಲ್ಲ, ತನ್ನಿರುವು ಮೌನ ಅದು ಅವರ್ಣನೀಯವಾದುದರಿಂದ ವಾಣಿಯು ಮೌನ, ಮನ ಮೌನ, ಕಲ್ಪಿತನು ಮೌನ ಅರಿದರಿದುದರಿಂದ ಅರಿಯದರುವು ಆಗಿಹುದೆ ಮೌನ. ಇದು ಲಿಂಗೈಕ್ಯವೆಂದು ಪ್ರಭು ಹೇಳಿದುದು.

ಸ್ಫಟಿಕದ ಘಟದೊಳಗಿನ ಪ್ರಭೆಯಂತೆ ಲಿಂಗೈಕ್ಯವು : ಲಿಂಗೈಕ್ಯವೆಂಬುದು ಸ್ಪಟಿಕದ ಘಟದೊಳಗಿನ ಪ್ರಭೆಯು, ಇದೆಂಥ ಘಟ, ಸ್ಪಟಿಕದ ಘಟ. ಇದೆಂಥ ಪ್ರಭೆ, ಸ್ಪಟಿಕದ ಘಟದೊಳಗಿನ ಪ್ರಭೆ. ಸ್ಪಟಿಕದ ಮಣಿ ನೋಡಿದ್ದೀರಾ ? ಸ್ಫಟಿಕ ಬೇರೆ! ಮಣಿ ಬೇರೆ! ಸ್ಫಟಿಕ ಎಂದರೆ ಮಣಿ. ಮಣಿ ಎಂದರೆ ಸ್ಫಟಿಕ ಅಲ್ಲವೆ? ಸ್ಫಟಿಕ ಪ್ರಭೆಯಲ್ಲಿ ಮಣಿ ನೋಡಿದ್ದೀರಾ? ನೋಡಿದುದು ಆವುದು? ಕಣ್ಣು. ಈ ಕಣ್ಣು ಎಂದಾದರೂ ಕಥನ ಮಾಡಿರಬಹುದೆ ? ಸ್ಫಟಿಕದ ಮಣಿ ಎಂದಾದರೂ ಮಾತಾಡಿರುವುದೆ? ಸ್ಫಟಿಕದ ಮಣಿಯು ಮೌನ , ಆ ಮಣಿಯಲ್ಲಿಹ ಪ್ರಭೆಯು ಮೌನ, ಅದನ್ನು ಅರಿಯ ಬಂದ ಕಣ್ಣು ಮೌನ, ಮೌನ ಮುದ್ರಿತ ಚಿನ್ಹವೆ ಲಿಂಗೈಕ್ಯ ಚಿನ್ಹ. ಸ್ಪಟಿಕದ ಘಟದೊಳಗಿನ ಪ್ರಭೆಯಂತೆ ಲಿಂಗೈಕ್ಯವು ಎಂಬ ಸಂಜ್ಞೆಯ ಬಿತ್ತರಿಸಿದುದು ನೋಡುವುಡೆ, ಸ್ಫಟಿಕ ಘಟವೆಲ್ಲಿ ಅದೆ ಅಲ್ಲಿಯೆ ಪ್ರಭೆಯು ಇದೆ. ಸ್ಫಟಿಕದ ಘಟ ಬಿಟ್ಟು ಪ್ರಭೆ ಇಲ್ಲ. ಪ್ರಭೆ ಬಿಟ್ಟು ಸ್ಪಟಿಕದ ಘಟ ಇಲ್ಲವೆಂಬ ಸಂಜ್ಞೆ ಕಣ್ಣಿನಿಂದ ಅರಿಯುವ ಸಂಜ್ಞೆ. ಈ ಸಂಜ್ಞೆ ಅರಿಯುವುದು ಬಿಟ್ಟು ವಾಣಿಯಿಂದ ಕಥನ ಮಾಡಿದುದು ಸ್ವಾನುಭವವಾಗದು.

ಲಿಂಗೈಕ್ಯದ ಘನದಿರುವಿನ ಅರುವಳ್ಳವನಾಗಬೇಕಾದಲ್ಲಿ ಸದ್ಗುರು ಕರುಣಿಸಿದ ಅನುಪಮ ಲಿಂಗ ವೇದ ವೇದಾಂತಗಳಿಗೆ ಅಸಾಧ್ಯವಾಗಿಹ ಅನುಪಮ ಅರಿವು (ಜ್ಞಾನವ)ಅರಿದರಿದು ನೋಡುವುಡೆ ತಾನು ಸ್ಪಟಿಕದ ಘಟದೊಳಗಿನ ಪ್ರಭೆಯಂತೆ. ಎಂಬುದು ತನ್ನಿಂದ ತನಗೆ ವಿದಿತವಾಗುವುದು.

ಅನುಪಮ ಜ್ಞಾನ, ಇದು ಅನುಸಂದಾನಕ್ಕೆ ನಿಲುಕದ ಜ್ಞಾನ. ಗ್ರಂಥಗಳ ಪುಟಗಳಲ್ಲಿ ಸಿಗದ ಜ್ಞಾನ. ಅರಿದರುಹಿಸಿ ಕೊಂಬುದಕ್ಕೂ ಮಿಕ್ಕಿ ಮೀರಿ ನಿಂತ ನಿಜವು. ಇದು ಅರಿಯ ಹೋಗುವುಡೆ ಇದು ಸ್ಫಟಿಕದ ಘಟದಂತೆ ಪ್ರಜ್ವಲಿಸುವುದು. ಇದು ಅಚಲಿತ ಅರಿವು, ಅಖಂಡಿತ ಅರಿವು ಇದು ಸೀಮಿತ ಜ್ಞಾನಕ್ಕಿಂಬುಕೊಡದ ಅರಿವು. ತ್ರಿಕಾಂಡಗಳ ಸೀಮಿತವು ಪ್ರಕಾಶಿತ ಪ್ರಕಾಶಕ ಎಂಬ ಸೀಮಿತ ಜ್ಞಾನಕ್ಕಿಂಬುಕೊಡದ ಅರಿವು. ನೆನಹು ನಿರ್ಣಯಕ್ಕೆ ನಿಲುಕದ ಅರಿವು. ಆವಾವ ಶಬ್ದಸಂಭ್ರಮಕ್ಕೆ ನಿಲುಕದ ಅರಿವು. ಇದು ಮುನ್ನ ಮುನ್ನವೆ ನ್ಯಸ್ತವಾಗಿಹ ಜ್ಞಾನ ನಿಧಿ. ತನ್ನಿಂದ ತಾನಾಗಿಹ ಅಗಮ್ಯ ನಿಧಿ. ವಿವರಿಸುವುಡೆ ಶೃತಿಗಳಿಗಗೋಚರವಾಗಿಹ ಘನದಿರುವಿನ ಅರುವು. ಇದು ಕಾರಣ ಸ್ಫಟಿಕದ ಘಟದೊಳಗಿನ ಪ್ರಭೆಯಂತೆ, ಒಳಹೊರಗೆನ್ನದೆ ಪ್ರಜ್ವಲಿಸುವ ಪ್ರಭೆ. ಇದನ್ನು ಅರಿಯ ಹೋದ ಅರಿವು ಅರಿಯದರುವು. ತನ್ನಿರುವು ತಾನೆ ತಾನಾಗಿಹ ಸ್ವಮಹಿಮವು. ಅದು ನುಡಿಗೆಡೆಗೊಡದ ಘನವು , ಅದನ್ನು ಅರಿಯಲು ಬಂದ ಅರಿವು ಅದು ಶಬ್ದಮುಗ್ಧವು. ಇದು ಹೇಳಬಾರದ ಘನವು ತೋರಬಾರದ ಘನವು ಹೇಳಲೆಂದೇನೊ? ಹೇಳಬಾರದ ಘನವು ತೋರಲೆಂದೇನೊ? ಇದು ಕಲ್ಪಿತವಲ್ಲದ ಘನವು ಹೇಳಲೆಂತೊ ತೋರಲೆಂತೊ? ಎಂಬ ಶಬ್ದಮುಗ್ಧ ಸಂಜ್ಞೆ ಬಿತ್ತರಿಸಿಹರು ಇದನ್ನು ತಿಳಿಯಲು ಘಟದೊಳಗಿನ ಪ್ರಬೆಯಂತೆ ಎಂಬ ದೃಷ್ಟಾಂತವ ಕರುಣಿಸಿದ ಕರುಣೆಯ ಅದನೆಂತು ಸ್ತುತಿಸುವುದು.

ಸ್ಪಟಿಕದ ಘಟವು ಮೌನ. ಅದರೊಳಗೆ ಪ್ರಜ್ವಲಿಸುವ ಪ್ರಭೆಯು ಮೌನ. ಅದನ್ನು ಕಂಡ ಕಣ್ಣು ಮೌನ. ಇದು ಮೌನವಾಗಿ ಮಹಾಬೋಧವೆ ಮಂಡಿಸಿದುದು ಅರಿದರಿದು ನೋಡುವುಡೆ, ಇದು ವೇದ ವೇದಾಂತಗಳಿಗೆ ಅಸಾಧ್ಯವಾಗಿಹ, ಮಿಕ್ಕಿ ಮೀರಿನಿಂತ ನಿಜದಿರುವಿನ ನಿರ್ವಾಣ. ನಿಶ್ಯಬ್ದ ಬ್ರಹ್ಮ. ಇದನ್ನು ನುಡಿಗೊಳಪಡಿಸಿ ಕಾಣಬಾರದು ನೋಡಾ .ಇದು ಕಾರಣ ಮುನ್ನ ಮುನ್ನವೆ

ನ್ಯಸ್ತವಾಗಿಹ ಘನವು ಮೌನ, ಇದನ್ನು ಅರಿಯ ಹೋದ ಅರಿವು ಅದು ವೇದ ವೇದಾಂತಗಳ ಲೆಕ್ಕಿಸದೆ ಮಿಕ್ಕಿ ಮೀರಿ ನಿಂತ ನಿಜದಿರುವ ನೋಡಿದ ಘನಕ್ಕೆ ಘನ ಇದು ಮೌನ. ಇದು ಲಿಂಗ ಸಕೀಲ ಸಂಯೋಗ ವರ್ಮಸ್ಥಲವರಿತವರ ನಿಜದಿರುವಿನ ಅರಿವು. ಇದು ಶಬ್ದದ ಹಂಗು ಹರಿದವರ ಘನಕ್ಕೆ ಘನವಾಗಿಹ ಇರುವಿನ ಅರುವಾದುದರಿಂದ, ಈ ಮೌನ ಮುದ್ರೆಗೆ ಲಿಂಗೈಕ್ಯವೆಂದು ಹೇಳಿಹರು.

ವಾಯುವಿನ ಸಂಚದ ಪರಿಮಳದ ನಿಲುವಿನಂತೆ ಲಿಂಗೈಕ್ಯದ ಸಂಬಂಧವದು ಗುಹೇಶ್ವರಾ: ವಾಯು ಪರಿಮಳದ ಕೂಡುವಿಕೆಯ ನಿಲುವಿನಂತೆ ಲಿಂಗೈಕ್ಯದ ಸಂಬಂದ, ಇದೆಂಥ ಸಂಬಂಧ ! ವಾಯು ಪರಿಮಳ ಕೂಡಿದ ಕೂಟ ಅದನಾರಯ್ಯ ಹೀಗೆ ಎಂದು ವರ್ಣಿಸುವುದು. ಈ ಕೂಟ ಮೌನ ಕೂಟ, ಪರಿಮಳವು ಮೌನ, ವಾಯುವು ಮೌನ , ಕೂಡಿದ ಕೂಟವು ಮೌನ . ಕಣ್ಣು ನೋಡಲಿಲ್ಲ ಕಿವಿ ಕೇಳಲಿಲ್ಲ ವಾಣಿ ಉಸುರಲಿಲ್ಲ ಇದೆಂಥ ಸಂಗಮ , ಇದೆಂಥ ಸಮರಸ . ಎತ್ತಣದ ವಾಯು , ಎತ್ತಣದ ಪರಿಮಳ , ಎತ್ತಣದಿಂದೆತ್ತ ಇವುಗಳ ಕೂಟ ? ವಾಯು ಪರಿಮಳವ ಅಪ್ಪಿಕೊಂಡಿತೊ! ಪರಿಮಳ ವಾಯು ಅಪ್ಪಿಕೊಂಡಿತೊ? ಇದಾರು ನಿರ್ಣಯಿಸುವರು . ಅಪ್ಪಿಕೊಂಡ ಸಂಗ ಸಮರಸ ಸದ್ವಾಸನೆಯಂ ಘಮ ಘಮಿಸುತ್ತಿಹುದು ಇದೆಂಥ ಸುವಾಸನೆ ಘ್ರಾಣೇಂದ್ರಿಯ ಘ್ರಾಣಕ್ಕೆ ಕಂಡಿತೆ ! ಹೃದಯಕ್ಕೆ ಹೃದಯವೆ ನಿರಂತರವಾಗಿರುವ ಮಂಗಳಮಯ ತತ್ವದಿಂದ ಘಮ ಘಮಿಸುವ ಸದ್‌ಜ್ಞಾನ ಭರಿತ ವಾಸನೆ ತುಂಬಿ ತುಳುಕದ ವಾಸನೆ , ಒಲಿದು ಓಸರಿಸದ ವಾಸನೆ , ಇದು ಸುಖ ರೂಪ ಸುಖದ ಸುಖ ಇದೆಂತು ವರ್ಣಿಸುವುದು .

ವಾಯು ಆವುದು? ಪರಿಮಳ ಆವುದು? ಸಂಗ ಸಮರಸ ಆವುದು? ಇದು ಲಿಂಗೈಕ್ಯ ಸಂಬಂಧ. ಅನಿಮಿಷ ದೃಷ್ಟಿ ನಿಜದ ನಿಬ್ಬೆರಗು .ಇದು ಪರಿಮಳ ಪ್ರಭುವೆಂಬುದು ಲಿಂಗೈಕ್ಯದ ಅನಿಮಿಷ ದೃಷ್ಟಿಯ ತವಕದ ಅರುವೆಂಬ ವಾಯು , ನಿಜನಿಬ್ಬೆರಗಿನ ತವಕದ ವಾಯು ಇವೆರಡು ಸಂಗ ಸಮರಸವೆಂಬುದು ಅರಿಯಲಿಲ್ಲದ ಅರುವು . ತನ್ನೊಳ , ತನ್ನಿಂದ ಮುನ್ನ ಮುನ್ನಲಾದ ಘನದರಿವು ವೇಧ್ಯವಾಗುವುದು ಸಂಗ ಸಮರಸ ಇದು ಲಿಂಗೈಕ್ಯ ಸಂಬಂಧ.

ಅರಿಯದರುವುಳ್ಳ ಇರುವೆ ಪರಿಮಳ. ಅದನ್ನು ಅರಿದರಿದು ನೋಡುವ ತವಕವೆ ವಾಯು. ಈ ತವಕ ಅರುಹೃದಯದ ತವಕ. ಇದು ಅರಿಯದರುವುಳ್ಳ ಅರುವ, ಅರಿಯ ಹೋಗಿ ಅರಿದರಿದು ಅರಿಯದರುವೆ ತಾನಾಗಿ ನಿಂತ ನಿಬ್ಬೆರಗು . ಇವೆರಡು ಕೂಡಿದ ಸಂಗ ಸಮರಸ ಇದು ಲಿಂಗೈಕ್ಯ ಸಂಬಂಧವೆಂದು ಹೇಳಿಹರು.

85

ಹಸಿವಿನ ಪ್ರೇಮಕ್ಕೆ ಬೋನವ ಹಿಡಿವರು ,
ತೃಷೆಯ ಪ್ರೇಮಕ್ಕೆ ಮಜ್ಜನಕ್ಕೆರೆವರು .
ದೇವರಿಲ್ಲ , ಭಕ್ತರಿಲ್ಲ , ನಾನು ಇಲ್ಲ , ನೀನು ಇಲ್ಲ ಗುಹೇಶ್ವರಾ
ಪೂಜಿಸುವವರೂ ಇಲ್ಲ ಪೂಜೆಗೊಂಬುವವರೂ ಇಲ್ಲ. **॥ 626 ॥**

ತಾತ್ಪರ್ಯ : ಹಸಿವಿನ ಪ್ರೇಮಕ್ಕೆ ಬೋನವ ಹಿಡಿವರು ತೃಷೆಯ ಪ್ರೇಮಕ್ಕೆ ಮಜ್ಜನಕ್ಕೆರೆದವರು: ದೇವರಿಲ್ಲ ಭಕ್ತರಿಲ್ಲ ಪ್ರಭು ದೇವ ಮಾಯಾ ಕೋಲಾಹಲ, ಮಾಯಿಕ ದೇವರನ್ನು ವಂಚಕ ಭಕ್ತರನ್ನು ಪ್ರಭು ಹೇಗೆ ಒಪ್ಪುವನು ? ಇವರು ಭೇದ ಜ್ಞಾನಿಗಳು , ಭೇದ ಭಾವಿಕರು , ಭೇದ ದೃಷ್ಟಿ . ಇವರ ದೃಷ್ಟಿಗೆ ದೇವರು ಉಣ್ಣುವವನಾಗಿದ್ದಾನೆ. ದೇವರಿಗೆ ನೀರಿನ ದಾಹವಿದ್ದಂತೆ ಕಾಣುತ್ತದೆ. ಇದಲ್ಲದೆ

ಅಪವಿತ್ರನಾಗಿಹನು ಅವನಿಗೆ ಪವಿತ್ರ ಮಾಡಲು ಮಡಿ ನೀರಿನಿಂದ ಸ್ನಾನವ ಮಾಡಿಸುವರು , ತೃಷೆಯ ನೀಗಿಸಲು ಮಜ್ಜನಕ್ಕೆರೆವರು . ಇವರಿಗೆ ದೇವರಾರು ಎನ್ನುವುದು ವಿದಿತವಾಗಿರುವುದಿಲ್ಲ. ಭಕ್ತರಾರು ಎನ್ನುವುದು ವಿದಿತವಿಲ್ಲ ಪೂರ್ವದಲ್ಲಿ ಭೇದ ಭಕ್ತರು ಬಹು ಭಾವಿಕರು ಆಗಿಹರು . ಇವರು ದೇವನನ್ನು ಸೃಷ್ಠಿ ಉತ್ಪತ್ತಿಗೆ ಕಾರಣ ಸಕಲ ಕಾರ್ಯಕ್ಕೂ ಕಾರಣನೆಂದು ಒಪ್ಪಿಕೊಂಡಿದ್ದಾರೆ ಇದಲ್ಲದೆ ಕಾರ್ಯರೂಪನೆಂದು ಒಪ್ಪಿಕೊಂಡಿದ್ದಾರೆ. ಈಶ್ವರನು ಸರ್ವಜ್ಞನು ಸರ್ವಶಕ್ತನು ಸರ್ವಾಂತರ್ಯಾಮಿ ಸ್ವತಂತ್ರನು , ಪರೋಕ್ಷನು ವ್ಯಾಪಕನು , ಬಂಧಮೋಕ್ಷ ಗಣಪತಿ ಬ್ರಹ್ಮ ಮೊದಲಾದ ರೂಪಕ್ಕೆ ಅವತಾರಕ್ಕೆ ಕಾರ್ಯರೂಪನೆಂದು ಒಪ್ಪಿಕೊಂಡಿದ್ದಾರೆ. ಜೀವನು ಅಲ್ಪಜ್ಞನು ಅಲ್ಪಶಕ್ತಿಯುಳ್ಳವನು ಪರತಂತ್ರ ಅಪರೋಕ್ಷ ಬಂದ ಮೋಕ್ಷ ಸಹಿತನು ಆನಂದ ಸ್ವರೂಪನೆಂದು ಬಹಳ ಭಕ್ತರು ಒಪ್ಪಿದ್ದಾರೆ ಹೀಗಾಗಿ ಇವರಲ್ಲಿ ಅಭೇದ ತತ್ವ ಸಿದ್ಧಿಸದಾಗಿದೆ ಇವರ ದೃಷ್ಠಿಯಲ್ಲಿ ದೇವರು ಭಕ್ತರು ಎಂದರೆ ಫಲಪದಂಗಳ ಕೊಡಕೊಳ್ಳುವ ವ್ಯವಹಾರದಿಂದುಕ್ತವಾದುದು ಎಂದು ತಿಳಿದು ದೇವನು ಫಲಪದಂಗಳ ಕೊಡುವವನು ಎಂದು ತಿಳಿದ ಭಕ್ತನು ಉಪಾಸಕರು ಬಹಳ ಇದ್ದಾರೆ. ಇದಲ್ಲದೆ ಕಾರ್ಯದಲ್ಲಿ ಒಂದು ರೂಪಾಯಿ ಖರ್ಚಾದರೆ ಅವನು ಸಹಸ್ರ ರೂಪದಲ್ಲಿ ಕೊಡುವನೆಂಬ ನಂಬಿಕೆಯು ಬಹು ಭಾವಿಕರಲ್ಲಿ ಅವಿತುಕೊಂಡಿದೆ .

ದೇವರಿಗೆ ಮಜ್ಜನಕ್ಕೆರೆದರೆ ನಮಗೆ ಮಳೆ ಕಡಿಮೆಯಾಗವು ಇದರಿಂದ ನೀರು ದೊರೆಯುವುದು ಅನ್ನಕ್ಕಿಂತಲೂ ನೀರು ಶ್ರೇಷ್ಠವಾಗಿದೆ. ಏಕೆಂದರೆ ಮಾನವ ಜಠರಾಗ್ನಿ ತೃಪ್ತಿಗಾಗಿ ಎರಡು ವೇಳ್ಯ ತೆಗೆದುಕೊಳ್ಳುತ್ತಾನೆ. ನೀರು ಮಾತ್ರ ಆರು ಏಳು ಸಲ ತೆಗೆದುಕೊಳ್ಳುತ್ತಾನೆ. ಇದು ಕಾರಣ ನೀರಿನ ಉಪಯೋಗ ಬಹಳಷ್ಟು ಇದೆ. ಭಕ್ತರು ಮಜ್ಜನಕ್ಕೆರೆವರು , ತಮಗೆ ನೀರು ಕಡಿಮೆಯಾಗಬಾರದೆಂಬ ಗುರಿಯನ್ನಿಟ್ಟುಕೊಂಡು ಮಜ್ಜನಕ್ಕೆರೆವರು. ಅನ್ನ ತಮಗೆ ಕಡಿಮೆಯಾಗಬಾರದೆಂಬ ಗುರಿಯನ್ನಿಟ್ಟುಕೊಂಡು ಬೋನವ ಹಿಡಿವರು . ಇದನ್ನು ಕಂಡು ಪ್ರಭು ದೇವ '' ರೂಪವನೆ ಕಂಡು ನಿರೂಪನೆ ಕಾಣರು ತನುವನೆ ಕಂಡು ಅನುವನೆ ಕಾಣರು . ಆಚಾರವನೆ ಕಂಡು ವಿಚಾರವನೆ ಕಾಣರು ಗುಹೇಶ್ವರಾ ನಿಮ್ಮ ಕುರುಹನೆ ಕಂಡು ಕೂಡಲರಿಯದೆ ಕೆಟ್ಟರು '' ಎಂದು ಬಿತ್ತರಿಸಿದ ಮಹದರುವು ಗುರು ಕರುಣೆಯಿಂದ ಲಭ್ಯವಾದ ಪರಮಜ್ಞಾನ . ಲಿಂಗ ಕುರುಹಾಗಿ ಕಂಡರಲ್ಲದೆ ಅದು ಅರುವ ಅರಿಯ ಹೇಳಿದ ಕಾರುಣ್ಯವೆಂದು , ಅದನ್ನು ಅರಿಯ ಹೋಗಲಿಲ್ಲ ಅದನ್ನು ಕುರುಹೆಂದು ತಿಳಿದು ಷೋಢಶೋಪಚಾರ ಮಾಡಿದರಲ್ಲದೆ ವಿಚಾರ ಮಾಡಲಿಲ್ಲ . ಗುಹೇಶ್ವರ ಕರಕಮಲದಲ್ಲಿ ಸ್ವಯಂಜ್ಯೋತಿಯಾಗಿ ಪ್ರಕಾಶಿಸಿದರೂ , ಅದನ್ನು ಅರಿಯಲಿಲ್ಲ ಅರುವೆ ತಾನಾಗಲಿಲ್ಲ ಅದು ತನಗಿಂತ ಅನ್ಯವಾಗಿ ಕಂಡರು .

ಇತ್ತ ವೀರಶೈವರಲ್ಲಿ ಗುರು ಕೊಟ್ಟ ಲಿಂಗ ಅರುವ ಅರಿಯ ಹೇಳಿದ ಚಿನ್ಹವಾದುದರಿಂದ , ಇದು ಅನುಪಮ ಲಿಂಗ , ಅಚಲಿತ ಲಿಂಗ , ಅಖಂಡಿತ ಲಿಂಗವೆಂದು ತಿಳಿದವರೆಷ್ಟು ಜನ ಶಿಕ್ಕುತ್ತಾರೆ . ಇದು ಅವರವರ ಹೃದಯಕ್ಕೆ ವಿದಿತ ವಿದ್ದ ಸಂಗತಿ . ಈ ಲಿಂಗವಾದರೂ ಗುರು ಕರುಣಿಸಿ ಅದೆಷ್ಟು ಭಕ್ತರಿಗೆ ಅನುಗ್ರಹಿಸಿಹನೊ ಇದು ಹೇಳಲಿಕ್ಕಾಗದ ಬಿಕ್ಕಟ್ಟು. ಏಕೆಂದರೆ ? ಗುರುವಾಗದವರು ಗುರುಗಳೆಂದು ಲಿಂಗ ಅನುಗ್ರಹಿಸುವದು ನಡದಿದೆ . ತನಗೆ ಲಿಂಗದ ಘನವ ತಿಳಿಯುವಷ್ಟು ಅರುಹೃದಯವಾಗಲಿಲ್ಲ, ಮರೆವರುವಿಗೆ ಒಳಪಟ್ಟ ಹೃದಯಗಳು ಲಿಂಗ ಕಟ್ಟುವ ಕಾರ್ಯ ಕೈಕೊಂಡಿಹವು ಇವರೆಂತು ಲಿಂಗದ ರಹಸ್ಯವ ತಿಳಿಯಬಲ್ಲರು .

ಗರುವೆಂದರಿಯರು ಲಿಂಗವೆಂದರಿಯರು ಹಿರಿಯರೆಂದರಿಯರು ಜಂಗಮವೆಂದರಿಯರು,

ಅರಿಯದೆ ಸ್ಥೂಲ ದೃಷ್ಟಿಯಿಂದ ನೋಡುವದು ಸಹಜವಾಗಿದೆ . ಇದು ಕಾರಣ ಗುರು ಘನವ ತಿಳಿಯದಾಗಿದೆ ತಿಳಿಯದ್ದರಿಂದ ಲಿಂಗ ಜಂಗಮವು ತಿಳಿಯದಂತಾಗಿದೆ ಶಿಷ್ಯಂಗೆ ಗುರುವ ಬೋಧಿಸುವಲ್ಲಿ ಸಮ ಪ್ರಕಾಶಮಾನವಾದ ತತ್ವ ತಿಳಿಸಿಕೊಡಬೇಕು . ಸಮಪ್ರಕಾಶಮಾನವಾದ ತತ್ವ ಅದು ಲಿಂಗ ಜಂಗಮ ಒಂದಾದ ನಿಲುವು . ಗುರು ಶಿಷ್ಯರೊಂದಾದ ನಿಲುವು , ಭಕ್ತ ಜಂಗಮರೊಂದಾದ ನಿಲುವು ಇದು . '' ವೇದ ವೇದಾಂತಗಳಿಗೆ ಅಸಾಧ್ಯವಾಗಿಹ ಅನುಪಮ ಲಿಂಗ , ನಾದ ಬಿಂದು ಕಲೆಗಳಿಗೆ ಅಭೇದ್ಯವಾಗಿಹ ಅಚಲಿತ ಲಿಂಗ , ವಾಙ್ಮನಕ್ಕಗೋಚರವಾಗಿಹ ಅಖಂಡಿತ ಲಿಂಗ ಸದ್ಗುರು ಎನ್ನ ಕರಸ್ಥಲಕ್ಕೆ ತಂದು ಕೊಟ್ಟನಯ್ಯ , ಇನ್ನು ನಾನು ಬದುಕಿದೆನಯ್ಯ , ನಾ ಬಯಸಿದ ಬಯಕೆ ಕೈಸಾರಿತಿಂದು ಕೂಡಲಸಂಗಮದೇವಾ ''. ಎಂದು ಬಿತ್ತರಿಸಿದುದು ನೋಡಿದಡೆ ಲಿಂಗವೆಂದರೆ ಅನುಪಮ ಅನುಪಮದೇವನನ್ನು ತಿಳಿದ ಪ್ರಭು ಅಚಲಿತ ದೇವನನ್ನು ಅಖಂಡಿತ ದೇವನನ್ನು ತಿಳಿದ ಪ್ರಭು , ತಾನೆ ಅನುಪಮನಾದ , ತಾನೆ ಅಚಲಿತನಾದ ತಾನೆ ಅಖಂಡಿತನಾದ ತಾನು ಅಖಂಡಿತನಾದುದರಿಂದ ದೇವನನ್ನು ತನಗಿಂತ ಅನ್ಯವಾಗಿ ಕಾಣಲಿಲ್ಲ. ತಾನು ಅಖಂಡಿತನಾಗಿರುವಲ್ಲಿ ತನಗಾವ ಮಾಯಿಕದೇವ ಮಾಯಿಕ ಭಕ್ತಿಯ ಒಪ್ಪಲಿಲ್ಲ.

ಮಾಯಿಕ ದೇವನನ್ನು ಒಪ್ಪಿದವನು ನಾಮದೇವ , ಪುರಂದರದಾಸ , ಸೂರದಾಸ ಇವರು ಮಾಯಿಕ ದೇವನ ಒಪ್ಪಿದವರು . ಇವರು ಜ್ಞಾನೇಶ್ವರಿ ಮಹಾರಾಜನಂಥ ಜ್ಞಾನಿ ಭಕ್ತನಾಗಲಿಲ್ಲ, ಪ್ರಭುವಿನಂಥ ಅನುಪಮ ಭಕ್ತನಾಗಲಿಲ್ಲ . ಭಕ್ತನೆಂದರೆ ಭವಿಯ ಪೂಜಿಸಿ ಭವಿಯಾದ ಮಹಾಂತನ ಇರುವು ಉಪಮಿಸಲಳವಲ್ಲ ಪ್ರಭು , ದೇವರಿಲ್ಲ ಭಕ್ತರಿಲ್ಲ ನಾನು ಇಲ್ಲ ನೀನು ಇಲ್ಲವೆಂದು ಹೇಳಿದುದು ನೋಡಿದಡೆ ದೇವನನ್ನು ಗುಣಮಯಿಯನ್ನಾಗಿ ಮಾಡಿದುದು . ಭಕ್ತನ್ನನು ಗುಣವಂತನನ್ನಾಗಿ ಮಾಡಿದುದು ಖಂಡಿಸಿದನು ಇವರು ಅಂಶ ಅಂಶಿ ಭಾವವ ಒಪ್ಪಿದುದ ಖಂಡಿಸಿದನು . ಇದು ಕಾರಣ ನಿಮಗೆ ದೇವರಿಲ್ಲ ನಿಮ್ಮ ದೇವರಿಗೆ ಭಕ್ತರಿಲ್ಲ.

ದೇವನೆಂದರೆ ಅನುಪಮನು , ಅಚಲಿತನು , ಅಖಂಡಿತನು , ಸತ್ಯ ಜ್ಞಾನಾನಂದಮಯನು . ಭಕ್ತನೆಂದರೆ ಅನುಪಮನು ದೇವರಿಲ್ಲ ಭಕ್ತರಿಲ್ಲ , ನಾನು ಇಲ್ಲ , ನೀನು ಇಲ್ಲ , ಎಂಬುದನ್ನು ಯತಾರ್ಥವಾಗಿ ತಿಳಿದವನು . ಅಖಂಡಿತ ದೇವರಲ್ಲಿ ನಾನು ದೇವರೆಂಬುದು ಇಲ್ಲ , ಭಕ್ತರಿಗೂ ನಾನು ಭಕ್ತನೆಂಬುದಿಲ್ಲ, ದೇವರಿಗೂ ನೀನು ಎಂಬುದಿಲ್ಲ , ಭಕ್ತಿನಿಗೂ ದೇವರು ಎಂಬುದಿಲ್ಲ. ಅನುಪಮ ನಿಲಯದಲ್ಲಿ ಉಪಮೆಯುಂಟೆ ?

ಹಸಿವೆಯಾದಡೆ ನಿಜದ ಹಸಿವೆ ಆಗಬೇಕು . ಇದರ ಹಸಿವುಳ್ಳವರು ಬಹು ಕಡಿಮೆ ವಿರಳ . ನಿಜದ ಹಸಿವೆ ಅದಾವುದು ? ಇದು ಜಠರಾಗ್ನಿಗೆ ಸಂಬಂಧಿಸಿದ ಹಸಿವೆ ಅಲ್ಲ. ಇದು ಹೃದಯದ ಹಸಿವು ಕೇವಲ ಜ್ಞಾನಾಮೃತವನುಂಡಾಗ ಈ ಹಸಿವು ಹಿಂಗುತ್ತದೆ. ಈ ನಿಜದರಿವಿನ ಹಸಿವೆ ಅದಾರಿಗೆ? ಅಕ್ಕಮಹಾದೇವಿ , ಮುಕ್ತಾಯಕ್ಕ , ಮೋಳಿಗೆಯ್ಯ , ಸಿದ್ಧರಾಮ ತಂದೆ ಇವರಿಗೆ ಅಚಿಂತ್ಯ ಸುಖದ ಹಸಿವು ಆಗಿತ್ತು . ಶುಕದೇವನಿಗು ಈ ಹಸಿವು ಆಗಿತ್ತು .ಈ ಹಸಿವಿನ ತೃಪ್ತಿ ಜನಕಮಹಾರಾಜನಿಂದ ಪಡೆದು ತೃಪ್ತ ರೂಪ ತೃಪ್ತಿ ಹೊಂದಿದನು.

ತೃಷಿ , ಬಹು ಜನರಿಗೆ ಇದೆ . ಈ ತೃಷೆಗೆ ತತ್ಕಾಲ ಮಜ್ಜನಕ್ಕೆರೆದರೆ ಉಪಶಾಂತಿ ಎನಿಸುವುದಲ್ಲದೆ ಪರಮಶಾಂತಿಯಾಗಲಾರದು . ಈ ತೃಷೆಗೆ ಪರಮಾನಂದ ರೂಪ ಜಲವೆ ಇದಕ್ಕೆ ದಿವ್ಯ ಔಷಧಿಯಾಗಿದೆ.

''ನಿತ್ಯವೆಂಬ ಭಕ್ತನ ಮನೆಗೆ , ಘನ ಚೈತನ್ಯವೆಂಬ ಜಂಗಮ ಬಂದರೆ ,
ಜಲವಿಲ್ಲದ ಜಲದಲ್ಲಿ ಪಾದೋದಕ ಮಾಡಿದಂತಾಯಿತ್ತಯ್ಯ

ಸ್ವಚ್ಛಾನಂದಂ ಜಲಂ ಪೀತ್ವಾ ಪುನರ್ಜನ್ಮ ನ ಸಂಶಯಃ ".

ಎಂದುದಾಗಿ ಎಂದು ಷಟ್‌ಸ್ಥಲ ಚಕ್ರವರ್ತಿ ಹೇಳಿದುದು.

ಮನದ ತೃಷೆಯ ನಿವೃತ್ತಿ , ಅದು ನಿಜವಾದ ನಿವೃತ್ತಿ. ಇದು ಲಿಂಗ ಒಂದಾಗಿರ್ದ ಜಂಗಮ ದೇವನ ಸ್ವಾನುಭವವೆ ಜಲವಿಲ್ಲದ ಜಲ .ಅದರ ಸೇವನೆಯಿಂದ ಪರಮಾನಂದವು ಲಭ್ಯವಾಗುವುದು. ಇದು ಜ್ಞಾನಾರ್ಜನೆ ಈ ಕಾರ್ಯ ಮಾಡುವುದು ಬಿಟ್ಟು, ಇಷ್ಟಲಿಂಗಕ್ಕೆ ಬೋನವ ಹಿಡಿದಡೇನು ಮಜ್ಜನವನೆರೆದಡೇನು ಅಲ್ಲಿ ನಿಜವಾದ ಜ್ಞಾನವಿಲ್ಲ . ಜ್ಞಾನವಿಲ್ಲದ್ದರಿಂದ ಆವರಣ ನಿರಸನ ವಾಗದು ಆವರಣ ನಿರಸನವಾಗದ ವಿನಃ ದೇವನಾರು ಎಂಬುದು ತಿಳಿಯದು ಭಕ್ತನಾರು ಎಂಬುದು ತಿಳಿಯದು.

ಪ್ರಭುದೇವ ನಿರಾವರಣಮೂರ್ತಿ ನಿರಾಲಂಬ ಮೂರ್ತಿ ನಿಸ್ಸಂಗದ ಘನ ವೇದ್ಯನಾದುದರಿಂದ ಅನುಪಮ ನಿಲಯವಂತ ಕಲ್ಪಿತಕ್ಕಿಂಬುಕೊಡದ ಘನವಂತನ ದಿವ್ಯ ದೃಷ್ಟಿಗೆ ದೇವರಿಲ್ಲ ಭಕ್ತರಿಲ್ಲ ನಾನು ಇಲ್ಲ ನೀನು ಇಲ್ಲ ಗುಹೇಶ್ವರಾ ಪೂಜೆಗೊಂಡುದು ಇಲ್ಲ. ಪೂಜಿಸುವವರು ಇಲ್ಲವೆಂದು ಹೇಳಿಹರು.

86

ಅವಿರಳ ವಿಟನ ಮದುವೆಗೆ ನಿಬ್ಬಣಗಿತ್ತಿಯರೆಲ್ಲರು ಬಂದು
ಕೆಂಡದ ದಂಡೆಯನೆ ಮುಡಿದು ಅಂಡಜವೆಂಬ ಅರಿಷಣವ ಮಿಂದು
ಉರಿಯೆಂಬ ಹಚ್ಚಡದ ಹೊದಿಕೆಯಲ್ಲಿ ನಿಬ್ಬಣಗಿತ್ತಿಯರು
ಬಪ್ಪ ಬರುವ ಕಂಡು ನೀರಲಡಿಗೆಯ ಮಾಡಿ
ವಾಯದ ಕೂಸಿಂಗೆ ಮಾಯದ ಮದುವಣಿಗ
ಸಂಗ ಸಂಯೋಗವಿಲ್ಲದೆ ಬಸುರಾಯಿತ್ತು .
ಕೂಸೆದ್ದು ಕುಣಿದಾಡಿ ಸೂಲಗಿತ್ತಿಯ ನವಗ್ರಹಿಸಿತ್ತು ಗುಹೇಶ್ವರಾ
ಒಬ್ಬ ಇಬ್ಬ ಮೂವರು ತ್ರಿದೇವತೆಗಳು ಬಲ್ಲರೆ ಆ ಲಿಂಗದ ಘನವನು . || 628 ||

ತಾತ್ಪರ್ಯ : ಅವಿರಳ ವಿಟನ ಮದುವೆಗೆ ನಿಬ್ಬಣಗಿತ್ತಿಯರೆಲ್ಲರು ಬಂದು ಕೆಂಡದ ದಂಡೆಯನೆ ಮುಡಿದು ಅಂಡಜವೆಂಬ ಅರಿಷಣವ ಮಿಂದು ಈ ಮದುವೆಗೆ ಅದಾರು ಒಪ್ಪುವದು : ಇದಲ್ಲದೆ ಈ ಮದುವೆಯಾಗದ ವಿನಃ ಗತ್ಯಂತರವಿಲ್ಲ . ಹುಟ್ಟಿದವರೆಲ್ಲ ಮದುವೆಯಾಗಲೇಬೇಕು ನರರೊಂದೆ ಈ ಮದುವೆಯಾಗಬೇಕೆಂದಿಲ್ಲ . ಸುರಾಸುರರು ದೇವಗಣ ರುದ್ರಗಣ ಪ್ರಮಥಗಣಂಗಳಿಗೂ ಈ ಮದುವೆಯು ಮುಖ್ಯವಾಗಿ ಬೇಕು . ಸತ್ಯರು ನಿತ್ಯರು ಮುಕ್ತರೆಂಬ ಮಹಾಮಹಿಮರೆಲ್ಲರೂ ಅವಿರಳ ವಿಟನ ಮದುವೆಯಾಗಲೇಬೇಕು. ಈ ಲಗ್ನ ಶುಭಲಗ್ನ , ನಿರಂತರ ಮಂಗಳಮಯ ಲಗ್ನ ಇಲ್ಲಿ ಅಮಂಗಲಕ್ಕೆ ಇಂಬಿಲ್ಲ. ಗಂಗೆ ಗೌರಿ ವಲ್ಲಭರ ಮದುವೆಗಿಂತಲೂ ಹೆಚ್ಚು ಶ್ರೇಯಸ್ಕರವಾದುದು . ಇದು ಕಾರಣ ಗೃಹಸ್ಥರಷ್ಟೆ ಅಲ್ಲ, ತ್ಯಾಗಿ ಭೋಗಿ ಯೋಗಿ ತಪಸ್ವಿ ಇರಲಿ ಸನ್ಯಾಸಿ ಇರಲಿ ನಿಷ್ಕಾಮ ಕರ್ಮಿಗಳು ಸಕಾಮ ಕರ್ಮಿಗಳು ,ಆರೆ ಇದ್ದರೂ ಈ ಮದುವೆಯಾಗದ ವಿನಃ ಸಂಗ ಸಮರಸ ಸುಖದ ಘನತ್ವ ತಿಳಿಯದು .

ಮದುವೆ ಎಂಬುದು ಸತಿ ಪತಿಗಳು ಒಂದಾಗುವ ಸಹಜ ನಿಯಮ . ಲೌಕಿಕರು ಸತಿಪತಿಗಳು ಒಂದಾಗುವದು ನಿಜವಾದ ಮದುವೆ ಅಲ್ಲ ! ಇವರು ಕೂಡುವುದುಂಟು ಅಗಲುವುದುಂಟು . ಇವರು ಗುಣಮಯರು , ಇಂದ್ರಿಯ ರಾಮರು , ವಿಷಯಾಸಕ್ತರು , ವಿಷಯ ಭೋಗೋಪಭೋಗಿಗಳು . ಇದು ಕಾರಣ ಈ ದಂಪತಿಗಳ ಸಂಗ ಸಮರಸ ನಿಜವಾದ ಸಮರಸವಲ್ಲ.

ಇದು ಮಾಯಿಕ ಸಮರಸ , ಕೃತ್ರಿಮ ಸಮರಸ , ವಂಚಕ ಸಮರಸ .ಇವರ ಸಮರಸ ಕ್ರಿಯೆದಿಂದುಕ್ತವು , ಭಾವದಿಂದುಕ್ತವು , ಕಲ್ಪಿತವು . ಇದು ಕೃತ್ರಿಮವೆಂದು ಹೇಳಬಹುದು. ಮದುವೆಯೆಂದರೆ ಅವಿರಳ ವಿಟನ ಮದುವೆಯೆ ಮದುವೆ. ಅವನಲ್ಲಿ ಲೀಯವಾಗುವುದೆ ಈ ಶರಣ ಸತಿಯಳ ಮುಖ್ಯ ಗುರಿ.

'' ಮೊಲೆ ಮುಡಿ ಇದ್ದಡೆ ಹೆಣ್ಣೆಂಬರು . ಮೀಸೆ ಕಾಸೆ ಬಂದಡೆ ಗಂಡೆಂಬರು . ಈ ಉಭಯದ ಜ್ಞಾನ ಹೆಣ್ಣೊ ಗಂಡೋ ನಾಸ್ತಿನಾ '' ಅಂಗಾಂಗಗಲ್ಲಿ ಸತಿಪತಿಯಾಗುವ ಕಾರ್ಯ ಸಹಜ ನಡೆದಡೆ ಶರಣ ಸತಿಯಾಗುವದು .ಅವಿರಳ ವಿಟ ಪತಿಯಾಗುವುದು ಮಹಾಭಾಗ್ಯ . ಈ ಮಹಾಭಾಗ್ಯ ಅದಾರಿಗೆ.

ಹುಟ್ಟು ಸಾವುಳ್ಳ ಗಂಡರು ಧನಿಕರು ಇದ್ದಾರೆ. ದರಿದ್ರರು ಇದ್ದಾರೆ. ಬಲಶಾಲಿಯು ಇದ್ದಾರೆ. ಚಕ್ರವರ್ತಿಯು ಆಗಿಹರು . ಇಂಥ ಹೊರಗಿನ ರಾಜ್ಯ ಭೋಗವ ಕಂಡು ಅವರ ಪುಣ್ಯದಂಥ ಪುಣ್ಯ ಅದಾರಿಗೆ? ಭಾಗ್ಯ ಅದಾರಿಗೆ ಎಂದು ಹೇಳಿಕೊಳ್ಳುವರು.

ಅಮರ ಗಂಡ , ನಿರಂತರವಾಗಿಹ ಮಂಗಳಮಯ ಪರಮಸತ್ಯ . ಸಾಯದ ಹುಟ್ಟದವರ ನಾಮವಿಲ್ಲದವರ ರೂಪವಿಲ್ಲದವರ ಚೆಲುವ , ಮಹಾಚೆಲುವ . ಈ ವರನ ಚಲುವತನ ಅದಾರಿಗೆ ? ಈ ಘನವಂತನ ಚಲುವತನ ಅದಾರಿಗೆ ? ಸ್ವಮಹಿಮ್ನನು, ಕಂದದ ಕುಂದದ ಚೆನ್ನಿಗ, ನಿರಂತರ ಮಂಗಳಮಯನಾಗಿರುವ ಚೆನ್ನಿಗ, ಇವನಂಥ ಕಾಮುಕ ಅದಾರಿಗೆ? ಇವನಂಥ ಅಪಾರ ಪ್ರೀತಿ ಅದಾರಿಗೆ? ಇವನದು ಅಪಾರ ಆಲಿಂಗನ. ಈ ಆಲಿಂಗನ ಒಮ್ಮೆಯಾದರೆ ಸಾಕು, ಎಂದೆಂದೂ ಬಿಡದ ಆಲಿಂಗನ. ಬಿಡದ ಸಂಗ ,ಬಿಡದ ಸಂಯೋಗ,ಈ ಸಂಯೋಗದ ಸುಖ, ಸುಖದ ಸುಖ ಅದಾರಿಗೆ? ಸುಖದೇಕರಸ ಅದಾರಿಗೆ ಪರಮಾನಂದ ಅದಾರಿಗೆ? ಇದು ಶರಣಸತಿ ಯಾದವರಿಗೆ ಸಾಧ್ಯ . ಈ ಸತಿತ್ವ ಹೆಣ್ಣುಮಕ್ಕಳಿಗೆ ಸೀಮಿತವಾದುದಿಲ್ಲ ಸತಿಯರಾಗಲು ಸಕಲರಿಗೂ ಬರುವುದು .

ಅವಿರಳ ವಿಟನೊಬ್ಬನೆ ವರ .ಅವನೊಬ್ಬ ಚೆಲುವ ಚೆನ್ನಿಗ. ಇವನಂ ಬಿಟ್ಟು ಇನ್ನುಳಿದವರೆಲ್ಲರು (ವಧು) ಕನ್ಯೆಯರೆ! ಮತ್ತು ಈ ಮದುವೆ ಹೊರಗೆ ಕಾಣುವ ಲಗ್ನವಲ್ಲ. ತನ್ನ ಹೃದಯ ಮಂದಿರದಲ್ಲಾಗುವ ಲಗ್ನ . ಜ್ಞಾನಾನಂದ ಮಯ ಲಗ್ನ . ಅರುವಿನ ಲಗ್ನ . ಮುಮುಕ್ಷವೆಂಬ ಕನ್ಯೆಗೆ ತನ್ನ ಹೃದಯದಲ್ಲಿ ಅನುಭವಕ್ಕೆ ಬರುವ ಅಂಗ ಲಿಂಗ ಒಂದಾಗುವ ಲಗ್ನ ಸಂಗ ಸಂಯೋಗದ ಲಗ್ನ. ಅವಿರಳ ವಿಟನ ಲಗ್ನಕ್ಕೆ ಮುಖ್ಯವಾದವರು ನಿಬ್ಬಣಗಿತ್ತಿಯರು , ಇವರಿಂದ ಮದುವೆ ಸಂಶೋಭೆಯು ಸಂಭ್ರಮವು.

ನಿಬ್ಬಣಗಿತ್ತಿಯರು ಆರು ? ಶಕ್ತಿಯರೆ ನಿಬ್ಬಣಗಿತ್ತಿಯರು. ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿ , ಮಂತ್ರಶಕ್ತಿ, ಆದಿಶಕ್ತಿ, ಪರಾಶಕ್ತಿಯರೆಂಬ ಷಡು ಶಕ್ತಿಯರು ಮುಖ್ಯರು . ಇವರುಗಳಲ್ಲಿ ಮೊದಲನೆಯವಳು ಇಚ್ಛಾಶಕ್ತಿ . ಈ ಶಕ್ತಿಯ ಇಚ್ಛೆ ಸದಿಚ್ಛೆ, ನಿರಂತರವಾಗಿರುವ ಮಂಗಳಮಯ . ವಿಟನ ಮದುವೆಯಾಗುವ , ನಿರಂತರ ಇಚ್ಛಾ ಶಕ್ತಿ ಅಸಾಮಾನ್ಯ ಶಕ್ತಿ ! ಈ ಶಕ್ತಿ ಹೃದಯದೊಳಗೆ ಜಾಗ್ರತೆಯಾಗಬೇಕು . ಇದು ಅಕ್ಕಮಹಾದೇವಿಯ ಹೃದಯದೋಳ್ ಜಾಗ್ರತವಾಗಿಹ ಶಕ್ತಿ . ಶರಣ ಸತಿಯರೆಂಬುವವರಿಗೆಲ್ಲ ಮೊದಲನೆಯ ಶಕ್ತಿಯಾಗಿಹ ನಿಬ್ಬಣಗಿತ್ತಿಯ ಆಗಮನ . ಈ ಶಕ್ತಿ ತನ್ನ ಮನದ ಅಂತರಾಳದಲ್ಲಿ ಸ್ಥಿರವಾಗಿರಬೇಕು .

ಕ್ರಿಯಾ ಶಕ್ತಿ : ಇದು ವಿಚಾರ ರೂಪ ಕ್ರಿಯಾ ಶಕ್ತಿ . ಇವಳು ಕ್ರಿಯಾ ಶೀಲಳು ಅಹುದು , ಆಚಾರ ಶೀಲಳು ಅಹುದು . ಅವಿರಳ ವಿಟನ ಮದುವೆಗೂ ಹಾಗೂ ಅವನ ಸಂಗ ಸಮರಸಕ್ಕಾಗಿ ತಕ್ಕ ಉಪಾಯ

ವಿವೇಚಿಸುವ ಕ್ರಿಯಾ ಶಕ್ತಿ. ಈ ಶಕ್ತಿ ಹಂಸರೂಪವಾಗಿಹಳು. ಹಾಲು ನೀರು ಕೂಡಿಡಲು ಹಾಲನ್ನೆಸೇವಿಸಿ, ನೀರು ಬಿಡುವ ಹಂಸವು ವಿಚಾರ ಶಕ್ತಿ ಎಂಬ ಕ್ರಿಯಾ ಶಕ್ತಿಯು . ಬ್ರಹ್ಮಾಂಡವೆ ತೋರಲಿ ಇದು ನಾಮರೂಪವ ಸೇರದ ಶಕ್ತಿ. ಅಸ್ತಿ ಭಾತಿ ಪ್ರಿಯವೆಂಬ ಬ್ರಹ್ಮವನ್ನೆ ಪ್ರೀತಿಸುವ ಶಕ್ತಿ. ಈ ಶಕ್ತಿಯೆ ಕ್ರಿಯಾ ಶಕ್ತಿ, ಜ್ಞಾನಶಕ್ತಿ. ಲಿಂಗವ ಅರಿಯುವ ಶಕ್ತಿ.ಅರಿದರಿದು ನೋಡುವ ಶಕ್ತಿ. ತಾನಾರೆಂದು ತನ್ನ ಅರಿಯುವ ಶಕ್ತಿ . ತಾನು ಲಿಂಗ ಒಂದಾಗಿ ಕಾಣುವ ಶಕ್ತಿ ಗುರು ಶಿಷ್ಯರೊಂದಾಗಿ ಕಾಣುವ ಶಕ್ತಿ . ಸ್ವಾಮಿ ಸೇವಕರೊಂದಾಗಿ ಕಾಣುವ ಶಕ್ತಿ. ಗುರು ಲಿಂಗ ಜಂಗಮ ಈ ಮೂರೊಂದಾಗಿ ಕಾಣುವ ಶಕ್ತಿ ಜ್ಞಾನಶಕ್ತಿ.

ಮಂತ್ರ ಶಕ್ತಿ : ಕಿವಿಗೆ ಕೇಳದ ಮಂತ್ರ ಶಕ್ತಿ, ಸಕಲ ಮಂತ್ರಗಳ ಮೂಲವಾವುದು ? ಅದು ಮಂತ್ರ ಆ ಮಂತ್ರವೆ ಶಕ್ತಿ. ಶಕ್ತಿಯೆ ಮಂತ್ರ. ಪೂರ್ಣಮದಃ ಪೂರ್ಣಮಿದಂ ಆಗಿಹ ಮಂತ್ರ, ಅಖಂಡ ಮಂತ್ರ ಇದು ಮಂತ್ರಂಗಳ ಮಂತ್ರವಾದುದರಿಂದ ಮಂತ್ರಶಕ್ತಿ ಇದುವೆ ಶ್ರೋತೃವಿಂಗೆ ಶ್ರೋತೃವಾಗಿಹ ಶಕ್ತಿ ಇದು ಮಂತ್ರ ಶಕ್ತಿ.

ಆದಿ ಶಕ್ತಿ : ಇದು ಪಿಂಡಾಂಡ ಬ್ರಹ್ಮಾಂಡಗಳ ಆದಿಯಾದುದರಿಂದ ಆದಿ ಶಕ್ತಿ . ಸಕಲ ತೋರಿಕೆಗಳ ಮೂಲವು. ನರರ ಸುರರ ದೇವಗಣ ರುದ್ರಗಣರ ಮೂಲವು. ಇದು ಸೃಷ್ಠಿಯ ಮೂಲವು ಬ್ರಹ್ಮಾದಿಗಳ ಮೂಲವು ಆದುದರಿಂದ ಆದಿ ಶಕ್ತಿಯು.

ಪರಾಶಕ್ತಿ : ಈ ಶಕ್ತಿ ಅನಾದಿಯು. ಇವಳು ವೇದ ರೂಪಳು ಅಹುದು, ವೇದಾಂತ ರೂಪಳು ಅಹುದು, ಗಾಯತ್ರಿ ರೂಪಳು ಅಹುದು, ಮೇಲೆ ಗುರುವಿನ ಆಕಾಶವಾಣಿಯಾಗಿಹ ಪರಾಶಕ್ತಿ. ಇವಳ ಕೃಪೆಯಿಂದ ತತ್ವಜ್ಞಾನ ತಿಳಿಯಲು ಸರಳ ಸುಲಭವಾಗಿ ವೇದ್ಯವಾಗುವುದರಿಂದ ಪರಾಶಕ್ತಿ . ಹೀಗೆ ಷಡ್ವಿಧ ರೂಪದಲ್ಲಿ ಶಕ್ತಿಗಳೆಂಬ ನಿಬ್ಬಣಗಿತ್ತಿಯರು ಹೃದಯವೆಂಬ ಮನೆಯಲ್ಲಿ ಬಂದು, ಅವಿರಳ ವಿಟನ ಸಂಗ ಸಮರಸಕ್ಕೆ ಅನುಕೂಲ ಭಾವಂ ತಾಳಿ ಸುಜ್ಞಾನವೆಂಬುದು ಕೆಂಡದ ದಂಡೆ. ಸಮ್ಯಜ್ಞಾನವಾಗಿಹ ಕೆಂಡದ ದಂಡೆಯ ಮುಡಿದು ಸ್ವಯಸ್ವರೂಪದ ವಿಟನ ಸಮರಸಕ್ಕೆ ಸುಶೋಭೆಯನ್ನುಂಟು ಮಾಡುವುದು.

ಪ್ರಸನ್ನಮುಖದವರಾದುದು ದಂಡೆಯ ಮುಡಿದುಕೊಂಡು, ಚಿದ್‌ಬ್ರಹ್ಮಾಂಡವೆಂಬ ಅರಿಷಿಣ ಮಿಂದು, ಈ ಅರಿಷಿಣ ಮುತ್ತೈದೆಯರೆಲ್ಲರಿಗೂ ಒಳ್ಳೆ ಕಳೆಯನ್ನುಂಟು ಮಾಡುವ ಅರಿಷಣ . ಅರಿಷಿಣ ಹಚ್ಚಿಕೊಳ್ಳದ ಲಗ್ನ ಅದೇತರ ಲಗ್ನ? ಇಲ್ಲಿ ಚಿದ್ ಬ್ರಹ್ಮಾಂಡವೆಂಬ ಭಾವರೂಪ ಭಾವಿಯಾದುದೆ ಅರಿಷಣ. ಈ ಬ್ರಹ್ಮಾಂಡ ಗುಣಯುಕ್ತ ಬ್ರಹ್ಮ ಸೃಷ್ಠಿಯ ಬ್ರಹ್ಮಾಂಡವಲ್ಲ. ಇದು ಪರಬ್ರಹ್ಮಮಯವಾದ ಬ್ರಹ್ಮಾಂಡ. ಲಿಂಗಮಯವಾದ ಸರ್ವಾಂಗ ಲಿಂಗ. ಇದು ಚಿನ್ಮಯಾಂಗವೆಂಬ ಭಾವ ಭರಿತವಾದ ಅರಿಷಣವು ಹಚ್ಚಿಕೊಂಡುದು.

ಉರಿಯೆಂಬ ಹಚ್ಚಡದ ಹೊದಿಕೆಯಲ್ಲಿ ನಿಬ್ಬಣಗಿತ್ತಿಯರು ಒಪ್ಪ ಬರವ ಕಂಡುದು ನೋಡಿರೆ! ಸ್ವಯಂ ಪ್ರಕಾಶವೆಂಬ ಜ್ಞಾನರೂಪಿ ಉರಿ. ಇದು ಅರಿದರಿದು ನೋಡಿದಾಗ, ತನ್ನೊಳ ಕಾಣುವ ಉರಿ ತಾನೆ ಉರಿ. ಸ್ವಯಂ ಪ್ರಕಾಶವೆಂಬ ಹಚ್ಚಡದ ಹೊಂದಾಣಿಕೆಯೆ ಇಲ್ಲಿ ಸುಜ್ಞಾನೋದಯ. ಪರಪ್ರಕಾಶಕ್ಕೆ ಎಡೆಗೊಡದೆ ಸ್ವಯಂ ಪ್ರಕಾಶವ ಅಳವಡಿಸಿಕೊಂಡು , ನಿಬ್ಬಣಗಿತ್ತಿಯರಾಗಿಹ ಶಕ್ತಿಯು ಸತಿಯೆಂಬ ಶರಣನಲ್ಲಿ ಸಮರಸಭಾವ ಹೊಂದುವುದು.

ನೀರಲಡಿಗೆಯ ಮಾಡಿ,ವಾಯದ ಕೂಸಿಂಗೆ ಮಾಯ ಮದುವಣಿಗ ಸಂಗಸಂಯೋಗವಿಲ್ಲದೆ ಬಸುರಾಯಿತ್ತು: ಜ್ಞಾನದಿಂದ ಮನದ ಅಧೋಮುಖ ಕೆಡಿಸಿ, ಅರುವಿನ ಮನವ ಮಾಡಿ ಪುನಃ ಅರುವಿನ ಮನವ ಕೆಡಿಸಿ ಸುಮನ ಮಾಡುವಡೆ ನೀರಲಡಿಗೆಯ ಮಾಡಿದಂತೆ. ವಾಯದ ಕೂಸು ಇದು ಸೋಹಂ ಎಂದೆನ್ನುವ ಕೂಸು ಇದುವೆ ಶಬ್ದದಭಿಮಾನದಿಂದುಕ್ತವಾಗಿದೆ ಸೋಹಂದ ಅಭಿಮಾನದಿಂದುಕ್ತವಾಗಿದೆ.

ಇದುವೆ ಚಿದಹಮ್ಮುಳ್ಳದ್ದಾದುದರಿಂದ ಮಾಯದ ಮದುವಣಿಗನಾಗಿದೆ . ಸಂಗ ಸಂಯೋಗವಿಲ್ಲದ ಬಸುರಾಯಿತ್ತು:

ಸಂಗ ಸಂಯೋಗವಿಲ್ಲದ ಬಸುರಾದುದ ಅದನೆಂತು ಬಣ್ಣಿಸುವದು .ಸಂಗ ಸಂಯೋಗದಿಂದುಕ್ತವಾದ ಬಸುರು ಮಾನವನಿಗೆ ಸಹಜ ವಿದಿತವು. ಶರಣ ಸತಿ ಲಿಂಗಪತಿಯೆಂಬುದು ಸಂಗ ಸಮರಸವೆಂಬುದು ಬಹು ವಿಚಿತ್ರವು . ಘಟಾಕಾಶ, ಮಹಾಕಾಶ ,ಸಂಗ ಸಮರಸವು ಬಹು ವಿಚಿತ್ರವು. ಹಾಗೆ ಶರಣ ಸತಿ ಅವಿರಳ ವಿಟನೆಂಬ ಪತಿಯ ಸಂಗ ಸಮರಸ ಬಹು ವಿಚಿತ್ರವು . ಶರಣ ಲಿಂಗಾಂಗ ಸಮರಸ ಜ್ಞಾನಿ. ಲಿಂಗ ಅಂಗ ಕಾಣದ ಜ್ಞಾನಿ ಅಖಂಡ ಜ್ಞಾನಿ ಅನುಪಮ ಜ್ಞಾನಿ ಸಮತೆ ಸಯವಾದ ಜ್ಞಾನಿ . ಈ ಪರಮಜ್ಞಾನಕ್ಕೆ ನಿಶ್ಯಬ್ದಘನದಿರುವಿನ ಅರುವಾಗುವುಡೆ ಸಂಗ ಸಂಯೋಗವಿಲ್ಲದ ಬಸುರಾದುದು .

ಕೂಸೆದ್ದು ಕುಣಿದಾಡಿ ಸೂಲಗಿತ್ತಿಯ ನವಗ್ರಹಿಸಿತ್ತು ಗುಹೇಶ್ವರಾ: ಕೂಸು ಇದಾವ ಕೂಸು! ಈ ಕೂಸು ಸಂಗ ಸಂಯೋಗವಿಲ್ಲದೆ ಬಸುರಿನಿಂದ ಪ್ರಕಟವಾದ ಕೂಸು. ತನ್ನಿಂದ ತಾನೆ ಪ್ರಕಟವಾದ ಕೂಸು . ಇದು ಆರಾರ ಹಂಗಿಗೊಳಪಟ್ಟ ಕೂಸಲ್ಲ. ಇದು ತನ್ನ ಸ್ವಂತ ಸ್ವಮಹಿಮೆಯಲ್ಲಿ ತಾನೆ ತಾನಾಗಿಹ ಘನಕ್ಕೆ ಘನ. ಈ ಕೂಸೆದ್ದು ಕುಣಿದಾಡಿದುದು ಸೋಜಿಗ , ಕೂಸು ಕುಣಿದಾಡುವುದೆಂದರೆ ಸೋಜಿಗವಲ್ಲವೆ! ಕೂಸೆಂಬುದು ಮೌನ ಮುದ್ರೆಯ ಧರಿಸಿಹ ಕೂಸು . ಇದು ತನ್ನ ಸ್ವಮಹಿಮೆಯಲ್ಲಿ ತಾನೆ ತಾನಾಗಿ ಪ್ರಜ್ವಲಿಸುತ್ತಿಹುದೆ ಕೂಸು ಕುಣಿದಾಡಿದ ಲಕ್ಷಣ . ಇದುವೆ ಸ್ವಲೀಲಾಮಯವಾಗಿ ತನ್ನ ಸ್ವಸುಖದಲ್ಲಿ ಓಡಾಡಿ ಚಿತ್ ಶಕ್ತಿಯೆಂಬ ಸೂಲಗಿತ್ತಿಯೊಡನೆ ಸಾಮರಸ್ಯ ಪಡೆಯುವುದು.

ಗುಹೇಶ್ವರ ಒಬ್ಬ ಇಬ್ಬ ಮೂವ್ವರು ತ್ರಿದೇವತೆಗಳು ಬಲ್ಲರೆ ಆ ಲಿಂಗದ ಘನವನ್ನು : ಈ ಲಿಂಗ ಸಕೀಲ ಸಂಯೋಗ ರಹಸ್ಯವರಿಯುವದು ಬ್ರಹ್ಮಾದಿಗಳು ತಿಳಿಯುವರೆ ಎಂದು ಹೇಳಿಹರು .

87

ಸತ್ತಾತನೊಬ್ಬ ಹೊತ್ತಾತನೊಬ್ಬ
ಇವರಿಬ್ಬರನ್ನೂ ಒಯ್ದು ಸುಟ್ಟಾತನೊಬ್ಬ
ಮದುವಣಿಗನಾರೊ? ಮದುವಳಿಗೆ ಯಾರೊ?
ಮದುವೆಯ ನಡುವೆ ಮರಣ ವಡ್ಡ ಬಿದ್ದಿತ್ತು ಹಸೆಯಳಿಯದ
ಮುನ್ನ ಮದವಣಿಗನಳಿದ ಗುಹೇಶ್ವರಾ ನಿಮ್ಮ ಶರಣನೆಂದೂ ಅಳಿಯ. || 629 ||

ತಾತ್ಪರ್ಯ : ಸತ್ತಾತನೊಬ್ಬ ಹೊತ್ತಾತನೊಬ್ಬ, ಇವರಿಬ್ಬರನೂ ಒಯ್ದು ಸುಟ್ಟಾತನೊಬ್ಬ : ಸತ್ತಾತನೊಬ್ಬ ಇವರಾರು? ಶರಣಸತಿ ಲಿಂಗಪತಿ ಎಂಬ ಭಾವದವ ಈತ. ಸತ್ತಾತನೊಬ್ಬ ಹೊತ್ತಾತನೊಬ್ಬ ಈತ ಲಿಂಗ ಲಿಂಗ ಎಂಬ ಭಾವ ಹೊತ್ತಾತ . ಈತ ಲಿಂಗ ಲಿಂಗ ಎಂದು ಲಿಂಗಾರ್ಚನೆಯ ಭಾವ ಹೊತ್ತಾತ ಜಂಗಮ ಜಂಗಮ ಎಂಬ ಭಾವ ಹೊತ್ತಾತ . ಪ್ರಸಾದ ಪ್ರಸಾದ ಎಂಬ ಭಾವ ಹೊತ್ತಾತ . ಇವರಿಬ್ಬರನೂ ಒಯ್ದುಸುಟ್ಟಾತನೊಬ್ಬ. ಈತ ಲಿಂಗೈಕ್ಯ ಶರಣ . ಲಿಂಗೈಕ್ಯ ಶರಣನ ದೃಷ್ಠಿಯಲ್ಲಿ ಶರಣ ಸತಿ ಲಿಂಗ ಪತಿ ಎಂಬ ಭಾವವು ಪುಶಿಯು , ನಷ್ಟವು . ಲಿಂಗ ಲಿಂಗ ಎಂಬ ಭಾವವು ನಷ್ಟವು , ಜಂಗಮ ಜಂಗಮ ಎಂಬ ಭಾವವು ನಷ್ಟವು , ಪ್ರಸಾದ ಪ್ರಸಾದ ಎಂಬ ಭಾವವು ನಷ್ಟವು. ಭರಿತ ಭಾವವ ಹೊತ್ತಾತನೊಬ್ಬ ಈ ಭರಿತ ಭಾವವು ಪುಶಿ ನಷ್ಟವು . ಇದು ಕಾರಣ ಲಿಂಗೈಕ್ಯನು ಇವರಿಬ್ಬರನ್ನು ಒಯ್ದು ಸುಟ್ಟಾತ.

ಪ್ರಭುವಿನ ದೃಷ್ಠಿಯಲ್ಲಿ ಶರಣನೆಂದರೆ ಲಿಂಗೈಕ್ಯ. ಶರಣನೆ ಶರಣ , ಆತನೆ ಅಮರ ತತ್ವ

ಹೊಲಬನರಿತ ಶರಣ .ಸಾವ ಕಾಣದ ಸಾವನರಿಯದ ಶರಣ , ಉಳಿದವರ ಗಣನೆಗೆ ಇಲ್ಲಿ ಅವಕಾಶವಿಲ್ಲ.

ಶರಣ! ಸದ್ಯದ ಪರಸ್ಥಿಯಲ್ಲಿ ಮಾಯಿಕ ಬೋಗಕ್ಕೆ ಮೆಚ್ಚಿ, ಲೋಕ ವ್ಯವಹಾರವುಳ್ಳವನಾಗಿ ಭವಿಷ್ಯ ಹೇಳುವದು. ತಂತ್ರ ಯಂತ್ರಗಳ ರಚನೆ ಮಾಡಿ ವಶ್ಯಾದಿಗಳ ಮಾಡುತ್ತಿರುವನು . ಸಾಮಾನ್ಯ ಜನರುಗಳಲ್ಲಿ ತನ್ನ ಪ್ರತಿಷ್ಠೆ ಬೆಳೆಸಲು ಹಾಲು ಹಣ್ಣಿನ ಮೇಲೆ ಇದ್ದು ತಪಸ್ಸು ಮಾಡುವುದು, ಧ್ಯಾನಾದಿಗಳ ಮಾಡವುದು. ಆವುದೆ ಒಂದು ಮಂತ್ರದಿಂದ ಸಿದ್ಧಿಮಾಡಿಕೊಂಡು ಜನರಲ್ಲಿ ಅವತಾರ ಪುರುಷ ನೆನ್ನಿಸಿಕೊಳ್ಳುವಷ್ಟು ಆಡಂಬರ ಜೀವನ ವೃದ್ಧಿಯಾದಲ್ಲಿ ಶರಣ ತತ್ವ ಇದಾರಿಗೆ ಬೇಕಾದ ವಿಷಯವಾಗಿದೆ.

ಶರಣತತ್ವ ಅದು ಪರತತ್ವ , ದಿಟ ತತ್ವ .ಮಾತಿನ ಮಹಾಂತರಿಗೆ ಮೀರಿದ ಘನದಿರುವಿನ ಅರುವು. ನಿರಾಮಯ ನಿರಾಲಂಬ ನಿಶ್ಚಿಂತವಾಗಿಹ ಅಚಿಂತ್ಯಾತ್ಮ . ಇದಾರಿಗೂ ಸೇರದ ವಿಷಯ . ಇದೆಂಥ ವಿಚಿತ್ರ ಸಾಂಪ್ರದಾಯ! ಸುಖದ ಸುಖ ಬೇಡವಾಗಿದೆ,ದುಃಖವು ಬೇಕಾದಂತಾಯಿತಲ್ಲ!' ದುಃಖವು ಆರಾರಿಗೂ ಬೇಡವಾಗಿದೆ . ಬೇಡವಾಗಿದ್ದರೂ ಆರನ್ನು ಬಿಟ್ಟಿರುವುದಿಲ್ಲ. ಇದೆಂಥ ವಿಚಿತ್ರ ಅಲ್ಪ ಸುಖಕ್ಕೆ ಒಪ್ಪುವದಾಗಿದೆ . ಅಚ್ಚ ಸುಖಕ್ಕೆ ಒಪ್ಪದಾಗಿದೆ. ಸಟೆಗೆ ಬಹು ಪ್ರೀತಿಸುವನು, ದಿಟಕ್ಕೆ ಪ್ರೀತಿಸನು. ಅರಿದಿಹೆನೆನ್ನುವ ಗುರುವರ್ಗವೆ ಸಟೆಗೆ ಒಪ್ಪಿ ಜೊಳ್ಳಿನ ಸನ್ಮಾರ್ಗದ ದರ್ಶಿಕರಾದಲ್ಲಿ ಪರತತ್ವದ ಸನ್ಮಾರ್ಗದರ್ಶನವಾಗುವದದೆಂತು? ಕೃತ್ರಿಮಕ್ಕೆ ಒಪ್ಪಿಕೊಂಡಲ್ಲಿ ಸಹಜಕ್ಕೆ ಒಪ್ಪಿಕೊಳ್ಳುವದಾದರೂ ಅದೆಂದು! ಅಂಗ ಭೋಗೋಪ ಭೋಗಕ್ಕೆ ಒಪ್ಪಿಕೊಂಡ ಮತಿಮಹಾಂತರು ಸಾಕಷ್ಟು ಸಿಕ್ಕುವರು . ಲಿಂಗ ಭೋಗೋಪ ಭೋಗಿಗಳಾಗಿಹ ವರ್ಮವರಿತವರು ಸಿಕ್ಕುವದು ವಿರಳ ಲಿಂಗ ಭೋಗೋಪ ಭೋಗಿಗಳೆಂದರೆ ಪೂಜಾ ಲಿಂಗಕ್ಕೆ ಬೋನವ ಹಿಡಿದು,ಲಿಂಗಕ್ಕರ್ಪಿಸಿಹ ಪ್ರಸಾದವೆಂದು ಸೇವಿಸುವವರು. ಇವರೆಂತು ಲಿಂಗ ಭೋಗೋಪ ಭೋಗಿಗಳಾಗುವರು ?ಇದು ಕಾರಣ ತನು ಮನ ಧನವೆಂಬುದು ಲಿಂಗದ ಸೊಮ್ಮಾಗಬೇಕು. ತನು ಗುರುಘನದ ತತ್ವದ್ದಾಗಿ ಬೆಳಗಬೇಕು. ಮನವು ವೇದ ವೇದಾಂತಗಳಿಗಸಾಧ್ಯವಾಗಿಹ, ಅನುಪಮ ಲಿಂಗದರಿವುಳ್ಳದ್ದಾಗಬೇಕು. ಧನವೆಂಬುದು ಪ್ರಾಣ ಈ ಪ್ರಾಣ ಲಿಂಗ ಒಂದಾಗಿರ್ದ ಜಂಗಮದರಿವುಳ್ಳ ಘನದಿರುವಾಗಬೇಕು. ಆಗ ಸರ್ವಾಂಗವೂ ನಿಶಬ್ದ ಬ್ರಹ್ಮದರುವಿನ ಅರುವುಳ್ಳದ್ದಾಗಿ ಪ್ರಜ್ವಲಿಸಬೇಕು. ಇದು ಗುರು ಲಿಂಗ ಜಂಗಮ ಮೂರೊಂದಾದ ಘನವು. ತನ್ನ ಸಯ ನಿಲವು ಶರಣ ಮೂರೊಂದಾದ ಘನಕ್ಕೆ ಘನ .ಈ ಮಹಾಂತನ ದಿವ್ಯದೃಷ್ಠಿಯಲ್ಲಿ ಶರಣ ಸತಿ ಲಿಂಗಪತಿ ಎಂಬ ಭಾವುಕತನ ಸರಿ ಎನಿಸದು .

ಶರಣಸತಿ ಆರು ಗೊತ್ತೆ? ಲಿಂಗಾಂಗ ಸಮರಸ ಜ್ಞಾನದ ಆಸ್ತೀಕ. ಗುರು ಕರ ಸಂಜಾತ ತತ್ವ ಪ್ರೇಮಿ ಸದ್ಭಾವಿ. ಈ ಸದ್ಭಾವಿ ತ್ವಂ ಪದಕ್ಕೆ ಲಕ್ಷ್ಯವಾದ ಆತ್ಮನೆ. ತತ್ವದ ಲಕ್ಷ್ಯನು ತತ್ವದ ಲಕ್ಷ್ಯನೆ ತ್ವಂಪದ ಲಕ್ಷ್ಯನು. ಎಂಬ ಲಕ್ಷಣಾತ್ಮಕ , ಭಾವಿ ಈ ಭಾವಿ ವ್ಯಷ್ಟಿ ಸಮಷ್ಟಿ ಭಾವ ಸೇರದವನು. ವಿಷಮದೃಷ್ಠಿ ವಿಷಮಜ್ಞಾನ ವಿಷಮ ಭಾವ ಸೇರದವನು . ಅಂಗನು ಸಚ್ಚಿದಾನಂದ ಲಿಂಗನು ಸಚ್ಚಿದಾನಂದ ಎಂಬ ಅಭೇದ ಭಾವಿಯಾಗಿಹ ಸದ್ಭಾವಿ ಸತ್ಯವರಿತವನಲ್ಲ . ಅರಿಯದ ಕಾರಣ ಕಲ್ಪಿತನಾಗಿಹನು. ಅಕಲ್ಪಿತ ಘನವರಿಯನು. ಇಂಥ ಅಕಲ್ಪಿತ ಘನವರಿಯದ್ದರಿಂದ ಶರಣಸತಿ, ಲಿಂಗಪತಿ ಎಂಬುದು ಭಾವ ಕಲ್ಪಿತವು. ನೆನಹು ಕಲ್ಪಿತವು ಚಿಂತನ ಕಲ್ಪಿತವಾಗಿರುವಲ್ಲಿ ,ನಿಶ್ಚಿಂತತೆ ಹೇಗೆ ಸಾಧ್ಯ? ಭಾವವಳಿಯದೆ ಬಯಕೆ ಸವೆಯದೆ ಇದ್ದಲ್ಲಿ ಶರಣತ್ವ ಅಳವಡುವುದೆ? ಇದು ಕಾರಣ ಶರಣಸತಿ ಲಿಂಗಪತಿ ಎಂಬ ಭಾವುಕನಾಗಿ ಭಾವಕ್ಕಗವ್ಯುವಾಗಿಹ ತನ್ನನ್ನು ತಿಳಿಯದ್ದರಿಂದ ಸದ್ಭಾವಿ ಎನಿಸಿಕೊಂಡರೂ, ಅಮರತ್ವ ಹೊಲಬನರಿಯದ್ದರಿಂದ ತಾನು ಸಾವುಳ್ಳವನೆಂಬುದೆ ತನ್ನ ಅಂತರಂಗದಲ್ಲಿ ಹುದುಗಿಹುದರಿಂದ

ಸತ್ತಾತನೆಂದು ಹೇಳಿಹರು.

ಹೊತ್ತಾತನೊಬ್ಬ: ಈತನಾರು? ಅಚಲಿತ ಲಿಂಗ, ಇದು ಸಕಲ ಕಲ್ಪಿತವನ್ನೆ ಹೊತ್ತುದು, ಭಾವವ ಹೊತ್ತುದು. ನೆನಹು ನಿರ್ಣಯ ಹೊತ್ತುದು, ಪ್ರವೃತ್ತಿ ನಿವೃತ್ತಿ ಹೊತ್ತುದು, ತ್ಯಾಗಭಾವ ಭೋಗ ಭಾವ ಅವಿವೇಕ ಭಾವ ವಿವೇಕ ಭಾವ ಹೊತ್ತುದು, ತನು ಭಾವ ಹೊತ್ತುದು, ಅಹಂಭಾವ ಹೊತ್ತುದು, ನಿರಹಂಭಾವ ಹೊತ್ತುದು, ಜೀವ ಭಾವ ಅಂತರಾತ್ಮ ಭಾವ, ಪರಮಾತ್ಮ ಭಾವ ಹೊತ್ತುದು, ಮನು ಮುನಿಗಳ ತಪಸ್ವಿಗಳ ತಪರೂಪಿ ಭಾವ ಹೊತ್ತುದು. ಲಿಂಗಾರ್ಚಕರ ಲಿಂಗ ಲಿಂಗ ಎನ್ನುವ ಭಾವವ ಹೊತ್ತುದು ಏನಾಶ್ಚರ್ಯ. ತಾನು ಭಾವಕ್ಕಿಂಬುಕೊಡದ ಘನವಾಗಿ ಭಾವವ ಹೊತ್ತುದು ಆಶ್ಚರ್ಯವಲ್ಲವೆ? ಅಕಲ್ಪಿತ ಘನವಾಗಿ ಕಲ್ಪಿತಕ್ಕೆಡೆಗೊಡುವದು ಆಶ್ಚರ್ಯವಲ್ಲವೆ? ಕ್ಷರಾಕ್ಷರ ಮೀರಿದ ಘನವೆ ತಾನಾಗಿದ್ದು ಕ್ಷರಭಾವ ಅಕ್ಷರ ಭಾವಂಗಳ ಹೊತ್ತುದು ಆಶ್ಚರ್ಯವಲ್ಲವೆ? ಪೂಜ್ಯ ಪೂಜಕ ಭಾವಕ್ಕೆ ಮೀರಿದ ಘನವೆ ತಾನಿದ್ದು, ಲಿಂಗಾರ್ಚಕರಿಗೆ ಪೂಜ್ಯ ಪೂಜಕ ಭಾವಂಗಳಿಂದುಕ್ತನಾದುದು ಆಶ್ಚರ್ಯವಲ್ಲವೆ? ತಾನು ನಿರೂಪನಾಗಿ ಲಿಂಗಾರ್ಚಕರಿಗೆ ಕುರುಹಿನಿಂದುಕ್ತನಾಗಿ ಪೂಜೆಗೊಂಬುದು ಆಶ್ಚರ್ಯವಲ್ಲವೆ?

''ವರ್ಣವಿಲ್ಲದ ಲಿಂಗಕ್ಕೆ ರೂಪ ಪ್ರತಿಷ್ಠೆ ಮಾಡುವರು , ಪ್ರಳಯವಿಲ್ಲದ ಲಿಂಗಕ್ಕೆ ಪ್ರಾಣ ಪ್ರತಿಷ್ಠೆಯ ಮಾಡುವರು , ನುಡಿಯಬಾರದ ಲಿಂಗಕ್ಕೆ ಜಪ ಸ್ತೋತ್ರ ಪೂಜೆಯ ಮಾಡುವರು , ಮುಟ್ಟಬಾರದ ಲಿಂಗಕ್ಕೆ ಕೊಟ್ಟುಕೊಂಡಾಡಿಹೆವೆಂಬರು ಬೊಟ್ಟಿಡ ಲೆಡೆಯಿಲ್ಲದ ಲಿಂಗವ ಮುಟ್ಟಿ ಪೂಜಿಸಿಹೆನೆಂಬ ಭ್ರಷ್ಟರ ನೋಡಾ ಗುಹೇಶ್ವರಾ''

ಲಿಂಗಾರ್ಚಕರು ಲಿಂಗದ ಘನವರಿಯದ್ದರಿಂದ, ಲಿಂಗ ಲಿಂಗ ಎಂಬ ಭಾವ ಹೊತ್ತವರು. ನುಡಿಗೆಡೆಗೊಡದ ಘನಲಿಂಗಕ್ಕೆ ಲಿಂಗ ಲಿಂಗ ಎಂಬ ನುಡಿಯಿಂದ ಹೊತ್ತವರು. ಜಪಸ್ತೋತ್ರಗಳಿಂದ ಹೊತ್ತವರು ಆವಾವ ಭಾವ ಮುಟ್ಟಲಾರದ ಲಿಂಗಕ್ಕೆ ಕೊಟ್ಟು ಕೊಂಡಾಡಿಹೆವೆಂಬ ಭಾವವ ಹೊತ್ತವರು. ಅಚಲಿತ ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ ಘನ ಲಿಂಗವ ಮುಟ್ಟಿ ಪೂಜಿಸುವೆವೆಂಬ ಭಾವ ಹೊತ್ತವರು. ಇವರು ಭ್ರಮಿತರು ಸತ್ತಾತನೊಬ್ಬ ಹೊತ್ತಾತನೊಬ್ಬ ಇವರಿಬ್ಬರನು ಒಯ್ದು ಸುಟ್ಟಾತನಾರು? ಈತನೆ ಲಿಂಗೈಕ್ಯ ಶರಣ ಅಚ್ಚ ಶರಣ. ಬಚ್ಚಬರಿಯ ಶರಣ.

ಪ್ರಭುದೇವ ಈ ಶರಣ ನಿಲುವಿಂಗೆ ಒಪ್ಪಿಕೊಂಡಿದ್ದಾನೆ, ಈತನು ಶರಣಸತಿ ಲಿಂಗಪತಿ ಎಂಬ ಭಾವದವನನ್ನು ಲಿಂಗ ಲಿಂಗ ಎನ್ನುವನನ್ನು ಇವರಿಬ್ಬರನ್ನು ಒಯ್ದುಸುಟ್ಟ ನಿರುಪಮ ಮಹಾಂತ ಲಿಂಗೈಕ್ಯ ಮಹಾಂತ ಉಪಮೆಗೊಳಪಟ್ಟವನೆ?

ಭಾವರೂಪ ಭ್ರಮಕ್ಕೊಳಪಟ್ಟವನು ಶರಣನೆ : ನೆನಹು ನಿರ್ಣಯದಿಂದುಕ್ತನಾದವನು ಶರಣನೆ? ಮತಿಗೊಳಪಟ್ಟವನು ಶರಣನೆ? ಜೀವ ಪರಮರ್ಯೆಕ್ಯ ಸಂದಾನವುಳ್ಳವನು ಶರಣನೆ? ತತ್ವ ಅತತ್ವವೆಂಬ ವಿಭಾಗದೃಷ್ಠಿಯುಳ್ಳವನು ಶರಣನೆ? ಆನು ಅರಿದೆ ಮರೆದೆನೆನ್ನುವವನು ಶರಣನೆ? ಅಣೋರಣಿಯಾನ್ ಮಹತೋ ಮಹಿಯಾನ್ ಎಂಬ ಭಾವಿಕನು ಶರಣನೆ? ಅಂತರ್ಮುಖಿ ಎಂಬ ವಿಚಾರಮುಖಿಯು ಶರಣನೆ? ಪುಣ್ಯ ಪಾಪ, ಸ್ವರ್ಗ ನರಕ, ಬಂಧ ಮೋಕ್ಷವೆಂಬ ದ್ವಂದ್ವವ ಕಲ್ಪಿಸುವವನು ಶರಣನೆ? ನಿತ್ಯ ಅನಿತ್ಯವೆಂದರಸುವವನು ಶರಣನೆ? ಅಂಗ ಲಿಂಗವೆಂದರಸುವವನು ಶರಣನೆ? ನಾಹಂ ಎನ್ನುವವನು ಶರಣನೆ? ಕೋಹಂ ಎನ್ನುವವನು ಶರಣನೆ? ಸೋಹಂ ಚಿದಹಮ್ಮ ಎನ್ನುವವನು ಶರಣನೆ? ಇವನು ಲಿಂಗೈಕ್ಯ ಶರಣನಾಗಲಾರ.

ಶರಣ ನಿರುಪಮನಾದುದರಿಂದ ಕಲ್ಪಿತ ಕಾಣನು. ಶರಣಸತಿ ಲಿಂಗಪತಿ ಎಂಬ ಭಾವವು ಕಲ್ಪಿತವು. ಲಿಂಗವು ಅಕಲ್ಪಿತವೆಂಬುದು ಕಲ್ಪಿತವು. ಇವೆರಡನ್ನು ಮೀರಿದ ಘನದಿರುವು ತನ್ನದಾದುದರಿಂದ ಶರಣನೆ ಸತಿ ಪತಿ ಭಾವವನ್ನು ಲಿಂಗವೆಂಬ ಅಕಲ್ಪಿತ ಭಾವವ ಒಯ್ದು ಸುಟ್ಟಾತನೊಬ್ಬನಾಗಿಹನು. ಇವೆರಡನ್ನು ಎಲ್ಲಿ ಒಯ್ದು ಸುಟ್ಟಾತ! ತನ್ನ ಅರಿಯದರುವುಳ್ಳ ನಿರಂಜನ ನಿಜ ಚಿದ್ರೂಪದಲ್ಲಿ ಒಯ್ದು ಸುಟ್ಟಾತ. ಈ ಮಹಾಂತನಲ್ಲಿ ಅರುವೆ ತಾನೆಂಬ ಮಮತೆ ಗಿಂಬಿಲ್ಲದಿರುವಾಗ ಭಾವಂಗಳಿಗೆ ಮಹತ್ವ ಮಾಡುವನೆಂತು? ನಿಜವರಿತವನ ದೃಷ್ಠಿಯಲ್ಲಿ ಸತಿ ಪತಿ ಭಾವವು ಕಾಣನು. ಇವೆರಡಕ್ಕೂ ಮುಖ್ಯತೆ ಕೊಡದ ಘನಮಹಿಮನಾದುದರಿಂದ ಮದುವಣಿಗನಾರೋ? ಮದುವಳಿಗೆ ಯಾರೋ? ಇದೊಂದು ಭಾವರೂಪ ಭ್ರಾಂತಿ. ಎಲ್ಲಿಯ ಮದುವಣಿಗ? ಎಲ್ಲಿಯ ಮದುಮಗಳು? ಇಲ್ಲದುದಕ್ಕೆ ಇಂಬುಕೊಡಲೇತಕ್ಕೆ ಇಲ್ಲದುದಕ್ಕೆ ಸಂಗ ಸಂಬಂಧವಾದರೂ ಕಲ್ಪಿಸಬಹುದೆ? ಇದ್ದ ತನ್ನ ನಿಜವ ತಿಳಿಯದ್ದರಿಂದ ಇಲ್ಲದುದು ಇದ್ದಂತಾಯಿತ್ತು. ಇದ್ದ ತನ್ನನ್ನು ಅರಿಯುವುಡೆ ಎಲ್ಲಿಯ ಶರಣಸತಿ? ಎಲ್ಲಿಯ ಲಿಂಗ ಪತಿ? ಅಖಂಡಿತದೊಳ್ ಖಂಡಿತವ ಕಾಣಲುಂಟೆ? ಅನುಪಮದೊಳ್ ಉಪಮೆಯುಂಟೆ? ನಿಃಶಬ್ದ ಬ್ರಹ್ಮವದು ಉಸುರಿದರದಕ್ಕದೆ ಕೊರತೆ, ಎಲ್ಲಿಯವರೆಗೆ ಕಲ್ಪಿತದ ಸುಳಿಯಲ್ಲಿ ಸಿಕ್ಕುಕೊಂಡಿಹನು ಅಲ್ಲಿಯವರೆಗೆ ಮರಣ ಅಡ್ಡ ಬಿದ್ದಿದೆ. ತಾನಾರೆಂದು ಅರಿವುಡೆ ಮದುವಣಿಗನೆಂಬ ಅಳಿಯ ಇಲ್ಲದಾದನು. ತಾನೊಂದೆ ನಿರಂತರಿದ್ದವನು ಎಂಬುದು ತನ್ನಿಂದ ತನಗೆ ವೇದ್ಯವು.

88

ಪಾದವಿಲ್ಲದ ಗುರುವಿಂಗೆ ತಲೆಯಿಲ್ಲದ ಶಿಷ್ಯನು
ಅನಾಚಾರಿ ಗುರುವಿಂಗೆ ವ್ರತಗೇಡಿ ಶಿಷ್ಯನು
ಈ ಗುರು ಶಿಷ್ಯರಿಬ್ಬರೂ ಸತ್ತ ಸಾವ ನಿಮ್ಮಲ್ಲಿ ಅರಸುವೆ ಗುಹೇಶ್ವರಾ. **॥ 630 ॥**

ತಾತ್ಪರ್ಯ : ಪಾದವಿಲ್ಲದ ಗುರುವಿಂಗೆ ತಲೆಯಿಲ್ಲದ ಶಿಷ್ಯನು : ಇವನೆಂಥ ಗುರು? ಇವನೆಂಥ ಶಿಷ್ಯ? ಇವರೀರ್ವರದೆಂಥ ಗುರು ಶಿಷ್ಯರ ಸಂಪ್ರದಾಯ. ಅನಾಚಾರಿ ಗುರುವಿಂಗೆ ವ್ರತಗೇಡಿ ಶಿಷ್ಯನು ಇದೆಂಥ ಬೆಡಗು! ಇದೆಂಥ ನಿಯಮ! ಈ ಸಂಪ್ರದಾಯ ಬೆಡಗು ನಿಯಮ ಇದಾರಿಗೆ ಒಪ್ಪುವದು?

ಆಧುನಿಕ ಸಮಯದಲ್ಲಿ ಕೃಪಾ ಆಶೀರ್ವಾದ ಮಾಡುವ ಗುರುವರ್ಗವೆ ಬಹಳವಾಗಿದೆ . ಶಿಷ್ಯರು ಬೇಡಿದ್ದನ್ನೀವ , ಕೃಪೆ ಆಶೀರ್ವಾದವನ್ನ ಆ ಶಿವ ಪರಮಾತ್ಮರಿಂದ ಇವರುಗಳು ವರ ಪಡೆದ ಕಂಟ್ರಾಕ್ಟರುಗಳೆ ಆಗಿಹರು. ಖಾಸಾ ಲಿಂಗಯ್ಯನಿಂದ ಹೊರಬಂದ ಎಜನ್ಸಿಗಳೆ ಹೊಲ ಬೆಳೆಯಲಿ. ಸಂಪತ್ತು ವೃದ್ಧಿಯಾಗಲಿ, ಹೆಂಡತಿ ಗರ್ಭವತಿಯಾಗಲಿ, ಮಕ್ಕಳು ಸುಖರೂಪವಾಗಿ ಬೆಳೆಯಲಿ , ಹಿರಿಯರು ಸತಿ ಪತಿಗಳು ಆರೋಗ್ಯದಿಂದ ಇರಲಿ, ಅಧಿಕ ಆಯುಷ್ಯವಂತರಾಗಲಿ, ಲೋಕದಲ್ಲಿ ಅಧಿ ಕಾರ ಪದವಿಗಳಲ್ಲಿರಲಿ ಇವರ ಕೃಪಾ ಇವರದೆ ಆಶೀರ್ವಾದ ಮುಖ್ಯವಾದುದು ಎನ್ನುವಷ್ಟು ಮಾನವನ ಮತಿಯಾಗಿದೆ.

''ಇಳೆ ನಿಮ್ಮದಾನ, ಬೆಳೆ ನಿಮ್ಮದಾನ , ಸುಳಿದು ಬೀಸುವ ಗಾಳಿ ನಿಮ್ಮದಾನ, ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳ ನೇನೆಂಬೆ ರಾಮನಾಥ'' ''ಕಾಯ ನಿಮ್ಮದಾನ,ಜೀವ ನಿಮ್ಮದಾನ,ಕಾಯ ಜೀವವುಳಡೆ ನಿಮ್ಮ ನೆನೆಯದವ ನಾಯಿಗಿಂತ ಕಷ್ಟ ಕಾಣಾ ರಾಮನಾಥ''

ಈಶ್ವರ ಜಗತ್ತಿನಲ್ಲಿ , ಈಶ್ವರನ ಕೃಪೆಯ ಘನವ ಮರೆತು, ಕಲ್ಪಿತ ಜೀವರುಗಳ ಹೊಗಳುವದು ಜ್ಞಾನ ವಾನ ಜನ್ಮದ ಲಕ್ಷಣವಲ್ಲ. ಕಾಯ ಅದಾರದು ? ಜೀವ ಅದಾರದು? ಹಗಲು ಅದಾರದು ? ರಾತ್ರಿ ಅದಾರದು ? ಸುಳಿದು ಬೀಸುವ ಗಾಳಿ ಅದಾರದು? ಆ ಘನ ಲಿಂಗದ ಕೃಪೆಯಿಲ್ಲದಿರೆ ಕ್ಷಣ

ಮಾತ್ರದಲ್ಲಿ ನಷ್ಟವಾಗುವ ಈ ತೋರಿಕೆ ರೂಪ ಬ್ರಹ್ಮಾಂಡವಾಗಲಿ ಪಿಂಡಾಂಡವಾಗಲಿ ಲಿಂಗದ್ದಲ್ಲದೆ ಅನ್ಯರದು ಆರದು ಇಲ್ಲ ಇದ್ದ ಲಿಂಗಯ್ಯನ ಕೃಪೆ ಮರತಿದೆ. ಇಲ್ಲದ ಮಾಯಿಕದ ಹಗರಣ ನಡದಿದೆ ಇದು ಬಹು ವಿಚಿತ್ರವು.

ಅರಿತ ಗುರುವರ್ಗದ ವಿರುದ್ಧ ಆಚಾರವ ವರ್ತಿಸಲು ಮುಂದಾದರೆ, ಲೋಕದಲ್ಲಿ ಮಾನವನ ಗತಿಯೇನು? ಇಲ್ಲದ್ದನ್ನು ಕಾಣುವವನನ್ನು ಗುರು ಎನಬೇಕೆ? ಅರಿತವ ನೆನಬೇಕೆ? ಮಹಾಂತ ನೆನಬೇಕೆ? ಸದ್ಯದ ಸಮಯ ಹಗಲಿನಲ್ಲಿ ಕತ್ತಲೆ ಕಂಡಂತಾಗಿದೆ. ಮಹಾಂತರ ಮಹಾನುಭವ ಎತ್ತ ? ಇವರುಗಳ ಕೃಪಾಶಿರ್ವಾದ ವೆತ್ತ ? '' ಆರು ಕೋಟಿ ಬ್ರಹ್ಮರು ಮಡಿವಲ್ಲಿ ನಾರಾಯಣಂಗೊಂದು ದಿನವಾಯಿತ್ತು. ನಾರಾಯಣರೊಂದು ಕೋಟಿ ಮಡಿವಲ್ಲಿ ರುದ್ರನ ಕಣ್ಣಿವೆ ಹಳಚಿತ್ತು. ಹಲವು ರುದ್ರಾವತಾರ ಅಳಿದಲ್ಲಿ ನಮ್ಮ ಕೂಡಲ ಸಂಗಮದೇವ ಏನೊಂದು ಅರಿಯದೆ ಇದ್ದನು ಎಂದು ಬಿತ್ತರಿಸಿದ ಬಸವ ಪ್ರಭುವಿಗೆ , ಕೋಟಿ ಬ್ರಹ್ಮ ಒಂದು ಕೋಟಿ ನಾರಾಯಣ ಹಲವು ರುದ್ರಾವತಾರ ಇವರಾರ ಘನವ ಕಾಣದೆ, ಕೂಡಲಸಂಗಯ್ಯನ ಕಂಡ. ಈ ಮಹಾಂತನ ಅರಿತ ದಿವ್ಯ ದೃಷ್ಟಿ ಎತ್ತ. ಈಗಿನ ವಿರತಿ, ಶಿವಯೋಗಿ ಗುರುವರ್ಗದವರಿಗೆ ಕೇವಲ ವ್ಯವಹಾರಿಕ ವರ್ತನೆಯಿಂದುಕ್ತರಾದ ಅಭ್ಯಾಸ ಜೀವರುಗಳು ಇವರು. ರಾಜಕಾರಣಿಗಳೆ ಇರಲಿ. ಅಧಿಕಾಧಿಕ ಪದವಿಗಳಿಂದುಕ್ತರಾಗಿಹ ಅಧಿಕಾರಿಗಳಿಗೆ, ಕೃಪಾಶಿರ್ವಾದ ಮಾಡುವ ಅಭಿನಯಕ್ಕೇನೆನ್ನಬೇಕು,ವ್ಯವಹಾರ ಇವರಿಗೆ ಘನವಾಯಿತೆ? ಪುರುಷಾರ್ಥ ದೂರಾಯಿತೆ? ಭ್ರಾಂತಿಯ ದೃಷ್ಟಿಯೆ ಪ್ರಬಲವಾಯಿತೆ? ಬ್ರಹ್ಮ ದೃಷ್ಟಿ ನಶಿಸಿತೆ? ಇವರದೆಂಥ ವಿರತಿ, ಇವರದೆಂಥ ಶಿವಯೋಗತ್ವ. ಇವರದೆಂಥ ಪರಮಾರ್ಥದೃಷ್ಟಿ, ವಿರತಿಯಾದ ಘನವಂತ ತನ್ನ ಭಕ್ತರಿಗೆ ಹೇಗೆ ವಿಷಯಾಸಕ್ತಿ ಹುಟ್ಟಿಸಿದನು. ತಾಯಿಯೆ ಕೂತು ಕೂಸಿಂಗೆ ವಿಷವ ಕುಡಿಸಿದಳೆ? ತಾನೆ ಕೂತು, ಯಮನಿಗೆ ಬರಲು ಆಮಂತ್ರಣವ ಕಳಿಸಿದಳೆ? ಶಿವಯೋಗಿ ಯಾದವನು ಅಂಗಭೋಗೋಪ ಭೋಗಿಗಳ ಮಾಡಲು, ಉದ್ಯುಕ್ತನಾದನೆ? ಲಿಂಗಭೋಗೋಪ ಭೋಗದಿಂದ ಸರ್ವಾಂಗ ಶುದ್ಧ ಮಾಡುವ ಕಾರ್ಯ ರೂಪಿ. ಜ್ಞಾನದಾಸೋಹವ ಕೈ ಬಿಟ್ಟನೆ? ಇದೆಂಥ ವಿಚಿತ್ರ ಯುಗದ ರೀತಿ. ಹೀಗಾಗಿ ಲೋಕದಲ್ಲಿ ಬಿನ್ನಜ್ಞಾನ ಅತಿಯಾಗಿ ಮಾನವರೆಲ್ಲರು ಅಸುರೀ ಕಾರ್ಯವ ಗೈಯಲು ಸಹಜವಾಗಿದೆಯಲ್ಲ, ಈ ವಿಪರೀತಿ ಬುದ್ಧಿ ಮಾನವರಿಗೆ ಸುಖವಾದುದಲ್ಲ ನಿಂದನೀಯವಾದುದು.

ಪುರುಷಾರ್ಥ ಆರಿಗೂ ಬೇಡವಾಗಿದೆಯಲ್ಲ,ಇದೆಂಥ ಕಲಿಯುಗದ ಅವನತಿ? ಈ ಅವನತಿ ಸಮಯದಲ್ಲಿ ಪ್ರಭುವಿನ ಅಧ್ಯಾತ್ಮ ಜ್ಞಾನವುಳ್ಳ,ಮಹಾದರುವುಳ್ಳ ಗುರು ಶಿಷ್ಯ ಸಂಪ್ರಾದಯ ಅದಾರಿಗೆ ಬೇಕಾಗಬೇಕು? ಇದಲ್ಲದೆ ಆಧ್ಯಾತ್ಮ ಜ್ಞಾನ ಸಂಪ್ರದಾಯ ವಿದ್ದರೂ ಅಕ್ಷರ ಅಭ್ಯಾಸ ಮಾಡಿದ ಗುರುವರ್ಗವೆ ಬಹಳವಾಗಿದೆ. ಶಿಷ್ಯರಿಗೆ ತುಸು ಆಧ್ಯಾತ್ಮ ಕಡೆ ಲಕ್ಷ್ಯವಿದ್ದರೆ ಸಾಕು. ಅವರಿಗೆ ಆರ್ಥಿಕ ಸಂಪತ್ತು ಚೆನ್ನಾಗಿದ್ದರೆ ಅವನೆ ತೀವ್ರ ಮುಮುಕ್ಷು, ಅವನೆ ಉತ್ತಮ ಜಿಜ್ಞಾಸು. ಎಂದು ಅವರಿಗೆ ಅನುಗ್ರಹಿಸುವುದು. ಇದೊಂದು ಸಮ್ಮೇಳನವೆ ಆಗಿದೆ. ಈ ರೀತಿ ಹೃದಯಂಗಳು ಪರಮಾರ್ಥದ ಪರಿಣಾಮವ ಕಂಡುಕೊಳ್ಳಬಹುದೆ?

ಶ್ರೀ ಗುರು ಎಂದಲ್ಲಿ ಶಾಸ್ತ್ರಂಗಳ ಚೆನ್ನಾಗಿ ಬಿಡಿಸುತ್ತಿರಬೇಕು. ಸಭೆಗೆ ತನ್ನ ಶಬ್ದ ಸಂಭ್ರಮದಿಂದ ಸರ್ವರ ಹೃದಯಗಳನ್ನು ಶಬ್ದ ಜಾಲದಿಂದ ಆಕರ್ಷಿಸುವಷ್ಟು ವಾಚಾಳಿಗಳು ಇದ್ದರೆ ,ಅವರೆ ಪಾದವಿಲ್ಲದ ಗುರುಗಳಾಗಿದ್ದಾರೆ.ಅಂಥವರಿಗೆ ಶರಣು ಹೋದವರೆ ತಲೆಯಿಲ್ಲದ ಶಿಷ್ಯರಾಗುವ ಶಿಷ್ಯ ಗುರು ಸಂಪ್ರದಾಯವಾಗಿದೆ. ಈ ಸಂಖ್ಯೆಯೆ ಬಹುವಾಗಿರುವಲ್ಲಿ ನಿಜವಾದ ಪ್ರಭುವಿನ ಆಧ್ಯಾತ್ಮ

ನಿಲಯ ಆದಾರಿಗೆ ಬೇಕಾಗಿದೆ.

''ಒಂದರ ಮೋರೆಯ ನೊಂದು ಮೂಸಿನೋಡಿ ಮತ್ತೊಚ್ಚಿ ಹೊತ್ತಿಂಗೆ ಕಚ್ಚೆಯಾಡಿ ಹೋದಂತಾಯಿತ್ತು ನೋಡಿರೆ ಕಲಿಯುಗದೊಳಗಣ ಮೇಳಾಪವ, ಗುರುವೆಂಬಾತ ಶಿಷ್ಯನಂತುವ ನರಿಯ, ಶಿಷ್ಯನೆಂಬಾತ ಗುರುವಿನಂತುವ ನರಿಯ, ಭಕ್ತನೆಂಬಾತ ಜಂಗಮನಂತುವ ನರಿಯ, ಜಂಗಮವೆಂಬಾತ ಭಕ್ತನಂತುವ ನರಿಯ ,(ಶಿಷ್ಯನೆಂಬಾತ) ಶಿಷ್ಯ ಶಿಷ್ಯರಲ್ಲಿ ಸಮವಿಲ್ಲ, ಗುರು ಗುರುವಿನಲ್ಲಿಸಮವಿಲ್ಲ, ಭಕ್ತ ಭಕ್ತರಲ್ಲಿ ಸಮವಿಲ್ಲ, ಜಂಗಮ ಜಂಗಮರಲ್ಲಿ ಸಮವಿಲ್ಲ, ಇದು ಕಾರಣ ಕಲಿಯುಗದಲ್ಲಿ ಉಪದೇಶ ಮಾಡುವ ಕಾಳಗುರಿಕೆಯ ಮಕ್ಕಳನೇನೆಂಬೆ ಗುಹೇಶ್ವರಾ''.

ಸಮತೆ ಸಯವಾಗುವದು ದೂರಾಯಿತೆ? ಇದೆಂಥ ಗುರುಶಿಷ್ಯನ ಸಂಪ್ರದಾಯ? ಇದೆಂಥ ಭಕ್ತ ಜಂಗಮ ನಿಲವು, ಉಪಮೆ ನಿಜದಿರುವಾಯಿತೆ? ಅಖಂಡ ದೃಷ್ಠಿಯಿಂದ ದೂರಾದರೆ? ಪ್ರಮಾಣಂಗೊಳಪಟ್ಟರೆ? ಇವರು ಬಹಿರ್ ದೃಷ್ಠಿಯುಳ್ಳವರು. ಈಗಿನ ಸಮಯದಲ್ಲಿ ನುಡಿಯಲ್ಲಿ ಸಮತ್ವ ನಡೆಯಲ್ಲಿ ವಿಷಮತ್ವ ಹೀಗಾದಲ್ಲಿ ತತ್ವದೃಷ್ಠಿ ಹೇಗೆ ಸಾಧ್ಯ ?

ಗುರುವರ್ಗದವರಿಗೂ ಸಮನಿಲವು ಅವಶ್ಯಕವಾದುದು. ಶಿಷ್ಯರಿಗೂ ಸಮ ನಿಲವು ಅವಶ್ಯಕವಾದುದು. ಭಕ್ತ ಜಂಗಮರಿಗೂ ಅವಶ್ಯಕವಾದುದು. ಸಮವೆಂಬುದು ಕೂಟಸ್ಥನ ನಿರಂಜನವಾಗಿಹ ನಿಜಚಿದ್ರೂಪಿ ಆರಾರಿಗೂ ಈ ಪರಮಜ್ಞಾನ ಬೇಡವಾಯಿತೆ? ಪಾದವುಳ್ಳ ಗುರು ತಲೆವುಳ್ಳ ಶಿಷ್ಯ ಕೃಪೆ ಮಾಡುವ ಗುರು, ಕೃಪೆ ಪಡೆಯುವ ಶಿಷ್ಯ, ಅನುಗ್ರಹ ಕೊಡುವ ಗುರು ಪಡೆಯುವ ಶಿಷ್ಯ. ಇವರ ಸಮ್ಮೇಳನವೆ ಸಮ್ಮೇಳ. ಶಿಷ್ಯನ ಬಂಧನ ಗುರುವಿನ ಮೋಕ್ಷ. ಒಬ್ಬನು ಭ್ರಾಂತ ಇನ್ನೊಬ್ಬನು ನಿಭ್ರಾಂತ. ಹಗಲು ರಾತ್ರಿಯ ಸಮ್ಮೇಳನ ಇಂಥ ಮತಿಗತಿಯುಳ್ಳ ಗುರುಶಿಷ್ಯತ್ವಕ್ಕೆ ಪಾದವಿಲ್ಲದ ಗುರು, ತಲೆಯಿಲ್ಲದ ಶಿಷ್ಯ , ಇವರೀರ್ವರ ರಹಸ್ಯ ಅದೆಂತು ವಿದಿತವಾಗಬೇಕು? ಪ್ರಭುದೇವರ ಸಾಹಿತ್ಯ ಈಗಿನ ಆಧ್ಯಾತ್ಮರುಗಳಿಗೆ ತಿಳಿಯಲೊಲ್ಲದಾಗಿದೆ.

ಪಾದವಿಲ್ಲದ ಗುರುವಿಂಗೆ ತಲೆಯಿಲ್ಲದ ಶಿಷ್ಯನು , ಪಾದವಿದ್ದ ಗುರುವರನಾಗಿದ್ದರೆ ಕೃಪಾ ಆಶೀರ್ವಾದ ಮಾಡುತ್ತಿದ್ದನು. ತಲೆವುಳ್ಳ ಶಿಷ್ಯನಾಗಿದ್ದಲ್ಲಿ ಅರ್ಪಿತ ಅರ್ಚನೆ ಮಾಡುತ್ತಿದ್ದನು ಕೃಪೆ ಅನುಗ್ರಹ ಪಡೆಯುತ್ತಿದ್ದನು . ಒಬ್ಬನಿಗೆ ಪಾದವಿಲ್ಲ ಇನ್ನೊಬ್ಬನಿಗೆ ತಲೆಯಿಲ್ಲ . ಭಿನ್ನಜ್ಞಾನ ನಷ್ಟವಾದುದರಿಂದ ಗುರುವಿಂಗೆ ಪಾದವಿಲ್ಲ . ಅಹಮಿಲ್ಲದ ಶಿಷ್ಯನಾದುದರಿಂದ ತಲೆಯಿಲ್ಲದ ಶಿಷ್ಯ . ಅಖಂಡಿತ ಘನ ಪೂರ್ಣಪ್ಪ ತನ್ನಿರುವೆ ಅರುವೆಂದರಿದ ಮಹಾಂತ ಪಾದವಿಲ್ಲದ ಗುರು ಕಲ್ಪಿತ ಪುರುಷ ನನ್ನೆ ಕಾಣದ ಗುರು ಪಾದವಿಲ್ಲದ ಗುರುವಾಗಿಹನು . ಮಲತ್ರಯವಿಲ್ಲದವನಾದುದರಿಂದ ತಲೆಯಿಲ್ಲದ ಶಿಷ್ಯನಾಗಿಹನು. ಅರಿತವನೆಂಬ ಚಿದಹಂ ಭಾವಿಯಲ್ಲ, ಮರತವನೆಂಬ ದೇಹೊಹಂ ಇಲ್ಲ, ಮರವರುವೆಂಬ ಭಿನ್ನ ಜ್ಞಾನ ನಷ್ಟವಾದ ಮೇಲೆ ಇನ್ನೇನಿನ್ನೆನು ಅಖಂಡ ಮೂರ್ತಿಗೆ ಭಾವ ಭರಿತ ಶಿಷ್ಯಂಗೆ ಇನ್ನೇನಿನ್ನೇನು ಅನುಪಮ ಮಹಿಮಂಗೆ ನೆನಹು ನಿರ್ಣಯ ಕಾಣದ ಶಿಷ್ಯಂಗೆ ಆವುದು ಮುಂದು, ಆವುದು ಹಿಂದು, ಆವುದು ಘನ, ಆವುದು ಕಿರಿದು, ನಿಸ್ಸೀಮವು ಸೀಮಿತವಾಗಬಹುದೆ? ಚಿದಾಕಾಶವು ಚಿದಾಭಾಸವ ಕಾಣಬಹುದೆ? ನಿರಂಜನ ನಿಜ ಚಿದ್ರೂಪ ತಾನಾದ ಘನ. ಅರುವು ತಾನೆಂಬ ಮಮತೆಗಿಂಬು ಕೊಡಬಹುದೆ? ಸೂರ್ಯನಿಗೆ ಕತ್ತಲೆ ಕಾಣಬಹುದೆ? ನಿಃಶಬ್ದ ಬ್ರಹ್ಮವು ಶಬ್ದ ಬ್ರಹ್ಮನ ಕಾಣಬಹುದೆ? ಅಹಮಿಲ್ಲದ ಚಿದ್ಘನವು ಪಾದವಿಲ್ಲದ ಗುರುವಾಗಿಹುದು. ಚಿದ್ಘನವ ಅರಿದರಿದು ನೋಡುವ ಹೃದಯ ತಲೆಯಿಲ್ಲದ ಶಿಷ್ಯನಾಗಿಹುದು. ಏನೆಂದೆನಲಿಲ್ಲದ ಅರುವು ಪಾದವಿಲ್ಲದ ಗುರುವು. ಅದನ್ನು ಅರಿದರಿದು ನೋಡಿದ ಅರುಹೃದಯ ತಲೆಯಿಲ್ಲದ ಶಿಷ್ಯನಾಗಿಹನು.

ಅನಾಚಾರಿ ಗುರುವಿಂಗೆ ವ್ರತಗೇಡಿ ಶಿಷ್ಯ. ಪ್ರಕೃತಿ ಕಂಡವನು ಆಚಾರವಂತನಾಗಿರುವುದು ಸಹಜ. ಪ್ರಕೃತಿ ಪುರುಷರ ಕಾಣದ ಪುರುಷೋತ್ತಮ ಅದಾವ ಆಚಾರ ಮಾಡುವುದು? ಕ್ಷರ ಮತಿಯುಳ್ಳವನಾದಲ್ಲಿ ಆಚಾರವಂತನಾಗಿರುವುದು ಸಹಜ.

ಕ್ಷರಾಕ್ಷರವೆಂಬುದಕ್ಕೂ ಮೀರಿದ ಘನವೆ ತನ್ನಿರುವೆಂದರಿದ ಅನುಪಮ , ಅವನಿಗಾವ ಆಚಾರ? ನಿಸ್ಸೀಮಂಗೆ ಅದಾವ ಸೀಮೆ. ಸೀಮೆಯೆ ನಿಸ್ಸೀಮವಾಗಿಹ ಘನವಂತಂಗೆ ಅದಾವ ಆಚಾರ ತರುವುದು! ಬೇಧಿಸಬಾರದ ಅಭೇದ್ಯ ಶಿವಂಗೆ ಅದಾವ ಆಚಾರ ಮಾಡುವುದು? ಅನಾಚಾರಿ ಗುರುವೆಂಬುದು ಭೇದಿಸಬಾರದಿಪ್ಪ ಅಭೇಧ್ಯ ಶಿವ. ಅದನ್ನು ಭೇದಿಸಿ ನೋಡ ಹೋಗಿ ತಾನು ಅಬೇಧ್ಯ ಶಿವನಾದುದು . ವ್ರತಗೇಡಿ ಶಿಷ್ಯ ಇವರೀರ್ವರು ಅನಿಯಮದ ಬೆಡಗುಳ್ಳವರು. ಅನುಪಮ ಗುರು, ಅಪ್ರತಿಮ ಶಿಷ್ಯ .

ಶಿಷ್ಯ ಅಹಂಭಾವಿಯಾದಲ್ಲಿ ಅದನ್ನು ಕೆಡಿಸಲು ವ್ರತವುಳ್ಳವನಾಗುತ್ತಿದ್ದ. ಕಲ್ಪಿತ ಪುರುಷನಾದಲ್ಲಿ ವ್ರತವುಳ್ಳವನಾಗುತ್ತಿದ್ದನು. ಒಡಲುಳ್ಳವನಾಗಿದ್ದಲ್ಲಿ ನೆನಹು ನಿರ್ಣಯದ ವ್ರತವುಳ್ಳನಾಗುತ್ತಿದ್ದನು. ಅಂಗವುಳ್ಳವಂಗೆ ವ್ರತವುಂಟು ನಿಯಮವುಂಟು, ಅಂಗವಿಲ್ಲದವಂಗೆ ಅದಾವ ವ್ರತವ ಮಾಡುವುದು? ತನು ನಷ್ಟ ಮನ ನಷ್ಟ, ನೆನಹು ನಷ್ಟ, ಭಾವ ನಷ್ಟ, ಜ್ಞಾನ ನಷ್ಟವಾದವವನು . ಅದಾವ ವ್ರತವ ಮಾಡುವುದು ? ಜ್ಞಾತೃ, ಜ್ಞಾನ ಜ್ಞೇಯವೆಂಬ ತ್ರಿಪುಟಿ ನಷ್ಟವಾದವನು ಅದಾವ ವ್ರತವ ಮಾಡುವುದು? ಅಂಗವಿಲ್ಲವಾಗಿ ಸಂಗ, ನಿಸ್ಸಂಗವಾಯಿತ್ತು . ನಿಸ್ಸಂಗಿಯೆ ವ್ರತಗೇಡಿ ಶಿಷ್ಯನೆಂದು ಹೇಳಿಹರು.

ಈ ಗುರು ಶಿಷ್ಯರಿಬ್ಬರು ಸತ್ತ ಸಾವ ನಿಮ್ಮಲ್ಲಿ ಅರಸುವೆ ಗುಹೇಶ್ವರಾ. ಗುರು ಶಿಷ್ಯರೀರ್ವರು ನಿನ್ನ ನಿರಂತರವಾಗಿರುವ ಪರತತ್ವದಲ್ಲಿ ಲೀಯವಾದವರು. ಅದುವೆ ಆದವರು, ಗುಹೇಶ್ವರನೆಂಬುದು ಭೇದಿಸಬಾರದಿಪ್ಪ ಭೇದ್ಯ ಶಿವ ಬೇಧಿಸಿ ಶಿವತತ್ವವಾಗಿಹ ಘನಲಿಂಗವು ದೇಹವೆಂಬ ಗುಹೆಯಲ್ಲಿರುವ ಈಶ್ವರ ರೂಪ ವೇದ ವೇದಾಂತಗಳಿಗಸಾಧ್ಯವಾಗಿಹ ಅನುಪಮ ಲಿಂಗವ ತಿಳಿಯ ಹೋಗಿ, ಸತ್ ಸ್ವರೂಪವೆ ಆಗಿಹರು ಎಂದು ಹೇಳಿಹರು.

89

ಅರಿದು ನೆನಯಲಿಲ್ಲ ಮರೆದು ಪೂಜಿಸಲಿಲ್ಲ, ತೆರಹಿಲ್ಲದ ಘನಕ್ಕೆ ಕುರುಹು ಮುನ್ನಿಲ್ಲ
ತನಗೆ ಗುರುವಿಲ್ಲ ಗುರುವಿಂಗೆ ತಾನಿಲ್ಲ ಗುರುವಿಗೆ ಶಿಷ್ಯನು
ಹೊಡ ವಡುವ ಕಾರಣ ಮುನ್ನಿಲ್ಲ ಬಯಲ
ಬೆಳೆಯಲಿಲ್ಲ ಬಿತ್ತಲಿಲ್ಲ ಬೆಳೆಯಲಿಲ್ಲ ಒಕ್ಕಲಿಲ್ಲ ತೂರಲಿಲ್ಲ
ಗುಹೇಶ್ವರ ಲಿಂಗಕ್ಕೆ ಕರುಹು ಮುನ್ನಿಲ್ಲ. **॥ 635 ॥**

ತಾತ್ಪರ್ಯ: ಅರಿದು ನೆನಯಲಿಲ್ಲ : ಏನನ್ನು ಅರಿದು ನೆನೆಯಲಿಲ್ಲ, ತನ್ನನ್ನು ತಾನಾರೆಂದು ಅರಿದು ತನ್ನ ನೆನೆಯಲಿಲ್ಲ. ತನಗೆ ಒಡಲಿಲ್ಲವಾದ್ದರಿಂದ ತನ್ನ ನೆನೆಯಲಿಲ್ಲ. ಗುರು ಗುರು ಎಂದು ನೆನೆಯಲಿಲ್ಲ, ಲಿಂಗ ಲಿಂಗ ಎಂದು ನೆನಯಲಿಲ್ಲ. ಜಂಗಮ ಜಂಗಮ ಎಂದು ನೆನಯಲಿಲ್ಲ, ಪ್ರಸಾದ ಪ್ರಸಾದ ಎಂದು ನೆನಯಲಿಲ್ಲ.

ಗುರು ಶಿಷ್ಯರ ಸಂಬಂಧವನೇನೆಂದುಪಮಿಸುವೆನಯ್ಯ ಜ್ಯೋತಿಯಲೊದಗಿದ ಜ್ಯೋತಿ ನೋಡಾ. ದರ್ಪಣದೊಳಗಣ ಪ್ರತಿಬಿಂಬ ನೋಡಾ, ಸ್ಫಟಿಕದೊಳಗಿರಿಸಿದ ರತ್ನ ನೋಡಾ.

ಗುರುವೆಂಬುದು ಜ್ಯೋತಿ, ಉಪಮಿಸದ ಜ್ಯೋತಿಯ , ಲೊದಗಿದುದು ಜ್ಯೋತಿಯು, ಜ್ಯೋತಿಯದು ಜ್ಯೋತಿಯು , ಜ್ಯೋತಿಯಿಂದುದಯಿಸಿದುದು ಜ್ಯೋತಿಯು.

ದರ್ಪಣದೊಳಗಣ ಪ್ರತಿಬಿಂಬವು, ಬಿಂಬವು ನೋಡಾ. ಬಿಂಬ ಬೇರೆ ಪ್ರತಿಬಿಂಬ ಬೇರೆ ಸ್ಫಟಿಕದ ಘಟದೊಳಗಿರಿಸಿದ ರತ್ನ ಬೇರೆ. ರತ್ನ ಬೇರೆಯೆ? ಗುರುವೆಂಬುದು ಬಿಂಬ ನೋಡಾ, ಆ ಮಹಾಂತನ ಮಹಾನುಭಾವವು ದರ್ಪಣ ನೋಡಾ. ಆ ಮಹಾನುಭಾವದಲ್ಲಿ ಪ್ರಕಟವಾದ ಪ್ರತಿಬಿಂಬವು ಶಿಷ್ಯ ನೋಡಾ. ಗುರು ಬೇರೆ ಶಿಷ್ಯ ಬೇರೆಯೆ? ಗುರು ಮೂರ್ತಿ ಸ್ಫಟಿಕದ ಘಟ. ಆ ಮಹಾಂತನ ಮಹದರುವು ಘಟದೊಳಗಿರಿಸಿದ ರತ್ನ ನೋಡಾ. ಅದನ್ನು ನೋಡಹೋಗಿ ತಾನು ನೋಡದ ನೋಟವಾದುದು ಸ್ಫಟಿಕದ ಘಟವು ನೋಡಾ . ತಾನು ಕೂಡದಗಲದ ಘನವಾದುದು ರತ್ನ ನೋಡಾ. ಗುರುವು ಸ್ಫಟಿಕದ ಘಟ ಶಿಷ್ಯನು ಸ್ಫಟಿಕದ ಘಟ ಸ್ಫಟಿಕದ ಘಟ ಗುರುದೇವನ ಅನರ್ಘ್ಯರತ್ನವು . ಶಿಷ್ಯನು ಅನರ್ಘ್ಯರತ್ನನು ಇದು ಕಾರಣ ಗುರುವೆಂಬ ಜ್ಯೋತಿ ಉಪಮಿಸದ ಜ್ಯೋತಿ. ಜ್ಯೋತಿ ಅದು ಜ್ಯೋತಿ, ತಾನು ಜ್ಯೋತಿ, ಜ್ಯೋತಿ ತಾನು ಎಂದೂ ಜ್ಯೋತಿ ಎಂದುದಲ್ಲ. ಜ್ಯೋತಿ ತಾನು ಎಂದೂ ನೆನದುದಲ್ಲ , ಗುರುವೆಂಬ ಜ್ಯೋತಿ ಅವರ್ಣಿಯ ಜ್ಯೋತಿ. ಅದು ಪ್ರಣವ ಜ್ಯೋತಿಯು ಆಗದುದು. ಬ್ರಹ್ಮ ಜ್ಯೋತಿ ಅಪರ ಜ್ಯೋತಿ ಪರಂಜ್ಯೋತಿ ಆಗದುದು. ಕಲ್ಪಿತದಿಂದುಕ್ತವಾದ ಜ್ಯೋತಿಯಾಗದ್ದರಿಂದ ಅದು ಏನೊಂದಾಗದ ಘನ ಜ್ಯೋತಿಯಾದುದರಿಂದ ಉಪಮಿಸದ ಜ್ಯೋತಿ ಎಂದು ಹೇಳಿದೆ. ಅದರಿಂದ ಲಭ್ಯವಾದ ಜ್ಞಾನ ಉಪಮಿಸದ ಜ್ಞಾನವು, ಅದನ್ನು ತಮ್ಮ ಹೃದಯ ಮಂಟಪದಲ್ಲಿ ಸ್ಥಾಪಿಸಿಕೊಂಡ ಅರು ಹೃದಯಂಗಳು ಉಪಮಿಸದ ಜ್ಯೋತಿ ನೋಡಾ. ಗುರುವಿನ ಪರಿ ವಿಪರೀತ ನೋಡಾ, ಭ್ರಮರ ಕೀಟ ನ್ಯಾಯದಂತೆ ಗುರು ತನ್ನ ನೆನೆವನ್ನ ಬರ ಎನ್ನನಾ ಗುರುವ ಮಾಡಿದ . ಇನ್ನು ಶಿಷ್ಯನಾಗಿ ಪೂಜಿಸುವವರಾರು ಹೇಳಾ ಗುಹೇಶ್ವರಾ.

ಗುರು ತನ್ನ ನೆನೆಹನ್ನ ಬರ ಎನ್ನನ್ನು ಏನೆಂದೆನಲಿಲ್ಲದ ಅರುವಾಗಿಹ ಘನದಿರುವ ಕರುಣಿಸಿದುದರಿಂದ ಗುರು ಶಿಷ್ಯ ಭಾವವೆ ಮರೆತು ಪೂಜಿಸಲಿಲ್ಲ .ತನ್ನಿಂದ ತನ್ನ ಅರಿದು ತಾನು ಏನೆಂದೆನಲಿಲ್ಲದ ಅರುವಿನರುವು .ನಿಶ್ಚಯವಾಗಿ , ಗುರು ತನ್ನಿರುವಾದುದರಿಂದ ಗುರು ಘನನನ್ನು ಗುರು ಗುರು ಎಂದು ನೆನಯಲಿಲ್ಲ.ಗುರು ಪದ ನಾ ನೀನೆಂಬುದಕ್ಕೆ ತೆರಹಿಲ್ಲದ ಘನವಾದುದು ಕಂಡು ನಾ ಶಿಷ್ಯನೆಂದು ನೀ ಗುರುವೆಂದು ನೆನಯುಲಿಲ್ಲ. ತೆರಹಿಲ್ಲದ ಘನವಾವುದು ಅದುವೆ ಸಕಲಪದವಾದುದರಿಂದ ನಿಸ್ಸೀಮವು .ಅಲ್ಲಿ ಸೀಮಿತ ದೃಷ್ಠಿ ,ಸೀಮಿತ ಜ್ಞಾನ, ಸೀಮಿತ ಭಾವಕ್ಕಿಂಬಿಲ್ಲವಾಗಿ ನೀನು ಸ್ವಾಮಿ ಎಂದು ನಾನು ಸೇವಕನೆಂದು ನೆನೆಯಲಿಲ್ಲ.

ಲಿಂಗ ಲಿಂಗ ಎಂದು ನೆನಯಲಿಲ್ಲ ; ಲಿಂಗವೆಂಬುದು ತೆರಹಿಲ್ಲದ ಘನವಾದುದರಿಂದ ಕುರುಹು ಮುನ್ನಿಲ್ಲ. ಲಿಂಗದ ರಹಸ್ಯವರಿತುದರಿಂದ ಲಿಂಗ ಲಿಂಗವೆಂಬ ನಿಶ್ಯಬ್ದ ಹಂಗು ಇಲ್ಲ. ಲಿಂಗ ಈ ಸಂಜ್ಞೆ ಬಹು ರಹಸ್ಯವಾಗಿಹುದು . ಪಿಂಡಾಂಡ ಬ್ರಹ್ಮಾಂಡ ಉತ್ಪತ್ತಿಯಾಗಿ ತೋರಲಿ ವೃದ್ಧಿಯಾಗಿ ತೋರಲಿ ಲಯವಾಗಿ ತೋರಲಿ ತಾನು ಅಲಕ್ಷ್ಯನಾಗಿ ನಿರಾಲಂಬನಾಗಿ ತನ್ನ ಸ್ವಂತ ಮಹಿಮೆಯಲ್ಲಿ ತಾನೆ ತಾನಾಗಿದ್ದ ಘನ. ಜ್ಯೋತಿ ಸ್ವಯಂ ಜ್ಯೋತಿ ಅದು ಸ್ವಯಂ ಜ್ಯೋತಿ ಎನ್ನದ ನುಡಿಗೆಡೆಗೊಡದ ಘನವೆ ಲಿಂಗವಾದ್ದರಿಂದ ಅದು ತನ್ನಂ ಬಿಟ್ಟು ಅನ್ಯವಾಗಿದ್ದರಿಂದ, ಶಿವ ಲಿಂಗ ತಾನೆ ನೋಡಾ ಕೇವಲ ನಿಷ್ಕಲ ರೂಪವಾಗಿರ್ಪುದು ಪರಾತ್ಪರ ಪರಬ್ರಹ್ಮ ನೋಡಾ, ಇದನರಿತು ಲಿಂಗ ಲಿಂಗ ಎನಲಿಲ್ಲ. ಇದು ಕಾರಣ ಅರಿದು ನೆನಯಲಿಲ್ಲವೆಂದು ಹೇಳಿದ್ದಾರೆ.

ತಾನಾರೆಂದರಿಯಲು ತಾನು ಏನೆಂದನಲಿಲ್ಲದ ಅರುವು. ಅಲ್ಲಿ ಭಾವಕ್ಕಿಂಬಿಲ್ಲ ಶಬ್ದ ಮೀಸಲು

ನೋಡಾ. ನುಡಿಗಿಂಬಿಲ್ಲದಿರುವಲ್ಲಿ ನುಡಿದು ಹೇಳುವದದೆಂತು? ಭಾವಕ್ಕಗಮ್ಯವಾದುದನ್ನು ಭಾವಿಸುವದದೆಂತು? ನೆನೆಯುವದದೆಂತು? ಲಿಂಗದಿರುವು ತನ್ನಯ ಅರುವು ಗುರು ಘನನ ಇರುವೆ ತನ್ನಯ ಇರುವು ಆಗಿರುವಲ್ಲಿ ಶಬ್ದ ಸಂದಣೆಗಿಂಬುಂಟೆ? ಎರಡೊಂದಾದಲ್ಲಿ ಅರ್ಪಿತವಿಲ್ಲ ಅರ್ಚನೆಯಿಲ್ಲ ಶಬ್ದಕ್ಕೆ ತೆರಹಿಲ್ಲ.

ಮರೆತು ಪೂಜಿಸಲಿಲ್ಲ ಏನನ್ನು ಮರೆತು ಪೂಜಿಸಲಿಲ್ಲ? ತನ್ನನ್ನು ಶಿಷ್ಯನೆಂಬುದು ಮರೆತು ಪೂಜಿಸಲಿಲ್ಲ ಗುರು ಘನನನ್ನು ಬೋಧಾ ಮೂರ್ತಿ ಎಂಬುದು ಮರೆತು ಪೂಜಿಸಲಿಲ್ಲ. ಲಿಂಗವನ್ನು ಕುರುಹೆಂಬುದನ್ನು ಮರೆತು ಪೂಜಿಸಲಿಲ್ಲ. ಮೂರೊಂದಾದುದರಿಂದ ಗುರು ಘನನು ಬೋಧಾಮೂರ್ತಿಯಾಗಲಿಲ್ಲ, ಲಿಂಗ ಕುರುಹಾಗಲಿಲ್ಲ, ಶಿಷ್ಯ ಅರ್ಚಿಸುವವನಾಗಲಿಲ್ಲ, ಗುರು ಬೋಧಾಮೂರ್ತಿಯಾಗದ್ದರಿಂದ ಪೂಜಿಸಲಿಲ್ಲ. ಲಿಂಗ, ಲಿಂಗ ಎಂಬುದು ಕುರುಹಾಗದ್ದರಿಂದ ಪೂಜಿಸಲಿಲ್ಲ, ತಾನು ಇವೆರಡನ್ನು ಅರಿಯ ಹೋಗಿ, ಗುರುವೆಂಬುದು ತಾನು ತಾನೆಂಬುದು ಗುರು. ಇದು ಗುರುವಿಂಗೆ ಗುರುವಾಗಿಹ ಮಹದರಿವು, ಲಿಂಗವೆಂಬುದು ತಾನು ತಾನೆಂಬುದು ಲಿಂಗದ ಲಿಂಗವಾದ್ದರಿಂದ ಎರಡಲ್ಲದ ಘನವಾದ್ದರಿಂದ ಪೂಜಿಸಲಿಲ್ಲವೆಂದು ಹೇಳಿಹರು.

ತೆರಹಿಲ್ಲದ ಘನ, ಕುರುಹು ಆದುದದೆಂತು? ಗುರು, ಲಿಂಗ, ಜಂಗಮವದು ತೆರಹಿಲ್ಲದ ಘನ. ಇದು ಕಾರಣ ಕುರುಹು ಮುನ್ನಿಲ್ಲವೆಂದು ಹೇಳಿದ್ದಾರೆ.

ತನಗೆ ಗುರುವಿಲ್ಲ, ಗುರುವಿಂಗೆ ತಾನಿಲ್ಲ : ತನ್ನ ತಾನರಿವುಡೆ ತನಗಿಂತ ಅನ್ಯ ಗುರುವಿಲ್ಲ. ಗುರು ರೂಪವೆ ತನ್ನಿರುವು, ತನ್ನ ಅರಿದ ಅರುವೆ ಗುರು ರೂಪವೆಂದರಿದ ಬಳಿಕ, ಗುರುವಿಂಗೆ ತಾನಿಲ್ಲ ಇವರು ಉಪಮಾತೀತರು.

ಅರುವಿನ ಹೃದಯ ಕಣ್ತೆರೆಯಬೇಕೆಂದು ಗುರುವೆಂದು ಕಲ್ಪಿಸಿಕೊಂಡೆ. ಗುರುವಿಂಗೆ ಶಿಷ್ಯನೆಂಬುದುಂಟೆ? ಶಿಷ್ಯಂಗೆ ಗುರುವೆಂಬುದುಂಟೆ? ಗಮನಾಗಮನ ನಾಸ್ತಿಯಾದ ಲಿಂಗಕ್ಕೆ ಅಂಗವೆಲ್ಲಿಯದೊ? ಗುಹೇಶ್ವರಾ.

ಅರುವಿನ ಅರುವ ತೋರಲು ಗುರು ಘನವಾಯಿತ್ತು. ಆ ಗುರುಘನಕ್ಕೆ ಶಿಷ್ಯ ನೆನ್ನುವುದಿಲ್ಲ, ಅರುವಿನ ಅರುವು ಅದು ಅರಿಯಲಿಲ್ಲದ ಅರುವು, ಅದು ಅರುವೆಂಬುದರಿತ ಅರುವು. ಇದು ಅರಿದರಿದು ತನ್ನಿಂದ ತನ್ನ ನೋಡಿದ ಘನ ಏನೊಂದಾಗದ ಘನ, ಏನೊಂದೆನಲಿಲ್ಲದ ಅರುವು, ಇದುವೆ ತಾನಾದಲ್ಲಿ ಅಲ್ಲಿ ಗುರುವನ್ನು ಕಲ್ಪಿತನನ್ನಾಗಿ ಕಾಣಬುಹುದೆ? ಕಾಣಲರಿಯ.

ಅನುಪಮ ಲಿಂಗ ನಿಶ್ಚಯವಾದಲ್ಲಿ ಅದು ಗಮನಾಗಮನ ನಾಸ್ತಿಯಾದ ಮಹದರುವು. ತನ್ನ ಅಂಗದಲ್ಲಿ ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆಂದರಿದ ಅಂಗ ಅದಕ್ಕೆ ಅದಾವ ಬೋಧ? ನಿಶಬ್ಧವೇದಿಗೆ ಅದಾವ ಬೋಧ ಹುಡಕಬೇಕು? ಇದು ಕಾರಣ ತನಗೆ ಗುರುವಿಲ್ಲವೆಂಬುದು. ತಾನು ತೆರಹಿಲ್ಲದ ಘನ, ನಿಶಬ್ದ ಬ್ರಹ್ಮ, ತನಗೆ ಶಬ್ದವೆಂದಲ್ಲಿ ಹುಡುಕುವುದು. ತನಗೆ ಗುರುವಿಲ್ಲ ಗುರುವಿಂಗೆ ತಾನಿಲ್ಲ, ತನಗೆ ಗುರುವಿಲ್ಲವೆಂಬುದು ತಾನು ತೆರಹಿಲ್ಲದ ಘನವಾದುದರಿಂದ, ತನಗೆ ಗುರುವಿಲ್ಲವೆಂದು ಹೇಳಿಹರು. ಗುರುವಿಂಗೆ ತಾನಿಲ್ಲವೆಂಬುದು ಶ್ರೀ ಗುರು ನಿಃಶಬ್ದ ಬ್ರಹ್ಮ ಅಕಲ್ಪಿತ ಘನ. ಖಂಡಾ ಖಂಡ ಸಂಯೋಗ ವಿಲ್ಲದ ಅಖಂಡಿತ ಘನನಾದುದರಿಂದ ಆತನ ದಿವ್ಯ ದೃಷ್ಠಿಗೆ ಕಲ್ಪಿತ ಪುರುಷನನ್ನಾಗಿ ಕಾಣಬಾರದು. ನಿಸ್ಸೀಮರು ಸೀಮಿತ ದೃಷ್ಠಿಯುಳ್ಳವ ನಾಗುವದದೆಂತು?

ಗುರುವಿಂಗೆ ಶಿಷ್ಯನು ಹೊಡವಡುವ ಕಾರಣ ಮುನ್ನಿಲ್ಲ. ಎರಡೊಂದಾದ ಬಳಿಕ ಅರ್ಪಿತ ಹೀಗಿತ್ತು. ತನ್ನಿರುವು ಶಿಷ್ಯನ ಅರುವು ಒಂದಾದ ಬಳಿಕ ಅಲ್ಲಿ ನಮಸ್ಕಾರ ವಿಲ್ಲ ಒಂದನೆಯಿಲ್ಲ ಅಂಗಲಾಚಿ

ಬೇಡುವ ಬೇಡಿಕೆ ಇಲ್ಲ. ಪಡೆಯಬೇಕಾದ ಪದವು ಇಲ್ಲ , ಕಳೆದುಕೊಂಡುದು ಇಲ್ಲ.

ಬಯಲು ಬಿತ್ತಲಿಲ್ಲ, ಬೆಳೆಯಲಿಲ್ಲ, ಒಕ್ಕಲಿಲ್ಲ ತೂರಲಿಲ್ಲ, ಗುಹೇಶ್ವರನೆಂಬ ಲಿಂಗಕ್ಕೆ ಕುರುಹು ಮುನ್ನಿಲ್ಲ : ಬಯಲು ಬಿತ್ತಲಿಲ್ಲ ,ಬಯಲು ಅದನೆಂತು ಬಿತ್ತುವುದು ? ಆವುದು ಕುರುಹಿನಿಂದುಕ್ತವಾಗಿದೆ. ಅದು ಬಿತ್ತಲು ಬರುವುದು ಬೆಳೆಯಲು ಬರುವುದು. ಅದನ್ನು ಕಸ ಕಡ್ಡಿಗಳಿಂದ ಹಸನ ಮಾಡಿ ನಿಧಿ ಕೂಡಿಸಿ ತೂರಲು ಬರುವುದು. ಗುಹೇಶ್ವರ ಲಿಂಗವು ಕುರುಹು ಆಗದಿದ್ದಲ್ಲಿ, ಅದು ಬಿತ್ತಲು ಬರದು ಎಂದು ಹೇಳಿದುದು.

ಬಯಲೆಂದರೆ ಶಬ್ದಮುಗ್ಧವು ನಿರಂಜನ ಚಿದ್ರೂಪ ತಾನಾದುದು ; ಅದನ್ನು ಬಿತ್ತುವದದೆಂತು? ಕೆಲಬರು ಬ್ರಹ್ಮವು, ಬ್ರಹ್ಮ ಬೀಜವೆನ್ನುವರು. ಬ್ರಹ್ಮಕ್ಕೆ ಬೀಜವಿರಬಹುದೆ? ಶಬ್ದ ಸಂಭ್ರಮದವರು ಚಿದ್‌ಹಮ್ಮಿನಿಂದುಕ್ತವಾದ, ಅರುವಿಂಗೆ ಬ್ರಹ್ಮ ಬೀಜವೆಂದು ಕಲ್ಪಿಸಬಹುದು, ಇವರು ಅಕಲ್ಪಿತ ಜ್ಞಾನ ವರಿಯದವರು . ಇವರ ದೃಷ್ಠಿಗೆ ಲಿಂಗವೆಂಬುದು ಬೀಜವಾಗುತ್ತದೆ. ಗುರು ಘನನು ದಯಪಾಲಿಸಿದ ಬೀಜ ಸಚ್ಚಿದಾನಂದ ಬೀಜ . ಅದು ನಿತ್ಯ ಪೂರ್ಣ ಬೀಜ ಅಖಂಡ ಅಸಂಗ, ಅದ್ವಯ, ಸ್ವಯಂ ಪ್ರಕಾಶ ಎಂಬ ಲಕ್ಷಣಾತ್ಮಕವೆನ್ನದ ಬೀಜವೆಂದು ಕಲ್ಪಿಸಿದಲ್ಲಿ ಬಿತ್ತಿದ್ದು ಉಂಟು ಅದನ್ನು ಶಿಷ್ಯನಾದವನು ಶ್ರವಣ ಮನನ ನಿದಿಧ್ಯಾನಗಳಿಂದ ಬೆಳಿಸಿದುದು ಉಂಟು. ಇದರಲ್ಲಿ ಶ್ರವಣ ದೋಷ ಮನನ ದೋಷವಾಗದ ಹಾಗೆ ಅನಾತ್ಮ ವೃತ್ತಿಬಾರದಂತೆ ಮಾಡುವುದೇ ಕಸಕಡ್ಡಿಗಳನ್ನು ತೆಗದಂತೆ ಕೇವಲ ನಿಧಿ ಧ್ಯಾನದಲ್ಲಿ ನಿಶ್ಚಿಂತನಾಗಿರುವುದು . ಅದು ಬೆಳೆ ತೆಗೆದುದು ಎಂದು ಹೇಳಬಹುದು. ಇಲ್ಲಿ ಬಯಲು ಬಿತ್ತಲಿಲ್ಲ ಬೆಳೆಯಲಿಲ್ಲವೆಂಬುದು ಬಹು ಆರ್ಥಗರ್ಭಿತವಾದುದು ಶ್ರೀ ಗುರು ಕರಸ್ಥಲಕ್ಕೆ ಕರುಣಿಸಿದ ಲಿಂಗ ಶಬ್ದ ಸಂಭ್ರಮದವನಾಗಿ ಕರುಣಿಸಲಿಲ್ಲ. ತಾನು ಅಕಲ್ಪಿತ ಘನನಾಗಿ ಮೌನ ಮುದ್ರೆ ಧರಿಸಿ, ಮೌನ ಮುದ್ರಿತವಾದ ಲಿಂಗವ ಕರುಣಿಸಿದುದು ಅರಿದರಿದು ನೋಡಿದ ಶಿಷ್ಯನು ಶಬ್ದ ಸಂಭ್ರಮದವನಾಗಲಿಲ್ಲ ಕಲ್ಪಿತನಾಗಲಿಲ್ಲ . ತನ್ನನ್ನು ಶಿಷ್ಯನೆಂದು ತಿಳಿಯಲಿಲ್ಲ .ಕರುಣಿಸಿದ ಗುರು ಘನನನ್ನು ಗುರುವೆಂದು ತಿಳಿಯಲಿಲ್ಲ. ಲಿಂಗಕ್ಕೆ ಲಿಂಗ, ಲಿಂಗ ಎಂದು ಚಿಂತಿಸಲಿಲ್ಲ . ಅರಿದರುಹಿಸಿ ಕೊಂಬುದಕ್ಕೆ ಮೀರಿದ ಘನದರುವೆ ತನ್ನಯ ಸ್ವರೂಪನೆಂಬುದು ಕರಿಗೊಂಡುದರಿಂದ ಬಯಲು ಬಿತ್ತಲಿಲ್ಲ ಬೆಳೆಯಲಿಲ್ಲ , ಒಕ್ಕಲಿಲ್ಲ ತೂರಲಿಲ್ಲ , ಗುಹೇಶ್ವರ ಲಿಂಗಕ್ಕೆ ಕುರುಹು ಮುನ್ನಿಲ್ಲವೆಂದು ಹೇಳಿದ್ದಾರೆ.

90

ಹೊರಗನೆ ಕೊಯ್ದು, ಹೊರಗನೆ ಪೂಜಿಸಿ ಹೊರಗಾಗಿ ಹೋಯಿತ್ತು.
ತ್ರೈಜಗವೆಲ್ಲ ನರ ನರಿಯದಂತೆ ಪೂಜಿಸಿ ಹೋದಡೆ
ಕೈ ಲಿಂಗದಲ್ಲಿ ಸಿಲುಕಿತ್ತಲ್ಲಾ ಮನ ದೃಢದಿಂದ ನಿಮ್ಮ ನೆನದಿಹೆನೆಂದಡೆ
ತನು ಸಂದಣಿಸಿತ್ತು ಗುಹೇಶ್ವರಾ. **॥ 417 ॥**

ತಾತ್ಪರ್ಯ: ಹೊರಗನೆ ಕೊಯ್ದು ಹೊರಗನೆ ಪೂಜಿಸಿ. ಹೊರಗಾಗಿ ಹೋಯಿತ್ತು ತ್ರೈಜಗವೆಲ್ಲ; ಎಂದು ಪ್ರಭುದೇವ ಹೇಳಿದುದು ಅದೆಷ್ಟು ಮಾರ್ಮಿಕವಾದುದು. ಮರ್ತ್ಯಲೋಕ ಒಂದರ ವಿಚಾರ ಹೇಳಿಲಿಲ್ಲ. ಸ್ವರ್ಗ ವೈಕುಂಠಾದಿಗಳಲ್ಲಿದ್ದ ದೇವತಾದಿಗಳ ಸುದ್ದಿ ಹೇಳಿಹನು.

ಹೊರಗನೆ ಕೊಯ್ದು ಹೊರಗನೆ ಪೂಜಿಸಿದುದು ಏನು? ಪತ್ರಿ ಪುಷ್ಪ ಭಸ್ಮ, ಧೂಪ, ದೀಪ ಗಂಧ ಅಕ್ಷತೆ, ಮಡಿನೀರು ಇವುಗಳೆಲ್ಲ ಪೂಜಕ್ಕೆ ಬೇಕಾದ ಸಾಮಾಗ್ರಿಗಳು, ಹೊರಗಿನ್ನಿಂದ ತಂದವುಗಳು, ಹೊರಗಡೆ ಪೂಜಿಸಿದುದು, ಏನನ್ನು ? ಲಿಂಗವನ್ನು ಹೊರಗಿನಿಂದ ತಂದುದು. ಇದು ಕಾರಣ ಲಿಂಗವ

ಹೊರಗೆ ಕಂಡರು. ಅದನ್ನು ಕುರುಹುಳ್ಳದ್ದನ್ನಾಗಿ ಕಂಡರು ಅದನ್ನು ಕಂಥೆ ಹಿಡಿಸಿದ ಲಿಂಗವಾಗಿ ಕಂಡರು. ಪೂಜಾ ಲಿಂಗವಾಗಿ ಕಂಡರು.

ಹನ್ನೆರಡು ಜ್ಯೋತಿರ್ಲಿಂಗಗಳನ್ನು ಕುರುಹಾಗಿ ಕಂಡುದರಿಂದ ಹೊರಗನೆ ಕಂಡು, ಆ ಲಿಂಗಗಳಿಗೂ ಹೊರಗಿನ ಪತ್ರಿ, ಪುಷ್ಪ. ಗಂಧ ಅಕ್ಷತೆ, ನೇವಿದ್ಯ, ಭಸ್ಮ ಧೂಪ ದೀಪ ಮಡಿ ನೀರು, ಇವುಗಳೆಲ್ಲ ಹೊರಗನೆ ತಂದು ಪೂಜಿಸಿದರು ಹೊರಗೆ ಹೊರಗಾಗಿ ಹೋದರು.

ಬಾರಾ ಜ್ಯೋತಿರ್ಲಿಂಗಗಳು ಅವು ಎಲ್ಲಿ? ಅವು ಸುಪ್ರಸಿದ್ಧವಾದ ಹನ್ನೆರಡು ಕ್ಷೇತ್ರಗಳಲ್ಲಿರುವ ಶಿವಲಿಂಗಗಳಿಗೆ ಕೆಳಗೆ ತೋರಿಸಿದಂತೆ ಪ್ರಸಿದ್ಧ ಸ್ಥಾನದಲ್ಲಿವೆ. ಸೌರಾಷ್ಟ್ರ ಸೋಮೇಶ್ವರ, ಶ್ರೀ ಶೈಲ ಮಲ್ಲಿಕಾರ್ಜುನ, ಉಜ್ಜಯಿನಿ ಮಹಾಕಾಲೇಶ್ವರ, ಓಂಕಾರದ ಅಮಲೇಶ್ವರ, ಪರಳಿಯ ವೈಜನಾಥ, ಡಾಕಿನಿಯ ಭೀಮಶಂಕರ, ಗೌತಮೀ ತಟದ ತ್ರಯಂಬಕೇಶ್ವರ, ಹಿಮಾಲಯದ ಕೇದಾರೇಶ್ವರ, ಶಿವಾಲಯದ ಘುಸೃಣೇಶ್ವರ, ಇವು ದ್ವಾದಶ ಜ್ಯೋತಿರ್ಲಿಂಗಗಳು.

ಕೆಲಬರು ಈ ದ್ವಾದಶ ಜ್ಯೋತಿರ್ಲಿಂಗಗಳು ಶ್ರೇಷ್ಠವೆಂದು ತಿಳಿದು, ಇವುಗಳ ಭಕ್ತರಾಗಿ ಇವುಗಳಿಗೆ ಹೊರಗಿನ ಪತ್ರಿ, ಪುಷ್ಪ ಕೊಯ್ದು, ಹೊರಗಿನ ಪೂಜಾ ಸಾಮಾಗ್ರಿಗಳ ತಂದು ಹೊರಗನೆ ಪೂಜಿಸಿ ಹೊರಗಾಗಿ ಹೋದರು. ಲಿಂಗಗಳನ್ನು ಪೂಜಿಸಿಕೊಳ್ಳುವ ಲಿಂಗ ಮಾಡಿದರು. ತಾವು ಪೂಜೆ ಮಾಡುವ ಭಕ್ತರಾದರು. ಪೂಜೆಗೆ ಬೇಕಾಗುವ ಸಕಲ ಸಾಮಾಗ್ರಿಗಳ ಹೊರಗಿನಿಂದ ತಂದರು. ತಾವು ಹೊರಗನೆ ನಿಂತುಕೊಂಡರು. ಹೊರಗಿನಿಂದ ನೋಡಿದರು. ಹೊರಗನೆ ಕೊಂಡಾಡಿದರು, ಹೊರಗನೆ ಜಪ, ತಪವಗೈದರು. ಕೊನೆಗೆ ಲಿಂಗವ ಅರಿಯಲಿಲ್ಲ, ಪೂಜೆಯ ಸಾಮಾಗ್ರಿಯ ಅರಿಯಲಿಲ್ಲ, ಪೂಜೆ ಮಾಡುವ ತನ್ನನ್ನು ತಿಳಿಯದದ್ದರಿಂದ, ಹೊರಗಾಗಿ ಹೋಯಿತ್ತು, ತ್ರೈಜಗವೆಲ್ಲ ಎಂದು ಪ್ರಭು ಹೇಳಿದುದು.

ಈ ಹನ್ನೆರಡು ಜ್ಯೋತಿರ್ಲಿಂಗಗಳು, ಬ್ರಾಹ್ಮಣ ಕಾಲಕ್ಕಿಂತ ಮೊದಲು ಇದ್ದ ಏಳು ಆದಿತ್ಯನು. ಆ ಬಳಿಕ ಹನ್ನೆರಡು ಎಂದು ಪರಿಗಣಿತವಾಯಿತು. ಬಹುತರವಾಗಿ ಹನ್ನೆರಡು ತಿಂಗಳುಗಳಲ್ಲಿಯೂ ಕಾಣಿಸಿಕೊಳ್ಳುವ ಆದಿತ್ಯ ಅಥವಾ ಸೂರ್ಯನಿಗೆ ಹನ್ನೆರಡು ಹೆಸರು ರೂಢವಾಗಿರಬೇಕು. ಸೂರ್ಯನ ಹನ್ನೆರಡು ಹೆಸರು ಇಂತಿವೆ.

ಧಾತಾ, ಮಿತ್ರ ಆರ್ಯ ರುದ್ರವರುಣ ಸೂರ್ಯ, (ಏವಚ) ಭರ್ಗಃ ವಿವಸ್ವಾನ ಪೂಷಾ (ಚ) ಸವಿತಾ (ಸಶಮಿಃ ಸ್ಮೃತಃ) (ಏಕಾದಸ್ತಥಾ) ತ್ವಷ್ಟಾ ವಿಷ್ಣುಃ (ದ್ವಾದಶ ಉಚ್ಯತೆ)

ಈ ಹನ್ನೆರಡು ಸೂರ್ಯರು ವಿಶ್ವದ ಪ್ರಳಯದ ಕಾಲದಲ್ಲಿ ಮಾತ್ರ ಹೊಳೆಯುವರೆಂದು ಪ್ರತೀತಿಯುಂಟು. ಪಿಂಡಾಂಡದ ಮೇಲಿನ ಭ್ರಾಂತಿ ಮಮತೆಗಳು ಅಳಿದ ಬಳಿಕ ಚಿತ್ಸೂರ್ಯನು ಪ್ರಕಾಶಿಸುವನೆಂದು ಆಧ್ಯಾತ್ಮ ಶಾಸ್ತ್ರವು ನಿರೂಪಿಸುತ್ತದೆ.

ಈ ಸುಪ್ರಸಿದ್ಧವಾದ ಜ್ಯೋತಿಗಳು ಆಧ್ಯತ್ಮಾ ಶಾಸ್ತ್ರದಿಂದ ಪಿಂಡಾಂಡದ ಮೇಲಿನ ಭ್ರಾಂತಿ ಮಮತೆಗಳು ಅಳಿದ ಮೇಲೆ ಚಿತ್ಸೂರ್ಯನನ್ನು ಕಾಣುವ ಗುರಿಯೆ ನಿಜವಾದ ಗುರಿ. ಅದನ್ನು ಬಿಟ್ಟು ತ್ರೈ ಜಗವೆಲ್ಲ ಹೊರಗನೆ ಕೊಯ್ದು, ಹೊರಗನೆ ಪೂಜಿಸಿ, ವ್ಯರ್ಥವಾಗಿ ಕಾಲನಿಗೆ ತುತ್ತಾದರು.

ಇತ್ತ ವೀರಶೈವರಲ್ಲಿ ಗುರು, ಲಿಂಗ, ಜಂಗಮವನ್ನು ಕುರುಹನ್ನಾಗಿ ಕಂಡುದು ಇದೆಂಥ ಕುರುಡತನ, ಇದೆಂಥ ಅಜ್ಞಾನಂಧಕಾರ ? ಇದೆಂಥ ಅರು ಹೃದಯ ? ನಿರೂಪ ರೂಪವಾಯಿತೆ? ನಿಷ್ಕಳಂಕವು ಕಳಂಕವಾಗಿ ಕಂಡಿತೆ? ಶ್ರೀ ಗುರುವರನನ್ನು ಚಾರಿತ್ರ ಪುರುಷನನ್ನಾಗಿ ಕಂಡು, ಹೊರಗನೆ ಕೊಯ್ದು, ಹೊರಗನೆ ಪೂಜಿಸಿ, ಗುರು ಘನವರಿಯದೆ ವ್ಯರ್ಥವಾಗಿ ಹೋಯಿತ್ತು.

ಲಿಂಗಾರ್ಚಕರಲ್ಲಿ ಬಹು ಭಾವಿಕರು ಇಷ್ಟ ಲಿಂಗವನ್ನು ಪೂಜಾ ಲಿಂಗವೆಂದು ತಿಳಿದು ಲಿಂಗವಂತರಾದವರು . ಲಿಂಗವ ಕುರುಹಾಗಿ ಕಂಡು, ಹೊರಗನೆ ಕೊಯ್ದು, ಹೊರಗನೆ ಪೂಜಿಸಿ ಹೊರಗಾಗಿ ಹೋದರು.

ಲಿಂಗ ಒಂದಾಗಿರ್ದ ಜಂಗಮು, ಜಂಗಮು ಒಂದಾಗಿರ್ದ ಲಿಂಗ , ಎರಡು ಮಾಡಿ ನೋಡಬಹುದೆ? ಶುದ್ಧ ಶಿವೈಕ್ಯ ಜಂಗಮು, ನಿರಾಭಾರಿ ಜಂಗಮು , ನಿರುಪಾಧಿ ಜಂಗಮು, ನಿಸ್ಸೀಮ ಜಂಗಮು, ನಿರ್ನಾಮ ಜಂಗಮು, ನಿರ್ಲಿಖಿತ ಜಂಗಮುವದು ಪರತತ್ವ ಅನುಪಮ ನೆಂದರಿಯದೆ ಜಂಗಮುವನ್ನು ಒಂದು ಜಾತಿಗೆ ಹೋಲಿಸಿ ಶರೀರಧಾರಿಯನ್ನಾಗಿ ಕಂಡು, ಹೊರಗನೆ ಕೊಯ್ದು ಹೊರಗನೆ ಪೂಜಿಸಿ ಹೊರಗಾಗಿ ಹೋದರು ಎಂದು ಪ್ರಭು ಹೇಳಿದುದು.

ಈ ತರ ಹೇಗೆ ತಿಳಿಯುವುದು? ಇದು ಕಾರಣ ಆ ನರ ನರಿಯದಂತೆ ಪೂಜಿಸಿ ಹೋದಡೆ ಕೈ ಲಿಂಗದಲ್ಲಿ ಸಿಲುಕಿತ್ತು .ಇದೆಂಥ ಆಶ್ಚರ್ಯ ! ಕೈಯಿ ಲಿಂಗದಲ್ಲಿ ಸಿಲುಕಬೇಕಾದರೆ ಇದೆಂಥ ಪೂಜೆ,ಇದೆಂಥ ಪರಿ, ಪ್ರಭುವಿನ ಪರಿ. ಇದು ಅರುವ ಅರಿದರಿದು ನೋಡಿದ ಪರಿ. ಅರುವ ಅರಿಯ ಹೇಳಿ ಸದ್ಗುರುನಾಥ ಕುರುಹ ಕೈಯಲ್ಲಿ ಕೊಟ್ಟನಲ್ಲದೆ ಹೊರಗಡೆ ಕೊಯ್ದು ಹೊರಗನೆ ಪೂಜಿಸಿ ಹೊರಗಾಗಿ ಹೋಗುವುದಕ್ಕೆ ಲಿಂಗದ ಸಂಜ್ಞೆ ಸೂಚಿಸಲಿಲ್ಲ. ಇದನ್ನು ನೀನು ಅರುವಿನಿಂದ ಅರಿದರಿದು ನೋಡು,ಇದು ವೇದ ವೇದಾಂತಗಳಿಗಸಾಧ್ಯವಾಗಿಹ ಅನುಪಮ ಲಿಂಗವೆಂಬುದು, ತಾನು ಮೌನ ಮುದ್ರಿತನಾಗಿ ಮೌನ ಮುದ್ರಿತಗೊಂಡ ಘನಲಿಂಗವಿದೆಂದು ಸಂಜ್ಞೆಯಿಂದ ಸೂಚಿಸಿದುದು ತಿಳಿದೆ ಪ್ರಭುದೇವ ಆ ನರ ನರಿಯದಂತೆ ಪೂಜಿಸ ಹೋದಡೆ ಕೈ ಲಿಂಗದಲ್ಲಿ ಸಿಲುಕಿತ್ತು ಎಂದು ಹೇಳಿದರು .

ಲಿಂಗವು ಉಪಮೆ ಕೊಡಲು ಬಾರದ್ದು, ಸೀಮಿತ ಉಳ್ಳದ್ದಾಗದು. ಅದು ತಾನಾರೆಂದರಿತವರಿಗೆ ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದ ಅನುಪಮ ನಾದುದರಿಂದ , ಎನ್ನ ಅರುವೆಂಬ ಕೈ , ಚಿತ್ ಎಂಬ ಕೈ ಅನುಪಮ ಲಿಂಗದಲ್ಲಿ ಸಿಕ್ಕಿಕೊಂಡಿತ್ತು ಎಂದು ಹೇಳಿದ್ದಾರೆ.

ಲಿಂಗ, ಕೈಯಲ್ಲಿ ಸಿಕ್ಕಿಕೊಳ್ಳುವ ವಸ್ತುವಲ್ಲ. ಭ್ರಾಂತಿ ದೃಷ್ಟಿಗೆ ತೋರುವ ಕೈಯಿ ವಿಷಯ ಇಲ್ಲಿ ಹೇಳಿಲ್ಲ , ಅರುವಿನ ಕೈಯಿ ಉಪಮಿಸದ ಲಿಂಗದಲ್ಲಿ ಸಿಕ್ಕಿಕೊಂಡಿತ್ತು ಎಂದು ಹೇಳಿದುದು.

ಮನ ದೃಢದಿಂದ ನಿಮ್ಮ ನೆನದಿಹೆನೆಂದಡೆ ತನು ಸಂದಿಣಿಸಿತ್ತು ಗುಹೇಶ್ವರಾ: ಎಂದು ಪ್ರಭು ಹೇಳಿದುದು ಬಹು ಗಹನಾರ್ಥವು. ಉಪಾಧಿ ಮನ ಉಪಾಧಿ ರಹಿತ ಮನಕ್ಕೂ ನಿಲುಕದ ಲಿಂಗ. ಅದು ಉಪಾಧಿರಹಿತವಾಗಿ ಲಿಂಗವನ್ನು ಅನುಪಮವೆನ್ನಲಿ, ಅಚಲ ವೆನ್ನಲಿ , ಅಖಂಡ ವೆನ್ನಲಿ, ಏನಂದರೂ ನೆನಹಿಂಗೆ ಒಳಪಡದು. ನೆನಹಿಂಗೆ ಮೀರಿದ ಘನವ ನೆನೆಯ ಹೋಗಿ ತನು ಸಮೂಹವೆ ಕೂಡಿತ್ತು ಗುಹೇಶ್ವರಾ ಎಂದು ಹೇಳಿದ್ದಾರೆ.

91

ದೃಷ್ಟಕ್ಕೆ ದೃಷ್ಟಮುಂದಿಲ್ಲ ಇಲ್ಲ ಮಾಡಿದಡೇನಹುದೊ ?
ಮಾಡದಿದ್ದಡೇನಹುದೋ? ಗುಹೇಶ್ವರನೆಂಬ ಅರುಹಿನ ಕುರುಹು
ಮುಂದಿಲ್ಲ ಇಲ್ಲ ಮಾಡಿದಡೇನಹುದೋ? ಮಾಡದಿದ್ದಡೇನಹುದೊ? ॥ 636 ॥

ತಾತ್ಪರ್ಯ : ದೃಷ್ಟಕ್ಕೆ ದೃಷ್ಟ ಮುಂದಿಲ್ಲ ಇಲ್ಲ : ದೃಷ್ಟಕ್ಕೆ ಪರತತ್ವಕ್ಕೆ , ದೃಷ್ಟ ಎಂಬುದು ಪರತತ್ವವದು ಮುಂದಿಲ್ಲ ಪರತತ್ವ ಎರಡಿಲ್ಲ, ಒಂದು ಕಾಣಿಸಿಕೊಳ್ಳುವದು, ಒಂದು ಕಾಣುವುದು ಹೀಗೆ ಎರಡಿದ್ದರೆ ದೃಷ್ಟಕ್ಕೆ ದೃಷ್ಟ ಎಂಬುದು ಸಿದ್ಧವಾಗುತ್ತಿತ್ತು. ದೃಷ್ಟ ಎಂದು ವೇದಾಂತ, ಉಪನಿಷತ್‌ಗಳು

ಹೇಳುತ್ತವೆ. ತನು ತ್ರಯಾದಿಗಳಿಗೆ ದೃಷ್ಟಾ , ಅವಸ್ಥಾದಿಗಳಿಗೆ ದೃಷ್ಟಾ , ಗುಣಾದಿಗಳಿಗೆ ದೃಷ್ಟಾ ಎಂದು ಶಾಸ್ತ್ರಗಳು ಬೋಧಿಸುತ್ತವೆ. ಇಲ್ಲಿ ದೃಶ್ಯ ದೃಕ್ ಎಂಬವುಗಳ ಸರಿಯಾದ ತಿಳುವಳಿಕೆಯಾಗಿರಬೇಕು. ತಿಳಿದಲ್ಲಿ ಪ್ರಭುವಿನ ಪ್ರಬೋಧ ಸಾರ್ಥಕವಾಗುವುದು.

ದೃಶ್ಯವೆಂದರೇನು ? ದೃಕ್ ಅಂದರೇನು ?

ನಾಮರೂಪಗಳಿಂದ ತಿಳಿಸಿಕೊಳ್ಳುವುದೆಲ್ಲವೂ ದೃಶ್ಯವೆನಿಸುವುದು . ಆವುದು ಇದಕ್ಕೆ ಬೇರಾದ ಲಕ್ಷಣವುಳ್ಳದಿರುವದೊ ಅದುವೆ ದ್ರಷ್ಟಾ ಎಂದು ಹೇಳಿಸಿಕೊಳ್ಳುವುದು. ಅದು ತನು ತ್ರಯಾದಿಗಳಿಗೆ ದೃಷ್ಟನು. ಪಂಚಕೋಶ ವಿಲಕ್ಷಣನು, ಅವಸ್ಥಾತ್ರಯಾ, ಸಾಕ್ಷಿಸಚ್ಚಿದಾನಂದ ರೂಪನೆಂಬುದಾಗಿ ಹೇಳಿದೆ.

ದೇಹಗಳೆಷ್ಟು ಅವು ಯಾವು ? ಸ್ಥೂಲ ದೇಹ, ಸೂಕ್ಷ್ಮ ದೇಹ ಮತ್ತು ಕಾರಣ ದೇಹವೆಂದು ಮೂರು ವಿಧವಾಗಿವೆ.

ಇವುಗಳನ್ನು ದೇಹವೆಂಬುದಾಗಿ ಕರೆಯಲು ಕಾರಣವೇನು? ದಹ್ಯತೆ ಇತಿ ದೇಹ ಅಂದರೆ ದಹಿಸಲ್ಪಡುವ ಸ್ವಭಾವವಿರುವುದರಿಂದ ದೇಹವೆಂದು ಕರೆಯುತ್ತಾರೆ. ದಹಿಸಲ್ಪಡುವದೆಂದರೆ ಸತ್ತ ಮೇಲೆ ಹೆಣವನ್ನು ಜಡವಾದ ಅಗ್ನಿಯಿಂದ ಸುಡುವುದೆಂದರ್ಥವಲ್ಲ. ಏಕೆಂದರೆ ಹೆಣಗಳನ್ನು ಕೆಲಬರು ಸುಡಬಹುದು ಮತ್ತು ಕೆಲಬರು ನೆಲದಲ್ಲಿ ಹೂಳುತ್ತಾರೆ. ದಹ್ಯತೆ ಎಂಬುದಕ್ಕೆ ಬದುಕಿರುವಾಗಲೆ ತಾಪತ್ರಯ ಅಥವಾ ಚಿಂತೆ ಎಂಬ ಅಗ್ನಿಯಿಂದ ದಹಿಸಲ್ಪಡುತ್ತಿರುತ್ತದೆ . ಶಾಸ್ತ್ರದಲ್ಲಿ

ಚಿಂತಾಯಶ್ವ ಚಿತಾ ಯಶ್ವ ಬಿಂದು ಮಾತ್ರೇಣ ವಿಶೇಷತೆ.

ಚಿತಾ ದಹತಿ ನಿರ್ಜೀವ ಚಿಂತಾ ದಹತಿ ಜೀವ.

ಚಿತೆಯು , ಸತ್ತ ಮನುಷ್ಯನನ್ನು ಒಂದೆ ಸಮಯದಲ್ಲಿ ಭಸ್ಮ ಮಾಡಿದರೆ, ಚಿಂತೆಯು ಬದುಕಿರುವ ಮನುಷ್ಯನನ್ನು ವಿಧಾನವಾಗಿ ಸುಡುತ್ತಿರುತ್ತದೆ .

ಸ್ಥೂಲ ದೇಹವು ಪಂಚೀಕೃತ ಪಂಚ ಮಹಾಭೂತಗಳ ಪಂಚವಿಂಶತಿ (ಇಪ್ಪತ್ತೈದು) ತತ್ವಗಳಿಂದ ಕೂಡಿ ಆಗಿದೆ. ಪಂಚಭೂತಗಳೆಂದರೆ ಆಕಾಶ ,ವಾಯು ,ಅಗ್ನಿ ,ಜಲ ಪೃಥ್ವಿ ಇವೆ ಪಂಚ ಮಹಾಭೂತಗಳು .

ಪಂಚಭೂತಗಳು ,ಇಪ್ಪತ್ತೈದು ತತ್ವಗಳು ಹೇಗಾದವು? ಒಂದೊಂದು ಭೂತಂಗಳಲ್ಲಿ ಐದೈದು ಭಾಗಗಳಾಗಿ ಇಪ್ಪತ್ತೈದು ತತ್ವಗಳಾಗಿವೆ.

ಆಕಾಶ ಭೂತದ ಪಂಚತತ್ವಗಳು : ಶೋಕ ,ಕಾಮು ,ಕ್ರೋಧ ,ಮೋಹ , ಭಯ ವಾಯುಭೂತದ ಪಂಚತತ್ವಗಳು : ಪ್ರಸರಣ ಧಾವನ , ವಲನ ,ಚಲನ , ಆಕುಂಚನ . ಅಗ್ನಿ ಭೂತದ ಪಂಚತತ್ವಗಳು : ನಿದ್ರಾ ,ತೃಷಾ, ಕ್ಷುದಾ ಕಾಂತಿ ಆಲಸ್ಯ . ಜಲ ಭೂತದ ಪಂಚತತ್ವಗಳು: ಲಾಲಾರಸ,ಸ್ವೇದ, ಮೂತ್ರ ,ಶುಕ್ಲ,ಶೋಣಿತ . ಪೃಥ್ವಿ ಭೂತದ ಪಂಚತತ್ವಗಳು : ರೋಮ,ತ್ವಚಾ,ನಾಡಿ,ಮಾಂಸ,ಅಸ್ಥಿ . ಹೀಗೆ ಒಟ್ಟು ಇಪ್ಪತ್ತೈದು ತತ್ವಗಳಾಗಿವೆ. ಇದು ಸ್ಥೂಲ ದೇಹದ ರಚನೆ ಈಶ್ವರನಿಂದಾಯಿತ್ತು. ಈಶ್ವರನು ಸರ್ವಜ್ಞನಾಗಿರುವುದರಿಂದ ಸಂಪೂರ್ಣ ಜ್ಞಾನಿಯು ಸರ್ವಶಕ್ತನು ಸಮರ್ಥನು ಆಗಿರುವುದರಿಂದ ಈ ಪಂಚಭೂತಂಗಳಾದ ಇಪ್ಪತ್ತೈದು ತತ್ತ್ವದ ರಚನೆ,ಈಶ್ವರನ ಸೃಷ್ಠಿಯಾಗಿದೆ .

ಈ ಸೃಷ್ಠಿಯು ಉಂಟಾದ ಕಾರಣವೆಂದರೆ ಜೀವರುಗಳು ಪ್ರಾರಬ್ಧವ ಉಪಬೋಗಿಸಿ, ಪುರುಷಾರ್ಥವನ್ನು ಅಂದರೆ ಮೋಕ್ಷವನ್ನು ಸಂಪಾದಿಸಿಕೊಳ್ಳುವುದಕ್ಕೋಸ್ಕರ ಉಂಟಾಗಿದೆ .

ಈ ಇಪ್ಪತ್ತೈದು ತತ್ವಗಳು ಸ್ಥೂಲದೇಹದಲ್ಲಿ ಹೇಗೆ ತೋರಿಬರುತ್ತವೆ ? ಶರೀರದಲ್ಲಿ ತೋರುವ

ಅಸ್ಥಿ,ಮೊದಲಾದ ಕಠಿಣ ಭಾಗವೆಲ್ಲ, ಪೃಥ್ವಿಗೆ ಸೇರಿದುದು.ದ್ರವ ರೂಪವೆಲ್ಲ ಜಲಕ್ಕೆ ಸೇರಿದ್ದು, ಉಷ್ಣ ಭಾಗವೆಲ್ಲ ಅಗ್ನಿಗೆ ಸೇರಿದ್ದು. ಚಲನಾದಿ ಕ್ರಿಯೆಗಳೆಲ್ಲ ವಾಯುವಿಗೆ ಸೇರಿದ್ದು. ಆಕಾಶಕೊಟ್ಟಿರುವುದು ಆಕಾಶಕ್ಕೆ ಸೇರಿದ್ದು. ಈ ರೀತಿ ಪಂಚಭೂತಗಳ ಅಂಶವು ಸ್ಥೂಲ ದೇಹದಲ್ಲಿ ತೋರಿಬರುತ್ತದೆ.

ಈ ಪಂಚವಿಂಶತಿ ತತ್ವಗಳನ್ನು ಬೇರ್ಪಡಿಸಿ ತಿಳಿಯುವುದರಿಂದಾಗುವ ಲಾಭವೇನು ?

ಶ್ರೀಮತ್ ಶಂಕರ ಭಾಗವತ್ಪಾದಾಚಾರ್ಯರು ಪಂಚವಿಂಶತಿ ತತ್ವಗಳನ್ನು ತಿಳಿಯುವುದರಿಂದ ಮಹಾ ಪ್ರಯೋಜನವನ್ನು ಈ ರೀತಿ ಹೇಳಿದ್ದಾರೆ.

ಶ್ಲೋಕ–ಪಂಚವಿಂಶತ್ರಿ ತತ್ವಜ್ಞೆ ಯತ್ರ ಕುತ್ರಾ ಶ್ರಮೇಭವೇತ್

ಜಟೀ ಮುಂಡಿ ಶಿಖೀ ವಾಪಿ ಮುಜ್ಯತೆ ನಾತ್ರಸಮಶಯಃ

ಸ್ಥೂಲ ದೇಹದ ಇಪ್ಪತ್ತೈದು ತತ್ವಗಳನ್ನು ಕ್ರಮವಾಗಿ ವಿಚಾರ ಮಾಡಿ, ಬೇರ್ಪಡಿಸಿ ತಿಳಿದುಕೊಂಡು ಇಪ್ಪತ್ತೈದು ತತ್ವಗಳನ್ನು ಆ ಭೂತಗಳಿಗೆ ಒಪ್ಪಿಸಿ, ದೇಹದಲ್ಲಿರುವ ಅಹಂಕಾರ ಮಮಕಾರ ನಾನು ನನ್ನದು ಎನ್ನುವ ತಪ್ಪು ಭಾವನೆಯನ್ನು ತ್ಯಜಿಸಿದ ವಿವೇಕಿಯು ಆರೆ ಇರಲಿ, ಯಾವ ಆಶ್ರಮದವನೆ ಆಗಿರಲಿ,ಅವನು ಜಡೆ ಗಟ್ಟಿ ಯೋಗಿಯಾಗಿರಲಿ ,ಅಥವಾ ತಲೆ ಬೋಳಿಸಿ ಕೊಂಡು ಸನ್ಯಾಸಿಯೆ ಆಗಿರಲಿ, ಅಥವಾ ಗೃಹಸ್ಥನೆ ಇರಲಿ, ಅವನು ಜನನ ಮರಣ ರೂಪ ಸಂಸಾರದಿಂದ ಖಂಡಿತ ಮುಕ್ತನಾಗುತ್ತಾನೆ. ಇದರಲ್ಲಿ ಸಂದೇಹವಿಲ್ಲ ಎಂಬುದಾಗಿ ಹೇಳುತ್ತಾರೆ. ಇದಲ್ಲದೆ ಇಪ್ಪತ್ತೈದು ತತ್ವಗಳನ್ನು ಕ್ರಮವಾಗಿ ವಿಚಾರ ಮಾಡಿ ಬೇರ್ಪಡಿಸಿದರೆ ಇಪ್ಪತ್ತೈದು ತತ್ವಗಳು ನಾನಲ್ಲ. ಅವು ನನ್ನವೂ ಅಲ್ಲ. ಇವು ಪಂಚಭೂತಗಳಿಗೆ ಸೇರಿದ್ದು, ನಾನು ಇವುಗಳನ್ನು ನೋಡುವ ಸಾಕ್ಷಿ ಎಂಬ ತಿಳಿವಳಿಕೆಯು ಜ್ಞಾನ ಸ್ವರೂಪ.

ಘಟದ್ರಷ್ಟಾ,ಘಟಾ ಭ್ಬಿನ್ನಃ ಸರ್ವಥಾ ಘಟೋ ಯಥಾ

ದೇಹ ದ್ರಷ್ಟಾತಥಾ ದೇಹೋ ನಾಹ ಮಿತ್ಯವಧಾರಯೇತ್

ಘಟವನ್ನು ನೋಡುವವನು ಘಟಕ್ಕಿಂತ ಬೇರೆಯಾಗಿರುತ್ತಾನಲ್ಲದೆ,ಅವನು ಎಂದಿಗೂ ಹೇಗೆ ಘಟವಾಗಲಾರನೊ?ಹಾಗೆ ದೇಹವನ್ನು ಇದಿರಿಟ್ಟು ಅರಿಯುವ ನೋಡುವ ನಾನು ಎಂದಿಗೂ ದೇಹಾಗುವುದಿಲ್ಲವೆಂಬುದೆ ಜ್ಞಾನಸ್ವರೂಪ. ಇದು ದೃಶ್ಯವಾಗಿದೆ. ನಾನು ದ್ರಷ್ಟನಾದ ಆತ್ಮನಾಗಿದ್ದೇನೆ. ಹೀಗೆ ತಿಳಿಯುವುದರಿಂದ ದೇಹದಲ್ಲಿದ್ದ ಅಹಂ ಬುದ್ಧಿ, ಮಮತಾ ಬುದ್ಧಿ, ಹೋಗುತ್ತದೆ. ನಾನು ಸದಾ ದ್ರಷ್ಟಾ ರೂಪನೆ ಇದ್ದೇನೆಂಬ ನಿಃಶ್ಚಯ ಜ್ಞಾನವಾಗುತ್ತದೆ . ತಾನು ಆತ್ಮನು , ಹುಟ್ಟುವದಿಲ್ಲ ಸಾಯುವದಿಲ್ಲ, ನಾನು ಯಾವಾಗಲೂ ಇದ್ದವನೆ . ಅಜನು ನಿತ್ಯನು ಶಾಶ್ವತನು ಅನಾದಿ ಕಾಲದಿಂದ ಇದ್ದವನು. ಆದ್ದರಿಂದಲೆ ಶರೀರವು ನಾಶವಾದರೂ ಆತ್ಮನಾದ ನಾನು ನಾಶವಾಗುವದಿಲ್ಲ.ಘಟವು ಒಡೆದರೆ,ಘಟಾಕಾಶವು ಒಡೆಯದಂತೆ, ಕನ್ನಡಿ ಚೂರಾದರೂ ಅದರಲ್ಲಿದ್ದ ಪ್ರತಿಬಿಂಬ ಚೂರಾಗದಂತೆ, ದೇಹ ನಾಶವಾದರೆ ಆತ್ಮನಾದ ನಾನು ನಾಶವಾಗುವುದಿಲ್ಲ ನಾನು ಅವಿನಾಶಿಯಾಗಿದ್ದೇನೆ.

ಸ್ಥೂಲ ದೇಹದ ಏಳು ಧರ್ಮಗಳು ಆತ್ಮನಿಗಿಲ್ಲವೆಂಬುದನ್ನು, ಭಾಷ್ಯಕಾರರಾದ ಶ್ರೀಮತ್ ಶಂಕರ ಭಗವತ್ಪಾದಾಚಾರ್ಯರು ಹಸ್ತಮಲಕ ಸ್ತೋತ್ರದಲ್ಲಿ ಈ ರೀತಿ ತಿಳಿಸಿದ್ದಾರೆ.

ನಾಹಂ ಮನಷ್ಯೋನ ಚ ದೇವ ಯಕ್ಷೋ ನ ಬ್ರಾಹ್ಮಣ , ಕ್ಷತ್ರಿ, ವೈಶ್ಯ, ಶೂದ್ರನ ಬ್ರಹ್ಮಚಾರಿ ನ ಗೃಹೀ ವನಸ್ಥೋ ಭಿಕ್ಷುರ್ನ ಚಾಹಂ ನಿಜ ಬೋಧ ರೂಪಃ

ನಾನು ಮನುಷ್ಯನಲ್ಲ ದೇವತೆಯಲ್ಲ ಯಕ್ಷನೂ ಅಲ್ಲ ಬ್ರಾಹ್ಮಣ ಕ್ಷತ್ರಿ,ವೈಶ್ಯ,ಶೂದ್ರನು ಅಲ್ಲ ಬ್ರಹ್ಮಚಾರಿ, ಗೃಹಸ್ಥ,ವಾನಪ್ರಸ್ಥ, ಸನ್ಯಾಸಿಯು ಅಲ್ಲ ನಾನು ಸ್ವಯಂ ಜ್ಞಾನಸ್ವರೂಪ ಸಚ್ಚಿದಾನಂದೆ ಇದ್ದೇನೆ.

ಹೀಗೆ ದೃಶ್ಯ,ದೃಕ್,ವಿಚಾರ ಮಾಡುವುದರಿಂದ ದೃಶ್ಯರೂಪಾದ ಇಪ್ಪತ್ತೈದು ತತ್ತ್ವಗಳು ತಾನಾಗದೆ ಅದಕ್ಕೆ ಬೇರಾಗಿರುವ ದೃಷ್ಟಾರೂಪನೆ ತಾನೆನ್ನುವ ಜ್ಞಾನವಾಗುವುದು.ಇದರಂತೆ ಸೂಕ್ಷ್ಮ ದೇಹವನ್ನು ದೃಶ್ಯ,ದೃಕ್ ದೃಷ್ಠಿಯಿಂದ ನೋಡಬೇಕು. ಸೂಕ್ಷ್ಮ ದೇಹಕ್ಕೆ ಲಿಂಗದೇಹ ಪೂರ್ಯರ್ಷ್ಟಕವೆಂಬುದಾಗಿ ಹೆಸರುಗಳಿವೆ.ಸೂಕ್ಷ್ಮದೇಹ,ಲಿಂಗದೇಹ,ಪೂರ್ಯರ್ಷ್ಟಕ ವೆಂದರೇನು.ಸೂಕ್ಷ್ಮದೇಹವೆಂದರೆ ಇದು ಸ್ಥೂಲ ದೇಹದಂತೆ ಕರ ಚರಣದ ಅವಯವ ಸಹಿತ ಸ್ಥೂಲವಾಗಿ ಕಂಭದಂತೆ ಪ್ರತ್ಯಕ್ಷವಾಗಿ ಕಣ್ಣಿಗೆ ಕಾಣಿಸುವುದಿಲ್ಲ ವಾದುದರಿಂದ ಇದಕ್ಕೆ ಸೂಕ್ಷ್ಮದೇಹವೆಂದು ಹೆಸರು ಬಂದಿದೆ.

ಲೀನಂ ಅರ್ಥಂ ನವುಯತೀತ ಲಿಂಗಂ ಕಾಣದಿರುವ ಆತ್ಮನನ್ನು ತೋರಿಸುವ ಕರಣವಾಗಿರುವುದರಿಂದ ಇದಕ್ಕೆ ಲಿಂಗದೇಹವೆನ್ನುತ್ತಾರೆ. ಎಂಟು ಪುರಗಳಿಂದ ಕೂಡಿರುವುದಕ್ಕೆ ಇದಕ್ಕೆ ಅಷ್ಟಪುರಿ,ಅಥವಾ ಪೂರ್ಯರ್ಷ್ಟಕವೆನ್ನುತ್ತಾರೆ. ಎಂಟು ಸಮೂಹಗಳು ಅವುಗಳೆಂದರೆ: ಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ , ಪಂಚಕ ಪ್ರಾಣ , ಪಂಚಕ ಭೂತ, ಪಂಚಕ ಅಂತಃಕರಣ, ಅವಿದ್ಯೆ, ಕಾಮ,ಮತ್ತು ಕರ್ಮ ಇವು ಎಂಟು ಸೇರಿ ಪೂರ್ಯರ್ಷ್ಟಕವೆಂದಿದ್ದಾರೆ.

ಸೂಕ್ಷ್ಮ ದೇಹವನ್ನು ತಾತ್ವಿಕ ರೀತಿಯಿಂದ ನೋಡಲು ಅಪಂಚೀಕೃತ ಪಂಚಮಹಾಭೂತಗಳ ಹದಿನೇಳು ತತ್ವಗಳಿಂದ ಕೂಡಿಕೊಂಡಿರುವುದೆ ಸೂಕ್ಷ್ಮ ದೇಹ. ಈ ಸೂಕ್ಷ್ಮ ದೇಹವೆಂದರೆ ಪಂಚ ಜ್ಞಾನೇಂದ್ರಿಯಂಗಳಾದ ಶ್ರೋತ್ರ,ತ್ವಚ,ನೇತ್ರ, ಜಿಹ್ವೆ ಮತ್ತು ಘ್ರಾಣ. ಪಂಚಕರ್ಮೇಂದ್ರಿಯಂಗಳಾದ ವಾಕ್ ಪಾಣಿ,ಪಾದ ಉಪಸ್ಥ ಮತ್ತು ಗುಹ್ಯ. ಪಂಚ ಪ್ರಾಣಗಳಾದ ಪ್ರಾಣ,ಅಪಾನ,ಸಮಾನ, ಉದಾನ, ವ್ಯಾನ. ಇನ್ನು ಮನಸ್ಸು ಬುದ್ದಿಗಳೆಂದರೆ ಸಂಕಲ್ಪ ವಿಕಲ್ಪ ಮಾಡುವ ಅಂತಃಕರಣ ವೃತ್ತಿಗೆ ಮನಸ್ಸೆಂತಲೂ ನಿಶ್ಚಯ ಮಾಡುವ ವೃತ್ತಿಗೆ ಬುದ್ದಿ ಎಂತಲೂ ಹೆಸರು. ಹೀಗೆ ಹದಿನೇಳು ತತ್ವದಿಂದೊಡಗೂಡಿದುದೆ ಸೂಕ್ಮ ದೇಹವಾಗಿದೆ. ನಾನು ಜಾಗ್ರದಾವಸ್ಥೆಯಲ್ಲಿಯೂ ಮನಸ್ಸು ಇಂದ್ರಿಯಂಗಳ ಸಹಾಯದಿಂದ ಎಲ್ಲವನ್ನು ಬೆಳಗುತ್ತವೆ. . ಸ್ವಪ್ನಾವಸ್ಥೆಯಲ್ಲಿಯೂ ಕೇವಲ ಅಂತಃಕರಣ ಉಪಾಧಿಯಿಂದ ಬೆಳಗುತ್ತೇನೆ. ಸುಷುಪ್ತಿ ಅವಸ್ಥೆಯಲ್ಲಿ ಅವಿದ್ಯಾ ಉಪಾಧಿಯಿಂದ ಸುಖವನ್ನು ಬೆಳಗುವುದರಿಂದ ನಿದ್ರೆ ಮಾಡಿ ಎದ್ದ ನಂತರ, ನಿದ್ರೆ ಹೇಗೆ ಮಾಡಿದೆ? ಎಂದು ಯಾರಾದರೂ ಪ್ರಶ್ನಿಸಿದರೆ ಸುಖವಾಗಿ ಆನಂದರೂಪವಾಗಿ ಮಲಗಿದ್ದೆ ಏನೊಂದು ಗೊತ್ತಾಗಲಿಲ್ಲ. ಎಂಬುದಾಗಿ ಸುಷುಪ್ತಿ ಅವಸ್ಥೆಯ ಅನುಭವವನ್ನು ಹೇಳುವದರಿಂದ, ಸುಷುಪ್ತಿಯಲ್ಲಿಯೂ ನಾನಿದ್ದೇನೆಂಬುದು ಸಿದ್ಧವಾಗುತ್ತದೆ.

ಈ ಹದಿನೇಳು ತತ್ವಗಳು ತನಗೆ ದೃಶ್ಯವಾಗಿ ತೋರುವುದರಿಂದ ತಾನಲ್ಲ,ಇವು ಅಪಂಚೀಕೃತ ಪಂಚ ಮಹಾಭೂತಗಳಿಗೆ ಸೇರಿರುವುದರಿಂದ ನನ್ನವೂ ಅಲ್ಲ. ನಾನು ಇದಕ್ಕೆ ವಿಲಕ್ಷಣನು. ಕಣ್ಣು,ತನ್ನ ಶರೀರವನ್ನು ಸಕಲ ಜಗವ ನೋಡುವುದು ಆದರೂ ತಾನು ಹೇಗೆ ಬೇರಾಗಿರುವುದೊ ಹಾಗೆ ಹದಿನೇಳು ತತ್ವಗಳಿಂದ ಕೂಡಿದ ಸೂಕ್ಷ್ಮ ದೇಹವನ್ನು ನೋಡುವ ನಾನು, ಎಂದಿಗೂ ಈ ದೇಹವಾಗುವುದಿಲ್ಲ. ಈ ರೀತಿ ದೃಶ್ಯ ದೃಕ್‌ಗಳ ವಿಲಕ್ಷಣದಿಂದ ಸೂಕ್ಷ್ಮ ದೇಹ ನಾನು ಅಲ್ಲ, ನನ್ನದೂ ಅಲ್ಲವೆಂದು ತಿಳಿದುಕೊಳ್ಳಬೇಕು.

ಇದೊಂದು ನಾಟಕ ಶಾಲೆ. ಅಲ್ಲಿ ರಾಜ,ಮಂತ್ರಿ,ಸಭಿಕರು ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತು ನೃತ್ಯವು ಪ್ರಾರಂಭವಾಗುವುದನ್ನೆ ಎದುರು ನೋಡುತ್ತಾರೆ. ಆಗ ನರ್ತಕಿ ಬಂದು ನೃತ್ಯ ಮಾಡುತ್ತಾಳೆ. ಅದಕ್ಕನುಸಾರವಾಗಿ ವಾದ್ಯದವರು ವಾದ್ಯಗಳ ಬಾರಿಸುತ್ತಾರೆ. ರಾಜ,ಮಂತ್ರಿ ಸಭೆ ಸಭಿಕರೆಲ್ಲರೂ ಸಂತೋಷದಿಂದ ನೋಡುತ್ತಾ ಕುಳಿತಿದ್ದಾರೆ. ಇದೆಲ್ಲವನ್ನು ಆ ನೃತ್ಯ ಶಾಲೆಯ ದೀಪವು ಬೆಳಗುತ್ತದೆ.

ಸ್ವಲ್ಪ ಹೊತ್ತಾದ ನಂತರ ನೃತ್ಯ ಮುಗಿದು ಹೋಗುತ್ತದೆ. ಅದನ್ನು ಆ ದೀಪವು ಬೆಳಗುತ್ತದೆ. ನಂತರ ಎಲ್ಲರೂ ಹೋದ ಮೇಲೆ, ನಂತರ ಉಳಿದ ಖಾಲಿ ಸ್ಥಳವನ್ನು ಪ್ರಕಾಶಿಸುತ್ತದೆ. ಹಾಗೆ ಈ ಸ್ಥೂಲದೇಹವೆ ಒಂದು ನೃತ್ಯ ಶಾಲೆ, ಚಿದಾಭಾಸನೆ ರಾಜ,ಮನಸ್ಸೆ ಮಂತ್ರಿ , ಬುದ್ದಿಯೆ ನರ್ತಕಿ , ದಶೇಂದ್ರಿಯಂಗಳೆ ವಾದ್ಯಗಾರರು, ಪಂಚ ಪ್ರಾಣಗಳೆ ಅನುಚರರು, ಶಬ್ದಾದಿ ವಿಷಯಗಳೆ ಸಭಿಕರು. ಬುದ್ದಿ ಎಂಬ ನರ್ತಕಿಯು ಜಾಗ್ರ ಸ್ವಪ್ನಗಳಲ್ಲಿ ವಿಷಯಂಗಳೊಡನೆ ಕೂಡಿ ಅವುಗಳನ್ನು ಉಪಭೋಗಿಸುತ್ತ, ಎಲ್ಲ ವ್ಯವಹಾರ ಮಾಡುತ್ತಾಳೆ. ಇಂದ್ರಿಯಂಗಳು ಬುದ್ಧಿಗನುಸಾರವಾಗಿ ಎಲ್ಲ ಕೆಲಸ ಮಾಡುತ್ತವೆ. ನಂತರ ಬುದ್ಧಿಯು ಸುಷುಪ್ತಿಯಲ್ಲಿ ತನಗೆ ಕಾರಣವಾದ ಅಜ್ಞಾನದಲ್ಲಿ ಲಯಿಸುತ್ತದೆ. ಆಗ ಯಾವ ವ್ಯವಹಾರವು ನಡೆಯುವುದಿಲ್ಲ. ಇಲ್ಲಿ ಆತ್ಮನೆ ದೀಪ ಜಾಗ್ರತ ಸ್ವಪ್ನಗಳಲ್ಲಿ ಎಂಬ ವ್ಯವಹಾರಗಳು ನಡೆದರೂ ಸುಷುಪ್ತಿಯಲ್ಲಿ ಏನೂ ನಡೆಯದಿದ್ದರೂ ಆತ್ಮನಾದ ತಾನು, ನಿರ್ವಿಕಾರವಾಗಿದ್ದ ದ್ರಷ್ಟಾ ರೂಪನಾಗಿದ್ದು ಬೆಳಗುತ್ತಾನೆ. ನೃತ್ಯ ಶಾಲೆಯ ದೀಪವು , ನೃತ್ಯ ನಡೆದಾಗಲೂ , ಅದು ಮುಗಿದು ಎಲ್ಲರು ಎದ್ದು ಹೋದ ಮೇಲೂ ಹೇಗೆ ನಿರ್ವಿಕಾರವಾಗಿದ್ದು ಪ್ರಕಾಶ ಮಾಡಿತೋ! ಹಾಗೆ ಸ್ವಯಂಜ್ಯೋತಿಯಾದ ತಾನು. ಈ ದೇಹದಲ್ಲಿ ಜಾಗ್ರತ ಸ್ವಪ್ನಗಳಲ್ಲಿ ದೇಹ ಇಂದ್ರಿಯಂಗಳಿಂದ ವ್ಯವಹಾರ ನಡೆದರೂ ಸುಷುಪ್ತಿಯಲ್ಲಿ ನಡೆಯದಿದ್ದರೂ ಇದರ ಭಾವಭಾವಗಳನ್ನು ನಿರ್ವಿಕಾರವಾಗಿದ್ದು ಬೆಳಗುತ್ತದೆ.

ಘಟದೊಳಗಿನ ದೀಪವು ಘಟದ ಒಳ ಹೊರಗೆಲ್ಲ, ಪ್ರಕಾಶ ಮಾಡಿದಂತೆ ಆತ್ಮಜ್ಯೋತಿಯು ದೇಹದ ಒಳ ಹೊರಗೆಲ್ಲ ಸಾಕ್ಷಿ ರೂಪದಿಂದ ಸ್ವಯಂ ಪ್ರಕಾಶವಾಗಿ ಬೆಳಗುತ್ತದೆ. ದೀಪಕ್ಕೆ ಬೆಳಗುವುದು ಹೇಗೆ ಸ್ವಭಾವವೊ ಹಾಗೆ ಆತ್ಮನಾದ ನನಗೆ ಅರಿಯುವದೆ ಸ್ವಭಾವವು, ಆದ್ದರಿಂದ ಸ್ವಯಂ ಪ್ರಕಾಶನಾದ ಆತ್ಮನು ನಾನು ಚೇತನನಾಗಿದ್ದೇನೆ. ಸೂಕ್ಷ್ಮದೇಹವು ತನ್ನನ್ನು ತಾನು ಅರಿಯುವುದಿಲ್ಲ ಅನ್ಯವನ್ನು ತಿಳಿಯುವುದಿಲ್ಲವಾದ್ದರಿಂದ ಜಡವಾಗಿದೆ. ಸೂಕ್ಷ್ಮದೇಹವು ಜಡವು ವಿಕಾರಿಯಾಗಿದೆ. ಆತ್ಮನಾದ ನಾನು ಇದನ್ನು ನೋಡುವ ದ್ರಷ್ಟನೂ,ಚೇತನನೂ ನಿರ್ವಿಕಾರಿಯಾಗಿದ್ದೇನೆ. ಇದು ದೃಶ್ಯವಾದುದರಿಂದ ನಾನಲ್ಲ, ನನ್ನದೂ ಅಲ್ಲ, ನಾನು ಇದಕ್ಕಿಂತ ವಿಲಕ್ಷಣನಾಗಿದ್ದೇನೆ.

ಆತ್ಮನಾದ ನಾನು ತ್ರಿಕಾಲಾಭಾಧಿತನಾಗಿರುವುದರಿಂದ ಸದ್ರೂಪನು ಈ ದೇಹಗಳು ಒಂದು ಕಾಲದಲ್ಲಿ ತೋರಿ ಮತ್ತೊಂದು ಕಾಲದಲ್ಲಿ ತೋರದೆ, ಅಡಗುವದರಿಂದ ಅಥವಾ ಇರುವಿಕೆ ಇಲ್ಲದೆ ತೋರಿ ಜ್ಞಾನದಿಂದ ಬಾಧೆಯಾಗಿ ಹೋಗುವುದರಿಂದ ಅಸತ್ತಾಗಿದೆ. ನಾನು ಸ್ವಯಂಪ್ರಕಾಶನಾಗಿ. ಮೂರು ದೇಹಗಳನ್ನು ಇದಿರಿಟ್ಟು ಅರಿಯುವುದರಿಂದ, ಚಿದ್ರೂಪನು . ಈ ದೇಹಗಳು ತಮ್ಮನ್ನು ತಾವು ತಿಳಿಯುವುದಿಲ್ಲ.ಅನ್ಯವನ್ನು ತಿಳಿಯುವುದಿಲ್ಲವಾಗಿ ಜಡವು. ನಾನು ನಿರ್ವಿಕಾರ ಸ್ವರೂಪನಾದುದರಿಂದ ಆನಂದ ರೂಪನು. ಈ ದೇಹಗಳು ವಿಕಾರಗಳಾದುದರಿಂದ ದುಃಖ ರೂಪವಾಗಿದೆ. ಆತ್ಮನಾದ ನಾನು ಸಚ್ಚಿದಾನಂದ ರೂಪನು. ಮೂರು ದೇಹಗಳು ಅಸತ್ ಜಡ ದುಃಖರೂಪಗಳು ಆಗಿರುವುದರಿಂದ ನಾನು ದೇಹಾದಿಗಳಿಂದ ವಿಲಕ್ಷಣನಾಗಿದ್ದೇನೆ. ಇದು ಕಾರಣ ಇವು ನಾನಲ್ಲ, ನನ್ನವಲ್ಲ, ಸ್ಥೂಲದೇಹವು ಪಂಚೀಕೃತ ಪಂಚಮಹಾಭೂತಗಳ ಕಾರ್ಯ , ಸೂಕ್ಮದೇಹ ಅಪಂಚೀಕೃತ ಪಂಚಮಹಾಭೂತಗಳ ಕಾರ್ಯ, ಕಾರಣ ದೇಹವು ಅಜ್ಞಾನಕ್ಕೆ ಸೇರಿದೆ ಅಥವಾ ಅಜ್ಞಾನರೂಪವಾಗಿದೆ. ಆದ್ದರಿಂದ ಈ ದೇಹಗಳೂ ನನ್ನವೂ ಅಲ್ಲ. ಇವಕ್ಕೆ ನಾನು ವಿಲಕ್ಷಣನು . ಘಟವನ್ನು ನೋಡುವವನು ಘಟಕ್ಕಿಂತ ಬೇರಾಯಾಗಿರುವಂತೆ, ಈ ದೇಹಗಳನ್ನು , ಇವುಗಳ ಧರ್ಮಗಳನ್ನು , ವಿಕಾರಗಳನ್ನು, ತಿಳಿಯುವ ಆತ್ಮನಾದ ನಾನು ಇವುಗಳಿಗಿಂತ ಬೇರೆ. ನಾನು ದೇಹತ್ರಯದ ದ್ರಷ್ಟನಾಗಿದ್ದೇನೆಂದು ದೃಶ್ಯ ದೃಕ್ ವಿಭಾಗ ಮಾಡಿ, ದ್ರಷ್ಟಾಸ್ವರೂಪವನ್ನೆ ತಿಳಿಯುವದು.

ಇದೆ ಪ್ರಕಾರ ಪಂಚಕೋಶಗಳನ್ನು ವಿಚಾರ ಮಾಡುವುದರಿಂದ, ಮೊದಲನೆಯದಾಗಿ ನಮ್ಮ ನಿಜ ಸ್ವರೂಪದ ಪರಿಚಯವಾಗುವುದು . ಲೌಕಿಕ ವಿಚಾರದಿಂದ ಇಂಥ ಪುರುಷಾರ್ಥಜ್ಞಾನ ಅದೆಂತು ಸಾಧ್ಯ? ಇದಲ್ಲದೆ ಪಂಚಕೋಶಗಳು ನಾನು ನನ್ನವೆಂಬುದಾಗಿ, ತಿಳಿದುಕೊಂಡಿರುವ ಅಭ್ಯಾಸ (ಭ್ರಾಂತಿ) ತಪ್ಪು ತಿಳುವಳಿಕೆ ಹೋಗಬೇಕಾದರೆ ವಿಚಾರವೆ ಅವಶ್ಯಕವು.

ಅವಿಚಾರೇಣ ಕೃತೋ ಬಂಧಃ ವಿಚಾರೇಣ ನಿವರ್ತತೇ: ಅವಿಚಾರದಿಂದ ಉಂಟಾದ ಬಂಧನದ ನಿವೃತ್ತಿಯು, ವಿಚಾರ ಒಂದರಿಂದಲೆ ಸಾಧ್ಯವು. ಶೋಕದಿಂದ ಬಿಡುಗಡೆ ಹೊಂದಬೇಕಾದರೆ, ಆತ್ಮನನ್ನು ತಿಳಿಯಬೇಕೆಂಬುದಾಗಿ ಶೃತಿಗಳಲ್ಲಿ ಆತ್ಮ ವಿಚ್ಛೋಕಂತರತಿ ಎಂಬುದಾಗಿ ಹೇಳಿದೆ . ಆದುದರಿಂದ ಆತ್ಮನ ಯತಾರ್ಥ ಸ್ವರೂಪದ ಅರಿವು ಉಂಟಾಗಬೇಕಾದರೆ ಪಂಚ ಕೋಶ ವಿಚಾರ ಮಾಡುವುದು ಅವಶ್ಯವಾಗಿದೆ.

ಆತ್ಮನು ಪಂಚ ಕೋಶಾತೀತನು ಅಂದರೆ, ಪಂಚ ಕೋಶಗಳಿಗಿಂತ ಬೇರೆಯಾಗಿ ಅಸಂಗನಾಗಿ ಇರುವನು. ಆತ್ಮನು ಪಂಚಕೋಶಗಳಲ್ಲಿದ್ದರೂ , ತಾವರೆ ಎಲೆ ನೀರಿನಲ್ಲೆ ಇದ್ದರೂ, ಅದಕ್ಕೆ ಅಂಟದಿರುವಂತೆ ಆಕಾಶದಲ್ಲಿ ಎಷ್ಟೆ ಮಳೆ ಸುರಿದರೂ, ಅದು ನಿರ್ಲೇಪವಾಗಿರುವುದರಿಂದ ಆತ್ಮನು, ಪಂಚಕೋಶಂಗಳು ತಮ್ಮ ಕಾರ್ಯರೂಪದಲ್ಲಿದ್ದರೂ ಆತ್ಮನಾದ ನಾನು ನಿರ್ಲೇಪನೂ ನಿಸ್ಸಂಗಿಯೂ ಆಗಿರುವೆನು.

ಪಂಚಕೋಶಗಳೆಂದರೆ ಅನ್ನಮಯಕೋಶ,ಪ್ರಾಣಮಯಕೋಶ,ವಿಜ್ಞಾನಮಯ ಕೋಶ, ಆನಂದ ಮಯ ಕೋಶ, ಹೀಗೆ ಪಂಚಕೋಶಗಳಿವೆ.

ಅನ್ನಮಯ ಕೋಶವು ಅನ್ನರಸದಿಂದಲೆ ಹುಟ್ಟಿ, ಅನ್ನ ರಸದಿಂದಲೆ ವೃದ್ಧಿಯಾಗಿ, ಕೊನೆಗೆ ಅನ್ನರಸವು ಪೃಥ್ವಿಯಲ್ಲಿ ಲೀನವಾಗುವುದರಿಂದ, ಅದಕ್ಕೆ ಅನ್ನಮಯ ಕೋಶವೆಂಬ ಹೆಸರು ಬಂದಿದೆ ಅನ್ನಮಯ ಕೋಶವು ಉತ್ಪತ್ತಿ ನಾಶ, ಮೊದಲಾದ ಷಡ್ಭಾವ ವಿಕಾರದಿಂದ ಇದೆ. ಇದು ಭೌತಿಕವಾಗಿದ್ದು ಆತ್ಮನಾದ ನಾನು ಅಭೌತಿಕನಾಗಿರುವುದರಿಂದ , ನಾನು ಅನ್ನಮಯ ಕೋಶಕ್ಕಿಂತ ಬೇರೆಯಾಗಿದ್ದೇನೆ.

ಪಂಚ ಕರ್ಮೇಂದ್ರಿಯಂಗಳು, ಪಂಚ ಪ್ರಾಣಗಳು ಪಂಚ ಉಪಪ್ರಾಣಗಳು, ಸೇರಿ ಪ್ರಾಣಮಯ ಕೋಶವಾಗಿದೆ. ಈ ಪ್ರಾಣಮಯ ಕೋಶವು ಯಂತ್ರದಂತೆ ಕ್ರಿಯಾಶೀಲವಾಗಿದ್ದರೂ ಸ್ವಯಂ ಜ್ಞಪ್ತಿ ಇಲ್ಲದ ಜಡ ವಸ್ತುವಾಗಿದೆ. ಇದು ಹಸಿವು ತೃಷೆಗಳೆಂಬ ಧರ್ಮಗಳಿಂದ ಕೂಡಿದೆ. ಆತ್ಮನಾದ ನಾನು ನಿಷ್ಕ್ರಿಯನು ಚೇತನನು ಕ್ಷುತ್ತುಪಿಪಾಸನಾ ಧರ್ಮರಹಿತನು ಆಗಿರುವುದರಿಂದ , ನಾನು ಪ್ರಾಣಮಯ ಕೋಶಕ್ಕಿಂತ ಬೇರೆ ಯಾಗಿರುವೆ ಅಸಂಗನಾಗಿರುವೆ.

ಮನೋಮಯಕೋಶವು ಅನ್ನಮಯ, ಪ್ರಾಣಮಯ , ಕೋಶಗಳಿಂಗಿಂತ ಅಂತರದಲ್ಲಿದೆ, ಸೂಕ್ಷ್ಮವಾಗಿದೆ. ಮತ್ತು ವ್ಯಾಪಕವಾಗಿದೆ. ಮನವು ಸರಿಯಾಗಿ ಇದ್ದರೆ ನಾವು ಯಾವುದಾದರೊಂದು ಕಾರ್ಯ ಮಾಡಬಹುದು. ಇದು ಚಂಚಲವಾದದ್ದು ವಿಕಾರಿಯಾದದ್ದು ಸುಖದುಃಖರೂಪ ಧರ್ಮವುಳ್ಳದ್ದು. ಆತ್ಮನಾದ ನಾನು ಕೂಟಸ್ಥನಾಗಿಯೂ ನಿರ್ವಿಕಾರನಾಗಿಯೂ ಸುಖದುಃಖಗಳನ್ನು ಅರಿಯುವ ಸಾಕ್ಷಿಯಾಗಿಯೂ ,ಇರುವುದರಿಂದ ಈ ಮನೋಮಯ ಕೋಶಕ್ಕಿಂತ ನಾನು ಬೇರೆಯಾಗಿದ್ದೇನೆಂಬುದು ಸಹಜ ವಿದಿತವಾಗುವದು .

ವಿಜ್ಞಾನಮಯ ಕೋಶವು, ಅನ್ನಮಯ, ಪ್ರಾಣಮಯ, ಮನೋಮಯ ಕೋಶಗಳಿಂತ ಅಂತರದಲ್ಲಿದೆ.ಸೂಕ್ಷ್ಮವಾಗಿದೆ ವ್ಯಾಪಕವಾಗಿದೆ. ಈ ವಿಜ್ಞಾನಮಯ ಕೋಶವಿಲ್ಲದಿದ್ದರೆ ಮನೋಮಯ ಕೋಶದ ಯಾವ ವ್ಯಾಪಾರವು ನಡೆಯುವುದಿಲ್ಲ. ಕೆರೆಯಲ್ಲಿ ನೀರು ತುಂಬಿದ್ದರೆ ತೂಬಿನ ಮೂಲಕ ಗದ್ದೆ,ಮೊದಲಾದವುಗಳಿಗೆ ಹರಿಯುತ್ತದೆ, ವಿಜ್ಞಾನಮಯಕೋಶ ಕೆರೆಯಲ್ಲಿರುವ ನೀರಿನಂತೆ ಮನೋಮಯ ಕೋಶವು ತೂಬಿನಂತೆ. ದೇವರು ಮಾನವರಿಗೆ ಕೊಟ್ಟಿರುವ ಅತಿ ಅಮೂಲ್ಯ

ವಸ್ತುವೆಂದರೆ ಬುದ್ಧಿ ಅಥವಾ ಕೋಶ ಇದು ಕೆಟ್ಟು ಹೋದವನನ್ನು ಹುಚ್ಚನೆನ್ನುತ್ತಾರೆ.

ವಿಜ್ಞಾನಮಯ ಕೋಶವು ಕರ್ತೃತ್ವ ಧರ್ಮವುಳ್ಳದ್ದಾಗಿದೆ. ಇದಲ್ಲದೆ ಭೋಕ್ತೃತ್ವವುಳ್ಳದ್ದು ಆಗಿದೆ. ಇದು ಸುಷುಪ್ತಿಯಲ್ಲಿ ಅಭಾವವಾಗುತ್ತದೆ. ಮತ್ತು ಶೋಕ ಮೋಹಗಳಿಂದಲೂ ತೀಕ್ಷ್ಣತ್ವ ಮಂದತ್ವ ಮೊದಲಾದವುಗಳಿಂದ ತಿಳಿಸಿಕೊಳ್ಳುವವುಗಳು ಆಗಿರುವುದರಿಂದ ಆತ್ಮನಾದ ತಾನು ಇದನ್ನು ಅರಿಯುವನು. ವಿಜ್ಞಾನಮಯ ಕೋಶವೆಂಬುದು ಘಟದಂತೆ, ತಾನು ಇದಕ್ಕೆ ಘಟದ್ರಷ್ಟದಂತೆ ಬೇರೆಯಾಗಿರುವನು.

ಆನಂದಮಯ ಕೋಶವು ಮೂರು ವಿಧವಾದ ಸ್ವರೂಪಗಳಿಂದ ಕೂಡಿ ಕೊಂಡಿದೆ. ಪುಣ್ಯ ಕರ್ಮವು ಸಕಾಮವಾಗಿರಲಿ ನಿಷ್ಕಾಮವಾಗಿರಲಿ ಅವುಗಳಿಂದ ಬಂದ ಸುಖವನ್ನು ಭೋಗಿಸುವಾಗ ಶಬ್ಧ ಸ್ಪರ್ಶದ ಪಂಚ ವಿಷಯಗಳಿಂದ ಉಂಟಾಗುವ ಸುಖವನ್ನು ಭೋಗಿಸುವಾಗ ಬುದ್ಧಿ ವೃತ್ತಿಯು ಅಂತರ್ಮುಖವಾಗುತ್ತದೆ. ಆಗ ಆತ್ಮನ ಪ್ರತಿಬಿಂಬವು ಅದರಲ್ಲಿ ಬಿದ್ದು ನಮಗೆ ಆನಂದವುಂಟಾಗುತ್ತದೆ. ಇದು ಆನಂದಮಯ ಕೋಶದ ಮೊದಲನೆಯ ಸ್ವರೂಪ.

ಜಾಗ್ರದಾವಸ್ಥೆಯು ಪ್ರಾರಬ್ಧ ಕರ್ಮಾನುಸಾರ ಮುಗಿದು ಸುಷುಪ್ತಿ ಅವಸ್ಥೆ ಬಂದಾಗ ಬುದ್ಧಿ ವೃತ್ತಿಯು ತನಗೆ ಕಾರಣವಾದ ಅವಿದ್ಯೆಯಲ್ಲಿ ಲಯಿಸುತ್ತದೆ. ಈ ಅವಿದ್ಯೆಯಲ್ಲಿ ಆತ್ಮನ ಪ್ರತಿಬಿಂಬ ಬೀಳುವುದರಿಂದ ನಮ್ಮಗಳಿಗೆ ಸುಖವಾಗತ್ತದೆ. ಇದೆ ಆನಂದಮಯದ ಎರಡನೆ ಸ್ವರೂಪ. ಆನಂದಮಯ ಕೋಶವು ಜಾಗ್ರದಾವಸ್ಥೆಯಲ್ಲಿ ಪ್ರಿಯ,ಮೋದ,ಪ್ರಮೋದಗಳ ರೂಪವಾಗಿದೆ. ಪ್ರಿಯ ವೃತ್ತಿ ಎಂದರೆ ಬಯಸಿದ ವಸ್ತು ಕಣ್ಣೆದುರಿಗೆ ಬಂದಾಗ ಉಂಟಾಗುವ ಬುದ್ಧಿ ವೃತ್ತಿಗೆ ಪ್ರಿಯವೃತ್ತಿ ಎನ್ನುತ್ತಾರೆ. ಇಚ್ಛಿತ ವಸ್ತುವು ಕರಗತವಾದಾಗ ಉಂಟಾಗುವ ಆನಂದಕ್ಕೆ ಮೋದ ವೃತ್ತಿ ಅನ್ನು ತ್ತಾರೆ.

ನಾವು ಬಯಸಿದ ವಸ್ತುವನ್ನು ಭೋಗಿಸುವಾಗ ಉಂಟಾಗುವ ಹೆಚ್ಚಿನ ಸಂತೋಷಕ್ಕೆ ಪ್ರಮೋದ ವೃತ್ತಿಗಳೆಂದು ಹೆಸರು. ಈ ಮೂರು ವೃತ್ತಿಗಳಿಂದ ಕೂಡಿರುವುದೆ ಆನಂದಮಯ ಕೋಶ. ಇದು ಮೂರನೆಯ ಸ್ವರೂಪ. ಈ ಆನಂದಮಯ ಕೋಶವು ಭೋಕ್ಯ ಸ್ವರೂಪವಾಗಿದೆ. ಮತ್ತು ಕ್ಷಣಿಕವಾಗಿದೆ.ಆತ್ಮನಾದ ನಾನು ಅಭೋಕ್ತೃನಾಗಿದ್ದೇನೆ. ಆನಂದವನ್ನಾಗಲಿ ಸುಖವನ್ನಾಗಲಿ ಭೋಗಿಸುವವನಲ್ಲ. ನಾನು ಸುಖ ಸ್ವರೂಪ ಆಗಿದ್ದೇನೆ. ಈ ಆನಂದಮಯ ಕೋಶದ ಭಾವಾಭಾವಗಳನ್ನು ತಿಳಿಯುವ ನಾನು ನಿತ್ಯನಿದ್ದೇನೆ. ಇದು ಕಾರಣ ನಾನು ಆನಂದಮಯ ಕೋಶಕ್ಕೆ ದ್ರಷ್ಟಾರೂಪನಾಗಿದ್ದೇನೆ. ಹೀಗೆ ವಿಚಾರದಿಂದ ಆತ್ಮಅನಾತ್ಮಗಳನ್ನು ಬೇರ್ಪಡಿಸಿ ಅನಾತ್ಮವಾದ ಪಂಚಕೋಶಗಳನ್ನು ತೆಗೆದುಹಾಕಿದ ಮೇಲೆ. ತೆಗೆದು ಹಾಕಲಿಕ್ಕೆ ಬಾರದ ಸತ್ಯ ಸ್ವರೂಪನಾದ ದ್ರಷ್ಟಕ್ಕೆ ದ್ರಷ್ಟ ಉಳಿಯುತ್ತದೆ. ಇದು ತನ್ನಯ ಇರುವು ಆಗಿದೆ. ಅರಿವು ಆಗಿದೆ.

ದ್ರಷ್ಟಕ್ಕೆ ದ್ರಷ್ಟ ಮುಂದಿಲ್ಲ . ಇದು ಪ್ರಭುದೇವನ ಮಹಾನುಭಾವ. ಬಹು ಮಹಾಂತರು ಸಾಪೇಕ್ಷ ಜ್ಞಾನವ ಹೇಳಿದರೆ, ಈ ಘನವಂತ ಶೃತಿಗಗೋಚರವಾದುದನ್ನೆ ಬಿತ್ತರಿಸಿದ ಘನಮಹಿಮ, ದೃಶ್ಯಾದಿಗಳಿಗೆ ಸಾಕ್ಷಿ,ದ್ರಷ್ಟ ಎಂದು ಹೇಳಿದ. ಶೃತಿ ಪ್ರಮಾಣವನ್ನು ಅನುಸರಿಸಿ ಬೋಧಿಸಿದ ಮಹಾಂತರು ಬಹುವಾಗಿ ಇದ್ದಾರೆ. ಪ್ರಭುದೇವ ತನ್ನಿಂದ ತನ್ನ ಕಂಡ ಮಹದರುವೆ ಆದುದರಿಂದ ದ್ರಷ್ಟಕ್ಕೆ ದ್ರಷ್ಟ ಮುಂದಿಲ್ಲ ಇಲ್ಲವೆಂದು ಸಿಂಹಘರ್ಜನೆಯ ಗರ್ಜಿಸಿದ. ದ್ರಷ್ಟಕ್ಕೆ ದ್ರಷ್ಟ ಯಾರು? ತಾನೆ ಉಪಮಿಸದ ಘನ, ತಾನು ಅರಿಸಿಕೊಳ್ಳುವ ಅನಾತ್ಮವಾಗದವನು ,ಅರಿಯುವ ದ್ರಷ್ಟನು ಆಗದವನು.

ಅರಿಯದರಿವು ಏನೆಂದನಲಿಲ್ಲ,ಅರುವು ತನ್ನದಾದುದರಿಂದ ದ್ರಷ್ಟಾಕ್ಕೆ ದ್ರಷ್ಟಾ ಮುಂದಿಲ್ಲ ಇಲ್ಲವೆಂದು ಬಿತ್ತರಿಸಿದ. ತೋರಬಾರದ ಘನ ಹೇಳಲೆಂದೇನೋ, ಹೇಳಬಾರದ ಘನ

ತೋರಲೆಂದೇನೋ, ಸರಸಂದಾನದಪರಿಯಲ್ಲಿ ಗುಹೇಶ್ವರ ಲಿಂಗವದು ಕಲ್ಪಿತವಲ್ಲ. ತಾನು ನುಡಿಗೆಡೆಗೊಡದ ಘನವಾಗಿರುವಲ್ಲಿ ತನ್ನ ಘನವ ಹೇಳಲೆಂತು ತೋರಲೆಂತು? ಆವುದು ಹೇಳಲು ಬರುತ್ತದೆ ಅದು ತೋರಿಸಲು ಬರುತ್ತದೆ. ಆವುದು ತೋರಿಸಲು ಬರುವುದಿಲ್ಲವೆಂದಲ್ಲಿ ಅದನ್ನು ವಾಣಿಯಿಂದ ಕಥನಮಾಡುವದದೆಂತು. ದ್ರಷ್ಟಕ್ಕೆ ದ್ರಷ್ಟವು ಅದು ಅನುಪಮವು. ಏನೊಂದಾಗದ ಘನವು. ಏನೊಂದುಸರಲು ಬಾರದ ಘನ. ಭಾವಕ್ಕಿಂಬು ಕೊಡದ ಘನ. ಶಬ್ದಮೀಸಲು ದ್ರಷ್ಟಕ್ಕೆ ದ್ರಷ್ಟ ಅರುವಿನ ಅರುವು ನಿರಾಲಂಬ ಅರವು. ಅಖಂಡಿತ ಘನವಪ್ಪ ಪರಿಪೂರ್ಣವೆ ತನ್ನರುವೆಂದರಿದ ಘನವಂತ. ತನ್ನ ಮುಂದಿಲ್ಲ ಈ ಮುಂದಿಲ್ಲವೆಂಬುದು ಇಲ್ಲವೆಂದು ಅರುಹಿದ ನಿಃಶಬ್ದವೇದಿ. ಪ್ರಭುವಿನ ನಿಲುವು ವಾಙ್ಮನೋತೀತ ಶೃತಿಗಗೋಚರ ತಾನೆ.

ಮಾಡಿದಡೇನಹುದು ಮಾಡದಿರ್ದಡೇನಹುದು, ನಿಜವರಿತ ಮಹಾಂತ ತನು ನಷ್ಟ,ಮನ ನಷ್ಟ,ನೆನಹು ನಷ್ಟ,ಭಾವ ನಷ್ಟ,ಜ್ಞಾನ ನಷ್ಟ ಇಂತೀ ಪಂಚ ನಷ್ಟದೊಳಗೆ ನಾನು ನಷ್ಟವಾದೆನು ಆ ನಷ್ಟದೊಳಗೆ ನೀನು ನಷ್ಟವಾದೆ ಕಲಿದೇವರ ದೇವಾ ಎಂಬ ನುಡಿ 'ನಿಃಶಬ್ದಬ್ರಹ್ಮ ಮುಚ್ಯತೆ' ಎನುತಿದ್ದಿತ್ತು . ನಿಶಃಬ್ದ ಶಬ್ದ ಬೋಧ ಮಾಡಿದಡೇನಹುದು ಮಾಡದಿರ್ದಡೇನಹುದು, ಸಮತೆ ಸಯವಾದ ಶರಣ ಮಾಡಿದಡೇನಹುದು ಮಾಡದಿರ್ದಡೇನಹುದು ಅಹಮಿಲ್ಲದ ಚಿದ್ಘನ ಸ್ವರೂಪಾನುಸಂಧಾನ ಮಾಡಿದಡೇನಹುದು ? ಮಾಡಿದರೂ ಅದರಿಂದ ಪ್ರಯೋಜನವಿಲ್ಲ.ಮಾಡದಿದ್ದರು ಹಾನಿಯಿಲ್ಲ. ತನ್ನ ಪರಮ ಪುರುಷಾರ್ಥಕ್ಕೆ ಆವಾವ ಹಂಗು ಇಲ್ಲ. ಕಳೆದುಕೊಂಡುದಿಲ್ಲ ಪಡೆದುಕೊಂಡುದಿಲ್ಲ, ನಿರಂತವಾಗಿರುವ ಮಂಗಲಮಯವಾಗಿಹ ತನ್ನರಿವಿನ ಅರುವು ತನ್ನಿಂದ ತನಗೆ ವೇದ್ಯವಾಗಿ ಸ್ವತಂತ್ರನು ಸುಖಮಯನು.

ಗುಹೇಶ್ವರನೆಂಬ ಅರುವಿನ ಕುರುಹು ಮುಂದಿಲ್ಲ ಇಲ್ಲ ಮಾಡಿದಡೇನಹುದು ಮಾಡದಿರ್ದಡೇನಹುದು ತಾನಾರೆಂದರಿದ ಮಹಾಂತ ತನ್ನನ್ನು ಕುರುಹಾಗಿ ಕಂಡಿಲ್ಲ . ಲಿಂಗವನ್ನ ಪೂಜಾಲಿಂವಾಗಿ ಕುರುಹಾಗಿ ಕಂಡಿಲ್ಲ .ಗುಹೇಶ್ವರನನ್ನು ತನಗಿಂತ ಅನ್ಯವಾಗಿ ಕಾಣಲಿಲ್ಲ. ಗುಹೇಶ್ವರನನ್ನು ತನ್ನ ಹೃದಯದೋಳ್ ಬೆಳಗುವ ಘನ ಲಿಂಗವೆಂದು ಕಂಡರು, ತಾನೆ ಆಗಿ ಕಂಡರು ಲಿಂಗವೇ ತಾನಾಗಿ ಕಂಡರು .

ತಾನು ಮಾಡಿದಡೇನೋ ಮಾಡದಿರ್ದಡೇನೋ : ಪೂಜೆ ಮಾಡಿದಡೇನು, ಮಾಡದಿರ್ದಡೇನೋ ಎಂದು ಹೇಳಿಹರು. ಅಂಗವಾದವನು ಮಾಡಬಹುದು ಮಾಡದಿರಬಹುದು. ಆರು ಫಲಪದವಿಗೊಳಪಟ್ಟವರು, ಅವರು ಲಿಂಗಾರ್ಚನೆಯ ಹಂಗಿಗರು. ಲಿಂಗವೆ ತಾನಾಗಿಹ ಮಹಾಂತ ಅವನು ಸ್ವತಂತ್ರನು. ಅಕ್ರಿಯೆ ನಿಲುವಿನಲ್ಲಿ ನಿಂತ ನಿರ್ವಾಣನು. ಅಚಿಂತ್ಯಪದವೆ ತನ್ನಿರುವು ಆದ ಮಹಾಂತನು ಮಾಡುವುದು ಏತಕ್ಕಾಗಿ ?ಮಾಡುವುದರಿಂದ ಆವಾವ ಪ್ರಯೋಜನವಿಲ್ಲ. ಮಾಡುವುದರಿಂದ ಹಾನಿಯಿಲ್ಲ. ಸಮತೆ ಸಯವಾದ ಶರಣ , ಉಪಮೆ ನಿಸ್ಥಲವಾದ ಶರಣ ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ ಘನವೆ ತನ್ನರುವೆಂದರಿದ ಅಪ್ರಮಾಣ ಶರಣಂಗೆ ಭವ ವೇತರದು, ಬಂಧನ ವೇತರದು? ಭವ ಬಂಧನವೆ ಕಾಣದವಂಗೆ ಮಾಡಿದಡೇನಹುದು ಮಾಡದಿರ್ದಡೇನಹುದು. ಸಮಸ್ವರೂಪಿಯಾಗಿಹ ಘನವಂತ ಕಾಯದ ಶುಭಾಶುಭ ವಾಣಿಯ ಹಂಗಿಲ್ಲ. ಮನದ ಶಭಾಶುಭ ಕರ್ಮದ ಹಂಗಿಲ್ಲ, ನಿರ್ದೇಹ ತಾನಾಗಿಹ ಘನವಂತ ತಾನಾಗದ ತನ್ನದಾಗದ ತನು ಇಂದ್ರಿ ಪ್ರಾಣ ಮನ ಬುದ್ಧಿ ಅಹಂಕಾರ ಇವು ಮಾಡಿದಡೇನಹುದು ಮಾಡದಿರ್ದಡೇನಹುದು. ಇವುಗಳು ಮಾಡುವ ಕ್ರಿಯೆಯಿಂದ ತನ್ನ ಅಚಿಂತ್ಯಪದ ಸಿದ್ಧವಾಗುವುದಿಲ್ಲ,

ಇವು ಅನುಷ್ಠಾನ ಸ್ವರೂಪಾನು ಸಂಧಾನ ಮಾಡದೆ ಬಿಡುವುದರಿಂದ ತನ್ನ ನಿಜ ಪದ ಕೆಡುವದಲ್ಲ ಇದು ಕಾರಣ ಕ್ರಿಯೆಂಗಳ ಮೀರಿದ ಅಪೂರ್ವಿಕ ಪೂಜ್ಯನಾಗಿಹನು.

92

ನಿಜವನರಿದ ನಿಶ್ಚಿಂತನೆ, ಮರಣ ಗೆಲಿದ ಮಹಾಂತನೆ,
ಘನವ ಕಂಡ ಮಹಿಮನೆ, ಪರವನೊಳಕೊಂಡ ಪರಿಣಾಮಿಯೆ,
ಬಯಲೊದಗಿದ ಭರಿತನೆ
ಗುಹೇಶ್ವರ ಲಿಂಗ ನಿರಾಳವ ನೊಳಕೊಂಡ ಸಹಜನೆ ! ॥ 637 ॥

ತಾತ್ಪರ್ಯ : ನಿಜವರಿದ ನಿಶ್ಚಿಂತನೆ : ನಿಜವರಿದವರು ಯಾರು? ಆರಿಗೆ ನಿಜವರಿದವರು ಎಂದು ತಿಳಿಯುವುದು ? ನಿಶ್ಚಿಂತರು ಯಾರು ಅವರೆ ನಿಜವರಿತವರು. ನಿಶ್ಚಿಂತರು ಅಂದರೆ ದೇವಗಣ ರುದ್ರಗಣ ಪ್ರಮಥಗಣ ಇವರಿಗೆ ನಿಶ್ಚಿಂತರೆನಬೇಕೆ? ಇವರು ಬ್ರಹ್ಮಾಂಡವೆಂಬ ಭಾಂಡದ ಪ್ರೇಮಿಗಳು, ಅಭಿಮಾನಿಗಳು. ಇವರಿಗೆ ನಿಶ್ಚಿಂತತ್ವ ಹೇಗೆ ಸಾಧ್ಯ ? ಸತ್ಯರು, ನಿತ್ಯರು, ಮುಕ್ತರು ಎಂಬ ಮಹಾಮಹಿಮರು ಇವರಿಗೆ ನಿಶ್ಚಿಂತರೆನ್ನಬೇಕೆ? ಎನ್ನಲಾಗದು. ಇವರು ಚಿದ್ ಬ್ರಹ್ಮಾಂಡದ ಅಭಿಮಾನಿಗಳು. ಹಾಗಾದರೆ ಆರಿಗೆ ನಿಶ್ಚಿಂತರೆನಬೇಕು ? ಆರು ಅಚಿಂತ್ಯಪದವ ತಿಳಿದಿಹರು ಅವರೆ ನಿಶ್ಚಿಂತರು. ಅಲ್ಲಿ ಭಾವಿಸುವ ಭ್ರಮೆಯಿಲ್ಲ ಬಯಸುವ ಬಯಕೆಯಿಲ್ಲ. ಅರಸುವುದಿಲ್ಲ ಆರಾಧಿಸುವುದಿಲ್ಲ. ಆನು ನೀನೆಂಬುದಿಲ್ಲ ತಾನಿಲ್ಲ. ತಾನರಿದವನಾದುದರಿಂದ ತನಗಿಂತ ಘನವಾದುದಿಲ್ಲ ಕಿರಿದಾದುದಿಲ್ಲ. ಅರಿದರುಹಿಸಿ ಕೊಂಬುದಕ್ಕೆ ಮೀರಿದ ಘನವೆ ತಾನಾದುದರಿಂದ ತಾನು ದೃಶ್ಯವಾಗಲಿಲ್ಲ ದೃಕ್ ಆಗಲಿಲ್ಲ ಅರಿಯಲಿಲ್ಲ ಮರೆಯಲಿಲ್ಲ ಅರಿಯದರುವೆ ಆದ ಘನವಂತ ನಿಜವನರಿತ ನಿಶ್ಚಿಂತ.

ನಿಜವನರಿತಾತ ತಾ ನಿಜವೆನಲಿಲ್ಲ. ನಿಜವು ವಾಣಿಯಿಂದುಕ್ತವಾದುದು ಆಗದು. ನೆನಹು ನಿರ್ಣಯದಿಂದುಕ್ತ ವಾದುದು ಆಗದು, ಭಾವಕ್ಕಗಮ್ಯವು. ನಿಜವೆಂಬುದು ಜೀವವೆಂಬುದು ಅಲ್ಲ. ಅಂತರಾತ್ಮನೆಂಬುದು ಅಲ್ಲ, ಪರಮಾತ್ಮನೆಂಬುದು ಅಲ್ಲ, ನುಡಿಗೆಡೆಗೊಡದ ಘನವು ಕಲ್ಪಿತವಾಗದ್ದರಿಂದ ಅಲ್ಲಿ ನಾಹಂ ಎಂಬುದಕ್ಕಿಂಬಿಲ್ಲ ಕೋಹಂ ಸೋಹಂ ಚಿದಹಮ್ಮಿಗಿಂಬಿಲ್ಲ. ನಿರಂಜನ ನಿಜ ಚಿದ್ರೂಪ ತಾನಾಗಿಹ ಮಹಾಂತ, ನಿಜವೆಂದರೆ ತಾನು, ತಾನೆಂದರೆ ಏನೆಂದುಸರಲು ಬಾರದ ಪರತತ್ವ. ಸ್ವಯಂಜ್ಯೋತಿ, ಅದು ಘನ ಜ್ಯೋತಿ ಎಂದು ನುಡಿದು ಹೇಳಲಿಲ್ಲ. ನಿಜವೆಂಬುದು ಸಹಜವೆನ್ನದೆ ನಿಜವೆನ್ನದೆ ಅಚಲವೆನ್ನದೆ ಖಂಡಿತವೆನ್ನದೆ ಶೂನ್ಯವೆನ್ನದೆ ಏನೂ ಎನ್ನದೆ ಕೂಡಲಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು. ಇದು ಮಿಗೆ ಮಿಗೆ ಮೀಸಲವಾಗಿಹ ತತ್ವ. ಶಬ್ದ ಸೂತಕ ಅನುಭವಕ್ಕೆ ನಿಲುಕದ ತತ್ವ ಅರಿವುಡೆ ತಾನು. ಇದು ನಿಃಶಬ್ದ ವೇದಿಗಳ ಘನದಿರುವಿನ ಅರುವಾದುದರಿಂದ ನಿಜವರಿತ ನಿಶ್ಚಿಂತನೆಂದು ಹೇಳಿಹರು.

ಮರಣ ಗೆಲಿದ ಮಹಾಂತನೆ : ಮರಣಗೆಲಿದವರು ಯಾರು? ಮಹಾಂತರು ಆರು ಅವರೆ ಮರಣಗೆಲಿದವರೆಂದು ಪ್ರಭು ದೇವರೆ ಸೂಚಿಸಿಹರು . ಅಜಕಲ್ಪ ಕೋಟಿ ವರ್ಷ ಬಾಳಿದವರಿಗೆ ಮರಣಗೆದ್ದವರೆನ ಬೇಕೆ? ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳಿಗೆ ಮರಣಗೆಳಿದವರೆನಬೇಕೆ? ಚಾಂಗದೇವ, ಪ್ರಾಣಾಯಾಮದಿಂದ ಕುಂಭಕಯೋಗ ಸಿದ್ಧಿಸಿಕೊಂಡು ಹದಿನಾಲ್ಕುನೂರು ವರ್ಷ ಬಾಳಿದವರಿಗೆ ಮರಣಗೆಲಿದವನು ಏನಬೇಕೆ? ಅಥವಾ ವಜ್ರ ಶರೀರ ಮಾಡಿಕೊಂಡ ಗೋರಖನಾಥನಿಗೆ ಮರಣಗೆಲಿದನೆನಬೇಕೆ? ಮರಣಗೆಲಿದವನೆಂದರೆ ಲಿಂಗೈಕ್ಯ ಶರಣರು. ಅಮರತ್ವ ಹೊಲಬನರಿತವರು

ಅಚಿಂತ್ಯಪದವೆ ತನ್ನಿರುವಿನ ಅರುವಾದವರು. ಅವರು ಪೂಜ್ಯರು ಪೂಜ್ಯ ವಸ್ತುವ ತಳಿದು ಅದುವೆ ತಾನಾಗಿಹ ಮಹಾಂತರು; ಅಗಣಿತರು, ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ ಘನರು. ವೇದ ವೇದಾಂತಗಳಿಗೆ ಅಸಾಧ್ಯವಾಗಿಹ ಅನುಪಮ ಲಿಂಗವರಿತು ಅದುವೆ ತಾನಾಗಿಹರು ಅವರು ಮಹಾಂತರು ; ಗುಣದಿಂದುಕ್ತರಾದವರು ಮಹಾಂತನಾಗಲಾರ. ಪ್ರಕೃತಿ ಪುರುಷರೆಂಬ ವಿಭಾಗ ದೃಷ್ಟಿಯುಳ್ಳವರು ಕಲ್ಪಿತರು. ಕ್ಷರಾಕ್ಷರವೆಂಬುದಕ್ಕೂ ಮೀರಿದ ಘನದಿರುವುಳ್ಳವನೆ ಮಹಾಂತ. ಕ್ಷರಾಕ್ಷರ ಕಾಣದುದೆ ಮರಣ ಗೆಲಿದ ಚಿನ್ಹ. ಲಿಂಗಪ್ರಾಣಿಯಾದುದು ಮರಣ ಗೆಲಿದ ಚಿನ್ಹ. ನಿರಂತರವಾಗಿಹ ಮಂಗಳಮಯ ತಾನಾದುದೆ ಮಹಾಂತನ ಚಿನ್ಹ. ಎಮ್ಮವರಿಗೆ ಸಾವು ಇಲ್ಲ, ಎಮ್ಮವರು ಸಾವನರಿಯರು, ಸಾವೆಂಬುದು ಸಯವಲ್ಲ. ಲಿಂಗದಲ್ಲಿ ಉದಯವಾದ ಲಿಂಗೈಕ್ಯಂಗೆ ಆ ಲಿಂಗದಲ್ಲಿ ಯಲ್ಲದೆ ಬೇರೆ ಮತ್ತೊಂದಡೆಯುಂಟೆ ಕೂಡಲಸಂಗಮದೇವಾ.

ಆರು ಲಿಂಗದಲ್ಲಿ ಉದಯವಾದ ಲಿಂಗೈಕ್ಯದ ಹೊಲಬನರಿತವರು, ಅವರು ಎಮ್ಮವರು. ಅವರಿಗೆ ಸಾವು ಇಲ್ಲ, ಸಾವು ಅವರ ಸ್ವರೂಪವಾಗದ್ದರಿಂದ ಅಮರರು. ಅಮರತ್ವದ ಹೊಲಬನರಿತವರು ಅಮರನು, ಮರಣವ ಕಾಣನು. ಪ್ರಾಣವೆಂಬ ಸಂದೇಹವೆ ಅವರಲ್ಲಿ ಸುಳಿಯಲಿಂಬಿಲ್ಲ. ಲಿಂಗಕ್ಕೆ ಮರಣವುಂಟೆ? ತಾನಾರೆಂದರಿತ ಶರಣ ಲಿಂಗದಲ್ಲಿ ಉದಯವಾದ ಲಿಂಗೈಕ್ಯ. ಲಿಂಗೈಕ್ಯನೆಂಬುದು ನಿರಂಜನ ನಿಜ ಚಿದ್ರೂಪ ತಾನಾಗಿಹ ಘನಮಹಿಮ. ಸಮತಾ ಸಯವಾದ ಶರಣ ಮರವರವಿಂಗೆ ಮೀರಿದ ಘನಮಹಿಮ. ಅವಿಚಾರ ವಿಚಾರಂಗಳಿಗೆ ಮೀರಿದ ಘನಮಹಿಮ .ಇಲ್ಲಿ ಸ್ಮೃತಿ ವಿಸ್ಮೃತಿ ಎಂಬ ಬುದ್ಧಿಯ ಗಣನೆಯಿಲ್ಲ ಜ್ಞಾನ ಅಜ್ಞಾನದ ಗಣನೆಯಿಲ್ಲ. ಬಂಧ ಮೋಕ್ಷದ ಗಣನೆಯಿಲ್ಲ ಏಕೆಂದರೆ ಜ್ಞಾನದೊಳಗಣ ಬುದ್ಧಿ ಭಸ್ಮವಾದಲ್ಲಿ ಕೂಡಲಸಂಗಯ್ಯ ಸರ್ವನಿವಾಸವಾದ ಎಂಬ ಅಖಂಡೈಕರಸ ನಿಲುವು ; ಇದುವೆ ಮಹಾಂತನ ನಿಲುವು ; ಮರಣ ಗೆದ್ದ ಮಹಾಂತನ ನಿಲುವು. ನಿರವಯನು ಅವಯವ ವುಳ್ಳದ್ದಾಗಬಹುದೆ ? ಆವುದು ಅವಯವ ವುಳ್ಳದ್ದಾಗಿದೆ, ಅದು ರೂಪಾ ರೂಪವೆಂಬ ಭಾವದಿಂದುಕ್ತವಾಗಿದೆ. ಅದು ನಿರವಯ ಹೇಗಾಗುವುದು ?

ನಿರವಯ ವೆಂಬುದು ಮಾತು ಮನಂಗಳಿಂದತ್ತತ್ತ. ಅದು ಆದಿ ಅನಾದಿಯಿಂದತ್ತತ್ತ ವಿವರಿಸಿ ನೋಡುವುಡೆ ಅಮರ ತಾನೆ ಅಮರನಿಗೆ ಮೃತ್ಯು ಕಾಣುವುದೆ? ಮೃತ್ಯ ಎಂಬುದು ಭ್ರಾಮಕ ಶಬ್ದ, ಅಜಾತ ತತ್ವ, ನಿರಂತರ ತೋರುವುದಲ್ಲ, ಅಡಗುವುದಲ್ಲ. ತಾನು ಅಜಾತ, ತನ್ನ ತಾನರಿಯದ್ದರಿಂದ ತನ್ನ ವಿಪರೀತ ಬುದ್ದಿಯೆ ಇಲ್ಲದ ಸಾವನ್ನು ಕಲ್ಪಿಸಿದೆ. ಈ ಹುಟ್ಟು ಸಾವುಗಳ ಕಲ್ಪಿತರೂಪಿ ಭ್ರಮೆ ನಿರಸನ ವಾಗಬೇಕಾದರೆ ತಾನಾರೆಂದರಿಯಬೇಕು. ಆಗ ಇಲ್ಲದ ಹುಟ್ಟು ಇದ್ದಂತಾದುದು ಸ್ವಭಾವಿಕ, ಸಹಜ. ತಾನು ಹುಟ್ಟಿದಾತನು ಅಲ್ಲ, ಸಾಯುವವನು ಅಲ್ಲ. ನಿರಂತರವಾಗಿರುವ ಮಂಗಳಮಯವಾಗಿಹ ಸ್ವಯಂಜ್ಯೋತಿ ಎಂಬುದು ತನ್ನಿಂದ ತನಗೆ ಸಹಜ ಸಿದ್ಧಿಸುವದು. ಇಂತಪ್ಪ ತತ್ವಜ್ಞಾನಿಗಳೆ ಮರಣವ ಗೆದ್ದ ಮಹಿಮರು ಮಹಾಂತರು ಎಂದು ಹೇಳಿಹರು.

ಘನವ ಕಂಡ ಮಹಿಮನೆ : ಮಹಿಮನು, ಯಾರು ಘನವ ಕಂಡವರು? ಈ ಘನವ ಕಾಣುವದು ಹೇಗೆ? ಘನ ಕಾಣದುದು, ಕಾಣಬೇಕಾಗಿದೆ ; ಕಂಡಲ್ಲಿ ಅಸಾಧ್ಯವ ಸಾಧಿಸಿದಂತೆ. ಕಲ್ಪಿತನಾಗಿ ಕಾಣಹೋದವರಿಗೆ ಕಾಣದುದು. ಕಲ್ಪಿತ ಪುರುಷ ಅಕಲ್ಪಿತ ಘನವಾಗುವುದರಿಂದ ಕಲ್ಪಿತ ಪುರುಷ ಮರವಿನಿಂದುಕ್ತನಾಗಿ ದೇಹ ಬುದ್ಧಿಯುಳ್ಳವನಾಗಿರುವದು ಸಹಜ. ಬಿಡುಗಡೆಯಾಗಿ ಪರಮಾರ್ಥದ ಅರುವುಳ್ಳವನಾಗುವುದು. ಆಗ ಇವೆರಡಕ್ಕೂ ಮಿಕ್ಕಿ ಮೀರಿ ನಿಲ್ಲುವಡೆ ಘನವಕಂಡ ಸೂಚನೆ, ತನ್ನಿಂದ ತಿಳಿಸಿಕೊಳ್ಳುವ ದೇಹ; ದೇಹಬುದ್ಧಿಯು ಆಗಬಾರದು. ಅರುವು ಅರುವು ಎಂಬುದು

ಆಗಬಾರದು. ಅರುವಿನ ಅಭಿಮಾನಿಯು ಆಗಬಾರದು. ಇವೆರಡಕ್ಕೂ ಮೀರಿದ ಸಮ ಸ್ವರೂಪವಾದ ಅರಿವು ಅಖಂಡತೆ ಘನವಪ್ಪ ಪೂರ್ಣ ಅರಿವು ; ಅನುಪಮ ಅರಿವು ಇದನ್ನು ಅರಿಯ ಹೋಗುವುಡೆ ಅದು ತಾನೆ ತಾನಾಗಿ ಪ್ರಜ್ವಲಿಸುವುಡೆ ಘನವ ಕಂಡ ಮಹಿಮನು.

ಘನವ ಕಂಡ ಮಹಾಂತ ದೇಹೋಹಂ ಭಾವಿಯಲ್ಲ, ಚಿದಹಂಭಾವಿಯಲ್ಲ, ದಾಸೋಹಂ ಭಾವಿಯಲ್ಲ, ಭಾವಕ್ಕಿಂಬು ಕೊಡದ ಘನವ ಕಂಡ ಮಹಿಮನು. ನಿರಂತರವಾಗಿಹ ಮಂಗಳಮಯ ತಾನೆ. ತನ್ನಿಂದ ತನ್ನ ಕಂಡವನೆ ಘನವ ಕಂಡ ಮಹಿಮನು ಎಂದು ಹೇಳಿಹರು. ನಾನು ಘನ ತಾನು ಘನವೆಂಬ ಹಿರಿಯರುಂಟೆ ಜಗದೊಳಗೆ ಹಿರಿಯರ ಹಿರಿತನದಿಂದೇನಾಯಿತ್ತು. ಹಿರಿ ಕಿರಿದೆಂಬ ಶಬ್ದವಡಗಿದರೆ ಆತನೆ ಶರಣ ಗುಹೇಶ್ವರ. ಘನವೆಂಬುದು ಸೋಹಂಭಾವವಲ್ಲ ಚಿದಹಂಭಾವವಲ್ಲ,ದಾಸೋಹಂ ಭಾವವಲ್ಲ. ಭಾವಕ್ಕಗಮ್ಯನಾಗಿಹ ತನ್ನಿರುವಿನ ಅರುವು ಘನ. ಈ ಘನವ ಕಂಡವಂಗೆ ಎಲ್ಲೆಲ್ಲೂ ತಾನೆ. ಆ ಘನವಂತ ನಿಶಬ್ದವೇದಿ, ಶೃತಿಗಗೋಚರವಾಗಿಹ ತನ್ನ ಕಂಡುದರಿಂದ ಘನವ ಕಂಡ ಮಹಿಮನು ಎಂದು ಹೇಳಿಹರು.

ಪರವನೊಳಕೊಂಡ ಪರಿಣಾಮಿಯೆ ಶ್ರೇಷ್ಠಾತಿ ಶ್ರೇಷ್ಠವಾವುದು? ಅರುವಿನರುವು ಪರತತ್ವ. ಅದು ನಿಶಬ್ದ ನಿಲುವುಳ್ಳ ಘನವು. ಇದು ಶಬ್ದ ಬ್ರಹ್ಮವಲ್ಲ, ಶಬ್ದ ಮುಗ್ದ ನಿಲುವುಳ್ಳ ಘನದಿರುವು. ಇದನ್ನು ಮಾತಿನ ಮೂಲಕ ವಿವರಿಸುವದೆಂತು! ಶಬ್ದ ಸಂಭ್ರಮದವರಿಗೆ ದೂರಾತಿದೂರವು, ಲೋಕದ ನಚ್ಚು ಮಚ್ಚು ಬಿಟ್ಟವಂಗೆ ಸಾಧ್ಯವು. ಶಾಸ್ತ್ರ ವಾಸನೆ ಕ್ಷಯವಾದವಂಗೆ ಸಾಧ್ಯವು. 'ಭವ ವಿರಹಿತಂಗೆ ಭಕ್ತಿಯ ಮಾಡುವವರು ನೀವು ಕೇಳಿರಣ್ಣ ಭವ ಬಾಧೆಯೊಳಗೆ ನೀವಿರ್ದು ಅಭವನ ಭಕ್ತಿಯ ಪರಿ ಇನ್ನೆಂತೊ? ತಾನಭವನಲ್ಲದೆ ಸಹಜ ಭಕ್ತಿಯ ಮಾಡಬಾರದು ಗುಹೇಶ್ವರಾ'.

ಭಕ್ತಿಯೆಂಬುದು ಅಭವ ತಾನು ಒಂದಾಗುವುದು ಭಕ್ತಿ. ಇಲ್ಲಿ ಪೂಜ್ಯ ಪೂಜಕ ಭಾವ, ಸ್ವಾಮಿ ಸೇವಕ ಭಾವ, ಜೀವ ಪರಮರೆಂಬ ಭಾವರೂಪ ಭೇದವಿಟ್ಟುಕೊಂಡು, ಭಕ್ತಿಯ ಮಾಡುವದದೆಂತು? ತಾನು ಹುಟ್ಟು ಸಾವುಗಳಿಗೊಳಪಟ್ಟವನೆಂಬ ಭಾವ. ದೇವನು ಭಾವ ವಿರಹಿತ ಅಮರ ಅಕ್ಷರನೆಂಬ ವಿರುದ್ಧ ಭಾವ ಬಂದುದು ಹೇಗೆ? ಇದು ಕಾರಣ ಪರವ ನೊಳಕೊಂಡ ಪರಿಣಾಮವೆ, ತಾನು ಕ್ಷರಾಕ್ಷರ ಮೀರಿದ ಘನವೆ ತನ್ನರುವೆಂದರಿದ ಮಹಾಂತ. ಪರವನೊಳಕೊಂಡ ಪರಿಣಾಮವು. ಕಲ್ಪಿತ ಪುರುಷ ದಶ ಭಾವಂಗಳ ಭ್ರಾಮಕತನ ಪೂರ್ಣ ನಿರಸನವಾಗಿರಬೇಕು. ಆಗ ಭಾವಕ್ಕಗಮ್ಯವಾಗಿಹ ಪದ, ತನ್ನಯ ಪದ. ಅದುವೆ ಅಚಿಂತ್ಯಪದ. ಈ ಪದವು ಸಾಕ್ಷಾತ್ಕಾರವಾದುದೆ ಪರವನೊಳಕೊಂಡ ಪರಿಣಾಮವು, ತಾನೆ ಪ್ರಶಾಂತಾತ್ಮನಾದುದು, ಪರಮಾನಂದ ಮಯನಾದುದು. ತನ್ನ ಸಂತೋಷ ಗಣನೆಗತೀತವಾದುದು. ಇದು ಅಪರಿಮಿತ ಆನಂದ ತನ್ನಾನಂದ ತನಗೆ ವಿದಿತವು. ಇಲ್ಲಿಯ ವಿಸ್ತಾರ ಗುರುಹೃದಯವೊ! ತನ್ನ ಹೃದಯವೊ! ತನ್ನದು ತನಗೆ ವಿದಿತವು.

ಬಯಲೊದಗಿದ ಭರಿತನೆ : ಈ ಭರಿತ ತುಂಬಿ ತುಳಕದ ಭರಿತ! ಬಯಲ ದೊರಕಿ ಭರತನಾದನೆ ! ಅಹಹ ! ಇದೆಂಥ ಗಳಿಕೆ. ಈ ಘನತ್ವ ಅದಾರಿಗೆ ? ಬಯಲನ್ನು ಆರಾದರೂ ಗಳಿಸಬಹುದೇ! ದೊರಕಿಸಬಹುದೇ! ಇದೆಂಥಹ ಆಶ್ಚರ್ಯ ಇದನ್ನು ಗಳಿಸಲು ತಾನು ಏನಾಗಿ ಗಳಿಸಿದ ಬಯಲು ಬಯಲಾಗಿ ಗಳಿಸಿದನೆ? ಇದಾರು ನಿರ್ಣಯ ಮಾಡುವುದು.

ಬಯಲೆಂಬುದು ಶಬ್ದಮುಗ್ದ ಘನ. ನಿಃಶಬ್ದ ಬ್ರಹ್ಮ. ನಿಶ್ಯಬ್ದ ಬ್ರಹ್ಮವು ಬಯಲೊದಗಿದ ಭರಿತ

ಆರು ತಾನಾರೆಂದರಿಯ ಹೋಗಿ, ಶೃತಿಗೆ ಮೀರಿದ ಘನವಾಗಿಹರೊ ಅವರೆ ಬಯಲೊದಗಿದ ಭರಿತನು. ತನ್ನಿಂದ ತನ್ನ ಅರಿತವನು ನಿರಾಲಂಬನು, ನಿರವಧಿಯು : ಉಪಮಿಸದ ಘನವ ತಾನಾದನೆ? ಖಂಡಾಖಂಡ ಸಂಯೋಗವಿಲ್ಲದ, ಅಖಂಡಿತ ಘನವೆ ಬಯಲೊದಗಿದ ಭರಿತನು. ಎಲ್ಲೆಲ್ಲೂ ತಾನೆ ಭರಿತನು, ಪೂರ್ಣಮದಃ ಪೂರ್ಣಮಿದಂ ಎಂಬ ಶೃತಿಗಳನ್ನು ತನ್ನೊಳಗೆ ಕಂಡನಲ್ಲದೆ ತಾನು ಏನೊಂದಾಗದ ಘನ. ನಿರುಪಮನು ಬಯಲೊದಗಿದ ಭರಿತನೆಂದು ಹೇಳಿದ್ದಾರೆ.

ಗುಹೇಶ್ವರ ಲಿಂಗ ನಿರಾಳವನೊಳಕೊಂಡ ಸಹಜನೆ : ಸಹಜ ಗುಹೇಶ್ವರ ಲಿಂಗವೆಂಬ ಪರಬ್ರಹ್ಮವನೆ ಒಲಿಸಿಕೊಂಡ ಮಹಾಂತ ! ಅಲ್ಲಯ್ಯನು ದೇಹರೂಪಿ ಗುಹೆಗೆ ಪ್ರಜ್ವಲಿಸುವ ಮಹಾಘನಲಿಂಗವೆ ಒಲಿಸಿಕೊಂಡ ಮಹಾಂತನಲ್ಲಯ್ಯ . ಇದನರಿದು ಅದುವೆ ಆದ ಲಿಂಗವು ಏನೊಂದುಸರಲು ಬಾರದ ಘನ ಮಹಿಮವೆ ತಾನಾದುದರಿಂದ ಸಹಜನು ಎಂದು ಹೇಳಿದುದಾಗಿದೆ.

93

ನಾರು ಬೇರಿನ ಕುಟಿಲ ಕಪಟದ ಯೋಗವಲ್ಲಿದು ನಿಲ್ಲಿಭೊ ;
ಕಾಯ ಸಮಾಧಿ ಕರಣ ಸಮಾಧಿ ಯೋಗವಲ್ಲಿದು ನಿಲ್ಲಿಭೊ !
ಜೀವ ಸಮಾಧಿ ಎಂಬುದಿಲ್ಲ ನಿಜ ಸಹಜ ಸಮಾಧಿ ಗುಹೇಶ್ವರಾ. **॥ 640 ॥**

ತಾತ್ಪರ್ಯ : ನಾರು ಬೇರಿನ ಕುಟಿಲ ಕಪಟದ ಯೋಗವಲ್ಲಿದು ನಿಲ್ಲಿಭೊ : ಯೋಗಗಳಲ್ಲಿ ಹಠಯೋಗ , ರಾಜಯೋಗ , ಶಿವಯೋಗವೆಂತಲೂ ಹೇಳಿಹರು. ಪ್ರಭುದೇವನಿಗೆ ಕಂಡ ಯೋಗ ನಾರು ; ನಾರು ಬೇರಿನ ಕುಟಿಲ ಕಪಟದ ಯೋಗ ಕಂಡು, ಅದನ್ನು ಜರಿದು , ನಿಜ ಸಹಜ ಸಮಾಧಿಯೆ ನಿಜವಾದುದು ಉಳಿದವೆಲ್ಲವುಗಳು ನಿಜವಾದುದಲ್ಲ. ಅದರಲ್ಲಿ ನಾರು ಬೇರಿನ ಕುಟಿಲ ಕಪಟದ ಯೋಗವಲ್ಲಿದು ನಿಲ್ಲಿಭೊ ಎಂದು ಎಚ್ಚರಿಸಿದುದು.

ಕೆಲಬರು ಹಠಯೋಗ ಮಾಡಿದ ಸಿದ್ಧರು ; ಪ್ರಾಣಕ್ಕೆ ಸುತ್ತಿದ ಪಾಶವ ಪರಿಹರಿಸುವ ಸಾಧನವೆಂದರೆ ಪ್ರಾಣಾಯಾಮವೆಂದು ತಿಳಿಸಿದ್ದಾರೆ. ಪ್ರಾಣವೆಂದರೆ ಉಸಿರು, ಶ್ವಾಸ ಉಚ್ಛಾಸ, ಒಮ್ಮೆ ಮೇಲೇರುವುದು ಒಮ್ಮೆ ಕೆಳಗೆ ಇಳಿಯುವುದು. ಇದು ಶ್ವಾಸ ಕ್ರಿಯೆ. ಈ ಶ್ವಾಸ ಕ್ರಿಯೆಯನ್ನು ತಡೆಯುವುದೆ ಪ್ರಾಣಾಯಾಮವೆಂದು, ಈ ಕಾರ್ಯ ಮಾಡುವ ಸಾಧನೆ ಸಾಧಕರದೆಂದು ತಿಳಿದು ಕೇವಲ ಕುಂಬಕ ಯೋಗವನ್ನು ಕಲಿತರು . ಈ ಕುಂಭಕ ಯೋಗದಿಂದ ನಾವು ಭವಪಾಶವ ಗೆದ್ದಿರುವೆವು. ಎಂದು ತಿಳಿದ ಯೋಗಿಗಳು ಬಹಳಷ್ಟು ಇದ್ದಾರೆ. ಏಕೆಂದರೆ ಈ ಸಾಧನೆ ಸಿದ್ಧಿಯಾದಂತೆಲ್ಲ ಆಯುಷ್ಯ ವೃದ್ಧಿಯಾಗುವುದು. 100 ವರ್ಷ ಇರುವ ಶರೀರ 1000 ವರ್ಷವು ಇರಬಲ್ಲುದು. ಹೀಗೆ ಈ ಸಾಧನೆಯಿಂದ ಆಯುಷ್ಯ ವೃದ್ಧಿಯಾಗುವುದು ಕಂಡು ಕಂದ ಮೂಲಗಳ ಸೇವಿಸಿ, ನಾರು ಬೇರಿನ ಉಡುಗೆಯ ಉಟ್ಟು , ಉಗ್ರ ತಪಸ್ವಿಗಳಾಗಿ , ಇದುವೆ ಭವ ಕೆಡಿಸುವ ಸಾಧನೆ . ಎಂದು ತಿಳಿದು, ಕಾಯ ಸಮಾಧಿ ಮಾಡುವುದು ಕಲಿತರು , ಕರಣ ಸಮಾಧಿ ಮಾಡುವದು ಕಲಿತರು , ಜೀವ ಸಮಾಧಿ ಮಾಡುವುದು ಕಲಿತರು .

ಪ್ರಭುದೇವ ಇವರ ಕಠಿಣ ತಪವಂ ಕಂಡು, ನಾರು ಬೇರಿನ ಕುಟಿಲ ಕಪಟ ಯೋಗವಲ್ಲಿದು ನಿಲ್ಲಿಭೊ ಎಂದು ಎಚ್ಚರಿಸಿದ . ಕಾಯ ಸಮಾಧಿ, ಕರಣ ಸಮಾಧಿ ಯೋಗವಲ್ಲಿದು ನಿಲ್ಲಿಭೊ? ಎಂದು ಗರ್ಜಿಸಿದ. ಕೊನೆಗೆ ಜೀವ ಸಮಾಧಿಯೆಂಬುದಲ್ಲವೆಂದು, ನಿಜ ಸಹಜ ಸಮಾಧಿಯೆಂದು ಕರುಣಿಸಿದ ಕಳಕಳಿಯು ಅಪಾರವು.

ಕೆಲಬರು ಹಠಯೋಗ ಅಭ್ಯಾಸ ಮಾಡುವ ಸಾಧಕರು ಇದ್ದಾರೆ. ಅವರು ಬಲ್ಲ ಮಹಾಪುರುಷರಿಂದ ಸರಿಯಾಗಿ ತಿಳಿಯದೆ, ಈ ಪ್ರಾಣಾಯಾಮ ಅಭ್ಯಾಸ ಮಾಡಿ ಆರೋಗ್ಯ ಕೆಡಿಸಿಕೊಂಡವರು ಉಂಟು. ಹಾಗಾಗಬಾರದೆಂದು ದಯಾಳು ಮಹಾತ್ಮರು, ಪ್ರಾಣಾಯಾಮ ಆಚರಿಸುವ ಕ್ರಮ ವಿವರ ಹೀಗೆ ತಿಳಿಸಿಹರು- ಪದ್ಮಾಸನದಲ್ಲಿ ಸ್ಥಿರ ಚಿತ್ತವುಳ್ಳರಾಗಿ, ಗುರು ಪಾದ ಪಂಕಜವ ನೆನೆದು. ಪ್ರಾಣಾಯಾಮ ಅಭ್ಯಾಸ ಮಾಡುವುದು.

ಪ್ರಾಣಾಯಾಮವೆಂದರೇನು? ಪ್ರಾಣ ವಿರೋಧವೆ ಪ್ರಾಣಾಯಾಮವೆನಿಸುವುದು. ಒಂದು ದಿವಸಕ್ಕೆ 24 ಘಂಟೆ ಎಂದು ಗಣಿಸಿದೆ. ಆದರೆ ಒಂದು ನಿಮಿಷದಲ್ಲಿಯ ನಮ್ಮ ಶ್ವಾಸಗಳ ಚಲನ ಸಂಖ್ಯೆಯು 15 ಸಲ ನಡೆಯುವುದು. ಮತ್ತು ಒಂದು ಘಂಟೆಯಲ್ಲಿ 900 ಸಲ ಆಗುತ್ತವೆ ಪೂರ್ಣ ದಿವಸಕ್ಕೆ (31600) ಸಲ ಶ್ವಾಸ ಕ್ರಿಯೆಗಳು ನಡೆಯುತ್ತವೆ.

ಪ್ರಾಣ ನಿರೋಧಿಸುವದು ಹೇಗಂದರೆ ಮೊದಲು ಪೂರಕ ಆ ಮೇಲೆ ಕುಂಬಕ ಮತ್ತು ರೇಚಕ ಮಾತ್ರೆಯ ಪದ್ಧತಿಯು ಹೀಗೆ ಇದೆ.

(1) ಪೂರಕ ಮಾಡಿದರೆ (4) ಪಟ್ಟು ರೇಚಕ (4) ಪಟ್ಟು ಕುಂಭಕ ಇದರಂತೆ ಪ್ರಥಮದಲ್ಲಿ 5-6 ಸಲ ಮಾಡತಕ್ಕದ್ದು. ಮೊದಲು ಇಡಾನಾಡಿ (ಎಡಗಡೆ ನಾಡಿ) ಯಿಂದ ಪೂರಿಸಿ ಆ ಮೇಲೆ ಕುಂಭಕ ಮಾಡಿ ಪಿಂಗಲಾ ನಾಡಿಯಿಂದ ಅಂದರೆ ಬಲಗಡೆ ನಾಡಿಯಿಂದ ಬಿಡತಕ್ಕದ್ದು. ಇಲ್ಲಿಗೆ ಒಂದು ಪ್ರಾಣಯಾಮ ಮುಗಿಯಿತು.

ಪುಃನ 2ನೇ ಪ್ರಾಣಯಾಮ ಬಲಗಡೆ ನಾಡಿ (ಪಿಂಗಲಾನಾಡಿಯಿಂದ) ಪೂರಿಸಿ ಆ ಮೇಲೆ ಕುಂಬಕ ಮಾಡಿ , ಇಡಾನಾಡಿ ಅಂದರೆ (ಎಡಗಡೆಯಿಂದ) ರೇಚಿಸುವುದು ಬಿಡುವದು ಪ್ರಾಣಾಯಾಮದ ಆರಂಭದಲ್ಲಿ ತಮ್ಮ ಶಕ್ತ್ಯಾನುಸಾರ ಮಾತ್ರೆಗಳು 7-8 ಪೂರಕ ಇದರ ನಾಲ್ಕು ಪಟ್ಟು ಅರ್ಧಪಟ್ಟು ರೇಚಕ ಈ ಪದ್ಧತಿ ಅನುಸಾರವಾಗಿ (12) ಮಾತ್ರೆ ಪೂರಕ ಮಾಡಿದರೆ ಕನಿಷ್ಠ ಅಧಿಕಾರಿ ಎಂದೆನಿಸಿಕೊಳ್ಳುವನು (36) ಮಾತ್ರೆ ಮಾಡಿದರೆ ಉತ್ತಮ ನೆನಿಸಿಕೊಳ್ಳುವನು ಇದೆ ಪ್ರಾಣಾಯಾಮದ ಪದ್ಧತಿ. ಪ್ರಾಣಾಯಾಮ ಆಚರಿಸುವ ಸಮಯದಲ್ಲಿ ಬಹಳ ಜಾಗೂರಕನಾಗಿರಬೇಕು. ಪದೆ ಪದೆ ಗುರುಗಳ ಸಹಾಯ ತೆಗೆದುಕೊಳ್ಳಬೇಕು. ಸ್ವತಂತ್ರ ಮಾಡಿದರೆ ಆರೋಗ್ಯದ ವಿರುದ್ಧ ರೋಗ ಅಥವಾ ಮೃತ್ಯ ಸಂಭವಿಸುತ್ತದೆ.

ಪ್ರಥಮದಲ್ಲಿ (8) ಮಾತ್ರೆ ಪೂರಕ (39) ಮಾತ್ರೆ ಕುಂಬಕೆ (19) ಮಾತ್ರೆ ರೇಚಕ ಈ ವಿಧವಾಗಿ ಮಾತ್ರೆಗಳು ಹೆಚ್ಚಿಸುತ್ತ ಹೋಗಬೇಕು ಮತ್ತು ಆರಂಭದಲ್ಲಿ ಒಂದು ನಿಮಿಷಕ್ಕಿಂತಲೂ ಹೆಚ್ಚಿಗೆ ಮಾಡಬಾರದು.

ಪ್ರಾತಃಕಾಲ (6) ಘಂಟೆಗೆ ಸಾಯಂಕಾಲ (6) ಘಂಟೆಗೆ ಎರಡು ಸಲ ಪ್ರಾಣಯಾಮ ಮಾಡಬೇಕು .

ಕೇವಲ ಕುಂಭಕದಲ್ಲಿ ಶ್ವಾಸವು ತಾನೆ ತಡೆಯುತ್ತದೆ ಆದರೆ ಹಿಂದಿನ ಸಾಧನೆ ಸರಿಯಾಗಿ ಮಾಡಿದರೆ ಮಾತ್ರ ಕುಂಭಕದಲ್ಲಿ ಅಡಿ ಇಡುತ್ತಾನೆ. ಇಲ್ಲವಾದರೆ ಸಾಧ್ಯವಿಲ್ಲ. ಬರೆ ಶ್ವಾಸ ತಡೆದು ಹಾಕುವುದು ಕುಂಭಕ. ಇದು ಕಾರಣ, ಕೇವಲ ಕುಂಭಕವಾಗಲಿ, ವಜ್ರೋಲಿಯಾಗಲಿ, ಮತ್ತು ನಾಲಿಗೆ ಛಿದ್ರಿಸಿ ಮಾಡುವ ಚೇಚರಿ ಮುದ್ರೆಯಾಗಲಿ, ಹಾಗೆ ಬಹಳ ನೀರು ಕುಡಿದು ಗುದದ್ವಾರದಿಂದ ಬಿಡುವದಾಗಲಿ ಇತ್ಯಾದಿ ಸಾಧನೆಗಳಿಂದ ಪ್ರಯೋಜನವೇನೂ ಇಲ್ಲ. ಆದರೆ ಜನರಲ್ಲಿ ಮಾತ್ರ ಚಮತ್ಕಾರ ಕಂಡು ಬರುತ್ತದೆ ಹೀಗೆ ಮಾಡುತ್ತ ಹೋದರೆ ಲೋಕ ವಾಸನೆ ದೇಹ ವಾಸನೆ ಬೆಳೆದು ಯೋಗ ಸಾಧನೆಗೆ ಇದೊಂದು ವಿಘ್ನ ತಂದುಕೊಂಡಂತೆ ಸರಿ. ಇದನ್ನು ಕಂಡೆ ಪ್ರಭುದೇವರು ನಾರು ಬೇರಿನ ಕುಟಿಲ ಕಪಟ

ಯೋಗವಲ್ಲಿದು ನಿಲ್ಲಿಭೋ ಎಂದು ಎಚ್ಚರಿಸಿದರು . ಕಾಯ ಸಮಾಧಿ ಕರಣ ಸಮಾಧಿ ಯೋಗವಲ್ಲಿದು ನಿಲ್ಲಿಭೋ ಎಂದು ಎಚ್ಚರ ಮಾಡಿದ್ದಾರೆ. ಸಮಾಧಿಗಳಲ್ಲಿ ಎರಡು ಸಮಾಧಿಗಳಿವೆ. ಒಂದು ಜಡ ಸಮಾಧಿ ಮತ್ತೊಂದು ಚೇತನ ಸಮಾಧಿ. ಪ್ರಧಾನ ಸಮಾಧಿ ಎಂದರೆ ಚೇತನ ಸಮಾಧಿ ಈ ಸಮಾಧಿಗೆ ಮಹತ್ವ ಕೊಟ್ಟಿದೆಯಲ್ಲದೆ ಇನ್ನುಳಿದವುಗಳು ಇಲ್ಲಿ ತಿಳಿಸಿದರೂ ಕೂಡ ಗೌಣಗಳಾಗಿವೆ.

ಕಾಯ ಸಮಾಧಿ ಅಂದರೆ ಹಠಯೋಗಿಗಳು, ಕೇವಲ ಕುಂಭಕ ದ್ವಾರ ಶರೀರವನ್ನು ,ಭೂಮಿಯಲ್ಲಿ 12 ತಾಸುಗಳವರೆಗೆ ಭೂಗರ್ಭ ಸಮಾಧಿ ಮಾಡುತ್ತಾರೆ ಅಥವಾ ಜಲ ಸಮಾಧಿ ಮಾಡುವರು. ಇದು ಜಡ ಸಮಾಧಿ ,ಇದು ಕಾಯ ಸಮಾಧಿಯೆನ್ನಿಸಿಕೊಳ್ಳುತ್ತದೆ. ಇದು ನಿದ್ರೆಯಂತೆ ಜ್ಞಾನ ಶೂನ್ಯವಾಗಿದೆ . ಆದ ಕಾರಣ ಇವುಗಳಿಂದ ಜ್ಞಾನವಿಲ್ಲ ; ಜ್ಞಾನವಿಲ್ಲದೆ ಮಾನವನಿಗೆ ಮುಕ್ತಿಯಾಗುವುದಿಲ್ಲ .

ಕರಣ ಸಮಾಧಿಯೆಂದರೆ ಚಿತ್ತಿನ ಏಕಾಗ್ರತೆಯು . ಮನವನ್ನು 12 ಸೆಕೆಂಡ್ ಪ್ರಣವ ಚಿಂತನೆಯಲ್ಲಿ ತಡೆದರೆ ಒಂದು ಧಾರಣವೆನ್ನವರು. ಈ ಪ್ರಕಾರವಾಗಿ 12 ಧಾರಣವಾದರೆ ಒಂದು ಧ್ಯಾನವಾಗುತ್ತದೆ. ಬಳಿಕ 12 ಧ್ಯಾನವಾದರೆ ಒಂದು ಸಮಾಧಿಯಾಗುತ್ತದೆ. ತಾತ್ಪರ್ಯ ಇದು ಅದೆ. ಧಾರಣ, ಧ್ಯಾನ ಸಮಾಧಿ ಸ್ವರೂಪ ಒಂದೆ ಆಗಿರುತ್ತದೆ . ಹೀಗೆ ಬಾಲಕ ತರುಣ ವೃದ್ಧ ಮೂರು ಅವಸ್ಥೆಗಳು ಒಬ್ಬನಲ್ಲಿಯೆ ಕಾಣುವಂತೆ ಇರುತ್ತವೆ. ಈ ಸಾಧನ ಮಾಡುವ ಸಾಧಕನು 4 ಘಂಟೆಗೆ ಜಾಗ್ರತನಾಗಿ ಸಿದ್ಧಾಸನ ಹಾಕಿಕೊಂಡು ಶ್ರೀಗುರುವಿಗೆ ನಮಸ್ಕಾರ ಮಾಡಿ 5 ನಿಮಿಷ ಗುರುಧ್ಯಾನದ ಬಳಿಕ ಓಂ, ಓಂ, ಓಂ ಈ ಪ್ರಕಾರ ಮಾನಸಿಕ ಜಪ ನಡೆಸಬೇಕು. ಅಂದರೆ ಜಪದೊಡನೆ ಅನಂತತಾ ನಿತ್ಯತಾ ಅಮರತ್ವ ಪೂರ್ಣನೆಂದು ಭಾವಿಸಬೇಕು . ಈ ಅಖಂಡ ಭಾವ ಸಿದ್ಧಿಯಲ್ಲಿ ನಿರತನಾದಲ್ಲಿ ಕರಣಂಗಳು ಓಂಕಾರ ರೂಪ ಪರಮಾತ್ಮನಲ್ಲಿ ಪೂರ್ಣತ್ವ ಹೊಂದುವುದರಿಂದ ಕರಣ ಸಮಾಧಿಯೆಂದು ಹೇಳಿದೆ.

ಪ್ರಭುದೇವ ಈ ಸಮಾಧಿಗಳನ್ನು ಕೂಡಾ ಹೇಳಲಿಲ್ಲ, ಜೀವ ಸಮಾಧಿ ಎಂಬುದಿಲ್ಲ,ನಿಜ ಸಹಜ ಸಮಾದಿ ಗುಹೇಶ್ವರಾ ಎಂದು ಹೇಳಿಹರು.

ಜೀವ ಸಮಾಧಿ ಎಂಬುದು ಕೆಲವು ಕ್ರಿಯಾ ಕಾಂಡಿಗಳು ಹೀಗೆ ತಿಳಿದಿಹರು . ಪ್ರಾಣಾಯಾಮ ಸಾಧನೆಯಿಂದ ಕೇವಲ ಕುಂಭಕ ಸಿದ್ಧಿಸಿಕೊಂಡು ತಮ್ಮ ಅಂತ್ಯದಲ್ಲಿ ತಾವೆ ಜಡಸಮಾಧಿಯ ಕಟ್ಟಿಸಿಕೊಂಡು ಭೂಗರ್ಭದಲ್ಲಿ ಪ್ರವೇಶಿಸುವರು. ಆಗ ಅಲ್ಲಿ ಕೇವಲ ಕುಂಭಕ ಯೋಗದಲ್ಲಿದ್ದು ಪ್ರಾಣವಾಯು ಬ್ರಹ್ಮರಂದ್ರದಲ್ಲಿಂದ ತನ್ನಿಂದ ತಾನೆ ಹೊರಟು ಹೋಗುವುದಕ್ಕೆ ಜೀವ ಸಮಾಧಿ ಎನ್ನುವರು. ಇದು ಜ್ಞಾನ ಶೂನ್ಯಕಾಯಕ. ಈ ಹಠಯೋಗಿಗಳಿಗೆ ತಾನಾರೆಂದು ತಿಳಿಯಲಿಲ್ಲ , ದೇವನಾರು ಎಂಬುದು ತಿಳಿಯಲಿಲ್ಲ. ತಿಳಿಯಲು ಅರುವೆ ಮುಖ್ಯವು. ಅರುವೆಂಬುದು ಜ್ಞಾನಸ್ವರೂಪ. ಈ ಅರುವಿನ ಸಾಧನೆ ಅರುವ ಅರಿಯುವದೆ ಯತಾರ್ಥಸಾಧನೆ; ಇದುವೆ ಜ್ಞಾನದ ಪೂರ್ಣಾವಸ್ಥೆಯಾಗಿದೆ.

ಸಮಾಧಿಯಲ್ಲಿ ಸವಿಕಲ್ಪ ನಿರ್ವಿಕಲ್ಪ ಎಂಬುದಾಗಿ ಎರಡು ವಿಧವಾಗಿದೆ.ಸವಿಕಲ್ಪವೆಂದರೆ ದೃಶ್ಯಾನುವಿದ ಸವಿಕಲ್ಪ,ಶಬ್ದಾನುವಿದ ಸವಿಕಲ್ಪ, ನಿರ್ವಿಕಲ್ಪವೆಂಬ ಮೂರು ಬಾಹ್ಯಾಂತರದಿಂದ ಆರು ವಿಧವಾಗಿದೆ. ಇವುಗಳಲ್ಲಿ ದೃಶ್ಯವಾದ ಪ್ರಪಂಚದ ವಸ್ತುಗಳಲ್ಲಿರುವ ಕಲ್ಪಿತ ನಾಮರೂಪಗಳನ್ನು ತ್ಯಾಗ ಮಾಡಿ, ಸಚ್ಚಿದಾನಂದ ಪರಬ್ರಹ್ಮ ಸ್ವರೂಪದ ಶಬ್ದ ಪ್ರಮಾಣ ಮೂಲಕ ಅನುಸಂದಾನಿಸುವದೆ ಬಾಹ್ಯಶಬ್ದಾನುವಿದ ಸವಿಕಲ್ಪ ಸಮಾಧಿ, ಇವೆರಡು ಸಮಾಧಿಗಳ ಅಭ್ಯಾಸದ ಬಲದಿಂದ ಬ್ರಹ್ಮಾನು

ಸಂಧಾನುಭವದಲ್ಲಿ ಮನಸ್ಸು ಲೀನವಾಗಿ ತರಂಗಗಳಿಲ್ಲದ ಸಾಗರದಂತೆ, ಚಲನ ರಹಿತನಾಗುವುದೆ ಬಾಹ್ಯನಿರ್ವಿಕಲ್ಪ ಸಮಾಧಿಯು.

ಅಂತಃಕರಣದಲ್ಲಿ ಉದಯಿಸುವ ಕಾಮಾದಿ ದೃಶ್ಯ ವೃತ್ತಿಗಳನ್ನು ಅರಿಯುವ ತಾನು ' ಸಾಕ್ಷಿಕನೆಂಬುವದೆ ಅಂತರ ದೃಶ್ಯಾವದ್ ಸವಿಕಲ್ಪ ಸಮಾಧಿಯು. ಮಹದಾದಿ ತತ್ವಗಳಲ್ಲಿ ಬೆರೆಯದ ಸಚ್ಚಿದಾನಂದ ಸ್ವಯಂ ಪ್ರಕಾಶ ಸ್ವರೂಪನೆ ತಾನೆಂದು ಅನುಸಂದಾನಿಸುವಡೆ ಅಂತರ ಶಬ್ದಾನುವಿದ ಸವಿಕಲ್ಪ ಸಮಾಧಿಯು. ಸ್ವಾನುಭವದ ಸುಖದ ಉದ್ರೇಕ ಮೇಲಿನ ಎರಡು ಸಮಾಧಿಗಳ ಅನುಸಂಧಾನವಿಲ್ಲದೆ ಚಂಚಲರಹಿತ ನಿವಾತ ದೀಪದಂತೆ ನಿಷ್ಪಂದನಾಗಿರುವದೆ ಅಂತರ ನಿರ್ವಿಕಲ್ಪ ಸಮಾಧಿಯು. ಈ ಆರು ಸಮಾಧಿಗಳಿಂದ ಕಾಲ ಕಳೆಯುತ್ತಿರುವ ಯೋಗೀಶ್ವರನಿಗೆ ಯತ್ರ ಮನಂ ಯಾತಿ ತತ್ತ ತತ್ರ ಸಮಾಧಿಯು ಎಂಬಂತೆ ಎಲ್ಲೆಲ್ಲಿ ಯೋಗಿಯ ಮನಸ್ಸು ಹೋಗುವುದೊ ಅಲ್ಲಲ್ಲಿ ಸಮಾಧಿಯೆ ಸರಿ.

ನಿಜ ಸಹಜ ಸಮಾಧಿ ಗುಹೇಶ್ವರಾ : ಎಂದು ಬಿತ್ತರಿಸಿದ ಪ್ರಭುವಿನ ನಿಜವರಿತ ಸಹಜ ಸಮಾಧಿ ಸಹಜ ಸಮಾಧಿಯೆಂಬುದು ಅದು ತನ್ನ ತಾನರಿತ ಸಹಜ ಪೂರ್ಣಾವಸ್ಥೆ . ಅರ್ಥಾತ್ ತಾನೆ ಪೂರ್ಣನಾಗಿ ಮೇಲೆ ಕೆಳಗೆ ಮುಂದೆ ಹಿಂದೆ ಎಲ್ಲೆಲ್ಲಿಯೂ ಪಸರಿಸಿರುವನು. ಎಂಬ ದಿವ್ಯದೃಷ್ಠಿಯಿಂದ ಯೋಗಿಯು ಅಕಾಮನೂ ಅಬದ್ಧನು ಆಗಿರುತ್ತಾನೆ. ಏಕೆಂದರೆ ನಿಜವರಿತ ನಿಲುವುಳ್ಳ ಮಹಾಂತ ಘನಕ್ಕೆ ಘನ ಅಖಂಡೈಕರಸ ತಾನಾಗಿಹನು. ಅಲ್ಲಿ ಎರಡೊಂದಾದ ನಿಲುವು . ಅರ್ಚನೆಯಿಲ್ಲ ಅರ್ಪಿತವಿಲ್ಲ ಅವಧಾನವಿಲ್ಲ ಶಬ್ದಕ್ಕೆ ತೆರಹಿಲ್ಲ ಗುಹೇಶ್ವರ. ಎಂಬ ಅಂಗ ಲಿಂಗ ಸಮರಸವು , ಜೀವ ಪರಮನ ಸಮರಸ ನಿಲುವು , ಭೇದಾತೀತ ನಿಲವು ಅಕಥನೀಯವಾಗಿದೆ. ಇದರ ಸ್ವರೂಪ ಹೇಳಲಿಕ್ಕೆ ಜಗತ್ತಿನಲ್ಲಿ ಯಾವುದೆ ಭಾಷಾ ಅಥವಾ ಸಾಧನೆಗಳು ಇರುವುದಿಲ್ಲ. ಇದು ತನ್ನ ದಿವ್ಯ ದೃಷ್ಠಿಯಿಂದ ಮತ್ತು ತನ್ನ ಆಂತರಿಕ ಜ್ಞಾನದಿಂದ ತಾನೆ ವಿಚಾರ ಮಾಡಿದರೆ ಅನುಭವಕ್ಕೆ ಬರುತ್ತದೆ. ಅದು ಹೇಗೆಂದರೆ ಮೂಕನು ಸಕ್ಕರೆ ತಿಂದದ್ದು ಅನುಭವ ರೂಪವಾಗಿದೆ ಹೊರ್ತು ಅದು ನುಡಿದು ಹೇಳಲಿಲ್ಲ ಹಾಗೆ ನಿಜ ಸಹಜ ಸಮಾಧಿ ಎಂಬುದು ಹೀಗೆ ಎಂದು ನುಡಿಯಲು ನುಡಿಗೆಡೆಗೊಡದ ಘನದಿರುವು ಅವರ್ಣನೀಯವು ಎಂದು ಹೇಳಿಹರು .

94

ಕೈಯಲ್ಲಿ ಕರಸ್ಥಲ ಮನದಲ್ಲಿ ಪರಸ್ಥಲ
ತನುವೆಲ್ಲ ಹುಸಿಸ್ಥಲ ಶರಣ ನೆಂತೆಂಬೆ
ಮಾತಿನಂತುಟಲ್ಲ ಕ್ರಿಯಾಗಮ ಸ್ಥಲ ಉತ್ಪತ್ತಿ ಸ್ಥಿತಿ
ಲಯರಹಿತ ನಿಜಸ್ಥಲ ಗುಹೇಶ್ವರನೆಂಬ ಲಿಂಗೈಕ್ಯ ವೈಕ್ಯ. || 643 ||

ತಾತ್ಪರ್ಯ : ಕೈಯಲ್ಲಿ ಕರಸ್ಥಲ ಮನದಲ್ಲಿ ಪರಸ್ಥಲ ತನುವೆಲ್ಲ ಹುಸಿಸ್ಥಲ ಶರಣನೆಂತೆಂಬೆ ಮಾತಿನಂತುಟಲ್ಲ ಕ್ರಿಯಾಗಮ ಸ್ಥಲ ಉತ್ಪತ್ತಿ ಸ್ಥಿತಿ ಲಯ ರಹಿತ ನಿಜಸ್ಥಲ ಗುಹೇಶ್ವರನೆಂಬ ಲಿಂಗೈಕ್ಯವೈಕ್ಯ: ಶರಣರೆಂದು ಆರಿಗನ್ನಬೇಕು, ಉತ್ಪತ್ತಿ ಸ್ಥಿತಿ ಲಯ ರಹಿತರು . ಶರಣರು ನಿಜವರಿತವರು ನಿಜಸ್ಥಲದವರು. ಸದ್ಯದ ಸಮಯದಲ್ಲಿ ಶರಣರೆಂದರೆ , ಕೈಯಲ್ಲಿ ನೋಡುವುಡೆ ಗುರು ಕೊಟ್ಟಲಿಂಗ ಮನದಲ್ಲಿ ನೋಡುವುಡೆ ಮಾಯಿಕ ಭೋಗದಾಸಕ್ತ, ತನುವಿನಲ್ಲಿ ನೋಡುವಡೆ ನಾಮರೂಪಂಗಳಿಂದುಕ್ತವಾದ ಹುಸಿ ಸ್ಥಲ . ಇವರುಗಳಿಗೆ ಶರಣರೆನ್ನಬಹುದೆ ? ವೀರ ಶೈವರುಗಳ ಕೈಯಲ್ಲಿ ಕರಸ್ಥಲ ಮನದಲ್ಲಿ ಪರಸ್ಥಲ ತನುವೆಲ್ಲ ಹುಸಿ ಸ್ಥಲದವರನ್ನು ಲಿಂಗವಂತರೆಂದು ಹೇಗೆ

ತಿಳಿಯುವುದು ? ಲಿಂಗವಂತರು ಕರಸ್ಥಲವೆಂದು ಏಕೆ ಅನ್ನುವರು ? ಈ ಪರಿ ಜ್ಞಾನ ಲಿಂಗಾರ್ಚಕರಿಗುಂಟೆ, ಗುರುಘನನೇಕೆ ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವನೇಕೆ ಕರುಣಿಸಿದ, ಆ ಮಹಾಂತನಿಂದ ನಾವು ಪಡೆದುದಾದರೂ ಏನು ? ಎಂಬ ಅರುಹೃದಯದವರು ಶಿಕ್ಕುವದು ವಿರಳವಾಗಿಹರು.

ಲಿಂಗಾರ್ಚಕರು ಲಿಂಗವ ಅದೇಕೆ ಧರಿಸುವುದು? ಪೂಜೆ ಮಾಡುವುದಾದರೂ ಏತಕ್ಕಾಗಿ? ಲಿಂಗದಲ್ಲಿ ಅನಿಮಿಷದೃಷ್ಟಿಯನ್ನಿಡುವದಾದರೂ ಏತಕ್ಕಾಗಿ? ಎರಡು ವೇಳೆ ಸ್ನಾನ ಲಿಂಗಪೂಜೆ ಎರಡು ವೇಳೆ ಹೆಚ್ಚು ಹೆಚ್ಚು ಸಮಯ ಲಿಂಗಪೂಜೆಯಲ್ಲಿ ನಿರತರಾಗಿರುವರು ಎಂದಲ್ಲಿ ಇವರು ಲಿಂಗ ತತ್ವ ತಿಳಿದವರು, ಆರಾದರೂ ಮುಗ್ಧ ಭಾವಿಕರು ಲಿಂಗ ದರುವಿನ ಬಗ್ಗೆ ಕೇಳಹೋದರೆ ಲಿಂಗಪೂಜೆ ಮಾಡುವಿರೊ ಹೇಗೆ ,ಕೊರಳಲ್ಲಿ ಇಷ್ಟಲಿಂಗ ಧರಿಸಿರುವಿರೊ ಹೇಗೆ ಎಂದು ಅಧಿಕಾರವಾಣಿಯಿಂದ ನುಡಿಯುವುದು. ಹಾಗೆ ಲಿಂಗಪೂಜೆ ಮಾಡುತ್ತ ಹೋಗು ಆ ಪೂಜೆಯಿಂದ ನಿನಗೆ ಬೇಡಿದ ಇಷ್ಟಾರ್ಥವ ಸಿದ್ಧಿಸುವುದು. ಆ ಲಿಂಗ ವಿಷಯ ಬಹು ಗಹನ ವಿಷಯ. ಪೂಜೆಮಾಡುವುದು ಸಕಲರಿಗೆ ಸಹಜವು.

ಶರಣರಾದವರ ಹೃದಯ ಲಿಂಗತತ್ವ ತಿಳಿಯಹೋಗಿ ಲಿಂಗವೆ ತಾವಾಗಿಹ ಅರು ಹೃದಯ. ಇದು ತಿಳಿಯದ್ದರಿಂದ ಇವರಿಗೆ ಪೂಜೆ ಮಾಡುವ ಹುಚ್ಚು ಬಹಳವಾಗಿದೆ. ಪೂಜೆ ಅಂದರೆ ಶೂನ್ಯ. ಶೂನ್ಯವೆಂದೂ ಆವಾವ ಅಂಕೆ ಸಂಖ್ಯೆಯಾಗದ್ದು. ಅದಕ್ಕಾಗಿ ಈ ಸಂಜ್ಞ ಅಗಣಿತ ಅನುಪಮ ಏನೊಂದಾಗದ ಘನ ಸಂಕೇತ. ಇದು ಒಂದರಿಂದ ಹಿಡಿದು 9 ರವರೆಗೆ ಅಂಕೆ ಸಂಖ್ಯೆಗಳಿಂದ ಹೇಳಿಸಿಕೊಳ್ಳವದು. ಇದು ಕಾರಣ ಆವುದು ಅಂಕೆ ಸಂಖ್ಯೆಗಳಿಂದುಕ್ತವಾಗಿದೆ ಅದು ಘನವೆನಿಸದು ಏನೊಂದಾಗದುದು ಅದು ಅಕಲ್ಪಿತ.

' ಬೈಗೆ ಪೂಜಿಸಬೇಡಾ ಕಂಡಾ ಇರುಳುವನು ಪೂಜಿಸಬೇಡ ಕಂಡಾ, ಇರುಳುವನು ಹಗಲುವನು ಕಳೆದು ಪೂಜಿಸಬೇಕು ಕಂಡಾ. ಇಂತಪ್ಪ ಪೂಜೆಯ ಪೂಜಿಸುವವರ ಪೂಜೆಯ ತೋರಾ ಎನಗೆ ಗುಹೇಶ್ವರಾ'. ಪೂಜೆಯ ಮಾಡಿದರೆ ಪ್ರಭುದೇವರು ಬಿತ್ತರಿಸಿದ ಸೂಚನೆಯಂತೆ ಇಂತಪ್ಪ ಘನ ಪೂಜೆ ಮಾಡುವರಿದ್ದರೆ ಅವರನ್ನು ತೋರಿಸು ಎಂದು ಹೇಳಿಕೊಂಡಿಹರು. ಸೂರ್ಯೋದಯದಲ್ಲಿ ಪೂಜೆ ಮಾಡುವುದು ಬೇಡ, ಸಾಯಂಕಾಲದಲ್ಲಿ ಮಾಡುವುದು ಬೇಡ, ಹಗಲು ರಾತ್ರಿ ಕಳೆದು ಪೂಜೆ ಮಾಡುವವರಿದ್ದರೆ ಅವರ ಪೂಜೆ ತೋರಿಸು. ಲಿಂಗವೆಂದರೆ ಸ್ವಯಂಪ್ರಕಾಶದ ಮುಂದೆ ಹಗಲು ರಾತ್ರಿಇರಬಹುದೆ? ಉದಯಕಾಲ ಅಸ್ತ ಕಾಲಗಳು ಇರಬಹುದೆ? ಉದಯಾಸ್ತವಿಲ್ಲದ ಪ್ರಕಾಶವೆತ್ತ ? ಉದಯ ಅಸ್ತದಿಂದುಕ್ತವಾದ ಸೂರ್ಯನೆತ್ತ ? ಚಿತ್ ಸೂರ್ಯ ನೆತ್ತ ಬೆಳಕಿನ ಸೂರ್ಯನೆತ್ತ ? ಲಿಂಗವೆಂದಲ್ಲಿ ಚಿತ್ ಪ್ರಕಾಶ ಚಿದ್ರೂಪಂಗೆ ಉದಯಕಾಲ ಸಾಯಂಕಾಲಗಳ ಕಾಣುವದೆಂದಲ್ಲಿ ಇದೆಂಥ ಲಿಂಗದೃಷ್ಠಿ ? ಇದು ಕಾರಣ ಲಿಂಗ ಘನವ ತಿಳಿಯದ್ಧರಿಂದ ಕರಸ್ಥಲದ ಘನವ ತಿಳಿಯದಂತಾಯಿತು. ಸೂರ್ಯನ ಮುಂದೆ ಕತ್ತಲುಂಟೆ ? ಕೈಯಲ್ಲಿ ಜ್ಯೋತಿ ಹಿಡಿದು ಕತ್ತಲೆಯ ನರಸುವರೆ, ಪರುಷವ ಹಿಡಿದು ಕೂಲಿಯ ನರಸುವರೆ, ಭಿಕ್ಷನ್ನವ ನರಸುವರೆ? ತೃಪ್ತರೂಪ ತೃಪ್ತನಿಗೆ ನೈವೇದ್ಯವೇಕೆ? ಲಿಂಗಯ್ಯ ಹಸಿವಿನ ಬಳಲಿಕೆ ವುಳ್ಳವನಾದನೆ?

ವರ್ಣವಿಲ್ಲದ ಲಿಂಗಕ್ಕೆ ರೂಪ ಪ್ರತಿಷ್ಠೆಯ ಮಾಡುವರು ಪ್ರಳಯವಿಲ್ಲದ ಲಿಂಗಕ್ಕೆ ಪ್ರಾಣ ಪ್ರತಿಷ್ಠೆಯ ಮಾಡುವರು, ನುಡಿಯ ಬಾರದ ಲಿಂಗಕ್ಕೆ ಜಪಸ್ತೋತ್ರ ಪೂಜೆಯ ಮಾಡುವರು. ಮುಟ್ಟ ಬಾರದ ಲಿಂಗಕ್ಕೆ ಕೊಟ್ಟು ಕೊಂಡಾಡಿಹೆ ವೆಂಬರು, ಬೊಟ್ಟಿಡಲೆಡೆಯಿಲ್ಲದ ಲಿಂಗವ ಮುಟ್ಟಿಸಿಹೆ ನೆಂಬ

ಬ್ರಷ್ಟರ ನೋಡಾ ಗುಹೇಶ್ವರಾ .

ಕೈಯಲ್ಲಿ ವರ್ಣವಿಲ್ಲದ ಲಿಂಗ ಕಾಣದ್ದರಿಂದ ರೂಪ ಪ್ರತಿಷ್ಠೆ ಮಾಡುವ ಹುಚ್ಚು. ಪೂಜಾಲಿಂಗ ಪ್ರಳಯವಿಲ್ಲದ ಲಿಂಗ ಹೇಗಾಗುವುದು? ಪ್ರಾಣಲಿಂಗಕ್ಕೆ ಒಣ ಪ್ರತಿಷ್ಠೆ ಮಾಡುವ ಮರುಳತನಕ್ಕೆ' ಏನನ್ನಬೇಕು. ಅವರ್ಣೀಯ ಲಿಂಗ ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗ. ' ಲಿಂಗ ಲಿಂಗ ವೆಂದಲ್ಲಿಯೆ ತಪ್ಪಿತ್ತು . ಜಂಗಮ ಜಂಗಮವೆಂದಲ್ಲಿಯೆ ತಪ್ಪಿತ್ತು. ಪ್ರಸಾದ ಪ್ರಸಾದ ವೆಂದಲ್ಲಿಯೆ ತಪ್ಪಿತ್ತು. ಲಿಂಗವೆನ್ನದವಂಗೆ ಲಿಂಗವುಂಟು, ಜಂಗಮ ವೆನ್ನದವಂಗೆ ಜಂಗಮವುಂಟು, ಪ್ರಸಾದವೆನ್ನದವಂಗೆ ಪ್ರಸಾದವುಂಟು ' ಶಬ್ದ ಸೂತಕರಿಗೆ ನಿಲುಕದಲಿಂಗ ಜಪಸ್ತೋತ್ರ ಮಾಡುವದದೆಂತು? ಆರು ನಿಶಬ್ದವೇದಿಗಳು ಅಲ್ಲಿಲಿಂಗ ಜಂಗಮ ಪ್ರಸಾದ ಅರಿದುದುಂಟು. ತ್ರಿವಿಧ ಒಂದಾದುದುಂಟು, ವಿವರಿಸಿ ನೋಡುವುಡೆ ತಾನೆ ಉಂಟು. ಖಂಡಾಖಂಡ ಸಂಯೋಗವಿಲ್ಲದ ಅಖಂಡಲಿಂಗ ನಿಸ್ಸೀಮ ಲಿಂಗ ನಿರಾಲಂಬ ಲಿಂಗ ನಿರೂಪ ಲಿಂಗ ಸಾವಯವ ನಿರವಯ ಒಂದಾದಲಿಂಗ ಅನುಪಮ ಲಿಂಗ. ಅಲ್ಲಿ ಮುಟ್ಟಿ ಪೂಜಿಸುವ ಭಕ್ತನಿಲ್ಲ ಮುಟ್ಟಿಸಿಕೊಂಬ ಲಿಂಗ ದೇವನಿಲ್ಲ , ತನಗೆ ತನಗಿಂತನ್ಯದೇವರಿಲ್ಲ ದೇವನಿಗೆ ತಾನನ್ಯವಲ್ಲ, ತಾನೆಂದರೆ ತಾನು, ಇದು ಕಾರಣ ಲಿಂಗ ಸಕೀಲ ಸಂಯೋಗ ರಹಸ್ಯ ತಿಳಿದವರು ಶರಣರ ದಿವ್ಯ ದೃಷ್ಠಿಯಲ್ಲಿ ಪೂಜಾಲಿಂಗವ ಪೂಜೆ ಮಾಡುವದು ಮರವಿನ ಕಾರ್ಯ. ಇದು ಅಜ್ಞಾನ ಇದು ನಷ್ಟವಾಗಬೇಕಾದರೆ ಪ್ರಥಮ ಲಿಂಗದೇವರ ತಿಳಿಯುವುದು ನಂತರ ಬಹಿರ್ ಅಷ್ಟಾವರಣದಿಂದುಕ್ತವಾದುದು ಇದು ಯತಾರ್ಥಕ ವಲ್ಲವೆಂದು ತನಗೆ ತಾನೆ ವಿದಿತವಾಗುವುದು.

ವೀರಶೈವರಲ್ಲಿ ಅಂತರಂಗ ಅಷ್ಟಾವರಣ ತಿಳಿಯದವರು ಬಹಳಷ್ಟು ಭಕ್ತರು ಉಂಟು . ಜಂಗಮ ದೇವರುಗಳುಂಟು. ಇತ್ತ ಗುರುಗಳು ಉಂಟು ,ಶಿಷ್ಯರು ಉಂಟು. ಇವರುಗಳು ತಮ್ಮ ಇಂಗಿತವ ಬಲ್ಲ ಮಹಾಪುರುಷರ ಹತ್ತಿರ ಹೋಗಿ ಅಂತರಂಗ ಅಷ್ಟಾವರಣ ತಿಳಿಯಬೇಕೆಂಬ ಹಂಬಲವೂ ಇಲ್ಲ. ಇತ್ತ ಮುಗ್ಧ ಭಾವಿಕರಿಗೆ, ತಮ್ಮ ಪೂಜಾ ಪ್ರತಿಷ್ಠೆಯ ತೋರಿಸುವಗೋಸ್ಕರ ಲಿಂಗ ಪೂಜೆಯಲ್ಲಿ ಫಲವುಂಟು ಪದವುಂಟು ನೀವು ಬೇಡಿದಿಷ್ಟಾರ್ಥವನೀವ ದೇವನೆಂದರೆ ಇವನೆ ಎಂದು ಈ ಸ್ವಾಮಿ ವರ್ಗಗಳಾಗಿವೆ ಮೇಲಾಗಿ ಇವರಿಗೆ ಗುರು ಯಾರು ಎಂಬುದು ತಿಳಿಯರು . ಇವರಿಗೆ ಗುರುದರ್ಶನವಿಲ್ಲ, ದೀಕ್ಷೆ ಇಲ್ಲ, ದೀಕ್ಷೆಯಿಲ್ಲದೆ ಲಿಂಗತತ್ವದರಿವು ಅದೆಂತು ಸಾಧ್ಯ. ಇವರು ಜನ್ಮದಲ್ಲಿ ಒಂದು ದಿವಸವಾದರೂ ಆವ ಮಹಾತ್ಮರಿಗಾದರೂ ತಾವು ಶಿಷ್ಯರೆಂದು ನಿರ್ಲಜ್ಜವಾಗಿ ಶ್ರೀಗುರುವಿನ ಪರ ತತ್ವ ಒಪ್ಪಿಕೊಂಡು ಹೃದಯ ಪೂರ್ವಕ ಕಿಂಕರ ಕಿಂಕರರಾಗಿ ಸೇವೆ ಮಾಡಿದ್ದು ಅಪರೂಪ . ಇಂಥ ಮೂಲಾಹಂಕಾರ ನಷ್ಟವಾಗದಿದ್ದರೆ ಭೇದಿಸಬಾರದಿಪ್ಪ ಅಭೇದ್ಯ ಶಿವ ತತ್ವ ಅದೆಂತು ಸಾಧ್ಯ. ಈ ಮಲ ತ್ರಯ ದೋಷ ನಿರಸನ ವಾಗಬೇಕಾದರೆ, ಶ್ರೀ ಗುರು ಸನ್ನಿಧಿಯ ಅವಶ್ಯಕವು. ಗುರುದರ್ಶನವಾದಲ್ಲಿ ಕರಸ್ಥಲದ ಘನವ ತಿಳಿಯುವದು. ಕೈಯಲ್ಲಿ ಕರಸ್ಥಲ ಇದಾರಿಗೆ! ಈ ಭಾಗ್ಯ ಅದಾರಿಗೆ!? ಈ ಮಹತ್ಪೂಜ್ಯ ಅದಾರಿಗೆ? ದೇವ ದೇವನ ಕರುಣೆ ಅದಾರಿಗೆ? ಕೈಯಲ್ಲಿ ಕರಸ್ಥಲ. ಇದು ಅರುವಿನ ಕರಸ್ಥಲ ಅರುವಾಗಿ ಅರು ರೂಪ ಲಿಂಗಯ್ಯನ ಅರಿದರಿದು ನೋಡುವ ಕರಸ್ಥಲ. ಕರಸ್ಥಲವೆಂಬುದು ಲಿಂಗದ ಕೈ ಲಿಂಗದ ಸ್ಥಲ . ಇವೆರಡು ಒಂದಾದುದು ಕರಸ್ಥಲ. ಲಿಂಗ ಜ್ಞಾನ ಕೈಯಿ ಲಿಂಗದರುವಿನ ಅರುವು ಸ್ಥಲವಾಗಿದೆ. ಅಜಾತ ತತ್ವ ಗುಣ ಕ್ರಿಯೆಯುಳ್ಳದ್ದಾಯಿತೆ? ಕರಸ್ಥಲ ಅನುಪಮಸ್ಥಲ ಇದಕ್ಕೆ ಉಪಮೆ ಕೊಟ್ಟು ಹೇಳಿದರದಕ್ಕದೆ ಕೊರತೆ. ವೇದ ದೇದಾಂತಗಳಿಗೆ ಅಸಾಧ್ಯವಾಗಿಹ ಅನುಪಮ ಲಿಂಗವ ತಂದುಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ .

ಶ್ರೀ ಗುರು ಕರುಣಿಸಿದ ಲಿಂಗ, ಮೌನ ಮುದ್ರಿತ ಲಿಂಗ. ಕರುಣಿಸಿದ ತಂದೆಯು ಮೌನ

ಮುದ್ರಿತನು. ಕಾರುಣ್ಯ ಪಡೆಯುವವನು ವೇದ ವೇದಾಂತಗಳಿಗೆ ಮಿಕ್ಕಿ ಮೀರಿ ನಿಂತ ಅರುಹೃದಯ. ಮೌನಮುದ್ರೆಯ ಧರಿಸಿ ಘನಲಿಂಗವ ತಿಳಿವನು. ಇಲ್ಲಿ ಇಷ್ಟಲಿಂಗವೆಂಬ ಸಂಜ್ಞೆ ಬಹು ಗಹನಾರ್ಥವಾಗಿರುವುದು ಸರ್ವರ ಇಷ್ಟವಾದುದು ಸುಖ. ಸುಖವೆಂದರೆ ಲಿಂಗ. ತಾನು ಸಕಲರಿಗೆ ಪ್ರಿಯವಾದುದು ಲಿಂಗ.(ಸುಖ) ಸುಖ ಬೇರಲ್ಲ ಲಿಂಗ ಬೇರಲ್ಲ ತಾನು ಬೇರಲ್ಲ. ತಾನೆಂದರೆ ಸುಖವು ಅಹುದು, ಲಿಂಗವೂ ಅಹುದು . ಇಷ್ಟಲಿಂಗವದು ತಾನೆ. ಇದು ನುಡಿಗೊಳಪಟ್ಟ ಲಿಂಗವಲ್ಲ. ಲಿಂಗವರಿತು ಲಿಂಗವಾಗಿಹ ಘನವಂತರ ಸ್ವರೂಪ. ನಿಃಶಬ್ದವೇದಿಯು. ನಿಃಶಬ್ದ ಘನವ ಕರುಣಿಸುವನಲ್ಲದೆ ಶಬ್ದವೇದಿಗಳಿಗೆ ಅದೆಂತು ಸಾಧ್ಯ ? ಲಿಂಗ ಸಕೀಲ ಸಂಯೋಗ ವರ್ಮಸ್ಥಲ ಅರಿಯುವ ಕರುಣೆಯ ಕರುಣಾಕರನೆಂದರೆ ಸದ್ಗುರು . ಸದ್ಗುರು ನುಡಿ ನಡೆಗಳಿಗೆ ಮೀರಿದ ಘನನು. ಪ್ರಥಮಾಚಾರಿ ಜ್ಞಾನಾಚಾರಿ ಅರಿದರಿದ ಮಹಾಂತ. ನಿರಂಜನ ನಿಜ ಚಿದ್ರೂಪ ತಾನಾದವಂಗೆ ಅರುವು ನೀನೆಂಬುದಾಗಲಿ ಅಲ್ಲಿ ಬೋಧಕ್ಕೆಡೆಯುಂಟೆ? ಅದರಿಂದ ಜ್ಞಾನಾಚಾರಿ ಪ್ರಥಮಾಚಾರಿ ನಿಃಕಲ ಪರಬ್ರಹ್ಮ ; ಆ ಮಹಾಂತ ಲಿಂಗವಾಗಿ ಲಿಂಗವ ಕರುಣಿಸಿಹನು. ಈ ಘನವಂತನ ಕರುಣೆ ಪಡೆಯಬೇಕಾದರೆ ಲಿಂಗವಾಗಿ ಲಿಂಗ ಪಡೆಯುವುದು . ಅಲ್ಲಿಯೆ ಅನುಪಮ ಜ್ಞಾನದಿರುವ ಪ್ರಜ್ವಲಿಸುವ ಕರಸ್ಥಲ ಅಖಂಡ ಜ್ಞಾನದಿರುವ ಪ್ರಜ್ವಲಿಸುವ ಕರಸ್ಥಲವಲ್ಲಿಯೆ! ಅಚಲಿತ ಲಿಂಗ ಪ್ರಜ್ವಲಿಸುವಲ್ಲಿ ಮನವು ಲಿಂಗವು, ತನುವು ಲಿಂಗವು . ಅಖಂಡಿತ ದರ್ಶನವಾದಲ್ಲಿ ಅಲ್ಲಿ ಮನವೆಂಬ ಕಲ್ಪಿತಕ್ಕಿಂಬುಂಟೆ? ತನುವೆಂಬ ತೋರಿಕೆಗಿಂಬುಂಟೆ! ಇಲ್ಲದುದು ಇಲ್ಲವೆ ಇಲ್ಲ . ಈ ಇಲ್ಲವೆಂಬುದು ಇಲ್ಲವಾದುದು,ತನ್ನಿಂದ ತಾನೆ ನೋಡಿಕೊಳ್ಳುವುದು. ಇದು ಕಾರಣ ಮಾತಿನಂತುಂಟಲ್ಲ ಕ್ರಿಯಾಗಮಸ್ಥಲವೆಂದು ಹೇಳಿಹರು.

ಕ್ರಿಯಾಗಮಸ್ಥಲವೆಂಬುದು ಅರುವ ಅರಿತವರ ಸ್ಥಲ ಲಿಂಗವರಿತವರ ಸ್ಥಲ. ಅರಿದರಿದು ಅರಿಯದರುವೆ ತಾವಾದವರ ಸ್ಥಲ. ಎನೆಂದೆನಲಿಲ್ಲದ ಅರುವಾಗಿಹ ಘನ ವಾಙ್ಮನೋತೀತವು , ಮೂಕನು ಮಾತಾಡಿದುದೆಂತು ? ಲಿಂಗವು ಮಾತಾಡಿದುದೆಂದು , ಲಿಂಗವರಿತು ಲಿಂಗವಾಗಿಹುದೆ ಕ್ರಿಯಾಗಮಸ್ಥಲ. ಇದೆಂಥ ಕ್ರಿಯಾಗಮ? ಜ್ಞಾನ ಸ್ವರೂಪವರಿದು ಅದುವೆ ತಾನಾಗಿ ನಿಂತ ನಿಲವು , ನಿಃಶಬ್ದ ಬ್ರಹ್ಮವೆ ತಾನಾಗಿ ನಿಂತ ನಿಲುವು. ಆದುದುರಿಂದ ಉತ್ಪತ್ತಿ ಸ್ಥಿತಿ ಲಯರಹಿತ ನಿಜಸ್ಥಲ ಲಿಂಗೈಕ್ಯವೈಕ್ಯ.

ಉತ್ಪತ್ತಿ ಸ್ಥಿತಿ ಲಯ ರಹಿತ ನಿಜಸ್ಥಲ : ನಿಜಸ್ಥಲವು ತಾನು ನಿಜಸ್ಥಲಕ್ಕೆ ನಿಜಸ್ಥಲವೆಂಬುದಿಲ್ಲ . ಈ ಮೌನೇಶ ಸ್ಥಲ, ಮೌನ ಮುದ್ರಿತನ ಸ್ಥಲ, ನಿಜವರಿತು ನಿಶ್ಚಿಂತನಾಗಿಹ ನಿರಾಳ ಸ್ಥಲ, ಸುಖಮಯ ಸ್ಥಲ, ಸುಖವದು ಸುಖವೆಂದು ಹೇಳಲಿಲ್ಲ. ಅಲ್ಲಿ ಹದಿನಾಲ್ಕು ಲೋಕಂಗಳ ಉತ್ಪತ್ತಿ ಇಲ್ಲ. ಸ್ಥಿತಿ ಇಲ್ಲ , ಪರಮಾರ್ಥದ ಉತ್ಪತ್ತಿ ಇಲ್ಲ ಲಯವೂ ಇಲ್ಲ. ಆವಾವುದಕ್ಕೂ ಇಂಬುಗೊಡದೆ ತಾನೆ ತಾನಾಗಿ ಪ್ರಜ್ವಲಿಸುವ ಸ್ವಮಹಿಮೆ ನಿಜ ಸ್ಥಲ. ಇಲ್ಲಿ ಲಿಂಗದುತ್ಪತ್ತಿ ಇಲ್ಲ , ಸ್ಥಿತಿ ಇಲ್ಲ, ಲಯವೂ ಇಲ್ಲವಾದುದರಿಂದ ಗುರು ಘನನು ಭವಿ, ಲಿಂಗ ಘನವು ಭವಿ, ಜಂಗಮ ಘನವು ಭವಿ ಎಂದು ಹೇಳಿದ್ದಾರೆ. ಗುರುವಿಂಗೆ ಗುರುವಿಲ್ಲ , ಲಿಂಗಕ್ಕೆ ಲಿಂಗವಿಲ್ಲ ಜಂಗಮಕ್ಕೆ ಜಂಗಮವೆಂಬುದಿಲ್ಲ ಇಲ್ಲ. ಇಲ್ಲವೆಂಬುದು ಇಲ್ಲವಾದುದರಿಂದ ಲಿಂಗೈಕ್ಯವೈಕ್ಯವೆಂದು ಹೇಳಿದ್ದಾರೆ. ಇದು ಐಕ್ಯನ ಐಕ್ಯವೆಂದು ಹೇಳಿದ್ದಾರೆ.

95

ಒತ್ತಿ ಹಣ್ಣ ಮಾಡಿದಡೆ ಅದೆತ್ತಣ ರುಚಿಯಪ್ಪುದೊ !

ಕಾಮನ ಕಲ್ಪಿಸಿ ಭಾವಿಸಿದಡೆ ಅದೆ ಭಂಗ, ಭಾವಿಸುವ
ಭಾವನೆಗಿಂತ ಸಾವುದೆ ಲೇಸು ಕಾಣಾ ಗುಹೇಶ್ವರಾ.

ತಾತ್ಪರ್ಯ : ಒತ್ತಿ ಹಣ್ಣ ಮಾಡಿದಡೆ ಅದೆತ್ತಣ ರುಚಿ ಯಪ್ಪುದೊ : ಒತ್ತಿ ಹಣ್ಣ ಮಾಡಿದವರು ಆರು , ಮಾನವ ತಾನು ಜ್ಞಾನವಾನ್ ಜನ್ಮವ ಧರಿಸಿ ಭಾವಕ್ಕಗಮ್ಯವಾಗಿಹ ತನ್ನ ಪರವು ಪುರುಷಾರ್ಥಸಿದ್ಧಿಸುವುದು ಲೇಸು. ಕಾಮಿಸಿ ಕಲ್ಪಿಸಿ ಭಾವಿಸಿದಡೆ ಅದೇ ಭಂಗ .ಮಾವಿನಕಾಯಿ ಯಾಗಲಿ ಬಾಳೆಯ ಕಾಯಿ ಯಾಗಲಿ ಅದನ್ನು ಒತ್ತಿ ಹಣ್ಣು ಮಾಡುವುದು. ಅದು ಪಕ್ವಕ್ಕೆ ಬಂದಿರಲಿ ಬಾರದಿರಲಿ ಅದನ್ನು ತೀವ್ರಗತಿಯಿಂದ ತನ್ನ ಇಚ್ಛೆಯಂತೆ ತನಗೆ ಲಭ್ಯವಾಗಲಿ ಎಂಬ ಉದ್ದೇಶವನ್ನಿಟ್ಟು ಹೊಗೆಯನ್ನು ಕೊಡುತ್ತಾನೆ. ಕುದಿ ಮನೆಯಲ್ಲಿ ಇಡುತ್ತಾನೆ. ಇದಲ್ಲದೆ ಹೊಟ್ಟಿನಲ್ಲಿಯೊ, ಕಾಳಿನಲ್ಲಿಯೊ, ಇಡುತ್ತಾನೆ. ಅದನ್ನು ತೀವ್ರಗತಿಯಲ್ಲಿ ಹಣ್ಣಿಗೆ ಬರುವಂತೆ ಮಾಡುತ್ತಾನೆ. ಅದು ಪಕ್ವವಾದ ಹಣ್ಣಿನಂತೆ ರುಚಿಯಾಗಬಹುದೇ ಆಗದು ?

ಈಶ್ವರ ರಚಿತವಾದ ವೃಕ್ಷ ಆ ವೃಕ್ಷದಲ್ಲಿಯ ಫಲಂಗಳ ಪಕ್ವದ ದೆಶೆ. ಅದು ಈಶ್ವರನಿಗೆ ಬಿಟ್ಟದ್ದು. ಏಕೆಂದರೆ ಈಶ್ವರನ ಮರ , ಈಶ್ವರನ ಫಲ , ಅದರ ಪಕ್ವದ ದೆಶೆಯು ಈಶ್ವರನದು. ಅದು ತಾನೆ ಪಕ್ವವಾಗಿ ಮರದಿಂದ ತೊಟ್ಟು ಬಿಟ್ಟ ಫಲದ ರುಚಿ . ಈಶ್ವರನ ಕೃಪೆಯಿಂದ ಆರಿಗೆ ದೊರೆಯುವುದು, ಅದು ಈಶ್ವರನ ಫಲವಾಗಿದೆ . ಅದರಲ್ಲಿರುವ ರುಚಿಯು , ಮಾನವನ ಕೃತಿಗೆ ಶಿಕ್ಕ ಫಲದ ರುಚಿಗೆ ಒಂದಾಗಬಹುದೆ!

ಮಾನವನ ಕೃತಿಗೆ ಶಿಕ್ಕ ಫಲವು ಕಾಮಿಸಿ , ಕಲ್ಪಿಸಿ , ಭಾವಿಸಿ ಮಾಡಿದ ರುಚಿಯು . ಈಶ್ವರನ ಪ್ರೇರಣೆಯಿಂದ ಸಕಾಲಕ್ಕೆ ಪಕ್ವವಾದ ಫಲವು . ಕಾಮಿಸದೆ ಕಲ್ಪಿಸದೆ ಭಾವಿಸದೆ ಮಾಡಿದ ರುಚಿಯು . ಇದು ಈಶ್ವರನ ಫಲದ ರುಚಿಯು . ಇನ್ನೊಂದು ಮಾನವನ ಕೃತಿಗೆ ಶಿಕ್ಕ ರುಚಿಯಾಗಿದೆ . ಮಾನವ ಕೃತಿಗೂ, ಈಶ್ವರನ ಕೃತಿಗೂ ಎತ್ತಣದಿಂದೆತ್ತ ? ಇದನ್ನು ಕಂಡ ಪ್ರಭುದೇವ ಒತ್ತಿ ಹಣ್ಣ ಮಾಡಿದರೆ ಅದೆತ್ತಣ ರುಚಿಯಪ್ಪುದೊ ಎಂದು! ಬಿತ್ತರಿಸಿದುದು ಬಹು ಗಹನಾರ್ಥವಾದುದು.

ಪರಮ ಪುರುಷಾರ್ಥರೂಪಿ ಫಲ. ಒತ್ತಿ ಹಣ್ಣು ಮಾಡುವದಲ್ಲ. ಒತ್ತಿ ಹಣ್ಣು ಮಾಡಿದರೂ ಅದರಲ್ಲಿ ರುಚಿ ಬಾರದು. ಆಧುನಿಕ ಸಮಯದಲ್ಲಿ ಪರಮ ಪುರುಷಾರ್ಥರೂಪಿ ಜ್ಞಾನಾಮೃತ , ಅಚಿಂತ್ಯ ಪದವಾಗಿಹ ಅಮರ ಫಲ ಅದಾರಿಗೆ ಬೇಕಾಗಿದೆ ? ಅತ್ಯಂತ ದುಃಖ ನಿವೃತ್ತ ಪರಮಾನಂದ ಪ್ರಾಪ್ತ ರೂಪ ಪ್ರಾಪ್ತಿ ಅದಾರಿಗೆ ಬೇಕಾಗಿದೆ ? ಒಂದು ವೇಳೆ ಬೇಕೆನಿಸಿದರೂ ಅದನ್ನು ಕರುಣಿಸುವ ಸದ್ಗುರು ದೇವ ದಯಾಮಯ ಶಿಕ್ಕುವುದು ವಿರಳ . ಇದು ಕಾರಣ ಕಾಮಿಸಿ ಕಲ್ಪಿಸಿ ಭಾವಿಸಿದರೆ ಅದೆ ಭಂಗ. ಕಲ್ಪಿತ ಪುರುಷನಾದವನು ಕಾಮಿಸುವುದು, ಕಲ್ಪಿಸುವುದು, ಭಾವಿಸುವುದು ಅವನಿಗೆ ಸಹಜ ಸ್ವಭಾವವಾಗಿರುವಲ್ಲಿ, ಭಾವಕ್ಕಗಮ್ಯವಾಗಿಹ ಚಿದ್ವಸ್ತುವಿನಿರುವು ಅವನಿಗದೆಂತು ಸಾಧ್ಯವು.

ಘಟದೊಳಗಿರ್ದ ಪಾದರ್ಥವು ಆ ಘಟದ ಹೊರಗೆ ಉರಿಯ ಹೊತ್ತಿಸದಲ್ಲದೆ ಪರಿಪಕ್ವವಾಗದು. ಹಾಗೆ ಅಂತರಂಗದಲ್ಲಿರ್ದ ಚಿದ್ವಸ್ತು ಸಂಸ್ಕಾರ ಬಲದಿಂದ ಹೊರ ಹೊರಟಲ್ಲದೆ , ಅಂತರಂಗದಲ್ಲಿರ್ದ ಭವ ರೋಗ ಮಾಣದು. ಇದು ಕಾರಣ ಕೂಡಲ ಚೆನ್ನಸಂಗಮದೇವಾ ಅರ್ಚನ ಅರ್ಪಣ ಅನುಭವಾದಿಗಳಿಂದ ನೀವು ಪ್ರಕಟಗೊಳ್ಳುವಿರಾಗಿ.

ಅಂತರಂಗದಲ್ಲಿರ್ದ ಚಿದ್ವಸ್ತು ತಾನೆ ಚಿದ್ವಸ್ತುವೆಂಬ ಸಮ್ಯಜ್ಞಾನರೂಪಿ ಸಂಸ್ಕಾರ ಬಲವು ಅವಶ್ಯಕವಾದುದು. ಇಲ್ಲಿ ಎರಡೊಂದಾದ ಅನುಭವ ಮುಖ್ಯವಾದುದು . ಶಬ್ದಕ್ಕೆ ತೆರಹಿಲ್ಲದ ತನ್ನಿರುವಿನ ಅರುವು. ತನ್ನಿಂದ ತನಗೆ ಪ್ರಕಟಗೊಳ್ಳಬೇಕಾದರೆ, ಅನಿಮಿಷನಂಥ ಸದ್ಗುರುದೇವ , ಆತನ ಸಂಸ್ಕಾರ

ಸಮ್ಯಜ್ಞಾನ ಅದಾರಿಗೆ? ಇದು ಅಂತರಂಗದಲ್ಲಿರ್ದ ಚಿದ್ವಸ್ತು ಪ್ರಕಟವಾದ ಸ್ವಮಹಿಮೆ. ಈ ಘನಮಹಿಮೆ, ಕಾಮಿಸದ, ಕಲ್ಪಿಸದ, ಭಾವಿಸದ, ಸದ್ಗುರುದೇವ. ಆ ಮಹಾಮಹಿಮನಿಂದ ಅಚಿಂತ್ಯತ್ವ ಕಾಣಲು ಬಂದ ಪ್ರಭುದೇವನು . ಕಾಮಿಸದ ಕಲ್ಪಿಸದ ಭಾವಿಸದ ತಲೆಯಿಲ್ಲದ ಶಿಷ್ಯ. ಇವರೀರ್ವರು ಸಕಲರ ಗುರು ಶಿಷ್ಯ ಸಂಪ್ರದಾಯದಂತೆ ಇವರ ಸಂಪ್ರದಾಯವಲ್ಲ. ಇವರದು ಅಪ್ರತಿಮ ನಿಲುವುಳ್ಳ ನಿಲಯ ವಾದುದರಿಂದ ಪೂರ್ವವಿಲ್ಲದ ಶಿಷ್ಯ , ನೇಮವಿಲ್ಲದ ಗುರು , ಹೆಸರಿಲ್ಲದ ಲಿಂಗ , ಈ ತ್ರಿವಿಧದ ಘನವರಿತವರು ಆಗಿರುವಲ್ಲಿ ಇವರು ಮಾತ್ರ ಒತ್ತಿ ಹಿಸಕಿ ಹಣ್ಣು ಮಾಡದವರು. ತನ್ನಿಂದ ತಾನೆ ಪಕ್ವವಾಗಿ ಬಿದ್ದ ಹಣ್ಣು. ಅದರ ರುಚಿಯ ಸವಿದವರು. ಈ ಘನಸುಖವ ಕಾಮಿಸುವ ಕಲ್ಪಿಸುವ ಭಾವಿಸುವ ಜೀವರುಗಳು ಅವರೆತ್ತ ಬಲ್ಲರು ? ಕಲ್ಪಿತರು, ಅಕಲ್ಪಿತ ಘನಸುಖ ಅವರೆತ್ತ ಬಲ್ಲರು ? ಅಕಲ್ಪಿತ ಸುಖವದು ಒತ್ತಿ ಹಣ್ಣು ಮಾಡಿದ ರುಚಿಯಲ್ಲ.

ಅಕಲ್ಪಿತ ಅರುವು, ಕಾಮಿಸದ ಅರುವು, ಕಲ್ಪಿಸದ ಅರುವು, ಭಾವಿಸದ ಅರುವು. ಅದು ಅರಿಯಬಾರದ ಘನವು. ತನ್ನಿಂದ ತಾನೆ ತಾನಾದ ಘನ. ಇಲ್ಲಿ ಗುರುವಿಡಿದ ಅರುವು. ಲಿಂಗವಿಡಿದ ಅರುವು ಕಲ್ಪಿತವಾಗಿದೆ. ಗುರುವಿನಿಂದಾದ ಜ್ಞಾನ ಒತ್ತಿ ಹಿಸಿಕಿ ಮಾಡಿದ ಹಣ್ಣಾದಂತೆ , ಲಿಂಗವಿಡಿದ ಜ್ಞಾನವು ಒತ್ತಿ ಹಿಸಿಕಿ ಮಾಡಿದ ಹಣ್ಣು . ಏಕೆಂದರೆ ಕಲ್ಪಿಸಿ ಮಾಡಿದುದು ನುಡಿಯಿಂದುಕ್ತವಾದುದು. ಆವುದು ನುಡಿಯಿಂದುಕ್ತವಾಗಿದೆ ಅದು ಭಾವಕ್ಕಿಂಬಾದುದು . ಆವುದು ಭಾವದಿಂದುಕ್ತವಾಗಿದೆ ಅದು ನೆನಹು ನಿರ್ಣಯಕ್ಕೊಳ ಪಡುತ್ತದೆಂದಲ್ಲಿ, ಅದು ಒತ್ತಿ ಹಿಸಿಕಿ ಹಣ್ಣು ಮಾಡಿದುದು. ತನ್ನಿಂದ ತಾನರಿತ ಅರುವು . ತನ್ನಿಂದ ತಾನೆ ಪಕ್ವವಾದ ಹಣ್ಣು ಅದರ ಸವಿ ಮಾತಿನಂತುಟಲ್ಲ.

ಕಾಮಿಸಿ ಕಲ್ಪಿಸಿ ಭಾವಿಸಿದಡೆ ಅದೆ ಭಂಗ : ಆಕಾಶವು ತಾನು ಆಕಾಶವಾಗಲು ಅದು ಕಾಮಿಸಿದೆಯಾ! ನಾನು ಆಕಾಶವೆಂದು ಕಲ್ಪಿಸಿದೆಯಾ? ಆಕಾಶ ಆಕಾಶವೆಂದು ಭಾವಿಸಿದೆಯಾ? ಅದು ಘಟದಲ್ಲಿದ್ದು ಘಟಾಕಾಶವೆನಲಿಲ್ಲ, ಮಠದಲ್ಲಿದ್ದು ಮಠಾಕಾಶವೆನಲಿಲ್ಲ, ಮೇಘದೊಳಗಿದ್ದು ಮೇಘಾಕಾಶವೆನಲಿಲ್ಲ , ಆವಾವ ಉಪಾಧಿ ಇಲ್ಲದೆ ಇದ್ದ ಆಕಾಶ ಮಹಾಕಾಶ ವೆನಲಿಲ್ಲ . ಅದು ಆವುದರಲ್ಲಿದ್ದರೂ ತಾನು ಇದ್ದಂತೆ ಇದೆ.

ಆಕಾಶವದು ಆಕಾಶವೆನಲಿಲ್ಲ . ಹಾಗೆ ತನ್ನಿಂದ ತನ್ನ ನೋಡಲು, ತನಗೆ ತಾ ಪ್ರತ್ಯಕ್ಷನಾಗಿ ಆ ಪ್ರತ್ಯಕ್ಷವೆಂಬುದು ಭ್ರಾಂತು ನೋಡಾ. ಅದೇನು ಕಾರಣವೆಂದರೆ ತನಗೆ ತಾನನ್ಯವಲ್ಲಾಗಿ ಎನಗನ್ಯವಿಲ್ಲ. ಅನ್ಯನಾನಲ್ಲವೆಂದು , ಬ್ರಹ್ಮವು ನಾನೆಂಬುದದು ಅತಿಶಯದ ಭ್ರಾಂತೆಂದು ತಿಳಿದು ನೋಡಾ. ಅದೇನು ಕಾರಣವೆಂದಡೆ ಬ್ರಹ್ಮಕ್ಕೆ ನಾ ಬ್ರಹ್ಮವೆಂಬುದು ಘಟಿಸಿದಾಗ ಅತಿಶಯದ ಸುಖವಳಿದ ನಿರಂತರ ಸುಖವೆಂತುಂಟೆಂದಡೆ ಗುರು ಮುಗ್ಧನಾದಡೆಯೂ , ತಿಳಿದು ನೋಡಲು ಗುಹೇಶ್ವರ ಲಿಂಗವು ತಾನೆ. ಇದು ತನ್ನಿಂದ ತನ್ನ ನೋಡಿದ ಸ್ವಮಹಿಮ . ಇಲ್ಲಿ ಸ್ವಮಹಿಮ ಎಂಬುದು ದೋಷವಾಗಿರುವಲ್ಲಿ ತಾನು ತನ್ನಿಂದ ತನ್ನ ನೋಡಿದಾಗ ,ತನಗೆ ಕಾಮಿಸಲು ಕರಣಂಗಳು ಇವೆಯೆ? ಕಲ್ಪಿಸಲು ಚಿದಾಭಾಸವುಂಟೆ? ಭಾವಿಸಲು ತ್ರಿವಿಧಾತ್ಮರುಂಟೆ? ಇವರಾರು ಇಲ್ಲವೆಂದಾದರೂ ಉಂಟೆ? ಎನಗನ್ಯವಿಲ್ಲ ಅನ್ಯನಾನಲ್ಲವೆಂದು ಬ್ರಹ್ಮವೆ ನಾನೆಂಬುದದು ಅತಿಶಯದ ಭ್ರಾಂತು ಎಂಬುದು ತನಗದು ಸಿದ್ಧವಾದಲ್ಲಿ ಕಾಮಿಸುವುದಿಲ್ಲ ಕಲ್ಪಿಸುವದಿಲ್ಲ, ಭಾವಿಸುವದಿಲ್ಲ.

ತಾನಾರೆಂದು ತನ್ನಿರುವು ತನಗೆ ಉದಯವಾದುದು ಉದಯಾಸ್ತವಾಗದುದು. ನಿರಂತರ ಮಂಗಳಮಯ ನಿರುವಲ್ಲಿ ಭಾವಿಸುವದದೆಂತು?

ಭಾವಿಸುವ ಭಾವನೆಗಿಂತ ಸಾವುದೆ ಲೇಸು ಕಾಣಾ ಗುಹೇಶ್ವರಾ: ಭಾವಿಸುವ ಭಾವನೆಗಿಂತ

ಸಾವುದೆ ಲೇಸು , ಏಕೆಂದರೆ ತನ್ನಿಂದ ತನ್ನ ನೋಡಿ ತನಗೆ ತಾನೆ ಇದ್ದಂತಿದ್ದು ನಿರಂತರ ಮಂಗಳಮಯದ ಘನದಿರುವಿನ ಅರುವಾದ ಮೇಲೆ ಆರಾಗಿ ಭಾವಿಸುವುದು? ತಾನೆ ಅಕಲ್ಪಿತ ಘನವಾಗಿರುವಲ್ಲಿ ಅದನ್ನು ಮರೆತು ಕಲ್ಪಿತನಾಗಿ ಕಲ್ಪಿಸುವದಕ್ಕಿಂತ ಸಾವುದೆ ಲೇಸು. ಭಾವಕ್ಕಗಮ್ಯವಾಗಿ ತಾನು ಪುನಃ ಕಲಿತನಾಗಿ ಜೀವಾತ್ಮ ಅಂತರಾತ್ಮ ಪರಮಾತ್ಮ ಎಂದು ಭಾವಿಸುವ ಭಾವನೆಗಿಂತ ಸಾವುದೆ ಲೇಸು ಎಂದು ಹೇಳಿಹರು. ಏಕೆಂದರೆ ಗಗನದಲ್ಲಿ ಆರಾರ ಹಂಗಿಲ್ಲದೆ ಹಾರಾಡುವ ಗಗನ ಸಂಚಾರಿ ಕೆಳಗೆ ಬೀಳುವದೆಂದಲ್ಲಿ ಅಪಘಾತವಲ್ಲವೆ? ಏನೆಂದೆನಲಿಲ್ಲದ ಅರುವು ಇದು ತನ್ನಿರುವು ನಿರಂತರ ಎಂಬುದು, ತನ್ನಿಂದ ತನಗದು ವೇದ್ಯವಾದ ಬಳಿಕ ಜೀವೋ ಬ್ರಹ್ಮೇ ನಾ ಪರಃ ಎಂಬ ಭಾವುಕನಾಗಿ ಭಾವಿಸುವ ಭಾವನೆಗಿಂತ, ಸಾವುದೆ ಲೇಸು ಎಂದು ಹೇಳಿಹರು.

ಬ್ರಹ್ಮಕ್ಕೆ ನಾ ಬ್ರಹ್ಮವೆಂಬುದು ತನಗದು ಯತಾರ್ಥ ಅರುವು ವೇದ್ಯವಾದರೂ, ನಾನು ಬ್ರಹ್ಮನಿದ್ದೇನೆಂಬುದು ಸಚ್ಚಿದಾನಂದ ನಾ ನಿದ್ದೇನೆನ್ನುವುದು. ತಾನು ಅಹಮಿಲ್ಲದ ಚಿದ್ಘನನೆಂಬುದು ತನ್ನಿಂದ ತನಗದು ವೇದ್ಯವಾದರೂ , ಚಿದಹಮ್ಮುಳ್ಳವನಾಗಿರುವದಕ್ಕಿಂತ ಸಾವುದೆ ಲೇಸು. ನಿಶ್ಯಬ್ದ ಬ್ರಹ್ಮದರಿವು ತಾನು , ತನ್ನಯ ಇರುವು ತಾನೆಂಬುದು ನಿಃಶಬ್ರಹ್ಮ. ನಿಃಶಬ್ದ ಬ್ರಹ್ಮವೆಂದು ನುಡಿದು ಹೇಳಲಿಲ್ಲ ತಾ ನಿಃಶಬ್ದ ಬ್ರಹ್ಮವೆನಲಿಲ್ಲ . ನುಡಿಗೆಡೆಗೊಡದ ಘನದಿರುವೆ ತಾನು ತನ್ನಿಂದ ತನಗದು ವೇದ್ಯವಾದಲ್ಲಿ ಸರ್ವಂ ಖಲಿದ್ವಂ ಬ್ರಹ್ಮವೆಂದು ಭಾವಿಸುವ ಭಾವನೆಗಿಂತ ಸಾವುದೆ ಲೇಸು ಎಂದು ಹೇಳಿಹರು .

96

ನಿಮ್ಮ ನೆನವುತ್ತಿದ್ದಿತ್ತು ನೆನೆವ ಮುಖವಾವುದೆಂದರಿಯದೆ,
ಪೂಜೆಯ ಪೂಜಿಸುತ್ತಿದ್ದಿತ್ತು ಪೂಜೆಯ ಮುಖ ವಾವುದೆಂದರಿಯದೆ,
ಆಡಿ ಹಾಡಿ ಬೇಡುತ್ತಿದ್ದಿತ್ತು ; ಬೇಡುವ ಮುಖ ವಾವುದೆಂದರಿಯದೆ
ಕಾಯದಲ್ಲಿಲ್ಲ, ಜೀವದಲ್ಲಿಲ್ಲ, ಭಾವದಲ್ಲಿಲ್ಲ,
ಭರಿತವು ಅದು ತಾನಪ್ಪದು .
ತಾನಲ್ಲದದೇನ ಹೇಳುವೆ ಕೌತುಕವ
ಗುಹೇಶ್ವರನೆಂಬ ಹೆಸರೊಳಗಿದ್ದುದ
ಬೆಸಗೊಂಬುವರಿಲ್ಲ ನಿರಾಳದ ಘನವ . **II 647 II**

ತಾತ್ಪರ್ಯ : ನಿಮ್ಮ ನೆನೆವುತ್ತದ್ದಿತ್ತು ನೆನವ ಮುಖವಾವುದೆಂದರಿಯದೆ : ಪ್ರಭುದೇವ ಪರೀಕ್ಷಿಸುವ ವರೆಗಲ್ಲು ಅಹುದು. ಪರಶುಮಣಿಯು ಅಹುದು. ನಿಮ್ಮ ನೆನಯುತ್ತಿದ್ದಿತ್ತು ನೆನೆವ ಮುಖ ಆವುದೆಂದರಿಯದೆ ಎಂದು ತನ್ನೊಳು ತಾನೆ ಅರಿದರಿದು ನೋಡಿದ ಅರುಹೃದಯ, ದಿವ್ಯದೃಷ್ಠಿಯುಳ್ಳ ಘನವಂತ ಜ್ಞಾನಮಣಿ .

ಬಹುಜನ ಭಕ್ತರು ಇದ್ದಾರೆ , ಭಾವಿಕರು ಇದ್ದಾರೆ, ತಪೋನಿಷ್ಠರು ಇದ್ದಾರೆ ,ಧ್ಯಾನಸ್ತರು ಇದ್ದಾರೆ. ಜ್ಞಾನಿಗಳು ಇದ್ದಾರೆ . ಪ್ರಭುವಿನಂತೆ ಪರೀಕ್ಷಿಸಿ ನೋಢುವ ಅರು ಹೃದಯದವರು ಇದ್ದಾರೆಯೆ? ಇದ್ದರೂ ಇರಬಹುದು ವಿರಳ .ಇದು ಕಾರಣ ಈ ಮಹಾಂತನಿಗೆ ಮಾಯಾಕೋಲಾಹಲನೆಂಬ ಬಿರದು ಬಂದಿದೆ. ಇದಲ್ಲದೆ ಅಲ್ಲಮ ಅಲ್ಲಮ್ಮನೆಂಬುದು ಮತ್ತು ಪ್ರಭುವೆಂಬುದು ಆತನ ಮಹಾನುಭವಕ್ಕಿದ್ದ ಘನತೆ , ಇವೆಲ್ಲವುಗಳಿಂದುಕ್ತನಾದ ಕಣ್ಮಣಿ . ಈ

ಮಹಾಂತನಿಗೆ ವಿವೇಕ ಎಂದರೆ ಸಾಲದು? ವಿವೇಕಾನಂದ ಎಂದರೂ ಸಾಲದು. ಈ ಘನವಂತ ವಿವೇಕದ ವಿಮರ್ಶಕ, ಈತನ ಮುಂದೆ ವಿವೇಕ ನಡೆಯದು. ಗುರುಗಳ ಮುಂದೆ ವಿದ್ಯಾರ್ಥಿಗಳ ಬುದ್ಧಿ ನಡೆಯದು. ವಿವೇಕದ ವಿಮರ್ಶಕ ಅಂದರೆ ವಿವೇಕದ ಅಧಿಷ್ಠಾನವು ವಿವೇಕಿಯಾಗಬಹುದೆ, ಅಧಿಷ್ಠಾನದ ಮುಂದೆ ವಿವೇಕ ನಡೆಯಬಹುದೆ? ಪ್ರಭುವೆಂದರೆ ಅಧಿಷ್ಠಾನ ಮೂರ್ತಿ. ಘನಗಂಭೀರ ಮಹಾಘನದೋಳ್ ಘನಕ್ಕೆ ಘನವಾಗಿರ್ದ ಅನುಪಮ. ಈ ಮಹಾಂತ ನಿರ್ವಿಕಾರ, ನಿರುಪಾಧಿ, ನಿರಾಲಂಬನಾದುದರಿಂದ ನಿಮ್ಮ ನೆನೆಯುತ್ತಿದ್ದಿತ್ತು. ನೆನೆವ ಮುಖ ಆವುದೆಂದರಿಯದೆ ಎಂದು ನೆನೆಯುತ್ತಿದ್ದ ನೆನಹಿಂಗೆ ಪ್ರಶ್ನಿಸುತ್ತಾನೆ.

ಅಹುದು ನಿಸ್ಸಂಗನೆಂದರೆ ಇದಕ್ಕನ್ನಬೇಕು. ನಿರಾಲಂಬನೆಂದರೆ ಇದಕ್ಕನ್ನಬೇಕು. ನಿರುಪಾಧಿ ಎಂದರೆ ಇದಕ್ಕನ್ನಬೇಕು. ಓ! ನೆನಯುತ್ತಿದ್ದ ನೆನುಹೆ! ನೀನಾವ ಮುಖದವನು. ನೀನು ನೆನೆಯುತ್ತಿದ್ದುದು ಅದಾವ ಮುಖ? ನಿನ್ನ ಮುಖವಾದರೂ ನಿನಗೆ ಪರಿಚಯವಿದೆಯಾ? ನಿಮ್ಮ ನೆನೆಯುವ ದೇವನ ಮುಖವಾದರೂ ಪರಿಚಯವಿದೆಯಾ? ಕಂಡಿರುವೆಯಾ, ಅರಿತಿರುವೆಯಾ, ಕಾಣದೆ ಕಂಡವನಂತೆ ಅರಿಯದೆ ಅರಿತವನಂತೆ ನೆನೆಯುತ್ತಿರುವೆಯಲ್ಲ? ಇದೇನು ನಿನ್ನ ಕೌತುಕವ, ನಾವು ಬಲ್ಲಿದರೆಂಬ ಅರುಹಿರಿಯರನೆಲ್ಲ ಅರಿಯದಂತೆ ಮಾಡಿದೆಯಾ. ನಿನ್ನ ವಶ ಮಾಡಿಕೊಂಡಿರುವಿಯಾ! ನಿನ್ನ ಕೈ ಆಳು ಮಾಡಿಕೊಂಡೆಯಾ! ಭಲೆ ನಿನ್ನ ಸಾಹಸ, ಭಲೆ ನಿನ್ನ ಜಾಣತನ. ಓ ನೆನೆಯುತ್ತಿದ್ದ ನೆನಹೆ! ನೀನು ಆರಾಗಿ ನೆನೆಯುತ್ತಿರುವೆ? ನೀನು ನೆನೆಯುವದಾದರೂ ಆರನ್ನು? ನಿನಗೆ ಅವಿನಾಶಿ ಎನಬೇಕೆ? ನಾಶವುಳ್ಳದು ಎನಬೇಕೆ? ನಾಶವುಳ್ಳದು ಎಂದಲ್ಲಿ, ನಾಶ ರಹಿತ ತತ್ವವೆ ನೆನೆಯುತ್ತಿರುವೆ ಎಂದಲ್ಲಿ, ಇಂದೆಂಥ ಕೌತುಕ. ಬಂಜಿ ಮಗ ಮಾತಾ ಪಿತೃಗಳನ್ನು ನೆನೆಯುತ್ತಿದ್ದುದು ನಿಜವೆ? ಎಲೆ ನೆನೆಯುತ್ತಿದ್ದ ನೆನಹೆ ನೀನು ಬಂಜಿ ಮಗ , ನಿನಗೆ ಮಾತೃದೇವರಾರು !ಪಿತೃದೇವರಾರು? ಮೊದಲೆ ನೀನು ಇಲ್ಲದುದು, ಇಲ್ಲದವನು ಇದ್ದುದೆಂದು, ಮಗು ಇದ್ದುದಾದಲ್ಲಿ ಮಾತಾ ಪಿತರನ್ನು ನೆನೆಯುತ್ತಿರುವುದು ನಿಜ . ಮಗುವೆ ನೀನಲ್ಲ,ಅವರು ಎಂದೂ ಹಡೆದವರಲ್ಲ . ಮಗನಾಗದವನು ತಂದೆ ತಾಯಿಗಳಾಗದವರು ಅವರ ಎಂದೂ ಹಡೆದವರಲ್ಲ. ಮಗನಾಗದವನು ತಂದೆ ತಾಯಿಗಳಾಗದವರು ಅವರ ನೆನಯುತ್ತಿದ್ದುದು ಆಶ್ಚರ್ಯವಲ್ಲವೆ ? ನಿಮ್ಮ ನೆನೆಯುತ್ತಿದ್ದಿತ್ತು ನೆನಹಿನ ಮುಖ ಆವುದೆಂದರಿಯದೆ , ನೆನೆಯುತ್ತಿದ್ದವರ ಸಂಖ್ಯೆ ಗಣನೆಗೆ ಮಿತಿಯಿಲ್ಲ .ಪ್ರಭುವಿನಂತೆ ಅರಿದರಿದು ನೋಡಿದ ಅರು ಹೃದಯದವರೆಷ್ಟು ಜನ ಸಿಕ್ಕಬಹುದು ? ಪೂರ್ವಕಾಲದಿಂದ ಪುರಾಣಗಳಲ್ಲಿ ವಚನಕಾರರು, ಉಪನಿಷತ್‌ಕಾರರು,ವೈದಿಕರು, ವೇದಾಂತಿಗಳು ; ಕರ್ಮಕಾಂಡ, ಉಪಾಸನಾಕಾಂಡ, ಜ್ಞಾನಕಾಂಡಗಳೆಂದು ತ್ರಿಕಾಂಡಗಳು ನಿರ್ಮಾಣ ಮಾಡಿಹರು . ಜ್ಞಾನಕಾಂಡವು ಎರಡು ಕಾಂಡಗಳಿಗಿಂತ ಶ್ರೇಷ್ಠವಾದುದು . ಆ ಶೇಷ್ಠವಾದ ಕಾಂಡದಲ್ಲಿಯೆ ಸೂಕ್ಷ್ಮವಾಗಿ ಕರ್ಮಕಾಂಡ ಉಪಾಸನಾ ಕಾಂಡಗಳಿವೆ ಅಲ್ಲದೆ ಜ್ಞಾನಕಾಂಡವದೆ , ಎಂದು ಹೇಳುವಲ್ಲಿ ಅಲ್ಲಿ ನೆನೆವುತ್ತಿದ್ದ ನೆನಹು ಇದೆ ಎಂದು ಹೇಳಿದಂತಾಯಿತು.

ಅಚಿಂತ್ಯಪದ ಚಿಂತನದಿಂದುಕ್ತವಾಯಿತೆ, ಅಕಲ್ಪಿತ ಘನ ಕಲ್ಪಿತಕೊಳಪಟ್ಟಿತೆ? ಭಾವಕ್ಕಗಮ್ಯವಾದುದು ಭಾವದಿಂದುಕ್ತವಾಯಿತೆ? ಅಪ್ರಮಾಣಗಮ್ಯವು ಪ್ರಮಾಣದಿಂದುಕ್ತವಾಯಿತೆ! ನಿಮ್ಮ ನೆನಯುತ್ತಿದ್ದಿತ್ತು ನೆನಹಿನ ಮುಖವಾವುದೆಂದರಿಯದುದು ಇದೆ ಅಲ್ಲವೆ! ಅಚಿಂತ್ಯವದು ನಿಮ್ಮಿರವು ಅಲ್ಲವೆ ? ನಿಮ್ಮ ನೆನೆಯುತ್ತಿದ್ದ ನೆನಹು ಅಚಿಂತ್ಯ ಮುಖವರಿತಿತೆ ? ಅರಿವುದೆ ಅಚಿಂತ್ಯಪದ ನುಡಿಗೊಳಪಡುವುದೆ? ಚಿಂತನಕ್ಕೊಳಪಡುವುದೆ ? ಭಾವಕ್ಕಿಂಬು ಅಲ್ಲಿ ಕಾಣಬಹುದೆ? ಶಬ್ದಮೀಸಲಾಗಲಿಲ್ಲವೆ? ಇದೇನು ಕೌತುಕ.

ಅಚಿಂತ್ಯ ಪದ ಶಬ್ದ ಸಂಭ್ರಮಕ್ಕೆ ನಿಲುಕದ ಪದ . ಅಲ್ಲಿ ನೆನೆಯುತ್ತಿದ್ದುದು, ನಾಚಿ ನೆನೆಯದಂತಾದುದೆ ನೆನೆಯುವ ಮುಖವರಿತುದು. ಇದು ತಿಳಿಯದಂತಾದುದು ಅದು ನೆನಯುತ್ತಿದ್ದುದು ನೆನವ ಮುಖ ಆವುದೆಂದರಿಯದೆ ಎಂದು ಹೇಳಿಹರು.

ಅಕಲ್ಪಿತ ಅಪ್ರಮಾಣ ಅಗಮ್ಯವರಿಯದ್ದರಿಂದ ಅಕಲ್ಪಿತ ಅಪ್ರಮಾಣದ ಅಗಮ್ಯವೆಂಬ ನುಡಿಗೊಳಪಟ್ಟುದು. ಇದನರಿಯದ್ದರಿಂದ ಅಕಲ್ಪಿತ ಅಪ್ರಮಾಣಗಮ್ಯವೆಂದು ನೆನೆಯುತ್ತಿದ್ದುದು ನೆನೆವ ಮುಖ ಆವುದೆಂದರಿಯದೆ ಅಕಲ್ಪಿತ ದೋಳ್ ಕಲ್ಪಿತಕ್ಕಿಂಬುಂಟೆ? ಇಂಬಿಲ್ಲದಿರುವಲ್ಲಿ ನೆನೆಯುತ್ತಿದ್ದುದಾರನ್ನು ? ನೆನೆಯುವದಾವುದು? ಅಕಲ್ಪಿತವು ನೆನೆಹಿಗಿಂಬುಗೊಡಬಹುದೆ? ನಿರ್ಣಯಕ್ಕೊಳಪಡಬಹುದೆ? ನೆನಹು ನಿರ್ಣಯಕ್ಕೆ ಮೀರಿದ ಘನವು ನೆನೆಯುವದಾರನ್ನು ? ನೆನೆಯುವದಾದರೂ ಇರುವುದೆ ? ಅರಿಯದ್ದರಿಂದ ನೆನೆಯುತ್ತಿದ್ದಿತ್ತು ಅರಿವುಡೆ ನೆನೆವ ಮುಖ ತನ್ನದು ಅಲ್ಲ. ತಾನಲ್ಲದುದು ನೆನೆಯುತ್ತಿದ್ದುದು, ಇದೇನು ಆಶ್ಚರ್ಯ !

ಪೂಜೆಯ ಪೂಜಿಸುತ್ತಿದ್ದಿತ್ತು ಪೂಜೆಯ ಮುಖ ಆವುದೆಂದರಿಯದೆ : ಪೂಜೆಯ ಪೂಜಿಸುತ್ತಿದ್ದುದಕ್ಕೆ ಕಾರಣವಾವುದು! ಪೂಜೆಯ ಮುಖ ಆವುದು ಎಂದರಿಯದಿರುವುದೆ ಇದಕ್ಕೆ ಕಾರಣವು. ಪೂಜಿಸಿಕೊಳ್ಳುವ ಪೂಜ್ಯನ ಮುಖ ಆವುದು ಎಂಬುದನ್ನು ಪೂಜಿಸುವ ಭಕ್ತನು ಅರಿತನೆ, ಪೂಜಿಸುವ ಭಕ್ತನಾದ ನಾನು , ಅವಯವವುಳ್ಳವನೊ? ಅವಯವ ರಹಿತನೊ ಎಂಬುದನ್ನಾದರೂ ಅರಿತನೆ ? ಪೂಜಿಸಿಕೊಳ್ಳುವ ದೇವನು ನಿರಾಕಾರನು ನಿರವಯನು ಪೂರ್ಣನು ; ಎಂದು ಪೂಜಿಸುವ ಭಕ್ತನ ಭಾವವು. ದೇವನು ನಿರಾಕಾರನಾದಲ್ಲಿ ಆಕಾರವೆಲ್ಲಿಯದು ? ಆಕಾರವಿಲ್ಲದಿರುವಲ್ಲಿ ಅವಯವಂಗಳೆಲ್ಲಿ? ಅವಯವ ಇಲ್ಲದ ದೇಹ ದೇವನಾದುದರಿಂದ ನಿರವಯನು ಸ್ವಗತಭೇದ , ಸಜಾತಿ ಭೇದ , ವಿಜಾತಿ ಭೇದವಿಲ್ಲದವನಾದುದರಿಂದ ಪೂರ್ಣನು ಸಚ್ಚಿದಾನಂದನಾದಲ್ಲಿ ಭಕ್ತನಾಗಿ ಪೂಜಿಸಲು ಸಂದುಂಟೆ? ಪೂರ್ಣವಾಗಿರುವ ದೇವನು ಅಪೂರ್ಣನಾದನೆ? ಚೈತನ್ಯದೇವನು ನಾಮರೂಪವುಳ್ಳವನಾದನೆ? ಇದನರಿಯದ್ದರಿಂದ ಪೂಜೆಯ ಪೂಜಿಸುತ್ತಿದ್ದಿತ್ತು ಅರಿವುಡೆ ತಾನು ಭಕ್ತನಲ್ಲ. ಅಲ್ಲಾದಲ್ಲಿ ಪೂಜಿಸುವ ಭಕ್ತನಾದುದೆಂದು ? ತಾನಿಲ್ಲವಾದಲ್ಲಿ ತನಗೆ ಕರಚರಣಗಳುಂಟೆ? ಇಲ್ಲವಾದಲ್ಲಿ ಪೂಜೆಯ ಪೂಜಿಸುತ್ತಿದ್ದುದು ನಿಜವಾಯಿತೆ! ಓಹೋ! ಇದೆಂಥ ಮಾಯಿಕದ ಹಗರಣ. ಸಟೆಯೆ ದಿಟವಾಗಿ ನಿಂತಿದೆಯಲ್ಲ ಇದೆಂಥ ಸೋಜಿಗ.

ಇಲ್ಲದ ಲೋಕದೋಳ್ ಪೂಜಿಸಿಕೊಳ್ಳುವ , ದಿಟ ದೇವನುಂಟೆ? ಪೂಜಿಸುವ ದಿಟ ಭಕ್ತನುಂಟೆ? ಇಲ್ಲದ ಲೋಕ, ಇಲ್ಲದ ದೇವ, ಇಲ್ಲದ ಭಕ್ತರು ಇದ್ದ ದೇವನಾಗಿ, ಇದ್ದ ಭಕ್ತನಾಗಿ ಪೂಜಿಸಿಕೊಳ್ಳುವುದು, ಪೂಜಿಸುವುದು ಬಹು ಆಶ್ಚರ್ಯ ನೋಡಾ. ಇದ್ದ ದೇವನ ಅರಿಯ ಹೋಗುವುಡೆ ದೇವ ಭಕ್ತ ಎರಡೊಂದಾದುದು ನೋಡಾ. ಎರಡೊಂದಾದ ಬಳಿಕ ಅರ್ಪಿತ ಹಿಂಗಿತ್ತು, ಅರ್ಚನೆ ಹಿಂಗಿತ್ತು , ಶಬ್ದಕ್ಕೆ ತೆರಹಿಲ್ಲವೆಂದು ಬಿತ್ತರಿಸಿದುದು ನೋಡುವುಡೆ, ಇದ್ದ ದೇವನೆಂದರೆ ತಾನೆ, ತಾನೆ ತನ್ನ ಅರಿವುಡೆ ತಾನೆ ದೇವ ತಾನೆ ಭಕ್ತ ; ತಾನೆ ತನ್ನ ಪೂಜಿಸುತ್ತಿದ್ದುದು ಆಶ್ಚರ್ಯವಲ್ಲವೆ? ತಾನಾರೆಂದರಿಯದಿರುವುದೆ ಪೂಜೆಯ ಪೂಜಿಸುತ್ತಿದ್ದಿತ್ತು ಪೂಜೆಯ ಮುಖ ಆವುದೆಂದರಿಯದೆ ಎಂದು ಹೇಳಿಹರು.

ಆಡಿ ಹಾಡಿ ಬೇಡುತ್ತಿದ್ದಿತ್ತು ; ಬೇಡುವ ಮುಖ ಆವುದೆಂದರಿಯದೆ : ಭಕ್ತನು ಆಡುವ ಹಾಡುವ ಬೇಡುವವನಾದ ಅಪ್ರಮಾಣ ಅಗಮ್ಯವಾದ ಘನವು . ಪ್ರಮಾಣಕ್ಕೊಳಪಟ್ಟಿತೆ ? ಅನುಪಮ ಲಿಂಗಯ್ಯ ಉಪಮೆಗೊಳಪಟ್ಟಿತೆ? ನಿರ್ಮಾಯ ಲಿಂಗಯ್ಯ ನಿರೂಪ ಲಿಂಗಯ್ಯ ನಾಮ ರೂಪಕ್ಕೊಳಪಟ್ಟಿತೆ?

ನಿರಾಲಂಬ, ನಿಸ್ಸಂಗದಲ್ಲಿ ಬೇಡುವ ಆಡುವ ಹಾಡುವ ಹೊಗಳಿಕೆಗಿಂಬಾಯಿತೆ!

ಬಹುಭಕ್ತರು ಉಂಟು, ಬಹು ಜಂಗಮರು ಉಂಟು, ಬಸವರಸರಂಥ ಲಿಂಗೈಕ್ಯ ಭಕ್ತರು ಶಿಗವದು ವಿರಳ. ಪ್ರಭುವಿನಂಥ ನಿರ್ಲಿಖಿತ ಜಂಗಮ, ನಿರ್ನಾಮ ಜಂಗಮ ಶಿಕ್ಕುವುದು ವಿರಳ. ಇವರು ಲಿಂಗ ಒಂದಾಗಿರ್ದ ಭಕ್ತ; ಲಿಂಗ ಒಂದಾಗಿರ್ದ ಜಂಗಮ ಇವರೀರ್ವರು ಬೆಳಗುಳ್ಳ ಬೆಳಗು. ಈ ಘನಕ್ಕೆ ಘನವಾದ ಬೆಳಕಿನ ಪ್ರಭೆಯಿಂದ ವಿಶ್ವವು ಬೆಳಗಿನ ಬೆಳಗುಳ್ಳದ್ದಾಗಿರುವುದು. ಇಲ್ಲದಿರ್ದದ್ದಲ್ಲಿ ವಿಶ್ವವು, ಕಾರ್ಗತ್ತಲೆ, ನೆನೆಯುತ್ತಿದ್ದ ಮನವು ಕತ್ತಲೆ, ಹಿಡಿದ ಕೈ ಕತ್ತಲೆ, ಪೂಜಿಸುವ ಕೈ ಕತ್ತಲೆ, ಆಡುವ ಕಾಡುವ, ಬೇಡುವ ಭಕ್ತರು ಕತ್ತಲೆ, ಇವರುಗಳ ವಾಸ ಕತ್ತಲಲ್ಲಿಯೆ. ಆಶ್ವರ್ಯ ಪರಮಾಶ್ಚರ್ಯ! ಸ್ವಯಂ ಪ್ರಕಾಶದ ಮುಂದೆ ಮರವಿನ ರೂಪ ಕತ್ತಲೆ ಕಾಣುವುದು ಆಶ್ಚರ್ಯವಲ್ಲವೆ!

ಕಾಯದಲ್ಲಿಲ್ಲ, ಜೀವದಲ್ಲಿಲ್ಲ, ಭಾವದಲ್ಲಿಲ್ಲ, ದೇವನನ್ನು ಕಾಯದಲ್ಲಿ ನೆನೆಯುತ್ತಿದ್ದೇವೆಂದಲ್ಲಿ ಕಾಯದಲ್ಲಿಲ್ಲ ಜೀವನಾಗಿ ನೆನೆಯುತ್ತಿದ್ದೇವೆಂದಲ್ಲಿ ಖಂಡಾಖಂಡ ಸಂಯೋಗವಿಲ್ಲದ ಅಖಂಡಿತದಲ್ಲಿ ಜೀವನಾಗಿ ನೆನೆಯಲು ಸಂದಿಗಿಂಬಿಲ್ಲ. ಭಾವದಲ್ಲಿ ಭಾವಿಸುವೆನಂದಲ್ಲಿ ಭಾವ ತ್ರಯಂಗಳಲ್ಲಿಲ್ಲ ಕಾಯ ಜೀವ ಭಾವಕ್ಕಿಂಬು ಕೊಡದ ಘನವು ಭರಿತವು ಅದು ತಾನಪ್ಪುದು. ತುಂಬಿದುದು ತುಳಕದು ಅದು ಭರಿತವು, ಅದು ತಾನೆ, ಬಯಲು ಭರಿತವು ಅದು ತಾನೆ ಭರಿತವು ಬಯಲಿಗೆ ಕಾಯವುಂಟೆ? ಜೀವ ಉಂಟೆ? ಭಾವರೂಪ ಭ್ರಮೆ ಉಂಟೆ? ಬಯಲು ಬಯಲಾಗಿರ್ದುದು ಹೇಗೊ ಹಾಗೆ ಭರಿತವು. ಅದು ತಾನಪ್ಪುದು ತಾನೆ ತಾನಾಗಿಹುದು.

ತಾನಲ್ಲದುದದೇನ ಹೇಳುವೆ ಕೌತುಕವ, ಕೌತುಕದೊಳ್ ಹೆಚ್ಚಿನ ಕೌತುಕ. ತಾನೆ ಅಲ್ಲ ನುಡಿದುದೆಲ್ಲ ಅಲ್ಲ, ಅಲ್ಲದುದು ಏನು ಹೇಳುವದು. ಹೇಳುವದೆಂದರೆ ಕೌತುಕವಲ್ಲವೆ? ನಿಮ್ಮ ನೆನೆಯುತ್ತಿದ್ದಿತ್ತು ನೆನೆಯುತ್ತಿದ್ದುದು ತಾನೆ ಅಲ್ಲ. ಅಲ್ಲವೆಂದಲ್ಲಿ ಆವುದು ಅಲ್ಲ? ನೆನೆಯುತ್ತಿದ್ದುದು ತಾನಲ್ಲ. ನೆನೆಹಿಂಗೊಳಪಟ್ಟ ದೇವನು ತಾನಲ್ಲ. ತಾನಲ್ಲಾದುದು ತಾನೆಂದು ನೆನೆಯುತ್ತಿದ್ದುದು ಆಶ್ಚರ್ಯವಲ್ಲವೆ? ಪೂಜೆಯ ಪೂಜಿಸುತ್ತಿದ್ದುದು ತಾನಲ್ಲ, ಪೂಜೆಯು ತಾನಲ್ಲ, ಪೂಜ್ಯವೂ ತಾನಲ್ಲ, ಅಲ್ಲಾದುದ ಆಶ್ವರ್ಯವಲ್ಲವೆ? ಪೂಜೆಯು ಆಶ್ಚರ್ಯವಲ್ಲವೆ!

ಅಲ್ಲಾದುದು ಅಹುದೆನ್ನುವಂತೆ ಪೂಜಿಸುತ್ತಿರುವುದು ಕೌತುಕವಲ್ಲವೆ? ಪೂಜಿಸಿಕೊಳ್ಳುವ ದೇವನು ಅಲ್ಲ. ಪೂಜಿಸುವವನು ತಾನಲ್ಲ. ಅಲ್ಲಾದುದು ಪೂಜಿಸಿಕೊಳ್ಳುವ ದೇವನಾಗಿ ಪೂಜಿಸಿ ಭಕ್ತನಾಗಿ ಕಾಣುವುದು ಕೌತುಕವಲ್ಲವೆ? ಆಡಿ ಹಾಡಿ ಬೇಡುವುದು ತಾನಲ್ಲ, ಆಡುವ ಕ್ರಿಯೆಯು ತಾನಲ್ಲ. ಹಾಡುವ ವಾಣಿಯು ತಾನಲ್ಲ, ಬೇಡುವ ಯಾಚನೆಯಾಗಲಿ ದೀನತ್ವವಾಗಲಿ ತಾನಲ್ಲ. ಬೇಡಿಸಿಕೊಳ್ಳವ ದೇವನಲ್ಲ ವರ್ಣನೆಗೊಳಪಟ್ಟ ದೇವನಲ್ಲ. ಅವರ್ಣೀಯ ವಸ್ತುವ ವರ್ಣಿಸುವದೆಂದರೆ ಕೌತುಕವಲ್ಲವೆ, ನಾಮ ನಿರ್ನಾಮ ವಾದವನನ್ನು ಕೊಂಡಾಡುವುದು ಕೌತುಕವಲ್ಲವೆ? ಆಡಲು ಹಾಡಲು ಜಿಹ್ವೆಯೆ ಇಲ್ಲದವನು ಆಡುವುದು ಹಾಡುವುದು ಸೋಜಿಗವಲ್ಲವೆ.

ಗುಹೇಶ್ವರನೆಂಬುದು, ಗುಹೇಶ್ವರನೆಂಬ ಹೆಸರೊಳಗಿದ್ದುದು ಬೆಸಗೊಂಬುವರಿಲ್ಲ ನಿರಾಳ ಘನವ ದೇಹವೆಂಬ ಗುಹೆಯೊಳಗಿದ್ದ ಈಶ್ವರ. ಇದು ಮಹಾ ಘನಲಿಂಗ. ಈ ಘನಲಿಂಗವ ವಿಚಾರಿಸುವವರಿಲ್ಲ. ನಿಶಃಬ್ದ ಬ್ರಹ್ಮದಿರುವ ಶಬ್ದದಿಂದ ಅದರ ಘನವ ಹೇಳುವವರುಂಟು, ಕೇಳುವವರುಂಟು ನಿಶಃಬ್ದ ಘನದಿರುವ ತಾವಾದವರಿಲ್ಲ. ಸುಖ ಸುಖವೆಂದು ಅರಸುವವರುಂಟು ಸುಖವಾದವರುಂಟೆ? ಅಚಿಂತ್ಯವೆಂದರಸುವರುಂಟಲ್ಲದೆ, ಅಚಿಂತ್ಯವಾದವರುಂಟೆ? ಎಂದು ಹೇಳಿಹರು.

97

ಹುಟ್ಟಿದ ನಲೆಯ ತೃಷ್ಣೆ ಬಿಡದವಂಗೆ ಲಿಂಗದ ಅನುಭಾವ ವೇಕೋ?
ಮಾತಿನ ಮಾತಿನ ಮಹಾಂತರು, ಹಿರಿಯರು, ಗುಹೇಶ್ವರನೆಂಬ
ಲಿಂಗ ಸಾರಾಯ ತೋರದು, ತೋರದು , ಬಹುಮುಖಿಗಳಿಗೆ. **॥ 230 ॥**

ತಾತ್ಪರ್ಯ : ಹುಟ್ಟಿದ ನೆಲೆಯ ತೃಷ್ಣೆ ಬಿಡದವರು ಯಾರು? ಹುಟ್ಟಿದ ನೆಲೆಯ ಆಳವು ಬಹು ಸೂಕ್ಷ್ಮವಾಗಿದೆ. ಏಕೆಂದರೆ ಇದು ಮಾಯಿಕ. ಇದರ ಆಳ ಬುಹುದೂರ ಹಬ್ಬಿದೆ. ನರರಷ್ಟೆ ಹುಟ್ಟಿದ ತೆಗ್ಗಿನಲ್ಲಿ ಬಿದ್ದವರೆಂದು ತಿಳಿಯ ಕೂಡದು. ಸುರರು ಅಸುರರು ದೇವಗಣ ರುದ್ರಗಣ ಪ್ರಮಥಗಣರಲ್ಲದೆ, ಸತ್ಯರು, ನಿತ್ಯರು, ಮುಕ್ತರು ಎಂಬ ಮಹಾಮಹಿಮರೆಲ್ಲರು ಹುಟ್ಟಿದ ನೆಲೆ ತೃಷ್ಣೆ ಬಿಟ್ಟವರು ವಿರಳ. ನರರಿಗೆ ಸುರ ಅಸುರರಿಗೆ ಪಿಂಡವೆಂಬುದು ಹುಟ್ಟಿದ ನೆಲೆ ಮೂಲವಾಗಿ. ಶರೀರದ ಸತ್ಯತ್ವ ಬುದ್ಧಿ ಅಧಿಕವಾಗಿದೆ.

ದೇವಗಣ, ರುದ್ರಗಣ, ಪ್ರಮಥಗಣಕ್ಕೆ ಹುಟ್ಟಿದ ನೆಲೆ ಈಶ್ವರನದಾಗಿದೆ. ಈಶ್ವರನು ಯಾರು ಈತನು ಹುಟ್ಟಿದ ನೆಲೆ ಆವುದು :

ಅನಾದಿಯಾದ ಶುದ್ಧ ಬ್ರಹ್ಮವೊಂದಿದೆ, ಈ ಅನಾದಿ ಶುದ್ಧ ಬ್ರಹ್ಮದಲ್ಲಿ ಅನಾದಿ ಕಲ್ಪಿತ ಪ್ರಕೃತಿ ಒಂದಿದೆ. ಈ ಪ್ರಕೃತಿಗೂ ಬ್ರಹ್ಮಕ್ಕೂ ಅನಾದಿ ಕಲ್ಪಿತ ತಾದಾತ್ಮ್ಯ ಸಂಬಂಧವಿದೆ. ಈ ಪ್ರಕೃತಿಯಿಂದ ಹದಿನಾಲ್ಕು ಲೋಕಂಗಳ ಪ್ರಪಂಚವು ಕಲ್ಪಿಸಲ್ಪಟ್ಟಿದೆ.

ಅನಾದಿ ವಸ್ತುಗಳು ಎಷ್ಟು? ಅವು ಯಾವವು? ಅನಾದಿ ವಸ್ತುಗಳು ಒಟ್ಟು ಆರು :

1. ಅನಾದಿ ಶುದ್ಧ ಬ್ರಹ್ಮ
2. ಅನಾದಿ ಮಾಯೆ
3. ಇವುಗಳ ಪರಸ್ಪರ ಸಂಬಂಧ
4. ಈಶ್ವರ
5. ಜೀವ
6. ಇವರ ಪರಸ್ಪರ ಸಂಬಂಧ

ಇವುಗಳಲ್ಲಿ ಅನಾದಿ ಅನಂತವಾವವು, ಅನಾದಿ ಸಾಂತಗಳಾವವು :

ಶುದ್ಧ ಬ್ರಹ್ಮವು ಅನಾದಿ ಅನಂತವು , ಐದು ಅನಾದಿ ಸಾಂತಗಳು . ಅನಾದಿ ಎಂದರೆ ಆದಿ ಅಥವಾ ಹುಟ್ಟುವಿಕೆ ಇಲ್ಲದ್ದು. ಅನಂತವೆಂದರೆ ಅಂತ ಅಥವಾ ನಾಶವಿಲ್ಲದ್ದು.

1. ಬ್ರಹ್ಮವು ಅನಾದಿ ಅನಂತ, ಅನಾದಿ ಮಾಯೆ. ಈ ಮಾಯೆಗೂ ಬ್ರಹ್ಮಕ್ಕೂ ಇರುವ ಸಂಬಂಧ ಈಶ್ವರ ಜೀವ ಇವರಿಬ್ಬರಲ್ಲಿ ತೋರುವ ಭೇದ. ಈ ಐದು ಅನಾದಿಯಾದರೂ ಅಂದರೆ ಆದಿ ತಿಳಿಯದಿದ್ದರೂ ವಿಚಾರದ್ವಾರ ಅಂತಗೊಳಿಸುವುದು ನಮ್ಮ ಕೈಯಲ್ಲಿ ಇದೆ.

ಬ್ರಹ್ಮವು ಅನಾದಿ ಎನ್ನುವುದಕ್ಕೆ ಪ್ರಮಾಣವೇನು?

ಸದೇವ ಸಾಮ್ಯೇದಮಗ್ರಮಾ ಸೀತ, ಏಕ ಮೇವಾದ್ವಿತೀಯಂ ಬ್ರಹ್ಮ ನೇಹನಾನಾಸ್ತಿಕಂಚನ ಎಂಬುದಾಗಿ ಛಾಂದೋಗ್ಯ ಶೃತಿಯು ಹೇಳುತ್ತದೆ.

ಈ ಸೃಷ್ಠಿಗೆ ಪೂರ್ವ ಸದ್ರೂಪವಾದ ಪರಬ್ರಹ್ಮವೊಂದೆ ಇತ್ತೆಂದು ಉಪನಿಷತ್ತಗಳಲ್ಲಿ ಹೇಳಿರುವದರಿಂದ ಬ್ರಹ್ಮವು ಅನಾದಿ. ಈ ಬ್ರಹ್ಮಕ್ಕೆ ಆದಿ ಇದೆ, ಎಂದು ಹೇಳ ಹೋದರೆ ಹುಟ್ಟಿಸಿದ ಚೈತನ್ಯ ವಸ್ತು ಒಂದಿರಬೇಕು. ಆದರೆ ಚೈತನ್ಯವಸ್ತು ಬ್ರಹ್ಮವನ್ನು ಬಿಟ್ಟು ಇನ್ನೊಂದಿಲ್ಲ. ಉಳಿದ ಎಲ್ಲಾ ವಸ್ತುಗಳು ಇದರಲ್ಲಿ ಅಧ್ಯಸ್ಥಗಳಾಗಿವೆ. ಅಧ್ಯಸ್ಥ ವಸ್ತುವಿನಿಂದ ಅದಿಷ್ಠಾನ ಎಂದು ಹುಟ್ಟಲಾರದು.

ಮಾಯೆಯು ಅನಾದಿ ಹೇಗೆ? ಮಾಯೆಯು ಕಲ್ಪಿತವಾದ್ದರಿಂದ ಅದರ ಹುಟ್ಟು ನಮಗೆ

ಶಿಕ್ಕುವುದಿಲ್ಲ. ಶುದ್ಧ ಬ್ರಹ್ಮವು ನಿರ್ವಿಕಾರವಾದ್ದರಿಂದ, ಇದು ಮಾಯೆಯನ್ನು ಹುಟಿಸುವ ಗೋಜಿಗೆ ಹೋಗುವುದಿಲ್ಲ. ಈಶ್ವರನು ಹುಟ್ಟಿಸಿರಬಹುದೆ ಎಂದರೆ, ಮಾಯೆಯು ಸಿದ್ಧಿಯಾದ ಮೇಲೆ ಈಶ್ವರ ಸಿದ್ಧಿ ಆದ್ದರಿಂದ ಈಶ್ವರನು ಮಾಯೆಯ ಹಿರೆ ಮಗನಿದ್ದಂತೆ. ಇನ್ನು ಜೀವನಿಂದ ಮಾಯೆ ಹುಟ್ಟಿರಬಹುದೆಂದರೆ ಜೀವನು ಸಹ ಈಶ್ವರನ ಸಿದ್ಧಿಯಾದ ಮೇಲೆ ಸಿದ್ಧಿಯಾಗುವುದರಿಂದ ಇವನು ಮಾಯೆಯ ಕಿರಿಯ ಮಗನಿದ್ಧಂತೆ. ಮಕ್ಕಳಿಂದ ತಾಯಿಯು ಹುಟ್ಟುವದಿಲ್ಲವಾದ ಕಾರಣ ಮಾಯೆಯು ಕಿರಿಯ ಮಗನಿದ್ದಂತೆ. ಮಕ್ಕಳಿಂದ ತಾಯಿಯು ಹುಟ್ಟುವದಿಲ್ಲವಾದ ಕಾರಣ ಮಾಯೆಯು ಬ್ರಹ್ಮದಿಂದಲೂ ಹುಟ್ಟಿರುವುದಿಲ್ಲ. ಜಗತ್ತಿನಿಂದ ಮಾಯೆ ಸಂಭವಿಸಿರಬಹುದು ಎಂದರೆ ಜಗತ್ತು ಮಾಯೆಯ ಕಾರ್ಯ, ಕಾರ್ಯದಿಂದ ಕಾರಣ ಎಂದೂ ಹುಟ್ಟಲಾರದು ಆದ್ದರಿಂದ ಮಾಯೆಯು ಅನಾದಿ.

ಬ್ರಹ್ಮ ಮತ್ತು ಮಾಯೆ ಸಂಬಂಧವು ಅನಾದಿ ಹೇಗೆ?

ಬ್ರಹ್ಮ ಹಾಗೂ ಮಾಯೆ ಎರಡು ಅನಾದಿಯಾದುದರಿಂದ, ಇವೆರಡರ ಸಂಬಂಧವೂ ಅನಾದಿ. ಬ್ರಹ್ಮ ಚೇತನವು ಅನಾದಿ. ಈ ಪ್ರತಿಬಿಂಬವೆ ಈಶ್ವರನಾಗಿರುವದರಿಂದ, ಅವನು ಅನಾದಿ. ದೇವಗಣ, ರುದ್ರಗಣ, ಪ್ರಮಥ ಗಣರೆಂಬುವವರೆಲ್ಲರೂ ಕಲ್ಪಿತರು. ಈ ಕಲ್ಪಿತರ ಉಗಮಕ್ಕೆ ಮೂಲ ಕಾರಣನು ಈಶ್ವರನು ಇರುವನು. ಈಶ್ವರನು ಕಾರಣ, ಇವನು ಕಾರ್ಯನು. ಇದು ಕಾರಣ ಇವರಿಗೆ ಈಶ್ವರನಿಂದ ಹುಟ್ಟಿದ ನೆಲೆ ಬಿಡುವದಾಗಿದೆ. ಬಿಡುವದು ಆಗದ್ದರಿಂದ ಲಿಂಗದ ಅನುಭಾವವೇಕೊ ಎಂದು ಪ್ರಭುದೇವ ಹೇಳಿದುದು.

ಸತ್ಯರು, ನಿತ್ಯರು, ಮುಕ್ತರು ಎಂಬ ಮಹಾಮಹಿಮರು ಇವರಿಗೆ ಚಿದ್ ಬ್ರಹ್ಮಾಂಡವೆ ಇವರ ಹುಟ್ಟಿದ ನೆಲೆಯಾಗಿದೆ. ಇವರು ಇದನ್ನು ದಾಟುವುದು ಅಸಾಧ್ಯವಾಗಿದೆ. ಅದಕ್ಕಾಗಿ ಇವರು ಚಿದ್‌ಹಮ್ಮುಳ್ಳವರು . ಆ ಚಿದ್‌ಹಮ್ಮು ದಾಟುವುದು ದುಸ್ತರವಾಗಿದೆ. ಅದಕ್ಕಾಗಿ ಇವರಿಗಾದರೂ ಲಿಂಗದ ಅನುಭಾವವೇಕೊ ಎಂದು ಹೇಳಿದೆ.

ಲಿಂಗಾನುಭವವೆಂಬುದು ನಿಃಶಬ್ದವೇದಿಗಳ ಅನುಭಾವ, ಲಿಂಗವರಿತವರ ಅನುಭಾವ, ಶಬ್ದವೇದಿಗಳು ಲಿಂಗದ ಘನವರಿಯರು. ತಮ್ಮ ಶಬ್ದ ತಮಗೆ ಹೆಗೆಯಾದವರ ಅನುಭಾವ. ಮೌನ ಮುದ್ರೆಯ ಅನುಭಾವ . ವೇದ ವೇದಿಸಲರಿಯದನುಭಾವ ಶೃತಿಗಳಿಗೆ ಮೀರಿದ ಅನುಭಾವ. ಅರಸುವವರ ಅನುಭಾವವಲ್ಲ, ಅರಸದವರ ಅನುಭಾವ. ಅರುವು ಎಂಬುದನ್ನೆ ಅರಿತವರ ಅನುಭಾವ. ಅಹಮ್ಮಳಿದವರ ಅನುಭಾವ. ಕಲ್ಪಿತನಿಗೆಡೆಗೊಡದನುಭಾವ ಕ್ಷರಾಕ್ಷರವೆಂಬುದಕ್ಕೂ ಮೀರಿದ ಘನಾನುಭವ, ಲಿಂಗಾನುಭವ. ಇದು ಹುಟ್ಟಿದ ನೆಲೆಯ ತೃಷ್ಣೆಯ ಬಿಡದವರಿಗೆ ಅದೆಂತು ಸಾಧ್ಯ.

ಮಾತಿನ ಮಾತಿನ ಮಹಾಂತರು ಇವರಾರು? ಪ್ರಥಮ ವೇದಿಗಳು ಗತಿಯಲ್ಲಿ ಶಿಲುಕಿದವರು ಅತೀತ ಅನಾಗತರೆಂಬುವವರೆಲ್ಲರೂ ಮತಿಯಲ್ಲಿ ಸಿಲುಕಿದವರು. ಶೃತಿವಂತರೆಲ್ಲರು ಆಗಮದಲ್ಲಿ ಸಿಲುಕಿದವರು. ಇಂತಹರೆಲ್ಲರೂ ಮಾತಿನ ಮಹಾಂತರು. ಹಿರಿಯರು, ಪ್ರಥಮವೇದಿಗಳಿಗೆ ಕರ್ಮವೆ ಪ್ರಧಾನವಾಗಿದೆ. ಮಗದೊಬ್ಬರಿಗೆ ಜ್ಞಾನ ಶ್ರೇಷ್ಠವಾಗಿದೆ. ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ ಘನಪೂಣವಪ್ಪ ತನ್ನಿರುವೆ ಅರುವೆಂದು ಇವರಾರು ಅರಿಯರು. ಇದು ಕಾರಣ ಶಬ್ದ ಸಂಭ್ರಮದವರು. ಮಾತಿನ ಮಾತಿನ ಮಹಾಂತರು ಹಿರಿಯರು ಎಂದು ಹೇಳಿಹರು.

ಗುಹೇಶ್ವರನೆಂಬ ಲಿಂಗಸಾರಾಯ ತೋರದು ತೋರದು ಬಹುಮುಖಿಗಳಿಗೆ : ಬಹುಮುಖಿಗಳಿಗೆ ಗುಹೇಶ್ವರನೆಂಬ ಲಿಂಗ ಸಾರಾಯ ತೋರದು ತೋರದು ಎಂದು, ಎರೆಡುಸಾರೆ

ಹೇಳಿದುದು ಗಹನಾರ್ಥವು. ಬಹುಮುಖಿಗಳು ಆರು? '' ಪ್ರಪಂಚ ಸತ್ಯ ಎನ್ನುವವರು ಕೋಟ್ಯಾನು ಕೋಟಿ. ಪ್ರಪಂಚ ಮಿಥ್ಯೆ ಎನ್ನುವವರು ಕೋಟ್ಯಾನು ಕೋಟಿ. ಪರಮಾರ್ಥ ಸತ್ಯ ಎನ್ನುವವರು ಕೋಟ್ಯಾನು ಕೋಟಿ, ಪರಮಾರ್ಥ ಮಿಥ್ಯೆ ಎನ್ನುವವರು ಕೋಟ್ಯಾನು ಕೋಟಿ. ಸಮದೃಷ್ಟಿಯಲ್ಲಿ ನಿಂತು ತಮ್ಮಾತ್ರಾವರಿತವರ ನೊಬ್ಬರನು ಕಾಣೆ ಕೂಡಲಸಂಗಮದೇವಾ '' ವಿಷಮ ದೃಷ್ಟಿಯುಳ್ಳವರು ಇವರು ಬಹು ಮುಖಿಗಳು. ಪ್ರವೃತ್ತಿಮಾದ ಪ್ರಪಂಚದವರಷ್ಟೆ ವಿಷಮದೃಷ್ಠಿಯುಳ್ಳವರೆಂದು ತಿಳಿಯಕೂಡದು. ಶಬ್ದ ಸಂಭ್ರಮದ ಮದವುಳ್ಳವರೆಲ್ಲ ವಿಷಮದೃಷ್ಠಿಯುಳ್ಳವರು ಬಹುಮುಖಿಗಳು. ಇವರಿಗೆ ಸಮದೃಷ್ಠಿ ಅದೆಂತು ಸಾಧ್ಯ? ಸಮದೃಷ್ಠಿ ಎಂಬುದು ನಾಮ ರೂಪಂಗಳ ಪುರಸ್ಕಾರ ಕಾಣದ ದೃಷ್ಠಿ ಸತ್ಯ ಮಿಥ್ಯೆಕಾಣದ ದೃಷ್ಠಿ. ನಾನು ಸಚ್ಚಿದಾನಂದನೆನ್ನದ ದೃಷ್ಠಿ. ನಾನು ಸಚ್ಚಿದಾನಂದ ನೆನ್ನುವುದಕ್ಕೂ ಮೀರಿದವ ನೆನ್ನದ ದೃಷ್ಠಿ. ಇದು ನಿರ್ವಿಕಾರ ದೃಷ್ಠಿ. ಅರಿಯದರುವುಳ್ಳ ದೃಷ್ಟಿ, ಏನೆಂದೆನಲಿಲ್ಲದರುವಾಗಿಹ ದೃಷ್ಠಿ. ತನಗೆ ತಾನೆ ತನ್ನ ಕಂಡ ದೃಷ್ಠಿ. ಇದು ಗುಹೇಶ್ವರನೆಂಬ ಲಿಂಗ ಸಾರಾಯ ದೃಷ್ಠಿ ತನ್ನಿಂದ ತನ್ನ ಅರಿತ ಘನವು ಸುಖಸ್ವರೂಪವಾಗಿಹ ಸುಖ. ನಿರಂತರ ಮಂಗಳಮಯ ದರುವು ಪ್ರಜ್ವಲಿಸಿದ ಪರಮ ಪ್ರಕಾಶವದು. ಇಲ್ಲಿ ಪ್ರಕಾಶಕ ಪ್ರಕಾಶಿತವೆಂಬ ವಿಭಾಗದೃಷ್ಠಿಗಿಂಬಿಲ್ಲ. ಕೇವಲ ತಾನಾಗಿಹ ಸ್ವಯಂಜ್ಯೋತಿ, ಇದು ಬಹು ಮುಖಿಗಳಿಗೆ ಹೇಗೆ ಸಾಧ್ಯ ?

ಬಹುಮುಖಿಗಳೆಂದಲ್ಲಿ, ಇತ್ತ ಕರ್ಮ ಪ್ರೇಮಿಗಳು ಅಹುದು ,ಇತ್ತ ಉಪಾಸನ ಪ್ರೇಮಿಗಳು ಅಹುದು. ಇತ್ತ ಜ್ಞಾನ ಕಾಂಡದ ಪ್ರೇಮಿಯು ಅಹುದು. ಮನೋವೃತ್ತಿ ಒಂದೆ ಕಡೆ ಒಪ್ಪಿಕೊಂಡುದಲ್ಲ. ಸಮದೃಷ್ಟಿಯೆಂಬುದು ಆವಾವುದರ ಪ್ರೇಮ ಮಾಡದ್ದು. ಇದಲ್ಲದೆ ಆವಾವುದರ ಹಂಗಿಲ್ಲದೆ ಆಲಂಬನೆ ಇಲ್ಲದೆ ಇದ್ದ ದೃಷ್ಠಿ. ಆಲಂಬನ ದೃಷ್ಠಿಗೆ ಹೇಗೆ ಸಾಧ್ಯ ? ಸಕಲಕ್ಕೂ ಮಿಕ್ಕಿ ಮೀರಿ ನಿಂತ ನಿಲುವುಳ್ಳವರಿಗೆ ಸಾಧ್ಯವು ಎಂದು ಹೇಳಿದೆ.

98

ಭೂಮಿಯೊಳಗಿಲ್ಲ ಆಕಾಶದೊಳಗಿಲ್ಲ
ಚತುರ್ದಶ ಭುವನದೊಳಗಿಲ್ಲ ಹೊರಗಿಲ್ಲ
ಏನೆಂದರಿಯರು ಏಂತೆಂದರಿಯರು ಹೇಳಿರಯ್ಯಾ
ಕೃತಯುಗದ ಮಾತು ಬೇಡ
ಗುಹೇಶ್ವರಲಿಂಗ ಅಂದು ಇಲ್ಲ, ಇಂದೂ ಇಲ್ಲ. ॥ 650 ॥

ತಾತ್ಪರ್ಯ: ಭೂಮಿಯೊಳಗಿಲ್ಲ, ಆಕಾಶಗೊಳಗಿಲ್ಲ, ಚತುರ್ದಶ ಭುವನದೊಳಗಿಲ್ಲ ಹೊರಗಿಲ್ಲ ಏನೆಂದರಿಯರು ಎಂತೆಂದರಿಯರು : ಪ್ರಭುದೇವ ಬಿತ್ತರಿಸಿದುದು ನೋಡಿದರೆ ಈ ಮಹದರುವು ಅನುಪಮವು . ಬಹುಮಹಾಂತರ ಅನುಭವ ಒಂದು ಕಡೆ. ಈ ಘನವಂತನದು ಒಂದು ಕಡೆ. ಈ ಮಹಾದರುವು ಮಹಾ ಲಿಂಗೈಕ್ಯ ಲಿಂಗ, ಜಂಗಮ, ಪ್ರಸಾದವೆಂಬುದೆ ದೋಷವಾಗಿರುವಲ್ಲಿ, ಪಂಚಭೂತಂಗಳು ಈತನ ದಿವ್ಯದೃಷ್ಠಿಗೆ ಹೇಗೆ ಇದ್ದವುಗಳಾಗುವವು. ಈವುಗಳೆ ಇಲ್ಲವಾಗಿರುವಲ್ಲಿ ಇವುಗಳಿಂದ ರಚಿತವಾದ 25 ತತ್ವಗಳಾಗಿವೆ. ಇವುಗಳೆ ವ್ಯಷ್ಠಿ ಸಮಷ್ಠಿ ರೂಪವಾಗಿ ಪಿಂಡಾಂಡ ಬ್ರಹ್ಮಾಂಡವಾಗಿ ಹದಿನಾಲ್ಕು ಭುವನಗಳಾಗಿ ತೋರುವವು. ಕಾರಣವೆ ಇಲ್ಲವಾದಲ್ಲಿ ಕಾರ್ಯವು ಇಲ್ಲವೆಂಬುದು ಸ್ಪಷ್ಟವು.

ಪ್ರಭುದೇವ ಖಂಡಾಖಂಡ ಸಂಯೋಗವಿಲ್ಲದ ಅಖಂಡ ದೃಷ್ಠಿ, ದಿವ್ಯ ದೃಷ್ಠಿಗೆ

ಇಲ್ಲಾದುದಿಲ್ಲಾದುದೆಂದಿಪ್ಪುದು, ಇಲ್ಲಾದುದಿಲ್ಲಾದುದು ಎಂತಿಪ್ಪುದೊ? ಎಂಬ ಮಹಾನುಭವಿಗೆ ಗುಹೇಶ್ವರ ಲಿಂಗ ಭೂಮಿಯೊಳಗಿಲ್ಲ ಆಕಾಶದೊಳಗಿಲ್ಲ ಚತುರ್ದಶ ಭುವನದೊಳಗಿಲ್ಲ ಹೊರಗಿಲ್ಲ ಏಕೆಂದರೆ ಇದ್ದ ಸದ್ವಸ್ತುವಿನಲ್ಲಿ, ಇಲ್ಲದನಾಮ ರೂಪ ಇದ್ದುದೆಂದು, ಇಲ್ಲದುದು ಇಲ್ಲವೆ ಇಲ್ಲ. ಇದ್ದದ್ದು ನಿರಂತರವಿದ್ದುದು. ಇದ್ದ ಘನವರಿತ ದಿವ್ಯ ದೃಷ್ಠಿಯುಳ್ಳ ಪ್ರಭುವಿಂಗೆ ಜಗತ್ತು ಕಂಡುದು ಆವಾಗ, ಜೀವ ಕಂಡುದು ಆವಾಗ, ಜಗದೀಶ್ವರ ಕಂಡುದು ಆವಾಗ! ಅರುವಿಂಗೆ ಜೀವನಿಲ್ಲ ಈಶ್ವರನಿಲ್ಲ ಜಗತ್ತು ಇಲ್ಲ ಇಲ್ಲವೆಂಬುದು ಇಲ್ಲವಾದಲ್ಲಿ ಭೂಮಿಯು ಇಲ್ಲ. ಆಕಾಶವೂ ಇಲ್ಲ , ಹದಿನಾಲ್ಕು ಲೋಕಂಗಳು ಇಲ್ಲ ಹೊರಗೂ ಇಲ್ಲ. ಇವುಗಳ ಕಂಡು ಅನಾತ್ಮವೆಂದರು ಅನಿತ್ಯವೆಂದರು ಇವುಗಳನ್ನು ಆಪೇಕ್ಷೆಮಾಡಿಕೊಂಡೆ ಇವುಗಳಿಗೆ ಬೇರಾಗಿರುವ ಪಂಚಲಕ್ಷಣಗಳ ಹೇಳಿ ಆತ್ಮನೆಂದರು. ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ ಘನದಲ್ಲಿ ಅನಾತ್ಮ ಆತ್ಮನೆಂಬುದಕ್ಕಿಂಬುಂಟೆ. ತಾನಾರೆಂದರಿತ ಘನಮಹಿಮ ತನಗೆ ಏನೆಂದರಿಯರ ಎಂತೆಂದರಿಯರು ವೇದ ವೇಧಿಸಲರಿಯದೆ ಕೆಟ್ಟವು. ಶಾಸ್ತ್ರಸಾಧಿಸವರಿಯದೆ ಕೆಟ್ಟವು ಎಂದು ಹೇಳುವಲ್ಲಿನುಡಿದು ಹೇಳುವದದೆಂತು? ಅನಾತ್ಮ ತತ್ವ ಇಲ್ಲವೆಂಬುದಕ್ಕೂ ಸಂದಿಲ್ಲ. ಇದ್ದುದು ಆತ್ಮವೆಂಬುದಕ್ಕೂ ಸಂದು ಕೊಡದೆ ತನ್ನಸ್ವಮಹಿಮ , ಏನೆಂದೆರಿಯರು , ಎಂತೆಂದರಿಯರು .

'' ಆಡಬಾರದ ಬಯಲು, ನೋಡಬಾರದ ಬಯಲು, ನುಡಿಯಬಾರದ ಬಯಲು, ಹಿಡಿಯಬಾರದ ಬಯಲು. ಈ ಒಡಲಿಲ್ಲದ ಬಯಲೊಡಗಿಪ್ಪ ಭೇದವ ಈ ಲೋಕದ ಜಡರೆತತ ಬಲ್ಲರೈ ರಾಮನಾಥ'' .

ಆಡಬಾರದ ಬಯಲು , ಇದನರಿತವರುಂಟೆ? ಆಡುವ ಬಯಲು ಆರಿತವರಿರಬಹುದು, ಬಯಲು ಎನ್ನಲು ಬರುವದಿಲ್ಲವೆಂದಲ್ಲಿ ಅದನ್ನು ಏನೆಂದರಿಯರು, ಎಂತೆಂದರಿಯರು. ಬಯಲೆಂದರೆ ಪರಬ್ರಹ್ಮ, ಪರಮಾತ್ಮ, ನಿರಾಳ ಶಿವತತ್ವ , ಮಾಹಾಘನ ಲಿಂಗ . ನಾದ ಬಿಂದು ಕಲೆಗಳಿಲ್ಲದೆ ಸಕಲ ತತ್ವಗಳೇನೂ ಇಲ್ಲದೆ, ಸರ್ವಶೂನ್ಯವಾಗಿದ್ದ ಪರಬ್ರಹ್ಮ , ಏನೇನೂ ಇಲ್ಲದ ನಿಷ್ಕಲ ನಿರವಯ ಪರಬ್ರಹ್ಮವೆಂದಾಗುವುದು. ಇವೆಲ್ಲವು ಆಡುವ ಬಯಲಾದವಲ್ಲದೆ ಆಡಲಾರದ ಬಯಲಾಗಲಿಲ್ಲ. ಆಡಲಾರದ ಬಯಲೆಂದರೆ ಬಯಲು ಎಂದಾದರೂ ತಾನು ಬಯಲು ಎಂದು ಅಂದಿರಬಹುದೆ? ಅದು ಆಡಬಾರದ ಬಯಲಾಗಿದೆ. ಹಾಗೆ ನಿರಾಳವದು ನಿರಾಳವೆಂದು ಅನ್ನಲಿಲ್ಲ ಪರಬ್ರಹ್ಮವೆಂಬುದು ಅರಿಯ ಹೋದವರು ಪರಬ್ರಹ್ಮವೆನಲಿಲ್ಲ, ತನಗಿಂತ ಪರಬ್ರಹ್ಮ ಬೇರೆನಲಿಲ್ಲ ಒಂದೆನಲಿಲ್ಲ ಏನೇನೂ ಎನಲಿಲ್ಲದರುವೆ ತನ್ನಯ ಅರುವಾದುದರಿಂದ ಏನೆಂದರಿಯರು, ಎಂತೆಂದರಿಯರು. ಎಂದು ಪ್ರಭು ಹೇಳಿದುದು. ಇದು ಕಾರಣ ತಾನಾರೆಂದರಿತವರು ಆಡಬಾರದ ಬಯಲು ಆಗಿದ್ದಾರೆ. ನೋಡಬಾರದ ಬಯಲು , ನುಡಿಯ ಬಾರದ ಬಯಲು , ಹಿಡಿಯಬಾರದ ಬಯಲು ಆಗಿಹರು . ನೋಡಬಾರದ ಬಯಲು ತಾನಾದುದ ಏನೆಂಬೇನೆಂಬೆ .

ನೋಡಬಾರದ ಬಯಲು, ತಾನಾದುದ ಅದಾವ ಕಣ್ಣಿನಿಂದ ನೋಡುವುದು? ಕಣ್ಣಿನ ಕಣ್ಣಾಗಿರುವ ತನ್ನನ್ನು ಹೇಗೆ ನೋಡುವದು, ಕಣ್ಣನ್ನು ನೋಡುವ ಮತ್ತೊಂದು ಕಣ್ಣು ಇಲ್ಲ. ಕಣ್ಣು ತಾನೊಂದೆ ಇರುವಲ್ಲಿ ಅದನ್ನು ಹೇಗೆ ನೋಡುವುದು. ತಾನು ಕಣ್ಣು ಅಲ್ಲ ಕಣ್ಣಿನ ಕಣ್ಣು. ತಾನೊಂದೆ ಇರುವಲ್ಲಿ ತನ್ನನ್ನು ಹೇಗೆ ನೋಡುವುದು . ತನ್ನ ಸಮಾನವಾದುದು ಮತ್ತೊಂದು   ಇಲ್ಲದಿರುವಲ್ಲಿ ತನ್ನನ್ನು ಹೇಗೆ ನೋಡುವುದು .

ತನಗೆ ಏನೆಂದರಿಯರು, ಎಂತೆಂದರಿಯರು ಹೇಳಿಹರಯ್ಯಾ . ನುಡಿಯ ಬಾರದ ಬಯಲು, ನುಡಿಗೆಡೆಗೊಡದ ಘನವೆ ತಾನಿರುವಲ್ಲಿ ತನಗೆ ನುಡಿಗಳೆಲ್ಲಿ! ನುಡಿಗೊಳಪಟ್ಟವ ನಾಗಿದ್ದಲ್ಲಿ ನುಡಿದು

ಹೇಳಲು ಬರುತ್ತಿತ್ತು. ನುಡಿಯಲು ಬಾರದ ಘನವೆ ತಾನಾಗಿರುವ ತನಗೆ ಅಹಂಬ್ರಹ್ಮಾಸ್ಮಿ ಎಂದು ಹೇಗೆ ಹೇಳುವುದು. ಲಿಂಗವೆಂದು ಜಂಗಮವೆಂದು ನಿಃಶಬ್ದ ಬ್ರಹ್ಮವೆಂದು ಹೇಗೆ ಹೇಳುವುದು. ಈ ನುಡಿಗಳೆಲ್ಲ ಹೆತ್ತರಿವು. ತನ್ನಿಂದ ತಿಳಿಸತಕ್ಕವುಗಳು ಇವುಗಳು ತಾನು ಹೇಗಾಗುವದು? ಇದು ಕಾರಣ ಏನೆಂದರಿಯರು, ಎಂತೆಂದರಿಯರು ಹೇಳಿರಯ್ಯಾ ಎಂಬುದು ಪ್ರಭುದೇವನ ಪ್ರಶ್ನೆ.

ಹಿಡಿಯಬಾರದ ಬಯಲು : ಬಯಲು ಅದನ್ನು ಪೃಥ್ವಿ, ಅಪ್ಪು, ತೇಜ, ವಾಯು ತತ್ವಂಗಳು ಹಿಡಿಯಬಹುದೆ! ಅದನ್ನು ವಾಕ್ ಮನದಿಂದ ಹಿಡಿಯಬಹುದೆ ? ವಾಕ್ಕಿನಿಂದ ಹಿಡಿಯಹೋದರೆ ಧ್ಯಾನಾತೀತ, ಭಾವದಿಂದ ಹಿಡಿಯಹೋದರೆ ಭಾವಾತೀತ, ಅರಿಯ ಹೋದರೆ ಅರಿದರುಹಿಸಿ ಕೊಂಬುದರತ್ತತ್ತ ಇದನ್ನು ಹೇಗೆ ಹಿಡಿಯುವುದು? 'ಯತಾವಾಚ್ಯನಿವರ್ತಂತ ಅಪ್ರಾಪ್ಯ ಮನಸಾಸಹ' ಎಂದಂತೆ ವಾಕ್‌ನಿಂದ ಕಥನ ಮಾಡಲು ಬಾರದ್ದು. ಮನಸ್ಸಿನಿಂದ ಕಲ್ಪಿಸಲು ಬಾರದ್ದು, ಹಿಡಿಯಬಾರದ ಬಯಲು, ಶೃತಿಗಳು ನೇತಿ ನೇತಿ ಎಂದು ಮೌನವ ಧರಿಸಿರುವಲ್ಲಿ ಅದನ್ನು ಹಿಡಿಯುವದದೆಂತು! ಅದು ಆವಾವುದರಿಂದಲು ಹಿಡಿಯಬಾರದ ಬಯಲು. ಗುರೂಪದೇಶದಿಂದಲೂ ಹಿಡಿಯಬಾರದ ಬಯಲು ಗುಹೇಶ್ವರ, ಗುಹೇಶ್ವರ ಎಂಬ ಅರುವಿನಿಂದಲು ಹಿಡಿಯಬಾರದ ಬಯಲು. ಅದನ್ನು ಹೇಗೆ ಹಿಡಿಯುವುದು.

ಒಡಲಿಲ್ಲದ ಬಯಲೊಳಡಗಿಪ್ಪ ಭೇದವ ಈ ಲೋಕದ ಜಡ ಜೀವಿಗಳೆತ್ತ ಬಲ್ಲರೈ ರಾಮನಾಥ ಎಂದು ದೇವರದಾಸಿಮಯ್ಯಗಳು ಹೇಳಿದುದು. ಇದು ಕಾರಣ ಆಡಬಾರದ ಬಯಲು, ನೋಡಬಾರದ ಬಯಲು , ನುಡಿಯಲು ಬಾರದ ಬಯಲು ಭೂಮಿಯೊಳಗಿಲ್ಲ ಆಕಾಶದೊಳಗಿಲ್ಲ. ಚತುರ್ದಶ ಭುವನದೊಳಗಿಲ್ಲ ಹೊರಗಿಲ್ಲ, ಏನೆಂದರಿಯರು, ಎಂತೆಂದರಿಯರು, ಹೇಳಿರಯ್ಯ ಎಂದು ಬಿತ್ತರಿಸಿಹರು.

ಕೃತಯುಗದ ಮಾತ ಬೇಡ ಎಂದು ಹೇಳಿದುದು. ಇಲ್ಲಿ ಕೃತಯುಗ ಅದನ್ನೇಕೆ ತೆಗೆದುಕೊಳ್ಳುವದು. ಇಲ್ಲದ ಯುಗಂಗಳು, ಇಲ್ಲದ ತ್ರೇತಾಯುಗ, ಇಲ್ಲದ ದ್ವಾಪರ, ಇಲ್ಲದ ಕಲಿಯುಗದ ಮಾತೇಕೆ ? ತನ್ನ ತಾನರಿತಲ್ಲಿ ತನ್ನ ಘನದಿರುವ ಏನೆಂದರಿಯರು, ಎಂತೆಂದರಿಯರು ಹೇಳಿರಯ್ಯಾ. ಆಡಬಾರದ ಬಯಲಾಗಿದ್ದ ಪ್ರಭು ನೋಡಬಾರದ ಬಯಲಾಗಿದ್ದ, ನುಡಿಯಬಾರದ ಬಯಲಾಗಿದ್ದ ಹಿಡಿಯಬಾರದ ಬಯಲಾಗಿದ್ದ ಪ್ರಭುವಾದುದರಿಂದ ಈ ಒಡಲಿಲ್ಲದ ಬಯಲೊಳಗಡಗಿಪ್ಪ ಭೇದ ಪ್ರಭು ಅರಿದರಿದ ಇರುವು ಪ್ರಭುವಿನ ಇರುವು ಆದುದರಿಂದ ಗುಹೇಶ್ವರ ಅಂದೂ ಇಲ್ಲ, ಇಂದೂ ಇಲ್ಲವೆಂದು ಬಿತ್ತರಿಸಿದುದು ನೋಡಿದಡೆ ತನ್ನಿಂದ ತಾನರಿದ ಅರಿವು ಪ್ರಭುವಿನದು . ಅದು ಗುರುವಿಡಿದ ಅರಿವು ಆಗದು. ಲಿಂಗವಿಡಿದ ಅರಿವು ಆಗದು. ಇಲ್ಲದ ಗುರು, ಇಲ್ಲದ ಲಿಂಗ ಕಲ್ಪಿತವೆಂದರುಹಿದ ತನ್ನಿರುವು ಅರುವು ತನಗೆ ವೇದ್ಯವಾದಲ್ಲಿ ಅಲ್ಲಿ ಏನೇನೂ ಉಸರಲಿಂಬಿಲ್ಲದುದು. ತನ್ನಿಂದ ತಾನೋಡ, ಏನೆಂದರಿಯರು, ಎಂತೆಂದರಿಯರು ಬಿತ್ತರಿಸಿದುದಲ್ಲದೆ ನೀವಾದರೂ ಹೇಳುವವರಿದ್ದರೆ ಹೇಳಿರಯ್ಯ ಕೃತಯುಗದಲ್ಲಿ ಹೇಳಿದವರ ಮಾತು ಇಲ್ಲಿ ಬೇಡ. ನಿಮ್ಮ ನೀವರಿತಿದ್ದರೆ ಅದು ಹೇಳಲು ಬರುವಂತಿದ್ದರೆ ಹೇಳಿರಯ್ಯ ಎಂದು ಹೇಳಿದುದು.

99

ಅರಸಲಿಲ್ಲದ ಘನವ ನರಸುವದದೇನೊ, ತಿಳಿವುದೇನೊ?
ತಿಳಿಹಿನ ಮುಂದಣ ಸುಳುಹು ತಾನೇನೋ ಸರದ ಸಮತೆಯ
ಪರಿಣಾಮ ನೋಡಾ. ಗುಹೇಶ್ವರನೆಂಬುದು ಅದೆ ಕಂಡೆ. ॥ 651 ॥

ತಾತ್ಪರ್ಯ: ಅರಸಲಿಲ್ಲದ ಘನವ ನರಸುವದದೇನೊ ತಿಳಿವುದದೇನೊ : ಹುಡುಕಿದರೂ ಶಿಗದ್ದು ಹುಡುಕುವದದೇನೊ ತಿಳಿಯುವುದಕ್ಕೆ ತಿಳಿಸಿಕೊಳ್ಳುವದಕ್ಕೆ ಮೀರಿದ ಘನವ ತಿಳಿವುದದೇನೊ? ಶೃತಿ, ನೇತಿ ನೇತಿ ಇದಲ್ಲ. ಇದಲ್ಲವೆಂದು ಹುಡಕಹೋಗಿ ನಿಲುಕದಂತಾಗಿ ಮೌನ ಧರಿಸಿತ್ತು.

'ಕೆರೆಯಂತೆ ಸರಸರಿದು ,ಮಳಲಿನಂತೆ ಜರಿ ಜರಿದು ,ಕನಸಿನಲ್ಲಿ ಕಳವಳಸಿ ನಾನು ಬೆರಗಾದೆನಯ್ಯ. ಅರಸಿ ಕಾಣಬಾರದ ತನು, ಬೆರಸಿ ಕೂಡದ ಸುಖವ ನೀ ಕರುಣಿಸು, ಚೆನ್ನಮಲ್ಲಿಕಾರ್ಜುನ ' ಅರಸಿ ಕಾಣಬಾದರ ತನು, ಅದು ಘನ ತನು. ಬೆರಸಿ ಕೂಡದ ಸುಖವದು ಬೆರಸಲಿಲ್ಲದ ನಿಬ್ಬೆರಗು ತಾನೆ ತಾನಾಗಿ ನಿಂದ ನಿಜವು. ಅರಿಯದರಿವು ಅದು ಅರಸಲಿಲ್ಲದ ಘನ.

ಕೆರೆಯಂತೆ ಸರಿ ಸರಿದುದು ಅರಸಲಿಲ್ಲದ ಘನವಾಗದು. ಮಳಲಿನಂತೆ ಜರಿ ಜರಿದು ಅರಸಲಿಲ್ಲದ ಘನವಾಗದು. ಅಲ್ಲಿ ಕನಸು ಬಾರದ,ಕಳವಳ ಬಾರದ, ಎಲ್ಲಿಯವರೆಗೆ ಕಲ್ಪಿತನಾಗಿದ್ದಾನೆ ಅಲ್ಲಿಯವರೆಗೆ ತನು ಭಾವಿಯು , ಇಂದ್ರಿಯಗಳ ಭಾವಿಯು, ಪ್ರಾಣಂಗಳ ಭಾವಿಯು, ಮನದ ಭಾವಿಯು, ಇವು ಮರವಿನಿಂದುಕ್ತವಾದ ಅನಾತ್ಮ ಭಾವಿಯು. ಬದ್ಧನು ಆಗಿಹನು, ಚಿದಾಬಾಸ ರೂಪಿ ಕಲ್ಪಿತನು ಸದ್ಗುರು ಸತ್ ಶಾಸ್ತ್ರಗಳ ಶ್ರವಣದಿಂದ, ಸಾಕ್ಷಿ ಸ್ವಯಂಪ್ರಕಾಶ ಅಸಂಗ ಆತ್ಮ ಪರಮಾತ್ಮನೆಂಬ ಭಾವಿಯಾಗಿ ಮುಕ್ತನೆನಿಸುತ್ತಾನೆ.

ಕಲ್ಪಿತನು ತನ್ನ ಭಾವಂಗಳಿಗನುಗುಣವಾಗಿ ಅರಸುವವನೆ ಆಗಿರುವವನಲ್ಲದೆ, ಅರಸಲಿಲ್ಲದ ಘನವಾಗಲಿಲ್ಲ. ತಾನಾರೆಂದು ಅರಿಯಲಿಲ್ಲ, ಭಾವಿಕನೆ ಆದನಲ್ಲದೆ ಸಕಲ ಭಾವಂಗಳಿಗೆ ಮೀರಿದ ತನ್ನ ಘನವ ನೋಡಲಿಲ್ಲ , ನೋಡದ್ದರಿಂದ ಕೆರೆಯಂತೆ ಸರಿಸರಿದು, ಮಳಲಿನಂತೆ ಜರಿ ಜರಿದು, ನೀರು ತುಂಬಿದ ಕೆರೆಯ ದಿನಗಳಂತೆ ಒಳಗೊಳಗೆ ನೀರು ಸರಿ ಸರಿದು ಹೋಗುವುದು, ಹಾಗೆ ಮನವು ಆತ್ಮ ಚಿಂತನದಿಂದುಕ್ತವಾದುದು. ಹೆಚ್ಚು ಹೆಚ್ಚು ಸಮಯವಾದಂತೆ ಒಳಗೊಳಗೆ ಆತ್ಮ ಚಿಂತನೆ ಕ್ಷಯಿಸುತ್ತ ಹೋಗುತ್ತದೆ. ಭಾವಿಸುವ ಭಾವವು ಮಳಲಿನಂತೆ ಜರಿ ಜರಿದು ಹೋಗುತ್ತದೆ. ಮನದ ಚಿಂತನವಾಗಲಿ ನೆನಹು ಆಗಲಿ ಇದೊಂದು ಅವಸ್ಥೆ. ಇದೊಂದು ಕನಸು ಇದ್ದಂತೆ. ಕನಸು ಹೇಗೆ ತೋರಿ ಇಲ್ಲವಾಗುವದೊ ಹಾಗೆ ಮನದ ಅವಸ್ಥೆಯು ಕನಸಿನಂತೆ ಕನಸಿನಲ್ಲಿ ಹೇಗೆ ತೋರಿ ಇಲ್ಲವಾಗುವದೊ, ಹಾಗೆ ಮನದ ಚಿಂತನ ಅದೊಂದು ಕಳವಳವೆ! ಏಕೆಂದರೆ ಲಿಂಗ ಚಿಂತನ ಮಾಡುವ ಮನಸ್ಸಿಗೆ ಲಿಂಗವಾಗಬೇಕೆಂಬ ಆತುರ. ಚಿಂತನದಿಂದುಕ್ತವಾದುದು ಅಚಿಂತ್ಯ ಘನ ಹೇಗಾಗುವುದು. ಇದನ್ನು ಕಂಡೆ ಅಕ್ಕ ನಾನು ಬೆರೆಗಾದೆನಯ್ಯ, ಅರಸಿ ಕಾಣಬಾರದ ಘನ. ಬೆರಸಿ ನೋಡದ ಸುಖವ ನೀ ಕರುಣಿಸು, ಚೆನ್ನಮಲಲಿಕಾರ್ಜುನ'' ಎಂದು ಪ್ರಾರ್ಥಿಸಿದ್ದಾಳೆ.

ಶರಣ ಸತಿ ಎಂಬ ಭಾವಿಕಳಾಗಿ, ಕಲ್ಪಿತಳಾಗಿ, ಅರಸಿ ಕಾಣಬಾರದ ಘನವಾಗುವದು ಅಸಾಧ್ಯ. ಈ ಶರಣಸತಿ ರೂಪ ಭಾವ, ಪತಿಯಲ್ಲಿ ಬೆರಸಿ ನೋಡುವ ಸುಖವು ಇದು ಸವೆದು ಹೋಗುವ ಸುಖ. ಸವೆಯದ ಸುಖ ಬೆರಸಿ ನೋಡದ ಸುಖವಾಗದು ಇದು ಕಾರಣ ಅಕಲ್ಪಿತ ಘನನೆ ನೀ ಕರುಣಿಸಿದಲ್ಲಿ ನನಗೆ ಶರಣಸತಿ ಲಿಂಗ ಪತಿ ಎಂಬ ಭಾವ ಕರಗಿ ಅರಸಲಿಲ್ಲದ ಘನದಿರುವು ನನ್ನ ಇರುವು ಆಗಲು ನೀ ಕರುಣಿಸು ಎಂದು ಪ್ರಾರ್ಥಿಸಿಕೊಂಡಿದ್ದಾಳೆ.

ಅರಸಲಿಲ್ಲದ ಘನ ಅರಸುವದದೇನೊ? ಎಂಬ ಗಂಭೀರತ್ವ ಪ್ರಭುವಿನದು. ಈ ಮಹಾಂತ ಅರುವ ಅರಿದರಿದು ನೋಡಿದ ಘನವಂತ. ಅರಸಿಕೊಳ್ಳುವದು ಅನಾತ್ಮ. ಅರಿಯುವುದು ಆತ್ಮ ದೃಶ್ಯವಲ್ಲ. ದೃಕ್ ಆತ್ಮ ಪ್ರಕೃತಿ ಅಲ್ಲ. ಪುರುಷ ಆತ್ಮನೆಂದು ಇದಲ್ಲ ಇದಲ್ಲ ಎಂದು ದೃಶ್ಯ ದೃಕ್ ವಿಭಾಗ ಮಾಡಿ, ತನ್ನ ಸ್ವರೂಪ ಹುಡುಕುವ ಸಾಧಕರು, ಜಿಜ್ಞಾಸುಗಳು ಉಂಟು. ಅದುವೆ ತಾನಾಗಿಹ ಆರೂಢರು ಶಿಕ್ಕುವುದು ವಿರಳ.

ಪ್ರಭು ಅರಸಲಿಲ್ಲದ ಘನವೆ ತಾನಾದ ಆರೂಢ, ಘನಗಂಭೀರ,ಸಕಲರಿಗೂ ತನ್ನ ಮಹದರುವು ಕೊಂಡು ಬಂದ ವೀರರ ವೀರ. ನಿರ್ಭಯದನುವುಳ್ಳ ಮಹಾವೀರ. ನಿಜದಲ್ಲಿ ನಿಂತ ನಿಜೈಕ್ಯ. ನಿಜೈಕ್ಯನಾದುದರಿಂದ ಅರಸಲಿಲ್ಲದ ಘನವಾಗಿದೆ ಅದನ್ನು ಹುಡುಕುವುದೆಂದರೆ ಇದೆಂಥ ಅರೆಹುಚ್ಚು? ಬಯಲನ್ನು ಆರಾದರೂ ಹುಡುಕ ಹೋಗಬಹುದೆ? ಸಕಲರು ಇರುವುದು ಬಯಲಲ್ಲಿ. ಬರುವುದು, ಹೋಗುವುದು ಬಯಲಲ್ಲಿ, ಕೂಡುವುದು ಬಯಲಲ್ಲಿ, ಏಳುವುದು ಬಯಲಲ್ಲಿ, ನವಮಾಸ ಕೂಸು ಇದ್ದುದು ಬಯಲಲ್ಲಿ. ಹೊರಗೆ ಬಂದುದು ಬಯಲಲ್ಲಿ. ನೂರಾರು ವರ್ಷ ಬಾಳುವುದು ಬಯಲಲ್ಲಿ ಕೊನೆಗೆ ಈ ಶರೀರವ ಹೂಳಿಡುವದು ಬಯಲಲ್ಲಿ ಬಯಲೆ ಇದರ ನಿವಾಸವಾಗಿರುವಾಗ ಅದನ್ನು ಹುಡುಕ ಹೋಗುವುದು ಇದೆಂಥ ಅರಹುಚ್ಚತನ.

ಘಟಾಕಾಶವದು ತಾನು, ಮಹಾಕಾಶ ತಾನಾಗಲು ಬಹು ಆಶಿಸುತ್ತಿತ್ತು. ಒಂದು ದಿನ ಬಲ್ಲವರನ್ನು ನಾನು ಮಹಾಕಾಶ ಹೇಗಾಗುವೆ ಎಂದು ಕೇಳಿತು ಆಗ ಅವರು ಓ ಘಟಾಕಾಶನೆ ನೀನು ಮಹಾಕಾಶನೆ ಇರುವಿ ಮಹಾಕಾಶದಿಂದ ನೀನು ಅನ್ಯನಾಗಿಲ್ಲ. ನೀನು ಘಟವೆಂಬ ಉಪಾಧಿ ತೆಗೆದು ನೋಡು. ನೀನು ಮಹಾಕಾಶನೆಂಬುದು ನಿನ್ನಿಂದ ನಿನಗೆ ವಿದಿತವಾಗುವುದು. ಅದನ್ನು ಕೇಳಿ ಘಟಾಕಾಶ ತನ್ನ ಘಟದುಪಾಧಿ ತೆಗೆದು ನೋಡದೆ, ನಾನು ಮಹಾಕಾಶನಿದ್ದೇನೆಂದು ಚಿಂತನ ಹತ್ತಿತು. ಆಗ ಪ್ರಭುವೆಂಬ ಮಹಾಘನವು ಬಂದು ನೀನು ಮಹಾಕಾಶನಿದ್ದೇನೆಂದು ಅದೇಕೆ ಹಲಬುವೆ ತಿಳಿದು ನೋಡು, ನೀನು ಅದುವೆ ಇರುವಲ್ಲಿ ಚಿಂತಿಸುವದದೇಕೊ ತಿಳಿಯುವದದೇಕೊ? ಎಂದು ಎಚ್ಚರ ಮಾಡಿದ. ಹಾಗೆ ಎಷ್ಟೊ ಸಾಧಕರೆಂಬ ಜಿಜ್ಞಾಸುಗಳು ಅಭ್ಯಾಸಿಗಳು ನಾನು ಮಹಾಕಾಶನೆ ಇದ್ದೇನೆ, ಸ್ವಯಂ ಪ್ರಕಾಶನೆ ಇದ್ದೇನೆಂದು ಚಿಂತಿಸುವರು. ಇವರು ಅಚಿಂತ್ಯಪದವಾಗಿದ್ದು ಕಂಡು, ಚಿಂತಿಸುವದದೇಕೊ? ಓ ಜಿಜ್ಞಾಸುಗಳೆ ಅಭ್ಯಾಸಿಕರೆ, ತಿಳಿಯುವದದೇನೊ? ಎಂದು ಬಿತ್ತರಿಸಿದ. ಅರಿದರಿದು ನೋಡಿರಿ ನಿನ್ನಿಂದ ನಿನ್ನ ನೋಡಿರಿ ಹುಡುಕುವ ಪರಿಶ್ರಮವಿಲ್ಲ. ತನ್ನಿಂದ ತನ್ನ ನೋಡುವುದು ಆಗ ಅರಸಲಿಲ್ಲದ ಘನ ತಾನೆ. ತಾನೆ ನಿರಂತರನಾಗಿದ್ದು ತನ್ನ ತಾನೆ ಹುಡುಕವದೆಂದಲ್ಲಿ ಇದೆಂಥ ಹಾಸ್ಯಾಸ್ಪದ, ವಿವರಿಸಿ ನೋಡುವುಡೆ ಹುಡುಕಲಿಲ್ಲದ ಘನ(ಅರಸಲಿಲ್ಲದ ಘನ) ತಾನೆಂಬುದು ತನ್ನಿಂದ ತನಗೆ ವೇದ್ಯವಾಗುವದು. ಆಗ ತನ್ನ ತಾ ಹುಡುಕುವ ಹುಚ್ಚು ಬಯಲಾಗುವುದು. ಆಗ ಅರಸಲಿಲ್ಲದ ಘನ ಅರಸುವದದೇನೊ? ತಿಳಿವುದದೇನೊ? ಎಂಬ ಅರಹುಚ್ಚುತನ ನಷ್ಟವಾಗಿ , ಆಗ ತನ್ನಿಂದ ತಾನೆ ತಿಳುಹಿನ ಮುಂದಣ ಸುಳುಹು ತಾನೇನೊ , ಎಂಬ ಸುಜ್ಞಾನ ಒಡಮೂಡಿದಾಗ ವೃತ್ಯಾತ್ಮಕವಾದ ತೂರ್ಯಜ್ಞಾನ ಚಿದಹಮ್ಮು ಇದು ಆಗನು.

ಸರದ ಸಮತೆಯ ಪರಿಣಾಮುವ ನೋಡಾ ಗುಹೇಶ್ವರನೆಂಬುದು ಅದೆ ಕಂಡೆ : ಸರದಸಮತೆಯ ಪರಿಣಾಮವದು ತನ್ನಯ ಇರುವು. ಇದು ನಿರಂತರವಾಗಿಹ ಮಂಗಳಮಯ ದರುವು. ಇದು ಸಮತೆಯ ಸಯಸ್ವರೂಪವು, ಇದರಲ್ಲಿ ವಿಷಮ ಬಾರದ್ದು ,ಇದು ಪ್ರಪಂಚವ ನೋಡದ್ದು,ಪರಮಾರ್ಥವ ನೋಡದ್ದು , ಮರವು ಕಾಣದು , ಅರುವೆಂಬುದನ್ನು ಕಾಣದ್ದು ಪ್ರವೃತ್ತಿ ನೋಡದ್ದು ನಿವೃತ್ತಿ ನೋಡದ್ದು , ಅಂಗವೆಂಬುದು ಕಾಣದುದು , ಲಿಂಗವೆಂಬುದು ಕಾಣದುದು . ಇಲ್ಲಿ ಲಿಂಗಾಂಗ ಸಮರಸವೆಂಬುದಕ್ಕಿಂಬು ಇರದ ಇರುವು , ಆದುದರಿಂದ ಅದು ತನ್ನಯ ಇರುವು ನಿರಂತರ ತಾನೆ ಇಲ್ಲಿ ಸಂತೋಷವೆ ಸಂತೋಷ , ಸುಖದ ಸುಖ ಪರಮಾನಂದಮಯ ವರ್ಣಿಸುವದದೆಂತು ? ಈ ಪರಮ ಸಂತೋಷ ತಾನು ಪರಮಸಂತೋಷವೆಂದು ಅನ್ನಲಿಲ್ಲ. ಪರಮಾನಂದಮಯವದು ತಾನೆನಲಿಲ್ಲಸುಖವದು ಸುಖವೆನಲಿಲ್ಲ ಗುಹೇಶ್ವರ ನೆಂಬುದು ಅದೆ ಕಂಡೆ ಎಂದು ಹೇಳಿದುದಲ್ಲದೆ ಭರಿತವು ಅದು ತಾನಪ್ಪುದು ಅರಿವುಡೆ ತಾನೆ, ತನ್ನನ್ನು ಆರು ಮಾಡರು, ತಾನೆ

ಭರಿತವು. ಈ ಭರಿತವು ಆರಾರು ಮಾಡರು, ತಾನೆ ಭರಿತ ತಾನಪ್ಪುದು.

100

ಲೋಕ ವಿರೋಧಿ ಭಕ್ತ, ಭಕ್ತ ವಿರೋಧಿ ಶರಣ,
ಶರಣ ವಿರೋಧಿ ಲಿಂಗೈಕ್ಯ, ತ್ರಿವಿಧ ವಿರೋಧಿ
ಕೂಡಲ ಚೆನ್ನಸಂಗಯ್ಯನಲ್ಲಿ ಮಹಾಲಿಂಗೈಕ್ಯನು. ॥ 1908 ॥

ತಾತ್ಪರ್ಯ : ಷಟ್‌ಸ್ಥಲ ಚಕ್ರವರ್ತಿಯು, ಭಕ್ತ ಶರಣ ಲಿಂಗೈಕ್ಯ ಮಹಾಲಿಂಗೈಕ್ಯವುಳ್ಳ ಮಹಾನುಭವ ನಮ್ಮಲ್ಲಿ ನಾವು ಆವಾವ ಸ್ಥಲದವರೆಂಬುದು ನೋಡಿಕೊಳ್ಳುವುದು. ಇದಲ್ಲದೆ ತನ್ನವರಿಗೆ ವಿವರಿಸಿ ಹೇಳುವುದು ಒಳ್ಳೆಯದು. ಅದಕ್ಕಿಂತ ತನ್ನನ್ನು ನೋಡುವುದು ನಾನಾವ ಸ್ಥಲದವನು ಎಂದು, ತನ್ನ ಮನವ ನೋಡುವುದು. ಈ ಮಹದರುವಿನ ಮಹಾನುಭವಿಯಾಗಿ ಮಹದಾನಂದ ಹೊಂದಿದರೆ ಮತ್ತಷ್ಟು ಹಿತಕರ.

ಆಕಳು ದುಗ್ಧಾಮೃತ ಕೊಡುತ್ತದೆ ತನಗಲ್ಲ. ಆಕಳು ಆಗುವುದಕ್ಕಿಂತ ಕರುವಾಗುವುದು ಲೇಸು. ಕರುವಾದಲ್ಲಿ ದುಗ್ಧಾಮೃತ ಸೇವಿಸುವ ಭಾಗ್ಯ. ಕರುವು ಹಾಲು ಕೊಡದಿದ್ದರೂ ತಾನು ದುಗ್ಧಾಮೃತ ಸೇವಿಸುವುದು. ಪ್ರಬುದ್ಧವಾದ ಮೇಲೆ ಅದು ದುಗ್ಧಾಮೃತ ಕೊಡುವುದು.

ಲೋಕ ವಿರೋಧಿ ಭಕ್ತ, ಭಕ್ತ ವಿರೋಧಿ ಶರಣ, ಶರಣ ವಿರೋಧಿ ಲಿಂಗೈಕ್ಯ, ತ್ರಿವಿಧ ವಿರೋಧಿ ಮಹಾಲಿಂಗೈಕ್ಯ : ಎಂದು ಬಿತ್ತರಿಸಿದ ಚೆನ್ನ ಬಸವರಾಜ ದೇವರು, ಲೋಕ ವಿರೋಧಿ ಭಕ್ತ. ಭಕ್ತರು ಲೋಕದವರಿಗೆ ವಿರೋಧಿಯೆ? ಭಕ್ತ ಅವಿರೋಧಿ, ಅವನೆಂತು ವಿರೋಧವ ಕಾಣುವನು. ನಿರಹಂಭಾವಿ, ಭರಿತ ಭಾವಿ, ದಾಸೋಹಂ ಭಾವಿ, ಸಕಲದರಲ್ಲಿ ದೇವನನ್ನು ಕಾಣುವ ಪೂರ್ವಭಾವಿ. ಭಾವರಸಘನ ಭಕ್ತಿ ಸಂಪನ್ನ ಈ ಮಹಾಂತನೆಂತು ವಿರೋಧವ ಕಾಣುವನು? ಲೋಕದವರು ವಿರೋಧವಾಗಿ ಕಾಣುವರು.

ಲೋಕವು ಅಭೇದವ ಸೇರದು, ಭೇದಕ್ಕೆ ಒಪ್ಪುವದು, ಅಹಂವುಳ್ಳದು. ಶಿವಮಯವಾಗಿಹ ತತ್ವಕ್ಕೆ ಒಪ್ಪದು. ಭೇದದೃಷ್ಟಿ, ಭೇದಜ್ಞಾನ, ಭೇದಭಾವಕ್ಕೆ ಒಪ್ಪುವುದು. ಜೀವ ಈಶ್ವರ ಭೇದ, ಜೀವ ಜೀವರ ಭೇದ, ಜೀವ ಜಡ ಭೇದ, ಈಶ್ವರ ಜಡ ಭೇದ, ಜಡಾಜಡ ಭೇದಕ್ಕೆ ಒಪ್ಪುವುದು. ಗುಣಮಯ ಪ್ರಕೃತಿಗೆ ಒಪ್ಪಿದಲೋಕ ಗುಣಾತೀತವಾಗಿಹ ತತ್ವಕ್ಕೆ ಹೇಗೆ ಒಪ್ಪುವರು. ಭವಿಗಳು ಭ್ರಾಂತಿಗೆ ಒಪ್ಪುವರು, ಭಕ್ತ ಶಿವಮಯವಾಗಿಹ ಅಖಂಡ ತತ್ವಕ್ಕೆ ಒಪ್ಪುವನು. ಭಕ್ತರಲ್ಲಿ ಪರತತ್ವಕ್ಕೆ ಒಪ್ಪುವವರು ಬಹು ಕಡಿಮೆ ಇದ್ದಾರೆ. ದೇವಗಣ, ರುದ್ರಗಣ ಸಮೂಹಕ್ಕೆ ಒಪ್ಪುವ ಭಕ್ತರೆ ಬಹಳ ಇದ್ದಾರೆ. ಈ ಮಾಯಿಕ ದೇವ ಗಣ, ರುದ್ರಗಣಕ್ಕೆ ಒಪ್ಪುವ ಭಕ್ತರಿಗೆ ಭೇದಿಸಬಾರದ ಅಭೇದ್ಯ ಶಿವತತ್ವ ದಕ್ಕದೆ ತುತ್ತಾಗಿ ಜ್ಞಾನಿ ಭಕ್ತರನ್ನು ಪೂಜ್ಯ ಪೂಜ್ಯಕ ಎಂಬ ಬೇದ ಜ್ಞಾನಿದಿಂದುಕ್ತರಿಗೆ ಕಠಿಣವಾಗಿರುವಲ್ಲಿ ಲೋಕದವರಿಗೆ ಅಪೂರ್ವಿಕ ಭಕ್ತರೆ ಅಕ್ರಿಯೆ ಭಕ್ತ. ಭರಿತಭಾವ ಸೇರದಂತಾಗಿದೆ. ವಿಚಾರ ಮಾಡಲು ಪೂಜ್ಯ ಪೂಜಕ ಎಂಬ ಬೇಧ ಜ್ಞಾನದಿಂದುಕ್ತವಾದ ಭಕ್ತರು ಲೌಕಿಕರಲ್ಲಿ ಗಣನೆಯಾಗುವರು. ಇದು ಕಾರಣ ಅಪೂರ್ವಿಕ ಭಕ್ತರಿಗೆ ಲೋಕವು ವಿರೋಧವಾಗಿ ಕಾಣುವುದು.

ಭಕ್ತ ವಿರೋಧಿ ಶರಣ : ಶರಣಂಗೆ ಭಕ್ತನು ವಿರೋಧಿಯೆ? ಭಕ್ತನಿದ್ದಲ್ಲಿಗೆ ಶರಣ ಓಡೋಡಿ ಬರುವ ಕರುಣಾಳು. ಆ ಮಹಾಂತ ವಿರೋಧಿಯೆ! ಅಲ್ಲಲ್ಲ ಭಕ್ತರ ನಿಜಸುಖ ಬಯಸುವ ಸುಖದೇಕರಸ ಸುಖಾಂಬುದಿ. ಅವನೆಂತು ಭಕ್ತಂಗೆ ವಿರೋಧವ ಕಾಣುವನು? ಭರಿತ ಭಾವಿಯನ್ನೆ ಭಾವಕ್ಕಗಮ್ಯನ

ಮಾಡುವ ದಯಾಮಯ ನಾದುದರಿಂದ ಓ ಭರಿತ ಭಾವಿಯೆ, ನೀನು ದೇವನ ಅರಿತು ಭಾವಿಸುವೆಯಾ? ಅರಿಯದೆ ಭಾವಿಸುವೆಯಾ , ಭಾವಿಸುವ ನೀನಾರು? ನಿನ್ನ ನೀನರಿತು ಭಾವಿಸುವ ಭಕ್ತನಾಗಿರುವಿಯಾ? ಓ! ನೀ ನಾನೆಂಬುದಕ್ಕೂ ತೆರೆಹಿಲ್ಲದ ಘನವೆ ನೀನಾಗಿರುವಲ್ಲಿ ನಿನ್ನ ಘನವರಿಯುವದೆ ಮುಖ್ಯವು ಎಂಬ ಕಳಕಳಿಯೆ ಆ ಘನವಂತನ ಗುರಿ ಇರುವಲ್ಲಿ ಭಕ್ತರು ವಿರೋಧಿ ಶರಣನಾದರೆ ಅವರಗತಿ ಹೇಳಲೆಂತು? ಕೇಳಲೆಂತು? ಅಪೂರ್ವಿಕ ಭಕ್ತರಿಗೆ ಶರಣಸ್ಥಲ ಬಹುಪ್ರಿಯವಾಗಿದೆ , ಪೂಜಾಭಕ್ತರಿಗೆ ಒಪ್ಪದಾಗಿದೆ ಏಕೆಂದರೆ ಶರಣನ ಘನವ ತಿಳಿಯಲು ಕಠಿಣವಾಗಿದೆ. ಇದಲ್ಲದೆ ತನುಭಾವ ನಷ್ಟವಾಗಿರುವುದಿಲ್ಲವಾದ್ದರಿಂದ ಭಕ್ತ ವಿರೋಧಿ ಶರಣನೆಂದು ಹೇಳಿಹರು.

ಅಕ್ರಿಯ ಭಕ್ತರು ತತ್ವ ಪ್ರೇಮಿಗಳು. ಪರ ತತ್ವ ತಿಳಿಯುವ ಹಂಬಲವುಳ್ಳವರು ಇವರಿಗೆ ಶರಣ ತತ್ವದ ಸ್ವಾನುಭಾವ ಬಹು ಇಷ್ಟವಾದುದು. ಇದು ಕಾರಣ ಪ್ರಭುವೆಂಬ ಶರಣಂಗೆ ಬಸವನೆಂಬ ಭಕ್ತನೆ ಭರಿತಭಾವ ಒಪ್ಪದೆ, ಅಜ್ಞಾನಿ ಶಿವ ಸುಜ್ಞಾನ ಶಿವ ನೆಂದರೆ ಶಿವ ಜ್ಞಾನಿಗಳು ಮೆಚ್ಚುವರೇ? ಶಿವ ಶಕ್ತ ನೀನೆಂದರೆ ಶಿವ ಜ್ಞಾನಿಗಳು ಮೆಚ್ಚುವರೆ! ಮಹಾನುಭಾವಿಗಳು ಪರಿಣಮಿಸುವರೆ? ತಾನಾರೆಂಬುದನರಿಯದ ಅನ್ಯವೆಲ್ಲವು ಬೊಮ್ಮವೆಂಬ ಕರ್ಮದ ನುಡಿ ಗುಹೇಶ್ವರಲಿಂಗ ಮೆಚ್ಚದು. ಎಂದು ಬಿತ್ತರಿಸಿದುದು ಭಕ್ತನ ಭರಿತಭಾವಕ್ಕು ಶರಣನ ಮಹಾಜ್ಞಾನ ಘನತರವಾದುದು. ಭಾವಕ್ಕಿಂತಲೂ ಭಾವಕ್ಕಗಮ್ಯವಾದ ನಿಲುವು ಘನವಾದುದಲ್ಲವೆ?

ತನ್ನ ತಾನರಿಯದೆ , ಸಕಲವು ಶಿವಮಯ ಬ್ರಹ್ಮಮಯ ಲಿಂಗಮಯವೆನ್ನಲಿ ಇದರಿಂದ ತನ್ನ ತಿಳಿದಂತಾಯಿತೆ? ಅರಿಯದೆ ಶಿವಮಯವೆಂಬ ಭಾವ ಭರಿತನಾದರೂ ತಾನಾರೆಂಬುದು ತನಗೆ ವಿದಿತವಾಯಿತೆ? ಅರಿತಲ್ಲಿ ಮರಹು ನಷ್ಟವಾಗಿ ಅಚಿಂತ್ಯಪದ ಸಾಕ್ಷಾತ್ಕಾರವಾಯಿತೆ? ಇಲ್ಲವೆಂದಲ್ಲಿ ಪ್ರಭುವಿನ ಪ್ರಸಾದವಾಣಿ ಶರಣಂಗೆ ವಿರೋಧವೆ? ನೀನಾರೆಂದು ನಿನ್ನ ನಿಜವ ಅರಿತು ನಿಜಾನಂದ ಮಯನಾಗು ಎಂದು ಹೇಳಿದರೆ ಶರಣಂಗೆ ವಿರೋಧವೆ?

ಶರಣ ವಿರೋಧಿ ಲಿಂಗೈಕ್ಯ : ಮಿಗೆಮಿಗೆಯಾಗಿಹ ಮೀಸಲು ತತ್ವವರಿತ ಲಿಂಗೈಕ್ಯ , ಶಬ್ದಸೂತಕ ಸೇರದವನು. ನಿಃಶಬ್ದವೇದಿಯಾದುದರಿಂದ ಶರಣವಿರೋಧಿ ಲಿಂಗೈಕ್ಯನೆಂದು ಹೇಳಿಹರು. ಲಿಂಗೈಕ್ಯನೆಂದರೆ ನಿಃಶಬ್ದಬ್ರಹ್ಮವು ಅದಾರಿಗೆ ವಿರೋಧವಾದುದು? ವಾಙ್ಮನೋತೀತ ಅದೆಂತು ವಾಙ್ಮನವಾಗುವುದು ? ಅಚಿಂತ್ಯಪದವು ಶಬ್ದಮುಗ್ಧನಿಲವು, ನಿಸ್ಸೀಮದಲ್ಲಿ ಸೀಮಿತವ ಕಾಣಬಾರದು.

ಲಿಂಗೈಕ್ಯ ನಿಲುವು ಕೆಲವು ಶರಣರಿಗೆ ಅಸಾಧ್ಯವಾದುದರಿಂದ ಅವರಿಗೆ ಶರಣ ವಿರೋಧಿ ಲಿಂಗೈಕ್ಯವಾಗಿರಬಹುದು. ನುಡಿಗೆಡೆಗೊಡದ ಘನವು ಅರಿತವರ ಸಯ ಅರುವು ಭಾವುಕರಿಗೆ ದಕ್ಕುವ ನಿಲುವಲ್ಲ ಅವರಿಗದು ವೀರೋಧವಾಗಿ ಭಾಸವಾಗಿದೆ. ಹಾಗಾದಲ್ಲಿ ಇದಾರಿಗೆ ಪ್ರಿಯವಾದುದು. ಬಸವರಸ, ಷಟ್‌ಸ್ಥಲ ಚಕ್ರವರ್ತಿ . ಚನ್ನ ಬಸವಣ್ಣ ಮುಕ್ತಾಯಕ್ಕ ನೀಲಾಂಬಿಕೆ ಹಡಪದ ಅಪ್ಪಣ್ಣ ಸಿದ್ಧರಾಮ ಶಿವಯೋಗಿ ಅಕ್ಕಮಹಾದೇವಿ ಇನ್ನುಳಿದ ಶರಣ ಶರಣೆಯರಿಗೆಲ್ಲರಿಗೂ ಬಹುಪ್ರಿಯವಾಗಿ ಸುಖದ ಸುಖವಂತರಾಗಿಹರು. ಇದು ಕಾರಣ ಸುಖದೇಕರಸವಾಗಿಹ ಪ್ರಭುವ ಕಂಡು ಬಸವರಸ ಎಳೆಯ '' ಸಸಿಯ ಮೇಲೆ ಸಾಗರ ವರಿದಂತಾಯಿತ್ತೆನ್ನ ತನ್ನ ಭಕ್ತಿ ಆನಂದದಿಂದ ಕುಣಿ ಕುಣಿದಾಡುವೆ ಆನಂದದಿಂದ ನಲಿ ನಲಿದಾಡುವೆ ಕೂಡಲ ಸಂಗನ ಶರಣರು ಬಂದಡೆ ಉಬ್ಬಿ ಕೊಬ್ಬಿ ನಲಿದಾಡುವೆ'' ಲಿಂಗ ಒಂದಾಗಿರ್ದ ಜಂಗಮ. ಜಂಗಮ ಒಂದಾಗಿರ್ದ ಲಿಂಗ ಉಪಮೆಗೆ ತಂದು ಎರೆಡೆನ್ನಬಹುದೆ, ಶುದ್ಧ ಶಿವೈಕ್ಯ ಎಂದು ಆನಂದಮಯರಾಗಿ ಹಿರಿ-ಹಿರಿ ಹಿಗ್ಗಿ ಜಿಗಿದಾಡುತ್ತಿರುವಾಗ ಲಿಂಗೈಕ್ಯರ ಕಂಡು ಶರಣರಿಗದೆಂತು ವಿರೋಧವು ?

ಲಿಂಗಾರ್ಚಕ ಶರಣರಲ್ಲಿ ಕೆಲಬರಿಗೆ ಲಿಂಗೈಕ್ಯ ನಿಲುವು ಕಠಿಣವಾಗಿ, ಸೀಮಿತ ಜ್ಞಾನ ಸೀಮಿತ ಭಾವದಿಂದುಕ್ತರಾಗಿ ಲೋಕದವರಿಂದ ಪ್ರತಿಷ್ಠೆ ಬೆಳೆಸಿಕೊಂಡವರಿಗೆ ಇದು ಸರಿಬಾರದಾಗಿದೆ. ಪ್ರಥಮದಲ್ಲಿ ಚಾಂಗದೇವನಿಗೆ ಜ್ಞಾನೇಶ್ವರ ಮಾಹಾರಾಜ ವೀರೋಧವಾಗಿ ಕಂಡ , ಹಿಂದಿನಿಂದ ಅವರನ್ನು ಶ್ರೀ ಗುರುವಾಗಿ ಕಂಡ. ಇದರಂತೆ ಪುರ್ವಾಶ್ರಮದಲ್ಲಿದ್ದಾಗ ಸಿದ್ಧರಾಮೇಶ್ವರ ಗೋರಖನಾಥ ಲಿಂಗೈಕ್ಯಶರಣ ಪ್ರಭು ಕಂಡರೆ ವಿರೋಧವಾಗಿ ಕಂಡರು. ಹಿಂದಿನಿಂದ ಅವರನ್ನೆ ಭಾವಕ್ಕಗಮ್ಯವಾಗಿಹ ನಿರ್ನಾಮ ಜಂಗಮ, ನಿರ್ಲಿಖಿತ ಜಂಗಮವೆಂದು ಆತನ ಮಹಾನುಭವಕ್ಕೆ ಒಪ್ಪಿ ಪರವಶರಾಗಿ ಆನಂದದಿಂದ ಕುಣಿ ಕುಣಿದಾಡಿದರು.

ಅರು ಹೃದಯವುಳ್ಳ ಶರಣರಿಗೆ ಲಿಂಗೈಕ್ಯನು ಬುಹುಪ್ರಿಯನಾಗಿಹನು. ಭಕ್ತನೆಂದರೆ ಶರಣ ಶರಣನೆಂದರೆ ಲಿಂಗೈಕ್ಯನು, ಲಿಂಗೈಕ್ಯನೆಂದರೆ ತ್ರಿವಿಧ ವಿರೋಧಿ ಮಹಾಲಿಂಗೈಕ್ಯನು . ಇವರು ನಿಜವರಿತ ನಿಸ್ಸೀಮರು. ತಾನೆ ಭಕ್ತ ,ತಾನೆ ಶರಣ, ತಾನೆ ಲಿಂಗೈಕ್ಯನು, ತಾನೆ ತ್ರಿವಿಧ ವಿರೋಧಿ, ಮಹಾಲಿಂಗೈಕ್ಯ . ಸ್ಥಲವೆಂದೆನ್ನೆ ನಿಸ್ಥಲವೆಂದೆನ್ನೆ ನಿರ್ಣಯವೆನಗಾದ ಬಳಿಕ ಏನೆಂದರಿಯೆನಯ್ಯ ಕೂಡಲಚೆನ್ನಸಂಗಯ್ಯ ಲಿಂಗೈಕ್ಯವೆಂದೆನ್ನೆ ಮಹಾಲಿಂಗೈಕ್ಯವು ತನ್ನಿಂದ ತನ್ನ ಕಂಡ ನಿರ್ಣಯ. ಏನೆಂದನಲಿಲ್ಲದರುವಾಗಿಹ ಘನದಿರುವು ಇದು ಮುನ್ನ ಮುನ್ನಲಾದ ಘನ. ತನ್ನಿಂದ ತಾನಾದ ಘನ ತನ್ನ ಹೃದಯದಲ್ಲಿ ನ್ಯಸ್ತವಾಗಿಹ ಅಚಿಂತ್ಯನಿಧಿಯು . ಇದು ಕಾರಣ ಬಸವರಸ ಭಕ್ತನೆನಿಸಿಕೊಂಡರು ಮಹಾಲಿಂಗೈಕ್ಯನು , ಸಮ್ಯಜ್ಞಾನಿ ಚನ್ನಬಸವಣ್ಣನೆನಿಸಿಕೊಂಡರು . ಮಹಾಲಿಂಗೈಕ್ಯನು ವೀರ ವೈರಾಗಿನಿ ಅಕ್ಕಮಹಾದೇವಿ ಎನಿಸಿಕೊಂಡರೂ ಮಹಾಲಿಂಗೈಕ್ಯನು. ಮಾಯಾ ಕೋಲಾಹಲನೆಂದೆನಿಸಿದ ಪ್ರಭು ಕೂಡ ಮಹಾಲಿಂಗೈಕ್ಯನು ಹಾಗೂ ಇನ್ನುಳಿದ ಶರಣ ಶರಣೆಯರು. ತನ್ನಿಂದ ತನ್ನ ಅರಿತ ಹೃದಯಂಗಳೆಲ್ಲ ಮಹಾಲಿಂಗೈಕ್ಯನು ಎಂದುಹೇಳಿ ಅವರ ಅರುವು ಅರಿಯಲಿಲ್ಲದ ಅರುವು. ಮರೆಯಲಿಲ್ಲದ ಮರುಹು , ನೋಡದ ನೋಟ ಕೂಡದ ಕೂಟ ಬೆರಸಲಿಲ್ಲದ ಬೆರಗು ಇದು ಮಹಾಲಿಂಗೈಕ್ಯವಾಗಿಹ ಘನದಿರುವುಳ್ಳ ಅರುವು ಎಂದು ಹೇಳಿಹರು.

101

ಆವಲ್ಲಿ ಸರ್ವಪ್ರಪಂಚ ನಿವೃತ್ತಿಯಾಗಿಹುದು ಅದೀಗ ಬ್ರಹ್ಮಜ್ಞಾನ.
ಆವಲ್ಲಿ ಕೇವಲ ನಿಶ್ಚಿಂತವಾಗಿಹುದು ಅದೀಗ ಬ್ರಹ್ಮಜ್ಞಾನ
ಆವಲ್ಲಿ ತಾನೆಂಬ ತೋರಿಕೆ ಹುಟ್ಟದಿಹುದು ಅದೀಗ ಬ್ರಹ್ಮಜ್ಞಾನ.
ಕೂಡಲ ಚೆನ್ನಸಂಗಯ್ಯನಲ್ಲದೆ ಪೆರತೊಂದ ನರಿಯದಿಹುದೆ
ಅದೀಗ ಬ್ರಹ್ಮಜ್ಞಾನವಯ್ಯ. **॥ 1034 ॥**

ತಾತ್ಪರ್ಯ : ಆವಲ್ಲಿ ಸರ್ವ ಪ್ರಪಂಚ ನಿವೃತ್ತವಾಗಿಹುದು, ಅದೀಗ ಬ್ರಹ್ಮಜ್ಞಾನ : ಇದು ಬ್ರಹ್ಮಾಕಾರವಾದ ಹಿರಿಮೆ, ಬ್ರಹ್ಮಜ್ಞಾನವಾದವಂಗೆ ಸರ್ವಪ್ರಪಂಚ ನಿವೃತ್ತವಾಗಿಹುದು. ಬ್ರಹ್ಮವರಿತವನೆ ಬ್ರಹ್ಮಜ್ಞಾನಿಯು . ಪರಬ್ರಹ್ಮವು ಗಗನ ಸದೃಶವಾಗಿರುವ ಜ್ಞಾನಾಮೃತ. ಅದು ಕಾರ್ಯ ಕಾರಣದಿಂದತೀತವು. ಗಗನವು ಎಂದಾದರೂ ಅದು ಅತ್ತಿಂದ ಇತ್ತ, ಇತ್ತಿಂದತ್ತ, ಪೂರ್ವದಿಂದ ಪಶ್ಚಿಮಕ್ಕೆ, ಪಶ್ಚಿಮದಿಂದ ಪೂರ್ವಕ್ಕೆ ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ, ಮೇಲಿನಿಂದ ಕೆಳಕ್ಕೆ, ಕೆಳಗಿನಿಂದ ಮೇಲಕ್ಕೆ, ಪಕ್ಷಿಯಂತೆ ಚರಿಸ್ಯಾಡುವುದೆ? ಗಾಳಿಯಂತೆ ಸುಳಿದಾಡುವುದೆ? ಆವುದು ಸ್ವಗತ ಭೇದ ಸಜಾತಿ ಭೇದ, ವಿಜಾತಿ ಭೇದ ತ್ರಯಗಳಿಂದ ರಹಿತವಾಗಿದೆ. ಅದು ಸಚಿದ್ಘನವಾಗಿದೆ. ಅದು ಚರಿಸ್ಯಾಡದು, ಗಗನವು ತಾನು ಗಗನವೆಂದು ನುಡಿವುದೆ? ಅದು ಶಬ್ದಮುಗ್ಧವಾಗಿದೆ. ಅದು

ಘಟದೊಳಿರಲಿ, ಮಠದೊಳಿರಲಿ ಆವುದರೊಳಗಿದ್ದರು ತಾನು ಇದ್ದಂತೆಯೆ ಇದೆ. ಅದು ಘಟ, ಮಠದ ಕಾಯ ಕಾರಣದಿಂದ ಅತೀತವು ಹಾಗೆ ಸಚ್ಚಿದ್ಘನವು ದೇಹವೆಂಬ ಘಟದೊಳಿರಲಿ ದೇಹಿ ಎಂಬ ಭಾವದೊಳಿರಲಿ ತಾನು ಇದ್ದಂತೆಯೆ ಇದೆ. ದೇಹಭಾವಿಯಾಗಲಿ, ಸೋಹಂಭಾವಿಯಾಗಲಿ, ಚಿದಹಮ್ಮುಭಾವಿಯಾಗಿರಲಿ, ಮನವು ಮರವುಳ್ಳದ್ದಾಗಿರಲಿ ಅರುವುಳ್ಳದ್ದಾಗಿರಲಿ, ತಾನು ನುಡಿಗೆಡೆಗೊಡದ ಘನವಾಗಿದ್ದು, ಭಾವಕ್ಕಿಂಬು ಕೊಡದೆ ಇದ್ದಂತಿರುವ ಸ್ವಯಂಜ್ಯೋತಿ, ಇದುವೆ ಅಖಂಡ ಘನಪೂರ್ಣವಪ್ಪ ತನ್ನಿರುವೆ ಅರುವೆಂದರಿದ ತಾನೆ ಜ್ಯೋತಿ. ಅರಿವುಡೆ ತಾನೆ ಬ್ರಹ್ಮ ತನ್ನ ತಾನರಿವುಡೆ ಅದೆ ಬ್ರಹ್ಮಜ್ಞಾನ. ಇಲ್ಲಿ ಪ್ರಪಂಚ ಸತ್ಯಮಿಥ್ಯ ಎಂಬುದಕ್ಕೆ ಸಂದಿಲ್ಲ. ಪರಮಾರ್ಥ ಸತ್ಯಮಿಥ್ಯ ಎಂಬ ನುಡಿಗೂ ಸಂದಿಲ್ಲ, ಇವೆರಡಕ್ಕೂ ಸಮ ಸಮ. ತಾನು ಎಂಬ ನುಡಿಗೂ ಸಂದಿಲ್ಲದ ಘನದಿರುವು. ತನ್ನದು ನುಡಿ ನಡೆಗೂ ಮಿಕ್ಕಿ ಮೀರಿ ನಿಂತ ನಿಲುವು, ಮನಕ್ಕೆ ಮೇರೆದಪ್ಪಿದ ನಿಲುವು, ಇದು ತನ್ನ ನಿಜಧಾಮ.

ಬ್ರಹ್ಮಜ್ಞಾನಿಗೆ ತನಗಾಗಿ ಮಾಡುವ ಕರ್ತವ್ಯವು ಇತಿಯಾಗಿರುವದು ಪರರಿಗಾಗಿ ಮಾಡುವ ಕರ್ತವ್ಯವು ಇತಿಯಾಗಿರುವುದು. ಏಕೆಂದರೆ ಪರಬ್ರಹ್ಮಕ್ಕೆ ಪರಾತ್ಪರ ಪರವಸ್ತುವಿಗೆ ಅದಾವ ಕರ್ತವ್ಯ? ಮರವಿನ ಕರ್ತವ್ಯ ಇತಿಯಾಗಿದೆ, ಅರುವಿನ ಕರ್ತವ್ಯವು ಇತಿಯಾಗಿದೆ. ಚಿದಾಕಾಶನಾದ ತಾನು ನಿರುಪಾಧಿಯು, ನಿರಾಲಂಬನು ನಿಸ್ಸಂಗನು ಅಹಮಿಲ್ಲದ ಚಿದ್ಘನನು, ಚಿದ್ಘನನು ಅಹಂಕಾರಿಯಾದಲ್ಲಿ ಕರ್ತೃತ್ವವುಂಟು, ಭೋಕ್ತೃತ್ವವುಂಟು, ಅಕಲ್ಪಿತ ಘನವು ಅದೆಂದು ಕಲ್ಪಿತ ಪುರುಷನಾಯಿತು. ಕಲ್ಪಿತನೆ ಆಗದಿರುವಲ್ಲಿ ಮರೆವೆಂಬುದಿಲ್ಲ ಅರುವೆಂಬುದಿಲ್ಲ. ನಾಮ ಎನಲಿಲ್ಲ ಅನಾಮಿ ಎನಲಿಲ್ಲ ರೂಪನೆನಲಿಲ್ಲ ಅರೂಪ ನೆನಲಿಲ್ಲ , ಸತ್ ಎನಲಿಲ್ಲ ಅಸತ್ ಎನಲಿಲ್ಲ , ..ಚಿತ್ ಎನಲಿಲ್ಲ ಅಚಿತ್ ಎನಲಿಲ್ಲ ಅನಂದ ಎನಲಿಲ್ಲ ನಿರಾನಂದ ನೆನಲಿಲ್ಲ. ಇಲ್ಲುದುದು ಎಲ್ಲಿಪ್ಪುದೊ! ಏಂತಿರ್ದಂತೆ ಸಹಜ ಅದು ಅಂಚಿತ್ಯವು ತಾನೆ.

ಹೇಳಬಾರದ ಘನ ತೋರಲೆಂದೇನೊ? ತೋರಬಾರದ ಘನ ಹೇಳಲೆಂದೇನೊ? ಸರಸಂಧಾನ ಪರಿಯಲ್ಲ, ಗುಹೇಶ್ವರಾ ಲಿಂಗವದು ಕಲ್ಪಿತವಲ್ಲ ನೋಡಾ. ಪ್ರಭುವಿನ ಮಹದರುವು ತನ್ನಿಂದ ತನಗೆ ವೇದ್ಯವಾದವಂಗೆ ಸ್ವಾಭಾವಿಕವಾಗಿ ಸಹಜ ಸರ್ವಪ್ರಪಂಚ ನಿವೃತ್ತವಾಗಿಹುದು ಅದು ಬ್ರಹ್ಮಜ್ಞಾನ.

ಆವಲ್ಲಿ ಕೇವಲ ನಿಶ್ಚಿಂತವಾಗಿಹುದು ಅದೀಗ ಬ್ರಹ್ಮಜ್ಞಾನ : ಕೇವಲ ನಿಶ್ಚಿಂತನಾದುದೆ ಬ್ರಹ್ಮಜ್ಞಾನದ ಹಿರಿಮೆ. ಇದು ತೃಪ್ತರೂಪ ತೃಪ್ತಿ ಹೊಂದಿದವನ ನಿಲುವು. ಈ ತೃಪ್ತರೂಪ ತೃಪ್ತಿ, ಇದಾವ ಊಟದಿಂದಾದ ತೃಪ್ತಿ! ಎಂದೆಂದು ಉಣ್ಣದ ಊಟ. ಒಂದನುವ ಮಾಡಿ ಉಂಡ ಊಟ. ಜ್ಞಾನಾಮೃತವು ಇಲ್ಲಿ ಆಹಾರವಾಯಿತು, ಶ್ರೋತೃವಿನ ಶ್ರೋತ್ರವಾಗಿ ಹೃದಯದ ಹೃದಯವಾದುದೆ ಉಂಡ ಊಟ . ಇದು ವಾಙ್ಮನವಾಗಿ ಉಂಡವರ ಊಟವಲ್ಲ. ನೆನಹು ನಿರ್ಣಯದಿಂದುಕ್ತರಾದವರ ಊಟವಲ್ಲ, ಉಭಯ ಚಿಂತನ ಕೆಟ್ಟು ಅಚಿಂತ್ಯ ಘನವೆ ತನ್ನಿರುವು ಆದವರ ಊಟ . ಅಚಿಂತ್ಯವು ಚಿಂತನೆಗೆ ನಿಲುಕದ್ದಾದುದರಿಂದ ನಿಶ್ಚಿಂತತೆಯು ನಿಜನಿವಾಸವಾಗಿಪ್ಪುದು.

ಪೌರ್ಣಮಿ ಚಂದ್ರಮನು ಬೆಳಗುವಲ್ಲಿ ಅಲ್ಲಿ ಬಿಸಿಲಿನ ತಾಪವುಂಟೆ? ಅಲ್ಲಿ ಶೀತಲವು ಪ್ರಶಾಂತ ನೆಲೆಗೊಂಡ ನಿಲುವು ಹೇಗೊ ಹಾಗೆ ಅಚಿಂತ್ಯತ್ವ ಅರಿತವರ ನಿಲುವು. ಆವಾವ ಚಿಂತನಗೆ ಸಂದಿಲ್ಲದಿಪ್ಪ ನಿಲುವು. ಚಿಂತನ ಕೆಟ್ಟು ನಿಶ್ಚಿಂತವಾಗಿಪ್ಪ ನಿಲುವು ಆದುದರಿಂದ ಆವಲ್ಲಿ ಕೇವಲ ನಿಶ್ಚಿಂತವಾಗಿಹುದು ಅದೀಗ ಬ್ರಹ್ಮಜ್ಞಾನವೆಂದು ಹೇಳಿದ್ದಾರೆ.

ಆವಲ್ಲಿ ತಾನೆಂಬ ತೋರಿಕೆ ಹುಟ್ಟದಿಹುದು ಅದೀಗ ಬ್ರಹ್ಮಜ್ಞಾನ : ಎಲ್ಲಿ ನಾನೀನೆಂಬುದಿದೆ,

ಅಲ್ಲಿ ವ್ಯಷ್ಠಿ ಶರೀರವಿದೆ ಸಮಷ್ಠಿ ಶರೀರವಿದೆ. ವಿಶ್ವವೆ ಇದೆ, ಅಲ್ಲಿ ತಾನೆಂಬ ತೋರಿಕೆ ಹುಟ್ಟುವದು ಸಹಜವಾಗಿದೆ.''ನೀ ನಾನೆಂಬ ಭಾವ ವಾರಿಂದಾಯಿತ್ತು ಹೇಳಾ, ನೀನೆಂಬುದೆ ಅಜ್ಞಾನ ನಾನೆಂಬುದೆ ಮಾಯಾಧೀನ. ನೀನೆನ್ನದೆ ನಾನೆನ್ನದೆ ಇಪ್ಪ ಸುಖವ ಭಿನ್ನವಿಲ್ಲದೆ ಅರಿಯಬಲ್ಲಡೆ ಆಸುಖವು ನಿಮಗರ್ಪಿತ ಕಾಣಾ ಗುಹೇಶ್ವರ'' ಆವ ತತ್ವಜ್ಞಾನಿಯಿರಲಿ ನುಡಿಗೆಡೆಗೊಡದ ಘನವೇ ತನ್ನಿರುವಿನ ಅರುವು ಎಂಬುದು ತನ್ನಿಂದ ತನಗೆ ವೇಧ್ಯವಾಗುವವರೆಗೂ ತಾನೆಂಬ ತೋರಿಕೆ ಹೋದಂತೆ ಮಾಡುತ್ತದೆ. ಪುನಃ ಮತ್ತು ಬರುತ್ತದೆ. ಆರಲ್ಲಿ ನೀನೆನ್ನದ, ನಾನೆನ್ನದ ಇಪ್ಪ ಸುಖವ ಭಿನ್ನವಿಲ್ಲದೆ ಅರಿಯುತ್ತಾನೆ ಆಗ ತನು ನಷ್ಟ ,ಮನ ನಷ್ಟ, ನೆನಹು ನಷ್ಟ ,ಭಾವ ನಷ್ಟ ,ಜ್ಞಾನನಷ್ಟ ಇಂತಿ ಪಂಚ ನಷ್ಟವಾದುದರಿಂದ ನಾನೆಂಬುದು ನಷ್ಟ, ನೀನೆಂಬುದು ನಷ್ಟವಾದಲ್ಲಿ ಎನೊಂದುಸರಲು ಬಾರದ ಅಖಂಡಿತ ಘನ ಪೂರ್ಣ ಪರಮಾನಂದವು ಪ್ರಜ್ವಲಿಸುವಲ್ಲಿ, ತಾನೆಂಬ ತೋರಿಕೆ ಅದೇತರದು ? ಆರಲ್ಲಿ ಯತಾರ್ಥ ಜ್ಞಾನವಿಲ್ಲ ಅಲ್ಲಿ ತಾನೆಂಬ ತೋರಿಕೆ ಬಿಡದು. ಈ ತೋರಿಕೆ ನಾನಾ ವಿಧದಲ್ಲಿ ಕಾಣಿಸುವುದು. ವಿಷಯಾಸಕ್ತಿವುಳ್ಳವಂಗೆ ನಾಮ ರೂಪಂಗಳ ತೋರಿಕೆ, ವೈರಾಗ್ಯವಂತನಿಗೆ ನಾಮರೂಪಂಗಳ ಮಿಥ್ಯಾತೋರಿಕೆ, ಯೋಗಿಗೆ ತನ್ನ ಮನವು ಅಭ್ಯಾಸದಲ್ಲಿ ಲೀಯವಾದ ತೋರಿಕೆ ಅಂದರೆ ಕೂಡುವ ಅಗಲದ ತೋರಿಕೆ. ಪರಮಾರ್ಥದವರಿಗೆ ಸಚ್ಚಿದಾನಂದ ನಾನೆಂಬ ತೋರಿಕೆ, ಪರಿಪೂರ್ಣ ಪರಬ್ರಹ್ಮವೆ ತಾನೆಂಬ ತೋರಿಕೆ , ಸರ್ವಂ ಖಿಲಿದ್ವಂ ಬ್ರಹ್ಮವೆಂಬ ತೋರಿಕೆ ಬಿಡದು. ತಾನಾರೆಂದರಿತವಂಗೆ ನುಡಿಗೆಡೆಗೊಡದ ಘನವೆಂಬುದು ತನ್ನಿಂದ ತನಗೆ ಸ್ವತಃ ವೇದ್ಯವಾದುದರಿಂದ ಅಲ್ಲಿ ತಾನೆಂಬ ತೋರಿಕೆ ಹುಟ್ಟದಂತಾಗಿದೆ. ಇದು ಕಾರಣ ಆವಲ್ಲಿ ತಾನೆಂಬ ತೋರಿಕೆ ಹುಟ್ಟಹುದು ಅದೀಗ ಬ್ರಹ್ಮಜ್ಞಾನ ಎಂದು ಹೇಳಿಹರು.

ಕೂಡಲಚೆನ್ನಸಂಗಯ್ಯನಲ್ಲದೆ ಪೆರತೊಂದ ನರಿಯದಿಹುದು ಅದೀಗ ಬ್ರಹ್ಮಜ್ಞಾನವಯ್ಯ : ಎಲ್ಲಿ ನೋಡಿದಡಲ್ಲಲ್ಲಿ ಕೂಡಲಚೆನ್ನಸಂಗಯ್ಯನಲ್ಲದೆ ಅನ್ಯವ ನರಿಯದಿಹುದೆ ಬ್ರಹ್ಮಜ್ಞಾನದ ಘನವು . ಇದು ಅರುವಿಂಗರುವಾಗಿಹ ದಿವ್ಯದೃಷ್ಠಿ, ಸ್ವದೃಷ್ಠಿ ,ಇಲ್ಲಿ ಪ್ರಕಾಶಿತ ಪ್ರಕಾಶಕ ಎಂಬ ವಿಭಾಗ ದೃಷ್ಠಿಗಿಂಬಿಲ್ಲ ಅರಿತೆ ಅರಿಯನೆಂಬ ವಿಭಾಗ ದೃಷ್ಠಿಗಿಂಬಿಲ್ಲ. ಅಖಂಡ್ಯೆಕರಸನಾಗಿಹ ತಾನೊಂದೆ ಸತ್ಯವು. ಕೂಡಲಚೆನ್ನಸಂಗಯ್ಯ ತನಗಿಂತನ್ಯವಾದುದಿಲ್ಲ , ತನ್ನ ನರಿಯದ ಕಾರಣ ಕೂಡಲಚೆನ್ನಸಂಗಯ್ಯ ಬೇರಾಗಿದ್ದುದು ಭಾಸವಾಯಿತು. ತನ್ನ ಅರಿತುದರಿಂದ ತಾನೆ ಅಖಂಡ್ಯೆಕರಸ ನಾದುದರಿಂದ ತನ್ನ ಹೊರ್ತು ಅನ್ಯ ಆವಾವುದಕ್ಕೂ ಇರಲು ಸಂದಿಲ್ಲವಾದುದರಿಂದ ತನ್ನನ್ನೆ ಕಾಣುವುದು ಇದು ಬ್ರಹ್ಮಜ್ಞಾನದ ಹಿರಿಮೆ .

102

ಬಂದ ಬಟ್ಟೆಯ ಹೊದ್ದದಾತ ಲಿಂಗೈಕ್ಯನು
ಹಿಂದು ಮುಂದರಿತು ಸಂದೇಹವಿಲ್ಲದಾತ ಲಿಂಗೈಕ್ಯನು
ಶ್ರೀಗುರು ಏಕಾಂತ ವೀರ ಸೊಡ್ಡಳನಲ್ಲಿ
ತನ್ನ ತಾ ಮರೆದಾತ ಲಿಂಗೈಕ್ಯನು .

ತಾತ್ಪರ್ಯ : ಬಂದ ಬಟ್ಟೆಯ ಹೊದ್ದದಾತ ಲಿಂಗೈಕ್ಯನು : ಲಿಂಗೈಕ್ಯನಾರು? ಬಂದ ಬಟ್ಟೆಯ ಹೊದ್ದ ದಾತ ಅಲ್ಲವೆ? ಬಂದ ಬಟ್ಟೆ ಅದಾವುದು? ಹೊಲೆ ಹೊಲೆ ಎಂದನಯ್ಯಾ ಬಸವಣ್ಣ, ಹೊಲೆ ಹುಟ್ಟಿದ ಮೂರು ದಿನಕ್ಕೆ ಪಿಂಡಕ್ಕೆ ನೆಲೆಯಾಯಿತ್ತು . ನರರಿಗೆ ಹೊಲೆ, ಸುರರಿಗೆ ಹೊಲೆ,

ಹರಿಬ್ರಹ್ಮಾದಿಗಳಿಗೆ ಹೊಲೆ. ಇಂತಿ ಹೊಲೆಯಲ್ಲಿ ಹುಟ್ಟಿ ಹೊಲೆಯ ನತಿಗಳದೆನೆಂಬ ಉಭಯ ಭ್ರಷ್ಠರ ಮುಖವ ನೋಡಲಾಗದು ಕಾಣಾ ಕೂಡಲ ಚೆನ್ನಸಂಗಮದೇವಾ.

ಬಂದ ಬಟ್ಟೆ ಹೊದ್ದದಾತನೆಂದಲ್ಲಿ ಹುಟ್ಟಿದುದೆಲ್ಲವು ಬಂದ ಬಟ್ಟೆಯು. ಅದು ತಾನಾಗದವನೆ ಹೊದ್ದದವನು. ಲಿಂಗೈಕ್ಯನೆಂದಲ್ಲಿ ಆರು?'' ತನು ಬಯಲು ನಿರವಯದೊಳಡಗಿತ್ತು. ಮನ ಬಯಲು ನಿರವಯದೊಳಗಡಗಿತ್ತು. ಭಾವ ಬಯಲು ನಿರವಯದೊಳಗಡಗಿತ್ತು ಬಯುಲ ಬಯಲು ಬೆರಸಿ ಬಯಲೆ ಆಯಿತ್ತು. ಕೂಡಲಚೆನ್ನಸಂಗಯ್ಯನೆಂಬ ನುಡಿಯಡಗಿತ್ತು'' ತನುವೆಂಬುದು ಬಂದ ಬಟ್ಟೆಯಲ್ಲವೆ? ಇದುವೆ ನಿರವಯದೊಳಡಗಿತ್ತು. ಮನವೆಂಬುದು ಬಂದ ಬಟ್ಟೆಯಲ್ಲವೆ, ಭಾವವೆಂಬುದು ಬಂದ ಬಟ್ಟೆಯಲ್ಲವೆ, ಇವೆಲ್ಲವುಗಳು ನಿರವಯದೊಳಡಗಿದಲ್ಲಿ ಬಯಲು ಬಯಲು ಬೆರಸಿ ಬಯಲೆ ಆಯಿತ್ತು. ಕೂಡಲಚೆನ್ನಸಂಗಯ್ಯನೆಂಬ ನುಡಿಯಡಗಿದ್ದುದು ಲಿಂಗೈಕ್ಯವು.

ವನದ ಕೋಗಿಲೆ ಮನೆಗೆ ಬಂದರೆ ತನ್ನ ವನವ ನೆನೆವುದು ಮಾಣ್ಬುದೆ? ಮಲೆಯ ಗಜವು ಮನೆಗೆ ಬಂದರೆ ತನ್ನ ವನವ ನೆನೆವುದು ಮಾಣ್ಬುದೆ? ಕೂಡಲಸಂಗನ ಶರಣರು ಮರೆದು ಮರ್ತ್ಯಕ್ಕೆ ಬಂದರೆ ತಮ್ಮ ಆದಿ ಮಧ್ಯಂತರಂಗದ ಲಿಂಗವ ನೆನೆವುದು ಮಾಣ್ಬುದೆ? ಲಿಂಗೈಕ್ಯ ವನದ ಕೋಗಿಲೆಯಂತೆ ಮಲೆಯ ಗಜದಂತೆ ವನದ ಕೋಗಿಲೆ ವನವ ನೆನೆಯುವುದಲ್ಲದೆ ಮನೆಯ ನೆನೆಯದು. ಮಲೆಯ ಗಜ ರಾಜ ದರ್ಭಾರದಲ್ಲಿದ್ದರೂ ಮಲೆಯ ನೆನೆಯುವದಲ್ಲದೆ ರಾಜಧಾನಿ ನೆನೆಯದು. ಲಿಂಗೈಕ್ಯಶರಣ ಮರೆದು ಮರ್ತ್ಯಕ್ಕೆ ಬಂದರೂ ತನ್ನ ಆದಿಯ ಮರೆಯ, ಮರೆಯದ್ದರಿಂದ ಆವಾಗಲೂ ತನ್ನ ಅಂತರಂಗದಲ್ಲಿ ಲಿಂಗವರಿತು ಲಿಂಗವ ಬೆರೆತು ಲಿಂಗವಾಗಿಪ್ಪನು ನೋಡಾ. ಇದು ಕಾರಣ ಬಂದ ಬಟ್ಟೆಯ ಹೊದ್ದದಾತ ಲಿಂಗೈಕ್ಯನು ಎಂದು ಹೇಳಿಹರು.

''ಲಿಂಗೈಕ್ಯ ಅಳಿವನಲ್ಲ, ಉಳಿವನಲ್ಲ ಘನಕ್ಕೆ ಗಮನನಲ್ಲ, ಮನಕ್ಕೆ ಸಾಧ್ಯನಲ್ಲ ತನ್ನ ತಪ್ಪಿಸಿ ಇದಿರನೊಪ್ಪಿಸಿದ ಭಿನ್ನಭಾವಿಯಲ್ಲ ಗುಹೇಶ್ವರನ ಶರಣ ಅಂತಿಂತನ ಬಾರದು ಕೇಳಾ'' ಲಿಂಗೈಕ್ಯಅಳಿದವನಲ್ಲ ಉಳಿದವನಲ್ಲ ಆರು ಉಳಿದವರಾಗಿಹರು, ಅವರು ಅಳಿದವರು ಆಗುತ್ತಾರೆ. ಇವರುಗಳು ಬಂದ ಬಟ್ಟೆಯ ಹೊದ್ದವರು. ಜೀವನು, ಆ ಜೀವನು ಇವುಗಳೆ ತಾನು ತನ್ನದೆಂಬ ಅಹಂ ಮಮ ಹೊದ್ದದವನು, ಅವನು ಲಿಂಗೈಕ್ಯನಾಗಿಹನು. ಅವರು ಕಲ್ಪಿತ ಪುರುಷನ ಹತ್ತು ಭಾವಂಗಳ ಹೊದ್ದದವರು. ತನು, ಇಂದ್ರಿ, ಪ್ರಾಣ, ಮನ, ಬುದ್ಧಿ ಇವು ಐದು ಮರವಿನಿಂದ ಬಂದ ಭಾವುಗಳು. ಸಾಕ್ಷಿ ಪ್ರತ್ಯಗಾತ್ಮ ಪರಮಾತ್ಮ ಅಸಂಗ ಸ್ವಯಂಪ್ರಕಾಶವೆಂದು ಇವು ಐದು ಅರುವಿನಿಂದ ಬಂದವುಗಳು. ಈ ಹತ್ತು ಭಾವನೆಗಳು ಬಂದ ಬಟ್ಟೆಗಳು . ಇವುಗಳು ಹೊದ್ದದಾತ ಲಿಂಗೈಕ್ಯನು. ಭಾವಕ್ಕಿಂಬು ಕೊಡದವನು. ಶಬ್ದವೆ ಮೀಸಲಾಗಿಹ ಘನವಂತನು. ಬಂದ ಬಟ್ಟೆಯ ಹೊದ್ದುವದದೆಂತು!

ಭಾವ ನಿರ್ಭಾವವಾಗಿ ನಿಜದಲ್ಲಿದ್ದ ಮಹಾಮಹಿಮನು ಅವನೆಂತು ಭಾವರೂಪ ಬಟ್ಟೆಯ ಹೊದ್ದುವುದು? ಮನರೂಪಿ ಸಂಕಲ್ಪ ವಿಕಲ್ಪ ಹೊದ್ದದವನು. ಇಲ್ಲದ ಮನ ಇಲ್ಲವಾದವಂಗೆ ಅವನೆಂತು ಸಂಕಲ್ಪ ಕಾಣುವನು, ಅವನೆಂತು ವಿಕಲ್ಪ ಕಾಣುವನು. ಕಲ್ಪಿತ ನಷ್ಟವಾದವನಿಗೆ ಅಂಗನೆಂದು ಲಿಂಗನೆಂದು ಕಲ್ಪಿಸುವದಾದರೂ ಹೇಗೆ? ಅವನಿಗೆ ಸಂಗಿ ಎಂದು ನಿಸ್ಸಂಗಿ ಎಂದು ಹೇಗೆ ಹೇಳುವುದು. ಪ್ರತ್ಯಗಾತ್ಮ ಪರಮಾತ್ಮನೆಂದು ಕಲ್ಪಿಸುವುದಾದರೂ ಹೇಗೆ? ಅಕಲ್ಪಿತ ಘನವಪ್ಪ ತನ್ನಿರುವೆ ಅರುವೆಂದರಿದ ಮಹಾಂತ. ಬಂದ ಬಟ್ಟೆಯ ಹೊದ್ದದವನು. ಇದು ಕಾರಣ ನೆನಹೆಂಬ ಬಟ್ಟೆಯ ಚಿಂತನವೆಂಬ ಬಟ್ಟೆಯ. ನಾನು ನಾನೆಂಬ ಬಟ್ಟೆಯು ಬಂದ ಬಟ್ಟೆಯ ಹೊದ್ದದವನು ಅಹಮಿಲ್ಲದ ಚಿದ್ಘನ ಅಹಂಭಾವಿ ಯಾಗುವದದೆಂತು! ನಿರ್ವಿಕಲ್ಪವೆಂಬ ನಿಜದಲ್ಲಿರ್ದ ಮಹಾಂತ ಅವನೆಂತು ಪ್ರಕೃತಿ, ಪುರುಷನೆಂಬ

ಕಲ್ಪಿತವ ಹೊದೆಯುವನು. ನಾನೀನೆಂಬುದಕ್ಕೂ ತೆರೆಹಿಲ್ಲದ ಘನ. ನಾ ಆದವನಲ್ಲ ನೀ ಆದವನಲ್ಲ ಅಹಂಭಾವಿಯಲ್ಲ, ನಿರಹಂಭಾವಿಯಲ್ಲ. ಭಾವಕ್ಕಿಂಬುಕೊಡದ ಘನ . ಜೀವ ಪರಮರ ಭಾವವಾದರೂ ಭಾವಿಸುವದದೆಂತು.

ಲಿಂಗೈಕ್ಯನು ಅನುಪಮನು, ಉಪಮೆಗೊಳಪಡದವನು ಆಗಿರುವದರಿಂದ ಬಂದ ಬಟ್ಟೆಯ ಹೊದ್ದದಾತ ಲಿಂಗೈಕ್ಯನೆಂದು ಹೇಳುವುದು ಪೂರ್ಣಸಮಂಜಸವಾದುದಲ್ಲ. ಏಕೆಂದರೆ ಅನುಪಮವಾಗಿರುವಲ್ಲಿ, ಶರಣನೆಂಬುದಾದರೂ ಹೇಗೆ? ಐಕ್ಯನೆಂಬುದಾದರು ಹೇಗೆ? ಆ ಘನ ಮಹಿಮಂಗೆ ಅಂತವ ನೆನಬಾರದು ಇಂತವ ನೆನಬಾರದು, ಅವರ್ಣೀಯ ಘನನು ವರ್ಣನೆ ಗೊಳಪಡುಬಹುದೆ?

ಹಿಂದು ಮುಂದರಿತು ಸಂದೇಹವಿಲ್ಲದಾತ ಲಿಂಗೈಕ್ಯನು. ಮಹಾಕಾಶ ಅಂದು, ಇಂದು ಎಂದೆಂದೂ ಇದ್ದಂತಿದ್ದ ಘನ. ಯುಗಂಗಳ ಹಿಂದೆಯು ಹಾಗೆ ಇದೆ, ಇವು ಬಂದು ಹೋಗಿ ಮತ್ತೊಂದು ಬರುವಲ್ಲಿ ಹಾಗೆ ಇದೆ. ನಗರಗಳು ಗ್ರಾಮಂಗಳ ಹುಟ್ಟದ ಮುನ್ನ ಹಾಗೆ ಇದೆ. ಇವುಗಳು ನಷ್ಟವಾಗುವಲ್ಲಿ ಇದ್ದಂತೆಯೆ ಇದೆ. ಇದಲ್ಲದೆ ಘಟಂಗಳು ಹುಟ್ಟದ ಮುನ್ನ ಹುಟ್ಟಿದ ನಂತರ ಹಾಗೆ ಇದೆ. ಕೊನೆಗೆ ಇವುಗಳು ನಷ್ಟವಾದರೂ ಇದ್ದಂತೆ ಇದೆ. ಹಾಗೆ ಲಿಂಗೈಕ್ಯನು ಶರೀರ ರೂಪಿ ಉಪಾಧಿ ಸಂಗವಾಗದ ಮುನ್ನವು ಹಾಗೆಯೆ , ಸಂಗವಾದರೂ ಹಾಗೆಯೆ , ಇದು ನಷ್ಟವಾದರೂ ಹಾಗೆಯೆ , ಲಿಂಗವರಿತು ಲಿಂಗವಾಗಿಹ ಲಿಂಗೈಕ್ಯ ಇದ್ದಂತಿಹನು. ಏಕೆಂದರೆ ಮುನ್ನ ಮುನ್ನಲಾದ ಘನ, ತನ್ನಿಂದ ತಾನಾದ ಘನ. ಲಿಂಗದಲ್ಲಿ ಉದಯಿಸಿದ ಲಿಂಗೈಕ್ಯ ಲಿಂಗ ಲಿಂಗವೆ ಆಗಿಹ ಘನ ಮಹಿಮ. ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ ಘನ ತನ್ನಿರುವೆಂದರಿದ ಅವರ್ಣೀಯನು. ಅರುವರಿತು ತಾನೆ ತಾನಾದ ಸಂಕೇತ ಅರಸದ ಸಂಕೇತ ಶಬ್ದಮುಗ್ದನಾಗಿಹ ಸಂಕೇತ ಆ ಮಹಾಂತ ಉದಯಾಸ್ತ ಕಾಣದ ನಿಜ ಚಿದ್ರೂಪನಾಗಿರ್ದ ಘನ. ಇದು ಕಾರಣ ಮುನ್ನ ಮುನ್ನಲಾದ ಘನ ತನ್ನಿಂದ ತಾನಾದ ಘನನಾದುದರಿಂದ ಯುಗಂಗಳ ಹಿಂದೆಯೂ ತಾನೆ ಆಗಿರುವುದರಿಂದ, ಹಿಂದು ಮುಂದರಿತು ಸಂದೇಹವಿಲ್ಲದಾತ. ಲಿಂಗೈಕ್ಯನ ಉಪಮಿಸುವದದೆಂತು, ಹಿಂದೆಯು ತಾನೆ, ಮುಂದೆಯೂ ತಾನೆ, ಅಂದು ತಾನೆ, ಇಂದು ತಾನೆ, ಎಂದೆಂದೂ ತಾನೆ. ತನ್ನಹೊರ್ತು ಅನ್ಯವ ಕಾಣದವಂಗೆ ಶಬ್ದಕ್ಕೆ ತೆರೆಹಿಲ್ಲ ನೋಡಾ.

ಶ್ರೀಗುರು ಏಕಾಂತ ವೀರ ಸೊಡ್ಡಳನಲ್ಲಿ ತನ್ನ ತಾ ಮರೆದಾತ ಲಿಂಗೈಕ್ಯನು ಎಂದು ಹೇಳಿದುದು. ಶ್ರೀಗುರು ಎಂಬುದು ಎರಡಾದ ತತ್ವವಲ್ಲ. ಒಂದು ಮಾಡುವ ತತ್ವದಲ್ಲಿ ಅದು ಸಮತೆ ಸಯವಾದ ಘನ ನಿರುಪಮ ತತ್ವ. ತಾನೆ ತಾನಾದ ಘನ. ನಿರಂತರವಾಗಿಹ ಮಂಗಳಮಯ. ಅದು ಅಪಾರ ಕೊನೆ ಮೊದಲು ಕಾಣದ ಘನವಾದುದರಿಂದ ಏಕಾಂತವೀರ ಸೊಡ್ಡಳ. ಈ ಘನ ತತ್ವ ತನ್ನ ತಾ ಮರೆತುದೆ ಲಿಂಗೈಕ್ಯವೆಂದು ಹೇಳಿಹರು. ನಿದ್ರೆಯಲ್ಲಿ ತನ್ನ ತಾ ಹೇಗೆ ಮರೆತಿರುವರೋ ಹಾಗೆ ನಿಕ್ರಿಯವಾದ ಶ್ರೀಗುರು ತತ್ವ ನಿರಂತರವಾಗಿಹ ಮಂಗಳಮಯ. ಅದರಲ್ಲಿ ತನ್ನ ತಾ ಮರೆದಿಪ್ಪುದೆ ಲಿಂಗೈಕ್ಯವೆಂದು ಹೇಳಿಹರು.

103

ಶಿವಯೋಗಿ ನಿಭ್ರಾಂತನೆ ಶರಣ ಕರ್ಮಕಾಯನಲ್ಲ,
ಕಾಲ ಕಲ್ಪಿತನಲ್ಲ ಶರಣನು ಸಂಕಲ್ಪ ವಿರಹಿತನು.
ಅವರವರ ಬೆರಸಿಪ್ಪ ತನ್ನ ಪರಿ ಬೇರೆ, ಶರಣ ನಿರಂತರ ಸುಖಿ
ಕೂಡಲಚೆನ್ನಸಂಗನ ಶರಣ ಪ್ರಪಂಚಿನೊಳಗಿರ್ಪ ತನ್ನ ಪರಿ ಬೇರೆ. || 530 ||

ತಾತ್ಪರ್ಯ : ಶಿವಯೋಗಿ ನಿಭ್ರಾಂತ, ನಿಭ್ರಾಂತನಾಗಿರುವುದರಿಂದ ಶರಣ ಶಿವಯೋಗಿ . ಆರು ಸುಖದ ಸುಖಿಯೆ ಅವರು ಶಿವಯೋಗಿ. ಶಿವನೆಂದರೆ ಭೇದಿಸಬಾರದಿಪ್ಪ ಅಭೇದ್ಯ ಶಿವ.ವಾಙ್ಮನೋತೀತ ಭಾವಕ್ಕಿಂಬಿಲ್ಲ ಶಬ್ದಮೀಸಲು ನುಡಿಗೆಡೆಗೊಡದ ಘನನು, ಆರು ನುಡಿಗೆಡೆಗೊಡದ ಘನವಾಗಿಹರು ಅವರು ಶಿವ. ಶಿವನೆಂಬುದು ಸುಖ,ಸ್ವಸುಖದ ಸುಖವೆ ಶಿವಯೋಗಿ. ಶಿವ ಶಿವ ಎಂದು ಸಚ್ಚಿದಾನಂದ ಸಚ್ಚಿದಾನಂದ ಎಂದು ಹಲಬುವವರು, ಅವರು ಶಿವನ ಅರಿತವರಲ್ಲ. ಆರು ಹಲುಬದವರು ಅವರು ಅರಿತವರು, ಅರಿತವನು ಸಚ್ಚಿದಾನಂದ ಸಚ್ಚಿದಾನಂದ ವೆಂದು ಹಲುಬುವವನಲ್ಲ. ಸಚ್ಚಿದಾನಂದವದು ನಡೆ ನುಡಿಗೂ ಮೀರಿದ ಘನ. ಅದು ವರ್ಣಾತೀತ. ಇದು ಹಲುಬುವವರ ಇರವು ಆಗದು. ಇದು ತನ್ನಿಂದ ತನ್ನ,ಅರಿತವರ ಇರವು ಆಗಿದೆ.

ಶಿವಯೋಗಿ ನಡೆ ನುಡಿಯಾಗದವನು. ಅರುವಿನ ಅರುವು, ವಾಙ್ಮನೋತೀತ ವರ್ಣಾತೀತ. ಇದು ಹಲಬುವವರ ಜ್ಞಾನವಾಗದು. ಇದು ಅರುವರಿತವರ ಜ್ಞಾನವಾಗಿದೆ. ಶಿವಯೋಗಿ ನುಡಿಯಾಗದವನು ನಡೆಯಾಗದವನು.ಅರಿಯಲಿಲ್ಲದ ಅರುವು, ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದು ಅರಿದವನು ಶಿವಯೋಗಿ. ಪರಮಾನಂದ ಶಿವಯೋಗಿ . ಶಬ್ದಮುಗ್ಧ ಅಚಿಂತ್ಯತ್ವ ಕರಿಗೊಂಡುದೆ ಶಿವಯೋಗಿ. ನೆನಹು ನಿರ್ಣಯಕ್ಕೆ ಮಿಕ್ಕಿ ಮೀರಿ ನಿಂತುದೆ ಶಿವಯೋಗಿ ಚಿದ್ಘನವೆಂಬುದೆ ಅರಿತುದರಿಂದ ಚಿತ್ ಎನಲಿಲ್ಲ ಅಚಿತ್ ಎನಲಿಲ್ಲ ಸತ್ ಎನಲಿಲ್ಲ ಅಸತ್ ಎನಲಿಲ್ಲ ಆನಂದ ನಿರಾನಂದ ಎನಲಿಲ್ಲ. ಅನುಪಮ ನಿರ್ವಾಣ ಹೇಳುವದದೆಂತು?

ನಿಭ್ರಾಂತನೆ ಶರಣ. ಬ್ರಹ್ಮವರಿತವರು ನಿಭ್ರಾಂತರು. ನುಡಿಗೊಳಪಟ್ಟವರು ಭ್ರಾಂತರು. ಬ್ರಹ್ಮವರಿತವರು ಬ್ರಹ್ಮವೆನಲಿಲ್ಲ ಪರಬ್ರಹ್ಮವೆ ತಾನಾದ ಘನ ಭ್ರಾಂತಿಯುಳ್ಳವನಾಗಬಹುದೆ? ನಡೆ ನುಡಿಗೆ ಮೀರಿದುದು ಪರಬ್ರಹ್ಮ , ಅದು ಭ್ರಾಂತಿ ರಹಿತವು , ಚಿಂತನಗೆಡೆಗೊಡದ ನಿಶ್ಚಿಂತ ನಿಲುವೆ ನಿಭ್ರಾಂತರ ನಿಲುವು. ಶರಣನೆಂದರೆ ಅಚಿಂತ್ಯಾತ್ಮ ಅಖಂಡಿತ ಘನ ಪೂರ್ಣವಪ್ಪ ಪರಮಾನಂದವೆ ತನ್ನಿರುವೆಂದರಿದ ಘನವಂತ. ಈ ಘನವಂತನಿಗೆ ಏನನ್ನಬೇಕು! ಅಕಲ್ಪಿತ ಘನ,ಕಲ್ಪಿಸುವದದೆಂತು? ಎರಡನ್ನೆ ಕಾಣದ ಪರಾತ್ಪರ ಎರಡೊಂದಾದವಂಗೆ ಏನನ್ನಬೇಕು? ಶಿವಯೋಗಿ ಎನ್ನಬೇಕೆ? ನಿಭ್ರಾಂತ ನೆನಬೇಕೆ? ಶರಣ ನೆನಬೇಕೆ? ಅನುಪಮಂಗೆ ಉಪಮೆ ಕೊಡುವದದೆಂತು. ಅನುಪಮನೆಂದರೆ ಶಿವಯೋಗಿ ಅಹುದು, ನಿಭ್ರಾಂತನು ಅಹುದು, ನಿಶ್ಚಿಂತನು ಅಹುದು, ಶಬ್ದಕ್ಕೆ ತೆರಹಿಲ್ಲದ ಘನನು ಅಹುದು. ಎರಡೊಂದಾದ ಮಹಿಮನು ಅವರ್ಣೀಯನ ವರ್ಣಿಸುವದದೆಂತು?

ಕರ್ಮಕಾಯನಲ್ಲ ಕಾಯ ಕಲ್ಪಿತನಲ್ಲ ಶರಣ . ಸ್ಫಟಿಕ ಘಟದಂತೆ ಒಳ ಹೊರಗೆನ್ನದ ಅಖಂಡಿತ ಘನ ಪೂರ್ಣಜ್ಯೋತಿ. ಇದು ನುಡಿಗೊಳಪಟ್ಟ ಜ್ಯೋತಿಯಲ್ಲ,ಪೂರ್ಣವದು ಪೂರ್ಣವೆನಲಿಲ್ಲ, ಶರಣ ಶರಣೆನಲಿಲ್ಲ ,ಐಕ್ಯ ಐಕ್ಯ ಎನಲಿಲ್ಲ.

ಅಖಂಡಿತ ಘನ ಪೂರ್ಣ ಪರಮಾನಂದ ಮಯವಾಗಿಹ ಘನವಂತ,ಬಯಲು , ಬಯಲೆ! ಶಬ್ದಮುಗ್ಧ,ನಿರವಯವು ಅವಯವ ವುಳ್ಳದ್ದಾಗಬಹುದೆ? ಅಜಾತನು ಜ್ಯಾತ್ಯಾತೀತನು, ಜಾತಿಯುಳ್ಳವನಾಗನು.ಶರಣ ಅಜನ್ಮ,ಜನನವುಳ್ಳವನಾಗಬಹುದೆ? ಅಯೋನಿಜನಾಗುವನು.

ಶರಣನುದಯ ಅಂಗದುದಯ , ಲಿಂಗದ ಸುಖ ಲಿಂಗದುದಯ ಅಂಗ ಸುಖ, ಎರಡಿಲ್ಲದ ಘನವ ನೇನೆಂಬೆ! ಅನಾಮಯನಾಗಿರುವ ನಿರ್ವಾಣನ ನಿಲುವು , ಶರಣನದಾದುರಿಂದ ಕರ್ಮಕಾಯನಲ್ಲ ಕಾಯ ಕಲ್ಪಿತನಲ್ಲ, ಲಿಂಗಕಾಯ ಶರಣ ಶರಣ ಕಾಯ ಲಿಂಗವಾದುದರಿಂದ ಕರ್ಮಕಾಯನಲ್ಲ ಕಾಯಕಲ್ಪಿತನಲ್ಲವೆಂದು ಹೇಳಿಹರು. ಕರ್ಮಕಾಯವೆಂಬುದು ಅಣವಮಲ

ಮಾಯಾಮಲ ಕಾರ್ಮಿಕಮಲ ದಿಂದುಕ್ತವಾದುದು. ಕರ್ಮಕಾಯ, ಎಲ್ಲಿ ಮಲತ್ರಯದಿಂದುಕ್ತವಾದ ಕಾಯವಿದೆ. ಅದು ಕಲ್ಪಿತದ ಕಾಯ, ಶರಣ ನಿರವಯ ಅವನೆಂತು ಅವಯವ ವುಳ್ಳವನಾಗುವನು. ಸಚ್ಚಿದಾನಂದವು ಮಲತ್ರಯವುಳ್ಳದ್ದಾಗಬಹುದೆ ! ಆ ಮಲವು ಮಲ ಮಯವಾಗದು ಅಕ್ರಿಯೆಯು, ಕ್ರಿಯೆಯುಳ್ಳದ್ದಾಗದು .

ಶರಣ ಕಾಯ ಕಲ್ಪಿತನಲ್ಲ, ಏಕೆಂದರೆ ಅಖಂಡಿತ ಘನ ಪೂರ್ಣಪರಮಾನಂದವೆ, ತನ್ನಿರುವು ಎಂದರಿದವಂಗೆ ಕಾಯ ಕಲ್ಪಿತವುಂಟೆ? ಆ ಮಹಾಂತಂಗೆ ನರರು ಸುರರೆಂಬ ಕಾಯ ಕಲ್ಪಿತವಿಲ್ಲ. ದೇವಗಣ, ರುದ್ರಗಣ, ಪ್ರಮಥಗಣರೆಂಬ ಕಾಯಕಲ್ಪಿತವಿಲ್ಲ. ಇವರು ಸತ್ಯರು, ನಿತ್ಯರು, ಮುಕ್ತರೆಂಬ ಕಾಯ ಕಲ್ಪಿತವಿಲ್ಲ. ಕಲ್ಪಿತವೆ ಕಾಣದವಂಗೆ ಕಾಯವಾವುದು? ಅಕಾಯವಾವುದು, ಕಾಯವಿರಹಿತನಾದುದರಿಂದ ಕಾಯ ಕಲ್ಪಿತನಲ್ಲವೆಂದು ಹೇಳಿಹರು.

ಶರಣ ಸಂಕಲ್ಪ ವಿರಹಿತನು ನಾನೀನೆಂಬ ಸಂದಳಿದ ಅಪ್ರಮಾಣಂಗೆ ಸಂಕಲ್ಪವೇತರದು? ನಾನೆಂಬ ಅಜ್ಞಾನವಿಲ್ಲ. ನೀನೆಂಬ ಮಾಯವಿಲ್ಲ ಅಹುದಾದುದಿಲ್ಲ, ಅಲ್ಲವಾದುದಿಲ್ಲ, ನಾಶವಾದುದಿಲ್ಲ ಸತ್ತುದಿಲ್ಲ, ಬದುಕಿದುದಿಲ್ಲ, ಪ್ರಕಾಶಿತ ಪ್ರಕಾಶಕವೆಂಬ ವಿಭಾಗ ದೃಷ್ಠಿ ಇಲ್ಲ, ಏನೆಂದೆನಲಿಲ್ಲದ ಅರುವು. ಅದುವೆ ತನ್ನಯ ಇರುವಾಗಿರುವಲ್ಲಿ, ಸಂಕಲ್ಪ ವೇತರದು ವಿಕಲ್ಪವೇತರದು ಭ್ರಮ ವೆಂಬುದೆಲ್ಲಿ? ಬ್ರಹ್ಮವೆಂಬದೆಲ್ಲಿ? ನಿದ್ರೆಯಲ್ಲಿ ಲೀನವಾದವಂಗೆ ಎಚ್ಚರವುಂಟೆ? ಲಿಂಗದುದಯ ಅಂಗ ಸುಖವಾದವಂಗೆ ಸಂಕಲ್ಪ ವೇತರದು ವಿಕಲ್ಪ ವೇತರದು?

ಅವರವರ ಬೆರಸಿಪ್ಪ ತನ್ನ ಪರಿ ಬೇರೆ: ಶರಣ ಅವರವರು ಕಂಡಲ್ಲಿ ಅವರವರಂತೆ ಕಾಣುವವನಾಗಿದ್ದರೂ ತನ್ನ ಪರಿ ಬೇರೆಯೇ ! ತ್ಯಾಗಿಯ ಕಂಡಲ್ಲಿ ತ್ಯಾಗಿಯಂತಿಪ್ಪನು , ಭೋಗಿಯ ಕಂಡಲ್ಲಿ ಭೋಗಿಯಂತಿಪ್ಪನು, ಅಜ್ಞಾನಿ ಕಂಡರೆ ಅಜ್ಞಾನಿಯಂತಿಪ್ಪನು. ಜ್ಞಾನಿ ಕಂಡಲ್ಲಿ ಜ್ಞಾನಿಯಂತಿಪ್ಪನು ಯೋಗಿ ಕಂಡಲ್ಲಿ ಯೋಗಿಯಂತಿಪ್ಪನು. ಅವರವರಂತೆ ಕಂಡರೂ ತಾನು ಮಾತ್ರ ಅಲುಪ್ತನು ಅಚಿಂತ್ಯನು ನಿರಾಲಂಬದಲ್ಲಿದ್ದ ನಿಜೈಕ್ಯನಾಗಿರುವುದರಿಂದ ಆ ಮಹಾಂತನ ಪರಿ ಬೇರೆ ಎಂದು ಹೇಳಿಹರು.

ಶರಣ ನಿರಂತರ ಸುಖಿ , ಶರಣ ನಿರುಪಾಧಿ ನೀರಾಲಂಬ ನಿಸ್ಸಂಗಿ ನಿರ್ನಾಮಿಯಾದುದರಿಂದ ಆವಾವುದು ಆಗದವನು. ಉಪಾಧಿಕ ಮನವಾಗದವನು, ನಿರುಪಾಧಿಕ ಮನವಾಗದವನು. ವೃತ್ತಿರಹಿತ ಮನ, ಚಿಂತನಕ್ಕೆಡೆಗೊಡದ ಸುಮನದಲ್ಲಿ ಅಚಿಂತ್ಯತ್ವ ನೆಲೆಗೊಂಡಿರುವುದರಿಂದ ನಿರಂತರ ಸುಖಿ ಸವೆಯದ ಸುಖಿ ಅಚ್ಚ ಸುಖಿ ಸ್ವಸುಖಿ . ಕಲ್ಪಿತನಾಗಿದ್ದಲ್ಲಿ ಸುಖ ದುಃಖವ ಕಾಣುತ್ತಿದ್ದನು. ಅಕಲ್ಪಿತ ತಾನಾದುದರಿಂದ ನಿರಂತರ ಸ್ವಸುಖಿಯು ಅಚ್ಚಸುಖಿಯು ಆಗಿರುವದರಿಂದ ಅಲ್ಲಿ ಬೋಧ, ಅಬೋಧ ಬೋಧಾ ಬೋಧವೆಂಬ ತ್ರಿವಿಧಕ್ಕೂ ಪ್ರಧಾನತ್ವವಿಲ್ಲ. ಆವಾವುದಕ್ಕೂ ಪ್ರಧಾನತ್ವವಿಲ್ಲವಾದುದರಿಂದ ನಿರಂತರ ಸುಖಿ ಎಂದು ಹೇಳಿಹರು .

ಕೂಡಲಚೆನ್ನಸಂಗಾ, ಶರಣ ಪ್ರಪಂಚದೊಳಿದ್ದರೂ ತನ್ನ ಪರಿ ಬೇರೆ : ಶರಣ ಕಮಲದ ಪತ್ರದಂತೆ ಕಮಲ ಪತ್ರವು ನೀರೊಳಗಿದ್ದರೂ ಅದಕ್ಕಂಟದೆ ತಟ್ಟದೆ ಮುಟ್ಟದೆ ಹೇಗಿರುವದೊ, ಹಾಗೆ ಶರಣ ಉಪಾಧಿ ರೂಪ ದೇಹದೊಳಗಿದ್ದರೂ, ನಿರ್ದೇಹಿಯಾಗಿಪ್ಪನು. ಪ್ರವೃತ್ತಿ ರೂಪ ಪ್ರಪಂಚದೊಳಿದ್ದರೂ, ವೃತ್ತಿರಹಿತವಾಗಿಹ ತನ್ನ ಸ್ವಂತ ಸ್ವಮಹಿಮೆಯಲ್ಲಿಹನು. ಸಂಗಿಯಾಗಿ ಕಂಡರೂ ನಿಸ್ಸಂಗವಾಗಿಹನು. ಆವಾವುಗಳ ಅವಲಂಬನೆ ಇಲ್ಲದೆ ನಿರಾಲಂಬನಾಗಿಪ್ಪುದೆ ಆತನ ಅಗಮ್ಯ ರೀತಿಯು ಇದು ಕಾರಣ ಶರಣ ಪ್ರಪಂಚದೊಳಿದ್ದರೂ ತನ್ನ ಪರಿ ಬೇರೆ ಎಂದು ಹೇಳಿಹರು .

ಶರಣ ಇಹ ಪರನಲ್ಲ, ಪರಾಪರನಲ್ಲ,ಕಾಮಿಸಿ ಕಾಮಿಯಲ್ಲ,
ಭಾವಿಸಿ ಭಾವಿಯಲ್ಲ ಅನಾಯಾಸ ನಿರಂಜನನು.
ಸಿದ್ದ ಸೋಮನಾಥ ಲಿಂಗ,
ನಿಮ್ಮ ಶರಣ ಬಳಸಿ ಬಳಸುವವನಲ್ಲ.

ತಾತ್ಪರ್ಯ : ಶರಣ ಇಹಪರನಲ್ಲ ಪರಾಪರನಲ್ಲ : ಶರಣನೆಂದರೆ ಸಿದ್ಧ ಸೋಮನಾಥ ಲಿಂಗ ಲಿಂಗವರಿತ ಲಿಂಗವೆ ಆಗಿಹ ಶಬ್ದಮುಗ್ಧ. ಅಖಂಡಿತ ಘನ ಪೂರ್ಣವಪ್ಪ , ಪರಮಾನಂದವೆ ತನ್ನಿರುವೆಂದರಿದ ಸಿದ್ಧ ಸೋಮನಾಥ ಲಿಂಗ. ಸೋಮನಾಥ ಲಿಂಗವದು ಘನಗಂಭೀರ ಮಹಾಘನ. ಶರಣನೆಂದರೆ ಘನ ಗಂಭೀರ ಮಹಾಘನದೊಳಗೆ ಘನಕ್ಕೆ ಘನವಾಗಿರ್ದ ಅನುಪಮ.

ಈ ಅನುಪಮ ಇಹ ಪರನಲ್ಲ, ಇಹದೊಳಿದ್ದವನಲ್ಲ ಪರದೊಳಿದ್ದವನಲ್ಲ. ಪರಾಪರದೊಳಿದ್ದವನೂ ಅಲ್ಲ. ಗಗನಕ್ಕೆ ಮನ ಮನೆ ಉಂಟೆ? ಗ್ರಾಮ ನಗರಗಳುಂಟೆ? ಸ್ವದೇಶ ಪರದೇಶ ಉಂಟೆ? ಗಗನದೊಳಗೆ ಸ್ವದೇಶ,ಪರದೇಶ ವಿರದ್ದರಿಂದ ನಿಸ್ಸೀಮವು. ಮನೆ,ಮಠ,ಗ್ರಾಮ,ನಗರ,ಸ್ವದೇಶ,ಪರದೇಶಂಗಳು ಸೀಮೆಯಿಂದುಕ್ತವಾದವುಗಳು. ಗಗನದೊಳಗೆ ಗ್ರಾಮವೋ? ಗ್ರಾಮದೊಳಗೆ ಗಗನವೊ? ಇದಾರು ನಿರ್ಣಯ ಮಾಡುವುದು. ಮನೆ ಮಠದೊಳಗೆ ಗಗನವೊ? ಗಗನದೊಳಗೆ ಮನೆಮಠಗಳೊ ಸ್ಥಾವರ ಜಂಗಮ ಜಗತ್ತಿನೊಳಗೆ ಬಯಲೊ! ಬಯಲಿನೊಳಗೆ ಸ್ಥಾವರ ಜಂಗಮ ಜಗವೊ! ಇದಾರು ನಿರ್ಣಯ ಮಾಡುವುದು? ಬಯಲಿಂಗೆ ಒಳಗಾವುದು,ಹೊರಗಾವುದು? ಒಳಹೊರಗೆನ್ನದೆ ಭರಿತವಾಗಿಪ್ಪ ನಿಸ್ಸೀಮವು ಸೀಮಿತ ನಿಸ್ಸೀಮನು , ಚಿದಾಕಾಶಕ್ಕೆ ಇಹವಾವುದು ಪರವಾವುದು? ಪರಾಪರವೆಂಬುದು ಚಿದ್ಘನವು. ಇಹವಾಗದು ಪರವಾಗದು ಪರಾಪರವೂ ಆಗದು .

ಕಾಮಿಸಿ ಕಾಮಿಯಲ್ಲ : ಶರಣ ಕಾಮಿಸಿ ಕಾಮಿಯಲ್ಲ. ಶರಣ ಜಗವ ಕಾಮಿಸಿಹನೆ? ಕಾಮಿಸಲಿಲ್ಲ ಭಕ್ತರನ್ನು ಕಾಮಿಸಿದ, ಭಾವಕ್ಕಗಮ್ಯರ ಮಾಡಲು ಕಾಮಿಸಿದ. ಲೋಕವ ಕಾಮಿಸಲಿಲ್ಲ ಲೋಕದವರ ಕಾಮಿಸಿದುದು ಏಕೆ? ಅಲೌಕಿಕರನ್ನಾಗಿ ಮಾಡಲು ಕಾಮಿಸಿದ. ನರಜನ್ಮವ ತೊಡೆದು ಹರಜನ್ಮವ ಮಾಡಲು ಕಾಮಿಸಿದ. ಅರುವಿನ ಕಣ್ಣ ಕತ್ತಲೆಯ ಕಳೆಯಲು ಕಾಮಿಸಿದ, ಭಾವರೂಪಿ ಭ್ರಮೆಯ ಕಳೆಯಲು ಕಾಮಿಸಿದ ಭಾವಕ್ಕಗಮ್ಯವಾದ ಘನದಿರುವಿನ ನಿಲುವಿನಲ್ಲಿ ನಿಲ್ಲಿಸಲು ಕಾಮಿಸಿದ. ಕಾಮಿಸಿದವನೆಂಬೆನೆ? ಕಾಮಿಯಲ್ಲ ತೃಪ್ತಾತ್ಮ ಅವನೆಂತು ಕಾಮಿಸುವನು?

ಶರಣ ಎಲ್ಲೆಲ್ಲೂ ತಾನೆ , ತನ್ನ ವಿನಃ ಅನ್ಯಕಾಣದವನು, ನೀರು ನೀರಡಿಸಿರುವುದೆ? ಅನ್ನ ಹಸಿದಿರುವದೆ? ಮರವಿಂಗೆ ಕಾಮವುಂಟು, ಕಾಮಿಸಿದುದು ಉಂಟು, ಅರುವಿಂಗೆ ಕಾಮವಿಲ್ಲ ಕಾಮಿಸಲಿಲ್ಲ ಏನೆಂದೆನಲಿಲ್ಲದ ಅರುವು ಅದೆಂತು ಕಾಮಿಸುವುದು. ಒಡಲುಳ್ಳವನು ಕಾಮಿಸಬಹುದು, ಕಾಮಿಯಾಗಬಹುದು. ಅರಿಯದರುವು ಅದೆಂತು ಒಡಲುಳ್ಳದ್ದಾಗುವುದು. ಶರಣ ತನುವ ನರಿಯದಿಹ ಪ್ರಸಾದಿ ಮನವನರಿಯದಹ ಲಿಂಗ , ಧನವ ನರಿಯದಿಹ ಜಂಗಮ. ಈ ತ್ರಿವಿಧವ ನರಿಯದಿಹ ಮಹಾಲಿಂಗ ಅವನೆಂತು ಕಾಮಿಸುವನು. ಭಾವಿಸಿ ಭಾವಿಯಲ್ಲ, ಶರಣ ನೆಪ ಮಾತ್ರ ಭಾವಿಸಿದ, ಭಾವಿಸಿಹನೆಂದರೆ ಭಾವಕ್ಕಸಾಧ್ಯನು, ಭಾವಕ್ಕಗಮ್ಯ-ತಾನಾಗಿಹನು. ಲಿಂಗವೆಂಬ ಘನವರಿಯ ಹೋಗಿ ಘನಕ್ಕೆ ಘನವಾಗಿಹನು. ಲಿಂಗ ಒಂದಾಗಿರ್ದ ಜಂಗಮ, ಜಂಗಮ ಒಂದಾಗಿರ್ದ ಲಿಂಗ ಉಪಮೆಗೆ ತಂದು ಎರಡೆನ್ನಬಹುದೆ? ಶುದ್ಧ ಶಿವೈಕ್ಯ ಜಂಗಮ ಅವನೆಂತು

ಭಾವಿಸುವನು? ಬೇಧಿಸ ಬಾರದಿಪ್ಪ ಅಭೇದ್ಯ ಶಿವ, ಅವನೆಂತು ಭಾವಿಸಿಹನು.

ಭ್ರಮಿತನು ಭಾವಿಸುವುದು ಸಹಜ, ಜೀವನೆಂದು ಭಾವಿಸಬಹುದು, ಅಂತರಾತ್ಮನೆಂದು ಭಾವಿಸಬಹುದು, ಪರಮಾತ್ಮನೆಂದು ಭಾವಿಸಬಹುದು, ಅಂಗ ಭಾವಿಯಾಗಬಹುದು, ಲಿಂಗಭಾವಿಯಾಗಬಹುದು. ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ ಘನವೆ ತನ್ನಿರುವಿನಿಂದರಿದ ಶರಣ ನಿಭ್ರಾಂತ ಶರಣ. ಅವನೆಂತು ಭಾವಿಸುವನು? ಭಾವಿಸಿದಂತೆ ಕಂಡರೂ ಅದು ಲೀಲೆ, ಅದು ವಿನೋದ, ತಾನೆ ಭಾವಿ, ತಾನೆ ಭಾವಕ್ಕಗಮ್ಯ. ತಾನೆ ಪೂಜ್ಯ ತಾನೆ ಪೂಜಕ. ಎರಡಾಗಿ ಕಂಡರೂ ಒಂದು ನೋಡಾ. ಎರಡೊಂದಾದ ಘನಮಹಿಮ. ಈತನ ನಿಲುವು ಶಬ್ದಕ್ಕೆ ತೆರಹಿಲ್ಲ ನೋಡಾ ನಾ ನೀನೆಂಬುದಕ್ಕೆಡೆಗೊಡದ ಘನ.

ಅನಾಯಾಸ ನಿರಂಜನನು ಈ ನಿರಂಜನನ ನಿಲುವು, ಅಕ್ರಿಯೆ ನಿಲುವು ಅರಿತವರ ನಿಲುವು, ನಿಶಬ್ಯವೇದಿಗಳ ನಿಲುವು, ನಿತ್ಯ ನಿರಂಜನ ತಾನೆಂದರಿತವರ ನಿಲುವು. ಇದು ಅನುಪಮ ನಿಲುವು, ಅರುವಿಂಗರುವಾಗಿಹ ನಿಲುವು. ಭಾವಕ್ಕಗಮ್ಯವಾಗಿಹ ಘನಮಹಿಮರ ನಿಲುವು. ಇದು ಬಿಟ್ಟು ಹಿಡಿದ ನಿರಂಜನ ಪದವಲ್ಲ. ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ ಘನವಾಗಿಹ ನಿಜ ನಿಲುವು. ಅನಾಯಾಸ ನಿಲುವಿನ ಪದ ಈ ನಿರಂಜನ ಪದ ಸಕಲರ ಅನಾಯಾಸ ನಿರಂಜನ ಪದ. ಇದು ಆದಿ ಅನಾದಿಯಿಂದತ್ತತ್ತ ಪದ, ನೆನಹು ನಿರ್ಣಯಕ್ಕೆ ನಿಲುಕದ ಪದ. ತಾನಾರೆಂದು ತನ್ನಿಂದ ತನ್ನ ಅರಿತ ಪದ. ಇದು ಅನಾಯಾಸ ನಿರಂಜನ ಪದ. ಮಾತಿಂಗೊಳಪಡದ ಪದ . ಮನವಾಗದವರ ಪದ , ಭ್ರಮಿತರ ಪದವಲ್ಲ . ನಿಭ್ರಾಂತರ ಸಿದ್ದಸೋಮನಾಥ ಲಿಂಗ ತಾನಾಗಿಹನು .

ಬಳಸಿ ಬಳಸುವನಲ್ಲ ಶರಣ : ಕಾಯ ಲಿಂಗ ಕಾಯನಾಗಿರುವದರಿಂದ ಬಳಸಿ ಬಳಸುವವನಲ್ಲ, ಲಿಂಗಕ್ಕಾಗಿ ಬಳಸಿದವನು ಅರುವಿಂಗರುವಾಗಿ ಬಳಸಿದವನು. ಎಲೆಲ್ಲೂ ಲಿಂಗವ ಕಾಣುವ ತನು, ಮನ ಧನವ ಬಳಸಿದವನು. ಶರಣನ ಬಳಕೆ ಲಿಂಗದ ಬಳಕೆ, ಕಾಯ ಬಳಸಲಿ ಲಿಂಗ ಸುಖಕ್ಕಾಗಿ ಬಳಸಿದವನು. ತನುವ ಬಳಸಲಿ ಮನವ ಬಳಸಲಿ ಧನವ ಬಳಸಲಿ, ಸದ್‌ಜ್ಞಾನ ಬರಿತಕ್ಕಾಗಿ ಬಳಸಿದವನು ನಿಜ ಚಿದ್ರೂಪಕ್ಕಾಗಿ ಬಳಸಿದವನು. ನಿಜೈಕ್ಯಕ್ಕಾಗಿ ಮನವ ಬಳಸಿದವನು, ಪ್ರಾಣ ಲಿಂಗ ಪ್ರಾಣಿಯಾಗಲು ಬಳಸಿದವನು. ಇದು ಕಾರಣ ಬಳಸಿ ಬಳಸುವವನಲ್ಲ, ಅನಿತ್ಯ ಸುಖಕ್ಕಾಗಿ ಬಳಸುವವನಲ್ಲ. ಅದು ಲೋಕದ ಕಣ್ಣಿಗೆ ಬಳಸಿದಂತೆ ಕಂಡರೂ ಬಳಸದ ಘನಕ್ಕೆ ಘನ. ತನುವು ಬಳಸದ ಘನ ಮನವ ಬಳಸದ ಘನ ಧನವು ಬಳಸದ ಘನದಿರುವಿನ ಅರುವಾಗಿಪ್ಪ. ಘನ ಮಹಿಮ ಅಪ್ರತಿಮನಾದುದರಿಂದ ಬಳಸಿ ಬಳಸುವವನಲ್ಲ ಎಂದು ಹೇಳಿಹರು. ಈ ಘನಮಹಿಮ ಭವಕ್ಕೆ ಹುಟ್ಟುವವನಲ್ಲ ತನ್ನ ಸ್ವಂತ ಸ್ವಮಹಿಮೆಯಲ್ಲಿದ್ದವಂಗೆ ಹುಟ್ಟಿರುವೆ ಸಾಯುವೆನೆಂಬ ಅನುಮಾನವಿರಬಹುದೆ? ನಿರೂಪದ ರೂಪ, ಸಚ್ಚಿದಾನಂದ ರೂಪ, ಚಿನ್ಮಯ ರೂಪ, ಸ್ಪಟಿಕದ ಘಟದಂತಿದ್ದ ರೂಪ, ನಿಜರೂಪ, ನೋಡಲು ಲೋಕದ ಕಣ್ಣಿಗೆ ರೂಪಾಗಿ ಕಂಡರೂ ಇದು ಅವರ್ಣಿಯ ರೂಪನ ಹಿರಿಮೆ. ಅದಾರು ವರ್ಣಿಸುವದು ಅವನದು ವಂಚಕ ಕಾಯವಲ್ಲ ,ಅದು ನಿಃಕಾಯ ಘನ. ಕಾಯವು ಜೀವವಾಗದು ,ಅಂತರಾತ್ಮನಾಗದು , ನುಡಿಗೊಳಪಟ್ಟ ಪರಮಾತ್ಮನಾಗದು. ಇದು ಕಾರಣ ಶಂಕೆಯಿಲ್ಲದ ಮಹಾಮಹಿಮ ನೋಡಯ್ಯ .

105

ಭವಕ್ಕೆ ಹುಟ್ಟುವವನಲ್ಲ ಸಂದೇಹಿ ಸೂತಕಿಯಲ್ಲ
ಆಕಾರ ನಿರಾಕಾರ ನೋಡಯ್ಯ ಕಾಯ ವಂಚಕನಲ್ಲ
ಜೀವವಂಚಕನಲ್ಲ ಶಂಕೆಯಿಲ್ಲದ

ಮಹಾಮಹಿಮ ನೋಡಯ್ಯ ಕೂಡಲಸಂಗನ ಶರಣ
ಉಪಮಾತೀತ ನೋಡಯ್ಯ.

ತಾತ್ಪರ್ಯ : ಭವಕ್ಕೆ ಹುಟ್ಟುವವನಲ್ಲ : ಶರಣ ದೇಹಗುಣಂಗಳಳಿದು ಲಿಂಗ ದೇಹಿಯಾದ ಮಹಾಂತ, ಅವನೆಂತು ಭವಕ್ಕೆ ಹುಟ್ಟುವನು. ಅವನ ಕಾಯ ಲಿಂಗಕಾಯ ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದ ಕಾಯ ಬಯಲು ಬಯಲೆ! ಅದು ಹುಟ್ಟಿದುದೆಂತು, ಸತ್ತುದೆಂತು, ಭವಕ್ಕೆ ಬಂದುದೆಂತು? ಚಿದಾಕಾಶ ಶರಣ, ಚಿತ್ ಪ್ರಕಾಶ ಶರಣ, ಮುನ್ನಮುನ್ನಲಾದ ಘನ ಭವಕ್ಕೆ ಬರಬಹುದೆ?

ಸಂದೇಹಿ ಸೂತಕಿಯಲ್ಲ : ಭಾವ ಬ್ರಹ್ಮವಾದ ಶರಣ, ದೇಹ ಲಿಂಗವಾದ ಶರಣ, ಸರ್ವಾಂಗ ಲಿಂಗ ಶರಣ. ಅವನಲ್ಲಿ ಸಂದೇಹಕ್ಕಾಸ್ಪದವೆಲ್ಲಿಯದು? ಅಲ್ಲಿ ಅನುಮಾನವಾದರೂ ಅದೇತರದು ? ಮತಿಯುಳ್ಳವನು, ಗತಿಗೊಳಪಟ್ಟವನು. ಅವನು ಸಂದೇಹಿಯಾಗುವುದು ಸಹಜ. ಮತಿಯೆ ಭಸ್ಮವಾಗಿ ಕೂಡಲಸಂಗಯ್ಯ ಸರ್ವನಿವಾಸಿಯಾಗಿರುವಲ್ಲಿ ಅದೇತರ ಸಂದೇಹ ? ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ ಘನಕ್ಕೆ ಅದಾವ ಸಂದೇಹ ? ಸಂದೇಹವ ಕಾಣದ್ದರಿಂದ ಸೂತಕಿಯಲ್ಲ.

ಕರ್ಮಿಯು ಸೂತಕಿ , ದೇಹಭಾವಿಯು ಸೂತಕಿ, ಒಡಲುಳ್ಳವನು ಸೂತಕಿ, ಕರ್ತೃತ್ವ ಬೋಕ್ತೃತ್ವವುಳ್ಳವನು ಸೂತಕಿ. ಅಕರ್ತಾರಾಗದವ ಸೂತಕಿ, ನಿರ್ದೇಹಿಗೆ ಅದಾವ ಸೂತಕ ಕರ್ತವ್ಯ? ಇತಿ ಕ್ರಿಯೆ, ಇತಿ ದೇಹವೆ ಲಿಂಗವಾದವಂಗೆ ಅದಾವ ಸೂತಕ? ಅಹಂಕಾರ ವಿರಹಿತನಾದುದರಿಂದ ಸೂತಕಿಯಲ್ಲವೆಂದು ಹೇಳಿಹರು.

ಬ್ರಹ್ಮವರಿತು ಬ್ರಹ್ಮವಾದವಂಗೆ ಸೂತಕ ಉಂಟೆ? ನಿಷ್ಕಳಂಕನಿಗೆ ಕಳಂಕವೇತರದು. ನಿರ್ಮಲನಿಗೆ ಮಲವಿಲ್ಲ ಮಲತ್ರಯಂಗಳಿಲ್ಲ. ಓಂ ನಮಃ ಶಿವಾಯ ಕ್ಕೆ ಸಂದೇಹವಾವುವುದು, ಸೂತಕವಾವುದು? ಷಡ್ ಧಾತುವೆ ಷಡಕ್ಷರವಾಗಿರುವಲ್ಲಿ ಪಿಂಡವೆಂಬುದಕ್ಕಿಂಬುಂಟೆ? ಭಾವವಿಲ್ಲ ಭ್ರಮೆಯಿಲ್ಲ ಸಂದೇಹವಿರಹಿತನು, ಆಕಾರ ನಿರಾಕಾರವಾಗಿಪ್ಪ ಘನಮಹಿಮ. ಅಪ್ರತಿಮಂಗೆ ಪ್ರತಿಯುಂಟೆ? ಅನುಪಮಂಗೆ ಉಪಮೆಯುಂಟೆ? ತುಪ್ಪ ಕರಗುವುದು ಘಟ್ಟಿಗೊಳ್ಳುವುದು ಸಹಜ. ಘಟ್ಟಿಗೊಳ್ಳಲಿ, ಕರಗಲಿ ಅದು ತುಪ್ಪವಾಗಿಯೆ ಇದೆ. ಶರಣ ವ್ಯಕ್ತನು ಅಹುದು, ಅವ್ಯಕ್ತನು ಅಹುದು, ವ್ಯಾಪ್ತನು ಅಹುದು, ವ್ಯಾಪಕನು ಅಹುದು. ನೀರು ಘಟ್ಟಿಗೊಂಡು ವಾರಿಕಲ್ಲು ಎನಿಸಿದರೂ ನೀರೆ. ನೀರಾಗಿ ಪ್ರವಹಿಸಿದರೂ ನೀರೆ. ಶರಣ ತೋರದಡಗದ ಘನ. ತೋರಬಹುದು, ತೋರದಿರಬಹುದು, ವಾರಿಕಲ್ಲಾಗಿ ತೋರಿದರೂ ನೀರು. ಅದು ಕರಗಿ ನೀರಾದರೇನು? ಶರಣ ಆಕಾರನಾಗಿ ಕಂಡರೇನು ನಿರಾಕಾರನಾಗಿ ಕಂಡರೇನು?

ಕಾಯ ವಂಚಕನಲ್ಲ: ಜೀವ ವಂಚಕನಲ್ಲ ಶರಣ ಕಾಯ ಲಿಂಗ ಕಾಯ. ಎಲ್ಲಿ ರೂಪ ಅಲ್ಲಿಯೆ ಲಿಂಗ ಸ್ವಾಯತವಾದ ಕಾಯ. ಅದು ಮೋಸದ ಕಾಯವಲ್ಲ ಕಾಯಭಾವವುಳ್ಳ ಕಾಯವಲ್ಲ. ನಿಃಕಾಯ ನಿಷ್ಪತಿ, ನಿರಾಳ ನಿಲುವುಳ್ಳ ಕಾಯ. ಅಲ್ಲಿ ಕಾಯ ವಿಕಾರಕ್ಕಿಂಬಿಲ್ಲ ವಾದುದರಿಂದ ಸ್ಪಟಿಕದ ಘಟದಂತೆ ಒಳಹೊರಗಿಲ್ಲದ ತೆರಹಿಲ್ಲದ ಘನ ನೋಡಾ. ಅದು ಪರಿಪೂರ್ಣ ಪರಮಾನಂದ ನೆಲೆಗೊಂಡ ಕಾಯ. ಇದು ಕಾರಣ ಕಾಯ ವಂಚಕನಲ್ಲವೆಂದು ಹೇಳಿಹರು.

ಜೀವ ವಂಚಕನಲ್ಲ: ಜೀವ ಬೇರೆ, ಲಿಂಗ ಬೇರೆಂಬ ಮತಿ ಭ್ರಾಂತನಲ್ಲ. ಶರಣ ಜೀವ ಪ್ರತಿಬಿಂಬ ಲಿಂಗಬಿಂಬವೆಂಬ ಭಿನ್ನ ದೃಷ್ಟಿಯವನಲ್ಲ. ಅಂಗವೆ ಲಿಂಗವು, ಲಿಂಗವೆ ಅಂಗವು. ಎರಡಾಗಿ ಕಂಡರೂ ಒಂದೆ, ಒಂದೆರಡಾದುದ ಏನೆಂಬೇನೆಂಬ ಹೇಳಲೆಂತು ಬಾರದು. ಹೇಳಲು ಬಾರದ ಘನ ತೋರಲೆಂತು ಅವಿರಳ ಘನ ಲಿಂಗೈಕ್ಯದಿರುವುಳ್ಳ ಮಹಾಂತನಾದುದರಿಂದ ಜೀವ ವಂಚಕನಲ್ಲ..

ಶರಣ ಅನುಪಮ, ಜೀವನೆಂಬ ಭ್ರಾಂತನ ಕಾಣನು, ಪರಮನೆಂಬ ನಿಭ್ರಾಂತನ ಕಾಣನು

ಎರಡೊಂದಾದ ಘನಮಹಿಮ ಭಾವಕ್ಕಿಂಬಿಲ್ಲ ಶಬ್ದಮೀಸಲಾಗಿಪ್ಪವಂಗೆ ಜೀವ ಪರಮರ ಭೇದವ ಕಾಣನು. ಅಭೇದವ ಕಾಣನು, ಭಾವಕ್ಕಗಮ್ಯವಾಗಿಹ ಘನದಿರುವಿನಲ್ಲಿ ಭಾವಂಗಳ ಹುಡುಕಬಹುದೆ! ಅರಸಿ ಕಾಣಬಾರದ ತನು, ಬೆರಸಿ ನೋಡದ ಅಚ್ಚಸುಖಿಗೆ ಜೀವ ವಂಚಕತನ ಅದೇತರದು.

ಶಂಕೆಯಿಲ್ಲದ ಮಹಾ ಮಹಿಮ ನೋಡಯ್ಯ : ಲಿಂಗವರಿತು ಲಿಂಗವಾಗಿಹ ಶರಣ. ಘನಕ್ಕೆ ಘನವಾದುದರಿಂದ ಶಂಕೆಯಿಲ್ಲದ ಮಹಾ ಮಹಿಮ ನೋಡಯ್ಯ .ಘನ ಗಂಭೀರ ಮಹಾ ಘನ ಘನಕ್ಕೆ ಘನವಾಗಿರ್ದುದರಿಂದ, ಶಂಕೆಯಿಲ್ಲ ಮಹಾ ಮಹಿಮನು ಎಂದಿಹರು.

ಲಿಂಗಕ್ಕೆ ಶಂಕೆ ಉಂಟೆ? ಲಿಂಗ ತಾನೆಂದರಿತು ತಾನೆ ತಾನಾದವಂಗೆ ಸಂದು ಸಂಶಯ ಉಂಟೆ? ಲಿಂಗ ಲಿಂಗ ಎನ್ನುವವಂಗೆ ಶಂಕೆ ಉಂಟು. ಲಿಂಗ ಲಿಂಗ ಎನ್ನದವನು, ತಾನೆ ಲಿಂಗವಾಗಿಹ ಘನಮಹಿಮನು ಲಿಂಗವರಿತವನು ಲಿಂಗವದು ತನ್ನಿರುವು ತಾನೆ, ಲಿಂಗವದು ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆಂದರಿದ ಶರಣ ಸರ್ವಾಂಗ ಲಿಂಗ. ಶರಣ ನೋಟ ಲಿಂಗ ಮಾಟ ಲಿಂಗ ಕೂಟ ಲಿಂಗ ಕರಣಂಗಳೆಂಬವು ಲಿಂಗ ಕಿರಣಂಗಳು ಅಲ್ಲಿ ಅಹುದಾದುದಿಲ್ಲ, ಅಲ್ಲಾದುದಿಲ್ಲ.ಸಾವಯುವ ನಿರವಯ ಭೇದ ಕಾಣದ ಮಹಾಮಹಿಮ,ಸಗುಣ ನಿರ್ಗುಣ ಒಂದು ಮಾಡಿದ ಅಖಂಡೇಕರಸ ನಾದುದರಿಂದ, ಶಂಕೆಯಿಲ್ಲದ ಮಹಾ ಮಹಿಮ ನೋಡಯ್ಯ ಎಂದು ಹೇಳಿಹರು.

ಕೂಡಲ ಸಂಗನ ಶರಣ ಉಪಮಾತೀತ ನೋಡಯ್ಯ : ಶರಣ ತಾನನುಪಮ ನಾದುದರಿಂದ ಕೂಡಲ ಸಂಗನ ಶರಣ ನೆನಿಸಿಹನು. ಶರಣ ಪರಿಪೂರ್ಣನಲ್ಲ ಪ್ರಾದೇಶಿಕನಲ್ಲ ನಿರತಿಶಯ ದೊಳತಿಶಯ ತಾ ಮುನ್ನಲ್ಲ. ಶರಣನಲ್ಲ, ಐಕ್ಯನಲ್ಲ, ಪರಮನಲ್ಲ, ಜೀವ ನಲ್ಲ, ನಿರವಯನಲ್ಲ, ಸಾವಯವನಲ್ಲ, ಪರ ಇಹವೆಂಬ ಭಯದೊಳಿಲ್ಲದವನು . ನಿರಾಲಂಬ ನಿಜಗುರು ಶಾಂತೇಶ್ವರನ ಶರಣನ ನಿಲುವು ಉಪಮೆಗೆ ತಾನನುಪಮ . ಶರಣನ ತನು ನಷ್ಟ , ನೆನಹು ನಷ್ಟ , ಭಾವ ನಷ್ಟ, ಜ್ಞಾನ ನಷ್ಟವಾಗಿರುವದರಿಂದ, ನಾನೆಂಬುದು ನಷ್ಟವಾಗಿ ನೀನೆಂಬುದು ನಷ್ಟ. ಈ ನಷ್ಟವೆಂಬುದು ನಷ್ಟವಾಗಿ ನುಡಿಗೆಡೆಗೊಡದ ಘನದಿರುವೆ ತನ್ನಿರುವೆಂದರಿದ ಮಹಾ ಮಹಿಮನಾಗಿರುವುದರಿಂದ ಕೂಡಲ ಸಂಗನ ಶರಣ ಉಪಮಾತೀತನೆಂದು ಹೇಳಿಹರು.

106

ನಂಬಿದರೆ ಪ್ರಸಾದ ನಂಬದಿರ್ದಡೆ ವಿಷವೊ!
ತುಡಕಲಾಗದು ನೋಡಾ, ಲಿಂಗ ಪ್ರಸಾದವ
ಸಂಗನ ಪ್ರಸಾದವ ಕೂಡಲಸಂಗನ ಪ್ರಸಾದ
ಸಿಂಗಿ ಕಾಳ ಕೂಟ ವಿಷವೊ! ॥ 772 ॥

ತಾತ್ಪರ್ಯ : ನಂಬಿದರೆ ಪ್ರಸಾದ ನಂಬದಿರ್ದಡೆ ವಿಷವೊ ತುಡಕಲಾಗದು ನೋಡಾ: ನಂಬಿದರೆ ಪ್ರಸಾದ ಏನ ನಂಬುವದು . ಎನ್ನ ಸದ್ಗುರು ಸ್ವಾಮಿ ಎನಗೆ ಕರುಣಿಸಿದ ಕಾರುಣ್ಯವ ನೇನೆಂದುಪಮಿಸುವೆನಯ್ಯ. ಗುರುಲಿಂಗವು ಸಾಕ್ಷಾತ್ ಪರಶಿವನಿಂದ ವಿಶೇಷ ಜ್ಯೋತಿಯಲೊದಗಿದ, ಜ್ಯೋತಿಯಂತಾಯಿತ್ತು . ದರ್ಪಣದೊಳಗಣ ಪ್ರತಿಬಿಂಬದಂತಾಯಿತ್ತು.

ನಂಬಿದರೆ ಸದ್ಗುರು ಸ್ವಾಮಿ ಕರುಣಿಸಿದ ಕಾರುಣ್ಯವ ನಂಬುವುದು. ಕರುಣಿಸಿದ ಕಾರುಣ್ಯವದು ಗುರುಲಿಂಗವು ಸಾಕ್ಷಾತ್ ಪರಶಿವನಿಂದ ವಿಶೇಷ.ಈ ನಂಬಿಗೆ ಆದಾರಿಗೆ? ಸದ್ಗುರು ದೇವ ಕರುಣಿಸಿದ ಕಾರುಣ್ಯ ಗುರು, ಲಿಂಗವೆಂದು ನಂಬುವ ಘನ ನಂಬಿಗೆ ಇದಾರಿಗೆ! ಇದು ಆದಿ ಪುರಾತನರ ನಂಬಿಗೆ. ಬಸವಾದಿ ಪ್ರಮಥರ ನಂಬಿಗೆ. ಇದು ಶರಣ ಶರಣೆಯರ ಮನದೊಳ್ ಮನೆ ಮಾಡಿಕೊಂಡಿಪ್ಪ

ನಂಬುಗೆ. ಇದು ಬಸವ ಪ್ರಭುವಿನ ನಂಬಿಗೆ , ಚನ್ನಬಸವರಾಜದೇವರ ನಂಬಿಗೆ, ಹಡಪದಪ್ಪಣ್ಣನ ನಂಬಿಗೆ, ಕಿನ್ನರಿ ಬೊಮ್ಮಯ್ಯನ ನಂಬಿಗೆ, ಮಡಿವಾಳ ಮಾಚಣ್ಣ ನಂಬಿಗೆ, ನೀಲಾಂಬಿಕೆ, ಮುಕ್ತಾಯಕ್ಕನ ನಂಬಿಗೆ ಅಕ್ಕಮಹಾದೇವಿ ನಂಬಿಗೆ, ಮಾರಯ್ಯ ಮಹಾದೇವಿಯಕ್ಕನ ನಂಬಿಗೆ. ಇನ್ನು ಅನೇಕ ಶರಣ ಶರಣೆಯರ ನಂಬಿಗೆ. ಇದು ಅಸಾಮಾನ್ಯ ನಂಬುಗೆ ಅಪಾರ ನಂಬಿಗೆ, ಈ ನಂಬಿಗೆ ಆಧುನಿಕ ಸಮಯದಲ್ಲಿ ದೊರೆಯುವುದು ದುರ್ಲಭ. ಶ್ರೀ ರಾಮಕೃಷ್ಣ ಪರಮಹಂಸರು ವಿವೇಕಾನಂದರ ನಿರೀಕ್ಷಣೆಯಲ್ಲಿ , ಗೋವಿಂದ ಭಟ್ಟರು ಷರೀಫನ ನಿರೀಕ್ಷಣೆಯಲ್ಲಿ, ಅಂದರೆ ಅವರು ಬರುವ ಹಾದಿಯನ್ನೆ ನೋಡುತ್ತಿದ್ದರು. ಗುರು ಕಾರುಣ್ಯವುಳ್ಳವರುಗಳನ್ನು ಕಂಡೊಡೆ ತನ್ನಂತೆ ಮಾಡಿಕೊಂಡಿತ್ತು. ಇನ್ನು ಶಿಷ್ಯರಾಗಿ ಪೂಜಿಸುವವರಾರು ಹೇಳಾ ಗುಹೇಶ್ವರ ಎಂದಂತೆ.

ಅಗ್ನಿಮುಟ್ಟಲು ತೃಣ ವಗ್ನಿಯಪ್ಪುದು ತಪ್ಪದಯ್ಯ ಗುರುಪ್ರಸಾದ ಅಂಗ ಸೋಂಕಿದಲ್ಲಿ ಸರ್ವಾಂಗ ಗುರುವಪ್ಪದು ತಪ್ಪದಯ್ಯಾ. ಲಿಂಗ ಪ್ರಸಾದ ಮನ ಸೋಂಕಿದಲ್ಲಿ ಮನ ಲಿಂಗವಪ್ಪುದು ತಪ್ಪದ್ದಯ್ಯಾ ಜಂಗಮ ಪ್ರಸಾದ ಅರಿವು ಸೋಂಕಿದಲ್ಲಿ ಅಖಂಡಿತ ಪ್ರಸನ್ನ ಪ್ರಸಾದವಪ್ಪುದು ತಪ್ಪದಯ್ಯ. ಗುರು ಪ್ರಸಾದ ಪರಿಶುದ್ಧ ಅಂಗವ ಷೋಂಕಲು ಕಾದುಕೊಂಡು ಕೂತಿದ್ದ ಜ್ಞಾನಜ್ಯೋತಿ ತುಂಬಿ ಬಂದಡೆ ಪರಿಮಳ ಓಡಿತ್ತು ಕಂಡೆ. ಶಿಷ್ಯನೆಂಬ ನಂಬಿಗೆಯ ತುಂಬಿ ಬಂದಡೆ ಸದ್ಗುರು ಸ್ವಾಮಿಯ ಕಾರುಣ್ಯವೆಂಬ ಪರಿಮಳ ಓಡಿತ್ತು ಕಂಡೆ.

ಪ್ರಸಾದ ಪ್ರಸಾದವೆಂದು ಕೆಲಬರು ಬಹಿರ್ ಅಷ್ಟಾ ವರ್ಣದ ಆಚಾರವ ಆಚರಿಸಲು ಸರಿ ಹೋದರು . ಅಂತರಂಗ ಅಷ್ಟಾವರ್ಣ ತಿಳಿಯುವುದಕ್ಕೆ ಹೋಗಲಿಲ್ಲ. ತಿಳಿಯದ್ದರಿಂದ ಕರ್ಮಿ ಭಕ್ತರಾಗಲು ಒಪ್ಪಿ ಬಹಿರ್ ಅಷ್ಟಾವರ್ಣದವರಾಗಿಹರು. ಇವರುಗಳಿಗೆ ಅಪೂರ್ವಿಕ ಶರಣರ ಹಿರಿಮೆ ತಿಳಿಯದು ಪ್ರಸಾದವೆಂಬುದು ಗುರುಪ್ರಸಾದ ಲಿಂಗಪ್ರಸಾದ ಜಂಗಮಪ್ರಸಾದವದು ಶ್ರೀಗುರುವಿನಿಂದ ಲಭ್ಯವಾಗುವ ಜ್ಞಾನ ಜ್ಯೋತಿ. ಪ್ರಸಾದವದು ಪರಮಜ್ಞಾನ ಪರಮಾಮೃತ ವಾಙ್ಮನೋತೀತ . ಅದು ಜ್ಯೋತಿಯ ಲೊದಗಿದ ಜ್ಯೋತಿ ಎಂದು ಹೇಳಿದುದು. ದರ್ಪಣದೊಳಗಣ ಪ್ರತಿಬಿಂಬವೆಂದು ಹೇಳಿದುದು. ಇದು ಕಾರಣ ಪ್ರಸಾದವೆ ಗುರು. ಪ್ರಸಾದವೆ ಲಿಂಗ, ಪ್ರಸಾದವೆ ಜಂಗಮ ಪ್ರಸಾದವೆ ಪರಾತ್ಪರ ಪ್ರಸಾದವೆ ಪರಮಾಮೃತ , ಪ್ರಸಾದವದು ತಾನೆ ಎಂದು ಹೇಳಿದುದು.

ನಂಬಿದರೆ ಪ್ರಸಾದವೆನ್ನುವ ಸಂಜ್ಞೆ, ಇದು ಹೃದಯ ಹೃದಯ ಒಂದಾದ ಸಂಜ್ಞೆ. ಇದು ಅರು ಹೃದಯದಲ್ಲಿ ಬೆಳಗುವ ಬೆಳಗು , ಒಂದಾದ ಬೆಳಗು, ಅಖಂಡ ಬೆಳಗು. ಇದು ಜ್ಯೋತಿಯ ಲೊದಗಿದ ಜ್ಯೋತಿ. ಇಲ್ಲಿ ಗುರುವಾರೊ? ಶಿಷ್ಯರಾರೊ? ನಿಸ್ಸೀಮವು ಗಣನೆಗೆ ಅತೀತ ನೋಡಾ.

ಓಹೊ ಗುರುಪ್ರಸಾದವು ವಾಙ್ಮನೋತೀತವೆ! ಲಿಂಗವು ಶೃತಿಗೆ ಮೀರಿದ ಮಹಾಘನವೆ! ಜಂಗಮ ಲಿಂಗ ಒಂದಾಗಿರ್ದ ಜಂಗಮ ನಿರ್ನಾಮ ಜಂಗಮ, ನಿರ್ಲಿಖಿತ ಜಂಗಮ. ಇಲ್ಲಿಯ ಪ್ರಸಾದ ಪ್ರಸಾದವೆಂದವಂಗೆ ಪ್ರಸಾದವಿಲ್ಲ, ಗುರು ಗುರುವೆಂದವಂಗೆ ಗುರುವಿಲ್ಲ, ಲಿಂಗ ಲಿಂಗವೆಂದವಂಗೆ ಲಿಂಗವಿಲ್ಲ ,ಇದೆಂಥಹ ಪರಾತ್ಪರ ಪರಮಾಮೃತ ಪರಮಜ್ಞಾನ. ಇದು ಮಾತಿನಿಂದುಕ್ತವಾದ ಜ್ಞಾನವಲ್ಲ. ನೆನಹು ನಿರ್ಣಯದಿಂದುಕ್ತವಾದ ಜ್ಞಾನವೂ ಅಲ್ಲ. ಅಚಿಂತ್ಯವಾಗಿರುವುದರಿಂದ ವಾಙ್ಮನೋತೀತವೆಂದು ಹೇಳಿಹರು. ಇದು ಕಾರಣ ಜ್ಯೋತಿಯ ಲೊದಗಿದ ಜ್ಯೋತಿ ಎಂದು ಹೇಳಿಹರು.

ಜ್ಯೋತಿ ಮುಟ್ಟಿದುದು ಜ್ಯೋತಿಯು, ಜ್ಯೋತಿಯು ತಾನು ಜ್ಯೋತಿ ಎನಲಿಲ್ಲ, ಮುಟ್ಟಿದರೂ ಮೌನವಾಗಿ ಮುಟ್ಟಿ ತನ್ನಂತೆ ಮಾಡಿತ್ತು. ತನ್ನಂತಾದ ಜ್ಯೋತಿ ಅದು ತಾನು ಜ್ಯೋತಿ ಎನಲಿಲ್ಲ. ಇದು ನಿರ್ವಾಣ ನಿಲುವು. ಎಂಜಲ ನುಡಿವವರ ನಿಲುವಿಂಗೆ ದೂರವು, ಶಬ್ದ ಮೀಸಲವಾಗಿಪ್ಪವರ ನಿಲವು. ಇಲ್ಲಿ

ಭಾವಕ್ಕಿಂಬಿಲ್ಲ ನುಡಿಗೆಡೆಯಿಲ್ಲ ಇದನೇನೆಂಬೆ ಏನೆಂಬೆ ಇದು ಕಾರಣ. ನಂಬಿದರೆ ಪ್ರಸಾದವೆಂದು ಬಸವಾದಿ ಪ್ರಮಥರು ನಂಬಿದರು. ಅವರುಗಳು ಲಿಂಗೈಕ್ಯರು ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿತು ಅಚಲಾನಂದದೊಳಿಪ್ಪ ಮಹಾಂತರು. ಅವರ ಪ್ರಸಾದ ಲಿಂಗಪ್ರಸಾದ ಸಂಗನ ಪ್ರಸಾದ ಎಂದು ಹೇಳಿಹರು.

ನಂಬದಿರ್ದಡೆ ವಿಷವೊ ತುಡಕಲಾಗದು ನೋಡಾ. ಗುರುಲಿಂಗವ ನಂಬದಿರ್ದಡೆ ವಿಷವೊ ಅಯ್ಯಾ ಗುರು ಆಜ್ಞೆಯ ಮೀರಿದುದು ವಿಷವೊ! ಅಯ್ಯಾ ಗುರುಲಿಂಗದ ಸಂಜ್ಞೆಯ ಅರಿಯದಿರ್ದಡೆ ವಿಷವೊ? ಅಯ್ಯಾ ವಾಙ್ಮನೋತೀತವಾದ ಗುರುಲಿಂಗವು ಚಾರಿತ್ರ ಪುರುಷನಾಗಿ ಕಂಡಿತೆ! ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗ, ಕುರುಹಿನಿಂದುಕ್ತವಾಗಿ ಕಂಥೆ ಧರಿಸಿದ ಶಿಲೆಯಾಗಿ ಕಂಡಿತೆ! ಲಿಂಗ ಒಂದಾಗಿರ್ದ ಘನಜಂಗಮ ಒಂದು ಜಾತಿಗೆ ಸೇರಿತೆ! ಇದೆಂಥಹ ವಿಷಯಾಕಾರ ದೃಷ್ಠಿ ನಿರ್ವಿಕಲ್ಪ ನಿರಾಲಂಬವಾಗಿಹ ಮಹಾಘನವು ಮಾತು ಮನಂಗಳಿಗೊಳಪಟ್ಟುದರಿಂದ ಗುರು ಆಜ್ಞಾ ದೂರಾಯಿತ್ತು. ಸುಕೃತ ಹಾಳಾಯಿತ್ತು. ಗುರು ಸಂಜ್ಞೆ ಅರಿಯುವ ಅರುಹೃದಯ ಕುರುಡಾಯಿತ್ತು. ನಿಃಶಬ್ದ ಬ್ರಹ್ಮಮುಚ್ಯತೆ ಎಂಬ ನಿಜದರುವು ಶಬ್ದಕ್ಕೊಳಪಟ್ಟು ತನ್ನಿಂದ ತನ್ನ ನೋಡುವ ಭಾಗ್ಯ ದೂರಾಗಿ ಅನುಪಮ ಸುಖ ದೂರಾಯಿತ್ತು. ಇದು ಕಾರಣ ಗುರುಲಿಂಗವು ಲಭ್ಯವಾದಾಗ ಅದನ್ನು ಮಾತಿನ ಮಾಪಿನಿಂದ ಅಳೆಯಲು ತುಡಕ ಬಾರದು. ನೆನಹು ನಿರ್ಣಯದಿಂದುಕ್ತವಾದ ಕರಣಂಗಳ ಮಾಪಿನಲ್ಲಿ ಅಳೆಯಲು ತುಡಕ ಬಾರದು. ತುಡಕಿದರೆ ಲಿಂಗಪ್ರಸಾದವದು ಅಚಿಂತ್ಯಪ್ರಸಾದ ಅಖಂಡಿತ ಪ್ರಸನ್ನ ಪ್ರಸಾದ ಅಲ್ಲಿ ಇಲ್ಲ ಇಲ್ಲವಾಗಲು ಅದು ತನ್ನ ಹೃದಯಕ್ಕೆ ಸಿಂಗಿಕಾಳಕೂಟ ವಿಷ ಅಂದರೆ ಪರಾತ್ಪರವಾಗಿಹ ಪರಮಜ್ಞಾನ ಅದು . ಅದು ಪರಮಾಮೃತ ವಾಙ್ಮನೋತೀತವಾದುದು. ಶಬ್ದದಲ್ಲಿಯೆ ಸಿದ್ಧವಾಯಿತಲ್ಲದೆ ಹೃದಯ ಪ್ರಸಾದಮಯವಾಗಲಿಲ್ಲ . ಬರಡು ಹೃದಯವಾದ್ದರಿಂದ ಶಬ್ದದಲ್ಲಿಯೆ ಗುರು ಶಬ್ದದಲ್ಲಿಯೆ ಲಿಂಗ, ಶಬ್ದದಲ್ಲಿಯೆ ಜಂಗಮ ಶಬ್ದ ಶಬ್ದವಾಗಿಯೆ ಉಳಿಯಿತಲ್ಲದೆ ಪರಮಾಮೃತವಾಗಿಹ ಚಿನ್ಮಯಾನಂದವಾಗಲಿಲ್ಲ. ಇದು ಕಾರಣ ನಂಬಿದವರಿಗೆ ಪ್ರಸಾದ, ನಂಬದವರಿಗೆ ವಿಷ. ಅದು ಸಿಂಗಿ ಕಾಳಕೂಟ ವಿಷವೆಂದು ಎಚ್ಚರಿಸಿರುವರು.

107

ತೋರಬಾರದ ಘನವ ಹೇಳಲೆಂದೇನೋ?
ಹೇಳಬಾರದ ಘನ ತೋರಲೆಂದೇನೋ?
ಸರಸಂಧಾನದ ಪರಿಯಲ್ಲ ನೋಡಾ,
ಗುಹೇಶ್ವರನೆಂಬುದು ಅಕಲ್ಪಿತ ನೋಡಾ. **॥ 1247 ॥**

ತಾತ್ಪರ್ಯ : ತೋರಬಾರದ ಘನವ ಹೇಳಲೆಂದೇನೊ? ಹೇಳಬಾರದ ಘನ ತೋರಲೆಂದೇನೊ: ತೋರಬಾರದ ಘನ ಅದನ್ನು ಹೇಳುವುದು ಹೇಗೆ? ಹೇಳಬಾರದ ಘನ ತೋರಲೆಂದೇನೊ? ಹೇಳಬಾರದ ಘನ, ಅದನ್ನು ತೋರಿಸುವುದು ಹೇಗೆ?

ತೋರಬಾರದ ಘನ ಇದು ಕರ ಕಮಲದಲ್ಲಿ ಪ್ರಜ್ವಲಿಸುವ ಲಿಂಗ. ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗ. ಇದು ಸದ್ಗುರು ಸ್ವಾಮಿ ಕರುಣಿಸಿದ ಕಾರುಣ್ಯ. ಅರುವ ಅರಿಯ ಹೇಳಿದ ಗುರುಕಾರುಣ್ಯ. ಇದು ಅನಿಮಿಷ ದೇವನಿಂದ ದೊರೆತ ದೇವ . ದೇವರ ಮಹಾಪ್ರಸಾದ , ಅನಿಮಿಷ ಲಿಂಗ. ಪ್ರಭುದೇವ ಅನಿಮಿಷ ಲಿಂಗವ ಕಂಡು ತೋರ ಬಾರದ ಘನ ಹೇಳಲೆಂದೇನೊ? ಹೇಳಬಾರದ ಘನ ತೋರಲೆಂದೇನೊ? ಎಂದು ಬಿತ್ತರಿಸಿದುದು ನೋಡಿದಡೆ ತೋರಬಾರದ ಘನ ಆವುದಕ್ಕನ್ನಬೇಕು.

ಸದ್ಗುರು ರೂಪಿ ಅನಿಮಿಷ ದೇವ ತೋರಬಾರದ ಘನ ಎನ್ನುವುಡೆ ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗದಲ್ಲಿ ಬೆರಸಿಪ್ಪ ಘನಕ್ಕೆ ಘನ ಅಚಲಾನಂದ ಲಿಂಗವರಿತು ಲಿಂಗವ ಬೆರೆತು ಲಿಂಗಾವಗಿಪ್ಪ ಘನಮಹಿಮ. ತೋರಬಾರದ ಘನ ಹೇಳಲೆಂದೇನೊ? ಹೇಳಬಾರದ ಘನ ತೋರಲೆಂದೇನೊ? ಎಂದೂ ನುಡಿಯದ ನಿರ್ವಾಣ ನಿರುಪಮ . ಆಶ್ಚರ್ಯ ಪರಮಾಶ್ಚರ್ಯ . ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗದಲ್ಲಿ ಬೆರೆತು ಲಿಂಗವೆ ಆದ ಘನಕ್ಕೆ ಘನ ನುಡಿಯಲಿಲ್ಲ. ಅದನ್ನು ನೋಡ ಬಂದ ಅರಿಯಬಂದ ಅರಿದರಿದು ನೋಡಿದ ಪ್ರಭುದೇವ, ಲಿಂಗದಲ್ಲಿ ಲೀಯವಾದ ಲಿಂಗೈಕ್ಯ ಅನಿಮಿಷದೇವನು ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗದಲ್ಲಿ ಲೀಯವಾದ ಲಿಂಗೈಕ್ಯನ ಕಂಡು, ತೋರಬಾರದ ಘನ ಹೇಳಲೆಂದೇನೊ? ಹೇಳಬಾರದ ಘನ ತೋರಲೆಂತು ಎಂದು ಕರುಣಿಸಿದ ಕಾರುಣ್ಯವ ನೇನೆಂದುಪಮಿಸುವದು.

'' ಕಾಣ ಬಾರದ ಗುರು ಕಣ್ಗೆ ಗೋಚರವಾದರೆ ಹೇಳಲಿಲ್ಲದ ಭಿನ್ನಪ , ಮುಟ್ಟಲಿಲ್ಲದ ಹಸ್ತ ಮಸ್ತಕ ಸಂಯೋಗ ಹೂಸಲಿಲ್ಲದ ವಿಭೂತಿ ಪಟ್ಟ. ಕೇಳಲಿಲ್ಲದ ಕರ್ಣಮಂತ್ರ, ಪೂಜೆಗೆ ಬಾರದ ಲಿಂಗ, ತುಂಬಿ ತುಳಕದ ಕಳಸಾಭಿಷೇಕ, ಆಗಮವಿಲ್ಲದ ದೀಕ್ಷೆ, ಸಂಬಂಧವಿಲ್ಲದ ಸಯವಪ್ಪ ಆನು ಗೊಂಬಂತೆ ಮಾಡಾ ಗುಹೇಶ್ವರಾ''.

ನಡೆ ನುಡಿಯುಳ್ಳ ಗುರುಗಳು ಬಹಳಷ್ಟು ಶಿಕ್ಕುತ್ತಾರೆ. ನುಡಿ ನಡೆಗೂ ಮೀರಿದ ಘನ ತಾನೆ ತಾನಾದ ಘನ ಗುರುಘನ ಕಂಡಲ್ಲಿ ಹೇಳಲೆಂತು? ಲಿಂಗದಲ್ಲಿ ಲೀಯವಾದ ಲಿಂಗೈಕ್ಯ! ಆ ಮಹಾಂತನ ಮಹದರುವು ವರ್ಣಿಸುವದದೆಂತು . ನುಡಿದು ಹೇಳಲಿಲ್ಲ, ನಡೆದು ತೋರಿಸಲಿಲ್ಲ, ತೋರಿಸದೆ ಬಿಡಲಿಲ್ಲ, ಲಿಂಗವರಿತು ಲಿಂಗದಲ್ಲಿ ಲೀಯವಾದ ಲಿಂಗೈಕ್ಯದೃಷ್ಠಿ, ಅನಿಮಿಷದೃಷ್ಠಿ. ಈ ಘನ ದೃಷ್ಠಿಯೆ ಪ್ರಭುವಿಂಗೆ ಸದ್ಗುರು ಸ್ವಾಮಿಯಿಂದ ದೊರೆತ ಕಾರುಣ್ಯ . ಅಹಹ ಇದೇನು ವಿಪರೀತ? ಇದೇನು ವಿಚಿತ್ರ? ಇದುವೆ ಮುಟ್ಟಲಿಲ್ಲದ ಹಸ್ತ ಮಸ್ತಕ ಸಂಯೋಗವಾಯಿತ್ತು . ಗುರ್ವಾನುಗ್ರಹ.

ಕಂಡುದೆಲ್ಲವು ತನ್ನ ಕಂಡಂತಾಯಿತ್ತು, ನೋಡಿದುದೆಲ್ಲ ತನ್ನಂ ನೋಡಿದಂತಾಯಿತ್ತು. ಮುಟ್ಟಬಾರದುದು ಮುಟ್ಟಿದಂತಾಯಿತ್ತು. ಇದು ಕಾಣಬಾರದ ಕಂಡ ಗುರ್ವಾನುಗ್ರಹವಾಯಿತ್ತು. ಅಪ್ರತಿಮ ಗುರ್ವಾನುಗ್ರಹ , ಸದ್ಗುರು ಸ್ವಾಮಿ ಕರುಣಿಸಿದ ಕಾರುಣ್ಯವ ಏನೆನ್ನುವದು ! ಲಿಂಗದಲ್ಲಿ ಲೀಯವಾದ ದೃಷ್ಠಿ ಅಲ್ಲಿ ತಾನೆಂಬುದಿಲ್ಲ ಗುರುವೆಂಬುದಿಲ್ಲ. ಶಿಷ್ಯನೆಂಬುದಿಲ್ಲ ಅಹುದಾದುದಿಲ್ಲ ಅಲ್ಲಾದುದಿಲ್ಲ ಮರವೆಂಬುದಿಲ್ಲ ಅರುವೆಂಬುದಿಲ್ಲ ಜ್ಞಾನವಿಲ್ಲ ಅಜ್ಞಾನವಿಲ್ಲ. ಏನೆಂದೆನಲಿಲ್ಲದ ಅರುವು ಬಿನ್ನ ದೃಷ್ಠಿಗಿಂಬಿಲ್ಲ ತಾನೆ ತಾನಾದ ಅರಿಯದರುವು ಮರೆಯಲಿಲ್ಲದ ಮರುಹು. ನೋಡಲಿಲ್ಲದ ನೋಟ ಕೂಡಲಿಲ್ಲದ ಕೂಟ ಬೆರಸಲಿಲ್ಲದ ಬೆರಗು ನಿಂದುದು ಗುರುರೂಪಿ ಗುಹೇಶ್ವರ ನಿಲುವು. ಇದು ಅನಿಮಿಷ ದೇವಯ್ಯನ ನೆಲೆಯಿಲ್ಲದ ನಿಜ ನಿಲುವು ಅಹುದು. ನೋಡಬಂದವರಿಗೆ ಅಪ್ರತಿಮ ಗುರ್ವಾನುಗ್ರಹವು ಅಹುದು.

ಗುರುವಾಗಿ ಲಿಂಗವ ಕೊಟ್ಟು ಶಿಷ್ಯನಾಗಿ ಲಿಂಗ ಕೊಳ್ಳುವ ವ್ಯವಹಾರ ಇದಲ್ಲ. ಅಪ್ರತಿಮ ಗುರು ಅಪ್ರತಿಮ ವ್ಯವಹಾರ ಅಪ್ರತಿಮ ಗುಟ್ಟು. ತಾನು ಅಪ್ರತಿಮನಾಗಿ ನಿಂತು ಅರಿದರಿದು ನೋಡಿದ ಶಿಷ್ಯ ಅಪ್ರತಿಮ. ಇವರೀರ್ವರು ಒಂದಾದ ಗುರುಗುಟ್ಟು , ಮರವರುವುಳ್ಳ ಭೇದ ಜ್ಞಾನಿಗಳಿಗೆ ತಿಳಿಯುವದು ದುಸ್ತರವು ಅರು ಹೃದಯಕ್ಕೆ ಸಹಜವು. ಇದು ಅರುವಿನ ಹೃದಯ ಅರುವೆ ಪ್ರಜ್ವಲಿಸುವಲ್ಲಿ ಕೇಳಲಿಲ್ಲದ ಕರ್ಣಮಂತ್ರ. ಪೂಜೆಗೆ ಬಾರದಲಿಂಗ ಆಗಮವಿಲ್ಲದ ದೀಕ್ಷೆ. ಸಂಬಂಧವಿಲ್ಲದ ಸಯವಪ್ಪ ಆನುಗೊಂಬಂತೆ ಮಾಡಿದ ದೀಕ್ಷಾಕ್ರಮ. ಹೇಳಲೆಂತು ಬಾರದು

ಹೇಳಬಾರದ ಘನ ತೋರಲೆಂತೊ ಸರಸಂಧಾನದ ಪರಿಯ ಬಲ್ಲರೆ ಹೇಳಿರೆ ಗುಹೇಶ್ವರನೆಂಬುದು ಅಕಲ್ಪಿತ ನೋಡಾ .

ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗದಲ್ಲಿ ಬೆರೆತು ಅಚಲಾನಂದದೊಳಿದ್ದುದು ಹೇಳಬಾರದ ಘನ ತೋರಲೆಂತೊ? ಸರ ಸಂಧಾನದ ಪರಿಯ ಬಲ್ಲರೆ ಹೇಳಿರೆ, ಗುಹೇಶ್ವರನೆಂಬುದು ಅಕಲ್ಪಿತ. ಕಲ್ಪಿತದ ಸಂಧಾನದ ಪರಿಯ ಬಲ್ಲವರು ಶಿಕ್ಕುವರು. ಅಕಲ್ಪಿತದಲ್ಲಿ ಒಂದಾಗುವ ಕೂಡುವ ಬೆರೆಯುವ ವಿಧಿ ವಿಧಾನಗಳು ಬಲ್ಲವರಿದ್ದರೆ ಹೇಳಿರೆ? ಎಂಬ ಪ್ರಭುವಿನ ಪ್ರಶ್ನೆಗೆ ತಾನೆ ಉತ್ತರಿಸಿದುದು. ದಯಾಳು ಪ್ರಭುವಿನ ಕರುಣಾಹೃದಯ ತಾನೆ ಗುಹೇಶ್ವರನೆಂಬುದು ಅಕಲ್ಪಿತ ನಿರಂತರ ನುಡಿಗೆಡೆಗೊಡದ ಘನ ಭಾವಕ್ಕಿಂಬು ಕೊಡದ ಘನ ಅಚಿಂತ್ಯ . ಅದನ್ನು ಚಿಂತಿಸುವದದೆಂತು. ಭಾವಿಸುವದದೆಂತು ಶಬ್ದವೆ ಮೀಸಲಾಗಿರುವಲ್ಲಿ ಅದನು ಅನುಸಂಧಾನಮಾಡುವದದೆಂತು. ಇದು ಅರುವ ಅರಿದರಿದು ನೋಡಿದ ಪರಿ. ಲಿಂಗವು ಶಬ್ದಮುಗ್ಧ ಅದನ್ನು ನೋಡಬಂದ ಅನಿಮಿಷದೇವ ಶಬ್ದಮುಗ್ಧ ಅರುವಿನ ಪರಿಮಳ ಇದನಾರಯ್ಯ ಹೀಗೆ ಎಂದು ವಿವರಿಸುವದು.

ಈ ಅನುಪಮ ನಿಲವು ಉಪಮಿಸುವದದೆಂತು? ಇದನ್ನು ಅರಿಯಲು ಬಂದ ಪ್ರಭುದೇವ ಅರಿದರಿದು ನೋಡಿ ಹೇಳಲೆಂತು ಬಾರದು. ಏಕೆಂದರೆ ತೋರಬಾರದ ಘನವ ಹೇಳಲೆಂತೊ ಗುರು ಘನನು ತೋರಬಾರದ ಘನ. ಲಿಂಗವು ತೋರಬಾರದ ಘನ. ಲಿಂಗದಲ್ಲಿ ಲೀಯವಾದುದು ಆವುದು? ಗುರು ಲಿಂಗ ಒಂದಾದ ಘನ ಹೇಳಲೆಂತುಬಾರದು. ಒಂದೆಂಬೆನೆ? ಎರಡಾಗಿದೆ. ಗುರು ಬೇರೆ, ಲಿಂಗ ಬೇರೆ ಹೀಗೆ ಬೇರಾಗಿ ಕಂಡರೂ ದೃಷ್ಠಿ ಒಂದಾಗಿದೆಯಲ್ಲ . ಲಿಂಗವು ಅರಿಯದರುವು ಅದನ್ನು ಅರಿಯಬಂದ ಅರಿದರಿದು ನೋಡಿದ ಅನಿಮಿಷ ಗುರುಘನನು ಅರಿಯದರುವು ಆದನೆ, ಇದೆಂಥ ನೆಲೆಯಿಲ್ಲದ ನಿರಾಳ. ಈ ನಿರಾಳವೆಂಬ ಕೂಸು ಕಂಡು ಪ್ರಭುದೇವ ತನಗೆ ತಾನೆ ಉಪದೇಶ ಕೊಂಡನೆ! ಆಶ್ಚರ್ಯ ಉಪದೇಶಕ್ಕಿಂಬಿಲ್ಲದುದರಲ್ಲಿ ಉಪದೇಶಕ್ಕಿಂಬಿಲ್ಲವೆಂದು ಉಪದೇಶವ ಇಂಬಾಯಿತೆ? ಇದು ವಿಚಿತ್ರ . ಮೌನ ಗುರುವಿನಿಂದ ಮೌನವಾಗಿ ಉಪದೇಶಕೊಂಡುದು ಇದೆಂಥ ಅಪ್ರತಿಮ ಗುರ್ವಾನುಗ್ರಹ? ಇದು ಗುರುವಾಗಿ ಗುರುವ ನೋಡುವದು. ಲಿಂಗವಾಗಿ ಲಿಂಗವ ನೋಡುವುದು ಇದೆಂಥ ಅನುಪಮ ಗುರು ಶಿಷ್ಯರ ಬೆಡಗು, ಇದು ಅನಿಯಮದ ಬೆಡಗು, ಇದು ತನ್ನಿಂದ ತಾನೆ ತಾನಾದ ಬೆಡಗು. ಇಲ್ಲಿ ಬಿನ್ನಾಣವ ನೆಣಸಬಾರದು. ಗುರುವೆಂದರೂ ತಾನೆ ಲಿಂಗವೆಂದರೂ ತಾನೆ, ತಾನು ತಾನೆ ಬಿಟ್ಟು'' ಮಹೇಶನಾದೆನೆಂಬುದು ಅರುಹಿನ ಕೇಡು . ಹಿಡಿದು ಭಕ್ತನಾದೆನೆಂಬುದು ನಿಜದ ಕೇಡು. ಬಿಡುವುದು ಹಿಡಿವುದು ಮನ ಕಲ್ಪಿತವಲ್ಲದೆ ಕಲ್ಪನಾರಹಿತ ಭಕ್ತ ಮಹೇಶ್ವರನಲ್ಲಿಪ್ಪುದೇನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನ'' ಎಂಬ ಮಹಾಪ್ರಸಾದ ಘನವ ಅರಿವುಡೆ ತಾನೆ ಕಲ್ಪನಾರಹಿತನು, ತಾನೆ ಅಕಲ್ಪಿತನು. ತಾನು ಮನಸ್ಸೆಂದು ಆಗದವನು ಮನಸ್ಸಿನ ಕ್ರಿಯೆಯೂ ಆಗದವನು. ಭಕ್ತನಾದರೆ ಕಲ್ಪನಾರಹಿತನಾಗಿ ತನ್ನ ಘನ ಮಹಿಮವ ನೋಡುವುದು. ಮಹೇಶನಾದರೆ ಕಲ್ಪನಾರಹಿತನಾಗಿ ತನ್ನ ಘನ ಮಹಿಮವ ನೋಡುವುದು, ನೋಡುವುದು ನೋಡುವುಡೆ ತಾನು ಎನೊಂದಾಗದ ಘನಕ್ಕೆ ಘನವು ಎಂಬುದು ತನ್ನಿಂದ ತನಗೆ ವಿದಿತವಾಗುವುಡೆ ತಾನೆ ಅಕಲ್ಪಿತ ಘನನೆಂಬುದು ನಿಃಸಂದೇಹವು .

108

ಅಕ್ಷರದಲ ಭ್ಯಾಸವ ಮಾಡಿ ಬರ(ಹ)ವ ತೊಡೆವ ಪರಿಯಂತೊ!
ಸ್ವರೂಪವೆಂಬುದಾವುದು. ನಿರೂಪ ವೆಂಬುದಾವುದೆಂದರಿಯರಾಗಿ
ಆದಿ ನಿರಾಳ, ಮಧ್ಯ ನಿರಾಳ ಊರ್ದ್ವ ನಿರಾಳ ಗುಹೇಶ್ವರಾ. **II 642 II**

ಉತ್ತರ ಸಿದ್ಧಾಂತ – 234

ತಾತ್ಪರ್ಯ: ಅಕ್ಷರದಲಭ್ಯಾಸವ ಮಾಡಿ ಬರ(ಹ)ವ ತೊಡೆವ ಪರಿ ಎಂತೊ? ಸ್ವರೂಪವೆಂಬುದಾವುದು ನಿರೂಪವೆಂಬು ದಾವುದೆಂದರಿಯರಾಗಿ : ಎಂದು ಬಿತ್ತರಿಸಿದ ಪ್ರಭುವಿನ ಮಹಾದರುವು ಅರಿದರಿದು ನೋಡ ಬೇಕಾದುದು. ಈ ಮಹಾಂತನ ಮಹಾನುಭವ ವರಿತವರು ಅದೆಷ್ಟು ಜನ? ಅಕ್ಷರದಲಭ್ಯಾಸವ ಮಾಡಿ ಬರ(ಹ)ವ ತೊಡೆವವರು ಶಿಕ್ಕುವುದು ವಿರಳ. ಅಕ್ಷರದಲಭ್ಯಾಸ ಮಾಡುವವರು ಯಾರು? ಪ್ರಥಮವೇದಿಗಳು, ಅತೀತ, ಅನಾಗತರು, ಶೃತಿವಂತರು ಇವರುಗಳು ಅಕ್ಷರದಲಭ್ಯಾಸ ಮಾಡುವ ಮಹಾಂತರು. ಇವರು ಶಬ್ದ ಸಂಭ್ರಮದವರು, ಇವರುಗಳಿಗೆ ಬರೆದ ಅಕ್ಷರವೆ ಬ್ರಹ್ಮವಾಗಿದೆ. ಇವರು ಅಕ್ಷರ ಬ್ರಹ್ಮರು ಇದು ಕಾರಣ ಇವರುಗಳಿಗೆ ಪ್ರಥಮ ವೇದವೆ ಬ್ರಹ್ಮವಾಗಿದೆ. ಅತೀತ ಅನಾಗತನಿಗೆ ಅತೀತವೆಂಬುದು ಅಭ್ಯಾಸದ ಮತಿಯೆ ಬ್ರಹ್ಮವಾಗಿದೆ. ಶೃತಿವಂತರಿಗೆ ಆಗಮದಲ್ಲಿ ಹೇಳಿದ ಬರಹ ಜ್ಞಾನವೆ ಪರಬ್ರಹ್ಮವಾಗಿದೆ. ಶಿವಾಗಮವೆ ಇವರಿಗೆ ಬ್ರಹ್ಮವಾಗಿದೆ. ಉಪನಿಷದ್ ಮಹಾಕಾವ್ಯವು ಇವರಿಗೆ ಬ್ರಹ್ಮವಾಗಿದೆ ಇದನ್ನೆ ಅಭ್ಯಾಸ ಮಾಡುವವರಿಗೆ ಬರವ(ಹಣೆಬರಹವ) ತೊಡೆವ ಪರಿ ಎಂತೊ? ಎಂದು ಪ್ರಭುದೇವ ಎಚ್ಚರಿಸಿದ.

ಓ ! ಅಕ್ಷರದಲಭ್ಯಾಸ ಮಾಡುವ ಮತಿ ಮಹಾಂತರೆ? ಪ್ರಭುವಿನ ಕರುಣೆಯ ಕಳ ಕಳಿಯ ನೋಡಿರೆ ? ಆ ಮಹಾಂತನ ಮಹಾನುಭವ ನೋಡಿರೆ? ಘನಕ್ಕೆ ಘನವಾದ ಅನುವ ನೋಡಿರೆ? ಅಕ್ಷರವು ಅಭ್ಯಾಸವನ್ನು ಅರಿತಿತೊ। ವೇದ ಶಾಸ್ತ್ರಗಳಲ್ಲಿ ಬರೆದ ಅಕ್ಷರ ತಾನೊ? ಅದನ್ನು ಅಭ್ಯಾಸ ಮಾಡುವ ಮತಿ ತಾನೊ, ಮನ ತಾನೊ ಆರು ಹೇಳಿರಿ. ವೇದವೆ ಇರಲಿ, ಶಾಸ್ತ್ರಂಗಳೆ ಇರಲಿ, ಶೃತಿಗಳೆ ಇರಲಿ, ಆವೆ ಇರಲಿ ಇವುಗಳು ಬರೆದವುಗಳಲ್ಲವೆ? ಬರೆದುದಾದಲ್ಲಿ ಅದು ಲಿಪಿ ಅಲ್ಲವೆ? ಈ ಲಿಖಿತದಲ್ಲಿ ಕಾಣಿಸಿಕೊಂಡುದು ಅವಿನಾಶಿ ಪರಬ್ರಹ್ಮವೆ? ಅದು ನಾಶರಹಿತ ತತ್ವವೆ ಇದನ್ನು ಕಂಡು ಕಲಿತ ಅಭ್ಯಾಸ ಇದಾದರೂ ನಾಶರಹಿತವೆ? ಅರಿದರಿದು ನೋಡಿರೆ ಅಪ್ಪಯ್ಯಗಳಿರಾ! ಇವುಗಳೆ ತಾನೆಂದಲ್ಲಿ ತನ್ನ ತಾನರಿತಂತಾಯಿತೆ ? ವೇದವು ತಾನಾರೆಂದು ಅರಿತಿತೆ? ಅಭ್ಯಾಸ ಮಾಡುವ ಮತಿ ನೀನಾಗಲಾರೆ ಎಂದು ತಿಳಿಸಿಕೊಟ್ಟಿತೆ ? ಶಾಸ್ತ್ರವು ನಿನ್ನ ಸ್ವರೂಪ ಸಿದ್ಧಿಸಿಕೊಟ್ಟಿತೆ? ಶೃತಿ ಶಬ್ದದ ಹಂಗಿಗೊಳಪಡದಂತೆ ಮಾಡಿತೆ? ನಿಮ್ಮಿಂದ ನೀವೆ ಅರಿದರಿದು ನೋಡಿರೆ? ಅರಿದರಿದು ನೋಡಿದಲ್ಲಿ ಬಹು ಸಂತೋಷ ಪರಮ ಸಂತೋಷ.

ಸ್ವರೂಪದಾವುದು ನಿರೂಪದಾವುದು ಎಂದರಿತಿರಾ? ಅರಿತಲ್ಲಿ ಸ್ವರೂಪವೆಂಬುದಾದರೂ ತನ್ನೊಳ ಇದೆಯೆ? ನಿರೂಪವೆಂಬುದಾದರೂ ತನ್ನೊಳ ಇದೆಯೆ? ಅಹುದು ಅಲ್ಲವೆಂದು ವಿಭಾಗ ಮಾಡಲು ಸಂದಿಲ್ಲದಿರುವಾಗ ಆವುದಕ್ಕೆ ಅಹುದೆನ್ನುವದು , ಆವುದಕ್ಕೆ ಅಲ್ಲೆನ್ನುವದು. ನುಡಿಗೆಡೆಗೊಡದ ಘನದಲ್ಲಿ ಶಬ್ದಸಂದಣಿಗೆ ಸಂದುಂಟೆ! ಶಬ್ದವೆ ಮೀಸಲಾಗಿರುವ ಘನವರಿಯದೆ ಶಬ್ದ ಸಂಭ್ರಮಕ್ಕೆ ಇಂಬಾದಲ್ಲಿ ಪ್ರಾರಬ್ಧ ಬರವ ತೊಡೆವ ಪರಿ ಎಂತು? ಬರವ ದಿಟವಾದಲ್ಲಿ ಅಭ್ಯಾಸವು ದಿಟವಾಯಿತು. ಬರೆದ ವೇದಾದಿಗಳೆಲ್ಲವೂ ದಿಟವಾದವು. ಹೀಗಾದಲ್ಲಿ ತನ್ನ ಪೂರ್ವದ ಆದಿ ನಿರಾಳ, ಮಧ್ಯ ನಿರಾಳ, ಊರ್ಧ್ವನಿರಾಳ ಗುಹೇಶ್ವರನೆಂಬುದು ತನ್ನಿಂದ ತನಗೆ ವಿದಿತವಾಯಿತೆ? ಆಗದಿದ್ದಲ್ಲಿ ಏನ ಹೇಳಿದಡೇನು? ಏನ ಕೇಳಿದಡೇನು? ಮಹಾವಾಕ್ಯ ಶ್ರವಣ ಮಾಡಿದರೇನು? ತಾನಾರೆಂದು ತನ್ನ ಮುನ್ನ ಮುನ್ನಲಾದ ಘನವ ಅರಿದನೆ? ತನ್ನಿಂದ ತಾನಾದ ಘನಕ್ಕೆ ಘನವರಿದನೆ?

ವೇದವ ನೋದುವ ಅಣ್ಣಗಳು ನೀವು ಕೇಳಿರೊ? ವೇದ ವೇಧಿಸಲಿಲ್ಲ,ಶಾಸ್ತ್ರ ಸಾಧಿಸಲಿಲ್ಲ,ಪುರಾಣ ಪೂರೈಸಲಿಲ್ಲ, ಆಗಮಕ್ಕೆ ಆದಿ ಇಲ್ಲ ಇದು ಕಾರಣ ಆದ್ಯರಲ್ಲ, ವೇದ್ಯರಲ್ಲ ಸಾಧ್ಯರಲ್ಲ ಬರಿಯ ಹಿರಿಯರು ನೋಡಾ, ಕೂಡಲಚೆನ್ನಸಂಗಮದೇವಾ. ಎಂದು ಷಟ್‌ಸ್ಥಲ ಚಕ್ರವರ್ತಿ ಮಹಾಂತ ಹೇಳಿದುದು.

ವೇದ ನೋಡಿದವನು ಅಕ್ಷರದಲಭ್ಯಾಸ ಮಾಡುವನಾದುದರಿಂದ ಬರವ ತೊಡೆವುದು ಅಸಾಧ್ಯವಾಗಿದೆ. ಇವರೆಲ್ಲರು ಮತಿಗತಿಗೆ ಸಿಲುಕಿದವರು. ಇವರುಗಳಿಗೆ ಬರೆದವನು ದಿಟ ಅಭ್ಯಾಸ ಮಾಡಿದ ಮತಿ ದಿಟ , ಸಟೆ ದಿಟವ ಮಾಡಿದವಂಗೆ ಪ್ರಾರಬ್ಧವದೆಂತು ಹರಿವುದು? ಇವರು ಬರಿಯ ಹಿರಿಯರು. ಶಾಸ್ತ್ರ ಸಾಧಿಸಿದ ಶಬ್ದವೇದಿಗಳು , ನಿಶಬ್ದ ಘನವೇನು ಬಲ್ಲರು? ಶಬ್ದ ಸಂಭ್ರಮದ ಮಹಾಂತ ಶಬ್ದದ ಸುಳಿವಿನ ಸೂತಕವ ಪರಿಹರಿಸಿಕೊಳ್ಳದ್ದರಿಂದ, ಈತನು ಹಣೆಯ ಬರವ ತೊಡೆವ ಪರಿ ಎಂತು?

ಆಗಮಕ್ಕೆ ಆದಿ ಇಲ್ಲ, ಆಗಮ ಪ್ರೇಮಿಗಳು ಜ್ಞಾನ ಕರ್ಮ ಸಮುಚ್ಚಯ ಮಾಡುವದರಲ್ಲಿಯೆ ಇವರ ಅಭ್ಯಾಸ. ಈ ಅಭ್ಯಾಸವೆ ತಾವಾದರು ಆಗಮವು ದಿಟವಾಯಿತು. ಇವರು ತಾವಾರೆಂದು ತಮ್ಮ ತಾವರಿಯಲಿಲ್ಲ. ಇದು ಕಾರಣ ಇವರು ಆಧ್ಯರಲ್ಲ ,ವೇದ್ಯರಲ್ಲ ,ಸಾಧ್ಯರಲ್ಲ. ಆದ್ಯರೆಂದರೆ ತಾನಾರೆಂದರಿತು ಮರಹು ನಷ್ಟವಾಗಿ ಅರಿಯದರುವು ತಾವಾಗಿ ನಿಂತ ಘನ ಗಂಭೀರರು. ಘನಕ್ಕೆ ಘನರು ಅವರೆ ಆದಿ ನಿರಾಳ ಮಧ್ಯನಿರಾಳ ಊರ್ಧ್ವನಿರಾಳ. ಅವರೆ ಕ್ಷರಾಕ್ಷರ ಮೀರಿದ ಘನಕ್ಕೆ ಘನರು. ಅವರು ಕ್ಷರದ ಅಭ್ಯಾಸಿಗಳಲ್ಲ ಅಕ್ಷರದಭ್ಯಾಸಿಗಳಲ್ಲ, ಕ್ಷರವ ಕಾಣಲಿಲ್ಲ. ಅಕ್ಷರವೆಂಬುದ ಕಾಣಲಿಲ್ಲ. ತನ್ನಿಂದ ತನ್ನ ಕಂಡವರು ಕಂಡಿದ್ದರಿಂದ ಆವಾವುದರ ಅಭ್ಯಾಸ ಮಾಡ ಹೋಗಲಿಲ್ಲ. ಅವುಗಳ ನೋಡಿದರೂ ತನ್ನ ಕಂಡುದರಿಂದ ವೇದ ಘನವಾಗಲಿಲ್ಲ.ಶಾಸ್ತ್ರ ಪುರಾಣಗಳು ಘನವಾಗಲಿಲ್ಲ ಅವರುಗಳಿಗೆ ಅವು ಹೆತ್ತರಿವು ಆಗಿ ತಾನು ಸ್ವಮಹಿಮನಾದುದು ತನ್ನಿಂದ ಸಿದ್ಧವಾಗಿ, ಹಣೆಯ ಬರವ ತೊಡೆದವರು,ಸ್ವರೂಪ ತಿಳಿದವರು. ನಿರೂಪ ತಿಳಿದವರು.ಇಲ್ಲಾದುದಿಲ್ಲಾದುದೆಂದಿಪ್ಪುದು, ಇಲ್ಲಾದುದಿಲ್ಲಾದುದೆಂತಿಪ್ಪುದು ಅನುವರಿತು ತನುವ ಮರೆದವರು ಭಾವರಹಿತರಾಗಿರುವುದರಿಂದ ಆದಿ ನಿರಾಳ ಮಧ್ಯನಿರಾಳ ಊರ್ಧ್ವನಿರಾಳವೆಂದು ಶಬ್ದಮುಗ್ಧರಾಗಿಹರು.

109

ಮೂರರಲ್ಲಿ ಮುಟ್ಟಲಿಲ್ಲ, ಆರರಲ್ಲಿ ತೋರಲಿಲ್ಲ
ಎಂಟರಲ್ಲಿ ಕಂಡುದಿಲ್ಲ ಒಂದರಲ್ಲಿ ನಿಂದುದಿಲ್ಲ
ಇದನೇನೆಂಬೆ ನೆಂತೆಂಬೆ ? ಕಾಯದಲ್ಲಿ ಅಳಿದುದಿಲ್ಲ
ಜೀವದಲ್ಲಿ ಉಳಿದುದಿಲ್ಲ
ಗುಹೇಶ್ವರನೆಂಬ ಲಿಂಗವು ಶಬ್ದಕ್ಕೆ ಬಂದುದಿಲ್ಲ ॥ 667 ॥

ತಾತ್ಪರ್ಯ : ಮೂರರಲ್ಲಿ ಮುಟ್ಟಲಿಲ್ಲ : ಗುಹೇಶ್ವರನೆಂಬ ಲಿಂಗ, ಮೂರುಭಾವಂಗಳು ಮುಟ್ಟಲಿಲ್ಲ. '' ಅಂಗದ ಧರೆಯ ಮೇಲೆ ಮೂರು ಬಾವಿಯುಂಟು. ಮೊದಲನೆಯ ಬಾವಿಯ ಮುಟ್ಟಿದಾತ ಅಂಗಸಂಗಿಯಾದ, ನಡುವಣ ಭಾವಿ ಮುಟ್ಟಿದಾತ ಉತ್ಪತ್ತಿ , ಸ್ಥಿತಿ, ಲಯ ಕ್ಕೊಳಗಾದ, ಮೇಲಣಭಾವಿ ಮುಟ್ಟಿದಾತ ಜೀವನ್ಮುಕ್ತನಾದ. ಇವ ತಟ್ಟದೆ ಮುಟ್ಟದೆ ಪರಬ್ರಹ್ಮವ ದಾಟಿದರು ಗುಹೇಶ್ವರ ಲಿಂಗದ ಹಂಗುಹರಿದ ಶರಣರು''.

ಮೂರು ಭಾವಂಗಳ ಮುಟ್ಟದರಲ್ಲದೆ ಭಾವಕ್ಕಗಮ್ಯವಾದ ತನ್ನ ಘನವ ಮುಟ್ಟಿದವರು ಈ ಮೂರರಲ್ಲಿ ಅಂದರೆ ಅಂಗ ಭಾವವು ಮುಟ್ಟಲಿಲ್ಲ, ಲಿಂಗ ಲಿಂಗ ಎಂದು ಲಿಂಗ ಭಾವ ಮುಟ್ಟಲಿಲ್ಲ, ಜಂಗಮ ಭಾವವು ಮುಟ್ಟಲಿಲ್ಲ. ಲಿಂಗೈಕ್ಯ ಶರಣ ಜೀವ ಭಾವ ಸೇರದವನು. ಅಂತರಾತ್ಮವೆಂಬ ಭಾವವು ಒಪ್ಪದವನು ಪರಮಾತ್ಮನೆಂಬ ಭಾವವು ಒಪ್ಪದವನು. ಲಿಂಗ ಸಕೀಲ ಸಂಯೋಗ ವರ್ಮಸ್ಥಲವರಿತ ಶರಣ ಶಬ್ಧ ಮೀಸಲವಾಗಿಹ ಶರಣ. ಭಾವಕ್ಕಿಂಬು ಕೊಡದ ಶರಣ. ಅವನೆಂತು ಮೂರರಲ್ಲಿ ಮುಟ್ಟುವನು? ಮೂರು

ಭಾವಂಗಳು ಮುಟ್ಟದವನು. ಇದು ಕಾರಣ ಮೂರರಲ್ಲಿ ಮುಟ್ಟಲಿಲ್ಲವೆಂದು ಹೇಳಿಹರು . ಪ್ರಪಂಚ ಪ್ರತೀತಸಹಿತ ಬ್ರಹ್ಮಾಕಾರವನ್ನೆ ಮುಟ್ಟುವದೆ ಜೀವನ್ಮುಕ್ತಿಯಾಗಿದೆ. ಈ ಭರಿತ ಭಾವವನ್ನೆ ಮುಟ್ಟದವನು ಶರಣನು, ಅವನೆಂತು ಅಂಗಭಾವ ಮುಟ್ಟುವನು ಲಿಂಗ ಭಾವ ಮುಟ್ಟುವನು.

ಆರರಲ್ಲಿ ತೋರಲಿಲ್ಲ, ತೊರಬಾರದ ಘನ ತೋರುವದದೆಂತು? ಆರರಲ್ಲಿ ತೋರಲಿಲ್ಲ ಷಟ್‌ಸ್ಥಲದಲ್ಲಿ ತೋರಲಿಲ್ಲ ಭಕ್ತ ಸ್ಥಲ ಘನವೆಂದು ನುಡಿವಿರಿ, ಭಕ್ತಸ್ಥಲಕ್ಕೆ ಮಹೇಶ್ವರ ಸ್ಥಲವೆ ಪ್ರತಿ. ಮಹೇಶ್ವರ ಸ್ಥಲಕ್ಕೆ ಪ್ರಸಾದಿ ಸ್ಥಲವೆ ಪ್ರತಿ. ಪ್ರಸಾದಿ ಸ್ಥಲಕ್ಕೆ ಪ್ರಾಣಲಿಂಗ ಸ್ಥಲವೆ ಪ್ರತಿ, ಪ್ರಾಣಲಿಂಗ ಸ್ಥಲಕ್ಕೆ ಶರಣ ಸ್ಥಲವೆ ಪ್ರತಿ, ಶರಣ ಸ್ಥಲಕ್ಕೆ ಐಕ್ಯ ಸ್ಥಲವೆ ಪ್ರತಿ, ಪ್ರತಿಯುಳ್ಳದು ಅರುವೆ, ಪ್ರತಿಯುಳ್ಳದು ಜ್ಞಾನವೆ! ಪ್ರತಿಯುಳ್ಳದು ನಿರ್ಭಾವವೆ? ಪ್ರತಿಯುಳ್ಳದು ಮೋಕ್ಷವೆ! ಇಂತಿದು ಷಟ್‌ಸ್ಥಲ ಮಾರ್ಗವಲ್ಲ ಸ್ಥಲವಲ್ಲ ನಿಃಸ್ಥಲವಲ್ಲ ಸಾವಯವವಲ್ಲ ನಿರವಯವಲ್ಲ ಒಳಗೂ ಅಲ್ಲ, ಹೊರಗೂ ಅಲ್ಲ, ಸಂಗವಲ್ಲ, ನಿಸ್ಸಂಗವಲ್ಲ ಸುಸಂಗ ಬಯಲು ಕೂಡಲಚೆನ್ನಸಂಗಮದೇವಾ ನಿಮ್ಮ ಶರಣ.

ಭಕ್ತ ಸ್ಥಲ ಘನವೆಂಬೆನೆ ಮಹೇಶ್ವರ ಸ್ಥಲವು ಪ್ರತಿಯಾಗಿದೆ, ಮತಿಜ್ಞಾನ ಭಕ್ತನದು, ಭಕ್ತನದು ಮತಿಜ್ಞಾನವಾದರೆ, ಮಹೇಶ್ವರನದು ಶೃತ ಜ್ಞಾನವಾಗಿದೆ. ಮಹೇಶ್ವರನದು ಶೃತ ಜ್ಞಾನವಾದರೆ ಪ್ರಸಾದಿಯದು ಮನ ಪರಿಪೂರ್ಣವುಳ್ಳ ಜ್ಞಾನವಾಗಿದೆ. ಪ್ರಸಾದಿಯದು ಮನದಿಂದುಕ್ತ ಪರಿಪೂರ್ಣವುಳ್ಳದ್ದಾದರೆ, ಪ್ರಾಣಲಿಂಗಿ ಅವಧಿ ಜ್ಞಾನವಾಗಿದೆ. ಪ್ರಾಣಲಿಂಗಿಯದು ಅವಧಿ ಜ್ಞಾನವಾದರೆ ಶರಣನದು ಕೇವಲ ಜ್ಞಾನವಾಗಿದೆ. ಶರಣನದು ಕೇವಲ ಜ್ಞಾನವಾದರೆ , ಐಕ್ಯನದು ಏಕಾಕಾರ ಜ್ಞಾನವು. ಹೀಗೆ ಒಂದಕ್ಕೊಂದು ಪ್ರತಿಯಾದ , ಆರು ಸ್ಥಲಂಗಳು ಲಿಂಗವರಿತ ಮಹಾಂತ ಈ ಆರರಲ್ಲಿ ತೋರಬಾರದ ಘನ ಹೆಳಲೆಂತುಬಾರದು, ಏನೊಂದಾಗದ ಘನ ಅನುಪಮ ಉಪಮಿಸುವದದೆಂತು?

ವೇದ ವೇದಾರ್ಥ ಸಾರಾಯದಿಂದ ಆರು ಶಾಸ್ತ್ರ ಹದಿನೆಂಟು ಪುರಾಣಂಗಳಾದವು. ಈ ಪುರಾಣಂಗಳ ನರಿವುದರಿಂದ ಜ್ಯೋತಿರ್ಜ್ಞಾನವಾಯಿತ್ತು . ಈ ಜ್ಯೋತಿರ್ಜ್ಞಾನದಿಂದ ಆರುಸ್ಥಲಂಗಳು ವೇದವು ವೇದಿಸಲರಿಯಲಿಲ್ಲ, ಶಾಸ್ತ್ರ ಸಾಧಿಸಲಿಲ್ಲ ಪುರಾಣಂಗಳು ಪೂರೈಸಲಿಲ್ಲ ಅವುಗಳಿಂದ ಹೊರಬಂದು ಆರು ಸ್ಥಲಗಳಲ್ಲಿ ತಾನಾರೆಂಬ ತನ್ನರಿವು ತನಗದೆಂತು ವೇದ್ಯವಾಗುವುದು. ಇದು ಕಾರಣ ತಾನಾರೆಂಬ ತನ್ನಿರುವು ನಿರಾಲಂಬ ವಾದ್ದರಿಂದ ಆರರಲ್ಲಿ ತೋರಲಿಲ್ಲವೆಂದು ಹೇಳಿಹರು. ಏಕೆಂದರೆ ಭಕ್ತನಾಗಲಿ ಮಹೇಶ್ವರನಾಗಲಿ ಪ್ರಸಾದಿಯಾಗಲಿ ಪ್ರಾಣಲಿಂಗಿ, ಶರಣ, ಐಕ್ಯನೆ ಆಗಲಿ, ಆರೆ ಆಗಲಿ ಆಗಿರುವವನು ಕಲ್ಪಿತ ಪುರುಷನಲ್ಲವೆ? ಕಲ್ಪಿತಪುರುಷನೆ ಆರು ಸ್ಥಲಂಗಳಾದವನು. ಇವು ಮನ ಕಲ್ಪಿತವಲ್ಲದೆ ಕಲ್ಪನಾರಹಿತ ಘನ. ಅದು ಅಕಲ್ಪಿತವು ಏನೊಂದಾಗದ ಘನ. ಕಲ್ಪಿತಪುರುಷ, ಇಲ್ಲಾದುದು ಎಂತಿಪ್ಪುದು ಇಲ್ಲಾದುದಿಲ್ಲಾದುದೆಂತಿಪ್ಪದು ಅಕಲ್ಪಿತ ಘನದಲ್ಲಿ ಕಲ್ಪಿಸಲಿಂಬುಂಟೆ?

ನಿಸ್ಸೀಮವು ಸೀಮೆಯುಳ್ಳದ್ದಾಗಬಹುದೆ? ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ ಘನ ಸೀಮೆಯುಳ್ಳದ್ದಾಗುವುದೆ? ಅಂದು ಇಂದು ಎಂದೆಂದೂ ಇದ್ದಂತಿದ್ದ ಘನ ಆರು ಸ್ಥಲಂಗಳಾಗಬಹುದೆ? ಆಗಲರಿಯದು, ಇದು ಕಾರಣ ಆರರಲ್ಲಿ ತೋರಲಿಲ್ಲವೆಂದು ಹೇಳಿದ್ದಾರೆ.

ಎಂಟರಲ್ಲಿ ಕಂಡುದಿಲ್ಲ: ಎಂಟು? ಅವುಗಳು ಯಾವು? ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ ಈ ಎಂಟು ಅಷ್ಟಾವರ್ಣಗಳು. ಇವು ಎಂಟರಲ್ಲಿ ತನ್ನ ಕಂಡುದಿಲ್ಲ. ಇವು ತನಗಿಂತ ಬೇರಾಗಿ ತನ್ನಿಂದ ತಿಳಿಸಿಕೊಳ್ಳುವದರಿಂದ ಇವುಗಳಲ್ಲಿ ತಾನು ಕಾಣುವದೆಂತು ? ಹೆತ್ತರಿವು ಸ್ವಮಹಿಮೆಯ ತಿಳಿಸುವುದೆ? ಅರುವಿಂಗರುವಾದುದು ಹೆತ್ತರಿವು ತಿಳಿಸುವದೆ?

ಗುರು ಭೋಧ ರೂಪವಾಗಿದೆ, ಲಿಂಗ ಪೂಜಿಸಿಕೊಳ್ಳುವದಾಗಿದೆ, ಜಂಗಮ ಭಕ್ತನ ಪಡಿಪದಾರ್ಥ ಅರ್ಪಿಸಿಕೊಳ್ಳವವನಾಗಿಹನು. ಪಾದೋದಕ ಕ್ರಿಯೆದಿಂದುಕ್ತವು, ಪ್ರಸಾದವು ಪಂಚ ಪಕ್ವಾನ್ನವು, ವಿಭೂತಿ ಅದು ಮಾಡಿದ ಘಟ್ಟಿ . ರುದ್ರಾಕ್ಷಿ ಮರದ ಕೊಡುಗೆಯು. ಮಂತ್ರ ಗುರುಹೃದಯದಿಂದ ಹೊರಬಂದುದು. ಇವು ಎಂಟು ಅಷ್ಟಾವರ್ಣಗಳು ತನಗಿಂತ ಅನ್ಯವಾದವುಗಳು. ಇದೆಲ್ಲವು ತನ್ನಿಂದ ತಿಳಿಸಿಕೊಳ್ಳತಕ್ಕವುಗಳು. ತನ್ನ ಸ್ವರೂಪ ಆಗಲರಿಯವು .ಇದು ಕಾರಣ ಎಂಟರಲ್ಲಿ ತನ್ನ ಕಂಡುದಿಲ್ಲವೆಂದು ಹೇಳಿಹರು.

ಒಂದರಲ್ಲಿ ನಿಂದುದಿಲ್ಲ : ಮೂರಕ್ಕೆ ಮೀರಿದವನು, ಅವನೆಂತು ಮೂರರಲ್ಲಿ ನಿಲ್ಲುವನು. ಅಂಗಭಾವ, ಲಿಂಗಭಾವದಲ್ಲಿಯೂ ನಿಂದುದಿಲ್ಲ, ಜಂಗಮ ಭಾವವಾಗಿಹ ಅರುವಿನ ಭಾವದಲ್ಲಿಯೂ ನಿಂದುದಿಲ್ಲ. ಇದು ಕಾರಣ ಮೂರರಲ್ಲಿ ಮುಟ್ಟಲಿಲ್ಲವೆಂದು ಹೇಳಿಹರು.

ಆರರಲ್ಲಿ ಒಂದಾದ ಸ್ಥಲದಲ್ಲಿಯೂ ನಿಲ್ಲದವನು. ಏಕೆಂದರೆ ಆರು ಸ್ಥಲಕ್ಕೆ ಮೀರಿದ ಘನನು, ಆರರಲ್ಲಿ ಒಂದಾದ ಸ್ಥಲದಲ್ಲಿ ನಿಂದುದು ಹೇಗೆ? ಇದನೇನೆಂಬೆ ಎಂತೆಂಬೆ! ಕಾಯದಲ್ಲಿ ಅಳಿದುದಿಲ್ಲ ಜೀವದಲ್ಲಿ ಉಳಿದುದಿಲ್ಲ, ಗುಹೇಶ್ವರನೆಂಬ ಲಿಂಗವು ಶಬ್ದಕ್ಕೆ ಬಂದುದಿಲ್ಲ.

ತಾನಾರೆಂದರಿವುಡೆ ಗುಹೇಶ್ವರ ಲಿಂಗವು ತಾನೆ. ತಾನೆ ಶಬ್ದಕ್ಕೆ ಒಳಪಡದಿರುವದರಿಂದ ಅದು ಕಾಯದಲ್ಲಿ ಅಳಿದುದಿಲ್ಲ. ಘಟದೊಳಗಿದ್ದ ಆಕಾಶ ಅದು ಅಳಿದುದಿಲ್ಲ. ಮಠದೊಳಗಿದ್ದ ಆಕಾಶ ಅದು ಮಠದೊಳಿರಲಿ ಅದು ಅಳಿದುದಿಲ್ಲ ಹಾಗೆ ಕಾಯದಲ್ಲಿ ಗುಹೇಶ್ವರ ಲಿಂಗ ಅಳಿದುದಿಲ್ಲ. ಗುಹೇಶ್ವರ ಲಿಂಗಕ್ಕೆ ಆವ ಕಾಯವಾದರೇನು? ಅದು ಸ್ವಗತ ಭೇದವುಳ್ಳದ್ದಿರಲಿ. ಸಜಾತಿ ಭೇದವುಳ್ಳದ್ದಿರಲಿ, ವಿಜಾತಿ ಭೇದವುಳ್ಳದ್ದಿರಲಿ ಆವ ಕಾಯದಲ್ಲಿದ್ದರೂ ಅದು ಅಳಿದುದಿಲ್ಲ.

ಜೀವದಲ್ಲಿದ್ದರೂ ಉಳಿದುದಿಲ್ಲ , ಅಂದರೆ ಕಲ್ಪಿತ ಪುರುಷನಾಗಿ ಉಳಿದುದಿಲ್ಲ ಜೀವನಾಗಿ ಅಂತರಾತ್ಮನಾಗಿ ಪರಮಾತ್ಮನಾಗಿ ಉಳಿದುದಿಲ್ಲ , ಜೀವಬ್ರಹ್ಮರ ಭೇದ ಜ್ಞಾನವುಳ್ಳವನಾಗಿ ಉಳಿದುದಿಲ್ಲ. ಜೀವ ಬ್ರಹ್ಮರೇಕತ್ವವಾಗಿ ಪರಬ್ರಹ್ಮವೆಂಬುದಾಗಿ ಪೂರ್ಣನೆಂಬುದಾಗಿ ಅಖಂಡನೆಂಬುದಾಗಿ ಸ್ವಯಂ ಪ್ರಕಾಶನೆಂಬುದಾಗಿ ಸ್ವಯಂ ಜ್ಯೋತಿ ಎಂಬುದಾಗಿ, ಗುರು ಶಿಷ್ಯ ಎಂಬುದಾಗಿ ಭಕ್ತ ಜಂಗಮನೆಂಬುದಾಗಿ , ಲಿಂಗ ಲಿಂಗ ಎಂಬುದಾಗಿ ಪ್ರಸಾದ ಪ್ರಸಾದ ಎಂಬುದಾಗಿ ಹೆತ್ತರಿವು ಆಗಿ ಉಳಿದುದಿಲ್ಲ. ಏಕೆಂದರೆ ಮಿಗೆ ಮಿಗೆಯಾಗಿಹ ಮೀಸಲ ತತ್ವವರಿತುದರಿಂದ ಎಂಜಲ ಮಾತಿನ ರಂಜಕರಾಗದೆ ಶಬ್ದವೆ ಮೀಸಲವಾಗಿರುವದರಿಂದ ಗುಹೇಶ್ವರ ಲಿಂಗ ಶಬ್ದಕ್ಕೆ ಬಂದುದಲ್ಲವೆಂದು ಹೇಳಿಹರು. ಇದು ಲಿಂಗಸಕೀಲ ಸಂಯೋಗ ವರ್ಮಸ್ಥಲ ನರಿತುದರಿಂದ ಇಲ್ಲಿ ಶಬ್ದಸೂತಕಕ್ಕೆಡೆಯಿಲ್ಲವಾಗಿ ಗುಹೇಶ್ವರ ಲಿಂಗವರಿತವರು ನಿಃಶಬ್ದವೇದಿಗಳೆಂದು ಹೇಳಿಹರು.

110

ಅಂಗದಿಂದ ಲಿಂಗಸುಖ ಲಿಂಗದಿಂದ ಅಂಗ ಸುಖ
ಅಂಗ ಲಿಂಗ ಸುಖದಿಂದ ಪರಮಸುಖ ನೋಡಯ್ಯ .
ಅಂಗ ಲಿಂಗ ಸಂಗ ಸುಖವನು ಕೂಡಲಚೆನ್ನಸಂಗಯ್ಯನಲ್ಲಿ
ಲಿಂಗೈಕ್ಯನೆ ಬಲ್ಲ. || 227 ||

ತಾತ್ಪರ್ಯ : ಅಂಗದಿಂದ ಲಿಂಗಸುಖ ಲಿಂಗದಿಂದ ಅಂಗಸುಖ : ಇದಾವಾ ಅಂಗದಿಂದ ಲಿಂಗ ಸುಖ! ತ್ಯಾಗಾಂಗ ಭೋಗಾಂಗ ಯೋಗಾಂಗದ ಸುಖ ಲಿಂಗಸುಖ ವೆನ್ನಬೇಕೆ? ಎನ್ನಲಾಗದು, ಇದು

ಚಿದಂಗದಿಂದ ಲಿಂಗಸುಖ ಅಂದರೆ ಚಿತ್‌ಸುಖ. ಚಿತ್ ಸುಖದಿಂದ ಚಿದಂಗ ಸುಖ . ಆಶ್ಚರ್ಯ; ಶಿಷ್ಯನಿಂದ ಗುರುಸುಖ, ಗುರು ಸುಖದಿಂದ ಶಿಷ್ಯನ ಸುಖ ಆಶ್ಚರ್ಯ, ತನ್ನ ಅಂಗದಿಂದ ತನ್ನ ಸುಖ ತನ್ನ ಸುಖದಿಂದ ಸುಖದ ಜ್ಞಾನವೆನ್ನಲೆ? ಸುಖದ ಜ್ಞಾನದಿಂದ ಸುಖವೆನ್ನಲೆ? ಇದು ಇದರಿಂದ ಇದಾರ ಸುಖವೆನಬೇಕು? ಜ್ಞಾನದಿಂದ ಜ್ಞಾನಾನಂದ ವೆನ್ನಲೆ? ಜ್ಞಾನದಿಂದ ಜ್ಞಾನವೆನ್ನಲೆ? ಇದಾರಿಂದ ಇದಾರದೆನ್ನಬೇಕು?

ಅನಿಮಿಷನಿಂದ ಬಸವರಸರ ಸುಖವೆನ್ನಲೆ? ಬಸವರಸರ ಸುಖದಿಂದ ಅನಿಮಿಷನ ಸುಖವೆನ್ನಲೆ ಇದಾರಿಂದ ಇದಾರದೆನ್ನಬೇಕು. ಪ್ರಭುವಿನಿಂದ ಅನಿಮಿಷ ಸುಖವೆನ್ನಲೆ? ಅನಿಮಿಷನಿಂದ ಪ್ರಭುವಿನ ಸುಖವೆನ್ನಲೆ? ಇದಾರಿಂದ ಇದಾರ ಸುಖವೆನ್ನಬೇಕು? ಎರಡು ಒಂದಾಯಿತೆ? ಒಂದು ಎರಡಾಯಿತೆ! ಆಶ್ಚರ್ಯ ಬಿಚ್ಚಿಬೇರಾಗದ ಘನ, ಅಹಮಿಲ್ಲದ ಕೂಟ ಸಯಕೂಟ ಎರಡಾಗಿ ಕಂಡರೂ ತನ್ನಯ ಕೂಟ ಕೂಡದಗಲದ ಕೂಟ. ಇಲ್ಲಿ ಒಂದೆರಡೆಂಬ ಸಂದೇಹ ತರಬಾರದು ನೋಡಾ.

ತನ್ನಿಂದ ತನ್ನ ಸುಖ . ತನ್ನ ಸುಖ ತಾನು ತಾನೆ . ತಾನು ಬೇರೆಯೆ ತನ್ನ ಸುಖ ಬೇರೆಯೆ ? ಕಲ್ಪಿಸ ಹೋಗಿ ತಾನು ಬೇರೆ. ತನ್ನಸುಖ ಬೇರಾಯಿತ್ತು. ಅರಿವುಡೆ ತಾನೆಂಬುದು ಸುಖ , ಸುಖವೆಂಬುದು ತಾನು ! ಇದು ತನ್ನಿಂದ ತನ್ನ ಕಂಡ ಸುಖದ ಸುಖ . ಅದನೆಂತು ವರ್ಣಿಸುವದು? ಅರುವಿನ ಹೃದಯ ಅರುವು ಒಂದಾದ ಘನವ ವರ್ಣಿಸುವರೆ? ಅಪ್ರಮಾಣವ ಪ್ರಮಾಣದಿಂದ ವರ್ಣಿಸುವರೆ?

ಶಿಷ್ಯನ ಅಂಗ ಚಿದಂಗ. ಗುರು ಚಿತ್ ಸ್ವರೂಪ ಶಿಷ್ಯ ಅರುಹೃದಯ, ಗುರು ಅರುವಿಂಗರುವು, ಅರು ಹೃದಯದಿ ಅರುವಿಂಗರುವೊ? ಅರುವಿಂಗರುವಿನಿಂದ ಅರು ಹೃದಯವೊ? ಇದಾರಿಂದ ಇದಾರದೆನ್ನಬೇಕು. ಇದು ಸಕಲರ ಹೃದಯದಲ್ಲಿ ನ್ಯಸ್ತವಾಗಿಹ ಅಗವ್ಯನಿಧಿ, ಅಚಿಂತ್ಯನಿಧಿ ಒಂದೆರಡೆನ್ನಲು ಬಾರದಿಪ್ಪ ಅಪ್ರಮಾಣವಾಗಿಹ ನಿಲುವು ಏನೆಂಬೇನೆಂಬೆ.

ಶಿಷ್ಯನ ಮುಖದಿಂದಾದ ಗುರು ಘನವೆನ್ನಲೆ? ಗುರು ಘನದಿಂದಾದ ಶಿಷ್ಯನ ಘನವೆನ್ನಲೆ? (ಗುರು ಘನದಿಂದಾದ ಶಿಷ್ಯನ ಘನವೆಂಬೆನೆ) ಶಿಷ್ಯ ಘನವು ಮುನ್ನ ಮುನ್ನವೆ ಗುರು ಘನವ ಬೆಳಗಿತ್ತು. ಶಿಷ್ಯನ ಮುಖದಿಂದ ಗುರು ಘನವ ಬೆಳಗಿತ್ತಂಬೆನೆ? ಅರುವಿಂಗರುವಾಗಿ ಶಿಷ್ಯನ ಘನವ ಪ್ರಜ್ವಲಿಸಿತ್ತು . ಅರುಹೃದಯ, ಅರುವಿಂಗರುವಾಗಿ ಪ್ರಜ್ವಲಿಸುವದು. ಒಂದೆರಡಾಗಿ ಕಾಣಬಾರದು ನೋಡಾ ನಾ ನೀನೆಂಬುದಕ್ಕೆಡೆಗೊಡದ ಘನದಲ್ಲಿ ಹಿರಿ ಕಿರಿದಾಗಿ ಕಾಣಬಾರದು ನೋಡಾ. ಗುರುವೆಂಬುದು ಶಿಷ್ಯ ಶಿಷ್ಯನೆಂಬದು ಗುರು. ಅಗಲಲಿಲ್ಲದ ಕೂಟದಲ್ಲಿ ಗುರುವಾರೊ ಶಿಷ್ಯರಾರೊ? ತೋರಬಾರದ ಘನದಲ್ಲಿ ಹೇಳಲೆಂತೊ? ಹೇಳಬಾರದ ಘನದಲ್ಲಿ ತೋರಲೆಂತೊ? ಅಂಗ ಲಿಂಗ ಸುಖದಿಂದ ಪರಮಸುಖ ನೋಡಯ್ಯ , ಗುರು ಶಿಷ್ಯರ ಸಮರಸ ಪರಮಾಮೃತ ನೋಡಾ. ಶಿಷ್ಯನ ಅಂಗ ಶ್ರೀಗುರುವಿನ ಅರುವಿಂಗರುವಾಗಿ ಒಂದಾದುದು ಪರಮಸುಖ ನೋಡಯ್ಯ .

ಅರುಹೃದಯ , ಅಂಗವಿಂಗರುವು ಒಂದಾದುದು ಪರಮಸುಖ ನೋಡಯ್ಯ . ಅರುಹೃದಯ ಶಬ್ದಮುಗ್ಧ ಅರುವಿಂಗರುವಾದುದು ಶಬ್ದಮುಗ್ಧ . ಅರು ಹೃದಯ , ಶಿಷ್ಯನ ಅಂಗ ಅರುವಿಂಗರುವಾದುದು . ಅರುವ ಅರಿಯ ಹೇಳಿದ ಗುರು ಕರುಣಿಸಿದ ಕಾರುಣ್ಯ (ಲಿಂಗ)ಇದು ಅರುವಿಂಗರುವಾದುದು ಶಬ್ದಮುಗ್ಧ . ಶಿಷ್ಯನ ಅಂಗ ಮೂಕ ಗುರು ಕರುಣಿಸಿ ಕಾರುಣ್ಯ ಮೂಕ, ಮೂಕ, ಮೂಕನನ್ನು ನೋಡಿದುದು. ನಿರ್ವಾಣವು ನಿರ್ವಾಣದಿರುವ ನೋಡಿದುದು. ಶಬ್ದಮುಗ್ಧ ನಿಶಬ್ದ ವೇದವ ನೋಡಿದುದು. ಇದು ತನ್ನಿಂದ ತನ್ನ ಕಂಡ ನಿರ್ವಾಣ ನಿಜಧಾಮ ನೋಡದ ನೋಟ, ಅರಿಯದರುವು ತನ್ನಯ ಅರುವು ಒಂದಾದುದು ಅನುಪಮವು. ಅಂಗವು ಅನುಪಮ ಲಿಂಗವು

ಅನುಪಮ, ಅನುಪಮದಿಂದ ಅನುಪಮಸುಖ. ಇದು ತನ್ನಯ ಸುಖ , ಸುಖದ ಸುಖವಾಗಿರುವುದರಿಂದ ಪರಮಸುಖ ನೋಡಯ್ಯ ಎಂದು ಹೇಳಿಹರು.

ಅಂಗ ಲಿಂಗ ಸುಖವನು ಕೂಡಲಚೆನ್ನಸಂಗಯ್ಯನಲ್ಲಿ ಲಿಂಗೈಕ್ಯನೆ ಬಲ್ಲನು : ಅಂಗ ! ಲಿಂಗ ಸುಖ ಮೂಕನ ಸುಖ, ಅಂಗವು ಶೃತಿಗಗೋಚರ, ಲಿಂಗವು ಶೃತಿಗಗೋಚರ! ''ಎನ್ನಂಗವನು ಶ್ರೀ ಗುರು ಮಂತ್ರಮಾಡಿ ತೋರಿದನಾಗಿ ಸಾವಯವ ನಿರವಯಕ್ಕೆ ಭೇದವಿಲ್ಲವಯ್ಯ, ಚೆನ್ನಮಲ್ಲಿಕಾರ್ಜುನ'' ಎಂಬ ಮಹಾನುಭವದಿ ಅರಿದರಿದು ನೊಡುವುಡೆ ಅಂಗವು ನಿರ್ವಾಣ, ಲಿಂಗವು ನಿರ್ವಾಣದ ನಿಜ ಗುಟ್ಟು ಎಂಬುದು ವೇದ್ಯವು. ಆಗ ಅಂಗ ಅಂಗ ಎಂದವನು ಮೂಕನೆ : ಲಿಂಗ ಲಿಂಗ ಎಂದವನು ಮೂಕನೆ? ನಾನು ಮೂಕನೆಂದವನು ಮೂಕನೆ, ಮೂಕನೆನ್ನದವನು ಮೂಕನು ಹೇಗೋ ಹಾಗೆ ಈ ಅಂಗ ಲಿಂಗ ಸುಖವೆ ಕೂಡಲಚೆನ್ನಸಂಗಯ್ಯನಲ್ಲಿ ಲಿಂಗೈಕ್ಯನೆ ಬಲ್ಲನು ಎಂದು ಷಟ್‌ಸ್ಥಲ ಚಕ್ರವರ್ತಿ ಹೇಳಿದುದು.

ಲಿಂಗೈಕ್ಯವೆಂಬುದು ಎಂಜಲ ಮಾತ ನುಡಿವ ರಂಜಕರದಲ್ಲ. ಮಿಗೆ ಮಿಗೆ ಮೀಸಲು ಬಲ್ಲವರ ನಿಲುವು ಲಿಂಗ ಸಕೀಲ ಸಂಯೋಗ ವರ್ಮಸ್ಥಲ ನರಿತವರ ನಿಲವು. ಲಿಂಗೈಕ್ಯರ ನಿಲವು. ಇದು ಶಬ್ದ ಮೀಸಲಾಗಿದ್ದವರ ಸುಖ. ಭಾವಕ್ಕಿಂಬು ಕೊಡದ ಸುಖ, ನುಡಿಗೆಡೆಗೊಡದ ಸುಖ. ಈ ಸಂಜ್ಞೆಯ ಅರಿಯ ಹೋದವರಿಗೆ ನುಡಿಯ ಹೋಗಗೊಡದು ನೋಡಾ. ನಡೆದು ತೋರಿಸ ಹೋಗಗೊಡದು ನೋಡಾ. ಲಿಂಗವರಿತು ಲಿಂಗವಾಗಿದ್ದ ಘನ, ಲಿಂಗೈಕ್ಯ ನಿಲವು. ಅದು ಲಿಂಗವಾದವರ ನಿಲವು, ನಿರ್ವಾಣಂಗೆ ತನ್ನಯ ನಿಜ ನಿಲವು ಎಂದು ಹೇಳಿದುದು.

111

ಅಂಗದುದಯ ಲಿಂಗ ಸುಖವು
ಲಿಂಗದುದಯ ಅಂಗ ಸುಖವು
ಅಂಗ , ಲಿಂಗ ಸಂಗ ಸುಖದಿಂದ ಮಿಕ್ಕಿಮೀರಿನಿಂದ ಪರಮ
ಸುಖವ ನೇನೆಂಬೆನಯ್ಯಾ ಕೂಡಲಚೆನ್ನಸಂಗನ ಶರಣ ನೇನೆಂಬೆನಯ್ಯಾ.

ತಾತ್ಪರ್ಯ : ಅಂಗದುದಯ ಲಿಂಗ ಸುಖವು ಲಿಂಗದುದಯ ಅಂಗ ಸುಖವು : ಲಿಂಗ ಸುಖವು ಇದಾರಿಗೆ ತಾನಾರೆಂದು ತನ್ನನರಿದವಂಗೆ ತನ್ನ ಉದಯ ಇದು ಉದಯಾಸ್ತಗಳಿಲ್ಲದುದಯ ಹೇಳಲೆಂತು ಬಾರದು. ಹೇಳಬಾದರ ಘನವ ತೋರಲೆಂತು , ತನ್ನ ಉದಯ ಅಂಗದುದಯ ಅನುಪಮ ವರ್ಣಾತೀತ, ಅಂಗ ಅಂಗ ಎಂದು ಹಲಬುವವರಿಗೆ ತೋರದು , ಲಿಂಗ ಲಿಂಗ ಎಂದು ಹಲಬುವವರಿಗೂ ಅಂಗದುದಯ ತಿಳಿಯದು. ಅರುವರಿಯ ಹೋದವರಿಗಿದು ವೇದ್ಯವು , ಚೈತನ್ಯವರಿಯ ಹೋದವರಿಗಿದು ಅಂಗದುದಯ ಲಿಂಗ ಸುಖವು. ಇದು ಶಬ್ದಸಂದಣಿಗಿಂಬಿಲ್ಲದುದಯ, ಶೃತಿವಂತರಿಗಸಾಧ್ಯವಾದುದು . ಇದು ಉಪಮಿಸಬಾರದ ಸುಖವು ಲಿಂಗ ಸುಖವು.

ಸುಖದುದಯ ಸುಖದ ಸುಖವು ಸುಖದುದಯವೆಂಬುದು ಅಂಗದುದಯ . ಸುಖದ ಸುಖವು ಅದು ಲಿಂಗ ಸುಖವು. ಸೂರ್ಯೋದಯದ ಘನವ ಕಣ್ಣು ಬಲ್ಲದು. ಬಲ್ಲ ಕಣ್ಣು ಮೌನ. ಸೂರ್ಯೋದಯವು ಮೌನವು . ಮೌನದುದಯ ನಿರಂತರ ಮೌನವು . ಇದು ಅರು ಹೃದಯ ಬಲ್ಲುದು, ಅರು ಹೃದಯ ಅರುವಿಂಗರುವಾಗಿ ಶಬ್ದ ಸಂದಣಿಗಿಂಬುಗೊಡದ ಘನ ಸುಖ. ಲಿಂಗ ಸುಖ

ಅದನೆಂತು ವರ್ಣಿಸುವುದು .

ಲಿಂಗದುದಯ ಅಂಗ ಸುಖವು , ಲಿಂಗದುದಯ ನೋಡ ಹೋಗಿ ಅಂಗ ಸುಖವು ಲಿಂಗವರಿಯ ಹೋಗಿ ಅಂಗ ಸುಖವು . ಲಿಂಗ,ಲಿಂಗ ಎಂದು ಹಲಬುವವರಿಗೂ ಪೂಜಾ ಲಿಂಗದ ಲಿಂಗಾರ್ಚರಿಗೂ ಲಿಂಗದುದಯ ತಿಳಿಯದು .

(ಇಷ್ಟಲಿಂಗ) ಅರುವ ಅರಿಯ ಹೇಳಿ ಸದ್ಗುರು ಸ್ವಾಮಿ ಕುರುಹ ಕೈಯಲ್ಲಿ ಕೊಟ್ಟುದು ಅರುವೆಂದು ಅರಿಯ ಹೋದವರು ಲಿಂಗದುದಯದ ಘನವ ಬಲ್ಲರು.

ಲಿಂಗದುದಯ ಅಂಗ ಸುಖ ಅಂಗದುದಯ ಲಿಂಗ ಸುಖ ಇದಾರು ನಿರ್ಣಯ ಮಾಡುವುದು. ಲಿಂಗ ಬೇರೆ ಅಂಗ ಬೇರೆ ಗುರು ಬೇರೆಂದು ಭೇದ ಜ್ಞಾನಿಗಳಿಗಿದು ತಿಳಿಯದ ವಿಷಯ ಒಂದೆಂಬುವವರಿಗೂ ಎಟಕದ ವಿಷಯ.

ಆತ್ಮೈವ ಕೇವಲಂ ಸರ್ವಂ ಭೇದಾಭೇದೊನ ವಿದ್ಯತೆ
ಆಸ್ತಿ,ನಾಸ್ತಿ ಕಥಂ ಭ್ರೂಯಾಂ ವಿಸ್ಮಯಃ ಪ್ರಭಾತಿ ಮೇ

ಆತ್ಮನೆ ಸರ್ವ ಆಗಿರುತ್ತಾನೆ . ಭೇದವೂ ಇಲ್ಲ ಅಭೇದವೂ ಇಲ್ಲ ಇದನ್ನು ಅಸ್ತಿ ಅಥವಾ ನಾಸ್ತಿ ಎಂದು ಹೇಗೆ ಹೇಳುವುದು ಇದೊಂದು ವಿಸ್ಮಯವಾಗಿ ನನಗೆ ತೋರುತ್ತದೆ. ತಾನಾರೆಂದು ತನ್ನ ಅರಿತವಂಗೆ ಸಹಜವು . ಅಂಗದುದಯ , ಅದು ತನ್ನ ಉದಯ . ಲಿಂಗವರಿಯಲು ಅದು ತನ್ನ ಉದಯ. ಗುರು ಘನವರಿಯಲು ಅದು ತನ್ನ ಉದಯ . ಲಿಂಗದುದಯವಾಗಲಿ ಅಂಗದುದಯವಾಗಲಿ ಸಕಲರ ಯತಾರ್ಥ ಜ್ಞಾನದುದಯ ಸೀಮಾತೀತದುದಯ ವಾದುದರಿಂದ ಆರಿಂದಲೂ ಬಂದುದೆಂದು ಹೇಳಲುಬಾರದು . ಗುರುವಿನಿಂದ ಬಂದುದೆಂದಲ್ಲಿ ಗುರು ಘನ ಬಂದವನಲ್ಲ ಹೋದವನಲ್ಲ. ಸಕಲರ ಸರ್ವಾಂಗದೊಳ ಹೊರಗೆನ್ನದೆ ಪ್ರಜ್ವಲಿಸುವ ಘನವಿರುವಲ್ಲಿ ಬಂದುದೆನ್ನಲು ಬರದು ಬಾರದುದನೆನ್ನಲು ಬರದು ಬಂದು ಬಾರದಿಪ್ಪ ಘನ, ಬಾರದಂತಿದ್ದ ಭಕ್ತನ ಕರಕಮಲದೋಳ್ ಥಳ ಥಳಸಿ ಬೆಳಗುವ ಬೆಳಗು.ಅಖಂಡ ಬೆಳಗು ಸೀಮಾತೀತ ಬೆಳಗು ಎಂತು ವರ್ಣಿಸುವುದು ಇದು ತನ್ನಿಂದ ತಾನರಿದವರಿಗಿದು ವೇದ್ಯವು.

ಅಂಗ,ಲಿಂಗ ಸಂಗ ಸುಖದಿಂದ ಮಿಕ್ಕಿ ಮೀರಿನಿಂದ ಪರಮ ಸುಖವ ನೇನೆಂಬೆನಯ್ಯಾ . ಅಂಗ, ಲಿಂಗ ಸಂಗದಿಂದ ಮಿಕ್ಕಿ ಮೀರಿನಿಂದ ಪರಮ ಸುಖವು ನಿರಾಲಂಬವು. ಇದು ಅಂಗ ಲಿಂಗ ಸಂಗದ ಸುಖಕ್ಕೆ ಮೀರಿದ ಸುಖ ನೋಡಾ. ಇದು ಅಂಗವಾಗಿ ಲಿಂಗವಾಗಿ ಸಂಗ ಮಾಡಿಪ ಕ್ರಿಯಾ ಕೂಟವಲ್ಲ. ನಿಷ್ಕ್ರಿಯದಲ್ಲಿ ನಿಂದ ನಿಜದ ನಿಬ್ಬೆರಗುಳ್ಳ ನಿಲುವು . ನುಡಿದು ಹೇಳುವವರ ನಿಲುವು ಅಲ್ಲ. ಲಿಂಗವರಿತು ಲಿಂಗಕ್ಕೆ ಲಿಂಗವಾದ ಘನ. ಅದು ನಿರಾಲಂಬ ನಿಸ್ಸಂಗ, ನಿಸ್ಸಂಗಿಗೆ ಸಂಗ ವೇತರದು , ನಿರಾಲಂಬನಿಗೆ ಅಂಗನೆಂಬುವ ಆಲಂಬನ ಎಲ್ಲಿಯದು. ಲಿಂಗ ನೆನ್ನುವ ಆಲಂಬನೆ ಎಲ್ಲಿಯದು , ಲಿಂಗಾಂಗ ಸಮರಸವೆನ್ನುವ ಆಲಂಬನೆಯಿಲ್ಲದವಂಗೆ ನಿರಾಲಂಬದ ಪರಸುಖವು ಅದು ಮಿಕ್ಕಿ ಮೀರಿನಿಂದ ಪರಮ ಸುಖವು . ಇದು ತನ್ನ ತಾನರಿತವರಿಗಿದು ಸಹಜವು. ಶ್ರೀ ಗುರು ಕೃಪೆಯಿಂದ ದೊರೆತ ಅರುವ ಅರಿಯ ಹೇಳಿದ ಕಾರುಣ್ಯದ ಸಂಜ್ಞೆಯ ಅರಿತವರಿಗಿದು ಸಹಜವು. ಅವರು ಕಾಣದುದ ಕಂಡವರು ಕೇಳದುದ ಕೇಳಿದವರು. ಅಸಾಧ್ಯವ ಸಾಧಿಸಿದವರು.

ಮುಟ್ಟಬಾರದುದ ಮುಟ್ಟಿದವರಾದುದರಿಂದ ಮಿಕ್ಕಿ ಮೀರಿನಿಂದ ಪರಮ ಸುಖ. ಅದು ತನ್ನ

ಹೃದಯದೊಳ ನ್ಯಸ್ತವಾಗಿಹ ಮುನ್ನ ಮುನ್ನಲಾದ ಘನ. ತನ್ನಿಂದ ತಾನಾದ ಘನಕ್ಕೆ ಘನ . ಏನೆಂಬೆ ಎಂತೆಂಬೆ ಏನೆಂದೆನಲಿಲ್ಲದ ಅರುವು ನುಡಿಗೆಡೆಗೊಡದ ಘನವ ಏನೆಂಬೇನೆಂಬೆ. ಭಾವಕ್ಕಿಂಬಿಲ್ಲದುದ ನೇನೆಂಬೇನೆಂಬೆ ಶಬ್ದ ಮೀಸಲಾಗಿದ್ದುದ ನೇನೆಂಬೆ ಇದು ಮಿಕ್ಕಿ ಮೀರಿನಿಂತ ಪರಮ ಸುಖ ನೋಡಯ್ಯಾ.

ಕೂಡಲ ಚೆನ್ನಸಂಗಯ್ಯ ಶರಣನೇನೆಂಬೆ, ಶರಣನೆಂದರೆ ಪರತತ್ವ ನಿಜ ಸಂಯುಕ್ತರು. ಆನು ನೀನೆನ್ನದಿಹ ಶಬ್ದ ಸುಖಿಗಳು. ಘನ ಗಂಭೀರ ಮಹಾ ಘನದೊಳಗೆ ಘನಕ್ಕೆ ಘನವಾಗಿದ್ದವರು. ದೇಹಿಗೆ ದೇಹಿಯಾಗಿರ್ಪ ಮಹಾಮಹಿಮರು. ಅರುವಿಂಗರುವಾಗಿಹ ಶರಣರು. ಶರಣನ ಇರುವು ಕೂಡಲ ಚೆನ್ನಸಂಗಯ್ಯನಾಗಿಹ ಇರವು ಉಪಮಿಸಲಳವಲ್ಲ.ಇದು ಕಾರಣ, ಕೂಡಲ ಚೆನ್ನಸಂಗಯ್ಯನ ಶರಣ ನೇನೆಂಬೆನಯ್ಯಾ ಎಂದು ಹೇಳಿದ್ದಾರೆ.

112

ಅಂಗವೆ ಲಿಂಗವಾಗಿ, ಲಿಂಗವೆ ಅಂಗವಾದ ಬಳಿಕ ಅಲ್ಲಿಯೆ ಕಾಣೆಭೋ
ಉಂಟೆಂದು ಅರಸಲಿಲ್ಲ ಬೇರೆ ತೋರಲಿಲ್ಲ, ಅಲ್ಲಿಯೆ ಕಾಣೆಭೋ
ಸಾಕ್ಷಿ : '' ಸರ್ವಾಂಗ ಲಿಂಗ ಮೇವ ಸ್ಯಾತ ಅಂಗ ಪಾತ್ರಾ ತಥಾರ್ಪಿತಂ
ಪ್ರಸಾದ ತೃಪ್ತಿ ರೂಪತ್ವ ಲಿಂಗ ಮಯಮ್ ಭವೇತ್ '' ಎಂದುದಾಗಿ
ಅಲ್ಲಿಯೆ ಕಾಣೆಭೋ ಕೂಡಲ ಚೆನ್ನಸಂಗಮ ದೇವಾ
ಲಿಂಗ ನಿರಂತರವಲ್ಲಿಯ ಕಾಣೆಭೋ.

ತಾತ್ಪರ್ಯ: ಅಂಗವೆ ಲಿಂಗವಾಗಿ, ಲಿಂಗವೆ ಅಂಗವಾದ ಬಳಿಕ ಅಲ್ಲಿಯೆ ಕಾಣೆಭೋ: ಎರಡೊಂದಾದ ಘನ, ಅದನಾರಯ್ಯ ಹೀಗೆ ಎಂದು ವಿವರಿಸುವುದು? ಎರಡೊಂದಾದ ಬಳಿಕ ಅರ್ಚನೆ ಹಿಂಗಿತ್ತು. ಅರ್ಪಿತ ಹಿಂಗಿತ್ತು ಅವಧಾನ ವಿಲ್ಲ, ಶಬ್ದಕ್ಕೆ ತೆರಹಿಲ್ಲ ಗುಹೇಶ್ವರಾ ಎರಡೊಂದಾದುದು ನಾ ನೀನೆಂಬುದಕ್ಕೆ ತೆರಹಿಲ್ಲದ ಘನ, ಅಲ್ಲಿ ಅಂಗ ನಾನು, ನೀನು ಲಿಂಗನೆಂಬುದಕ್ಕಿಂಬಿಲ್ಲದ ಘನದಿರುವೆ ಅರುವಾಗಿಪ್ಪದು. ಅದೀಗ ಎರಡೊಂದಾದುದು, ಅಂಗವು ಶೃತಿಗಗೋಚರ, ಲಿಂಗ ಶೃತಿಗಗೋಚರ, ನುಡಿಗೆಡೆಗೊಡದ ಘನದಿರುವಿನ ಅರುವಾಗಿ ಪ್ರಜ್ವಲಿಸಿದುದೆ, ಎರಡೊಂದಾದುದು . ಎನ್ನಂಗವನು ಶ್ರೀಗುರು ಮಂತ್ರ ಮಾಡಿ ತೋರಿದನಾಗಿ ಸಾವಯವ ನಿರವಯಕ್ಕೆ ಭೇದವಿಲ್ಲದುದೆ ಎರಡೊಂದಾದುದು ಅದನೆಂತು ವರ್ಣಿಸುವದು? ಎನ್ನ ಸದ್ಗುರು ಸ್ವಾಮಿ, ಎನಗೆ ಕರುಣಿಸಿದ ಕಾರುಣ್ಯವ ನೇನೆಂದುಪಮಿಸುವೆನಯ್ಯ ಗುರುಲಿಂಗವು ಸಾಕ್ಷಾತ್ ಪರಶಿವನಿಂದ ವಿಶೇಷವು, ಜ್ಯೋತಿಯಲೊದಗಿದ ಜ್ಯೋತಿಯಂತಾಯಿತ್ತು. ದರ್ಪಣದೊಳಗಣ ಪ್ರತಿಬಿಂಬದಂತಾಯಿತ್ತು.

ಶ್ರೀಗುರು ಕರುಣಿಸಿದ ಕಾರುಣ್ಯವದು (ಲಿಂಗ) ಅನುಪಮ ಜ್ಞಾನ ಜ್ಯೋತಿ, ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ ಘನ. ಅದನ್ನು ಮುಟ್ಟಿದುದು, ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ. ಅದು ಅನುಪಮ ಜ್ಞಾನ ಜ್ಯೋತಿ, ಜ್ಯೋತಿಯಲೊದಗಿದ ಜ್ಯೋತಿ. ಜ್ಯೋತಿ, ಜ್ಯೋತಿ, ಒಂದಾದುದ ನೇನೆಂಬೆ ? ಅಂಗವೆಂಬೆನೆ ಲಿಂಗವಾಯಿತ್ತು. ಲಿಂಗವೆಂಬೆನೆ ಅಂಗವಾಯಿತ್ತು. ಲಿಂಗ ಈ ಸಂಜ್ಞೆ ಕರುಣಿಸಿದ ಕಾರುಣ್ಯ ಅದನೆಂತು ವರ್ಣಿಸುವದು? ವರ್ಣಾತೀತವದು . ಶ್ರೀ ಗುರು ಕರುಣೆ ಅದು . ನಡೆನುಡಿಯಿಲ್ಲದ ಗುರ್ವಾನುಗ್ರಹ, ಕಡೆಮೊದಲಲ್ಲಿದ ಕಾರ್ಯ, ಅರುವಿಂಗರುವಾಗಿ ಪ್ರಜ್ವಲಿಸುವ ಲಿಂಗ. ಇದು ಪೂಜೆಗೆ ಬಾರದ ಲಿಂಗ, ಇದು ವೇದ ವೇದಾಂತಗಳಿಗ ಸಾಧ್ಯವಾಗಿಹ ಜ್ಞಾನ

(ಲಿಂಗ). ಇದು ಲಿಂಗ, ಲಿಂಗ, ಎಂದು ಹಲಬುವವರ ನಿಲುವುಳ್ಳ ಲಿಂಗವಲ್ಲ ಲಿಂಗಸಕೀಲ ಸಂಯೋಗ ವರ್ಮಸ್ಥಲ ನರಿತವರ ಚಿನ್ಹವು. ಅರುವ ಅರಿಯಹೋದವರ ಘನದಿರುವಿನ ಅರುವು. ಇದು ಅಂಗ ಲಿಂಗಾದುದು, ಲಿಂಗ ಅಂಗಾದುದು, ಇದುವೆ ಎರಡೊಂದಾದ ಘನವು.

ಶ್ರೀ ಗುರು ಕರುಣಿಸಿದ ಕಾರುಣ್ಯ , ನುಡಿಗೆಡೆಗೊಡದ ಘನವು, ಇದುವೆ ಶಿಷ್ಯನ ಅಂಗ ಶಬ್ದಮುಗ್ಧ ಲಿಂಗವು. ಶಬ್ದಮುಗ್ಧ ಅಂಗವು, ದೇಹಿಗೆ ದೇಹಿಯಾದುದು, ಗುರು ಕಾರುಣ್ಯವು. ಅರುವಿಂಗರುವು ಇದುವೆ ಜ್ಯೋತಿಯ ಲೊದಗಿದ ಜ್ಯೋತಿ. ವಾಙ್ಮನೋತಿವಾದ್ದರಿಂದ ಅನುಪಮ ಜ್ಯೋತಿ ವರ್ಣಾತೀತ. ಅರುವು ಅರಿಯಹೋಗಿ ತಾನೆ ಆದುದು ಸ್ವಯಂ ಜ್ಯೋತಿ ತಾನೆ. ಅಂಗವು ಸ್ವಯಂಜ್ಯೋತಿ ಲಿಂಗವು ಸ್ವಯಂಜ್ಯೋತಿ ಇದು ನಿರಂತರವಾಗಿಹ ಮಂಗಳಮಯ ಪರತತ್ವ ಇದು ಮಾತಿನಂತುಂಟಲ್ಲ , ನಿರಂತರವಾಗಿಹ ಮಂಗಳಮಯ ಜ್ಞಾನ ಸ್ವರೂಪ . ಎರಡೊಂದಾದ ಘನವ ಹೀಗೆ ಎಂದು ಹೇಗೆ ವರ್ಣಿಸುವದು . ಇದು ಮೂಕನ ಮೌನದ ಚಾರಿತ್ರ. ಆದಿ ಅಂತ್ಯವಿಲ್ಲದ ಶಬ್ದಮುಗ್ಧ. ಶ್ರೀಗುರು ಕರುಣಿಸಿದ ಕಾರುಣ್ಯ ಅರುವಿನ ಪರಿಮಳವೆಂದು ತಿಳಿವುದು.

ಉಂಟೆಂದು ಅರಸಲಿಲ್ಲ, ಬೇರೆ ತೋರಲಿಲ್ಲ ಅಲ್ಲಿಯೆ ಕಾಣಿಭೋ, ತನಗಿಂತನ್ಯವಾಗಿ ಅವ್ಯಯಪದ, ಅಚಿಂತ್ಯಪದ, ನಿರಂತರ ಪದವೊಂದು ಇದೆಯೆಂದು ಹುಡಕಲಿಲ್ಲ. ಈ ಅವಿನಾಶಿಯಾಗಿಹ ಅಚಿಂತ್ಯಾತ್ಮವು ತನಗೆ ಬೇರಾಗಿ ಕಂಡುದಿಲ್ಲ. ನಿರಂತರ ತಾನೆ ಆದುದರಿಂದ ತನಗಿಂತನ್ಯವಾಗಿ ಅವ್ಯಯ ಪದ ಹುಡುಕದ್ದರಿಂದ ಬೇರೆ ತೋರಲಿಲ್ಲ. ಅಚಿಂತ್ಯತ್ವ ತನ್ನಲ್ಲಿಯೆ ಕಂಡ , ತಾನೆ ಆಗಿ ಕಂಡಲ್ಲಿ ಶ್ರೀಗುರು ತಾನು ಒಂದಾದ ಘನವ ಅದನೆಂತು ವರ್ಣಿಸುವುದು. ತಾನು ಕಾಣಬಾರದ ಘನ ಶ್ರೀಗುರು ಕಾಣಬಾರದ ಘನ, ಇವನು ಪೂರ್ವನಾಮವಿಲ್ಲದಗುರು, ಪೂರ್ವನಾಮವಿಲ್ಲದ ಶಿಷ್ಯ ಇವರದು ಕೂಡದಗಲದ ಕೂಟ. ಶ್ರೀಗುರು ತನಗಿಂತನ್ಯವಾಗಲಿಲ್ಲ . ತಾನೆಂಬುದು ಶ್ರೀಗುರು, ಶ್ರೀಗುರುವೆಂಬುದು ತಾನು ಅಂಗವೆಂಬುದು ಲಿಂಗ, ಲಿಂಗವೆಂಬುದು ಅಂಗ . ಇದು ಹುಡುಕದ ನಿಲುವು. ಏಕೆಂದರೆ ಉಂಟೆಂದು ಅರಸಲಿಲ್ಲ ಬೇರೆ ತೋರಲಿಲ್ಲ ಅಲ್ಲಿಯೇ ಕಾಣಿಭೊ ತನ್ನ ತಾನರಿತ ಮೇಲೆ ಇನ್ನೇನಿನ್ನೇನು? ತಾನೆ ಪೃಥ್ವಿ ಅಪ್ಪು ತೇಜ ವಾಯು ಆಕಾಶ ಆತ್ಮನಾದ ಮೇಲೆ ಇನ್ನೇನಿನ್ನೇನು ಎಂದಂತೆ. ತನಗಿಂತ ಅನ್ಯ ತೋರದ್ದರಿಂದ ಸರ್ವಾಂಗ ಲಿಂಗಮೇವ ಸ್ಯಾತ , ಸರ್ವಾಂಗವು ಲಿಂಗಮಯವು.

ಅಂಗ ಪಾತ್ರಾ ತಥಾರ್ಪಿತಂ ಪ್ರಸಾದ ತೃಪ್ತಿರೂಪತ್ವಂ ಲಿಂಗಮಯಮ್ ಭವೇತ್ ಎಂದುದಾಗಿ ಅಲ್ಲಿಯೆ ಕಾಣಿಭೋ . ಈ ಅಂಗನೆಂಬ ಪಾತ್ರ ಇದು ಲಿಂಗಾರ್ಪಿತವಾಗಿ ಅಲ್ಲಿಯೆ ಪರಮಜ್ಞಾನ ಪರಮಾಮೃತ ಪರಮಾನಂದವಾಗಿಹ ವಾಙ್ಮನೋತೀತವೆಂಬ ಪ್ರಸಾದದ ಹಿರಿಮೆ ಪ್ರಜ್ವಲಿಸುವದು. ಆಗ ಪ್ರಸಾದವೆ ಗುರು, ಪ್ರಸಾದವೆ ಲಿಂಗ, ಪ್ರಸಾದವೆ ಜಂಗಮ, ಪ್ರಸಾದವೆ ಪರಾತ್ಪರ, ಪ್ರಸಾದವೆ ಪರಮಾಮೃತ ಅಂಗನ ಇರವು. ಲಿಂಗಯ್ಯನ ತೃಪ್ತರೂಪ ತೃಪ್ತಿಯ ಚಿನ್ಹ. ಇದು ಪರಾನಂದ , ಇದುವೆ ಲಿಂಗಮಯ ಭವೇತ್ ಎಂದಲ್ಲಿ ಅಲ್ಲಿಯೆ ಕಾಣಿಭೊ ಕೂಡಲಚೆನ್ನಸಂಗಮದೇವಾ. ಲಿಂಗ ನಿರಂತರ ಅಲ್ಲಿಯೆ ಕಾಣಿಭೊ.

ನಿರಂತರವಾಗಿಹ ಮಂಗಳಮಯವು ಲಿಂಗಘನವು ಅಚಿಂತ್ಯವು. ಮನವು ಪ್ರವೃತ್ತಿ ಪರವುಳ್ಳದ್ದಾದರೇನು, ನಿವೃತ್ತಿ ಪರವುಳ್ಳದ್ದಾದರೇನು, ಉಪಾಧಿಮನವಾದರೇನು, ನಿರುಪಾಧಿಮನ ಆದರೇನು , ನಾಮ ರೂಪಂಗಳ ನೆನಹಿನಿಂದುಕ್ತವಾದರೇನು, ಅಸ್ತಿ ಭಾತಿ ಪ್ರಿಯವೆಂಬ ಲಿಂಗ ನೆನಹುಳ್ಳದ್ದಾದರೇನು, ವಾಣಿ ಲೋಕದ ಕಥನಕ್ಕೊಳಪಟ್ಟರೇನು, ಅದು ಪರಮಾರ್ಥಕ್ಕೊಳ ಪಟ್ಟಿದ್ದರೇನು, ನಿರಂತರವಾಗಿಹ ಘನಲಿಂಗ ಇದ್ದಂತಿದ್ದುದರಿಂದ ಅಲ್ಲಿಯೆ ಕಾಣಿಭೊ . ಅಂದರೆ ಅಲ್ಲಿ ಎಂಬುದು ತನ್ನಲ್ಲಿಯೆ ಕಂಡುಕೊಳ್ಳವದು ಎಂದು ಹೇಳಿದಂತಾಗಿದೆ, ಎಂದು ಚನ್ನಬಸವಣ್ಣನವರು

ಹೇಳಿಹರು. ಇದು ಉದಯಾಸ್ತಗಳೆನ್ನದೆ ಪ್ರಜ್ವಲಿಸುವ ಸ್ವಯಂಜ್ಯೋತಿ. ಇದು ಎಂಜಲ ಮಾತು ನುಡಿವ ಮತಿಮಹಾಂತರನ್ನೊಳಗೊಂಡ ನಿಲವು ಅಲ್ಲ. ಮಿಗೆ ಮಿಗೆ ಮೀಸಲು ತತ್ವ ಬಲ್ಲವರ ನಿಲವು. ಲಿಂಗ, ಜಂಗಮ , ಪ್ರಸಾದ, ಎಂದು ನುಡಿವವರ ನುಡಿ ಕೇಳಿ ನುಡಿಯುವ ನುಡಿ ಅನುಭವವು ಅಲ್ಲ, ಇದು ಲಿಂಗವರಿತಲ್ಲಿ ಲಿಂಗವೆಂಬುದು ನಿರಂತರ, ಅದು ತಾನೆ ತನ್ನಲ್ಲಿಯೆ ಕಾಣಿಭೋ ಎಂದುದು.

113

ಶಬ್ದವು, ಅಶಬ್ದವು, ಶಬ್ದದಲ್ಲಿಯೆ ಕಾಣಬಹುದು ಕಾಣಿರೊ
ಇದ್ದವರಿದ್ದ ಸ್ಥಲವನೆ ನುಡಿವರು ಅದಕದು ಸಹಜ
ಲಿಂಗದ ನಡೆ ಲಿಂಗದ ನುಡಿ ಲಿಂಗದ ನೋಟ
ಕೂಡಲಚೆನ್ನಸಂಗಾ ನಿಮ್ಮ ಶರಣಂಗೆ. ॥ 384 ॥

ತಾತ್ಪರ್ಯ: ಶಬ್ದವು ಅಶಬ್ದವು ಶಬ್ದದಲ್ಲಿಯೆ ಕಾಣಬಹುದು ಕಾಣಿರೊ : ಶಬ್ದ ಅಶಬ್ದವು ಶಬ್ದವೆ. ವಾಣಿಯ ಕಾರ್ಯವೆಲ್ಲ ಶಬ್ದವೆ ! ಅದು ನುಡಿದರೂ ಶಬ್ದವೆ , ಅದು ನುಡಿಯ ಕೆಡಿಸುವ ನುಡಿ ನುಡಿದರೂ ಶಬ್ದವೆ. ಅಶಬ್ದವೆಂಬುದು ಶಬ್ದವ ನಿಷೇಧಿಸಿದರೂ ನುಡಿಯಿಂದುಕ್ತವಾಗಿದೆ. ಇದು ಕಾರಣ ಅಶಬ್ದವು ಶಬ್ದದಲ್ಲಿಯೆ ಎಂದು ಪರಿಗಣಿಸುವದು.

ಆರು ಶಬ್ದಸಂಭ್ರಮದವರಾಗಿದ್ದಾರೆ ಅವರ ಅಶಬ್ದವೆಂಬುದು ಬೇರಾಗಿ ತಿಳಿಯುವರು. ಅವರು ನಿಃಶಬ್ದ ಘನ ವೇಧಿಸದವರು . ಆರು ನಿಃಶಬ್ದ ಘನ ವೇದಿಸಿದವರು ಅವರಿಗೆ ವಾಣಿ ವಿಧೇಯ ವಾಕ್ಯನುಡಿದುದು ; ವಾಣಿಯು ನಿಷೇಧವಾಕ್ಯ ನುಡಿದುದು ವಾಣಿಯು ಶೃತಿ ಪ್ರಮಾಣಗಳು ನುಡಿಯುತ್ತಿರಲಿ ; ಶೃತಿಯನ್ನೆ ನಿಷೇದಿಸುವ ನುಡಿಯಾದರೂ ವಾಣಿಯು . ಇಲ್ಲಿ ಶೃತಿ ಪ್ರಮಾಣವು ಶಬ್ಧವಾಗಿದೆ. ಶೃತಿಗಳನ್ನೆ ಕೆಡಿಸುವ ಲಕ್ಷಣವುಳ್ಳ ನುಡಿಗೆಡೆಗೊಡದ ಘನವೆಂಬುದು ಅಶಬ್ದವಾಗಿದೆ . ಯತಾರ್ಥ ಅರಿತವರ ದೃಷ್ಠಿಯಲ್ಲಿ ಶಬ್ದ ಅಶಬ್ದವೆಂಬುದು ಶಬ್ದದಲ್ಲಿಯೇ ಕಂಡಿದ್ದಾರೆ. ಇದು ಕಾರಣ ತಾನಾಗನು ನಿಃಶಬ್ದಬ್ರಹ್ಮವಾಗದು ಎಂದು ಹೇಳಿಹರು.

ನಿಃಶಬ್ದ ಬ್ರಹ್ಮವು ವಾಙ್ಮನೋತೀತವು ವರ್ಣಾತೀತವು . ಅಲ್ಲಿ ಭಾವಕ್ಕಿಂಬಿಲ್ಲ ಶಬ್ದಮೀಸಲು ನುಡಿಯಲು ಅವಕಾಶವಿಲ್ಲ , ತಾನಾರೆಂದರಿತವರ ನಿಲವು ಅರುವ ಅರಿಯ ಹೋಗಿ ತಾನೆ ತಾನಾಗಿಹ ನಿಲುವು. ಮನ ಮೇರೆದಪ್ಪಿದ ನಿಜ ನಿಲವು , ಶಬ್ದ ಅಶಬ್ದ ಎರಡೊಂದಾದ ನಿಲುವು. ಅದು ವ್ಯವಹಾರದಿಂದುಕ್ತವಾದ ಶಬ್ದವಿರಲಿ , ಶಬ್ದಂಗಳನ್ನೆ ನಿಷೇಧಿಸುವ ಅಶಬ್ದವಿರಲಿ , ಇವಾವು ತನ್ನ ಸ್ವರೂಪವಾಗವು .

ಕೆಲಬರಿಗೆ ಬೋಧನೆ ಗುರುರೂಪಾಗಿದೆ. ಶಿಷ್ಯರಿಗೆ ಬೋಧವ ತೆಗೆದುಕೊಳ್ಳುವದೆ ಶಿಷ್ಯತ್ವವಾಗಿದೆ. ಇವರು ಸಮಸ್ವರೂಪವಾಗಿಹ ಘನವ ತಿಳಿಯದ್ದರಿಂದ ವಿಷಮ ಜ್ಞಾನಿಗಳಾಗಿಹರು ಇವರಿಗೆ ಶಬ್ದ ಸಂಭ್ರಮದ ಜ್ಞಾನವೆ ತನ್ನಿರವು ಆಗಿರುವದು . ಲಿಂಗದೇವನು ಪೂಜ್ಯನು , ತಾನು ಲಿಂಗಯ್ಯನನ್ನು ಪೂಜಿಸುವ ಪೂಜಕನು . ಲಿಂಗ ಲಿಂಗ ಎಂದು ಸುತ್ತಿರುವವನಾಗಿಹನು . ಪೂಜ್ಯರೂಪವಾಗಿಹ ಪೂಜಾಲಿಂಗವು ಪೂಜಕನನ್ನು ತಿಳಿಯಲಿಲ್ಲ. ಪೂಜಿಸುವ ಪೂಜಕನಾದರು ಲಿಂಗವ ತಿಳಿಯಲಿಲ್ಲ ತನ್ನನ್ನಾದರೂ ತಿಳಿಯಲಿಲ್ಲ.

ತಾನಾರೆಂದರೆ ಶರಣ ಶಬ್ದವಾಗನು , ಅಶಬ್ದವಾಗನು . ಏನೊಂದಾಗದ ಘನ,

ನುಡಿಗೆಡೆಗೊಡದ ಘನ . ಶಬ್ದವೆ ಮೀಸಲುವಾಗಿಹ ಘನ ವಾಣಿ ಕಾರ್ಯ ಅದನೆಂತು ಒಪ್ಪುವನು . ವಾಣಿ ಅದು ಮಾತಾಡಿದರೇನು , ಅದು ಮೌನವಾಗಿದ್ದರೇನು , ನಿರಾಲಂಬನಿಗೆ ಆವಾವುದರ ಅವಲಂಬನವಿರದು . ವಾಙ್ಮನವಾಗದವರು ಇದ್ದವರಿದ್ದ ಸ್ಥಲವನೆ ನುಡಿವರು . ಅದಕದು ಸಹಜವೆಂದಂತೆ ಇದ್ದವರಿದ್ದ ಸ್ಥಲವನೆ ಅವರು ನುಡಿವರು.

ಇದ್ದವರಿದ್ದ ಸ್ಥಲವನೆ ನುಡಿವವರು ಆರು? ಶರಣರು , ಅರಿತಡೆ ಶರಣ , ಮರತಡೆ ಮಾನವ . ತನ್ನ ಅರಿತವರು ಶರಣರು . ಅವರು ಇದ್ದ ಸ್ಥಲವನೆ ನುಡಿಯುವ ಮಹಾಂತರು . ಇವರು ನುಡಿದು ನಿಃಶಬ್ದ ಬ್ರಹ್ಮವಾಗಿಪ್ಪ ಘನಕ್ಕೆ ಘನರು .

ಇದ್ದವರಿದ್ದ ಸ್ಥಲವಾವುದು? ''ಸ್ಥಲವೆಂದೆನ್ನೆ ನಿಸ್ಥಲವೆಂದೆನ್ನೆ ನಿರ್ಣಯವೆನಗಾದ ಬಳಿಕ ಏನೆಂದರಿಯೆನಯ್ಯಾ ಕೂಡಲಚೆನ್ನಸಂಗಯ್ಯಾ ಲಿಂಗೈಕ್ಯವೆಂದೆನ್ನೆ '' . ಇದ್ದವರಿದ್ದ ಸ್ಥಲ, ಅನುಪಮಸ್ಥಲ. ಲಿಂಗೈಕ್ಯ ವೆಂಬುದಕ್ಕೂ ಮೀರಿದುದು .ಇದ್ದವರೆಂದರೆ ತಾನೆ ಇದ್ದವನು ಅಂದು ಇದ್ದವನು, ಇಂದು ಇದ್ದವನು, ಎಂದೆಂದೂ ಇದ್ದವನು, ನಿರಂತರ ಇದ್ದುದಾವುದೊ ಅದುವೆ ಇದ್ದುದು . ನುಡಿಗೆಡೆಗೊಡದ ಘನವಾವುದು ಅದುವೆ ಇದ್ದುದು . ಸಕಲ ನುಡಿಗಳೆಲ್ಲವು ತನ್ನಿಂದ ಸಿದ್ಧವಾಗುವದರಿಂದ ಸತ್ಯವೆಂಬುದು ತನ್ನಿಂದ ಸಿದ್ದವಾಗುವುದು . ಅಸತ್ಯವೆಂಬುದು ತನ್ನಿಂದ ಸಿದ್ದವಾಗುವುದು . ಹೀಗೆ ತಾನಾರೆಂದು ತನ್ನಿಂದ ತಾನು ಅರಿದರಿದು ತನ್ನಂ ನೋಡಿ ನಿರ್ಣಯವಾದ ಬಳಿಕ ಅರಿಯುವದಿನ್ನೇನು ? ದೃಶ್ಯವಾದುದು ತನ್ನಿಂದ ಸಿದ್ಧವು , ದೃಕ್ ಎಂಬುದು ತನ್ನಿಂದ ಸಿದ್ಧವಾಗುವದರಿಂದ ತಾನು ನುಡಿಗೆಡೆಗೊಡದ ಘನನಾಗಿರುವದು ಸಹಜ . ಇದ್ದವರಿದ್ದ ಸ್ಥಲವದು ನುಡಿಗೆಡೆಗೊಡದ ಘನವಾಗಿದ್ದ ಸ್ಥಲ . ಅವರಿಗೆ ನುಡಿದರೂ ನುಡಿಗೆ ಅಂಟದಂತಿರುವದು ಸಹಜವಾಗಿದೆ. ನುಡಿದು ನಿಃಶಬ್ದ ಬ್ರಹ್ಮದಲ್ಲಿರುವುದು ಸಹಜವಾಗಿದೆ. ಅಚಿಂತ್ಯತ್ವವು ಅವರ ಸಹಜದಿರುವಾಗಿದೆ. ಅವರ ಸ್ಥಲ ಏನೊಂದಾಗದ ಘನದಿರುವಿನ ಅರುವಾಗಿಪ್ಪುದು ಅವರಿದ್ದ ಸ್ಥಲವಾದುದರಿಂದ ಇದ್ದವರಿದ್ದ ಸ್ಥಲವನೆ ನುಡಿವರು . ಅದಕ್ಕಾಗಿ ಅದು ಅವರ ಸಹಜತ್ವವಾಗಿದೆ ಎಂದು ಹೇಳಿಹರು.

ಲಿಂಗದ ನಡೆ ಲಿಂಗದ ನುಡಿ ಲಿಂಗದ ನೋಟ ಕೂಡಲಚೆನ್ನಸಂಗಾ ನಿಮ್ಮ ಶರಣಂಗೆ : ಲಿಂಗ ನಡೆ, ಲಿಂಗ ನುಡಿ, ಲಿಂಗ ನೋಟ, ಇದು ಉಪಮಿಸದ ನಿಲವು . ಬೆಳಗುವ ಜ್ಯೋತಿಯ ನಡೆ, ನಿರಂತರ ಬೆಳಗುವದೆ ಅದರ ನಡೆ ಅಲ್ಲವೆ! ಬೆಳಗುವ ಜ್ಯೋತಿಯ ನುಡಿ, ನುಡಿಯದಂತಿದ್ದ ಘನದಿರುವೆ ಅದರ ನುಡಿ ಅಲ್ಲವೆ ! ಬೆಳಗುವ ಜ್ಯೋತಿಯ ನೋಟ ತಾನು ಬೆಳಗುಳ್ಳ ಜ್ಯೋತಿಯಾಗಿರುವದು ಅದರ ನೋಟ ಅಲ್ಲವೆ!.

ಶರಣ ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿತು ಅಚಲಾನಂದದಲ್ಲಿದ್ದ ಘನಕ್ಕೆ ಘನವಾಗಿಹ ಶರಣಂಗೆ, ಲಿಂಗದನಡೆ ಲಿಂಗದನುಡಿ ಲಿಂಗದ ನೋಟ ವಿದಿತವು . ಜ್ಯೋತಿಯ ನಡೆ ನುಡಿ ನೋಟ ಜ್ಯೋತಿಗೆ ವಿದಿತವು, ಉಳಿದವರಿಗದೆಂತು ಸಾಧ್ಯವು.

ಶರಣ ತಾನಾರೆಂದರಿತುದರಿಂದ ಅರಿಯದರುವುಳ್ಳವನಾಗಿಹನು. ಏನೊಂದೆನಲಿಲ್ಲದ ಅರುವು ಆಗಿರುವನು . ಆ ಘನವಂತನಿಗೆ ಲಿಂಗನಡೆ ಲಿಂಗನುಡಿ, ಲಿಂಗನೋಟವು , ಲಿಂಗ ಲಿಂಗ ಎಂದು , ಜಂಗಮ ಜಂಗಮ ಎಂದು , ಪ್ರಸಾದ ಎಂದು ಹಲಬುವವರದು ನಡೆಯಲ್ಲ. ನುಡಿಯೂ ಅಲ್ಲ. ನೋಟವು ಅಲ್ಲ, ಲಿಂಗವರಿತವರ ನುಡಿ ತೆರಹಿಲ್ಲದ ನುಡಿ, ತೆರಹಿಲ್ಲದ ನಡೆ, ತೆರಹಿಲ್ಲದ ನೋಟ ತೆರಹಿಲ್ಲದ ಸುಖವು.

ಲಿಂಗದ ನುಡಿ ಅಹುದು ಅಲ್ಲವೆಂಬುದಕ್ಕಿಂಬುಕೊಡದ ನುಡಿ . ಸಾಕಾರ ನಿರಾಕಾರವೆಂಬುದಕ್ಕಿಂಬು ಕೊಡದ ನುಡಿ. ಅಜ್ಞಾನ ಜ್ಞಾನವೆಂಬುದಕ್ಕಿಂಬುಕೊಡದ ನುಡಿ, ಮರವರುವಿಗಿಂಬು ಕೊಡದ ನುಡಿ . ಪ್ರಥಮ ವೇದಿಗಳಿಗಿಂಬು ಕೊಡದ ನುಡಿ . ಅತೀತ

ಅನಾಗತರೆಂಬುವವರಿಗಿಂಬು ಕೊಡದ ನುಡಿ , ಶೃತಿವಂತರಿಗೂ ಇಂಬುಕೊಡದ ನುಡಿ , ನಿಸ್ಸೀಮ ನುಡಿ, ಕಂಡುದು ಲಿಂಗವು, ಕಾಣದದು ಲಿಂಗವು. ವ್ಯಕ್ತವು ಲಿಂಗವು. ಅವ್ಯಕ್ತವು ಲಿಂಗವು ಭಂಗಾರವು ಭಂಗಾರವೆ ; ಆಭರಣವು ಭಂಗಾರವು . ಇದ್ದ ಭಂಗಾರವು ಇದ್ದಂತಿದ್ದದ್ದು . ಹಾಗೆ ಇದ್ದುದು ಲಿಂಗಮಯವ ಲಿಂಗವು ಲಿಂಗವೆ ಇರುವಲ್ಲಿ ಶರಣನ ನುಡಿ ಲಿಂಗನುಡಿ, ಶರಣನ ನಡೆ ಲಿಂಗನಡೆ. ಇದು ಅಪ್ರಮಾಣಗಮ್ಯವಾಗಿಹ ಅಚಿಂತ್ಯ ನಡೆ. ತನು ನಷ್ಟ ಮನ ನಷ್ಟ ನೆನಹು ನಷ್ಟ ಭಾವ ನಷ್ಟ ಜ್ಞಾನ ನಷ್ಟ, ನಾನೆಂಬುದು ನಷ್ಟ, ನೀನೆಂಬುದು ನಷ್ಟ. ಏನೊಂದುಸರಲು ಎಡೆಯಿಲ್ಲದ ನಡೆ ಲಿಂಗನಡೆ.

ನೆನೆಯಲರಿಯೆ ನಿರ್ಧರಿಸಲರಿಯೆ ಧ್ಯಾನಾತೀತ ತಾನೆಯಾಯಿತ್ತಾಗಿ . ಜ್ಞಾತೃ, ಜ್ಞಾನ, ಜ್ಞೇಯಂಗಳೆಲ್ಲವ ಮೀರಿ ಅಭಿನವ ಮಲ್ಲಿಕಾರ್ಜುನನಲ್ಲಿ ಪರಮ ಸುಖಿಯಾಗಿರ್ದುದು ಅಳವಡಿಸಿಕೊಂಡುದು ಲಿಂಗನಡೆ, ಲಿಂಗನೋಟ. ತಾನು ಲಿಂಗ, ತನ್ನ ನೋಟ ಲಿಂಗ. ತನ್ನ ವಿನಃ ಅನ್ಯ ಆವಾವುದು ಇರದಿರುವದರಿಂದ ಎಲ್ಲೆಲ್ಲೂ ತಾನೆ ತನ್ನ ಕಂಡದು ಲಿಂಗನೋಟ . ಇದು ಕೂಡಲಚೆನ್ನಸಂಗಯ್ಯ ನಿಮ್ಮ ಶರಣಂಗೆ ಎಂದು ಹೇಳಿದ್ದಾರೆ.

114

ಹರಿವ ನದಿಗೆ ಮೈಯೆಲ್ಲಾ ಕಾಲು ಉರಿವ ಅಗ್ನಿಗೆ ಮೈಯೆಲ್ಲಾ ನಾಲಿಗೆ
ಬೀಸುವ ಗಾಳಿಗೆ ಮೈಯೆಲ್ಲಾ ಮುಖ ಗುಹೇಶ್ವರಾ.
ನಿಮ್ಮ ಶರಣಂಗೆ ಸರ್ವಾಂಗ ಲಿಂಗ. ॥ 1586 ॥

ತಾತ್ಪರ್ಯ : ಹರಿವ ನದಿಗೆ ಮೈಯೆಲ್ಲಾ ಕಾಲು. ಉರಿವ ಅಗ್ನಿಗೆ ಮೈಯೆಲ್ಲಾ ನಾಲಿಗೆ: ಪ್ರಭು ಮಹಾಮಹಿಮ; ನುಡಿದು ನುಡಿಯದಂತಿದ್ದ ಮಾಯಾ ಕೋಲಾಹಲ ! ಮಾಯಾ ಕೋಲಾಹಲವೆಂಬೆನೆ, ನಿಃಶಬ್ದಬ್ರಹ್ಮ. ನಿಃಶಬ್ದ ಬ್ರಹ್ಮವೆಂಬೆನೆ, ಬ್ರಹ್ಮಶಬ್ದ ಸುನಾದ. ಆಕಾಶವಾಣಿ ಸಕಲರ ಹೃದಯವ ಅರಳಿಸುವ ಸುಜ್ಞಾನ ಘನವು ಹೀಗೆಯೆ ಎಂದು ಅದಾರು ನಿರ್ಧರಿಸುವದು ?

ಹರಿವ ನದಿಗೆ ಮೈಯೆಲ್ಲಾ ಕಾಲು : ಇದನು ಕಂಡದು ಕಂಣು ಆ ಕಂಣು ಹರಿವ ನದಿಗೆ ಮೈಯೆಲ್ಲಾ ಕಾಲು ಎಂದು ಹೇಳಿರುವುದೆ ? ಹರಿವ ನದಿಯಾದರೂ ನನಗೆ ಮೈಯೆಲ್ಲಾ ಕಾಲು ಎಂದು ಹೇಳಿದೆಯಾ? ಪ್ರವಾಹ ನದಿಯು ಶಬ್ದಮುಗ್ಧ. ನೋಡಿದ ಕಣ್ಣು ಶಬ್ದಮುಗ್ಧ.

ಶಬ್ದಮುಗ್ಧದಿರವು ಶಬ್ದದಿಂದುಕ್ತವಾದ ವಾಣಿಗೆ ಗೋಚರವಾದುದು ಆಶ್ಚರ್ಯ! ತಾನು ನೋಡದುದ ನೋಡಿದಂತೆ ಹೇಳಿದೆಯಲ್ಲ, ಇದೆಂಥಹ ಆಶ್ಚರ್ಯ ! ಹೇಳಿದುದು ನೋಡಿಯೆ ಇಲ್ಲ, ನೋಡಿದುದು ಹೇಳಿಯೆ ಇಲ್ಲ, ಇದು ಕಾರಣ ಪ್ರಭುವಿನ ಅರುವಿಂಗರುವು ಅದನೆಂತು ವರ್ಣಿಸುವದು.

ಹರಿವ ನದಿಗೆ ಮೈಯೆಲ್ಲಾ ಕಾಲು , ಇದು ಲೋಕ ದೃಷ್ಟಿಗೆ ವಿದಿತವಿದ್ದ ವಿಷಯ . ಪ್ರಭು ಕರುಣಾಮಯಿ , ತನ್ನ ಮಹದರುವಿನತ್ತ ತಿರುಗಿಸುವದಕ್ಕಾಗಿ ದೃಷ್ಟಾಂತ ಹೇಳಿ ತನ್ನ ಮಹಾನುಭವ ಸಿದ್ಧಮಾಡುವ ಮಹಾಮಹಿಮ . ಹಾಗಾದಲ್ಲಿ ಪ್ರಭುವಿನ ದಿವ್ಯದೃಷ್ಟಿಗೆ ಹರಿವ ನದಿ ಆವುದು? ಮೈಯೆಲ್ಲಾ ಕಾಲು ಆವುದು ? ಉರಿವ ಅಗ್ನಿ ಆವುದು ? ಮೈಯೆಲ್ಲಾ ನಾಲಿಗೆ ಆವುದು ? ಬೀಸುವಗಾಳಿ ಆವುದು, ಮೈಯೆಲ್ಲಾ ಮುಖ ಆವುದು?

ಉಪಾಧಿಕ ಮನ, ಉಪಾಧಿಕ ರಹಿತ ಮನ, ನಿಂದು ಸುಮನವಾಗಿಹ ಪ್ರವಾಹರೂಪ ನದಿ.

ಇದು ಶರಣರ ಸುಖರೂಪ ಸುಖದ ಸುಖಿಯಾಗಿಹ ಪ್ರವಾಹ. ಮರವರುವಿನಲ್ಲಿ ತನ್ನ ಘನವ ಕಂಡ ಪ್ರವಾಹ. ಅದೆಂತು ವರ್ಣಿಸುವದು ? ಇದು ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದ ಸ್ವಸುಖದ ಸುಖವಾಗಿರುವುದರಿಂದ , ಸುಖಾಕಾರವಾಗಿರುವದರಿಂದ ಲಿಂಗಮನ . ಲಿಂಗವಾಗಿ ನಡೆಯುವ, ಲಿಂಗವಾಗಿ ನೋಡುವ ನೋಟವೆ ಹರಿವ ನದಿಗೆ ಮೈಯೆಲ್ಲಾ ಕಾಲು ಎಂದು ಹೇಳಿಹರು.

ಉರಿವ ಅಗ್ನಿಗೆ ಮೈಯೆಲ್ಲಾ ನಾಲಿಗೆ: ಬಹಿರ್ ಉರಿವ ಅಗ್ನಿ ಕಂಡವರುಂಟು ಅದಕ್ಕೆ ಮೈಯೆಲ್ಲಾ ನಾಲಿಗೆ ಕಂಡವರುಂಟೆ? ಇದನ್ನು ಕಂಡಾತ ಪ್ರಭು .

ಪ್ರಭುವಿನ ಮಹದರುವಿನ ಉರಿ , ಈ ಚಿದಗ್ನಿಗೆ ಮೈಯೆಲ್ಲಾ ನಾಲಿಗೆ ಇದ್ದರೂ ಹೇಳದಂತಿದ್ದ ನಾಲಿಗೆ . ಇದೆಂಥ ವಿಪರೀತ ಚರಿತ್ರೆ .ಇದು ಮತಿಗತಿಗೆ ಮೀರಿದ ಮಹಾಜ್ಞಾನ . ಇದು ಅಹುದು ಅಲ್ಲವೆಂಬುದಕ್ಕೂ ಸಂದಿಲ್ಲದಿಪ್ಪ ನಿಸ್ಸೀಮ ಜ್ಞಾನ . ಸತ್ಯಾ ಸತ್ಯವೆಂಬುದಕ್ಕೆ ಸಂದಿಲ್ಲದಿಪ್ಪ ಅಪ್ರಮಾಣ ಜ್ಞಾನ. ಮರವರವೆಂಬುದಕ್ಕೂ ಮೀರಿದ ಅಗಮ್ಯಜ್ಞಾನ . ಬಂಧ ಮೋಕ್ಷ ರೂಪಿ ಉದಯಾಸ್ತ ಕಾಣದ ಜ್ಞಾನ . ಇಲ್ಲಿ ಅರಿಸಿಕೊಳ್ಳುವ ದೃಶ್ಯವಿಲ್ಲ. ಅರಿಯುವ ದೃಕ್ಕಾತ್ಮನೆಂಬುದಿಲ್ಲ . ತನ್ನಿಂದ ತನ್ನ ಕಂಡ ಪರಮಜ್ಞಾನ . ಇದು ಶೃತಿಗಗೋಚರವಾಗಿಹ ತನ್ನ ಜ್ಞಾನ . ಅರುವ ಅರಿಯ ಹೋದವರ ಶಬ್ದ ಮುಗ್ದ ಜ್ಞಾನ. ತಾನೆ ತಾನಾಗಿ ನಿಂತು ನೋಡಿದ ಘನ ತೇಜ . ಇಲ್ಲಿ ಅಹಂ ಇದಂ ರೂಪಿ ದ್ವೈತ ದೃಷ್ಠಿ ನಷ್ಟ. ಅಂಗ,ಲಿಂಗವೆಂಬುದು ನಷ್ಟ . ಭೇದವು ನಷ್ಟ , ಅಭೇದವು ನಷ್ಟ ಕ್ಷರನೆಂಬುದು ನಷ್ಟ, ಅಕ್ಷರನೆಂಬುದು ನಷ್ಟವಾಗಿ ಕ್ಷರಾಕ್ಷರವೆಂಬುದಕ್ಕೂ ಮೀರಿದ ಘನಕ್ಕೆ ಘನವಾಗಿಹ ವಾಙ್ಮನೋತೀತ ನಿಲುವೆ ಉರಿವ ಅಗ್ನಿ ಇದಕ್ಕೆ ಮೈಯೆಲ್ಲಾ ಕಾಲು . ಈ ಉರಿವ ಅಗ್ನಿ ಎಂದೂ ಮಾತಾಡಿದುದಲ್ಲ. ಇದನ್ನು ಅರಿಯ ಹೋದ ಅರುವು ಮಾತಿಗೊಳಪಟ್ಟುದಲ್ಲ . ಆ ಅರುವಿನ ಸನ್ನಿಧಾನ ಸತ್ತಾ ಪಡೆದ ವಾಕ್ ವೈಖರಿ ಮಾತಾಡಿದುದು ಆಶ್ಚರ್ಯ ; ಆಶ್ಚರ್ಯವು ಅಲ್ಲ. ಇದು ನುಡಿದು ನುಡಿಯದಂತಿದ್ದ ಜ್ಯೋತಿರ್ಲಿಂಗ . ಇದು ಆಕಾಶವಾಣಿ, ಪ್ರಭುವಿನದು ಪರಾತ್ಪರ ಮಹಾಪ್ರಸಾದ . ತೆರಹಿಲ್ಲದ ಘನ ನುಡಿಯಬಹುದು. ನುಡಿಯದಿರಬಹುದು ಅದಕ್ಕದು ಸಹಜ.

ಬೀಸುವ ಗಾಳಿಗೆ ಮೈಯೆಲ್ಲಾ ಮುಖ : ಮೈಯೆಲ್ಲಾ ಮುಖವುಳ್ಳ ಬೀಸುವ ಗಾಳಿ ಇದು ಸ್ಥಾವರ ಜಂಗಮ ರೂಪಿ ಜಗತ್ತಿಗೂ ಅಪ್ಪುವದು ಆಲಿಂಗಿಸುವದು . ಇದರದು ಪೂರ್ಣ ಮುಖವಾದುದರಿಂದ , ಪಂಡಿತ ಪಾಮರರೆನ್ನದೆ ಸಕಲರ ಅಪ್ಪುವದು . ಪವಿತ್ರ ಅಪವಿತ್ರ ವಸ್ತುಗಳ ಒಂದೆ ಸಮಯದಲ್ಲಿ ಅಪ್ಪುವ ಮುಖ . ಇದು ಅಪ್ಪಿ ಅಪ್ಪದಂತೆ ಇದೆಯಲ್ಲ ಇದೆಂಥ ನಿರಾಲಂಬ ನಿಲವು! ಈ ಬೀಸುವ ಗಾಳಿ, ಶರಣರ ಸ್ವಾನುಭವ ರೂಪ ಗಾಳಿ , ಲಿಂಗೈಕ್ಯ ಗಾಳಿ , ಲಿಂಗ ಗೂಢಾಗಿಪ್ಪವರ ಗಾಳಿ. ಲಿಂಗ ಸಂಗಿಗಳ ಗಾಳಿ ಇದಕ್ಕೆ ಮೈಯೆಲ್ಲ ಮುಖ. ತುಂಬಿ ತುಳಕದ ಮುಖ. ಅಖಂಡಿತ ಘನ ಪರಿಪೂರ್ಣವೆ ತನ್ನಿರುವೆಂದರಿದವರ ಮುಖ . ಇದು ಸಮತೆ ಸಯವಾದ ಮುಖ . ಅರುವು ಮರವುಗಳನ್ನು ಲೆಕ್ಕಿಸದ ಮುಖ , ಲಕ್ಷಕ್ಕೆ ತಾರದ ಮುಖ .ಅಖಂಡಿತ ಲಿಂಗವಾಗಿಹ ಮುಖವಾದ್ದರಿಂದ ಸ್ಥಾವರವು ಲಿಂಗವೆ ; ಜಂಗಮವು ಲಿಂಗವೆ . ಲಿಂಗ ಒಂದಾಗಿರ್ದ ಜಂಗಮ ದೃಷ್ಠಿಗೆ ನೆಲೆಸಿದುದು; ಸ್ಥಾವರವಾಗಿಲ್ಲ ಚರಿಸಿದುದು ಜಂಗಮವಾಗಿಲ್ಲ. ಇದು ಕಾರಣ ಬೀಸುವ ಗಾಳಿ ಎಲ್ಲ ಸಮಯದಲ್ಲಿ ಬೀಸುವ ಗಾಳಿ ಇದಲ್ಲ. ಇದು ಅದರ ಸ್ವಾಧೀನ ಗಾಳಿ ಅಲ್ಲ . ಸ್ವಾತಂತ್ರವಾಗಿ ತನ್ನ ಸ್ವಮಹಿಮೆಯಲ್ಲಿದ್ದ ಗಾಳಿ . ಈ ಗಾಳಿಯಲ್ಲಿ ಬೇಗನೆ ತೂರಿಕೊಂಡಾತ ಅಂಬಿಗರ ಚೌಡಯ್ಯ , ಪುಣ್ಯಮಯರು . ಇದಲ್ಲದೆ ಪರಿಶುದ್ಧವಾಗಿಹ ಹೃದಯ ಜಿಜ್ಞಾಸುಗಳು , ಅರು ಹೃದಯ ವಾಗುವ ಕಳಕಳಿವಂತರು ತೀವ್ರವಾಗಿ ತನ್ನನ್ನು ಕಂಡುಕೊಳ್ಳುವರು.

ಗುಹೇಶ್ವರ ನಿಮ್ಮ ಶರಣಂಗೆ ಸರ್ವಾಂಗ ಲಿಂಗ : ನಿಮ್ಮ ಶರಣ ಹರಿವ ನೀರಿನಂತೆ ಉರಿವ ಅಗ್ನಿಯಂತೆ, ಬೀಸುವ ಗಾಳಿಯಂತೆ. ಇದ್ದ ಸರ್ವಾಂಗ ಲಿಂಗಿಯಾಗಿಹ ಮಹಿಮನ ವರ್ಣಿಸುವರೆ. ಅದೆಂತು ಸಾಧ್ಯ ? ಹರಿವ ನದಿಗೆ ಮೈತುಂಬ ಕಾಲಾಗಿದ್ದರಿಂದ ಶಬ್ದ ಮುಗ್ಧ. ಉರಿವ ಅಗ್ನಿಗೆ ಮೈತುಂಬ ನಾಲಿಗೆಯಿದ್ದರೂ, ಇದು ಶಬ್ದಮುಗ್ಧ ನಾಲಿಗೆ. ಬೀಸುವ ಗಾಳಿಗೆ ಮೈಯೆಲ್ಲ ಮುಖವಿದ್ದರೂ, ಶಬ್ದ ಮುಗ್ಧ ಸಂಜ್ಞೆ. ಶರಣನ ಸರ್ವಾಂಗ ಲಿಂಗವಾಗಿಹ ಸಂಜ್ಞೆ. ಲಿಂಗವರಿತು ಲಿಂಗವಾಗಿಹ ಘನಮಹಿಮ. ಶರಣನ ಸಂಚಾರ ಸುಖರೂಪ ಪ್ರವಾಹ. ಅದು ಹರಿವ ನದಿ. ಶರಣ ಸಂಚರಿಸಿ ಚರಿಸದಂತಿದ್ದ ಚಿದಗ್ನಿ. ಶರಣನ ಸರ್ವಾಂಗ ಉರಿವ ಅಗ್ನಿ ಜ್ಞಾನಾಗ್ನಿ . ಅದು ಉದಯಾಸ್ತಗಳೆನ್ನದೆ ಉರಿವ ಘನಾಗ್ನಿ . ಶರಣನ ಸರ್ವಾಂಗದಿಂದ ಪ್ರಜ್ವಲಿಸುವ ಸ್ವಾನುಭವರೂಪ ಗಾಳಿ ಸುಖದೇಖ ರಸಗಾಳಿ ಜ್ಞಾನಾನಂದಮಯ ಗಾಳಿ. ಇದು ಕಾರಣ ಶರಣನದು ಸರ್ವಾಂಗ ಲಿಂಗವೆಂದು ಹೇಳಿಹರು.

115

ಕರ್ತೃತ್ವವಿಲ್ಲವಾಗಿ ಕರ್ಮವಿಲ್ಲ, ಕರ್ಮವಿಲ್ಲವಾಗಿ ಜನನವಿಲ್ಲ
ಜನನವಿಲ್ಲವಾಗಿ ಮರಣ ವಿಲ್ಲ ಮರಣವಿಲ್ಲವಾಗಿ ಭೂತಾತ್ಮದ ಚರಿತ್ರೆ,
ಕರಣಾದಿ ಗುಣಂಗಳು ಮುನ್ನವೆ ಇಲ್ಲ, ಹಿಂದಣ ಸ್ಥಿತಿ ಇಲ್ಲ
ಮುಂದಣ ಲಯವಿಲ್ಲ, ಆದಿ ಮಧ್ಯಾವಸಾನವಿಲ್ಲ, ಬಿಚ್ಚಿ ಬೇರಲ್ಲ ಬೆರಸಿ ಒಂದಲ್ಲ
ಉಪಮಾತೀತ ಕೂಡಲ ಚೆನ್ನಸಂಗಾ ನಿಮ್ಮ ಶರಣರು. ॥683॥

ತಾತ್ಪರ್ಯ : ಶರಣ ಉಪಮಾತೀತ, ದೃಷ್ಟಾ ದೃಷ್ಟನರಿಯ . ಸಾವಯವ ನಿರವಯನೆಂದು ಉಪಮಿಸನು ಶರಣ ತಾನು ಸ್ವತಂತ್ರನಾಗಿ ಭಾವ ರಹಿತನು . ಭಾವಕ್ಕಗಮ್ಯನು ಭಾವಿಕನಾಗಬಹುದೆ? ದೃಶ್ಯವಾಗನು, ದೃಕ್ ಎಂಬುದು ಆಗನು. ಸಾವಯವ, ನಿರವಯನೆಂದು ಉಪಮಿಸನು. ಸಾವಯವವುಳ್ಳವನಾದಲ್ಲಿ ಕರ್ತೃತ್ವ ಉಂಟು, ಕರ್ಮವುಂಟು. ಶರಣ ಉಪಮಾತೀತನಾದುದರಿಂದ ಸಾವಯವನಲ್ಲ ನಿರವಯನಲ್ಲ, ನಿರವಯನಾಗಿದ್ದಲ್ಲಿ ಅಕರ್ತನೆಂದು ಅಕ್ರಿಯೆನೆಂದು ಹೇಳಲು ಬರದು.

ಸಾವಯವ, ನಿರವಯನೆಂಬುದಕ್ಕೂ ಸಂದಿಲ್ಲದಿಪ್ಪಗಮ್ಯ ಅಪ್ರಮಾಣನ ಉಪಮಿಸುವದದೆಂತು, ಅಕಲ್ಪಿತನ ಕಲ್ಪಿಸುವದದೆಂತು ಅಚಿಂತ್ಯನಿಗೆ ಚಿಂತನವೇತರದು, ಇದು ಕಾರಣ ಶರಣಂಗೆ ಕರ್ತೃತ್ವವಿಲ್ಲವಾಗಿ ಕರ್ಮವಿಲ್ಲವೆಂದು ಹೇಳಿದ್ದಾರೆ. ಸಾವಯವ ನಿರವಯ ನೆನ್ನಲು ಬಾರದ ಘನ ಮಹಿಮಂಗೆ ಅದಾವ ಕರ್ತೃತ್ವ ? ಕರ್ತೃತ್ವವೆ ಇಲ್ಲವಾದಲ್ಲಿ ಕರ್ಮವೆಲ್ಲಿಯದು? ಶರಣ ನಿಭ್ರಾಂತ, ಭ್ರಾಂತಿ ಇದ್ದಲ್ಲಿ ಸಾವಯವ ನೆನ್ನಲು ಬರುವುದು, ನಿರವಯ ನೆನ್ನಲು ಬರುವುದು. ಅಕಲ್ಪಿತವೆ ತನ್ನಿರುವೆಂದರಿದ ಮಹಾಂತನಲ್ಲಿ ಕರ್ತೃತ್ವವ ಕಾಣಬಾರದು. ಕಲ್ಪಿತ ಪುರುಷನೆ ಆಗದಿದ್ದಲ್ಲಿ ಕರ್ತೃತ್ವವೆಲ್ಲಿಯದು, ಜೀವನೆಂಬುದಿಲ್ಲ ಪರಮನೆಂಬುದಿಲ್ಲ, ಎರಡೆಂಬುದಿಲ್ಲ ಒಂದೆಂಬುದಿಲ್ಲ ಅಹುದೆಂಬುದಿಲ್ಲ ಅಲ್ಲೆಂಬುದಿಲ್ಲ ನಾನೆಂಬುದಿಲ್ಲ ನೀನೆಂಬುದಿಲ್ಲ, ಸಂಗಿ ಎಂಬುದಿಲ್ಲ ನಿಸ್ಸಂಗಿ ಎಂಬುದಿಲ್ಲ. ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿತು ಅಚಲಾನಂದದೊಳಿದ್ದ ಮಹಾಂತ ಸ್ವತಂತ್ರ. ತಾನೆ ತಾನಾದ ನಿರುಪಮ ಉಪಮಿಸಲಳವಲ್ಲ, ಸಕಳನಲ್ಲ ನಿಃಕಳನಲ್ಲ ಸಂಸಾರಿಯಲ್ಲ ವೈರಾಗಿಯಲ್ಲ ಕರ್ಮಿಯಲ್ಲ ಆಸಕ್ತನಲ್ಲ ಅನಾಸಕ್ತನಲ್ಲ ಮೋಹಿಯಲ್ಲ ನಿರ್ಮೋಹಿಯಲ್ಲ ಬೇಕೆಂಬುದಿಲ್ಲ ಬೇಡೆಂಬುದಿಲ್ಲ ಎಂತಿರ್ದುದಂತೆ ಸಹಜ ಅಜ ಅಚಿಂತ್ಯವೆ ತನ್ನಿರುವಾದ ಮಹಾಂತ.

ಅಜನಿಗೆ ಜನನವೆಲ್ಲಿಯದು, ಜನನವಿಲ್ಲದವಂಗೆ ಮರಣವೆಲ್ಲಿಯದು, ಮರಣವಿಲ್ಲವೆಂದಲ್ಲಿ

ದೇಹಭಾವಕ್ಕಿಂಬೆಲ್ಲಿಯದು ? ಇಂಬಿಲ್ಲವಾದಲ್ಲಿ ಮರಣವಿಲ್ಲ. ಇಲ್ಲವೆಂಬುದು ಇಲ್ಲವಾದ್ದರಿಂದ ಭೂತಾತ್ಮ ಚರಿತ್ರ ಕರಣಾದಿ ಗುಣಂಗಳು ಮುನ್ನವೆ ಇಲ್ಲ. ಅಲ್ಲಿ ಸಂಕಲ್ಪ ವಿಕಲ್ಪದ ಸುಳಿವು ಇಲ್ಲ ಮರವರುವಿಂಗೆ ಸಂದಿಲ್ಲ. ನೆನಹು ನಿರ್ಣಯಕ್ಕೆ ಆಸ್ಪದವಿಲ್ಲ ಭಾವ ನಿರ್ಭಾವವಾದಲ್ಲಿ ಮನ ಉಂಟೆ? ಮತಿ ಉಂಟೆ? ಗತಿ ಉಂಟೆ? ಚಿಂತೆ ಕೆಟ್ಟು ನಿಶ್ಚಿಂತನಾದ ಮಹಾಂತಂಗೆ ಪಂಚಕೋಶವುಳ್ಳ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಅನಂದಮಯವೆಂಬ ಭೂತಾತ್ಮ ಚರಿತ್ರ ಕರಣಂಗಳು ಮುನ್ನವೆ ಇಲ್ಲ.

ಹಿಂದಣ ಸ್ಥಿತಿಯಿಲ್ಲ ಮುಂದಣ ಲಯವಿಲ್ಲ ಕ್ಷರಾಕ್ಷರವೆಂಬುದಕ್ಕೆ ಮೀರಿದ ಘನಮಹಿಮಂಗೆ ಹಿಂದಣ ಸ್ಥಿತಿ ಆವುದು? ಮುಂದಣ ಲಯವಾವುದು? ಗಗನಕ್ಕೆ ಹಿಂದಣ ಸ್ಥಿತಿ ಆವುದು? ಮುಂದಣ ಲಯವಾವುದು, ಚಿದಾಕಾಶನಾಗಿಹ ಶರಣಂಗೆ ಪೂರ್ವದ ಸ್ಥಿತಿ ಆವುದು, ಮುಂದಿನ ಗತಿ ಆವುದು. ಅಲ್ಲಿ ಮತಿಯ ಕಾಣಲುಂಟೆ? ಭ್ರಾಂತನಿಗೆ ಹಿಂದಣ ಸ್ಥಿತಿಯು ಉಂಟು, ಮುಂದಣ ಗತಿಯು ಉಂಟು. ಒಡಲುಳ್ಳವಂಗೆ ಹಿಂದಣ ಸ್ಥಿತಿಯು ಉಂಟು, ಮುಂದಣ ಗತಿಯು ಉಂಟು. ಸಾವಯವ ನಿರವಯನೆನ್ನಲು ಬಾರದ ಅನುಪಮಂಗೆ ಹಿಂದಣಸ್ಥಿತಿ ಇಲ್ಲ, ಮುಂದಣ ಲಯವಿಲ್ಲ.

ಆದಿ ಮಧ್ಯಾವಸಾನವಿಲ್ಲ , ಕಲ್ಪಿತ ಪುರುಷಂಗೆ ಆದಿ ಉಂಟು ಮಧ್ಯ ಉಂಟು, ಅವಸಾನ ಉಂಟು ಅನಂತನಿಗೆ ಆದಿ ಆವುದು ,ಮಧ್ಯ ಆವುದು, ಅವಸಾನ ಆವುದು, ಭ್ರಾಂತನಿಗೆ ಆದಿ ಉಂಟು, ಮಧ್ಯ ಉಂಟು, ಅವಸಾನ ಉಂಟು. ನಿಭ್ರಾಂತನಿಗೆ ಆದಿ, ಮಧ್ಯ ,ಅವಸಾನವೇತರದು? ಬ್ರಹ್ಮವರಿತು ನಿಃಶಬ್ದ ಬ್ರಹ್ಮವಾಗಿಹ ಮಹಾಂತನಿಗೆ ಆದಿ ಆವುದು, ಮಧ್ಯ ಆವುದು, ಅವಸಾನ ಆವುದು, ಲಿಂಗವರಿತು ಅಂಗವ ಬೆರೆತು ಲಿಂಗವಾಗಿಪ್ಪ ಘನಮಹಿಮಂಗೆ ಆದಿ, ಮಧ್ಯ ,ಅವಸಾನ ಕಾಣಬಾರದು ನೋಡಾ. ಅರಿಯದರುವುಳ್ಳ ಅನುಪಮಂಗೆ ಪ್ರಕೃತಿ ಎಂಬುದಿಲ್ಲ. ನಿರವಯನೆಂಬುದಿಲ್ಲ. ಪುರುಷ ನೆಂಬುದಿಲ್ಲ ಏನೊಂದಾಗದ ಘನಮಹಿಮಂಗೆ ಸಾವಯವ ನೆಂಬುದಿಲ್ಲ, ನಿರವಯನೆಂಬುದಿಲ್ಲ ಬಿಚ್ಚಿ ಬೇರಿಲ್ಲ.

ಬಿಚ್ಚಿ ಬೇರಿಲ್ಲ ಈ ಸಂಜ್ಞೆ ಬಹು ರಹಸ್ಯದಿಂದುಕ್ತವಾದುದು. ಬಿಚ್ಚಿದುದು ಏನು , ಬೇರಿಲ್ಲದುದು ಆವುದು? ತನ್ನ ತಾನರಿಯಲು, ನಿತ್ಯಾನಿತ್ಯವೆಂಬ ಲಕ್ಷಣಾತ್ಮಕದಿಂದ ತೋರುವ ಪಿಂಡಾಂಡವನ್ನಾಗಲಿ ಬ್ರಹ್ಮಾಂಡವನ್ನಾಗಲಿ ಬಿಚ್ಚುವುದು . ಇದರಿಂದ ಕಾಣಿಸಿಕೊಳ್ಳುವ ಮಾಯಿಕ ಸ್ವಭಾವತಃ ಇಲ್ಲವಾಗುವದು. ಈ ಇಲ್ಲವೆಂಬುದು ಇಲ್ಲದ ಜ್ಞಾನವಾಗುವುಡೆ, ತಾನು ನುಡಿಗೆಡೆಗೊಡದ ಘನನು ಘನಮಹಿಮನು ತಾನಾಗಿ ಬೇರಿಲ್ಲವೆಂಬುದು ಸಿದ್ಧವಾಗುವುದು.

ಬಿಚ್ಚುವುದು ಏನೆಂದು ತಿಳಿಸಿಕೊಳ್ಳುವುದು ತಾನಲ್ಲವೆಂದು ತನಗಿಂತ ಬೇರೆ ಮಾಡುವುದು ಕೊನೆಗೆ ನುಡಿಗೆಡೆಗೊಡದ ಘನದಿರುವೆ ತನ್ನಿರುವು. ತಾನು ಬೇರಲ್ಲ ಮುನ್ನ ಮುನ್ನಲಾದ ಘನ ಬೇರಿಲ್ಲ. ತಾನು ಬೇರಲ್ಲ ತನ್ನಿಂದ ತಾನಾದುದು ಬೇರಿಲ್ಲ ತಾನು ಬೇರಲ್ಲ ಸಾವಯವ ನಿರವಯನೆಂದು ಬಿಚ್ಚಿ ಅಚಿಂತ್ಯತ್ವ ಬೇರಿಲ್ಲ, ತಾನು ಬೇರಿಲ್ಲ ವ್ಯಕ್ತನೆಂದು ಅವ್ಯಕ್ತನೆಂದು ಬಿಚ್ಚಿ ಕೊನೆಗೆ ನಿರುಪಮ ಬೇರಿಲ್ಲ . ತಾನು ಬೇರಿಲ್ಲ ದೇಹಿ, ದೇಹಿ ಎಂದು ಬಿಚ್ಚಿ ದೇಹಿಗೆ ದೇಹಿಯಾದುದು ಬೇರಿಲ್ಲ ತಾನು ಬೇರಿಲ್ಲವೆಂದು ಹೇಳಿಹರು .

ಬೆರಸಿ ಬೇರಿಲ್ಲವೆಂದರೆ ಬೆರಸಿ ಒಂದಲ್ಲ. ಆವುದರೋಳ್ ಬೆರಸುವದು? ತನಗಿಂತ ಅನ್ಯ ಆವುದಾದರೂ ಇದ್ದಲ್ಲಿ, ಅದರೋಳ್ ಬೆರೆಯುವದು, ಕೂಡುವುಧು, ಒಂದಾಗುವುದು . ತನಗಿಂತ ಶ್ರೇಷ್ಠವಾದುದಿಲ್ಲ, ಕೀಳಾದುದಿಲ್ಲ ಸಮಾನವಾದುದಿಲ್ಲ. ತನ್ನ ಹೊರ್ತು ಅನ್ಯ ಆವಾವುದು ಇಲ್ಲದಿರುವಾಗ ತಾನೆ ಅಂದು, ಇಂದು, ಎಂದೆಂದೂ ಇದ್ದುದು ತಾನೆ . ತಾನೆ ಅರಿಯದರುವು ಮರೆಯಲಿಲ್ಲದ ಮರಹ ಕೂಡದಗಲದ ಕೂಟ, ಬೆರಸಲಿಲ್ಲದ ಬೆರಗು,ನೋಡದ ನೋಟ ಇದು ತನ್ನಯ

ಸ್ವರೂಪವಾಗಿರುವಲ್ಲಿ ಹೇಳಲೆಂತು ಬಾರದು, ತೋರಲೆಂತು ? ತೋರಬಾರದ ಘನ, ಹೇಳಲೆಂತು? ಇದು ತನ್ನಯ ಉಪಮಾತೀತ ನಿಲವು ಶರಣ ನಿಲವು ಎಂದು ಹೇಳಿದುದು.

116

ತಪವೆಂಬುದು ಬಂಧನ ನೇಮವೆಂಬುದು ಗತಹು
ಶೀಲವೆಂಬುದು ಸೂತಕ, ಭಾಷೆಯೆಂಬುದು ಪ್ರಾಣಘಾತಕ
ಇಂತೀ ಚತುರ್ವಿಧದೊಳಗಿಲ್ಲ
ಕೂಡಲಚೆನ್ನಸಂಗಯ್ಯಾ ಲಿಂಗೈಕ್ಯವು.

ತಾತ್ಪರ್ಯ : ತಪವೆಂಬುದು ಬಂಧನ : ತಪ ಮನಸ್ಸು ಇಂದ್ರಿಯಾದಿಗಳನ್ನು ದೇವರ ಸಗುಣ ಸ್ವರೂಪದಲ್ಲಿ ಏಕಾಕಾಶ ಮಾಡುವದು ತಪವೆಂದು ಹೇಳಿಸಿಕೊಳ್ಳವದು, ಇಲ್ಲವೆ ಪ್ರಣವರೂಪ ಪರಮಾತ್ಮನಲ್ಲಿ ಮನಸ್ಸು ಇಂದ್ರಿಯಗಳನ್ನು ಧಾರಣ ಮಾಡುವದು ತಪವೆಂದು ಹೇಳಿಸಿಕೊಳ್ಳವದು. ಇದಲ್ಲದೆ ಗುರು ಮೂರ್ತಿಯನ್ನು ಧ್ಯಾನಿಸುವುದು ಅಲ್ಲಿಯೆ ಮನ ಇಂದ್ರಿಯಾದಿಗಳನ್ನು ಲೀನಮಾಡುವುದು ತಪವೆಂದು ಹೇಳಿಸಿಕೊಳ್ಳುವದು. ಇದು ಲಿಂಗೈಕ್ಯ ದೃಷ್ಠಿಯಲ್ಲಿ ಬಂಧನವಾಗಿದೆ. ಏಕೆಂದರೆ ಲಿಂಗೈಕ್ಯವು ಅರುವಿಂಗರುವಾದುದು ಅದು ಯತಾರ್ಥದೃಷ್ಠಿ ನಿಜದೃಷ್ಠಿ, ದಿವ್ಯದೃಷ್ಠಿ ತಪವೆಂಬುದು ದಿವ್ಯದೃಷ್ಠಿ ಆಗದು. ಇದು ಕಾರಣ ಬಂಧನವೆಂದು ಹೇಳಿಹರು.

ತಪ ಮಾಡುವವನಿಗೆ ತಾನಾರೆಂಬ ತಿಳುವಳಿಕೆ ಇದೆಯೆ? ಹಾಗಾದರೆ ತಾನಾರೆಂದು ತಿಳಿದು ಮಾಡುವನೊ, ತಿಳಿಯದೆ ಮಾಡುವನೊ, ಭೇದಜ್ಞಾನಿಯೊ, ಅಭೇದಜ್ಞಾನಿಯೊ ? ಕಲ್ಪಿತನಾಗಿ ಮಾಡುವನೊ, ಅಕಲ್ಪಿತ ಘನನಾಗಿ ಮಾಡುವನೊ? ಅರುವರಿತು ತಪವ ಮಾಡುವನೋ ಅರಿಯದೆ ಮಾಡುವನೊ?

ತಪಸ್ಸು ಮಾಡುವಲ್ಲಿ ತನು,ಇಂದ್ರಿ, ಪ್ರಾಣ, ಮನ, ಬುದ್ಧಿ, ಚಿತ್ತ, ಆಹಂಕಾರವುಳ್ಳವನಾಗಿ ಮಾಡುವನೊ? ಭಾವವೆ ಬ್ರಹ್ಮವಾಗಿ ಬ್ರಹ್ಮಾನು ಸಂಧಾನ ಮಾಡುವನೊ?

ಚೈತನ್ಯ ತಾನಾಗಿ ತಪವ ಮಾಡುವನೊ? ಚೇತನವಾಗಿ ತಪವ ಮಾಡುವನೊ? ದೇಹಭಾವಿಯಾಗಿ ತಪವ ಮಾಡುವನೊ? ಆತ್ಮಭಾವಿಯಾಗಿ ಮಾಡುವನೊ?

ಚಾಂಗದೇವ 1400 ವರ್ಷ ತಪವ ಮಾಡಿದನು. ಆ ತಪಸ್ಸಿನಿಂದ ಚಾಂಗದೇವ ಸಚ್ಚಿದಾನಂದವಾಗಿದ್ದನೆ? ತಪಸ್ಸು ಸಚ್ಚಿದಾನಂದ ಸ್ವರೂಪ ಮಾಡಿತೊ? ಶರೀರ ಇಂದ್ರಿಯಾದಿಗಳು ಪ್ರಾಣ, ಮನ, ಚೈತನ್ಯವಾದವೆ? ಈಶ್ವರ ಹಲವು ನಾಮಂಗಳು ಅಕಲ್ಪಿತ ಘನವಾದವೆ? ನುಡಿಗೆಡಗೊಡದ ಘನವಾದವೆ? ಅಣಿಮಾದಿ ಸಿದ್ಧಿಗಳು ಅಚಿಂತ್ಯಪದವಾದವೆ?

ಗೋರಖನಾಥ ತಪಸ್ಸಿನಿಂದ ವಜ್ರ ಶರೀರ ಮಾಡಿಕೊಂಡ. ಅಡ್ಡಿಯಿಲ್ಲ, ಜಡಶರೀರ ಭಾವಿಯಾದನೊ, ಚೈತನ್ಯನಾದನೊ ? ವಜ್ರ ಶರೀರಕ್ಕೆ ಚೈತನ್ಯವೆನಬೇಕೊ, ಜಡವೆನಬೇಕೊ? ತಪಸ್ಸು ಮಾಡಿದವನು ಆಭಾಸ ಜೀವನೆನಬೇಕೊ, ಪರಬ್ರಹ್ಮವೆನಬೇಕೊ? ಇದು ಕಾರಣ ಮರವಿಂಗೆ ತಪಸ್ಸು ಅರುವಿಂಗೆ ತಪವುಂಟೆ? ತಪಸ್ಸು ಆವರಣವ ಪರಿಹರಿಸದು. ಇದರಲ್ಲಿ ಮರವಿಗೆ ಅಜ್ಞಾನವೇ ಆವರಣ ಅದಕ್ಕೆ ಕಳೆಯುವ ಸಾಮರ್ಥ್ಯವಿಲ್ಲ. ಇದರಿಂದ ಅಂತರಿಂದ್ರಿಯ ಬಹಿರಿಂದ್ರಿಯ ನಿಗ್ರಹ ವೃದ್ಧಿಗೊಳ್ಳುತ್ತದೆ. ತಪಸ್ಸು ಅವಿಚಾರ, ಅವಿಚಾರದಲ್ಲಿದ್ದುದೆ ಬಂಧನ, ಮರವಿಂಗೆ ಬಂಧನ, ಅಜ್ಞಾನಕ್ಕೆ ಬಂಧನವಲ್ಲದೆ ಸುಜ್ಞಾನಕ್ಕೆ ಬಂಧನ ಉಂಟೆ? ಅಂಗ ಲಿಂಗ, ಲಿಂಗ ಅಂಗವೆಂದರಿತ ಸಮ್ಯಜ್ಞಾನಿಗೆ

ಬಂಧನವುಂಟೆ? ತಪವ ಮಾಡುವುದುಂಟೆ ಜಡ ಬುದ್ಧಿಗೆ ತಪವುಂಟು ಬಂಧನವುಂಟು ಆತ್ಮ ಬುದ್ದಿಗೆ ತಪವೂ ಇಲ್ಲ, ಬಂಧನವೂ ಇಲ್ಲ. ಆತ್ಮನೆ ತಾನೆಂದರಿತವಂಗೆ ಬಂಧನವೇತರದು, ಮೋಕ್ಷವೇತರದು.

ನೇಮವೆಂಬುದು ಗತಹು : ನೇಮ ಮಾಡುವವರೆಲ್ಲ ಒಬ್ಬರನೊಬ್ಬರು ನೋಡಿ ಮಡುವ ನೇಮ ಇದು ಅಂಧ ಶ್ರದ್ಧೆ ನೇಮ . ನಿತ್ಯಾ ನಿತ್ಯ ವಿವೇಚನೆ ಇಲ್ಲದವರು, ಹಿಂದಿನವರು ಮಾಡಿದುದನ್ನು ನೋಡಿ ಮುಂದಿನವರು ಮಡುವುದು. ವಾರದ ನೇಮದವರು, ಚಂದ ನೇಮದವರು, ಚತುರ್ದಶಿ ನೇಮದವರು, ಅಮವಾಸ್ಯೆ ನೇಮದವರು, ಊಟದಲ್ಲಿ ಖಾದ್ಯ ಆಹಾರ ಸೇವಿಸುವವರು, ಶುದ್ಧಹಾರ ನೇಮದವರು, ಫಲಹಾರ ನೇಮದವರು, ಪತ್ರಿ ನೇಮದವರು, ಲಿಂಗಾರ್ಚನೆ ನೇಮದವರು. ಜಂಗಮ ತೃಪ್ತಿ ನೇಮದವರು, ಇವರೆಲ್ಲ ಒಬ್ಬರನ್ನೊಬ್ಬರು ಮಾಡುವದು ನೋಡಿ ಮಾಡುವ ನೇಮದವರು. ಇವರುಗಳಲ್ಲಿ ತನ್ನ ತಾ ತಿಳಿಯುವ ನೇಮದವರು ಒಬ್ಬರು ಇಲ್ಲ.

ನೇಮವೆಂಬುದು ಭ್ರಾಂತಿ, ಸಾಂಪ್ರದಾಯ, ಕಟ್ಟು ನಿರ್ಬಂಧ ಲಿಂಗೈಕ್ಯನಿಗುಂಟೆ? ಲಿಂಗೈಕ್ಯ ನಿಭ್ರಾಂತ, ಅನಿಯಮದ ಬೆಡಗುಳ್ಳವ , ನಿಸ್ಸೀಮಂಗೆ ಸಾಂಪ್ರದಾಯ ಉಂಟೆ? ಅರುವ ಅರಿಯ ಹೋದವರು ನೇಮವ ಮಾಡಬಹುದೆ? ಚೈತನ್ಯವೆ ತಾನಾಗಿಹ ಮಹಾಂತ ಅದಾವ ಕಾರಣಕ್ಕಾಗಿ ನೇಮವ ಮಾಡುವುದು, ನಿರುಪಾಧಿಗೆ, ಉಪಾಧಿಯು ಘನವೆ? ಅರಿತವರೆಲ್ಲ ನಿರುಪಾಧಿಗಳು, ನಿಸ್ಸಂಗಿಗಳು, ಘನಗಂಭೀರದೊಳ್ ಘನಕ್ಕೆ ಘನವಾದವರು ನಿಜೈಕ್ಯರು , ಅವರೆಂತು ನೇಮ ಮಾಡುವುದು? ಆರಾಗಿ ಮಾಡುವುದು, ಆರಿಗಾಗಿ ಮಾಡುವುದು? ಭ್ರಾಂತಿಗೆ ನೇಮ ಉಂಟಲ್ಲದೆ ನಿಭ್ರಾಂತಂಗೆ ನೇಮ ಉಂಟೆ? ಮನೆ ಎಂದವಂಗೆ ನೇಮ ಉಂಟು, ಮಠವೆಂದವಂಗೆ ನೇಮ ಉಂಟೆ? ಘಟವೆಂದವಂಗೆ ನೇಮ ಉಂಟು. ಘಟಾಕಾಶಕ್ಕೆ ನೇಮ ಉಂಟೆ? ಜಡಬುದ್ಧಿಗೆ ನೇಮ ಉಂಟಲ್ಲದೆ ಚೈತನ್ಯಕ್ಕೆ ಚಿದಾಕಾಶಕ್ಕೆ ನೇಮ ಉಂಟೆ? ನೇಮ ಮಾಡುವವರೆಲ್ಲ ಭ್ರಾಂತರು , ಇವರಿಗೆ ಗುರುದರ್ಶನ ವಿಲ್ಲ. ಗುರು ಕಾರುಣ್ಯವಿಲ್ಲ , ನಿತ್ಯ ನಿರಂಜನ ತತ್ವ ಇವರೆತ್ತಬಲ್ಲರು? ತತ್ವಮಸಿ ಮಹಾವಾಕ್ಯವನೆ ಹೊರಗೆ ಬಳಸಿ,ವ್ಯರ್ಥ ಸತ್ತಿತ್ತು ಜಗವೆಲ್ಲವು ನಾಯಿಸಾವ. ತಾವಾರೆಂದರಿಯದೆ, ಸತ್ತವರ ಹೆಸರ ಪತ್ರ ನೋಡಿದಡೆತ್ತಣ ಮುಕ್ತಿ ಗುಹೇಶ್ವರ. ಇವರೆಂತು ಲಿಂಗೈಕ್ಯದ ಘನವ ಬಲ್ಲವರು ಇದು ಕಾರಣ ನೇಮವೆಂಬುದು ಗತಹು ಎಂದು ಹೇಳಿದ್ದಾರೆ.

ಶೀಲವೆಂಬುದು ಸೂತಕ :ಅಂಗಭಾವಿಗೆ ಶೀಲವೊ , ಲಿಂಗಭಾವಿಗೆ ಶೀಲವೊ? ದೇಹ ತಾನೆಂದವಂಗೆ ಶೀಲವೊ , ದೇಹಿ ತಾನೆಂದವಂಗೆ ಶೀಲವೊ? ಮಾಂಸ ಪಿಂಡಕ್ಕೆ ಶೀಲವೊ , ಮಂತ್ರ ಪಿಂಡಕ್ಕೆ ಶೀಲವೊ? ಮರವಿನಲ್ಲಿ ಸೂತಕವಲ್ಲದೆ ಅರುವಿಂಗೆ ಸೂತಕವುಂಟೆ?

ಜಾತಿ ಸೂತಕ ಬಿಡದು , ಜನನ ಸೂತಕ ಬಿಡದು , ಪ್ರೇತ ಸೂತಕ ಬಿಡದು , ರಜ ಸೂತಕ ಬಿಡದು, ಉಚ್ಚಿಷ್ಟ ಸೂತಕ ಬಿಡದು, ಕುಲ ಸೂತಕ ಬಿಡದು ಇವರನೆಂತು ಭಕ್ತರೆಂಬೆ, ಇವರನೆಂತು ಯುಕ್ತರೆಂಬೆ , ಶ್ರೀಗುರು ಸ್ವಾಮಿ ಪೂರ್ವಾಶ್ರಯವ ಕಳೆದು ಹಸ್ತ ಮಸ್ತಕ ಸಂಯೋಗ ಮಾಡಿ ಉಪದೇಶವ ನಿತ್ತ ಬಳಿಕ ಕಾಡಗಿಚ್ಚಿನ ಕೈಯಲ್ಲಿ ಕರಡವ ಕೊಯ್ಸಿದಂತಿರಬೇಕು. ಭಕ್ತನು ಹಿಂದೆ ಮುಂದೆ ಮೆದೆಯಲ್ಲ ಇದು ಕಾರಣ ಕೂಡಲಚೆನ್ನಸಂಗಮದೇವಾ ಸದ್ಭಕ್ತಂಗೆ ಸೂತಕವ ಮಾಡಲು ಇಲ್ಲ.

ಶೀಲವೆಂಬುದು ಸೂತಕ, ಇದು ಪೂರ್ವಾಶ್ರಯ ತನ್ನತಾ ಮರೆತ ಆಶ್ರಯ. ಅಜ್ಞಾನದಾಶ್ರಯ ಶ್ರೀಗುರು ಶರಣಾಗತರಾಗದಿದ್ದಲ್ಲಿ ಸೂತಕವುಂಟು, ಶೀಲವುಂಟು. ಶೀಲವುಳ್ಳವರು ಭಕ್ತರಲ್ಲ ಯುಕ್ತರಲ್ಲ. ಶ್ರೀಗುರುವಿನ ಹಸ್ತಮಸ್ತಕ ಸಂಯೋಗವಾಗದವರು. ಚಿದಗ್ನಿ ಜ್ಞಾನಾಗ್ನಿ ಸಂಯೋಗವಾಗುವುಡೆ ಶೀಲವೆಂಬ ಕೆಂಡ ಹಿಂದೆ ಮುಂದೆ ಇಲ್ಲ. ಸದ್ಭಕ್ತಂಗೆ ಸೂತಕವ ಮಾಡಲು ಇಲ್ಲಿ ಭಾಷೆಯೆಂಬುದು

ಪ್ರಾಣಘಾತಕ, ಪ್ರಪಂಚ ಪರಮಾರ್ಥ ಭಾಷೆಯಲ್ಲಿದೆ ಪ್ರಪಂಚ ಪ್ರವೃತ್ತಿಯ ಭಾಷೆ. ಪರಮಾರ್ಥ ನಿವೃತ್ತಿ ಭಾಷೆ. ಪ್ರಪಂಚದ ಭಾಷೆ ನಾಮರೂಪಂಗಳ ಸತ್ಯತ್ವ ಭಾಷೆ. ಮೊಲೆ ಮುಖವ ಕಂಡು ಹೆಂಣು ಗಡ್ಡಮೀಸೆಗಳ ಕಂಡು ಗಂಡು ಸತ್ಯವೆನ್ನದ ಭಾಷೆ, ಜನನಮರಣ, ಧರ್ಮಾಧರ್ಮ, ಪುಣ್ಯಪಾಪ, ಸ್ವರ್ಗನರಕವೆನ್ನುವ ಭಾಷೆ ಈ ಲೋಕದ ಸತ್ಯ ಭಾಷೆ. ಇದರಿಂದ ಪ್ರಾಣಘಾತಕ ಏಕೆಂದರೆ ವಾಸನೆಯೆ ವೃದ್ಧಿಯಾಗಿ ಭವ ಭವಾಂತರಗಳಲ್ಲಿ ಭವಯಾತನೆ ತಪ್ಪದು.

ಪರಮಾರ್ಥ ಭಾಷೆ ಸಚ್ಚಿದಾನಂದ ನಿತ್ಯ,ಪೂರ್ಣ, ಅಖಂಡ, ಅದ್ವಿತೀಯ, ಅಸಂಗ ಸ್ವಯಂಪ್ರಕಾಶ ಕೂಟಸ್ಥನ ಭಾಷೆ ಸರ್ವಂಖಿಲ್ವಿದಂ ಬ್ರಹ್ಮವೆಂಬ ಭಾಷೆ. ಸತ್ಯಜ್ಞಾನಮನಂತಂ ಬ್ರಹ್ಮವೆಂಬುವ ಭಾಷೆ, ಗುರು ಲಿಂಗ ಜಂಗಮ ಪ್ರಸಾದ ಪ್ರಸಾದಿ ಎನ್ನುವದರಲ್ಲಿಯೆ ಸರಿಹೋಗಿದೆ. ಪರಮಾರ್ಥ ಭಾಷೆ ಅರಿತವರಿದ್ದರೆ ಅಮರತ್ವವು ಸ್ವತಃ ಸಿದ್ಧವು. ಅರಿಯದಿದ್ದರೆ ಭಾಷೆಗೆ ಇಂಬಾದರೆ ತಮ್ಮ ತಾ ತಿಳಿದಂತಾಯಿತೆ? ತಿಳಿಯದ್ದರಿಂದ ಭಾಷೆಯೆಂಬುದು ಶಾಸ್ತ್ರವಾಸನೆಗೀಡಾಗಿ ಪ್ರಾಣ ಘಾತಕವಾಯಿತ್ತು ಎಂದು ಹೇಳಿಹರು.

ಇಂತೀ ಚತುರ್ವಿಧದೊಳಗಿಲ್ಲ ಕೂಡಲಚೆನ್ನಸಂಗಯ್ಯ ಲಿಂಗೈಕ್ಯವು: ಲಿಂಗೈಕ್ಯ, ತಪಸ್ಸು ನೇಮ ಶೀಲ ಮಾಡುವವರದಲ್ಲ. ಭಾಷೆ ಮುನ್ನಿಲ್ಲ ಲಿಂಗೈಕ್ಯವದು ಲಿಂಗ ಸಕೀಲ ಸಂಯೋಗ ವರ್ಮಸ್ಥಲ ಅರಿತವರ ಅರುವು. ಅವರು ಮೀಸಲವಾಗಿಹ ತತ್ವ ಬಲ್ಲವರು ಎಂಜಲ ಮಾತಿನವರದಲ್ಲ, ಶಬ್ದವೆ ಮೀಸಲವಾಗಿರುವಲ್ಲಿ ತಪವ ಮಾಡುವದೆಂತು? ಪವಿತ್ರ ಅಪವಿತ್ರ ಕಾಣದವನು ಶೀಲ ಮಾಡುವದೆಂತು ? ವಾರ, ತಿಥಿ, ಮಾಸ, ಸಂವತ್ಸರಾದಿಗಳ ಕಾಣದವನಿಗೆ ನೇಮವಿಲ್ಲ, ನಿತ್ಯವಿಲ್ಲ ಶಬ್ಧವೆ ಮೀಸಲವಾಗಿರುವಲ್ಲಿ ಭಾಷೆಯೇತರದು, ಇದು ಕಾರಣ ಚತುರ್ವಿಧದೊಳಗೆ ಲಿಂಗೈಕ್ಯವಿಲ್ಲವೆಂದು ಹೇಳಿದ್ದಾರೆ.

117

ತನುವ ಸೋಂಕಿ ತನು ನಷ್ಟವಾಯಿತ್ತು ಮನವ ಸೋಂಕಿ ಮನವ ನಷ್ಟವಾಯಿತ್ತು,
ಭಾವ ಸೋಂಕಿ ಭಾವ ನಷ್ಟವಾಯಿತ್ತು ? ಇದು ಕಾರಣ
ಕೂಡಲಚೆನ್ನಸಂಗಯ್ಯ ಲಿಂಗ ಸೋಂಕಿ ಶರಣ ಸಂದು ನಷ್ಟವಾಯಿತ್ತು. **॥ 736 ॥**

ತಾತ್ಪರ್ಯ: ತನುವ ಸೋಂಕಿ ತನು ನಷ್ಟವಾಯಿತ್ತು : ಸೋಂಕಿದ ತನುವಾವುದು? ನಷ್ಟವಾದ ತನುವಾವುದು? ಹುಡುಕಿದರೂ,ಹಲುಬಿದರೂ ಕಾಣಬಾರದ ತನುವ ಸೋಂಕಿ. ಹುಡುಕುವ ಹಲುಬುವ ಕಾಣಿಸಿಕೊಳ್ಳುವ ತನು ನಷ್ಠವಾಯಿತ್ತು.

ಹಲುಬಿದರೂ ಕಾಣಬಾರದ ಮನವ ಸೋಂಕಿ ಹಲುಬುವ ನೆನೆಯುವ ಮನ ನಷ್ಟವಾಯಿತ್ತು. ಹಲುಬಿದರೂ ಕಾಣಬಾರದ ಭಾವಕ್ಕಗಮ್ಯವಾಗಿಹ ಘನವ ಸೋಂಕಿ,ಹಲುಬುವ ಭಾವಿಸುವ ಭಾವ ನಷ್ಟವಾಯಿತ್ತು.

ಹುಡುಕಿದರೂ,ಹಲುಬಿದರೂ ಕಾಣಬಾರದ ತನು ಆವುದು? ಹುಡುಕಲಿ, ಹಲುಬಲಿ ಏನ ಮಾಡಿದರೂ ಲಭ್ಯವಾಗದ ತನು ತೋರಲೆಂತು? ತೋರಬಾರದ ತನು ಹೇಳಲೆಂತು, ಹೇಳಬಾರದ ತನು ತೋರಲೆಂತು! ಅರಿದರಿದು ನೋಡುವುಡೆ ಏನೊಂದು ಸರಲೆಡೆಗೊಡದ ತನು. ತನುವದು ತಾನೆ ನೋಡಾ, ತಾನೆ ತಾನಾದುದು ತಾನೆನ್ನದ ತನು ನೋಡಾ. ಅರಸಿ ಕಾಣಬಾರದ ಮನವಾವುದು? ಕಲ್ಪನೆಗೆ ನಿಲುಕದ ಮನ ಹಲುಬಿದರೂ ಲಭ್ಯವಾಗದ ಮನ. ಇದು ಉಪಾಧಿಕ ಮನವಾಗದು, ಉಪಾಧಿ ರಹಿತ ಮನವಾಗದು. ಅವಿಚಾರ ಮನವಾಗದು ವಿಚಾರ ಮನವು ಆಗದು. ಸಂಕಲ್ಪ

ವಿಕಲ್ಪಯುಕ್ತ ಮನವಾಗದು. ನಾಹಂ ಮನ ಕೋಹಂ ಮನ ಸೋಹಂ ಮನ ಚಿದಹಂ ಮನ ತತ್ವ ತೂರ್ಯಾರ್ಥವುಳ್ಳ ಮನವಾಗದು. ಅಹುದೆಂಬುದು ಮನವು ಆಗದು. ಅಲ್ಲೆಂಬ ಮನವು ಆಗದು. ಕಲ್ಪನಕ್ಕೊಳಪಟ್ಟ ಮನ ಆಗದು. ಅನುಪಮ ಮನ ಅಕಲ್ಪಿತ ಮನ ಸೋಂಕಿ ಕಲ್ಪಿಸುವ ಮನ ನಷ್ಟವಾಯಿತ್ತು.

ಭಾವಕ್ಕಗಮ್ಯವಾಗಿಹ ಭಾವ ಸೋಂಕಿ ಭಾವ ನಷ್ಟವಾಯಿತ್ತು: ಏನೊಂದುಸರಲು ಎಡೆಗೊಡದ ನಿರ್ಭಾವ ಸೋಂಕಿ ಹಲುಬುವ ಭಾವಿಸುವ ಭಾವ ನಷ್ಟವಾಯಿತ್ತು.

ಏನೊಂದುಸರದ ಭಾವ ಇದನೇನೆಂಬೇನೆಂಬೆ? ಜೀವ ಭಾವವಾಗದು. ಅಂತರಾತ್ಮನೆಂಬ ಭಾವವಾಗದು. ಪರಮನೆಂಬ ಭಾವವು ಆಗದು , ಅಂಗನೆಂಬ ಭಾವವಾಗದು ಲಿಂಗನೆಂಬ ಭಾವವಾಗದು. ಜಂಗಮನೆಂಬ ಭಾವವು ಆಗದು ಏನೊಂದಾಗದ ಭಾವ ಭಾವಕ್ಕಗಮ್ಯವು ಅದನೆಂತುಸರುವುದು? ಅದು ಭಾವಾದಿಗಳ ಕಾಣದುದು.

'' ಕಂಡೆನೆಂದರೆ ಕಣ್ಣ ಮರವು, ಕಾಣೆನೆಂಬುದು ಮರವಿನ ಮರವು , ಅಗಲಿದೆ ನೆಂಬುದೆ ಅರುವಿನ ಮರವು. ಕಂಡೆ ಕಾಣೆ ಕೂಡಿದೆ ಆಗಲಿದೆನೆಂದರೆ ಕರ್ಮ ಬೆಂಬತ್ತಿಬಿಡದು ಗುಹೇಶ್ವರ ಲಿಂಗವ ತಿಳಿವುಡೆ ನೀನೆಂದೆ ತಿಳಿದು ನೋಡಾ ಮರುಳೆ '' ಎಂದು ಪ್ರಭುವಿನ ಮಹದರುವು, ತನ್ನಿಂದ ತಿಳಿದು ನೋಡುವುಡೆ ಗುಹೇಶ್ವರ ಲಿಂಗವು ತಾನೆಂಬುದು ವೇದ್ಯವಾಗಿ ಅಂಗ ಭಾವ ಸೋಂಕಿ ಭಾವ ನಷ್ಟವಾಯಿತ್ತು.

ತನು ಸೋಂಕಿ : ತಾನೆ ತನು,ತಾನು ಉಪಮಿಸದ ತನು. ಉಪಮಿಸುವದು ಮುಕ್ತಾಯಗೊಂಡುದು ತನು ಸೋಂಕಿದ ಚಿನ್ಹ. ಮನ ಸೋಂಕಿ : ಸುಮನ ಸೋಂಕಿ ಇದು ಕಲ್ಪಿಸಿದ ಮನ ಅರಸದ ಮನ. ಅರುಸುವದ ಮುಕ್ತಾಯಗೊಂಡುದೆ ಸುಮನ ಸೋಂಕಿದ ಚಿನ್ಹ. ಸುಜ್ಞಾನ ಘನ ಸೋಂಕಿದ ಚಿನ್ಹ ಅಕಲ್ಪಿತ ಘನವೆ ಸೋಂಕಿ ಮನ ನಷ್ಟವಾಯಿತ್ತು.

ಭಾವಸೋಂಕಿ : ಆವಾವ ಭಾವಗಳಿಗಿಂಬುಗೊಡದ ನಿರ್ಭಾವ ರೂಪಿ ಭಾವ.ಇಲ್ಲಿ ಶಬ್ದ ಮೀಸಲು ನುಡಿಗೆಡೆಯಿಲ್ಲ, ಎಡೆಗೆ ಕಡೆಯಿಲ್ಲ. ಗುಹೇಶ್ವರ ಲಿಂಗ ಬೇಧಿಸಲೊಡನೆ ನಿರ್ಭಾವ ರೂಪಿ ಭಾವ ಸೋಂಕಿ ಭಾವ ನಷ್ಟವಾಯಿತ್ತು ಎಂದು ಹೇಳಿದೆ.

ತನು ಸೋಂಕಿ ತನು ನಷ್ಟವಾಯಿತ್ತು: ನಷ್ಟವಾದ ತನುವಾವುದು? ತೋರುವ ಪಿಂಡಾಂಡ ಬ್ರಹ್ಮಾಂಡ ವ್ಯಷ್ಠಿ ಸಮಷ್ಠಿ ತನು ನಷ್ಟವಾಯಿತ್ತು. ತಾನಾರೆಂದರಿಯದ ಮುನ್ನ ತನ್ನಿಂದ ತಿಳಿಸಿಕೊಳ್ಳುವ ತೋರುವ ತನುಗಳೆಲ್ಲವು ನಷ್ಟವಾದುದಿಲ್ಲ. ತನ್ನ ಅರಿತ ಮೇಲೆ ತೋರುವ ತನು ನಷ್ಟವಾಯಿತ್ತು. ಅಹಂ ಮಮರೂಪಿ ತನು ನಷ್ಟವಾಯಿತ್ತು.

ಮನ ಸೋಂಕಿ ಮನ ನಷ್ಟವಾಯಿತ್ತು : ನಷ್ಟವಾದ ಮನವಾವುದು? ಉಪಾಧಿಕ ಮನ,ಉಪಾಧಿಕ ರಹಿತ ಮನ ನಷ್ಟ , ಅವಿಚಾರ, ವಿಚಾರರೂಪಿ ಮನ ನಷ್ಟ, ಭ್ರಾಂತಿ ಮನವು ನಷ್ಟ ನಿತ್ಯಾನಿತ್ಯವೆಂಬ ವಿಚಾರವು ನಷ್ಟ . ನಾಹಂ ಎಂಬ ಮನ ನಷ್ಟ , ಕೋಹಂ ಮನವು ನಷ್ಟ , ಸೋಹಂ ಮನವು ನಷ್ಟ, ಲಿಂಗಾಂಗ ಬೇರೆ ಮಾಡುವ ಮನವು ನಷ್ಟ ಲಿಂಗಾಂಗ ಒಂದೆಂಬುವ ಮನವು ನಷ್ಟವಾಯಿತ್ತು.

ಭಾವ ಸೋಂಕಿ ಭಾವ ನಷ್ಟವಾಯಿತ್ತು: ನಷ್ಟವಾದ ಭಾವಂಗಳಾವವು? ಧರೆಯ ಮೇಲೆ ಮೂರು ಭಾವಿಗಳುಂಟು . ಅಂಗ ಭಾವ, ಲಿಂಗಭಾವ, ಜಂಗಮ ಭಾವಂಗಳು ಉಂಟು. ಈ ಭಾವಂಗಳು ನಷ್ಟವಾಗಬೇಕಾದಲ್ಲಿ '' ಇವ ತಟ್ಟದೆ ಮುಟ್ಟದೆ ಪರಬ್ರಹ್ಮವ ದಾಂಟಿದರು. ಗುಹೇಶ್ವರ

ಲಿಂಗದಲ್ಲಿ ಹಂಗು ಹರಿದ ಶರಣರು '' ಶರಣರ ಭಾವ ಆವಾವ ಹಂಗಿಲ್ಲದೆ ಲಿಂಗವರಿತು ಲಿಂಗವಪ್ಪ ಭಾವ, ನಿರ್ಭಾವ. ಈ ಭಾವ ಸೋಂಕಿ ಭಾವ ನಷ್ಟವಾಯಿತ್ತು. ಇದು ಕಾರಣ ಕೂಡಲ ಚೆನ್ನ ಸಂಗಯ್ಯ ಲಿಂಗ ಸೋಂಕಿ ಶರಣ ಸಂದು ನಷ್ಟವಾಯಿತ್ತು.

ಶರಣಂಗೆ ಲಿಂಗ ಸೋಂಕಿ ಲಿಂಗದ ಘನವರಿಯ ಹೋಗಿ ತಾನೆ ಲಿಂಗಕ್ಕೆ ಲಿಂಗವಾಗಿ ಸಕಲಕ್ಕೂ ಸೋಂಕುವವನಾದ. ತನ್ನ ಆವಾವು ಸೋಂಕಲರಿಯವು, ತಾನೆ ಸೋಂಕದ ನಿರಾಲಂಬ ನಿಜನಿಲುವು ಸೋಂಕಿ ಅರಸುವ ಅರಿಸಿಕೊಳ್ಳುವ ತನುವಾಗಲಿ ಮನವಾಗಲಿ ಭಾವವಾಗಲಿ ನಷ್ಟವಾದವು. ಶರಣ ಬೇರೆ ಲಿಂಗ ಬೇರೆಂಬ ಭೇದವು ನಷ್ಟವಾಯಿತ್ತು. ಶರಣನೆಂದರೆ ಅನುಪಮ ಲಿಂಗ, ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ ಘನವು, ನಿಸ್ಸೀಮವು. ಶರಣ ನುಡಿಗೆಡೆಗೊಡದ ಘನ' ಭಾವಕ್ಕಿಂಬುಕೊಡದ ಶರಣ. ಶಬ್ದಮೀಸಲವಾಗಿಹ ಲಿಂಗ ಸೋಂಕಿದಾಗ, ಶರಣನೆಂದರೆ ಲಿಂಗ ಲಿಂಗವೆಂದರೆ ಶರಣನಾಗಿ, ಸಂದು ನಷ್ಟವಾಯಿತ್ತು ಎಂದು ಹೇಳಿದ್ದಾರೆ.

118

ತನ್ನನರಿದವಂಗೆ ಇದಿರೆಂಬುದುಂಟು, ತನ್ನ ನರಿಯದವಂಗೆ ಇದಿರೆಂಬುದಿಲ್ಲ.
ಅರಿವು ಮರೆದು ಕುರುಹು ಅಳಿಯಿತ್ತು, ಬೆರಗಾಯಿತ್ತು.
ಬೆರಗು ಬೆರಗಿನೊಳಗೆ ಕರಿಗೊಂಡಿತ್ತಿದೇನೊ?
ಭ್ರಾಂತು ಭ್ರಾಂತನೆ ನುಂಗಿ ನುಂಗಿತ್ತಿದೇನೊ, ಗುಹೇಶ್ವರಾ
ಭವಿಯ ಬೆಂಬತ್ತಿ ಭವಿಯಾದ ಕಾರಣ. ॥ 604 ॥

ತಾತ್ಪರ್ಯ : ತನ್ನ ನರಿದವಂಗೆ ಇದಿರೆಂಬುದುಂಟು ತನ್ನ ನರಿಯದವಂಗೆ ಇದಿರೆಂಬುದಿಲ್ಲ : ಆರು ತನ್ನ ಅರಿದಿರುವೆ ನೆನ್ನುವನು, ಅದು ಅರಿದು ಅರುಹಿಸಿಕೊಳ್ಳವ ಜ್ಞಾನ, ನಿತ್ಯಾ ನಿತ್ಯವುಳ್ಳ ಜ್ಞಾನ. ಇಲ್ಲಿ ಒಂದು ಅರಿಸಿಕೊಳ್ಳುವದೆಲ್ಲ ಅನಾತ್ಮವಾಗಿದೆ, ಜಡವಾಗಿದೆ ತೋರಿ ಇಲ್ಲವಾಗುವುದಾಗಿದೆ. ನಾಮ ರೂಪದಿಂದುಕ್ತವಾದುದು ಮತ್ತೊಂದು ಅರಿಯುವದಕ್ಕಾಗಿದೆ. ಇದು ಪುರುಷಾರ್ಥ ಜ್ಞಾನ. ಇಲ್ಲಿ ಜೀವನು ಬಂಧವನ್ನು ಕಾಣುತ್ತಾನೆ, ಮೋಕ್ಷವನ್ನು ಕಾಣುತ್ತಾನೆ, ಮರವುಳ್ಳವನು ಆಗಿಹನು, ಅರುವುಳ್ಳವನು ಆಗುವನು, ಸಂಗಿಯು ಆಗುತ್ತಾನೆ ನಿಸ್ಸಂಗಿಯು ಆಗುತ್ತಾನೆ. ಅನಾತ್ಮ ಭಾವಿಯು ಆಗುವನು, ಆತ್ಮಭಾವಿಯು ಆಗುವನು. ಇದು ಪ್ರಕಾಶಿತ ಪ್ರಕಾಶಕವೆಂಬ ಲಕ್ಷಣದಿಂದುಕ್ತವಾದ ಜ್ಞಾನ. ತನ್ನಿಂದ ತಿಳಿಸಿಕೊಳ್ಳವದೆಲ್ಲವು ಬೆಳಗಿಸಿ ಕೊಳ್ಳುವದಾಗಿದೆ ತಾನು ಬೆಳಗುವವನಾಗಿದ್ದಾನೆ.

ಪ್ರಥಮದಲ್ಲಿ ಸಾಧಕನು ಈ ಪುರುಷಾರ್ಥ ಜ್ಞಾನ ಮಾಡಿಕೊಂಡಲ್ಲಿ, ಮುಂದೆ ಅನುಪಮ ನಿಲುವುಳ್ಳ ಸ್ವಮಹಿಮೆಯುಳ್ಳ ತನ್ನನ್ನು ನೋಡುವ ಅರುಹೃದಯವಾಗುವುದು. ಪ್ರತಿಯೊಬ್ಬರು ಅಂಗ ಭಾವ ತೊಡೆದುಹಾಕಿ ನಿಸ್ಸಂಗ ಭಾವಿಗಳಾದಾಗ ಲಿಂಗದರಿವು ಅನುಭವಕ್ಕೆ ಬರುವದು. ಇದು ಕಾರಣ ಅರಿದು ಅರುಹಿಸಿಕೊಳ್ಳುವ ಜ್ಞಾನ. ಸಾಪೇಕ್ಷ ಜ್ಞಾನ ಇಲ್ಲಿ ದೃಶ್ಯವು ತಿಳಿಸಿಕೊಳ್ಳುವದಾಗಿದೆ. ದೃಕ್ ರೂಪನಾದ ತಾನು ಅರಿಯುವವನಾಗಿದ್ದಾನೆ. ಈ ಕಾರಣದಿಂದಾಗಿ ತನ್ನ ಅರಿದವಂಗೆ ಇದಿರೆಂಬುದುಂಟು ಎಂದು ಹೇಳಿಹರು. ತನ್ನ ನರಿದವೆಂಬುವವರೆಲ್ಲರು ಉಪಮೆಗೊಳಪಟ್ಟವರು. ಇವರು ಮರವು ಅರುವಿನಿಂದುಕ್ತವಾದ ಜ್ಞಾನವುಳ್ಳವರು. ಇವರು ಅರುವಿನಲ್ಲಿ ಇದಿರೆಂಬ ದೃಶ್ಯವಿದೆ, ಪಿಂಡವಿದೆ ಬ್ರಹ್ಮಾಂಡವಿದೆ, ವ್ಯಷ್ಠಿ ಸಮಷ್ಠಿ ಶರೀರವದೆ, ನಾಶವಾಗುವ ಜಗತ್ತು ಜಾಗ್ರತ್ ಸ್ವಪ್ನ ಸುಷುಪ್ತಾದಿ ಅವಸ್ಥೆಗಳು ಇವೆ, ತಾನು ನಾಶವಾಗದ ಆತ್ಮನು ಎಂಬ ಪುರುಷಾರ್ಥ ಜ್ಞಾನಿ

ಯಾದುದುರಿಂದ ತನ್ನ ನರಿದವಂಗೆ ಇದಿರೆಂಬುದುಂಟು ಎಂದು ಹೇಳಿದ್ದಾರೆ.

ತನ್ನನರಿಯದವಂಗೆ ಇದಿರೆಂಬುದಿಲ್ಲ, ಇದು ಅನುಪಮಜ್ಞಾನ ಅರಿದರುಹಿಸಿಕೊಂಬುದಕ್ಕೂ ಮೀರಿದ ಜ್ಞಾನ. '' ಎಲ್ಲ ಎಲ್ಲವನರಿವವರುಂಟು ತನ್ನ ತಾನರಿವವರುಂಟೆ? ಅರಿದಿಹೆನೆಂಬುದು ಚಿದಹಂಮದ ನೋಡಾ, ನಿರ್ಧರಿಸಿದೆನೆಂಬುದು ಅನುಭವದ ಮದನೋಡಾ, ಅರಿದರುಹಿಸಿಕೊಂಬುದಕ್ಕೆ ಮೀರಿದ ಘನವ ನರಿವ ಪರಿ ಎಂತು? ಇದು ಕಾರಣ ನಿರಂಜನ ಪ್ರಭುನಾಗೇಶ್ವರಾ ನಿಮ್ಮ ವರಪ್ರಸಾದ ದನುವಿನಗಮ್ಯವ ಉಪಮಿಸಬಹುದೆ ? ಉಪಮಿಸ ಲರಿಯೆ '' ಇದು ತನ್ನಯ ಇರುವು , ವಾಙ್ಮನೋತೀತವು ಭಾವಕ್ಕಿಂಬಿಲ್ಲ ಶಬ್ದಮೀಸಲು , ನುಡಿಯಲು ಅವಕಾಶವಿಲ್ಲ. ಇದು ಕಲ್ಪಿತ ಪುರುಷನಾಗಿ ಅರಿಯುವ ಅರುವಲ್ಲ. ಅರಿಯದರುವುಳ್ಳ ಘನಕ್ಕೆ ಏನೆನ್ನ ಬೇಕು ? ಅರವು ಮರೆದು ಕುರುಹಳಿಯಿತ್ತು ಬೆರಗಾಯಿತ್ತು:

ಅರುವು , ಅರುವು ಎಂಬುದನ್ನೆ ಮರೆಯಿತ್ತೆ ? ಇದೆಂಥ ಸುಖದ ಸುಖ. ಇದೆಂಥ ಅಚಿಂತ್ಯತ್ವದ ಪರಮಧಾಮ . ಈ ಮಹದರುವಿನ ಇರುವು ಇದಾರಿಗೆ? ತಾನು ಅರುವು ಎಂದು ಲಿಂಗ ಜಂಗಮ ಎಂದು ಪ್ರಸಾದ ಪ್ರಸಾದ ಎಂಬುದು ಮರದವಂಗೆ . ಇದು ಚಿದಹಮ್ಮು ಮೀರಿ ನಿಂತವಂಗೆ ಇದು ಮಿಕ್ಕಿ ಮೀರಿ ನಿಂತ ನಿಲವು. ಇಲ್ಲಿ ಕಲ್ಪಿತ ಪುರುಷನೆಂಬ ಅರಿವು ಮರೆತು ಹೋಗಿದೆಯಲ್ಲ , ಅವನ ಮರವಿನ ಅರಿವು ಮರೆದು ಹೋಗಿದೆ. ಅರುವು ಎಂಬುದು ಮರೆತು ಹೋಗಿದೆ. ಹಲುಬುವದೆ ನಿಂತು ಹೋಗಿದೆ. ಅವನ ತನು ನಷ್ಟ ಮನ ನಷ್ಟ, ಮರವು ಮರವಿನ ಕಾರ್ಯವಾದ ಅನಾತ್ಮ ಭಾವ ನಷ್ಟ ಆತ್ಮಭಾವ ನಷ್ಟವಾಗಿರುವುದೆ ಅರುವು ಮರೆದ ಕುರುಹು ನಷ್ಟವಾದ ಚಿನ್ಹ . ಅಲ್ಲಿಯೆ ಬೆರಗಾಯಿತ್ತು, ಇದಾರ ಬೆರಗು , ಇದು ಉಪಮಿಸದ ಬೆರಗು . ತನ್ನಯ ಬೆರಗು , ಶೃತಿಗೆ ಮೀರಿ ನಿಂತ ನಿಜದರಿವು. ಶಬ್ದಮುಗ್ಧ ನಿಶಬ್ದಬ್ರಹ್ಮವೆ ತನ್ನದಾದುದು . ಸತ್ತಾಸತ್ ಎಂಬುದಕ್ಕೂ ಮೀರಿದ ಘನದಿರುವೆ ಪ್ರಜ್ವಲಿಸುತ್ತಿತ್ತು.

ಬೆರಗು ಬೆರಗಿನೊಳಗೆ ಕರಿಗೊಂಡಿತ್ತಿದೇನೊ : ಇದು ಆಶ್ಚರ್ಯ ಏನೆಂದೆನಲಿಲ್ಲದ ಅರುವು. ತಾನೆ ತಾನಾಗಿ ಪ್ರಜ್ವಲಿಸುತ್ತಿದೆಯಲ್ಲ! ಇದಾರ ಹಂಗಿಲ್ಲದೆ ಪ್ರಜ್ವಲಿಸುವ ಘನಕ್ಕೇನೆನ್ನಬೇಕು. ಇದನ್ನು ವರ್ಣಿಸಲು ಇದಕ್ಕಾವ ಭಾಷೆ ತರಬೇಕು? ಇಲ್ಲಿಯೆ ನೆಲೆಯೂರಿ ನಿಲ್ಲಲು, ಹೃದಯದಲ್ಲಿ ಬಲವಿಲ್ಲದೆ ಭಯವಾಗುತ್ತಿದೆಯಲ್ಲ ಇದೆಂಥ ಆಶ್ಚರ್ಯ. ಇತ್ತ ಹೃದಯಕ್ಕೆ ಹೃದಯವೆ ತನಗೆ ದೊರೆತ ಅಚಿಂತ್ಯ ದಿರುವಿನಿಂದಗಲದೆ ಸುಖವ ಸುಖಿಸುತ್ತ ದೃಢ ದೃಢಾಂಗವಾಗಿದೆಯಲ್ಲ .

ಭ್ರಾಂತು, ಭ್ರಾಂತನೆ ನುಂಗಿ ನುಂಗಿತ್ತಿದೇನೊ: ಇದು ಆಶ್ಚರ್ಯ , ಬಡ ಬಡಿಸುವುದು ಭ್ರಾಂತಿ ಅಲ್ಲವೆ? ಬಡ ಬಡಿಸುವದನ್ನೆ ನುಂಗಿದುದಕ್ಕೆ ಏನನ್ನ ಬೇಕು? ಪ್ರಪಂಚ ಸತ್ಯವೆನ್ನುವದು ಭ್ರಾಂತಿಯೆ , ಮಿಥ್ಯೆಯೆನ್ನುವದು ಭ್ರಾಂತಿಯೆ. ಪರಮಾರ್ಥ ಸತ್ಯ ಎನ್ನುವುದು ಭ್ರಾಂತಿಯೆ, ಪರಮಾರ್ಥ ಮಿಥ್ಯೆ ಎನ್ನುವದು ಭ್ರಾಂತಿಯೆ. ಈ ಸತ್ಯ ಮಿಥ್ಯೆ ಎನ್ನುವುದು ಬಡಬಡಿಸಿದಂತಲ್ಲವೆ! ಇಲ್ಲಿ ಒಂದು ಭ್ರಾಂತು, ಮತ್ತೊಂದು ಭ್ರಾಂತಿಯನ್ನು ನುಂಗಿದೆಯಲ್ಲವೆ! ಈ ಭ್ರಾಂತಿಯನ್ನು ಸಮದೃಷ್ಠಿಯುಳ್ಳದ್ದಾಗಿ ನೋಡುವುದು ಭ್ರಾಂತಿಯೆ. ವಿಷಮ ದೃಷ್ಠಿಯೊಂದು ಭ್ರಾಂತಿ, ಸಮದೃಷ್ಠಿಯೆಂಬುದೊಂದು ಭ್ರಾಂತಿ, ವಿಷಮ ದೃಷ್ಠಿಯುಳ್ಳ ಭ್ರಾಂತಿಯನ್ನು ಸಮದೃಷ್ಠಿಯೆಂಬ ಭ್ರಾಂತಿ ನುಂಗಿ ಇವೆರಡು ಭ್ರಾಂತಿಯನ್ನು ನುಂಗಿ ನುಂಗಿತ್ತಿದೇನೊ ಇದೇನೊ? ನುಂಗಿದುದು ಇದೇನೊ? ಇವೆರಡನ್ನು ನುಂಗಿದುದು ಇದೇನೊ? ನುಂಗಿದವನು ಹೇಳಲಿಲ್ಲ, ಹೇಳಿದವನು ನುಂಗಿಯೆ ಇಲ್ಲ, ಅರಿದರುಹಿಸಿ ಕೊಂಬುದನ್ನು ನುಂಗಿದವನು ಹೇಳುವದದೆಂತು? ನುಂಗಿದವನು ಶಬ್ದಮುಗ್ಧ. ಬ್ರಹ್ಮಕ್ಕೆ ನಾ ಬ್ರಹ್ಮವೆಂಬುದು ಘಟಿಸುವದೆ?

ನಿರಂತರವಾಗಿಹ ತಾನು ನಿರಂತರವೆನಲಿಲ್ಲ ನಿರಂತರವೆಂಬುದನ್ನೆ ನುಂಗಿದವನು ಹೇಳಲೆಂತು ಬಾರದು.

ಗುಹೇಶ್ವರಾ ಭವಿಯ ಬೆಂಬತ್ತಿ ಭವಿಯಾದ ಕಾರಣ : ಭವಿಯ ಬೆಂಬತ್ತುವ ಭಾಗ್ಯ ಇದಾರಿಗೆ? ಪ್ರಭುವಿಗೆ , ಪ್ರಭುವಾಗಿರುವದರಿಂದ ಪ್ರಭುವಿನ ಬೆಂಬತ್ತಿದ ಆಶ್ಚರ್ಯ. ತನ್ನ ಬೆಂಬತ್ತಿ ತಾನೆ ತಾನಾದುದು ಪರಮಾಶ್ಚರ್ಯ. ತಾನೆಂಬುದು ಭವಿ, ಭವಿಯ ಬೆಂಬತ್ತಿ ಭವಿಯಾದ. ತನ್ನ ಬೆಂಬತ್ತಿ ತಾನೆ ತಾನಾದ ಘನಮಹಿಮನು ಘನಕ್ಕೆ ಘನವಾದುದು ಉಪಮಿಸಲಳವಲ್ಲ . ಭವಿಯೆಂದರೆ ಲಿಂಗ. ಲಿಂಗದ ಬೆನ್ನು ಹತ್ತಿ ಲಿಂಗವಾದ ಎಂದು ಹೇಳುವಲ್ಲಿ ಲಿಂಗವರಿತಾಗ, ಲಿಂಗದರಿವು ಪ್ರಜ್ವಲಿಸುವುದು ಎಂದು ಹೇಳಿಹರು. ಲಿಂಗವರಿಯದೆ ಲಿಂಗ ಲಿಂಗ ಎಂದು ಲಿಂಗಾರ್ಚನೆ ಮಾಡುವವರು ಲಿಂಗದ ಬೆನ್ನು ಹತ್ತಿ ಲಿಂಗವಾದವರಲ್ಲ, ಲಿಂಗವರಿತವರು ಲಿಂಗವದು ಅಚಲಾನಂದವಾಗಿ , ಅಚಲಾನಂದಕ್ಕೆ ಬೆಂಬತ್ತಿ ಅಚಲಾನಂದಮಯರೂಪಿ ಲಿಂಗವಾದರು. ಇದುವೆ ಭವಿಯ ಬೆಂಬತ್ತಿ ಭವಿಯಾದನೆಂದು ಪ್ರಭುವು ಹೇಳಿದುದು .

119

ಮನದ ಕಾಲ ಕತ್ತಲು, ತನುವಿನ ಕಾಲ ಕತ್ತಲು
ಅನುಭಾವದನುವ ನೆನೆಯುತ್ತ ನೆನೆಯುತ್ತ ಗಮನಗೆಟ್ಟಿತ್ತು
ಲಿಂಗ ಮುಖದ ಲಾದ ಸೂಚನೆಯ ಸುಖವ ಕಂಡು
ಗಮನಗೆಟ್ಟಿತ್ತು ಅನುವಾಯಿತ್ತು ಅಲ್ಲಿಯೆ ತಲ್ಲೀಯವಾಯಿತ್ತು
ಗುಹೇಶ್ವರನೆಂಬ ಲಿಂಗೈಕ್ಯಂಗೆ. ॥ 295 ॥

ತಾತ್ಪರ್ಯ : ಮನದ ಕಾಲ ಕತ್ತಲು, ತನುವಿನ ಕಾಲ ಕತ್ತಲು, ಇದಾವ ಕತ್ತಲು? ಇದು ಕಾರ್ಗತ್ತಲು, ಅಜ್ಞಾನರೂಪಿ ಅಂಧಃಕಾರ ಇಲ್ಲದ್ದು , ಉಂಟು ಮಾಡಿಕೊಂಡ ಅಜ್ಞಾನಂಧಃಕಾರ ಸಂಸಾರಿಗಳಷ್ಟೇ ಈ ಕತ್ತಲೆಯಲ್ಲಿ ವಾಸ ಮಾಡಿದ್ದಾರಂತಲ್ಲ , ಸನ್ಯಾಸಿಗಳು ಬ್ರಹ್ಮಚರ್ಯವಂತರು, ತಪಸ್ವಿ, ತ್ಯಾಗಿಗಳು ಹಠಯೋಗಿಗಳು ಕೂಡಾ ಮನ ಸುಳಿದಾಟದಲ್ಲಿ ತನುವಿನ ಸುಳಿದಾಟದಲ್ಲಿ ವಾಸಿಸಿದವರು. ಇಲ್ಲದ ಮನ ಉಂಟಾಗಿ ಅದರ ಕಾರ್ಯದಲ್ಲಿ ವಾಸ , ತನುವಿನ ಕಾಲ ಷಡ್ವಿಕಾರದಲ್ಲಿ ಮನದ ಕಾಲ ಸಂಕಲ್ಪ ವಿಕಲ್ಪದಲ್ಲಿ, ಶೋಕ ಮೋಹದಲ್ಲಿ , ನೆನಹು ನಿರ್ಣಯ ಮಾಡುವುದರಲ್ಲಿ , ಚಿಂತೆ ಭಯ ತ್ರಿವಿಧ ತಾಪದಲ್ಲಿಯೆ ಅದು ಕಾಲ ಕಳೆಯುವುದು .

ತನುವಿನ ಕಾಲ ಪ್ರಥಮ ತಾಯಿಗರ್ಭದಲ್ಲಿ ವಾಸ, ಅಲ್ಲಿಂದ ಹೊರಗೆ ಬರುವದು ಕೂಸಾಗಿರುವ ಕಾಲ,ಬಾಲ್ಯಕಾಲ,ಯೌವ್ವನ ಕಾಲ, ಮುಪ್ಪಿನ ಕಾಲ, ಸೊಕ್ಕು ಸೊರಗುವಿಕೆಯ ಕಾಲ ಇವುಗಳಲ್ಲಿಯೆ ಅದರ ಕಾಲ ಕಳೆಯುವದು . ಇಲ್ಲದ ತನುವು ಉಂಟು ಮಾಡಿಕೊಂಡವಂಗೆ ಎಲ್ಲಿಯ ನಿಭ್ರಾಂತಿ, ಎಲ್ಲಿಯ ಜ್ಞಾನೋದಯ, ಭ್ರಾಂತಿಯೆಂಬ ಕತ್ತಲು ನಿಭ್ರಾಂತರನ್ನುಕಾಣಗೊಡದಂತೆ ಮಾಡಿದೆ. ಇಲ್ಲದ ಮನ ಉಂಟು ಮಾಡಿಕೊಂಡವಂಗೆ ನಿಶ್ಚಿಂತತ್ವ ಹೇಗೆ ಸಾಧ್ಯ.

ಮಾನವ ಮಹಾತ್ಮರ ಅನುಭವದನುವ ನೆನಯುವದಿಲ್ಲ, ಅಲ್ಲಿಯವರೆಗೆ ಗಮನಾಗಮನ ಬಿಟ್ಟದ್ದಲ್ಲ. ಇದು ಕಾರಣ ಅನುಭಾವದನುವ ನೆನೆಯುತ್ತ ನೆನೆಯುತ್ತ ಗಮನ ಕೆಟ್ಟಿತ್ತು ಎಂದು ಪ್ರಭುದೇವರು ಎಚ್ಚರಿಸಿದ್ದಾರೆ. ಸೃಷ್ಠಿ ಆರಂಭದಿಂದಲೂ ಎಷ್ಟೊ ಯುಗ ಯುಗಗಂಳು ಭವರಾಟಾಳದಲ್ಲಿ ತಿರುಗುತ್ತ ಬಂದರೂ ತನುವಿನ ಕಾಲ ಕತ್ತಲೆಯ ನಷ್ಟವಾಗಿ ಬೆಳಕಿನತ್ತ ಹೋಗಿದೆಯಾ! ಮನದ ಕಾಲ ಕತ್ತಲೆ ನಷ್ಟವಾಗಿ ಅಚಿಂತ್ಯತ್ವ ಕಡೆ ಮುಖವಾಗಿದೆಯಾ? ಇಲ್ಲದ ತನು ಇಲ್ಲವಾಗಿದೆಯಾ? ಇಲ್ಲದ

ಮನ ಇಲ್ಲವಾಗಿದೆಯಾ? ಹೀಗೇಕೆ? ಪೂರ್ವಕಾಲದ ಅನುಭಾವ ಈಗಿನ ಅನುಭಾವ ಬೇರೆಯೆ? ಪೂರ್ವಿಕರು ರಚಿಸಿದ ಗ್ರಂಥ, ಈಗಿನವರು ರಚಿಸಿದ ಗ್ರಂಥ ಬೇರೆಯೆ? ಪೂರ್ವದಲ್ಲಿದ್ದಶೃತಿ ಉಪನಿಷದ್ ಭಗವದ್ಗೀತೆ ಬ್ರಹ್ಮಸೂತ್ರ ಅವಧೂತಗೀತಾ, ಸಿದ್ಧಾಂತ ಶಿಖಾಮಣಿ ಆಗಮ ಆಗ ಇದ್ದವುಗಳೆ ಈಗ ಉಂಟು. ಈಗ ಉಂಟಾದಲ್ಲಿ ತನು ಉಂಟೆಂದರೆ ಪಾಶಬದ್ಧ. ಮನ ಉಂಟೆಂದರೆ ಭವಕ್ಕೆಬೀಜ. ಅರುವ ನುಡಿದು ಕೆಟ್ಟೆನೆಂದರೆ ಅಜ್ಞಾನವೆಂದು ಪ್ರಭುದೇವರ ಮಹದರುವನ್ನು ಅದೆಷ್ಟು ಜಿಜ್ಞಾಸುಗಳು ತಿಳಿದಿಹರು, ತಿಳಿದಿದ್ದರೆ ಶರೀರ ಪ್ರಾರಬ್ಧ ಆರಿಗೂ ಬಿಟ್ಟುದಲ್ಲ, ಮನೆಯೆ ಮನುಷ್ಯಣಾಂ ಕಾರಣ ಬಂಧಮೋಕ್ಷವೆಂದು ಹೇಳಿದ್ದೆ ಹೇಳುವರು. ಇವರಿಗೇಕೆ ಇಲ್ಲದ ತನು ಇಲ್ಲವಾಗಲೊಲ್ಲದು ಇಲ್ಲದ ಮನ ಇಲ್ಲವಾಗಲೊಲ್ಲದು. ಇಲ್ಲದ ತನು ಇಲ್ಲವಾದಲ್ಲಿ ಅದಾರಿಗೆ ಪ್ರಾರಬ್ಧ ಹೇಳುವುದು. ಇಲ್ಲದ ಮನ ಇಲ್ಲವಾಗಲು ಅದಾರಿಗೆ ಬಂಧ ಮೋಕ್ಷವ ಹೇಳುವುದು. ಇದು ಕಾರಣ ಮಹಾತ್ಮರು ಬರೆದಿಟ್ಟ ಅನುಭವ ಹೇಳುವ ಶಬ್ದ ಸಂಭ್ರಮದವರು ಸಾಕಷ್ಟು ಶಿಕ್ಕುತ್ತಾರೆ. ಅನುಭಾವದನುವ ತಿಳಿಸಿಕೊಡುವವರು ಶಿಕ್ಕುವುದು ವಿರಳ.

ಅನುಭಾವ ವೆಂದರೆ ಅರುವಿನ ಅನುಭಾವ. ಅರುವು ಎಂಬುದಕ್ಕೂ ಸಕಲ ಮತದವರ ಒಪ್ಪಿಗೆಯಿದೆ ಅಲ್ಲವೆ! ಸತ್ಯ ಜ್ಞಾನ ಮನಂತಂ ಬ್ರಹ್ಮ ಎಂಬುದಕ್ಕೂ ಎಲ್ಲರ ಒಪ್ಪಿಗೆಯಿದೆ ಅಲ್ಲವೆ? ಅದು ಕೇವಲ ಜ್ಯೋತಿ ಸ್ವಯಂ ಜ್ಯೋತಿ ಪ್ರಕಾಶ, ವರ್ಣಾತೀತ ವಾಙ್ಮನೋತೀತ ಎಂದು ಸಕಲರ ಒಪ್ಪಿಗೆಯಿದೆ ಅಲ್ಲವೆ? ಇವು ಒಂದು ಪಕ್ಷ ಪಂಗಡ ಜಾತಿಗೆ ಸೇರಿದವುಗಳು ಸೀಮಿತವಾದವುಗಳಲ್ಲದುದು ಎಂದು ಹೇಗೆ ಹೇಳುವುದು? ಅರುವು ಇದು ತಿಳಿಸಿಕೊಳ್ಳವದಾಗಿದೆಯೆ? ಅರುವು ಹುಡುಕುವ ಪದಾರ್ಥವೂ ಅಲ್ಲ, ಹುಡುಕಿದರೂ ಲಭ್ಯವಾಗುವುದೂ ಅಲ್ಲ. ಅರುವು ಸಚ್ಚಿದಾನಂದ ಸ್ವಯಂ ಪ್ರಕಾಶ ಸ್ವಯಂ ಜ್ಯೋತಿ ಇದು ವಾಙ್ಮನೋತೀತವೆಂದು ತಿಳಿದು, ಅರಿದರಿದು ನೋಡಿ ತಾನೆಂಬುದು ಇದು ತಮ್ಮ ಹೃದಯಕ್ಕೆ ವೇದ್ಯವಾದ ಸಂಗತಿ .

ಅರುವ ಅರಿಯ ಹೋದವರಿಗೆ ಆ ಘನವು ತಿಳಿಸಿಕೊಳ್ಳುವದಲ್ಲವೆಂದು ವಾಙ್ಮನೋತೀತವೆಂದು ತನಗಿಂತನ್ಯವಲ್ಲವೆಂದು ವಾಣಿಯಿಂದ ಹಲಬುವುದಲ್ಲ ಮನಸ್ಸಿನ ನೆನಹಿಂಗೆ ನಿಲುಕವುದಲ್ಲ ನಿರ್ಣಯಕ್ಕೂ ಮೀರಿದ ಘನದಿರುವೆ ತಾನೆಂದು ತನ್ನ ನೋಡಿದ್ದಾನೆ , ಅವರಿಗೆ ಅನುಭಾವ ದನುವ ನೆನೆಯುತ್ತ ನೆನೆಯುತ್ತ ಅವರ ಮನಸ್ಸಿನ ಸಂಕಲ್ಪ ವಿಕಲ್ಪವೆ ಕೆಟ್ಟಿದೆ. ಅಹಂಕಾರದ ಕರ್ತೃತ್ವವು ಕೆಟ್ಟಿದೆ, ತನುವು ನಿರವಯ ತನುವಾಗಿದೆ, ಮನವು ಅವಿಚಾರ ವಿಚಾರ ಸೇರದಂತಾಗಿದೆ.

ಲಿಂಗ ಮುಖದಲಾದ ಸೂಚನೆಯ ಸುಖವ ಕಂಡು, ಗಮನಗೆಟ್ಟಿತ್ತು : ಲಿಂಗ ಮುಖ ಪೂರ್ಣ ಮುಖ, ಅಖಂಡ ಮುಖ, ಅಚಲ ಮುಖ, ನಿಷ್ಕಳಂಕ ಮುಖ, ಅಚಿಂತ್ಯ ಮುಖ ಮುನ್ನ ಮುನ್ನಲಾದ ಶಬ್ದಮುಗ್ಧವಾಗಿಹ ಘನಮುಖ. ಅರುವಿಂಗರುವಾಗಿಹ ಮುಖ, ತನ್ನಮುಖ ನಿಃಶಬ್ದ ಬ್ರಹ್ಮವೆ ತಾನಾದ ಮುಖ. ಆರು ಅರುವ ಅರಿಯ ಹೋಗಿಹರು, ಅವರು ಅರಿಯದರುವುಳ್ಳ ನಿಲುವುಳ್ಳವರು. ಅವರದು ಲಿಂಗಮುಖ ಸುಖವ ಕಂಡ ಸುಖರೂಪು ಸುಖವು ಸುಖವೆ! ಲಿಂಗವು ಸುಖವೆ ತಾನು ಸುಖವೆ ಲಿಂಗ ಮುಖ ಸುಖದಲಾದ ಮುಖ. ಅದು ತನ್ನ ಮುಖವು ವರ್ಣಾತೀತ, ವೇದಾತೀತ, ಭಾವಾತೀತ ವಾದ್ದರಿಂದ ನಿಃಶಬ್ದ ಬ್ರಹ್ಮವಾಗಿಪ್ಪ ಸಂಜ್ಞೆಯೆ ಲಿಂಗ ಮುಖ ಬದಲಾದ ಸೂಚನೆ. ಇದು ಸುಖರೂಪ ಸುಖದ ನಿಲ್ದಾಣ, ಈ ಪರಮಸುಖದ ನೆಲೆಯ ಕಂಡು ಗಮನಗೆಟ್ಟಿತ್ತು. ಸುಖದ ಸಲುವಾಗಿ ಸಂಚಾರವಿಲ್ಲ ಸುಖ ರೂಪ ತಾನೆಂಬುದು ಕರಿಗೊಂಡಿರುವದರಿಂದ ಸಂಛಾರವಿಲ್ಲ , ತನುವಿನ ಸಂಚಾರವಿಲ್ಲ ಮನದ ಸಂಚಾರವಿಲ್ಲ . ಇಲ್ಲದ ತನು ಇಲ್ಲವಾದುದು ಇಲ್ಲದ ಮನ ಇಲ್ಲವಾದು.

ಇಲ್ಲಾದುದಿಲ್ಲಾದುದೆಂದಿಪ್ಪುದು ಇಲ್ಲಾದುದಿಲ್ಲಾದುದೆಂತಿಪ್ಪದು. ಇದು ಸಿದ್ಧವಾಗಿ ಅನುವಾಯಿತ್ತು. ಅಲ್ಲಿಯೆ ತಲ್ಲೀಯವಾಯಿತ್ತು ಗುಹೇಶ್ವರ. ಸುಖವದು ಅಲ್ಲಿಯೇ ಸಿದ್ದವಾಯಿತ್ತು. ಆ ಸುಖದಲ್ಲಿಯೆ ಮಗ್ನವಾಯಿತ್ತು. ತನ್ಮಯವಾಯಿತ್ತು ಸುಖದಲ್ಲಿಯೆ ಲೀಯವಾಯಿತ್ತು. ಗುಹೇಶ್ವರನೆಂಬ ಲಿಂಗೈಕ್ಯಂಗೆ ತಾನಾರೆಂಬ ತನ್ನಸ್ವಮಹಿಮೆ ಅಲ್ಲಿಯೆ ಸಿದ್ಧವಾಯಿತ್ತು. ಸುಖದ ಸುಖವದು ಅಲ್ಲಿಯೆ ಸಿದ್ಧವಾಯಿತ್ತು. ಆ ಸುಖದಲ್ಲಿಯೆ ಮಗ್ನವಾಯಿತ್ತು ತನ್ಮಯವಾಯಿತ್ತು. ಸುಖದಲ್ಲಿ ಲೀಯವಾಯಿತ್ತು, ಗುಹೇಶ್ವರನೆಂಬ ಲಿಂಗೈಕ್ಯ ಸುಖದಲ್ಲಿ ಮಗ್ನವಾದವರ ನಿಲವು. ಗಾಢ ನಿದ್ರೆಯ ಸುಖದಲ್ಲಿ ಆಗ ಅದಾರು ಹೀಗೆ ಎಂದು ಹೇಳಬಲ್ಲರು. ಉಪಾಧಿಗತವಾದ ಅಜ್ಞಾನ ನಿದ್ರೆಯಲ್ಲಿದ್ದ ಸುಖ ಹೇಳಲು ಬಾರದಿರುವಾಗ ಕೇವಲ ಸುಖದಲ್ಲಿ ಲೀಯವಾದವಂಗೆ ಸುಖವು ಸುಖವೆ ಸವಿಯುವಂಗೆ ಹೇಳಲೆಂತು ಬಾರದು. ಅದಕ್ಕಾಗಿ ಶಬ್ದಮುಗ್ಧ ನಿಲವು ಎಂದು ಹೇಳಿದ್ದಾರೆ.

120

ಇದ್ದು ಬದ್ಧನಲ್ಲ, ಸುಳಿದು ಸೂತಕಿಯಲ್ಲ ಆವಂಗ ಸಂಗವಿಲ್ಲದ ನಿಜೈಕ್ಯನು
ಬೇಕು ಬೇಡೆನ್ನದೆ ಅಳಿದುಳಿದು ಕರ್ಪೂರದ ಗಿರಿಯ ಸುರಿಯ ಕಂಡಂತೆ
ಕೂಡಲಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು.

ತಾತ್ಪರ್ಯ : ಇದ್ದು ಬದ್ಧನಲ್ಲ: ಇದ್ದವನಾರು ಇದ್ದುದಾವುದು? ಸ್ಥೂಲದೇಹ, ಸೂಕ್ಷ್ಮದೇಹ, ಕಾರಣ ದೇಹ, ಮಹಾಕಾರಣ ದೇಹ ಇವುಗಳು ಇದ್ದುದೆನ ಬೇಕೆ? ಎನಲಾಗದು. ಇವುಗಳು ತೋರಿ ಇಲ್ಲವಾಗುವ ದೇಹ ಭ್ರಾಂತಿ ಕಾಲದಲ್ಲಿ ತೋರುವ ದೇಹ. ಇದು ಕಾರಣ ಇವುಗಳು ಇದ್ದುದೆನಲು ಬರದು, ಹಾಗಾದರೆ ಇದ್ದುದಾವುದು? ಸೃಷ್ಠಿಗಿಂತ ಪೂರ್ವದಲ್ಲಿದ್ದುದು ಅಂದು ಇದ್ದುದು ಇಂದು ಇದ್ದುದು, ಎಂದೆಂದು ಇದ್ದುದು, ನಿರಂತರವಾಗಿರುವ ಮಂಗಲಮಯ ಪರಮಸತ್ಯ. ಇದ್ದುದು ಈ ಪರತತ್ವ ಇದ್ದುದು ಇದು ಬದ್ಧ ಹೇಗಾಗುವುದು.

ಇದ್ದವನಾರು? ಇದ್ದವ ತಾನೆ! ನಿರಂತರವಾಗಿರುವ ಮಂಗಳಮಯ ಪರಮಸತ್ಯವೆ ತನ್ನಿರುವೆಂದರಿದ ಮಹಾಂತನೆ ಇದ್ದು ಬದ್ಧನಲ್ಲ. ಬದ್ಧನಾಗದ ಮಹಾಂತಂಗೆ ಏನೆನ್ನ ಬೇಕು? ಮುಕ್ತನೆನ ಬೇಕೆ? ಎನ್ನಲಾಗದು, ಬದ್ಧನಾದವನು ಮುಕ್ತನಾಗುವುದು ಸಹಜ. ಬದ್ಧನಲ್ಲವೆಂದಲ್ಲಿ ಮುಕ್ತನು ಅಲ್ಲ ಬಂಧನಕ್ಕೊಳಪಡದವನು ಎಂದಲ್ಲಿ ಮುಕ್ತಿಗೊಳಪಟ್ಟವನು ಎಂದು ಹೇಗೆ ಹೇಳುವುದು? ಅಜ್ಞಾನಿಯಾದವನು ಜ್ಞಾನಿಯು ಆಗುವನು. ಸಂಗಿಯಾದವನು ನಿಸ್ಸಂಗಿಯು ಆಗುವನು, ಭೋಗಿಯಾದವನು ತ್ಯಾಗಿಯೂ ಆಗುವನು, ಕೂಡಿದವನು ಅಗಲುವನು, ಅಗಲದವನು ಕೂಡುವನು.

ಗಗನಕ್ಕೆ ಕೂಡುವುದು ಅಗಲುವುದು ಇದೆಯೆ? ಸಂಗ ನಿಸ್ಸಂಗವಾಗುವುದು ಇದೆಯೆ? ಅದು ಘಟದೊಳಿರಲಿ, ಮಠದೊಳಿರಲಿ ಅದಕ್ಕೆ ಸಂಗವುಂಟೆ? ಸಬಂಧವುಂಟೆ? ಸಂಗವೂ ಇಲ್ಲ ಸಂಬಂಧವೂ ಇಲ್ಲವೆಂದಲ್ಲಿ ಅದು ನಿರಾಲಂಬವು. ಅದಕ್ಕದು ಸಹಜವಾಗಿರುವಲ್ಲಿ ಅದು ಕ್ರಿಯೆ ಕ್ರಿಯಾರಹಿತವೆನ್ನುವದು ಭ್ರಮಾತ್ಮಕ ದೃಷ್ಠಿ ಹೇಗೋ ಹಾಗೆ ಚಿದಾಕಾಶನಾದ ತನಗೆ ಬಂಧವಾವುದು ಮೋಕ್ಷವಾವುದು ? ಹಿಡಿದುದಿಲ್ಲ ಬಿಟ್ಟುದಿಲ್ಲ, ಬಂಧವೂ ಇಲ್ಲ ಮೋಕ್ಷವು ಇಲ್ಲ ಬಂಧ ಮೋಕ್ಷವಿಲ್ಲದವನಾದುದರಿಂದ ಎಂತಿರ್ದಂತೆ ಸಹಜ ಅಜ ಅಚಿಂತ್ಯನಾದುದರಿಂದ ಇದ್ದು ಬದ್ಧನಲ್ಲವೆಂದು ಹೇಳಿಹರು.

ಸುಳಿದು ಸೂತಕಿಯಲ್ಲ ಅರಿತ ಶರಣ ಸೂತಕಿಯಲ್ಲ. ಶರಣ ಪ್ರಣವದರ್ಥತಿಳಿದ

ಭರ್ಗೋದೇವ ತಾನೆ ನಾಹಂ ಅಲ್ಲ ಕೋಹಂ ಅಲ್ಲ ಸೋಹಂ ಎನುವವನಲ್ಲ ಚಿದಹಂ ತಾನಲ್ಲ ದಾಸೋಹಂ ಭಾವಕ್ಕೂ ಮೀರಿದವನು. ಪರತತ್ವವರಿತ ನಿಜಸಂಯುಕ್ತ. ನಾ ನೀನೆನ್ನದಿಹ ಅನುಪಮನಾದುದರಿಂದ ಸುಳಿದು ಸೂತಕಿಯಲ್ಲ, ಸುಳಿದು ಸೂತಕಿಯಾಗದ ಘನವಂತನ ವರ್ಣಿಸ ಹೋದರೆ ವಾಙ್ಮನೋತೀತ ಶೃತಿಗಗೋಚರ ಅರಸಿ ಕಾಣಬಾರದ ಘನ ತೇಜ. ಈ ಘನವಂತನ ಸುಳುಹು ಅದಾರು ವರ್ಣಿಸಬೇಕು.

ನಿರುಪಾಧಿಯು, ಉಪಾಧಿಯುಳ್ಳದ್ದಾಗಿ ಸುಳಿದ ಸುಳುಹು ಅದಾರು ವರ್ಣಿಸುವುದು? ನಿಸ್ಸಂಗವೂ ಸಂಗವುಳ್ಳದ್ದಾಗಿ ಸುಳಿದ ಸುಳುಹು. ಅದಾರು ವರ್ಣಿಸುವುದು? ಏನೊಂದಾಗದ ಘನ ಆದಂತಾಗಿ ಸುಳಿದ ಸುಳುಹು ಅದನೆಂತು ವರ್ಣಿಸುವದು. ಅರಿದರಿಹಿಸಿಕೊಂಬುದಕ್ಕೂ ಮೀರಿದ ಘನವೆ ತನ್ನಿರುವಾಗಿದ್ದರೂ, ಅರಿದರುಹಿಸಿಕೊಳ್ಳುವದಾಗಿ ಸುಳಿದ ಸುಳುಹು ಅದಾರು ಬಲ್ಲರು.

ನಿಸ್ಸೀಮವು ಸೀಮಿತವಾಗದೆ ಇದ್ದ ಸೀಮೆಯುಳ್ಳವರನ್ನು ನಿಸ್ಸೀಮದ ಸುಳುಹು ಸೂಚಿಸಿ ತಾನು ಆ ಸುಳುಹಿನ ಸೂತಕಿಯಾಗದಿರುವದು ಅದನಾರಯ್ಯ ಹೀಗೆ ಎಂದು ವರ್ಣಿಸುವುದು? ನುಡಿ ನಡೆಗೆ ಮೀರಿದ ಘನ. ನಡೆ ನುಡಿವವರಿಗೆ ನಡೆಯಾಗದೆ ಸುಳಿವುದರಿಂದ ಈ ಮಹಾಂತನ ಸುಳುಹು ವಿಪರೀತ ನೋಡಾ. ಇದು ಕಾರಣ ತನುಗುಣವಿರಹಿತನಾದುದರಿಂದ ಸೂತಕಿಯಲ್ಲ. ತನುಗುಣ ಪ್ರವೃತ್ತಿರೂಪ ಪ್ರಪಂಚದ್ದಾಗಿರಲಿ ನಿವೃತ್ತಿ ರೂಪ ಪರಮಾರ್ಥದ್ದಾಗಿರಲಿ ಅದರ ಕಾರ್ಯ ಹೊದ್ದದ ನಿರ್ಲೇಪ.

ಸಕಲನಾಗಿ ಸಂಸಾರಿಯಲ್ಲ ನಿಃಕಲನಾಗಿ ವೈರಾಗಿಯಲ್ಲ, ಚಿದಾಕಾಶ ಸ್ವರೂಪನು ಸಕಲವಾದವನಲ್ಲ ನಿಃಕಲವಾದವನಲ್ಲ ದೃಶ್ಯರೂಪವಾದವನಲ್ಲ ದೃಕ್ ಎಂಬುದು ಆದವನಲ್ಲ ಅಖಂಡ ಘನ ಪರಿಪೂರ್ಣನು . ಅಲ್ಲಿ ಒಂದಾಗಿ ಇನ್ನೊಂದು ಆದುದಿಲ್ಲ ಏನೊಂದಾಗದ ಘನನಾದ್ದರಿಂದ ಸಂಗಿಯಾದಂತೆ ಕಂಡರೂ ನಿಸ್ಸಂಗನು ನಿರ್ಲೇಪನಾದ್ದರಿಂದ ನಿರವಧಿ ತಾನೆ.

ನಿರವಧಿಯೆಂಬುದು ಇದ್ದಂತಿರುವ ಅನುಪಮ . ಅಚಿಂತ್ಯ ಘನ ಧ್ಯಾನಾತೀತ ತಾನೆ ಆಯಿತ್ತಾಗಿ ನಿರಂಜನ ನಿಜ ಚಿದ್ರೂಪ ತಾನೆ ನೋಡಾ. ಇದು ಏನೊಂದಾಗದ ಘನವಾದ್ದರಿಂದ ಸುಳಿದು ಸೂತಕಿಯಲ್ಲ ಆವಂಗ ಸಂಗವಿಲ್ಲದ ನಿಜೈಕ್ಯನು. ನಿಜೈಕ್ಯ ನಿಜವರಿತು ನಿಜವೆನ್ನದ ಮಹಾಮಹಿಮ ತಾನೆ, ದಿಟವರಿತವಂಗೆ ಸಟೆಯ ಸಂಗ ಅದೆಂತು ಸಾಧ್ಯ? ದಿಟವೆಂಬುದು ತೋರಬಾರದ ಘನ. ಅರಿಯ ಹೋಗುವುಡೆ ತಾನೆ ದಿಟ. ತಾನೆ ತೋರಬಾರದ ಘನ .

ಸಟೆಯೆಂಬುದು ಅವಿಚಾರ ಕಾಲದಲ್ಲಿ ಕಾಣಿಸಿಕೊಳ್ಳುವ ಮಾಯಿಕ ಮತ್ತು ನಾಮರೂಪ ತಾನಾರೆಂದರಿಯದವರಿಗೆ ನಾನಾರೂಪವಾಗಿ ತೋರುವ ಮಾಯೆ. ಸಟೆ, ಇದು ಸ್ಥೂಲಾಂಗ, ಸೂಕ್ಷ್ಮಾಂಗ, ಕಾರಣಾಂಗ, ಮಹಾಕಾರಣಾಂಗವಾಗಿ ಇದರ ಅಭಿಮಾನಿಯಾಗಿ ತೋರುವ ಚಿದಾಭಾಸವು ಸಟೆ. ದಿಟವ ನೋಡ ಹೋದವರಿಗೆ ಆವಂಗ ಸಂಗವಿಲ್ಲದ ತಮ್ಮ ಸ್ವರೂಪವನ್ನೆ ಕಾಣುವುದರಿಂದ ನಿಜೈಕ್ಯನು. ಅವರದು ನೋಡದ ನೋಟ ಕೂಡದಗಲದ ಘನವು. ಮರೆಯಲಿಲ್ಲದ ಮರಹು ಮರೆತು ಹೋದುದರಿಂದ ನಿಜೈಕ್ಯನು ಎಂದು ಹೇಳಿದೆ.

ಬೇಕು ಬೇಡೆನ್ನದ ಅಳಿದುಳಿದು ಕರ್ಪುರದ ಗಿರಿಯ ನುರಿಯು ಕಂಡಂತೆ. ಕೂಡಲಸಂಗಯ್ಯನಲ್ಲಿ ಲಿಂಗೈಕ್ಯವು. ಈ ಲಿಂಗೈಕ್ಯ ನಿಲವು ಅದಾರಿಗೆ? ಬೇಕೆಂಬುವ ಕಾಮುಕರಿಗೂ ಅಸಾಧ್ಯ , ಬೇಡೆಂಬ ವಿರತಿ ಮತಿಯುಳ್ಳವರಿಗೂ ಅಸಾಧ್ಯ. ಮರುವರುವಿಗೆ ಮೀರಿದ ಘನತತ್ವದ ಪರಮ ಪ್ರಿಯವಂತರಿಗಿದು ಸಾಧ್ಯವು. ಅರುವ ಅರಿಯ ಹೋದವರಿಗೆ ಸಾಧ್ಯವು. ಅವರೆ ಅಳಿದುಳಿದು , ಕರ್ಪುರದ ಗಿರಿಯ

ಉರಿಯ ಕಂಡಂತೆ, ಲಿಂಗೈಕ್ಯರು ಅಳಿದುಳಿದುದೆಂದಲ್ಲಿ ತನಗಿದುರಾಗಿ ತೋರುವದೆಲ್ಲವು ಅಳಿದುದು ತಾನೆ ಉಳಿದುದು ತನಗಿಂತನ್ಯವಾದುದೆಲ್ಲವು ಕರ್ಪುರದ ಗಿರಿಯು , ತಾನೆ ಉರಿಯು . ನಿಜೈಕ್ಯನ ದೃಷ್ಠಿಯಲ್ಲಿ ತನ್ನಿಂದ ತಿಳಿಸಿಕೊಳ್ಳುವದೆಲ್ಲವು ಕರ್ಪುರದ ಗಿರಿಯೆ. ತಾನು ಸ್ವಪ್ರಭೆಯ ಉರಿಯು . ತನ್ನಿಂದ ತಿಳಿಸಿಕೊಳ್ಳುವ ಪ್ರವೃತ್ತಿ ರೂಪವಿರಲಿ ನಿವೃತ್ತ ರೂಪವಿರಲಿ ಅವು ಕರ್ಪುರದ ಗಿರಿಯು . ತನ್ನ ಸ್ವಪ್ರಭೆ ರೂಪಿ ಉರಿಯು ತಾಕಿ ಅದು ಕೂಡಾ ಲಿಂಗದಲ್ಲಿ ಲೀಯವಾಗಿ, ಅಖಂಡ ಜ್ಯೋತಿಯಾದುದು ಎಂದು ಹೇಳಿದ್ದಾರೆ. ಲಿಂಗೈಕ್ಯನಿಗೆ ಪ್ರಪಂಚ ಪರಮಾರ್ಥವೆಂಬ ವಿಭಾಗ ದೃಷ್ಠಿ ಇಲ್ಲ. ಅಂಗವೆಂಬುದು ಲಿಂಗದರುವು ಪರಮಾರ್ಥವು ಲಿಂಗದರುವು ಆದುದರಿಂದ ಇದು ಕರ್ಪುರದ ಗಿರಿ ತಾನೆ ಸ್ವಪ್ರತಿಭೆಯಾದುದರಿಂದ , ತನ್ನ ಉರಿ ತನ್ನ ಅಂಗರೂಪಿ ಕುರ್ಪುರ ಗಿರಿಗೆ ತಾಕಿ ತನ್ನ ರೂಪವಾದುದು ಎಂದು ಹೇಳಿಹರು .

121

ಅಂತರಂಗ ಬಹಿರಂಗ ಶುದ್ಧವಿಲ್ಲದೆ ನುಡಿವರು ಸಂತೆಯ ಸೂಳೆಯರಂತೆ
ಅಂತರಂಗ ಬಹಿರಂಗವೆಂಬುದಿಲ್ಲ ನಮ್ಮ ಶಿವಶರಣಂಗೆ . ಅಂತರಂಗವೆಲ್ಲ
ಅರುಹಾಯಿತ್ತು ಬಹಿರಂಗವೆಲ್ಲ ಲಿಂಗವಾಯಿತ್ತು .
ಆ ಲಿಂಗದಲ್ಲಿ ನುಡಿದು, ಲಿಂಗದಲ್ಲಿ ನಡೆದು,
ಲಿಂಗದಲ್ಲಿ ಮುಟ್ಟಿ, ಲಿಂಗದಲ್ಲಿ ವಾಸಿಸಿ, ಲಿಂಗದಲ್ಲಿ ಕೇಳಿ
ಲಿಂಗವಾಗಿ ನೋಡಿ ಸರ್ವಾಂಗ ಲಿಂಗವಾಗಿ ಆ ಲಿಂಗವ
ನೋಡುವ ಕಂಗಳಲ್ಲಿ ಐಕ್ಯ ಕಂಡಯ್ಯಾ ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣ.

ತಾತ್ಪರ್ಯ : ಅಂತರಂಗ ಬಹಿರಂಗ ಶುದ್ಧವಿಲ್ಲದೆ ನುಡಿವರು ಸಂತೆಯ ಸೂಳೆಯರಂತೆ ಅಂತರಂಗ ಬಹಿರಂಗವೆಂಬುದಿಲ್ಲ ನಮ್ಮ ಶಿವ ಶರಣಂಗೆ: ಶಿವ ಶರಣರ ನಿಲುವೆತ್ತ, ಹೃದಯ ಶುದ್ಧವಿಲ್ಲದೆ ನುಡಿವ ಡಾಂಭಿಕರ ನಿಲುವೆತ್ತ, ಇಲ್ಲದ್ದು ಕಲ್ಪಿಸುವದು ಡಾಂಭಿಕರ ಹೃದಯ, ಶರಣರಿಗಾವುದು ಇಲ್ಲದ್ದಾಗಿದೆಯೊ , ಡಾಂಭಿಕರಿಗೆ ಇದ್ದುದಾಗಿದೆಯಲ್ಲ !ಇದೆಂಥ ಜ್ಞಾನ, ಇದೆಂಥ ಕಲ್ಮಷ ಹೃದಯ, ಹೃದಯ ಶುದ್ಧವಿಲ್ಲದೆ ನುಡಿವವರೆಲ್ಲ ಸಂತೆಯ ಸೂಳೆಯರು ಎಂದು ಜರಿದಿಹರು.

ಸೂಳೆಯರು ಪುರುಷ ನೋರ್ವನನ್ನು ಪರಪುರುಷನೆಂತಲು ಸ್ವ ಪುರುಷನೆಂತಲೂ ಹೇಗೆ ಕಲ್ಪಸಿ ತಮ್ಮ ಅಂತರಂಗದೊಳ್ ನೆನೆಯುವುದು ಬೇರೆ , ಬಾಹ್ಯದಲ್ಲಿ ತೋರಿಸುವದೆ ಬೇರೆ ಇದು ಶುದ್ಧ ಭಾವ ಹೇಗಾಗದೋ ಹಾಗೆ ಶರಣಸತಿ ಲಿಂಗಪತಿಯಾದವಳ ಹೃದಯ ಅರುವಿನ ಹೃದಯ . ಅರುವು ಅರುವೆ ಆದ ಹೃದಯ ಅಲ್ಲಿ ತಿಳಿಸಿಕೊಳ್ಳುವ ಅನಾತ್ಮವಿಲ್ಲ , ಅರಿಯುವ ದೃಕ್ ಎಂಬುದಿಲ್ಲ. ಅಖಂಡಿತ ಘನ ಪೂರ್ಣವೆ, ತನ್ನಿರುವೆಂದರಿದ ಹೃದಯ. ಶರಣ ಹೃದಯ, ಅರು ಹೃದಯ . ಅರುವೆ ಪ್ರಜ್ವಲಿಸುವ ಹೃದಯ. ಅಲ್ಲಿ ಅಂತರಂಗವೆಂಬುದಿಲ್ಲ ಬಹಿರಂಗವೆಂಬುದಿಲ್ಲ ನಿಸ್ಸೀಮವು ಸೀಮಿತವಾಗಲರಿಯದು. ಇದು ಕಾರಣ ಅಂತರಂಗ ಬಹಿರಂಗವೆಂಬುದಿಲ್ಲ ನಮ್ಮ ಶಿವ ಶರಣರಿಗೆ ಎಂದು ಹೇಳಿದ್ದಾರೆ.

ಅಂತರಂಗವೆಲ್ಲ ಅರುಹಾಯಿತ್ತು , ಬಹಿರಂಗವೆಲ್ಲ ಲಿಂಗವಾಯಿತ್ತು : ಇದೆಂತಹ ಅಂತರಂಗ! ಇದೆಂಥ ಬಹಿರಂಗ! ಇದನಾರಯ್ಯ ಹೀಗೆ ಎಂದು ವರ್ಣಿಸುವುದು. ವಾಙ್ಮನೋತೀತವಾಗಿಹ ಅಂತರಂಗ, ಅಕಲ್ಪಿತ ಘನವೆ ಪ್ರಜ್ವಲಿಸುತ್ತಿಹ ಅಂತರಂಗ ಅದನೆಂತು ಗುಣಿಸುವುದು. ಚಿಂತೆ ಕೆಟ್ಟು ನಿಶ್ಚಿಂತವಾಗಿಹ ಅಚಿಂತ್ಯತ್ವವ ಬೆಳಗುಳ್ಳ ಬೆಳಗಿನ ಅಂತರಂಗ ಅದನೆಂತು ವರ್ಣಿಸುವುದು.

ಶರಣನ ಅಂತರಂಗ ಅರುವಾಯಿತ್ತು , ಇಲ್ಲದ ಮನ ಬುದ್ಧಿ ಚಿತ್ ಅಹಂಕಾರ ಇಲ್ಲವಾಗಿ ಇದ್ದ ನಿರ್ವಿಕಲ್ಪದ ನಿಜದರಿವುಳ್ಳ ಅರುವು ಆಯಿತ್ತೆ! ಇದೆಂಥ ಅಂತರಂಗ ಮನವು , ತನ್ನ ಪೂರ್ವ ಆಶ್ರಯ ಮಾಡಿಕೊಂಡ ಸಂಕಲ್ಪ ವಿಕಲ್ಪವ ಮರೆತು ಅಕಲ್ಪಿತ ಘನವಾಯಿತೆ! ಇದೆಂತ ಸೋಜಿಗ ಬುದ್ಧಿಯು ಮರವರುವೆಂಬ ದ್ವಿವಿಧ ಮುಖದಿಂದ ದೂರಾಗಿ ಕೇವಲ ಘನದಿರುವುಳ್ಳದ್ದಾಯಿತೆ? ಇದೆಂಥ ನಿಲವು. ಚಿತ್ತ ತನ್ನ ಚಿಂತನವ ಬಿಟ್ಟು ನಿಶ್ಚಿಂತವಾಯಿತ್ತೆ! ಅಹಂಕಾರ ನಾನೀನೆಂಬುವದೆ ನಿರಸನವಾಗಿ ತೆರಹಿಲ್ಲದ ಘನದರುವುಳ್ಳ ಇರುವೆ ತನ್ನಿರುವಾಗಿ ಶಬ್ದಮುಗ್ಧವಾಯಿತ್ತೆ ಸೋಜಿಗ.

ಶರಣನ ಅಂತರಂಗ ಅರುವು ಚಿತ್‌ಪ್ರಕಾಶ ಅಲುಪ್ತ ಪ್ರಕಾಶದ ಮುಂದೆ ಕತ್ತಲು ಇರಲುಂಟೆ! ಅಕಲ್ಪಿತ ಘನವೆ ಪ್ರಜ್ವಲಿಸುವಲ್ಲಿ ಕಲಿತವು ಅಲ್ಲಿ ಸುಳಿಯಬಹುದೆ? ಸುಳಿಯದ್ದರಿಂದ ಶರಣನ ಅಂತರಂಗ ಅರುವಾಯಿತ್ತು ಎಂದು ಹೇಳಿದ್ದಾರೆ.

ಬಹಿರಂಗವೆಲ್ಲ ಲಿಂಗವಾಯಿತ್ತು : ಶರಣನ ಬಹಿರಂಗವೆಂಬುದು ಲಿಂಗದಲ್ಲಿ ನುಡಿ ಲಿಂಗದಲ್ಲಿ ನಡೆ ಲಿಂಗದಲ್ಲಿ ನಿವಾಸವಾಗಿ ಲಿಂಗದಲ್ಲಿ ಕೇಳಿ ಲಿಂಗವಾಗಿ ನೋಡಿ ಸರ್ವಾಂಗ ಲಿಂಗವಾಗಿ ಆ ಲಿಂಗ ನೋಡುವ ಕಂಗಳಲ್ಲಿ ಐಕ್ಯ ಕಂಡಯ್ಯ .

ಶರಣನ ಬಹಿರಂಗವದು ಲಿಂಗದಲ್ಲಿ ನುಡಿ, ಲಿಂಗದಲ್ಲಿ ನಡೆ ಲಿಂಗವರಿತು ಲಿಂಗವಾಗಿದ್ದ ಘನವಂತನ ಅದನೆಂತು ವರ್ಣಿಸುವದು? ಲಿಂಗವು ಶಬ್ದಮುಗ್ಧ , ಲಿಂಗವರಿಯ ಹೋಗಿ ತಾನು ಲಿಂಗವಾಗಿ ಶಬ್ದಮುಗ್ಧ. ಇದು ಲಿಂಗದಲ್ಲಿ ನುಡಿ, ಲಿಂಗದಲ್ಲಿ ನಡೆ ನಿಃಶಬ್ದ ಬ್ರಹ್ಮವಾಗಿದ್ದ ನಡೆ , ಶೃತಿಗೆ ಮಿಕ್ಕಿ ಮೀರಿರುವ ನಡೆ , ಹಲುಬದ ನಡೆ ಚಿಂತಿಸದ ನಡೆ ಭಾವಿಸದ ನಡೆ ಇದ್ದ ನಡೆ ನೆನೆಯದಿದ್ದುದೆ ನೆನಹು ನಿರ್ಣಯಸಿದ್ದುದೆ ನಿರ್ಣಯ . ಮನ ವಾಣಿ , ಸೋತು ಹೋದುದೆ ನಡೆ . ಲಿಂಗ ತಾನಾಗಿ ಪ್ರಜ್ವಲಿಸುವದೆ ನಡೆ . ನುಡಿಗೆಡೆಗೊಡದ ಘನನಾಗಿಹುದೆ ಲಿಂಗದಲ್ಲಿ ನುಡಿ ಶಬ್ದಮೀಸಲಾಗಿದ್ದುದು ಲಿಂಗದಲ್ಲಿ ನುಡಿ ಲಿಂಗದಲ್ಲಿ ನಡೆ ನುಡಿಗೆಡೆಗೊಡದ ಘನನಾಗಿಹುದೆ ಲಿಂಗದಲ್ಲಿ ನುಡಿ. ಶಬ್ದಮೀಸಲಾಗಿದ್ದುದು ಲಿಂಗದಲ್ಲಿ ನುಡಿ , ಲಿಂಗದಲ್ಲಿ ವಾಸ , ಶರಣನ ವಾಸ ಲಿಂಗದಲ್ಲಿ ವಾಸ ಅರಿಯದರುವಿನ ವಾಸ, ಏನೊಂದರಿಯದೆ ಅರಿದರುವಾಗಿದ್ದುದೆ ಲಿಂಗದಲ್ಲಿ ವಾಸ .

ಲಿಂಗದಲ್ಲಿ ಮುಟ್ಟಿ , ತಾನು ತನ್ನಲ್ಲಿ ತನ್ನ ಮುಟ್ಟಿದುದು ಲಿಂಗದಲ್ಲಿ ಮುಟ್ಟಿ . ಇದು ಮುಟ್ಟಬಾರದುದು ಮುಟ್ಟಿದುದು , ಚಿಂತನ ಕೆಟ್ಟು ನಿಶ್ಚಿಂತನಾಗಿ ತಾನು ಅಚಿಂತ್ಯ ಘನನಾದುದೆ ಲಿಂಗದಲ್ಲಿ ಮುಟ್ಟಿ . ಲಿಂಗದಲ್ಲಿ ಕೇಳಿ ಲಿಂಗಾವಗಿ ನೋಡಿ ಸರ್ವಾಂಗ ಲಿಂಗವಾಗಿ ಆ ಲಿಂಗವ ನೋಡುವ ಕಂಗಳಲ್ಲಿ ಐಕ್ಯಕಂಡಯ್ಯ . ಲಿಂಗದಲ್ಲಿ ಕೇಳಿ ಲಿಂಗ ಲಿಂಗವೆನ್ನದೆ ಲಿಂಗವರಿತು ಲಿಂಗದಲ್ಲಿ ಲೀಯವಾದುದೆ ಲಿಂಗದಲ್ಲಿ ಕೇಳಿದುದು.

ಶರಣಂಗೆ ಬಹಿರಂಗವೆಲ್ಲ ಲಿಂಗವಾಯಿತ್ತು : ಶರಣನದು ನಿಸ್ಸೀಮ ದೃಷ್ಠಿಯಾದುದರಿಂದ ಲಿಂಗ ವ್ಯಕ್ತವು ಅವ್ಯಕ್ತವು ಆದುದರಿಂದ ಆಚಾರ ಅನಾಚಾರವಾಯಿತ್ತು , ಸೀಮೆ ನಿಸ್ಸೀಮೆಯಾಯಿತ್ತು . ಪ್ರಾಣ ಸಂಚಯ ತಪ್ಪಿ ಲಿಂಗ ಸಂಚಯವಾಯಿತ್ತು. '' ಎಲ್ಲಿ ರೂಪಲ್ಲಿಯೆ ಲಿಂಗ ಸ್ವಾಯತವಾಯಿತ್ತು , ಎಲ್ಲಿ ಶಬ್ದವಲ್ಲಿಯೆ ಲಿಂಗ ಸ್ವಾಯತವಾಯಿತ್ತು . ಎಲ್ಲಿ ಸೋಂಕಲ್ಲಿಯೆ ಲಿಂಗಸ್ವಾಯತವಾಯಿತ್ತು ಎಲ್ಲಿ ರುಚಿ ಅಲ್ಲಿಯೆ ಲಿಂಗ ಸ್ವಾಯತವಾಯಿತ್ತು. ಎಲ್ಲಿ ಗಂಧವಲ್ಲಿಯೆ ಲಿಂಗಸ್ವಾಯತವಾಯಿತ್ತು ಕರುಣಾರಸಾಬ್ಧಿ ಕಡೆ ಗೋಡೆವರಿಯತ್ತಯ್ಯ ಕೂಡಲಸಂಗಮದೇವಾ ಎನ್ನಮೇಲೆ '' .

ಶರಣನ ಬಹಿರಂಗವದು ಲಿಂಗದಲ್ಲಿ ನುಡಿ ಲಿಂಗದಲ್ಲಿ ನಡೆ ಲಿಂಗದಲ್ಲಿ ನಿವಾಸಿ ಲಿಂಗದಲ್ಲಿ ಕೇಳಿದುದು ಅದೆಂತೆಂದೊಡೆ ಶರಣಂಗೆ ಬಹಿರಂಗ ರೂಪವದು ಲಿಂಗವಾಗಿ ನೋಡಿದುದು. ಬಹಿರಂಗ

ಶಬ್ದವದು ಲಿಂಗದ ಶಬ್ದದಲ್ಲಿ ಕೇಳಿದುದು , ಬಹಿರಂಗ ಸೋಂಕು ಲಿಂಗ ಸೋಂಕು , ಬಹಿರಂಗ ರುಚಿ ಲಿಂಗರುಚಿ , ಚಿದ್ರಸ . ಬಹಿರಂಗ ಗಂಧ ಸುಜ್ಞಾನದಿಂದುಕ್ತವಾಗಿಹ ಅರುವಿನ ಪರಿಮಳ. ವಿಷಯ ನಿರ್ವಿಷಯವಾಗಿ ನಿರುಪಮವಾಗಿ ನಿರ್ಭೇದ್ಯವಾಗಿ ಸರ್ವತ್ರಲಿಂಗವ ಕಂಡು ಲಿಂಗದ ಸುನಾದವ ಕೇಳಿ ನೋಡುವ ನೋಟ ಲಿಂಗವಾಗಿ ಕಾಣುವ ರೂಪ ನಿರೂಪವಾಗಿ ನಿಃಕಲವಾಗಿ ನಿಷ್ಕಳಂಕವಾಗಿ, ಶಬ್ದಮೀಸಲವಾಗಿ ಭಾವಕ್ಕಿಂಬಿಲ್ಲ ನುಡಿಗೆಡೆಯಿಲ್ಲವಾದುದರಿಂದ ಲಿಂಗವರಿತು ಲಿಂಗವಾಗಿದ್ದ ಕೋಟಿ ಕಂಗಳಲ್ಲಿ ಐಕ್ಯ ಕಂಡಯ್ಯ ಎಂದು ಹೇಳಿಹರು .

122

ನಿತ್ಯ ನಿರಂಜನ ತಾನೆಂದರಿಯದೆ 'ತತ್ವಮಸಿ' ಯೆಂದು
ಹೊರಗನೆ ಬಳಸಿ ಸತ್ತಿತ್ತಲ್ಲ ಜಗವೆಲ್ಲ ನಾಯಿಸಾವ,
ತಮ್ಮ ತಾವರಿಯದೆ ಸತ್ತವರ ಹೆಸರ ಪತ್ರವ ನೋಡಿದಡೆತ್ತಣ
ಮುಕ್ತಿ ಗುಹೇಶ್ವರಾ. || 648 ||

ತಾತ್ಪರ್ಯ : ನಿತ್ಯ ನಿರಂಜನ ತಾನೆಂದರಿಯದೆ, 'ತತ್ವಮಸಿ' ಯೆಂದು ಹೊರಗನೆ ಬಳಸಿ ಸತ್ತಿತ್ತಲ್ಲ ಇದೇನಾಶ್ಚರ್ಯ! ಹೊರಗನೆ ಬಳಸಲು ಬಾರದ್ದು, ಬಳಸಿದುದು ಆಶ್ಚರ್ಯ. ಇದು ತಾನಾರೆಂದರಿಯದ ಪರಿಣಾಮ, ತನ್ನ ತಾನರಿಯಲು ತನ್ನದು ಘನಕ್ಕೆ ಘನವಾಗಿಹ ಸ್ವಮಹಿಮೆಯ ಶಬ್ದಮುಗ್ಧತ್ವ ಹೊರಗಣ ಬಳಸಲು ಬರುವುದೆ? ಹೊರಗಣ ಬಳಸಿದುದು ಆವುದು? ಹೊರಗಣ ಬಳಸಿದುದು ವಾಣಿ ಮನ. ವಾಙ್ಮನೋತೀತವಾದ ಪರತತ್ವ ಅರಿವುಡೆ ತಾನೆ. ವಾಣಿಯ ಕಥನಕ್ಕೆ ನಿಲುಕದುದು ಪರತತ್ವ ಮನಸ್ಸಿನ ಸಂಕಲ್ಪ ವಿಕಲ್ಪಕ್ಕೆ ನಿಲುಕದ ತತ್ವ, ಅದನ್ನು ವಾಣಿ ಮನಸ್ಸಿನಿಂದ ಬಳಸುವುಡೆ ತಾನಾರೆಂದು ಅರಿತಂತಾಯಿತೆ ? ಹಲಬುವವನೆ ಆದನಲ್ಲದೆ ತಾನಾರೆಂದು ತನ್ನನ್ನು ತಿಳಿದಂತಾಯಿತೆ? ತಾನು ಅರಿದರುಹಿಸಿ ಕೊಂಬುದಕ್ಕೂ ಮೀರಿದ ಘನ. ಶೃತಿ ಗಗೋಚರ, ವೇದಾತೀತ ಭಾವಾತೀತ ನಾದ್ದರಿಂದ ಶೃತಿಯು ನೇತಿ ನೇತಿ ಎಂದು ಮೌನವ ಧರಿಸಿತ್ತು .

'' ವೇದವ ನೋದುವ ಅಣ್ಣಗಳು ನೀವು ಕೇಳಿರೊ, ವೇದ ವೇದಿಸಲಿಲ್ಲ ಶಾಸ್ತ್ರ ಸಾಧಿಸಲಿಲ್ಲ ಪುರಾಣ ಪೂರೈಸಲಿಲ್ಲ ಆಗಮಕ್ಕೆ ಆದಿಯಿಲ್ಲ ಇದು ಕಾರಣ ವೇದ್ಯರಲ್ಲ ಆದ್ಯರಲ್ಲ ಸಾಧ್ಯರಲ್ಲ ಬರಿಯ ಹಿರಿಯರು ನೋಡಾ ಕೂಡಲಚೆನ್ನಸಂಗಯ್ಯ '' .

ನಿತ್ಯ ನಿರಂಜನನಾದ ತನ್ನನ್ನು ವೇದ ವೇಧಿಸಲಿಲ್ಲ ಶಾಸ್ತ್ರ ಸಾಧಿಸಲಿಲ್ಲ ಪುರಾಣ ಪೂರೈಸಲಿಲ್ಲ. ಆಗಮಕ್ಕೆ ಆದಿಯೆ ಇಲ್ಲದಿರುವಾಗ ಇವಗಳನ್ನು ನಂಬಿದವ ಶಬ್ದ ಸಂಭ್ರಮದವನಾದ. ನಿತ್ಯ ಎಂಬುದು ವೇದಕ್ಕೆ ನಿಲುಕದ ತತ್ವ . ವೇದ ನಿತ್ಯವೊ? ವೇದವ ತಿಳಿಯುವ ತಾನು ನಿತ್ಯನೊ? ವೇದವು ತೋರಬಾರದ ಘನವಾದಲ್ಲಿ ವೇದವನ್ನು ನೀವು ಅಭ್ಯಾಸ ಮಾಡಿದುದು ಹೇಗೆ? ಅಭ್ಯಾಸಕ್ಕೆ ಇಂಬಾದಲ್ಲಿ ವಾಣಿ ಮನಕ್ಕೆ ಮೀರಿದ ತತ್ವ ಹೇಗಾಯಿತು. ನೀವು ತಿಳಿದು ನೋಡಿರೆ ಅಣ್ಣಯ್ಯಗಳಿರಾ. ಇದು ಕಾರಣ ವೇದವು ವೇಧಿ ಸಲಿಲ್ಲ, ತನ್ನ ತಿಳಿಯಲಿಲ್ಲವೆಂದಲ್ಲಿ ತಾ ನಿತ್ಯ ನಿರಂಜನ . ತಾ ಇದ್ದಂತಿರುವ ಘನಕ್ಕೆ ಘನ . ತನ್ನೊಳ ಬದಲಾವಣೆಗಿಂಬಿಲ್ಲ ತಾ ತೋರಬಾರದ ಘನ ಹೇಳಲೆಂತುಬಾರದು, ಹೇಳಬಾರದ ಘನ ತೋರಲೆಂತು? ಸರಸಂಧಾನ ಪರಿಬಲ್ಲರೆ ಹೇಳಿರೆ . ಗುಹೇಶ್ವರನೆಂಬುದು ಅಕಲ್ಪಿತ ನೋಡಾ ಎಂದು ಬಿತ್ತರಿಸಿದ, ಮಹಾಪ್ರಸಾದವರಿದರಿದು ನೋಡಿರೆ.

ತಾನು ಅಂದು ಇಂದು ಎಂದೆಂದು ಇದ್ದಂತಿರುವ ಘನಕ್ಕೆ ಘನವೆಂಬುದಕ್ಕೂ ಮೀರಿದ ತನ್ನಂ ಅರಿವುಡೆ ತಾನು ನಿತ್ಯನೆಂಬುದು ತನ್ನಿಂದ ತನಗದು ಸಹಜ ವಿದಿತವು. ನಿರಂಜನನೆಂಬುದು ತೋರಬಾರದ ಘನವೆ ತಾನಿರುವಲ್ಲಿ ಹೇಳಲೆಂತೊ? ಹೇಳಬಾರದ ಘನ ತನ್ನದು ಅಕಥನೀಯ ನಿಲವು. ಅದನ್ನು ವಾಣಿಯಿಂದ ಮನದಿಂದ ನಿರಂಜನನೆಂದು ಹೇಳುವದದೆಂತು ಭಾವಿಸುವದದೆಂತು? ನಿರ್ಣಯಿಸುವದಾದರು ಹೇಗೆ? ಇದು ಕಾರಣ ನುಡಿಗೆಡೆಗೊಡದ ಘನ ನುಡಿದು ಹೇಳುವದದೆಂತು? ನಡೆಗೆಡೆಗೊಡದ ಘನ ನಡೆದು ತೋರಿಸುವದದೆಂತು? ನಿತ್ಯ ನಿರಂಜನ ತಾನೆಂದರಿದುದು ಶಬ್ದಮುಗ್ಧ ನಿಲವು. ಅಲ್ಲಿ ನುಡಿ ನಡೆ ಮುಕ್ತಾಯಗೊಂಡಿದೆ. ಗಗನಕ್ಕೆ ನುಡಿನಡೆ ಹೇಗೆ ಮುಕ್ತಾಯಗೊಂಡಿದೆ ಹಾಗೆ ಚಿದ್ರೂಪವನರಿತ ಶರಣಂಗೆ ಹಲಬುವ ವಾಣಿ ಸೋತು ಹೋಗಿದೆ ನೆನೆಯುವ ವಾಣಿ ನೆನೆಯದಂತಾಗಿದೆ ಇದು ಕಾರಣ ನಿತ್ಯನಿರಂಜನ ತಾನೆಂದರಿಯದೆ ತತ್ವಮಸಿಯೆಂದು ಹೊರಗಣ ಬಳಸಿ ಸತ್ತಿದೆ. ಬಳಸಿ ಬಳಸಿ ಸತ್ತಿದೆ ಏನಾಶ್ಚರ್ಯ? ಅಮರತ್ವ ಸಾಧಿಸ ಹೋಗಿ ಮರಣ ಕಂಡರೆ ಏನಾಶ್ಚರ್ಯ? ಸೂರ್ಯನ ಬೆಳಕಿನಲ್ಲಿದ್ದು ಕತ್ತಲವ ಕಂಡರೆ? ಚಿತ್ಸೂರ್ಯ ಉದಯಾಸ್ತವಿಲ್ಲದ ತಾನು ತನ್ನಂ ತಾನು ಕಾಣದಾದನೆ? ಅಮರ ತಾನಿದ್ದು ತನ್ನ ತಾ ಅರಿಯದಾದನೆ? ಎಂದು ಪ್ರಭುದೇವ 'ತತ್ವಮಸಿ' ಹೊರಗಣ ಬಳಸುವ ಸಮೂಹಕ್ಕೆ ಎಚ್ಚರಿಸಿದ.

ಪ್ರಭುದೇವ ಅರಿದರಿದ ಮಹಾಂತ, ಅರಿಯದರುವು ತಾನೆ ಆದ ನಿತ್ಯನಿರಂಜನ. ಈ ಘನಮಹಿಮ ಹೊರಗೆ ಬಳಸ ಹೋಗಲಿಲ್ಲ, ತಾನಾರೆಂದು ತನ್ನಂ ತನ್ನಿಂದ ಅರಿದರಿದು ನೋಡಿ ಅರಿಯದರುವು ಆಗಿಹ ಪರಮನಿರಂಜನ. ಪೂರ್ವದಿಂದಲೂ ' ತತ್ವಮಸಿ 'ಯೆಂದು ಹೊರಗಣ ಬಳಸಿದವರು ಬಹುಜನ ಇದ್ದಂತೆ ಕಾಣುತ್ತದೆ . ಪ್ರಭು ನಿತ್ಯನಿರಂಜನ ತಾನೆಂದರಿಯದೆ ತತ್ವಮಸಿಯೆಂದು ಹೊರಗಣ ಬಳಸಿ ಸತ್ತಿತ್ತೆಲ್ಲ ಎಂದು ಬಿತ್ತರಿಸಿದುದು ನೋಡುವುಡೆ, ಪ್ರಭುವಿದ್ದ ಸಮಯದಲ್ಲಿಯೂ, ತಮ್ಮ ತಾವರಿಯದೆ ' ತತ್ವಮಸಿ 'ಯೆಂದು ಹೊರಗಣ ಬಳಸಿದವರಿದ್ದುದು ಕಂಡು ಎಚ್ಚರಿಸಿದುದೆಂದು ಅನಿಸಿಕೆಯಾಗಿದೆ.

ಮಾನವ ಜನ್ಮ ಮರವರವಿನಿಂದುಕ್ತವಾದ ಜನ್ಮ. ಇಲ್ಲಿ ಅರುವ ಅರಿಯದ ವಿನಃ ಮರವರುವಿಗೆ ಮೀರಿ ನಿಲ್ಲಲು ಅಸಾಧ್ಯ.ಆವ ಜಿಜ್ಞಾಸು ಶರಣ ಅರುವ ಅರಿಯ ಹೋಗುವನೋ ಆಗ ಮರವಿನಿಂದುಕ್ತವಾದ ಮಾನವ ಜನ್ಮದ ಮುಕ್ತಾಯ . ಆಗ ನಿತ್ಯನಿರಂಜನ ತಾನೆಂದರಿದುದು. ಆಗ ತನ್ನ ಹೊರ್ತು ಅನ್ಯ ಆವಾವುದು ಇರಲು ಸಂದಿಲ್ಲ, ತನ್ನ ಸಮಾನವಾದುದಿಲ್ಲ. ಸುಮ್ಮನೆ ಹೇಳುವದಕ್ಕಾದರೂ ತನಗೆ ನಾಮರೂಪವಿಲ್ಲದಿರುವಲ್ಲಿ ತತ್ವಮಸಿಯೆಂದು ಹೊರಗಣ ಬಳಸುವದದೆಂತು ? ಹೊರಗಣ ಬಳಸದಿದ್ದಲ್ಲಿ ನುಡಿದು ಹೇಳಲಿ. ಅಂದರೆ ನುಡಿಗೊಳಪಡಿಸಿ ಹೇಳಲಿ. ಮಹಾತ್ಮರು ವಾಙ್ಮನೋತೀತವಾದ ನಿಲುವುಳ್ಳವರು. ಅವರು ನಿಃಶಬ್ದ ಬ್ರಹ್ಮದಿರುವೆ ತನ್ನಯ ಇರುವಾಗಿಹ ಮಹಾಮಹಿಮರು . ನುಡಿದು ನಿಃಶಬ್ದಬ್ರಹ್ಮವಾಗಿದ್ದ ಘನಕ್ಕೆ, ಘನರು ನಡೆದುದು ನಿರ್ಗಮನ ನಿಲವು ಹೇಳಲೆಂತೊ ,ತೋರಲೆಂತೊ? ಅರುವ ಅರಿಯ ಹೋದ ನಡೆ ಅದನೆಂತು ತೋರಿಸುವದು , ಅರುವ ಅರಿಯಲು ಅನುವು ಮಾಡಿಕೊಟ್ಟದು ಗುರ್ವಾನುಗ್ರಹ . ಇದು ನುಡಿದು ಹೇಳಿದುದದೆಂತು ?

ತತ್ವಮಸಿಯೆಂದು ಹೊರಗಣ ಬಳಸಿ ಸತ್ತಿತ್ತಲ್ಲ : ಈ ಸತ್ತವರ ಗುಂಪಾವುದು? ಶಬ್ದ ಸಂಭ್ರಮದವರು ಶಬ್ದವೆ ತಮ್ಮ ಅರುವು ಇರುವು ಆದವರು. ಇವರು ತತ್ವಮಸಿಯೆಂದು ಹೊರಗಣ ಬಳಸಿ ಸತ್ತವರು. ಇವರು ತಮ್ಮ ತಾವರಿಯದವರು.

ಜಗವೆಲ್ಲನಾಯಿಸಾವ : ನಾಯಿ ತುತ್ತು ಪ್ರಸಾದಕ್ಕಾಗಿ ಕೂಗಿ ಕೂಗಿ ಹೇಗೆ ಸಾಯುವುದೋ?

ಹಾಗೆ ಜಗವೆಲ್ಲ ಶಬ್ದವ ನಂಬಿ ಶಬ್ದವೆ ತಾವಾಗಿ ಶಬ್ದವೆ ಅರುವಾಗಿ ಶಬ್ದವೆ ಮಹದರುವು ಆಗಿ, ಶಬ್ದವೆ ದೇಹಿಯಾಗಿ, ಶಬ್ದವೆ ದೇಹಿಗೆ ದೇಹಿಯಾಗಿ, ಶಬ್ದವೆ ನಿಃಶಬ್ದ ಬ್ರಹ್ಮವಾಗಿ, ಶಬ್ದವೆ ನುಡಿಗೆಡೆಗೊಡದ ಘನವಾಗಿ, ಶಬ್ದವೆ ಮುಕ್ತಿಯ ಮಂದಿರವಾಗಿ, ಜಗವೆಲ್ಲ ಸತ್ತಿತ್ತು ಎಂದು ಹೇಳಿಹರು.

ತಮ್ಮ ತಾವರಿಯದೆ ಸತ್ತವರ ಹೆಸರ ಪತ್ರ ನೋಡಿದಡೆತ್ತಣ ಮುಕ್ತಿ ಗುಹೇಶ್ವರಾ :

ಆರೆ ಆಗಲಿ ತಮ್ಮ ತಾವರಿಯದೆ ವೇದವ ವಿಕಸಿತಗೊಳಿಸಲಿ ಮುನಿ ಪುಂಗವರಂತೆ ಶಾಸ್ತ್ರಗಳ ಸಿದ್ಧಿಸಲಿ. ಸಿದ್ಧಿಸಿದರೂ ಅದು ತಾನೊ? ತನಗಿಂತನ್ಯವೊ? ಎಂಬ ಸಾರಭೂತವ ತಿಳಿಯದೆ ತಾನಾರೆಂದರಿಯದೆ, ವೇದ ಶಾಸ್ತ್ರ ಉಪನಿಷದ್ ಬರೆದುದು ಚಾರಿತ್ರ ಪುರುಷನನ್ನಾಗಿ ಕಂಡವರು , ಸತ್ತವರ ಪತ್ರವ ನೋದಿದವರು. ಇವರಿಗೆ ಇದ್ದ ಸ್ವರೂಪದ ಘನವ ತಿಳಿಯದ್ದರಿಂದ ಇವರ ದೃಷ್ಟಿ ನಿತ್ಯಾನಿತ್ಯ ವಿವೇಕ ಮತಿವಂತರಾದರಲ್ಲದೆ, ನಿತ್ಯ ಅನಿತ್ಯವರಿಯಲಿಲ್ಲ. ಇದು ಕಾರಣ ಇವರು ಸತ್ತವರ ಪತ್ರವ ನೋದಿದವರು. ಇವರುಗಳಿಗೆ ಇದ್ದ ಸ್ವರೂಪ ಸಿದ್ಧವಾಗಲಿಲ್ಲ, ಮಾಯಿಕ ತನು ಕಂಡುದರಿಂದ ಸತ್ತವರ ಹೆಸರ ಪತ್ರವ ನೋದಿದಡೆತ್ತಣ ಮುಕ್ತಿ ಗುಹೇಶ್ವರಾ ಎಂದು ಪ್ರಭು ಹೇಳಿಹರು.

123

ಎನ್ನ ಅನುಭಾವದಗಮ್ಯವೆ ಎನ್ನ ಅರುವಿನ ವಿಶ್ರಾಮವೆ
ಎನ್ನ ಭಾವದ ಬಯಕೆಯೆ ಎನ್ನ ನಿಜದ ನಿಲುವೆ,
ಎನ್ನ ಪರಿಣಾಮದ ಮೇರುವೆ, ಎನ್ನ ಮನದ ಮಹಿಮನೆ
ನಿಮ್ಮ ಸುಳುಹು ಎತ್ತಲಡಗಿತ್ತು ಎಲೆ ಲಿಂಗವೆ
ನಿಮ್ಮ ನಾಮವೆತ್ತ ನಿರ್ನಾಮವಾಯಿತ್ತು ಎಲೆ ಪರಮ ಗುರುವೆ
ಕೂಡಲ ಚೆನ್ನಸಂಗಯ್ಯನಲ್ಲಿ ಉರಿಯುಂಡ ಕರ್ಪುರದಂತಾದೆಯಲ್ಲ.

ತಾತ್ಪರ್ಯ : ಎನ್ನ ಅನುಭಾವದಗಮ್ಯವೆ: ಅನುಭಾವದಗಮ್ಯ ಇದಕ್ಕೇನೆನ್ನಬೇಕು? ಶ್ರೀಗುರು ಸಂಜ್ಞೆ ಇದಕ್ಕೇನೆನ್ನಬೇಕು. ಇದು ಕಾಣಬಾರದ ಶ್ರೀಗುರುವಿನ ಕಾರುಣ್ಯ. ನುಡಿಗೆಡೆಗೊಡದ ಗುರ್ವಾನುಗ್ರಹ. ಇದು ವೇದ ವೇಧಿಸಲರಿಯದ ಪರಿ. ಶಾಸ್ತ್ರಸಾಧಿಸಲರಿಯದ ಮಹಾದರುವು. ಈ ಮಹದರುವೆ ಎನ್ನ ಅನುಭಾವದಗಮ್ಯ. ಇಲ್ಲಿ ಶಿಷ್ಯನಾಗಿ ಪಡೆದುಕೊಂಡುದಿಲ್ಲ. ಗುರುವಾಗಿ ಕೊಟ್ಟುದಿಲ್ಲ. ಸತ್ತ ಗುರುವಿನ ಕಾರುಣ್ಯ ಸತ್ತು ಕೊಂಬ ಶಿಷ್ಯಂಗೆ ಭಕ್ತಿ ವಿಸ್ತರಿಸುವುದು ಎಂದಂತೆ, ಪೂರ್ವನಾಮವಿಲ್ಲದ ಗುರು ಕಾರುಣ್ಯ, ಪೂರ್ವನಾಮವಿಲ್ಲದ ಶಿಷ್ಯಂಗೆ, ಮುನ್ನ ಮುನ್ನಲಾದ ತನ್ನ ಘನವ ತನ್ನಿಂದ ತನಗೆ ವೇದ್ಯವಾದುದು. ಅದುವೆ ಎನ್ನ ಅನುಭಾವದಗಮ್ಯವು . ಅಹಹ ವಾಣಿಯು ನಿಂತಿತೆ? ತನ್ನ ಕಾರ್ಯದಿಂದ ನಿವೃತ್ತವಾಯಿತೆ. ಮೌನ ಮುದ್ರೆ ಧರಿಸಿತೆ? ಓ ವಾಣಿಯೆ ! ಬಹು ಕಾಲ ನಿನ್ನ ನುಡಿಯುವ ಪ್ರಯಾಸ ಇಂದು ಸಫಲವಾಯಿತೆ? ಡಿಟದರ್ಶನವಾಗಿ ಡಿಟವಾದೆಯಾ? ಎನ್ನ ಅನುಭಾವದಗಮ್ಯನ ದರ್ಶನ ಇಂದು . ಓ ವಾಣಿಯೆ ನಿನಗೆ ನಿರ್ವಾಣನೆನ್ನಲೆ! ಹಾಗೆಂದರೆ ನೀನು ಮೌನದ ಮುದ್ರೆ ಧರಿಸಿದೆಯಾ? ಈ ನಿನ್ನ ಸಂಜ್ಞೆ ಮೌನಕ್ಕೆ ಮೌನವೆಂಬುದು ಘಟಿಸಿದಾಗಿದೆ ಎಂದು ಎಚ್ಚರಿಸಿದೆಯಾ? ಶೃತಿಗೆ ಅಗೋಚರವಾದುದು ಶೃತಿ ಪಡಿಸುವುದು ಯತಾರ್ಥವಲ್ಲವೆಂದು ನೀನು ಮೌನ ಮುದ್ರೆ ಧರಿಸಿದ ನಿನ್ನಕಾರುಣ್ಯ. ಎನ್ನ ಅನುಭಾವದಗಮ್ಯವೆಂದು ನೀನೆ ಎನಗೆ ಶ್ರೀಗುರುವೆಂದು ನಮೋ ನಮೋ ಎಂಬೆ ಅರಿದಿಹೆನೆಂದರೆ ಅರುವಿಂಗಸಾಧ್ಯವಾದುದು. ಎನ್ನ ಅನುಭಾವದಗಮ್ಯ ನೋಡಾ ನೆನದಿಹೆನೆಂದಡೆ ನೆನಹಿಂಗಸಾಧ್ಯವಾದುದು ಎನ್ನ ಅನುಭಾವದಗಮ್ಯ ನೋಡಾ

ಭಾವಿಸಿಹೆನೆಂದರೆ ಭಾವಕ್ಕಸಾಧ್ಯವಾದುದು ಎನ್ನ ಅನುಭಾವದಗಮ್ಯ ನೋಡಾ. ಇದುವೆ ಶ್ರೀಗುರು ಕರುಣಿಸಿದ ಕಾರುಣ್ಯ ಎನ್ನ ಅನುಭಾವದಗಮ್ಯ ನೋಡಾ .

ಎನ್ನ ಅರುವಿನ ವಿಶ್ರಾಮವೆ! ಅರುವ ಅರಿಯಹೋಗಿ ಏನೆಂದೆನಲಿಲ್ಲದ ಅರುವಿನ ವಿಶ್ರಾಮವ ಅದನಾರಯ್ಯ ಹೀಗೆ ಎಂದು ವಿವಿರಿಸುವುದು? ಅರುವ ಅರಿಯಹೋದ ಅರು ಹೃದಯ ಅರಿಸಿಕೊಳ್ಳದ್ದಾಗದು, ಅರಿಯುವ ಅರುವಾಗದು. ಅರಿಯದರುವು ಇದನೆಂತು ಹೀಗೆ ಎಂದು ನಿರ್ಣಯಿಸುವದು? ನಿರ್ಣಯಿಸುವ ಬದ್ಧ ಭಸ್ಮವಾಯಿತೆ? ಉರಿಯುಂಡ ಕರ್ಪುರದಂತಾಯಿತೆ, ಅಹಹ ಇದೆಂಥ ಅರುವಿನ ವಿಶ್ರಾಮ. ಅರಿಯುವ ದೃಕ್ , ದೃಕ್ಕನ ದೃಕ್ ಆದುದೆ ; ಎನ್ನ ಅರುವಿನ ವಿಶ್ರಾಮ ನುಡಿಗೆಡೆಗೊಡದ ಘನವಾದುದೆ ಎನ್ನ ಅರುವಿನ ವಿಶ್ರಾಮ. ಮರವರುವೆಂಬುದು ಮರೆತುದೆ ಅರುವಿನ ವಿಶ್ರಾಮ. ಅರಿದರುಹಿಸಿ ಕೊಂಬುದಕ್ಕೆ ಮೀರಿ ನಿಂತುದೆ ಅರುವಿನ ವಿಶ್ರಾಮ. ಆವಾವ ಭಾವಕ್ಕಿಂಬುಕೊಡದೆ ತಟ್ಟದೆ ಮುಟ್ಟದೆ ಪರಬ್ರಹ್ಮವೆಂಬುದು ದಾಂಟಿದುದೆ ಎನ್ನ ಅರುವಿನ ವಿಶ್ರಾಮ ಅಪ್ರಮಾಣ ಲಿಂಗ, ಅನುಪಮ ಲಿಂಗ, ಅಚಲಿತ ಲಿಂಗ, ಅಖಂಡಲಿಂಗ. ಈ ಲಿಂಗ ಲಿಂಗ ಎಂಬ ಹಂಗು ಹರಿದು ನಿಂತುದೆ ಎನ್ನ ಅರುವಿನ ವಿಶ್ರಾಮ . ಶಬ್ದ ಸಂಭ್ರಮಕ್ಕೆ ಮಿಕ್ಕಿ ಮೀರಿ ನಿಂತುದೆ ಎನ್ನ ಅರುವಿನ ವಿಶ್ರಾಮ. ಇದು ಎಂಜಲ ಮಾತಿಗೆ ನಿಲುಕುವ ಅನುಭವವು ಅಲ್ಲ. ಅರುವಿನ ವಿಶ್ರಾಮವು ಅಲ್ಲ. ಮಿಗೆ ಮಿಗೆ ಮೀಸಲಾಗಿದ್ದುದು ಎನ್ನ ಅನುಭಾವದಗಮ್ಯವು , ಎನ್ನ ಅರುವಿನ ವಿಶ್ರಾಮವು ನೋಡಾ.

ಎನ್ನ ಭಾವದ ಬಯಕೆಯೆ ! ಭಾವಿಸಿಹೆನೆಂದರೆ ಭಾವಕ್ಕಸಾಧ್ಯವಾಗಿಹ ಭಾವದ ಬಯಕೆಯೆ! ವಿಶ್ರಾಂತಿಯು ಸಕಲ ಪ್ರಿಯವಾದ ನಿಜದಾಮ. ಅದು ನಿಜದ ನಿಲುವುಳ್ಳ ಧಾಮ, ಅರುವು ವಿಶ್ರಾಂತಿ ಹೊಂದಿದ ಪರಮಧಾಮ ದೃಕ್ಕಿಗೆ ದೃಕ್ಕಾದ ದೇಹಿಗೆ ದೇಹಿಯಾದ ಅರುವಿನ ವಿಶ್ರಾಂತಿಯ ಶಾಂತಾತ್ಮನಧಾಮ ಜೀವ ಭಾವದ ಬಯಕೆ ದೇಹಿಗೆ ದೇಹಿಯಾಗುವ ಬಯಕೆಯೆ ದೃಕ್‌ಗೆ ದೃಕ್ಕಾಗುವ ಬಯಕೆಯೆ ಅಂತರಾತ್ಮನಿಗೂ ಇದೆ ಬಯಕೆಯೆ! ಪರಮಾತ್ಮನೆಂಬ ಭಾವಕ್ಕೂ ಇದೆ ಬಯಕೆಯೆ! ಇದು ತೃಪ್ತರೂಪ ತೃಪ್ತನ ನಿಲಯ . ಈ ತೃಪ್ತಿ ಒಮ್ಮೆಯಾದರೆ ಸಾಕು ಈ ನಾನಾಭಾವಂಗಳ ಬಯಕೆ ರೂಪ ಹಸಿವು ಹಿಂಗುವುದು. ಉಂಡು ತೃಪ್ತನಾದವವನಿಗೆ ಹಸುವಿನ ಬಳಲಿಕೆ ಇರುವುದೆ? ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ ಘನ ಜ್ಞಾನಾಮೃತವನುಂಡು ತೃಪ್ತವಾದುದು. ಅಲ್ಲಿ ಹಸಿವು ಕಾಣಬಹುದೆ? ಹಸಿವು ಕಂಡವರು ಜ್ಞಾನಾಮೃತವನುಂಡ ಲಕ್ಷಣವೆಂದು ಹೇಗೆ ತಿಳಿಯುವುದು. ಇದು ಕಾರಣ ಎನ್ನ ಭಾವದ ಬಯಕೆಯೆ, ಭಾವಕ್ಕಗಮ್ಯವಾಗಿಹ ನಿರ್ಭಾವ ರೂಪವೆ ನಿರೂಪವೆ! ನಿನಗೆ ಅದಾವ ನಾಮದಿಂದ ಕರೆಯುವದು, ಅದಾವ ರೂಪದಿಂದ ಕಾಣುವುದು. ಕಾಣದುದು ಕಂಡುದೆ ಎನ್ನ ಭಾವದ ಬಯಕೆಯೆ. ಬಹುಕಾಲಗಳ ಬಯಕೆ ಕಾಣದುದ ಕಾಣುವ ಆಶೆ. ಅದು ಗುರು ಕಾರುಣ್ಯವಾಗಿ ಮುಂದೆ ನಿಂತಿದೆ. ತನ್ನಂತೆ ಮಾಡಿಕೊಂಡಿದೆ , ಈಗ ಬಯಸುವ ಭಾವ ಹೋಗಿ ಬಯಸದ ಭಾವ , ಏನ ಕಂಡರೂ ಬಯಸದ ಭಾವ. ಇದು ಎನ್ನ ಭಾವದ ಬಯಕೆಯೆ ಎಂದು ಹೇಳಿಹರು.

ಎನ್ನ ನಿಜದ ನಿಲುವೆ, ಈ ನಿಜದ ನಿಲುವು ಅದಾರಿಗೆ? ಆರು ಶ್ರೀಗುರು ಕಾರುಣ್ಯ ಅರಿಯ ಹೋಗಿಹರು ಆ ಶರಣಂಗೆ ತಾನೆ ಅನುಭಾವಕ್ಕೆ ಅಗಮ್ಯನಾಗಿಹನು. ಅರುವಿನ ಪೂರ್ಣ ವಿಶ್ರಾಂತಿಯ ಪ್ರಶಾಂತಾತ್ಮ ತಾನೆ, ಏಕೆಂದರೆ ಅವರ ಭಾವದ ಬಯಕೆಯೆ ಅವರ ಕೈಯ ವಶಗತವಾಗಿರುವದು ಹೃದ್ಗತವಾಗಿರುವದು, ಸುಖದ ಸುಖಿಗಳಾಗಿಹರು. ಸುಖ ಸುಖವೆ ಸಿದ್ಧಿಸಿಹದು. ಇದುವೆ ಎನ್ನ ನಿಜದ ನಿಲುವು ಎಂದು ಹಾಡಿಹರು. ನಿಜದ ನಿಲವು ನಿಜವೆನ್ನದ ನಿಲುವು, ನಿಜ ನಿಜ ಎನ್ನುವಂಗೆ ನಿಜದ

ನಿಲುವಿಲ್ಲ ನಿಜವೆನ್ನದವಂಗೆ ನಿಜದ ನಿಲುವು ತನ್ನ ನಿಲುವು ತಾನೆ ಆದ ನಿಲುವು. ಇದು ದಿಟ , ಸಟೆ ಎಂಬ ನುಡಿಗಳ ಸೇರದ ನಿಲವು. ಪ್ರವೃತ್ತಿ ನಿವೃತ್ತಿ ಸೇರದ ನಿಲುವು. ದೃಕ್ಕಿಂಗೆ ದೃಕ್ಕಾಗಿ ನಿಂತು ತನ್ನ ನೋಡಿದ ನಿಲುವು. ಶೃತಿ ಪ್ರಮಾಣಂಗಳ ಹಂಗು ಹರಿದ ನಿಲುವು ಇಲ್ಲಿಯೆ. ಎನ್ನ ಪರಿಣಾಮದ ಮೇರುವೆ ಇದು ಶ್ರೀಗುರು ಕಾರುಣ್ಯವ ಕಂಡುಂಡ ಎನ್ನ ಪರಿಣಾಮದ ಮೇರುವೆ. ಅಹಹ, ಇದನೆಂತು ವರ್ಣಿಸುವುದು?

ಪೌರ್ಣಮಿ ಚಂದ್ರನು ಅವನೆಂದು ಪ್ರಕಾಶಮಯನು, ಶೀತಲಮಯನು ಪರಮ ಶಾಂತನೆಂದು ನುಡಿದಿಹನು. ಹಾಗೆ ಎನ್ನ ಹೃದ್ಗತದಲ್ಲಿ ವೇದ್ಯವಾಗಿಹ ಈ ನಿಜದ ನಿಲುವುಳ್ಳ ಪರಿಣಾಮ ಅರುವಿನ ವಿಶ್ರಾಂತಿ ಪರಮಶಾಂತಿ. ಎನ್ನ ಅನುಭಾವದಗತ್ಯವಾಗಿಹ ಪರಮಾಮೃತ. ನನಗೆ ಶ್ರೇಷ್ಠಾತಿ ಶ್ರೇಷ್ಠವಾದುದು ಅದನೆಂತು ಬಿಚ್ಚುವದು ;ಅದನೆಂತು ಬೇರಾಗಿ ನಿಲುವುದು ; ಹೇಳಿದರದಕ್ಕದೆ ಕೊರತೆಯಾಗುವುದಲ್ಲ. ಇದು ಶ್ರೀಗುರು ಎನ್ನ ಮೇಲೆ ತನ್ನ ಕರುಣಾರಸಾಬ್ದಿ ಕಡಕೋಡಿವರಿದ ಪರಿಣಾಮದ ಮೇರುವೆ ಅನಿಸಿಹುದು ನೋಡಾ.

ಎನ್ನ ಮನದ ಮಹಿಮನೆ ಓ ಮನದೊಡಯನೆ! ಉಪಾಧಿಕ ಮನ ಉಪಾಧಿರಹಿತ ಮನ ಎಂದರಸುವದಕ್ಕೂ ಮಿಕ್ಕಿ ಮೀರಿ ಬೆಳಗುವ ಮಹಿಮನೆ! ಮನವಾಗಿ ನೋಡಹೋದವರಿಗೆ ಕಾಣದ ಮಹಿಮನೆ, ಎರಡೆಂಭತ್ತು ಕೋಟಿ ವಚನಂಗಳ ಹಾಡಿ ಹಾಡಿ ಸೋತರು ಸಿಗದ ಮಹಿಮನೆ. ಮನವರಿಯದ ಮಹಿಮನೆ ಅಲುಪ್ತ ಮಹಿಮನೆ ನಿರಾಲಂಬ ಮಹಿಮನೆ ಮನ ಪ್ರವೃತ್ತಿಯುಳ್ಳದ್ದಾದರೇನು? ನಿವೃತ್ತಿವುಳ್ಳದ್ದಾದರೇನು. ಅದರ ಪ್ರವೃತ್ತಿಗೂ ನಿವೃತ್ತಿಗೂ ಬೇರಾಗಿ ಬೆಳಗುವ ನಿತ್ಯನಿರಂಜನನೆ. ಮನವು ನಿತ್ಯವೆಂದು ನಿರಂಜನನೆಂದು ನೆನಹುಳ್ಳದ್ದಾದರೂ ಧ್ಯಾನಾತೀತ ತಾನಾಗಿಹ ಸ್ವಮಹಿಮ ನಾದುದರಿಂದ, ಮನದ ಮಹಿಮನೆಂದು ಹೇಳಿಹರು.

ನಿಮ್ಮ ಸುಳುಹು ಎತ್ತ ಲಡಗಿತ್ತು ಎಲೆ ಲಿಂಗವೆ! ಓ ಲಿಂಗಯ್ಯನೆ! ಲಿಂಗವೆಂಬ ನಿಮ್ಮ ಸುಳುಹು ಎತ್ತಲಡಗಿತ್ತು. ಇದು ಎನ್ನ ಅನುಭಾವದಗಮ್ಯವೆಂಬ ನಿಮ್ಮ ಸುಳುಹು ಎತ್ತಲಡಗಿತ್ತು ನಿಮ್ಮ ಅರುವ ಅರಿಯ ಹೇಳಿದ ಶ್ರೀಗುರು ಕಾರುಣ್ಯರೂಪಿ ನಿಮ್ಮ ಸುಳುಹು ಎತ್ತಲಡಗಿತ್ತು? ಇದು ಎನ್ನ ಅರುವಿನ ವಿಶ್ರಾಮ, ಎನ್ನ ಭಾವದ ಬಯಕೆಯೆ ನಿಜದ ನಿಲುವೆ ಎಂಬ ಸುಳುಹು ಎತ್ತಲಡಗಿತ್ತು ? ನಿಮ್ಮ ನಾಮವೆತ್ತ ನಿರ್ನಾಮವೆತ್ತ, ಪರಮ ಗುರುವೆ ನಿಮ್ಮ ನಾಮವೆತ್ತ ನಿರ್ನಾಮವಾಯಿತ್ತು ನೀವು ಕರುಣಿಸಿದ ಕಾರುಣ್ಯರೂಪಿ ಲಿಂಗವೆಂಬ ನಾಮ ನಿರ್ನಾಮವಾಯಿತ್ತು ನೋಡಾ. ಪರಮ ಗುರುವೆ ಕೂಡಲ ಚೆನ್ನಸಂಗಯ್ಯನಲ್ಲಿ ಉರಿಯುಂಡ ಕರ್ಪುರದಂತಾದೆಯಲ್ಲ ಪ್ರಭುವೆ.

ಓ ಪರಮ ಗುರುವೆ, ಏನೆಂದುಸರಲು ಬಾರದ ಅರುರೂಪಿ ಕೂಡಲ ಚೆನ್ನಸಂಗಯ್ಯನೆಂಬ ನನ್ನ ಮಹದರುವಾಗಿಹ ಉರಿಯಲ್ಲಿ ಉರಿಯುಂಡ ಕರ್ಪುರದಂತಾದೆಯಲ್ಲ. ಓ ಲಿಂಗವೆಂಬ ಪ್ರಭುವೆ ಪರಮಗುರುರೂಪಿ, ಓ ನನ್ನ ಸ್ವಪ್ರತಿಭೆಯೆಂಬ ಉರಿಯಲ್ಲಿ ನೀವು ಉರಿಯುಂಡ ಕರ್ಪುರದಂತಾದಿರಲ್ಲ ಪ್ರಭುವೆ ನನ್ನ ಮಹದರುವೆಂಬ ಉರಿಯಲ್ಲಿ ಪರಮಗುರುವಾದ ನೀವು ಉರಿಯುಂಡ ಕರ್ಪುರದಂತಾದಿರಲ್ಲ ಪ್ರಭುವೆ ಎಂದು ಹೇಳಿಹರು.

124

ಮನದ ಭ್ರಮೆಯ ಕಳೆದು , ಗುರುವ ಮಾಡಿ ಗುರುಭಕ್ತನಾದನಯ್ಯ
ಬಸವಣ್ಣನು . ಸಂಸಾರ ಭ್ರಮೆಯ ಕಳೆದು ಜಂಗಮವ ಮಾಡಿ

ಜಂಗಮ ಭಕ್ತನಾದನಯ್ಯ ಬಸವಣ್ಣನು.
ಪ್ರಾಣದ ಭ್ರಮೆಯ ಕಳೆದು, ಲಿಂಗವ ಮಾಡಿ
ಲಿಂಗ ಭಕ್ತನಾದನಯ್ಯ ಬಸವಣ್ಣನು.
ಈ ತ್ರಿವಿಧದ ಭ್ರಮೆಯ ತ್ರಿಕರಣದಲ್ಲಿ
ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯನಾದನಯ್ಯ ಬಸವಣ್ಣನು.

ತಾತ್ಪರ್ಯ : ಷಟ್‌ಸ್ಥಲ ಚಕ್ರವರ್ತಿಯಾದ ಚೆನ್ನಬಸವಣ್ಣನವರು, ಬಸವರಸ ಲಿಂಗೈಕ್ಯದ ಘನವ ಸುತ್ತಿಸಿಹರು. ಮಾನವನಿಗಿರುವ ತ್ರಿವಿಧ ಭ್ರಮೆಯ ಕಳೆದಾಗ ಗುರು ಲಿಂಗ ಜಂಗಮ ಮಾಡಲು ಸಾಧ್ಯ. ಮತ್ತು ಅವುಗಳಲ್ಲಿ ಲೀಯವಾಗುವುದು ಸಹಜವು.

ಮನದ ಭ್ರಮೆಯ ನಷ್ಟಮಾಡಿ ಗುರುವ ಮಾಡಿ ಗುರುಭಕ್ತನಾದನಯ್ಯ ಬಸವಣ್ಣನು :

ಇದು ಬಸವರಸರು ಸಕಲರಿಗೂ ಮನದ ಭ್ರಮೆಯ ಕಳೆದುಕೊಳ್ಳಲು ಸೂಚಿಸಿದ ಸಂಜ್ಞೆ ಹಿಂದಿನಿಂದ ಗುರುವ ಮಾಡಿ, ಗುರುಭಕ್ತರಾಗುವ ಹಿರಿಯಾಶೆಯುಳ್ಳ ಅಪೂರ್ವ ಶರಣರು.

ಮನದ ಭ್ರಮೆಯ ಕಳೆದುದು ಹೇಗೆ ? ಗುರುವ ಮಾಡಿದುದು ಹೇಗೆ ? ಗುರು ಭಕ್ತನಾದುದು ಹೇಗೆ? ಮನದ ಭ್ರಮೆಯ ಕಳೆದುದೆಂದಲ್ಲಿ ಮನ ಇದ್ದುದೊ, ಅಥವಾ ಇಲ್ಲದುದೊ ಎಂದು ತನ್ನೊಳ ತಾನೆ ವಿಚಾರ ಮಾಡುವುದು. ಇದು ಕಲ್ಪಿತವೊ ಅಥವಾ ಅಕಲ್ಪಿತವೊ? ಎಂದು ಅರಿದರಿದು ನೋಡುವುದು. ಮನ ಉಂಟೆಂಬುದು ಭವಕ್ಕೆ ಬೀಜ. ಮನವೆಂಬುದು ಭ್ರಮೆ ಮನದ ಪ್ರವೃತ್ತಿ ಭ್ರಮೆ, ಮನದ ನಿವೃತ್ತಿ ಭ್ರಮೆ . ಅದು ಶುದ್ಧವೆಂಬುದು ಭ್ರಮೆ, ಅಶುದ್ಧವೆಂಬುದು ಭ್ರಮೆ. ಮನದ ಮುಖ ಎರಡು, ಒಂದು ಅವಿಚಾರ , ಮತ್ತೊಂದು ವಿಚಾರ. ಒಂದು ಸ್ಮೃತಿಗೆ ಕಾರಣ. ಇನ್ನೊಂದು ವಿಸ್ಮೃತಿಗೆ ಕಾರಣ. ಒಂದು ಬಂಧನಕ್ಕೆ ಕಾರಣ ಇನ್ನೊಂದು ಮೋಕ್ಷಕ್ಕೆ ಕಾರಣ.

ಬಸವರಸರು ಈ ಪ್ರವೃತ್ತಿ, ನಿವೃತ್ತಿಯುಳ್ಳ ಮನದ ಭ್ರಮೆಯ ಕಳೆದವರು . ಇದು ಕಲ್ಪಿತವೆಂದು ಮನ ಇದು ಸಂಕಲ್ಪ ವಿಕಲ್ಪವುಳ್ಳುದೆಂದು ಮನವ ನಷ್ಟಮಾಡಿದವರು . ಈ ಸಂಕಲ್ಪ ವಿಕಲ್ಪ ಇಲ್ಲದುದು ಕಲ್ಪಿಸಿ ಸಂಕಲ್ಪವಾಗಿದೆ. ಇದ್ದುದು ಮರೆತು ವಿಕಲ್ಪವಾಗಿದೆ. ಇದ್ದುದ ಮರೆತು, ಇಲ್ಲದುದು ಕಲ್ಪಿಸುವದು ಭ್ರಮವಲ್ಲವೆ? ಇದ್ದ ಹಗ್ಗದಲ್ಲಿ ಇಲ್ಲದ ಹಾವು ಕಲ್ಪಿಸುವದು ಭ್ರಮವಲ್ಲವೆ? ಹಾಗೆ ಇದ್ದ ಅಕಲ್ಪಿತ ಘನದಲ್ಲಿ ಇಲ್ಲದ ಸಂಕಲ್ಪ ವಿಕಲ್ಪ ಕಲ್ಪಿಸುವುದು ಭ್ರಮವಲ್ಲವೆ? ನಿರಂತರವಾಗಿಹ ಅಕಲ್ಪಿತದಲ್ಲಿ ಕಲ್ಪಿತ ಕಲ್ಪಿಸುವುದು ಭ್ರಮವು. ಪ್ರವೃತ್ತಿ ಕಲ್ಪಿತ ನಿವೃತ್ತಿ ಕಲ್ಪಿತ ಬಂಧನವದು ಕಲ್ಪಿತ. ಮೋಕ್ಷವದು ಕಲ್ಪಿತ. ವಿಸ್ಮೃತಿ ಕಲ್ಪಿತ, ಸ್ಮೃತಿ ಕಲ್ಪಿತ, ಅವಿಚಾರ ಕಲ್ಪಿತ, ವಿಚಾರ ಕಲ್ಪಿತ , ಜೀವ ಕಲ್ಪಿತ , ಪರಮ ಕಲ್ಪಿತ , ಪ್ರಕೃತಿ ಕಲ್ಪಿತ , ಪುರುಷ ಕಲ್ಪಿತ. ಅರಿದರುಹಿಸಿ ಕೊಂಬುದಕ್ಕೆ ಮೀರಿದ ಘನದಲ್ಲಿ ದೃಶ್ಯವೆಂಬುದು ಕಲ್ಪಿತ, ದೃಕ್ ಕಲ್ಪಿತ. ಈ ಕಲ್ಪಿತರೂಪಿ ಭ್ರಮ ನಿರಸನವಾಗಬೇಕಾದರೆ ತನ್ನಿಂದ ತನ್ನ ಅಧಿಷ್ಠಾನದ ಘನವ ತಿಳಿಯದ ವಿನಃ ಇಲ್ಲದ ಕಲ್ಪಿತ ಇಲ್ಲದ ಸಂಕಲ್ಪ ವಿಕಲ್ಪ ಇಲ್ಲವಾಗದು.

ಹಗ್ಗವದು ಅದು ನಿಜ. ನಿಜದ ದರ್ಶನವಾಗುವುಡೆ ಇಲ್ಲದ ಹಾವು ಇಲ್ಲವಾಗುವದು. ಇಲ್ಲದ ಹಾವು ಇಲ್ಲವಾಗಲು ಬೆಳಕಿನ ಅವಶ್ಯಕತೆ ಮುಖ್ಯ ಹೇಗೋ ಹಾಗೆ ಇದ್ದ ಅಕಲ್ಪಿತ ಘನದಲ್ಲಿ ಮರವರುವೆಂಬ ನಸುಗತ್ತಲೆ ಉಂಟಾಗಿ ಆ ನಸುಗತ್ತಲೆ ದೋಷವೆ ಕಲ್ಪಿತ ಮನ . ಅದರ ಸಂಕಲ್ಪ ವಿಕಲ್ಪರೂಪಿ ಮುಖ, ಇದು ಭ್ರಮೆ . ಇದುವೆ ಪ್ರವೃತ್ತಿಯಾಗಿ ನಿವೃತ್ತಿಯಾಗಿ ನಾನಾ ಮುಖವಾಗಿ ಭ್ರಮುವು ಉದಯುಸಿದೆ . ಇದರ ನಷ್ಟಮಾಡಲು ಅರುವ ಇದ್ದಂತೆ ತಿಳಿಯುವ ಜ್ಞಾನವು ಅವಶ್ಯವಾದುದು. ಇದ್ದ ಅರು ಹೃದಯನಾಗಿ ತನ್ನ ಸ್ವಮಹಿಮೆಯಲ್ಲಿ ನಿಂತು ನೋಡಲು, ಮನದ

ಸಂಕಲ್ಪ ವಿಕಲ್ಪವು ಪುಸಿ ಮತ್ತು ಮನವೆಂದನಿಸಿಹ ಕಲ್ಪಿತವು ಪುಸಿಯಾಗಿ , ತೋರಬಾರದ ಘನ ಹೇಳಲೆಂತು, ಹೇಳಬಾರದ ಘನ ತೋರಲೆಂತೊ? ಎಂಬ ಮಹದರುವಾಗಿಹ ಅಕಲ್ಪಿತ ಘನವೆ ಪ್ರಜ್ವಲಿಸುವದು. ಇದು ಅರುವಾಗಿ ಅರುವ ಅರಿಯ ಹೋದವರಿಗೆ ಆಗ ಅಕಲ್ಪಿತಘನವೆ ಪ್ರಜ್ವಲಿಸುವದು. ಇದು ಅರುವಾಗಿ ಅರುವ ಅರಿಯ ಹೋದವರಿಗೆ ಆಗ ಅಕಲ್ಪಿತ ಘನವೆ ತನ್ನಿರುವಾಗಿಹ ಅರುವು. ಇದು ತನ್ನಿಂದ ತನಗದು ಸಹಜ ಸಿದ್ಧವಾಗಲು , ಆಗ ಮನ ಮನದ ಭ್ರಮೆಯು ನಷ್ಟವಾಗುವದು . ಮನದ ಭ್ರಮೆಯ ನಷ್ಟಮಾಡಲು ಆರು ಅರುವ ಅರಿಯ ಹೋಗಿಹರು, ಆ ಶರಣಂಗೆ ಮನದ ಭ್ರಮೆ ಇಲ್ಲದುದು ಇಲ್ಲವಾದುದು . ಭ್ರಮ ನಷ್ಠಮಾಡಲು ಆರು ಅರುವ ಅರಿಯಹೋಗಿಹರು, ಆ ಶರಣಂಗೆ ಮನದ ಭ್ರಮೆಯ ಕಳೆದು ಗುರುವ ಮಾಡಿ ಗುರುಭಕ್ತನಾದನಯ್ಯ ಬಸವಣ್ಣ ಎಂದು ಹೇಳಿಹರು.

ಇಲ್ಲದುದು ಇಲ್ಲವಾದುದು ಭ್ರಮ ನಷ್ಟವಾದ ಚಿನ್ಹ. ಮನವೆಂಬುದು ಪುಸಿ ಅದರ ಕಾರ್ಯವು ಪುಸಿ. ಅದು ಕಾರಣವಾದುದು ಪುಸಿ ಕಲ್ಪಿತವು ಪುಸಿ, ಹೀಗೆ ವಿಚಾರ ಮಾಡಿ ಪುಸಿ ಎಂಬುದೆ ಇಲ್ಲದುದು ಮನದ ಕಾರ್ಯವು ಇಲ್ಲದುದು ಎಂದು ಸಿದ್ಧ ಮಾಡಿದುದೆ ಮನದ ಭ್ರಮೆಯ ಕಳೆದ ಸಂಕೇತ ಆಗ ಗುರುವ ಮಾಡಿ ಗುರುಭಕ್ತನಾದುದು.

ಬಸವರಸರು ಬೋಧಕ್ಕೆ ಗುರುವ ಮಾಡಿದವರಲ್ಲ. ಬೋಧ ಅಬೋಧ ಬೋಧಾ ಬೋಧಕ್ಕೆ ಮೀರಿ ಬೆಳಗುವ ಸಮಸ್ವರೂಪ ಜ್ಯೋತಿ. ನಿರುಪಮ ಜ್ಯೋತಿ, ನಿರಾಲಂಬ ಜ್ಯೋತಿ, ಅಹಮಿಲ್ಲದ ಚಿದ್ಘನವ ಗುರುಘನವ ಮಾಡಿದವರು.

ಗುರುವ ಮಾಡಿ ಗುರು ಭಕ್ತನಾದನಯ್ಯ ಬಸವಣ್ಣನು : ಗುರುವೆಂಬುದು ಪರತತ್ವ ಪರಂಜ್ಯೋತಿ . ಎಂದು ಅದು ಅರಿಯ ಹೋಗಿ , ಪರತತ್ವದಲ್ಲಿ ಲೀಯವಾಗಿ ಪರಂಜ್ಯೋತಿಯಾಗಿ ಪ್ರಜ್ವಲಿಸಿದಾತ ಬಸವಣ್ಣ. ಬೋಧಾಬೋಧಕ್ಕೆ ಮೀರಿ ಬೆಳಗುವ ಸಮಪ್ರಕಾಶವೆ ಗುರುಘನವೆಂದು ಸಾರಿದ, ಗುರು ಘನವು ಬೋಧರೂಪವೂ ಅಲ್ಲ. ಅಬೋಧರೂಪವೂ ಅಲ್ಲ. ಇವೆರಡಕ್ಕೂ ಮೀರಿ ಬೆಳಗುವದರಿಂದ ನಿರುಪಮ ಜ್ಯೋತಿ . ಈ ಗುರುರೂಪಿ ನಿರುಪಮ ಜ್ಯೋತಿ ಶಿಷ್ಯನ ಅಬೋಧವ ಕಾಣಲಿಲ್ಲ ಅದನ್ನು ಕಳೆಯುವ ಬೋಧವು ಕಾಣಲಿಲ್ಲ . ಕಾಣದುದು ಘನವಾಗಿ ಕಂಡುದರಿಂದ ನಿರಾಲಂಬ, ಈ ನಿರಾಲಂಬ ಜ್ಯೋತಿಯೇ ಗುರುವ ಮಾಡಿ ತಾನು ಅದನರಿಯ ಹೋಗಿ ನಿರಾಲಂಬತ್ವದೋಳ್ ಲೀಯವಾದುದೆ ಗುರುಭಕ್ತಿಯ ಗುಟ್ಟು ಎಂದು ಚನ್ನಬಸವರಾಜದೇವರು ಬಸವರಸರ ಭಕ್ತಿಯ ಘನವ ಸ್ತುತಿಸಿದುದು .

ಪ್ರಾಣದ ಭ್ರಮೆಯ ಕಳೆದು , ಲಿಂಗವ ಮಾಡಿ ಲಿಂಗ ಭಕ್ತನಾದನಯ್ಯ ಬಸವಣ್ಣನು: ಪ್ರಾಣವದು ಭ್ರಮಾತ್ಮಕ ಶಬ್ದ ಪ್ರಾಣವೆಂಬುದು ಶ್ವಾಸ, ನಿಃಶ್ವಾಸ ಕ್ರಿಯೆ, ಅದರ ಗತಿಯ ನಾವು ವಿಚಾರ ಮಾಡಲು. ಅದು ಸ್ವಾಸ ಮೇಲೆ ಹೋಗುವಾಗ ಸೋ ಎಂದು , ತೆಳಗೆ ಇಳಿಯುವಾಗ ಹಂ ಎಂದು ಸಿದ್ಧವಾಗುವುದು. ಸೋಹಂ ಎಂಬುದು ನಾವು ವಿಚಾರ ಮಾಡಲು, ಸೋ ಎಂದರೆ ಅವನು ಹಂ ಎಂದರೆ ನಾನು ಎಂಬುದು ಸಿದ್ಧವಾಗುವುದು. ಪೂರ್ವದಲ್ಲಿ ಸೋ ಎಂದರೆ ಜ್ಞಾನಸ್ವರೂಪಿ ಲಿಂಗ, ಹಂ ಎಂದರೆ ಈಗಿದ್ದ ಜ್ಞಾನಸ್ವರೂಪ ಲಿಂಗ ತಾನೆ. ಲಿಂಗವು ಲಿಂಗವೆ, ಲಿಂಗದ ಹೊರ್ತಾಗಿ ಅನ್ಯತತ್ವವಿಲ್ಲವೆಂಬುದು ಸಿದ್ಧವಾಗುವದು . ಚೈತನ್ಯವು ಲಿಂಗವು ಶ್ವಾಸ ಪ್ರಸ್ವಾಸವೆನ್ನುವದು ಭ್ರಮಾತ್ಮಕ ಕಲ್ಪನೆ ಲಿಂಗ ಜ್ಞಾನವಿಲ್ಲದ್ದರಿಂದ ಅದು ಪ್ರಾಣವಾಗಿ ತೋರಿತ್ತು . ಲಿಂಗವೆಂಬ ಸಚ್ಚಿದಾನಂದ ನಿತ್ಯ ಪೂರ್ಣ ಅಖಂಡ ರೂಪಿ ತತ್ವದ ಜಾಗ್ರತವಾಗುವುದೆ ಇಲ್ಲದ ಸ್ವಾಸಕ್ರಿಯೆ ಇಲ್ಲವಾಯಿತ್ತು , ಇದ್ದ ನಿರಂತರವಾಗಿಹ ಮಂಗಳಮಯವು ಪ್ರಜ್ವಲಿಸಿತ್ತು .

ಬಸವರಸರು ಲಿಂಗ ನಿರಂತರ ಮಂಗಳಮಯವಾಗಿಹ ತತ್ವ. ಇದುವೆ ಸಕಲರ ಹೃದಯದಲ್ಲಿ ನ್ಯಸ್ತವಾಗಿಹ ನಿರಂತರ ಚೈತನ್ಯವು. ನಾದ ಬಿಂದು ಕಲಾತೀತ, ವಾಙ್ಮನೋತೀತವು. ಅವರ್ಣೀಯವು ಅರಿಯ ಹೋದವರಿಗೆ ತಾನೆ ಎಂದು ಸ್ವತಃ ಸಿದ್ದವಹುದು. ಇಂಥ ಅನುಪಮ ಲಿಂಗವ ಮಾಡಿ ಅದನರಿಯಹೋಗಿ ಘನಕ್ಕೆ ಘನನಾದುದೆ ತಾನು ಲಿಂಗ ಭಕ್ತನಾದುದಯ್ಯ .ಅಚಿಂತ್ಯ ಲಿಂಗವರಿಯ ಹೋಗಿ ತಾನು ಅದುವೆ ಆಗಿ ಶಬ್ದಮುಗ್ಧನಾಗಿ ತನು ನಷ್ಟ. ಮನ ನಷ್ಟ, ನೆನಹು ನಷ್ಟ, ಭಾವ ನಷ್ಟ, ಜ್ಞಾನ ನಷ್ಟವಾಗಿ ತಾನೆಂಬುದು ನಷ್ಟ ನೀನೆಂಬುದು ನಷ್ಟವಾಗಿ ನಿಃಶಬ್ದ ಬ್ರಹ್ಮದಲ್ಲಿ ಲೀಯವಾದನು ಎಂಬುದು ಲಿಂಗ ಭಕ್ತನೆಂದುದು.

ಸಂಸಾರ ಭ್ರಮವ ಕಳೆದು ಜಂಗಮವ ಮಾಡಿ ಜಂಗಮ ಭಕ್ತನಾದನಯ್ಯ ಬಸವಣ್ಣ: ನಿರುಪಾಧಿ ನಿರಾಲಂಬನಾಗಿಹ ಘನಮಹಿಮ ಬಸವರಸ. ಈ ಮಹಾಂತಂಗೆ ಉಪಾಧಿಯೆ? ಅವಲಂಬಿತನೆ? ಸೂರ್ಯನು ಅಮವಾಸಿಯ ಕಂಡಿರಬಹುದೆ? ಪೂರ್ಣಿಮಾಚಂದ್ರ ಕಾಣದಿರುವಲ್ಲಿ ಚಿತ್ಸೂರ್ಯನಾಗಿಹ ಶರಣಂಗೆ, ಅಖಂಡ ಭಾವರೂಪಿ ಪೂರ್ಣಭಾವವಾಗಿಹ, ಸಚ್ಚಿದಾನಂದ ರೂಪಿ ಪೂರ್ಣಿಮಾ ಚಂದ್ರ ಕಾಣದಿರುವಲ್ಲಿ , ಸಂಸಾರ ಭ್ರಮರೂಪಿ ಅಮವಾಸಿ ಕಾಣಬಹುದೆ? ಪರತತ್ವ ನಿಜ ಸಂಯುಕ್ತನಿಗೆ , ನಾನೆಂಬುದಿಲ್ಲ, ನೀನೆಂಬುದಿಲ್ಲ ಚಿದಹಮ್ಮು ಇಲ್ಲ, ದಾಸೋಹಂ ಇಲ್ಲ. ಇಲ್ಲ ಇಲ್ಲವೆಂಬುದು ಇಲ್ಲವಾದವಂಗೆ ಇಲ್ಲದ ಅತತ್ವವಾಗಿಹ, ತನು, ಇಂದ್ರಿ, ಮನ, ಬುದ್ಧಿ ಚಿತ್, ಅಹಂಕಾರ, ಇವುಗಳ ಕಾಣುವನೆಂತು. ಇವುಗಳ ಧರ್ಮಂಗಳಾದರೂ ಕಾಣಬಹುದೆ? ಭಾವಕ್ಕಗಮ್ಯವಾಗಿಹ ಘನವಂತನಿಗೆ ಸಂಸಾರ ಭ್ರಮವೂ ಇಲ್ಲ. ಏಕೆಂದರೆ ? ಸಂಸಾರ ಸತ್ಯವೆಂಬುದು ಅದು ಮಿಥ್ಯೆವೆಂಬುದಿಲ್ಲ. ಪರಮಾರ್ಥದ ಪರಿಣಾಮಿಯಾಗಿಹ ಸಹಜ ಸುಜ್ಞಾನಿ. ಅಲ್ಲಿ ಸಂಸಾರ ಭ್ರಮ ವೇತರದು, ಕರ್ತೃತ್ವ ಭೋಕ್ತೃತ್ವ ಶೋಕ ಮೋಹ ಸುಖ ದುಃಖ ಮಾನ ಅಪಮಾನ ಲಾಭ ಹಾನಿ ನಾನು ನನ್ನದೆಂಬ, ಅಹಂ ಮಮವೇತರದು ? ನಿಸ್ಸಂಗಿಗೆ ಸಂಗ ಸಂಯೋಗವೇತರದು, ನಿರಾಲಂಬನಿಗೆ ಆವುದರ ತಟ್ಟು ಆವುದರ ಮುಟ್ಟು , ಅವುದರ ಸಂಗ? ಇಲ್ಲದ ಉಪಾಧಿ. ಅವುಗಳ ಧರ್ಮಂಗಳು ಅವುಗಳ ಸಂಬಂಧ ಇಲ್ಲ ಮಾಡಿ ಇದ್ದ ತನ್ನ ಸ್ವಮಹಿಮವ ತನ್ನಿಂದ ತಾನೆ ನೋಡುವುದೆ ಸಂಸಾರ ಭ್ರಮವ ಕಳೆದು ಜಂಗಮವ ಮಾಡಿದುದು.

ಜಂಗಮವ ಮಾಡಿ ಜಂಗಮ ಭಕ್ತ ನಾದನಯ್ಯ ಬಸವಣ್ಣನು: ಜಂಗಮವೆಂಬುದು ಲಿಂಗ ಒಂದಾಗಿರ್ದ ಜಂಗಮ, ನಿರ್ನಾಮ ಜಂಗಮ, ನಿರ್ಲಿಖಿತ ಜಂಗಮ , ನಿರವಧಿ ಜಂಗಮ, ನಿಜೈಕ್ಯ ಜಂಗಮ . ಈ ಪರತತ್ವರೂಪಿ ಜಂಗಮವ ಮಾಡಿ ಜಂಗಮ ಭಕ್ತನಾದನಯ್ಯ .

ಸುಚೈತನ್ಯಕ್ಕೆ ನಿಜಚೈತನ್ಯ ಸಂಬಂಧ ಮಾಡಿ , ತನ್ನಿಂದ ತನ್ನಂ ನೋಡಿ ನೋಡದ ನೋಟವಾಗಿ ಕೂಡದ ಕೂಟವಾಗಿ ತನ್ನಿಂದಗಲದ ಅಚಿಂತ್ಯನಿಧಿಯಾಗಿ ಸುಖದೇಕರಸ ಸವಿಯುವದೆ ಜಂಗಮವರ ಮಾಡಿ ಜಂಗಮಭಕ್ತನಾದುದು .

ಈ ತ್ರಿವಿಧದ ಭ್ರಮೆಯ ತ್ರಿಕರಣದಲ್ಲಿ ಕಳೆದು ಕೂಡಲಚೆನ್ನಸಂಗಯ್ಯನಲ್ಲಿ ಲಿಂಗೈಕ್ಯನಾದನಯ್ಯ ಬಸವಣ್ಣನು : ಈ ತ್ರಿವಿಧದ ಮನವೆಂಬ ಭ್ರಮ , ಪ್ರಾಣವೆಂಬ ಭ್ರಮ , ಸಂಸಾರವೆಂಬ ಭ್ರಮವ ಗುರುಕರಣ, ಲಿಂಗಕರಣ, ಜಂಗಮ ಕರಣ ವೆಂಬ ಅರುವಿಂಗರುವಾಗಿಹ ಘನವ, ತನ್ನಿಂದ ನೋಡಿದ ತಕ್ಷಣ ತ್ರಿವಿಧ ಭ್ರಮ , ಈ ತ್ರಿಕರಣದಲ್ಲಿ ಕಾಣದಂತಾಗಿ ಕೂಡಲಚೆನ್ನಸಂಗಯ್ಯನಲ್ಲಿ ಗುರು ಲಿಂಗ ಜಂಗಮ ತತ್ವ ತಾನು ಒಂದಾದುದು. ನಾ ನೀನೆಂಬುದಕ್ಕೆ ತೆರೆಹಿಲ್ಲವಾದುದು, ಲಿಂಗೈಕ್ಯ ಭಕ್ತನ ಹಿರಿಮೆ ಎಂದು ಹೇಳಿಹರು .

125

ಲಿಂಗದ ಪೂರ್ವಾಶ್ರಯವ ಕಳೆಯ ಬಲ್ಲಾತನೆ ಭಕ್ತ
ಗುರುವಿನ ಪೂರ್ವಾಶ್ರಯವ ಕಳೆಯ ಬಲ್ಲಾತನೆ ಶಿಷ್ಯ
ಪ್ರಸಾದದ ಪೂರ್ವಾಶ್ರಯವ ಕಳೆಯ ಬಲ್ಲಾತನೆ ಪ್ರಸಾದಿ
ಇಂತೀ ತ್ರಿವಿಧದ ಪೂರ್ವಾಶ್ರಯವ ಕಳೆಯ ಬಲ್ಲಾತನೆ
ಕೂಡಲಸಂಗಯ್ಯನಲ್ಲಿ ಲಿಂಗೈಕ್ಯವು. **॥ 263 ॥**

ತಾತ್ಪರ್ಯ : ಈ ಭಕ್ತರಾರು, ಶಿಷ್ಯನಾರು, ಪ್ರಸಾದಿ ಆರು? ಇವರು ಲಿಂಗೈಕ್ಯರು ಅರಿದರಿದು ನೋಡಿದ ಭಕ್ತ, ಅರಿದರಿದ ಶಿಷ್ಯ ಅರಿದರಿದ ಪ್ರಸಾದಿ.

ಅರಿದರಿದು ನೋಡಿದುದೇನು,ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವ ಅರಿದರಿದು ನೋಡಿದ ಅರಿದರಿದು ನೋಡಿದ ಶಿಷ್ಯನಾರು? ತನ್ನನ್ನು ಗುರು ಘನನನ್ನು ಅರಿದರಿದು ನೋಡಿದ ಶಿಷ್ಯ .

ಪ್ರಸಾದವೆ ಗುರು , ಪ್ರಸಾದವೆ ಲಿಂಗ , ಪ್ರಸಾದವೆ ಜಂಗಮ , ಪ್ರಸಾದವೆ ಪರಾತ್ಪರ, ಪ್ರಸಾದವೆ ಪರಮಜ್ಞಾನ , ಪ್ರಸಾದವೆ ಪರಮಾಮೃತ , ಪ್ರಸಾದವೆ ವಾಙ್ಮನೋತೀತವೆಂದು , ಅರಿದರಿದು ನೋಡಿದ ಪ್ರಸಾದಿ . ಇವರು ಲಿಂಗ,ಗುರು,ಪ್ರಸಾದದ ಪೂರ್ವಾಶ್ರಯ ಕಳೆಯ ಬಲ್ಲಾತನಾದುದರಿಂದ, ಲಿಂಗದ ಪೂರ್ವಾಶ್ರಯವ ಕಳೆಯ ಬಲ್ಲಾತನೆ ಭಕ್ತನೆಂದು, ಗುರುವಿನ ಪೂರ್ವಾಶ್ರಯ ಕಳೆಯ ಬಲ್ಲಾತನೆ ಶಿಷ್ಯನೆಂದು, ಪ್ರಸಾದದ ಪೂರ್ವಾಶ್ರಯ ಕಳೆಯ ಬಲಾತನೆ ಪ್ರಸಾದಿ ಎಂದು ಹೇಳಿಹರು.

ಎಲ್ಲಿಯವರೆಗೆ ಪೂರ್ವಾಶ್ರಯವುಳ್ಳವನಾಗಿದ್ದನು ಅಲ್ಲಿಯವರೆಗೆ ಅಪೂರ್ವಿಕ ಭಕ್ತನಾಗನು ಪೂರ್ವಾಶ್ರಯವುಳ್ಳ ಭಕ್ತ . ಪೂಜ್ಯ ಪೂಜಕ ಭಾವದಿಂದುಕ್ತನು. ಭೇದ ಜ್ಞಾನಿಯು,ನೆನಹುಳ್ಳವನು.ಲಿಂಗವು ಗುರುವಿನಿಂದ ಪಡೆದು ಕೊಂಡುದಾಗಿದೆ ತಾನು ಅದನ್ನು ಪಡೆದವನಾಗಿ ಹಸು, ಲಿಂಗವು ಘನವಾಗಿದೆ. ತಾನು ಕಿರಿದಾಗಿಹನು,ಲಿಂಗವು ಫಲ ಪದವ ಕೊಡುವದಾಗಿತ್ತು . ತಾನು ಪಡೆಯುವವನಾಗಿದ್ದನು ಲಿಂಗವು ಪೂಜ್ಯವಸ್ತುವಾಗಿತ್ತು ತಾನು ಪೂಜಿಸುವವನಾಗಿದ್ದ .

ಗುರು ಘನವು ಲಿಂಗವೆಂಬುದು ಸಚ್ಚಿದಾನಂದ ನಿತ್ಯ , ಪೂರ್ಣ ಅರು ಸ್ವರೂಪ . ಇದು ಅರುವಿಂಗರುವು .ಇದನ್ನು ಹಲುಬ ಹೋಗಬೇಡ , ಅರಿದರಿದು ನೋಡು ; ಆಗ ಇದು ನಿನಗಿಂತ ಅನ್ಯವಲ್ಲ. ನೀನೆ ನಿನ್ನನ್ನು ನೀನು ಅರಿ ಎಂದು ಗುರು ಘನನು ಲಿಂಗ ಸಕೀಲ ಸಂಯೋಗ ವರ್ಮಸ್ಥಲ ಅರಿಯುವ ಅನುವು ತಿಳಿಸಿಕೊಡಲು , ತಾನು ಅಕಲ್ಪಿತ ಘನನಾದ ಲಿಂಗವರಿತು ಲಿಂಗವಾದ ನಿಃಶಬ್ದ ಬ್ರಹ್ಮವೆ ತಾನಾದ , ತನ್ನ ಸ್ವಮಹಿಮೆಯು ತನ್ನಿಂದ ತನಗದು ವೇದ್ಯವಾಯಿತ್ತು. ಇದು ಲಿಂಗದ ಪೂರ್ವಾಶ್ರಯವ ಕಳೆಯಬಲ್ಲ ರಹಸ್ಯವು . ಇದು ಕಾರಣ ಲಿಂಗದ ಪೂರ್ವಾಶ್ರಯವ ಕಳೆಯಬಲ್ಲಾತನೆ ಭಕ್ತನೆಂದು ಹೇಳಿದ್ದಾರೆ.

ಗುರುವಿನ ಪೂರ್ವಾಶ್ರಯವ ಕಳೆಯಬಲ್ಲಾತ ಶಿಷ್ಯ : ಈ ಶಿಷ್ಯ ಆರು? ಚೆನ್ನಬಸವಣ್ಣ ಗುರು ಘನವ ಚಾರಿತ್ರ ಪುರುಷನನ್ನಾಗಿ ಕಾಣಲಿಲ್ಲ . ತಪಸ್ವಿಯಾಗಿ, ತ್ಯಾಗಿಯಾಗಿ, ಯೋಗಿಯಾಗಿ ಕಾಣಲಿಲ್ಲ ಬೋಧಾಮೂರ್ತಿಯ ಮಾಡಲಿಲ್ಲ, ಗುರು ಲಿಂಗವ ಮಾಡಿದ, ಬೋದಕ್ಕೆ ಬೆಳಗುವ ಜ್ಯೋತಿಯಾಗಿ ಕಂಡ ತಾನು ಜ್ಯೋತಿಯಲೊದಗಿದ ಜ್ಯೋತಿಯಾದ. ಅರುವಿಂಗರುವಾಗಿ ಅರಿದ , ಮರುವರುವಿಂಗೆ ಮೀರಿದ ಘನನಾಗಿ ನೋಡಿದ ಘನಮಹಿಮ ಚೆನ್ನಬಸವಣ್ಣ. ಈ ನಿರಹಂಭಾವ ಅದಾರಿಗೆ? ಈ ಸುಜ್ಞಾನ ಅದಾರಿಗೆ! ಕಲ್ಪಿತರಾಗಿ ಕಾಣುವ ಗುರು ಶಿಷ್ಯರು ಸಿಕ್ಕುವುದು ವಿರಳ, ಸ್ವರೂಪಾನು ಸಂದಾನ ಮಾಡುವ

ಗುರು ಶಿಷ್ಯರು ಸಿಕ್ಕುತ್ತಾರೆ. ಸಹಜ, ಅಜ, ಅಚಿಂತ್ಯ ಕಂಡವರು ಸಿಕ್ಕುವದು ವಿರಳ, ಗುರು ಕಂಡವರು ಸಿಕ್ಕುತ್ತಾರೆ. ಸಹಜ, ಅಜ, ಅಚಿಂತ್ಯ ಕಂಡವರು ಸಿಕ್ಕುವುದು ವಿರಳ. ಗುರು ಕಂಡವರು ಸಿಕ್ಕುವರು, ಶಿಷ್ಯ ಕಂಡವರು ಸಿಕ್ಕುವರು, ತನ್ನ ಕಂಡವರು ಸಿಕ್ಕುವುದು ವಿರಳ. ದ್ವೈತ ಭಾವ ಕಂಡವರುಂಟು, ಅದ್ವೈತ ಭಾವಗಳು ಉಂಟು, ದ್ವೈತಾ ದ್ವೈತ ವಿವರ್ಜಿತವಾದ ಸಯಸ್ವರೂಪವರಿತ ಗುರುಶಿಷ್ಯರು ಶಿಕ್ಕುವುದು ವಿರಳ. ಅಲ್ಲಿ ಗುರು ಶಿಷ್ಯ ಭಾವಕ್ಕಿಂಬಿಲ್ಲ, ಮರವರುವಿಗಿಂಬಿಲ್ಲ ನಿಸ್ಸೀಮವು; ನಿಸ್ಸೀಮವು ಸೀಮಿತವಾಗಬಹುದೆ? ಗುರು ಶಿಷ್ಯರಾಗುವದು ಸಹಜವಾಗಿದೆ. ಗುರುವಿನ ಪೂರ್ವಾಶ್ರಯ ಕಾಣದಿರುವುದು ಕಠಿಣವಾಗಿದೆ. ಕಲ್ಪಿತನಾಗಿಹ ಶಿಷ್ಯ ಗುರುವಿನ ಪೂರ್ವಾಶ್ರಯ ಕಾಣದಿರುವುದು ಅಸಾಧ್ಯವಾಗಿದೆ. ಅಲ್ಲಿ ಬೋಧ ಅಬೋಧ ದೃಷ್ಠಿ ಅದೆ. ಒಬ್ಬನು ಅಬೋಧ ದೃಷ್ಠಿಯುಳ್ಳವನಾಗಿಹನು, ಮತ್ತೊಬ್ಬನು ಬೋಧ ದೃಷ್ಠಿಯುಳ್ಳವನಾಗಿಹನು. ಒಬ್ಬನು ಮರವುಳ್ಳವನು, ಒಬ್ಬನು ಅರುವುಳ್ಳವನು. ಇಲ್ಲಿ ಒಬ್ಬನು ಘನವಂತನು, ಇನ್ನೊಬ್ಬನು ಕೀಳು ಆಗಿಹನು. ಇಲ್ಲಿ ಭೇದದೃಷ್ಠಿ, ಭೇದಜ್ಞಾನ ಪ್ರಧಾನವಾಗಿರುವುದರಿಂದ ಗುರುವಿನ ಪೂರ್ವಾಶ್ರಯ ಕಳೆಯುವದು ಅಸಾಧ್ಯ ಇದು ಕಾರಣ ಬೋಧಕ್ಕೂ ಅಬೋಧಕ್ಕೂ ಮೀರಿದ ನಿರಂತರ ಸ್ವರೂಪ ತಿಳಿವುಡೆ ಗುರುಶಿಷ್ಯನು ಸಮಪ್ರಕಾಶ ಮಾನವಾದ ತತ್ವ ತಿಳಿದವರು ಅವರೆ ಅಚಿಂತ್ಯಾತ್ಮರು.

ಅರಿದರುಹಿಸಿ ಕೊಂಬುದಕ್ಕೂ ಮೀರಿದ ಘನದಿರುವಿನ ಅರುವುಳ್ಳವರು , ಅರುವಿಂಗರುವಾಗಿಹ ಸ್ವಮಹಿಮನಾದುದರಿಂದ ಗುರುವಿನ ಪೂರ್ವಾಶ್ರಯವಾಗಿಹ ಬೋಧದೆಶೆ ಕೆಡಿಸ ಬಲ್ಲವನು , ಗುರು ಘನನ್ನು ಚಾರಿತ್ರ ದೃಷ್ಠಿಯಿಂದ ಕಾಣದ್ದರಿಂದ, ಗುರು, ಲಿಂಗ ಘನವೆಂದು ತಿಳಿದು ಲಿಂಗ ಒಂದಾಗಿರ್ದ ನಿರ್ಲಿಖಿತ ಜಂಗಮವೆಂದು ತಿಳಿದು ; ಗುರುದೇವನು ಕಾಯಧಾರಿಯಾಗನು, ಬೋಧಾಮೂರ್ತಿಯಾಗನು , ನಿರಂತರವಾಗಿಹ ಮಂಗಳಮಯ ಜ್ಯೋತಿ, ಸ್ವಯಂಜ್ಯೋತಿ, ನುಡಿದು ನಿಃಶಬ್ದ ಘನವಾಗಿದ್ದ ಘನ ಜ್ಯೋತಿ ಎಂದು ತಿಳಿದುದರಿಂದ ಗುರುವಿನ ಪೂರ್ವಾಶ್ರಯವ ಕಳೆಯಬಲ್ಲಾತ ಶಿಷ್ಯನೆಂದು ಹೇಳಿಹರು.

ಪ್ರಸಾದದ ಪೂರ್ವಾಶ್ರಯವ ಕಳೆಯ ಬಲ್ಲಾತನೆ ಪ್ರಸಾದಿ ಎಂದು ಹೇಳಿದಾಗ ಪ್ರಸಾದದ ವಿಷಯದಲ್ಲಿ ಬಹು ಜನರು ಬಹು ರೀತಿಯಲ್ಲಿ ತಿಳಿದುದು ಕಂಡು ಬರುತ್ತದೆ. ಕೆಲವು ಕ್ರಿಯಾ ನಿಷ್ಠರು, ಪ್ರಾಸದವದು, ಪೂಜಾಲಿಂಗಕ್ಕೆ ನೈವೇಧ್ಯವ ಮಾಡುವದೆ ಪ್ರಸಾದವೆಂದು, ಅದು ಲಿಂಗ ಪ್ರಾಸಾದವೆಂದು ತಿಳಿದ ಬಹು ಜನರು ಇರುವರು. ಅದನ್ನೆ ಶುದ್ಧ ಪ್ರಸಾದವೆಂದು ಆ ಪ್ರಸಾದ ಮಾಡಲು ಒಳ್ಳೆ ರುಚಿಯಾಗಿಹ ತುಪ್ಪ, ಹಾಲು, ಗೋದಿಹಿಟ್ಟು, ಬಾದಾಮಿ, ದ್ರಾಕ್ಷಿ, ವಾಡಂಬಿಗಳಲ್ಲಿ ಪದಾರ್ಥವ ಮಾಡಿ ಅದಕ್ಕೆ ಶುದ್ಧ ಪ್ರಸಾದವೆಂದು ಪಂಚಾಮೃತವೆಂದು ಲಿಂಗಯ್ಯನಿಗೆ ಅರ್ಪಿಸಿ . ಅದು ಲಿಂಗ ಪ್ರಸಾದವೆಂದು ಭಾವಿಸಿ ತೆಗೆದುಕೊಳ್ಳುವ ಭಾವಿಕರು ಬಹುವಾಗಿ ಉಂಟು . ಹೀಗಾಗಿ ಶುದ್ಧಜ್ಞಾನ, ಸಿದ್ಧ ಜ್ಞಾನ, ಪ್ರಸಿದ್ಧ ಜ್ಞಾನ ದರುವು ತಿಳಿಯದಂತಾಗಿದೆ. ಪ್ರಸಾದವೆಂಬುದು ಪರಮ ಜ್ಞಾನ. ಪರಮಾನಂದ, ಜ್ಞಾನಾನಂದ, ಜ್ಞಾನಾಮೃತ. ಅದು ಶುದ್ಧವು ಅಹುದು, ಸಿದ್ಧವು ಅಹುದು, ಪ್ರಸಿದ್ಧವು ಅಹುದು. ಈ ರಹಸ್ಯವ ತಿಳಿಸಿದಾತ ಚೆನ್ನಬಸವಣ್ಣ. ಇದನ್ನು ಅರಿದರಿದು ನೋಡಿದವರು ಅತಿ ವಿರಳವಾಗಿಹರು. ಆರು ಅರಿದರಿದು ನೋಡಿಹರು ಅವರಿಗೆ ಪ್ರಸಾದವದು ವಾಙ್ಮನೋತೀತ ತೆರಹಿಲ್ಲದ ಘನವಾಗಿ ಪ್ರಜ್ವಲಿಸುವುದರಿಂದ ಪ್ರಸಾದದ ಪೂರ್ವಾಶ್ರಯ ಕಳೆಯಬಲ್ಲಾತ ಪ್ರಸಾದಿ ಎಂದು ಹೇಳಿಹರು.

ಈ ತ್ರಿವಿಧದ ಪೂರ್ವಾಶ್ರಯ ಕಳೆಯಬಲ್ಲಾತನೆ ಕೂಡಲಚೆನ್ನ ಸಂಗಯ್ಯನಲ್ಲಿ ಲಿಂಗೈಕ್ಯವು.

ತ್ರಿವಿಧದ ಪೂರ್ವಾಶ್ರಯ ಕಳೆಯಬಲ್ಲ ಮಹಾಂತನೆಂದರೆ ತನ್ನ ತಾನರಿತ ಮಹಾಂತ. ನುಡಿಗೆಡೆಗೊಡದ ಘನವೆ ತಾನಾಗಿಹ ಸ್ವಮಹಿಮ. ಈ ಮಹಾಂತ ಲಿಂಗ, ಲಿಂಗ, ಎನಲಿಲ್ಲ ಲಿಂಗವರಿತು ಲಿಂಗವಾಗಿಹ ಅಪ್ರತಿಮ. ಗುರು ಗುರು ಎನಲಿಲ್ಲ, ಗುರು ಸಂಜ್ಞೆಯ ಅರಿತು ಗುರು ಲಿಂವಾಗಿ ಕಂಡ ಪರಮಗುರ. ಪ್ರಸಾದವರಿತು ನಾ ನೀನೆಂಬುದಕ್ಕೂ ತೆರೆಹಿಲ್ಲದ ಮಹದಿರುವಾಗಿಹ ಪರಮಜ್ಞಾನಿ ಯಾದುದರಿಂದ ಪೂರ್ವಾಶ್ರಯ ಕಳೆಯಬಲ್ಲಾತ ಕೂಡಲಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವೆಂದು ಹೇಳಿಹರು.

126

ಅರಿದೆವೆಂಬವನ ಅರಿವೆ ನುಂಗಿತ್ತಯ್ಯ.
ಮರದೆನೆಂಬವನ ಮರವೆ ನುಂಗಿತ್ತಯ್ಯ
ಇನ್ನೇನಿದ್ದುದಯ್ಯ ಅವಧಾನ ಗೆಟ್ಟು ನಡೆಯದನ್ನಕ್ಕ ಅವಧಾನ ಗೆಟ್ಟು
ನುಡಿಯದನ್ನಕ್ಕ ಅರುವಿನ ಮರಹಿನ ಕುರುಹು ತಾನಲ್ಲ
ಕೂಡಲ ಚೆನ್ನಸಂಗಾ ಲಿಂಗೈಕ್ಯವು. **॥ 752 ॥**

ತಾತ್ಪರ್ಯ : ಅರಿದೆವೆಂಬವನ ಅರಿವೆ ನುಂಗಿತ್ತಯ್ಯ ಮರದೆನೆಂಬವನ ಮರವೆ ನುಂಗಿತಯ್ಯ: ಈ ಲಿಂಗೈಕ್ಯ ನಿಲವು ಆದಾರಿಗೆ! ಅರಿದೆ ನೆಂಬುವವನು ಏನನ್ನು ಅರಿದು ಅರಿದೆನೆನ್ನುತ್ತಾನೆ. ಮರದೆ ನೆಂಬುವವನು ಏನನ್ನು ಮರೆದು ಮರದೆನೆನ್ನುತ್ತಾನೆ.

ಅರಿದೆ ಮರದೆನೆನ್ನುವವನು ತನ್ನನ್ನು ತಾನು ಅರಿದವನೆನ್ನಬೇಕೆ? ಅರಿದವನೆಂದಲ್ಲಿ ತಾನು ದೃಶ್ಯನಾದನೆ? ದೃಶ್ಯನಾದಲ್ಲಿ ಅರಿಯಬಹುದು. ತಾನು ದೃಶ್ಯ, ದೃಕ್ ಎನ್ನಲು ಬಾರದ ಘನ. ಏಕೆಂದರೆ ದೃಶ್ಯ ದೃಕ್ ಎಂಬುದು ತನ್ನಿಂದ ಸಿದ್ಧವಾಗುವಲ್ಲಿ ತನ್ನನ್ನು ದೃಶ್ಯವಾಗಿ ಕಂಡುದು ಹೇಗೆ? ದೃಕ್ ಎಂದು ತಿಳಿದುದು ಹೇಗೆ? ಅರಿದರುಹಿಸಿ ಕೊಂಬುದಕ್ಕೆ ಮೀರಿದ ಘನ ತನ್ನನ್ನು ಅರಿವುದಾವುದು? ಅರಿಯಬಾರದ ಘನವೆ ತಾನಿರುವಲ್ಲಿ ,ತನ್ನನ್ನು ಅರಿದೆನೆಂದು ಹೇಳಿದುದು ಹೇಗೆ? ಅರುವಿಂಗರುವಾಗಿಹ ತಾನು ಶಬ್ದಮುಗ್ಧ ನೋಡಾ. ಪರಬ್ರಹ್ಮವದು ಪರಬ್ರಹ್ಮವೆಂದು ನುಡಿದು ಹೇಳಲಿಲ್ಲ. ಜ್ಯೋತಿ ಅದು ತಾನು ಜ್ಯೋತಿ ಎನಲಿಲ್ಲ. ಅರುವರಿತವನು ಅರಿಯದರುವು ತಾನೆ ಏನೆಂದೆನಲಿಲ್ಲದ ಅರುವು. ನಿಃಶಬ್ದ ಬ್ರಹ್ಮ ತಾನೆ. ಮೂಕನಾದವನು ಮೂಕನೆಂದು ನುಡಿದು ಹೇಳಬಹುದೆ? ಮರವರುವಿಂಗೆ ಮೀರಿದ ಘನ ತಾನೆಂದರಿತವನು ಅರಿದೆನೆನಬಹುದೆ? ಅರಿದೆನೆಂದಲ್ಲಿಯೆ ಮರದೆನೆಂಬುದು ಇದೆ. ಮರದೆನೆಂದಲ್ಲಿಯೆ ಅರಿದುದು ಇದೆ. ಅರಿದೆನೆಂಬವನ ಅರಿವೆ ನುಂಗಿತಯ್ಯ. ಮರದೆನೆಂದವನ ಮರವೆ ನುಂಗಿತ್ತಯ್ಯ. ಈ ಅರುವು ಮರವು ಕಲ್ಪಿತ ಪುರುಷನ ಜ್ಞಾನಾ ಜ್ಞಾನಂಗಳು. ಇವುಗಳೆ ಇವನಿಗೆ ಪ್ರಧಾನವಾಗಿ ಅರಿದೆನೆಂಬುವನ ಚಿದಹಮ್ಮು ನುಂಗಿತ್ತು. ಮರೆದೆನೆಂಬವನ ಅಜ್ಞಾನವನುಂಗಿ ಅಹಮಿಲ್ಲದ ಚಿದ್ಘನವ ತಿಳಿಯದಂತೆ ಮಾಡಿ ನಿಜದರುವಿನಿಂದ ವಂಚಕನಾಗಿ ತನ್ನ ಸ್ವಮಹಿಮೆಯು ಪ್ರಜ್ವಲಿಸದಂತಾಯಿತ್ತು. ಇದಲ್ಲದೆ ಈ ಚಿದಹಮ್ಮು ಅಕಲ್ಪಿತ ಘನದಿರುವಿನ ಅರುವಾಗದಂತಾಗಿ, ಕಲ್ಪಿತ ಪುರುಷನೆಂದೆನಿಸಿ ಹಾಳು ಮಾಡಿತ್ತು. ಅಚಿಂತ್ಯತ್ವ ತಿಳಿಯದಂತಾಗಿ ಚಿಂತನಕ್ಕೀಡು ಮಾಡಿತ್ತು.

ಅರಿದೆನೆಂಬುವವನನ್ನೆ ಈ ಅರುವಿನ ಅಹಂಕಾರ ತನ್ನ ಅರಿಯದರುವಿನ ನಿಜಪದದಿಂದ ದೂರು ಮಾಡಿರುವಲ್ಲಿ ಮರವು ಹೇಳಿ ಕೇಳಿ ಇದರ ಅಹಂಕಾರಿಯಾದಲ್ಲಿ ಕೆಟ್ಟಕೇಡಿಂಗೆ ಕಡೆಯಿಲ್ಲ. ಆಶ್ಚರ್ಯ, ನಿರಂತರವಾಗಿಹ ಮಂಗಳಮಯ ಚಿನ್ಮಯ ತಾನಿದ್ದು, ಅರಿದೆನೆಂಬುದು ಆಶ್ಚರ್ಯವು.

ಮರೆದೆನೆಂಬುದು ಆಶ್ಚರ್ಯವು, ಏಕೆಂದರೆ ನಿರಂತರವಾಗಿಹ ಮಂಗಳಮಯ ತಾನೊಂದೆ ಇರುವಲ್ಲಿ ತನ್ನ ಅರಿಯಲು ಇನ್ನೊಂದು ಅರುವು ಇದೆಯಾ? ಅರುವಿಂಗರುವಾದುದನ್ನು ಅದನ್ನಾವ ಅರುವಿನಿಂದ ಅರಿಯುವುದು. ವಾಙ್ಮನಕ್ಕೊಳ ಪಡಬಹುದೆ? ಅಕಲ್ಪಿತ ಘನವು ಕಲ್ಪಿತವಾಗುವದದೆಂತು ಅದ್ವಿತೀಯವು ನುಡಿಗೊಳಪಡಬಹುದೆ? ನುಡಿಗೊಳ ಪಡದಿದ್ದಲ್ಲಿ ಅರಿದೆನೆಂಬುದು ಹೇಗೆ? ಮರದೆನೆಂಬುದು ಹೇಗೆ?

ಜ್ಞಾನಾಜ್ಞಾನ ದಿಂದುಕ್ತರಾದವರೆಲ್ಲರು ಶಬ್ದ ಸಂಭ್ರಮದವರು. ನಿಃಶಬ್ದವೇಧಿಸದವರು ಇದು ಕಾರಣ ಅರಿದೆನೆಂಬುವನನ್ನು ಅರಿವೆ ನುಂಗಿತ್ತಯ್ಯ ಮರದೆನೆಂಬುವವನ ಮರವೆ ನುಂಗಿತ್ತಯ್ಯ.

ಇನ್ನೇನಿದ್ದುದಯ್ಯ : ಕಲ್ಪಿತ ಪುರುಷ ಮರವರುವುಳ್ಳವನಾಗಿ ಮರದೆನೆಂದು ಮರವುನುಂಗಿತು ಮರವು ಬಹು ಕೆಟ್ಟದು ಹಾನಿಕಾರಕ . ಇದು ಅಮವಾಸಿ ಕತ್ತಲು . ಏನೊಂದು ತಿಳಿಯಗೊಡದಂತೆ ಮಾಡುವ ಅಜ್ಞಾನ . ಅನಂತ ಜನ್ಮಂಗಳಿಗೀಡುಮಾಡುವ ವಿಭ್ರಮ . ಇದು ಶತೃವೆಂದು ತಿಳಿದು ಅರುವಿನ ಅಹಂಭಾವಿಯಾದ. ಅದು ಕೂಡಾ ಅಕಲ್ಪಿತ ಘನದಿರುವು ಪ್ರಜ್ವಲಿಸದೆ, ಕಲ್ಪಿತಪುರುಷನ ಮಾಡಿ ಅರಿದೆನೆಂಬುದರಲ್ಲಿಯೆ ಸರಿ ಹೋದಲ್ಲಿ ಇನ್ನೇನಿದ್ದುದಯ್ಯಾ, ನಿಜದಿರುವುಳ್ಳವನಾಗಲು ಇನ್ನೇನಿದ್ದುದಯ್ಯಾ ಎಂದು ಹೇಳಿಹರು.

ಅವಧಾನ ಗೆಟ್ಟು ನುಡಿಯದನ್ನಕ್ಕ ; ಅವಧಾನ ಗೆಟ್ಟು ನಡೆಯದನ್ನಕ್ಕ, ಅರುವಿನ ಮರಹಿನ ಕುರುಹು ತಾನಲ್ಲ , ಕೂಡಲಚೆನ್ನ ಸಂಗಯ್ಯನಲ್ಲಿ ಲಿಂಗೈಕ್ಯವು: ಅರಿದೆನೆಂಬ ಎಚ್ಚರ ಕೆಡಬೇಕು. ಮರದೆನೆಂಬ ಎಚ್ಚರವು ಕೆಡಬೇಕು. ಈ ಮರವರುವಿನಿಂದುಕ್ತವಾದ ಅರುವು, ನಿಜವಾದ ಅರುವಲ್ಲ. ನಿಜ ಜ್ಞಾನವಲ್ಲ. ನಿಜದೆಚ್ಚರವಲ್ಲ, ಎಚ್ಚರದ ಎಚ್ಚರ ಇದು ನಿರಂತರ ಈ ಎಚ್ಚರವಾದಲ್ಲಿ ಮರದೆನೆಂಬ ಮರವು ಕೆಟ್ಟಿದೆ. ಅರಿದೆನೆಂಬ ಅರುವು ಕೆಟ್ಟಿದೆ, ನಾಹಂ ಕೆಟ್ಟಿದೆ, ಕೋಹಂ ಕೆಟ್ಟಿದೆ, ಸೋಹಂ ಕೆಟ್ಟಿದೆ, ಚಿದಹಂ ಕೆಟ್ಟಿದೆ ಇದು ಅವಧಾನಗೆಟ್ಟು ನಡೆದ ಪರಿ. ಅವಧಾನಗೆಟ್ಟು ನುಡಿದ ಪರಿ ಇಲ್ಲಿ ನಿರಂತರವಾಗಿಹ ಮಂಗಳಮಯ ತಾನೊಂದು ಇದ್ದುದು. ತಾನು ಶಬ್ದಕ್ಕೆ ತೆರೆಹಿಲ್ಲದಂತಾಗಿ ಇದ್ದುದು ಇದು ತನ್ನ ಎಚ್ಚರ ನಿರಂತರ . ನಿರಂತರವಾದುದು ನಿರಂತರವೆನಲಿಲ್ಲ . ಎಚ್ಚರವದು ಎಚ್ಚರವೆನಲಿಲ್ಲ. ಅರುವಿಂಗರವು ಏನೆಂದೆನಲಿಲ್ಲದ ಅರಿವು , ತಾನೆ ತಾನಾದುದು ನುಡಿಗೆಡೆಯಿಲ್ಲ, ಶಬ್ದಮೀಸಲು ಉಸರಿದರದಕ್ಕದೆ ಕೊರತೆ, ತಾನು ಏನೊಂದಾಗದ ಘನನಾದ್ದರಿಂದ ಅರುವಿನ ಮರವಿನ ಕುರುಹು ತಾನಲ್ಲ, ತಾನು ವಾಙ್ಮನಕ್ಕೆ ಬಾರದ ತನ್ನಂ ಅರಿತು ಅಚಲಾನಂದಮಯನಾದ್ದರಿಂದ ಕೂಡಲಚೆನ್ನ ಸಂಗಯ್ಯನಲ್ಲಿ ಲಿಂಗೈಕ್ಯನೆಂದು ಹೇಳಿಹರು.

127

ಗುರು, ಲಿಂಗ, ಜಂಗಮವೆಂಬ ಭೇದವನೆ ಕಳೆದು
ಗುರು ಲಿಂಗವ ಏಕವ ಮಾಡಿ ತೋರಿದನಾಗಿ
ತನು ಮನ ಪ್ರಾಣ ಮೊದಲಾಗಿಪ್ಪ
ಕರಣೇಂದ್ರಿಯಂಗಳ ಸುಖಂಗಳನ್ನು ಲಿಂಗಕ್ಕೆ ಕೊಟ್ಟು
ಅದ ಬದಿಗೊತ್ತಿ ಬಿಚ್ಚಿ ಬೇರೆ ಮಾಡ
ಕೂಡಲ ಚೆನ್ನಸಂಗಯ್ಯ ಲಿಂಗೈಕ್ಯವು. ॥ 325 ॥

ತಾತ್ಪರ್ಯ: ಗುರು ಲಿಂಗ ಜಂಗಮವೆಂಬ ಬೇಧವನೆ ಕಳೆದು ಗುರು-ಲಿಂಗ ಏಕವ ಮಾಡಿ ತೋರಿದನಾಗಿ: ಗುರು ಲಿಂಗ ಜಂಗಮವೆಂಬ ಭೇದವನೆ ಕಳೆದವರಾರು? ಗುರುಲಿಂಗ ಏಕವ ಮಾಡಿ

ತೋರಿದವರಾರು? ಗುರು ಲಿಂಗ ಜಂಗಮ ಬೇರೆಂದು ಭೇದವ ಮಾಡಿದವರಾರು? ಗುರು ಲಿಂಗ ಜಂಗಮದ ಪೂರ್ವಾಶ್ರಯ ನೋಡಿದವರು. ಇವರು, ಗುರುಬೇರೆ, ಲಿಂಗ ಬೇರೆ, ಜಂಗಮ ಬೇರೆಂದು ಭೇದ ಮಾಡಿದವರು. ಗುರುರೂಪ ಬೋಧ ರೂಪನೆಂದು ತಿಳಿದವರು. ಲಿಂಗವು ಕುರುಹುಳ್ಳದ್ದಾಗಿ ಕಂಡವರು. ಜಂಗಮವನ್ನು ಅದು ಒಂದು ವ್ಯಕ್ತಿಯೆಂದು ಜಾತಿಗೆ ಹೋಲಿಸಿ ಆ ಜಾತಿಯುಳ್ಳವರೆಲ್ಲ ಜಂಗಮರೆಂದು ಕಂಡವರು. ಇವರದು ಭೇದಜ್ಞಾನದಿಂದುಕ್ತವಾದುದರಿಂದ ವಿಷಮ ದೃಷ್ಠಿಯುಳ್ಳದು, ಇದು ಆವರಣದಿಂದುಕ್ತವಾದ ದೃಷ್ಠಿ.

ಗುರು ಲಿಂಗ ಜಂಗಮವೆಂಬ ಭೇದವನೆ ಕಳೆದವರಾರು? ಗುರು ಘನವ ಬೋಧ ರೂಪವೆಂದು ತಿಳಿಯದೆ ಬೋಧಾ ಬೋಧವ ಕಾಣದ ಸಮ ಪ್ರಕಾಶ, ಅಖಂಡ ಜ್ಯೋತಿ, ಅನುಪಮ ಜ್ಯೋತಿ ಎಂದು ತಿಳಿದವರು. ಲಿಂಗವ ಕುರುಹಾಗಿ ಕಾಣದೆ ಪೂಜ್ಯ ಪೂಜಕಕ್ಕೂ ನಿಲುಕದ, ಚಿಂತನಕ್ಕೆಡೆಗೊಡದ ಸಹಜ, ಅಜ, ಅಚಿಂತ್ಯವು ಲಿಂಗವೆಂದು ತಿಳಿದವರು. ಜಂಗಮವದು ಲಿಂಗ ಒಂದಾಗಿರ್ದ ಜಂಗಮ ಘನವೆಂಬ ನೆನಹು ನಿರ್ಣಯ ನಿಷ್ಪತ್ತಿಯಾಗಿ ನಿರಾಳ ನಿರಾಲಂಬತ್ವ ನೆಲೆಗೊಂಡುದು ಜಂಗಮ ಘನವೆಂದು ತಿಳಿದವರು. ಇವರು ಲಿಂಗ ಜಂಗಮ ಗುರುವೆಂಬ ಭೇದವ ಕಳೆದವರು.

ಗುರುಲಿಂಗವ ಏಕವ ಮಾಡಿ ತೋರಿದನಾಗಿ : ಇವರಾರು? ಈ ಮಹಾಮಹಿಮ ಬೋಧಾ ಬೋಧವ ಕಾಣದ ಗುರುಲಿಂಗವದುವೆ ಸಮಪ್ರಕಾಶವಾಗಿಹ ಅಖಂಡ ಜ್ಯೋತಿ. ಅನುಪಮ ಜ್ಯೋತಿಯಾದುದದುವೆ. ಎಲ್ಲೆಲ್ಲೂ ಲಿಂಗವಾಗಿ ನೆಲೆಗೊಂಡ ಆವಾವ ಚಿಂತನಕ್ಕೆಡೆಗೊಡದ ಅಚಿಂತ್ಯ ಜ್ಯೋತಿ. ಈ ಪರಂಜ್ಯೋತಿಯಾದುದದುವೆ ಭಾವಕ್ಕಗಮ್ಯವಾಗಿಹ ನಿಷ್ಪತ್ತಿ ನಿರಾಳವನೊಳಗೊಂಡ ಜಂಗಮ ಲಿಂಗ. ಇದು ಚರಿಸಿ ಜಂಗಮವೆನಿಸಿದರೂ ಅಚಲಿತ ಲಿಂಗವು ಆಗಿಹ ನಿರಂತರವಾಗಿಹ ಮಂಗಳಮಯ ಜ್ಯೋತಿ ಅದುವೆ ಯಾದುದರಿಂದ ಗುರು, ಲಿಂಗ ಇದು ಏಕವ ಮಾಡಿ ತೋರದ ಘನಕ್ಕೆ ಘನ, ಶಬ್ದಮುಗ್ಧ ವೆನ್ನಬೇಕೆ ? ಈ ಗುರು ಲಿಂಗವು ಏಕವ ಮಾಡಿ ತೋರಿದ ಮಹಾಂತ. ಈ ಮಹಾಂತನ ಅಪ್ರಮಾಣದಿರುವ ಅದನೆಂತು ಪ್ರಮಾಣೀಸುವದು ? ಗುರುವಿಡಿದ ಅರುವು ಅರುವಲ್ಲ ಲಿಂಗವಿಡಿದ ಅರುವು ಅರುವಲ್ಲ, ಗುರುವೆಂಬುದು ಕಲ್ಪಿತ, ಲಿಂಗವೆಂಬುದು ಕಲ್ಪಿತ, ಕಲ್ಪಿತಕ್ಕೆ ಅರುವಹುದೆ? ತನ್ನಿಂದರಿದ, ಅರುವು ಗುಹೇಶ್ವರಾ. ಇದು ತನ್ನ ವಿಡಿದರವು, ಅರುವಿನ ಅರವು ನುಡಿದು ಹೇಳದ ಅರುವು ತನ್ನೊಳ ತನ್ನಿಂದುದಯವಾದ ಘನಕ್ಕೆ ಘನವಾದುದರಿಂದ ಗುರುಲಿಂಗ ಏಕವ ಮಾಡಿ ತೋರಿದ.

ಇದು ತೋರಬಾರದುದು ತೋರಿದುದು ಆಶ್ಚರ್ಯ, ಗುರು, ಲಿಂಗ, ಜಂಗಮ ಏಕವ ಮಾಡಿ ತೋರಿದ. ಘನಗಂಭೀರದೋಳ್ ಘನಕ್ಕೆ ಘನವಾಗಿಹ ಕಾಣಬಾರದ ಗುರು , ನಡೆ ನುಡಿಗಳಿಲ್ಲದ ಅಚಲಿತ, ಕಡೆ ಮೊದಲಿಲ್ಲದ ಕಾರ್ಯ, ಅರುವಿಂಗುರುವಾಗಿಹ ಪರಿಮಳ, ಇದು ಮೂಕ ಮೂಕನಾಗಿ ನಿಂದ ನಿಃಕಳಂಕ ನಿಜೈಕ್ಯ. ಈ ಸ್ವಮಹಿಮ, ಮೂರೊಂದು ಮಾಡಿದ ನಿಶ್ಚಿಂತ ನಿರಾಲಂಬನ ಉಪಮಿಸಬಹುದೆ?

ತನು ಮನ ಪ್ರಾಣ ಮೊದಲಾಗಿ ಕರಣೇಂದ್ರಿಯಗಳನು ಸುಖಂಗಳನು ಲಿಂಗಕ್ಕೆ ಕೊಟ್ಟು ಅದ ಬದಿಗೊತ್ತಿ, ಬಿಚ್ಚಿ ಬೇರೆ ಮಾಡ ಕೂಡಲಚೆನ್ನಸಂಗಯ್ಯ, ಲಿಂಗೈಕ್ಯವು, ಸಾಗರವು ಸಾಗರವೆ! ಸಾಗರವು ನೀರು ನೀರೆ, ಹಳ್ಳ, ಕೊಳ್ಳ, ನದಿ ,ನೀರು ನೀರೆ! ಸೀಮಾತೀತ ನಿಲುವಿನಲ್ಲಿ ಸೀಮಿತಕ್ಕಿಂಬುಂಟೆ? ಕ್ಷರಾಕ್ಷರವ ಕಾಣದ ಘನ ಅಕ್ಷರೋತ್ತಮ. ಅಲ್ಲಿ ಪ್ರಕಾಶಕ ಪ್ರಕಾಶಿತವೆಂಬ ಭೇದದೃಷ್ಟಿಗಿಂಬುಂಟೆ? ಅರಿಸಿಕೊಳ್ಳುವ ತನು ಮನ ಪ್ರಾಣಾದಿಗಳು ಕರಣಂಗಳು ಸುಖಂಗಳನು ಲಿಂಗಕ್ಕೆ ಕೊಟ್ಟಲ್ಲಿ ಕರಣಂಗಳೆ

ಲಿಂಗ ಕಿರಣಂಗಳಾಗಿರುವಲ್ಲಿ ಅರಸುವದಿಲ್ಲ ಆರಾಧಿಸುವದಿಲ್ಲ , ಎರಡೆಂಬುದಿಲ್ಲ ಒಂದೆಂಬುದಿಲ್ಲ ಅಹುದೆಂಬುದಿಲ್ಲ ಅಲ್ಲೆಂಬುದಿಲ್ಲ, ಇದ್ದುದೆಂಬುದಿಲ್ಲ ಇಲ್ಲದುದೆಂಬುದಿಲ್ಲ , ಶಬ್ದಮುಗ್ಧನಾಗಿ ಸುಖದ ಸುಖಿಯಾದಲ್ಲಿ ಹೇಳಲೆಂತು ? ಹೇಳದಿದ್ದಲ್ಲಿ ತೋರಲೆಂತು, ಅಕಲ್ಪಿತವು ತನ್ನಿರುವು ಅರುವು ಆದುದರಿಂದ ಅಂಗಭಾವ, ಲಿಂಗಭಾವ, ಜಂಗಮಭಾವಂಗಳನೆ ಬದಿಗೊತ್ತಿದ ಘನದಿರುವ ನೋಡಿರೆ?

ಗುರುವೆಂದು ಲಿಂಗವೆಂದು ಜಂಗಮವೆಂದು ಬಿಚ್ಚಿದರೂ ಬೇರೆ ಮಾಡದ ನಿಃಕಳಂಕನಾಗಿ ನಿಂತ ನಿಜೈಕ್ಯನಾಗಿಹ ಶಬ್ದಮುಗ್ಧ ಸುಖವ ನೋಡಿರೆ? ಈ ಸುಪ್ತ ಸುಖವದು ಸುಖದ ಸುಖವಾಗಿಹ ಸುಖ. ಸುಖ, ಸುಖವೆ ಇದನೆಂತು ವರ್ಣಿಸುವದು? ಇಲ್ಲಿ ಗುರುವ ಬೇರೆ ಮಾಡಿ ಜಂಗಮವ ಬೇರೆ ಮಾಡಿ ಲಿಂಗವ ಬೇರೆ ಮಾಡಿ ಈ ಮೂರೊಂದಾದ ತನ್ನಯ ಅರುವು ತಾನೆ ತಾನಾದ ಘನಕ್ಕೆ ಘನವಾಗಿ ಶಬ್ದಮುಗ್ಧನಾದುದೆ, ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು. ಇದು ಲಿಂಗವರಿತು ಲಿಂಗವಾಗಿಹ ನಿಲವು. ತಾನಾರೆಂದರಿತು ತನ್ನೊಳ ತಾನೆ ತಾನಾಗಿಪ್ಪ ಅಪ್ರಮಾಣ ಅಚಿಂತ್ಯತ್ವವು ಲಿಂಗೈಕ್ಯದ ಇರವು ನೋಡಾ.

128

ಗುರುವಿನ , ಗುರುವಿನ ಕೈಯ ಶಿಷ್ಯರ ಶಿಷ್ಯ
ಪಾದಾರ್ಚನೆಯ ಮಾಡಿಕೊಂಬುದು ಕಂಡು
ಎನ್ನಮನ ಬೆರಗಾಯಿತ್ತು . ಮುಂದು ಹಿಂದಾಯಿತ್ತು
ಹಿಂದು ಮುಂದಾಯಿತ್ತು ಕೂಡಲಚೆನ್ನಸಂಗಮದೇವಾ
ನಿಮ್ಮ ಗುರು ಶಿಷ್ಯರ ಸಂಬಂಧ ಎನಗೆ ವಿಪರೀತವಾಯಿತ್ತು .

ತಾತ್ಪರ್ಯ: ಗುರುವಿನ, ಗುರುವಿನ ಕೈಯ ಶಿಷ್ಯರ ಶಿಷ್ಯ ಪಾದಾರ್ಚನೆಯ ಮಾಡಿಕೊಂಬುದು ಕಂಡು ಎನ್ನ ಮನ ಬೆರಗಾಯಿತ್ತು: ಗುರುವಾರು , ಗುರುವಿನ ಗುರುವಾರು? ಗುರುವಿನ ಕೈಯ ಆವುದು? ಶಿಷ್ಯರಾರು? ಶಿಷ್ಯರ ಶಿಷ್ಯರಾರು? ಶಿಷ್ಯರ ಶಿಷ್ಯ ಪಾದಾರ್ಚನೆಯ ಮಾಡಿಕೊಂಬುದು ಕಂಡು ಎನ್ನ ಮನ ಬೆರಗಾಯಿತ್ತು .

ಗುರುವೆಂದರೆ ಅನಿಮಿಷದೇವ ಗುರುವಿನ ಗುರುವೆಂದರೆ ಬಸವರಾಜ ದೇವರು . ಶಿಷ್ಯನೆಂದರೆ ಬಸವರಾಜದೇವರ ಶಿಷ್ಯ , ಅನಿಮಿಷದೇವ . ಅನಿಮಿಷದೇವನೆಂದರೆ ಬಸವರಾಜದೇವರ ಶಿಷ್ಯ . ಅನಿಮಿಷ ದೇವನ ಶಿಷ್ಯನೆಂದರೆ ಪ್ರಭುದೇವರು . ಪ್ರಭುದೇವ ಬಸವರಾಜ ದೇವರ ಶಿಷ್ಯರ ಶಿಷ್ಯ . ಬಸವರಾಜದೇವನೆಂದರೆ ಪ್ರಭುದೇವರ ಗುರುವಿನ ಗುರು . ಗುರುವಿನ ಗುರುವಾಗಿಹ ಬಸವರಾಜ ದೇವರು , ಶಿಷ್ಯನ ಶಿಷ್ಯನಾಗಿಹ ಪ್ರಭುದೇವರ ಪಾದ ಪೂಜೆ ಮಾಡಿಕೊಂಬುದು ಕಂಡು ಚನ್ನಬಸವ ರಾಜದೇವರು ಎನ್ನ ಮನ ಆಶ್ಚರ್ಯವಾಯಿತ್ತು ಎಂದು ಹೇಳಿಹನು .

ಬಸವರಾಜದೇವರ ನಿಜನಿಲುವು ಅಪ್ರತಿಮವಾದುದು . ಏಕೆಂದರೆ ಬಸವರಸ ಸಮತೆಯ ನಿಧಿ ಭಕ್ತಿಯ ಬೆಳೆಸಿರಿ, ಮುಕ್ತಿಯ ತವನಿಧಿ, ಸತ್ಯನಿಧಿಯು . ಲಿಂಗ ಲಕ್ಷಣವಂತ , ಲಿಂಗ ಶಿರಿವಂತ, ಲಿಂಗ ಸೌಭಾಗ್ಯವಂತ, ಜಂಗಮ ಲಕ್ಷಣವಂತ, ಜಂಗಮ ಶಿರಿವಂತ, ಜಂಗಮ ಸೌಭಾಗ್ಯವಂತ, ಪ್ರಸಾದ ಲಕ್ಷಣವಂತ , ಪ್ರಸಾದ ಶಿರಿವಂತ , ಪ್ರಸಾದ ಸೌಭಾಗ್ಯವಂತ . ಮೂರೊಂದು ಮಾಡಿದ ಅಖಂಡ ಲಕ್ಷಣವಂತ, ಅಖಂಡ ಶಿರಿವಂತ , ಅಖಂಡ ಸೌಭಾಗ್ಯವಂತ ನೆಂದೆನಿಸಿದ ಬಸವರಸರು ಶಿಷ್ಯನ ಶಿಷ್ಯನಾಗಿಹ ಪ್ರಭುದೇವನ ಪಾದಾರ್ಚನೆಯ ಮಾಡಿಕೊಂಬುದು ಕಂಡು ಎನ್ನ ಮನ ಬೆರಗಾಯಿತ್ತು

ಎಂದು ಹೇಳಿಹರು.

ಹಿಂದು ಮುಂದಾಯಿತ್ತು, ಮುಂದು ಹಿಂದಾಯಿತ್ತು: ಇದೆಂಥ ಗುರು ಸಾಂಪ್ರದಾಯ, ಇದೆಂಥ ಸಮನಿಲವು ? ಗುರು ಶಿಷ್ಯರ ಸಮನಿಲುವು ಅಹುದು . ಗುರುವಿನ ಗುರು ,ಶಿಷ್ಯರ ಶಿಷ್ಯ ಇವರದು ಸಮನಿಲುವೆ ? ಸಮನಿಲುವು , ತನ್ನದಾದ ನಿಲವು . ಅಲ್ಲಿ ಅರುವು ಮರವುಗಳುಂಟೆ? ಉಪಮೆ ನಿಸ್ಥಲವಾದ ಶರಣಂಗೆ ಶಬ್ದ ಸಂದಣೆಯುಂಟೆ? ಅಖಂಡಿತ ಲಿಂಗಕ್ಕೆ ಅಪ್ರಮಾಣ ಶರಣಂಗೆ ಸೀಮೆ ಸಂಬಂಧವೆಂಬ ಸಂಕಲ್ಪವುಂಟೆ ? ಇಲ್ಲಿ ಗುರುವಾರೊ, ಶಿಷ್ಯರಾರೊ? ಗುರುವಿನ ಗುರುವಾರೊ, ಶಿಷ್ಯರ ಶಿಷ್ಯರಾರೊ? ಪರಮ ಗುರುವೆ ಶಿಷ್ಯನ ಶಿಷ್ಯ ನಾದ ಪ್ರಭುವಿನ ಪಾದ ಪೂಜೆ ಮಾಡಿದನೆಂದರೆ ಇದೆಂಥ ಸೋಜಿಗ. ಇದೆಂಥ ವಿನೋದ! ಇದು ಲಿಂಗ ಸಕೀಲ ಸಂಯೋಗ, ಇದೆಂಥ ಲೀಲೆ, ಇದೆಂಥ ವಿನೋದ .ಇದು ಲಿಂಗ ಸಕೀಲ ಸಂಯೋಗ ವರ್ಮವ ನರಿದ ರಹಸ್ಯ . ಎಲ್ಲೆಲ್ಲೂ ಒಂದನ್ನೆ ಕಂಡ ಮಹಾಂತ . ಇದು ಮಹಾಲೀಲೆ, ಅಪೂರ್ವಿಕ ಪೂರ್ವಿಕನಾಗಿ ನಟಿಸಿದನೆ? ಅಕ್ರಿಯೆಯು ಕ್ರಿಯೆಯುಳ್ಳದ್ದಾಗಿ ಅಭಿನಯಿಸಿತೆ? ನಿಃಶಬ್ದ ಘನವು ಶಬ್ದವೇದಿಯಾಗಿ ನಟಿಸಿತೆ? ಇದೆಂತಹ ಸ್ವಲೀಲೆ ಇದಾರು ನಿರ್ಣಯ ಮಾಡುವುದು.

ಅನಿಮಿಷ ದೃಷ್ಟಿ ದಯಪಾಲಿಸಿದ ಗುರು ಘನನೆಂದರೆ ಬಸವರಾಜ ದೇವರು. ಅನಿಮಿಷದೃಷ್ಟಿ ಬಸವಣ್ಣನವರ ಕರುಣೆಯಿಂದ ಜನ್ಯವಾದುದರಿಂದ ಈ ದಿವ್ಯದೃಷ್ಟಿ ಬಸವಣ್ಣನವರ ಶಿಷ್ಯ. ಈ ದಿವ್ಯದೃಷ್ಟಿ, ಅಪ್ರತಿಮ ದೃಷ್ಟಿಯ ಕಾಣಬಾರದ ಗುರುಘನನೆಂದು ನಂಬಿದ ಶಿಷ್ಯನ ಶಿಷ್ಯ . ಈ ಪ್ರಭುವಿನ ಪಾದ ಪೂಜೆ ಮಾಡುವದೆಂದರೆ ಇದೆಂಥ ಸೋಜಿಗ. ಅಹುದು ಪ್ರಭು ಸಾಮಾನ್ಯನೆ ? ಅನಿಮಿಷ ದೃಷ್ಟಿಯ ಗುರು ಕಾರುಣ್ಯವೆಂದು ಅರಿದರಿದು , ಈತನೆ ಗುರುವೆಂದು ತಾನೆ ಶಿಷ್ಯನೆಂದು ಈ ಮಹಾಮಹಿಮ ಕಾಣಬಾರದ ಗುರು . ಈತ ಕಣ್ಣಿಗೆ ಗೋಚರವಾದುದು ಹೇಳಲಿಲ್ಲದ ಭಿನ್ನಪ . ಮುಟ್ಟಲಿಲ್ಲದ ಹಸ್ತ ಮಸ್ತಕ ಸಂಯೋಗ, ಹೊಸಲಿಲ್ಲದ ವಿಭೂತಿ ಪಟ್ಟ, ಕಿವಿಗೆ ಕೇಳದ ಮಂತ್ರ , ಪೂಜೆಗೆ ಬಾರದ ಲಿಂಗ . ಆಗಮವಿಲ್ಲದ ದೀಕ್ಷೆ ಸಂಬಂಧವಿಲ್ಲದ ಸಯವಪ್ಪ ಅನುಗೊಂಬಂತೆ ಮಾಡಿದೆಯಾ ಅಹಹ ! ಈ ಘನವಂತ ನಡೆ ನುಡಿಯಿಲ್ಲದ ಗುರು ಕಂಡು ಉಪದೇಶವ ಪಡೆಯಲು ಹೋದರೆ ಒಡನೆ ನುಡಿಯ, ನುಡಿಸಿದರೆ ಕೇಳ, ಕಡೆಮೊದಲಿಲ್ಲದ ಗುರು ಕಂಡು ಉಪದೇಶವ ಪಡೆಯಲು ಹೋದರೆ ಒಡನೆ ನುಡಿಯ, ನುಡಿಸಿದರೆ ಕೇಳ. ಕಡೆಮೊದಲಿಲ್ಲಿದ ಕಾರ್ಯ .

ಎನ್ನ ಅರುವಿನ ಪರಿಮಳ ಅನಿಮಿಯದ ಬೆಡಗ, ಇದು ತನ್ನಿಂದ ತಾನಪ್ಪುವದೆಂದು ಈ ಘನಗುರುವಿನ ಸಂಜ್ಞೆ ಅರಿದರಿದು ಇದುವೆ ಗುರ್ವಾನುಗ್ರಹವೆಂದು ಒಪ್ಪಿ ತನಗೆ ತಾನೆ ಶಿಷ್ಯನೆಂದು ಒಪ್ಪಿದುದು .ಇದೆಂಥ ಗುರು ಶಿಷ್ಯ ಸಾಂಪ್ರದಾಯ ! ಮೂಕನಾಗಿ ಅನುಗ್ರಹಿಸಿದ ಅನಿಮಿಷ ದೃಷ್ಟಿ . ಮೂಕನಾಗಿ ಅರಿದರಿದು ನೋಡಿದ ಅರು ಹೃದಯ ಅರುವಿಂಗರುವಾಗಿಹ ಶ್ರೀಗುರುವಾಗಿ ಕಂಡುದು ಇದಾರು ಹೀಗೆಯೆ ಎಂದು ನಿರ್ಣಯ ಮಾಡುವುದು ? ಈ ಗುರು ಶಿಷ್ಯ ಸಂಪ್ರದಾಯ ಅದಾರಿಗೆ ? ನಿಃಶಬ್ದ ವೇದವ ನೋದಿದ ಘನತ್ವ ಅದಾರಿಗೆ ? ಇದೆಂಥ ಲಿಂಗ ಸಕೀಲ ಸಂಯೋಗದ ವರ್ಮವನರಿದುದು , ತನಗೆ ತಾನೆ ಶಿಷ್ಯನಾದ ಅನಿಮಿಷ ದೃಷ್ಟಿಯೆ ಗುರುವಾಗಿ , ಲಿಂಗವಾಗಿ , ಜಂಗಮವಾಗಿ, ತನಗೆ ತಾನೆ ಪ್ರಸಾದಿಯಾದುದು . ಈ ಶಿಷ್ಯ ಸಂಪ್ರದಾಯ ಪ್ರಭುವಿನದು . ಪ್ರಭುವಿನ ಘನತ್ವ ಕಂಡು ಬಸವರಸರು ಪಾದಾರ್ಚನೆ ಮಾಡಿದುದು . ಇದಾರು ನಿರ್ಣಯ ಮಾಡುವುದು?

ಬಸವರಸರು ಅಸಾಮಾನ್ಯರು . ಲಿಂಗ ಲಕ್ಷಣವಂತ, ಜಂಗಮ ಲಕ್ಷಣವಂತ, ಪ್ರಸಾದ ಲಕ್ಷಣವಂತ ಈ ತ್ರಿವಿಧಂಗಳ ಶಿರಿವಂತ , ಭಾಗ್ಯವಂತ ! ಈ ಮಹಾಂತನು ಅನುಗ್ರಹಿಸಿದ ಕಾರುಣ್ಯವೆ

ಅನುಪಮ ಲಿಂಗವಾಗಿ , ಈ ಲಿಂಗದಲ್ಲಿ ಲೀಯವಾದುದು ಅನಿಮಿಷ ಘನವಾಗಿ ಪ್ರಜ್ವಲಿಸಿದುದೆ ಅನಿಮಿಷ ದೃಷ್ಠಿಯಾಯಿತ್ತು. ಅನಿಮಿಷ ದೃಷ್ಠಿಯ ಒಡೆಯ ಪ್ರಥಮಾಚಾರ್ಯ ಪಾದಪೂಜೆ ಮಾಡಿದುದು ;ಇದಾರು ನಿರ್ಣಯ ಮಾಡುವುದು? ಅನುಪಮರದು ಅನುಪಮ ನಿಲುವು, ಅನುಪಮ ಸ್ಥಿತಿ, ಅನುಪಮ ಸುಖ . ಸುಖದಾಟ ಅದನೆಂತು ವಿವರಿಸುವುದು, ಎರಡಾಗಿ ಕಂಡರೂ ಎರಡೊಂದೆಂಬುದಕ್ಕೆ ನಿಲುಕದ ನಿಲುವುಳ್ಳ ಮಹಾಂತರ ಮಹಾಘನವ ವರ್ಣಿಸುವದದೆಂತು . ಇದು ಆಧ್ಯಾತ್ಮದ ಪರಿಣಾಮದ ಮೇರುವೆ, ಅಪ್ರಮಾಣವಾಗಿಹ ಪರಿಣಾಮದ ಮೇರುವೆ. ಇದು ಬಸವರಸ ಪ್ರಭುದೇವ ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿದ ಪರಿಣಾಮದ ಮೇರುವೆ . ತಮ್ಮಿಂದ ತಮಗದು,ವೇದ್ಯವಾದ ಘನಕ್ಕೆ ಘನವದು ವರ್ಣಿಸಲಳವಲ್ಲ.

ಕೂಡಲ ಚೆನ್ನಸಂಗಯ್ಯಾ ನಿಮ್ಮ ಗುರು ಶಿಷ್ಯ ಸಂಬಂಧ ಎನಗೆ ವಿಪರೀತವಾಯಿತ್ತಯ್ಯ: ಕುರುಹುಳ್ಳ ಶಬ್ದವೇದಿಗಳಾಗಿಹ , ಗುರು ಶಿಷ್ಯ ಸಂಬಂಧದದವರು ಸಾಕಷ್ಟು ಸಿಕ್ಕುತ್ತಾರೆ . ಬಸವರಸ, ಪ್ರಭುವಿನ ಗುರು ಶಿಷ್ಯ ಸಂಬಂಧದವರು ಸಿಕ್ಕುವುದು ವಿರಳ. ವೇದವ ಕಲಿಸುವ, ಕಲಿಯುವ, ಗುರುಶಿಷ್ಯ ಸಂಬಂಧವು ಸಿಕ್ಕುತ್ತದೆ. ಶಾಸ್ತ್ರದ ಉಪಕ್ರಮ ಉಪಸಂಹಾರ ಮಾಡುವ ಪೂರೈಸುವ ಸಾದಿಸುವ ಗುರುಗಳು ಸಿಕ್ಕುತ್ತಾರೆ. ಪುರಾಣ ಪೂರ್ತಿ ಮಾಡುವ ಗುರುಗಳು ಶಿಕ್ಕುತ್ತಾರೆ. ಆಗಮಂಗಳ ಘನವ ಹೇಳುವವರು ಶಿಕ್ಕುತ್ತಾರೆ. ಇವರ ಶಬ್ದ ಸಂಭ್ರಮಕ್ಕೆ ಮಾರುಹೋಗಿ ಶಿಷ್ಯರಾದವರು ಶಿಕ್ಕುತ್ತಾರೆ.

ವೇದ ವೇದಾಂತಗಳಿಗಸಾಧ್ಯವಾಗಿಹ ಅನುಪಮ ಲಿಂಗವರಿತು , ಲಿಂಗವಾಗಿಹ ಬಸವಣ್ಣ, ಅನಿಮಿಷ ದೇವ. ಪ್ರಭುದೇವರ ಗುರು ಶಿಷ್ಯ ಸಾಂಪ್ರದಾಯ ಇದು ಅನುಪಮವು ಇದು ವೇದ ವೇಧಿಸಲರಿಯದು ಶಾಸ್ತ್ರಸಾಧಿಸಲರಿಯದು. ಆಗಮಕ್ಕೆ ನಿಲುಕದ ಮಹದರುವುಳ್ಳ ಗುರುಘನ ಬಸವಣ್ಣ, ಅನಿಮಿಷ ದೇವನ ಪರತತ್ವದ ಗುಟ್ಟಿಗೆ ಮಾರುಹೋದಾತ ಪ್ರಭುದೇವ.

ಶಬ್ದಸಂಭ್ರಮದ ಗುರುಶಿಷ್ಯ ಸಾಂಪ್ರದಾಯ, ಶಬ್ದವೇದಿಗಳೆತ್ತ, ಶಬ್ದವೆ ಕಾಣದುದೆತ್ತ ? ಶೃತಿಗಳ ಪಾಠಕರೆತ್ತ, ಶೃತಿಗಳಿಗೆ ಅಗೋಚರರೆತ್ತ, ಶಬ್ದವೇದಿಗಳಿಗೂ ನಿಃಶಬ್ದ ವೇದಿಗಳಿಗೂ ಮಹದಂತರ. ಇದು ಕಾರಣ ಕೂಡಲಚೆನ್ನ ಸಂಗಯ್ಯನಲ್ಲಿ ನಿಮ್ಮ ಗುರುಶಿಷ್ಯ ಸಂಬಂಧ ಎನಗೆ ವಿಪರೀತವಯ್ಯ . ಏಕೆಂದರೆ ಕಲ್ಪಿತ ಪುರುಷನ ಕಾಣದ ನಿಲುವು ಅಕಲ್ಪಿತ ಘನದೆಚ್ಚರ. ಎಚ್ಚರದ ಎಚ್ಚರ ಅರುವಿಂಗರವು ಅರಿಯದರುವು ತನ್ನಿರವು , ತನ್ನಿಂದ ತನಗೆ ಉದಯವಾದ ಉದಯ. ಉದಯ ಅಸ್ತವಾಗದುದಯ ನಿರಂತರ ಉದಯ, ಎತ್ತ ನೋಡಿದಡತ್ತತ್ತ ತಾನೆ. ತನ್ನದು ನೋಡದ ನೋಟ, ಕೂಡದಗಲದ ಘನವು. ತನ್ನಿಂದ ತಾನೆ ಅರಿದರಿದು ಅರಿಯದರುವು ಆಗಿಹ ಸ್ವಮಹಿಮ . ಇದು ಗುರುಶಿಷ್ಯ ಸಂಬಂಧ ವಿಪರೀತ ಸಂಬಂಧವೆಂದು ಚೆನ್ನಬಸವಣ್ಣನವರು ಕೊಂಡಾಡಿದುದು .

129

ಗುರುವೆಂಬ ಗೂಳಿ ಮುಟ್ಟಲು ಶಿಷ್ಯನೆಂಬ ಮಣಕ ತೆನೆಯಾಯಿತ್ತು .
ಲಿಂಗವೆಂಬ ಕಿರುಗರು, ತನುವೆ ಕೆಚ್ಚಲು, ಮನವೆ ಮೊಲೆಹಾಲು
ಅರಿದಲ್ಲಿ ಐಕ್ಯ .ಮರೆದಲ್ಲಿ ಸಾಹಿತ್ಯ , ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ
ಅನಾಚಾರಿಗಲ್ಲದೆ ಪ್ರಸಾದವಿಲ್ಲ.

ತಾತ್ಪರ್ಯ : ಗುರುವೆಂಬ ಗೂಳಿ ಮುಟ್ಟಲು ಶಿಷ್ಯನೆಂಬ ಮಣಕ ತೆನೆಯಾಯಿತ್ತು . ಈ ಗುರು ಶಿಷ್ಯ ಸಂಪ್ರದಾಯ ಅದಾರಿಗೆ, ಈರ್ವರು ಒಂದಾದ ಘನ ಅದಾರಿಗೆ, ಹೃದಯ ಹೃದಯ ಒಂದಾದ

ಮೈಥುನವದಾರಿಗೆ, ಗುರುಘನನ ಪುರುಷೋತ್ತಮ ಪುರುಷತ್ವ ಅದಾರಿಗೆ? ಈ ಮಹದರುವಿಂಗೆ ಮೀಸಲಾಗಿರಿಸಿದ ಶಿಷ್ಯ, ಮೀಸಲಾಗಿರಿಸುವ ಹೃದಯದ ಬಯಕೆ ಅದಾರಿಗೆ, ಒಡಲು ಅದಾರಿಗೆ?

ಓಹೋ ! ಗುರುಘನನು ಗೂಳಿಯಾದನೆ! ಶಿಷ್ಯನು ಮಣಕವಾದನೆ! ಇದೇನು ಸೋಜಿಗ? ಗೂಳಿ , ಮಣಕವ ಕಂಡು ಕೂಟದ ಬಯಕೆ ಮಾಡಿತೆ? ಮಣಕ ಗೂಳಿಯ ಕಂಡು ಕೂಟದ ಕಾತುರವಾಯಿತೆ ? ಇದು ಕ್ಷರಾಕ್ಷರವೆಂಬುದಕ್ಕೂ ಮೀರಿದ ಘನದಿರುವಿನ ಅರುವಾಗಿಹ ಕೂಟದ ಕಾತುರ. ಇದು ಕೂಡದಗಲದ ಕಾತುರ . ಈ ಕಾತುರವೆ ಆಲಿಂಗನಕ್ಕಿಂಬು ಮಾಡಿತೆ? ಈ ನಿರಾಲಂಬ ಸಂಗ ಸುಖಕ್ಕಿಂಬಾದ ಸಪ್ರೇಮವ ಅದಾರು ನಿರ್ಣಯಿಸುವದು .

ಗುರುವೆಂಬ ಗೂಳಿ ಮುಟ್ಟಲು, ಶಿಷ್ಯನೆಂಬ ಮಣಕ ತೆನೆಯಾಯಿತ್ತು ನೋಡಿರೆ? ಓಹೋ! ಇದೆಂಥ ಗೂಳಿ? ಇದೆಂಥ ಮಣಕ, ಇದೆಂಥ ಆಚಾರ,ಆಚಾರವೆಂಬ ಅನಾಚಾರ . ತಾನು ಗುರುವೆಂಬ ಗೂಳಿಯಾಗಿ ಶಿಷ್ಯನೆಂಬ ಮಣಕದ ಶೀಲ ಕೆಡಿಸಬೇಕೆ ? ಶಿಷ್ಯನೆಂಬ ಪರಿಶುದ್ಧ ಮಣಕವು ಗುರುವೆಂಬ ಗೂಳಿ ಮುಟ್ಟುವುದಕ್ಕೆ ಒಪ್ಪಿದುದು ಇದೆಂಥ ಆಶ್ಚರ್ಯ ?ಎರಡೊಂದಾಗಿ ತಮ್ಮ ತಮ್ಮ ಶೀಲವ ದಿಃಕರಿಸಿದರೆ? ನಿರಾಲಂಬವೆ ತಮ್ಮ ಆಲಂಬನವಾಯಿತೆ ? ನಿಸ್ಸಂಗದ ಸಂಗವೆ ತಮ್ಮದಾಯಿತೆ? ಈ ಅನಾಚಾರ ಆರಿಗೆ, ಗೂಳಿ ಮಣಕದ ಸಂಗ ಸಂಬಂಧ ಮೀಸಲು ಸಂಬಂಧ.

ಆಚಾರವುಳ್ಳ ಗುರು ಶಿಷ್ಯರು ಸಿಕ್ಕಬಹುದು .ಅನಾಚಾರಿ ಗುರು, ಅನಾಚಾರಕ್ಕೆ ಒಪ್ಪಿದ ಸಮಹೃದಯ ಶಿಷ್ಯ ಇವರೀರ್ವರು ಸಿಕ್ಕುವುದು ವಿರಳ .

ಆಚಾರವುಳ್ಳ ಗುರು ಶಿಷ್ಯಂಗೆ ಸಂತಾನವಿಲ್ಲ, ಅನಾಚಾರಕ್ಕೆ ಸಂತಾನವುಂಟು. ಅನಾಚಾರದ ಸಂತಾನ ಅದನೆಂತು ವರ್ಣಿಸುವುದು? ಗುರುವೆಂಬ ಗೂಳಿ ಮುಟ್ಟಿದುದು ಅನಾಚಾರ . ಶಿಷ್ಯನೆಂಬ ಮಣಕ ತಾನೆ ಆದುದು ಅನಾಚಾರ. ಈ ಅನಾಚಾರದ ಪ್ರತಿಫಲ ನೋಡಿರೆ? ಲಿಂಗವೆಂಬ ಕಿರುಗರು ತನುವೆ ಕೆಚ್ಚಲು , ಮನವೆ ಮೊಲೆ ಹಾಲು. ಅರಿದಲ್ಲಿ ಐಕ್ಯ ಮರೆದಲ್ಲಿ ಸಾಹಿತ್ಯ. ಇದೆಂಥ ಅನಾಚಾರದ ಪ್ರತಿಫಲ , ಈ ಪ್ರತಿಫಲ ಅಚಾರವುಳ್ಳವರಿಗಿಲ್ಲ. ಆಚಾರವುಳ್ಳವಂಗೆ ಅರಿದಿಹೆನೆಂದಡೆ ಅರುವಿಂಗಸಾಧ್ಯವಾಗಿಹ ಅರುವಿಂಗರುವು ಇಲ್ಲ. ಸುಖದ ಸುಖವಿಲ್ಲ , ಅಚ್ಚ ಸುಖವಿಲ್ಲದ್ದರಿಂದ ನೋಡದ ನೋಟವಿಲ್ಲ ,ಕೂಡದ ಕೂಟವಿಲ್ಲ. ನಿರಾಲಂಬದ ಸಮರಸವು ಮುನಿಲ್ಲವಾದ್ದರಿಂದ ಆಚಾರವುಳ್ಳ ಗುರು ಶಿಷ್ಯರಿಗೆ, ಲಿಂಗವೆಂಬ ಕಿರು ಗುರುವಿನ ಸಂತಾನವಿಲ್ಲ.

ಅನಾಚಾರಿ ಗುರುವಿನ ಸಂಗ ಮಾಡಿ, ಶಿಷ್ಯನೆಂಬ ಮಣಕ ತೆನೆಯಾಗಿ ಲಿಂಗವೆಂಬ ಕಿರುಗರು ಹುಟ್ಟಿತೆ? ತನುವೆ ಕೆಚ್ಚಲಾಯಿತೆ! ಮನವೆ ಮೊಲೆ ಹಾಲು ಆಯಿತೆ? ಅರಿದಲ್ಲಿ ಐಕ್ಯ, ಮರೆದಲ್ಲಿ ಸಾಹಿತ್ಯ ವಾಯಿತೆ ? ಇದೆಂಥ ಆಚಾರ, ಘನಾಚಾರ ಆಚಾರವುಳ್ಳವರಿಗೆ ಅನಾಚಾರವಾಯಿತ್ತು .

ಈ ಪ್ರತಿಫಲ ವರ್ಣಿಸುವರೆ ಅಪ್ರಮಾಣ ಗಮ್ಯವು. ಏಕೆಂದರೆ ಲಿಂಗವೆಂಬ ಕಿರುಗರು, ಅದು ನಿರಾಳವೆಂಬ ಕೂಸು. ಅದಕ್ಕೆ ಹೆಸರಿಟ್ಟು ಕರೆದವರಾರೊ? ಅಕಟಕಟಾ ಶಬ್ದದ ಲಜ್ಜೆಯ ನೋಡಾ : ಅದು ಮೌನ ಮುದ್ರೆ ಧರಿಸಿದ ನಿಜದಿರುವು ನೋಡಾ . ಅದನೆಂತು ವರ್ಣಿಸುವುದು ! ತನುವೆ ಕೆಚ್ಚಲು, ಮನವೆ ಮೊಲೆ ಹಾಲು ಇದೆಂಥ ಮಹಾಘನವೊ? ಅಯ್ಯ ಮಣಕದ ಗರ್ಭದೊಳಗೆ ಲಿಂಗವೆಂಬ ಕಿರುಗರುವಿನ ಉದಯವೆ? ಅಹಹ! ಇದೆಂಥ ಅಕ್ಷರಾಕ್ಷರವ ಮೀರಿದ ಘನದುದಯವು ! ಲಕ್ಷಣ, ಲಕ್ಷ್ಯವೆಂಬ ಕಥನವ ಸೇರದ ನಿರ್ಲಕ್ಷನೆ! ಏನೊಂದಾಗದ ಘನದುದಯವೆ! ಪರಮ ಅವ್ಯಯದುದಯವೆ? ಅನಾಮಯದುದಯವೆ! ಇದನೆಂತು ವರ್ಣಿಸುವುದು.

ತನುವೆ ಕೆಚ್ಚಲು : ಓಹೋ ! ಇದೆಂಥ ಕೆಚ್ಚಲು. ನಿಃಶಬ್ದ ಬ್ರಹ್ಮದಿರುವಿನಿಂ ಪ್ರಜ್ವಲಿಸುವ ಕೆಚ್ಚಲು,

ಶಬ್ದಮುಗ್ಧವಾಗಿಹ ತನುವ, ಜ್ಞಾನಾಮೃತದಿಂದ ತುಂಬಿದ ಪೂರ್ಣಮದಃ ಪೂರ್ಣಮಿದಂ ಕೆಚ್ಚಲಾಯಿತೆ! ಇದೇನು ಸೋಜಿಗ. ಪಶುಗಳಿಗೆ ಮೊಲೆಯ ಮೇಲ್ಭಾಗವಷ್ಟೆ ಕೆಚ್ಚಲು ಇರುವದು ಸಕಲರಿಗೆ ವಿದಿತ ವಿದ್ದ ಸಂಗತಿ. ಶಿಷ್ಯನೆಂಬ ಮಣಕಕ್ಕೆ ಹೃದಯದ ಹೃದಯವಾಗಿಹ ಕೆಚ್ಚಲು , ಅರುಹೃದಯವಾಗಿಹ ಕೆಚ್ಚಲು. ಇದು ಹಲುಬಿದರೂ ಕಾಣದ ಕೆಚ್ಚಲು. ಸರ್ವಾಂಗ ಲಿಂಗವಾಗಿಹ ಕೆಚ್ಚಲು, ಇದನ್ನು ಸತ್ ಎನ್ನಲು ಬರದ ಕೆಚ್ಚಲು ಅಸತ್ ಎನ್ನಲು ಬರದ ಕೆಚ್ಚಲು ಜಡವೆನ್ನಲು ಬರದ ಕೆಚ್ಚಲು ಅಜಡವೆನ್ನಲು ಬರದ ಕೆಚ್ಚಲು. ಅರಿದರುಹಿಸಿಕೊಂಬುದಕ್ಕೂ ಮೀರಿದ ಕೆಚ್ಚಲು ಸಾವಯವ ನಿರವಯವೆಂದು ವಿಂಗಡಿಸಲಿಂಬುಗೊಡದ ಕೆಚ್ಚಲು. ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆಂದರಿದ ತನುವೆ ಕೆಚ್ಚಲು.

ಮನವೆ ಮೊಲೆ ಹಾಲು : ಮನವು ತನ್ನ ಪೂರ್ವಾಶ್ರಯ ಮರೆತು ಅಚಿಂತ್ಯ ಸುಖವುಳ್ಳ ಜ್ಞಾನಾಮೃತವಾಯಿತೆ! ಚಿಂತನ ಕೆಟ್ಟು , ನಿಶ್ಚಿಂತ ಪದದ ಅಕ್ಷಯ ಸುಖದ ಸುಖದೇಕರಸವುಳ್ಳ ಚಿದಾನಂದ ಮಯವಾಯಿತೆ? ನಿತ್ಯಾನಂದ ವಾಯಿತೆ? ಪರಮಾಮೃತವಾಯಿತೆ? ಈ ಮನ ಆರಿಗೆ , ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿತು ಅಚಲಾನಂದ ಮಯನಾಗಿಹ ಶರಣಂಗಲ್ಲವೆ! ಇದು ಆದಿ ಪುರಾತನರ ಮನವಾದುದರಿಂದ ಮನವೆ ಮೊಲೆಹಾಲು . ಅರುಹೃದಯದಿಂದ ಹೊರಹೊಮ್ಮಿ ಬರುವ ಪರಮಾಮೃತ. ಅನಾಮಯವಾಗಿರುವ ನಿರ್ವಾಣದ ನಿಜಾನಂದ, ನಿಶಃಬ್ದ ಬ್ರಹ್ಮವಾಗಿಹ ಪರಾನಂದ. ಈ ಹಾಲು ತಾನೆ ಸೇವಿಸುವದು ಸವಿಯುವದು ತಾನೆ ಸುಖದ ಸುಖಿಯಾದುದು, ಇದೆಂಥ ಹಸು! ಹಸುವು ಹಾಲು ಕರೆವುದು. ಇದು ಪರಬ್ರಹ್ಮದ ಹಸು ತನ್ನ ಹಾಲು ಸೇವಿಸಿ ತಾನೆ ಸವಿಯುವದು.

ಅರಿದಲ್ಲಿ ಐಕ್ಯ , ಅರಿವುಡೆ ತಾನೆ , ತಾನೆ ಗುರು ತಾನೆ ಶಿಷ್ಯ , ತನಗೆ ತಾನೆ ಮುಟ್ಟಿದುದು. ತನಗೆ ತಾನೆ ಬಸಿರು ಆದುದು. ತನ್ನಿಂದ ತಾನೆ ಉದಯವಾದುದು. ಇದು ಉದಯವಾಗದುದಯ, ಉದಯ ಅಸ್ತಂಗಳ ಕಾಣದುದಯ. ನಿರಂತರ ಉದಯ. ತಾನೆ ಮೊಲೆಹಾಲು, ತನ್ನ ಹೃದಯದಿಂದ ಹೃದಯದಲ್ಲಿ ಹೊರಹೊಮ್ಮಿ ಬರುವ ಅಚಿಂತ್ಯ ಸುಖದ ಸುಖವೆ ಮೊಲೆಹಾಲು . ತಾನೆ ಅರುವಾಗಿ ತನ್ನ ತಾನೆ ಅರಿವುದು , ಅರಿಯದರುವು ತಾನೆಂಬುದು ತನ್ನಿಂದ ತನಗದು ವೇದ್ಯವಾಗಿಹುದು .ಇಲ್ಲಿ ಶಬ್ದಮೀಸಲು ಭಾವಕ್ಕಿಂಬಿಲ್ಲವಾದುದರಿಂದ ಐಕ್ಯವೆಂದು ಹೇಳಿಹರು .

ಮರೆದಲ್ಲಿ ಸಾಹಿತ್ಯ : ಇಲ್ಲದ ತೋರಿಕೆ ಇಲ್ಲವಾಗಿ, ಈ ಇಲ್ಲವೆಂಬುದು ಮರೆತು ಇದ್ದ ತೋರ ಬಾರದ ಘನ ತಾನೆ ಆಗಿ, ಸುಖದ ಸುಖಿಯಾಗಿ, ಸ್ವಸುಖಿಯಾದುದೆ ಸಾಹಿತ್ಯ . ಇದು ತನ್ನ ಸಾಹಿತ್ಯ ಶಬ್ದಮುಗ್ಧ ಸಾಹಿತ್ಯ, ಅಕಲ್ಪಿತ ಸಾಹಿತ್ಯ, ಎತ್ತ ನೋಡಿದಡತ್ತತ್ತ ತನ್ನ ಕಂಡ ಸಾಹಿತ್ಯ ಅಪೂರ್ವಸಾಹಿತ್ಯ. ಇದು ಅನಾಚಾರಿಗಳಿಗೆ ಪ್ರಸಾದವು, ಪರಮಜ್ಞಾನವು, ಪರಮಾನಂದವು, ವಾಙ್ಮನೋತೀತವೆಂದು ಹೇಳಿಹರು.

130

ಧನವ ಕೊಟ್ಟಡೆ ದಾನಿಯಾದ ,ತನುವ ಕೊಟ್ಟಡೆ ವೀರನಾದ,
ಮನವ ಕೊಟ್ಟಡೆ ವಶಿಯಾದ, ತ್ರಿವಿಧದಿಂದ ಹೊರಗೆ ಕೊಡಬಲ್ಲಡೆ
ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು . ॥557॥

ತಾತ್ಪರ್ಯ: ಶೈವೋಪಾಸಕರು, ಶಕ್ತಿ ಉಪಾಸಕರು, ವಿಷ್ಣು ಉಪಾಸಕರು, ಇವರು ಉಪಾಸ್ಯ ಉಪಾಸಕರೆಂಬ ಭೇದ ಜ್ಞಾನಿಗಳಾದುದರಿಂದ, ಉಪಾಸ್ಯ ಮೂರ್ತಿಗೆ ಈ ಉಪಾಸಕರಾಗಿಹ ಭಕ್ತರು ತನುವ ಕೊಟ್ಟು ವೀರರಾಗಿಹರು. ಧನ ಕೊಟ್ಟು ದಾನಿಗಳಾಗಿಹರು, ಮನವ ಕೊಟ್ಟು ವಶಿಯಾಗಿಹರು.

ಭೇದ ಜ್ಞಾನಿಗಳು ಇವರ ಭಾವ ಭೇದ. ಇವರ ದೃಷ್ಟಿ ಭೇದ. ಇವರ ಭಕ್ತಿಯು ಭೇದವು . ಪೂಜ್ಯ ಪೂಜಕ ಭಾವದಿಂದುಕ್ತರಾಗಿ ದೇವನಿಗಾಗಿ ತಮ್ಮ ಧನವನ್ನೆ ದಾನ ಮಾಡಿಹರು. ಶರೀರವನ್ನೆ ಅರ್ಪಿಸಿಹರು. ಮನವನ್ನು ಮಂತ್ರದ ಸಿದ್ಧಿಗೋಸ್ಕರ, ಮಂತ್ರದಲ್ಲಿ ತನ್ಮಯ ಮಾಡಿದ್ದಾರೆ. ಇವರುಗಳಲ್ಲಿ ಪೂಜ್ಯವಸ್ತು ಹಿರಿದಾಗಿ, ತಾವು ಕಿರಿ ಕಿರಿದಾಗಿಹರು. ದೇವನು ತಮ್ಮ ಇಷ್ಟಾರ್ಥವನ್ನು ಪೂರ್ತಿ ಮಾಡುವವನಾಗಿಹನು ತಾವು ದೇವನ ಒಲಿಸಿಕೊಂಡು , ತಮ್ಮ ಫಲ ಪದಂಗಳ ಪೂರೈಸಿಕೊಳ್ಳುವವರಾಗಿದ್ದಾರೆ. ಇವರುಗಳಿಗೆ ಶಿವಪಥದ ತಿಳುವಳಿಕೆ ಇಲ್ಲ. ಶ್ರೀಗುರು ಆರೆಂಬುದು ಜ್ಞಾನವಿಲ್ಲ, ಶಿವನಾರು, ಶಕ್ತಿ ಆರು ಎಂಬುದು ವಿದಿತವಿಲ್ಲ. ಅಂಧ ಶ್ರದ್ಧೆಯುಳ್ಳವರು ಭ್ರಾಂತರು. ಅತತ್ವಕ್ಕೆ ತತ್ವವೆಂದು ಮೆಚ್ಚಿದವರು. ಇವರು ತತ್ವಜ್ಞರಲ್ಲವಾದುದರಿಂದ ಇಲ್ಲದುದು ಉಂಟಾಗಿದೆ. ಇದ್ದುದು ಇಲ್ಲದಂತಾಗಿದೆ, ಅನಾತ್ಮ ಆತ್ಮವಾಗಿದೆ. ನಿರಂತರವಾಗಿಹ ಮಂಗಳಮಯ ಪರಿಜ್ಞಾನವು ಇಲ್ಲವಾಗಿದೆ. ಆಶ್ಚರ್ಯ ತೋರಿ ಇಲ್ಲವಾಗುವ ಮಾಯಿಕವು ಅದುವೆ ನಿರಂತರವಾಗಿಹ ಮಂಗಳಮಯವೆನಿಸಿದೆ. ಇದು ಕಾರಣ ಇವರಿಗೆ ಶರೀರ, ಪ್ರಾಣ, ಮನ, ಧನ, ಇದ್ದಂತಾಗಿ ಇವುಗಳನ್ನೆ ತಮ್ಮ ದೇವನಿಗೆ ಅರ್ಪಿಸುವದರಿಂದ ದಾನಿಗಳಾಗಿಹರು. ವೀರರಾಗಿಹರು. ವಶಿವಂತರಾಗಿಹರು. ಇವರಿಗೆ ನಿಜ ಜ್ಞಾನವಿಲ್ಲದ್ದರಿಂದ ಕಲ್ಪಿತರು . ಇವರುಗಳಿಗೆ ಅಕಲ್ಪಿತ ದರ್ಶನವದೆಂತು ಸಾಧ್ಯ.

ವೀರಶೈವರು ತ್ರಿವಿಧದಿಂದ ಹೊರಗೆ ಕೊಡಬಲ್ಲ ಘನಕ್ಕೆ ಘನರು. ಇವರು ಶ್ರೀ ಗುರು ದರ್ಶನವುಳ್ಳವರು. ಗುರುವಿನ ಪೂರ್ವಾಶ್ರಯ ಕಳೆಯ ಬಲ್ಲವರು. ಲಿಂಗದ ಪೂರ್ವಾಶ್ರಯ, ಜಂಗಮದ ಪೂರ್ವಾಶ್ರಯ ಕಳೆಯಬಲ್ಲರು. ಗುರು ಲಿಂಗ ತಾವು ಒಂದಾದವರು. ಶಿವಲಿಂಗ ತಾವು ಒಂದಾದವರು. ಜಂಗಮ ಲಿಂಗ ತಾವು ಒಂದಾದವರು. ಇವರು ತನುವ ಕಾಣಲಿಲ್ಲ ಧನವ ಕಾಣಲಿಲ್ಲ ಮನವ ಕಾಣಲಿಲ್ಲ ತ್ರಿವಿಧವು ಇಲ್ಲವಾದುದರಿಂದ ನಿಭ್ರಾಂತರು. ಲಿಂಗಾಂಗ ಸಮರಸ ಜ್ಞಾನಿಗಳು ವೀರಶೈವರು, ನಿಬ್ಬೆರಗುಳ್ಳ ನಿಲವುಳ್ಳವರು. ಪೂರ್ವದಲ್ಲಿ ಗುರುವಿಗಾಗಿ ತನುವ ಕೊಟ್ಟವರು, ಲಿಂಗಕ್ಕೆ ಮನವ ಕೊಟ್ಟವರು, ಜಂಗಮಕ್ಕೆ ಧನವ ಕೊಟ್ಟವರು, ಗುರುಕರ ಸಂಜಾತರು, ಗುರ್ವಾನುಗ್ರಹವುಳ್ಳವರು, ಲಿಂಗ ಸಕೀಲ ಸಂಯೋಗ ವರ್ಮಸ್ಥಲವರಿತ ಮಹಾಭಾಗ್ಯವಂತರಾದುದರಿಂದ ಅನುಪಮರು.

ಗುರು ಲಿಂಗದರ್ಶನದಿಂದ, ತಮ್ಮ ಅಂಗ ಗುರು ಲಿಂಗವಾಯಿತ್ತು . ಮನ ಶಿವಲಿಂಗವಾಯಿತ್ತು . ಧನ ಜಂಗಮಲಿಂಗವಾಯಿತ್ತು . ಇದು ಕಾರಣ ಗುರು ಲಿಂಗ ಕೊಡುವದಾಗಲಿಲ್ಲ, ಶಿಷ್ಯ ಕೊಟ್ಟವನಾಗಲಿಲ್ಲ , ಭಕ್ತ ಪೂಜಿಸುವ ಪೂಜಕನಾಗಲಿಲ್ಲ , ಲಿಂಗ ಪೂಜ್ಯವಸ್ತುವಾಗಿ ತನಗಿಂತ ಅನ್ಯವಾಗಲಿಲ್ಲ. ಲಿಂಗ ಒಂದಾಗಿರ್ದ ಜಂಗಮದೇವ ಧನವ ಬೇಡಲಿಲ್ಲ ಭಕ್ತ ಲಿಂಗ ಒಂದಾಗಿರ್ದ ಜಂಗಮ ತತ್ವ ತಿಳಿದು, ತನುವ ಕೊಡುವವನಾಗಲಿಲ್ಲ. ಇವರು ಅಕಲ್ಪಿತರು ತತ್ತ್ವವರಿತ ತತ್ತ್ವವೇತ್ತರು . ತತ್ತ್ವಜ್ಞಾನಿಗಳು. ತತ್ತ್ವದೃಷ್ಟಿಯುಳ್ಳ ಮಹಾಂತರು. ಇವರು ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದುದರಿಂದ ಭಿನ್ನದೃಷ್ಟಿ ಕಾಣರು.

ವೀರಶೈವರಲ್ಲಿಯೂ ಕೂಡಾ ಸರ್ವಾರ್ಪಿತ ಭಾವ ಇದ್ದುದರಿಂದ , ಗುರುವಿಂಗೆ ತನುವ ಲಿಂಗಕ್ಕೆ ಮನವ ಜಂಗಮಕ್ಕೆ ಧನವ ಅರ್ಪಿಸಿದುದಾಗಿದೆ. ಬಸವರಸ ಗುರುವಿಂಗೆ ತನುವ ಕೊಟ್ಟು ಲಿಂಗಕ್ಕೆ ಮನವ ಕೊಟ್ಟು, ಜಂಗಮಕ್ಕೆ ಧನವ ಕೊಟ್ಟು, ಬಸವಣ್ಣಂಗೆ ಬಯಲ ಸಮಾಧಿಯಾಯಿತ್ತು ಇದುವೆ ತ್ರಿವಿಧದಿಂದ ಹೊರಗೆ ಕೊಡಬಲ್ಲವರು ಲಿಂಗೈಕ್ಯರು ಎಂದು ಹೇಳಿದ್ದಾರೆ.

ಜ್ಞಾನ ಸಂಪಾದನೆಗೆ ಪೂರ್ವದಲ್ಲಿ ಗುರು, ಲಿಂಗ, ಜಂಗಮಕ್ಕೆ ಕೊಟ್ಟಿರುವರು. ಜ್ಞಾನದ ಜ್ಞಾನವಾಗುವುಡೆ ಈ ತ್ರಿವಿಧವು ಹೊರಗೆ ಕೊಟ್ಟಂತೆ ಆಯಿತ್ತು. ತನುವರ್ಪಿಸಿಕೊಳ್ಳುವ ಗುರುವು

ಹೊರಗೆ, ಅರ್ಪಿಸುವ ತನುವು ಪೂಜಿಸುವ ಲಿಂಗವು ಹೊರಗೆ, ಲಿಂಗಾನುಸಂಧಾನ ಮಾಡುವ ಮನವು ಹೊರಗೆ, ಜಂಗಮ ದೇವನು ಹೊರಗೆ, ಅವನ ಧನವು ಹೊರಗೆ ಅಂದರೆ ತನ್ನವು ಆಗಲಿಲ್ಲ. ತಾನಾಗಲಿಲ್ಲ ಇದ್ದದ್ದೊಂದು ತಾನೆ, ಇಲ್ಲಾದುದಿಲ್ಲಾದುದೆಂದಿಪ್ಪುದು, ಇಲ್ಲಾದುದಿಲ್ಲಾದುದೆಂತಿಪ್ಪುದು, ಎಂಬ ಯತಾರ್ಥ ಜ್ಞಾನಿಗಳು ಇದ್ದ ತತ್ತ್ವ ಇದ್ದಂತೆ ತಿಳಿದುದುರಿಂದ, ಇದ್ದ ನಿರಂತರವಾಗಿರುವ ಮಂಗಳಮಯ ತಾನಾದುದರಿಂದ ಲಿಂಗೈಕ್ಯರೆಂದು ಹೇಳಿಹರು.

131

ಗುರುವಿಂಗೆ ಗುರುವಾಗಿ, ಗುರುಪ್ರಸಾದ ಕೊಂಬುದು,
ಲಿಂಗಕ್ಕೆ ಲಿಂಗವಾಗಿ, ಲಿಂಗಪ್ರಸಾದವ ಕೊಂಬುದು,
ಜಂಗಮಕ್ಕೆ ಜಂಗಮವಾಗಿ ಜಂಗಮ ಪ್ರಸಾದವ ಕೊಂಬುದು,
ಪ್ರಸಾದಕ್ಕೆ ಪ್ರಸಾದವಾಗಿ ಪ್ರಸಾದವ ಕೊಂಬುದು.
ಇಂತೀ ಚತುರ್ವಿಧಕ್ಕೆ ಚತುರ್ವಿಧವಾಗಿ ಬಲ್ಲಡೆ,
ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು. ॥ 638 ॥

ತಾತ್ಪರ್ಯ : ಗುರುವಿಂಗೆ ಗುರುವಾಗಿ ಗುರುಪ್ರಸಾದವ ಕೊಂಬುದು : ಈ ಪರಮಗುರುವಾಗಿ ಗುರುಪ್ರಸಾದ ಕೊಂಡವರಾರು? ಆದಿ ಪುರಾತನರು, ಷಟ್‌ಸ್ಥಲ ಚಕ್ರವರ್ತಿ ಚನ್ನಬಸವರಾಜದೇವರು, ಪ್ರಭುದೇವರಾದಿ ಶರಣರು, ಶರಣೆಯರು, ತಾನಾರೆಂದರಿತ ಶಬ್ದಮುಗ್ಧರು. ನಿಃಶಬ್ದವೇದಿಗಳು ಇವರು ಗುರುವಿಂಗೆ ಗುರುವಾಗಿ ಗುರು ಪ್ರಸಾದ ಕೊಂಡುವರು. ಬಸವರಸರು ಗುರುವಾಗಿ ಬೋಧಿಸಿದುದೆಂಬೆನೆ? ಬೋಧಿಸಿದ ಮಹಾಘನನ ನೋಡಿರೆ? ಹೋ ಹೋ " ನಾನೊಬ್ಬರಿಗೆಯೂ ಉಪದೇಶ ಮಾಡಲಮ್ಮೆನು ಮುನ್ನಲಾದವರು, ತಮ್ಮಿಂದ ತಾವಾದವರು, ನಾನೇನುವ ಮಾಡುತ್ತಿಲ್ಲ. ತತ್ತ್ವವ ಹಿಡಿದವರಿಗೆ ತೊತ್ತಾಗಿ ನಡೆವೆನು. ಅಮರ ಗಣಂಗಳ ಸಾಕ್ಷಿಯಾಗಿ, ಕೂಡಲಸಂಗಮದೇವರ ಮುಂದೆ ಭಾಷೆ ಪ್ರಸಾದ ನಿಕ್ಕಲಮ್ಮೆನಯ್ಯ, ಚೆನ್ನಬಸವಣ್ಣ "

ಮಹಾಂತರ ಮಹಾನುಭವದ ರಹಸ್ಯ ಅರಿದರಿದು ನೋಡುವ ಹೃದಯಕ್ಕೆ, ವೇದ್ಯವಲ್ಲದೆ ಭಾಷೆಯೆ ಪ್ರಸಾದವೆಂದು ಇಕ್ಕುವವರಿಗೆ, ಭಾಷೆಯೆ ಪ್ರಸಾದವೆಂದು ಕೊಂಬುವವರಿಗೆ ಲಿಂಗೈಕ್ಯವಿಲ್ಲವೆಂದು ಹೇಳಿದ ರಹಸ್ಯ ಅದೆಷ್ಟು ಹೃದಯಕ್ಕೆ ವಿದಿತವಾಗಿಹ ಪ್ರಸಾದ. ಬಹು ಭಕ್ತರಿಗೆ ಬಾಷೆಯೆ, ಪ್ರಸಾದವಾಗಿಹುದು, ಭಾಷೆಯೆ ಗುರುವಾಗಿಹುದು ಅವರು ಕೊಟ್ಟ ಕುರುಡೆ ಲಿಂಗವಾಗಿಹುದು. ಇಂತಪ್ಪ ಶಿಷ್ಯರಾಗಲಿ, ಭಕ್ತರಾಗಲಿ, ಗುರುವಿಂಗೆ ಗುರುವಾಗಿ ಗುರುಪ್ರಸಾದ ಕೊಂಬುದು ಅಸಾಧ್ಯ.

ಬಸವಣ್ಣನಂಥ ಅನುಪಮ ಗುರು ಚನ್ನ ಬಸವಣ್ಣನಂಥ ಅನುಪಮ ಶಿಷ್ಯನು ಗುರುವಿಂಗೆ ಗುರುವಾಗಿ ಗುರು ಪ್ರಸಾದ ಕೊಂಬುವ ಭಾಗ್ಯ . ಏಕೆಂದರೆ? ಅನುಪಮ ಗುರು ; ಭಾಷೆಯ ಗುರುವಾಗಲಾರ! ಅನುಪಮ ಶಿಷ್ಯ ಭಾಷೆಯ ಗುರುವೆಂದು ತಿಳಿಯಲಾರ. ಇವರೀರ್ವರು ಶಬ್ದಮುಗ್ಧ ನಿಲುವುಳ್ಳ ಪ್ರಸಾದವರಿತ ಮಹಾಂತರು. ಅರುಹೃದಯ ಗುರುಘನನ ದಿವ್ಯ ದೃಷ್ಠಿಗೆ ಶಿಷ್ಯರೆಂಬುದಿಲ್ಲ ಅಂತಪ್ಪ ಶ್ರೀ ಗುರುಕೃಪೆಯಲ್ಲಿ ಉದಯಿಸಿದ ಸುಜ್ಞಾನ ಶಿಶುವಿಗೆ ಶಿಷ್ಯನೆಂಬುದಿಲ್ಲ. ನಿಸ್ಸೀಮ ನಿಲುವು ಅರುವ ಅರಿಯ ಹೋಗಿ ಅರುವಿನ ವಿಶ್ರಾಮ. ನಿಜೈಕ್ಯನಾಗಿಹ ಸ್ವಮಹಿಮನು ಭಾಷೆಗೆ ಗುರ್ವಾನುಗ್ರಹವೆಂದು ಒಪ್ಪುವದದೆಂತು? ಇದನ್ನು ಅರಿತೆ ಚೆನ್ನಬಸವರಾಜ ದೇವರು ಗುರುವಾಗದ ಗುರುವೆ ನಿಜವಾದ ಗುರುವೆಂದು ತಿಳಿದು ಆ ಮಹಾಂತನ ಮಹಾನುಭಾವದ ಸಂಕೇತವೆ ಗುರು

ಕರುಣೆಯೆಂದು ಅರಿದು ನೋಡಿದವರೆ ಗುರುವಿಂಗೆ ಗುರುವಾಗಿ ಗುರು ಪ್ರಸಾದವ ಕೊಂಬುದು ಎಂದು ಹೇಳಿಹರು.

ನಾನೊಬ್ಬರಿಗೆಯೂ ಉಪದೇಶ ಮಾಡಲಮ್ಮೆನು ಮುನ್ನಲಾದವರು, ತಮ್ಮಿಂದ ತಾವಾದವರು ನಿಜಲಿಂಗೈಕ್ಯರು. ನಾನೇನುವ ಮಾಡುತ್ತಿಲ್ಲವೆಂಬ ಗುರ್ವಾನುಗ್ರಹ, ಅಹಹ! ಇದು ಗುರುವಾಗದ ಗುರ್ವಾನುಗ್ರಹ! ಮುನ್ನಲಾದುದಕ್ಕೆ ಉಪದೇಶ ಉಂಟೆ? ಸೃಷ್ಟಿಗಿಂತ ಮುನ್ನಲಾದುದೆಂದು ಹೇಗೆ ಹೇಳುವುದು? ಬೋಧ ಸೃಷ್ಟಿಗಿಂತ ಮುನ್ನಲಾದುದು ಎಂದು ಹೇಗೆ ಹೇಳುವುದು? ಶೃತಿ ಸ್ಮೃತಿಗಳಾಗದ ಮುನ್ನ ವೇದಪುರಾಣಗಳಾಗದ ಮುನ್ನವೆಂದು ಹೇಗೆ ಹೇಳುವುದು? ಮುನ್ನ ಮುನ್ನಲಾದುದು, ಮುನ್ನ ಮುನ್ನ ಎಂದಿಹುದೇ? ಈ ಭಾಷೆ ಪ್ರಸಾದ ! ಸುಡು, ಸುಡು, ತನ್ನಿಂದ ತನ್ನ ಅರಿದವಂಗೆ ಅದೇತರ ಭಾಷೆ ಪ್ರಸಾದ ಇದನು ಕಂಡೆ ಬಸವರಾಜದೇವರು ನಾನೊಬ್ಬರಿಗೆಯು ಉಪದೇಶ ಮಾಡಲಮ್ಮೆನು ಎಂದು ಸೂಚಿಸಿದ ಕೃಪಾದೃಷ್ಠಿ, ಅಸಾಮಾನ್ಯ ಕೃಪಾದೃಷ್ಠಿ . ಏಕೆಂದರೆ ನಾನೊಬ್ಬರಿಗೂ ಎಂಬ ಸಂಜ್ಞೆ ಅರಿದು ನೋಡುವುಡೆ ನಾನು ಎಂಬುದು ಅರಿದವಂಗೆ ತನ್ನ ಹೊರ್ತು ಅನ್ಯ ಆರು ಇಲ್ಲದಿರುವದರಿಂದ, ಉಪದೇಶ ಮಾಡಲಮ್ಮೆನು. ಎಂದು ಸೂಚಿಸಿದಂತಾಯಿತು. ಮುನ್ನಲಾದವರು ತಮ್ಮಿಂದ ತಾವಾದವರು ನಿಜಲಿಂಗೈಕ್ಯರು . ಎಂಬ ಮಹಾಪ್ರಸಾದವರಿದು ನೋಡುವುಡೆ ಬಸವರಸರು ಲಿಂಗ ಸಕೀಲ ಸಂಯೋಗ ವರ್ಮಸ್ಥಲವರಿತವರು . ಶಬ್ದ ಮೀಸಲಾಗಿಹ ಮಹಾಂತರು ಆಗಿರುವಲ್ಲಿ ಗುರುವಿಂಗೆ ಗುರುವಾಗಿ ಗುರುಪ್ರಸಾದವ ಕೊಂಬುದು ಎಂದು ಹೇಳಿದ್ದಾರೆ.

ಲಿಂಗಕ್ಕೆ ಲಿಂಗವಾಗಿ ಲಿಂಗಪ್ರಸಾದ ಕೊಂಬುದು : ಬಸವರಸರು, ಲಿಂಗಕ್ಕೆ ಲಿಂಗವಾಗಿ ಲಿಂಗ ಪ್ರಸಾದವ ಕೊಂಡವರು, ಇದು ಕಾರಣ ಮುನ್ನಲಾದವರು, ತಮ್ಮಿಂದ ತಾವಾದವರು. ಅವರು ಲಿಂಗೈಕ್ಯರು. ತತ್ತ್ವ ಹಿಡಿದವರು ತೊತ್ತಾಗಿರುವೆನು ಎಂದು ಹೇಳಿದುದು ಬಹು ಗಹನಾರ್ಥವು: ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿತು ಅಚಲಾನಂದಮಯನಾಗಿಹ ಘನಮಹಿಮ . ಲಿಂಗವೆಂಬುದು ವಾಙ್ಮನೋತೀತವು ಎನ್ನ ಅರುವಿನ ವಿಶ್ರಾಮವು. ಎನ್ನ ಅನುಭಾವದಗಮ್ಯವು , ಎನ್ನ ನಿಜದ ನಿಲುವು, ಎನ್ನ ಪರಿಣಾಮದ ಮೇರುವೆ. ಎನ್ನ ಮನದ ಮಹಿಮನೆ, ನಿಮ್ಮ ಸುಳುಹ ಎತ್ತಲಡಗಿತ್ತು , ಎಲೆ ಲಿಂಗವೆ ನಿಮ್ಮ ನಾಮವೆತ್ತ ನಿರ್ನಾಮವಾಯಿತ್ತು . ಇದು ಲಿಂಗಕ್ಕೆ ಲಿಂಗವಾಗಿ ಲಿಂಗಪ್ರಸಾದ ಕೊಂಡ ಹಿರಿಮೆ ಈ ಮಹದರುವು ರೂಪಿ ತತ್ತ್ವ ಹಿಡಿದವರಿಗೆ ತೊತ್ತಾಗಿರುವೆನು ಎಂದು ಹೇಳಿಹರು. ಲಿಂಗವು ಮೌನಮುದ್ರೆ ಧರಿಸಿದ ಸಂಕೇತ. ವೇದ ವೇದಾಂತಗಳಿಗಸಾಧ್ಯವಾಗಿಹ ಅಕಲ್ಪಿತ. ಇದು ದೇಹಿ ಎಂಬುದಕ್ಕೂ ದೇಹಿಯಾಗಿಹ ಸಂಜ್ಞೆ, ನುಡಿಗೆಡೆಗೊಡದ ಘನವಾಗಿಹ ಸಂಜ್ಞೆ. ಭಾವಕ್ಕಿಂಬು ಕೊಡದ ಸಂಜ್ಞೆ ಇದು ಲಿಂಗವನ್ನೆ ಕೂಡಲ ಸಂಗಯ್ಯನೆಂದರಿದ ಸಂಜ್ಞೆಯಾದುದರಿಂದ ಕೂಡಲಸಂಗಮ ದೇವರ ಮುಂದೆ ಭಾಷೆ ಪ್ರಸಾದ ನಿಕ್ಕಲಮ್ಮೆನಯ್ಯ ಎಂದು ಹೇಳಿದುದು . ಲಿಂಗವು ಮೌನವಾದರೆ , ತಾನು ಮೌನದ ಮೌನ . ಏಕೆಂದರೆ ಮೌನವು ತನ್ನಿಂದ ಬೆಳಗಿಸಿಕೊಂಡ ಮೌನ, ತಾನು ಬೆಳಗುಳ್ಳ ಮೌನ. ಅದು ಅಖಂಡಿತ ಲಿಂಗವಾದರೆ ತಾನು ಖಂಡಾಖಂಡ ಸಂಯೋಗವಿಲ್ಲದ ಅಖಂಡ. ಇದು ಗುರು ಕರುಣಿಸಿದ ಕಾರುಣ್ಯವಾದರೆ ತಾನು ಮುನ್ನ ಮುನ್ನವೆ ಹೃದಯದಲ್ಲಿ ನ್ಯಸ್ತವಾಗಿಹ ಅಚಿಂತ್ಯ ರತ್ನವಾದುದರಿಂದ, ಲಿಂಗ ಘನ ಗಂಭೀರವಾದಲ್ಲಿ ತಾನು ಘನಕ್ಕೆ ಘನವಾಗಿದ್ದ ಸ್ವಮಹಿಮ. ಇದು ಕಾರಣ ಲಿಂಗವು ಹೆತ್ತರಿವು ಆಗಿ, ತಾನು ಸ್ವಯಮೇವ ತನ್ನದು ಸ್ವಯ ಮೇವ ಅರುವು ಆದುದರಿಂದ ಲಿಂಗಕ್ಕೆ ಲಿಂಗವಾಗಿ ಲಿಂಗ ಪ್ರಸಾದವ ಕೊಂಬುದು ಎಂದು ಹೇಳಿಹರು .

ಜಂಗಮಕ್ಕೆ ಜಂಗಮವಾಗಿ ಜಂಗಮ ಪ್ರಸಾದಕೊಂಬುದು : ಇದನೆಂತುಪಮಿಸುವದು

ಜಂಗಮಪ್ರಸಾದ, ನಿರ್ಜನಿತ ಪ್ರಸಾದ, ನಿರ್ಲೇಪ ಪ್ರಸಾದ, ನಿಃಕಪಟ ಪ್ರಸಾದ, ನಿರ್ಲಿಖಿತ ಪ್ರಸಾದ, ನಿರವಯನ ಅವಯಯವಕ್ಕೆ ತಂದ ಮಹಾಜ್ಞಾನ ಮಹದರುವು ಅದನೆಂತುಪಮಿಸುವುದು. ಅನಿಮಿಷದೇವ ಲಿಂಗ ಒಂದಾಗಿರ್ದ ಜಂಗಮ. ಅನಿಮಿಷ ದೃಷ್ಠಿ, ಲಿಂಗ ಒಂದಾಗಿರ್ದ ಜಂಗಮ ದೃಷ್ಠಿ, ಜಂಗಮ ಲಿಂಗ, ಈ ಅನುಪಮ ಲಿಂಗವರಿದುದರಿಂದ ಜಂಗಮಕ್ಕೆ ಜಂಗಮವಾಗಿ ಜಂಗಮ ಪ್ರಸಾದ ಕೊಂಡುದು.

ಜಂಗಮ ಪ್ರಸಾದ ನಿರ್ಜನಿತ ಪ್ರಸಾದ, ನಿರ್ಲೇಪ ಪ್ರಸಾದ, ನಿರ್ವಚನೀಯ ಪ್ರಸಾದ, ನಿಸ್ಸಂಗಿ ಪ್ರಸಾದ, ನಿರ್ಲಿಖಿತ ಪ್ರಸಾದ. ಇದು ಅರಿಯಲಿಲ್ಲದ ಅರವು ಆಗಿರುವಲ್ಲಿ ನಿರ್ಜನಿತ ಪ್ರಸಾದವು ಅಹುದು, ನಿರ್ಲೇಪ ಪ್ರಸಾದವು ಅಹುದು. ಇದು ಆವಾವುದನ್ನು ತಟ್ಟದ ಮುಟ್ಟದ ಮಹದರುವು. ನುಡಿಗೆಡೆಗೊಡದ ಘನವು ಆವುದೋ, ಅದುವೆ ನಿರ್ವಚನೀಯ ಪ್ರಸಾದ. ಅದುವೆ ನಿಸ್ಸಂಗಿ ಪ್ರಸಾದ ಅಹುದು, ನಿರ್ಲಿಖಿತ ಪ್ರಸಾದ ಇದು ಅರಿದರಿದು ತನ್ನಿಂದ ತನಗದು ನಿಶ್ಚಿಯಿಸಿಕೊಂಡ ಮಹಾ ಪ್ರಸಾದ.

ಪ್ರಸಾದಕ್ಕೆ ಪ್ರಸಾದವಾಗಿ ಪ್ರಸಾದವ ಕೊಂಬುದು, ಪ್ರಸಾದಕ್ಕೆ ಪ್ರಸಾದವಾಗಿಹ ಪ್ರಸಾದಕೊಂಡ ಮಹಾಂತನೆಂದರೆ ಮರುಳ ಶಂಕರದೇವ. ಈ ಮಹಾಪ್ರಸಾದವ ನೋಡಿರೆ? ತುದಿಮೊದಲಿಲ್ಲದ ಘನವ ನೋಡಾ ಅನುವ ನೋಡಾ, ಗುರು, ಲಿಂಗ, ಜಂಗಮ ತಾನೆಯಾಗಿ ಮತ್ತೆ ತಾನೆಂಬುದೇನೂ ಇಲ್ಲದ ಪರಿಯ ನೋಡಾ. ತನ್ನ ತಾ ನಿರ್ದೇಶೆಯ ಮಾಡಿಕೊಂಡು ನಿಜ ಪದವ ನೆಯ್ದಿಪ್ಪ ಪರಿಯ ನೋಡಾ. ಕೂಡಲ ಸಂಗಮದೇವರಲ್ಲಿ ಪ್ರಾಸಾದಿಯಾಗಿಪ್ಪ ಮರುಳ ಶಂಕರ ದೇವರ ನಿಲುವ ನೋಡಾ.

ಪ್ರಸಾದಕ್ಕೆ ಆರಂಭವಿಲ್ಲ ಮುಕ್ತಾಯವಿಲ್ಲ. ಇದೆಂತಹ ಘನ ಪಾಸದ! ಘನಕ್ಕೆ ಘನವಾಗಿಹ ತನ್ನ ನಿಜದಿರುವಿನ ಅರುವು, ಬೋಧ ರೂಪ ಪ್ರಸಾದ ಆರಂಭವಾಗುತ್ತದೆ ಮುಕ್ತಾಯವಾಗುತ್ತದೆ. ಅಖಂಡಿತ ಘನ ಪರಿಪೂರ್ಣವಾಗಿಹ ಜ್ಞಾನರೂಪಿ ಪ್ರಸಾದ ಅರಿವುಡೆ ತಾನೆ. ತನ್ನದು ತುದಿ ಮೊದಲಿಲ್ಲದ ಜ್ಞಾನಾಂಬುಧಿ ಜ್ಞಾನಾಮೃತ ಚಿದಾಕಾಶ. ತಾನು ಒಳಹೊರಗೆಂಬುದಕ್ಕೂ ನಿಲುಕದ ತನ್ನಯ ಅರುವು. ಇದನೆಂತು ಉಪಮಿಸುವದು ಹಲವರು ಪ್ರಸಾದವೆ ಗುರು, ಪ್ರಸಾದವೆ ಲಿಂಗ, ಪ್ರಸಾದವೆ ಜಂಗಮವೆಂಬ ಭಾವದವರುಂಟು. ಪ್ರಸಾದಕ್ಕೆ ಪ್ರಸಾದವಾಗಿಹ ಮಹಾಂತ, ತಾನೆ ಗುರು, ತಾನೆ ಲಿಂಗ, ತಾನೆ ಜಂಗಮ, ತಾನೆ ಪ್ರಸಾದ ಈ ತಾನೆಂಬುದು ಕೂಡಾ ಇಲ್ಲದುದು. ಇದನೆಂತು ಉಪಮಿಸುವುದು ಹಲವರು ಪ್ರಸಾದವೆ ಗುರು, ಪ್ರಸಾದವೆ ಲಿಂಗ, ಪ್ರಸಾದವೆ ಜಂಗಮವೆಂಬ ಭಾವದವರುಂಟು. ಪ್ರಸಾದಕ್ಕೆ ಪ್ರಸಾದವಾಗಿಹ ಮಹಾಂತ, ತಾನೆ ಗುರು ತಾನೆ ಲಿಂಗ ತಾನೆ ಪ್ರಸಾದಿ. ಈ ತಾನೆಂಬುದು ಕೂಡಾ ತಾನಾವ ಅವಸ್ಥೆಂಗಳೂ ಆಗದ ಘನ. ಏನೊಂದಾಗದ ಘನ ಮುನ್ನಲಾದವರು ತಮ್ಮಿಂದ ತಾವಾದವರು, ಇದನೆಂತುಪಮಿಸುವುದು. ಈ ಚತುರ್ವಿಧಕ್ಕೆ ಚತುರ್ವಿಧ ವಾಗಬಲ್ಲಡೆ ಕೂಡಲಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು ಎಂದು ಹೇಳಿಹರು.

132

ಉಪಮೆ ಉಪಮಿಸಲರಿಯದ ಉಪಮಾತೀತ ವೆನುತ್ತಿದ್ದಿತ್ತು,
ಅರುವು ಅರಿವಿನ ಮರೆಯಲ್ಲಿದ್ದುದ ನರಿಯಲರಿಯದೆ
ಅರುವು ಪರಾಪರವೆನುತ್ತಿದ್ದಿತ್ತು. ಧ್ಯಾನ ಧ್ಯಾನಿಸಲರಿಯದೆ
ಧ್ಯಾನ ರೂಪಾತೀತವೆಂದು ತದ್ಧ್ಯಾನಗೊಂಡಿತ್ತು.

ಜ್ಞಾತೃ, ಜ್ಞಾನ ಜ್ಞೇಯಕ್ಕೆ ಇನ್ನಾವ ಜ್ಞಾನವೋ?
ವೇದ ವಿಜ್ಞಾನವೆಂದುದಾಗಿ 'ತತ್ವಮಸಿ' ವಾಕ್ಯಂಗಳೆಲ್ಲವೂ
ಹುಸಿಯಾಗಿ ಹೋದವು. ಸಚ್ಚಿದಾನಂದವೆಂದುದಾಗಿ
ದ್ವೈತಾದ್ವೈತಿಗಳೆಲ್ಲ ಸಂಹಾರವಾಗಿ ಹೋದರು.
ಬಂದೂ ಬಾರದ ನಿಂದ ನಿರಾಳ ಗುಹೇಶ್ವರಾ. ॥ 652 ॥

ತಾತ್ಪರ್ಯ : ಉಪಮೆ ಉಪಮಿಸಲರಿಯದೆ ಉಪಮಾತೀತ ವೆನುತ್ತಿದ್ದಿತ್ತು : ಪ್ರಭುವಿನ ಮಹಾಪ್ರಸಾದ ಅದನೆಂತು ವರ್ಣಿಸುವುದು, ಪ್ರಭು ತಾನೆ ಉಪಮೆ ಉಪಮಿಸಲರಿಯದೆ ಉಪಮಾತೀತ ವೆನುತ್ತಿದ್ದಿತ್ತು ಎಂದು ಬಿತ್ತರಿಸಿದುದು ನೋಡುವುಡೆ , ಪ್ರಭು ಪ್ರಭುವಾಗಿ ಪ್ರಜ್ವಲಿಸಿದೆಯಲ್ಲ ತಾ ನುಡಿದು ಹೇಳಲಿಲ್ಲ , ತನ್ನಿರವು ಪ್ರಜ್ವಲಿಸಿ ತೋರಿಸದಿರಲಿಲ್ಲ ಇದೆಂತಹ ಕರುಣಾಹೃದಯ, ಇದೆಂಥ ಮಹಾನುಭವದ ಮಹದನುವ, ನೋಡುವರೆ ಕಾಣಬರುತ್ತಿದೆ, ನುಡಿವರೆ ವಾಣಿಗಿಂಬಿಲ್ಲವಲ್ಲ ಇದೆಂಥ ಮಹದರುವು.

ಉಪಮೆ ಉಪಮಿಸಲರಿಯದೆ ಉಪಮಾತೀತ ವೆನುತ್ತಿದ್ದಿತ್ತು. ಇದಕ್ಕೆ ಪ್ರಭುವಿನ ಹೇಳಿಕೆ ಏನಬೇಕೆ? ಪ್ರಭುವಾಗಿ ಹೇಳಬಲ್ಲ ಉಪಮೆ ಕೊಟ್ಟದು ಆವುದು? ಅದು ಉಪಮಿಸಲರಿಯದೆ ಉಪಮಾತೀತ ವೆನುತ್ತಿದ್ದಿತ್ತು ಎಂದು ಹೇಳಿದುದು. ಇದೆಂಥ ಆಶ್ಚರ್ಯ , ನುಡಿಯುವದು ಬೇರಾಗಿ ನುಡಿಗೆಡೆಗೊಡದ ಘನದಿರುವೆ ತನ್ನದಾಗಿ ನುಡಿದು ನುಡಿಯದಂತಿದ್ದ ಬೆಡಗು ಬಿನ್ನಾಣವ ಇದನಾರಯ್ಯ ಹೀಗೆ ಎಂದು ವರ್ಣಿಸುವುದು. ಪ್ರವಚನಕಾರರು ಬಹುವಾಗಿಹರು, ನುಡಿಯೆ ತಾವಾಗಿ ನುಡಿಯುವ ಪ್ರಸಾದವಾಣಿ ಸಿಗುತ್ತದೆ. ನುಡಿಯು ತಾನಾಗದೆ ನುಡಿದು ನುಡಿಯದಂತಿದ್ದ ನಿಸ್ಸಂಗದ ಹಿರಿಮೆ ಅದನೆಂತು ವರ್ಣಿಸುವದು. ಕಲ್ಪಿತ ತಾನಾಗದೆ ಅಕಲ್ಪಿತ ಘನದಿರುವು ಪ್ರಜ್ವಲಿಸುವ ಪರಮ ಪ್ರಸಾದ ಇದಾರಿಗೂ ಬಾರದು, ಬಾರದು. ಅಕಲ್ಪಿತನೆ ತಾನಾಗಿ ಲೀಲೆಯಿಂ ನುಡಿವ ನುಡಿ, ನಡೆಯುವ ನಡೆ, ಭರಿತ ಭಾವ ಜ್ಞಾನ ಇವೆಲ್ಲವೂ ಕಲ್ಪಿತನೆಂದು ತೋರಿಸಿ, ಕಲ್ಪಿತನು ಅಕಲ್ಪಿತವಾಗುವನು. ಕಲ್ಪಿತನ ಉಪಮೆ ಉಪಮಿಸಲರಿಯದೆ ಉಪಮಾತೀತವೆಂದು ಮಹದನುವ ತೋರಿಸಿದುದು ಇದೆಂಥ ಕರುಣಾಹೃದಯ ! ಇದು ಕರುಣಾರಸದ ಕಡಕೋಡಿ ಹರಿದ ಅರು ಹೃದಯ . ಗಂಗೆ ಜ್ಞಾನಾಮೃತ ಗಂಗೆ ಚಿನ್ಮಯಗಂಗೆ . ಈ ಪ್ರಶಾಂತಾತ್ಮಳಾಗಿಹ ಜ್ಞಾನ ಗಂಗೆಯಲ್ಲಿ ಸ್ನಾನಮಾಡಿದ ಕಲ್ಪಿತ ಪುರುಷರಿಗೆ ಅಕಲ್ಪಿತ ಘನದೆಚ್ಚರವಾಗಿ ತನ್ನಿಂದ ತನ್ನ ನೋಡಿದ ಸುಸಂಧಿ ಇದಕ್ಕೇನನ್ನಬೇಕು. ಇದನ್ನಾವ ಭಾಷೆಯಿಂದ ವಿವರಿಸುವದು.

ನುಡಿಗೆಡಗೊಡದ ಘನಕ್ಕೆ , ನುಡಿಗೊಳಪಡಿಸುವ ನುಡಿಗಳೆಲ್ಲ ಉಪಮೆಗಳೆ ; ಶೃತಿಗಗೋಚರವಾಗಿಹ ಘನವು, ಶೃತಿಗಳಿಗೊಳ ಪಡಬಹುದೆ? ಶೃತಿಯಿಂದ ಬಂದವುಗಳೆಲ್ಲ ಉಪಮೆಗಳೆ ; ಕಲ್ಪಿತ ಪುರುಷನಿಗೆ ಬೋಧಿಸುವ ಬೋಧಗಳೆಲ್ಲವೂ ಉಪಮೆಗಳೆ ; ವೇದ ವೇದಾಂತಗಳಿಂದ ಹೊರ ಹೊಮ್ಮಿದವುಗಳೆಲ್ಲ ಉಪಮೆಗಳೆ. ಸತ್ಯಜ್ಞಾನಮನಂತಂ ಬ್ರಹ್ಮ , ಸರ್ವಂ ಖಿಲ್ವಿದಂ ಬ್ರಹ್ಮ, ಪ್ರಜ್ಞಾನಂ ಬ್ರಹ್ಮ , ಸತ್ಯಂ ಶಿವಮಯಮ ಎಂಬುದು ಅರಿದರಿದು ನೋಡಿದಲ್ಲಿ ನಿರಂತರವಾಗಿಹ ಮಂಗಳಮಯ ತಾನು. ತಾನು ನಿರಂತರವೆನಲಿಲ್ಲ, ಮಂಗಳಮಯ ತಾನೆನಲಿಲ್ಲ, ತಿಳಿಯದೆ ನುಡಿದು ಹೇಳುವ ಸಂಜ್ಞೆಗಳೆಲ್ಲ ಉಪಮೆಗಳೆ. ಗಗನ ಸದೃಶ್ಯವೆನ್ನಲ್ಲಿ ನಿಃಶಬ್ದ ಬ್ರಹ್ಮ ಶಬ್ದಮುಗ್ಧ ಅಜ ಅಚಿಂತ್ಯ ಅಪ್ರಮಾಣವೆಂದು ಬೋಧಿಸಿದರೂ ನುಡಿಗೊಳಪಟ್ಟುದಾಯಿತಲ್ಲದೆ ನುಡಿಗೆಡೆಗೊಡದ ಘನದಿರುವು ತನ್ನದಾಗಲಿಲ್ಲ, ತಾ ಆಗಲಿಲ್ಲ. ಇದು ಕಾರಣ ಪ್ರಭುದೇವ ಉಪಮೆ ಉಪಮಿಸಲರಿಯದ

ಉಪಮಾತೀತವೆನುತ್ತಿದ್ದಿತ್ತು ಎಂದು ಹೇಳಿದುದು.

ಅರಿವು ಅರುವಿನ ಮರೆಯಲಿದ್ದುದ ನರಿಯ ಲರಿಯದೆ ಅರುವು ಪರಾಪರ ವೆನುತ್ತಿದ್ದಿತ್ತು: ಪ್ರಭುದೇವ ಅರುವು ಪರಾಪರ ವೆನುತಿದ್ದಿತ್ತು ಎಂದು ಸೂಚಿಸಿದ ಸಂಜ್ಞೆ ತಾನಾಗಿ ನುಡಿದ ಸಂಜ್ಞೆ ಎನಬೇಕೆ? ಇದಾರು ನಿರ್ಣಯ ಮಾಡುವುದು, ಪ್ರಭುದೇವ ಬೆಳಗಿನೊಳಗೆ ಬೆಳಗಾಗಿದ್ದ ಶಬ್ದಮುಗ್ಧ ಜ್ಯೋತಿ! ಅದು ಜ್ಯೋತಿ ಎನಲಿಲ್ಲ ನುಡಿ ತಾನಾಗಿ ನುಡಿದ ನುಡಿಯಲ್ಲ, ನುಡಿದರೂ ನಿಶಬ್ದನಾಗಿಹ ಘನ. ನಿಶಬ್ದ ಸಂಜ್ಞೆ ಸೂಚಿಸುವ ನುಡಿ , ಕಲ್ಪಿತನ ನಷ್ಟ ಮಾಡುವ ನುಡಿ. ಅವನ ಮರವು ಮರವಿನ ಕಾರ್ಯವಾಗಿಹ ಅನಾತ್ಮಭಾವ ಆತ್ಮಭಾವ ನಷ್ಠ ಮಾಡುವ ನುಡಿ.

ಕಲ್ಪಿತ ಪುರುಷರಾಗಿ ಕಥನ ಮಾಡುವ ಶಬ್ದ ಸಂಭ್ರಮದವರು ಶಿಕ್ಕುವರು. ಕಲ್ಪಿತನನ್ನೆ ನಷ್ಟ ಮಾಡುವ, ಅಕಲ್ಪಿತದಿರುವ ಸೂಚಿಸುವ ಸಂಜ್ಞೆವಂತರು ಶಿಕ್ಕುವುದು ವಿರಳ. ವೇದ ವೇದಾಂತ ಉಪನಿಷತ್ ಗೀತಾ ಬ್ರಹ್ಮಸೂತ್ರಗಳಿವೆ. ಇವುಗಳನ್ನು ಶೃತಪಡಿಸುವ ಪಂಡಿತರೂ ಅನುಭವಿಗಳೂ ಉಂಟು. ಪ್ರಭುವಿನ ಪ್ರಸಾದ ವಾಣಿಯ ಪರಿ ಬೇರೆ. ಇದು ವಿರಳವಾದುದರಿಂದ ಅರವು ಅರುವಿನ ಮರೆಯಲಿದ್ದುದ ನರಿಯ ಲರಿಯದೆ, ಅರುವು ಪರಾಪರವೆನುತಿದ್ದಿತ್ತು ಎಂದು ಹೇಳಿದರು.

ಅರುವು ಅರುವಿನ ಮರವು ಎಂಬುದು ಬಹು ಶಾಸ್ತ್ರಜ್ಞರು ತಿಳಿದಂತೆ ತೋರುವುದಿಲ್ಲ. ಇದು ಕಾರಣ ಈ ನುಡಿಯುವ ನುಡಿಗೊಳಪಟ್ಟ ಅರುವೆ ಶ್ರೇಷ್ಠವಾಗಿದೆ. ಏಕೆಂದರೆ ಕಥನಕ್ಕೊಳಪಟ್ಟ ಅರುವು ಯತಾರ್ಥವಲ್ಲ. ಬ್ರಹ್ಮಕ್ಕೆ ನಾ ಬ್ರಹ್ಮವೆಂಬುದು ಘಟಿಸದು. ನಿರಂಜನ ನಿಜ ಚಿದ್ರೂಪ ಅದು ಭರಿತವು ತಾನಪ್ಪುದು. ಇದು ವೇದ್ಯವಾಗಲಿಲ್ಲ ಇವರಿಗೆ ಸಾಪೇಕ್ಷವಾಗಿಹ ದೃಕ್ ರೂಪವೆ ಶ್ರೇಷ್ಠವಾಗಿದೆ. ದೃಶ್ಯವಿಲ್ಲದಿರುವಲ್ಲಿ ಅದಾರಿಗೆ ದೃಕ್ ಆಗುವುದು? ದೃಶ್ಯ ದೃಕ್ ಎನ್ನಲು ಸಂದು ಕೊಡದಿರುವ ಘನಕ್ಕೆ ಘನವಾಗಿಹ ತಾನು ಶಬ್ದಮುಗ್ಧನೆಂಬುದು ತನ್ನ ಅರುವು ವೇದ್ಯವಾದ ಮಹಾಂತಂಗೆ ಈ ನುಡಿಗೊಳಪಟ್ಟ ಅರುವಿಂಗೆ ಒಪ್ಪಬಹುದೆ?

ಪ್ರಭು ! ಶಬ್ದಬ್ರಹ್ಮವ ಅದನೆಂತು ಒಪ್ಪುವನು, ನಿಃಶಬ್ದವೇದಿ ಶಬ್ದಬ್ರಹ್ಮವು ತಾನೆನ್ನಬಹುದೆ? ಒಪ್ಪಲರಿಯ. ಇದು ಕಾರಣ, ಅರುವು ಅರುವಿನ ಮರೆಯಲಿದ್ದುದ ನರಿಯದೆ, ಅರುವು ಪರಾಪರ ಎನುತಿದ್ದಿತ್ತು ಎಂದು ಹೇಳಿಹನು. ಅಕಲ್ಪಿತವು ಅಕಲ್ಪಿತವೆನಲಿಲ್ಲ ಅರುವೆಂದು ಅರಸಲಿಲ್ಲ ಅರಿಯದರುವೆ ತನ್ನಿರವು ಆದಲ್ಲಿ ಅದನೆಂತು ವರ್ಣಿಸುವದು ನಿಸ್ಸೀಮವು ಸೀಮಿತವುಳ್ಳದ್ದಾಗದು, ಅಖಂಡಿತ ಘನವಪ್ಪ ಪೂರ್ಣವು ಅದು ಅಚಲಿತವು, ಅದು ಗಮನಾಗಮನವುಳ್ಳ ಅರಿವು ಆಗದು.

ಧ್ಯಾನ ಧ್ಯಾನಿಸಲರಿಯದೆ ಧ್ಯಾನ ರೂಪಾತೀತವೆಂದು ತದ್ಧ್ಯಾನಗೊಂಡಿತ್ತು. ಧ್ಯಾನವೆಂಬುದು ಚಿಂತನೆ, ಈ ಚಿಂತನವು ಅಚಿಂತ್ಯ ವಸ್ತುವ ತಿಳಿಯುವದದೆಂತು? ತಿಳಿಯದ್ದರಿಂದ ಧ್ಯಾನ ರೂಪಾತೀತವೆಂದು ಅದುವೆ ಬ್ರಹ್ಮವಾಗಿ ಬ್ರಹ್ಮಕಾರವಾಗಿ ನೆಲೆಗೊಂಡಿತ್ತು. ಬಹು ಸಾಧಕರು ಬ್ರಹ್ಮವ ತಿಳಿಯದ್ದರಿಂದ ಧ್ಯಾನಾಸಕ್ತರಾಗುತ್ತಾರೆ. ಕೆಲಬರು ಸಗುಣ ಬ್ರಹ್ಮವೆಂದು ನಿರ್ಗುಣ ಬ್ರಹ್ಮವೆಂದು ಚಿಂತನ ಮಾಡುವರು . ಕೆಲಬರಿಗೆ ಪ್ರಣವ ಚಿಂತನವೆ ಘನವಾಗಿ ಪ್ರಣವಾರೂಢರಾಗಿ ಪ್ರಣವಾಕಾರದಲ್ಲಿ ತನ್ಮಯತೆ ಹೊಂದಿಹರು. ಕೆಲಬರು ಶಬ್ದ ಬ್ರಹ್ಮವಾಗಿಹ ಲಕ್ಷಣಾತ್ಮಕ ಚಿಂತನವನೆ ತಮ್ಮ ಸ್ವರೂಪವೆಂದು ಪರಮಾತ್ಮನೆಂದು ಅಸಿ ಪದವೆಂದು ಅಖಂಡ ಚಿಂತನದ ಚಿಂತಕರಾಗ್ಗಿ ಅದರಲ್ಲಿಯೆ ಲೀಯವಾಗಿ ಅದುವೆ ಅವರಿಗೆ ತದ್ಧ್ಯಾನಗೊಂಡಿದೆ.

ಜ್ಞಾತೃ, ಜ್ಞಾನ, ಜ್ಞೇಯಕ್ಕೆ ಇನ್ನಾವ ಜ್ಞಾನವೊ? ವೇದ ವಿಜ್ಞಾನವೆಂದ್ಧುದಾಗಿ, ತತ್ವಮಸಿ ವಾಕ್ಯಂಗಳೆಲ್ಲವು ಹುಸಿಯಾಗಿ ಹೋದವು. ಬಹು ಜಿಜ್ಞಾಸುಗಳಿಗೆ ಜ್ಞಾತೃ ಜ್ಞಾನ, ಜ್ಞೇಯಂಗಳ

ಯತಾರ್ಥ ಜ್ಞಾನವಾದುದು ಕಡಿಮೆ, ಇಲ್ಲಿ ಪ್ರಭುದೇವರ ಯತಾರ್ಥ ಜ್ಞಾನವ ನೋಡುವುದು. ಜ್ಞಾತೃವೆ ಅರುಹಿಸುವುದು, ಜ್ಞಾನವೆ ಅರಿವುದು, ಜ್ಞೇಯವೆ ನಿಶ್ಚಯಿಸುವದು. ಈ ಜ್ಞಾತೃ ಜ್ಞಾನ ಜ್ಞೇಯವೆಂಬ ಈ ತ್ರಿವಿಧ ಸಾಧನದಿಂದ ಲಿಂಗವನರಸಿ,ಲಿಂಗವನರಿದು, ಲಿಂಗವ ಬೆರಸಿ ಲಿಂಗವಾದ ಮತ್ತೆ ಜ್ಞಾತೃ ಜ್ಞಾನ ಜ್ಞೇಯವೆಂಬ ತ್ರಿವಿಧ ಭ್ರಾಂತಿಸೂತಕ ಹೋಯಿತ್ತು ನಿಜವಾಯಿತ್ತು ಕಾಣಾ ಗುಹೇಶ್ವರಾ. ವೇದ ವಿಜ್ಞಾನವೆಂದುದಾಗಿ ತತ್ವಮಸಿ ವಾಕ್ಯಂಗಳೆಲ್ಲವೂ ಹುಸಿಯಾಗಿ ಹೋದವು. ಕಲ್ಪಿತ ಪುರುಷ ನಿದ್ದಲ್ಲಿ ಜ್ಞಾತೃ, ಜ್ಞಾನ, ಜ್ಞೇಯವು ಉಂಟು. ಭ್ರಾಂತಿ ಇದ್ದಲ್ಲಿ, ತ್ರಿವಿಧರೂಪ ತ್ರಿಪುಟಿಗಳುಂಟು. ಅಖಂಡ ಮೂರ್ತಿಗೆ, ಖಂಡಿತ ದೃಷ್ಠಿಯಿಲ್ಲ ಭಾವ ಇಲ್ಲ ನೆನಹು ಇಲ್ಲ.ಇದು ಕಾರಣ ಜ್ಞಾನವೆ ನಷ್ಠವಾಗಿಹುದು. ಇದು ವೇದವದು ವಿಜ್ಞಾನವೆಂದು ಹೇಳಿಹರು. ವಿಜ್ಞಾನವೆಂಬುದು ಅರುವಿಂಗರುವಾಗಿಹ ಘನವು ಅಲ್ಲಿ ತತ್ವಮಸಿ ವಾಕ್ಯಂಗಳು ಹೆತ್ತರಿವು ಆಗಿಹವು. ಸ್ವಮಹಿಮನಾಗಿಹ ಘನವಂತನಿಗೆ ಮಹಾವಾಕ್ಯಂಗಳೆಲ್ಲವೂ ಹುಸಿಯಾಗಿಹವು. ಮರವಿಂಗೆ ಮಹಾವಾಕ್ಯದ ಪ್ರಯೋಜನ ಅರುವಿಂಗರುವಾಗಿಹ ಮಹಾಂತನಿಗೆ ಸಟೆಯಾಗಿಹವು.

ಸಚ್ಚಿದಾನಂದ ವೆಂದುದಾಗಿ, ದ್ವೈತಾದ್ವೈತಗಳೆಲ್ಲ ಸಂಹಾರವಾಗಿ ಹೋದರು: ಸಚ್ಚಿದಾನಂದವೆಂದುದು ನುಡಿಗೆಡೆಗೊಡದ ಘನವು. ಅದು ಅರಿದರಿದ ತನ್ನಯ ಅರುವು ನಿಜದರಿವು. ಇದು ನಿಸ್ಸೀಮವು ಅಖಂಡಿತ ಘನ ಪೂರ್ಣವಪ್ಪ ತನ್ನಿರುವು ಅರುವು ಆದುದೆ ಸಚ್ಚಿದಾನಂದವೆಂದುದು. ಇದು ನಿರಂಜನ ನಿಜ ಚಿದ್ರೂಪ ತಾನಾಗಿಹ ಘನವು. ನುಡಿದು ನುಡಿಯದಂತಿದ್ದ ನಿರಾಲಂಬವು , ಆವಾವುದಕ್ಕೂ ಎಡೆಗೊಡದ ಘನವಾದ್ದರಿಂದ ಇಲ್ಲಿ ಜೀವ ಬ್ರಹ್ಮರ ಭೇದ ಜ್ಞಾನಕ್ಕೂ ಇಂಬಿಲ್ಲ. ಜೀವ ಪರಮರೊಂದೆ ಎಂಬ ಅಭೇಧ ಜ್ಞಾನಕ್ಕೂ ಇಂಬಿಲ್ಲ. ಏಕೆಂದರೆ ನಿಸ್ಸೀಮತ್ವ, ಸೀಮಿತವಾದುದೆಂದು? ಅದು ಎರಡಾದುದು ಎಂದು? ಒಂದಾದುದು ಎಂದು? ಅಕಲ್ಪಿತವು ಕಲ್ಪಿತವಾದುದೆಂದು? ಅಚಿಂತ್ಯವು ಚಿಂತನಕ್ಕೊಳಪಟ್ಟುದೆಂದು, ಅಜವು ಜೀವ ಬ್ರಹ್ಮರಾದುದೆಂದು ? ಆಗದ್ದರಿಂದ ದ್ವೈತಾದ್ವೈತಿಗಳೆಂಬುದು ಸಂಹಾರವಾಗಿ ಹೋದರು. ಬಂದು ಬಾರದ ನಿಂದ ನಿರಾಳ ಗುಹೇಶ್ವರ ಎಂದು ಹೇಳಿದುದು ಬಹು ಗಹನಾರ್ಥವು ಇದು ತನ್ನ ಅರಿದರಿದ ನಿಂತ ನಿಲವು. ಅರಿಯದರುವು ಬಂದೂ ಬಾರದುದು ನಿಂದ ನಿರಾಳ ಘಟಾಕಾಶ ಘಟದೊಳಗೆ ಬಂದಂತೆ ಕಂಡರೂ ಅದು ಬಂದು ಬಾರದಿರುವ ಸಂಜ್ಞೆಯು . ಇದು ತಾನೆ ತಾನಾಗಿ ನಿಂದ ನಿರಾಳ ಗುಹೇಶ್ವರಾ. ನಿಂದ ನಿರಾಳ ಅದಾವ ಭಾಷೆಯಿಂದ ವಿವರಿಸುವದು, ಘಟದೊಳಗಿದ್ದ ಆಕಾಶದ ಅಚಲತ್ವ ಶಬ್ದಮುಗ್ಧ, ನಿರಂತರವಾಗಿ ನಿಂದುದು. ಅದಾವ ಭಾಷೆಯಿಂದ ಹೇಳುವದು. ನಿಂದ ನಿರಾಳ ಇದು ಗುಹೇಶ್ವರಾ. ಈ ಗುಹೆಯಲ್ಲಿದ್ದ ಈಶ್ವರ ನಿರಂಜನ ನಿಜ ಚಿದ್ರೂಪವು ನಿಂದ ನಿರಾಳವು ಅಚಿಂತ್ಯತ್ವವು ನಿಂದ ನಿರಾಳವು, ದೃಕ್ ಎಂಬುದು ಅರಿತು ಅರಿಯದರುವು. ಇದು ನಿಂದ ನಿರಾಳವು ನಿಶ್ಚಿಂತವು ಗುಹೇಶ್ವರ ಎಂದು ಹೇಳಿಹರು.

133

ಯುಗ ಜಗ ಮಡಿವಲ್ಲಿ ಬ್ರಹ್ಮಾಂಡಗಳಳಿವಲ್ಲಿ ಲಿಂಗವೆಂದರಿತವರಾರೊ?
ಶಿವಶಿವಾ ವಾಯುವ ಲೊದಗಿದ ಮಾಯವಾದಿಗಳು ದೇವನೆಂದರಿತವರಾರೊ?
ಶಿವಶಿವಾ ಅಗ್ನಿ ತೃಣದೊಳಡಗಿ, ಲೀಯವಾದುದ
ಗುಹೇಶ್ವರಾ ನಿಮ್ಮ ಶರಣ ಬಲ್ಲ. **॥ 650 ॥**

ತಾತ್ಪರ್ಯ :ಯುಗ ಜಗ ಮಡಿವಲ್ಲಿ ಬ್ರಹ್ಮಾಂಡಗಳಳಿವಲ್ಲಿ ಲಿಂಗವೆಂದರಿತವರಾರೊ:

ಲಿಂಗವೆಂದರಿಯಲು, ಲಿಂಗವೆಂದರಿತವರಿದ್ದರೆ ಯುಗ ಜಗಂಗಳುದಯಿಸಿದುದು ಕಾಣುತ್ತಿದ್ದಿಲ್ಲ. ಮಡಿವುದು ಕಾಣುತ್ತಿದ್ದಿಲ್ಲ, ಬ್ರಹ್ಮಾಂಡಗಳುದಯವು ಕಾಣುತ್ತಿದ್ದಿಲ್ಲ. ಇವುಗಳಳಿವುದು ಕಾಣುತ್ತಿದ್ದಿಲ್ಲ ಒಂದು ವೇಳ್ಯ ಕಂಡರೂ ಲಿಂಗವೆ ಘನವಾಗಿಹುದಲ್ಲದೆ, ಯುಗ ಜಗಂಗಳು ಘನವಾಗುತ್ತಿದ್ದಿಲ್ಲ ಬ್ರಹ್ಮಾಂಡಗಳು ಶ್ರೇಷ್ಠವಾಗುತ್ತಿದ್ದಿಲ್ಲ.

ಸಹಜದಿಂದ ನಿರಾಲಂಬವಾಯಿತ್ತು. ನಿರಾಲಂಬದಿಂದ ನಿರಾಳವಾಯಿತ್ತು. ನಿರಾಳದಿಂದ ನಿರವಯವಾಯಿತ್ತು. ನಿರವಯದಿಂದ ಅನಾದಿಯಾಯಿತ್ತು. ಅನಾದಿಯಲ್ಲಿ ಮೂರ್ತಿಯಾದನೊಬ್ಬ ಶರಣ. ಆ ಶರಣನ ಮೂರ್ತಿಯಿಂದ ಸದಾಶಿವನಾದ, ಆ ಸದಾಶಿವನಿಂದ ಶಿವನಾದ, ಆ ಶಿವನ ಮೂರ್ತಿಯಿಂದ ರುದ್ರನಾದ, ಆ ರುದ್ರನ ಮೂರ್ತಿಯಿಂದ ವಿಷ್ಣುವಾದ, ಆ ವಿಷ್ಣುವಿನ ಮೂರ್ತಿಯಿಂದ ಬ್ರಹ್ಮನಾದ, ಆ ಬ್ರಹ್ಮನ ಮೂರ್ತಿಯಿಂದಾದವು ಸಕಲ ಜಗತ್ತು ಗಳೆಲ್ಲ, ಇವರೆಲ್ಲರು ನಮ್ಮ ಕರಸ್ಥಲದ ಹಂಗಿನಲ್ಲಿ ಹುಟ್ಟಿದವರು.

ತತ್ವಗಳ ಹೇಳುವವರುಂಟು, ತತ್ವವರಿತವರುಂಟೆ? ಸಕಲ ತತ್ವ ಅತತ್ವಗಳಲ್ಲಿ ಕರಸ್ಥಲದ ಹಂಗಿಗರು ಎಂದು ಬಿತ್ತರಿಸಿದಾಗ, ಗುಹೇಶ್ವರನ ಕರಸ್ಥಲ ಸಕಲ ವೀರಶೈವರಾಗಿಹ ಭಕ್ತರ ಕರ ಕಮಲದಲ್ಲಿ ಗುಹೇಶ್ವರ ಲಿಂಗ ಪ್ರಜ್ವಲಿಸುತ್ತಿದೆ. ಅದನಾರಯ್ಯ ಅರಿತವರು? ಲಿಂಗದಿಂದ ಹುಟ್ಟಿದ ಅ ತತ್ವಗಳೆ ಘನವಾಗಿರುವಾಗ, ಘನಕ್ಕೆ ಘನವಾಗಿರುವ ಲಿಂಗವ ತಿಳಿಯುವದು ಅದಾರಿಗೆ ಬೇಕಾಗಿದೆ. ಪ್ರವೃತ್ತಿ ನಿವೃತ್ತಿಗೆ ಮಿಕ್ಕಿ ಮೀರಿದ ಘನಲಿಂಗ. ಕೆಲಬರಿಗೆ ಪ್ರವೃತ್ತಿ ಶ್ರೇಷ್ಠವಾಗಿಹುದು, ಕೆಲಬರಿಗೆ ನಿವೃತ್ತಿ ಶ್ರೇಷ್ಠ ವಾಗಿಹುದು. ಇವೆರಡಕ್ಕೂ ಮಿಕ್ಕಿ ಮೀರಿನಿಂದ ನಿಲವು ಅದಾರಿಗೆ ಬೇಕಾಗಿದೆ.

ಒಬ್ಬನಿಗೆ ಶರಣನ ಮೂರ್ತಿಯಿಂದಾದ ಸದಾಶಿವ, ಶಿವ, ರುದ್ರ, ವಿಷ್ಣು, ಬ್ರಹ್ಮ, ಬ್ರಹ್ಮನಿಂದ ಆದ ಸಕಲ ಜಗತ್ತು ಈ ಪ್ರವೃತ್ತಿಯು ಬಹು ಪ್ರಿಯವಾಗಿಹುದು. ಇನ್ನೊಬ್ಬನಿಗೆ ವೇದ ವೇದಾಂತಗಳಿಗೂ ಅಸಾಧ್ಯವಾದ ನಿವೃತ್ತಿ ಪರವಾಗಿಹ, ಸಹಜ, ಅಜ, ನಿರಾಲಂಬ, ನಿರಾಳ, ನಿರವಯ, ಅನಾದಿ ಇವುಗಳೆ ಘನವಾಗಿರುವವು. ಈ ಶಬ್ದ ಸಂಭ್ರಮದ ಹಂಗಿಲ್ಲದೆ ಬೆಳಗುವ ಗುಹೇಶ್ವರ. ಈ ಗುಹೇಶ್ವರನ ಕರಸ್ಥಲ ಅದಾರಿಗೆ ಪ್ರಿಯವಾಗಬೇಕು? ಶಬ್ದ ಸಂಭ್ರಮದವರಿಗೆ ನಿಲುಕದ ತತ್ವ ಪ್ರಿಯವಾಗದ ತತ್ವ . ಇದು ಕಾರಣ ಯುಗ ಜಗಂಗಳು ಮಡಿವಲ್ಲಿ ಬ್ರಹ್ಮಾಂಡಗಳಳಿವಲ್ಲಿ ಲಿಂಗ ವೆಂದರಿತವರಾರೊ ಎಂದು ಪ್ರಭುದೇವರ ಪ್ರಶ್ನೆ. ಇದಲ್ಲದೆ ಒಂದೆರಡಾದುದ ನಾರೂ ಅರಿಯರು. ಆ ಒಂದು ಒಂದೆಯಾಯಿತ್ತು, ತ್ರಿತತ್ವವಾಯಿತ್ತು ವೇದಾತೀತ ಭರಿತ ವಾಯಿತ್ತು. ಪ್ರಾದೇಶಿಕವಾಯಿತ್ತು ಭಕ್ತಿಗೆ ಸಾಧ್ಯವಾಯಿತ್ತು. ಅದಕ್ಕೆ ಆಧಾರ ದೇಹವಾಯಿತ್ತು. ಅದು ಅಷ್ಟವಿಗ್ರಹ ರೂಪವಾಗಿರುತ್ತಿಪ್ಪುದು. ಮತ್ತಿರುತ್ತಿರ್ದ ಒಂದು ಮಾಯಾಶಕ್ತಿಯಿಂ ಕೂಡಿ, ಗುಣತ್ರಯಂಗಳು ಕೂಡಿ ನಾನಾತ್ಮನೆನಿಸಿಕೊಂಡು ವಿಷಯಾತ್ಮ, ಇಂದ್ರಿಯಾತ್ಮ, ಭೂತಾತ್ಮ ಜೀವಾತ್ಮ ಪರಮಾತ್ಮ ನೆನಿಸಿಕೊಂಡು ಪ್ರಾಣಾದಿ ವಾಯುಗಳಂ ಕೂಡಿಕೊಂಡು, ಜಡ ಪ್ರಕೃತಿಗಳಂ ಹೊತ್ತುಕೊಂಡು ಸಂಕಲ್ಪ ವಿಕಲ್ಪವೆಂಬ ಉಭಯ ಕರ್ಮಂಗಳಂ ಕಲ್ಪಿಸಿ ನಾನಾಯೋನಿ ಪ್ರಾಪ್ತನಾಗುತ್ತಿರ್ದುದು ಲೋಕಾದಿ ಲೋಕಂಗಳೋಳ್ ತೊಳಲಿ ಬಳಲಿ ತನ್ನ ಮೊದಲ ಕೂಡುವ ಪ್ರಸಾದಮಂ (ಪ್ರಕಾರ) ಬಯಸಿ ನಾನಾ ವಿಧದಿಂದ ಅರಸಿ ಹರಿವುತ್ತಿಪ್ಪ ರಖಿಳ ಜೀವಿಗಳೆಲ್ಲರು ಇದ ಬೆರಸದ ಸಂಗನ ಬಸವಣ್ಣನ ನೆನೆ ನೆನೆದು ಶರಣೆಂದು, ಶುದ್ಧನಾದೆನು ಕಾಣಾ ಗುಹೇಶ್ವರಾ.

ಯುಗ ಜುಗಂಗಳು ಮಡಿವಲ್ಲಿ, ಬ್ರಹ್ಮಾಂಡಗಳಳಿವಲ್ಲಿ ಲಿಂಗವೆಂದರಿತವರಾರೆಂದರೆ ಸಂಗನ ಬಸವಣ್ಣ. ಒಂದೆರಡಾದುದ ಅರಿತ ಘನವಂತ. ಅದು ಒಂದಾದುದು ಒಂದೆ, ಅಲ್ಲಿ ಭಿನ್ನತೆಗಿಂಬಿಲ್ಲ. ಅದು ಮೂರಾಗಿ ತೋರಿದರೂ ಒಂದೆ, ಗುರುವಾಗಿ ತೋರಿದರೂ ಅದುವೆ, ಲಿಂಗವಾಗಿ ಕರಕಮಲದಲ್ಲಿ

ಪ್ರಜ್ವಲಿಸಿದರೂ ಅದುವೆ, ಜಂಗಮವಾಗಿ ವೇದಾತೀತವೆಂದು ಹೇಳಿಹರು. ಮತ್ತು ಅದು ತಾನಪ್ಪುದು ಅದು ಭರಿತವು ಅದು ಪ್ರಾದೇಶಿಕವಾಯಿತ್ತು ಭಕ್ತರಿಗೆ ಅದು ಸಾಧ್ಯವಾಯಿತ್ತು.

ಒಲಿಸಿಕೊಂಡವರೆಂದರೆ ಭಕ್ತರು, ಬಸವಣ್ಣನವರಂಥ ಭಕ್ತರಿಗೆ ಸಾಧ್ಯವಾಯಿತ್ತು. ಭಕ್ತರಿಗೆ ಸಾಧ್ಯವಾದುದು ನಿಜ, ಭಕ್ತಂಗೆ ಅಳವಡಬೇಕಾದಲ್ಲಿ, ಭಕ್ತಂಗಾಧಾರ ದೇಹಿಯಾಯಿತ್ತು. ಅಹಹ! ಇದೆಂಥ ಕಾಯ ಕಾಯದಿಂದ ಗುರು ದರ್ಶನ, ಕಾಯದಿಂದ ಲಿಂಗದರ್ಶನ ಕಾಯದಿಂದ ಜಂಗಮದರ್ಶನ ಕಾಯದಿಂದ ನಿಮ್ಮವ ಕಂಡೆನ್ನ ಮರದೆ ಕೂಡಲಚೆನ್ನಸಂಗಮದೇವಾ. ಕಾಯವಿದ್ದಾಗ ಇವೆಲ್ಲವುಗಳು ಅಳವಡುತ್ತವೆ. ಇದೊಂದು ಕಾಯವಿಲ್ಲದಿದ್ದರೆ ಇವುಗಳ ಒಲಿಸಿಕೊಳ್ಳಲು ಸಾಧ್ಯವಿಲ್ಲ, ಕಾಯವೆಂದರೆ ದೇಹ ದೇಹವದು ಅಷ್ಟವಿಗ್ರಹ ಸ್ವರೂಪವಾಗುತ್ತಿಪ್ಪುದು, ಓಹೊ! ದೇಹ, ಅಷ್ಟವಿಗ್ರಹ ಸ್ವರೂಪವಾಯತ್ತೆ! ಇದೆಂಥ ಅನುಪಮ ದೇಹ, ತಾನೆ ಅಷ್ಟವಿಗ್ರಹ ಸ್ವರೂಪವಾಯಿತ್ತೆ? ಆ ಅಷ್ಟವಿಗ್ರಹ ಸ್ವರೂವಾವುದು? ಸಹಜತ್ವ, ನಿರಾಲಂಬತ್ವ ನಿರಾಳತ್ವ ನಿರವಯತ್ವ, ಅನಾದಿ ಶರಣ, ಗುರು, ಲಿಂಗ, ಜಂಗಮ, ಈ ಅಷ್ಟ ವಿಗ್ರಹ ಸ್ವರೂಪವಾಗಿರುತಿಪ್ಪವು. ಹೀಗೆ ಅಷ್ಟವಿಗ್ರಹ ಸ್ವರೂಪವಾಗಿರುತಿರ್ಪಲ್ಲಿ ಒಂದು ಮಾಯಾಶಕ್ತಿಯಿಂ ಕೂಡಿ, ಗುಣತ್ರಯಂಗಳಂ ಕೂಡಿ ನಾನಾತ್ಮ ನೆನಸಿಕೊಂಡು ವಿಷಯಾತ್ಮ ಇಂದ್ರಿಯಾತ್ಮ, ಭೂತಾತ್ಮ ಜೀವಾತ್ಮ ಅಂತರಾತ್ಮ ಪರಮಾತ್ಮ ನೆನಸಿ ಕೊಂಡು ಪ್ರಾಣಾಧಿ ವಾಯುಗಳ ಕೊಡಿಕೊಂಡು ಜಡ, ಪ್ರಕೃತಿಗಳ ಹೊತ್ತುಕೊಂಡು, ಸಂಕಲ್ಪ ವಿಕಲ್ಪವೆಂಬ ಉಭಯ ಕರ್ಮಂಗಳ ಕಲ್ಪಿಸಿ ನಾನಾ ಯೋನಿ ಪ್ರಾಪ್ತವಾಗುತಿರ್ದುದು, ಲೋಕಾದಿ ಲೋಕಂಗಳೋಳ್ ತೊಳಲಿ ಬಳಲಿ ತನ್ನ ಮೊದಲ ಕೂಡುವ ಪ್ರಕಾರಮಂ ಬಯಸಿ, ನಾನಾವಿಧದಿಂದ ಅರಸಿ ಹರಿವುತ್ತಿಪ್ಪರಖಿಳ ಜೀವರೋಳ್ ಇದ ಬೆರಸಿದ, ಸಂಗನ ಬಸವಣ್ಣನ ನೆನೆ ನೆನೆದು ಶರಣೆಂದು ಶುದ್ಧನಾದೆನು ಎಂದು ಪ್ರಭುದೇವ, ಬಸವರಸರ ಘನತ್ವ ಕೊಂಡಾಡಿದುದು ನೋಡುವುಡೆ ಶಿವ ಶಿವಾ ವಾಯುವಲೊದಗಿದ ಮಾಯಾವಾದಿಗಳು ದೇವನೆಂದರಿತವರಾರೊ ಎಂದುದು ನೋಡುವುಡೆ ಈ ದೇವಗಣ, ರುದ್ರಗಣ, ಪ್ರಮಥಗಣ, ವಾಯುಲೊದಗಿದ ಮಾಯಿಕ ತತ್ವಕ್ಕೆ ಮೋಸ ಹೋದರೆ?

ಬಸವರಸರು ಬೆರಸಿದ ಘನ ಗಂಭೀರವಾಗಿಹ ಲಿಂಗತತ್ವ ಅರಿಯಲಿಲ್ಲವೆ? ಅರಿತು ತಾನು ಲಿಂಗವಾಗಲಿಲ್ಲವೆ? ತನ್ನಿಂದ ತನ್ನ ಅರಿಯಲಿಲ್ಲವೆ? ಅರಿಯದರುವು ಪ್ರಜ್ವಲಿಸಲಿಲ್ಲವೆ? ಇವರುಗಳಿಗೆ ದೇವರಾರು? ಭಕ್ತರಾರು ? ಎಂದು ಪರಿಚಯವಾಗಲಿಲ್ಲವೆ? ತನ್ನ ಸ್ವಮಹಿಮೆಯು ಅಧಿ ಷ್ಠಾನವಾಗಲಿಲ್ಲವೆ? ಅಧಿಷ್ಠಾನದಲ್ಲಿ ತೋರುವ ಕಲ್ಪಿತ ಅಧಿಷ್ಠಾನದ ಹೊರ್ತು ಅನ್ಯವಿಲ್ಲವೆಂಬ ಅಕಲ್ಪಿತವು ಪ್ರಜ್ವಲಿಸಲಿಲ್ಲವೆ? ಭಂಗಾರದಲ್ಲಿ ತೋರುವ ಆಭರಣಗಳು ಭಂಗಾರವಲ್ಲದೆ ಅನ್ಯವಲ್ಲವು ಹೇಗೊ ಹಾಗೆ ಒಂದೆರಡಾದುದು ಅರಿತ ಮಹಾಂತ ಎರಡೊಂದಾದ ಅರಿತ ಘನವಂತ, ಈ ಘನಮಹಿಮಂಗೆ ಯುಗ ಜುಗಂಗಳು ಮಡಿದರೂ ಲಿಂಗವ ಕಂಡ ಬ್ರಹ್ಮಾಂಡಗಳಳಿವಲ್ಲಿ ಲಿಂಗವ ಕಂಡ. ಅಕಲ್ಪಿತದೋಳ್ ಕಲ್ಪಿತವ ಕಾಣಲಿಲ್ಲ, ಕಲ್ಪಿತವ ಅಕಲ್ಪಿತವಾಗಿ ಕಂಡ ಗುರುವೆಂಬುದು ಕಲ್ಪಿತ, ಲಿಂಗವೆಂಬುದು ಕಲ್ಪಿತ, ಜಂಗಮವದು ಕಲ್ಪಿತ, ಸಹಜವೆಂಬುದು ಕಲ್ಪಿತ, ನಿರಾಲಂಬವದು ಕಲ್ಪಿತ, ನಿರವಯವೆಂಬುದು ಕಲ್ಪಿತ, ಅನಾದಿ ಎಂಬುದು ಕಲ್ಪಿತ ಓಹೊ! ಬಸವರಸರಿಗೆ ಈ ಸಂಜ್ಞೆ, ಸಂಜ್ಞೆಯಾಗಿ ಕಾಣಲಿಲ್ಲವೆ? ಶ್ರೀ ಗುರು ಕರುಣಿಸಿದ ಕಾರುಣ್ಯ. ಅದು ಕಾರುಣ್ಯವಾಗದೆ ಅದು ಅಕಲ್ಪಿತ ಘನವಾಗಿ ಪ್ರಜ್ವಲಿಸಿತೆ!

ವಾಯುಲೊದಗಿದ ವಾಯುವಾದಿಗಳು ದೇವಗಣ, ರುದ್ರಗಣ, ಪ್ರಮಥಗಣ, ಸದಾಶಿವ ಮೊದಲಾದವುರುಗಳೆಲ್ಲರನು ಅಕಲ್ಪಿತವಾಗಿ ಕಂಡನೆ? ಲಿಂಗವಾಗಿ ಕಂಡನೆ? ನುಡಿಗೆಡೆಗೊಡದ ಘನವಾಗಿ ಕಂಡನೆ! ಅದು ಉಪಮಿಸದ ತತ್ವವ ಬಸವರಸರು ದೇವನೆಂದರಿತ ಮಹಾಂತ.

ಶಿವ ಶಿವಾ ಅಗ್ನಿ ತೃಣದೊಳಡಗಿದುದು ಲೀಯವಾದುದು ಗುಹೇಶ್ವರ ನಿಮ್ಮ ಶರಣಬಲ್ಲ. ಶಿವಾಶಿವ ಅಗ್ನಿ ತೃಣದೊಳ್ ಅಡಗಿ ಲೀಯವಾಯಿತೆ! ಇದೆಂಥ ಆಶ್ಚರ್ಯ ಸಕಲವ ದಗ್ದವ ಮಾಡುವ ಅಗ್ನಿ. ಇದು ತೃಣದೊಳ ಅಡಗಿ ಲೀಯವಾಯಿತೆ? ಇದೆಂಥಹ ಆಶ್ಚರ್ಯ ಮಹಾದಾಶ್ಚರ್ಯ ಅಗ್ನಿ ತೃಣದೊಳಗಡಗಿದ ಮೇಲೆ ತೃಣವ ಕಾಣುವದೆಂದಲ್ಲಿ ಇದೆಂಥ ಲೀಲೆ ಇದೆಂಥ ವರಪ್ರಸಾದವು . ತೃಣವು ಸುಡಬಾರದು, ಅಗ್ನಿಯು ಪ್ರಜ್ವಲವಾಗಿ ಝುಗಿ ಝುಗಿಸುತ್ತಿಹುದೆಂದಲ್ಲಿ ಇದೆಂಥ ಲೀಲೆ, ಇದೆಂಥ ಗುಟ್ಟು ಇದಾವ ತೃಣವು? ಇದಾವ ಅಗ್ನಿ ಇದು ನಿಮ್ಮ ಶರಣರು ಬಲ್ಲರು. ನಾಮ ರೂಪದಿಂದುಕ್ತವಾದ ತೋರಿಕೆಯೆಲ್ಲವು ತೃಣವು ಶಬ್ದವೆಲ್ಲವು ತೃಣವು ಸ್ಪರ್ಶದಿಂದುಕ್ತವಾದುದು ತೃಣ. ರಸದಿಂದುಕ್ತವಾದುದು ತೃಣ ರೂಪದಿಂದುಕ್ತವಾದುದು ತೃಣವು , ಗಂಧದಿಂದುಕ್ತವಾದುದು ತೃಣ ಭಾವಕ್ಕಿಂಬುಗೊಟ್ಟುದೆಲ್ಲವು ತೃಣವು. ಮಿಗೆ ಮಿಗೆ ಮೀಸಲವಾಗಿಹ ತತ್ವ ಅಗ್ನಿ ನಿರಂಜನ , ನಿಜ ಚಿದ್ರೂಪ ಅಗ್ನಿ , ಇದು ಹಾಲಿನೊಳಗಣ ತುಪ್ಪದಂತಿದ್ದ ಅಗ್ನಿ. ನಾಮರೂಪವಾಗಿ ತೋರುವ ಪಿಂಡಾಂಡ ಬ್ರಹ್ಮಾಂಡರೂಪಿ ತೃಣದೊಳಗಿದ್ದು ಭರಿತವಾದುದು, ಆವುದು ಭರಿತವು ಅದು ಅಗ್ನಿ ಚಿದಗ್ನಿ ಅರಿಯುವುಡೆ ಚಿನ್ಮಯವಾದುದು, ಇದು ಶರಣಬಲ್ಲ ಎಂದು ಹೇಳಿಹರು.

ಶರಣನೆಂದರೆ ಲಿಂಗ, ಲಿಂಗವೆಂದರೆ ಶರಣ. ಲಿಂಗವರಿತು ಲಿಂಗಕ್ಕೆ ಲಿಂಗವಾಗಿಹ ಘನಶರಣ. ದೇವನರಿತು ದೇವ ತಾನಾದ ಶರಣ , ಸಕಲ ಮಾಯಾ ತತ್ವ ಕಾಣದ ಶರಣ. ಯುಗ ಜುಗಂಗಳೂ ಲಿಂಗವಾಗಿಕಂಡ ಶರಣ ಬ್ರಹ್ಮಾಂಡಗಳಲಿಂಗವಾಗಿ ಕಂಡ ಶರಣ. ಅಖಂಡ ಲಿಂಗವರಿತು ತಾನು ಖಂಡಾಖಂಡ ಸಂಯೋಗವಿಲ್ಲದ ಅಖಂಡಿತನಾಗಿಹ ಶರಣ . ಇದು ಕಾರಣ ಶರಣಬಲ್ಲ ಎಂದು ಹೇಳಿಹರು.

134

ಏಕಂ ಏಕವಾದ ವಸ್ತುವ ಲೋಕಾ ಲೋಕಂಗಳರಿಯವು
ಸ್ಥೂಲ ಸೂಕ್ಷ್ಮವೆನು ತಿಪ್ಪರೆಲ್ಲರೂ ಆತ ನೀತ ಬೇರೆ
ಮತ್ತೊಬ್ಬಾತನೆಂಬ ಭ್ರಮೆಯಲ್ಲಿ ಭೂತ ಪ್ರಾಣಿಗಳವರೆತ್ತ
ಬಲ್ಲರು ಆತನ ಘನವ. ॥ 654 ॥

ತಾತ್ಪರ್ಯ: ಏಕಂ ಏಕವಾದ ವಸ್ತುವ ಲೋಕಾ ಲೋಕಂಗಳರಿಯವು , ಸ್ಥೂಲ ಸೂಕ್ಷ್ಮವೆನುತಿಪ್ಪರೆಲ್ಲರೂ : ಒಂದೆ ಒಂದಾದ ವಸ್ತು. ಏನೊಂದಾಗದ ವಸ್ತು , ಅಲೋಕವಾಗದ ವಸ್ತು ಅದು ಸ್ಥೂಲವಾಗದ ವಸ್ತು , ಸೂಕ್ಷ್ಮವಾಗದ ವಸ್ತು , ಏನೊಂದಾಗದ ವಸ್ತು. ಅದನ್ನು ತಿಳಿಯ ಹೋದವರಿಗೆ ಅವರ್ಣೀಯ ವಸ್ತು ಪ್ರವೃತ್ತಿರೂಪವಾದ ಹದಿನಾಲ್ಕು ಲೋಕದವರು ತಿಳಿಯರು. ನಿವೃತ್ತಿ ಪರವಾದ ಸೋಹಂ ಭಾವಿಗಳು ತಿಳಿಯರು.

ಕೆಲಬರು ಸ್ಥೂಲ ನೆನುತಿಪ್ಪರು, ಕೆಲಬರು ಸೂಕ್ಷ್ಮನೆಂದು, ಕೆಲಬರು ಲಿಂಗವೆಂದು, ಬ್ರಹ್ಮವೆಂದು ಪರಬ್ರಹ್ಮವೆನುತಿಪ್ಪರು. ಇನ್ನು ಕೆಲಬರು ಅಲ್ಲನೆಂದು, ರಾಮ ನೆಂದು, ರಹೀಮ ನೆಂದು, ಇನ್ನೂ ಕೆಲಬರು ಚಿಚ್ಛಕ್ತಿ ಎಂದು ಚಿದ್ಘನ ನೆಂದು ಅನುತಿಪ್ಪರು, ಇದಲ್ಲದೆ ಕೆಲಬರು ಕಾರಣನೆಂದು ಕಾರ್ಯನೆಂದು, ಸಗುಣನೆಂದು, ನಿರ್ಗುಣನೆಂದು ಅನ್ನುವರು ಹಾಗೂ ಸಾಕಾರನೆಂದು, ನಿರಾಕಾರನೆಂದು ಕೆಲಬರು ಜಡವೆಂದು, ಅಜಡವೆಂದು ಅನುತಿಪ್ಪರು.

ಏಕಂ ಏಕವಾದ ವಸ್ತುವ ಸ್ಥೂಲ ನೆನ್ನುವುದು ಆಶ್ಚರ್ಯ, ಸೂಕ್ಷ್ಮ ನೆನ್ನುವದು ಆಶ್ಚರ್ಯ! ಲೋಕಾಲೋಕಂಗಳು ಶ್ರೀ ಗುರುವಿನ ದರ್ಶನ ಕಾಣದವರು. ಏಕಂ ಏಕವಾದ ವಸ್ತುವಿನ ಸಕೀಲ

ಸಂಯೋಗ ವರ್ಮಸ್ಥಲ ನರಿಯುದವರು. ಅರಿಯದ್ದರಿಂದ ಇವರು ಸಂಪ್ರದಾಯ ಭಕ್ತರು. ಇವರು ಒಬ್ಬರನೊಬ್ಬರ ಕಂಡು ತಮ್ಮ ತಮ್ಮ ಭಾವಕ್ಕನುಸಾರ ಭಾವಿಕರಾಗಿಹರು. ಇವರಿಗೆ ಸ್ಥೂಲದ ಪರಿಚಯವಿಲ್ಲ. ಸೂಕ್ಷ್ಮದ ಪರಿಚಯ ಅರಿಯದವರು , ಇವರು ಅರಿದರಿದು ನೋಡುವ ಅನಿಮಿಷ ದೃಷ್ಠಿ ಒಳಕೊಂಡವರಲ್ಲ ಇದು ಕಾರಣ ಇವರು ಭ್ರಮಿತರು.

ಏಕಂ ಏಕವಾದ ವಸ್ತುವ ಅದು ಏಕಂ ಏಕವಾದ ವಸ್ತುವೆನಲಿಲ್ಲ. ಅದನ್ನು ಕರುಣಿಸಲು ಬಂದ ಶ್ರೀಗುರು, ಏಕಂ ಏಕವಾದ ವಸ್ತುವೆನಲಿಲ್ಲ. ಅದನ್ನು ತಿಳಿಯಲು ಬಂದ ಶಿಷ್ಯವೃಂದ, ಅವರು ಅರಿದರಿದು ಏಕಂ ಏಕವಾದ ವಸ್ತುವೆನಲಿಲ್ಲ.

ಅನಾಮಯವಾಗಿರುವ ನಿರ್ವಾಣ ಅದು ತಾನು ಲಿಂಗವೆನಲಿಲ್ಲ. ಅದು ತನಗಿಂತ ಅನ್ಯವಾಗಿ ಕಾಣಲಿಲ್ಲ. ಅಲ್ಲಿ ಲೋಕವು ಇಲ್ಲ ಅಲೌಕಿಕವು ಇಲ್ಲ. ಇಲ್ಲಾದುದಿಲ್ಲಾದುದು ಎಂದಿರ ಬೇಕು? ಇಲ್ಲದ ಲೋಕ, ಇಲ್ಲದ ಜೀವರುಗಳು ಇಲ್ಲದ ದೇವರುಗಳು ಎಂದಿರಬೇಕು. ದೇವನು ಸ್ಥೂಲನಾದುದ್ದೆಂದು ಸೂಕ್ಷ್ಮನಾದುದ್ದೆಂದು ಸ್ಥೂಲ ಸೂಕ್ಷ್ಮನಾಗಿರುವವನು ದೇವನೆ. ಅಪ್ರಮಾಣ ದೇವನು ಅಗಮ್ಯ ದೇವನು ಪ್ರಮಾಣಕ್ಕೊಳಪಟ್ಟನೆ? ಮತಿಗತಿಗೆ ಒಳಪಟ್ಟನೆ ? ಒಳಪಟ್ಟಲ್ಲಿ ಸ್ಥೂಲನೆಂದೆನ್ನಬಹುದು, ಸೂಕ್ಷ್ಮನೆಂದೆನ್ನಬಹುದು ಇದು ಕಾರಣ ಇವರು ಅರಿತವರಲ್ಲ. ಆತ ನೀತ ಬೇರೆ ಮತ್ತೊಬ್ಬಾತ ನೆಂಬ ಭ್ರಮೆಯಲ್ಲಿರುವ ಭೂತ ಪ್ರಾಣಿಗಳವರೆತ್ತ ಬಲ್ಲರು ಆತನ ಘನವ.

ವೀರಶೈವರಲ್ಲಿ ಕೆಲಬರು ಪೂಜಾ ಲಿಂಗಕ್ಕೆ ಆತ ನೀತನೆಂಬ ಭ್ರಾಂತರು ಇದ್ದಾರೆ. ಕೆಲಬರು ಇಷ್ಟಲಿಂಗಕ್ಕಿಂತ ಪ್ರಾಣಲಿಂಗ ಬೇರೆ, ಪ್ರಾಣ ಲಿಂಗಕ್ಕಿಂತ ಭಾವಲಿಂಗ ಬೇರೆ, ಭಾವಲಿಂಗಕ್ಕಿಂತ ಜ್ಞಾನಲಿಂಗ ಬೇರೆ, ಹೀಗೆ ಬೇರೆ ಮತ್ತೊಬ್ಬಾತನೆಂಬ ಭ್ರಮಿತರು ಇದ್ದಾರೆ. ತಾವು ಜಡ ಭೂತರಾಗಿ ಮೂರುವರಿ ಮೊಳ ಶರೀರ ಹೊತ್ತವರಾಗಿ ಪ್ರಾಣವುಳ್ಳವರಾಗಿ ಪ್ರಕೃತಿವುಳ್ಳವರಾಗಿ ಜೀವ ಭಾವಿಯಾಗಿಹ ಪುರುಷನಿಗೆ ಲಿಂಗಘನವು ಗೊತ್ತಾಗದು.

ಆತ ನೀತ ನೆಂಬುವವರು ಆತ ನೆಂಬುವವನನ್ನು ಅರಿಯದವರು. ಈತ ನೆಂಬುವನನ್ನು ಅರಿಯದವರು. ಮಾತಿನಲ್ಲಿಯೆ ಆತ ನೀತ ನೆಂಬುವ ಭ್ರಾಂತರು. ಹೇಳಿದ್ದು ಕೇಳಿ ಅನ್ನುವವರು . ಹೇಳಿದವರು ತಿಳಿಯಲಿಲ್ಲ , ತಿಳಿದವರು ಹೇಳಿ ಹೇಳದವರು, ಕೇಳಿ ಕೇಳದವರು ಅರಿತವರು ಹೇಳದವರಾಗಿ ಹೇಳಿಹರು ಕೇಳದವರಾಗಿ ಕೇಳಿಹರು. ಅರಿತವ ಅರಿತವನೆನಲಿಲ್ಲ, ತನ್ನಿಂದ ತನ್ನ ಅರಿತು ತಾನೆ ತಾನಾಗಿ ಅರಿಯದರುವೆ ಆಗಿಹರು. ಮತ್ತೊಬ್ಬಾತನೆಂಬ ಆತ ನೀತ ನೆಂಬುವದಕ್ಕಿಂತಲೂ ಬೇರೆಯಾದಾತ ಮತ್ತೊಬ್ಬಾತ ನೆನಬೇಕೆ? ಮತ್ತೊಬ್ಬಾತ ನೆಂದರೆ ತನಗಿಂತ ಬೇರೆಯಾದವನು ಎನಬೇಕೆ? ಅಥವಾ ಪರಲೋಕದಲ್ಲಿದ್ದಾತ ಶಿವಲೋಕದಲ್ಲಿದ್ದಾತ ಕೈಲಾಸದಲ್ಲಿದ್ದಾತ ಮತ್ತೊಬ್ಬಾತನೆನಬೇಕೆ? ಹೀಗೆ ಕಲ್ಪಿಸುವವರೆಲ್ಲ ಭ್ರಮಿತರು. ಜಡ ಭೂತವ ದೇವರೆಂದು ತಿಳಿದವರು ಮಾಯಿಕವೆ ದೇವನೆಂದು ತಿಳಿದವರು. ಇವರು ಏಕಂ ಏಕವಾದ ವಸ್ತುವ ನರಿಯರು ಅರಿಯದೆ ಸ್ಥೂಲನೆಂದರು ಸೂಕ್ಷ್ಮನೆಂದರು ಆತ ನೀತನೆಂದರು ಬೇರೆ ಮತ್ತೊಬ್ಬಾತ ನೆಂದರು.ಇದು ಕಾರಣ ಇವರು ಕಲ್ಪಿತರು ಇವರಿಗೆ ಕಲ್ಪಿಸಿಕೊಟ್ಟ ಗುರುಪುಂಗವರು ಕಲ್ಪಿತರು. ಅಕಲ್ಪಿತ ಘನವ ಅವರೇನು ಬಲ್ಲರು? ಆತನ ಘನವ ವೇದ ವೇಧಿಸಲಿಲ್ಲ ಶಾಸ್ತ್ರ ಸಾಧಿಸಲಿಲ್ಲ ಪುರಾಣ ಪೂರೈಸಲಿಲ್ಲ ಪ್ರಥಮವೇದಿಗಳು ಗತಿಯಲ್ಲಿ ಸಿಲುಕಿದರು ಅತೀತ ಅನಾಗತರೆಂಬುವವರೆಲ್ಲರು ಮತಿಯಲ್ಲಿ ಸಿಲುಕಿದರು. ಇಂಥಹನು ಲಿಂಗೈಕ್ಯನೆ? ನುಡಿದುದ ನುಡಿಯ , ನಡೆದುದ ನಡೆಯ , ಬಂದಲ್ಲಿ ಬಾರನು ನಿಂದಲ್ಲಿ ನಿಲ್ಲನು ನಿಸ್ಸೀಮ ಕೂಡಲ

ಚೆನ್ನಸಂಗಾ ಲಿಂಗೈಕ್ಯನು.

ಆತನ ಘನವು ಪ್ರಥಮ ವೇದಕ್ಕೆ ನಿಲುಕಲಿಲ್ಲ, ಇದಲ್ಲ ಇದಲ್ಲವೆಂದು ನೇತಿ ನೇತಿ ಮಾಡುವ ವಿವೇಕಿಗಳಿಗೆ ನಿಲುಕಲಿಲ್ಲ. ಶೃತಿವಂತರು ವಿದೇಯ ವಿಶೇಷಣ, ನಿಷೇಧ ವಿಶೇಷಣ ಲಕ್ಷಣಗಳಿಂದಲು ತಿಳಿಯಹೋದರು. ಇವರೆಲ್ಲ ಶಬ್ದ ಸಂಭ್ರಮದವರು, ಮಾತಿನ ರಂಜಕರು, ಎಂಜಲ ಮಾತಿನವರು. ಮಿಗೆ ಮಿಗೆ ಮೀಸಲವಾಗಿಹ ತತ್ವ ಹೇಗೆ ತಿಳಿಯಬಲ್ಲರು.

ಮೀಸಲ ತತ್ವ ತಿಳಿದವರು ಮಿಗೆ ಮಿಗೆ ಮೀಸಲವಾಗಿಹ ಘನಮಹಿಮರು. ಅವರು ನಿಸ್ಸೀಮವಾಗಿಹರು. ನುಡಿದ ನುಡಿ ಆಗಲಿಲ್ಲ ನಡೆದ ನಡೆ ಆಗಲಿಲ್ಲ ನಿಶಬ್ದ ಬ್ರಹ್ಮವರಿತವರು ನುಡಿ ಹೇಗಾಗುವರು ? ನಡೆ ಹೇಗಾಗುವರು ? ಚಿಂತನಕ್ಕೊಳಪಡದ ಅಚಿಂತ್ಯತ್ವ ವರಿತ ಮಹಾಂತ ಚಿಂತನಕ್ಕೊಳಪಟ್ಟ ಒಡಲು ಹೇಗಾಗುವನು, ಏನೊಂದಾಗದ ಘನಮಹಿಮ ಆತನ ಘನವ ಇವರೇನು ಬಲ್ಲರು.

ಕ್ಷರ ಭಾವಿಗಳಿಗೂ ತಿಳಿಯದು, ಅಕ್ಷರ ಭಾವಿಗಳಿಗೂ ತಿಳಿಯದು. ಅಕ್ಷರಾಕ್ಷರವಾಗದ ಘನವಂತ ಆತನ ಘನವ ಈ ಜಡ ಭೂತ ಪ್ರಾಣಿಗಳು ಇವರೇನು ಬಲ್ಲರು. ಸ್ಥೂಲ ಸೂಕ್ಷ್ಮನೆಂಬ ಭಾವಿಕರು ಇವರೇನು ಬಲ್ಲರು ಆತ ನೀತ ನೆಂಬುವ ಮತಿ ಮಹಾಂತರು ಇವರೇನು ಬಲ್ಲರು. ಇವರು ತಾನಾರೆಂದರಿಯದವರು ಅರಿತಿದ್ದರೆ ಘನವೆಂಬುದು ತನಗಿಂತ ಅನ್ಯವಾದುದಲ್ಲವೆಂದು ತನ್ನಿಂದ ತನಗೆ ವಿದಿತವಾಗುತ್ತಿತ್ತು. ಅರಿಯದ್ದರಿಂದ ತನಗಿಂತ ಅನ್ಯವಸ್ತುವಿದೆಂದು ತಿಳಿದಿಹನು. ಇದು ಕಾರಣ ಮತ್ತೊಬ್ಬಾತ ನೆನ್ನುವ ಭಾವಿಕನಾಗಿಹನು ಎಂದು ಹೇಳಿಹರು.

135

ಘನವ ಮನ ಕಂಡು ಅದನೊಂದು ಮಾತಿಂಗೆ ತಂದು
ನುಡಿದು ನೋಡಿದರೆ ಅದಕ್ಕದೆ ಕಿರಿದು ನೋಡಾ
ಅದೇನೂ ಇಲ್ಲದ ನಿಸ್ಸಂಗದ ಸುಖವು ಗುಹೇಶ್ವರಾ? || 656 ||

ತಾತ್ಪರ್ಯ: ಘನವ ಮನ ಕಂಡು : ಇದಾವ ಮನ? ಘನವ ಕಂಡಿತೆ ! ಇದಕ್ಕೇನನ್ನ ಬೇಕು ? ಯತಾ ವಾಚ್ಯೊ ನಿವರ್ತಂತೆ ಅಪ್ರಾಪ್ಯ ಮನಸಾ ಸಹ. ಎಂದು ಶೃತಿ ಹೇಳಿದರೂ ಅದಕ್ಕೂ ಮೀರಿ ನಿಂದಿತೆ! ಕಾಣದುದು ಕಂಡಿತೆ! ಮುಟ್ಟಬಾರದುದು ಮುಟ್ಟಿತೆ! ಅಸಾಧ್ಯ ಸಾಧಿಸಿತೆ! ಅಹುದು ನಿನ್ನ ಸಾಹಸ ಅಪ್ರತಿಮವಾದುದು.

ಓಹೊ! ಮನವೆ ಹವಣಿಸಬಾರದ ಅಖಂಡ ಬೆಳಗು ಅದೀಗ ನಿನ್ನ ನಿಜವಾಯಿತೆ! ನಿನ್ನ ಪೂರ್ವಾಶ್ರಯವಾಗಿಹ ಸಂಕಲ್ಪ ವಿಕಲ್ಪ ನಷ್ಟವಾಗಿ ತಾನೆ ತಾನಾಗಿ ಬೆಳಗುತ್ತಿಹುದು ಅದೀಗ ನಿನ್ನ ನಿಜವಾಯಿತೆ! ಇದು ಅಪ್ರಮಾಣಗಮ್ಯವು. ಇದು ಮುಟ್ಟಿ ನೀನು ಅದುವೆ ಆದೆಯಾ? ಅಚಿಂತ್ಯವ ಕಂಡು ಚಿಂತನವ ಮಾಡದಾದೆಯಾ! ಓ, ಮನವೆ! ಅಕಲ್ಪಿತವ ಕಂಡು ನಿನ್ನ ಸಂಕಲ್ಪ ವಿಕಲ್ಪವ ಮರತೆಯಾ? ಸಾಗರವ ಸೇರಿದ ನದಿಗೆ ಏನೆನ್ನಬೇಕು? ತನ್ನ ಸೀಮಿತವ ಕಳಕೊಂಡುದಕ್ಕೇನೆನ್ನ ಬೇಕು. ಆಕಾಶವ ಕಂಡ ಘಟಾಕಾಶವು ತಾನೆನಲಿಲ್ಲ ಅನ್ಯವೆನಲಿಲ್ಲ ಕೂಡಿದುದೆನಲಿಲ್ಲ ಅಗಲಿದುದೆನಲಿಲ್ಲ ಏನೆಂದನಲಿಲ್ಲದೆ ಬಯಲು ಬಯಲಾದ ಘನವ ನುಡಿದು ಹೇಳುವದದೆಂತು. ಬಯಲೆಂಬುದು ಮೌನ ಮುದ್ರಿತವು. ಅದು ನಿಃಶಬ್ಯ ಘನವಾಗಿಹ ನಿರಾಳವು. ಅದು ನುಡಿದುದು, ಅದೆಂದು ನುಡಿದುದು, ನುಡಿದುದು ಮೌನ, ಮುದ್ರಿತವಾಗಿಹ ಬಯಲು ಆಗದು. ಘನವ ಕಂಡ ಮನ ನುಡಿಗೆಡೆಗೊಡದ ಮನ ತಾನು ಕಂಡು ಘನಕ್ಕೆ ಘನವೆನಲಿಲ್ಲ, ಘನವು ಮೌನ, ಘನವ ಕಂಡ ಮನವು ಮೌನ. ಮೌನೇಶನ ದರ್ಶನ

ಮೌನವಾಗಿ ಕಂಡುದು, ಇಲ್ಲಿ ಮೂಕ ಮೂಕರ ದರ್ಶನ ವಾಚಾಳಿ ವರ್ಣಿಸುವದದೆಂತು.

ಘನವ ಮನ ಕಂಡು : ಇದು ಉಪಾಧಿಯಿಂದುಕ್ತವಾಗದ ಮನ, ಉಪಾಧಿ ರಹಿತವಾಗದ ಮನ, ಇವೆರಡು ಕಾಣದ ಮನ. ಅದು ಪ್ರವೃತ್ತಿಯು ಆಗದ ಮನ, ನಿವೃತ್ತಿಯು ಆಗದ ಮನ. ಅಲ್ಲಿ ಪ್ರಪಂಚ ಸತ್ಯ ಮಿಥ್ಯೆವೆಂಬುದಿಲ್ಲ ಪರಮಾರ್ಥ ಸತ್ಯ ಮಿಥ್ಯೆವೆಂದುದಿಲ್ಲ ಇವೆರಡಕ್ಕೂ ಮಿಕ್ಕಿ ಮೀರಿ ನಿಂದ ನಿಲುವುಳ್ಳ ಮನ. ಆವಾವುದನ್ನು ನೆನೆಯದ ಮನ, ಗಣನೆಗತೀತವಾದ ಮನ, ಕಲ್ಪನೆ ಕಲ್ಪಿತರ ಸೇರದ ಮನವಾಗಿ ಅಕಲ್ಪಿತವ ಕಂಡುದು. ನಿಶ್ಚಿಂತವಾಗಿ ಅಚಿಂತ್ಯ ಘನವ ಕಂಡುದು ಇದು ವರ್ಣಾತೀತ. ಇದು ಜ್ಞಾನದ ಪೂರ್ಣಾವಸ್ಥೆ ಘನವ ಮನ ಕಂಡ ನಿಲಯ, ಬೇಧಾತೀತ ನಿಲಯ , ಇದು ಅಕಥನೀಯವಾಗಿದೆ. ಇಲ್ಲಿ ಕಾಣದುದು ಕಂಡುದು ಹೇಳುವದಕ್ಕೆ ಜಗತ್ತಿನಲ್ಲಿ ಆವುದೆ ಭಾಷಾ ಅಥವಾ ಸಾಧನೆಗಳು ಇರುವುದಿಲ್ಲ, ಇದು ಮೂಕ ಸಕ್ಕರೆ ತಿಂದುದು, ಅನುಭವ ರೂಪವಾಗಿದೆ ಹೊರ್ತ ಅದು ನುಡಿದು ಹೇಳಿದುದದೆಂತು.

ಘನವ ಮನ ಕಂಡುದು : ಇದು ಅರಿದರುಹಿಸಿಕೊಂಬುದಕ್ಕೂ ಮೀರಿ ನಿಂತು ಘನ ಕಂಡಿತೆ? ಇದು ಅರಿಸಿಕೊಳ್ಳುವದಾಗಲಿಲ್ಲ ಅರಿಯುವದಾಗಲಿಲ್ಲ ಇವೆರಡಕ್ಕೂ ಮೀರಿದ ಘನವ ಕಂಡು ತಾ ಘನವೆನಲಿಲ್ಲ , ಘನವದು ಘನ ಎನಲಿಲ್ಲ ಏನೂ ಎನದಿದ್ದ ಘನವ ಕಂಡ ಮನಕ್ಕೇನನ್ನಬೇಕು? ಅಂಗ ನೆನಲು ಬರದು , ಲಿಂಗ ಲಿಂಗವೆನಲು ಬರದು , ಅಂಗ ಲಿಂಗ ಬೇರೆನ್ನಲು ಬರದು, ಒಂದೆನಲು ಬರದು. ಏನೂ ಎನ್ನಲು ಬಾರದ್ದರಿಂದ, ಅಂಗನೆನಲಿಲ್ಲ ಲಿಂಗನೆನಲಿಲ್ಲ, ಅಂಗ, ಲಿಂಗ, ಬೇರೆನಲಿಲ್ಲ , ಒಂದೆನಲಿಲ್ಲಾ ನಾ ನೆನಲಿಲ್ಲ ನೀನೆನಲಿಲ್ಲ. ಘನವು ಕಲ್ಪಿತವಾಗದು ನುಡಿಗೊಳಪಡದು ಅದು ವಿವರಿಸಲು ಬಾರದ ನಿರಂತರವು . ಘನ ಮನ ಒಂದಾದುದು ವರ್ಣಿಸುವದದೆಂತು? ಎರಡೊಂದಾದುದು ಶಬ್ದಕ್ಕೆ ತೆರೆಹಿಲ್ಲವು . ಅನಿಮಿಷ ದೃಷ್ಠಿ ಅದನು ಕಾಣಬಂದ ಪ್ರಭುವಿನ ಮನ ಎರಡೊಂದಾದುದು. ಶಬ್ದದಿಂದುಸರಲು ಸಂದುಂಟೆ ? ಅನಿಮಿಷ ದೃಷ್ಠಿ ಅಚಿಂತ್ಯದ ನಿಲುವು ಅದನು ನೋಡ ಬಂದ ಪ್ರಭುವಿನ ಮನ ನಿಶ್ಚಿಂತವಾದುದು ಅರಿದರಿದ ಅರು ಹೃದಯ ಅರುವಿಂಗರುವ ಕಂಡುದು ಉಪಮಿಸಲಳವಲ್ಲ.

ಪಾದವಿಲ್ಲದ ಗುರು ಘನವ ತಲೆಯಿಲ್ಲದ ಶಿಷ್ಯನ ಮನವ ಕಂಡಿತೆ: ಅರಿಯದರುವ ಅರುಹೃದಯ ಕಂಡಿತೆ ! ಇದು ಅರಿದರುಹಿಸಿ ಕೊಂಬುದಕ್ಕೂ ಮಿಕ್ಕಿ ಮೀರಿ ನಿಂತು ನೋಡಿದುದು, ಪಾದವಿಲ್ಲದ ಗುರು ನೋಡದ ನೋಟ, ತಲೆಯಿಲ್ಲದ ಶಿಷ್ಯ ನೋಡಿ ನೋಡದಂತಾದುದು ಇದನಾರಯ್ಯ ಹೀಗೆ ಎಂದು ವಿವರಿಸುವುದು.

ಅದನೊಂದು ಮಾತಿಂಗೆ ತಂದು ನುಡಿದು ನೋಡಿದರೆ ಅದಕ್ಕದೆ ಕಿರಿದು ನೋಡಾ ಹೊರಗಿದ್ದಿಹನೆಂದು ನಾನು ಮರೆದು ಮಾತನಾಡಿದೆ, ಅರಿಯಲೀಯದೆ ಬಂದೆನ್ನ ಅಂತರಂಗದಲ್ಲಿಪ್ಪನು ತೆರಹಿಲ್ಲದಭವ ನುಡಿಗೆಡೆಗೊಡನು , ಆತನ ಬಯಲಿಂಗೆ ಬೇಟೆಗೊಂಡೆನವ್ವಾ.

ಬಹು ಶಿಷ್ಯರು ಗುರು ಘನವ ಹೊರಗೆ ಕಂಡುದರಿಂದ , ಅದನೊಂದು ಮಾತಿಂಗೆ ತಂದು ನುಡಿದು ನೋಡಿದುದರಿಂದ ಶಿಷ್ಯನ ಹೃದಯ ಅರುವಿಂಗರುವಾಗದಿದ್ದುದು . ಅದನೊಂದು ಮಾತಿಂಗೆ ತಂದು ನುಡಿದುದು ತ್ರಾಹಿ ತ್ರಾಹಿ ನೋಡದ ನೋಟವ ಕಂಡು ,ತಾ ನೋಡುವ ನೋಟವಾಗಿ ಅದನೊಂದು ಮಾತಿಂಗೆ ತಂದು ನುಡಿದುದು ತ್ರಾಹಿ ತ್ರಾಹಿ ಅರಿಯದರುವು ಕಂಡು ಕಂಡು ಅಲ್ಲಿ ದೃಶ್ಯ ದೃಕ್‌ವೆಂಬ ಅದನೊಂದು ಮಾತಿಂಗೆ ತಂದು ನುಡಿದುದು ತ್ರಾಹಿ ತ್ರಾಹಿ. ಅರುವಿಂಗರುವಾಗಿಹ ಘನವ ಕಂಡು ಅರಿದೆ ಮರದೆನೆಂಬ ಅದನೊಂದು ಮಾತಿಂಗೆ ತಂದು ನುಡಿದುದು ತ್ರಾಹಿ ತ್ರಾಹಿ . ತನ್ನಿಂದ

ಗುರುವ ಕಂಡು ಗುರುವಿನಿಂದ ತನ್ನ ಕಂಡುದು ನೋಡದ ನೋಟ ಅರಿಯಲಿಲ್ಲದ ಅರುವು. ಅರುವಿಂಗರುವಾಗಿಹ ಸ್ವಮಹಿಮೆ . ಅದನೊಂದು ಮಾತಿಂಗೆ ತಂದು ನುಡಿದುದು ತ್ರಾಹಿ ತ್ರಾಹಿ . ಶಬ್ದ ಸಂಭ್ರಮದ ವಶಗತವಾದುದು ಕೆಟ್ಟ ಕೇಡಿಂಗೆ ಕಡೆಯಿಲ್ಲ ನೋಡಾ. ತೆರೆಹಿಲ್ಲದ ಭವವೆಂಬುದು ನುಡಿಗೊಳಪಟ್ಟಿತೆ ? ನುಡಿಗೆಡೆಗೊಡದ ಘನ ಅದನೊಂದು ಮಾತಿಂಗೆ ತಂದು ನೋಡಿದಡೆ ಅದಕ್ಕದೆ ಕಿರಿದು ನೋಡಾ ಎಂದು ಹೇಳಿದುದು .

ಬಯಲಿಂಗೆ ಬೇಟೆಗೊಂಡಿತೆ ? ಅನಿಮಿಷನೆಂಬ ಬಯಲಿಂಗೆ ಪ್ರಭುವೆಂಬ ಅರುಹೃದಯ ಅದರ ಆಹಾರವಾಯಿತ್ತೊ ? ಇದನಾರಯ್ಯ ಹೀಗೆ ಎಂದು ವಿವರಿಸುವದು ? ಬಯಲು ಬಯಲ ಕಂಡದು ಅದನೆಂತು ವಿವರಿಸುವುದು. ಘನವು ಶಬ್ದಮುಗ್ಧ ಈ ಶಬ್ದಮುಗ್ಧ ಕಂಡ ಮನವು ಶಬ್ದಮುಗ್ಧ. ಇಲ್ಲಿ ಆವುದಕ್ಕೆ ಆವುದು ಬೇಟೆಗೊಂಡದು ? ಅಪೂರ್ವದ ಮೂಕನನ್ನು ಪೂರ್ವದ ಮೂಕನು ಕಂಡನೆನಬೇಕೆ ? ಮೂಕ ಅನುಪಮ, ಅಲ್ಲಿ ಪೂರ್ವಿಕ ಅಪೂರ್ವಿಕರಿಗಿಂಬಿಲ್ಲ ನೋಡಾ, ಮಹಾಕಾಶವು ಅಪೂರ್ವಿಕವು, ಘಟಾಕಾಶವು ಪೂರ್ವಿಕವೆನಬೇಕೆ ? ಆಕಾಶವತ್ ಆಕಾಶವದು ಇದ್ದಂತಿದ್ದ ಘನವು, ಅಲ್ಲಿ ಕಿರಿದಾದುದಿಲ್ಲ ಹಿರಿದಾದುದಿಲ್ಲ . ಒಳಗಿದ್ದುದೆನ್ನಲು ಬರದು, ನುಡಿಗೆಡೆಗೊಡದ ಘನವಾಗಿಹ ಬಯಲಿಂಗೆ ನುಡಿಗೆಡೆಗೊಡದಂತಾದ ಅರುವು. ಆವುದು ಅಪೂರ್ವಿಕ, ಆವುದು ಅಪೂರ್ವಿಕ , ಆವುದು ಏರಡೊಂದಾದುದು ? ಬಯಲಿಂಗೆ ಬೇಟೆಗೊಂಡುದು ಇದುವೆ ಅದನೊಂದು ಮಾತಿಂಗೆ ತಂದು ನೋಡದ ಘನಮಹಿಮವು ನೋಡಾ .

ಅಲ್ಲಿಯೆ ಅದೇನೂ ಇಲ್ಲದ ನಿಸ್ಸಂಗ ಸುಖವು ಗುಹೇಶ್ವರಾ:

ಅದೇನೂ ಇಲ್ಲದ ನಿಸ್ಸಂಗ ಸುಖವು ಇದಾವ ಸುಖವು? ಇದು ಗುಹೇಶ್ವರನ ಸುಖವು. ಇದು ನಿಸ್ಸಂಗ ಸುಖವು. ಅಂಗವಿಲ್ಲಾಗಿ ಅನ್ಯ ಸಂಗವಿಲ್ಲವಯ್ಯ , ಅನ್ಯಸಂಗವಿಲ್ಲಾಗಿ ಮತ್ತೊಂದು ವಿವರಿಸಲಿಲ್ಲಯ್ಯ ಮತ್ತೊಂದು ವಿವರಿಸಲಿಲ್ಲಾಗಿ ನಿಸ್ಸಂಗವಾಯಿತ್ತಯ್ಯ ಗುಹೇಶ್ವರಾ ನಿಮ್ಮ ನಾಮ ವಿಂತುಟಯ್ಯ . ನಿಸ್ಸಂಗ ಪರಿಚಯ ಸಂಗಿಗೆ ಹೇಗೆ ಸಾಧ್ಯ? ಅಕಲ್ಪಿತದರುವು ಕಲ್ಪಿತರಿಗೆ ಹೇಗೆ ಸಾಧ್ಯ. ಅಕಲ್ಪಿತ ಅಲ್ಲಿ ಕಲ್ಪಿತಕ್ಕಿಂಬುಂಟೆ ? ಅಲ್ಲಿ ಕ್ಷರ , ಅಕ್ಷರ ವೆನ್ನದ ಅನುಪಮ ನಾಶ ಅವಿನಾಶ ಕಾಣದ ಅನುಪಮ ಖಂಡಾಖಂಡ ಸಂಯೋಗವಿಲ್ಲದ ಅಖಂಡ , ಅಲ್ಲಿ ತನು ತ್ರಯಾದಿಗಳ ಸಂಗವಿಲ್ಲ ಸಂಗವಿಲ್ಲಾಗಿ ಸಾಕ್ಷಿ ಎನಲಿಲ್ಲ ದೇಹಾದಿಗಳಿಲ್ಲ ದೇಹಿ ಎನಲಿಲ್ಲ ದೇಹಿಗೆ ದೇಹಿಯಾದುದು ಬ್ರಹ್ಮಾದಿಗಳರಿಯರು,ಮನು ಮುನಿಗಳರಿಯರು. ಸಿದ್ಧಸಾಧಕರರಿಯರು ಅರುವಿಂಗರುವಾದುದರಲ್ಲಿ ಪ್ರಕಾಶಿತವಾವುದು ಪ್ರಕಾಶಕ ವಾವುದು ಬೆಳಗಿಸಿಕೊಳ್ಳುವುದಾವುದು, ಬೆಳಗುವುದಾವುದು?

ಆಕಾಶವು ನಿಸ್ಸೀಮವು. ಅಲ್ಲಿ ಘಟ ಮಠಗಳ ಕಾಣಲುಂಟೆ? ಆಕಾಶವತ್ ಆಕಾಶವಿರುವಲ್ಲಿ ಘಟಾಕಾಶ ಮಠಾಕಾಶವೆಂಬ ಕಲ್ಪಿತವ ಕಾಣಲುಂಟೆ? ಕಂಡರೂ ಇದ್ದಂತಿದ್ದ ಘನ ಅದನಾರಯ್ಯ ತಿಳಿವುದು, ಅನಿತ್ಯವಾವುದು? ನಿತ್ಯವಾವುದು? ಅಲ್ಲಿ ಜೀವತ್ವವೆಲ್ಲಿ ಪರಮತ್ವವೆಲ್ಲಿ, ನಿಸ್ಸಂಗವದು ನಿಸ್ಸಂಗವೆನ್ನದ ಘನಕ್ಕೆ ಘನ, ಮನಕ್ಕೆ ಮೇರೆದಪ್ಪಿದ ಮಹದರುವು. ಆಕಾಶಕ್ಕೆ ಕತ್ತಲು ಬೆಳಕುಂಟೆ ? ನಿಸ್ಸಂಗ ನೆನ್ನದ ನಿಸ್ಸಂಗ ಅದು ಸಂಗನ ಕಂಡುದೆಂದು? ನಿಸ್ಸಂಗವ ಕಂಡುದೆಂದು ? ನಿಸ್ಸಂಗವದು ನಿರವಧಿ ಅಲ್ಲಿ ಅಂಗವಿಲ್ಲಾಗಿ ಅನ್ಯ ಸಂಗವಿಲ್ಲ. ಅನ್ಯ ಸಂಗವಿಲ್ಲಾಗಿ ಕ್ಷರವೆಂಧು ಹೇಗೆ ಹೇಳುವುದು. ಕ್ಷರವ ಕಾಣದಿರುವಲ್ಲಿ ಅನ್ಯ ಸಂಗವಿಲ್ಲ ಸಂಗವಿಲ್ಲದ್ದರಿಂದ ಮತ್ತೊಂದು ವಿವರಿಸಲಿಲ್ಲ. ಅಂಗನೆನಲಿಲ್ಲ ಲಿಂಗನೆನಲಿಲ್ಲ ಲಿಂಗೈಕ್ಯ ನೆನಲಿಲ್ಲ ಸಂಗವೆನಲಿಲ್ಲ, ಸಮರಸ ವೆನಲಿಲ್ಲ ಏನೂ ಏನ್ನಲು ಬಾರದುದು. ಅದೇನೂ ಇಲ್ಲದ ನಿಸ್ಸಂಗ ಸುಖವು ಈ ಸುಖ ಸುಖದ ಸುಖ ತಾನೆ ಸುಖವಾಗಿಹ ಸುಖ. ನಿಜ ಸುಖ,

ಸುಖವೆನ್ನದ ಸುಖ ಅಚ್ಚಸುಖ ನಿರಂತರ ಸುಖ. ಸುಖಮಯವು ಗುಹೇಶ್ವರಾ ಎಂದು ಹೇಳಿದುದಲ್ಲದೆ ಮೂಕನ ಸುಖವ ಅದೆಂತು ವರ್ಣಿಸುವುದು ಎಂದುದು.

136

ಸಚರಾ ಚರ ವೆಂಬುದೊಂದು ಕಿಂಚಿತ್
ಚತುರ್ಯುಗವೆಂಬುದೊಂದು ಕಿಂಚಿತ್
ಅಪ್ಪುದೆಂಬುದೊಂದು ಕಿಂಚಿತ್
ಆಗದೆಂಬುದೊಂದು ಕಿಂಚಿತ್
ತನು ಶುದ್ಧವಾದ ಶರಣಂಗೆ
ಗುಹೇಶ್ವರನೆಂಬುದೊಂದು ಕಿಂಚಿತ್. ॥ 657 ॥

ತಾತ್ಪರ್ಯ : ಸಚರಾ ಚರವೆಂಬುದೊಂದು ಕಿಂಚಿತ್: ಸ್ಥಾವರ ಜಂಗಮ ಜಗತ್ತು ಇವೆರಡು ಕಿಂಚಿತ್ ಆದವೆ ? ಅಲ್ಪವಾದವೆ ? ತೃಣವಾದವೆ ? ಆರಿಗೆ ? ತನು ಶುದ್ಧವಾದ ಶರಣಂಗೆ ನಿಷ್ಕಳಂಕ ಶರಣ, ನಿಜೈಕ್ಯ ಶರಣ, ನಿರಾಲಂಬ ಶರಣಂಗೆ ಅದಾವುದರ ಆಲಂಬನವುಳ್ಳವನಾಗಬೇಕು? ತೋರದಡಗದ ಘನವೆ ತಾನಾಗಿಹ ಸ್ವಮಹಿಮಂಗೆ ತೋರಿ ಅಳಿವುದೆ ಹೇಗೆ ಘನವಾಗಬೇಕು, ಸೂರ್ಯನಿಗೆ ನಕ್ಷತ್ರಗಳು ಘನವಾಗಬಹುದೆ? ವಿದ್ಯುದ್ದೀಪಂಗಳು ಘನವಾಗಬಹುದೆ? ಸೂರ್ಯನೆತ್ತ? ವಿದ್ಯುದ್ದೀಪಂಗಳೆತ್ತ? ಕಲ್ಪಿತವೆತ್ತ, ಅಕಲ್ಪಿತ ಘನವೆತ್ತ! ಉಪಾದಿಯಿಂದುಕ್ತವಾಗಿಹ ಚೇತನವೆತ್ತ? ನಿರುಪಾಧಿಯಾಗಿಹ ನಿರವಧಿ ಚೈತನ್ಯವೆತ್ತ. ಅನಾದಿ ಅನಂತವೆತ್ತ ಅನಾದಿ ಸಾಂತವೆತ್ತ ಮರವೆತ್ತ, ಅರುವೆತ್ತ, ಅರುವು ಅರುವೆಂಬ ನುಡಿಯಿಂದುಕ್ತವಾದುದೆತ್ತ? ಅರುವಿಂಗರುವು ಆಗಿಹ ನಿಃಶಬ್ಧಬ್ರಹ್ಮವೆತ್ತ?

ನಿಃಶಬ್ಧವೇದಿಗೆ, ಶಬ್ಧವೇದವು ಕಿಂಚಿತ್ ಆಗಿದೆ. ತೋರಿ ಇಲ್ಲವಾಗುವ ಕಲ್ಪಿತವೆತ್ತ ? ನಿರಂತರವಾಗಿಹ ಮಂಗಳಮಯವೆತ್ತ! ತನು ಶುದ್ಧವಾದ ಶರಣ ಶುದ್ಧವರಿತು ಶುದ್ಧವಾಗಿಹ ಶರಣ, ನಿಷ್ಕಳಂಕಂಗೆ ಕಳಂಕ ವೇತರದು ? ನಿಷ್ಕಳಂಕ ಶರಣನಲ್ಲಿ ದೋಷವ ಕಾಣುವುದು ತ್ರಾಹಿ ತ್ರಾಹಿ ನೋಡಾ. ನಿರಂತರ ಮಂಗಳಮಯವಾಗಿಹ ಪರತತ್ವ ತಾನಾಗಿಹುದೆ, ತಾನು ಶುದ್ಧವಾದ ಶರಣ. ತಾನು ನಿರಂತರ ಮಂಗಳಮಯ. ತನ್ನಲ್ಲಿ ಅಮಂಗಳವಿದ್ದುದೆಂದು? ತನ್ನ ಘನವ ತನ್ನಿಂದ ತನಗದು ವಿದಿತವಾಗದಿದ್ದುದೆ ಅಮಂಗಳ. ಸಚರಾಚರವೆಂಬ ಕಿಂಚಿತ್ ಇದು ಅಮಂಗಳ ತಾನು ಮಂಗಳಮಯ, ನೋಡದ ನೋಟವೆತ್ತ, ನೋಡುವ ನೋಟವೆತ್ತ, ಕಲ್ಪಿತನಾಗಿ ಕಾಣುವ ನೋಡುವ ನೋಟವೆತ್ತ! ಅಕಲ್ಪಿತ ನೋಟ ನೋಡದ ನೋಟ ತನ್ನ ನೋಟ ತಾನೆ ತಾನಾದ ನೋಟ. ಅಚಿಂತ್ಯ ನೋಟ ಅಪ್ರಮಾಣ ನೋಟ ಪ್ರಮಾಣರೂಪಿ ನೋಟವು, ನೋಡುವ ನೋಟ ಅದು ನೋಡಿದುದೆಂದು? ನಿರಂತರವಾದುದು ಅಚಿಂತ್ಯವು.

ಪ್ರಮಾತೃ, ಪ್ರಮಾಣ, ಪ್ರಮೇಯದಿಂದುಕ್ತವಾದ ನೋಟ ಕಿಂಚಿತ್ ಇದು ಭ್ರಮಾತ್ಮಕನಾಗಿ ಕಾಣುವ ನೋಟ ಇದು ಕಿಂಚಿತ್. ನಿರಂತರವಾಗಿಹ ಮಂಗಳಮಯ ತತ್ವವರಿತು ಅದುವೆ ತಾನಾಗಿಹ ಘನವಂತನಿಗೆ ಸಚರಾಚರವೆಂಬುದೊಂದು ಕಿಂಚಿತ್ ಆದುದು ಎಂದು ಹೇಳಿಹರು.

ಚತುರ್ಯುಗ ವೆಂಬುದೊಂದು ಕಿಂಚಿತ್, ಚತುರ್ಯುಗವೆಂಬುದು ಕಿಂಚಿತ್ ಆದುದು ಅದಾರಿಗೆ? ತಾನೆ ಶುದ್ಧವಾದ ಶರಣಂಗೆ, ಶರಣನೆಂದರೆ ತಾನಾರೆಂದು ತನ್ನ ಅರಿತ ಘನವಂತ, ಅರುವ

ಅರಿದಿಹ ಘನವಂತ,ಅರುವೆಂಬುದೆ ಘನವಾಗದ್ದರಿಂದ ಚತುರ್ಯುಗವೆಂಬುದು ಕಿಂಚಿತ್ ಆಗುವದೇನಾಶ್ಚರ್ಯ.

ಆರು ಕೋಟಿ ಬ್ರಹ್ಮರು ಮಡಿವಲ್ಲಿ ನಾರಾಯಣಂಗೆ ಒಂದು ದಿನವಾಯಿತ್ತು. ನಾರಾಯಣರೊಂದು ಕೋಟಿ ಮಡಿವಲ್ಲಿ ರುದ್ರನ ಕಣ್ಣೆವೆ ಹಳಚಿತ್ತು. ರುದ್ರಾವತಾರ ಹಲವಳಿದಲ್ಲಿ ಕೂಡಲಸಂಗಮದೇವ ನೇನೆಂದೂ ಅರಿಯನು. ನಾಲ್ಕು ಯುಗಂಗಳು ಸಹಸ್ರವೇಳೆ ತಿರುಗಿದಡೆ ಬ್ರಹ್ಮನಿಗೊಂದು ದಿನವಾಗುವಲ್ಲಿ ಇಂಥ ಆರು ಕೋಟಿ ಬ್ರಹ್ಮರು ಮಡಿವಲ್ಲಿ ಕೂಡಲಸಂಗಮ ದೇವನೆಂಬುದು ನಿರಂತರವಾಗಿರುವ ಮಂಗಳಮಯತತ್ವ. ಅದು ಅರಿಯದರುವು, ಏನೆಂದೆನಲಿಲ್ಲದ ಅರುವು ಅಲ್ಲಿ ಬೆಳಗಿಸಿಕೊಳ್ಳುವ ಅನಾತ್ಮವಿಲ್ಲ ಬೆಳಗುವ ಆತ್ಮನೆಂಬುದಿಲ್ಲ ನಿಸ್ಸೀಮವಾಗಿಹ ಅಖಂಡಿತ ಘನ ಪರಿಪೂರ್ಣವಪ್ಪ ಇರುವೆ ತಾನಾದ ಶರಣ, ನಿಃಶಬ್ದ ಬ್ರಹ್ಮವೆ ತಾನಾಗಿಹ ಸ್ವಮಹಿಮಂಗೆ ಆವುದು ಘನವಾಗಿ ಕಾಣುವುದು .

ಚತುರ್ಯುಗಂಗಳು ಮಾನವನ ದೃಷ್ಟಿಗೆ ಆದಿಯಾಗಿವೆ. ಬ್ರಹ್ಮನು ಅನಾದಿಯಾಗಿಹನು ಮಾನವ ಮಾನವನಿಗೆ ಬ್ರಹ್ಮನು ಅನಾದಿಯಾದರೆ ಬ್ರಹ್ಮನಿಗೆ ನಾರಾಯಣನು ಆದಿಯಾಗಿಯನು ನಾರಾಯಣನಿಗೆ ರುದ್ರನು ಆದಿಯಾಗಿಹನು. ಕೂಡಲಸಂಗಮದೇವನಿಗೆ, ಚತುರ್ಯುಗಗಂಗಳು ಕಾಣವು. ಆರು ಕೋಟಿ ಬ್ರಹ್ಮರು ಹುಟ್ಟಿದುದು ಅರಿಯ ಅಳಿದುದು ಅರಿಯ ನಾರಾಯಣರೊಂದು ಕೋಟಿ ಹುಟ್ಟಿದುದು ಅರಿಯ ಅಳಿದುದು ಅರಿಯ , ಹಲವು ರುದ್ರಾವತಾರವಾದುದು ಕಾಣ. ಅಳಿದುದು ಕಾಣ . ಕೂಡಲಸಂಗಮದೇವನು ನಿರಂತರವಾಗಿಹ ಮಂಗಳಮಯ ತತ್ವ ಈ ಪರತತ್ವವೆ ತಾನಾಗಿಹ ಶರಣಂಗೆ ಆರು ಕೋಟಿ ಬ್ರಹ್ಮರು ಮಡಿಯಲಿ, ನಾರಾಯಣರೊಂದು ಕೋಟಿ ಮಡಿಯಲಿ ರುದ್ರರು ಮಡಿದರೂ ಗಣನೆಗಿಲ್ಲದ ಶರಣಂಗೆ ಚತುರ್ಯುಗಂಗಳು ಹೇಗೆ ಶ್ರೇಷ್ಠವಾಗುವವು. ಇದು ಕಾರಣ ತನ್ನ ನರಿದ ಶರಣ ನಿರಂತರವಾಗಿಹ ಮಂಗಳಮಯ ತಾನಾಗಿರುವದರಿಂದ ಚತುರ್ಯುಗವೆಂಬುದು ಕಿಂಚಿತ್ ಎಂದು ಹೇಳಿಹರು. ಅಪ್ಪುದೆಂಬುದೊಂದು ಕಿಂಚಿತ್, ಆಗದೆಂಬುದೊಂದು ಕಿಂಚಿತ್, ತನ್ನ ತಾನರಿತ ಶರಣಂಗೆ, ನಾನು ಈಗ ಆತ್ಮನಾದೆ, ಇನ್ನು ಆತ್ಮನಾಗಿಲ್ಲ ಎಂಬುದು ಕಾಣಬಹುದೆ? ನಾನೀಗ ಮುಕ್ತನಾದುದು, ಮುನ್ನ ಮುಕ್ತನಾಗಿದ್ದಲ್ಲವೆಂಬುದು ಕಾಣಬಹುದೆ?

ನಿರಂಜನ ನಿಜ ಚಿದ್ರೂಪ ತಾನಾದ ಶರಣ. ನಿರಂತರ ತಾನಾದ ಸ್ವಮಹಿಮ, ಸ್ವರೂಪ ಸಾಕ್ಷಾತ್ಕಾರ ನಿರಂತರವಾಗಿರುವದು. ಅಲ್ಲಿ ಅರುವು ತಾನೆಂಬ ಮಮತೆಗೆ ಎಡೆಗೊಡಬಹುದೆ? ಎಡೆಗೊಡನು, ಎಡೆಗೊಡದಿದ್ದಲ್ಲಿ ಮರವುಳ್ಳವ ತಾನೆನ್ನಬಹುದೆ?

ತೆರೆಹಿಲ್ಲದ ಘನನು ಅರವು ಮರವುಳ್ಳವನಾಗಬಹುದೆ. ನಿಸ್ಸೀಮವು ಸೀಮತವುಳ್ಳದ್ದಾಗಬಹುದೆ? ಆವುದ ಮರವಿನಿಂದುಕ್ತವಾಗಿದೆ, ಅದು ಚಿದ್ಘನನೆನ್ನುವದು ಸಹಜವು ಮುಕ್ತನೆನ್ನುವದು ಸಹಜವು. ಅದು ಪೂರ್ವದಲ್ಲಿ ಬಂಧನವ ಕಂಡದು ಸಹಜ. ಈಗ ಪುರುಷಾರ್ಥವ ಪಡೆದು ಮುಕ್ತನಾದೆನೆಂಬುದು ಸಹಜವಾಗಿದೆ. ಕಲ್ಪಿತ ಪುರುಷನು ಮರವಿನ ಅವಸ್ಥೆಯಲ್ಲಿದ್ದು ಬಂಧನವ ಕಂಡುದಾಗಿದೆ. ಅರುವಿನ ಅವಸ್ಥೆಯಲ್ಲಿದ್ದು ಮೋಕ್ಷವ ಕಂಡುದು ಸಹಜವೆನಿಸಿದೆ. ಆಕಾಶಕ್ಕೆ ಆಕಾಶವಾದುದು ಆಗದಿರುವುದು ಇದೆಯೆ? ನಿರಂತರ ಆಕಾಶವತ್ ಆಕಾಶವು ಶಬ್ದಮುಗ್ಧವು ಅಲ್ಲಿ ನುಡಿಗೆಡೆ ಎಲ್ಲಿಹುದು, ಅದನೊಂದು ಮಾತಿಂಗೆ ನುಡಿದುದು ಅದಕ್ಕದೆ ಕೊರತೆ ನೋಡಾ.

ನಿಃಶಬ್ದ ಬ್ರಹ್ಮವದು ನಿರಂತರವು. ಅಲ್ಲಿ ಅಪ್ಪುದೆಂಬುದೊಂದು ಕಿಂಚಿತ್ ಆಗದೆಂಬುದೊಂದು

ಕಿಂಚಿತ್ ಆತ್ಮಸಾಕ್ಷಾತ್ಕಾರ ನಿರಂತರ, ತನ್ನ ಸಾಕ್ಷಾತ್ಕಾರ ನಿರಂತರ ಏಕೆಂದರೆ ತಾನು ನಿರಂತರ, ತೆರೆಹಿಲ್ಲದಭವ ನುಡಿಗೆಡೆಗೊಡನು . ಚಿದಾಕಾಶವದು, ನಿರಂತರ ಚಿದಾಕಾಶ. ಅದು ಚಿದಾಕಾಶನೆಂಬುದು ಕಿಂಚಿತ್ ಆಗಿರುವಲ್ಲಿ ನಾನಿನ್ನು ಚಿದಾಕಾಶವಾಗಿಲ್ಲ. ಆಗಿರುವೆನೆಂಬುದು ಹೇಗೆ ಯತಾರ್ಥವಾಗುವದು. ಅರಿಯದ ಮುನ್ನ ಚಿದಾಕಾಶವಾಗಿದ್ದಿಲ್ಲ ಅರಿತು ಚಿದಾಕಾಶವಾದೆನೆಂಬುದು ಇದು ಅಪ್ಪುದೆಂಬುದೊಂದು ಕಿಂಚಿತ್ ಆಗದೆಂಬುದೊಂದು ಕಿಂಚಿತ್ ಎಂದು ಸೂಚಿಸಿದಂತಾಗುವುದು,. ಈ ದ್ವಿದೃಷ್ಟಿಯಿಂದುಕ್ತನಾದವನು ತೆರೆಹಿಲ್ಲದ ಘನನಾಗಬಹುದೆ? ಮಿಕ್ಕಿ ಮೀರಿ ನಿಂದ ನಿಲುವುಳ್ಳವನೆನಿಸಬಹುದೆ? ನಿಃಶಬ್ದವೇದಿಯು ಶಬ್ಧವೇದಿಯಾಗಬಹುದೆ? ನಿರಂತರವು ಬರ ಹೋಗುವ ಪದವುಳ್ಳದ್ದಾಗಬಹುದೆ? ಅನುಪಮವು ಉಪಮೆಗೊಳಪಡಬಹುದೆ? ಖಂಡಾಖಂಡ ಸಂಯೋಗವಿಲ್ಲದ ಅಖಂಡ ಘನವು ನಿರವಧಿಯು, ಅಲ್ಲಿ ನಾಮರೂಪ, ಅಸ್ತಿ ಭಾತಿ, ಪ್ರಿಯವೆಂಬ ಪಂಚ ಲಕ್ಷಣವ ಕಾಣಬಹುದೆ? ಅಚಿಂತ್ಯವು, ಚಿಂತನಕ್ಕೊಳಪಡಬಹುದೆ? ತಾನು ಶುದ್ಧವಾದ ಶರಣಂಗೆ ಗುಹೇಶ್ವರನೆಂಬುದು ಕಿಂಚಿತ್ ಎಂದು ಹೇಳಿರುವಲ್ಲಿ ತಾನು ಶುದ್ಧವಾದ ಶರಣ. ಶೃತಿಗಗೋಚರವಾಗಿಹ ಶರಣ ತನ್ನಿಂದ ತನ್ನ ಕಂಡ ಶರಣ ತಾನೆ ನಿರಂತರವಾಗಿಹ ಮಂಗಳಮಯ, ಶುದ್ಧಾತಿಶುದ್ಧ ಶರಣ, ಶುದ್ಧವ ಕಾಣದವ ಅಶುದ್ಧವ ಕಾಣದವ, ದೇಹವ ಕಾಣದವ, ದೇಹಿಯ ಕಾಣದವ, ದೇಹಿಗೆ ದೇಹಿಯಾದ ನುಡಿಗೆಡೆಗೊಡದ ಘನ. ಈ ಮಹಾಂತ ಮಿಗೆ ಮಿಗೆ ಮೀಸಲವಾಗಿಹ ತತ್ತ್ವವರಿತ ಸ್ವಯಂಜ್ಯೋತಿಯು, ಅದು ಜ್ಞಾನ ಜ್ಯೋತಿ, ಚಿಜ್ಯೋತಿ, ಅದು ಏನೆಂದುಸರದ ಘನವು ತನ್ನಿಂದ ತನ್ನ ನೋಡಿದುದು ಮಹಾಮಹಿಮವು, ನಿರಂಜನ ನಿಜ ಚಿದ್ರೂಪವಾಗಿಹ ಘನಕ್ಕೆ ಘನವು. ಇವರೆ ಪರತತ್ವ ನಿಜ ಸಂಯುಕ್ತರು ನಾ ನೀನೆನ್ನದಿಹ ಶಬ್ದ ಸುಖಿಗಳು . ಲಿಂಗೈಕ್ಯರು ಅಹುದು. ಲಿಂಗ ಸಂಗಿಗಳು ಅಹುದು, ಲಿಂಗ ಗೂಡಾಗಿಪ್ಪವರು ಅಹುದು. ಇವರು ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದವನರಿತವರಾದ್ದರಿಂದ ತಾನೆ ಶುದ್ಧವಾದ ಶರಣ ನಾದುದರಿಂದ ಗುಹೇಶ್ವರನೆಂಬುದು ಕಿಂಚಿತ್ ಎಂದು ಹೇಳಿಹರು.

ತಾನೆ ಶುದ್ಧವಾದ ಶರಣನು, ಚಿದಹಮ್ಮು ಮುಟ್ಟಿಸಿಕೊಳ್ಳನು, ಸೋಹಂ ಮುಟ್ಟಿಸಿಕೊಳ್ಳನು ದಾಸೋಹಂ ಮುಟ್ಟಿಸಿಕೊಳ್ಳನು ಅರುವಿನ ಅಹಮ್ಮು ಮುಟ್ಟಿಸಿಕೊಳ್ಳದಿರುವಲ್ಲಿ ಕೋಹಂ ನಾಹಂ ದೇಹೋಹಂ, ಹೇಗೆ ಮುಟ್ಟಿಸಿಕೊಳ್ಳುವನು. ನಿಷ್ಕಳಂಕ ತಾನಾದ ಶರಣ ಲಿಂಗವೆಂಬುದನ್ನು ಮುಟ್ಟನು ಇದು ಕಾರಣ ತಾನು ಶುದ್ಧವಾದ ಶರಣಂಗೆ ಗುಹೇಶ್ವರನೆಂಬ ಅರುವು ಕಿಂಚಿತ್ ಎಂದು ಹೇಳಿಹರು. ಇದು ಗುರುವಿಡಿದ ಅರುವು ಅಲ್ಲ. ಲಿಂಗವಿಡಿದ ಅರುವು ಅಲ್ಲ. ಕಲ್ಪಿತಕ್ಕಿಂಬು ಕೊಡದ ಅರುವು. ತನ್ನಿಂದ ತನ್ನ ಕಂಡ, ನಿಜವು ಆಗಿರುವಲ್ಲಿ, ತನಗಿಂತ ಬೇರಾದುದೆಲ್ಲವು ಕಿಂಚಿತ್ ಆಗಿ ಕಂಡಿಹುದು.

137

ತಾ ಸುಖಿಯಾದಡೆ ನಡೆಯಲು ಬೇಡ.
ತಾ ಸುಖಿಯಾದಡೆ ನುಡಿಯಲು ಬೇಡ.
ತಾ ಸುಖಿಯಾದಡೆ ಪೂಜಿಸಲು ಬೇಡ.
ತಾ ಸುಖಿಯಾದಡೆ ಉಣಲು ಬೇಡ ಗುಹೇಶ್ವರಾ. ॥ 658 ॥

ತಾತ್ಪರ್ಯ: ತಾ ಸುಖಿಯಾದಡೆ ನಡೆಯಲು ಬೇಡ, ತಾ ಸುಖಿಯಾದಡೆ ನುಡಿಯಲು ಬೇಡ: ಈ ಪ್ರಭುವಿನ ಸಂಜ್ಞೆ ಅರಿತವರು ಸುಖ ತಾನೆ ಅಹುದು, ಸುಖದ ಸುಖ ನಡೆದುದು ಎಂದು? ನುಡಿದುದು ಎಂದು? ಸುಖ! ಸುಖವಾಗಿರುವಲ್ಲಿ ಪೂಜಿಸುವದಾರನ್ನು? ಸುಖವದು ಉಂಡ ಪರಿಣಾಮದ ಮೇರುವೆ ಏನನ್ನೂ ಉಣ್ಣದ ಪರಿಣಾಮದ ಮೇರುವೆ, ಉಣ್ಣದ ಊಟ. ಉಂಡ ಪರಿಣಾಮದ ಮೇರುವೆ , ತಾನೆ

ಆಗಿರುವಲ್ಲಿ ಊಟ ಮಾಡುವ ಹಂಬಲವಾದರೂ ಅದೆಲ್ಲಿಯದು .ಇದು ಕಾರಣ ತಾ ಸುಖಿಯಾಗುವಗೋಸ್ಕರ, ನಡೆಯುವ, ನುಡಿಯುವ, ಪೂಜಿಸುವ, ಉಣ್ಣದ ಊಟ ಉಣ್ಣುವುದು ನಡೆದಡೆ. ಈ ಕರ್ತವ್ಯ ಮುಕ್ತಾಯವಾಗುವದಿಲ್ಲವೆಂದಲ್ಲಿ, ತಾ ಸುಖವಾದುದು ಹೇಗೆ ಸಿದ್ಧವಾಗುವದು.

ಈ ಕಲ್ಪಿತ ಯಾತ್ರೆ ತಾ ಸುಖಿಯಾಗುವುದರ ಸಲುವಾಗಿ ಮರವಿನಿಂದ ದೇಹಭಾವಿಯಾಗಿ ಸುಖಿಯಾಗಲು, ಇಂದ್ರಿಯಗಳು ವಿಷಯ ಸಂಯೋಗಮಾಡಿ ಸುಖವಿದೆಂದು ಭ್ರಾಂತನಾಗಿ ಪ್ರಮಾತೃ ಚೇತನ, ಪ್ರಮೇಯ ಚೇತನ, ಪ್ರಮಾಣ ಚೇತನವೆಂದು ಈ ತ್ರಿಪುಟಿಯಿಂದುಕ್ತನಾಗಿ ಸುಖವ ಅರಸುವನು. ಅಲ್ಲಿಯು ಸುಖದ ಭಾಸವಾದಂತಾಗಿ ಅದು ಕಂಡು ಪುನಃ ಶ್ರೇಷ್ಠಸುಖಕ್ಕಾಗಿ ಕರ್ತವ್ಯಪರನಾಗುತ್ತಾನೆ. ಮತ್ತು ಸುಖದ ಸಲುವಾಗಿ ಪುನಃ ನುಡಿಯುತ್ತಾನೆ ನಡೆಯುತ್ತಾನೆಂದಲ್ಲಿ ಇದು ತಾ ಸುಖವಾದ ಸಂಕೇತವಲ್ಲ.

ಶ್ರೀ ಮನ್ನಿಜಗುಣ ಶಿವಯೋಗಿಗಳು ಆನಂದದಲ್ಲಿ ವಿಷಯಾನಂದ ವಾಸನಾನಂದ ಮಖ್ಯಾನಂದ ಬ್ರಹ್ಮಾನಂದ ಇವು ಅಜ್ಞಾನ ಅವಸ್ಥೆಯಲ್ಲಿ ತೋರುವ ನಾಲ್ಕು ಆನಂದಗಳು. ಜ್ಞಾನ ಅವಸ್ಥೆಯಲ್ಲಿ ತೋರುವ ನಾಲ್ಕು ಆನಂದಗಳು ಇವು ಯೋಗಾನಂದ, ಆತ್ಮಾನಂದ, ಅದ್ವೈತಾನಂದ, ವಿದ್ಯಾನಂದ ಇವು ಜ್ಞಾನಾವಸ್ಥೆಯಲ್ಲಿ ತೋರುವ ಆನಂದಗಳು . ಈ ಎಲ್ಲಾ ಆನಂದಗಳಲ್ಲಿ ವಿದ್ಯಾನಂದವೆ ಶ್ರೇಷ್ಠವಾದ ಆನಂದ . ಅದುವೆ ಸ್ವರೂಪಾನಂದವೆಂದು ಅದಕ್ಕೆ ಪ್ರಾಧಾನ್ಯತೆ ಕೊಟ್ಟು ಉಳಿದವುಗಳು ಗೌಣವು ಎಂದು ಹೇಳಿಹರು .

ಪಂಡಿತ ಪೀತಾಂಬರ ಜಿಯವರು ಬ್ರಹ್ಮಾನಂದ, ವಿಷಯಾನಂದ, ವಾಸನಾನಂದವ ಹೇಳಿ ಕೊನೆಗೆ ವಿದೇಹಿಯುಕ್ತಿಯ ಸುಖವನ್ನು ವರ್ಣಿಸಿಹರು. ಬ್ರಹ್ಮಾನಂದವೆಂಬುದು ಸಮಾಧಿ ಕಾಲದಲ್ಲಿ ಅಂದರೆ ಬುದ್ಧಿಯು ಬ್ರಹ್ಮಾಕಾರವಾದಾಗ ಪ್ರಕಟವಾಗುವ ಆನಂದ ಇದಕ್ಕೆ ಬ್ರಹ್ಮಾನಂದವೆಂದು ಕರೆದಿದ್ದಾರೆ. ಮತ್ತು ಸುಷುಪ್ತಿಯಲ್ಲಿರುವ ಬಿಂಭೂತವಾದ ಆನಂದ ಇವೆರಡು ಸೇರಿ, ಬ್ರಹ್ಮಾನಂದವೆನಿಸುತ್ತದೆ, ಎಂದು ಹೇಳಿಹರು. ವಿಷಯಾನಂದ, ಜಾಗ್ರತ, ಸ್ವಪ್ನ ಕಾಲಗಳಲ್ಲಿ ಕೋರಿದ ವಿಷಯವು ಪ್ರಾಪ್ತವಾದಾಗ ಚಿತ್ತವು ಏಕಾಗ್ರವಾಗುತ್ತದೆ. ಈ ಚಿತ್ತದಲ್ಲಿ ಆತನ ಸ್ವರೂಪ ಭೂತವಾದ ಆನಂದದ ಪ್ರತಿಬಿಂಬವುಂಟಾಗುತ್ತದೆ. ಈ ಆನಂದದ ಪ್ರತಿಬಿಂಬವೆ, ವಿಷಯಾನಂದ ವೆನಿಸುತ್ತದೆ. ಈ ವಿಷಯಾನಂದಕ್ಕೆ ಲೇಸಾನಂದ ಮಾತ್ರಾನಂದವೆಂದು ಹೆಸರು.

ವಾಸನಾನಂದವೆಂಬುದು ಸುಷುಪ್ತಿಯಿಂದ ಎದ್ದ ಕೂಡಲೆ ಉದಾಸೀನ ಅವಸ್ಥೆಯಲ್ಲಿ ಅನುಭವಿಸುವ ಆನಂದವೆ ವಾಸನಾನಂದವೆಂದು ಹೇಳಿದ್ದಾರೆ. ಹೆಚ್ಚಿನ ವಿಷಯ ಬೇಕಾದಲ್ಲಿ ಶ್ರೀಮನ್ನಿಜಗುಣರಿಂದ ರಚಿತವಾದ ಅನುಭವ ಸಾರದಲ್ಲಿ ಈ ಎಂಟು ಆನಂದಗಳನ್ನು ವಿಸ್ತಾರವಾಗಿ ತಿಳಿಸಿಹರು. ಅಲ್ಲಿ ನೋಡಿಕೊಳ್ಳುವುದು ಇಲ್ಲಿ ತಾ ಸುಖಿಯಾದಡೆ ನುಡಿಯಲು ಬೇಡ ಎಂಬುದು ನುಡಿಗೆಡೆಗೊಡದ ಘನದ ಸುಖವು. ಇದು ನಿರವಧಿ ಸುಖವು. ಅದನ್ನು ಭಾಷೆಯು ವಿಸ್ತರಿಸದು . ಇದು ಕಾರಣ ಪಂಡಿತ ಪೀತಾಂಬರಜಿಯವರು ವಿದೇಹ ಮುಕ್ತಿಯ ಸುಖವ ಹೇಳಿಹರು. ಪ್ರಪಂಚದ ಪ್ರತೀತಿ ಇಲ್ಲದೆ ಬ್ರಹ್ಮಸ್ವರೂಪದಲ್ಲಿ ಸ್ಥಿತಿ ಉಂಟಾಗುವುದು, ಆಗ ಪ್ರಾರಬ್ಧ ಕರ್ಮದ ಅನುಭವವು ಮುಗಿಯುತ್ತದೆ. ಸ್ಥೂಲ ಸೂಕ್ಷ್ಮ ಶರೀರದಲ್ಲಿ ಪರಿಣಮಿಸಿದ ಅಜ್ಞಾನವು ಚೇತನದಲ್ಲಿ ಲಯಿಸುತ್ತದೆ. ಇಲ್ಲಿ ಅಜ್ಞಾನ ಶಕ್ತಿಗಳಾದ ಆವರಣವೂ ಇಲ್ಲ ವಿಕ್ಷೇಪವು ಇಲ್ಲ. ಈ ಸ್ಥಿತಿಯನ್ನೆ ವಿದೇಹ ಮುಕ್ತಿಯೆನ್ನುತ್ತಾರೆ.

ಜ್ಞಾನಿಗೆ ಯಾವ ವಿಧಿಯು ಇಲ್ಲ. ಪ್ರಾರಬ್ಧ ಮುಗಿಯುತ್ತಲೆ, ಪ್ರಾರಬ್ಧ ಕಾಲದಲ್ಲಿದ್ದ ಬ್ರಹ್ಮಕಾರ ವೃತ್ತಿಯು ಇರುವುದು ಸಂಭವಿಸುವದಿಲ್ಲ. ವೃತ್ತಿಯಿರುವವರೆಗೆ ಜೀವನ್ಮುಕ್ತಿ ವೃತ್ತಿ ಹೋಗಿ ಸ್ಥಿತಿ

ಉಂಟಾದಡೆ ವಿದೇಹ ಮುಕ್ತಿ, ಇದನ್ನೆ ಭಗವದ್ಗೀತೆಯಲ್ಲಿ ಭಗವಂತನು ಸ್ಥಿತಿಪ್ರಜ್ಞನ ಲಕ್ಷಣದಲ್ಲಿ ಏಷಾಬ್ರಾಹ್ಮಿ ಸ್ಥಿತಿ ಎಂದು ಹೇಳಿಹರು.

ಇದು ಬ್ರಾಹ್ಮಿ ಸ್ಥಿತಿಯಾದುದುರಿಂದ ವಿದೇಹ ಮುಕ್ತಿಯಲ್ಲಿ, ದೇಹ ವಿರಬೇಕೆಂತಲೂ ಇಲ್ಲದಿರಬೇಕೆಂತಲೂ ನಿಯಮವಿಲ್ಲ. ನೋಡುವವರ ದೃಷ್ಟಿಯಲ್ಲಿ ಶರೀರವಿರಬಹುದು. ಸ್ವಸ್ವರೂಪ ದೃಷ್ಠಿಯಲ್ಲಿಲ್ಲ. ಅಗ್ನಿಯು ಕಟ್ಟಿಗೆಗಳಲ್ಲಿದ್ದು ತೃಣಾದಿಗಳನ್ನು ಸುಟ್ಟು ಕೊನೆಗೆ ತನ್ನ ಇರುವ ಕಟ್ಟಿಗೆಯ ಸಹ ಸುಟ್ಟುಕೊಂಡಂತೆ ಸಂಸ್ಕಾರ ರೂಪವಾದ ಆ ದೃಢ ಚೇತನವು ಸಹ ಪ್ರಪಂಚವನ್ನು ವಿಲಯಮಾಡಿ ತಾನಿರುವ ಸ್ಥಾನವಾದ ಸಂಸ್ಕಾರವನ್ನು ಸಹ ನಾಶ ಮಾಡುತ್ತದೆ. ಅನಂತರ ಉಳಿದಿರುವದು ಅಸಂಗ ಶುದ್ಧ ಸಚ್ಚಿದಾನಂದ ಸ್ವಪ್ರಕಾಶ ಚೇತನ ಬ್ರಹ್ಮಮಾತ್ರವದೆ ಇದಕ್ಕೆ ವಿದೇಹ ಮುಕ್ತಿ ಎಂದು ಹೇಳಿದ್ದಾರೆ.

ತಾ ಸುಖಿಯಾದಡೆ ನುಡಿಯಲು ಬೇಡ ತಾ ಸುಖಿಯಾದಡೆ ನಡೆಯಲು ಬೇಡ: ನಡೆಯುವುದು ನುಡಿಯುವುದು ಆವುದು ? ನುಡಿಯದವರು ಆರು ? ನಡೆಯದವರು ಆರು ?

ತಾ ಸುಖಿಯಾಗದವರು ನಡೆದುದು ಉಂಟು ನುಡಿದುದು ಉಂಟು, ಕಲ್ಪಿತ ಪುರುಷನು ಅಜ್ಞಾನಿಯಾಗಿ ನಡೆದುದು ಉಂಟು, ನುಡಿದುದು ಉಂಟು.

ನುಡಿಯದವರು , ನಡೆಯದವರು , ಇವರು ತಾ ಸುಖಿಯಾದವರು, ತಾ ಸುಖಿಯಾದವರೆಂದರೆ ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವ ಕೂಡಿ, ಅಚಲಾನಂದದೊಳಿಪ್ಪ ಪರಮ ನಿರ್ಲೇಪಿ ವಾಙ್ಮನಕ್ಕೆ ನಿಲುಕದ ಸ್ವರೂಪಾನಂದದಲ್ಲಿದ್ದ ಅಚ್ಚಸುಖಿ, ಸವೆಯದ ಸುಖಿ, ಅಖಂಡ ಸುಖಿಗೆ ಭಾವವಿಲ್ಲ ಭಾವವಿಲ್ಲಾಗಿ, ಜ್ಞಾನವಿಲ್ಲಾಗಿ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು. ತಾ ಸುಖಿಯಾದ ಸಂಕೇತವದು ತಾನಾರೆಂದರಿತು ತನ್ನ ಸುಖದಲ್ಲಿ ಸುಖಿಯಾದುದು. ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿತು ತಾನೆ ಲಿಂಗವಾಗಿ ಅಚಲಾನಂದದೊಳಿದ್ದು ಆ ಮಹಾಂತ ಪರಮ ನಿರ್ಲೇಪಿ ಅವನೆಂತು ನುಡಿಯುವವನಾಗುವನು ? ಅವನೆಂತು ನಡೆಯುವವನಾಗುವನು ? ಲಿಂಗವರಿತು ಲಿಂಗವಾಗಿಹ ಘನವಂತ ಸ್ವಯಂಜ್ಯೋತಿ ಅಚ್ಚಸುಖಿ ನಿರಂತರ ಸುಖಿ, ಸುಖ ಬೇರಲ್ಲ, ತಾನು ಬೇರಲ್ಲ ಸುಖವೆಂದರೆ ತಾನು ತಾನೆಂದರೆ ಸುಖಿ, ಸುಖವದು ನಡೆಯಬಹುದೆ? ನುಡಿಯಬಹುದೆ? ಸುಖವೆ ತಾನಾಗಿರುವಲ್ಲಿ ಸುಖವ ಹುಡಕಬಹುದೆ? ತಾನಿದ್ದು ತಾನೆ ತನ್ನ ಆರಾದರೂ ಹುಡುಕಬಹುದೆ? ಹುಡುಕ ಹೋದವರು ತಾನಾರೆಂದು ತನ್ನ ತಿಳಿದಿರಬಹುದೆ? ತಿಳಿದವರು ಹುಡುಕ ಹೋಗರು ಆರು ತಾನು ಕಲ್ಪಿತ ಪುರುಷನೆಂದು ಒಪ್ಪಿಕೊಂಡಿಹರು, ಅವನು ಮರವು ಅರುವುಳ್ಳವನಾದುದು ನಿಜ. ಸುಖವ ಕಳೆದುಕೊಂಡುದು ನಿಜ , ಸುಖವ ಪಡೆದುದು ನಿಜ, ಆರು ಅರಿದರುಹಿಸಿಕೊಂಬುದಕ್ಕೆ ಮೀರಿದ ಘನವ ತನ್ನಿರುವೆಂದರಿದ ಅನುಪಮ ಸುಖಿ ತಾ ಸುಖಿಯಾಗಿ ನುಡಿಯಲಿಲ್ಲ ನಡೆಯಲಿಲ್ಲ.

ಏನೆಂಬೆ ನೇನೆಂಬೆ ನೊಂದೆರಡಾದುದ ಏನೆಂಬೆ ನೇನೆಂಬೆ ನೆರಡೊಂದಾದುದ ಅವಿರಳ ಘನ ಲಿಂಗೈಕ್ಯವ, ಮಹಾದಾನಿ ಕೂಡಲಸಂಗಮದೇವಾ ತಾನೆ ಬಲ್ಲ. ತಾ ಸುಖಿಯಾದ ಸುಖ ಏನೆಂಬೆ ನೇನೆಂಬೆ ಮುನ್ನ ಮುನ್ನವಿದ್ದ ಸುಖವದು ಸುಖವೆನಲಿಲ್ಲ. ಅರಿಯಹೋದ ಅರುಹೃದಯ ಸುಖವೆನಲಿಲ್ಲ. ಸುಖವೆ ಸುಖವಾಗಿಹ ಘನವು ಅದನಾವ ಭಾಷೆಯಿಂದ ವಿಸ್ತರಿಸುವುದು . ಇದು ಭಾವಕ್ಕಿಂಬು ಕೊಡದ ಸುಖ. ಚಿಂತನಕ್ಕೆಡೆಗೊಡದ ಸುಖ, ನುಡಿಗೆಡೆಗೊಡದ ಸುಖ , ತನ್ನಿಂದ ತನ್ನ ಕಂಡ ಸುಖ. ಕೂಡದಗಲದ ಸುಖವಾದುದರಿಂದ ಅರ್ಚನೆ ಅರ್ಪಿತ ಕೆಟ್ಟುದರಿಂದ ತಾ ಸುಖಿಯಾದಡೆ ನಡೆಯಬೇಡವೆಂದು ಹೇಳಿಹರು.

ತಾ ಸುಖಿಯಾದಡೆ ನುಡಿಯಲು ಬೇಡ ತನ್ನ ನಿರಂತರ ಸುಖವದು ತನಗೆ ಸಿದ್ಧಿಸಿ, ನಾನು ಸುಖಸ್ವರೂಪನು ನಾನು ಸಚ್ಚಿದಾನಂದ ಪೂರ್ಣ ಅಖಂಡನೆಂಬ ಚಿದಹಂ ನುಡಿ, ನುಡಿಯದಂತಾಗಿದೆ.

ಏಕೆಂದರೆ ತಾ ಸುಖವಾದಲ್ಲಿ ನಾ ಸುಖವೆನಲಿಲ್ಲ ನೀ ಸುಖವೆನಲಿಲ್ಲ ನಾನೀನೆಂಬುದಕ್ಕೆ ತೆರೆಹಿಲ್ಲದ ಘನವಾಗಿಹ ಸುಖ ತಾ ಸುಖವಾಗಿಹ ಸುಖ ಚಿದಹಂ ಆಗದು, ದಾಸೋಹಂ ಆಗದು. ಅರಿದರಿದು ನೋಡುವುಡೆ ಚಿದಹಂ ತಾನೆ ದಾಸೋಹಂ ತಾನೆ, ಅದಿಷ್ಠಾನ ದಲ್ಲಿ ತೋರುವ ಕಲ್ಪಿತ ಅಧಿಷ್ಠಾನವು ಹಾಗೆ ಕಲ್ಪಿವಾಗಿ ತೋರುವ ಚಿದಹಂ, ದಾಸೋಹಂ, ಅಕಲ್ಪಿತವು ಈ ಎರಡೊಂದಾದುದು ಅರುವಿಂಗರುವು, ಏನೆಂಬೇನೆಂಬೆ ಅವರ್ಣೀಯವು ಎಂದು ಹೇಳಿಹರು. ಅರುವಿಂಗರುವಾದುದು ನುಡಿದುದೆಂದು, ಪೂಜಿಸಿದ್ದೆಂದು? ಉಂಡುದು ಎಂದು? ಆರು ಅರುವ ಅರಿಯ ಹೋಗಿಹರು, ಅವರು ನುಡಿಗೆಡೆಗೊಡದ ಘನವಂತರು. ಅವರು ಅರುವಿಂಗರುವಾಗಿಹ ಸ್ವಮಹಿಮರು, ತನ್ನ ಸ್ವಮಹಿಮೆಯಲ್ಲಿನಿಂತ ನಿರವಧಿ ಸುಖಿ ಸುಖರೂಪ ಸುಖವಾದುದರಿಂದ, ನುಡಿಯಲಿಲ್ಲ ನಡೆಯಲಿಲ್ಲ ಪೂಜಿಸಲಿಲ್ಲ ಉಣಲಿಲ್ಲ ಗುಹೇಶ್ವರಾ ಎಂದು ಹೇಳಿಹರು.

138

ನಾದ ಮುನ್ನವೊ ಬಿಂದು ಮುನ್ನವೊ?
ಕಾಯ ಮುನ್ನವೊ ಜೀವ ಮುನ್ನವೊ?
ಜೀವ ಕಾಯದ ಕುಳಸ್ಥಳಂಗಳು ಬಲ್ಲವರು ನೀವು ಹೇಳಿರೆ?
ಗುಹೇಶ್ವರಾ ನೀನು ಮುನ್ನವೊ? ನಾನು ಮುನ್ನವೊ?
ಬಲ್ಲವರು ನೀವು ಹೇಳಿರೆ? ॥ 659 ॥

ತಾತ್ಪರ್ಯ: ನಾದ ಮುನ್ನವೋ , ಬಿಂದು ಮುನ್ನವೋ : ಆವುದು ಮುನ್ನವೊ , ಬಲ್ಲವರು ನೀವು ಹೇಳಿರೆ? ಬಲ್ಲವರಾರು ಎಂದಲ್ಲಿ ಶಿವ ಶಕ್ತಿ ಪಿಂಡವೆ ಬಲ್ಲ ಪಿಂಡ . ನಾದ ಬಿಂದು ಸಂಜ್ಞೆಯಿಂ ಶೋಭಿಸುವ ಶಿವ ಶಕ್ತಿ ಪಿಂಡ ನಾದವೆಂದರೆ ಓಂ . ಓಂ ಕಾರವೇ ಗುರು ಓಂಕಾರ ಪ್ರಭವಾಸ್ವರಾಃ ಓಂಕಾರ ಪ್ರಭವಂ ಚೈತತ್ ತ್ರೈಲೋಕ್ಯ ಸಚರಾಚರಂ.

ಓಂಕಾರ ಪ್ರಭವಂ ಪರಬ್ರಹ್ಮ, ಓಂಕಾರವೆ ಪರಮ ಗುರುಃ , ಓಂಕಾರವೆ ಪರಮಾತ್ಮ ಓಂಕಾರಾತ್ಮೈನಾಪರಃ . ನಾದವದು ಓಂಕಾರ ಪರಮಗುರುವೆಂಬ ಚಿದ್ಬಿಂದು ಅಹುದು, ಅದು ಶಿವಯೋಗಾಮೃತ ಬಿಂದು ಅಹುದು . ಚೈತನ್ಯ ಮಯವಾದ ಜ್ಞಾನ ಲಿಂಗವು ಅಹುದು ಚಿತ್ಪ್ರಭಾಂಗವಾದ ಚಿದಂಗವೆಂಬ ಚಿದ್ಬಿಂದು ಅಹುದು . ಶಕ್ತಿ ಬುದಾಃ ಶಕ್ತಿಃ ಶಿವೋನಾದಃ ವಾಗಿರುವಾಗ ಇವುಗಳಲ್ಲಿ ಆವುದು ಮುಂದು ಆವುದು ಹಿಂದು ಎಂದು ಹೇಳುವುದು ? ವಸ್ತುಗಳಲ್ಲಿ ಮುಂದು, ಹಿಂದು ಎಂದು ಹೇಳಬಹುದು, ಒಂದೆ ವಸ್ತುವಿಗೆ ಮುಂದು ಹಿಂದೆಂದು ಹೇಗೆ ಹೇಳುವುದು.

ಪ್ರಣವರೂಢನು , ಪ್ರಣವಸ್ವರೂಪನು , ಪ್ರಣವ ಪ್ರಕೃತಿ ಸಂಜ್ಞನು , ಪ್ರಣವ ಷಡಂಗ ಸಮರಸ ಕೂಡಲಸಂಗಮ ದೇವರು.

ಪ್ರಣವಾರೂಢನು : ಪ್ರಣವಾರೂಢವಾಗಿದೆ . ಆರು ಪ್ರಣವ ತಿಳಿಯಲು ಹೋಗಿಹರು, ಅವರಿಗದು ತುದಿ ಮೊದಲಿಲ್ಲದ ಘನವಾಗಿಹುದು . ಒಳ ಹೊರಗಿಲ್ಲದ ತಾನೆ ಆದುದು ಪ್ರಣವ ಸ್ವರೂಪವು . ಪ್ರಣವ ಬಲ್ಲವರಾರು ಅವರು ಪ್ರಣವಾರೂಢರು . ಅವರದು ಪ್ರಣವ ಪ್ರಕೃತಿ, ಆರದು ಪ್ರಣವ ಪ್ರಕೃತಿಯಾಗಿದೆ, ಅದುವೆ ಷಡಂಗವಾಗಿದೆ . ಅದುವೆ ಕೂಡಲಸಂಗಮದೇವರು . ಜ್ಞಾನ ಸ್ವರೂಪ ಬೇರೆ, ಜ್ಞಾನ ಶಕ್ತಿಯು ಬೇರೆಯೆ! ಚಿತ್ ಸ್ವರೂಪ ಬೇರೆ, ಚಿತ್ ಶಕ್ತಿಯೂ ಬೇರೆಯೆ! ಅದರಲ್ಲಿ ಇಚ್ಛಾಶಕ್ತಿ , ಕ್ರಿಯಾಶಕ್ತಿ , ಜ್ಞಾನಶಕ್ತಿಯು ಬೇರೆಯೆ. ಚಿತ್ ಇದ್ದಲ್ಲಿ ಚಿತ್‌ಶಕ್ತಿಯು ಇದೆ, ಮಣ್ಣು ಇದ್ದಲ್ಲಿ

ಜಿಗಿ ಶಕ್ತಿಯು ಇದೆ, ಜಿಗಿ ಶಕ್ತಿ ಬೇರೆಯೆ ಇದ್ದುದು ಮಣ್ಣು. ಮಣ್ಣಿನ ಹೊರ್ತು ಅನ್ಯವಲ್ಲ ಇದ್ದ ಚಿತ್ ಸ್ವರೂಪದಲ್ಲಿ ಚಿತ್ ಶಕ್ತಿ, ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿ ಇವುಗಳು ಜ್ಞಾನಸ್ವರೂಪವಲ್ಲದೆ ಅನ್ಯವಲ್ಲ. ಷಡಂಗ ಸಮರಸ ಕೂಡಲಸಂಗಮ ದೇವರು , ಆ ಚಿತ್ ಸ್ವರೂಪ ಚಿತ್ ಶಕ್ತಿಯು ಒಂದೆ ಎಂದು ತಿಳಿದವಂಗೆ ಆ ಷಡಂಗ ಆ ಚಿತ್ ಸ್ವರೂಪದಲ್ಲಿ ಸಮರಸವೆಂದು ಹೇಳಿಹರು.

ಷಡಂಗ , ಆರು ಭಾವಂಗಳು . ವಿಶ್ವ, ತೈಜಸ, ಪ್ರಾಜ್ಞರೆಂಬ ಈ ಮೂವ್ವರು ಅಧೋ ಮುಖಿಗಳು. ಸುಖೇಚ್ಛಾ, ಸುವಿಚಾರ, ತನುಮಾನಸವೆಂಬ ಇವರು ಊರ್ಧ್ವಭಾವಿಗಳು. ಒಬ್ಬನು ಜಾಗ್ರದಭಿಮಾನಿಯಾಗಿಹ ವಿಶ್ವ ಜೀವ. ಸ್ವಪ್ನದಭಿಮಾನಿಯಾಗಿಹ ತೈಜಸ ಜೀವ , ನಿದ್ರೆ ಅಭಿಮಾನಿಯಾಗಿಹ ಪ್ರಾಜ್ಞ ಜೀವಿ. ಕೇವಲ ಸುಖದಿಚ್ಛಾ ಮಾಡುವ ಮುಮುಕ್ಷು ಭಾವಿ. ನಿತ್ಯಾನಿತ್ಯ ವಿಚಾರ ಮಾಡುವ ಜಿಜ್ಞಾಸು ಭಾವಿ , ಅನಿತ್ಯವ ತಿರಸ್ಕರಿಸಿ ನಿತ್ಯ ಸ್ವರೂಪ ತಾನೆನ್ನುವ ಭರಿತಭಾವಿ ಇವರುಗಳೆಲ್ಲರು ತನ್ನ ಚಿತ್ ಸ್ವರೂಪದಲ್ಲಿ ಸಮರಸ, ಕೂಡಲಸಂಗಮ ದೇವರು.

ನಾದ ಮುನ್ನವೊ? ಬಿಂದು ಮುನ್ನವೊ? ಬಲ್ಲರೆ ಹೇಳಿರೆ:

ನಾದಕ್ಕಿಂತ ಮುನ್ನ , ಬಿಂದುಕ್ಕಿಂತ ಮುನ್ನ ಆರು? ನಾದ ಬಿಂದುಗಳನ್ನು ಆವನು ತಿಳಿಯುವನೋ ಅವನೆ ಮುನ್ನ. ಈ ಮುನ್ನ ಮುನ್ನಲಾದವನ ಪರಿಚಯವಾರಿಗೆ ಇದೆ. ಅವರ ದಿವ್ಯದೃಷ್ಟಿಗೆ ನಾದವು ತಾನೆ, ಬಿಂದುವು ತಾನೆ, ಸುನಾದವು ತಾನೆ, ಚಿದ್ ಬಿಂದು ತಾನೆ. ತಾನೆ ನಾದ, ತಾನೆ ಬಿಂದು, ತಾನೆ ಸಕಲವಿರುವಲ್ಲಿ ಆವುದು ಮುಂದು ಆವುದು ಹಿಂದು ಎಂದೆನ್ನಬೇಕು ? ಪುಷ್ಪ ಪುಷ್ಪದೊಳಿರುವ ಮಕರಂದ ಆವುದು ಮುನ್ನ, ಆವುದು ಹಿಂದು. ನಾದ, ನಾದದಲ್ಲಿ ಜ್ಞಾನ ಸ್ವರೂಪ ಮುನ್ನವೊ? ಜ್ಞಾನ ಸ್ವರೂಪದಲ್ಲಿ ನಾದ ಮುನ್ನವೊ? ಆವುದು ಮುಂದು ಹೇಳಿರಿ. ನಾದವೆಂದರೆ ಪ್ರಣವ ನಾದ, ಬಿಂದುವೆಂದರೆ ಜ್ಞಾನಾಮೃತವಾಗಿಹ ಬಿಂದು. ಆವುದು ಮುನ್ನ ಆವುದು ಹಿಂದು ಎಂದರಿಯರು, ಹಾಲು ಹಾಲಿನಲ್ಲಿರುವ ಮಧುರತ್ವ ಹಾಲು ಮುನ್ನವೊ ಮಧುರತ್ವ ಮುನ್ನವೊ? ಆವುದು ಮುನ್ನ ಬಲ್ಲವರು ಹೇಳಿರಿ. ನಾದ ನಾದದೊಳಿರುವ ಶಕ್ತಿ ಆವುದು ಮುನ್ನ ಆವುದು ಹಿಂದು ಹೇಳಿರಿ. ನಾದವದು ಶಬ್ದಬ್ರಹ್ಮ, ಶಬ್ದಬ್ರಹ್ಮ ಮುನ್ನವೊ? ಶಬ್ದದಲ್ಲಿರುವ ಶಕ್ತಿ ಮುನ್ನವೊ? ಜೀವ ಮುನ್ನವೊ, ಆವುದು ಮುನ್ನ ಹೇಳಿರಿ. ಕಾಯವಿದ್ದಲ್ಲಿ ಜೀವವಿದೆ. ಜೀವ ಇದ್ದಲ್ಲಿ ಕಾಯವಿದೆ.

ಕಾಯ? ಅದಾವ ಕಾಯ, ಕಾಯದ ಕಾಯ, ಸತ್ ಕಾಯ . ಜೀವ? ಅದಾವ ಜೀವ ? ಸತ್ ಜೀವ ಇವೆರಡು ಇದ್ದವುಗಳು. ಕಾಯವದು ಅನುಪಮ, ಜೀವವದು ಅನುಪಮ. ಕಾಯವಿದ್ದು ಕಾಯವದೆ ಎಂದು ಹೇಳುವಲ್ಲಿ ಇದ್ದುದಾವುದು ಅದು ಅನುಪಮ. ಅದು ನಿರಂತರವು, ಕಾಯವಿದ್ದೆ ಪ್ರಕಾಶಿಸುವದು ಎಂದಲ್ಲಿ ಅದು ಪ್ರಕಾಶಮಯವಾಗಿಹ ಪ್ರಕಾಶ. ಉದಯ ಅಸ್ತವಾಗದ ಪ್ರಕಾಶ, ಅಲುಪ್ತ ಪ್ರಕಾಶ, ಅಲ್ಲಿರುವ ಜೀವನು ಪ್ರಕಾಶಮಯ ಪ್ರಕಾಶ. ಪ್ರಕಾಶ ಒಂದೆ ಇದರಲ್ಲಿ ಆವುದು ಮುನ್ನ ಎಂದು ಹೇಳುವದು.

ಇಲ್ಲಿ ಕಾಯವದು ತೋರದಡಗದ ಘನಕಾಯ, ಇದು ಘನಾಂಗ. ಇಲ್ಲಿ ಜೀವವದು ಆಭಾಸ ಜೀವನಲ್ಲ , ಮರವರುವಿಂಗೆ ಮೀರಿ ಬೆಳಗುವ ಅಖಂಡ ಜೀವ. ನಿರಂತರ ಜೀವ ಮಂಗಳಮಯ ಇದು ಘನ ಚೇತನವಾದುದರಿಂದ ಎರಡೆಂಬುದು ಒಂದು ಇದರಲ್ಲಿ ಆವುದು ಮುನ್ನವೆಂದು ಹೇಳುವದು. ಇದು ಕಾರಣ ಕಾಯದಿಂದ ಗುರು ದರ್ಶನ , ಕಾಯದಿಂದ ಲಿಂಗ ದರ್ಶನ , ಕಾಯದಿಂದ ಜಂಗಮ ದರ್ಶನ, ಕಾಯದಿಂದ ಪ್ರಸಾದ ಸಂಪತ್ತು ಕೂಡಲ ಚೆನ್ನಸಂಗಮದೇವಾ, ಕಾಯದಿಂದ ನಿಮ್ಮುವ ಕಂಡೆನ್ನ ಮರದೆನೆಂದು ಚನ್ನಬಸವಣ್ಣನವರು ಕಾಯದಿಂದ ಪ್ರಸಾದ ಸಂಪತ್ತು

ಎಂದು ಹೇಳಿದುದು ಬಹು ಗಹನಾರ್ಥವಾದುದು.

ಕಾಯವದು ಸ್ಫಟಿಕದ ಘಟದೊಳಗಿರುವ ಪ್ರಕಾಶ. ಕಾಯವದು ಸತ್ ಸ್ವರೂಪವು, ಜೀವವು ಸತ್ ಸ್ವರೂಪವು , ಕಾಯವದು ಉಪಮಾತೀತ, ಜೀವವು ಉಪಮಾತೀತವು, ಅನುಪಮವು ಉಪಮೆಗೊಳಪಡದು ಆವುದು ಉಪಮೆಗೊಳಪಟ್ಟುದ್ದು ಅದು ಮುಂದು ಹಿಂದು ಎಂದು ಹೇಳಲು ಬರುವುದು.

ಜೀವ ಕಾಯದ ಕುಳಸ್ಥಳಂಗಳು ಬಲ್ಲವರು ನೀವು ಹೇಳಿರೆ? ಬಹು ಜನ ಜೀವ ಕಾಯದ ಮರ್ಮವನರಿಯದವರು ಇರುವರು . ಕಾಯ ಜಡ, ಜೀವ ಚೇತನವೆಂದು ತಿಳಿದ ನಿತ್ಯಾನಿತ್ಯ ವಿಚಾರವುಳ್ಳ ಮತಿವಂತರು. ಜಡ ಚೇತನವೆಂಬ ವಿಭಾಗ ಮತಿವಂತರು , ಪ್ರಕಾಶಕ ಪ್ರಕಾಶಿತವೆಂಬ ವಿಭಾಗ ದೃಷ್ಠಿಯುಳ್ಳ ಮತಿವಂತರು ಬಹಳಷ್ಟು ಇದ್ದಾರೆ . ಇವರು ವೇದ ವೇದಾಂತಗಳಿಗೆ ಅಸಾಧ್ಯವಾಗಿಹ ಅನುಪಮ ಲಿಂಗವರಿಯದವರು . ಲಿಂಗವರಿತು ಲಿಂಗವಾದವರಲ್ಲ ತನ್ನ ಮುನ್ನ ಮುನ್ನಲಾದ ಘನವರಿಯದವರು, ಇದು ಕಾರಣ ಇವರು ಮತಿವಂತರು, ಅಕ್ಷರಾಕ್ಷರವ ಮೀರಿದ ಘನವಾಗದ್ದರಿಂದ ಇವರ ಮತಿ ನಷ್ಟವಾಗಲಿಲ್ಲ ಆಗದ್ದರಿಂದ ಇವರ ಜ್ಞಾನ ಮರವಿನಿಂದುಕ್ತವಾದ ಜ್ಞಾನ. ಕೇವಲ ಜ್ಞಾನ ಸ್ವರೂಪವಾಗಿಹ ತನ್ನ ಘನವರಿತವರಲ್ಲ, ಇವರದು ಭೇದದೃಷ್ಠಿ , ಬೇದ ಜ್ಞಾನವುಳ್ಳದ್ದಾದುದರಿಂದ , ಕಾಯ ಜೀವ ಬೇರಾಗಿ ಕಾಣುತ್ತಾರೆ. ಆರು ವಾಕ್ ಮನಕ್ಕೆ ನಿಲುಕದ ಅಖಂಡ ಜ್ಞಾನಿಗಳಾಗಿಹರು ಅವರು ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ ಜ್ಞಾನಿಗಳ ದೃಷ್ಠಿಯಲ್ಲಿ ಕಾಯ ಬೇರೆ, ಜೀವ ಬೇರೆಂಬ ಸಂದು ಸಂಶಯಕ್ಕಿಂಬಿಲ್ಲ . ಏಕೆಂದರೆ ಅಖಂಡಿತ ಘನ ಪರಿಪೂರ್ಣವಪ್ಪ ತನ್ನಿರುವೆ ಅರುವೆಂದರಿದ ಮಹಾಂತ ಅಲ್ಲಿ ಕಾಯವು ಅಖಂಡಿತ ಘನವು ಜೀವನು ಅಖಂಡಿತ ಘನವೆ ಆದುದರಿಂದ ಆವುದು ಮುನ್ನವೆಂದು ಹೇಳುವುದು ?

ನಿಸ್ಸೀಮವಾದ ತತ್ವ ಅಲ್ಲಿ ಸೀಮಿತಕ್ಕಿಂಬಿಲ್ಲ . ಸೀಮಿತ ದೃಷ್ಠಿಯುಳ್ಳವರಿಗೆ ಕಾಯ, ಜೀವ, ಜೀವ ಕಾಯದ ಕುಳಸ್ಥಳಂಗಳು ಬಲ್ಲವರಾಗಿದ್ದಲ್ಲಿ ನೀವು ಹೇಳಿರೆ? ಎಂದು ಪ್ರಶ್ನಿಸಿಹರು.

ಗುಹೇಶ್ವರಾ ನೀನು ಮುನ್ನವೊ? ನಾನು ಮುನ್ನವೊ? ಬಲ್ಲವರು ನೀವು ಹೇಳಿರೆ : ನೀ ನಾನೆಂಬ ಭಾವವಾರಿಂದಾಯಿತ್ತು ಹೇಳಾ, ನೀನೆಂಬುದೆ ಅಜ್ಞಾನ, ನಾನೆಂಬುದೆ ಮಾಯಾಧೀನ ನೀನೆನ್ನದೆ, ನಾನೆನ್ನದೆ ಇಷ್ಟ ಸುಖವ ಭಿನ್ನವಿಲ್ಲದೆ ಅರಿಯಬಲ್ಲಡೆ ಆ ಸುಖವು ನಿಮಗರ್ಪಿತ ಕಾಣಾ ಗುಹೇಶ್ವರಾ.

ನೀನು ನಾನೆಂಬ ಭಾವದುಗಮ, ಅಜ್ಞಾನದುಗಮ . ಅವಿಚಾರವೆ ಇದಕ್ಕೆ ಆಶ್ರಯ ನೀನೆಂಬುವ ದೇವನ ತಿಳಿಯಲಿಲ್ಲ, ನೀನೆಂಬ ಗುರು ಘನವ ತಿಳಿಯಲಿಲ್ಲ, ತಿಳಿಯದ ನೀನೆಂಬುವ ದೇವ ಭಾವವಾಗಲಿ, ಗುರುವೆಂಬ ಭಾವವಾಗಲಿ ಅಜ್ಞಾನವಲ್ಲವೆ? ನಾನೆಂಬುವ ನಾಹಂ ಆಗಲಿ, ಕೋಹಂ ಆಗಲಿ ಸೋಹಂ ಆಗಲಿ, ಚಿದಹಂ ಆಗಲಿ ಇವು ತಾನಾಗುವನೆ? ಇವೆಲ್ಲವುಗಳು ತನ್ನೊಳ್ ತೋರಿ ಇಲ್ಲವಾಗುವ ಮಾಯಿಕ . ತಾನು ನಿರಂತರವಾಗಿರುವ ಮಂಗಳಮಯ ಸ್ವಯಂಜ್ಯೋತಿ ತನ್ನಿಂದ ಇವುಗಳು ಸಿದ್ಧವಾಗುವವು . ನಾನೆಂಬುವ ಅಜ್ಞಾನದವಸ್ಥೆಯಲ್ಲಿ ತೋರುವ ತನು, ಇಂದ್ರಿ, ಪ್ರಾಣಾದಿಗಳು ಮನ ಬುದ್ಧಿಯ ಭಾವಂಗಳು ಜ್ಞಾನದವಸ್ಥೆಯಲ್ಲಿ ತೋರುವ ಸಾಕ್ಷಿ, ದೃಕ್, ಅಸಂಗ ಪ್ರತ್ಯಗಾತ್ಮ ಪರಮಾತ್ಮ ನಾನೆಂಬ ಭಾವಂಗಳು ಇವು ತೋರಿ ಇಲ್ಲವಾಗುವ ಮಾಯಿಕ ಇದು ಕಾರಣ ನೀನೆಂಬುದು ಅಜ್ಞಾನ, ನಾನೆಂಬುದು ಮಾಯಾಧೀನ, ನೀನೆನ್ನದೆ ನಾನೆನ್ನದೆ ಇಪ್ಪ ಸುಖವ ಭಿನ್ನವಿಲ್ಲದೆ ಅರಿಯಬಲ್ಲಡೆ ಆ ಸುಖವು ನಿಮಗರ್ಪಿತ ಕಾಣಾ ಗಹೇಶ್ವರಾ.

ನೀನೆನ್ನದೆ ನಾನೆನ್ನದೆ ಇಪ್ಪ ಸುಖವದು , ನಾನೀನೆಂಬುದಕ್ಕೂ ಅವಕಾಶ ಕೊಡದ ಘನ, ಅದು

ತೆರೆಹಿಲ್ಲದ ಘನ . ಇದು ಪರತತ್ವ ಇದನ್ನಾರು ಭಿನ್ನವಿಲ್ಲದೆ ಅರಿತಿದ್ದಾರೆ , ಅದು ಅನುಪಮ ಸುಖ, ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ ಸುಖ. ನೀನೆಂಬಲ್ಲಿಯೂ ತಾನೆ ನಾನೆಂಬಲ್ಲಿಯೂ ತಾನೆ. ನಾಹಂ, ಕೋಹಂ, ಸೋಹಂ, ಶಿವೋಹಂ ಚಿದಹಂ ನಾನೆಂಬಲ್ಲಿಯೂ ಅದಿಷ್ಠಾನ ತಾನೆ. ಸಕಲವು ನೀನೆಂಬ ದಾಸೋಹಂ ಭಾವದಲ್ಲಿಯೂ ಅಧಿಷ್ಠಾನ ತಾನೆ. ಈ ರಹಸ್ಯ ತಿಳಿಯದೆ ನೀನೆಂಬುವ ಭಾವವು ಭ್ರಮಿತವು, ನಾನೆಂಬುವ ಭಾವವು ಭ್ರಮಿತವಾಯಿತ್ತು. ಅವರು ನಾನು ಮುನ್ನವೆಂಬುದು ತಿಳಿದವರಲ್ಲ ನೀನು ಮುನ್ನವೆಂಬುದು ತಿಳಿದವರಲ್ಲ, ಆರು ನಿಃಶಬ್ಧ್ಯವೇದಿಗಳು ಅವರು ನಾನೆಂಬುದು ಆಗದವರು. ನೀನೆಂಬುದು ಆಗದವರು , ಮರವಿಗೊಳಪಟ್ಟವರಲ್ಲ, ಮಾಯೆಗೊಳಪಟ್ಟವರಲ್ಲ, ಅವರ ದಿವ್ಯದೃಷ್ಟಿಯಲ್ಲಿ ನಾನೆಂಬುದು , ನೀನೆಂಬುದು ತಾನೆ, ಎರಡಿಲ್ಲ . ಚಿದಾಕಾಶವು ನಾನೆಂಬುದಾಗಲಿ ನೀನೆಂಬುದಾಗಲಿ ಅದು ತುಣು ತುಣುಕು ಆಗಿದೆಯಾ? ಅದು ಸದ್‌ಜ್ಞಾನ ಭರಿತವು. ಅಲ್ಲಿ ನಾನೆಂಬ ಚಿದಹಮ್ಮಿಗೂ ಇಂಬಿಲ್ಲ, ಸಕಲವೂ ನೀನೆಂಬ ದಾಸೋಹಮ್ಮಿಗೂ ಇಂಬಿಲ್ಲ. ಇವೆರಡಕ್ಕೂ ಮಿಕ್ಕಿ ಮೀರಿ ನಿಂತ ನಿಜವು ನಿಸ್ಸೀಮವಾಗಿರುವಲ್ಲಿ ಅದು ತಿಳಿಯದೆ ಸೀಮಿತರಾಗಿಹರು. ಈ ಸೀಮಿತ ದೃಷ್ಠಿ, ಸೀಮಿತ ಭಾವನೆ, ನಾನೆಂಬುದು ಮಾಯಾಧೀನವಾಯಿತ್ತು. ನೀನೆಂಬುದು ಅಜ್ಞಾನಕ್ಕಿಂಬಾಯಿತ್ತು. ಈ ನಾನು ನೀನು ಆರಲ್ಲಿ ಕೆಟ್ಟಿಹುದು ಅವರು ಮುನ್ನ ಮುನ್ನಲಾದ ಘನವ ಬಲ್ಲವರಾದುದರಿಂದ, ನಾನು ನೀನು ಬಲ್ಲವರು . ಅಲ್ಲಿ ನೀ ನಾನೆಂಬುದು ಒಂದಾದ ನಿಲವು . ಅದು ಅಖಂಡಿತ ಘನವಪ್ಪ ಪರಿಪೂರ್ಣ ಸುಖದ ನಿಲುವು, ಅದು ಗುಹೇಶ್ವರ ಬಲ್ಲವರ ನಿಲವು ಎಂದು ಹೇಳಿಹರು.

139

ಅರುವರಿತು ಬೆರಗು ಹತ್ತಿತ್ತೆಂಬ ಜ್ಞಾನವಿದೇನೊ?
ನಾಹಂ ಎಂಬಲ್ಲಿ ತಾನಾರೊ? ಕೋಹಂ ಎಂಬಲ್ಲಿ ಮುನ್ನಾರೊ?
ಪರಬ್ರಹ್ಮ ಸೋಹಂ ಎಂಬಲ್ಲಿ ಮುನ್ನ ತಾನೇನಾಗಿದ್ದಾನೊ?
ಚಿದಹಂ ಎಂಬಲ್ಲಿ ಹಮ್ಮಿನ ಮಾಲೆ ಇದೇನು ಹೇಳಾ
ನಿಃಶಬ್ದಂ ಬ್ರಹ್ಮ ಮುಚ್ಯತೆ ಎಂಬ ಶಬ್ದವಿಡಿದು ಬಳಲುವ ಕಾರಣವಿದೇನೊ?
ಹೇಳಾ ಗುಹೇಶ್ವರಾ. ॥ 660 ॥

ತಾತ್ಪರ್ಯ: ಅರುವರಿತು ಬೆರಗು ಹತ್ತಿತ್ತೆಂಬ ಜ್ಞಾನವಿದೇನೊ : ಪ್ರಭು ಅರುವರಿತು ಬೆರಗು ಹತ್ತಿತ್ತೆಂಬ ಜ್ಞಾನದ ಮಂಕು ಬಿಡಿಸುವ ಪರಮಜ್ಞಾನಿ . ಬಹು ಸಾಧಕರು ಸಿದ್ಧರು ಅರುವರಿತು ಬೆರಗು ಹತ್ತಿತ್ತೆಂಬುದನ್ನು ಕೇಳಿ ಪ್ರಶ್ನಿಸಿದ್ದಾನೆ.

ಓ ಅಣ್ಣಯ್ಯಗಳಿರಾ, ನೀವು ಅರುವರಿತುದು ಹೇಗೆ? ಅದನ್ನು ಅರಿತ ಮೇಲೆ ಬೆರಗು ಹತ್ತಿದುದು ಹೇಗೆ? ಅರುವರಿಯಲು ನೀವು ಆರಾಗಿ ಅರುವರಿತುದು ? ನುಡಿಗೊಳಪಟ್ಟ ಅರುವ ಅರಿತಿರೊ ? ನೀವು ನುಡಿಗೊಳಪಡದೆ ಅರುವಾಗಿ ಅರಿತಿರೊ , ಅಥವಾ ಆರಾಗಿ ಅರಿತಿರಿ ?

''ಅರುವಿನಿಂದ ಅರಿದಿಹೆನೆಂದಡೆ ಅರುವು ಮರಹಿಂಗೊಳಗಾಯಿತ್ತಾಗಿ ಆ ಅರುವಿನಿಂದ ಅರಿದಿಹೆನೆಂಬ ಅಜ್ಞಾನಿಯ ಮಾತ ಕೇಳಲಾಗದು . ಭಾವದಿಂದ ಭಾವಿಸಿಹೆನೆಂದಡೆ ಭಾವ ಭ್ರಾಂತಿ ಗೊಳಗಾಗಿತ್ತಾಗಿ ಆ ಭಾವದಿಂದ ಭಾವಿಸಿಹೆನೆಂಬ ಭ್ರಮಿತನ ಮಾತ ಕೇಳಲಾಗದು. ಜ್ಞಾನದಿಂದ ಅರಿದಿಹೆನೆಂಬ ಜ್ಞಾನ ಅಜ್ಞಾನಕ್ಕೊಳಗಾಯಿತ್ತಾಗಿ, ಆ ಜ್ಞಾನದಿಂದ ಅರಿದಿಹೆನೆಂಬ ಅಜ್ಞಾನಿಯ ಮಾತ ಕೇಳಲಾಗದು ಸದ್‌ಜ್ಞಾನ ಭರಿತ ಕೂಡಲ ಚೆನ್ನಸಂಗಾ ನಿಮ್ಮಶರಣ'' .

ಅರುವಿನಿಂದ ಅರಿದಿಹೆವೆಂದಲ್ಲಿ ನೀವು ಅರಿದ ಅರುವು ನಿಜದರುವು ಆಗದು. ನಿರಂಜನ ನಿಜ ಚಿದ್ರೂಪವಾಗದು. ಅರಿದರುಹಿಸಿ ಕೊಂಬುದಕ್ಕೂ ಮೀರಿದ ಘನವ ನೀವು ಅರಿದ ಪರಿ ಎಂತು? ಅಲ್ಲಿ ತಿಳಿಸಿಕೊಳ್ಳುವ ದೃಶ್ಯರೂಪಿ ಅನಾತ್ಮವಿಲ್ಲ , ಅರಿಯುವ ದೃಕ್‌ರೂಪ ಆತ್ಮನೆಂಬುದಿಲ್ಲ . ಇವೆರಡಕ್ಕೂ ಮಿಕ್ಕಿ ಮೀರಿದ ಘನವ ನೀವು ಅರಿದ ಪರಿ ಆವುದು? ಏನಾದರೂ ಅರಿಯಬಹುದು, ತನ್ನ ಅರಿಯಬಹುದೆ? ತಾನೆಂಬುದು ನಿಃಶಬ್ದ ಬ್ರಹ್ಮ , ಶಬ್ದ ಬ್ರಹ್ಮದಿಂದ ತನ್ನ ಅರಿವುದು ಹೇಗೆ? ತಾನು ಶೃತಿಗಗೋಚರ, ತನ್ನನ್ನು ಶೃತಿಗಳಿಂದ ಅರಿವುದು ಹೇಗೆ? ತಾನು ವಾಙ್ಮನೋತೀತ, ವಾಕ್ ಮನವಾಗಿ ತನ್ನ ತಿಳಿವುದು ಹೇಗೆ? ತಾನು ನುಡಿಗೆಡೆಗೊಡದ ಘನ , ತನ್ನನ್ನು ನುಡಿಗೊಳಪಡಿಸಿ ತಿಳಿವುದು ಹೇಗೆ?

ಓ ಅಣ್ಣಯ್ಯಗಳಿರಾ! ಅರುವರಿತು ಬೆರಗು ಹತ್ತಿತ್ತೆಂಬ ಜ್ಞಾನ ಯಾವುದು?

ಅರುವೆಂಬುದು ಅದು ಏನೆಂದೆನಲಿಲ್ಲದ ಅರುವು . ಅದು ಏನೂ ಇಲ್ಲದ ನಿಸ್ಸಂಗ ಸುಖವು ಅದನ್ನು ಅರಿತುದು ಹೇಗೆ ? ಅದನ್ನು ಭಾವದಿಂದ ಭಾವಿಸ ಹೋದಲ್ಲಿ ಅದು ಭಾವಕ್ಕಗಮ್ಯವಾದುದು . ಜೀವ ಬ್ರಹ್ಮರೇಕತ್ವ ಜ್ಞಾನದಿಂದ ಅರಿದಿಹೆನೆಂದಡೆ ತಾನು ವೇದ ವೇದಾಂತಗಳಿಗೆ ಅಸಾಧ್ಯವಾಗಿಹ ಅನುಪಮವು . ಖಂಡಾಖಂಡ ಸಂಯೋಗವಿಲ್ಲದ ಅಖಂಡಿತವು ನಿಃಶಬ್ದಬ್ರಹ್ಮನು ತನ್ನನ್ನು ಈ ಜೀವ ಬ್ರಹ್ಮರೇಕತ್ವರೂಪಿ ಕಲ್ಪಿತ ಜ್ಞಾನದಿಂದ ಅರಿದುದು ಹೇಗೆ? ನಿಸ್ಸೀಮವು ಸೀಮಿತವಾಗದು ನಿಃಶಬ್ದ ಬ್ರಹ್ಮವು ಜೀವ ಬ್ರಹ್ಮರೇಕತ್ವವೆಂಬ ಶಬ್ದ ಸಂಭ್ರಮಕ್ಕೆ ಒಳಪಡುವದದೆಂತು, ಏನೊಂದುಸರಲು ಎಡೆಗೊಡದ್ದು ಅದನೊಂದು ಮಾತಿಂಗೆ ತಂದು ನುಡಿದು ನೋಡಿದರೆ ಅದಕ್ಕದೆ ಕಿರಿದು ನೋಡಾ ಇದು ಕಾರಣ ಅರುವರಿತು ಬೆರಗು ಹತ್ತಿತ್ತೆಂಬ ಜ್ಞಾನ ಸರಿಯಾದುದಲ್ಲ.

ಅರಿಯದರುವು ಇದ್ದಂತಿರುವ ಅರುವು , ಅದನು ಇದ್ದಕ್ಕಿದ್ದಂತೆ ತಿಳಿಯುವುದು, ತಾನು ಅರಿಯದರುವುಳ್ಳವನಾಗಿ ನಿಂತು ನೋಡಿದುದೆ ತನ್ನ ತಿಳಿದ ಹಿರಿಮೆ. ತನ್ನ ಘನವ ತನ್ನಿಂದ ತಾನು ನೋಡುವುಡೆ ತಾನು ಅರಿಸಿಕೊಳ್ಳುವ ಅನಾತ್ಮನೆಂಬುದಕ್ಕೂ ಮೀರಿದ ಘನ . ತಾನು, ಅನಾತ್ಮ, ಆತ್ಮನೆಂಬ ನುಡಿಗು ಅಂಟದ ಘನ , ಮುಟ್ಟದ ತಟ್ಟದ ಘನ . ತಾನು ಇದ್ದಂತಿರುವ ಘನ ತನ್ನೊಳ ಬದಲಾವಣೆಗಿಂಬಿಲ್ಲವೆಂಬುದು ತನ್ನಿಂದ ತಾನೆ ನೋಡುವುದು . ತನ್ನೊಳ ಅನಾತ್ಮ ಭಾವಕ್ಕೂ ಸಂದಿಲ್ಲ, ಆತ್ಮ ತಾನೆಂಬ ಭಾವಕ್ಕೂ ಸಂದಿಲ್ಲ , ಆವಾವ ಭಾವಕ್ಕೂ ತನ್ನೊಳ ಸಂದಿಲ್ಲವಾದುದರಿಂದ ತಾನು ಭರಿತವು; ಸದ್‌ಜ್ಞಾನ ಭರಿತವು . ಇದು ಕಾರಣ ತಾನು ಅರಿಸಿಕೊಳ್ಳುವವನಾಗಿಲ್ಲ ಅರಿಯುವ ದೃಕ್ ಆತ್ಮನೆಂಬುದು ಆಗಿಲ್ಲ. ಅರಿಯದರುವು ತಾನೆ, ನಿಃಶಬ್ದ ಬ್ರಹ್ಮವು ತಾನೆ, ಇದುವೆ ತನ್ನಯ ಅರುವು . ಇದನ್ನೊಂದು ಶಬ್ದವಾಗಿ ಕಾಣಬಾರದು , ಮಾತಿಂಗೊಳಪಡಿಸಿ ನುಡಿಯಬಾರದು, ಅರಿದರಿದು ನೋಡುವ ಭಾಗ್ಯ ನಮ್ಮದಾದಲ್ಲಿ ಅದು ಅರುಹೃದಯವು , ಅರಿಯದರುವು ಎಂಬ ಸಂಜ್ಞೆ, ಆ ಅರುಹೃದಯದಲ್ಲಿ ಪ್ರಜ್ವಲಿಸುವದು ಅರಿಯದರುವು ಅದು ನುಡಿಗೆಡೆಗೊಡದ ಘನ. ಅದು ಏನ ನುಡಿದರೂ ಅರಿಯದಂತಿದ್ದ ಘನವು ಶಬ್ದವಿಡಿದು ಬಳಲುವದೇತಕ್ಕೆ.

ನಿಮ್ಮಲ್ಲಿ ನೀವು ತಿಳಿದು ನೋಡಿರೆ ಅನ್ಯವಿಲ್ಲ ಕಾಣಿರಂಣಾ; ಅರುವು ನಿಮ್ಮಲ್ಲಿ ತದ್ಗತವಾಗಿ ಅದೆ ಎಂದು ಸಂತರು, ಸದ್ಗುರು ದೇವ , ಬ್ರಹ್ಮನಿಷ್ಠರು, ವೇದೋಪನಿಷತ್ತುಗಳು ಶೃತಿ ಪ್ರಮಾಣಗಳು, ಪ್ರಜ್ಞಾನಂ ಬ್ರಹ್ಮ, ಸತ್ಯಜ್ಞಾನಮನಂತಂ ಬ್ರಹ್ಮವೆಂದು ಅರುವಿನ ಘನವ ಹೇಳಿಹರು . ತಾನಾರೆಂದರಿಯಲು ಈ ಅರುವು ಬಹು ಪ್ರಧಾನವಾಗಿದೆ. ಇದು ತಿಳಿಯಲು ಸುಲಭ ಸಾಧನವು , ತಿಳಿಯದಿರೆ ಬಹು ಕಠಿಣವು ಆಗಿದೆ.

ಆರು ಅರುವರಿಯುವ ರಹಸ್ಯ ಸದ್ಗುರು ದೇವನಿಂದ ಚೆನ್ನಾಗಿ ತಿಳಿಯಲಿಲ್ಲ. ಅವರಿಗೆ ಉಪದೇಶವೆ ಘನವಾಯಿತ್ತು . ಅರುವೆಂಬುದು ಘನವಾಯಿತ್ತು . ಸ್ವರೂಪಾನು ಸಂಧಾನವೆ ಘನವಾಗಿ

ತನ್ನನ್ನು ತಾನು ನೋಡದಾದನು. ಅವರಿಗೆ ಅಚಿಂತ್ಯತ್ವವು ದೂರವಾಯಿತ್ತು. ಆರು ಉಪದೇಶಕ್ಕೆ ಮೀರಿ ತನ್ನ ನೋಡಿಹನು . ಆ ಮಹಾಂತನಿಗೆ ತನ್ನಿಂದ ತನ್ನ ಕಂಡು ನುಡಿಗೆಡೆಗೊಡದ ಘನವೆ ತನ್ನಿರುವಾಗಿ ಸ್ವಪ್ರಭೆಯಿಂದ ಬೆಳಗುತ್ತಿಹನು.

ಅರುವೆಂಬುದು ಇದು ಅರುವಿನ ಮರೆಯ ಅರುವು. ನಿಜದರುವು ಅದನ್ನು ಮರೆ ಮಾಡಬಹುದೆ? ನಿರಂಜನ ನಿಜದರುವು ಅದು ಮಾತು ಮನಕ್ಕೆ ಹೇಗೆ ಒಳಪಡುವುದು. ಆವುದು ಮಾತು ಮನಕ್ಕೆ ಒಳಪಟ್ಟಿದೆ, ಅದು ಅರುವಿನ ಮರೆಯಲ್ಲಿದ್ದ ಅರುವು. ತನ್ನಿಂದ ತನ್ನ ತಿಳಿಯದ ಅರುವು. ಬಹು ಸಾಧಕರು ಈ ನುಡಿಗೊಳಪಟ್ಟ ಅರುವಿಂಗೆ ಮೆಚ್ಚಿ ಮೋಸ ಹೋಗಿ ನಾಹಂ ಎನ್ನವವರು ಕೆಲವು ಜನ , ಕೋಹಂ ಎನ್ನುವವರು ಕೆಲವು ಜನ , ಪರಬ್ರಹ್ಮ ಸೋಹಂ ಎನ್ನುವರು ಕೆಲವು ಜನ, ಚಿದಹಮ್ಮುವುಳ್ಳವರು ಕೆಲವು ಜನ. ಹೀಗಾಗಿ ನಿಃಶಬ್ದ ಬ್ರಹ್ಮದ ಘನವರಿಯದಂತಾಗಿ ಬಳಲುವದೆ ಕಾರಣವಾಗಿರುವುದಲ್ಲದೆ ನಿಶ್ಚಿಂತರಾಗಿರಲು ಸಾಧ್ಯವಾಗಲಿಲ್ಲವಲ್ಲ.

ಪ್ರಭುದೇವ ಕರುಣಾಮಯಿ . ಅರುವು ಅರುವು ಎಂಬುವವರನ್ನು ಹಿಡಿದುಕೊಂಡು ಸಕಲರಿಗೂ ನಿಮ್ಮ ನಿಜದರುವು ನೋಡಿಕೊಳ್ಳಿ. ನಿರವಧಿಯಾದುದು ಸೀಮಿತಕ್ಕೊಳಪಡಿಸ ಬೇಡಿ, ನಿಃಶಬ್ದ ಬ್ರಹ್ಮವ ಶಬ್ದದಲ್ಲಿ ಬಳಸಲು ಹೋಗಬೇಡಿ. ಅನಾತ್ಮ ಮಿಥ್ಯಾತ್ಮ ಸತ್ಯವೆಂಬ ವಿವೇಕದೊಳಪಡಿಸಿ ಕೆಡಬೇಡಿ. ತ್ವಂ ಪದ ಸಾಕ್ಷಿಯು , ಈರ್ವರ ಲಕ್ಷಣ ಒಂದಾದುದರಿಂದ ಅಸಿಪದ ತಾನೆಂದು ಶಬ್ದ ಸಂಭ್ರಮಕ್ಕೆ ಮಾರುಹೋಗಬೇಡಿ . ಏಕೆಂದರೆ ''ನಿತ್ಯ ನಿರಂಜನ ತಾನೆಂದರಿಯದೆ ತತ್ವಮಸಿಯೆಂದು ಹೊರಗಣ ಬಳಸಿ ಸತ್ತಿತ್ತಲ್ಲ ಜಗವೆಲ್ಲ ನಾಯಿ ಸಾವ'' ಎಂದು ಪ್ರಭು ಎಚ್ಚರಿಸಿಹನು. ನಿಃಶಬ್ದ ಬ್ರಹ್ಮವೆ ತಾನಿದ್ದು , ಶಬ್ದದಿಂದ ಬಳಲುವದದೇತಕ್ಕೆ ? ತಾನು ಅಜ ಅಚಿಂತ್ಯ ಸಹಜ ನಿರಂತರವಾಗಿರುವ ಮಂಗಳ ಮಯನಿರುವಲ್ಲಿ ಅರುವರಿತು, ಗಾಬರಿಗೊಂಡದು ಹೇಗೆ? ನಿರಂತರವಾಗಿರುವ ಮಂಗಳಮಯ ತಾನು ತನ್ನ ಕಂಡು ತಾನು ಗಾಬರಿಗೊಂಡದು ಇದೆಂಥ ಜ್ಞಾನ. ಅರುವು ಅದು ನಿರಂತರ ಮಂಗಳಮಯ, ಅದು ಅರಿಯುವುದು ಅರಿಯದಿರುವುದು ಅದಕ್ಕದು ಸಹಜತ್ವ.

ಅರುವು ಅರಿಯುವಲ್ಲಿ ಅದು ಅರುವು ಆಗಿದೆ . ಅರಿಯದರುವು ಆದಾಗ ಕೆಟ್ಟಿದೆಯಾ ? ಅರುವು ತನ್ನ ಮುಂದೆ ದೇಶ ಕಾಲ ವಸ್ತುವಿದ್ದರೆ ಅರಿಯುತ್ತದೆ. ಇವಾವು ಇಲ್ಲವಾದಲ್ಲಿ ತಾನೆ ತಾನಾಗಿ ಅರಿಯದರುವು ಸ್ವಯಂ ಜ್ಯೋತಿಯಾಗಿ ಪ್ರಜ್ವಲಿಸುತ್ತಿಹುದು.

ಜ್ಯೋತಿ (ಪ್ರಕಾಶ) ತನ್ನ ಮುಂದೆ ಸಭೆ ಇದ್ದಲ್ಲಿ ಅದಕ್ಕೆ ಬೆಳಗುತ್ತದೆ. ಸಭೆಯಿಲ್ಲವಾದಲ್ಲಿ ಖಾಲಿ ಸ್ಥಾನಕ್ಕೆ ಬೆಳಗುತ್ತದೆ. ಇವೆರಡು ಇಲ್ಲದಿದ್ದರೆ ತಾನೆ ತಾನಾಗಿ ಬೆಳಗುತ್ತದೆ. ಹಾಗೆ ನಿರಂಜನ ನಿಜ ಚಿದ್ರೂಪ ನಿರಂತರ ಮಂಗಳಮಯವೆ ತನ್ನಿರುವೆಂದರಿದ ಶರಣ ತಾನು ತಿಳಿಸಿಕೊಳ್ಳುವ ಅನಾತ್ಮ ಆಗನು. ಅರಿಯುವ ದೃಕ್ ರೂಪನು ಆಗನು , ಏನೊಂದಾಗದ ಘನ. ನಿರಂತರ ತನ್ನ ಕಂಡು ಆಶ್ಚರ್ಯವಾದೆನೆಂಬ ಇದಾವ ಜ್ಞಾನವೆಂದೆನ್ನ ಬೇಕು ಎಂದು ಪ್ರಶ್ನಿಸಿಹನು.

ನಾಹಂ ಎಂಬಲ್ಲಿ ತಾನಾರೊ? ತಾನಾರು ಎಂದರಿತು ನಾಹಂ ಎಂದನೊ? ಅರಿಯದೆ ನಾಹಂ ಎಂದನೊ? ತಾನಾರೆಂದರಿತಲ್ಲಿ ನಾಹಂ ಎನ್ನುತ್ತಿದ್ದಿಲ್ಲ ಏಕೆಂದರೆ ನಾನಲ್ಲವೆಂದಲ್ಲಿಯೂ ತಾನಿದ್ದುದು. ತನ್ನಿಂದ ಸಿದ್ಧವಾಗುವಲ್ಲಿ ತನಗೆ ತಾನಲ್ಲವೆಂದು ಹೇಳಿದುದು, ತಿಳಿಯದೆ ಹೇಳಿದನೆನಬೇಕೆ? ತಿಳಿಯದೆ ಹೇಳಿದುದೆಂದು ಸಿದ್ಧವಾಗುತ್ತದೆ. ತಿಳಿದಲ್ಲಿ ನಾಹಂ ಎಂಬುದು ಆವುದು ನಾನಲ್ಲವೆಂದು ಹೇಳಿದನೆನಬೇಕೆ? ದೇಹೋಹಂ ಎಂಬುದಕ್ಕೆ ನಾಹಂ ಎಂದನೆನಬೇಕೆ? ಕೋಹಂ ಎಂಬುದಕ್ಕೆ ನಾಹಂ ಎಂದನೆನಬೇಕೆ? ಸೋಹಂ ಎಂಬುದಕ್ಕೆ ನಾಹಂ ಎಂದನೆನಬೇಕೆ? ಚಿದಹಂ ಎಂಬುದಕ್ಕೆ ನಾಹಂ

ಎಂದನೆನಬೇಕೆ? ಇವೆಲ್ಲಕ್ಕು ನಾಹಂ ಎಂಬುದು ಅಡ್ಡಿ ಇಲ್ಲ, ಹಾಗಾದರೆ ತಾನಾರು ಎಂದು ತಿಳಿದನೆ? ತಾನೆ ನಿಃಶಬ್ದ ಬ್ರಹ್ಮವೆಂಬುದು ತನಗೆ ವೇದ್ಯವಾಗಿದ್ದರೆ ನಾಹಂ ಎನ್ನುತ್ತಿದ್ದಿಲ್ಲ.

ಕೋಹಂ ಎಂಬಲ್ಲಿ ಮುನ್ನಾರೊ? ನಾನಾರು ನಾನು ಆರು ? ಎಂಬ ಪ್ರಶ್ನೆ, ಉದ್ಭವಿಸಿದುದು ತಾನು ಮುನ್ನ ಮುನ್ನಲಾದ ಘನ. ತನ್ನಿಂದ ತಾನಾದ ಘನದ ಯತಾರ್ಥ ಜ್ಞಾನವಾಗದ್ದರಿಂದ ತನ್ನನ್ನು ಕೋಹಂ ಎಂಬುದಾಗಿ ವಿಚಾರ ಮಾಡಹತ್ತಿ, ನಾಮರೂಪಾಗಿಹ ಅನಾತ್ಮಕ್ಕೂ ತಾನೆಂಬುದು ಒಪ್ಪದಂತಾಗಿ ಇತ್ತ ಆತ್ಮ ತಾನೆಂಬ ವಿವೇಕಕ್ಕೂ ಒಪ್ಪಿಗೆಯಿಲ್ಲದಂತಾಗಿ ನಾನು ಯಾರು ಎಂಬ ಪ್ರಶ್ನೆ ಉದ್ಭವಿಸಿದೆ, ಆಶ್ಚರ್ಯ! ತನ್ನ ಪ್ರಶ್ನೆಗೆ ತಾನೆ ಉತ್ತರವಾಗಿದ್ದುದು ಕಂಡು, ಕಂಡು ತನ್ನಿಂದ ತನ್ನ ನೋಡುವದಿಲ್ಲವೆಂದಲ್ಲಿ ಆಶ್ಚರ್ಯವಲ್ಲವೆ? ನಿರಂತರ ತಾನು ತನ್ನ ಪ್ರಶ್ನೆಗೆ ತಾನೆ ಉತ್ತರ ರೂಪನಾಗಿದ್ದು, ಕೋಹಂ ಎಂಬುವವನು ತನ್ನ ನೋಡಲಿಲ್ಲ ; ಇದು ಕಾರಣ ತಾನು ಮುನ್ನ ಮುನ್ನಲಾದ, ತನ್ನಿಂದ ತಾನಾದ ಘನ ಎಂಬ ಉತ್ತರಸಿದ್ಧಾಂತ ಸಿದ್ಧವಾಗಲಿಲ್ಲ. ಪ್ರಭುದೇವ, ದೇವರ ದೇವ, ಮಹಾಪ್ರಸಾದ, ಉತ್ತರ ಸಿದ್ಧಾಂತದ ಸಿದ್ಧಿ ಪುರುಷನಾದುದರಿಂದ ಕೋಹಂ ಎಂಬುದಕ್ಕಿಂತ ಮುನ್ನ ತಾನಾರು ಎಂದು ಪ್ರಶ್ನಿಸಿಹನು.

ಪ್ರಭು, ಪರಬ್ರಹ್ಮ ಸೋಹಂ ಎಂಬಲ್ಲಿ ಮುನ್ನ ತಾನೇನಾಗಿದ್ದನೊ ಎಂಬ ಪ್ರಭುವಿನ ಉತ್ತರ ಉತ್ತರದ ಉತ್ತರ . ಬಹು ವೇದಾಂತಿಗಳು ಪರಬ್ರಹ್ಮ ನಾನೆ ಎಂದು ಒಪ್ಪಿದ ಜನ ಬಹಳ ಇದೆ. ಪರಬ್ರಹ್ಮವದು ನಾನೆ ಎಂಬುವಲ್ಲಿ ಇದು ಅನ್ನುವದಕ್ಕಿಂತ ಮುನ್ನ ತಾನು ಏನಾಗಿದ್ದನು . ಈಗ ಪರಬ್ರಹ್ಮವದು ನಾನೆ ಅನ್ನುವದಾದರೆ , ಪೂರ್ವದಲ್ಲಿ ತಾನು ಬೇರಾಗಿದ್ದನೆಂಬುದು ಸಹಜ ಸಿದ್ಧವಾಗುತ್ತದೆ . ಪೂರ್ವದಲ್ಲಿ ತಾನೆ , ಈಗಳೂ ತಾನೆ , ಮುಂದೆಯೂ ತಾನೆ, ಎಂದೆಂದು ತಾನೆ, ತನ್ನ ವಿನಃ ಏನೊಂದೂ ಇಲ್ಲವೆಂಬುದು ತನ್ನಿಂದ ತನಗೆ ವಿದಿತವಾಗಿದ್ದರೆ ಪರಬ್ರಹ್ಮವಾದವರಲ್ಲ ಶಬ್ದ ಬ್ರಹ್ಮವಾದವರು . ಅರುವಿಂಗರುವು ಆದವರಲ್ಲ ಅರುವಿನ ಅರುವು ತನ್ನಿಂದ ತನಗೆ ವೇದ್ಯವಾದಲ್ಲಿ ನಿರಂತರ ತಾನು ಎಂಬುದು ಸಹಜ ತಿಳುವಳಿಕೆಯಾದಲ್ಲಿ ಪರಬ್ರಹ್ಮ ಸೋಹಂ ಎಂಬ ಹಲುಬಾಟವಿಲ್ಲ .

ಚಿದಹಂ ಯಂಬಲ್ಲಿ ಹಮ್ಮಿನ ಮಾಲೆ ಇದೇನೊ ಹೇಳಾ, ಅಹಮಿಲ್ಲದ ಚಿದ್ಘನ' ತಾನು , ತನಗೆ ಚಿದಹಂ ಎಂಬುದು ತನ್ನಯ ಅರುವು ಆಗದು. ಅಜ್ಞಾನಿಗೆ ದೇಹೋಹಂ ಜ್ಞಾನಿಗೆ ಚಿದಹಂ, ಸುಜ್ಞಾನಿಗೆ ಅಹಮಿಲ್ಲದ ಚಿದ್ಘನ ತಾನೆ ನೋಡಾ .

ಪ್ರಭುದೇವ ಸುಜ್ಞಾನಿ , ಅಹಮಿಲ್ಲದ ಚಿದ್ಘನ ನಾಗಿರುವುದರಿಂದ ಚಿದಹಂ ಎಂಬುದು ಸರಿಯಾಗದು ಎಂದು ಎಚ್ಚರಿಸುತ್ತಿದ್ದಾನೆ . ಪುರುಷಾರ್ಥ ಜ್ಞಾನಿಯು ಚಿದಹಮ್ಮುವುಳ್ಳವನಾಗಿಹನು . ಅರುವೆ ನಾನು , ಸ್ವಯಂಪ್ರಕಾಶ ನಾನು ಎಂಬುದು ಅಮರ. ನಾನು ಎಂಬುದು ಹಮ್ಮಿನ ಮಾಲೆ ಎಂದು ಹೇಳಿಹರು. ನಿಃಶಬ್ದ ಬ್ರಹ್ಮ ಮುಚ್ಯತೆ ಎಂಬ ಶಬ್ದವಿಡಿದು ಬಳಲುವ ಕಾರಣವಿದೇನು ಹೇಳಾ ಗುಹೇಶ್ವರಾ.

ನಿಃಶಬ್ದ ಬ್ರಹ್ಮ ಮುಚ್ಚತೆ ಎಂಬ ಶಬ್ದವಿಡಿದವರು ಬಳಲುವವರಲ್ಲ . ಕೆಲಬರು , ನಿಃಶಬ್ದಂ ಬ್ರಹ್ಮಮುಚ್ಯತೆ ಅನ್ನುತ್ತಿದ್ದಾರೆ ಹಾಗು ಬಳಲುತ್ತಿದ್ದಾರೆಂದಲ್ಲಿ ಇದೇನಾಶ್ಚರ್ಯ. ಪ್ರಭುವಿನ ಸಂದೇಶ ನಿಃಶಬ್ದಂ ಬ್ರಹ್ಮ ಮುಚ್ಯತೆ ಎಂಬ ಸಂಜ್ಞೆ ಅರಿತವರು , ಅವರು ನಿಃಶಬ್ದ ವೇದಿಗಳು . ಅವರದು ಕಿವಿಗೆ ಕೇಳದ ಮಂತ್ರವಾಗಿದೆ . ಅವರಂಗವೆ ಶ್ರೀಗುರು ಮಂತ್ರವಾದುದರಿಂದ ಬಳಲುವವರಲ್ಲ ಅವರು ನಿಶ್ಚಿಂತರು , ನಿರ್ಭಯರು , ಅಕಾಮರು , ತೃಪ್ತರೂಪ ತೃಪ್ತರಾದುದ್ದರಿಂದ ಅವರ ಪರಮಾನಂದಕ್ಕೆ ಗಣನೆಯಿಲ್ಲವೆಂದು ಹೇಳಿಹರು .

ಬಹು ಸಾಧಕರು ನಿಃಶಬ್ಯ ಬ್ರಹ್ಮಮುಚ್ಯತೆ ಎನ್ನುವದಕ್ಕೆ ಒಪ್ಪುತ್ತಾರೆ . ಆ ಮಹಾವಾಕ್ಯವ ಶೃತಿಯ ನುಡಿಯು ನುಡಿಯುತ್ತಾರೆಂದಲ್ಲಿ ಬಳಲಿಕೆ ಹೋಗಿರುವದಿಲ್ಲ . ಇದು ಆಶ್ಚರ್ಯವಲ್ಲವೆ! ಏಕೆಂದರೆ

ನುಡಿಯುವದು ಅಭ್ಯಾಸ ಮಾಡಿಹರಲ್ಲದೆ ನಿಃಶಬ್ದ ಬ್ರಹ್ಮದ ರಹಸ್ಯವರಿತಿರುವದಿಲ್ಲ. ಇದು ಕಾರಣ ಅವರಿಗೆ ಅಚಿಂತ್ಯತ್ವ ಲಭ್ಯವಾಗಿಲ್ಲ . ಇವರು ಶಬ್ದ ಸಂಭ್ರಮದವರು , ಮಾತಿನ ಮಾತಿನ ಮಹಾಂತರು.ಶಬ್ದಕ್ಕೆ ಮೀರಿ ನಿಂತು ತನ್ನ ತಾ ನೋಡಲಿಲ್ಲ, ಶಬ್ದದೊಳಗೆ ತನ್ನ ಕಂಡವರು , ಶಬ್ದವೆ ತಾವಾದವರು , ಶಬ್ದದ ಹಂಗಿಗರು, ತಮ್ಮ ಶಬ್ದ ತಮಗೆ ಹಗೆಯಾಗಲಿಲ್ಲ .ಹಗೆಯಾಗದ್ದರಿಂದ ನುಡಿದರೂ ನಿಃಶಬ್ದ ಬ್ರಹ್ಮವಾಗಿರುವ ಘನವು ಲಭ್ಯವಾಗಲಿಲ್ಲ, ಆರಿಗೆ ತಮ್ಮ ನುಡಿ ತಾವು ಸೇರದಾಗಿಹರು ಒಪ್ಪದಾಗಿಹರು, ಅವರು ನಿಃಶಬ್ದ ಬ್ರಹ್ಮವೆಂಬ ಶಬ್ದವಿಡಿದವರು. ಅವರು ನುಡಿದು ನುಡಿಯದವರು. ನಿಃಶಬ್ದ ಬ್ರಹ್ಮವೆ ತನ್ನಿರುವೆಂದರಿದ ಮಹಾಂತರು ಸುಖಮಯರು, ನಿಶ್ಚಿಂತರು, ನಿರಾಮಯರು ಎಂದು ಹೇಳಿಹರು.

140

ಉಪಾಧಿ ಮನ, ಉಪಾಧಿರಹಿತ ಮನ,
ನಿಂದಲ್ಲಿ ನಿವಾತವಾಯಿತ್ತು ಆನಂದ ಭಾವವು
ಬಿಂದು ತಾನಳಿದು ನಿಂದಲ್ಲಿ ನಿವಾತ ವಾಯಿತ್ತು ,
ಲಿಂಗೋದಯ ಪ್ರಜ್ವಲಿಸುತ್ತಿದೆ ಗುಹೇಶ್ವರ ಲಿಂಗ ತಾನೆಯಾಗಿ. ॥ 669 ॥

ತಾತ್ಪರ್ಯ: ಉಪಾಧಿಮನ, ಉಪಾಧಿ ರಹಿತ ಮನ ನಿಂದಲ್ಲಿ ನಿವಾತವಾಯಿತ್ತು: ಉಪಾಧಿ ಮನ ಆವುದು? ಉಪಾಧಿ ರಹಿತ ಮನ ಆವುದು, ಇವೆರಡು ನಿಂದ ನಿಲವು ನಿವಾತ ದೀಪವೆಂದು ಹೇಳಿಹರು.

ಉಪಾಧಿಮನ,ಇಲ್ಲದ್ದನ್ನು ಕಲ್ಪಿಸಿದ ಮನ, ಇದ್ದದನ್ನು ಅರಿಯದಿಹ ಮನ. ಇದು ತನು ಇಂದ್ರಿಯಾದಿಗಳು, ಪ್ರಾಣಾದಿಗಳು ಮನ ಬುದ್ಧಿಯೆಂದು ಕಲ್ಪಿಸಿದ ಮನ, ನಾಮರೂಪವ ಕಂಡ ಮನ, ಇದುವೆ ಪಿಂಡವಾಗಿ ಕಂಡ ಮನ, ಬ್ರಹ್ಮಾಂಡವಾಗಿ ಕಂಡ ಮನ.

ನರರಾಗಿ , ಸುರರಾಗಿ ಅಸುರರಾಗಿ ಕಂಡ ಮನ , ದೇವಗಣ , ರುದ್ರಗಣ , ಪ್ರಮಥಗಣವಾಗಿ ಕಂಡ ಮನ. ಇದು ಭ್ರಾಂತಿ ಮನ ಇಪ್ಪತ್ತೈದು ತತ್ವಂಗಳ ಮೆಚ್ಚಿದ ಮನ, ಸ್ಥೂಲವಾಗಿಹ ಮನ. ಸೂಕ್ಷ್ಮವಾಗಿಹ ಮನ . ಕಾರಣವಾಗಿಹ ಮನ . ಇದು ಸತ್ವ ಗುಣದುಪಾಧಿಯ ಮನ ಅಹುದು. ರಜೋಗುಣದುಪಾಧಿಯ ಮನವು ತಮೋಗುಣದುಪಾಧಿಯಮನ . ಇದು ಷಡ್ವಿಕಾರದುಪಾಧಿ ಮನ. ಕಾಮ ಕ್ರೋದಾಧಿ ಉಪಾಧಿಯುಳ್ಳ ಮನ. ಇದು ಮಲಿನ ಸತ್ವಗುಣದುಪಾಧಿಯ ಮನವು ಅಹುದು. ಶುದ್ಧ ಸತ್ವ ಗುಣದುಪಾಧಿ ಮನವು ಅಹುದು , ಇದು ಅಶುದ್ಧ ಅಹುದು ಶುದ್ಧವು ಅಹುದು.

ಮನೋವ್ವೈ ಗಗನಾಕಾರಂ ಮನೊವ್ವೈ ಸರ್ವತೋಮುಖಮ್ !
ಮನೋತೀತಂ ಮನಃ ಸರ್ವಂ ನ ಮನಃ ಪರಮಾರ್ಥಃ

ಮನಸ್ಸು ಗಗನದಂತೆ ಇದೆ, ಮನಸ್ಸು ಸರ್ವತೊ ಮುಖವಾಗಿದೆ. ಹಿಂದೆ ಹೋಗಿರುವುದು ಮನಸ್ಸು ಸರ್ವವು ಮನಸ್ಸೆ ಆಗಿದೆ. ಪರಮಾರ್ಥದೃಷ್ಠಿಯಿಂದ ನೋಡಿದರೆ ಮನಸ್ಸೆ ಇಲ್ಲ ಆವಲ್ಲಿ ಸಂಕಲ್ಪ ವಿಕಲ್ಪ ಕೆಟ್ಟಿದೆ ಅಲ್ಲಿ ಮನವು ಗಗನದಂತೆ ಇದೆ. ಆವಲ್ಲಿ ಮನ ಸಂಕಲ್ಪ ವಿಕಲ್ಪವುಳ್ಳದ್ದಾಗಿದೆ ಅಲ್ಲಿ ಸರ್ವತೋಮುಖವಾಗಿದೆ. ಅವಿವೇಕಕ್ಕೂ ಇದುವೆ ಮುಖ, ವಿವೇಕಕ್ಕೂ ಇದುವೆ ಮುಖವಾಗಿದೆ. ನಾಮರೂಪ ಇದುವೆ ಆಗಿದೆ. ಅಸ್ತಿ ಭಾತಿ ಪ್ರಿಯ ರೂಪ ಇದುವೆ ಆಗಿದೆ ಆವಲ್ಲಿ ನಾಮರೂಪಕ್ಕೆ ಒಪ್ಪಿಕೊಂಡಿದೆ ಅದು ಅಶುದ್ಧ ಮನವೆನಿಸಿದೆ. ಆವಲ್ಲಿ ಅಸ್ತಿ ಭಾತಿ ಪ್ರಿಯಕ್ಕೆ ಒಪ್ಪಿಕೊಂಡಿದೆ ಅದು ಶುದ್ಧ

ಮನವೆನಿಸಿದೆ.

ಭೂತಕಾಲ ಭವಿಷ್ತ್ಕಾಲ , ವರ್ತಮಾನ ಕಾಲ ಇದುವೆ ಆಗಿದೆ. ದಿನ ರಾತ್ರಿ ಇದುವೆ,ಏಳು ವಾರಂಗಳು, ಹದಿನೈದು ತಿಥಿಗಳು, ಮಾಸಾದಿಗಳು, ಸಂವತ್ಸರಾದಿಗಳು, ಚತುರ್ಯುಗಗಳು ಸಕಲವು ಇದುವೆ ಆಗಿದೆ. ಹದಿನಾಲ್ಕು ಲೋಕಂಗಳು ಅವುಗಳ ಅಧಿನಾಯಕರು , ಇದುವೆ ಆಗಿದೆ , ಇದರಿಂದ ಜೀವ ಬ್ರಹ್ಮಾದಿಗಳು ರಚಿತವಾಗಿ ಪಂಚ ಪ್ರಕಾರದ ಭೇದಜ್ಞಾನ ಇದರಿಂದ ಜೀವ ಈಶ್ವರ ಬೇದ ಜೀವ ಜಡಭೇದ ಜೀವ ಜೀವರ ಭೇದ ಈಶ್ವರ ಜಡ ಭೇದ ಜಡಾ ಜಡ ಭೇದ ಹೀಗೆ ಪಂಚಪ್ರಕಾರ ಭೇದ ಜ್ಞಾನಕ್ಕೆ ಇದುವೆ ಮುಖವಾಗಿದೆ. ಶುದ್ಧಮನಸ್ಸಿನಿಂದ ಜೀವ ಬ್ರಹ್ಮರೇಕತ್ವ ಇದು ಉಪಾಧಿರಹಿತ ಮನ. ಏಕಮೇವಾದ್ವಿತೀಯ ಬ್ರಹ್ಮ, ಆತ್ಮ ಪರಮಾತ್ಮದ ಏಕತ್ವ ,ನಿಸ್ಸಂಗತ್ವ ನಿರುಪಾಧಿತ್ವ, ನಿರ್ವಿಕಾರತ್ವ ಆತ್ಮಸಿದ್ಧಿ ಇವೆಲ್ಲಕ್ಕೂ ಮನಸ್ಸೆ ಮುಖವಾಗಿದೆ.

ಉಪಾಧಿ ಮನ, ಉಪಾಧಿರಹಿತ ಮನ ನಿಂದಲ್ಲಿ ನಿವಾತವಾಯಿತ್ತು ಬೋಧವೆಂದರೆ ಕರ್ಣವನೋದಿ ಮಂತ್ರವ ಕೇಳಿದುದು ಬೋಧವೆ? ಅಲ್ಲಲ್ಲ ತನು ತ್ರಯ ಸಾಕ್ಷಿಪರ ವಸ್ತು ನೀನೆಂಬುದೆ ನಿಜ ಬೋಧ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನ.

ತನು ತ್ರಯಂಗಳ ಕಲ್ಪಿಸುವದೆ ಉಪಾಧಿ ಮನ, ತನು ತ್ರಯ ಸಾಕ್ಷಿ ಪರವಸ್ತು ನೀನೆಂಬುದೆ ಉಪಾಧಿ ರಹಿತ ಮನವಾಗಿದೆ. ಒಂದು ಸಂಗದಿಂದುಕ್ತವಾದುದು, ಇನ್ನೊಂದು ಸಂಗರಹಿತವಾದುದು. ಒಂದು ವಿಷಯಕ್ಕೆ ಅಭಿಮುಖವಾದುದು,ಇನ್ನೊಂದು ವಿಷಯಕ್ಕೆ ವಿಮುಖವಾದುದು. ಒಂದು ನಿತ್ಯಕ್ಕೆ ಒಪ್ಪಿಕೊಂಡುದು, ಇನ್ನೊಂದು ಅನಿತ್ಯಕ್ಕೆ ಒಪ್ಪಿಕೊಂಡುದು . ಒಂದು ಅವಿಚಾರ ಮನಸ್ಸು, ಮತ್ತೊಂದು ವಿಚಾರ ಮನಸ್ಸು. ಇವೆರಡು ನಷ್ಟವಾದಾಗ ನಿಂದುದು ನಿವಾತ ದೀಪ ಸಿದ್ಧವಾಗುವದು.

ನಿವಾತ ದೀಪ ಸಿದ್ಧಿಸಬೇಕಾದರೆ ಮೊದಲು ಉಪಾಧಿ ಮನ ಕೆಡಿಸಬೇಕು , ಉಪಾಧಿ ಮನವದು ದೃಶ್ಯರೂಪವಾದ ಪ್ರಪಂಚದಲ್ಲಿರುವ ವಸ್ತುಗಳು ಅಂದರೆ ಕಲ್ಪಿತ ನಾಮ ರೂಪವ ತ್ಯಾಗ ಮಾಡಿ ಉಪಾಧಿ ರಹಿತವಾದ ಸಚ್ಚಿದಾನಂದ ಮನವನ್ನು ಅನುಸಂದಾನಿಸುವದು. ಇದು ಬಾಹ್ಯದೃಶ್ಯಾನುವಿದ್ದ ಸವಿಕಲ್ಪ ಸಮಾಧಿ, ಇದಲ್ಲದೆ ಸಚ್ಚಿದಾನಂದ ಪರಬ್ರಹ್ಮಸ್ವರೂಪದ ಶಬ್ದ ಪ್ರಮಾಣ ಮೂಲಕ ಅನುಸಂದಾನ ಮಾಡುವುದೆ ಬಾಹ್ಯ ಶಬ್ದವಿದ್ದ ಸವಿಕಲ್ಪ ಸಮಾಧಿ. ಇವೆರಡು ಅಭ್ಯಾಸಗಳ ಬಲದಿಂದ ಮನಸ್ಸು ಲೀನವಾಗಿ ತರಂಗಗಳಿಲ್ಲದ ಸಾಗರದಂತೆ ಚಲನ ರಹಿತವಾಗಿರುವದೆ ಉಪಾಧಿ ಮನ, ಉಪಾಧಿ ರಹಿತ ಮನ ನಿಂದು ನಿವಾತವಾಯಿತ್ತು ಎಂದು ಹೇಳಿದೆ.

ಆನಂದ ಭಾವವು ಬಿಂದು ತಾನಳಿದು ನಿಂದಲ್ಲಿ ನಿವಾತವಾಯಿತ್ತು.

ಧ್ಯಾತೃ ಧ್ಯಾನೇ ಪರಿತ್ಯಜ್ಯ ಕ್ರಿಯಾದ್ಧೇಯೈಕ ಗೋಚರಂ

ನಿವಾತ ದೀಪ ವಚ್ಚಿತ್ತಂ ಸಮಾಧಿ ರಭಿಧೀಯತೆ॥

ಚಿತ್ತಂ ನಿಧಿಧ್ಯಾಸನ ಸಮಯದಲ್ಲಿ ಅಂದರೆ ಸಚ್ಚಿದಾನಂದವೆಂಬ ಭಾವದ ನಿಧಿಧ್ಯಾಸನ ಸಮಯದಲ್ಲಿ ತ್ರಿಪುಟಿಯೊಡನೆ ಕೂಡಿದ ಚಿತ್ತವು ಧ್ಯಾತೃಧ್ಯಾನೆ, ಧ್ಯಾನ ಮಾಡತಕ್ಕವನು ಮತ್ತು ಧ್ಯಾನವೆಂಬೆರಡನ್ನು ಕ್ರಮಾತ ಕ್ರಮವಾಗಿ ಪರಿತ್ಯಜ್ಯ ಗೋಚರ ವಾಗದಂತೆ ಬಿಡುವುದೆ ಆನಂದ ಭಾವವು ಬಿಂದು ತಾನಳಿದು ಎಂದು ಹೇಳಿದೆ.

ಕ್ರಿಯಾದ್ಧೇಯೈಕ್ಯ ಗೋಚರಂ ಸತ್ ಧ್ಯಾನಿಸಲ್ಪಡ ತಕ್ಕ ಪರಬ್ರಹ್ಮ ವಸ್ತು ಒಂದೆ ವಿಷಯವಾಗಿ ನಿವಾತ ದೀಪವತ್ ಗಾಳಿಯಿಲ್ಲದೆ ಇರುವ ಸ್ಥಳದಲ್ಲಿ ದೀವಿಗೆಯಂತೆ ನಿಶ್ಚಲವಾಗಿರುವದೆ ನಿವಾತಾವಾಯಿತ್ತು ಎಂದು ಹೇಳಿಹರು.

ಲಿಂಗೋದಯ ಪ್ರಜ್ವಲಿಸುತ್ತಿದೆ ಗುಹೇಶ್ವರ ಲಿಂಗ ತಾನೆಯಾಗಿ ಆಕಾಶದಲ್ಲಿ ಮೋಡಗಳಿಲ್ಲದ ಸಮಯದಲ್ಲಿ ಸೂರ್ಯನು ಹೇಗೆ ಪ್ರಜ್ವಲಿಸುವನೋ ಹಾಗೆ ಉಪಾಧಿಕ ಮನವೆಂಬ ಕರಿಮೋಡ ಉಪಾಧಿರಹಿತ ವೆಂಬ ಬಿಳಿ ಮೋಡ ಇವೆರಡು ಸ್ವಾನುಭಾವ ರೂಪ ಗಾಳಿಯಿಂದ ಇಲ್ಲವಾಗಲು ಆತ್ಮನು ಪ್ರಜ್ವಲಿಸುವನು, ಆನಂದ ಭಾವವೆಂಬ ನಾರು ಮೋಡ ಇದು ತನ್ನಿಂದ ತಾ ನರಿದು ನೋಡುವುಡೆ ಆಗ ಚಿದ್ಬಿಂದು ವೆಂಬುದುಅಳಿದು ಸ್ವರೂಪವೆಂಬ ಚಿತ್ಸೂರ್ಯ ಪ್ರಜ್ವಲಿಸುವನು, ಆಗ ಗುಹೇಶ್ವರ ಲಿಂಗ ತಾನೆ ಆಗಿಯೆ ಪ್ರಜ್ವಲಿಸುವನು ಇದು ಕೃತೋಪಾಸಕರ ಹೃದಯ, ಅರಿದರಿದು ನೋಡಿದವರ ಹೃದಯ ಗುಹೇಶ್ವರ ಲಿಂಗವೆ ತಾನಾಗಿ ಪ್ರಜ್ವಲಿಸುವ ಹೃದಯ ಈ ಅನುಭವವನ್ನು ನಮ್ಮ ಹೃದಯದಲ್ಲಿ ನಾವೆ ನೋಡಿಕೊಳ್ಳುವದು .

ದೃಶ್ಯವಾದ ನಾಮರೂಪ ಪ್ರಪಂಚವೆ ಉಪಾಧಿ ಮನ . ಇದು ಪ್ರವೃತ್ತಿ ಮನ ಇದರ ಪ್ರವೃತ್ತಿ ನಿಲ್ಲಬೇಕು. ಸಾಕ್ಷಿನಾನು, ಸಚ್ಚಿದಾನಂದ ನಾನು ನಿಸ್ಸಂಗ ನಾನೆಂಬ ಆತ್ಮಾಕಾರ ನಿಲ್ಲಬೇಕು. ಅಜ್ಞಾನದವಸ್ಥೆ, ಜ್ಞಾನದವಸ್ಥೆ ಎರಡು ಕೆಡಬೇಕು. ಇದರ ಘನತ್ವ ಉಳಿದಿರಬಾರದು, ಆವಲ್ಲಿ ಇವುಗಳ ಘನತ್ವ ಉಳಿದಿಲ್ಲ ಅಲ್ಲಿ ಮಾತ್ರ ನಿಶ್ಚಲವಾಗಿದೆ. ನಿಶ್ಚಿಂತವಾಗಿದೆ. ಇದು ತನ್ನ ಹೃದಯದ ಪರಿಣಾಮ ತನ್ನಿಂದ ತಾನೆ ನೋಡಿಕೊಳ್ಳುವುದು .

ಜ್ಞಾನಿಗೆ ಪ್ರಪಂಚ ಪ್ರತೀತಿಯಾದರೂ ಬ್ರಹ್ಮಾಕಾರ ವೃತ್ತಿಯಿಂದಿರುವದೆ ಜೀವನ್ಮುಕ್ತನು. ಈ ಬ್ರಹ್ಮಕಾರ ವೃತ್ತಿಯಲ್ಲಿ ಆಪೇಕ್ಷೆಯಿಲ್ಲದೆ ಆರು ಸ್ವಯಮೇವ ಪ್ರಜ್ವಲಿಸುವನು ಅವರು ಗುಹೇಶ್ವರ ಲಿಂಗ ತಾನೆ ಆದವರು. ಇದು ತನ್ನಿಂದ ತಾನೆ ನೋಡುವುದು, ಅದು ಲಿಂಗೋದಯ ಪ್ರಜ್ವಲಿಸಿದ ಸಂಕೇತ. ಈ ಮಹಾನುಭವ ತನ್ನ ಹೃದಯದಲ್ಲಿ ತಾನು ಕಂಡುಕೊಳ್ಳುವದು.

141

ಕರ್ಪೂರದ ಗಿರಿಯ ಉರಿಯ ಹಿಡಿದರೆ ಇದ್ದಲುಂಟೆ?
ಮಂಜಿನ ಶಿವಾಲಯಕ್ಕೆ ಬಿಸಿಲ ಕಳಸವುಂಟೆ?
ಕೆಂಡದ ಗಿರಿಯ ನರಗಿನ ಬಾಣದ ಲೆಚ್ಚಡೆ ಮರಳಿ ಬಾಣವ ನರಸಲುಂಟೆ?
ಗುಹೇಶ್ವರನೆಂಬ ಲಿಂಗವನರಿದು ಮರಳಿ ನೆನೆಯಲುಂಟೆ? ॥683॥

ತಾತ್ಪರ್ಯ: ಕರ್ಪುರದ ಗಿರಿಯ, ಉರಿಯ ಹಿಡಿದರೆ ಇದ್ದಲುಂಟೆ : ಕರ್ಪುರದ ಗಿರಿ ಬಹು ದೊಡ್ಡದಿದ್ದರೂ, ಅದಕ್ಕೆ ಉರಿ ಹಿಡಿದರೆ ಅಲ್ಲಿ ಇದ್ದಲಿಯೇನಾದರೂ ಇರುವುದುಂಟೆ? ಕರ್ಪುರದ ಗಿರಿ ಆವುದು? ಉರಿ ಆವುದು? ಇದ್ದಿಲುಂಟೆ? ಕರ್ಪುರದ ಗಿರಿ ಇದು ಉರಿ ತಾಕಿದ ತಕ್ಷಣ ಕರ್ಪುರದ ಗಿರಿ ನಷ್ಟವಾಗುವ ಗಿರಿ. ಅಲ್ಲಿ ಕರ್ಪುರದಂಶವೆ ಉಳಿಯದು, ಕರ್ಪುರದ ಗಿರಿಗೆ ಉರಿ ತಾಕಿದ ಕೂಡಲೆ ಅದರ ಇದ್ದಿಲು ಇಲ್ಲ ಬೂದಿಯು ಇಲ್ಲ. ಅದರ ಗಂಧವೂ ಕೂಡ ಉಳಿಯದು.

ಕರ್ಪುರದ ಗಿರಿ, ಇದು ಶುದ್ಧ ಸತ್ವಗುಣದಿಂದುಕ್ತವಾದ ಧ್ಯಾನಾತ್ಮಕವಾದ ಗಿರಿ. ಇಲ್ಲಿ ಮಲಿನ ಸತ್ವಗುಣಕ್ಕಿಂಬಿಲ್ಲ ಅದರ ಕಾರ್ಯಕ್ಕೂ ಇಂಬಿಲ್ಲ . ಅಂದರೆ ಅವಿದ್ಯೆಗೂ ಇಂಬಿಲ್ಲ. ಅದರ ಕಾರ್ಯವಾದ ದೇಹಬುದ್ಧಿಗೂ ಇಂಬಿಲ್ಲ. ಜಾಗ್ರತಾದಿ ಅವಸ್ಥೆಗಳಿಗೂ ಇಂಬಿಲ್ಲ ಭ್ರಾಂತಿಗೂ ಇಂಬಿಲ್ಲ. ಇದು ಧ್ಯಾನಾತ್ಮಕವಾಗಿಹ ಗಿರಿ. ಧ್ಯಾತೃ, ಧ್ಯಾನ, ಧ್ಯೇಯವೆಂಬ ತ್ರಿಪುಟಿಯಿಂದುಕ್ತವಾದ ಗಿರಿ. ಇದು ಸುವಿಚಾರರೂಪಿ ಬ್ರಹ್ಮಭಾವದ ಗಿರಿ , ಇದು ಕಲ್ಪಿತ ಪುರುಷನ ಸ್ವರೂಪಾನುಸಂದಾನವುಳ್ಳ ಗಿರಿ. ಇದು ಜಿಜ್ಞಾಸುಗಳ ಹೃದಯ ಮಂದಿರದಲ್ಲಿ ಧ್ಯಾನ ರೂಪ ಗಿರಿ .

ಈ ಗಿರಿಗೆ ಉರಿಯ ಹಿಡಿದರೆ ಇದ್ದಿಲುಂಟೆ ?

ಉರಿ ಇದಾವ ಉರಿ ? ಇದು ನಿಜದ ಉರಿ. ತ್ರಿಪುಟಿಗಳಿಗೆ ಮೀರಿದ ಜ್ಞಾನರೂಪ ಉರಿ. ಅಕಲ್ಪಿತ ಜ್ಞಾನವೆ ಉರಿ. ಇದು ಉಪದೇಶ ನಷ್ಟಮಾಡಿದ ಮಹದರುವಿನ ಉರಿ. ಶೃತಿಗಗೋಚರವಾಗಿಹ ಯತಾರ್ಥ ಜ್ಞಾನ ರೂಪಿ ಉರಿ ಶಬ್ದ ಸಂಭ್ರಮಕ್ಕೆ ಸಿಲುಕದ, ಜ್ಞಾನರೂಪ ಉರಿ ಅಖಂಡ ಜ್ಞಾನರೂಪಿ ಉರಿ. ಇದು ಗುರುವಿಡಿದ ಜ್ಞಾನರೂಪಿ ಉರಿ ಅಲ್ಲ. ತನ್ನಿಂದ ತನ್ನ ಕಂಡ ಸಹಜ ಜ್ಞಾನರೂಪಿ ಉರಿ. ಚಿಂತನವ ಕೆಡಸಿ ನಿಶ್ಚಿಂತವಾಗಿಹ ಜ್ಞಾನರೂಪ ಉರಿ. ಇದು ವೇದಾತೀತ ನಿಃಶಬ್ದ ಬ್ರಹ್ಮವಾಗಿಹ ಘನದುರಿ

ಜ್ಞಾನಂ ನ ತರ್ಕೋ ನ ಸಮಾಧಿ ಯೋಗೋ
ನ ದೇಶ ಕಾಲೊ ನ ಗುರೂಪದೇಶಃ
ಸ್ವಭಾವ ಸಂವಿತ್ತ ರಹಂ ಚ ತತ್ವ
ಮಾಕಾಶ ಕಲ್ಪಂ ಸಹಜಂ ಧ್ರುವಂ ಚ

ಜ್ಞಾನವೆಂಬ ಈ ಉರಿ, ತರ್ಕದಿಂದುಕ್ತವಾದ ಉರಿಯು ಅಲ್ಲ, ಸಮಾಧಿ ಯೋಗವು ಅಲ್ಲ, ಗುರೂಪದೇಶವೂ ಅಲ್ಲ. ಅದು ದೇಶ ಕಾಲಗಳಲ್ಲಿ ಒಂದು ಘಟನೆಯೂ ಅಲ್ಲ. ಈ ಜ್ಞಾನವೆಂಬ ಉರಿ ಅದು ಜ್ಞಾನದ ಸಹಜ ಸ್ಥಿತಿ, ಅದು ಸಹಜವಾದ ಧ್ರುಢವಾದ ಆಕಾಶದಂತಿರುವುದು. ತನ್ನಿರುವು ಅದು ತತ್ವ ಇದು ನಿರಂತರವಾಗಿರುವ ಜ್ಞಾನದ ಉರಿ.

ಈ ಜ್ಞಾನವೆಂಬ ಉರಿಯಲ್ಲಿ ಬೋಧವೂ ಇಲ್ಲ, ಅಬೋಧವೂ ಇಲ್ಲ. ಬೋಧಾ ಬೋಧ ಮಿಶ್ರವೂ ಇಲ್ಲ.ಇದು ಯತಾರ್ಥ ಜ್ಞಾನವೆಂಬ ಉರಿ. ಈ ಜ್ಞಾನರೂಪ ಉರಿಗೆ ಈ ತ್ರಿಪುಟಿರೂಪ ಬೋಧವದು ಕಲ್ಪಿತ ಪುರುಷನ ಆತ್ಮನಾನೆಂಬ ಬುದ್ಧಿ ಅಬೋಧ ರೂಪ ಮರವಿನ ದೇಹ ನಾನೆಂಬ ಉದ್ಧಿ ಮರವರುವಿನಿಂದ ಕೂಡಿದ ಮಿಶ್ರಬುದ್ಧಿ ರೂಪ ಗಿರಿಗೆ ಈ ಸಹಜವಾದ ಆಕಾಶದಂತಿರುವ ನಿರಂತರವಾಗಿರುವ ತಾನೆ ಪರತತ್ವವಾಗಿಹ ಜ್ಞಾನರೂಪ ಉರಿ ಹಿಡಿದಡೆ ಇದ್ದಿಲುಂಟೆ? ಈ ಉರಿಗೆ ತ್ರಿಪುಟಿ ರೂಪ ಗಿರಿಯಾಗಿಹ ಧ್ಯಾತೃ, ಧ್ಯಾನ, ಧ್ಯೇಯವೆಂಬುದು ಹಿಡಿದಡೆ, ಈ ಕಲ್ಪಿತದಂಶವೂ ಉಳಿಯಲಾರದು. ಈ ತ್ರಿಪುಟಿಯೆಂಬುದೆ ಅತ್ಯಂತಾಭಾವವಾಗುವುದು, ಎಲ್ಲಿಯವರೆಗೆ ಕಲ್ಪಿತ ಪುರುಷ ತಾನೆಂಬ ಕಲ್ಪನೆಗೊಳಪಟ್ಟಿದ್ದನು. ಅಲ್ಲಿಯವರೆಗೆ ತಾನು ಧ್ಯಾತೃರೂಪಿ ಜೀವನಾಗಿದ್ದನು. ತಾನು ಧ್ಯಾನ ಮಾಡುವವನಾಗಿದ್ದನು. ಅಲ್ಲಿ ಧ್ಯೇಯಕಾರ ವಸ್ತುವಿನ ಗುರಿಯು ಇತ್ತು. ತಾನು ಆವಾಗ ಮಾತು ಮನಂಗಳಿಗೆ ಮೀರಿದ ನಿತ್ಯ ನಿರಂಜನ ನಿಜ ಚಿದ್ರೂಪವೆ ತನ್ನಿರುವೆಂಬ ಅರುವು. ತನ್ನಿಂದ ತನಗೆ ಉದಯವಾಗುವುಡೆ, ಆಗ ಕಲ್ಪಿತ ಪುರುಷನಾಗದ್ದರಿಂದ ತಾನು ಜೀವನೆಂಬುದು ನಷ್ಟವಾಯಿತ್ತು. ಜೀವನ ಉಪಾಧಿಗಳಾಗಿಹ ತನು, ಇಂದ್ರಿಯಂಗಳು, ಪ್ರಾಣಾದಿಗಳು ಮನ ಬುದ್ಧ್ಯಾದಿ ಅಹಂಕಾರ ನಷ್ಟವಾದುದರಿಂದ ಅಂತರಾತ್ಮನೆಂಬುದು ನಷ್ಟ, ಪರಮಾತ್ಮನೆಂಬುದು ನಷ್ಟ. ಕೊನೆಗೆ ವೇದಾತೀತ, ಭಾವಾತೀತನೆಂಬುದು ನಷ್ಟವಾದುದು ವರ್ಣಿಸಲುಂಟೆ.

ಇದು ಕಾರಣ ತ್ರಿಪುಟಿ ರೂಪವಾಗಿಹ ಪ್ರಮಾತೃ, ಪ್ರಮಾಣ, ಪ್ರಮೇಯವೆಂಬ ಗಿರಿಯ ಅಂಶವೂ ಉಳಿದಿರುವದಿಲ್ಲ. ಅಕಲ್ಪಿತ ತಾನೆಂಬ ಜ್ಞಾನದ ಉರಿಯ ಅಂಶವೂ ಉಳಿದಿಲ್ಲ ಅಲ್ಲಿಯ ಅನುಭವ ಮೂಕ ಸಕ್ಕರೆ ತಿಂದ ಅನುಭವ ನುಡಿಗೆ ವೇಧ್ಯವಾಗದು, ಅದು ಹೃದಯಕ್ಕೆ ವೇದ್ಯವಲ್ಲದೆ ನುಡಿದು ಹೇಳಲು ಬರದ್ದರಿಂದ ಅಲ್ಲಿ ಇದ್ದಿಲುಂಟೆ ಎಂದು ಹೇಳಿದ್ದಾರೆ.

ಮಂಜಿನ ಶಿವಾಲಯಕ್ಕೆ ಬಿಸಿಲಿನ ಕಳಸವುಂಟೆ: ಮಂಜಿನ ಶಿವಾಲಯ ಇದಾವ ಶಿವಾಲಯ? ಬಿಸಿಲಿನ ಕಳಸ ಇದಾವ ಕಳಸ ? ಮಂಜಿನ ಶಿವಾಲಯ ಇದು ಮಂಜು ಬಿದ್ದಾಗ ಕಾಣಿಸುವ ಶಿವಾಲಯ.

ಇದಕ್ಕೆ ಸೂರ್ಯನ ಪ್ರಕಾಶಮಯವಾದ ಬಿಸಿಲಿನ ಕಳಸವೆಂಬ ಕಿರಣಂಗಳು ಆ ಮಂಜಿನಲ್ಲಿ ಕಾಣಿಸಿಕೊಳ್ಳುವ ಶಿವಾಲಯಕ್ಕೆ ತಾಕಿದ ತಕ್ಷಣ, ಆ ಶಿವಾಲಯ ಉಳಿಯಬಹುದೆ? ಇದು ಕಾರಣ ಮಂಜಿನ ಶಿವಾಲಯಕ್ಕೆ ಬಿಸಿಲಿನ ಕಳಸ ಇರದು ಎಂದು ಹೇಳಿಹರು. ಮಂಜಿನ ಶಿವಾಲಯವಾವುದು? ಮಂಜು ಬಿದ್ದಾಗ ಕಾಣಿಸುವ ಶಿವಾಲಯ, ಮರವೆ ಮಂಜು, ಅವಿದ್ಯೆಯೆ ಮಂಜು, ಭ್ರಾಂತಿಯೆ ಮಂಜು, ಮಂಜಿನ ಶಿವಾಲಯ ಅವಿದ್ಯೆ ದೃಷ್ಠಿಗೆ ಕಾಣಿಸುವ ಈ ಚರಾಚರ ಜಗತ್ತು ಶಿವಾಲಯವಾಗಿದೆ. ಇದು ವ್ಯಷ್ಠಿಯಾಗಿ ತೋರುವ ಶಿವಾಲಯ, ಸಮಷ್ಠಿಯಾಗಿ ತೋರುವ ಶಿವಾಲಯ, ಗುರು ಶಿಷ್ಯರಾಗಿ ತೋರುವ ಶಿವಾಲಯ ಜಿಜ್ಞಾಸುಗಳಾಗಿ, ತಪಸ್ವಿಗಳಾಗಿ ತ್ಯಾಗಿ ಯೋಗಿಗಳಾಗಿ ತೋರುವ ಶಿವಾಲಯ, ದೇವಗಣ, ರುದ್ರಗಣ, ಪ್ರಮಥ ಗಣಂಗಳಾಗಿ ತೋರುವ ಶಿವಾಲಯ ರೂಪ ನಾಮದಿಂದುಕ್ತವಾಗಿ ಕಾಣಿಸುವ ಶಿವಾಲಯ. ಇದು ಮಂಜಿನ ಶಿವಾಲಯ. ಇದಕ್ಕೆ ಬಿಸಿಲಿನ ಕಳಸವುಂಟೆ? ಇದಕ್ಕೆ ಬಿಸಿಲಿನ ಕಳಸವಿರಬಹುದೆ?

ಮಂಜಿನ ಶಿವಾಲಯವಾಗಿಹ ಭ್ರಾಂತಿರೂಪ ಮಂಜಿನ ನಾಮರೂಪವಾಗಿ ತೋರುವ ಶಿವಾಲಯಕ್ಕೆ, ಬಿಸಿಲ ಕಳಸವದು, ನಿಜದರುವೆಂಬ ಬಿಸಿಲ ಕಳಸ ಸಚಿದಾನಂದರೂಪಿ ಕಳಸ, ಸ್ವಯಂಮಪ್ರಕಾಶ ಮಾನವಾಗಿಹ ಬಿಸಿಲ ಕಳಸ, ನಿರಂತರವಾಗಿಹ ಮಂಗಳಮಯ, ಪರತತ್ವ ಆನೆಂಬ ಜ್ಞಾನರೂಪ ಪ್ರಖರವು ಬಿದ್ದ ತಕ್ಷಣ ಸಚರಾಚರ ಜಗತ್ತು ಆಗಳೆ ನಷ್ಟವಾಗುವದು.

ಮರವಿನಲ್ಲಿ ತೋರುವ, ಮೂರುವರಿ ಮೊಳ ಶರೀರವಾಗಿ ಕಾಣುವ ಶಿವಾಲಯ ಅರುವಿಂಗರುವಾಗಿಹ ಬಿಸಿಲಿನ ಕಳಸ ಕಂಡಾಕ್ಷಣ ಆ ಶಿವಾಲಯ ಉಳಿಯದು. ಅಜ್ಞಾನ ದೃಷ್ಠಿಯಲ್ಲಿ ಕಾಣಿಸುವ ಪುರುಷ ಸ್ತ್ರಿಯಾಗಿ ತೋರುವ ಶಿವಾಲಯ ಸುಜ್ಞಾನದೃಷ್ಟಿಗದು ಉಳಿಯಬಹುದೆ? ಅಜ್ಞಾನ ದಿಶೆಯಲ್ಲಿ ತೋರುವ ಮಂಜಿನ ಶಿವಾಲಯವಾಗಿಹ ನಾಮರೂಪವು ಜ್ಞಾನಾಜ್ಞಾನಕ್ಕೆ ಮೀರಿದ ಅಖಂಡಿತ ಜ್ಞಾನ ಅನುಪಮ ಜ್ಞಾನ ಅಚಲಿತ ಜ್ಞಾನ ರೂಪಿ ಬಿಸಿಲಿನ ಕಳಸ ದರ್ಶನ ವಾಗುವುಡೆ ಆ ಮಂಜಿನ ಶಿವಾಲಯವುಳಿಯಬಹುದೆ?

ಕೆಂಡದ ಗಿರಿಯ ನರಗಿನಬಾಣದ ಲೆಚ್ಚಡೆ ಮರಳಿ ಬಾಣವ ನರಸಲುಂಟೆ: ಕೆಂಡದ ಗಿರಿ ಮೊದಲೆ ಕೆಂಡದ ಗಿರಿ ಅದಕ್ಕೆ ಅರಗಿನ ಬಾಣವ ಹೂಡಿ ಹೊಡೆಯುವುಡೆ ಪುನಃ ಆ ಬಾಣವ ಹುಡುಕಬಹುದೆ?

ಕೆಂಡದ ಗಿರಿ ಇದಾವ ಕೆಂಡದ ಗಿರಿ? ಇದು ತೋರಿ ಇಲ್ಲವಾಗುವ ಕೆಂಡದ ಗಿರಿ ಅಲ್ಲ ನಿರಂತರವಾಗಿಹ ಉದಯಾಸ್ತವಾಗದಿದ್ದ ಮಹದರುವುಳ್ಳ ಕೆಂಡದಗಿರಿ, ಇದಾವ ಕೆಂಡದಗಿರಿ ಇದು ಸಹಜ ಜ್ಞಾನರೂಪ ಕೆಂಡದ ಗಿರಿ. ಇದು ವೇದ ವೇದಾಂತಗಳಿಗೆ ಅಸಾಧ್ಯವಾದುದರಿಂದ ಅನುಪಮ ಜ್ಞಾನದ ಗಿರಿ ನಾದ ಬಿಂದು ಕಳೆಗಳಿಗಭೇಧ್ಯವಾಗಿಹ ಕೆಂಡದಗಿರಿ, ಅಚಲಿತ ಜ್ಞಾನ ರೂಪ ಕೆಂಡದಗಿರಿ ಯಾಗಿದೆ. ಇದು ವಾಙ್ಮನಗಳಿಗೆ ಮೀರಿರುವದರಿಂದ ಅಖಂಡಿತ ಜ್ಞಾನ ರೂಪಿ ಕೆಂಡದ ಗಿರಿಯಾಗಿದೆ. ಈ ಕೆಂಡದ ಗಿರಿಗೆ ಕಲ್ಪಿತನು ತನ್ನ ಕಲ್ಪನೆಯ ಮಾಡಿ ಅದನ್ನು ಭೇದಿಸಲು ತನ್ನ ಮತಿಯಿಂದ ಸಾಧಿಸಿ ಹೋಗುವುಡೆ ಆ ಮತಿಯೆ ಭಸ್ಮವಾಗುವುದು. ಅಲ್ಲಿ ಮತಿಯೆಂಬ ಬಾಣವ ಹುಡುಕಿದರೆ ಶಿಕ್ಕಬಹುದೆ?

ಮತಿ, ಅದು ನಿರ್ಣಯದಿಂದುಕ್ತವಾದ ಮತಿ. ಇದು ಅನುಪಮ ಕಂಡ ಉಪಮೆಯಿಂದುಕ್ತವಾದ ಮತಿರೂಪ ಬಾಣವು . ಅನುಪಮ ಜ್ಞಾನರೂಪಿ ಕೆಂಡದಲ್ಲಿ ಮತಿಯು ಶಿಗದಾಗುವುದು. ಸೀಮಾತೀತ ನಿಲುವುಳ್ಳ ಜ್ಞಾನದ ಕೆಂಡದ ಗಿರಿಗೆ ಸೀಮಿತ ಬುದ್ಧಿ ಆಲಿಂಗನವಾಗುವುಡೆ , ಆ ಬುದ್ಧಿ ಕರಗುವುಡೆ ಅದು ಹುಡುಕಿದರೆ ಶಿಗಬಹುದೆ.

ಉರಿಯಲ್ಲಿ ಅರಗಿನ ಬಾಣವ ಹೊಗಲು ಅದನ್ನು ಹುಡುಕ ಹೋದರೆ ಸಿಗಬಹುದೆ ? ಚಿದಗ್ನಿಗೆ ಮತಿರೂಪ ಅರಗಿನ ಬಾಣವು ಅದರಲ್ಲಿ ಎಸೆಯಲು ಅದನ್ನು ಹುಡುಕ ಹೋದರೆ ಸಿಗಬಹುದೆ ?

ಗುಹೇಶ್ವರ ಲಿಂಗವ ನರಿದು ಮರಳಿ ನೆನೆಯುವವರಾಗಿಹರು, ಇವರಿಗೆ ಲಿಂಗ ಸಕೀಲ ಸಂಯೋಗ ವರ್ಮಸ್ಥಲ ನರಿಯದ್ದರಿಂದ ಲಿಂಗ, ಲಿಂಗ, ಎಂದಲ್ಲಿಯೆ ತಪ್ಪಿತ್ತು. ಜಂಗಮ ಜಂಗಮ ಎಂದಲ್ಲಿಯೆ ತಪ್ಪಿತ್ತು, ಪ್ರಸಾದ ಪ್ರಸಾದ ಎಂದಲ್ಲಿಯೆ ತಪ್ಪಿತ್ತು, ಲಿಂಗ ಜಂಗಮ, ಪ್ರಸಾದ ಎನ್ನುವ ಹಲುಬಾಟ, ಲಿಂಗವನರಿಯದ ಹಲುಬಾಟ ಜಂಗಮವರಿಯದ ಹಲುಬಾಟ, ಪ್ರಸಾದವರಿಯದ ಹಲುಬಾಟ. ಇದು ಕಾರಣ ಗುಹೇಶ್ವರ ಲಿಂಗವ ನರಿವುದು, ಗುಹೇಶ್ವರ ಲಿಂಗವೆಂಬುದು ಸಕಲರ ದೇಹರೂಪಿ ಗುಹೆಯಲ್ಲಿ ಪ್ರಜ್ವಲಿಸುವ ಚೈತನ್ಯ ಚಿಜ್ಯೋತಿ ಸ್ವಯಂ ಜ್ಯೋತಿ ಇದುವೆ ಲಿಂಗ. ಇದು ಅರಿದಿಹೆನೆಂದರೆ ಅರುಹಿಂಗಸಾಧ್ಯ ನೆನದಿಹನೆಂದರೆ ನೆನಹಿಂಗಸಾಧ್ಯ ಭಾವಿಸಿಹೆನೆಂದರೆ ಭಾವಕ್ಕಸಾಧ್ಯ, ವಾಙ್ಮನಕ್ಕಗೋಚರವಾಗಿಹ ಲಿಂಗ ಶ್ರೀಗುರು ಕರುಣಿಸಿ ತಿಳಿಸಿದಾಗ ತಾನೆ ಆಗಿಹ ಲಿಂಗ . ಇದು ಶೃತಿಗಗೋಚರವಾಗಿಹ ಲಿಂಗ, ಇದನ್ನು ಆವುದೆ ಭಾಷೆಯಿಂದ ಹೇಳಲು ಬಾರದ್ದರಿಂದ ಅನುಪಮ ಲಿಂಗವೆಂದು ಹೇಳಿಹರು. ಆರು ತನ್ನ ದೇಹರೂಪಿ ಗುಹೆಯಲ್ಲಿರುವ ನಿರಂಜನ ನಿಜ ಚಿದ್ರೂಪವಾಗಿಹ ಲಿಂಗವ ತಿಳಿದಿಹರು ಅವರು ಗುಹೇಶ್ವರ ಲಿಂಗವೆ ತಾನಾದುದರಿಂದ ಪುನಃ ಲಿಂಗ ಲಿಂಗ ಎಂದು ನೆನೆಯದಂತಾಗಿಹರು, ಏಕೆಂದರೆ ಲಿಂಗವದು ವಾಙ್ಮನೋತೀತವೆಂದು ತನ್ನಿಂದ ತನಗದು ವೇದ್ಯವಾಗಿ ಲಿಂಗ ಲಿಂಗ ಎನಲಿಲ್ಲ ಲಿಂಗ ಲಿಂಗ ಎಂದು ಮನ ನೆನೆಯಲಿಲ್ಲ.

142

ನೆನಹ ನೆನೆವ ಮನದಲ್ಲಿಲ್ಲ , ತನುವಿನಲ್ಲಿ ಆಸೆಯಿಲ್ಲ
ನೆನವ ಮನವ ನತಿಗಳೆದ ಘನಕ್ಕೆ ಘನವ ನೆಂತೆಂಬೆ
ತನ್ನಲ್ಲಿ ತಾನಾಯಿತ್ತು .
ಭಿನ್ನವಿಲ್ಲದ ನಿಂದ ನಿಜವು ಅನಾಯಾಸದ ಅನುವ ಕಂಡು
ಆನು ಬೆರಗಾದೆನಯ್ಯ ಎಂತಿದ್ದುದು ಅಂತೆ ಅದೆ
ಚಿಂತೆಯಿಲ್ಲದನುಭಾವ ಗುಹೇಶ್ವರಾ. ॥ 674 ॥

ತಾತ್ಪರ್ಯ: ನೆನಹ ನೆನೆವ ಮನದಲ್ಲಿಲ್ಲ ತನುವಿನಲ್ಲಿ ಆಶೆಯಿಲ್ಲ : ಮನದಲ್ಲಿ ನೆನಹ ನೆನವು ಇಲ್ಲದುದು,ಇದಾವ ಮನ? ನೆನಹ ನೆನೆವ ನೆನೆಯದ ಮನ , ಇದು ದೇವಗಣ , ರುದ್ರಗಣ , ಪ್ರಮಥಗಣ ಆವಾವ ಗಣವನ್ನು ನೆನೆಯದ ಮನ ಈಶ್ವರ ಸದಾಶಿವನನ್ನು ನೆನೆಯದ ಮನವಾಗಿರುವಲ್ಲಿ ಬಾರಾ ಜ್ಯೋತಿರ್ಲಿಂಗಗಳ ಅದು ಹೇಗೆ ನೆನೆವುದು ? ತಾನಾರೆಂದರಿತ ಮನ ಇದು ಲಿಂಗವೆನ್ನದ ಮನ, ಲಿಂಗೈಕ್ಯವೆನ್ನದ ಮನ,ಸಂಗವೆನ್ನದ ಮನ, ಸಮರಸವೆನ್ನದ ಮನ, ಅರಿತೆನೆನ್ನದ ಮನ , ಅರಿಯೆ ನೆನ್ನದ ಮನ ಇದು ನಿಶ್ಚಿಂತ ಮನ, ನಿರಾಲಂಬ ಮನವಾದುದರಿಂದ ತನುವಿನಲ್ಲಿ ಆಶೆಯಿಲ್ಲ . ಆವ ತನುವಿನಲ್ಲಿ ಪ್ರವೃತ್ತಿಯ ಹಿರಿತನವದೆ ಅದಕ್ಕೆ ಆಸೆ ಉಂಟು. ಅಲ್ಲಿ ಫಲ ಪದಂಗಳ ಬಯಕೆ ಉಂಟು . ಬಯಕೆ ಕೈ ಸೇರುವ ತನಕ ಪ್ರಬಲ ಆಶೆ ಇದ್ದುದು ಸಹಜವಾಗಿದೆ. ಆವ ತನುವಿನಲ್ಲಿ ಅಚಿಂತ್ಯ ಪದ ಪ್ರಜ್ವಲಿಸುವದು ಅದು ಆಶೆಯಿಲ್ಲದ ತನುವಾಗಿದೆ, ಮಹಾತ್ಮರ ತನುವೆ ಆಶೆಯಿಲ್ಲದ ತನು ಅಲ್ಲಿ ನೆನಹ ನೆನೆವ ಮನವೆ ಇಲ್ಲವಾಗಿದೆ.

ಸದ್ಯದ ಸಮಯದಲ್ಲಿ ಮಹಾತ್ಮರೆಂಬ ಹೆಸರುಗಳಲ್ಲಿ ಕಾಣುವ ಬಹಳಷ್ಟು ಶ್ರೀಗಳಾಗಲಿ,

ಬ್ರಹ್ಮವೇತ್ತರಾಗಲಿ ಆಚಾರ್ಯರಾಗಲಿ ತನುವಿನಲ್ಲಿ ಆಶೆ ಇದ್ದವರು ಹೆಚ್ಚು ಶಿಕ್ಕುವರು. ಇದಲ್ಲದೆ ನೆನೆಹ ನೆನೆವ ಮನದವರಾಗಿಹರು.

ಪ್ರಭುವಿನ ಪ್ರಸಾದವಾಣಿಯಂತೆ ಅರು ಹೃದಯ ಶಿಕ್ಕುವದು ವಿರಳ. ಆವಲ್ಲಿ ಅರು ಹೃದಯವಾಗಿಹುದು ಅಲ್ಲಿ ಆವಾವುದನ್ನು ನೆನೆಯದ ಮನ, ಕಲ್ಪಿಸದ ಮನವಾದುದರಿಂದ ಅಚಿಂತ್ಯ ಮನ ನೆನೆಹಿಂಗೂ ನಿರ್ಣಯಕ್ಕೂ ಮಿಕ್ಕಿ ಮೀರಿ ನಿಂತ ಮನ, ಗುಹೇಶ್ವರ ಲಿಂಗ ತಾನಾಗಿ ಪ್ರಜ್ವಲಿಸುವ ಮನವಾಗಿ ಆಶೆಯಿಲ್ಲದ ತನುವಾಗಿದೆ.

ನೆನೆವ ಮನವ ನತಿಗಳೆದ ಘನಕ್ಕೆ ಘನವನೆಂತೆಂಬೆ. ತನ್ನಲ್ಲಿ ತಾನಾಯಿತ್ತು. ಇದು ತನ್ನಲ್ಲಿ ತಾನೆ ತಾನಾದ ಘನಕ್ಕೆ ಘನ, ಇದು ನೆನೆವ ಮನವ ನತಿಗಳೆದ ಸಂಕೇತ. ನೆನೆವ ಮನವ ತಾನಾಗದ ಸಂಕೇತ. ನೆನೆವ ಮನಕ್ಕೆ ಇಂಬುಗೊಡದ ಸಂಕೇತ. ನೆನೆವ ಮನವನ್ನೇ ನೆನೆಯದಂತೆ ಮಾಡಿದ ಅಪ್ರತಿಮ ಸಾಹಸ ಅಸಾಧ್ಯವ ಸಾಧಿಸಿದ ಸಾಹಸ ಕಾಣದುದು ಕಂಡ ಸಂಕೇತ.

ನೆನವ ಮನ? ಇದಾವ ಮನ ಇದಕ್ಕೆ ಅಧೋ ಮತ್ತು ಊರ್ಧ್ವವೆಂದು ಎರಡು ಮುಖಗಳು. ಅಧೋಮುಖವಾಗಿರುವ ಮನ : ಇದು ಹೊನ್ನು ಹೆಣ್ಣು ಮಣ್ಣು ಎಂಬ ವಿಷಯಾಕಾರ ಮುಖವುಳ್ಳದ್ದಾಗಿ ವ್ಯಸನಿಯಾಗಿ ಭೋಗಾಭಿಲಾಷೆಯುಳ್ಳದ್ದಾಗುವುದು. ಆಗ ಇದಕ್ಕೆ ವಿಷಯಾಸಕ್ತಿ ಅತಿ ಹೆಚ್ಚು. ಇಲ್ಲಿಯೆ ಕಾಮಾಕಾರ , ಕ್ರೋಧಾಕಾರ , ಲೋಭಾಕಾರ , ಮೋಹಾಕಾರ ಕೊನೆಗೆ ಮದವೆಂದರೆ ಅಷ್ಟ ಮದಗಳಿಂದ ಕೂಡಿ ಅರಿಷಡ್ವರ್ಗ ಪುರಿಯಾಗುವುದು . ಆಗ ಇಡೀ ವಿಶ್ವದ ಉತ್ತಮೋತ್ತಮ ವಸ್ತುಗಳು ತನ್ನವಾಗಿರಲಿ ಎಂಬುದೆ ಇದರ ನೆನಹು . ಇದು ಅಶುದ್ಧ ಮನವು ಶುದ್ಧ ಮನವಿದ್ದಲ್ಲಿ ವಿವೇಕ, ವೈರಾಗ್ಯ, ಆತ್ಮವಿಚಾರ, ಆತ್ಮ ಚಿಂತನೆ, ಶಮೆದ್ಗಮೆ, ಸಹನೆ, ಶಾಂತಿ, ಗುರುಭಕ್ತಿ ತತ್ತ್ವತಿಳಿವುದೆ ಅಲ್ಲಿ ನಿವಾಸವಾಗಿದೆ. ಅಚಿಂತ್ಯಪದ ಪಡೆಯುವ ತನಕ ಅದರ ಸಲುವಾಗಿ ಅಹೋರಾತ್ರಿ ಶ್ರವಣ, ಮನನ, ನಿಧಿಧ್ಯಾಸಗಳ, ಚಿಂತನೆಯಲ್ಲಿರುವದು. ಇದು ಶುದ್ಧ ಮನವಾಗಿದೆ.

ಈ ಎರಡು ಮನವ ನತಿಗಳೆದಾಗ ಘನಕ್ಕೆ ಘನವನೆಂತೆಂಬೆ ಎಂದು ಹೇಳಿದ್ದಾರೆ. ಇವೆರಡು ಅತಿಗಳೆಯಬೇಕಾದರೆ ಇಲ್ಲಿ ತನ್ನ ಸ್ವರೂಪ ದೃಷ್ಠಿಯಿಂದ ಅರಿದರಿದು ನೋಡುವುಡೆ ಅಶುದ್ಧ ಮನ, ಶುದ್ಧ ಮನಗಳೆರಡು ಅತಿಗಳೆಯಲು ಬರುತ್ತದೆ. ಏಕೆಂದರೆ ಇವು ತನಗಿಂತ ಬೇರಾದವುಗಳು, ತೋರಿ ಇಲ್ಲವಾಗುವವು, ಇದಲ್ಲದೆ ತನ್ನಿಂದ ತಿಳಿಸಿಕೊಳ್ಳುವವು. ಒಂದು ಅವಿದ್ಯೆಯಲ್ಲಿ ತೋರಿದರೆ, ವಿದ್ಯೆಯಲ್ಲಿ ಒಂದು ತೋರುತ್ತದೆ. ಒಂದು ಅಜ್ಞಾನದವಸ್ಥೆ ತೋರಿದರೆ, ಇನ್ನೊಂದು ಚಿದಹಮ್ಮುದಲ್ಲಿ ತೋರುವುದು ಎಂಬುದು ತನ್ನಿಂದ ತನಗೆ ತಿಳುವಳಿಕೆಯಾಗುವುಡೆ ಆಗ ಈ ಮನಗಳೆರಡು ತಾನಾಗನು. ಇವೆರಡಕ್ಕೂ ಮಿಕ್ಕಿ ಮೀರಿ ಬೆಳಗುಳ್ಳ ಬೆಳಗು ಪ್ರಜ್ವಲಿಸುವುಡೆ ತನ್ನಲ್ಲಿ ತಾನಾಯಿತ್ತು. ಇದು ಎರವಲವಾಗಿ ಬಂದ ಜ್ಞಾನವೂ ಅಲ್ಲ, ಅರಿವೂ ಅಲ್ಲ. ಇದು ಭಿನ್ನವಿಲ್ಲದೆ ನಿಂದ ನಿಜವು.

ಈ ನಿಜವು ತನಗಿಂತ ಭಿನ್ನವಿಲ್ಲದೆ ನಿಂದ ನಿಜವು. ಇಲ್ಲಿ ಭಿನ್ನದೃಷ್ಠಿ, ಭಿನ್ನಜ್ಞಾನ, ಭಿನ್ನಭಾವ ನಷ್ಟವಾಗಿ ನಿಂದ ನಿಜವು. ಇಲ್ಲಿ ಜೀವನವೆಂಬುದು ಭಿನ್ನದೃಷ್ಠಿ, ಭಿನ್ನಜ್ಞಾನ, ಭಿನ್ನಭಾವವು. ಅಂರಾತ್ಮ ಪರಮಾತ್ಮನೆಂಬುದು ಭಿನ್ನದೃಷ್ಠಿ, ಭಿನ್ನಜ್ಞಾನ, ಭಿನ್ನಭಾವ ಇವಾವು ತನ್ನೊಳ ನಷ್ಟವಾದವುಗಳು ಇದಲ್ಲದೆ ತನಗಿಂತ ಭಿನ್ನವಿಲ್ಲದೆ ನಿಂದ ನಿಜವು.

ಗುರುವೆಂಬ ಭಿನ್ನದೃಷ್ಠಿ, ಭಿನ್ನಜ್ಞಾನ, ಭಿನ್ನಭಾವವೂ ಇಲ್ಲ. ಇಲ್ಲಿ ಪ್ರಪಂಚ ಪರಮಾರ್ಥವೆಂಬ ಭಿನ್ನದೃಷ್ಠಿ, ಭಿನ್ನಜ್ಞಾನಕ್ಕಿಂಬಿಲ್ಲದೆ ನಿಂದ ನಿಜವು.

ಅನಾಯಾಸದ ಅನುವ ಕಂಡು ಬೆರಗಾದೆನಯ್ಯ. ಓಹೋ, ಇದು ಅನಾಯಾಸದ ಅನುವ,

ಇದು ಪರಿಶ್ರಮವಿಲ್ಲದೆ, ಲಭ್ಯವಾದ ಅನಾಯಾಸದ ಅನುವ ಇದಕ್ಕೇನನ್ನಬೇಕು. ತನ್ನ ಸ್ವರೂಪವ ಕಾಣಲು ಬಹುಕಾಲದಿಂದಲೂ ಯುಗ ಜುಗಗಳಿಂದಲೂ, ಬಹು ಆಯಾಸ ಮಾಡಿಕೊಂಡು ಪರಿಶ್ರಮ ವಹಿಸಿದರೂ ದೊರೆಯದ ಸ್ವರೂಪ. ಈಗ ಏನೊಂದು ಆಯಾಸವಾಗದೆ ತನಗೆ ತಾನೆ ಲಭ್ಯವಾಯಿತ್ತೆ! ಇದೆಂಥ ಸೋಜಿಗ? ಇದನ್ನು ಪಡೆಯಲು ಪ್ರವೃತ್ತಿವುಳ್ಳ ಪ್ರಪಂಚವನ್ನು ತೊರೆದು ನಿವೃತ್ತಿ ಮಾರ್ಗವಾದ ವೈರಾಗ್ಯವನ್ನೆ ಅವಲಂಬಿಸಿದೆ. ಘೋರ ತಪವನ್ನಾಚರಿಸಿದೆ, ಯೋಗವನ್ನಾಚರಿಸಿದೆ, ಗುರು ಸನ್ನಿಧಿಯಲ್ಲಿದ್ದೆ ಏಷ್ಟೋಕಾಲ ತತ್ವಮಸಿ ಮಹಾ ವಾಕ್ಯವನ್ನೆ ಪಠಿಸಿದೆ. ಮನನ ಮಾಡಿದೆ ನಿಧಿಧ್ಯಾಸ ಮಾಡಿದೆ, ಎಷ್ಟೆಷ್ಟು ಅಹಂಕಾರವುಳ್ಳವನಾದೆ, ಮತ್ತಷ್ಟು ಮಾಡುವುದು ಹೆಚ್ಚಾಯಿತು. ಅಷ್ಟೆ, ನಾನಾರೆಂಬ ನನ್ನ ಅಚಿಂತ್ಯಪದ ದೂರವಾಯಿತು. ಈಗ ಇದನರಿದು ಆನು ಅರಸುವುದು ಬಿಟ್ಟೆ ಆರಾಧಿಸಿವದು ಬಿಟ್ಟೆ, ನೆನೆಯುವುದು ಬಿಟ್ಟೆ, ಚಿಂತಿಸುವುದು ಬಿಟ್ಟೆ, ಮಹಾವಾಕ್ಯಗಳು ಘನವೆಂಬುದು ಬಿಟ್ಟೆ, ಗುರು, ಲಿಂಗ, ಜಂಗಮ, ಘನವೆಂಬುದು ಬಿಟ್ಟೆ. ಈ ಹೆತ್ತರಿವುಗಳಿಗೆಲ್ಲ ಮಹತ್ವಮಾಡದೆ, ಜಿಗುಪ್ಸೆಗೊಂಡೆ ಇವುಗಳೆಲ್ಲವು ನನ್ನಿಂದ ತಿಳಿಸಿಕೊಳ್ಳ ತಕ್ಕುವುಗಳೆಂದು ತಿಳಿದು. ಇವುಗಳಿಗೆ ಮಿಕ್ಕಿ ಮೀರಿ ನಿಂದೆ ಆಗ ಅನಾಯಾಸದ ಅನುವ (ಸ್ವರೂಪವು) ಕಂಡು ಬೆರಗಾದೆನಯ್ಯಾ ಏಕೆಂದರೆ ಎಂತಿದ್ದುದು ಅಂತೆ ಇದೆ ಚಿಂತೆ ಇಲ್ಲದನುಭಾವ ಗುಹೇಶ್ವರಾ.

ಎಂತಿದ್ದುದು ಅಂತೆ ಇದೆ. ಅಹುದು, ಸೃಷ್ಠಿಯಾಗದ ಮುನ್ನ ಆವರೀತಿಯಲ್ಲಿದ್ದುದು, ಯುಗ ಜಗಂಗಳು ಮಡಿವಲ್ಲಿ ಬ್ರಹ್ಮಾಂಡಗಳು ಅಳಿವಲ್ಲಿ ಇವುಗಳು ಹುಟ್ಟಿ ತೋರುವಲ್ಲಿ ಹಾಗೆ ಇದೆ. ಅದು ಚಿಂತೆ ಇಲ್ಲದನುಭಾವ ಗುಹೇಶ್ವರಾ.

ಚಿಂತೆಯುಕ್ತವಾದ ಅನುಭಾವವೆತ್ತ? ಚಿಂತೆ ಇಲ್ಲದ ಅನುವಭಾವ ವೆತ್ತ. ತೋರಿ ಕೆಡುವದೆತ್ತ? ತೋರದಡಗದ ಘನವೆತ್ತ? ನುಡಿಯಿಂದುಕ್ತವಾದುದೆತ್ತ! ನುಡಿಗೆಡೆಗೊಡದ ಘನವೆತ್ತ? ಶೃತಿಗಳಿಗೊಳಪಟ್ಟುದೆತ್ತ? ಶೃತಿಗಳಿಗೋಚರವಾದುದೆತ್ತ? ಭ್ರಾಂತಿ ಎತ್ತ, ಬ್ರಹ್ಮವೆತ್ತ, ಬೆಳಕು ಕತ್ತಲೆ ಸಮಾನವೆ? ಉದಯವಿದ್ದಲ್ಲಿ ಅಸ್ತವಿಲ್ಲ, ಅಸ್ತವಿದ್ದಲ್ಲಿ ಉದಯವೆಲ್ಲಿಯದು, ಉದಯಾಸ್ತವಿಲ್ಲದುದಯವೆತ್ತ, ತನ್ನ ಉದಯ ಎಂತಿದ್ದುದು ಅಂತೆ ಇದೆ.

ಮರವು ಇದ್ದಲ್ಲಿ ಅರುವು ಇದೆ. ಅರುವು ಇದ್ದಲ್ಲಿ ಮರವು ಇದೆ. ಅಜ್ಞಾನವಿದ್ದಲ್ಲಿ ಜ್ಞಾನವಿದೆ. ಜ್ಞಾನವಿದ್ದಲ್ಲಿ ಅಜ್ಞಾನವಿದೆ. ಗುರುವೆಂದಲ್ಲಿ ಶಿಷ್ಯನಿದ್ದಾನೆ, ಶಿಷ್ಯನೆಂದಲ್ಲಿ ಗುರುತ್ವವಿದೆ. ಬಂಧನವೆಂದಲ್ಲಿ ಮೋಕ್ಷದ ಅಲಾಪ, ಮೋಕ್ಷವೆಂಬಲ್ಲಿಯೆ ಬಂಧನದ ತೋರಿಕೆ. ಇವೆಲ್ಲವು ಚಿಂತನದಿಂದುಕ್ತವಾದವುಗಳು, ಒಂದು ಪ್ರವೃತ್ತಿ ಚಿಂತನದಿಂದುಕ್ತವಾದುದು ಇನ್ನೊಂದು ನಿರ್ವತ್ತಿ ಚಿಂತನದಿಂದುಕ್ತವಾದುದು. ಇವೆರಡು ಚಿಂತನದಿಂದುಕ್ತವಾದವುಗಳು, ಇವೆಡಕ್ಕೂ ಬಹು ಆಯಾಸವು, ಪರಿಶ್ರಮವು, ಪರಿಶ್ರಮ ಪಡದೆ ದೊರೆಯುವವುಗಳಲ್ಲ. ತನ್ನದು ಅನಾಯಾಸದಿಂದ ಲಭ್ಯವಾಗುವ ಸ್ವರೂಪ ಅದು ಎಂತಿದ್ದುದು ಅಂತೆ ಇದೆ, ಚಿಂತೆ ಇಲ್ಲದ ಅನುಭಾವ.

ಎಂತಿದ್ದುದು ಅದೆ ಅಂತೆ ಇದೆ. ಎಂತಿದ್ದುದು, ಆವಾವ ರೀತಿಯಲ್ಲಿಯು ಹಾಗೆ ಅದೆ ಹಾಗೆ ಇದ್ದುದು ಅದಾವುದು? ಚಿಂತೆ ಇಲ್ಲದನುಭಾವ. ತಿಳಿದ ಕಾಲದಲ್ಲಿ ಚಿಂತೆ ಇಲ್ಲದಂತೆ ಅದೆ ಎನ್ನುವ ಹಾಗಿಲ್ಲ. ಬುದ್ಧಿ ಮರವುಳ್ಳದ್ದಾಗಿರಲಿ, ಮರವಿನ ಕಾರ್ಯವಾದ ದೇಹ. ಬುದ್ಧಿಯುಳ್ಳದ್ದಾಗಿರಲಿ, ಬುದ್ಧಿ ಅರುವುಳ್ಳದ್ದಾಗಿರಲಿ, ಅರುವಿನ ಕಾರ್ಯವಾದ ಚಿದಹಮ್ಮುಳ್ಳದ್ದಾಗಿರಲಿ ಅಚಿಂತ್ಯವಾಗಿಹ ಘನವು ಆವಾವ ರೀತಿಯಲ್ಲಿಯು ತಾನು ಇದ್ದಂತೆ ಹಾಗೆ ಇದೆ. ಮನವು ಕ್ಷರದ ನೆನಹುಳ್ಳದ್ದಾಗಿರಲಿ, ಅದು ಅಕ್ಷರ ನೆನಹುವುಳ್ಳದ್ದಾಗಿರಲಿ, ಚಿಂತೆ ಇಲ್ಲದನುಭಾವ ಎಂತಿದ್ದುದು ಅದೆ. ಬೋಧ ಸೃಷ್ಟಿಯಾಗದ

ಮುನ್ನವು ಹಾಗೆ ಇದೆ. ಬೋಧ ಸೃಷ್ಟಿಯಾದ ಕಾಲದಲ್ಲೂ ಹಾಗೆ ಇದೆ. ಅಬೋಧ ಸೃಷ್ಟಿಯಾದ ಕಾಲದಲ್ಲಿಯೂ ಹಾಗೆ ಇದೆ.ಇವೆರಡೂ ಬಿಟ್ಟಾಗಲೂ ಹಾಗೆ ಇದೆ. ಅಂದು ಇಂದು ಎಂದೆಂದೂ ತಾನು ಇದ್ದಂತೆ ಇದ್ದಾನೆ ಚಿಂತೆಯಿಲ್ಲದ ಅನುಭಾವ ಗುಹೇಶ್ವರಾ.

ಈ ಚಿಂತೆ ಇಲ್ಲದ ಅನುಭಾವವದು ತನ್ನ ಅನುಭವ. ಇದು ಸ್ವಯಮೇವ ಅನುಭಾವ ಅಚಿಂತ್ಯಾತ್ಮ ತಾನಾಗಿಹ ಅನುಭಾವ. ಚಿಂತನ ಕೆಟ್ಟು ನಿಶ್ಚಿಂತನಾಗಿಹ ನಿಜ ನಿಲುವು. ಇದು ಗುಹೇಶ್ವರ ನಿಲುವುಳ್ಳ ಅನುಭವ. ಇದು ದೇಹವೆಂಬ ಗುಹೆಯೊಳಗೆ ಘನಕ್ಕೆ ಘನವಾಗಿ ಪ್ರಜ್ವಲಿಸುವ ತಾನೆ ತಾನಾಗಿಹ ಈಶ್ವರ ಇದು ಘನಲಿಂಗ. ಇದು ಚಿಂತನೆಗೆ ನಿಲುಕದೆ ಬೆಳಗುವದರಿಂದ ಘನಲಿಂಗವೆಂದು ಹೇಳಿದೆ ಇದಲ್ಲದೆ ಸಚಾರಚರವೆಂಬ ಗುಹೆಯೊಳಗೆ ಪ್ರಜ್ವಲಿಸುವದರಿಂದ ಘನಲಿಂಗ. ಅರಿವುಡೆ ತಾನೆ ತನ್ನದು ಚಿಂತೆಯಿಲ್ಲದ ಅನುಭಾವ ಅನಾಯಾಸದ ಅನುವ ಕಂಡ ಅನುಭಾವ, ನೆನವ ಮನವ ನತಿಗಳೆದ ಘನಕ್ಕೆ ಘನವಾದ ಅನುಭಾವ ತನ್ನದು ಎಂದು ಹೇಳಿಹರು.

143

ಅಪ್ಪಿ ಮುಟ್ಟಲಿಲ್ಲ ಮುಟ್ಟಿ ಮರಳಲಿಲ್ಲ
ಏನೆಂಬೆ ಲಿಂಗವೆ ಎಂತೆಂಬೆ ಲಿಂಗವೆ
ನಿಜವನರಿದ ಬಳಿಕ ಮರಳಿ ಹುಟ್ಟಲಿಲ್ಲ
ಕಾಣಾ ಗುಹೇಶ್ವರಾ. ||685||

ತಾತ್ಪರ್ಯ: ಅಪ್ಪಿ ಮುಟ್ಟಲಿಲ್ಲ : ಎನನ್ನು ? ಅಪ್ಪಿ ಮುಟ್ಟಲಿಲ್ಲ ? ತಾನಾಗದ ಅಂಗವ ಅಪ್ಪಿ ಮುಟ್ಟಲಿಲ್ಲ . ಜಡವ ಅಪ್ಪಿ ಮುಟ್ಟಲಿಲ್ಲ . ತೋರಿ ಇಲ್ಲವಾಗುವ ಮಾಯಿಕವ ಅಪ್ಪಿ ಮುಟ್ಟಲಿಲ್ಲ ಅವಿದ್ಯೆಯ ಅಪ್ಪಿ ಮುಟ್ಟಲಿಲ್ಲ . ಮಲತ್ರಯಂಗಳ ಅಪ್ಪಿ ಮುಟ್ಟಲಿಲ್ಲ.

''ದೇಹವ ಮುಟ್ಟಿದವರು, ನಿರ್ದೇಹವ ಮುಟ್ಟರು ನೋಡಾ. ನಿರ್ದೇಹವ ಮುಟ್ಟಿದವರು ದೇಹವ ಮುಟ್ಟರು. ದೇಹವೆಂಬುದು ಕ್ಷಣಿಕ ಸುಖ ಕಂಡಾ, ನಿರ್ದೇಹವೆಂಬುದು ನಿಜಾನಂದ ಸುಖ ಕಂಡಾ ಕಪಿಲಸಿದ್ಧ ಮಲ್ಲಿಕಾರ್ಜುನ'' .

ಬಹುಜನ ದೇಹವೆ ತಾವೆಂದು ಅಪ್ಪಿದವರಿರುವರು. ದೇಹವೆಂದರೆ ಅಹಂಕಾರ. ಈ ಅಹಂಕಾರ ತಿಳಿದು ಅಪ್ಪಿದವರಿದ್ದಾರೆ. ತಿಳಿಯದೆ ಅಪ್ಪಿದವರು ಇದ್ದಾರೆ. ತಿಳಿಯದೆ ಅಪ್ಪಿದವರು ಒಮ್ಮೆ ಅಹಂಭಾವಿಗಳು , ಮತ್ತೊಮ್ಮೆ ನಿರಹಂಭಾವಿಗಳು ಆಗುವರು. ಕರ್ಮಿಗಳು ಉಪಾಸಕರು ಒಮ್ಮೆ ಅಹಂಭಾವಿಗಳು , ಒಮ್ಮೆ ನಿರಹಂಭಾವಿಗಳು . ಜ್ಞಾನ ಕಾಂಡಿಗಳು ಚಿದಹಮ್ಮನೆ ಸದಾ ಅಪ್ಪಿಕೊಂಡವರು. ಆರು ಅಹಂಕಾರವ ಅಪ್ಪಿಕೊಂಡಿಹರು, ಅವರು ನಿರ್ದೇಹವ ಮುಟ್ಟಲಿಲ್ಲಾ . ಅವರು ತಮ್ಮ ತಾವು ಮುಟ್ಟಲಿಲ್ಲ. ತನಗಿಂತನ್ಯವಾದ ಮಾಯಿಕವನ್ನೆ ಅಪ್ಪಿಕೊಂಡಿಹರು.

ನರರು, ಸುರರು ಪಿಂಡವೆಂಬ ಭಾಂಡವನ್ನು ಅಪ್ಪಿಕೊಂಡರೆ, ದೇವಗಣ , ರುದ್ರಗಣ , ಪ್ರಮಥ ಗಣವು, ಬ್ರಹ್ಮಾಂಡವ ಅಪ್ಪಿಕೊಂಡಿಹರು. ಸತ್ಯರು ನಿತ್ಯರು ಮುಕ್ತರು ಎಂಬ ಮಹಾ ಮಹಿಮರು ಚಿದ್ ಬ್ರಹ್ಮಾಂಡವ ಅಪ್ಪಿಕೊಂಡರು, ಇವರೆಲ್ಲರು ತಮ್ಮ ತಾವು ಮುಟ್ಟದವರು .

ಕೆಲಬರು ಮಲಿನ ಸತ್ವಗುಣ , ಅದರ ಕಾರ್ಯವಾಗಿಹ ಅನಾತ್ಮ ಭಾವವ ಒಪ್ಪಿಕೊಂಡರು, ಇನ್ನೂ ಕೆಲಬರು ಶುದ್ಧ ಸತ್ವಗುಣ ಅದರ ಕರ್ಯವಾಗಿಹ ಆತ್ಮನ ಲಕ್ಷಣರೂಪಿ ಸರ್ವಜ್ಞತ್ವಕ್ಕೆ ಒಪ್ಪಿ ಮಾಯಿಕದ ತೋರಿಕೆಯೆ ಘನವಾಗಿ ಅದನ್ನೆ ಅಪ್ಪಿಕೊಂಡರು . ಇನ್ನೂ ಕೆಲಬರು ಚಿದ್ ಬ್ರಹ್ಮಾಂಡದ

ವಾದ ವೇದಾಂತ ತತ್ವಕ್ಕೆ ಒಪ್ಪಿ ಚಿದಹಮ್ಮುವುಳ್ಳವರಾದರು. ಹೀಗಾಗಿ ಭಿನ್ನ ಭಿನ್ನ ತೋರಿಕೆಯಿಂದುಕ್ತವಾದ ಮಾಯಿಕಕ್ಕೆ ಒಪ್ಪಿದರಲ್ಲದೆ ವೇದ ವೇದಾಂತಗಳಿಗಸಾಧ್ಯವಾಗಿಹ, ಅನುಪಮ ಲಿಂಗದಿರುವಾದ ತನ್ನನ್ನು ಮುಟ್ಟಲಿಲ್ಲ. ಕೆಲಬರು ಪ್ರಣವಾರೂಢರಾದರು . ಕೆಲಬರು ಯೋಗಾರೂಢರಾದರು, ಕೆಲಬರು ಹಠಯೋಗವ ಸಾಧಿಸಹೋದರು. ಇವರುಗಳಲ್ಲಿ ಸದ್ಗುರು ಹೃದಯದಿಂದ ತಿಳಿದು ಸಾಧನ ಮಾಡಿದವರು ವಿರಳ. ಏಕೆಂದರೆ ಇವರು ಸಟೆ ಆವುದೊ ದಿಟ ಆವುದೋ ಎಂದು ತಿಳಿಯದೆ ಪ್ರಣವಾರೂಢರಾದವರು ಉಂಟು. ಯೋಗಾರೂಢರಾದವರು ಉಂಟು. ಇವರು ಅನಿತ್ಯಪದ ಸಾಧಿ ಸಿದರಲ್ಲದೆ ತಾವಾರೆಂಬ ತಮ್ಮ ನಿತ್ಯ ಪದವರಿಯಲಿಲ್ಲವಾದ್ದರಿಂದ ಇವರೆಲ್ಲರು ತನ್ನ ಮುಟ್ಟಲಿಲ್ಲ. ಮುಟ್ಟದ್ದರಿಂದ ಶಬ್ದ ಸಂಭ್ರಮದವರು. ಶಬ್ದವನ್ನೇ ಕುರುಹನ್ನೇ ಅಪ್ಪಿದವರು, ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗರೂಪಿ ತನ್ನ ಮುಟ್ಟಲಿಲ್ಲ . ಗುರುಗಳ ಮುಟ್ಟಿದವರು, ಅಪ್ಪಿದವರು ಉಂಟು . ಗುರುಗಳ ಉಪದೇಶವ ಮುಟ್ಟಿದವರು ಉಂಟು, ಲಿಂಗವ ಕುರುಹಾಗಿ ಅಪ್ಪಿಕೊಂಡವರು ಉಂಟು, ಪೂಜಿಸುವವರು ಉಂಟು , ಪೂಜೆಯೆ ಘನವಾಗಿ ಅಪ್ಪಿಕೊಂಡವರು ಉಂಟು. ಇವರುಗಳೆಲ್ಲರೂ ರೂಪವನ್ನೆ ಒಪ್ಪಿಕೊಂಡವರು, ನಿರೂಪ ಒಪ್ಪಿಕೊಳ್ಳದವರು, ತನುವನ್ನೆ ಅಪ್ಪಿಕೊಂಡರಲ್ಲದೆ ಸ್ವರೂಪವನ್ನು ಅಪ್ಪಿಕೊಳ್ಳದವರು. ಆಚಾರವನ್ನೇ ಅಪ್ಪಿಕೊಂಡವರಲ್ಲದೆ, ವಿಚಾರವ ಒಪ್ಪಿಕೊಳ್ಳದವರು. ಇವರು ತಾನಾರೆಂಬ ವಿಚಾರ ಅಪ್ಪದವರು.

ಲಿಂಗ ಲಿಂಗವೆಂದು ಅಪ್ಪಿಕೊಂಡರಲ್ಲದೆ ಶ್ರೀಗುರು ಕಾರುಣ್ಯದಿಂದ ಲಿಂಗವರಿತು ಲಿಂಗವಾಗಿ ತನ್ನ ಮುಟ್ಟಲಿಲ್ಲ. ಲಿಂಗ ಲಿಂಗವೆಂದವರು ತನ್ನ ಮುಟ್ಟಲಿಲ್ಲ ಲಿಂಗವೆನ್ನದವರು ತನ್ನ ಮುಟ್ಟಿದರು ಅಹಂಕಾರಿಗಳು ಅಂಗವ ಮುಟ್ಟಿದರು . ಅಹಮಿಲ್ಲದವರು ಲಿಂಗರೂಪಿ ತನ್ನ ಮುಟ್ಟಿದರು.

ಕಲ್ಪಿತರು ಭ್ರಮವ ಮುಟ್ಟಿದರು, ಅಕಲ್ಪಿತರು ಪರಬ್ರಹ್ಮವಾಗಿಹ ತನ್ನ ಮುಟ್ಟಿದರು . ಭಾವಿಕರು ಭ್ರಾಂತಿಯ ಮುಟ್ಟಿ ತನ್ನ ಮುಟ್ಟದಾದರು. ನಿಭ್ರಾಂತರು ಭಾವಕ್ಕಗಮ್ಯವಾಗಿಹ ಅಚಿಂತ್ಯತ್ವ ತಮ್ಮರಿವೆಂದರಿದು ತನ್ನ ಮುಟ್ಟಿದರು . ನೆನಹು ನಿರ್ಣಯದಿಂದುಕ್ತರಾದ ಮಹಾಂತರು ಮತಿ ಗತಿಯ ಮುಟ್ಟಿದರಲ್ಲದೆ ತನ್ನ ಮುಟ್ಟಲಿಲ್ಲ, ನೆನೆಯದವರು ನಿರ್ಣಯಕ್ಕೊಳಪಡವರು ನಿರವಧಿಯಾಗಿಹ ತನ್ನ ಮುಟ್ಟಿದರು . ಮತಿವಂತರು, ಗತಿಗೊಳಪಟ್ಟವರು ಮತಿಗತಿ ವಿರಹಿತರು ತನ್ನ ಮುಟ್ಟಿದರು. ಸೀಮಿತರು ಮುಟ್ಟಲಿಲ್ಲ . ಸೀಮಿತರು ಆರು? ಅಖಂಡವ ಕಾಣದವರು, ಕಾಂಡತ್ರಯಗಳ ಕಂಡರಲ್ಲದೆ ಅಖಂಡ ರೂಪನಾದ ತನ್ನ ಕಾಣದವರು. ಇವರು ಅನಿತ್ಯ ನಿತ್ಯವ ಕಂಡವರು . ನಾಶ ಅವಿನಾಶ ಕಂಡವರು ಪ್ರಕಾಶಕ ಪ್ರಕಾಶಿತವೆಂಬ ವಿಭಾಗ ದೃಷ್ಠಿಯುಳ್ಳವರು , ಇವರು ಸೀಮಿತರು ಎಂದು ಹೇಳಿದೆ.

ನಿಸ್ಸೀಮರು ಆರು? ನಿತ್ಯಾನಿತ್ಯವೆಂಬೆರಡನ್ನು ಕಾಣದವರು. ಕಾಂಡ ತ್ರಯಗಳನ್ನೆ ಕಾಣದವರು. ಕರ್ಮಿಯನ್ನು ಕಾಣದವರು. ಈಶಾರ್ಪಣ ಮಾಡುವ ಭಕ್ತನನ್ನು ಕಾಣನು. ಸಕಲ ಕರ್ಮಗಳಿಗೆ ಸಾಕ್ಷಿ ನಾನೆನ್ನುವ ಜ್ಞಾನ ಕಾಂಡಿಯನ್ನು ಕಾಣದವನು. ಈ ಮೂರು ಕಾಂಡ ತ್ರಯವಿಲ್ಲದ ಅಖಂಡವ ಕಂಡವರು ನಿಸ್ಸೀಮರು ಎಂದು ಹೇಳಿದೆ.

ಆಚಾರವಂತರು ಮುಟ್ಟಲಿಲ್ಲ , ಅನಾಚಾರಿಗಳು ಮುಟ್ಟಿದರು . ಪಾದವುಳ್ಳ ಗುರುಗಳು ಮುಟ್ಟಲಿಲ್ಲ, ತಲೆಯುಳ್ಳ ಶಿಷ್ಯನು ಮುಟ್ಟಲಿಲ್ಲ, ಪಾದವಿಲ್ಲದ ಗುರು ಘನನು ಮುಟ್ಟಿದನು ತಲೆಯಿಲ್ಲದ ಶಿಷ್ಯನು ಮುಟ್ಟಿಹನು, ಚಿಂತಕರು ಮುಟ್ಟಲಿಲ್ಲ, ಚಿಂತನೆ ಇಲ್ಲದನುಭಾವದವರು ಮುಟ್ಟಿದರು.

ಮುಟ್ಟಿ ಮರಳಲಿಲ್ಲ ಏನೆಂಬೆ ಲಿಂಗವೆ ಎಂತೆಂಬೆ ಲಿಂಗವೆ:

ಮಟ್ಟಿದವರು ಇವರಾರು? ಅಪೂರ್ವಿಕರು . ಮುಟ್ಟಿ ಮರಳಲಿಲ್ಲ, ಮುಟ್ಟಿ ಮರಳಲಿಲ್ಲದವರು

ಇವರಾರು? ಅಪೂರ್ವಿಕರಾಗಿ ಪೂರ್ವಿಕರಾಗಲಿಲ್ಲ, ಪೂಜ್ಯರಾಗಿ ಪೂಜಕರಾಗಲಿಲ್ಲ, ನಿಷ್ಕ್ರಿಯೆ ಘನವಂತರಾಗಿ ಕ್ರಿಯೆವುಳ್ಳವರಾಗಲಿಲ್ಲ . ಪೂಜಕರು ಪೂಜ್ಯರಾಗರು, ಅಕ್ರಿಯೆವಂತ ಕ್ರಿಯೆವುಳ್ಳವನಾಗನು ಕಲ್ಪಿತರು ಅಕಲ್ಪಿತ ಘನರಾಗರು . ಅಕಲ್ಪಿತ ಘನವರಿತು ಘನಕ್ಕೆ ಘನವಾದವರು ಕಲ್ಪಿತ ಪುರುಷನಾಗನು, ಭೇದ ಜ್ಞಾನಿಗಳು ಬೇದಾ ಬೇದ ಜ್ಞಾನಕ್ಕೆ ನಿಲುಕದ ಅಚಿಂತ್ಯಪ್ರಮಾಣದಗಮ್ಯದಲ್ಲಿ ನಿಂದ ನಿಲುವುಳ್ಳವರಾಗರು, ಅಚಿಂತ್ಯತ್ವರಿತ ಚೆಂತನಕೆಟ್ಟು ನಿಶ್ಚಿಂತರಾದವರು ಪುನಃ ಚಿಂತನದಿಂದುಕ್ತರಾಗರು. ನಿಃಶಬ್ದ ವೇದಿಗಳು ಪುನಃ ಶಬ್ದ ಸಂಭ್ರಮದ ರತಿಯುಳ್ಳವರಾಗರು, ನಿಃಶಬ್ದ ಬ್ರಹ್ಮವ ಒಪ್ಪಿದವರು ಪುನಃ ಶಬ್ದ ಬ್ರಹ್ಮರಾಗರು.

ಏನೆಂಬೆ ಲಿಂಗವೆ! ಎಂತೆಂಬೆ ಲಿಂಗವೆ! ಲಿಂಗವರಿತು ಲಿಂಗವಾಗಿಹ ಘನವಂತ ಲಿಂಗ ಲಿಂಗವೆಂದು ಹೇಗೆನ್ನುವರು? ನಾಮ ನಿರ್ನಾಮವಾದವರು ಎಂತೆಂಬೆ ಲಿಂಗವೆ ನುಡಿಯಲು ಬಾರದ ಲಿಂಗ ನುಡಿಯುವದಾದರೂ ಹೇಗೆ? ಪೂರ್ಣಮದಃ ಪೂರ್ಣಮಿದಂ ಎಂದೆನ್ನುವದಾದರೂ ಹೇಗೆ? ಪೂರ್ಣಾತ್ ಪೂರ್ಣಮುದಚ್ಯತೆ ಎಂದೆನ್ನುವದಾದರೂ ಹೇಗೆ? ಪೂರ್ಣಸ್ಯ ಪೂರ್ಣಮಾದಾಯ ಎನ್ನುವದಾದರೂ ಹೇಗೆ? ಪೂರ್ಣ ಮೇವಾವ ಶಿಷ್ಯತೆ ಎನ್ನುವದಾದರೂ ಹೇಗೆ? ನುಡಿಗೆಡೆಗೊಡದ ಘನಕ್ಕೆ ನುಡಿಗೊಳಪಡಿಸುವುದದೆಂತು?

ಶರಣ ಭರಿತ ಲಿಂಗ ಎಲ್ಲಾ ಎಡೆಯಲ್ಲಿಯೂ ಉಂಟು. ಲಿಂಗ ಭರಿತ ಶರಣನಪೂರ್ವ ನೋಡಾ, ಗಮನವುಳ್ಳ ಜಂಗಮವೆಲ್ಲೆಡೆಯಲ್ಲಿಯೂ ಉಂಟು . ನಿರ್ಗಮನಿ ಜಂಗಮ ಅಪೂರ್ವ ನೋಡಾ . ಸುಚೈತನ್ಯಕ್ಕೆ ನಿಜಚೈತನ್ಯಕ್ಕೆ ಜಂಗಮ ಸಾಹಿತ್ಯ ನೋಡಾ. ಈ ಲಿಂಗ ಜಂಗಮದ ಸಕೀಲ ಸಂಬಂಧದಲ್ಲಿ ಪರಿಣಾಮಿ ಕೂಡಲಚೆನ್ನಸಂಗಾ ನಿಮ್ಮ ಶರಣ.

ಏನೆಂಬೆ ಲಿಂಗವೆ ಎಂತೆಂಬೆ ಲಿಂಗವೆ : ಲಿಂಗವಾಗಿಹ ಶರಣನಪೂರ್ವ ನಿರ್ಗಮನಿ ಜಂಗಮನು ಅಪೂರ್ವ ಲಿಂಗ ಸಕೀಲ ಸಂಯೋಗ ಮರ್ಮಸ್ಥಲವರಿತ ಪರಿಣಾಮಿಗಳು, ಸುಚೈತನ್ಯಕ್ಕೆ ನಿಜ ಚೈತನ್ಯವಾಗಿಹ ಜಂಗಮ ಸಾಹಿತ್ಯ ಅಪೂರ್ವಸಾಹಿತ್ಯ . ದೇಹಿಗೆ ದೇಹಿಯಾಗಿಹ ಜಂಗಮ ಸಾಹಿತ್ಯ . ಅರುವಿಂಗರುವಾಗಿಹ ಸಾಹಿತ್ಯ , ನಿಃಶಬ್ದ ಬ್ರಹ್ಮವೆ ತಾನಾಗಿಹ ನಿಜ ಚೈತನ್ಯ , ನಿಃಶಬ್ದ ಘನ ಅದು ನುಡಿದುದೆಂದು? ಮೂಕನು ಮಾತಾಡಿದುದೆಂದು , ಅಪೂರ್ವಶರಣ ನಿರ್ಗಮನಿ ಜಂಗಮ ಇವರು ಲಿಂಗಕ್ಕೆ ಲಿಂಗವಾಗಿಹ ಘನ ಮಹಿಮರಾಗಿ ಏನೆಂಬೆ ಲಿಂಗವೆ ? ಓ ಲಿಂಗವೆ ಏನನ್ನುವಿ, ಆವ ರೀತಿಯಲ್ಲಾದರೂ ಲಿಂಗ ಅನ್ನುವಿಯಾ ಸಚ್ಚಿದಾನಂದ ನೆನ್ನಿವಿಯಾ? ಓ ಲಿಂಗವೆ ನಿತ್ಯ ನೆನ್ನುವಿಯಾ, ಪೂರ್ಣ ನೆನ್ನುವಿಯಾ? ಅಖಂಡ ನೆನ್ನುವಿಯಾ, ಅನುಪಮ ನೆನ್ನುವಿಯಾ, ಅಚಲ ನೆನ್ನುವಿಯಾ, ಪೂರ್ಣಮದಃ ಪೂರ್ಣಮಿದಂ ಎಂದು ಹೀಗಾದರೂ ಅನ್ನುವಿಯಾ, ಪೂರ್ಣಾತ್, ಪೂರ್ಣ ಮುದುಚ್ಯತೆ ಎಂದಾದರೂ ಅನ್ನುವಿಯಾ ನುಡಿಗೆಡೆಗೊಡದ ಘನವಾಗಿಹ ಲಿಂಗ ಜಂಗಮ ಸಕೀಲ ರಹಸ್ಯ ಸಂಬಂಧವಾದಲ್ಲಿ ಪರಿಣಾಮಿ. ಅವರ ಮಾತೆಂಬುದು ಜ್ಯೋತಿರ್ಲಿಂಗ ನುಡಿದು ನಿಃಶಬ್ದವಾಗಿಹ ನುಡಿ ನಡೆದು ನಿರ್ಗಮನಿಯಾಗಿಹ ನಡೆಯಾದುದರಿಂದ ಏನೆಂಬೆ ಲಿಂಗವೆ? ಎಂತೆಂಬೆ ಲಿಂಗವೆ ಎಂದು ಲಿಂಗಯ್ಯನನ್ನೆ ಪ್ರಶ್ನಿಸಿಹರು.

ನಿಜವರಿದ ಬಳಿಕ ಮರಳಿ ಹುಟ್ಟಲಿಲ್ಲ ಗುಹೇಶ್ವರಾ. ಮಾನವರೆ ಆಗಲಿ ಆರೆ ಆಗಲಿ ಸಾಧಕರಾಗಲಿ ಸಿದ್ಧರಾಗಲಿ ನಿಜವ ತಿಳಿಯದತನಕ ಮರಳಿ ಮರಳಿ ಹುಟ್ಟುವುದು ಮರಣವಾಗುವುದು ತಪ್ಪಿದುದಲ್ಲ, ಆರು ನಿಜವರಿತಿಹರು ಅವರು ಮರಳಿ ಹುಟ್ಟದವರು. ನಿಜ ವರಿತವರು ನಿಜ ನಿಜವೆನಲಿಲ್ಲ, ಎನ್ನದವರು ನಿಜವರಿತವರು, ನಿಜವೆಂಬುದು ಎಂಜಲ ಮಾತ ನುಡಿವ ರಂಜಕರ ನುಡಿಯಲ್ಲ ಮಿಗೆ

ಮಿಗೆ ಮೀಸಲ ತತ್ವವರಿತವರ ರಹಸ್ಯವು. ನಿಜವೆಂಬುದು ನುಡಿಗೆಡೆಗೊಡದ ಘನ ನುಡಿದು ಹೇಳಿದಡದಕ್ಕದೆ ಕಿರಿದು ನೋಡಾ, ನಿಜವು ಅದನೊಂದು ಮಾತಿಂಗೆ ತಂದು ನುಡಿಯುವ ನುಡಿ ಅಲ್ಲಾ. ನಿಃಶಬ್ದ ಘನದಿರುವು ಅದು ಶಬ್ದಕ್ಕೊಳಪಡದು ವೇದ ವೇದಾಂತವು ನಿಜವಾದವರಿಗೆ ನಿಜದ ರಹಸ್ಯವರಿಯದವರು. ಆರು ವೇದ ವೇದಾಂತಗಳಿಗಸಾಧ್ಯವಾಗಿಹ ಅನುಪಮದಿರುವೆ ತನ್ನ ಸ್ವರೂಪವೆಂದರಿತವನು ಮರಳಿ ಹುಟ್ಟನು, ಇವರಿಗೆ ಉಪದೇಶ ನಷ್ಟವಾಗಿದೆ , ತನು ನಷ್ಟ, ಮನ ನಷ್ಟ, ನೆನಹು ನಷ್ಟ, ಭಾವ 'ನಷ್ಟ, ಜ್ಞಾನ ನಷ್ಟ ಇಂತೀ ಪಂಚ ನಷ್ಟದೊಳಗೆ ನಾ ನೀನೆಂಬುದು ನಷ್ಟವಾಗಿರುವುದರಿಂದ ನಿಜವರಿತವರು ಅವರು ಮರಳಿ ಹುಟ್ಟರು ಕಾಣಾ ಗುಹೇಶ್ವರಾ ಎಂದು ಹೇಳಿಹರು.

144

ಸತ್ಯವನೊಳಕೊಂಡ ಮಿಥ್ಯಕ್ಕೆ ಭಂಗ , ಮಿಥ್ಯವನೊಳಕೊಂಡ ಸತ್ಯಕ್ಕೆ ಭಂಗ
ಸತ್ಯ ಮಿಥ್ಯವ ನೊಳಕೊಂಡ ಮನಕ್ಕೆ ಭಂಗ ಮನವ ನೊಳಕೊಂಡ ಜ್ಞಾನಕ್ಕೆ ಭಂಗ
ಜ್ಞಾನವ ನೊಳಕೊಂಡ ನಿಜಕ್ಕೆ ಭಂಗವುಂಟೆ ? ಗುಹೇಶ್ವರಾ. ॥ 686 ॥

ತಾತ್ಪರ್ಯ: ಸತ್ಯವನೊಳಕೊಂಡ ಮಿಥ್ಯಕ್ಕೆ ಭಂಗ, ಮಿಥ್ಯವ ನೊಳಕೊಂಡ ಸತ್ಯಕ್ಕೆ ಭಂಗ : ಸತ್ಯವ ಒಪ್ಪಿಕೊಂಡಲ್ಲಿ ಮಿಥ್ಯದ ಅಳಿವು, ಮಿಥ್ಯಕ್ಕೆ ಒಪ್ಪಿಕೊಂಡಲ್ಲಿ ಸತ್ಯದ ಅಳಿವು ಸತ್ಯ ಮಿಥ್ಯೆವ ಒಪ್ಪಿಕೊಂಡಲ್ಲಿ ಮನದ ಅಳಿವು.

ಸತ್ಯವ ಒಪ್ಪಿಕೊಂಡವರಾರು? ಮಿಥ್ಯೆವ ಒಪ್ಪಿಕೊಂಡವರಾರು? ಸತ್ಯ ಮಿಥ್ಯೆ ಒಪ್ಪಿಕೊಂಡವರಾರು? ಇವರು ಕುರುಹಿಂಗೂ ಶಬ್ದಕ್ಕೂ ಒಪ್ಪಿಕೊಂಡಿರುವರಲ್ಲದೆ ಘನವರಿತವರಲ್ಲ. ಘನವರಿತವರೆಂದರೆ ಸತ್ಯವರಿತವರು, ಮಿಥ್ಯೆವ ಕಾಣದವರು . ಸತ್ಯ ಮಿಥ್ಯೆವೆಂಬ ನುಡಿಗಳ ಕಾಣದವರು ಮನವೆ ನಷ್ಟವಾದವರು .

ಕುರುಹಿಂಗೂ ಶಬ್ದಕ್ಕೂ ಸತ್ಯವೆಂದುದು ಲೋಕ. ಮಿಥ್ಯೆವನೊಳಕೊಂಡೆ ಸತ್ಯವಾದುದರಿಂದ ಅದು ನಾಶವುಳ್ಳ ಸತ್ಯ . ಸತ್ಯವರಿತ ಸತ್ಯವಲ್ಲ. ಇದು ಕಾರಣ ಸತ್ಯವನೊಳಕೊಂಡ ಮಿಥ್ಯೆವಾದುದರಿಂದ ಮಿಥ್ಯೆವು ಅದು ಸತ್ಯವಾಗದು ಸತ್ಯವನೊಳಕಂಡಲ್ಲಿ ಮಿಥ್ಯ ಹೇಗೆ? ನಸುಗತ್ತಲೆಯಲ್ಲಿ ಹಾವು ಕಂಡು ಹಾವು ಹಾವು ಎಂದು ಭಯ ಭೀತಿಯಿಂದುಕ್ತನಾಗುವನು . ಅದು ಏನೆಂದು ಬೆಳಕಿನ ಸಹಾಯ ತೆಗೆದುಕೊಳ್ಳಲು ಅದು ಹಾವಲ್ಲ ಹಗ್ಗವು . ಇಲ್ಲಿ ಹಾವು ಕಂಡುದೆಲ್ಲಿ ಹಗ್ಗವು , ಹಗ್ಗದಲ್ಲಿ ಎಂದೆಂದೂ ಹಾವು ಇಲ್ಲ. ಇಲ್ಲಿ ಹಗ್ಗ ಸತ್ಯವಾಗಿದೆ ಹಾವು ಮಿಥ್ಯೆವಾಗಿದೆ ಎಂದು ಬೆಳಕಿನಿಂದ ನೋಡಲು ತೋರಿದ ಹಾವೆ ಇಲ್ಲವಾಗಿ ಹಗ್ಗವು ಕಾಣಿಸಿತು . ಇದು ಪೂರ್ವದಲ್ಲಿ ಒಪ್ಪಿಕೊಂಡ ಹಾವು , ಈಗ ಹಗ್ಗವಾದುದರಿಂದ ಹಗ್ಗವೆಂದು ಒಪ್ಪಿದುದು. ಇದು ಮಿಥ್ಯೆವನೊಳಕೊಂಡ ಸತ್ಯಕ್ಕೆ ಭಂಗವೆಂದು ಹೇಳಿದ್ದಾರೆ.

ಇಲ್ಲದ ಹಾವು ತೋರಿದುದೆ ಮಿಥ್ಯೆ , ಮಿಥ್ಯೆದಲ್ಲಿಯೆ ಹಗ್ಗ ಕಂಡುದು ಸತ್ಯ . ಹಗ್ಗ ಮೊದಲು ಇತ್ತು ಅಂದರೆ ನೋಡುವದಕ್ಕಿಂತ ಮುನ್ನವು ಇತ್ತು . ನೋಡಿದಾಗಲೂ ಇದೆ . ಹಗ್ಗವೆಂದಾಗಲೂ ಇದ್ದಂತೆ ಇದೆ ಇದುಕಾರಣ ಸತ್ಯ .

ಇಲ್ಲದುದು ಇದ್ದಂತಾಗಿ ತೋರಿದುದೆ ಮಿಥ್ಯೆ . ಇಲ್ಲದ ತೋರಿಕೆಯಲ್ಲಿ ಇದ್ದ ಹಗ್ಗವ ಕಾಣುವದು, ಇಲ್ಲದುದು ಮಿಥ್ಯಾತೋರಿಕೆ, ತೋರಿದರೂ ಸತ್ಯದರ್ಶನದಿಂದ ಅದು ಇಲ್ಲದುದು

ಮಿಥ್ಯಾತೋರಿಕೆ, ಸತ್ಯವಸ್ತುವಿಗೆ ಆಧಾರವಾಗದು ಸತ್ಯದ ಸತ್ತೆಯೆ ಮಿಥ್ಯೆದ ತೋರಿಕೆಗೆ ಆಧಾರವಾದಂತಾಗಿ ಭಾಸಿಸಿದರೂ ಹುಸಿಯೆ ಇರುವಲ್ಲಿ ಅದರ ತೋರಿಕೆಯು ಹುಸಿಯು ಸತ್ಯವಲ್ಲ. ಈ ಮಿಥ್ಯಾ ತೋರಿಕೆಯಲ್ಲಿ ಹುದುಗಿರುವ ಹಗ್ಗವೆಂದೂ ಸತ್ಯವಲ್ಲ, ಇವೆರಡು ತೋರಿಕೆಯಿಂದುಕ್ತವಾದುದರಿಂದ ಮಿಥ್ಯೆವನೊಳಕೊಂಡ ಸತ್ಯಕ್ಕೆ ಭಂಗವೆಂದು ಹೇಳಿದ್ದಾರೆ.

ಸತ್ಯವನೊಳಕೊಂಡ ಮಿಥ್ಯಕ್ಕೆ ಭಂಗ : ಸತ್ಯವೆಂದರೆ ಗಗನ, ಈ ಗಗನಕ್ಕೆ ಒಪ್ಪಿಕೊಂಡಲ್ಲಿ ಗಗನ ಕುಸುಮವೆಂಬ ಮಿಥ್ಯೆಕ್ಕೆ ಭಂಗ, ಗಗನಕ್ಕೆ ಒಪ್ಪಿಕೊಂಡವ ಗಗನ ಕುಸುಮಕ್ಕೆ ಒಪ್ಪನು. ಇದು ಸತ್ಯವನೊಳಕೊಂಡ ಮಿಥ್ಯೆಕ್ಕೆ ಭಂಗವೆಂದಿಹರು, ಗಗನ ಕುಸುಮವಿರಲು ಗಗನವು ಒಂದು ಮರವಲ್ಲ, ಬಳ್ಳಿಯಲ್ಲ ಆವುದು ಮರ ಬಳ್ಳಿಯಿಂದುಕ್ತವಾಗಿದೆ. ಅದು ಪುಷ್ಪ ಬಿಡವುದು ಸಹಜವಾಗಿದೆ.

ಗಗನವು ವ್ಯಾಪಕ ,ವ್ಯಾಪಕವಾದುದು ಅದು ಗಿಡವಾಗದು ಬಳ್ಳಿ ಆಗದು ಎಂದು ತಿಳಿದವನು ಗಗನ ಕುಸುಮವೆಂಬುದಕ್ಕೆ ಒಪ್ಪನು . ಈ ದೃಷ್ಟಾಂತವು ಸತ್ಯವನೊಳಕೊಂಡ ಮಿಥ್ಯೆಕ್ಕೆ ಭಂಗವೆಂದು ಹೇಳಿಹರು .

ಸತ್ಯವೆಂಬುದು ಮಾಯಿಕವು, ಇದು ಬಹು ವಿಧವಾಗಿ ಸತ್ಯದಂತೆ ಭಾಸವಾಗಿ ಸತ್ಯವ ತಿಳಿದಂತೆ ಮಾಡಿದೆ . ವ್ಯವಹಾರಿಕ ಸತ್ಯ , ಪ್ರತಿಭಾಸಿಕ ಸತ್ಯ , ಪರಮಾರ್ಥ ಸತ್ಯ , ತುಚ್ಛಸತ್ಯ ಹೀಗೆ ನಾಲ್ಕು ವಿಭಾಗ ಮಾಡಿಹರು .

ವ್ಯವಹಾರಿಕ ಸತ್ಯವು : ವ್ಯವಹಾರ ದೃಷ್ಠಿಯಲ್ಲಿ ಇದು ಸತ್ಯದಂತೆ ಭಾಸವಾಗುವುದು . ಲೋಕವು ವ್ಯವಹಾರಿಕ ಕ್ಕೆ ಮಹತ್ವ ಕೊಟ್ಟು ನಿಜವಾದ ಸತ್ಯವಾವುದೆಂಬುದು ತಿಳಿಯದಂತಾಗಿದೆ. ನಡೆದಂತೆ ನುಡಿ ಎಂದು ಸತ್ಯಹರಿಶ್ಚಂದ್ರನೆಂಬ ಸತ್ಯವಂತನನ್ನೆ ನಷ್ಟ ಮಾಡಿದಾಗ, ಮಿಥ್ಯೆನುಡಿಯನ್ನೆ ನುಡಿಯುವ ಲೌಕಿಕರು. ಇವರು ನಷ್ಟವಾಗುವದು ಅಷ್ಟು ಘನವಾದುದಲ್ಲ. ವ್ಯವಹಾರ ತೋರಿ ಇಲ್ಲವಾಗುವ ವ್ಯವಹಾರ ಪ್ರಪಂಚವು ಇದಕ್ಕೆ ನಷ್ಟವಾಗುವದು. ಇದರ ವ್ಯವಹಾರವು ನಷ್ಟ ನುಡಿಯು ನಷ್ಟವಾಗುವುದು. ಕಂಡು ಕಂಡು ಇದರಲ್ಲಿ ಅಮರತ್ವ ನೋಡುವುದು ದಡ್ಡರ ದಡ್ಡತನವಾಗಿದೆ. ಇದು ಕಾರಣ ಮಿಥ್ಯೆವನೊಳಕೊಂಡ ಸತ್ಯಕ್ಕೆ ಭಂಗವೆಂದು ಹೇಳಿಹರು.

ಸತ್ಯವನೊಳಕೊಂಡು ಮಿಥ್ಯೆಕ್ಕೆ ಭಂಗವೆಂದು ಹೇಳಿದುದು ಆಶ್ಚರ್ಯ. ಸತ್ಯವಿದ್ದಲ್ಲಿ ಸುಳ್ಳು ಇರಬಹುದೆ? ಸತ್ಯವರಿತಲ್ಲಿ ಸತ್ಯವೆಂಬ ನುಡಿಗಿಂಬಿಲ್ಲದಿರುವಾಗ ಸತ್ಯವ ತಿಳಿಯದೆ ಸತ್ಯವನೊಳಕೊಂಡ ಮಿಥ್ಯೆಕ್ಕೆ ಭಂಗವೆಂದಿದ್ದಾರೆ.

ಗಗನದಲ್ಲಿ ಗಗನಕುಸುಮ ವಿರಬಹುದೆ? ಹಾಗೆ ಚಿದಾಕಾಶದಲ್ಲಿ ನಾಮರೂಪ ಎಂಬ ಹುಸಿ ಇದ್ದುದಾಗಲಿ ಹುಟ್ಟಿದುದಾಗಲಿ ಅದು ನಿಜವೆ? ಅಸ್ತಿ ಭಾತಿ ಎಂಬ ಎನ್ನ ಸತ್ಯದಲ್ಲಿ ನಾಮರೂಪು ಹುಸಿ ಜನಸಿ ತೆಂದರಿಯೆನಯ್ಯ ತೋರದಡಗದ ಅಸ್ತಿ ಭಾತಿ ಎಂಬ ಸತ್ಯದಲ್ಲಿ ನಾಮರೂಪ ಕಾಣುವದೆಂದರೆ ಗಗನದಲ್ಲಿ ಗಗನಕುಸುಮ ಕಂಡ ಹಾಗೆ, ಲೋಕವು ಗಗನ ಸದೃಶವಾಗಿಹ ಚಿದಾಕಾಶವ ತಿಳಿಯದು. ತಿಳಿಯದ್ದರಿಂದ ಚಿದಾಕಾಶದಲ್ಲಿ ಚಿದಾಭಾಸನೆಂದು ಜೀವ ಜಡನೆಂದು, ಜೀವ ಜೀವನೆಂದು, ಈಶ್ವರ ಜಡನೆಂದು ಜೀವ ಈಶ್ವರನೆಂದು, ಜಡಾಜಡನೆಂದು ಹೀಗೆ ಕಲ್ಪಿಸುವವರೆಲ್ಲ ಸತ್ಯವನೊಳಕೊಂಡು ಮಿಥ್ಯೆಕ್ಕೆ ಭಂಗವೆಂದು ಹೇಳಿದ್ದಾರೆ. ಸತ್ಯದಲ್ಲಿ ಸಟೆ ಉಂಟೆ ? ನಿರುಪಾಧಿಯು ಉಪಾಧಿ ಯುಳ್ಳದ್ದಾಗದು. ನಿಸ್ಸಂಗವು ಸಂಗಿಯಾಗುವದದೆಂತು ? ಏಕಂ ಏಕವಾದ ವಸ್ತುವ ತಿಳಿಯದ್ದರಿಂದ ಎರಡಾಗಿ ಕಾಣುವನು .

ಅಕಲ್ಪಿತನು ತಿಳಿಯದ್ದರಿಂದ ಕಲ್ಪಿಸಲು ಕಾರಣವು. ಕಲ್ಪಿತವು ಕಾರಣವು ಅಹುದು ಕಲ್ಪನೆಯು

ಕಾರ್ಯವು ಅಹುದು. ಇದು ಕಾರಣ ಕಲ್ಪಿತವೆಂಬುದು ಸತ್ಯ. ಮಿಥ್ಯೆವಾಗಿ ತೋರುವದು. ಇದು ಯತಾರ್ಥವಲ್ಲ. ಮನದ ಕಾರ್ಯವೆ ಸತ್ಯವನ್ನು ಬಳಸಿಕೊಂಡಿದೆ. ಮಿಥ್ಯೆಯನ್ನು ಒಳಕೊಂಡಿದೆ. ಅದು ವಿವೇಕವುಳ್ಳದ್ದಾದಲ್ಲಿ ನಾಮರೂಪವ ಅಲ್ಲಗಳೆದು, ಸತ್ಯವ ಒಪ್ಪಿಕೊಂಡರೂ ಸತ್ಯವರಿತಿಲ್ಲ ಇದು ಕಾರಣ ಸತ್ಯ ಮಿಥ್ಯೆವನೊಳಕೊಂಡ ಮನಕ್ಕೆ ಭಂಗವೆಂದು ಹೇಳಿಹರು.

ಮನವು ಎಲ್ಲಿಯವರೆಗೆ ಸಂಕಲ್ಪ ವಿಕಲ್ಪವುಳ್ಳದ್ದಾಗಿರುವದು ಅದು ನಾಶವುಳ್ಳ ಮನವಾದ್ದರಿಂದ ಮನಕ್ಕೆ ಭಂಗವೆಂದು ಹೇಳಿದ್ದಾರೆ.

ಮನವವನೊಳಕೊಂಡ ಜ್ಞಾನಕ್ಕೆ ಭಂಗ. ಜ್ಞಾನವನೊಳಕೊಂಡ ನಿಜಕ್ಕೆ ಭಂಗವುಂಟೆ ಗುಹೇಶ್ವರಾ:

ಮನವವನೊಪ್ಪಿಕೊಂಡ ಜ್ಞಾನವು ಸರಿಯಾದ ಜ್ಞಾನವಾಗದು. ನಿಜವನ್ನು ಒಪ್ಪಿಕೊಂಡ ಜ್ಞಾನ ಅದು ಯತಾರ್ಥ ಜ್ಞಾನ. ಇದು ಅಮರಜ್ಞಾನ, ನಿರ್ಭಯಜ್ಞಾನ, ನಿಶ್ಚಿಂತ ನಿರಾಳವ ನೊಳಕೊಂಡುದರಿಂದ ಅನುಪಮ ಜ್ಞಾನ. ಈ ಮಹದರುವಿಂಗೆ ಒಪ್ಪಿದವರು, ಮನಸಿನ ಕಲ್ಪಿತ ಜ್ಞಾನಕ್ಕೆ ಒಪ್ಪುವದದೆಂತು? ಮನವು ವ್ಯವಹಾರಿಕ ಸತ್ಯವನ್ನು ಒಪ್ಪಿಕೊಂಡಿದೆ ಪ್ರಾತಿಭಾಸಿಕವಾಗಿಹ ಸತ್ಯರೂಪಿ ಕನಸನ್ನು ಒಪ್ಪಿಕೊಂಡಿದೆ. ಕನಸು ತೋರಿಕೆ, ವ್ಯವಹಾರಿಕವು ತೋರಿಕೆ. ಇವೆರಡು ಒಂದೆ. ನಾಮರೂಪಂಗಳು ಜಾಗ್ರತ ವ್ಯವಹಾರದಲ್ಲಾಗಲಿ ಸ್ವಪ್ನದಲ್ಲಾಗಲಿ ನಾಮರೂಪಂಗಳು, ಅವುಗಳ ವ್ಯವಹಾರ ಸತ್ಯವಾಗಿ ತೋರುವದರಿಂದ ಎರಡು ಒಂದೆ ಎಂದು ಹೇಳಿದೆ.

ಪರಮಾರ್ಥ ಸತ್ಯ, ಇದು ತ್ರಿಕಾಲ ಅಬಾಧಿತ ವಾಗಿರುವುದರಿಂದ ಸತ್ಯ ಬಹು. ಅಧ್ಯಾತ್ಮವಾದಿಗಳ ಸತ್ಯವ ತಿಳಿದವರು ಕಡಿಮೆ ಇದ್ದಂತೆ ಕಾಣಿಸುತ್ತದೆ. ಇವರು ಕೂಡಾ ಪರಮಾರ್ಥ ಸತ್ಯ ಅನ್ನುವುದು ತ್ರಿಕಾಲ ಭಾದಿತ ಅನ್ನುವರು ಇದ್ದಾರೆ. ಯತಾರ್ಥವಾಗಿ ಇದ್ದಕ್ಕಿದ್ದಂತೆ ತಿಳಿದವರು ಸಿಕ್ಕುವದು ವಿರಳ.

ಸತ್ಯವದು ತ್ರಿಕಾಲ ಅಭಾದಿತವಾಗಿರುವಲ್ಲಿ ಅಲ್ಲಿ ವ್ಯವಹಾರಿಕ ಸತ್ಯವೆ ಇರಲಿ ಪ್ರಾತಿಭಾಸಿಕ ಸತ್ಯವೆ ಇರಲಿ ತುಚ್ಚ ಸತ್ಯವೆ ಇರಲಿ, ಇದ್ದುದೊಂದೆ ಸತ್ಯ ತ್ರಿಕಾಲ ಅಬಾಧಿತವಾಗಿರುವಲ್ಲಿ ಇನ್ನುಳಿದ ವ್ಯವಹಾರಿಕ ಸತ್ಯ ಪ್ರಾತಿಭಾಷಿಕ ಸತ್ಯಕ್ಕೆ ಇರಲು ಇಂಬಾವುದು. ಆವಾವುದಕ್ಕೂ ಇಂಬು ಕೊಡದೆ ಅಖಂಡತೆ ಘನ ಪರಿಪೂರ್ಣವೆ ತನ್ನಿರುವು. ಅರುವೆಂದರಿದ ಮಹಾಂತಂಗೆ ವ್ಯವಹಾರಿಕ ಸತ್ಯವೂ ಇಲ್ಲ, ಪ್ರಾತಿಭಾಷಿಕ ಸತ್ಯವೂ ಇಲ್ಲ, ತುಚ್ಛ ಸತ್ತೆಯೂ ಇಲ್ಲ. ಪರಮಾರ್ಥ ಸತ್ತೆ ಎಂಬುದು ಇಲ್ಲ. ಈ ಇಲ್ಲ ಇಲ್ಲವೆಂಬುದು ಇಲ್ಲವಾಗಿರುವ ಜ್ಞಾನವನೊಳಕೊಂಡ ನಿಜಕ್ಕೆ ಭಂಗವುಂಟೆ ಗುಹೇಶ್ವರಾ ಎಂದು ಹೇಳಿಹರು.

145

ತನುವಿಲ್ಲದೆ ಕಂಡು ಕಂಡು ನಿಂದೆ
ಬೆರಗಿಲ್ಲದೆ ಕಂಡು ಕಂಡು ಬೆರಗಾದೆ
ರೂಹಿಲ್ಲದೆ ಕಂಡರಿದೆ ಗುಹೇಶ್ವರನೆಂಬ ಲಿಂಗವ. ॥ 687 ॥

ತಾತ್ಪರ್ಯ : ತನುವಿಲ್ಲದೆ ಕಂಡು ಕಂಡು ನಿಂದೆ : ತನುವಿಲ್ಲದೆ ಕಂಡುದು ಏನನ್ನು? ಏನಾಗಿ ಕಂಡು ಕಂಡು ನಿಂದೆ, ತನುವಿಲ್ಲದೆ ಶ್ರಿಗುರು ಕರುಣಿಸಿದ ಕಾರುಣ್ಯ ರೂಪಿ ಲಿಂಗವ ಕಂಡುದು ಅನುಪಮ ಲಿಂಗವ ಕಂಡುದು ಅಖಂಡಿತ ಲಿಂಗವ ಕಂಡುದು, ಅಚಲಿತ ಲಿಂಗವ ಕಂಡುದು, ಲಿಂಗಕ್ಕೆ ಲಿಂಗವಾಗಿ ತನ್ನನ್ನು ಕಂಡು ಕಂಡು ನಿಂದೆ. ತಾನೆ ತಾನಾಗಿ ನಿಂದೆ ಅಹಮಿಲ್ಲದ ಚಿದ್ಘನನಾಗಿ ನಿಂದೆ, ನಿರಂಜನ ನಿಜ ಚಿದ್ರೂಪ ತಾನು ತಾನಾಗಿ ನಿಂದೆ. ಪ್ರಭು ನಿಂದ ನಿಲುವು ಉಪಮಿಸಬಾರದು ನೋಡಾ. ತನುವಿದ್ದವರ ಕಂಡು ಅವರಿಗಿಂತ ನಿಲುವು ಉಪಮಿಸಬಹುದು. ತನುವಿಲ್ಲದ ಶ್ರೀ ಗುರು ಕರುಣಿಸಿದ ಅನುಪಮ

ಲಿಂಗವ ಕಂಡುದು, ಲಿಂಗವರಿದು ಲಿಂಗವಾಗಿಹ ಘನಮಹಿಮರನೆಂತು ಉಪಮಿಸುವುದು.

ಸಾಧಕರಾಗಲಿ, ಸಿದ್ಧರಾಗಲಿ ಅನುಭವಿಗಳಾಗಲಿ ತನುವಿನಿಂದುಕ್ತರಾಗಿ ತನ್ನ ಕಂಡವರು ಬಹು ಜನ ಸಿಕ್ಕುತ್ತಾರೆ. ತನುವಿನಲ್ಲಿ ತನ್ನ ಕಂಡವರು ತನ್ನ ಅಂದರೆ ನಿರಂಜನ ನಿಜ ಚಿದ್ರೂಪವಾಗಿ ಕಂಡು ಕಂಡು ನಿಂದವರು ಶಿಕ್ಕುವದು ವಿರಳ. ತನುವಿಲ್ಲದೆ ತನ್ನ ಕಂಡವರು ಸಿಕ್ಕಬಹುದು ಕಂಡು ಕಂಡು ನಿಂದವರು ಸಿಕ್ಕುವದು ಇದು ಪ್ರಭುದೇವರಿಗೆ ಸಾಧ್ಯವಾದುದು.

ತನುವಿಲ್ಲದೆ ಕಂಡು ಕಂಡು ನಿಂದ ಪರಿ ಆವುದು? ಅಹಂ ಇದಂ ಎಂಬ ತನುವಿಲ್ಲದೆ ಕಂಡು ಕಂಡು ನಿಂದ ಘನವಂತ, ಈ ಅಹಂಕಾರ ಎಲ್ಲಿ ಅದೆ ಅಲ್ಲಿ ಇದ ಮಾ ಕಾರವು ಇದೆ. ಈ ಭಿನ್ನದೃಷ್ಠಿಯಿಲ್ಲದೆ ಕಂಡು ಕಂಡು ನಿಂದ ನಿಜವು ಅದನೆಂತು ವರ್ಣಿಸುವದು, ನಾಹಂ ಎಂಬುದು ತನುವು ಕೋಹಂ ಎಂಬುದು ತನುವು, ಪರಬ್ರಹ್ಮ ಸೋಹಂ ಎಂಬುದು ತನುವು, ಚಿದಹಮ್ಮು ಎಂಬುದು ತನುವು. ಈ ತನುವಿಲ್ಲದ ಅಹಂ ಇಲ್ಲದ ತನ್ನ ಕಂಡು ಕಂಡು, ನಿಂದ ನಿಲುವು, ಅದನೆಂತು ಉಪಮಿಸುವದು.

ಬಯಲು,ಬಯಲು ಅದು ಘಟವ, ಮಠವ, ಮೇಘವ ಕಾಣದೆ ನಿಂದ ನಿಲುವು . ಅದನಾರಯ್ಯ ಹೀಗೆ ಎಂದು ವರ್ಣಿಸುವುದು. ಕಣ್ಣು, ಕಾಣಿಸುವದಾದರೆ, ಅದರ ರೂಪವ ಉಪಮಿಸಬಹುದು, ಕಣ್ಣು ಸಕಲರನ್ನು ಕಾಣುವ ಕಣ್ಣು ಸಕಲ ವಸ್ತುವ ಕಾಣುವ ಕಣ್ಣು, ಚರಾಚರ ಜಗವ ಕಾಣುವ ಕಣ್ಣು. ಇವಾವುಗಳಿಗೆ ಕಾಣದ ಕಣ್ಣು ಇದನ್ನು ವರ್ಣಿಸುವದದೆಂತು?

ಕಣ್ಣಿನ ಕಣ್ಣು, ಅದು ಏನೊಂದನ್ನು ಕಾಣದ ಕಣ್ಣು, ತನಗಿಂತ ಅನ್ಯವಾದುದು ಕಂಡುದಿಲ್ಲ ತನ್ನನ್ನು ಕಂಡು ಕಂಡು ನಿಂದ ಕಣ್ಣು. ಈ ಕಣ್ಣಿನ ಘನವದಾರು ವರ್ಣಿಸುವುದು. ಕಣ್ಣು ಮೌನ ಕಣ್ಣು ಕಂಡಾಗಳೂ ಮೌನ. ಕಂಡು ಕಂಡು ನಿಂದಾಗಳೂ ಮೌನ. ನಿರಂತರ ಮೌನ, ಮೂಕ ಮಾತಾಡಿದುದೆಂದು? ಮೂಕನ ಮೌನವೆಂದರೆ ತನುವಿಲ್ಲದೆ ಕಂಡು ಕಂಡು ನಿಂದ ಸಂಜ್ಞೆ ಸೂಚಿಸುತ್ತದೆ. ಇವನೆಂಥ ಮೂಕ? ತನುವಿಲ್ಲದೆ ಕಂಡುದು ಹೇಗೆ? ಕಂಡು ಕಂಡು ನಿಂದ ನೆಂದುದು ಆಶ್ಚರ್ಯ, ಇದು ನುಡಿದು ನುಡಿಯದ ನುಡಿ. ತನುವಿದ್ದಂತೆ ಕಂಡರೂ ತನುವಿಲ್ಲದ ತನು. ಅಜ್ಞಾನಿಗೆ ಅಹಂಕಾರವಿದ್ದ ತನುವಾಗಿದೆ. ಸುಜ್ಞಾನಿಗೆ ಅಹಮಿಲ್ಲದ ತನುವಾಗಿದೆ. ತನುವಿಲ್ಲ ವೆಂಬುದೊಂದು ತನುವೆ! ಅಜ್ಞಾನಿಗೆ ತನುವಿದ್ದ ತನು ತನ್ನ ತಾನರಿತ ಘನವಂತನಿಗೆ, ತನುವಿಲ್ಲವೆಂಬುದೆ ತನುವಾಗಿದೆ.

ಕಂಡು ಕಂಡು ನಿಂದೆ,ತನ್ನಿಂದ ತನ್ನ ಕಂಡು ಕಂಡು ನಿಂದೆ. ಪೂರ್ವದಲ್ಲಿ ಒಂದು ಬೆಳಗಿಸಿಕೊಳ್ಳುವದಾಗಿತ್ತು . ಒಂದು ಬೆಳಗುವದಾಯಿತ್ತು . ಈಗ ಬೆಳಗಿಸಿಕೊಳ್ಳುವದಿಲ್ಲ ಬೆಳಗುವದಿಲ್ಲ, ಪ್ರಕಾಶಿತ ಪ್ರಕಾಶಕ ಎಂಬ ವಿಭಾಗ ದೃಷ್ಠಿ ಇಲ್ಲ. ಇದು ನಿರಂತರ ಬೆಳಗುಳ್ಳ ಬೆಳಗು. ತನ್ನಯ ಬೆಳಗುಳ್ಳ ಬೆಳಗು. ಈ ಬೆಳಗುಳ್ಳ ಬೆಳಗು ಕಂಡು ಕಂಡು ನಿಂದೆ ಎಂದು ಸೂಚಿಸಿದುದು ನೋಡಿದಡೆ, ಇದು ನೋಡದ ನೋಟವಾಗಿ, ನಿಂದೆ ನಿಂದೆ ಅರಿಯದರುವಾಗಿ ನಿಂದೆ ಏನೊಂದೆನಲಿಲ್ಲದ ಅರುವಾಗಿ ನಿಂದೆ. ಭಾವಕ್ಕಿಂಬುಕೊಡದವನಾಗಿ ನಿಂದೆ, ಶಬ್ದಮೀಸಲವಾಗಿ ನಿಂದೆ, ಇಲ್ಲಿ ನುಡಿಗೆ ಅವಕಾಶವಿಲ್ಲವಾದುದರಿಂದ ನುಡಿಯು ನಷ್ಟ ನೆನಹು ನಷ್ಟ, ಭಾವನಷ್ಟವಾಗಿಹ, ಅಚಿಂತ್ಯಪದ ಅದನೆಂತು ವರ್ಣಿಸುವುದು, ತನ್ನಿಂದ ತನ್ನ ಕಂಡು ಕಂಡು ನಿಂದುದು, ನಿಃಶಬ್ದ ಬ್ರಹ್ಮವಾಗಿ ನಿಃಶಬ್ದ ಬ್ರಹ್ಮವ ಕಂಡು ಕಂಡು ನಿಃಶಬ್ದ ಘನನಾಗಿ ನಿಂದ ನಿಲುವು. ಶಬ್ದ ಸಂದಣಿಗೆ ಇಂಬಿಲ್ಲ ನೋಡಾ. ಇದು ತನುವಿಲ್ಲದ ಕಂಡು ಕಂಡು ಎಂದು ಹೇಳಿಹರು.

ಬೆರಗಿಲ್ಲದೆ ಕಂಡು ಕಂಡು ಬೆರಗಾದೆ, ಬೆರಗಿಲ್ಲದೆ ಕಂಡುದು ಏನು? ತನ್ನನ್ನು ತನ್ನ ಕಣ್ಣು ತನ್ನಿಂದ ಕಾಣಲು ಆಶ್ಚರ್ಯವದೇಕೆ? ಕಣ್ಣು ಕಣ್ಣಾಗ್ಗಿಯೇ ಇದೆ. ಸಕಲವನ್ನು ಕಾಣಬೇಕಾದರೆ ಕಣ್ಣಾಗ್ಗಿಯೆ

ಇದ್ದುದರಿಂದ ಕಾಣುತ್ತದೆ ಕಂಡರೂ ತನ್ನ ಘನತ್ವದಿಂದ ಕೆಟ್ಟಿರುವುದಿಲ್ಲ. ತನ್ನ ಶರೀರವ ನೋಡಲಿ ಅನ್ಯ ಶರೀರವ ನೋಡಲಿ ಅಷ್ಟೆಸಮಾನವಾಗಿದೆ. ಏನನ್ನು ನೋಡಿದರೂ ತಾನು ಇದ್ದಂತೆ ಇದೆ. ಕಣ್ಣು ಗ್ರಂಥಗಳ ನೋಡಲಿ, ಗುರು, ಲಿಂಗ, ಜಂಗಮರ ನೋಡಲಿ ತಾನು ಪ್ರತ್ಯೇಕ ಆಗಿ ಇದ್ದಂತೆ ಇದೆ. ಇದಕ್ಕೆ ಆಶ್ಚರ್ಯವೇಕೆ? ಇದು ಕಾರಣ ಬೆರಗಿಲ್ಲದೆ ಕಂಡು ಎಂದು ಪ್ರಭು ಹೇಳಿಹನು.

ಕಂಡು ಬೆರಗಾದೆ ಎಂದು ಹೇಳಿದುದು, ಬಹು ರಹಸ್ಯದಿಂದುಕ್ತವಾದುದು, ಕಣ್ಣಿನ ಕಣ್ಣಾದುದು ನಿರಾಲಂಬ. ನಿಸ್ಸಂಗವದು ನಿರಾಳ ಅದು ನಿಃಶಬ್ದ ಬ್ರಹ್ಮವಿದ್ದುದು ಕಂಡು. ಬೆರಗಾದೆ ಎಂದು ಹೇಳಿದುದು ಏಕೆಂದರೆ ಕಣ್ಣಿನ ಕಣ್ಣು ಇದು ಅರುವಿಂಗರುವಾದುದು. ಈ ಘನದ ದಿವ್ಯ ದೃಷ್ಠಿಗೆ ಬೆಳಗಿಸಿಕೊಂಡುದು ಇಲ್ಲ. ಬೆಳಗಿದುದು ಇಲ್ಲ . ನೋಡದ ನೋಟ ಕೂಡದಗಲದ ಘನ ಅರಿಯದರುವು ಆದುದು ಕಂಡು ಬೆರಗಾದೆ ಎಂದು ಹೇಳಿದ್ದಾನೆ. ಬೆರಗಿಲ್ಲದೆ ಕಂಡುದು ಅಂದರೆ ವೃತ್ತಾತ್ಮಕ ಜ್ಞಾನವಿಲ್ಲದೆ ಕಂಡು ತಾನು ತನ್ನ ಕಾಣಲು ಏನೆಂಬೇನೆಂಬೆ ಬಹಿರ್ ಮುಖ ಅಂತರ್ಮುಖದ ಹಂಗಿಲ್ಲದೆ ಇವೆರಡಕ್ಕೂ ಮಿಕ್ಕಿ ಮೀರಿದ ಬೆಳಗುಳ್ಳ ಬೆಳಗು, ನಿರಂತರ ಅಕಲ್ಪಿತ ಘನವಾಗಿರಲು ಅದಕ್ಕೆ ಬೆರಗುಗೊಳ್ಳುವದೇಕೆ? ತನ್ನ ಸ್ವ ಸ್ವರೂಪವಾಗಿಹ ದಿವ್ಯ ದೃಷ್ಠಿ ಕಲ್ಪಿತನಾಗಿ ಕಾಣಬೇಕೆನ್ನುವದು ಅಸಾಧ್ಯವು . ಕಲ್ಪಿತ ಪುರುಷ ನಷ್ಟವಾದವಂಗೆ, ಸಹಜ ಸಾಧ್ಯವು ಎಂದು ಹೇಳಿಹರು.

ಕಂಡು ಕಂಡು ಬೆರಗಾದೆ ಎಂದು ಹೇಳಿದುದು ಆಶ್ಚರ್ಯವಾಗಿದೆ ಕಂಡುದು ಕಣ್ಣು . ಕಣ್ಣು ಕಣ್ಣಾಗಿದ್ದುದು ನುಡಿದು ಹೇಳಲಿಲ್ಲ. ಕಂಡು ಕಂಡು ಬೆರಗಾದೆ ಎಂದು ಹೇಳಿದುದು ಆಶ್ಚರ್ಯವಾಗಿದೆ. ನುಡಿಯದುದು ನುಡಿದುದು ಎಂದು ಹೇಳುವದು ಆಶ್ಚರ್ಯವಲ್ಲವೆ?

ಅಕಲ್ಪಿತ ಘನವ ಕಂಡು, ಅಕಲ್ಪಿತವೆ ತಾನಾಗಿ ನಿಂದುದು ಕಂಡು ಕಂಡು ಎಂದು ಹೇಳಿದ್ದಾನೆ. ಕಲ್ಪಿತವ ಕೆಡಿಸಬಹುದು ಅಕಲ್ಪಿತ ಘನವು ತಾನೆ ಘನವಾಗಿಹುದು ಮತ್ತು ಘನಕ್ಕೆ ಘನವಾಗಿ ನಿಂದುದು ಆಶ್ಚರ್ಯವಾಗಿದೆ. ಏಕೆಂದರೆ ತನ್ನದು ನಿಃಶಬ್ದ ಬ್ರಹ್ಮವಾಗಿಹ ಘನವು ಎಂಬುದು ತನ್ನಿಂದ ತನಗದು ವೇದ್ಯವಾದುದು ಸಹಜವಾದಲ್ಲಿ ತನ್ನದು ತನ್ನದಾಗಿಹ ಸ್ವರೂಪ ಎಂದೆಂದೂ ಎಂತಿದ್ದುದು ಅಂತೆ ಅದೆ. ಚಿಂತೆಯಿಲ್ಲದ ಅನುಭಾವ ಎಂದಂತೆ ಇದು ತನ್ನಿಂದ ತಾನರಿದರಿದು ನಿಂದು ನೋಡದ ನೋಟವಾದುದರಿಂದ ಬೆರಗಾದೆ ಎಂದು ಹೇಳಿದ್ದಾರೆ.

ರೂಹಿಲ್ಲದೆ ಕಂಡರಿದೆ ಗುಹೇಶ್ವರನೆಂಬ ಲಿಂಗವ : ಗುಹೇಶ್ವರ, ಗುಹೇಶ್ವರ ಅನ್ನುವ ಭಕ್ತರು ಸಿಕ್ಕುತ್ತಾರೆ. ಗುಹೆ ಎಂಬುದೆ ಗವಿ. ಅರ್ಥಾತ್ ದೇಹರೂಪಿ ಗವಿ, ಏಕೆಂದರೆ ಗವಿ ಎಂಬ ಗುಹೆ ಒಳಗೆ ಒಳಗೆ ಹೋದಂತೆ, ಇನ್ನು ಒಳಗೆ ಇದ್ದುದರಿಂದ ಅದಕ್ಕೆ ಗುಹೆ ಎಂಬ ಹೆಸರು ಬಂದಿದೆ. ಈ ದೇಹವೆಂಬ ಗುಹೆಯಾದರೂ, ತತ್ವದೃಷ್ಠಿಯುಳ್ಳವರಾಗಿ ಒಳಗೆ ಒಳಗೆ ಹೋಗಬೇಕು. ಅನ್ನಮಯ ಮೊದಲು ಮಾಡಿ ಆನಂದಮಯ ಕೋಶದತ್ತಾಚೆ ಹೋದಾಗ ಈಶ್ವರ ದರ್ಶನವಾಗುತ್ತದೆ. ಈಶ್ವರನೆಂದರೆ ಇವನೊಬ್ಬನೆ. ಇವನ ಸಮಾನ ಆರೂ ಇಲ್ಲ. ಈಶ್ವರನೆಂದರೆ ಸಕಲ ದೇವರ ದೇವ, ಬ್ರಹ್ಮಾದಿಗಳ ದೇವ. ದೇವಗಣ, ರುದ್ರಗಣ. ಪ್ರಮಥ ಗಣರ ದೇವ ಈ ದೇವನೆಂದರೆ ಬೆಳಗುಳ್ಳ ಬೆಳಗು. ಸ್ವಯಂ ಜ್ಯೋತಿ. ಚಿ ಜ್ಯೋತಿ. ಈ ಘನ ಜ್ಯೋತಿಯ ಅರಿಯ ಹೋದವರು, ತಾನೆ ಸ್ವಯಂ ಜ್ಯೋತಿ. ಈ ಘನಲಿಂಗ ಅರಿಯಬೇಕಾದರೆ ರೂಹಿಲ್ಲದೆ ಕಂಡರಿಯಬೇಕು ಎಂದು ಹೇಳಿಹರು.

ಗುಹೇಶ್ವರ ಲಿಂಗ, ರೂಹಿಲ್ಲದ ಲಿಂಗ ಸಾಕಾರವೆನ್ನಲು ಬರದು. ನಿರಾಕಾರವೆನ್ನಲು ಬರದು ಸಗುಣ ನಿರ್ಗುಣವೆನ್ನಲು ಬರದು. ಅನುಪಮ ಲಿಂಗ ಉಪಮಿಸುವದದೆಂತು ಮೌನಮುದ್ರಿತವಾಗಿಹ ಲಿಂಗವು ಅರುವರಿತವರ ಸ್ವರೂಪವು ನಿಃಶಬ್ದ ಬ್ರಹ್ಮವಾಗಿಹ ಇರುವು ನಿಃಶಬ್ದ ಬ್ರಹ್ಮವಾಗಿ ಅರಿಯುವದು.

ಪ್ರಭುದೇವ ನಿಃಶಬ್ದ ಬ್ರಹ್ಮವ, ರೂಹಿಲ್ಲದೆ ಕಂಡರಿದೆ ಗುಹೇಶ್ವರ ಲಿಂಗ. ಎಂದು ಹೇಳಿಹರು. ತಾನು ರೂಹಿಲ್ಲದವನಾಗಿ ಕಂಡರಿದು ಗುಹೇಶ್ವರ ಲಿಂಗವ ತಾನೆ ಆದುದು.

146

ಘನವ ಕಂಡು ಮನ ಅವಗ್ರಾಹಕವಾಯಿತ್ತು.
ಕಂಡು ಕಂಡು ಮನ ಮಹಾಘನವಾಯಿತ್ತು.
ತಲ್ಲೀಯವಾಯಿತ್ತು, ತದುಗತ ಶಬ್ದಮುಗ್ಧವಾದುದ
ನೇನೆಂಬೆ ಗುಹೇಶ್ವರಾ. ॥680॥

ತಾತ್ಪರ್ಯ : ಘನವ ಕಂಡು, ಮನ ಅವಗ್ರಾಹಕವಾಯಿತ್ತು : ಘನವ ಕಂಡು ಮನ ಘನವ ಹಿಡಿಯಿತ್ತೆ ? ಮನ, ಘನ ಅಪ್ಪಿಕೊಂಡಿತ್ತೆ ? ಅದರ ಗ್ರಾಹಕವಾಯಿತ್ತೆ! ಇದೆಂಥ ಮನ ? ಕಾಣದುದ ಕಂಡು, ಕಾಣದುದ ಘನವ ಹಿಡಿಯಿತ್ತೆ ? ಮುಟ್ಟಬಾರದ ಘನ ಕಂಡು ತಾನು ಮುಟ್ಟಬಾರದುದಾಯಿತ್ತೆ,ಅಸಾಧ್ಯವ ಸಾಧಿಸಿ, ತಾನು ಅಸಾಧ್ಯವಾದುದಾಯಿತ್ತೆ, ಘನವ ಕಂಡು ಮನ ಘನವಾಯಿತ್ತೆ! ಇದು ಕಂಡ ಬಗೆ ಆವುದು?

ಅಕಲ್ಪಿತ ಘನವ, ಕಲ್ಪಿತ ಮನ ಮುಟ್ಟುವ ಬಗೆ ಆವುದು? ಅಚಿಂತ್ಯ ಘನವ ಚಿಂತನಕ್ಕೊಳಪಟ್ಟ ಮನ ಅದು ಅಚಿಂತ್ಯವಾದುದು ಹೇಗೆ? ಮನವು ತನ್ನ ಪೂರ್ವ ಸ್ವಭಾವ ಬಿಟ್ಟು ಘನವರಿದರಿದು ನಿಂತುದೆ ಘನವ ಕಂಡ ಮನ. ಇದು ಅವ ಗ್ರಾಹಕಮನ, ಸಂಕಲ್ಪ ವಿಕಲ್ಪ ಕೆಟ್ಟಮನ. ಇದು ಆತ್ಮನೆಂದು ನೆನೆಯಲಿಲ್ಲ ಅನಾತ್ಮವೆಂದು ಕಲ್ಪಿಸಲಿಲ್ಲ. ಇದ್ದುದು ಅರಿಯಹೋಗಿ ಘನವ ಕಂಡು ಮನ ಗ್ರಾಹಕವಾಯಿತ್ತು. ಇದು ಹಿಡಿಯದುದ ಹಿಡಿದಿತ್ತು, ಇದು ಆಶ್ಚರ್ಯ. ಬಯಲನ್ನು ಆರಾದರೂ ಹಿಡಿಯಬಹುದೆ ? ಅದನ್ನು ಅಪ್ಪಬಹುದೆ ?

ಆಡಬಾರದ ಬಯಲು, ನೋಡಬಾರದ ಬಯಲು, ನುಡಿಯಲು ಬಾರದ ಬಯಲು, ನೆನೆಯಲು ಬಾರದ ಬಯಲು. ಅದನ್ನು ಮನ ಹಿಡಿದಿತ್ತು ಅಪ್ಪಿಕೊಂಡಿತು. ಇದು ಅಪ್ರತಿಮ ಸಾಹಸ ಇದು ಬಯಲು ಬಯಲಾಗಿ ಹಿಡಿದಿತ್ತು. ಆಡಬಾರದ ಬಯಲು ತಾನು ಆಡದಾಗಿ ಅದನ್ನು ಹಿಡಿದಿತ್ತು ಅಪ್ಪಿಕೊಂಡಿತು ನೋಡಬಾರದ ಬಯಲು, ನುಡಿಯಬಾರದ ಬಯಲು ಓಹೋ ಮನವೆ ನೀನು ನೋಡಬಾರದಾಗಿ ನುಡಿಯಬಾರದಾಗಿ ನಡೆಯ ಬಾರದಂತಾಗಿ ಅವ ಗ್ರಾಹಕವಾದೆಯಾ? ನೆನೆಯಬಾರದ ಬಯಲು ತಾನು ನೆನೆಯದ್ದಾಗಿ ಅವಗ್ರಾಹಕವಾಯಿತ್ತೆ ? ಅಹುದು ನಿನ್ನ ಸಾರ್ಥಕತೆಯು, ತಾನು ಮನವೆಂಬುದೆ ಮರೆದು ಘನವ ಕಂಡುದು ನೋಡಾ.

ಸಂಕಲ್ಪ ಕಲ್ಪಿಸಲಿಲ್ಲ ನೆನೆಯಲಿಲ್ಲ, ನಿರ್ಣಯ ಮಾಡ ಹೋಗಲಿಲ್ಲ ಅರಸಲಿಲ್ಲ ಆರಾಧಿಸಲಿಲ್ಲ ತಾ ಮನವಾಗಲಿಲ್ಲ, ತನಗೆ ಘನವೆನಲಿಲ್ಲ ಅರಿದರುಹಿಸಿಕೊಂಬುದಕ್ಕೂ ಮೀರಿದುದಾಗಿ ಘನವ ಕಂಡಿಹುದು ನೋಡಾ. ನೆನೆಯದ್ದಾಗದೆ ನಿರ್ಣಯಿಸದ್ದಾಗದೆ ಘನವ ಕಂಡುದು ನೋಡಾ ಕಲ್ಪಿತವ ಕೆಟ್ಟು ಅಕಲ್ಪಿತ ಘನವ ಕಂಡಿಹುದು ನೋಡಾ. ಇದು ಎರಡೊಂದಾದ ಘನದಿರುವು ನೋಡಾ. ಅಲ್ಲಿ ಮನವೆಂಬುದು ಇಲ್ಲ ಘನವೆಂಬುದಿಲ್ಲ ನೋಡದ ನೋಟವೆ ಘನವ ಕಂಡ ಚಿನ್ಹ ನೋಡಾ, ಅರಿಯದರುವಾದುದು ನಿಂತುದೆ ಘನವ ಕಂಡುದು ನೋಡಾ. ಏನೆಂದೆನಲಿಲ್ಲದ ಅರುವು ಅದು ಘನ ನೋಡಾ ತಾನು ಏನೆಂದೆನಲಿಲ್ಲದೆ ಅರಿದರಿದು ನಿಂತುದು. ಘನವ ಕಂಡುದು ಘನವೆಂಬುದು ನುಡಿಗೆಡೆಗೊಡದ ಘನ, ಮನ ಘನವ ಕಂಡು ಅದು ನುಡಿಗೆಡೆಗೊಡದಂತಾಗಿಹ ನಿಂತ ನಿಜವೆಂದರಿವುದು.

ಕಂಡು ಕಂಡು ಮನ ಮಹಾಘನವಾಯಿತ್ತು : ಕಂಡು ಕಂಡು ಮಹಾಘನವಾದುದು, ಅದನೆಂತು ವರ್ಣಿಸುವುದು? ನದಿಗೆ ಸಮುದ್ರ ದರ್ಶನವಾಗಿ, ಅದರಲ್ಲಿ ಸಮರಸವಾದಲ್ಲಿ ಅಲ್ಲಿ ನದಿಯು ಕಾಣಬಹುದೆ? ಸಮುದ್ರವು ಅಪಾರ, ಅದನ್ನು ಸೇರಿದ ನದಿಯು ಅಪಾರ. ಅಲ್ಲಿ ಇದು ನದಿ ಇದು ಸಮುದ್ರವೆಂದು ವಿಭಾಗಿಸಲು ಬರುವುದೆ? ಘಟಾಕಾಶ, ಮಠಾಕಾಶವೆಂದು ಘಟ ಮಠದುಪಾಧಿಯ ಕಂಡು ಘಟಾಕಾಶ ಮಠಾಕಾಶವೆಂದು ಉಸರಬಹುದು. ಘಟ ಮಠವೆಂಬುಪಾಧಿಯ ಕೆಡಲು ಅಲ್ಲಿ ಘಟಾಕಾಶ ವಾವುದು? ಮಠಾಕಾಶವಾವುದು? ಅಲ್ಲಿ ಎಣಿಸಲು ಬರುವುದೆ! ನಿರಾಲಂಬ ಘನವ ವರ್ಣಿಸುವದದೆಂತು? ಘನವ ಕಾಣುವದಕ್ಕಿಂತ ಮುನ್ನ ಮರವಿನಿಂದುಕ್ತ ಮನವಾಗಿತ್ತು. ಅರಿವುಡೆ ಅವಗ್ರಾಹಕವಾಯಿತ್ತು. ಅವಗ್ರಾಹಕವಾದುದು ಅದನ್ನು ಕಂಡು ಹಿಡಿದುದು ಅಪ್ಪಿದುದು ಬಿಡದು ನೋಡಾ ಇದು ಬಯಲ ಬಯಲ ಆಲಿಂಗನ ಬಯಲ ಬಯಲೆ ಹಿಡಿದುದು ಬಯಲು ಬಯಲೆ ಆಗಿರುವಲ್ಲಿ ಅದನ್ನು ವರ್ಣಿಸುವದದಾರಿಗೆ ಸಾಧ್ಯವು ? ಕಂಡು ಕಂಡು ಮಹಾಘನವಾದುದು ಅದಾರು ವರ್ಣಿಸುವುದು.

ನೆನಯದ ಮನವಾಗಿ, ನಿರ್ಣಯಿಸದ ಬುದ್ಧಿಯಾಗಿ ಭಾವಿಸದ ನಿರ್ಭಾವವಾಗಿ ಅರಿದರುಹಿಸಿಕೊಂಬುದಕ್ಕೂ ಮೀರಿದುದೆ ತಾನಾಗಿ ಘನವ ಕಂಡು ತಾನು ಮನವೆಂಬುದು ಮರೆತಿತ್ತು. ಅನಾತ್ಮ ನೆನಲಿಲ್ಲ ಆತ್ಮನೆನಲಿಲ್ಲ ಅಂಗನೆನಲಿಲ್ಲ ಲಿಂಗನೆನಲಿಲ್ಲ ಸಂಗನೆನಲಿಲ್ಲ ಸಮರಸವೆನಲಿಲ್ಲ ಆದುದು ಎನಲಿಲ್ಲ ಆಗದುದು ಎನಲಿಲ್ಲ ಏನೂ ಎನ್ನದೆ ಶಬ್ದಮುಗ್ಧವಾಗಿರುವುದೆ ಘನವ ಕಂಡಿತ್ತು.

ಕಂಡು ಕಂಡು ಮಹಾಘನವಾಯಿತ್ತು. ಶಬ್ದಮುಗ್ಧವಾದುದು ಪುನಃ ಉಸರಲಿಲ್ಲ. ಅರಿಯದರುವೆ ತಾನಾಗಿ ನಿಂತುದು ಅದನೆಂತು ವರ್ಣಿಸುವುದು ಅವರ್ಣಿಯ ನಿಲುವು ಕಂಡು ಕಂಡು ಮಹಾಘನವೆನಿಸಿಹುದು ನೋಡಾ ಇದುವೆ ನಿಃಶಬ್ದ ಘನದಿರುವಿನ ಅರುವು ನೋಡಾ.

ತಲ್ಲೀಯವಾಯಿತ್ತು ತದುಗತ ಶಬ್ದಮುಗ್ಧವಾದುದ ನೇನೆಂಬೆ, ಗುಹೇಶ್ವರಾ : ಇಲ್ಲಿ ನಿಃಶಬ್ದ ಬ್ರಹ್ಮದಲ್ಲಿ ಲೀಯವಾದ ಮನವ ವರ್ಣಿಸುವರೆ? ಸಾಗರದಲ್ಲಿ ಲೀಯವಾದ ನದಿಯ ವರ್ಣಿಸುವರೆ? ಸಾಗರವು ನೀರೆ, ನದಿಯು ನೀರೆ, ನೀರು ನೀರು ಒಂದಾದ ಘನ ವರ್ಣಿಸಬಹುದೆ? ಇಲ್ಲಿ ಸಾಗರವೆಂಬ ಕಲ್ಪಿತವಿಲ್ಲ ನದಿಗಳೆಂಬ ಕಲ್ಪಿತವಿಲ್ಲ. ಕಲ್ಪಿತವ ಗುಣಿಸಬಹುದು ಗಣನೆಗತೀತವಾದುದು ಅದನೆಂತು ವರ್ಣಿಸುವುದು? ಮನವು ನಿಃಶಬ್ದ ಬ್ರಹ್ಮದಲ್ಲಿ ಬೆರೆತದು ವರ್ಣಿಸದಾಗದು. ಅಲ್ಲಿ ಮನವೆಂಬ ಕಲ್ಪಿತವು ಇಲ್ಲ. ಘನವೆಂಬ ಕಲ್ಪಿತವು ಇಲ್ಲ. ಕಲ್ಪಿತ ಕೆಟ್ಟು ಅಕಲ್ಪಿತ ಘನದಲ್ಲಿ ಒಂದಾದುದು ಆದನಾರು ಹೀಗೆ ಎಂದು ವರ್ಣಿಸುವುದು, ಅಲ್ಲಿ ಮನವೆಂಬುದು ನಷ್ಟ, ಘನವೆಂಬುದು ನಷ್ಟವಾಗಿ ಎರಡೊಂದಾದುದು. ಇದು ತದುಗತ. ನದಿಯು ನೀರು, ಸಾಗರವು ನೀರು. ಎರಡೊಂದಾದುದು ತದುಗತವು. ಮನ ಘನವೆಂಬುದು ಅರಿಯದರುವು ಇದು ಎರಡೊಂದಾದ ತದುಗತ, ಘನಮನವೆಂಬುದು ಒಂದಾದುದು, ಘನವೆಂಬ ನಿಃಶಬ್ದ ಬ್ರಹ್ಮದಲ್ಲಿ ಮನ ಬೆರೆತು ಅದುವೆ ಆಗಿಹ ನಿಃಶಬ್ದ ಘನವ ಅದನೆಂತು ವರ್ಣಿಸುವದು.

ಪ್ರಭುವಿನ ಮನ! ನಿಃಶಬ್ದ ಬ್ರಹ್ಮದಲ್ಲಿ ತದುಗತವಾದ ಮನ. ಬಹು ಬ್ರಹ್ಮವೇತ್ತರ ಮನ ಶಬ್ದಬ್ರಹ್ಮದಲ್ಲಿ ತದುಗತವಾದುದಾಗಿ ಇರುವುದು. ನಿಃಶಬ್ದ ಬ್ರಹ್ಮದಲ್ಲಿ ತದುಗತ ಮಹಾಂತರು ಶಿಕ್ಕುವುದು ವಿರಳ.

ಪ್ರಭುವೆಂದರೆ ಹೇಳುವದಿನ್ನೇನು? ಮುನ್ನವೆ ಪ್ರಭುವು ನಿಃಶಬ್ದ ಬ್ರಹ್ಮದಲ್ಲಿ ಮನವ ಸಮರಸ ಮಾಡಿದ ಘನ ಗಂಭೀರ. ಆ ಮಹಾಂತನ ಮಹಾಪ್ರಸಾದ ಶಬ್ದವೆ ಮೀಸಲು ಹಾಕಿದ ಮಹಾಪ್ರಸಾದ. ಇದು ಶಬ್ದಸಂಭ್ರಮದವರಿಗದು ನಿಲುಕದ ಸಾಹಿತ್ಯ, ನಿಃಶಬ್ದ ಬ್ರಹ್ಮದಲ್ಲಿ ತನ್ನ ಮನವನ್ನೆ ತದುಗತ ಮಾಡಿದವರ ಸಾಹಿತ್ಯ, ಭಾವಕ್ಕಿಂಬು ಕೊಡದ ಮಹಾಪ್ರಸಾದ ನುಡಿಗೆಡೆಗೊಡದ ಮಹದರುವು. ವೇದ

ವೇದಿಸಲರಿಯದ ಮಹಾಜ್ಞಾನ. ಇದು ಶಬ್ದ ಮುಗ್ಧ ಮಾಡಿ ನಿಬ್ಬೆರಗಿನ ನಿಜಾನಂದ ಹೊರ ಸೂಸುವ ಸಾಹಿತ್ಯ, ಇದು ಕಾರಣ ಶಬ್ದಮುಗ್ಧವಾದುದನೇನೆಂಬೆ ಗುಹೇಶ್ವರಾ ಎಂದು ಹೇಳಿಹರು, ಇದು ಮೂಕ ಸಕ್ಕರೆ ತಿಂದ ಅನುಭವವಿರುವಲ್ಲಿ ಅದು ನುಡಿದು ಹೇಳಲಿಲ್ಲ.

ನಿಃಶಬ್ದ ಬ್ರಹ್ಮವಾಗಿ ಪರಮಾನಂದದಲ್ಲಿದ್ದ ಸುಖ. ಇದು ನಿರ್ವಾಣ ಸುಖ ಇದು ತದುಗತ ಶಬ್ದಮುಗ್ಧವಾದುದ ನೇನೆಂಬೆ ಗುಹೇಶ್ವರಾ. ಪ್ರಭುದೇವ ಶಬ್ದಮುಗ್ಧದ ಹುಚ್ಚು ಹಿಡಿದ ಮುಕ್ತಾಯಕ್ಕನ ಹುಚ್ಚನ್ನೆ ನಿಚ್ಚಳ ಮಾಡಿ, ನಿಃಶಬ್ದ ಬ್ರಹ್ಮದನುವ ತೋರಿಸಿದ ಧೀರ, ಗಂಭೀರ. ನುಡಿದು ನುಡಿಯದಂತಿದ್ದ ನಿಃಶಬ್ದ ವೇದಿ. ಈ ನಿಶಬ್ದವೇದಿಯಾದುದರಿಂದ ತದುಗತ ಶಬ್ದಮುಗ್ಧವಾದುದ ನೇನೆಂಬೆ ಗುಹೇಶ್ವರಾ ಎಂದು ಹೇಳಿಹರು.

147

ನಾ ನೀನೆಂಬ ಭೇದ ಅಂದೂ ಇಲ್ಲ, ಇಂದೂ ಇಲ್ಲ.
ಸಾಲೋಕ್ಯನಲ್ಲ ಸಾಮೀಪ್ಯನಲ್ಲ ಶರಣ,
ಸಾರೂಪ್ಯನಲ್ಲ ಸಾಯುಜ್ಯನಲ್ಲ ಶರಣ
ಕಾಯನಲ್ಲ ಅಕಾಯನಲ್ಲ ಗುಹೇಶ್ವರ ಲಿಂಗ ತಾನೆಯಾಗಿ. ॥ 689 ॥

ತಾತ್ಪರ್ಯ : ನಾ ನೀನೆಂಬ ಭೇದ ಅಂದೂ ಇಲ್ಲ. ಇಂದೂ ಇಲ್ಲ: ಈ ನಾ ನೀನೆಂಬ ಭೇದ ಅಂದೂ ಇಲ್ಲ ಇಂದೂ ಇಲ್ಲದವರಾರು? ಗುಹೇಶ್ವರ ಲಿಂಗ ತಾನೆಯಾದ ಶರಣ. ತನ್ನ ತಾನರಿತ ಶರಣ, ತಾನೆ ಜಗ ಜಗವೆಲ್ಲವು ತಾನೆಂದರಿದ ಘನವೇದ್ಯ ನಭೇದ ರೂಪನಾಗಿ ಅನ್ಯವಿಲ್ಲ ದನ್ಯವ ನರಿಯಲೆಲ್ಲಿಯದು. ನಿರಂಜನ ನಿಜ ಚಿದ್ರೂಪ ತಾನಾಗಿ, ಅರುವು ತಾನೆಂಬ ಮಮತೆಗೆಡೆಯಲ್ಲಿಯದು ಅನ್ಯವೆನ್ನದ ತಾನೆನ್ನದಳಿ ದುಳುಮೆಯ ನುಪಮಿಸಬಹುದೆ? ಅನುಪಮ ಸುಖ ಸಾರಾಯ ಕೂಡಲಚೆನ್ನ ಸಂಗಮದೇವಾ ನಿಮ್ಮ ಶರಣ. ಅನುಪಮ ಸುಖ ಸಾರಾಯ ಶರಣ. ಈ ಶರಣಂಗೆ ನಾನೀನೆಂಬ ಭೇದ ಅಂದೂ ಇಲ್ಲ, ಇಂದೂ ಇಲ್ಲ. ತಾನೆ ಜಗ, ಜಗವೆಲ್ಲ ತಾನೆಂದರಿದ ಘನವೇದ್ಯನ ಭೇದ ರೂಪನಾಗಿಹನು.

ಈ ಮಹಾಂತಂಗೆ ತಾನು ಬೇರೆ ಜಗತ್ತು ಬೇರೆಂಬ ಭೇದಜ್ಞಾನವಿಲ್ಲ, ಈ ಘನವಂತನಲ್ಲಿ ಜೀವ ಈಶ್ವರರೆಂಬ ಕಲ್ಪಿತವ ಕಾಣದವಂಗೆ ಜೀವ ಈಶ್ವರ ಭೇದ ಮಾಡುವದೂ ಇಲ್ಲ. ನಾನು ಜೀವನೆಂಬುದಿಲ್ಲ ನೀನು ಈಶ್ವರನೆಂಬುದು ಇಲ್ಲವಾದುದರಿಂದ ಜೀವ ಜಡವೆಂಬ ಭೇದ ಜ್ಞಾನವೂ ಇಲ್ಲ. ಈಶ್ವರ ಜಡನೆಂಬ ಭೇದ ಜ್ಞಾನವೂ ಇಲ್ಲ. ಜಡಾ ಜಡವೆಂಬ ಭೇದಜ್ಞಾನವೂ ಇಲ್ಲ ಅಭಿನ್ನ ಜ್ಞಾನವೂ ಇಲ್ಲ, ಅನ್ಯವಿಲ್ಲದನ್ಯವರಿಯ ಲೆಲ್ಲಿಯದೊ? ತನಗಿಂತ ಅನ್ಯವರಿಯನು. ಅನುಪಮ ಜ್ಞಾನಿ ಉಪಮೆಯುಳ್ಳವ ನಾಗುವದದೆಂತು.

ವನದ ಕೋಗಿಲೆ ಮನೆಗೆ ಬಂದರೆ, ತನ್ನ ವನವ ನೆನೆವುದು ಮಾಣ್ಬುದೆ? ಮಲೆಯ ಗಜವು ಮನೆಗೆ ಬಂದರೆ ತನ್ನ ಮಲೆಯ ನೆನೆವುದು ಮಾಣ್ಬುದೆ? ಕೂಡಲಸಂಗನ ಶರಣರು ಮರೆದು ಮರ್ತ್ಯಕ್ಕೆ ಬಂದರೆ ತಮ್ಮ ಆದಿ ಮಧ್ಯಂತರಂಗದ ಲಿಂಗವ ನೆನೆವುದು ಮಾಣ್ಬುದೆ.

ಶರಣರು ಮರೆದು ಮರ್ತ್ಯಕ್ಕೆ ಬಂದರೂ ಅನಾದಿ ಅಖಂಡ ಅಚಲ ಅನುಪಮ ಲಿಂಗವ ನೆನೆವುದು ಬಿಡುವುರೆ? ಅವರು ಆದಿಯ ನರಿಯರು, ಮಧ್ಯವ ನರಿಯರು, ಅಂತ್ಯವ ನರಿಯರು. ಲಿಂಗದ ನೆನೆವುಳ್ಳವಂಗೆ ಆದಿ ಇಲ್ಲ, ಮಧ್ಯ ಇಲ್ಲ, ಅಂತ್ಯ ಇಲ್ಲ. ಚಿದಾಕಾಶಕ್ಕೆ ಆದಿ ಆವುದು

ಮಧ್ಯವಾವುದು, ಅಂತ್ಯವಾವುದು. ಗಣನೆಗತೀತವಾದ ಶರಣರ ಅರುವು ಅನುಪಮ. ಅನುಪಮ ಲಿಂಗವನರಿದು ಅನುಪಮನಾಗಿಹ ಸುಖಮಯನು. ಆ ಮಹಾಂತಂಗೆ ಆದಿ ಮಧ್ಯ ಅಂತ್ಯವ ಕಾಣದ ಅನಂತನು. ಆತನು ವನದ ಕೋಗಿಲೆ ಇದ್ದಂತೆ ಮಲೆಯ ಗಜವಿದ್ದಂತೆ ತನ್ನ ಮೂಲವ ಮರೆಯನು. ತನ್ನ ಮುನ್ನ ಮುನ್ನಲಾದ ಘನವ ಮರೆಯನು. ಶರಣರು ಮರೆದು ಮರ್ತ್ಯಕ್ಕೆ ಬಂದರೆ, ಅವರು ಅನುಪಮ ಲಿಂಗವೆಂಬುದು ಮರೆಯದ್ದರಿಂದ ಆ ಮಹಾಂತಂಗೆ ನಾನೀನೆಂಬ ಭೇದ ಅಂದೂ ಇಲ್ಲ ಇಂದೂ ಇಲ್ಲವೆಂದು ಹೇಳಿಹರು.

ಅನ್ಯವೆನ್ನದ ತಾನೆನ್ನದಳಿದುಳಿಮೆಯನು ಉಪಮಿಸಬಹುದೆ ? ಅನುಪಮ ಸುಖ ಸಾರಾಯ, ಕೂಡಲಚೆನ್ನಸಂಗಾ ನಿಮ್ಮ ಶರಣ. ಶರಣನೆಂದರೆ ಅಖಂಡಿತ ಘನ ಪೂರ್ಣವಪ್ಪ, ಇರುವೆ ತನ್ನಿರುವೆಂದರಿದ ಘನವಂತ ಆ ಮಹಾಂತಂಗೆ ನಾನೆಂಬುದಿಲ್ಲ ನೀನೆಂಬುದಿಲ್ಲ ಅಂದು ಎಂಬುದಿಲ್ಲ ಇಂದೂ ಎಂಬುದಿಲ್ಲ. ಶರಣ ಅಕಲ್ಪಿತ ತಾನಾಗಿಹ ಘನ ತಾನು ಒಂದಾಗಿರ್ದ ಘನವಂತ. ಲಿಂಗ ತಾನು ಒಂದಾಗಿರ್ದ ಘನ ಉಪಮೆಗೆ ತಂದು ಎರಡೆನ್ನಬಹುದೆ? ಶುದ್ಧ ಶಿವೈಕ್ಯ ಕೂಡಲಚೆನ್ನಸಂಗಾ ನಿಮ್ಮ ಶರಣ.

ಅಕಲ್ಪಿತವು ಕಲ್ಪಿತವಾಗದು , ಶರಣ ಕಲ್ಪಿತಕ್ಕೆಡೆಗೊಡನು , ನಿಸ್ಸೀಮನು . ಎಲ್ಲಿ ಸೀಮಿತವದೆ, ಅಲ್ಲಿ ನಾನೆಂಬುವದಿದೆ . ನೀನೆಂಬುವದಿದೆ ಅಂದು ಇದೆ, ಇಂದು ಇದೆ , ನಿಸ್ಸೀಮಂಗೆ ನಾನಾವುದು? ನೀನಾವುದು? ಪೂಜ್ಯವಾವುದು ಪೂಜಕವಾವುದು? ಹಿರಿದಾವುದು? ಕಿರಿದಾವುದು? ಅಹುದಾವುದು? ಅಲ್ಲಾವುದು? ಅಂದು ಆವುದು? ಇಂದು ಆವುದು? ಗಗನಕ್ಕೆ ಅಂದು, ಇಂದು ಉಂಟೆ? ನಾನೀನೆಂಬುದುಂಟೆ? ಅಖಂಡಿತವು ಖಂಡಿತವಾಗದು , ಸುಖವು ಸುಖವೆ! ಸುಖಕ್ಕೆ ನಾನೆಂಬುದಿದೆಯಾ? ನೀನೆಂಬುದಿದೆಯಾ? ಅಂದು ಇಂದು ಎಂಬುದಿದೆಯಾ? ಸುಖದೇಕ ರಸ ಸುಖವು ಸುಖವೆ . ಗಗನದಂತೆ ಅಖಂಡವಾಗಿರುವ ಜ್ಞಾನಾಮೃತ. ಜ್ಞಾನಾನಂದ ಅನಾಮಯವಾಗಿರುವ ನಿರ್ವಾಣ ಅದು ನಾನು ಆದುದು ಆವಾಗ ನೀನು ಆದುದು ಆವಾಗ? ಶರಣನೆಂದರೆ ಅನಾಮಯನಾಗಿರುವ ನಿರ್ವಾಣ .

ಶರಣನೆಂದರೆ ಗುಹೇಶ್ವರ ಲಿಂಗ ತಾನೆ ಆದುದು. ನಿಃಶಬ್ದ ಬ್ರಹ್ಮವಾಗಿರ್ದ ಶರಣ . ನಾನೀನೆಂಬುದಕ್ಕೆ ತೆರೆಹಿಲ್ಲದೆ ಸ್ವಯ ಸುಖವಾಗಿರ್ದ ಶರಣ. ಅಲ್ಲಿ ಚಿದಹಮ್ಮಿಗೂ ಇಂಬಿಲ್ಲ, ದಾಸೋಹಂ ಎಂಬುದಕ್ಕೂ ಇಂಬಿಲ್ಲ. ಸಕಲವೂ ನೀನೆಂಬ ಭರಿತ ಭಾವಕ್ಕೂ ಇಂಬಿಲ್ಲ. ಸಕಲವೂ ನಾನೆಂಬ ಚಿದಹಮ್ಮಿಗೂ ಇಂಬಿಲ್ಲ. ಅಲ್ಲಿ ನಾ ನೀನೆಂಬ ಭೇದ ಅಂದೂ ಇಲ್ಲ. ಇಂದೂ ಇಲ್ಲ. ಶರಣ ದ್ವೈತಿಯಲ್ಲ ಅದ್ವೈತಿಯಲ್ಲ, ಅಹಂಭಾವಿಯಲ್ಲ ನಿರಹಂಭಾವಿಯಲ್ಲ, ಸಮತೆ ಸಯವಾದ ಶರಣ. ಭಾವಕ್ಕಗಮ್ಯ ಅವನೆಂತು ಭಾವಿಕನು, ಘನಕ್ಕೆ ಘನನಾಗಿಹ ಶರಣ ಘನಗಂಭೀರ ಮಹಾಘನದೊಳಗೆ ಘನಕ್ಕೆ ಘನನಾಗಿರ್ದನಯ್ಯ ಕೂಡಲ ಸಂಗಯ್ಯನೆಂಬ ಬೆಳಗಿನೊಳಗೆ ಬೆಳಗಾಗಿರ್ದು ಶಬ್ದ ಮುಗ್ಧವಾದುದನೇನೆಂಬೆ? ಎಂದು ಬಸವರಸರು ಬಿತ್ತರಿಸಿದುದು ನೋಡುವುಡೆ ಆ ಶರಣ ಸ್ಥಲವಲ್ಲ ನಿಸ್ಥಲವಲ್ಲ ಏನೊಂದಾಗದ ಘನಮಹಿಮ, ಭಕ್ತನೆಂಬೆನೆ? ಭಕ್ತನಲ್ಲ, ಮಹೇಶನೆಂಬೆನೆ? ಮಹೇಶನಲ್ಲ, ಪ್ರಸಾದಿ ಎಂಬೆನೆ ? ಪ್ರಸಾದಿಯಲ್ಲ, ಪ್ರಾಣಲಿಂಗಿಯೆಂಬೆನೆ? ಪ್ರಾಣಲಿಂಗಿಯಲ್ಲ, ಶರಣನೆಂಬೆನೆ? ಶರಣನಲ್ಲ, ಐಕ್ಯನೆಂಬೆನೆ? ಐಕ್ಯನಲ್ಲ, ಏಕೆಂದರೆ ಸ್ಥಲವೆನ್ನೆ, ನಿಸ್ಥಲವೆನ್ನೆ ನಿರ್ಣಯ ವೆನಗಾದ ಬಳಿಕ ಏನೊಂದರಿಯೆನಯ್ಯ , ಕೂಡಲ ಚೆನ್ನಸಂಗಯ್ಯ ಲಿಂಗೈಕ್ಯವೆಂದೆನ್ನೆ ಶರಣಂಗೆ ಲಿಂಗವೆಂಬುದೆ ಹೆತ್ತರಿವು ಆಗಿ, ತಾನು ಸ್ವಮಹಿಮನಾಗಿ ಲಿಂಗಕ್ಕೆ ಲಿಂಗವಾಗಿ, ಅರುವಿಂಗೆ ಪ್ರಜ್ವಲಿಸುವಲ್ಲಿ ಘನಗಂಭೀರ ಮಹಾಘದೊಳಗೆ ಘನಕ್ಕೆ ಘನವಾಗಿರ್ದನಯ್ಯ ಎಂದು ಹೇಳಿಹರು.

ಶರಣ ಜಂಗಮನಾಗಿ ಕಂಡರೂ ನಿರ್ಭಾವಿಯು ನಿರ್ಲಿಖಿತ ಜಂಗಮನು, ನಿರ್ನಾಮ ಜಂಗಮನು ಶುದ್ಧ ಶಿವೈಕ್ಯನು ಒಂದಾಗಿರ್ದ ಜಂಗಮ, ಜಂಗಮ ಒಂದಾಗಿರ್ದ ಲಿಂಗ ಉಪಮೆಗೆ ತಂದು ಎರಡೆನ್ನಬಹುದೆ? ಅನುಪಮನು ಉಪಮೆಗೊಳಪಡನು ಉಪಮೆಯುಳ್ಳವರಾದಲ್ಲಿ ನಾನೀನೆಂಬ ಭೇದ, ಭೇದಾ ಭೇದವೂ ಅದೆ. ನಾನೀನೆಂಬುದಕ್ಕೆಡೆಗೊಡದ ಘನನು. ತೆರೆಹಿಲ್ಲದ ಘನನಾಗಿರುವಾಗ ಅಲ್ಲಿ ನಾನೀನೆಂಬ ಭೇದ ಅಂದು ಇಲ್ಲ ಇಂದೂ ಇಲ್ಲ. ಏಕೆಂದರೆ ಸಾಲೋಕ್ಯನಲ್ಲ, ಸಾಮೀಪ್ಯನಲ್ಲ, ಸಾಯುಜ್ಯನಲ್ಲ ಸಾರೂಪ್ಯನಲ್ಲ.

ಶರಣ ಕಾಯನಲ್ಲ, ಅಕಾಯನಲ್ಲ, ಘನವ ಕಂಡು ಮನ ಅವಗ್ರಾಹಕವಾದ ಶರಣ. ಕಂಡು ಕಂಡು ಮಹಾಘನನಾದ ಶರಣ, ತಲ್ಲೀಯವಾದ ಶರಣ ತದುಗತ ಶಬ್ದಮುಗ್ಧವಾಗಿಹ ಶರಣನನ್ನು ಅದಾವ ಭಾಷೆಯಿಂದ ವರ್ಣಿಸುವುದು, ನಿತ್ಯ ನಿರಂಜನ ತಾನೆಂದರಿದ ಶರಣ ರಂಜನೆಗೊಳಪಡುವದೆಂತು ?

ಹೇಳಬಾದರ ಘನವ ತೋರಲೆಂತೊ? ತೋರಬಾರದ ಘನ ಹೇಳಲೆಂತು? ಗುಹೇಶ್ವರ ಲಿಂಗವೆ ತಾನಾಗಿಹ ಶರಣಂಗೆ ಸಾಲೋಕ್ಯವಾವುದು? ಸಾಮೀಪ್ಯವಾವುದು? ಸಾಯುಜ್ಯವಾವುದು? ಸಾರೂಪ್ಯವಾವುದು? ಕಾಯವಾವುದು? ಅಕಾಯವಾವುದು? ಘನಮಹಿಮಂಗೆ, ಅದಾವ ಕಾಯ, ದೇಹವೆ ಲಿಂಗವಾಗಿಹ ಶರಣಂಗೆ ಅದಾವ ಸ್ವದೇಶ ಪರದೇಶ . ನುಡಿಗೆಡೆಗೊಡದ ಘನಮಹಿಮಂಗೆ ಸಾಲೋಕ್ಯವೆಲ್ಲಿ ಸಾಯುಜ್ಯವೆಲ್ಲಿ ಸಾರೂಪ್ಯವೆಲ್ಲಿ ಸಾಮಿಪ್ಯವೆಲ್ಲಿ? ಇಹವಾವುದು? ಪರವಾವುದು? ಎಲ್ಲಿಯವರೆಗೆ ಕಲ್ಪಿತನಾಗಿಹನು ಅಲ್ಲಿಯವರೆಗೆ ಚತುರ್ವಿಧ ಪದವಿಗಳುಂಟು, ಗುಹೇಶ್ವರ ಲಿಂಗವೆ ತಾನಾಗಿಹ ಶರಣಂಗೆ ಅಚಿಂತ್ಯ ಪದವು ಸ್ವತಃ ಸಿದ್ಧವು ಆದುದರಿಂದ ಕಾಯನಲ್ಲ ಅಕಾಯನಲ್ಲವೆಂದು ಹೇಳಿಹರು.

148

ಬಯಲ ಬೆರಗಿನ ಸುಖದ ಸವಿಯು, ಬೆರಗಲ್ಲದೆ ಕಾಣೆ
ಕಾಣೆನೆಂಬ ನುಡಿಗೆಡೆಯ ಕಾಣೆ ಕುರುಹುಗೆಟ್ಟು
ಬೆರಸಿದೆನೆಂಬ ಬರು ನುಡಿಯ ನುಡಿಗೆ
ನಾಚಿದೆನಯ್ಯ ಗುಹೇಶ್ವರಾ. ॥ 694 ॥

ತಾತ್ಪರ್ಯ : ಬಯಲ ಬೆರಗಿನ ಸುಖದ ಸವಿಯು ಬೆರಗಲ್ಲದ ಕಾಣೆ : ಬಯಲ ಬೆರಗು? ಇದಾವ ಬೆರಗು ? ಇದು ಬಯಲ ಬೆರಗು , ಬಯಲ ಕಂಡರಿದ ಬಯಲ ಬೆರಗು ? ಬಯಲು ಕಂಡು ಬೆರಗಾಯಿತೆ ? ಬಯಲ ಕಾಣಬೇಕಾದಲ್ಲಿ ತಾನು ಏನಾಗಿ ಕಂಡುದು? ಬಯಲು ಕಾಣದುದು ಅದು ಕಂಡುದು ಹೇಗೆ ? ಬಯಲು ಬಯಲ ಕಂಡುದು ಬಯಲು ಬಯಲೆ! ಬಯಲು ಎರಡಾಗಿಲ್ಲ, ಏನೂ ಎನ್ನದ ಬಯಲು ಏನೊಂದಾಗದ ಬಯಲು ಎಂತಿದ್ದುದು ಅಂತೆ ಇದೆ ಚಿಂತೆ ಇಲ್ಲದ ಅನುಭಾವ.

ಆಡಬಾರದ ಬಯಲು, ನೋಡಬಾರದ ಬಯಲು, ನುಡಿಯಲು ಬಾರದ ಬಯಲು ಇದು ನಿರಂತರ ಮೌನ, ಬಯಲೆಂದರೂ ಮೌನ, ಘಟಾಕಾಶವೆಂದರೂ ಮೌನ, ಮಠಾಕಾಶವೆಂದರೂ ಮೌನ, ಮಹಾಕಾಶವೆಂದರೂ ಮೌನವು, ಮೌನವೆಂದರೂ ಮೌನವಾಗಿಹ ಘನವದಾರು ನಿರ್ಣಯಿಸುವುದು?

ಬಯಲು ಬೆರಗಿನ ಸುಖದ ಸವಿಯು, ಬೆರಗಲ್ಲದೆ ಕಾಣೆ. ಬಯಲ ಬೆರಗೆಂಬುದು ನಿಃಶಬ್ದ ಬ್ರಹ್ಮದ ಬೆರಗು. ಇದು ಶಬ್ದ ಬ್ರಹ್ಮವಾಗಿ ನುಡಿಯುವ ನುಡಿಗೆ, ಕಾಣದ ಬೆರಗು ತಾನೆ. ನಿಃಶಬ್ದ ಬ್ರಹ್ಮವಾಗಿ ನಿಂತು ನೋಡಿದವರ ಬೆರಗು.

ತಾ ನಿಃಶಬ್ದ ಬ್ರಹ್ಮವಾಗಿ ನಿಂತು ನೋಡಿದ ಘನವದನೆಂತು ವರ್ಣಿಸುವುದು? ತಾ ನಿಃಶಬ್ದ ಬ್ರಹ್ಮವು ಎಂತಿದ್ದುದು ಅಂತೆ ಅದೆ. ಚಿಂತೆಯಿಲ್ಲದ ಘನಾನುಭವ. ಇದು ತನ್ನನ್ನು ತನ್ನಿಂದ ತಾನೆ ಅರಿದರಿದು, ಅರಿಯದರುವು ಆಗಿಹ ನಿಜದ ಬೆರಗು ಇದನೆಂತು ವರ್ಣಿಸುವುದು.

ತಾ ನಿಃಶಬ್ದ ಬ್ರಹ್ಮವಾಗಿಹ ತನ್ನ ಘನಮಹಿಮವು ತಿಳಿಯದಂತಾಗಿ ಬಹು ಆಯಾಸವಾದುದು. ತನ್ನ ತಿಳಿಯಲು ಶ್ರೀಗುರು ಸನ್ನಿಧಿ ಸೇರಿದುದು. ಅಲ್ಲಿ ಮಹಾವ್ಯಾಕಂಗಳ ಶ್ರವಣ ಮಾಡಿದುದು, ಮಾಡಿದುದನ್ನೆ ಮನವು ಮನನ ಮಾಡಿತು, ನಿಧಿಧ್ಯಾಸ ಮಾಡಿತು. ಏನು ಸಾಧನೆಯ ಮಾಡಿ ಸಾಧಿಸಿದರೂ ಶಬ್ದ ಬ್ರಹ್ಮವಾಯಿತಲ್ಲದೆ ನಿಃಶಬ್ದ ಬ್ರಹ್ಮವು ಸಿದ್ಧವಾಗದ್ದರಿಂದ ತನ್ನಸ್ವಮಹಿಮೆ ತಾ ಕಾಣದಂತಾದುದು.

ಶಬ್ದ ಬ್ರಹ್ಮವೆಂಬುದು ಕಲ್ಪಿತ ಪುರುಷ, ಈ ಕಲ್ಪಿತ ಪುರುಷ ನಿಃಶಬ್ದ ಬ್ರಹ್ಮವಾಗಲು ಬಹು ಸಾಹಸಮಾಡಿ ಸಾಧಿಸಿದರೂ, ನಿಃಶಬ್ದವೇದಿ ಆಗದುದು ಕಂಡರಿದು ತನ್ನಿಂದ ತಾನೆ ಅರಿದರಿದು ನೋಡಲು ನಿಃಶಬ್ದ ಬ್ರಹ್ಮವು ತಾನೆ . ಇದು ತನ್ನಯ ಅರುವೆಂಬುದು ಜಾಗ್ರತವಾಗಿ ಬೆರಗಾಯಿತ್ತು ಮಹಾದಾಶ್ಚರ್ಯವಾಯಿತ್ತು .

ನಿಃಶಬ್ದ ಬ್ರಹ್ಮವಾಗಿಹ ಘನವು ತಾನೆ, ಇದು ತನ್ನಯ ಘನವು ತನ್ನ ಅರುವು ನುಡಿಗೆಡೆಗೊಡದಿಹ ಘನವಾಗಿರುವುದು ತನ್ನಯ ಸಹಜವು. ಇಲ್ಲಿ ಸಾಧನೆ ಮಾಡಿದುದಿಲ್ಲ ಸಾಧಿಸಿ ನೋಡಿದುದಿಲ್ಲ, ಪೂರ್ವದಲ್ಲಿ ತನ್ನ ಕಳಕೊಂಡುದಿಲ್ಲ. ಈಗ ಲಭ್ಯವಾದುದೆಂಬುದಿಲ್ಲ ಇದು ಎಂತಿದ್ದುದು? ಅಂತೆ ಅದೆ, ಚಿಂತೆ ಇಲ್ಲದನುಭಾವ, ಗುಹೇಶ್ವರ ನೆಂಬುದು ತನ್ನಿಂದ ತನಗೆ ವೇದ್ಯವಾಗುವುಡೆ ಬಯಲ ಬೆರಗಿನ ಸುಖದ ಸವಿಯು ಬೆರಗಿಲ್ಲದೆ ಕಾಣೆ ತಾನೆ ನೋಡಾ.

ಬಯಲ ಬೆರಗು , ಇದು ಸುಖದ ಸವಿ . ನುಡಿದು ಹೇಳುವದದೆಂತು? ತಾನೆ ಬಯಲು ತನ್ನಯ ಬೆರಗು. ತಾನೆ ಸುಖ ತನ್ನದು ಸುಖವೆ, ಸುಖವಾಗಿರುವಲ್ಲಿ ಇದು ಘನಸುಖ. ಸವೆಯದ ಸುಖ, ಬೇಸರವಾಗದ ಸುಖ, ಅಕ್ಷಯ ಸುಖವದು ಸುಖವೆಂದು ನುಡಿಯಲಿಲ್ಲ ನುಡಿದುದು ಸುಳವಾಗಿಲ್ಲ, ಬಯಲೆಂದುದು ಬಯಲಾಗಲಿಲ್ಲ . ಅದಕ್ಕೆ ಬೆರಗೆಂಬುದು ಮುನ್ನಿಲ್ಲ ತಾನೆ ತಾನಾಗಿಹ ಘನವು ತೆರೆಹಿಲ್ಲದ ಘನವು ಅದೇನೂ ಇಲ್ಲದ ನಿಸ್ಸಂಗ ಸುಖವು ಇದು ತನ್ನಿಂದ ತನ್ನ ಅರಿದರಿದವರ ಅರಿಯದರುವು ಘನಕ್ಕೆ ಘನವಾಗಿಹ ತಾನು ಬಯಲೆಂಬುದು ನಿಶಃಬ್ದ ಬ್ರಹ್ಮವು ನಿರಂತರವಾಗಿಹ ಮಂಗಲಮಯವು ಅದು ಅರುವೆನಲಿಲ್ಲ. ಸಚ್ಚಿದಾನಂದವೆನಲಿಲ್ಲ, ನಿತ್ಯನೆನಲಿಲ್ಲ, ಪೂರ್ಣನೆನಲಿಲ್ಲ, ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ ಘನವು . ಅರುವಿಂಗರುವಾಗಿಹ ಘನವು ಏನೆಂದೆನಲಿಲ್ಲದ ಅರುವು, ಇದು ಅರುವಿನ ಬೆರಗು ತನ್ನಯ ಬೆರಗು , ಇಲ್ಲಿ ತಾನು ಬಯಲೆಂಬುದಿಲ್ಲ, ಬಯಲೆ ತಾನಾಗಿ ನಿಂತ ನಿಜವು. ನಿಜವದು ನಿಜವೆನಲಿಲ್ಲ ಮೂಕನ ಮೌನ , ಮೂಕನ ನಿರ್ವಾಣ, ಎಂತಿದ್ದುದು ಅಂತೆ ಅದೆ ಚಿಂತನೆಗೆಡೆಗೊಡದ ನಿಲುವು , ಇದು ಸುಖದ ಸವಿಯು.

ಬಯಲೆಂಬುದು ಏನೆಂದೆನಲಿಲ್ಲದ ಅರುವು. ಇದು ತಾನೆ ಆಗಿಹ ಘನವು ಸುಖದ ಸವಿಯು, ಬಯಲು ಬಯಲಾಗಿಯೆ ನಿಂತಿದೆ ಎಂತಿದ್ದುದು ಅಂತೆಯೆ ಅದೆ ಅದರಲ್ಲಿ ಬದಲಾವಣೆ ಗಿಂಬಿಲ್ಲ ಕಲ್ಪಿತನಿಗವಕಾಶವಿಲ್ಲ ಅಂಗವಿಲ್ಲಾಗಿ ಅನ್ಯಸಂಗವಿಲ್ಲ ಅನ್ಯ ಸಂಗವಿಲ್ಲವಾಗಿ ಮತ್ತೊಂದು ವಿವರಿಸಲಿಲ್ಲಯ್ಯ ಮತ್ತೊಂದು ವಿವರಿಸಲಿಲ್ಲಾಗಿ ನಿಸ್ಸಂಗವಾಯಿತ್ತು ಗುಹೇಶ್ವರಾ. ಆಕಾಶವದು ಘಟಾಕಾಶವೆನ್ನಲಿ, ಮಠಾಕಾಶವೆನ್ನಲಿ ಅದು ಇದ್ದಂತೆ ಇದೆ ಅದಕ್ಕೆ ಅಂಗವಿಲ್ಲಾಗಿ ಆವಾವುದರ ಸಂಗವೆಲ್ಲಿಯದು, ಸಂಗ ಸಂಬಂಧವಿಲ್ಲದಿರುವಲ್ಲಿ ಘಟಾಕಾಶ ಮಠಾಕಾಶ ವೆಂಬುದೆಲ್ಲಿಯದು ಅದು ಎಂತಿದ್ದುದು ಅಂತೆ ಇದೆ. ಕಲ್ಪಿತಕ್ಕೆಡೆಗೊಡದಂತೆ ಹಾಗೆ ಅಂಗನೆನ್ನಲಿ, ಲಿಂಗನೆನ್ನಲಿ ಲಿಂಗಾಂಗ ಸಮರಸವೆನ್ನಲಿ ಸಂಗಿ ಎನ್ನಲಿ ನಿಸ್ಸಂಗಿ

ಎನ್ನಲಿ ಸಮರಸವೆನ್ನಲಿ. ಏನೆ ಎನ್ನಲಿ ತಾನು ಏನೊಂದಾಗದೆ ಎಂತಿದ್ದುದು ಅಂತೆ ಇದೆ. ಚಿಂತೆ ಇಲ್ಲದ ಅನುಭಾವ ಕಂಡುದೆ ಬಯಲ ಬೆರಗು. ಇದು ಸುಖಸ್ವರೂಪವೆಂದರೂ ಎಂತಿದ್ದುದು ಅಂತೆ ಇದೆ. ಜೀವನೆನ್ನಲಿ, ಪರಮನೆನ್ನಲಿ, ಪರಬ್ರಹ್ಮವೆನ್ನಲಿ, ಬದ್ಧನೆನ್ನಲಿ,ಮುಕ್ತನೆನ್ನಲಿ, ಏನೆ ಎನ್ನಲಿ ಎಂತಿದ್ದುದು ಅಂತೆ ಇದೆ. ಚಿಂತೆ ಇಲ್ಲದ ಅನುಭಾವ, ಇದರ ಸುಖವು ಸುಖದ ಸುಖವು ಇದು ಬೆರಗಿಲ್ಲದೆ ಕಾಣೆ ಅಂದಲ್ಲಿ ಇದರ ಸವಿಯ ಬಲ್ಲವಂಗೆ ಬೆರಗಾಗದೆ ಇದರ ಆಳ ನೋಡಲು ಹೋದ ಅರುವಿಂಗೆ ಸುಖದ ಸುಖವೆ ಸವಿಯುತ್ತ , ಸವಿಯುತ್ತ ಸವಿದರೂ ಸವೆಯದಾದುದರಿಂದ ಅಲ್ಲಿ ಬೆರಗಾಗಿದೆ. ಅಲ್ಲಿ ತನ್ನ ಪೂರ್ವದ ಉಪಾಧಿ ಕಾಣದಾಗಿ ಮನ ಭಯಗೊಂಡಿದೆ. ಕಲ್ಪಿತ ಪುರುಷ ಗಾಬರಿಗೊಂಡಿಹನು, ಆರು ತಾನು ಕಲ್ಪಿತ ಪುರುಷನೆಂಬುದ ಮರೆತು ಅಖಂಡ ಸುಖವ ಸವಿಯುವುದರಲ್ಲಿ ತನ್ನ ಪೂರ್ವಸ್ವಭಾವ ಮರೆತು ಹೋದವರಿಗೆ ಬೆರಗಲ್ಲದೆ ಕಾಣೆ ಎಂದು ಹೇಳಿಹರು.

ಕಾಣೆನೆಂಬ ನುಡಿಗೆಡೆಯ ಕಾಣೆ, ಇದು ನಿಃಶಬ್ದ ಬ್ರಹ್ಮವ ತಾನಾಗಿ ನಿಂತ ನಿಜದಿರುವು. ಅರುವು.ಇಲ್ಲಿ ಎಂಜಲ ಮಾತಿಗಿಂಬಿಲ್ಲ, ಶಬ್ದ ಸಂಭ್ರಮದ ಅರುವಿಗಿಂಬಿಲ್ಲ ಮಿಗೆ ಮಿಗೆ ಮೀಸಲವಾಗಿದ್ದವರ ಸ್ವರೂಪ ತನ್ನಿಂದ ತನ್ನ ಕಂಡುದು. ಏಕೆಂದರೆ ಶಬ್ದ ಬ್ರಹ್ಮ ತಾನಾಗಿ ನಿಂತುದು. ಇದು ಪರತತ್ವ ನಿಜ ಸಂಯುಕ್ತರ ರಹಸ್ಯ. ಇಲ್ಲಿ ಮೀಸಲ ಎಂಜಲವಾಗದು ಎಂಜಲು ಮೀಸಲುವಾಗದೆ ಯತಾರ್ಥ ಜ್ಞಾನವು ವೇದ್ಯವಾದುದು. ಲಿಂಗ ಸಕೀಲ ಸಂಯೋಗ ವರ್ಮಸ್ಥಲ ನರಿತವರ ಅರಿವು ಆದುದರಿಂದ ಕಾಣೆನೆಂಬ ಈ ನುಡಿಗೂ ಅವಕಾಶವ ಕಾಣೆ ಎಂದು ಹೇಳಿಹರು.

ನಿಃಶಬ್ದ ಬ್ರಹ್ಮವದು, ಶಬ್ದಕ್ಕೆ ನಿಲುಕದ ಪದ ತನ್ನ ವಚನ ತನಗೆ ಹಗೆಯಾದವರ ಪದ. ತನ್ನಿಂದ ತನ್ನ ಅರಿತವರ ಪದ. ಇದು ತನ್ನಯ ಪದ. ಎಂತಿದ್ದುದು ಅಂತೆ ಇದೆ? ಇದು ಚಿಂತೆ ಇಲ್ಲದ ಅನುಭಾವವದು ತನ್ನಯ ಅರುವು ತಾನೆ ನಿಃಶಬ ಬ್ರಹ್ಮವಾಗಿಪ್ಪ ಇರುವು ಅರಿವು ಅಲ್ಲ, ಬಯಲ ಬೆರಗಿನ ಸುಖದ ಸವಿಯು ಬೆರಗಿಲ್ಲದೆ ಕಾಣೆ ಎಂಬುದು ಇದನೊಂದು ಮಾತಿಂಗೆ ತಂದು ನೋಡಿದಡೆ ಅದಕ್ಕದೆ ಕಿರಿದಾಗಿ ಕಾಣೆನೆಂಬ ನುಡಿಗೆಡೆಯ ಕಾಣೆ ಎಂದು ಎಚ್ಚರಿಸಿಹರು.

ಕುರುಹುಗೆಟ್ಟು ಅರುವ ನೆರೆಯರಿದು ಬೆರಸಿದೆನೆಂಬ ಬರು ನುಡಿಯ ನುಡಿಗೆ ನಾಚಿದೆನಯ್ಯಾ ಗುಹೇಶ್ವರಾ: ಪ್ರಭುದೇವ, ಬಹು ಸಾಧಕರನ್ನು ಅನುಭವಿಗಳನ್ನು ಅರುವರಿಯಲು, ಹೊಳೆದಾಟಲು ಅಂಬಿಗನು ಎಷ್ಟು ಪ್ರಧಾನ ಪುರುಷನೊ ಹಾಗೆ ಕುರುಹ ಕೆಟ್ಟು ಅರುವ ನರಿತಿರುವೆ ವೆನ್ನುವವರಿಗೆ ಯತಾರ್ಥ ತಿಳಿಸುವ ಮಹದರುವು ಆಗಿಹನು, ಇದು ಕಾರಣ ಬಹು ಪುರುಷಾರ್ಥ ಸಾಧಕರಿಗೆ ಅರಿಯದರುವು ಅದು ಕೇವಲ ಬಚ್ಚಬರಿಯ ಅರುವು ಅದರಲ್ಲಿ ಲೀನವಾಗಲು ಕುರುಹು ಕೆಟ್ಟು ಅರುವ ಚೆನ್ನಾಗಿ ಅರಿದು ಅರುವಿನಲ್ಲಿ ಲೀನವಾಗಿಹೆವು ಎಂಬುವವರ ನುಡಿಯ ನುಡಿಗೆ ನಾಚಿದೆನಯ್ಯ ಗುಹೇಶ್ವರ ಎಂದು ಹೇಳಿದುದು. ಬಹು ರಹಸ್ಯವಾದುದು, ಗಹನವಾದುದು ಏಕೆಂದರೆ ಕಲ್ಪತರಿಗೆ ಅಸಾಧ್ಯವು ಅವರು ಕಲ್ಪಿತರಾಗಿ ತನ್ನಯ ನಿಜದರುವು ತನ್ನಿಂದ ತಾನಾಗಿ ನೋಡಿದವರು ವಿರಳ. ಇವರು ಕೋಟಿಗೊಬ್ಬರು ಶಿಕ್ಕುವುದು ವಿರಳ.

ಬಯಲು ಕುರುಹು ಕೆಟ್ಟಾಗ, ಅದು ಬಯಲಾಗುವುದೆ? ಅದರ ಉಪಾಧಿ ಕೆಡದಿದ್ದಲ್ಲಿ ಅದು ಬಯಲಾಗಿರುವದಿಲ್ಲವೆ? ಬಯಲು ಘಟ ಮಠವೆಂಬುಪಾಧಿಯಿದ್ದರೂ, ಅದು ಬಯಲಾಗಿಯೆ ಅದೆ ಅದು ನಷ್ಟವಾದರೂ ಇದ್ದಂತೆ ಇದೆ. ಏಕೆಂದರೆ ಅದರ ಇರುವಿಕೆಯು ಆವಾವಾವುದಕ್ಕೂ ಅಂಟದ ತಟ್ಟದೆ ಮುಟ್ಟದೆ ನಿಸ್ಸಂಗವಾಗಿಹ ಸಹಜತ್ವವು, ಅದು ಎಂತಿದ್ದುದು ಅಂತೆ ಇದೆ. ಚಿಂತೆ ಇಲ್ಲದಂತೆ ಅದೆ, ಅದಕ್ಕೆ ಕುರುಹ ಕೆಡ ಬೇಕೆಂದಲ್ಲಿ ಅರುವ ಚೆನ್ನಾಗಿ ತಿಳಿದು ನೋಡುವುಡೆ ಎಲ್ಲವನ್ನು ಅರಿಯುವ ಘನವು. ಅದನ್ನು

ಅರಿಯುವ ಪರಿಹೇಗೆ? ಅರುವೆಂದರೂ ಅದನ್ನು ಕೂಡ ಅರಿಯುವ ಪರಿಹೇಗೆ? ಅರುವೆಂದರೆ ಅದನ್ನು ಕೂಡ ಅರಿಯುವ ಘನವು ಅದನ್ನು ಅರಿಯುವ ರೀತಿ ಹೇಗೆ? ಅರಿದರುಹಿಸಿ ಕೊಂಬುದಕ್ಕೂ ಮಿಕ್ಕಿ ಮೀರಿ ನಿಂದ ನಿಜವು, ಅದರಲ್ಲಿ ಬೆರಸಿದ ಪರಿ ಆವುದು? ಇದು ಕಾರಣ, ಕಲ್ಪಿತರಾಗಿ ಕುರುಹು ಕೆಟ್ಟು ಅರುವ ನೆರೆಯರಿದು ಬೆರೆಸಿದೆನೆಂಬ ಬಿರು ನುಡಿಯ ನುಡಿಗೆ ನಾಚಿದೆನಯ್ಯ ಗುಹೇಶ್ವರಾ ಎಂದು ಹೇಳಿದ್ದಾರೆ.

ಅಕಲ್ಪಿತನೆ ತಾನಿದ್ದು, ತನ್ನನ್ನು ಕಲ್ಪಿತನಾಗಿ ಕಂಡು, ನುಡಿದ ನುಡಿಯ ನುಡಿಯ ನುಡಿಗೆ ನಾಚಿದೆನಯ್ಯ ಎಂದು ಹೇಳಿದ್ದಾರೆ. ತಾನು ಮುನ್ನ ಮುನ್ನವೆ ನಿರುಪಾಧಿ, ನಿರಾಲಂಬ, ನಿರವಯ, ನಿರಂಜನ, ನಿಜ ಚಿದ್ರೂಪ ಇರುವಲ್ಲಿ ತನಗೆ ಕುರುಹೆಲ್ಲಿ? ಇಲ್ಲದ ಕುರುಹು ತನ್ನೊಳು ಕಲ್ಪಿಸಿ ಕುರುಹು ಗೆಟ್ಟು ಎಂಬ ನುಡಿದ ನುಡಿಯ ನುಡಿಗೆ ನಾಚಿದೆನಯ್ಯ ಎಂದು ಹೇಳಿದ್ದಾರೆ. ಅರಿಯದರುವೆ ತಾನಿದ್ದು, ಅರಿಯುವ ಅರುವೆ ತಾನಾಗಿ, ಅರುವ ಚೆನ್ನಾಗಿ ಅರಿದೆನೆಂಬುದು. ಇದು ಬರುನುಡಿ ವ್ಯರ್ಥನುಡಿ. ಈ ನುಡಿಯ ನುಡಿಗೆ ನಾಚಿದೆನಯ್ಯ ಎಂದು ಹೇಳಿಹರು.

ಬೆರೆಸಿದನೆಂಬುದು ಕೂಡದಗಲದ ಘನವೆ ತಾನಿರುವಲ್ಲಿ ತಾನಾವುದರೋಳ್ ಕೂಡುವುದು ಬಯಲು ಆವುದರೋಳ್ ಕೂಡುವುದು. ಅದು ಬಯಲೆ ಆಗಿರುವಾಗ ಅದು ತನ್ನಿರುವಿನಿಂದ ಅಗಲಿದುದು ಆವಾಗ, ತಾನು ನಿರಂತರ ನಿಃಶಬ್ದ ಬ್ರಹ್ಮವಿರುವಲ್ಲಿ ತಾನು ಆವುದರೋಳ್ ಕೂಡುವುದು, ತನ್ನಿಂದ ತಾನು ಅಗಲಿರುವನೆ? ಅಗಲದಿರುವಲ್ಲಿ ಬೆರಸಿದೆನೆಂಬ ಭಾವ ಏತರದು? ಭಾವಕ್ಕಗಮ್ಯವಾದುದು ಭಾವಕ್ಕೊಳಪಟ್ಟುದೆಂದು? ಭಾವವುಳ್ಳದ್ದಾಗದಿರುವಲ್ಲಿ ಬೆರಸಿದೆನೆಂಬುದು ಭಾವದ ಭ್ರಮೆ. ಈ ಭಾವ ಭ್ರಮಿತರು ಬೆರೆಸಿದೆನೆಂಬ ನುಡಿ ಬರುನುಡಿ ವ್ಯರ್ಥನುಡಿ. ಈ ನುಡಿದ ನುಡಿಯ ನುಡಿಗೆ ನಾಚಿದೆನಯ್ಯ ಗುಹೇಶ್ವರ ಎಂದು ಹೇಳಿದುದು.

149

ಅಟ್ಟಿ ಮುಟ್ಟಿತ್ತು ಮನ, ದೃಷ್ಟಿ ಲಿಂಗದ ಮೇಲೆ,
ತನ್ನ ತಾನರಿದಾತ ತಾನೆ ಮರೆದ,
ಗುಹೇಶ್ವರಾ ಅಲ್ಲಯ್ಯ ನಿಃಶಬ್ದಲಿಂಗದಲ್ಲಿ. ॥ 747 ॥

ತಾತ್ಪರ್ಯ: ಅಟ್ಟಿ ಮುಟ್ಟಿತ್ತು ಮನ, ದೃಷ್ಟಿ ಲಿಂಗದ ಮೇಲೆ ತನ್ನ ತಾನರಿದಾತ ತಾನೆ ಮರೆದ ಗುಹೇಶ್ವರ ಅಲ್ಲಯ್ಯ ನಿಃಶಬ್ದ ಲಿಂಗದಲ್ಲಿ: ಅಟ್ಟಿ ಮುಟ್ಟಿದ ಮನ! ಇದಾರ ಮನ, ಗುಹೇಶ್ವರ ಅಲ್ಲಯ್ಯನ ಮನ ಗುಹೇಶ್ವರನೆಂಬುದನ್ನೆ ಅಲ್ಲಗೆಳೆದ ಅಲ್ಲಯ್ಯನ ಮನ, ನಿಃಶಬ್ದ ಲಿಂಗದಲ್ಲಿ ಲೀಯವಾದ ಮನ, ತದುಗತವಾದ ಮನ! ಇದಕ್ಕೇನನ್ನಬೇಕು, ನುಡಿಯುವ ನುಡಿಗಳೆ ಇಲ್ಲಿ ನಾಚಿ, ನಿಃಶಬ್ದಮುಗ್ಧವಾದುದನ್ನು ಅದನೆಂತು ವರ್ಣಿಸುವದು.

ಗುಹೇಶ್ವರ ಅಲ್ಲಯ್ಯನ ಸಾಹಿತ್ಯ, ನಿಃಶಬ್ದ ಲಿಂಗವ ಅಟ್ಟಿದ ಸಾಹಿತ್ಯ ಮುಟ್ಟಿದ ಸಾಹಿತ್ಯ ದೃಷ್ಟಿ ಲಿಂಗದ ಮೇಲೆ ನೆಟ್ಟ ಸಾಹಿತ್ಯ. ಇದು ಅನುಪಮ ನಿಲುವುಳ್ಳದರಲ್ಲಿ ನಿಂದ ನಿಜ ನಿಲವು ಪೂಜಾಲಿಂಗ ಸಾಹಿತ್ಯವಂತರಿರಬಹುದು, ಅಲ್ಲಯ್ಯನಂಥ ಲಿಂಗ ಸಾಹಿತ್ಯವಂತ ಶಿಕ್ಕುವುದು ವಿರಳ, ಏಕೆಂದರೆ ಲಿಂಗವನ್ನು ಕುರುಹಾಗಿ ಕಂಡವರು ಉಂಟು, ಕುರುಹು ಅಲ್ಲಗಳೆದವರು ಉಂಟು, ಇಷ್ಟಲಿಂಗ ವೆಂದವರು ಉಂಟು, ಪ್ರಾಣಲಿಂಗ, ಭಾವಲಿಂಗ, ಜ್ಞಾನಲಿಂಗವೆಂದವರುಂಟು. ಲಿಂಗ ಲಿಂಗ ಎನ್ನದವರುಂಟೆ? ಲಿಂಗ ಲಿಂಗ ಎನ್ನದೆ ಲಿಂಗವರಿತು ಲಿಂಗವಾಗಿಹ ಘನವಂತ. ಈ ಘನವಂತನ ಸಾಹಿತ್ಯ ಅಪ್ರತಿಮ ಸಾಹಿತ್ಯ ಅಗಮ್ಯ ನಿಲುವಿನಲ್ಲಿ ನಿಂತ ಮೌನ ಸಾಹಿತ್ಯ. ನಿರ್ವಾಣ ಸಾಹಿತ್ಯ. ಅಲ್ಲಿ ನಿರ್ವಾಣವೆಂಬುದನ್ನೆ ಕೆಡಿಸಿ

ನಿರ್ನಾಮ ಮಾಡಿದ ಸಾಹಿತ್ಯ ಇದನೆಂತುಸುರುವುದು.

ಅಟ್ಟಿ ಮುಟ್ಟಿತ್ತು ಮನ, ಏನನ್ನು ಅಟ್ಟಿತ್ತು, ಏನನ್ನು ಮುಟ್ಟಿತ್ತು ? ನಿಃಶಬ್ದ ಲಿಂಗವ ಅಟ್ಟಿದ ಮನ, ನಿಃಶಬ್ದ ಲಿಂಗವ ಮುಟ್ಟಿದ ಮನ ! ಈ ಮನ ಅದಾರಿಗೆ ? ನಿಃಶಬ್ದ ಲಿಂಗದ ಬೆನ್ನು ಹತ್ತಿದ ಮನ ಇದಾರಿಗೆ ? ನಿಃಶಬ್ದ ಲಿಂಗ ಕಂಡು, ಹಿಂಬಾಲಿಸಿದ ಮನ ಇದಾರಿಗೆ ಇದು ನಿಃಶಬ್ದ ಲಿಂಗ ಮುಟ್ಟಿತೆ? ಇದು ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವ ಮುಟ್ಟಿತೆ! ಲಿಂಗಕ್ಕೆ ಕುರುಹು ಇಲ್ಲ ಕೂನವೂ ಇಲ್ಲ. ಲಿಂಗದಲ್ಲಿ ಶಬ್ದದ ಸುಳಿವು ಇಲ್ಲ ನೆನೆಯಲು ಸಂದಿಲ್ಲ, ಭಾವಿಸುವರೆ ನಿರ್ಭಾವದಲ್ಲಿಹ ನಿಜಘನ, ಇದನ್ನು ಅಟ್ಟಿದ ಬಗೆ ಆವುದು? ಮುಟ್ಟಿದ ಬಗೆ ಆವುದು? ಅಟ್ಟಿದುದು ಅಸಾಧ್ಯ. ಮುಟ್ಟಿದುದು ಅಸಾಧ್ಯವೆಂಬೆನೆ? ದೃಷ್ಟಿ ಲಿಂಗದ ಮೇಲೆ . ಇದೆಂಥ ದೃಷ್ಟಿ, ಲಿಂಗದ ಮೇಲೆ ನೆಟ್ಟ ದೃಷ್ಟಿ ಇದನಾರಯ್ಯ ಹೀಗೆ ಎಂದು ವರ್ಣಿಸುವುದು.

ಅವರ್ಣನೀಯ ಲಿಂಗಕ್ಕೆ ಅವರ್ಣನೀಯ ಮನ ಬೆನ್ನು ಹತ್ತಿದುದು ವರ್ಣನೆಯುಳ್ಳ ಮನಕ್ಕೆ ಹೇಗೆ ಗೊತ್ತಾಗಬೇಕು. ಇದು ವೇದ ವೇದಾಂತಗಳಿಗೆ ಅಸಾಧ್ಯವಾದ ಅನುಪಮ ಲಿಂಗಕ್ಕೆ ಬೆನ್ನು ಹತ್ತಿದ ಮನವು. ಇದಕ್ಕೆ ವೇದ ನೋಡಿದ ಮನವು ನಿರುಪಯೋಗ, ವೇದಾಂತವ ನೋಡಿದ ಮನ ನಿರುಪಯೋಗ . ಏಕೆಂದರೆ ಇವು ಶಬ್ದದಿಂದುಕ್ತವಾದವುಗಳು. ಮಾತಿನ ರಂಜನೆವುಳ್ಳವುಗಳು ಲಕ್ಷಣ ಲಕ್ಷ್ಯವೆಂದು ಹೇಳುವವು ಲಕ್ಷಣ ಲಕ್ಷ್ಯವನ್ನೆ ಅಲಕ್ಷ್ಯ ಮಾಡಿದ ಮನವಾದ್ದರಿಂದ ಇದು ಲಿಂಗವಾಗಿದೆ. ಸಕಲರ ಹೃದಯದೊಳ್ ನ್ಯಸ್ತವಾಗಿಹ ಸ್ವಯಂಜ್ಯೋತಿಯಾಗಿಹುದು, ಗುಹೇಶ್ವರ ಲಿಂಗಕ್ಕೆ ಮಾತಿನ ಮಹಾಂತರ ಮನ ಇಲ್ಲಿ ನಿರುಪಯೋಗವಾಗಿದೆ .

ನಿಃಶಬ್ದ ಲಿಂಗ ತಿಳಿಯುವ ತವಕ ಕಲ್ಪಿತವಲ್ಲದ ಮನಕ್ಕೆ ಶಬ್ದಮುಗ್ಧ ಮನವೆ ನಿಃಶಬ್ದ ಲಿಂಗವ ಅಟ್ಟಿದುದು ಅದುವೆ ಮುಟ್ಟಿದುದು, ನಿಃಶಬ್ದ ಲಿಂಗಕ್ಕೆ ಶಬ್ದದಿಂದ ಅಟ್ಟಲು ಹೋಗದ ಮನ, ಮುಟ್ಟಲು ಹೋಗದ ಮನಕ್ಕೆ ಏನೆನ್ನಬೇಕು. ಮೂಕನ ಸಮಾಧಿ ನಿಲುವು. ಮೂಕ ಕಂಡುದು ಕಂಡವನು ಮೂಕ ಸಮಾಧಿಯಲ್ಲಿದ್ದವನು ಮೂಕ. ಇಲ್ಲಿ ಶಬ್ದವ ಹುಡುಕಬಹುದೆ?

ದೃಷ್ಟಿ ಲಿಂಗದ ಮೇಲೆ : ಲಿಂಗದ ಮೇಲೆ ದೃಷ್ಟಿ? ದೃಷ್ಟಿಯೆ ಲಿಂಗದ ಮೇಲೆ ಇದೆಂಥ ದೃಷ್ಟಿ,ದೃಷ್ಟಿಯು ಮೌನ ಲಿಂಗವು ಮೌನ, ದೃಷ್ಟಿ ಶಬ್ದಮುಗ್ಧವು ಲಿಂಗವು ಶಬ್ದಮುಗ್ಧ ಇದು ನಿಃಶಬ್ದ ಘನಾಲಯ. ಕಂಡುದು ಹೇಳಲಿಲ್ಲ ಹೇಳಿದುದು ಕಂಡಿಯೆ ಇಲ್ಲ. ಲಿಂಗ ಕಂಡದೃಷ್ಟಿ ಅದು ಹೇಳಲಿಲ್ಲ ಹೇಳಿದುದು ಕಂಡಿಯೆ ಇಲ್ಲ ಲಿಂಗ ಕಂಡ ದೃಷ್ಟಿ ಅದು ಹೇಳಲಿಲ್ಲವೆಂದಲ್ಲಿ ಅದು ನಿಃಶಬ್ದ ಲಿಂಗದಲ್ಲಿ ನಿಂತ ನಿಜ ದೃಷ್ಟಿ ಕಂಗಳು ಲಿಂಗ, ಲಿಂಗವಾಗಿ ಲಿಂಗ ನೋಡಿದ ದಿವ್ಯ ದೃಷ್ಟಿ. ಇದು ಲಿಂಗ ನೋಟ . ಈ ನೋಟ ನೋಡದ ನೋಟ ಲಿಂಗನೋಟ, ಲಿಂಗ ನೋಟ ಎರಡೊಂದಾದ ನೋಟ ಶಬ್ದಕ್ಕೆ ತೆರೆಹಿಲ್ಲದುದು ಇದಾರು ನಿರ್ಣಯಿಸುವುದು? ಎರಡಾದಲ್ಲಿ ನಿರ್ಣಯಿಸಬಹುದು, ಒಂದಾದಲ್ಲಿ ನಿರ್ಣಯಿಸಲು ಬರುವುದೆ?

ಲಿಂಗವಾಗಿ ಲಿಂಗವ ನೋಡಿದ ದೃಷ್ಟಿ ಇದಾರಿಗೆ? ಇದು ಪ್ರಭುವಿಂಗೆ ಪ್ರಭುವಿಗೆ ಪ್ರಭುವೆ ಕಾಣುವದು. ಪ್ರಕಾಶಮಯ, ಪ್ರಕಾಶ ದೃಷ್ಟಿ, ಇದರಲ್ಲಿ ಆವುದು ಹಿಂದು? ಆವುದು ಮುಂದು? ಆವುದು ಪೂಜ್ಯ? ಆವುದು ಪೂಜಕ? ಆವುದು ಆದಿ? ಆವುದು ಅನಾದಿ? ಹೇಳಲಿಲ್ಲ ಕೇಳಲಿಲ್ಲ ಕಂಡುದು ಹೇಳಲಿಲ್ಲ ದೃಷ್ಟಿ ಲಿಂಗವ ಕಂಡಿತೆ? ಲಿಂಗ ದೃಷ್ಟಿ ಕಂಡಿತೆ? ದೃಷ್ಟಿ ಲಿಂಗದ ಮೇಲೆಯೆ? ಲಿಂಗದ ಮೇಲೆ ದೃಷ್ಟಿ ಎನಬೇಕೊ? ಇದಾರು ನಿರ್ಣಯಿಸುವುದು?

ಎರಡೊಂದಾದ ಬಳಿಕ ಅರ್ಚನೆ ಹಿಂಗಿತ್ತು. ಎರಡೊಂದಾದ ಬಳಿಕ ಅರ್ಪಿತ ಹಿಂಗಿತ್ತು. ಎರಡೊಂದಾದ ಬಳಿಕ ಆಚಾರ ಹಿಂಗಿತ್ತು. ಎರಡೊಂದಾದ ಬಳಿಕ ಅವಧಾನ ಹಿಂಗಿತ್ತು. ಎರಡೊಂದಾದ

ಬಳಿಕ ಶಬ್ದಕ್ಕೆ ಇಂಬಿಲ್ಲ ರೂಹಿಸಲೆಡೆಯುಂಟೆ ಗುಹೇಶ್ವರಾ.

ಎರಡೊಂದಾದುದ ಅದನೆಂತು ವರ್ಣಿಸುವುದು. ನಿಃಶಬ್ದ ಲಿಂಗ, ನಿಃಶಬ್ದ ಮನ, ಅದನೆಂತು ವರ್ಣಿಸುವುದು, ನಿಃಶಬ್ದ ಲಿಂಗ, ನಿಃಶಬ್ದ ಲಿಂಗದ ಮೇಲೆ ದೃಷ್ಟಿನೆಟ್ಟ ನೋಟವು ನಿಃಶಬ್ದವು ಅದನೆಂತು ವರ್ಣಿಸುವುದು, ಇದು ಕಾರಣ ಗುಹೇಶ್ವರ ಅಲ್ಲಯ್ಯನ ಸಾಹಿತ್ಯ, ಶಬ್ದಕ್ಕೆ ಇಂಬಿಲ್ಲದ ಸಾಹಿತ್ಯ, ಉಪಮಿಸದ ಸಾಹಿತ್ಯ, ಶಬ್ದಮುಗ್ಧ ಸಾಹಿತ್ಯ ಸುಖ ಸವಿಯುವ ಸಾಹಿತ್ಯ. ಸಕ್ಕರೆ ಪರ್ವತ ಎತ್ತ ಕಡಿದರೂ ಸಿಹಿ ನೆಕ್ಕಿದರೂ ಸಿಹಿ, ಸಿಹಿ ಸಿಹಿಯಾಗಿದ್ದ ಪರ್ವತ ಬಾಯಿಯಲ್ಲಿ ಹಾಕಿದರೂ ಸಿಹಿ.

ಅಲ್ಲಯ್ಯನ ಸಾಹಿತ್ಯ ಸುಖ ಸ್ವರೂಪ ಸಾಹಿತ್ಯ. ಸುಖ ಸುಖವಾಗಿದ್ದ ಸಾಹಿತ್ಯ ಸುಖ ಸುಖವೆಂದು ನುಡಿಗೊಳಪಡಿಸಿ ನೋಡುವರ ಸಾಹಿತ್ಯವಲ್ಲ. ಸುಖ ಸ್ವರೂಪವೆ ತಾನಾಗಿಹ ಸಾಹಿತ್ಯ. ಸುಖ ಸವೆಯುವವದರಲ್ಲಿ ಶಬ್ದಮುಗ್ಧವಾಗಿಹರ ಸಾಹಿತ್ಯ ಎರಡೊಂದಾದ ಸಾಹಿತ್ಯ ಅವರ್ಣೀಯ ಸಾಹಿತ್ಯವೆಂದಿಹರು.

ತನ್ನ ತಾನರಿದಾತ ತಾನೆ ಮರೆದ ಗುಹೇಶ್ವರ ಅಲ್ಲಯ್ಯ ನಿಃಶಬ್ದ ಲಿಂಗದಲ್ಲಿ : ಪ್ರಭು ನಿಃಶಬ್ದ ಲಿಂಗದಲ್ಲಿ ಲೀಯವಾದ ಘನವಂತ ತನ್ನ ತಾನರಿದಾತ. ಈ ಮಹಾಂತ ಗುಹೇಶ್ವರನೆಂಬುದನ್ನೆ ಮರೆದಾತ. ತಾನು ಅಲ್ಲಯ್ಯನೆಂಬುದನ್ನೆ ಮರೆದಾತ. ನಿಃಶಬ್ದ ಲಿಂಗವೆ ತಾನಾದುದರಿಂದ ತನ್ನ ತಾನರಿದಾತ. ಇದು ತನ್ನಿಂದ ತನ್ನ ಅರಿತವರ ಘನಕ್ಕೆ ಘನವು.

ಬಹು ಜನ ಅಧ್ಯಾತ್ಮ ಸಾಧನೆಯಲ್ಲಿ ನಿರತರಾಗಿ ತನ್ನತಾನರಿತವರು ಇರಬಹುದು. ಅಲ್ಲಯ್ಯನಂಥ ಸ್ವಮಹಿಮ ಶಿಕ್ಕುವದು ವಿರಳ. ಅರಿತಮೇಲೆ, ತಾನಾಗದುದೆಲ್ಲವನ್ನು ಮರೆಯಬೇಕು. ಅರಿತೆ ಅರಿಯೆನೆಂಬ ದ್ವಂದ್ವವನ್ನೆ ಮರೆಯಬೇಕು. ಮರೆತ ಚಿನ್ಹವೆಂದಲ್ಲಿ ತನ್ನ ಇಷ್ಟದೇವನಾಗಿಹ ಗುರು ಘನನನ್ನು ಮರೆಯಬೇಕು. ಸಕಲವನ್ನು ಅಲ್ಲಗಳೆದ ನೇತಾತ್ಮ ದೃಷ್ಟಿಯ ಮರೆಯಬೇಕು. ಇದು ತನ್ನ ತಾನರಿತವರ ಚಿನ್ಹ. ಇದು ನಿಃಶಬ್ದ ಲಿಂಗದಲ್ಲಿ ತದುಗತವಾದ ಚಿನ್ಹ. ಪ್ರಭುವೆ ತಾನಾಗಿಹ ಚಿನ್ಹ. ಪ್ರಭು ಎಂದಲ್ಲಿ ನುಡಿಗೆಡೆಗೊಡದ ಘನವಾಗಿಹ ಚಿನ್ಹ. ತನ್ನ ತಾನರಿದು ತಾನೆ ಮರೆದುದು ವೇದ್ಯ, ದೃಷ್ಟಿ ಲಿಂಗದ ಮೇಲೆ ನಟ್ಟುದುದು ವೇದ್ಯ. ತನ್ನತಾನರಿದು ತಾನೆ ಮರೆದುದು ಸಹಜ ವಿದಿತವು. ಗುಹೇಶ್ವರ ಅಲ್ಲಯ್ಯ ನಿಃಶಬ್ದ ಲಿಂಗದಲ್ಲಿ ಎಂದು ಬಿತ್ತರಿಸಿದಂತೆ ನುಡಿದು ಹೇಳುವವರಿಗೆ ಅದೆಂತು ಸಾಧ್ಯ.

ಇದು ಮೂಕ ಸಕ್ಕರೆ ತಿಂದ ಅನುಭವ. ಮೂಕನಿಗೆ ವೇದ್ಯವಲ್ಲದೆ ಅನ್ಯರಿಗೆ ಅದೆಂತು ಸಾಧ್ಯ. ಹಾಗೆ ನಿಃಶಬ್ದ ಲಿಂಗದಲ್ಲಿ ಲೀಯವಾದವಂಗೆ ನುಡಿದು ಹೇಳಲಿಲ್ಲ, ನಡೆದು ತೋರಿಸಲಿಲ್ಲ. ಎಂತಿದ್ದುದು ಅಂತೆ ಅದೆ ಚಿಂತೆಯಿಲ್ಲದ ಅನುಭಾವ.

150

ಕಾಯ ಗುಣ ಕೆಟ್ಟು ಮತ್ತೆ ಅರ್ಚನೆ ಹಿಂಗಿತ್ತು.
ಪ್ರಾಣ ಗುಣ ಕೆಟ್ಟು ಮತ್ತೆ ಅರ್ಪಿತ ಹಿಂಗಿತ್ತು.
ಭಾವ ಗುಣ ಕೆಟ್ಟು ಮತ್ತೆ ಉಭಯ ಜಂಜಡ ಹಿಂಗಿತ್ತು.
ಇದು ಕಾರಣ ನಮ್ಮ ಗುಹೇಶ್ವರನ ಶರಣರು
ಲಿಂಗ ಭೋಗೋಪ ಭೋಗವೆಂಬ ಖಂಡಿತ ಬುದ್ಧಿಯ ಮೀರಿ
ಅಖಂಡಾದ್ವೈತ ಬ್ರಹ್ಮದಲ್ಲಿ ತಲ್ಲೀಯವಾದರು. ॥ 1076 ॥

ತಾತ್ಪರ್ಯ: ಕಾಯ ಗುಣ ಕೆಟ್ಟು ಮತ್ತೆ ಅರ್ಚನೆ ಹಿಂಗಿತ್ತು, ಪ್ರಾಣ ಗುಣ ಕೆಟ್ಟು ಮತ್ತೆ ಅರ್ಪಿತ

ಹಿಂಗಿತ್ತು,ಭಾವ ಗುಣ ಕೆಟ್ಟು ಉಭಯ ಜಂಜಡ ಹಿಂಗಿತ್ತು : ಪೂಜಾ ಲಿಂಗವಂತರು ಎಷ್ಟೋ ದಿನಗಳಿಂದಲೂ ವರ್ಷಗಳಿಂದಲೂ ಲಿಂಗಾರ್ಚಕರಾಗಿಹರು. ಇವರ ಅರ್ಚನೆ ಹಿಂಗಲೊಲ್ಲದು. ಶ್ರೀಗುರು ಕರುಣಿಸಿದ ಲಿಂಗಘನವು, ಕರಕಮಲದಲ್ಲಿ ಪ್ರಜ್ವಲಿಸಿದಲ್ಲಿ ಕಾಯಗುಣ ಕೆಡುವದಲ್ಲದೆ ಅರ್ಚನೆ ಹಿಂಗಬೇಕು.

ಸೂರ್ಯೋದಯವಾದ ಮೇಲೆ ಕತ್ತಲೆ ಕಾಣಬಹುದೆ? ಕೈಯಲ್ಲಿ ಜ್ಯೋತಿ ಹಿಡಿದಲ್ಲಿ ಕತ್ತಲೆ ಕಾಣುವದೆ? ಇದು ಆಶ್ಚರ್ಯ. ಜ್ಯೋತಿಯ ಕಾಣುವುದು, ಇತ್ತ ಕತ್ತಲೆ ಕಾಣುವುದು ಇದೆಂಥ ಆಶ್ಚರ್ಯ? ಲಿಂಗವು ಕಾಣುವುದು, ಇತ್ತ ಕಾಯಗುಣ ಕಾಣುವುದು ಹಾಗೂ ಲಿಂಗಾರ್ಚನೆಯು ಕಾಣುವುದು ಇದೆಂಥ ಸೋಜಿಗ.

ಅಪರಮಿತ ಕತ್ತಲೆಯೊಳಗೆ ಪರಮಿತಿಯ ಬೆಳಗುವನಿಕ್ಕದವರಾರೊ? ಕತ್ತಲೆಯು ಇದೆ, ಬೆಳಕು ಇದೆ ,ಒಂದಕ್ಕೊಂದು ಅಂಜವು. ಇದೇನು ಚೋದ್ಯವೊ? ಎಂದು ಪ್ರಭುದೇವ ಬಿತ್ತರಿಸಿದಂತೆ ಲಿಂಗಾರ್ಚಕರಿಗೆ ಲಿಂಗಯ್ಯನನ್ನು ತತ್ವದೃಷ್ಠಿಯಿಂದ ತಿಳಿಯದ ಕಾರಣ, ಇದು ಪರಿಮಿತಿಯ ಬೆಳಗುಳ್ಳದ್ದಾಗಿದೆ. ಇದು ಸದ್ಗುರು ದೇವನ ಕರುಣೆಯಿಂದ ಲಭ್ಯವಾದುದಾಗಲಿಲ್ಲ. ಶ್ರೀಗುರು ಅನುಪಮನು, ಅವನ ಕರುಣೆ ಅನುಪಮ ಅವನಿಂದ ದೊರೆತುದು, ವೇದ ವೇದಾಂತಗಳಿಗೆ ಅಸಾಧ್ಯವಾದ ಅನುಪಮ ಲಿಂಗವು. ಆದರ ರಹಸ್ಯವು ತಿಳಿಯದ್ದರಿಂದ ಉಪಮೆಗೊಳಪಟ್ಟ ಬೆಳಗುಳ್ಳದ್ದಾಗಿರುವದು ಇದು ಕಾರಣ ಇತ್ತ ಕತ್ತಲೂ ಕಾಣುತ್ತಾನೆ. ಇತ್ತ ಬೆಳಕೂ ಕಾಣುತ್ತಾನೆ. ಇಲ್ಲದ ಕತ್ತಲು ಇಲ್ಲವಾಗಲಿಲ್ಲ ಇದ್ದ ಸ್ವಪ್ರಕಾಶ ಪ್ರಜ್ವಲಿಸಲಿಲ್ಲವಾದ್ದರಿಂದ ಕಾಯ ಗುಣ ಕೆಡಲಿಲ್ಲ. ಅರ್ಚನೆ ಹಿಂಗಲಿಲ್ಲ.

ಪ್ರಭುದೇವ ಕಾಯಗುಣ ಕೆಟ್ಟು ಮತ್ತೆ ಅರ್ಚನೆ ಹಿಂಗಿತ್ತು ಎಂದು ಬಿತ್ತರಿಸಿದುದು ಬಹು ಗಹನಾರ್ಥವಾಗಿದೆ. ಏಕೆಂದರೆ ಕಾಯ ಗುಣ ಕೆಡುವುದಲ್ಲದೆ ಅರ್ಚನೆ ಹಿಂಗುವದೆಂದಲ್ಲಿ ಅದು ಶ್ರೀಗುರು ವೇದ ವೇದಾಂತಗಳಿಗೆ ಅಸಾಧ್ಯವಾದ ಅನುಪಮ ಲಿಂಗ ತಂದು ಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ ವಾಙ್ಮನಕ್ಕಗೋಚರವಾದ ಅಖಂಡಿತ ಲಿಂಗವ ತಂದು ಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ ಇನ್ನು ನಾನು ಬದುಕಿದೆನು. ನಾ ಬಯಸುವ ಬಯಕೆ ಕೈಸಾರಿ ತಿಂದು ಕೂಡಲಸಂಗಮದೇವಯ್ಯ ಎಂದು ಬಿತ್ತರಿಸಿದುದು ನೋಡುವುಡೆ ಇದು ಸಕಲರ ಹೃದಯದಲ್ಲಿ ನ್ಯಸ್ತವಾಗಿಹ ಘನವು(ಲಿಂಗ) ಇದು ಪೂಜೆಗೆ ಬಾರದ ಲಿಂಗ ಇದರ ಮಂತ್ರ ಕಿವಿಗೆ ಕೇಳದ ಮಂತ್ರ. ಎನ್ನಂಗವನ್ನು ಶ್ರೀಗುರು ಮಂತ್ರ ಮಾಡಿದುದು ಇದು ಲಿಂಗವರಿದು ನೋಡುವವರಿಗಿದರ ಯತಾರ್ಥವು.

ಕಾಯ ಗುಣ ಕೆಡಬೇಕಾದರೆ,ಅರ್ಚನೆ ಹಿಂಗಬೇಕಾದಲ್ಲಿ ಗುರು ಕರುಣಿಸಿದ ಲಿಂಗ,ಅರುವ ಅರಿಯ ಹೇಳಿದ ಲಿಂಗ, ಅದು ವೇದ ವೇದಾಂತಗಳಿಗೆ ಅಸಾಧ್ಯವಾದ ಅನುಪಮ ಲಿಂಗದ ಸಂಜ್ಞೆಯುಳ್ಳದ್ದು. ಇದು ಭಕ್ತರ ಹೃದಯದಲ್ಲಿ ನ್ಯಸ್ತವಾಗಿಹ ಅಚಿಂತ್ಯ ನಿಧಿಯು. ಅನುಪಮ ಜ್ಞಾನಸ್ವರೂಪವಾದುದು, ಇದ್ದಕ್ಕಿದ್ದಂತೆ ಪ್ರಜ್ವಲಿಸಬೇಕು ಆಗ ಕಾಯ ಗುಣ ಕೆಡುತ್ತದೆ.ಅರ್ಚನೆ ಹಿಂಗುತ್ತದೆ, ಜ್ಞಾನದಂತೆ ಜ್ಞೇಯಾಕಾರವಾಗುತ್ತದೆ ಸದ್ಗುರು ಕರುಣಿಸಿದ ಲಿಂಗಕ್ಕೆ ಬಸವಣ್ಣನವರು(ಇಷ್ಟ) ಪೂಜಾಲಿಂಗವೆನಲಿಲ್ಲ, ಪ್ರಾಣಲಿಂಗ ವೆನಲಿಲ್ಲ, ಭಾವಲಿಂಗ ವೆನಲಿಲ್ಲ, ಜ್ಞಾನಲಿಂಗವೆನಲಿಲ್ಲ. ಶ್ರೀಗುರು ನಿಃಶಬ್ದ ಬ್ರಹ್ಮವಾಗಿ, ನಿಃಶಬ್ದ ಬ್ರಹ್ಮವ ಕರುಣಿಸಿದ ಮೌನ ಮುದ್ರಿತ ಕರುಣಿಸಿದ, ಈ ಮೌನ ಮುದ್ರಿತವುಳ್ಳ ಸಂಜ್ಞೆಗೆ ಏನೆನ್ನಬೇಕು. ಅದು ಶೃತಿಗಗೋಚರವಾಗಿ ಬೆಳಗಿತ್ತು. ಶೃತಿಯು ಹೆತ್ತರಿವು ಆಯಿತು. ತಾನು ಶೃತಿಗಳಿಗೆಲ್ಲ ಮಿಕ್ಕಿ ಮೀರಿ ನಿಂತು ಬೆಳಗಿತ್ತು. ಸ್ವಯಂಜ್ಯೋತಿಯಾದುದು ಏನೆಂಬೇನೆಂಬೆ ವರ್ಣಿಸುವರೆ ವರ್ಣಾತೀತವಾಯಿತ್ತು. ಇದನ್ನು ಕಂಡರಿದ ಶರಣರು ನಿಃಶಬ್ದ ಲಿಂಗದಲ್ಲಿ ತಲ್ಲೀಯವಾದರು. ತದುಗತವಾಗಿ ಶಬ್ದ ಮುಗ್ಧರಾದ ಮಹಾಂತರೆಂದರೆ ಪ್ರಭುದೇವ, ಚೆನ್ನಬಸವಣ್ಣ, ಬಸವಣ್ಣ, ಅಕ್ಕಮಹಾದೇವಿ, ನೀಲಾಂಬಿಕೆ, ಮಡಿವಾಳ

ಮಾಚಿ ತಂದೆ ಸಿದ್ಧರಾಮ ಶಿವಯೋಗಿ. ಇನ್ನೂ ಅನೇಕ ಶರಣ ಶರಣೆಯರದು ಕಾಯಗುಣ ಕೆಟ್ಟುದಲ್ಲದೆ ಅರ್ಚನೆ ಹಿಂಗಿತ್ತು ಎಂದು ಹೇಳಿಹರು.

ಬಹು ವೀರಶೈವರು ಲಿಂಗಪ್ರೇಮಿಗಳು ಇದ್ದುದು ನಿಜ. ನಿಷ್ಠಾವಂತರಾಗಿ ಲಿಂಗಾರ್ಚಕರಾಗಿ ಲಿಂಗಪೂಜಿಸಿದವರು ಉಂಟು. ಲಿಂಗ ಪೂಜಿಸಿದ ಮೇಲೆ ಅಂಗ ಗುಣ ಕೆಡಬೇಕು. ಲಿಂಗಜ್ಞಾನ ಲಿಂಗದರುವು ಅಳವಡಬೇಕು. ಆಗ ಕಾಯದ ಗುಣದಭಿಲಾಷೆಯು ಕೆಡುವುದಲ್ಲದೆ, ಅರ್ಚನೆಯ ಅಭಿಲಾಷೆಯು ಸ್ವಭಾವತಃ ಅಡಗುವುದು. ಭಕ್ತನ ಹೃದಯ ಸೀಮಾತೀತ ಹೃದಯವಾಗಬೇಕು. ಅರು ಹೃದಯವಾಗಬೇಕು. ಅರುವ ಅರಿದರಿದು ನೋಡುವ ಶ್ರೀಗುರುವಿನ ಕರುಣಾ ಹೃದಯವಾಗಬೇಕು. ಆಗ ಲಿಂಗ ಪೂಜ್ಯ ತಾನು ಪೂಜಕನೆಂಬ ಭೇದ ಜ್ಞಾನ ಭೇದ ಭಾವ, ಭೇದದೃಷ್ಠಿ, ಸ್ವಭಾವತಃ ನಿರಸನವಾಗುತ್ತದೆ. ಆಗ ಭಕ್ತನಿಗೂ ಕಾಯವಿಲ್ಲ, ಲಿಂಗಕ್ಕೂ ತನುವಿಲ್ಲ. ಲಿಂಗವು ಅನುಪಮ, ಭಕ್ತನು ಅನುಪಮ. ಈರ್ವರದು ಒಂದಾದ ನಿಲುವುಳ್ಳದ್ದೆಂದು ತನ್ನಿಂದ ತನಗದು ಸ್ವತಃ ಸಿದ್ಧವಾಗಿ ಅಲ್ಲಿ ಕಾಯಗುಣ ಕೆಟ್ಟು ಮತ್ತೆ ಅರ್ಚನೆ ಹಿಂಗಿದೆ ಎಂದು ಹೇಳಿಹರು.

ಪ್ರಾಣಗುಣ ಕೆಟ್ಟು ಅರ್ಪಿತ ಹಿಂಗಿತ್ತು. ಪ್ರಾಣ ಗುಣ ಕೆಡಲು, ಕೆಲಬರು ಹಠಯೋಗದಿಂದ ಪ್ರಾಣಾಯಾಮವ ಸಾಧಿಸಿ ಕೇವಲ ಕುಂಭಕ ಬಲಿಸಿ ಖೇಚರಿಮುದ್ರೆ ಅಥವಾ ಲಂಬಕಾಯೋಗವ ಸಿದ್ಧಿಸಿಕೊಂಡು, ಹಸಿವು ಹಿಂಗಿಸಿಕೊಂಡರು. ಇದು ಕಾರಣ ಪ್ರಾಣ ಗುಣ ಕೆಟ್ಟದು ಎಂದು ಹೇಳುವವರುಂಟು. ಅಲ್ಲಿ ರುಚಿ ಕೆಟ್ಟಿದೆ ಅದಕ್ಕಾಗಿ ಅರ್ಪಿತ ಹಿಂಗಿದೆ ಎನ್ನುವವರು ಉಂಟು. ಇದು ಹಠಯೋಗದಿಂದಾದ ಕಾರ್ಯ. ಇದು ಪ್ರಾಣ ನಿರೋಧದ ಕಾರ್ಯ. ಪ್ರಾಣವೆಂಬ ಭಾವರೂಪ ಗುಣ ಕೆಟ್ಟಿರುವುದಿಲ್ಲ ಅಲ್ಲಿ ಅರ್ಪಿತ ಹಿಂಗಿರುವುದಿಲ್ಲ ಅರ್ಪಿತ ಹಿಂಗಬೇಕಾದಲ್ಲಿ ತೃಪ್ತರೂಪ ತೃಪ್ತಿಯಾದಲ್ಲಿ ಅದು ಹಿಂಗುವದು, ಅಂತಾದ ಮಹಾಘನ ಲಿಂಗ, ಗುರು ಕರುಣಿಸಿದ ಲಿಂಗ ಪ್ರಾಣಕ್ಕೆ ಭೇಧಿಸಿದಲ್ಲಿ, ನಾದ ಬಿಂದು ಕಳೆಗಳಿಗಭೇದ್ಯವಾದ ಅಚಲಿತ ಲಿಂಗವಾಗುವದು. ಆಗ ಪ್ರಾಣದ ತನ್ನ ಪೂರ್ವಾಶ್ರಯವ ಕೆಡವುದು ಅರ್ಪಿತ ಹಿಂಗುವುದು.

ಪ್ರಾಣ ಗುಣವೆಂಬುದು ಇಲ್ಲದ ಪ್ರಾಣವುಂಟಾಗಿ ಹುಟ್ಟಿದವನಾಗಿ ಬದುಕಿದವನಾಗಿ ಸಾವುಳ್ಳವನಾಗಿಹನು. ಈ ಗುಣ ಕೆಡಲು ಪ್ರಾಣಾಯಾಮ ಬಲದಿಂದ ಕೇವಲ, ಕುಂಭಕ ಯೋಗದಲ್ಲಿದ್ದು ಪ್ರಾಣ ಬ್ರಹ್ಮರಂಧ್ರದಲ್ಲಿಟ್ಟರೂ, ತಮ್ಮ ಭಾವರೂಪ ಭ್ರಮವು ನಷ್ಟವಾಗಿರುವದಿಲ್ಲ. ಏಕೆಂದರೆ ತಾನು ಕಂಭಕ ಯೋಗವ ಸಿದ್ಧಿಸಿ, ಬ್ರಹ್ಮರಂಧ್ರ, ಸಹಸ್ರದಳ ಕಮಲದಲ್ಲಿದ್ದರೂ, ನಾನು ಹುಟ್ಟಿದವನು, ಇದ್ದವನು, ಸಾಯುವವನು, ಇದನ್ನು ಕಳೆಯಲು ಈ ಕ್ರಮವ ಸಾಧಿಸಿಹೆನೆಂಬ ವಿಪರೀತ ಭ್ರಮ ಈ ಅಭ್ಯಾಸ ನಷ್ಟ ಮಾಡಲಿಲ್ಲ. ಇಲ್ಲದ ತಾನು ಅಚಲಿತ ಲಿಂಗನೆಂಬ ಅರಿವು ಇದು ಉದಯಿಸಲಿಲ್ಲ. ಇದು ಕಾರಣ ಪ್ರಾಣ ಗುಣ ಕೆಟ್ಟು ಅರ್ಪಿತ ಹಿಂಗಬೇಕಾದಲ್ಲಿ ನಾದ ಬಿಂದು ಕಳೆಗಳಿಗಭೇದ್ಯವಾಗಿಹ ಅರುವು. ಈ ಅರುವೆ ಅಚಲಿತ ಲಿಂಗ ಈ ತತ್ವದ ಅರಿವು ಹೃದಯದಲ್ಲಿ ಬೆಳಗುವುಡೆ ಆಗ ಪ್ರಾಣವೆಂಬುದು ಭ್ರಮ, ಪ್ರಾಣ ಗುಣವು ಭ್ರಮ. ಇಲ್ಲದ ಪ್ರಾಣವೂ ಇಲ್ಲ, ಪ್ರಾಣವಿಲ್ಲದಿರುವಲ್ಲಿ ಪ್ರಾಣ ಗುಣವೂ ಇಲ್ಲ. ಪ್ರಾಣ ಗುಣ ವಿಲ್ಲದಿರುವಲ್ಲಿ ಅದರ ಗುಣಗಳಾಗಿಹ ಪ್ರಾಣ ಗುಣವು ಇಲ್ಲ. ಪ್ರಾಣಗುಣ ವಿಲ್ಲದಿರುವಲ್ಲಿ ಅದರ ಗುಣಗಳಾಗಿಹ ಜನನ ಮರಣಂಗಳು ಇಲ್ಲ. ಹಸಿವು ತೃಷೆಗಳು ಇಲ್ಲ, ಕೇವಲ ಪರಮಾನಂದವೆ ಪ್ರಜ್ವಲಿಸುವಲ್ಲಿ ಅಲ್ಲಿ ಅರ್ಪಿಸಿಕೊಳ್ಳುವ ದೇವನಿಲ್ಲ. ಅರ್ಪಿಸುವ ಭಕ್ತನಿಲ್ಲ ಎರಡೊಂದಾದ ಬಳಿಕ ಅರ್ಪಿತ ಹಿಂಗಿತ್ತು. ಇಲ್ಲಿ ಭಕ್ತ ಲಿಂಗ ಒಂದಾದುದು ಜಂಗಮ ಭಕ್ತ ಒಂದಾದುದು ಗುರು ಶಿಷ್ಯ ಒಂದಾದುದು ಇಲ್ಲಿ ಅಚಲಿತ ಲಿಂಗವೆ ಪ್ರಜ್ವಲಿಸುವಲ್ಲಿ

ಪ್ರಾಣಗುಣ ಕೆಟ್ಟು ಅರ್ಪಿತ ಹಿಂಗಿತ್ತು ಎಂದು ಹೇಳಿಹರು.

ಭಾವ ಗುಣ ಕೆಟ್ಟು ಉಭಯ ಜಂಜಡ ಹಿಂಗಿತ್ತು :ಭಾವಗುಣ ಕೆಡಬೇಕಾದರೆ ಭಾವಕ್ಕಗಮ್ಯವಾಗಿಹ ಘನಲಿಂಗ ಭಾವಕ್ಕೆ ಛೇಧಿಸಲಿಲ್ಲ, ಭಾವ ಲಿಂಗಮಯವಾಗುವುದು. ಭಾವಲಿಂಗಮಯವಾದಲ್ಲಿ ಭರಿತ ಭಾವವು. ಇದು ಅಖಂಡಿತ ಘನ ಪೂರ್ಣವಪ್ಪ ಪರಮಜ್ಞಾನಿ ರೂಪಿ ತನ್ನ ಸ್ವರೂಪವಾಗಿಹ ತನ್ನಯ ಭಾವವಾದ ಮೇಲೆ ಕೊಡುವ ದೇವನಿಲ್ಲ ಕೊಳ್ಳುವ ಭಕ್ತನಿಲ್ಲ. ದೇವನು ಪೂಜಿಸಿ ಕೊಳ್ಳುವನಾಗಿಲ್ಲ ಭಕ್ತನು ಪೂಜಿಸುವವನಾಗಲಿಲ್ಲ. ದೇವನು ಭವಿಯೇ! ಭಕ್ತನು ಭವಿಯೆ! ಈರ್ವರದು ಒಂದಾದ ನಿಲವು. ಉಪಮಿಸಲಳವಲ್ಲ ಇದು ಭಾವಕ್ಕಗಮ್ಯವಾದ ತತ್ವವದು. ಪರತತ್ವ ತನ್ನ ಹೃದಯದೊಳ್ ಜಾಗ್ರತೆವಾಗುವಡೆ ಭಾವಗುಣವಿಲ್ಲ ಜಂಜಡವಿಲ್ಲ. ಭಾವಗುಣವೆಂಬುದು ಭ್ರಮರೂಪ ಗುಣ. ದೇವನನ್ನು ತಿಳಿಯದ ಭಾವ, ತನ್ನನ್ನು ತಿಳಿಯದ ಭಾವ. ಭಕ್ತನೆಂದರೂ ತಿಳಿಯದ ಭಾವ, ಲಿಂಗ, ಜಂಗಮ, ಗುರುವೆಂದರು ತಿಳಿಯದುದು ಶಿಷ್ಯನೆಂದರೂ ತಿಳಿಯದುದು ತಿಳಿಯದಂತೆ ಭಾವಿಸುವದು. ಇವರು ಭಾವಕ್ಕಗಮ್ಯವಾದ ಮಹಾಘನ ಲಿಂಗವರಿಯದ್ದರಿಂದ ಗುರು ಲಿಂಗ ಜಂಗವೆಂಬವು ಸಾಕಾರ ಮೂರ್ತಿಗಳಾಗಿ ಪೂಜಿಸಿಕೊಳ್ಳುವವುಗಳಾಗಿವೆ. ಭಕ್ತರಿಗೆ ಬೇಡಿದಿಷ್ಟಾರ್ಥ ಕೊಡುವ ದೇವರಾಗಿವೆ. ಭಕ್ತರಾಗಲಿ ಶಿಷ್ಯರಾಗಲಿ ಇವರು ತಮ್ಮ ಇಷ್ಟಾರ್ಥವ ಬೇಡುವ, ದೇವರು ಕೊಡುವ, ದೇವರು ಭಕ್ತರು ಇವರೀರ್ವರು ವುಭಯ ಜಂಜಡವುಳ್ಳವರಾಗಿದ್ದಾರೆ. ಇದು ಭಾವಕ್ಕಗಮ್ಯವಾದ ತತ್ವ ತಿಳಿಯದ ಪರಿಣಾಮ. ಆರು ಮಹಾಘನ ಲಿಂಗವರಿತಿಹರು, ಅವರದು ವಿಷಯ ಭಾವ ನಷ್ಟವಾಗಿ ನಿಸ್ಸೀಮರಾಗಿಹರು. ಅಲ್ಲಿ ಉಭಯ ಭಾವವಿಲ್ಲ ಜಂಜಡವಿಲ್ಲ ಇಂತಾದ ಕಾರಣ ನಮ್ಮ ಗುಹೇಶ್ವರ ಶರಣರು ಲಿಂಗ ಭೋಗೊಪಭೋಗವೆಂಬ ಖಂಡಿತ ಬುದ್ಧಿಯ ಮೀರಿ ಅಖಂಡಾದ್ವೈತ ಬ್ರಹ್ಮದಲ್ಲಿ ತಲ್ಲೀಯವಾದರು.

ಬಹು ಜನರು ಶರಣರೆಂದರೆ ಶರಣಸತಿ ಲಿಂಗಪತಿ ಎಂಬ ಭಾವಿಕರು ಶರಣರೆಂದು ತಿಳಿದ ವೀರಶೈವರು ಇರುವರು. ಪ್ರಭುವಿನ ದಿವ್ಯದೃಷ್ಠಿಯಲ್ಲಿ ಅಖಂಡಾದ್ವೈತ ಬ್ರಹ್ಮದಲ್ಲಿ ಲೀಯವಾದರೆ ಶರಣರು ನಿಸ್ಸೀಮವಾದ ನಿಃಶಬ್ದ ಬ್ರಹ್ಮದಲ್ಲಿ ಲೀಯವಾದವರು.

ಶರಣರು ಅವರು ಶರಣಸತಿ, ಲಿಂಗಪತಿ ಎಂಬ ಖಂಡಿತ ಬುದ್ಧಿ ಮೀರಿದವರು. ಇವರು ಲಿಂಗೈಕ್ಯರೆನ್ನಲು ಬಾರದವರು. ಇವರು ಸ್ಥಲ ನಿಸ್ಥಲವೆಂಬ ಖಂಡಿತ ಬುದ್ಧಿ ಖಂಡಿತ ಜ್ಞಾನವ ಮೀರಿದವರು. ಘನಕ್ಕೆ ಘನವಾಗಿಹ ಅಖಂಡಾದ್ವೈತ ಬ್ರಹ್ಮದಲ್ಲಿ ಲೀಯವಾದವರು ಎಂದು ಹೇಳಿಹರು.

ಆವಲ್ಲಿ ಶರಣಸತಿ ಎಂಬ ಭಾವವಿದೆ ಅಲ್ಲಿ ಲಿಂಗ ಪತಿ ಎಂಬ ಭಾವವಿದೆ. ಅಲ್ಲಿಯೆ ಲಿಂಗ ಭೋಗೋಪ ಭೋಗ ಬುದ್ಧಿಯು ಇದೆ. ಇದು ಕಾರಣ ಇದು ಖಂಡಿತ ಬುದ್ಧಿಯು ಆಗಿಹುದು. ಇದು ಅಖಂಡಾದ್ವೈತ ಬ್ರಹ್ಮದಲ್ಲಿ ಲೀಯವಾಗದ ಸಂಕೇತ, ಆವ ಹೃದಯ ಖಂಡಿತ ಬುದ್ಧಿ ಸೇರದ್ದಾಗುವುದು ಆಗ ಅಖಂಡಾದ್ವೈತ ಬ್ರಹ್ಮದಲ್ಲಿ ಲೀಯವಾದುದು ಎಂದು ಹೇಳಿಹರು.

151

ಕರಸ್ಥಲ ಲಿಂಗವೆ ಕಾಯಕ್ಕೆ ವೇಧಿಸಿದಲ್ಲಿ ಕಾಯ ಲಿಂಗವಾಗಿತ್ತು
ಅಂತಾದ ಮಹಾ ಘನಲಿಂಗವೆ ಪ್ರಾಣಕ್ಕೆ ವೇಧಿಸಿದಲ್ಲಿ ಪ್ರಾಣಲಿಂಗವಾಯಿತ್ತು
ಅಂತಾದ ಮಹಾಘನಲಿಂಗವೆ ಭಾವಕ್ಕೆ ವೇಧಿಸಿದಲ್ಲಿ ಭಾವ ಲಿಂಗವಾಯಿತ್ತು.
ಅಂತಾದ ಮಹಾಲಿಂಗವೆ ಜ್ಞಾನಕ್ಕೆ ವೇಧಿಸಿದಲ್ಲಿ ಜ್ಞಾನ ಲಿಂಗವಾಯಿತ್ತು.

ಅಂತಾದ ಕಾರಣ ನಮ್ಮ ಗುಹೇಶ್ವರನ ಶರಣಂಗೆ ಅರುವರಿತು ಕುರುಹು ನಿಷ್ಪತ್ತಿಯಾಗಿ ತಾನೆಂಬ ಭಾವವು ಉರಿಯುಂಡ ಕರ್ಪೂರ ದಂತಾಯಿತ್ತು. ॥ 1052 ॥

ತಾತ್ಪರ್ಯ: ಕರಸ್ಥಲದ ಲಿಂಗವೆ ಕಾಯಕ್ಕೆ ವೇಧಿಸಿದಲ್ಲಿ ಕಾಯ ಲಿಂಗವಾಯಿತ್ತು : ಓ ಇದಾರ ಕರಸ್ಥಲದಲ್ಲಿದ್ದ ಲಿಂಗವು? ಇಲ್ಲಿ ಕರಸ್ಥಲದ ಸಂಜ್ಞೆ ಬಹು ರಹಸ್ಯವಾದುದು. ಏಕೆಂದರೆ ಕರಸ್ಥಲದ ಲಿಂಗವೆ ಎಂದು ಸಂಭೋಧಿಸಿದುದು ನೋಡುವುಡೆ, ಲಿಂಗ ಘನ ಗಂಭೀರವದು. ಅದನ್ನಾರು ಕೈಯಲ್ಲಿ ಹಿಡಿವುದು. ಹಿಡಿವ ಕೈಯುವೇಲೆ ಕತ್ತಲೆಯಯ್ಯ ನೋಡುವ ಕಂಗಳ ವೇಲೆ ಕತ್ತಲೆಯಯ್ಯ .ಗುಹೇಶ್ವರನೆಂಬುದು ಅತ್ತಲೆಯಯ್ಯ ಎಂದು ಬಿತ್ತರಿಸಿದುದು ನೋಡುವುಡೆ ಬಹು ವೀರಶೈವರಿಗೆ ಕರಸ್ಥಲದ ಲಿಂಗದ ಯತಾರ್ಥ ಜ್ಞಾನವಾಗದ್ದರಿಂದ, ಇವರು ಕರಸ್ಥಲವೆಂಬುದು ತಿಳಿಯದವರು. ಲಿಂಗವೆಂಬುದು ತಿಳಿಯದವರು . ತಿಳಿಯದ ಕಾರಣ ಆರಾರ ಕೈಯಲ್ಲಿದ್ದುದು ಅವರವರ ಲಿಂಗವಾಗಿದೆ.ಇವರ ನೋಟ ಭ್ರಮ ಇವರ ಕೈಯ ಭ್ರಮ , ನೆನಹು ಭ್ರಮವಾಗಿ ಲಿಂಗವ ತಿಳಿಯದಾದರು. ಇದು ಕಾರಣ ಕರಸ್ಥಲದ ಲಿಂಗ ಪ್ರಭುವಿನದೆನ್ನಬೇಕೆ? ಪ್ರಭುವಿನದೆಂದಲ್ಲಿ ಅನುಮಿಷನ ಕರಲ್ಲಿದ್ದುದು ಅನಿಮಿಷನ ಕರದಲ್ಲಿದ್ದದು ಎಂದಲ್ಲಿ ಬಸವರಸರಿಂದ ಬಂದುದು ಇದಾರ ಲಿಂಗವೆನ್ನಬೇಕು? ಇದಾರ ಕರಸ್ಥಲವೆನಬೇಕು? ಮರವಿನಿಂದ ಬಹು ಜನರದ್ದಾಗಿರುವದು ವಿವರಿಸಿ ನೋಡುವುಡೆ ನಿರಾಲಂಬ ಲಿಂಗ ಆರದ್ದಾಗಬೇಕು? ನಿಃಶಬ್ದ ಲಿಂಗ, ಆರದ್ದಾಗಬೇಕು, ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗ ಆರದ್ದಾಗಬೇಕು? ಕರಸ್ಥಲ ಸುಜ್ಞಾನದಿಂದುಕ್ತವಾದ ಸ್ಥಲ ಇದು ಕೈ ಹೇಗಾಗಬೇಕು ಆರು ವೇದ ವೇದಾಂತಗಳಿಗ ಸಾಧ್ಯವಾಗಿಹ ಅನುಪಮ ಜ್ಞಾನಿಗಳಾಗಿಹರು. ಅವರು ಸುಜ್ಞಾನಿಗಳು. ಅವರ ಸುಜ್ಞಾನವೆ ಕರಸ್ಥಲವಾಗಿದೆ. ಅವರ ಹೃದಯದಲ್ಲಿ ನ್ಯಸ್ತವಾಗಿಹ ಅಕಲ್ಪಿತ ಘನವೆ ಇವರ ಕರಸ್ಥಲದ ಲಿಂಗವಾಗಿದೆ. ಅಂತಾದ ಮಹಾಘನ ಲಿಂಗವೆ ಕಾಯಕ್ಕೆ ವೇಧಿಸಿದಲ್ಲಿ ಕಾಯಲಿಂಗವಾಯಿತ್ತು ಎಂದು ಹೇಳಿಹರು.

ಕರಸ್ಥಲದ ಲಿಂಗವೆ ಕಾಯಕ್ಕೆ ವೇಧಿಸಿದಲ್ಲಿ ಕಾಯ ಲಿಂಗವಾಯಿತ್ತು. ಎಂದು ಬಿತ್ತರಿಸಿದುದು ನೋಡುವುಡೆ ಆರದು ಸುಜ್ಞಾನವೆ ಕರಸ್ಥಲವಾಗಿದೆ. ಅಲ್ಲಿಯೇ ಅಕ್ಷರಾಕ್ಷರವೆಂಬುದಕ್ಕೂ ಮೀರಿದ ಘನವೆ ಲಿಂಗವಾಗಿ ಪ್ರಜ್ವಲಿಸುವುದು. ಇದು ಸೀಮಿತ ಲಿಂಗವಲ್ಲ ಅಜಾತ ಲಿಂಗವು. ಸಧ್ಯದ ಸಮಯದಲ್ಲಿ ಎಷ್ಟೋ ಲಿಂಗಾರ್ಚಕರಿದ್ದರೂ ಕರಸ್ಥಲದ ಲಿಂಗವು ಅಲ್ಲಯ್ಯನಂತೆ ಕಾಯವೇಧಿಸಿ ಕಾಯ ಲಿಂಗವಾಗಿ ಕಂಡವರು ಎಷ್ಟು ಜನ ಶಿಕ್ಕುಬಹುದು? ವಿರಳ ಏಕೆಂದರೆ ಲಿಂಗ ಆವುದಕ್ಕನ್ನವರು, ಲಿಂಗ ಸಕೀಲ ಸಂಯೋಗ ವರ್ಮಸ್ಥಲವ ನರಿಯದ ಲಿಂಗಾರ್ಚಕರು ಬಹಳ ಇದ್ದಾರೆ. ಇದು ಕಾರಣ ಕರಸ್ಥಲ. ಇದು ಸುಜ್ಞಾನ ಸ್ಥಲ. ಆವ ಹೃದಯ ಸುಜ್ಞಾನವುಳ್ಳದ್ದಾಗಿದೆ ಅಲ್ಲಿಯೆ ಅನುಪಮ ಲಿಂಗ, ಅಖಂಡಿತ ಲಿಂಗ ಬೆಳಗುಳ್ಳದ್ದಾಗಿಹುದು. ಇದು ತಿಳಿಯದೆ ಮರವುಳ್ಳವನಾಗಿ ಲಿಂಗವು ಪೂಜಾಲಿಂಗವೆಂದು ಪೂಜಿಸುತ್ತಹೋದ ಭಕ್ತರಿಗೆ ಅದೆಷ್ಟು ಕಾಲ ಲಿಂಗ ಪೂಜಿಸಿದರೂ, ಸುಜ್ಞಾನಿಯಾಗಬಹುದೆ? ಸುಜ್ಞಾನಿ ಆರು? ನಿಃಶಬ್ದ ಲಿಂಗವ ಇದ್ದಕ್ಕಿದ್ದಂತೆ ತಿಳಿದವರೆ ಸುಜ್ಞಾನಿಗಳು ನಿಃಶಬ್ದ ಲಿಂಗವ ತಿಳಿಯಹೋಗಿ ತಾನೆ ನಿಃಶಬ್ದ ಬ್ರಹ್ಮವಾಗಿಹನು. ಅಂತಪ್ಪ ಮಹದರುವುಳ್ಳವರು ಅರುವಿಂಗರುವಾಗಿಹ ಮಹಾಂತರು. ಕರಸ್ಥಲದ ಲಿಂಗ ಕಾಯಕ್ಕೆ ವೇಧಿಸಿದವರು, ಇಂತಪ್ಪ ಲಿಂಗ ರಹಸ್ಯ ತಿಳಿಯದೆ, ಲಿಂಗ ಕಟ್ಟುವದೊಂದು ಸಾಂಪ್ರದಾಯಕ್ಕೆ ಸೇರಿದೆ. ಇದರಿಂದ ಲಿಂಗವು ಕಾಯಕ್ಕೆ ವೇಧಿಸಿದರೂ ಕಾಯ ಲಿಂಗ ತಾಗದು. ಇದರಿಂದ ಆದಿ ಪುರಾತನರು ಮಾಡಿದ ಜ್ಞಾನ ಜ್ಞೇಯ ಒಂದಾದ ನಿಸ್ಸೀಮ ಪಥವಾಗಿಹ ಅನುಪಮ ಲಿಂಗ ಪ್ರಜ್ವಲಿಸದು.

ಕರಸ್ಥಲದ ಲಿಂಗ ಸದ್ಗುರು ಕೃಪೆಯಿಂದ ಲಭ್ಯವಾದುದು ಇದು ಕಾರಣ ಬಸರವರಸರೆ ವೇದ

ವೇದಾಂತಗಳಿಗಸಾಧ್ಯವಾಗಿಹ ಅನುಪಮ ಲಿಂಗವ ತಂದು ಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ ಎಂದು ಬಿತ್ತರಿಸಿಹರು. ಕರಸ್ಥಲದ ಲಿಂಗವೆ ಕಾಯಕ್ಕೆ ವೇಧಿಸಿ, ಕಾಯ ಲಿಂಗವಾಯಿತ್ತು ಎಂದು ಹೇಳಿದ ಪ್ರಭುವಿನ ಹೃದಯ, ಅರು ಹೃದಯ ಸುಜ್ಞಾನದ ಹೃದಯ ಅರಿದರಿದು ನೋಡಿದ ಲಿಂಗ ಹೃದಯ. ತನ್ನಲ್ಲಿಯೆ ಲಿಂಗ ನಿಜ ನಿವಾಸವಾಗಿ ಕಂಡ ಹೃದಯ , ಲಿಂಗವೆ ತಾನಾಗಿ ಪ್ರಜ್ವಲಿಸಿದ ಹೃದಯ ಲಿಂಗವರಿತ ಹೃದಯವಾದುದರಿಂದ ಇದೆಂಥ ಘನಾನುಭವ. ಈ ಕರಸ್ಥಲದ ಲಿಂಗಕ್ಕೇನೆನ್ನಬೇಕು? ಇದು ಮೌನ ಮುದ್ರಿತ ಲಿಂಗ. ನಿಃಶಬ್ದ ಲಿಂಗ ವೇದ ವೇದಾಂತಗಳಿಗೆ ಅಸಾಧ್ಯವಾಗಿಹ ಅನುಪಮ ಲಿಂಗ ಶೃತಿಗಗೋಚರ ಲಿಂಗ. ಲಿಂಗವೆನ್ನದವರ ಲಿಂಗ ಮೌನವಾಗಿ ಕಾಯಕ್ಕೆ ತಾಕಿದುದು,ಕಾಯವು ಮೌನವು ಲಿಂಗವು ಮೌನ, ಈ ಮೌನದ ಹಿರಿಮೆ ನಿಃಶಬ್ದಬ್ರಹ್ಮದ ಅರುವುಳ್ಳವರಿಗಿದು ಸಹಜವು.

ಅಗ್ನಿಕಾಷ್ಟದ ಸಂಬಂಧವಾಗಿ ಕಾಷ್ಟವು ಅಗ್ನಿಯಾದಂತೆ ಹಾಗೆ ಕರಸ್ಥಲದ ಲಿಂಗವು ಕಾಯವೇಧಿಸಿ ಕಾಯ ಲಿಂಗವಾದ ಮಹದರುವು. ಇದು ಮೌನ ಮುದ್ರಿತವಾಗಿಹ ಸಂಜ್ಞೆ ಅರಿದರಿದು ನೋಡಿದ ಸುಜ್ಞಾನ ದಿವ್ಯದೃಷ್ಟಿಯು ಮೌನ. ಇಲ್ಲಿ ವೇದ ವೇದಾಂತವು ಹೆತ್ತರಿವು ಆಗಿದೆ. ಇದು ಮೌನಮುದ್ರಿತವಾಗಿಹ ಲಿಂಗ ಘನದರುವು ಆಗದು, ಇಲ್ಲಿ ಸ್ಥಲವನ್ನೆ ನಿಸ್ಥಲವನ್ನೆ ನಿರ್ಣಯವೆನಗಾದ ಬಳಿಕ ಏನೆಂದರಿಯೆನಯ್ಯ ಕೂಡಲಚೆನ್ನಸಂಗಯ್ಯ ಲಿಂಗೈಕ್ಯವೆಂದೆನ್ನೆ ಎಂಬುದು ಸುಜ್ಞಾನವು. ಈ ದಿವ್ಯಜ್ಞಾನದಿಂದ ಮೌನ ಮುದ್ರಿತವಾಗಿಹ ಲಿಂಗದರಿವು ಇದ್ದಕ್ಕಿದ್ದಂತೆ ವಿದಿತವಾಗಿ ಕರಸ್ಥಲದ ಲಿಂಗ ಕಾಯಕ್ಕೆ ವೇಧಿಸಿದಾಗ ಲಿಂಗವು ಮೌನ, ಕಾಯವು ಮೌನ, ಎರಡಾಗಿ ಕಂಡರು ಇರವು ಒಂದೆ ಅರುವು ಒಂದೆ ಇವೆರಡು ನಿಃಶಬ್ದ ಲಿಂಗದರುವುಳ್ಳ ನಿಲುವುಳ್ಳವುಗಳು. ಅಲ್ಲಿ ಜಡವೆಂಬುದಕ್ಕಿಂಬಿಲ್ಲ ಚೇತನವೆಂಬುದಕ್ಕಿಂಬಿಲ್ಲ ಕಾಯವು ನಿಃಶಬ್ದ ಬ್ರಹ್ಮವಾಗಿಪ್ಪ ನಿಲುವುಳ್ಳ ಕಾಯ. ಲಿಂಗವು ನಿಃಶಬ್ದ ಬ್ರಹ್ಮವಾಗಿಪ್ಪ ನಿಲುವುಳ್ಳ ಲಿಂಗವು. ಕಾಯವು ಕಾಯವೆನ್ನದ ಘನ ತೇಜ . ಲಿಂಗವು ಲಿಂಗವೆನ್ನದ ಘನತೇಜ. ಉದಯಾಸ್ತವ ಕಾಣದ ತೇಜ , ಸ್ವಯಂ ತೇಜ , ಕಾಯಕ್ಕೆ ತಾಕಿ ಕಾಯವು ನಿಃಶಬ್ದ ಘನದಿರಿವುಳ್ಳದ್ದಾಗಿರುವುದರಿಂದ ಅನುಪಮ ಕಾಯ ಅಖಂಡಿತ ಕಾಯವೆಂದು ಹೇಳಿಹರು.

ಅಂತಾದ ಮಹಾಘನ ಲಿಂಗವೆ ಪ್ರಾಣಕ್ಕೆ ವೇಧಿಸಿದಲ್ಲಿ ಪ್ರಾಣಲಿಂಗವಾಯಿತ್ತು . ಮಹಾಘನ ಲಿಂಗವದು ನಿಸ್ಸೀಮವು, ವಾಙ್ಮನಕ್ಕೆಡೆಗೊಡದ ಅಖಂಡಿತ ಲಿಂಗವು, ಇದು ಪ್ರಾಣಕ್ಕೆ ವೇಧಿಸಿದಲ್ಲಿ, ಪ್ರಾಣ ಲಿಂಗವಾಯಿತ್ತು . ಬಂಗಾರದಲ್ಲಿ ತೋರುವ ಆಭರಣಗಳು ಬಂಗಾರವಲ್ಲದೆ ಅನ್ಯವಲ್ಲ ನಿಃಶಬ್ದ ಲಿಂಗದಲ್ಲಿ ತೋರುವದು ಪ್ರಾಣವಲ್ಲದೆ ಅನ್ಯವಲ್ಲವು. ಅಧಿಷ್ಠಾನದಲ್ಲಿ ತೋರುವ ಕಲ್ಪಿತ ಅಧಿಷ್ಠಾನವಲ್ಲದನ್ಯವಲ್ಲವು. ಅಧಿಷ್ಠಾನವೆಂಬುದು ತಾನೆ ತಾನೆಂಬುದು ನುಡಿಗೆಡೆಗೊಡದ ಘನ ತಾನು. ತನ್ನ ಅಧಿಷ್ಠಾನದಲ್ಲಿ ತೋರುವ ಕಲ್ಪಿತರೂಪಿ ನುಡಿಗಳೆಲ್ಲವು ತಾನೆ. ತನ್ನ ಅಧಿಷ್ಠಾನವುಳ್ಳ ಸ್ವಮಹಿಮೆ ಪ್ರಾಣರೂಪಿ ಚೇತನಕ್ಕೆ ವಿದಿತವಾಗುವುಡೆ ಅದು ಪ್ರಾಣಲಿಂಗವಾಯಿತ್ತು .

ಪ್ರಾಣಕ್ಕೆ ಕೆಲಬರು ಸ್ವಾಶ ಉಛ್ವಾಸವೆನ್ನುವರು ಉಂಟು, ಕೆಲಬರು ಸೋಹಂ ಎನ್ನುವರು ಉಂಟು, ಕೆಲಬರು ಪ್ರಣವವೆಂದು ಸಂಭೋಧಿಸಿದವರು ಉಂಟು. ಸಂಭೋಧಿಸಿದರೂ ಪ್ರಣವದರ್ಥವ ತಿಳಿದವರು ಎಲ್ಲೋ ಒಬ್ಬರು ಪ್ರಣವ ನುಚ್ಚರಿಸುವ ಪ್ರಮಾಣಿಕರೆಲ್ಲರು ಪ್ರಣವದರ್ಥವ ತಿಳಿದು ನೋಡಿರೆ? ಪ್ರಣವ ನಾಹಂ ಎಂದುದೆ? ಪ್ರಣವ ಕೋಹಂ ಎಂದುದೆ? ಪ್ರಣವ ಸೋಹಂ ಎಂದುದೆ? ಪ್ರಣವ ಚಿದಹಂ ಎಂದುದೆ? ಎನ್ನದಾಗಿ ಪ್ರಣವ ಭರ್ಗೋದೇವಸ್ಯಧೀಮಹಿ ಎಂದುದಾಗಿ ಸವಿತಃ ಪದಮಂಶಃ ಸ್ಯಾತ ಭರ್ಗಸ್ತು ಲಿಂಗ ಮೇವಚ ಧೀಮಹಿ ಪರಿಮಿತ್ಯೇಷಾಂ ಗಾಯಿತ್ರಾಂ ಲಿಂಗ ಸಂಬಂಧಃ ಎಂದುದಾಗಿ ಪ್ರಣವದರ್ಥವು ತಾನೆ ನಿಮ್ಮಮಯವು ಗುಹೇಶ್ವರಾ.

ಪ್ರಾಣ ! ಲಿಂಗವೆಂದು ತಿಳಿದವರೆಷ್ಟು ಜನ, ಪ್ರಾಣವೆಂದರೂ ಅದು ಮಂತ್ರವಾಗಿದೆ ಅದು

ಸೋಹಂ ಸ್ವರೂಪವಾಗಿ 21900 ಸಾರೆ ತಾನೆ ನುಡಿಯುತ್ತಿಹುದು. ಅನ್ನುವವರೆ ಇರುವರು ಇನ್ನು ಕೆಲಬರು ಬ್ರಹ್ಮವ ಅಹಂಬ್ರಸ್ಮಿ ಸಚ್ಚಿದಾನಂದೋಹಂ ಎಂದು ಉಪದೇಶಿಸುವವರು ಸಿಕ್ಕುವರು. ಪ್ರಣವವದು ದೇವ. ಅದು ಎಂತಿದ್ದುದು ಅಂತೆ ಇದೆ. ಚಿಂತೆ ಇಲ್ಲದನುಭಾವ ಎಂದು ಇದಕ್ಕಿದ್ದಂತೆ ತಿಳಿದಾಗ ಪ್ರಣವವದು ಪೂರ್ಣಮಯವು ತಾನೆ ಅದಂ ಲಿಂಗಮಯವು ತಾನೆ ತನಗೂ ಪ್ರಣವಕ್ಕೂ ಲಿಂಗಕ್ಕೂ ಬೇರೆಂದೆಣಿಸಲುಂಟೆ? ಅಂತಾದ ಮಹಾಘನ ಲಿಂಗವು ಮೌನ ಅಂತಾದ ಮಹದರುವಿನಿಂದ ಪ್ರಾಣವ ತಿಳಿವುಡೆ ಅದು ಚೇತನಮಯವು, ಚೈತನ್ಯ. ಚೇತನ ಬೇರಲ್ಲ ಚೇತನವೆಂದರೂ ತಾನೆ ಚೈತನ್ಯವೆಂದರೂ ತಾನೆ. ತಾನು ನಾಹಂ ಕೋಹಂ ಸೋಹಂ ಚಿದಹಂ ಎನಲಿಲ್ಲ. ಏನೂ ಎನ್ನದ ನಿಃಶಬ್ದದ ಘನದಿರುವೆ ಪ್ರಜ್ವಲಿಸಿ ಪ್ರಾಣಲಿಂಗವಾಯಿತ್ತು. ಅಂತಾದ ಮಾಹಾಘನಲಿಂಗವು ಮೌನ, ಪ್ರಾಣಲಿಂಗವು ಮೌನ, ಇದು ಮೌನ ಮುದ್ರಿತ ನಿಲುವು ನಿಃಶಬ್ದ ಘನದಿರುವು ಮೌನ. ಇದು ಮಾತಿನ ಮಹಾಂತರ ನಿಲುವುಳ್ಳ ಅರುವು ಅಲ್ಲ ಶಬ್ದಮೀಸಲ ವಾಗಿದ್ದವರ ನಿಲುವು.

ಅಂತಾದ ಮಹಾಘನ ಲಿಂಗವ ಭಾವಕ್ಕೆ ವೇಧಿಸಿದಲ್ಲಿ ಭಾವ ಲಿಂಗವಾಯಿತ್ತು. ಲಿಂಗ ಭಾವ ಮಾಡಿದವರುಂಟು ಭಾವ ಲಿಂಗವಾದವರುಂಟೆ? ಭಾವ ಲಿಂಗವಾದುದು ಅದು ಲಿಂಗಮಯವು ಅಲ್ಲಿ ಮಹಾಘನ ಲಿಂಗದಿರುವುಳ್ಳ ಅರುವು ಪ್ರಜ್ವಲಿಸುವುದು ನೋಡಾ. ಇಲ್ಲಿ ಜೀವ ಭಾವ ನಷ್ಟ ಅಂತರಾತ್ಮನೆಂಬುದು ನಷ್ಟ, ಪರಮಾತ್ಮನೆಂಬುದು ನಷ್ಟ, ಭಾವವೆ ಲಿಂಗಘನವಾಗಿ ಬೆಳಗುವಲ್ಲಿ ಭಾವವೆಂಬುದು ಪುಶಿ. ಏಕೆಂದರೆ ಅದು ಭ್ರಮವು ಜೀವ ಅಂತರಾತ್ಮ ಮಹಾಘನ ಲಿಂಗವು ಎಂತಿದ್ದುದು ಅಂತೆ ಅದೆ ಚಿಂತೆಯಿಲ್ಲದ ಅಚಿಂತ್ಯ ನಿಲುವು. ಅಚಿಂತ್ಯಾತ್ಮನಲ್ಲಿ ಚಿಂತನಕ್ಕೆಡೆಯುಂಟೆ? ಇದು ಕಾರಣ ಅಂತಾದ ಮಹಾಘನ ಲಿಂಗಕ್ಕೆ ಭಾವ ತಾಕಿ ಭಾವ ಲಿಂಗವಾಯಿತ್ತು. ಮಹಾಘನ ಲಿಂಗವು ಮೌನ, ಭಾವ ಲಿಂಗವಾಗಿ ಅದು ಮೌನ. ಇದು ಎರಡೊಂದಾದ ನಿಲುವು ಶರಣ ಭಾವಕ್ಕಗಮ್ಯನಾದುದರಿಂದ ಮಹಾಘನಲಿಂಗವೆ ತಾನಾಗಿ ಭಾವಕ್ಕೆ ವೇಧಿಸಿ ಭಾವ ಲಿಂಗವಾಯಿತ್ತು.

ಅಂತಾದ ಮಹಾಘನವೆ ಜ್ಞಾನಕ್ಕೆ ವೇಧಿಸಿ ಜ್ಞಾನ ಲಿಂಗವಾಯಿತ್ತು. ಜ್ಞಾನಲಿಂಗಕ್ಕೆ ವೇಧಿಸಿ ಜ್ಞಾನ ಲಿಂಗವಾದ ಪರಿ ಆವುದು? ಜ್ಞಾನವೆಂದರೆ ಸಾಮಾನ್ಯ ಜ್ಞಾನ, ಕಲ್ಪಿತ ವಿಶೇಷ ಜ್ಞಾನ, ವೀಶೇಷ ಜ್ಞಾನ, ನಿವೇಶ ಜ್ಞಾನ, ಹೀಗೆ ಚತುರ್ವಿಧದಲ್ಲಿ ವಿಭಾಗಿಸಿಹರು. ಅವಿದ್ಯಾದೆಶೆಯಲ್ಲಿ ತೋರತಕ್ಕ ಜ್ಞಾನ ಎರಡು. ವಿದ್ಯಾದೆಶೆಯಲ್ಲಿ ತೋರತಕ್ಕ ಜ್ಞಾನ ಎರಡು ಭ್ರಾಂತಿಕಾಲದಲ್ಲಿ ತೋರತಕ್ಕ ಜ್ಞಾನ ಎರಡು. ಭ್ರಾಂತಿ ನಿವೃತ್ತಿ ಕಾಲದಲ್ಲಿ ತೋರತಕ್ಕ ಜ್ಞಾನ ಎರಡು ಇವೆಲ್ಲವು ಕಲ್ಪಿತ ಪುರಷನ ಜ್ಞಾನಕ್ಕೆ ಒಳಪಟ್ಟವುಗಳು ಅಂತಾದ ಮಹಾಘನ ಲಿಂಗವೆ ಜ್ಞಾನಕ್ಕೆ ವೇಧಿಸಿ ಜ್ಞಾನ ಲಿಂಗವಾಯಿತ್ತು. ಮಹಾಘನ ಲಿಂಗವದು ಮಹಾಘನ ಲಿಂಗವೆನಲಿಲ್ಲ ನಿಃಶಬ್ದ ಲಿಂಗವದು ಶಬ್ದ ಮೀಸಲು ನೋಡಾ, ಅಂತಪ್ಪ ಮಿಗೆ ಮಿಗೆಯಾಗಿಪ್ಪ ಮಹಾಘನಲಿಂಗವೆ ಭ್ರಾಂತಿ ಜ್ಞಾನವಾಗಿಹ ಸಾಮಾನ್ಯಜ್ಞಾನ, ಕಲ್ಪಿತ ವಿಶೇಷ ಜ್ಞಾನಕ್ಕೆ ತಾಕಿ ಜ್ಞಾನಲಿಂಗವಾಯಿತ್ತು. ಅಂತಾದ ಮಹಾಘನ ಲಿಂಗವೆ ಭ್ರಾಂತಿ ನಿವೃತ್ತಿಯ ಎರಡು ಜ್ಞಾನಕ್ಕೆ ತಾಕಿ, ಜ್ಞಾನ ಲಿಂಗವಾಯಿತ್ತು. ನಿಃಶಬ್ದ ಘನದಿರುವಿನ ಅರುವುಳ್ಳದಾಯಿತ್ತು. ನಿರ್ವಿಶೇಷವಾದ ಅಖಂಡಿತ ಅಕಲ್ಪಿತ ಏನೊಂದುಸರಲು ಎಡೆಗೊಡದ ಘನವೆಂಬ ಜ್ಞಾನಕ್ಕೆ ನಿಃಶಬ್ದ ಲಿಂಗವು ತಾಕಿ ಶಬ್ದಮುಗ್ಧಜ್ಞಾನ ಲಿಂಗವಾಯಿತ್ತು.

ಅಂತಾದ ಕಾರಣ ನಮ್ಮ ಗುಹೇಶ್ವರನ ಶರಣಂಗೆ ಅರುವರಿತು, ಕುರುಹು ನಿಷ್ಪತ್ತಿಯಾಗಿ ತಾನೆಂಬ ಭಾವವು ಉರಿಯುಂಡ ಕರ್ಪುರದಂತಾಯಿತ್ತು.

ಗುಹೇಶ್ವರನ ಶರಣನೆಂದರೆ ಅರುವರಿತು ಕುರುಹು ನಿಷ್ಪತ್ತಿಯಾದ ಮಹಾಂತ ಅರುವು, ಅರುವು ಎಂದು ಹಲಬುವವರುಂಟು, ಚಿಂತಿಸುವವರುಂಟು ಅರುವರಿತವರುಂಟೆ? ಅರುವರಿತವರು

ಗುಹೇಶ್ವರನ ಶರಣರು, ಕಾರಣ ಗುಹೇಶ್ವರನ ಶರಣರು ನಿಃಶಬ್ದ ಲಿಂಗದಲ್ಲಿ ಲೀಯವಾದವರು. ಲಿಂಗ ಲಿಂಗ ಎನ್ನದವರು. ಲಿಂಗವರಿತು ಲಿಂಗವಾಗಿಹ ಶರಣರು ಅರುವು ಅರುವು ಎನ್ನದವರು ಅರುವರಿತು ಬಚ್ಚ ಬರಿಯ ಅರುವಾಗಿಹ ಶರಣರು. ಇವರ ದಿವ್ಯದೃಷ್ಟಿಗೆ ಕುರುಹು ನಷ್ಟವಾಗಿದೆ. ಪಿಂಡಾಂಡ, ಬ್ರಹ್ಮಾಂಡವೆಂಬ ಕುರುಹು ನಷ್ಟವಾಗಿಹುದು. ಆವಾವ ಕಾಯವ ಕಾಣದವರು ಅವರ ದಿವ್ಯದೃಷ್ಟಿಗೆ ನರರ ಸುರರ ದೇವಗಣ, ರುದ್ರಗಣ, ಪ್ರಮಥಗಣರ ಕಾಯವು ಕಾಣದವರು, ಸತ್ಯರು ನಿತ್ಯರಾಗಿಹ ಘನಮಹಿಮರು, ಏಕೆಂದರೆ ಅರುವರಿತುದರಿಂದ ಕುರುಹು ಕಾಣದವರು, ಎಲ್ಲಿ ನೋಡಿದಡಲ್ಲಲ್ಲಿ ಕುರುಹು ನಿಷ್ಪತ್ತಿಯಾದುದರಿಂದ ತಾನೆಂಬ ಭಾವ ಉರಿ ಉಂಡ ಕರ್ಪುರದಂತಾಯಿತ್ತು.

ತಾನೆಂಬ ಭಾವ ಉರಿಯುಂಡ ಕರ್ಪುರದಂತಾಯಿತ್ತು: ಇದಾವ ತಾನೆಂಬ ಭಾವ, ಸೋಹಂ ಭಾವ, ನಾಹಂ ಎನ್ನುವ ಭಾವ, ಕೋಹಂ ಎನ್ನುವ ಭಾವ, ಚಿದಹಂ ಎನ್ನುವ ಭಾವ, ಉರಿಯುಂಡ ಕರ್ಪುರದಂತಾಯಿತ್ತು. ಸಕಲವು ತಾನೆಂಬ ಭಾವ ಭರಿತ ಭಾವ. ಓಂ ಪೂರ್ಣಮದಃ ಪೂರ್ಣಮಿದಂ ಎಂಬ ಭಾವ ಕರ್ಪುರ ಇದು ಉರಿ ಉಂಡುದು, ಉರಿ ಎಂಬುದು ಕರಸ್ಥಲದ ಲಿಂಗ ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ ಜ್ಞಾನರೂಪಿ ಉರಿ. ಇದು ಭರಿತಭಾವ ರೂಪಿ ಕರ್ಪುರ , ಸಕಲವು ತಾನೆಂಬ ಭಾವರೂಪಿ ಕರ್ಪುರ ನಿಃಶಬ್ದ ಲಿಂಗ ರೂಪಿ ಜ್ಞಾನದ ಉರಿ ತಾಕಿ ಉರಿ ಉಂಡ ಕರ್ಪುರದಂತಾಯಿತ್ತು ಎಂದು ಹೇಳಿಹರು.

152

ಸತ್ಯವೂ ಇಲ್ಲ, ಅಸತ್ಯವೂ ಇಲ್ಲ ಸಹಜವೂ ಇಲ್ಲ, ಅಸಹಜವೂ ಇಲ್ಲ
ನಾನು ಇಲ್ಲ, ನೀನು ಇಲ್ಲ ಇಲ್ಲ ಇಲ್ಲ ಎಂಬುದು ತಾನಿಲ್ಲ
ಗುಹೇಶ್ವರನೆಂಬುದು ತಾ ಬಯಲು. ॥ 1547 ॥

ತಾತ್ಪರ್ಯ: ಸತ್ಯವೂ ಇಲ್ಲ ಅಸತ್ಯವೂ ಇಲ್ಲ: ಪ್ರಭುದೇವ, ಸತ್ಯ ಅಸತ್ಯವ ತಿಳಿದ ತತ್ವವೇತ್ತ ಈ ತತ್ವವೇತ್ತನ ದಿವ್ಯ ದೃಷ್ಟಿಯಲ್ಲಿ ಸತ್ಯವು ಇಲ್ಲದುದಾಗಿದೆ. ಅಸತ್ಯವು ಇಲ್ಲದುದಾಗಿದೆ.

ಲೌಕಿಕರಲ್ಲಿ ಬುದ್ಧಿಮಾನರು ಪಂಡಿತರು ರಾಜರುಗಳು ಸತ್ಯ ಅಸತ್ಯವ ತಿಳಿಯದೆ, ಬಹು ಆಯಾಸ ಹೊಂದಿಹರು. ಇವರುಗಳು ಸತ್ಯ ಅಸತ್ಯವ ತಿಳಿಯಲು ತತ್ವ ದೃಷ್ಟಿಯುಳ್ಳವರಾಗದೆ ಕ್ರಿಯಾ ಶೀಲರಾಗಿಹರು, ಕ್ರಿಯೆಕ್ಕೆ ಪ್ರಧಾನವ ಮಾಡಿ ಕ್ರಿಯಾ ಮೂರ್ತಿಗಳೆಂದೆನಿಸಿ ಕೊಂಡರು. ಸತ್ಯವ ಆಚರಿಸ ಹೋಗಿ ಬಹು ಪ್ರಯಾಸ ಹೊಂದಿದವರಲ್ಲಿ ಸತ್ಯ ಹರಿಶ್ಚಂದ್ರ ಬಹು ಆಯಾಸಕ್ಕೆ ಗುರಿಯಾದ, ಪಾಂಡವರಲ್ಲಿ ಧರ್ಮನು ಸತ್ಯ ಆಚರಿಸ ಹೋಗಿ ಬಹು ಕಷ್ಟಕ್ಕೆ ಗುರಿಯಾದರು. ಇಲ್ಲಿ ತಪಸ್ವಿ , ತ್ಯಾಗಿ, ಯೋಗಿ, ಮನು, ಮುನಿಗಳು ಕೂಡ ಸತ್ಯವನ್ನು ನುಡಿ ನಡೆಯಲ್ಲಿ ಬಳಸ ಹೋಗಿ ಬಹು ಪ್ರಯಾಸ ಹೊಂದಿಹರು.

ಕೆಲಬರು ಮಂತ್ರವೆ ಸತ್ಯವೆಂದು ಮಂತ್ರಾನುಷ್ಠಾನದಲ್ಲಿ ತಮ್ಮ ಆಯುಷ್ಯವ ಅದರಲ್ಲಿ ಕಳೆದಿಹರು. ಇನ್ನು ಕೆಲಬರು ಮಹಾವಾಕ್ಯಗಳೆ ಸತ್ಯವೆಂದು ಅವುಗಳ ಶ್ರವಣ ಮನನ ನಿಧಿಧ್ಯಾಸಗಳ ಮಾಡಹತ್ತಿ ತಮ್ಮ ಬುದ್ಧಿಗತವಾದ ಅವಸ್ಥೆಯೆ ಅವರಿಗೆ ಸತ್ಯವಾಗಿ ಅವರಿಗೂ ನಿಜವಾದ ರಹಸ್ಯವ ತಿಳಿಯದೆ ಮಾಯೆಕ್ಕೆ ಒಳಪಟ್ಟಿಹರು. ಏಕೆಂದರೆ ಇವರ ದೃಷ್ಟಿಗೆ ನಾಮರೂಪಂಗಳು ಮಿಥ್ಯೆಯಾಗಿ ಸಚ್ಚಿದಾನಂದವೆಂಬುದೆ ಸತ್ಯವಾಗಿ ಸತ್ಯ ಮಿಥ್ಯೆವೆಂಬ ನಿತ್ಯಾನಿತ್ಯ ವಿವೇಕಕ್ಕೆ ಒಪ್ಪಿಕೊಂಡು ಇವರು ಕೂಡ ಸತ್ಯವ ತಿಳಿಯದೆ ಹೋದರು.

ಬಸವರಸರು, ''ಪ್ರಪಂಚ ಸತ್ಯವೆನ್ನುವವರು ಕೋಟ್ಯಾನು ಕೋಟಿ ಪ್ರಪಂಚ ಮಿಥ್ಯೆ ಎನ್ನುವವರು ಕೋಟ್ಯಾನು ಕೋಟಿ , ಪರಮಾರ್ಥ ಸತ್ಯ ಎನ್ನುವವರು ಕೋಟ್ಯಾನು ಕೋಟಿ, ಪರಮಾರ್ಥ ಮಿಥ್ಯೆ

ಎನ್ನುವವರು ಕೋಟ್ಯಾನು ಕೋಟಿ ಸಮದೃಷ್ಠಿಯಲ್ಲಿ ನಿಂತು, ತಮ್ಮ ತಾವರಿತವರ ನೊಬ್ಬರನು ಕಾಣೆ, ಕೂಡಲಸಂಗಮದೇವಾ'' ಎಂದು ಬಿತ್ತರಿಸಿದುದು ನೋಡುವುಡೆ ನಾಮ ರೂಪದ ತೋರಿಕೆಗೆ ನಿಜವೆಂದವರು ಕೋಟ್ಯಾನು ಕೋಟಿ ನಾಮರೂಪದ ತೋರಿಕೆಯ ಅಲ್ಲಗಳೆದವರು ಕೋಟ್ಯಾನು ಕೋಟಿ, ಶೃತಿ ಪ್ರಮಾಣಗಳ ಒಪ್ಪಿಕೊಂಡವರು , ಶೃತಿ ಪ್ರಮಾಣಗಳ ಸೇರದವರು ಕೋಟ್ಯಾನು ಕೋಟಿ ವಿಷಯಾಸಕ್ತರು, ವಿಷಯ ಭೋಗೋಪ ಭೋಗಿಗಳು, ಇಂದ್ರಿಯರಾಮರು ಇವರು. ಇವರು ನಾಮರೂಪದ ಪ್ರಪಂಚದ ತೋರಿಕೆಗೆ ಸತ್ಯವೆಂದವರು, ವಿಷಯ ಭೋಗೋಪ ಭೋಗದ ವಿರಾಗಿಗಳು, ಇಂದ್ರಿಯ ನಿಗ್ರಹವಂತರು ವಿರಕ್ತರು ವೈರಾಗ್ಯವಂತರು, ಪ್ರಪಂಚ ಮಿಥ್ಯೆವೆಂದವರು. ಈ ವಿಷಯ ಭೋಗದ ರಾಗ ವಿರಾಗಿಗಳು ಕೋಟ್ಯಾನು ಕೋಟಿ. ಇವರು ಪಿಂಡವೆಂಬ ಭಾಂಡಕ್ಕೂ ಬ್ರಹ್ಮಾಂಡವೆಂಬ ಭಾಂಡಕ್ಕೂ ಮೆಚ್ಚಿದವರು ಕೋಟ್ಯಾನು ಕೋಟಿ.

ಪರಮಾರ್ಥ ಸತ್ಯ ಎನ್ನುವವರು ಕೋಟ್ಯಾನು ಕೋಟಿ. ಮಿಥ್ಯೆ ಎನ್ನುವವರು ಕೋಟ್ಯಾನು ಕೋಟಿ. ಇವರಲ್ಲಿ ಕೆಲಬರು ಸತ್ಯವೆಂದರೆ ಪರಮಾರ್ಥ , ಇವರು ಚಿದ್ ಬ್ರಹ್ಮಾಂಡ ಪ್ರೇಮಿಗಳು. ಇವರಿಗೆ ಪರಮಾರ್ಥವೆ ಸತ್ಯವಾಗಿರುವುದರಿಂದ ಸ್ವರೂಪ ಲಕ್ಷಣ, ತಟಸ್ಥ ಲಕ್ಷಣ, ಭಾಗತ್ಯಾಗ ಲಕ್ಷಣಕ್ಕೆ ಒಪ್ಪಿಕೊಂಡವರು ಕೋಟ್ಯಾನು ಕೋಟಿಯಾಗಿಹರು. ಕೆಲಬರು ಲಕ್ಷಣಕ್ಕೆ ಒಪ್ಪದೆ ಲಕ್ಷ್ಯವೆ ತಾವಾದುದರಿಂದ ಪರಮಾರ್ಥ ಮಿಥ್ಯೆ ಎಂದು ಒಪ್ಪಿದವರು ಕೋಟ್ಯಾನು ಕೋಟಿ ಎಂದು ಹೇಳಿಹರು.

ಇವೆರಡಕ್ಕೂ ಸಮದೃಷ್ಠಿಯುಳ್ಳವರು ಶಿಕ್ಕುವದು ವಿರಳ. ಇವರು ಪ್ರಪಂಚ ಸತ್ಯ ಮಿಥ್ಯೆವೆಂಬ ರಾಗ ವಿರಾಗವುಳ್ಳ ಬುದ್ದಿಗೂ ಸಮ. ಪರಮಾರ್ಥ ಸತ್ಯ ಮಿಥ್ಯೆವೆಂಬ ಚಿದ್ ಬುದ್ದಿಗೂ ಸಮ. ಈ ಸಮ ದೃಷ್ಠಿಯುಳ್ಳವರು ಶಿಕ್ಕುವುದು ವಿರಳ. ಇವರಲ್ಲಿ ಸಮ ಎಂಬುವ ಹಂಬಲದವರು ಸಿಕ್ಕಬಹುದು ಸಮದೃಷ್ಠಿಯಲ್ಲಿ ನಿಂತು ತಮ್ಮ ತಾವರಿತವರು ಸಿಕ್ಕುವದು ಬಹು ವಿರಳವು.

ಪ್ರಭುದೇವ ಅನುಪಮ ನಿಲುವುಳ್ಳ ನಿಜ ಜ್ಞಾನಿಯಾದುದರಿಂದ ಸತ್ಯವು ಇಲ್ಲ. ಅಸತ್ಯವೂ ಇಲ್ಲ ಎಂದು ಬಿತ್ತರಿಸಿದುದು ನೋಡಿದಡೆ ಈ ಮಹಾಂತನ ಮಹದರಿವು ನಿರಾಲಂಬ ಅರುವು. ಆವಾವುಗಳ ತಟ್ಟದ ಮುಟ್ಟದ ಅರವು. ಪ್ರವೃತ್ತಿ ನಿವೃತ್ತಿ ಮುಟ್ಟದ ಅರುವು ಭಾವಕ್ಕಗಮ್ಯ , ನುಡಿಗೆಡೆಗೊಡದ ಘನವಂತ, ಸತ್ಯವ ತಿಳಿದು ಸದ್ರೂಪ ತಾನಾಗಿಹ ಶಬ್ದಮುಗ್ಧ ನಿಶಬ್ದವೇದಿ.

ಗದಿತಾ ಗದಿತಂ ನಹಿ ಸತ್ಯಮಿತಿ, ವಿದಿತಾ ವಿದಿತಂ ನಹಿ ಸತ್ಯಮಿತಿ
ಯದಿ ಚೈಕ್ಯ ನಿರಂತರ, ಸರ್ವ ಶಿವಂ ವಿಷಯೇಂದ್ರಿಯ ಬುದ್ದಿ ಮನಾಂಸಿ ಕಥಮ್!

ಸತ್ಯವನ್ನು ಮಾತಿನ ಮೂಲಕ ವಿವರಿಸುವದಕ್ಕೂ ಆಗುವದಿಲ್ಲ ವಿವರಿಸದೆ ಇರುವದಕ್ಕೂ ಆಗುವುದಿಲ್ಲ. ಅದನ್ನು ತಿಳಿದಿದೆ ಎಂತಲೂ ಹೇಳುವದಕ್ಕೂ ಆಗುವುದಿಲ್ಲ. ತಿಳಿದಿಲ್ಲವೆಂತಲೂ ಹೇಳುವದಕ್ಕೆ ಆಗುವುದಿಲ್ಲ. ನಿರಂತರವಾದ ಸರ್ವಮಂಗಳ ತತ್ವವೊಂದೆ ಸತ್ಯವಾದರೆ ವಿಷಯ, ಇಂದ್ರಿ, ಬುದ್ಧಿ, ಮನಸ್ಸು ಇವುಗಳೆಲ್ಲಿ?

ಸತ್ಯವನು ಮಾತಿನ ಮೂಲಕ ಹೇಳುವ ಸತ್ಯವು, ಸತ್ಯವಾಗದು. ಇರುವುದೊಂದೆ ನಿರಂತರವಾದ ಸರ್ವಮಂಗಳ ತತ್ವವೊಂದೆ ಸತ್ಯವಾದರೆ ಅಲ್ಲಿ ವಾಣಿಯಿಂದ ಹೇಳುವ ಸತ್ಯವೂ ಇಲ್ಲ ಅಸತ್ಯವೂ ಇಲ್ಲ.

ನುಡಿಗೆಡೆಗೊಡದ ಘನದಲ್ಲಿ ಪ್ರಪಂಚದ ಸತ್ಯವೂ ಇಲ್ಲ ಮಿಥ್ಯೆವೂ ಇಲ್ಲ. ಪರಮಾರ್ಥ ಸತ್ಯವೂ ಅಸತ್ಯವೂ ಇಲ್ಲ. ಸಹಜವೂ ಇಲ್ಲ ಅಸಹಜವೂ ಇಲ್ಲ. ಕೆಲಬರು ಸತ್ಯಕ್ಕೆ ಸಹಜವೆಂದು ಹೇಳಿಹರು. ಕೆಲಬರು ತತ್ವಮಸಿಯಲ್ಲಿ ತಿಳಿಸಿ ಕೊಡುವ ತತ್ವದ ತ್ವಂ ಪದವು ನೀನಲ್ಲ ತತ್ವವೂ ಅಲ್ಲ ಅಸಿ ಪದವೆ ತಾನು ಎಂದು ತಿಳಿದು ಸಕಲವು ಸಚ್ಚಿದಾನಂದವೆಂದು ಒಪ್ಪಿಕೊಂಡಿಹರು. ಈ ಅಸಿಪದ ಸಹಜವಲ್ಲ ಏಕೆಂದರೆ ಕಲ್ಪಿತದಿಂದುಕ್ತವಾದುದು ಕೃತಕವಾದುದರಿಂದ ಅಸಹಜವೆಂದು ಅಭಿಪ್ರಾಯ.

ಸಹಜತ್ವ ಸ್ವರೂಪ ಲಕ್ಷಣದಿಂದ ಸಹಜತ್ವ ಒಪ್ಪುವದಾಗಿದೆ. ಸ್ವರೂಪ ದೃಷ್ಠಿಯಿಂದ ಒಪ್ಪದಾಗಿದೆ. ಚಿದಾಕಾಶವಾಗಿಹ ತಾನು ತನಗೆ ಸಹಜವೂ ಇಲ್ಲ ಅಸಹಜತ್ವವು ಇಲ್ಲ. ಗಗನ: ಕಳಕೊಂಡುದಿಲ್ಲ ಪಡೆದು ಕೊಳ್ಳುವದಿಲ್ಲ ಗಗನವೂ ಗಗನವೆ? ಗಗನದ ಹೊರ್ತು ಇನ್ನೊಂದು ಗಗನವಿಲ್ಲ. ಬಯಲು ಬಯಲೆ ಅದು ಬಯಲೆಂದು ನುಡಿದುದಲ್ಲನುಡಿವುದೆಲ್ಲ ಕೃತಕವು.

ನಿಃಶಬ್ದ ಲಿಂಗ ಬಯಲು ಅದನ್ನು ನುಡಿಯಲ್ಲಿ ತಂದು ನುಡಿವುಡೆ ಕೃತಕವು. ಕೃತಕದಿಂದುಕ್ತವಾದುದು ಘನದಿರುವಿನ ಅರುವು ಆಗದು, ಇದು ಕಾರಣ ಪ್ರಭುದೇವ ನಿಃಶಬ್ದ ಬ್ರಹ್ಮವ ನುಡಿಯಲ್ಲಿ ತಂದು ನುಡಿಯಲಿಲ್ಲ. ನುಡಿಯನ್ನೆ ಖಂಡಿಸಿದ ಅನುಪಮ ನಿಃಶಬ್ದವೇದಿ, ಶಬ್ದ ಸಂಭ್ರಮವ ಒಪ್ಪನು ಇದು ಕಾರಣ ಮಾತಿನ ಮಹಾಂತರ ಮಹಾನುಭವವ ಸೇರ. ಇವರು ಸಹಜವೆಂದರೂ ಸೇರ, ಅಸಹಜವೆಂದರೂ ಸೇರ. ಏಕೆಂದರೆ ಇವುಗಳೆಲ್ಲವೂ ಇಲ್ಲದವುಗಳಾಗಿವೆ.

ನಾನು ಇಲ್ಲ ನೀನು ಇಲ್ಲ ಈ ಚಿದಹಮ್ಮೆಂಬ ನಾನು ಇಲ್ಲ, ಈ ದಾಸೋಹಂ ಎಂಬ ನೀನು ಇಲ್ಲ ಅದ್ವೈತಿಗಳು ಸಚ್ಚಿದಾನಂದ ರೂಪಃ ಶಿವೋಹಂ ಎಂದು ಚಿದಹಮ್ಮಿಗೆ ಒಪ್ಪಿಕೊಂಡಿಹರು. ಆಗಮಕಾರರು ಸಕಲವು ನೀನೆಂಬ ದಾಸೋಹಂ ಭಾವಕ್ಕೆ ಒಪ್ಪಿಹರು. ಪ್ರಭುದೇವ ಇವೆರಡಕ್ಕೂ ಒಪ್ಪದ ಮಹಾನ್ ಜ್ಞಾನಿ. ನಿರುಪಮ ನಾನೆನ್ನುವ ಚಿದಹಮ್ಮಾಗಲಿ, ನೀನೆನ್ನುವ ದಾಸೋಹಂ ಆಗಲಿ, ಇವೆರಡು ಕಲ್ಪಿತ ಪುರುಷನ ಕಲ್ಪಿತಗಳು. ಪ್ರಭು ಅಕಲ್ಪಿತ ಘನ, ಕಲ್ಪಿತ ಜ್ಞಾನಕ್ಕೆ ಒಪ್ಪುವದದೆಂತು? ನಾನೀನೆಂಬುದಕ್ಕೆ ತೆರೆಹಿಲ್ಲದ ಜ್ಞಾನಿ. ನಾನೀನೆಂಬುದಕ್ಕೆ ಒಪ್ಪುವದದೆಂತು? ಪ್ರಭುವಿನ ದಿವ್ಯದೃಷ್ಠಿಗೆ ಅಲ್ಲಿ ನಾನು ಇಲ್ಲವಾಗಿದೆ, ನೀನು ಇಲ್ಲವಾಗಿದೆ. ಇಲ್ಲ ಇಲ್ಲವೆಂಬುದು ತಾನಿಲ್ಲವಾಗಿದೆ. ಮಹಾಂತನ ನಿರಾಡಂಬರ ನಿರಾಲಂಬದಲ್ಲಿ ಮತಿಗತಿಯ ಕಾಣಬಹುದೆ? ಜ್ಞಾನದೊಳಗಣ ಬುದ್ಧಿ ಭಸ್ಮಮಾಡಿದ ವಿಭೂತಿ ಪುರುಷ ಅರುವರಿತು, ಮರಹು ನಷ್ಟವಾಗಿ ಜ್ಞಾನ ಬೆಂದಲ್ಲಿ ನಿರ್ಣಯವೆಲ್ಲಿಯದೊ? ಜ್ಞಾನದೊಳಗಣ ಬುದ್ಧಿ ಭಸ್ಮವಾಗಿ ಧರಿಸಿದಲ್ಲಿ ಕೂಡಲ ಚೆನ್ನಸಂಗಯ್ಯ ಸರ್ವನಿವಾಸಿಯಾದ.

ಪ್ರಭುವಿನ ಜ್ಞಾನಾಗ್ನಿ, ಸುಜ್ಞಾನದಗ್ನಿ ಅಲ್ಲಿ ಮತಿ ಭಸ್ಮವಾಗಿಹುದು ಇದು ಕಾರಣ ಮತಿಯಲ್ಲಿ ತೋರಿದುದು ಇಲ್ಲವಾಗಿದೆ. ಸತ್ಯವೂ ಇಲ್ಲವಾಗಿದೆ. ಅಸತ್ಯವೆಂಬುದು ಇಲ್ಲವಾಗಿದೆ. ಸಹಜ, ಅಸಹಜ, ನಾನು, ನೀನು ಇವೆಲ್ಲವು ಇಲ್ಲವಾಗಿದೆ. ಇಲ್ಲ ಇಲ್ಲವೆಂಬುದು ಇಲ್ಲವಾದುದು ಘನವದೆಂತು ವರ್ಣಿಸುವುದು. ಇದು ಚಿದಹಂಕಾರ ದೈಕ್ಯವಾದ ನಿಲವು. ಇದನಾರಯ್ಯ ಹೀಗೆ ಎಂದು ವರ್ಣಿಸುವುದು. ನಾಹಂ, ಕೋಹಂ, ಸೋಹಂ, ದಾಸೋಹಂ, ಚಿದಹಮ್ಮಿಗಿಂಬಿಲ್ಲದಿರುವಲ್ಲಿ ದೇಹೋಹಂ ಇರುವದಕ್ಕಾದರೂ ಇಂಬೇತರದು ಇಲ್ಲಿ ಜ್ಞಾನದೊಳಗಣ ಮತಿ ಭಸ್ಮವಾಗಿಹ ಅರಿವು ಪ್ರಭುವಿನದು.

ಗುಹೇಶ್ವರನೆಂಬುದು ತಾ ಬಯಲು ಇದುವೆ ನುಡಿಗಡೆಗೊಡದ ನಿಷ್ಕಲ ನಿರವಯ ಪರಬ್ರಹ್ಮ ಇದುವೆ ನಿರಾಳವು. ಇದುವೆ ಗುಹೇಶ್ವರನೆಂಬುದು ತಾನೆ ಬಯಲು. ಅದು ತಾ ಬಯಲೆನನಲಿಲ್ಲ ಪರಬ್ರಹ್ಮವದು ತಾ ಪರಬ್ರಹ್ಮವೆನ್ನದ ಘನದರುವಾಗಿ ಅದುವೆ ತಾನಾಗಿಹ ಪ್ರಭುವಾದ್ದರಿಂದ ಗುಹೇಶ್ವರನೆಂಬುದು ತಾ ಬಯಲು ಎಂಬುದು ನುಡಿಗೆಡೆಯಿಲ್ಲವೆಂದು ಹೇಳಿಹರು.

153

ಸತ್ತು ಮುಂದೆ ದೇವರ ಕೂಡಿಹೆವೆಂಬಿರಿ, ಸಾಯದ ಮುನ್ನಸತ್ತಿಪ್ಪಿರಿ,
ಎಂತಯ್ಯ ನಿಮ್ಮ ಲಿಂಗೈಕ್ಯದ ಪರಿ! ಎಂತಯ್ಯ ನಿಮ್ಮ ಪ್ರಮಥರ ಪರಿ!
ಅಂಗದ ಅವಸ್ಥೆಯಲ್ಲದೆ ಲಿಂಗದ ಅವಸ್ಥೆ ಆರಿಗೂ ಇಲ್ಲ ಗುಹೇಶ್ವರಾ. || 1544 ||

ತಾತ್ಪರ್ಯ: ಸತ್ತು ಮುಂದೆ ದೇವರ ಕೂಡಿಹೆವೆಂಬಿರಿ ಸಾಯದ ಮುನ್ನ ಸತ್ತಿಪ್ಪಿರಿ ಎಂತಯ್ಯ ನಿಮ್ಮ ಲಿಂಗೈಕ್ಯದ ಪರಿ: ಪ್ರಭುದೇವ, ಸತ್ತು ಮುಂದೆ ದೇವರ ಕೂಡಿಹೆವೆಂಬುವವರನ್ನು ಕುರಿತು ಪ್ರಶ್ನಿಸಿದ್ದಾನೆ? ಸಾಯದ ಮುನ್ನ ಸತ್ತಿರುವಿರಿ ನೀವು ದೇವನಲ್ಲಿ ಐಕ್ಯವಾಗಿಹ ಪರಿ ಆವುದು?

ಸತ್ತು ಮುಂದೆ ದೇವರ ಕೂಡಿಹೆ ವೆಂಬುವವರು ಆರು, ಇವರು ಉಪಾಸಕರು, ಉಪಾಸಕರಲ್ಲಿ ಭೇದವಂತರು, ಅಭೇದವಂತರು ಇರುವರು, ಭೇದ ಜ್ಞಾನಿಗಳು ಇವರು ಸತ್ತು ಮುಂದೆ ಮುಂದೆ ದೇವರ ಕೂಡಿಹೆವೆಂಬುವವರು, ಇವರು ಸಾಯದ ಮುನ್ನ ಸತ್ತಿರುವರು. ಏಕೆಂದರೆ ಇವರ ಭೇದಜ್ಞಾನವೇ ಇವರನ್ನು ನಷ್ಟಮಾಡಿದೆ, ನೋಡಲು ಬದುಕಿದವರಂತೆ ಕಾಣುವರು. ಸುಜ್ಞಾನ ದೃಷ್ಟಿಗೆ ಸತ್ತವರು, ಸತ್ತ ಹೆಣ ಬದುಕಿದವರನ್ನು ತಿಳಿಯದು ತನ್ನನ್ನು ತಿಳಿಯದು ಹೇಗೊ ಹಾಗೆ ಭೇದ ಜ್ಞಾನವುಳ್ಳವನು. ತನ್ನನ್ನು ತಿಳಿಯನು ದೇವನನ್ನು ತಿಳಿಯನು, ಗುರುಗಳನ್ನು ತಿಳಿಯನು, ವಿಶ್ವವನ್ನು ತಿಳಿಯನು, ಖಂಡಾ ಖಂಡ ಸಂಯೋಗವಿಲ್ಲದ ಅಖಂಡದಲ್ಲಿ ಇಲ್ಲದುದನ್ನು ಕಲ್ಪಿಸಿ ಇದ್ದ(ನಿರಂತರವಾದ) ತನ್ನ ಸ್ವ ಸ್ವರೂಪವ ತಿಳಿಯದ್ದರಿಂದ ಸಾಯದ ಮುನ್ನ ಸತ್ತಿರುವಿರಿ, ಎಂತಯ್ಯ ನಿಮ್ಮ ಲಿಂಗೈಕ್ಯದ ಪರಿ?

ಇಲ್ಲದುದನ್ನು ಕಲ್ಪಿಸಿ ಸಾಯದ ಮುನ್ನ ಸತ್ತಿದ್ದ ಲಕ್ಷಣವಾವುದು? ನಿರಾಲಂಬವೆಂಬ ಅಖಂಡ ಅದು ನಾಮರೂಪಕ್ಕು ತಟ್ಟುದುದಲ್ಲ, ಮುಟ್ಟಿದುದಲ್ಲ ಇತ್ತ ಸಚ್ಚಿದಾನಂದ ನಾನೆಂಬುದಕ್ಕೂ ಅಂಟಿದುದಲ್ಲ. ಆವಾವುದಕ್ಕೂ ಆಲಂಬನವಿಲ್ಲದ ಘನದಲ್ಲಿ ದೇವನು ಸರ್ವಜ್ಞ, ಜೀವನು ಅಲ್ಪಜ್ಞ ಎಂಬ ಬೇದವ ಕಲ್ಪಿಸಿದವರು, ಜೀವ ಜೀವರುಗಳಲ್ಲಿ ಭೇದ ಕಲ್ಪಸಿದವರು . ಒಬ್ಬನು ಪಾಪಾತ್ಮ ಇನ್ನೊಬ್ಬನು ಪುಣ್ಯಾತ್ಮ . ಒಬ್ಬನು ಭೋಗಿ, ಇನ್ನೊಬ್ಬನು ತ್ಯಾಗಿ . ಮತ್ತೊಬ್ಬನು ಯೋಗಿಯೆಂದು ಹೀಗೆ ಪ್ರಕೃತಿ ಕಾರ್ಯವ ಕಂಡು ಭೇದವ ಕಲ್ಪಿಸಿದವರು. ಅಕ್ಷರೋತ್ತಮ ನಲ್ಲಿ ಇಲ್ಲದ ಕ್ಷರ ಅಕ್ಷರ ಕಂಡವರು ಸಾಯದ ಮುನ್ನ ಸತ್ತವರು, ಇದಲ್ಲದೆ ಇಲ್ಲದ ಪ್ರಕೃತಿ, ಪುರುಷರೆಂದು ಕಲ್ಪಸಿ ತನ್ನ ಅಕಲ್ಪಿತ ಘನ ಕಾಣದವರು. ಇವರು ಸಾಯದ ಮುನ್ನ ಸತ್ತವರು. ನಿರಂತರವಾಗಿಹ ಅಖಂಡದಲ್ಲಿ ಜೀವರೆಂದು ಅಂತರಾತ್ಮನೆಂದು, ಪರಮಾತ್ಮನೆಂದು ಕಲ್ಪಿಸಿ ತನ್ನ ಮಂಗಳಮಯವಾಗಿಹ ನಿತ್ಯ ಪದದಿಂದ ವಂಚಕರಾದವರು ಸಾಯದ ಮುನ್ನ ಸತ್ತವರು. ತನ್ನ ನಿಸ್ಸೀಮವಾಗಿಹ ಸ್ವರೂಪದಲ್ಲಿ ಸಗುಣ ನಿರ್ಗುಣವೆಂದು, ದೃಶ್ಯ ದೃಕ್ ಎಂದು ಜಡ ಚೇತನವೆಂದು ಆತ್ಮ ಆನಾತ್ಮವೆಂದು ದ್ವೈತ ಅದ್ವೈತವೆಂದು ಮರವು ಅರುವೆಂದು ಅರಿತೆ ಅರಿಯೆನೆಂದು ಜೀವ ಶಿವರ ಭೇದವೆಂದು ಜೀವ ಜೀವ ಶಿವರೈಕ್ಯವೆಂದು ಅಂತರ್ಮುಖಿ, ಬಹಿರ್ಮುಖವೆಂದು ಕಲ್ಪಿಸುವವರೆಲ್ಲ ಸಾಯದ ಮುನ್ನ ಸತ್ತವರು.

ಸತ್ತ ಹೆಣ ಲಿಂಗೈಕ್ಯದ ಘನವ ತಿಳಿವುದೆ? ದೇಹ ಬುದ್ಧಿಯುಳ್ಳವರೆಲ್ಲ ಸಾಯದ ಮುನ್ನ ಸತ್ತವರು. ನಾನು ಕರ್ತನೆಂಬ ಅಹಂಕಾರಿಗಳು ಸಾಯದ ಮುನ್ನ ಸತ್ತವರು. ಅಹಂಕಾರಿಯು ಅಜ ಕಲ್ಪ ಕೋಟಿ ವರ್ಷ ಬಾಳಿದರೂ ಸಾಯದ ಮುನ್ನ ಸತ್ತವರು. ಇವರು ಸತ್ತು ಮುಂದೆ ದೇವರ ಕೂಡಿಹೆವೆಂಬಿರಿ! ಓ ನೀವು ಅದಾವ ಸಾಧನೆಯಿಂದ ಸತ್ತು ಮುಂದೆ ದೇವರ ಕೂಡಿಹೆವೆಂಬಿರಿ? ನೀವು ದೇಹ ಬದುಕಿರುವವರೆಗು ದೇವರನ್ನು ಪೂಜಿಸಿದ ಫಲದಿಂದ ಸತ್ತು ಮುಂದೆ ದೇವರ ಕೂಡಿಹೆವೆಂಬಿರಿ ಅಲ್ಲವೆ? ನಿಮ್ಮ ದೇವರ ಪೂಜೆಯಲ್ಲಿ ಅಷ್ಟು ಸಮರ್ಥತನ ವಿದೆಯಲ್ಲವೆ? ಅಷ್ಟ ವಿಧದಿಂದ ಮಾಡಿದ ಪೂಜೆಯಲ್ಲಿ ಸತ್ತು ಮುಂದೆ ದೇವರ ಕೂಡುವ ಶಕ್ತಿಯಿದೆ ಅಲ್ಲವೆ.? ನಿಮ್ಮಿಂದ ಪೂಜಿಸಿಕೊಳ್ಳುವ ಪೂಜಾಲಿಂಗವು ನಿಮ್ಮ ಪೂಜೆಗೆ ಒಪ್ಪಿ ನೀವು ಸತ್ತಮೇಲೆ ನಿಮ್ಮನ್ನು ದೇವರಲ್ಲಿ ಸಮರಸ ಮಾಡಿತಲ್ಲವೆ? ಓ ಪೂಜಾ ಲಿಂಗಯ್ಯನನ್ನು ಅರ್ಚಿಸುವ ಲಿಂಗವಂತರೆ, ನೀವು ಸತ್ತ ಮೇಲೆ ನೀವು ಲಿಂಗದಲ್ಲಿ ಕೂಡಿದುದು ಹೇಗೆ? ದೇವನಲ್ಲಿ ಕೂಡಿದುದು ಆವುದು ? ಇದ್ದ ಪಂಚ ಭೌತಿಕದಿಂದಾದ ದೇಹ. ಅದು ಅಲ್ಲಿಯೆ ಸತ್ತ ಬಳಿಕ ತನ್ನದಾದ ಅಂಶದಲ್ಲಿ ಪಂಚ ಭೌತಿಕದಲ್ಲಿ ವಿಲೀನವಾಗಿದೆ, ಮನವು ಕಲ್ಪಿತವು ಭ್ರಮವು

ಪುಶಿಯು, ಇದು ನಿರಂತರವಾಗಿಹ ದೇವನಲ್ಲಿ ಕೂಡಿದುದು ಹೇಗೆ? ಪುಶಿಯು ದಿಟದಲ್ಲಿ ಕೂಡಿತೆ? ಭ್ರಾಂತಿಯು ಬ್ರಹ್ಮದಲ್ಲಿ ಒಂದಾಯಿತೆ ಆಶ್ಚರ್ಯ !ದೇವನು ಇದ್ದವನು , ಕರಣಂಗಳು ಇಲ್ಲದವು. ದೇವನು ಅಕಲ್ಪಿತನು, ಕರಣಂಗಳು ಕಲ್ಪಿತವು, ಅಕಲ್ಪಿತನಲ್ಲಿ ಕಲ್ಪಿತ ಕೂಡಿದುದು ಹೇಗೆ? ಬೆಳಕಿನಲ್ಲಿ ಕತ್ತಲೆ ಒಂದಾದುದು ಹೇಗೆ? ನಿತ್ಯದಲ್ಲಿ ಅನಿತ್ಯವು ಸಮರಸವಾದುದು ಹೇಗೆ?

ಜೀವನು ದೇಹ ಸತ್ತ ಬಳಿಕ ಪರಬ್ರಹ್ಮದಲ್ಲಿ ಒಂದಾಗುವದು ಎನ್ನುವಿರಾ? ಪರಬ್ರಹ್ಮವೆಂಬುದು ಅಪಾರವು ಅಖಂಡವು ಪೂರ್ಣವು ಏನೆಂದೆನಲಿಲ್ಲದ ಅರುವು ಶಬ್ದಮುಗ್ಧ ನುಡಿ ಗೆಡೆಗೊಡದ ಘನವು ಕೂಡದಗಲದ ಘನವು. ಏನೊಂದಾಗದ ಘನವು ನಿರಂತರವಾಗಿಹ ಮಂಗಳಮಯ ಪರತತ್ವ ಅದು ಏಕ, ಅದರಲ್ಲಿ ಏನಾಗಿ ಒಂದಾದೆ ? ಏನೊಂದಾಗದ ಘನದಲ್ಲಿ ನೀನು ಜೀವನಾಗಿ ಒಂದಾದುದು ಹೇಗೆ? ಕೂಡದಗಲದ ಘನದಲ್ಲಿ ನೀನು ಜೀವನಾಗಿ ಒಂದಾದುದು ಹೇಗೆ? ಪೂರ್ವದಲ್ಲಿ ನೀನು ಬೇರಾಗಿದ್ದುದು ಹೇಗೆ ? ಈಗ ಕೂಡಿದುದು ಹೇಗೆ ? ನಿರಂತರ ಮಂಗಳಮಯ ತತ್ವ ಅದು ಆವಾವುದರಲ್ಲಿ ಕೂಡದುದು ; ಎಲೈ ಜೀವನೆ ಅದರಲ್ಲಿ ನೀನು ಕೂಡಿದುದು ಹೇಗೆ? ಖಂಡಾಖಂಡ ಸಂಯೋಗವಿಲ್ಲದ ಅಖಂಡದಲ್ಲಿ ನೀನು ಏನಾಗಿ ಮಂಗಳಮಯ ತತ್ವದಲ್ಲಿ ಒಂದಾದೆ. ಎಲೈ ಜೀವನೆ ನೀನು ಇಲ್ಲದವನು ದೇವನು ಇದ್ದವನು, ಇದ್ದವನಲ್ಲಿ ಇಲ್ಲದವನು ಕೂಡುವದು ಆಶ್ಚರ್ಯವಲ್ಲವೆ? ಎಲೈ ಜೀವನೆ ನೀನು ಭ್ರಾಂತನು, ದೇವನು ನಿಭ್ರಾಂತನು. ನಿಭ್ರಾಂತನಲ್ಲಿ ಭ್ರಾಂತನು ಒಂದಾದುದು ಹೇಗೆ? ಇದು ಕಾರಣ ಎಂತಯ್ಯ ನಿಮ್ಮ ಲಿಂಗೈಕ್ಯದ ಪರಿ ಎಂತು ಎಂದು ಪ್ರಭುದೇವ ಲಿಂಗಾರ್ಚಕರನ್ನು ಪ್ರಶ್ನಿಸಿಹನು.

ಲಿಂಗೈಕ್ಯರ ಪರಿ ಆವುದು ಗೊತ್ತೆ ? ಲಿಂಗವರಿತು ಲಿಂಗದಲ್ಲಿ ಲೀಯವಾದ ಪರಿ ಲಿಂಗೈಕ್ಯಪರಿ. ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿತು ಅಚಲಾನಂದದಲ್ಲಿದ್ದುದು ಲಿಂಗೈಕ್ಯವಾಗಿಹ ಪರಿ, ಇಲ್ಲಿ ಭಾವಕ್ಕಿಂಬಿಲ್ಲ ಶಬ್ದಮೀಸಲು, ನುಡಿಗೆಡೆಯಿಲ್ಲ .ಎಡೆಗೆ ಕಡೆಯಿಲ್ಲ ಇದು ಲಿಂಗೈಕ್ಯವಾದ ರಹಸ್ಯ ಗುಹೇಶ್ವರ ಲಿಂಗ ವೇಧಿಸಿದ ರಹಸ್ಯ ಇದು ಪ್ರಮಥರ ಪರಿ, ನಿಃಶಬ್ದ ವೇದಿಗಳಾದ ಪರಿ, ನುಡಿಗೆಡೆಗೊಡದ ಘನವಂತರಾಗಿಹುದೆ ಪ್ರಮಥರ ಪರಿ. ಸಮತೆ ಸಯವಾದುದೆ ಪ್ರಮಥರ ಪರಿ ಅರುವು ಮರವುಗಳ ಕಾಣದುದೆ ಪ್ರಮಥರ ಪರಿ. ಇದನ್ನು ಬಿಟ್ಟು ನೀವು ಕುರುಹೆ ಲಿಂಗವೆಂದು ಪೂಜಿಸಿ ಆ ಲಿಂಗದ ಕೃಪೆಯಿಂದ ನಾವು ಸತ್ತಮೇಲೆ ದೇವರ ಕೂಡಿಹೆವೆಂಬುದು ಅಂಗದ ಅವಸ್ಥೆಯಲ್ಲದೆ ತಾನು ಲಿಂಗವಾಗಿಹ ಘನದರುವು ಅಲ್ಲ. ಅದು ಘನವ ಮನ ಕಂಡ ಸಂಕೇತವಲ್ಲ. ಲಿಂಗಯ್ಯನ ಮನ ಕಂಡ ನಿಜ ನಿಲುವು ಅಲ್ಲ. ತನ್ನಿಂದ ತನ್ನ ಕಂಡ ಲಿಂಗದ ಅವಸ್ಥೆ ಇದು ಆರಿಗೂ ಇಲ್ಲ ಇಲ್ಲವೆಂದು ಹೇಳಿದುದು.

154

ಭಾವಿಸಿ ನೋಡಿಹೆನೆಂಬುದೆಲ್ಲವು ಭ್ರಮವು ಅದು
ತಾ ಮುನ್ನಿನಂತೆ ಇದ್ದಿತ್ತು . ಮುಂದೆ
ಭಾವಿಸಬೇಡ, ಕೂಡಬೇಡ, ಕೂಡಿದೆನೆಂಬ ಭಾವ
ಮುನ್ನವೆ ಬೇಡ ಗುಹೇಶ್ವರಾ. ॥1410॥

ತಾತ್ಪರ್ಯ: ಭಾವಿಸಿ ನೋಡಿಹೆನೆಂಬುದೆಲ್ಲವು ಭ್ರಮವು : ಭಮವುಎಂಬುದು ವಿವರಿಸಿ ನೋಡುವುಡೆ ಪುಸಿಯು. ಇದು ಕಾರಣ ಭ್ರಮವದು ಭಾವಿಸುವವರ ಭಾವ , ಅಲ್ಲಿ ಅಹಂಕಾರ ಭಾವ, ಅವಿದ್ಯಾ ಭಾವ, ಜ್ಞಾನಾ ಜ್ಞಾನ ಭಾವ, ಜ್ಞಾನ ವಿಕೃತಿ ಭಾವ, ಮೋಹನ ವಿಕೃತಿ ಭಾವ ಎಂಬ ಭ್ರಾಂತಿ

ಭಾವವ ಮಾಣಿಸಯ್ಯ ಇಂದ್ರಿಯ ಭಾವ, ವಿಷಯ ಭಾವ, ಭೂತ ಭಾವ, ಕರಣ ಭಾವ, ವಿಶ್ವ ತೇಜಸ ಪ್ರಾಜ್ಞರೆಂಬ, ಜೀವ ಭಾವರ ಭ್ರಮೆಯ ಕಳೆಯಯ್ಯಾ ಗುರು ಶಿವ ಸಿದ್ದೇಶ್ವರ ಪ್ರಭುವೆ.

ಅಹಂ ಭಾವ ಪರನು ಆರು ಗೊತ್ತೆ ? ಕಲ್ಪಿತ ಪುರುಷನೆ ಅಹಂ ಭಾವ ಪರನು, ಇವನಿಗೆ ಅಜ್ಞಾನ ಅವಸ್ಥೆ, ಜ್ಞಾನ ಅವಸ್ಥೆ ಎರಡುಂಟು, ಒಂದು ಮರವಿನ ಅವಸ್ಥೆ ತೋರುವ ಶರೀರ , ಇಂದ್ರಿಯ, ಪ್ರಾಣ, ಮನ, ಬುದ್ಧಿ ಮೊದಲಾದವುಗಳಲ್ಲಿಯೂ ನಾನೆಂಬ ವೃತ್ತಿ ಅದೆ. ಜ್ಞಾನ ಅವಸ್ಥೆ ತೋರುವ ಸಾಕ್ಷಿ, ದೃಕ್, ಪ್ರತ್ಯಗಾತ್ಮ ಪರಮಾತ್ಮ ಸ್ವಯಂ ಪ್ರಕಾಶ ತಾನೆಂಬ ಜ್ಞಾನಾಕಾರ ವೃತ್ತಿಯು ನಾನು ನಾನು ಎಂದು ವ್ಯವಹರಿಸುವುದರಿಂದ ಈ ಕಲ್ಪಿತ ಪುರುಷನು ಅಹಂ ಭಾವ ಪರನಾಗಿರುವುದರಿಂದ ಅಹಂ ಭಾವವುಳ್ಳವನೆಂದು ಹೇಳಿದೆ. ಈ ಅಹಂ ಭಾವ ಕೆಡಿಸಯ್ಯ ಪ್ರಭುವೆ ಎಂದು ಪ್ರಾರ್ಥಿಸಿಹನು.

ತಾನು ಕಲ್ಪಿತ ಪುರುಷ ನಿರುವೆನೆಂಬ ಭಾವನೆಯಿಂದುಕ್ತನಾಗಿರುವ ಕಾರಣ ತನ್ನ ಭಾವಕ್ಕಗಮ್ಯವಾಗಿಹ ಸ್ವಮಹಿಮೆ ಮರೆತು ಬಿಟ್ಟಿರುವನು. ಇದಲ್ಲದೆ ದೃಶ್ಯವಾಗಿ ತೋರುವ ಸುಖ ದುಃಖಾದಿಗಳ ಅರಿಯುತ್ತ ನಾನು ಸುಖಿ ನಾನು ದುಖಿಯೆಂದು ವ್ಯವಹರಿಸುವದರಿಂದಲೂ ಅಜ್ಞಾನದಿಂದ ಕೂಡಿ ಕೊಂಡಿರುವದರಿಂದ ಇದು ಅವಿದ್ಯಾಭಾವವೆಂದು ಹೇಳಿಸಿಕೊಳ್ಳುವುದು, ಇದಲ್ಲದೆ ಜ್ಞಾನಾಜ್ಞಾನ ಭಾವ, ಜ್ಞಾನ ವಿಕೃತಿ ಭಾವ, ಮೋಹನ ವಿಕೃತಿ ಭಾವವು ಉಂಟು. ಕಲ್ಪಿತ ಪುರುಷಂಗೆ ವಿದ್ಯಾಮಯಿ ಅವಿದ್ಯಾಮಯಿ ವಿದ್ಯಾವಿದ್ಯಾಮಯಿಗಳೆಂಬ ಮೂರು ಭಾವಂಗಳು ಕಲ್ಪಿತ ಪುರುಷನು ತನ್ನ ನಿಜವಾದ ಸ್ವರೂಪವ ಮರೆತು ಗುರು ಶಾಸ್ತ್ರಗಳ ಸಹಾಯದಿಂದ ಅರಿತರೆ ವಿದ್ಯಾಮಯಿ ಎಂದು , ಮರೆತರೆ ಅವಿದ್ಯಾಮಯಿ ಎಂದು, ಅದು ತನ್ನ ನಿಜವು ಅಹುದೊ ಅಲ್ಲೊ ಎಂಬ ಸಂಶಯ ಜ್ಞಾನದಿಂದ ಕೂಡಿದರೆ ವಿದ್ಯಾವಿದ್ಯೆಮಯಿ ಎಂದು ಹೇಳಿಸಿಕೊಳ್ಳುವುದು. ಪ್ರಕಾಶ ಮಾಡಿ ತಿಳಿಸುವಂಥ ಸತ್ವಗುಣ ಒಂದು . ಆವುದಾದರೊಂದು ವಿಷಯದಲ್ಲಿ ಮೋಹವನ್ನುಂಟು ಮಾಡುವಂಥ ತಮೋಗುಣ ಒಂದು. ಪ್ರವೃತ್ತಿಯನ್ನುಂಟು ಮಾಡಿಸುವಂಥ ರಜೋಗುಣ ಒಂದು. ಇಂತಹ ಮೂರು ಗುಣಗಳು, ಜೀವನಿಗೆ ಜ್ಞಾನ, ಪ್ರವೃತ್ತಿ, ಮೋಹಾದಿಗಳನ್ನುಂಟು ಮಾಡಿ ಸುಖ ದುಃಖಗಳ ಕೊಡತಕ್ಕವುಗಳು ಆಗಿರುತ್ತವೆ. ಆದ್ದರಿಂದ ಜೀವನು ತ್ರಿವಿಕೃತಿಗಳನೆಂದು ಹೇಳಿಸಿಕೊಳ್ಳುವನು.

ಆವುದಾದರೊಂದನ್ನು ತಿಳಿಯುವುದೆ ಜ್ಞಾನ. ವಿಕೃತಿಯೆಂದು ತಿಳಿಯದಿರುವುದೆ ಮೋಹನ ವಿಕೃತಿಯೆಂದು ಜ್ಞಾನ ಜ್ಞಾನಗಳಿಂದುಕ್ತವಾಗಿರುವುದೆ ವರ್ತನ ವಿಕೃತಿಯೆಂದು ಹೇಳಿಸಿಕೊಳ್ಳುತ್ತವೆ. ಈ ಮೂರು ಭಾವಂಗಳು, ಈ ಮೂರು ಭಾವಿಸಿ ನೋಡಿಹೆನೆಂಬುದು ಭ್ರಮವಾಗಿದೆ . ವಿದ್ಯಾಮಯಿಯಾಗಲಿ, ಅವಿದ್ಯಾಮಯಿಯಾಗಲಿ, ವಿದ್ಯಾವಿದ್ಯೆಮಯಿಯಾಗಲಿ, ಇವು ಭಾವದಿಂದುಕ್ತವಾದವುಗಳು. ಭಾವಕ್ಕಗಮ್ಯವಾಗಿಹ ನನ್ನ ಸ್ವರೂಪದಲ್ಲಿ ಇವು ಇಲ್ಲದವು ಇದ್ದವುಗಳೆಂದು ಭಾವಿಸುವದೆ ಭ್ರಮವು . ಇದಲ್ಲದೆ ಇಂದ್ರಿಯ ಭಾವ, ವಿಷಯ ಭಾವ, ಭೂತ ಭಾವ, ಕರಣ ಭಾವ, ವಿಶ್ವ ಭಾವ, ತೈಜಸ ಭಾವ, ಪ್ರಾಜ್ಞನೆಂಬುದೆಲ್ಲವು ಭಾವದಿಂದುಕ್ತವಾದವುಗಳು . ಭಾವಕ್ಕಗಮ್ಯನಾಗಿಹ ನನ್ನಲ್ಲಿ ಇವು ಇಲ್ಲದವುಗಳು . ಇದು ಕಾರಣ ಭಾವಿಸಿ ತನ್ನ ನೋಡಿಹೆನೆಂಬುದೆಲ್ಲವು ಭ್ರಮವು ತಾನು ಹೇಗೆ ಭಾವಿಸುವನೋ ಹಾಗೆ ಭಾವರೂಪನಾಗಿ ಭಾವಿಸುವನು. ಹಗ್ಗದಲ್ಲಿ ಹಾವು ಕಂಡಂತೆ ತನ್ನಲ್ಲಿ ಭಾವಿಸಿದಂತೆ ಇದು ಮಮಕಾರವಾಗಿ ಕಾಣುವದರಿಂದ ಇದೆಲ್ಲವು ಭ್ರಮವು ಎಂದು ಹೇಳಿಹರು .

" ಮರಳು ತಲೆ ನೀನೆ ದೇವಾ, ಹುರುಳು ತಲೆ ನೀನೆ ದೇವಾ. ಹೆಂಗೂಸು ನೀನೆ ದೇವಾ ಗಂಡೂಗೂಸು ನೀನೆ ದೇವಾ ಎಮ್ಮಕ್ಕನ ಗಂಡ ನೀನೆ ದೇವಾ ಭ್ರಾಂತಳಿದು ಭಾವ ನೆಲೆಗೊಂಡಿತ್ತಾಗಿ ಕೂಡಲಸಂಗಮದೇವಾ " .ಎಂದುದು ಇದೊಂದು ಭರಿತ ಭಾವವು , ಎಲ್ಲೆಲ್ಲೂ ದೇವನ ಭಾವಿಸುವ ಭಾವ, ಪೂರ್ಣ ಭಾವ, ಭಾವಿಸಿ ನೋಡಿಹೆನೆಂಬುದೆಲ್ಲವು ಭ್ರಮವೆ . ಅಜ್ಞಾನಿ ನೀನೆ , ಜ್ಞಾನಿ ನೀನೆ

ಎಂಬುದು ಇದೊಂದು ಭ್ರಾಂತಿಯೆ . ಗಂಡು ಗೂಸು , ಹೆಂಗೂಸು ನೀನೆಂಬುದು ಇದೊಂದು ಭಾವರೂಪಿ ಭ್ರಾಂತಿಯೆ. ಪ್ರಕೃತಿ ನೀನೆ, ಪುರುಷ ನೀನೆ ಎಂಬುದು ಇದೊಂದು ಭ್ರಾಂತಿಯೆ ಸಕಲವೂ ನೀನೆ ನಿಃಷ್ಕಳವು ನೀನೆ ಎಂಬುದು ಇದೊಂದು ಭ್ರಾಂತಿಯೆ. ಇದು ಭಾವಿಸಿ ನೋಡಿಹೆನೆಂಬ ಜ್ಞಾನವಾದುದರಿಂದ ಇದು ಭ್ರಾಂತಿಯು ಎಂದು ಹೇಳಿಹರು.

ಪ್ರಭು: ಅಜ್ಞಾನಿ, ಸುಜ್ಞಾನಿ ಈರ್ವರು ಶಿವನೆಂದರೆ, ಶಿವ ಜ್ಞಾನಿಗಳು ಮೆಚ್ಚುವರೆ? ಶಿವ ಶಕ್ತಿಗಳೆರಡು ನೀನೆ ಎಂದರೆ, ಮಹಾನುಭಾವಿಗಳು ಪರಿಣಮಿಸುವರೆ? ತಾನಾರೆಂಬುದನರಿಯದೆ, ಅನ್ಯವೆಲ್ಲವೂ ಬೊಮ್ಮವೆಂಬ ಈ ಕರ್ಮದ ನುಡಿಯ ಮೆಚ್ಚುವನೆ ನಮ್ಮ ಗುಹೇಶ್ವರ ಲಿಂಗವು.

ಪ್ರಭುದೇವ, ಅಜ್ಞಾನಿ, ಸುಜ್ಞಾನಿ ಶಿವನೆಂಬ ಭಾವಕ್ಕೆ ಮೆಚ್ಚಲಿಲ್ಲ. ಶಿವ ಶಕ್ತಿ ನೀನೆಂಬ ಅಖಂಡಭಾವಕ್ಕೂ ಮೆಚ್ಚಲಿಲ್ಲ . ತನ್ನ ತಾನಾರೆಂಬುದ ಅರಿಯದೆ, ಬ್ರಹ್ಮವೆಂಬ ಭಾವ ಇದು ಕರ್ಮದ ಭಾವ. ಇದು ಗುಹೇಶ್ವರ ಮೆಚ್ಚದ ಭಾವ, ಇದು ಕಾರಣ ಭಾವಿಸಿ ನೋಡಿಹೆನೆಂಬುದೆಲ್ಲವು ಭ್ರಮವು ಎಂದು ಹೇಳಿದ್ದಾರೆ.

ಭಾವಕ್ಕಗಮ್ಯವಾದುದು ಭಾವಿಸಿದುದು ಅದೆಂತು? ಭಾವಿಸಲು ಬಾರದುದು ಬಾವಿಸುತ್ತಿರುವಿ ಎಂದಲ್ಲಿ ಅದು ಭ್ರಮವು ಎಂದು ಹೇಳಿಹರು.

ಅದು ತನ್ನ ತಾ ಮುನ್ನಿನಂತೆ ಇದ್ದಿತ್ತು. ಭಾವಕ್ಕಗಮ್ಯವಾಗಿಹ ಪರತತ್ವ ಅದು ತಾ ಮುನ್ನಿನಂತೆ ಇದ್ದಿತು. ಈ ಕಲ್ಪಿತ ಪುರುಷನು ಅವಿದ್ಯಾ ಭಾವವುಳ್ಳವ ನಾಗಿರಲಿ, ವಿದ್ಯಾಭಾವವುಳ್ಳವನಾಗಿರಲಿ, ವಿದ್ಯಾವಿದ್ಯದಿಂದುಕ್ತವಾದ ಭಾವವುಳ್ಳನಾಗಿರಲಿ ಅದು ತಾ ಮುನ್ನಿನಂತೆ ಇದ್ದಿತ್ತು .ಮುಂದೆ ಭಾವಿಸಬೇಡ ಕೂಡಬೇಡ ಕೂಡಿದೆನೆಂಬ ಭಾವ ಮುನ್ನವೆ ಬೇಡ ಗುಹೇಶ್ವರಾ.

ಭಾವಕ್ಕಗಮ್ಯವಾಗಿಹ ಘನವು ಭಾವಕ್ಕೊಳಪಡದು, ಭಾವಕ್ಕಿಂಬು ಕೊಡದ ತಾನು ಎಂಬುದು ತನ್ನಿಂದ ತನಗದು ವೇದ್ಯವಾಗದ್ದರಿಂದ ಜೀವ ಭಾವಿಯಾಗಿದೆ. ಅಂತರಾತ್ಮ ಭಾವಿಯಾಗಿದ್ದೆ. ಪರಮಾತ್ಮ ತಾನೆಂಬ ಭಾವದವನಾಗಿದ್ದೆನು, ಈಶ ತನ್ನ ಅರುವು ತಾ ಮುನ್ನಿನಂತೆ ಇದ್ದಿತ್ತು ಎಂಬುದು ವೇದ್ಯವಾದುದರಿಂದ ಪೂರ್ವದಲ್ಲಿ ತಿಳಿಯದ ಕಾಲದಲ್ಲಿ ಭಾವಿಸಿದಂತೆ ವೇದ್ಯವಾದುದರಿಂದ ಮುಂದೆ ಭಾವಿಸನು . ಭಾವಿಸಿದರೂ ಕೂಡಬೇಡ ತನ್ನ ತಾನರಿತಲ್ಲಿ ತಾನು ಆವುದರೊಳ್ ಕೂಡದ ಅಗಲದ ಘನವಾಗಿರುವಲ್ಲಿ ತನಗೆ ಕೂಡುವ ಹುಚ್ಚು ಇಲ್ಲ.

ಆಕಾಶವು ಆವುದರೊಳ್ ಕೂಡದ ಅಗಲಲಿಲ್ಲದ ಘನ, ಚಿದಾಕಾಶವೆಂಬ ತನ್ನಿರುವು ಅದು ತಾ ಮುನ್ನಿನಂತೆ ಇದ್ದಿತ್ತು . ಇದು ಕಾರಣ, ತನ್ನನ್ನು ಕೂಡುವ ಭಾವವಿಲ್ಲ ತಾನೆ ಘನಕ್ಕೆಘನ ವಾಗಿರುವಲ್ಲಿ ತಾನು ಆವಾವುದರೋಳ್ ಕೂಡದಗಲದ ಘನವಾಗಿರುವದರಿಂದ ತನ್ನಿರುವು ಮರೆತು ಕಲ್ಪಿತನಾಗಿ ಅಕಲ್ಪಿತ ಘನದೋಳ್ ಕೂಡಿದೆನೆಂಬ ಭಾವ ಬೇಡ. ಏಕೆಂದರೆ ತಾನು ಆವಾವ ಭಾವದೋಳ್ ಕೂಡದ ಘನನಾಗಿರುವುದರಿಂದ ಕಲ್ಪಿತನಾಗಿ ಪರಮಾತ್ಮ ಭಾವದೊಳಗೆ ಕೂಡಬೇಡ . ಆ ಬ್ರಹ್ಮಭಾವದವನಾಗಿ ಕೂಡಿದೆನೆಂಬ ಭಾವ ಮುನ್ನವೆ ಬೇಡ ಎಂದು ಪ್ರಭು ಹೇಳಿದುದು .

155

ಷಡೂರ್ಮಿಯಿಲ್ಲ, ಷಡ್ವರ್ಗವಿಲ್ಲ,
ನಾನೆಂಬುದಿಲ್ಲ ನೀನೆಂಬುದಿಲ್ಲ,
ಏನೆಂಬುದೇನೂ ಇಲ್ಲದಿಹುದೆ ಚಿದಹಂಕಾರ ದೈಕ್ಯವಯ್ಯ ಗುಹೇಶ್ವರಾ. ॥ 1533 ॥

ತಾತ್ಪರ್ಯ: ಷಡೂರ್ಮಿಯಲ್ಲ, ಷಡ್ವರ್ಗವಿಲ್ಲ ,ನಾನೆಂಬುದಿಲ್ಲ ,ನೀನೆಂಬುದಿಲ್ಲ,

ಏನೆಂಬುದೇನೂ ಇಲ್ಲದಿಹುದೆ ಚಿದಹಂಕಾರದೈಕ್ಯವಯ್ಯ : ಎಂದು ಹೇಳಿದ ಪ್ರಭುವಿನ ನಿಲುವು ತಾನಾರೆಂದರಿತ ತನ್ನ ಅರುವಿನ ನಿಲುವುಳ್ಳ ಸಾಹಿತ್ಯ. ಚಿದಹಂಕಾರ ದೈಕ್ಯವಾದ ಸಾಹಿತ್ಯ ಶಿಗುವುದು ವಿರಳ.

ಚಿದಹಂಕಾರವುಳ್ಳ ಸಾಹಿತ್ಯ ಅವೆ, ಚಿದಹಂಕಾರ ದೈಕ್ಯ ಮಾಡಿದ ಸಾಹಿತ್ಯ ತೀರಾವಿರಳ. ಬಹು ಪ್ರಾಜ್ಞರು, ಚಿದಹಂಕಾರವುಳ್ಳ ಸಾಹಿತ್ಯವ ಹೇಳಿಹರು. ಪ್ರಭುವಿನ ಮಹದರುವು ಚಿದಹಂಕಾರ ದೈಕ್ಯಮಾಡಿದ ಘನದರುವು.

ನ ಮಾನಸಂ ಕರ್ಮ ಶುಭಾ ಶುಭಂ ಮೆ॥ ನ ಕಾಯಕಂ ಕರ್ಮ ಶುಭಾಶುಭಂ ಮೆ॥ ನ ವಾಚಕಂ ಕರ್ಮ ಶುಭಾಶುಭಂ ಮೆ॥ ಜ್ಞಾನಾಮೃತಂ ಶುದ್ಧ ಮತೀಂದ್ರಯಃ ಅಹಂ ॥ ಶುಭಾಶುಭಗಳನ್ನು ಕೊಡುವ ಮಾನಸಿಕ ಕರ್ಮ ನನಗಿಲ್ಲ. ಶುಭಾಶುಭಗಳನ್ನು ಕೊಡುವ ಕಾಯಕ ಕರ್ಮ ನನಗಿಲ್ಲ, ಶುಭಾಶುಭಗಳನ್ನು ಕೊಡುವ ಮಾನಸಿಕ ಕರ್ಮ ನನಗಿಲ್ಲ, ಶುಭಾಶುಭಗಳನ್ನು ಕೊಡುವ ವಾಚಕ ಕರ್ಮ ನನಗಿಲ್ಲ. ಶುದ್ಧವಾದ ಅತೀಂದ್ರಿಯವಾದ ಜ್ಞಾನಾಮೃತವೆ ನಾನು. ಇಲ್ಲಿ ಪ್ರಾಜ್ಞರು ತಮ್ಮ ಪ್ರಸಾದವ ಬಿತ್ತರಿಸಿದುದು ನೋಡುವುಡೆ ಚಿದಹಂಕಾರವುಳ್ಳ ಸಾಹಿತ್ಯ ಕಾಣುವದಲ್ಲದೆ, ಚಿದಹಂಕಾರ ದೈಕ್ಯವಾಗಿಹ ಪ್ರಭುವಿನ ಸಾಹಿತ್ಯವಾಗದು. ಇಲ್ಲಿ ಒಂದು ತಿರಸ್ಕಾರ ಮಾಡಿ ಇನ್ನೊಂದು ಪುರಸ್ಕರ ಮಾಡಿದ ಸಾಹಿತ್ಯ ಕಾಣುವವು, ಹೇಗೆಂದರೆ ಇಲ್ಲಿ ಮನಸ್ಸು ಕಾಯ, ವಾಚ, ಶುಭಾಶುಭ, ಕರ್ಮ ತನಗಿಲ್ಲವಾಗಿದೆ. ತಾನು ಶುದ್ಧವಾದ ಅತೀಂದ್ರಿಯವಾದ ಜ್ಞಾನಾಮೃತ. ನಾನು ಎನ್ನುವ ಚಿದಹಂಕಾರ ಎದ್ದು ತೋರುವುದು.

ವ್ಯೋಮಾತೀತವಾದ ನಿರಂತರವಾದ ಸರ್ವವನ್ನು ಒಳಗೊಂಡ ಆತ್ಮನೆ ನಾನು. ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಾನು ನನ್ನ ಆತ್ಮನನ್ನು ಹೇಗೆ ನೋಡಬಲ್ಲೆ ಎನ್ನುವಲ್ಲಿಯೂ ಇಲ್ಲಿಯೂ ಚಿದಹಂಕಾರ ಸೂಕ್ಷ್ಮವಾಗಿ ಹುದುಗಿದೆ.

ನಾನು ಹುಟ್ಟಿದವನು ಅಲ್ಲ, ಮೃತನೂ ಅಲ್ಲ, ನನಗೆ ಶುಭ ಅಶುಭ ಕರ್ಮಗಳು ಇಲ್ಲ. ವಿಶುದ್ಧವಾದ ನಿರ್ಗುಣ ಬ್ರಹ್ಮವೆ ನಾನು. ನನಗೆ ಬಂಧನ ಮುಕ್ತಿ ಹೇಗೆ ಇರಬಲ್ಲವು ಎಂಬಲ್ಲಿಯೂ ಚಿದಹಂಕಾರದಿಂದುಕ್ತವಾದ ಅನುಭವವಿದೆ. ಇದು ಚಿದಹಂಕಾರದೈಕ್ಯ ಸಾಹಿತ್ಯವಾಗದು. ನಾನು ಸಾರ ತರವಾದ ಶಿವ ಪರವಸ್ತು ಹೋಗುವುದು, ಬರುವುದು ನನಗಿಲ್ಲ. ನಿರ್ವಿಕಲ್ಪ ನಾನು ನಿರಾಕುಲ ನಾನು, ಎನ್ನುವದು ಚಿದಹಂಕಾರದಿಂದುಕ್ತವಾದುದು ಇದು ಪ್ರಭುವಿನ ಚಿದಹಂಕಾರ ದೈಕ್ಯ ಸಾಹಿತ್ಯವಾಗದು.

ಸಹಜವೂ, ಅಜವೂ, ಅಚಿಂತ್ಯವೂ ಆದ ತನ್ನ ಸ್ವರೂಪವನ್ನು ಕಂಡ ಮೇಲೆ ಅವನು ಏನು ಮಾಡಿದರೂ ಅದರಿಂದ ದೋಷವಿಲ್ಲ, ಪಾಪ ಲೇಪವಿಲ್ಲದವನಾದುದರಿಂದ ಅವನು ಸಂಯಮಿಯಾಗಿ ಅಥವಾ ತಪಸ್ವಿಯಾಗಿ ಕರ್ಮ ಮಾಡಿದ್ದರೂ ಆಗಲೂ ಬದ್ಧನಾಗುವದಿಲ್ಲ ಎಂದು ಹೇಳಿರುವಲ್ಲಿಯೂ ಚಿದಹಂಕಾರದಿಂದುಕ್ತವಾದುದು. ಇದು ಪ್ರಭುವಿನಂತೆ ಚಿದಹಂಕಾರ ನಷ್ಟವಾದ ಸಾಹಿತ್ಯವಾಗದು.

ನಿರಾಮಯನು ಅನುಪಮನು, ದ್ವಂದ್ವರಹಿತನೂ, ಮೋಹ ರಹಿತನು, ಆಶೆ ಇಲ್ಲದವನು ಲೋಪವಾಗದ ಶಕ್ತಿಯುಳ್ಳವನು, ಶಾಶ್ವತನು, ಈಶ್ವರನು ಆದ ಆತ್ಮನನ್ನು ಹೊಂದವನು. ಎಂದು ಹೇಳುವಲ್ಲಿಯು ವಿವರಿಸಿ ನೋಡುವುಡೆ ದೇಹ ಇರುವವರೆಗೂ ಸಹಜ ಅಜ ಅಚಿಂತ್ಯ ಸ್ವರೂಪ ಕಂಡಾತ. ದೇಹ ಹೋದ ನಂತರ ಅಚಿಂತ್ಯತ್ವದಲ್ಲಿ ಆತ್ಮವನ್ನು ಹೊಂದುವನು ಎಂದು ಬಿತ್ತರಿಸಿದುದು ನೋಡುವುಡೆ ಇದು ಕೂಡಾ ಚಿದಂಹಕಾರ ದೈಕ್ಯವಾದ ಸಾಹಿತ್ಯವಾಗಲಿಲ್ಲ ಏಕೆಂದರೆ? ಇರುವಾಗಲೆ ಬದುಕಿರುವಾಗಲೆ ಚಿದಹಂಕಾರ ನಿರಸನವಾಗಲಿಲ್ಲ. ಇದು ಕಾರಣ ಇಲ್ಲಾದುದು, ಇಲ್ಲಾದುದು ಎಂತಿಪ್ಪುದು ಎಂಬುದು ಅರಿಯ ಹೋಗಲಿಲ್ಲ ಇದು ಕಾರಣ ಚಿದಹಂಕಾರ ದೈಕ್ಯ ಸಾಹಿತ್ಯವಾಗದು.

ಸುಮ್ಮನೆ ಹೇಳುವದಕ್ಕಾದರೂ ನಿನಗೆ ನಾಮರೂಪಗಳಿಲ್ಲ. ನನಗಿಂತ ಬೇರೆಯಾದ ಅಥವಾ ನಿನ್ನೊಂದಿಗೆ ಸೇರಿರುವ ಬೇರೆ ಯಾವ ವಸ್ತುವೂ ಇಲ್ಲ. ಎಲೆ ನಾಚಿಕೆ ಇಲ್ಲದ ಮನಸ್ಸೆ ಏಕೆ ವಿಷಾದಿಸುವೆ ಗಗನದಂತೆ ಸಮರಸವಾಗಿರುವ ಜ್ಞಾನಾಮೃತವೆ ನಾನು. ಎಲೆ ಮನವೆ ನೀನೇಕೆ ರೋಧಿಸುವೆ? ನಿನಗೆ ಜರಾಮೃತ್ಯುಗಳಿಲ್ಲ, ನಿನಗೆ ಜನ್ಮ ದುಃಖಗಳಿಲ್ಲ ಏಕೆ ದುಃಖಿಸುವೆ? ನಿನಗೆ ಮತ್ತಾವ ವಿಕಾರವೂ ಇಲ್ಲ ಗಗನದಂತೆ ಸಮರಸವಾಗಿರುವ ನಾನು, ಇಲ್ಲಿ ಮನಸ್ಸಿಗೆ ಬೋಧಿಸುವ ಚಿದಹಂಕಾರವು ಇದೆ. ಮೇಲೆ ತಾನೆ ಜ್ಞಾನಾಮೃತನೆನ್ನುವ ಚಿದಹಂಕಾರವು ಎದ್ದು ನೀನೇಕೆ ಕಾಣುವುದು ?

ಎಲೆ ಮನವೆ ನೀನೇಕೆ ರೋಧಿಸುವೆ? ನಿನಗೆ ಕಾಮವಿಲ್ಲ ರೋಧಿಸುವೆ, ನಿನಗೆ ವಿಮೋಹವಿಲ್ಲ ನೀನೇಕೆ ರೋಧಿಸುವೆ? ನಿನಗೆ ಪ್ರಲೋಭನವಿಲ್ಲ, ಗಗನದಂತೆ ಸಮರಸವಾದ ಜ್ಞಾನಾಮೃತವೆ ನಾನು ಎಂಬಲ್ಲಿಯೂ ಚಿದಹಂಕಾರವಿದೆ. ಇಲ್ಲದ ಕಾಮ ಇಲ್ಲದ ಲೋಭ, ಇಲ್ಲದ ಮೋಹ, ಇಲ್ಲದ ಜರಾಮೃತ್ಯು ಇಲ್ಲ. ಜನ್ಮ ದುಃಖ ಇಲ್ಲವಾದರೂ ಗಗನದಂತೆ ಸಮರಸವಾದ ಜ್ಞಾನಾಮೃತ ತಾನೆನ್ನುವ ಸೂಕ್ಷ್ಮ ಚಿದಹಂಕಾರ ದೈಕ್ಯವಾಗಲಿಲ್ಲ. ಇದು ಕಾರಣ ಗಗನದಂತೆ ಸಮರಸವಾದ ಜ್ಞಾನಾಮೃತ ತಾನೆನ್ನುವ ಅಹಂಕಾರ ತನ್ನ ಸ್ವಂತ ಮಹಿಮೆಯಲ್ಲಿ ಲೀಯವಾಗದ್ದರಿಂದ, ಇದು ಪ್ರಭುವಿನ ಸಾಹಿತ್ಯವಾಗದು.

ನನಗೆ ತಿಳಿಯುವವನಿಲ್ಲ ತಿಳಿಯ ತಕ್ಕಂಥ ವಸ್ತುವೂ ಇಲ್ಲ, ಕಾರಣವೂ ಇಲ್ಲ, ಕಾರ್ಯವೂ ಇಲ್ಲ, ತತ್ವ ಚಿಂತ್ಯ, ಅಚಿಂತ್ಯ ಎಂದು ಹೇಗೆ ಹೇಳಲಿ? ಅನಾಮಯವಾಗಿರುವ ನಿರ್ವಾಣವೆ ನಾನು. ಇದು ನನ್ನ ಸ್ವರೂಪವೆಂದು ಹೇಳುವಲ್ಲಿ ಚಿದಹಂಕಾರ ದೈಕ್ಯವಾಗಲಿಲ್ಲ. ಅನಾಮಯನಾಗಿರುವ ನಿರ್ವಾಣವೆ ನಾನು ಎಂಬಲ್ಲಿ ಇಲ್ಲಿ ಅತ್ಯಂತ ಬಹು ಸೂಕ್ಷ್ಮವಾಗಿ ಚಿದಹಂಕಾರ ಹುದುಗಿದೆ. ಇಂತಾದ ಕಾರಣ ಏನೆಂಬುದೇನು ಇಲ್ಲದಿಹುದೆ ಚಿದಹಂಕಾರದೈಕ್ಯವಯ್ಯ ಎಂದು ಬಿತ್ತರಿಸಿದ. ಪ್ರಭುವಿನ ಮಹಾಪ್ರಸಾದ ಸ್ಮರಿಸುವದಾಗಿದೆ. ಎಲ್ಲಾ ಸಮಾಧಿಯು ನನ್ನಲ್ಲಿಯೆ ಇದೆ ಎಂದು ತಿಳಿ. ಲಕ್ಷ್ಯಾ ಲಕ್ಷ್ಯಗಳಿಂದ ಪಾರಾದವನೆಂದು ತಿಳಿ ಯೋಗ ವಿಯೋಗವ ಕುರಿತು ನಾನು ಹೇಗೆ ಹೇಳಲಿ ಅನಾಮಯವಾಗಿರುವ ನಿರ್ವಾಣವೆ ನಾನು.

ನಿಃಸ್ಸಂಶಯವಾಗಿಯೂ ನಾನು ನಿರಾಕುಲ ಎಂದು ತಿಳಿ. ನಿಃಸಂಶಯವಾಗಿಯೂ ನಾನು ನಿರಂತರ ಎಂದು ತಿಳಿ. ಅನಾಮಯವಾಗಿರುವ ನಿರ್ವಾಣವೆ ನಾನು ಎಂಬುದು ವಿವರಿಸಿ ನೋಡುವುದೆ ಚಿದಹಂಕಾರವದೆ ಇಲ್ಲಿ ಏನೆಂಬುದೇನೂ ಇಲ್ಲದುದೆ ಚಿದಹಂಕಾರ ಎಂದು ಬಿತ್ತರಿಸಿದ ಪ್ರಭುವಿನ ಸಾಹಿತ್ಯವಾಗಲಿಲ್ಲ. ಇದು ಕಾರಣ ಇದು ಚಿದಹಂಕಾರ ದೈಕ್ಯ ಸಾಹಿತ್ಯವಾಗದು.

ಸಾರಾಸಾರಗಳಿಲ್ಲದ ಶೂನ್ಯಾ ಶೂನ್ಯಗಳಿಲ್ಲದ ನಿರಂತರವಾಗಿರುವ ಸರ್ವಮಂಗಳಮಯ ತತ್ವ. ಒಂದೆ ಸತ್ಯವಾದರೆ ಅಲ್ಲಿ ಮೊದಲು ಕೊನೆ ಎಂಬ ಮಾತೆಲ್ಲಿ? ಸತ್ಯವನ್ನು ಮಾತಿನ ಮೂಲಕ ವಿವರಿಸುವದಕ್ಕೂ ಆಗುವುದಿಲ್ಲ, ವಿವರಿಸದೆ ಇರುವದಕ್ಕೂ ಆಗುವುದಿಲ್ಲ. ಅದನ್ನು ತಿಳಿದಿದೆ ಎಂತಲೂ ಹೇಳುವುದು ಆಗುವುದಿಲ್ಲ, ತಿಳಿದಿಲ್ಲವೆಂತಲೂ ಹೇಳುವದಕ್ಕೆ ಆಗುವುದಿಲ್ಲ ನಿರಂತರವಾದ ಸರ್ವಮಂಗಳ ತತ್ವವೊಂದೆ ಸತ್ಯವಾದರೆ , ವಿಷಯ, ಇಂದ್ರಿ, ಬುದ್ದಿ, ಮನಸ್ಸು, ಇವುಗಳೆಲ್ಲಿ? ಇಲ್ಲಿ ಸತ್ಯವನ್ನು ಅನುಪಮ ಎಂಬುದಕ್ಕೆ ಒಪ್ಪಿದುದಾಗಿದೆ. ನಿರಂತರವಾದ ಸರ್ವಮಂಗಳ ತತ್ವವೊಂದೆ ಸತ್ಯ ಎಂಬ ಸಂಜ್ಞೆ ಎದ್ದು ತೋರುವದರಿಂದ, ಇಲ್ಲಿಯೂ ಏನೆಂಬುದೇನೂ ಇಲ್ಲದಿಹುದೆ ಎಂಬ ಸಂಜ್ಞೆಗೆ ಸರಿ ಹೋಗದ್ದರಿಂದ, ಇಲ್ಲಿಯೂ ಸೂಕ್ಷ್ಮವಾಗಿ ಚಿದಹಮ್ಮು ಇದೆ.

ಪ್ರಭುವಿನ ಸಂಜ್ಞೆ ಏನೆಂಬುದೇನೂ ಇಲ್ಲದಿಹುದೆ, ಚಿದಹಂಕಾರ ದೈಕ್ಯ ಸಾಹಿತ್ಯವಾಗಿದೆ. ಇದು

ತನ್ನಿಂದ ತನ್ನ ಅರಿದರಿದ ಸಂಜ್ಞೆಯಾಗಿರುವದರಿಂದ ಚಿದಹಂಕಾರ ದೈಕ್ಯವಾಗಿದೆ.

ಪ್ರಕೃತಿ ಪುರುಷನನ್ನು ನಿರಾಕರಿಸಿದ ಮೇಲೆ,ಎರಡನೆಯದಿಲ್ಲ, ಗುಣವೂ ಅದರ ಸಂಬಂಧದಿಂದ ಬರುವ ಮೂರನೆಯದಾದ ದುಃಖವೂ ಇಲ್ಲ. ನಿರಂತರವಾದ ಸರ್ವಮಂಗಲ ತತ್ವವೊಂದೆ ಸತ್ಯವಾದರೆ ವೃದ್ಧ, ಯುವಕ, ಶಿಶು, ಇವರು ಹೇಗೆ ಇರಬಲ್ಲರು. ಸೃಷ್ಠಿ ಲಯವಾಗಿದೆ ಅಥವಾ ಲಯವಾಗಿಲ್ಲ. ಇವೆರಡೂ ಅಸತ್ಯ ಆವುದೊ ಉತ್ಪನ್ನವಾಗಿದೆ. ಅಥವಾ ಇಲ್ಲ ಎಂಬುದು ಅಸತ್ಯ ನಿರಂತರವಾದ ಸರ್ವಮಂಗಳ ತತ್ವವೊಂದೆ ಸತ್ಯವಾದರೆ, ಅದು ನಾಶವಾಗುವುದು. ನಾಶವಾಗುವದಿಲ್ಲವೆಂದು ಹೇಗೆ ಹೇಳುವುದು. ಇಲ್ಲಿ ಸೂಕ್ಷ್ಮವಾಗಿ ವಿವರಿಸಿ ನೋಡುವುಡೆ ಏನೆಂಬುದೇನೂ ಇಲ್ಲದಿಹುದೆ ಚಿದಹಂಕಾರ ದೈಕ್ಯವಯ್ಯಾ ಎಂಬ ಸಂಜ್ಞೆ ಇಲ್ಲಿ ಎದ್ದು ತೋರುವದಿಲ್ಲ.

ಪ್ರಭುವಿನ ಸಾಹಿತ್ಯ ಚಿದಹಂಕಾರದೈಕ್ಯ ಸಾಹಿತ್ಯ , ಉಪಮಿಸದ ಸಾಹಿತ್ಯ . ಇಂಥ ಸಾಹಿತ್ಯ ಶಿಕ್ಕುವುದು ತೀರಾ ವಿರಳ.ಉಪಮಿಸುವ ಸಾಹಿತ್ಯ ಬಹಳ ಇವೆ. ಒಂದು ಅಲ್ಲ ಮಾಡಿ, ಇನ್ನೊಂದನ್ನು ಸಿದ್ಧಮಾಡುವ ಸಾಹಿತ್ಯಗಳಿವೆ. ಪ್ರಭುವಿನದು ಅನುಪಮ ನಿಲಯವುಳ್ಳದ್ದಾದುದರಿಂದ, ಈ ಅನುಪಮ ಎಂಬುದೇನೂ ಇಲ್ಲದಿಹುದೆ, ಚಿದಹಂಕಾರ ದೈಕ್ಯ ಪ್ರಭುವಿನ ಸಾಹಿತ್ಯವಾಗಿಹುದು.

ಚಿದಹಂಕಾರ ದೈಕ್ಯವಾದ ನಿಲುವುಳ್ಳವಂಗೆ, ಷಡೂರ್ಮಿಗಳಿಲ್ಲ ಷಡ್ವರ್ಗಗಳಿಲ್ಲ ಮರುಜವಣಿಗೆ ಹಸಿವು ತೃಷೆಗಳುಂಟೆ? ಸಂಜೀವಿನಿ ಕಡ್ಡಿಗೆ ಶೋಕ ಮೋಹವುಂಟೆ? ಸೂರ್ಯಂಗೆ ಕತ್ತಲೆಯ ಭಯವುಂಟೆ? ಹಾಗೆ ಚಿದಹಂಕಾರ ದೈಕ್ಯವಾದ ನಿಲುವುಳ್ಳವಂಗೆ ಹಸಿವು ತೃಷೆ ತನ್ನೊಳ ಕಾಣುವದುಂಟೆ? ಕರಣಂಗಳೆ ಕಿರಣಂಗಳಾಗಿರುವಲ್ಲಿ ಶೋಕ ಮೋಹವುಂಟೆ? ಅಜಾತಂಗೆ ಜನನ ಮರಣವುಂಟೆ? ಸಮತೆ ಸಯವಾದ ಶರಣಂಗೆ ಸೃಷ್ಠಿ ಉಂಟೆನಲಿಲ್ಲ ಇಲ್ಲೆನಲಿಲ್ಲ, ಇಲ್ಲವೆಂಬುದು ಇಲ್ಲವಾದುದರಿಂದ ಏನೆಂಬುದೇನೂ ಇಲ್ಲದಿಹುದೆ ಚಿದಹಂಕಾರದೈಕ್ಯವು ಎಂದು ಹೇಳಿದೆ.

ಚಿದಹಂಕಾರದೈಕ್ಯವಾದ ಪ್ರಭುವಿಂಗೆ ಅಹಮಿಲ್ಲದ ಚಿದ್ಘನನೆಂದರೂ ತಪ್ಪಾಗುವದು . ಏನೆಂಬುದೇನೂ ಇಲ್ಲದಿಹುದೆ ಚಿದಹಂಕಾರ ದೈಕ್ಯದ ಸಂಜ್ಞೆ ನೋಡಿದಾಗ, ಅಹಮಿಲ್ಲದ ಚಿದ್ಘನನೆಂಬುದು ಏನೆಂಬುದೇನೂ ಇಲ್ಲದ ಸಂಜ್ಞೆಯಾಗಲಿಲ್ಲ. ಇದು ಕಾರಣ ಇದು ಸರಿಯಾಗದು ಇದು ಮೂಕನ ಮೌನವೆಂದರೂ ಏನೆಂಬುದೇನೂ ಇಲ್ಲದಿಹುದೆ , ಎಂಬ ಸಂಜ್ಞೆಗೆ ಸರಿಯಾಗದು . ಇದು ಕಾರಣ ಪ್ರಭುವಿನ ಸಾಹಿತ್ಯ ಪ್ರಭುವಾಗಿ ತಿಳಿವುದು. ಅಂದಲ್ಲಿ ತನಗೆ ಷಡೂರ್ಮಿಗಳಿಲ್ಲ,ಹಸಿವು ತೃಷ್ಠಿಗಳಿಲ್ಲ,ಶೋಕವೂ ಇಲ್ಲ,ಮೋಹವೂ ಇಲ್ಲ, ಜನನ ಮರಣಂಗಳಿಲ್ಲ,ಕಾಮ ಕ್ರೋಧಾದಿಗಳಿಲ್ಲ, ಮದವಿಲ್ಲ ,ಮತ್ಸರವಿಲ್ಲ ,ನಾನೆಂಬ ಚಿದಹಮ್ಮು ಇಲ್ಲ, ನೀನೆಂಬ ದಾಸೋಹಂ ಭಾವ ಇಲ್ಲ, ಇಲ್ಲ ಇಲ್ಲವೆಂಬುದು ತಾನು ಇಲ್ಲ . ತಾನು ಇಲ್ಲವೆಂಬುವ ಎನೆಂಬುದೇನೂ ಇಲ್ಲದಿಹುದೆ ಚಿದಹಂಕಾರ ದೈಕ್ಯವಯ್ಯ . ಇದು ಪ್ರಭುವಿನ ಮಹಾನುಭವವು. ಬಹು ಗುಹ್ಯಾತಿ ಗುಹ್ಯವು ಅತ್ಯಂತ ರಹಸ್ಯವಾದುದು ಗಹನವಾದುದು, ಇದು ತತ್ವ ದೃಷ್ಠಿಯುಳ್ಳವರಿಗಿದು ಸಹಜವು ಆಗಿದೆ.

156

ಅಂಗವಿಲ್ಲದ ಅನುಭಾವಕ್ಕೆ ನೇಮವಿಲ್ಲದ ನೆನಹು
ತಾಗು ತಡೆಯಿಲ್ಲದ ಸುಮ್ಮಾನ ಸುಖ
ಗುಹೇಶ್ವರ ನಿರಾಳ ಕಂಡಾ. ॥ 718 ॥

ತಾತ್ಪರ್ಯ: ಅಂಗವಿಲ್ಲದ ಅನುಭಾವಕ್ಕೆ ನೇಮವಿಲ್ಲದ ನೆನಹು: ಇದಾರ ಅನುಭಾವ,

ಅಂಗವಿಲ್ಲದವನ ಅನುಭಾವ. ಈ ಅನುಭಾವಕ್ಕೆ ನೇಮವಿಲ್ಲದ ನೆನಹು. ಇದಾರ ನೆನಹು? ತಾನಾರೆಂದರಿತ ತನ್ನಯ ನೆನಹು. ಇದು ಅಂಗವಿಲ್ಲದ ಅನುಭಾವಕ್ಕೆ ನೇಮವಿಲ್ಲದ ನೆನಹು? ಇದಾವ ಅಂಗವಿಲ್ಲದ ಅನುಭಾವ? ಸ್ಥೂಲಾಂಗವಿಲ್ಲದ ಅನುಭಾವ,ಸೂಕ್ಷ್ಮಾಂಗ ಕಾರಣಾಂಗವಿಲ್ಲದ ಅನುಭಾವ, ತತ್ವ ಅತತ್ವವೆಂಬ ವಿವೇಕಾಂಗ1 ವಿಲ್ಲದನುಭಾವ, ಶುಭಾಂಗವಿಲ್ಲದನುಭಾವ , ಅಶುಭಾಂಗವಿಲ್ಲದನುಭಾವ, ಧರ್ಮಾಧರ್ಮವಿಲ್ಲದ ಅನುಭಾವ, ಬದ್ಧಾಂಗವಿಲ್ಲದನುಭಾವ, ಮುಕ್ತಾಂಗ ವಿಲ್ಲದನುಭಾವ, ನಾಹಂ ಎಂಬಂಗವಿಲ್ಲದ ಅನುಭಾವ, ಕೋಹಂ ಎಂಬಂಗವಿಲ್ಲದ ಅನುಭವ, ಸೋಹಂ ಎಂಬಂಗವಿಲ್ಲದ ಅನುಭಾವ, ಚಿದಹಮ್ಮು ಎಂಬಂಗವಿಲ್ಲದನುಭಾವ. ಇದು ನಿತ್ಯ ಇದು ಅನಿತ್ಯವೆಂಬಂಗವಿಲ್ಲದನುಭಾವ, ನುಡಿಗೊಳಪಟ್ಟ ಅಂಗವೆಲ್ಲ ಮಾಯಾಮಯವಾದ ಕಾರಣ ಅಂಗವಿಲ್ಲದನುಭಾವಕ್ಕೆ ನೇಮವಿಲ್ಲದ ನೆನಹು ಎಂದು ಹೇಳಿಹರು.

ಶರಣ ಅಂಗವಿಲ್ಲದನುಭಾವಿ ಶಬ್ದಮುಗ್ಧ ಶರಣ, ಬಯಲವರಿತು ಬಯಲು ಬಯಲಾಗಿದ್ದ ಶರಣ. ಬಯಲು, ಬಯಲೆಂದು ನುಡಿದು ಹೇಳಲಿಲ್ಲ. ಓಹೋ! ಬಯಲು ಬಯಲಾಗಿದ್ದ ಘನವ ಅದಾರು ಅರಿವುದು? ಅದಾರು ಹೀಗೆಯೆ ಎಂದು ವಿವರಿಸುವುದು? ಘಟಾಕಾಶವೆಂದು ಕರೆದರೂ ಶಬ್ದಮುಗ್ಧ, ಮದಾಕಾಶ, ಮೇಘಾಕಾಶ, ಮಹಾಕಾಶವೆಂದರೂ ತಾನು ಶಬ್ದಮುಗ್ಧವಾಗಿದ್ದ ಬಯಲು, ಶಬ್ದಮುಗ್ಧವಾಗಿದ್ದ ಅನುಭಾವ. ನುಡಿದು ಹೇಳದ ಅನುಭಾವ , ನಡೆದು ತೋರಿಸದ ಅನುಭಾವ. ಇದು ಇದ್ದಂತಿದ್ದ ಘನವರಿತುದು ಅಂಗವಿಲ್ಲದನುಭಾವ. ತಾನೆರೆಂದು ತನ್ನಿಂದ ತನ್ನ ಅರಿತ ಸೂಕ್ಷ್ಮ ಕಾರಣವೆನ್ನದ ಅನುಭಾವ ಅಂಗವಿಲ್ಲದ ಅನುಭಾವ, ಇದು ಅರಿತೆ ಅರಿಯೆನೆನ್ನುವದಕ್ಕೂ ಎಡೆಗೊಡದ ಅನುಭಾವ. ಅಹುದು, ಅಲ್ಲವೆಂಬುದಕ್ಕೆಡೆಗೊಡದ ಅನುಭಾವ, ಜೀವ ಪರಮರೆಂಬುದುಕ್ಕೆಡೆಗೊಡದ ಅನುಭಾವ ಜೀವ ಪರಮರೈಕ್ಯವೆಂಬುದುಕ್ಕೆಡೆಗೊಡದ ಅನುಭಾವ. ತನುನಷ್ಟ, ಮನನಷ್ಟ, ನೆನಹುನಷ್ಟ, ಭಾವನಷ್ಟ, ಜ್ಞಾನನಷ್ಟವಾಗಿಹ ಅನುಭಾವ ನಾನೀನೆಂಬುದಕ್ಕೆಡೆಗೊಡದ ಅನುಭಾವ ಶಬ್ದಮುಗ್ಧವಾಗಿದ್ದ ಅನುಭಾವ.

ಶರಣನು ಅಂಗವಿಲ್ಲದ ಅನುಭಾವಕ್ಕೆ ನೇಮವಿಲ್ಲದ ನೆನಹು. ಇದು ನಿಜವ ನೆಯ್ದು ಶಬ್ದಮುಗ್ಧವಾಗಿಹ ನೆನಹು, ಇದಕ್ಕೇನೆನ್ನಬೇಕು? ಲಿಂಗವನ್ನೇ ಲಿಂಗೈಕ್ಯವನ್ನೆ ಸಂಗವೆನ್ನೆ ನಿಸ್ಸಂಗವೆನ್ನೆ ಆಯಿತೆನ್ನೆ ಆಗದೆನ್ನೆ ನಾನೆನ್ನೆ. ಚೆನ್ನಮಲ್ಲಿಕಾರ್ಜುನ ಲಿಂಗದಲ್ಲಿ ಘನ ಲಿಂಗೈಕ್ಯವಾದ ಬಳಿಕ ಮತ್ತೇನೂ ಎನಲೊಲ್ಲದೆ ಇದ್ದೆನು.

ಅಂಗವಿದ್ದವಂಗೆ ನೇಮವುಳ್ಳ ನೆನಹು, ಸಹಜವಾಗಿರುವುದು. ಅಂಗವಿಲ್ಲದವನಾದುದರಿಂದ ನೇಮವಿಲ್ಲದ ನೆನಹು ಲಿಂಗ ಲಿಂಗ ಎಂಬುವ ನೇಮದ ನೆನಹು ನಿಷ್ಪತ್ತಿಯಾಗಿದೆ. ಲಿಂಗೈಕ್ಯವೆಂಬುದು ನಿಷ್ಪತ್ತಿಯಾಗಿದೆ. ಸಂಗವೆಂಬುದು ನಿಷ್ಪತ್ತಿಯಾಗಿದೆ ನಿಸ್ಸಂಗವೆಂಬುದು ನಿಷ್ಪತ್ತಿಯಾಗಿದೆ. ಆಯಿತ್ತು ಎಂಬುದು ನಿಷ್ಪತ್ತಿಯಾಗಿದೆ. ಆಗದೆಂಬುದು ನಿಷ್ಪತ್ತಿಯಾಗಿದೆ, ಇದು ಕಾರಣ ನೇಮವಿಲ್ಲದ ನೆನಹು ಎಂದು ಹೆಳಿದ್ದಾರೆ.

ನೇಮವಿಲ್ಲದ ನೆನಹು ಇದಾವ ನೆನಹು? ಲಿಂಗವೆನ್ನೆ ಎಂಬುದೆ ನೇಮವಿಲ್ಲದ ನೆನಹು. ಲಿಂಗೈಕ್ಯವೆನ್ನೆ ಎಂಬುದು ನೇಮವಿಲ್ಲದ ನೆನಹು. ಸಂಗವನ್ನೆ ಎಂಬುದೆ ನೇಮವಿಲ್ಲದ ನೆನಹು. ನಿಸ್ಸಂಗವೆನ್ನೆ ಎಂಬುದೆ ನೇಮವಿಲ್ಲದ ನೆನಹು. ಆಯಿತ್ತೆನ್ನೆ ಎಂಬುದೆ ನೇಮವಿಲ್ಲದ ನೆನಹು. ಆಗದೆನ್ನೆ ಎಂಬುದೆ ನೇಮವಿಲ್ಲದ ನೆನಹು. ನಾನೆನ್ನೆ ಎಂಬುದು ನೇಮವಿಲ್ಲದ ನೆನಹು, ಚೆನ್ನಮಲ್ಲಿಕಾರ್ಜುನ ಲಿಂಗದಲ್ಲಿ ಘನ ಲಿಂಗೈಕ್ಯವಾದ ಬಳಿಕ ಮತ್ತೇನೂ ಎನಲೊಲ್ಲದೆ ಇದ್ದೆನಯ್ಯ , ಮತ್ತೇನೂ ಎನಲೊಲ್ಲದೆ ಇದ್ದುದು ತಾಗು ತಡೆಯಿಲ್ಲದ ಸುಮ್ಮಾನ ಸುಖವು.

ನೇಮವಿಲ್ಲದ ನೆನಹು , ನುಡಿಯನ್ನೆ ಸೇರದ ನೆನಹು, ತನ್ನೊಳಗೆ ತಾನೆ ಅರಿದರಿದು ಆವಾವ ನುಡಿಯನ್ನುಸೇರದುದರಿಂದ ನೇಮವಿಲ್ಲದ ನೆನಹು, ಆವಾವ ಭಾವವನ್ನಸೇರದುದೆ ನೇಮವಿಲ್ಲದ ನೆನಹು ಆಗಿದೆ. ಬಯಲು ಬಯಲೆ, ಅದಕ್ಕಾವ ಸೋಂಕು? ಅದಕ್ಕಾವ ನಿರ್ಭಂಧ? ತಾಗು ತಡೆಯಿಲ್ಲದ ಸುಮ್ಮಾನ ಸುಖವು. ಇದು ಮೂಕನ ಮೌನವು. ಮಾತಾಡಿ ಮೂಕನ ಮೌನವು ಆಗಬಹುದೆ? ಎಂದೆಂದೂ ಮೌನವೆ.ಅವನ ನಿಲವು ಮೌನಕ್ಕೆ ಮಾತು ತಾಗುವದಿಲ್ಲ . ಮಾತು ಅಡೆ ತಡೆ ಮಾಡುವುದು ಅಲ್ಲ, ಮೂಕನಲ್ಲಿ ಮಾತೆ ನಷ್ಟವಾಗಿರುವಲ್ಲಿ ಅವನು ನಿರ್ವಾಣ; ನಿರ್ವಾಣ ನಿಲುವು ನಿಜ ನಿಲವು.

ಬಯಲಿಂಗೆ, ಆವಾವ ಭೂತಂಗಳು ಮುಟ್ಟವು, ತಟ್ಟವು. ಅದು ಬಯಲಾಗಿರಲು ಅದಕ್ಕದು ಸಹಜವಾಗಿರುವಾಗ , ನಿಃಶಬ್ದ ಬ್ರಹ್ಮಕ್ಕೆ,ಆವಾವ ಶೃತಿಗಳು ಮುಟ್ಟವು, ತಟ್ಟವು, ನಿಃಶಬ್ದ ಘನ ಶಬ್ದಕ್ಕೊಳಪಡಬಹುದೆ ? ಬಯಲು ಶಬ್ದಮುಗ್ಧ ಬ್ರಹ್ಮವು. ಇದು ಶಬ್ದ ಮುಗ್ಧ ಬ್ರಹ್ಮವೆಂದುದೆಂದು? ಅರಿವುಡೆ ತಾನೆ ಬ್ರಹ್ಮ ಬ್ರಹ್ಮಕ್ಕೆ ತಾ ಬ್ರಹ್ಮವೆಂಬುದು ಘಟಿಸದು ಎಂದು ಹೇಳಿದುದು.

ನಿಸ್ಸೀಮವಾದುದು ಶಬ್ದಮುಗ್ಧ ಬ್ರಹ್ಮ. ನಿಃಶಬ್ದ ಬ್ರಹ್ಮವದು ಅಕಲ್ಪಿತ. ಸೀಮಿತವಾದುದು ಅದು ಕಲ್ಪಿತ ಪುರುಷ ತಾನೆಂದು ನಷ್ಟವಾಗದ ವಿನಃ ಅಂಗವಿಲ್ಲದನುಭಾವ ವೇದ್ಯವಾಗುವದು ದುಸ್ತರವು.

ಅಂಗವಿಲ್ಲದನುಭಾವ ನಿಸ್ಸೀಮ. ನೇಮವಿಲ್ಲದ ನೆನಹು, ನೇಮವ ಕೆಡಿಸುವದೆ ನೇಮ, ನೆನಹು ನೆನೆಯದ ನೆನೆಹು , ಏನೂ ಎನ್ನದ ಶಬ್ದಮುಗ್ಧವಾಗಿಹ ಅನುಪಮ ಸಂಜ್ಞೆ ಉಪಮೆಗೆ ತರಬಾರದು. ಉಪಮೆಗೆ ತಂದುದು ತಾಗು ತಡೆಯಿಲ್ಲದ ಸುಮ್ಮಾನ ಸುಖವಾಗದು. ಆವುದು ಉಪಮಾತೀತವಾದುದು , ಅದು ಸುಮ್ಮಾನ ಸುಖ, ಸುಖರೂಪ ಸುಖ ಅದು ತುಂಬಿದುದು ತುಳಕದು ನಂಬಿದುದು ಸಂದೇಹಿಸದು , ಒಲಿದುದು ಓಸರಿಸದು ನೆರೆಯರಿದುದು ಮರೆಯದು ಚೆನ್ನಮಲ್ಲಿಕಾರ್ಜುನ ನಿಮ್ಮ ಶರಣ ಅನುಪಮ ಸುಖಿ.

ಈ ಅನುಪಮ ಸುಖವೆ ತಾನು . ತನ್ನ ಸುಖವೆ ತಾಗುತಡೆಯಿಲ್ಲದ ಸುಮ್ಮಾನ ಸುಖ. ಸುಖದ ಸುಖವಾಗಿಹ ಮನ . ಏನೆಂಬೇನೆಂಬೆ ಇದು ಸಕ್ಕರೆಯಿಂದ ರಚಿಸಿದ ಗೊಂಬೆ ಅದು ಎತ್ತಕಡಿದರೂ ಸಿಹಿಯು . ಹಾಗೆ ತಾಗು ತಡೆಯಿಲ್ಲದ ಸುಮ್ಮಾನ ಸುಖ. ಶಬ್ದಮುಗ್ಧವಾಗಿಹ ಸುಖ, ಈ ಸುಖ ವರ್ಣಾತೀತವು ಸುಖವೆ ತಾನಾದುದು ಅಲ್ಲಿ ವರ್ಣಿಸುವವರಾರು? ಸುಖವದು ಸುಖ ಎನಲಿಲ್ಲ ಎನದಿದ್ದರೂ ಸುಖ ಸುಖವಾಗಿಯೆ, ಇದ್ದುದು ಇದು ಕಾರಣ, ತಾಗು ತಡೆಯಿಲ್ಲದ ಸುಮ್ಮಾನ ಸುಖವೆಂದು ಹೇಳಿಹರು. ಏನೂ ಎನ್ನದೆ ಶಬ್ದಮುಗ್ಧವಾಗಿದ್ದ ಸುಖ, ಅದು ಸುಮ್ಮಾನ ಸುಖ, ಸುಖವಾದುದರಿಂದ ಸುಮ್ಮನಾವು ವರ್ಣನೆಗಿಂಬುಂಟಾದಲ್ಲಿ ಸುಮ್ಮಾನ ಸುಖವಾಗದು, ಅವರ್ಣೀಯ ಸುಖ, ಸುಮ್ಮಾನ ಸುಖ ಇದು ವಾಙ್ಮನವಿಲ್ಲದವರ ಸುಖ.

ಗಾಢ ಸುಷುಪ್ತಿಯಲ್ಲಿಯ ಸುಖ ಹೇಗೆ ಎಚ್ಚರವಾದ ನಂತರ ಸುಖದಿಂದ ಮಲಗಿದ್ದೆ ಎಂದು ಅದನ್ನುಸ್ಮೃತಿಗೆ ತಂದು ಕೊಂಡು ಅನ್ನುವರು , ಅದು ತಾಗು ತಡೆಯಿಲ್ಲದ ಸುಖವಾಗದು. ಏಕೆಂದರೆ ಅದಕ್ಕೆ ಜಾಗ್ರತ ಸ್ವಪ್ನ ತಾಗುತ್ತವೆ , ತಡೆಯುಂಟು ಮಾಡುತ್ತವೆ. ಎಚ್ಚರವಾದ ನಂತರ ಇಲ್ಲವಾಗುತ್ತದೆ. ಇದಲ್ಲದೆ ಸುಷುಪ್ತಿ ಸುಖ ಅಂಗವುಳ್ಳ ಅನುಭವವಾಗಿದೆ. ಇಲ್ಲಿ ಅಂಗವಿಲ್ಲದ ಅನುಭಾವಕ್ಕೆ ನೇಮವಿಲ್ಲದ ನೆನಹು ತಾಗು ತಡೆಯಿಲ್ಲದ ಸುಮ್ಮಾನ ಸುಖ, ಇದು ಗುಹೇಶ್ವರ ನಿರಾಳ ಕಂಡಾ ಎಂದು ಹೇಳಿರುವಲ್ಲಿ, ಈ ಸುಖ ನಿಶ್ಚಿಂತ ಸುಖ. ಅಚಿಂತ್ಯತ್ವ ಕರಿಗೊಂಡು, ಸುಖವಾಗಿಹ ಸುಖ. ಈ ಘನ ಸುಖವು ನಿಸ್ಸೀಮ ಸುಖವಾದುದರಿಂದ ತಾಗು ತಡೆಯಿಲ್ಲದ ಸುಮ್ಮಾನ ಸುಖವು ನಿರುಪಾಧಿಯು; ಉಪಾಧಿ ಕಾಣನು. ಬಯಲ ತಡೆಗಟ್ಟುವವರಾರು? ಅಚಿಂತ್ಯಪದವ ತಡೆಗಟ್ಟುವವರಾರು? ಗುಹೇಶ್ವರ ನಿರಾಳವೆಂಬುದು

ನಿಃಶಬ್ದಬ್ರಹ್ಮವಾಗಿಹ ಪರಮಾನಂದವು ಪರಮಾಮೃತವು ಅದು ವಾಙ್ಮನೋತೀತವಾಗಿಹ, ಗುಹೇಶ್ವರ ನಿರಾಳ ಕಂಡಾ ಎಂದು ಹೇಳಿರುವರು.

157

ಅಗ್ಗವಣಿಯ ತಂದು ಮಜ್ಜನವ ಮರೆದವನ
ಪುಷ್ಪವ ತಂದು ಪೂಜೆಯ ಮರೆದವನ
ಓಗರವಕಂಡು, ಅಪ್ಯಾಯನವ ಮರೆದವನ
ಲಿಂಗವ ಕಂಡು ತನ್ನ ಮರೆದವನ
ಮರಣವಿಲ್ಲದ ಮಹಾಘನ ಒಳಕೊಂಡಿತ್ತು ಗುಹೇಶ್ವರ. ॥ 744 ॥

ತಾತ್ಪರ್ಯ: ಅಗ್ಗವಣಿಯ ತಂದು ಮಜ್ಜನವ ಮರೆದವನ : ಲಿಂಗಾರ್ಚಕರ ಪೂಜೆಗೂ, ಲಿಂಗ ವರಿತವರ ಪೂಜೆಗೂ ಮಹದಂತರವು. ಕ್ರಿಯಾವಂತರಿಗೂ ಅಕ್ರಿಯೆವಂತರಿಗೂ ಮಹದಂತರವು. ಮಹಾಂತರ ಲಿಂಗಾರ್ಚನೆ ಎತ್ತ, ಲಿಂಗಾರ್ಚಕರ ಲಿಂಗಪೂಜೆ ಎತ್ತ? ಭಾವಿಸಿ ಮಾಡುವ ಭ್ರಾಮಕರ ಪೂಜೆ ಎತ್ತ, ಭಾವಕ್ಕಗ್ಯಮ್ಯರಾಗಿಹ ನಿಭ್ರಾಂತರ ಪೂಜೆ ಎತ್ತ, ಸಕಲರಿಗೆ ಕಾಣಿಸುವ ಪೂಜಾಸಾಮಗ್ರಿಗಳೆತ್ತ? ಸಂತರಿಗೂ ಸತ್ಪುರುಷರಿಗೂ ಕಾಣುವ ಸದ್ವಾಸನಾರೂಪಿ ಪೂಜೆ ಎತ್ತ. ಜಡರೂಪಿ ಪೂಜಾ ಸಾಮಗ್ರಿಗಳೆತ್ತ? ಚೇತನ ರೂಪಿ ಪೂಜಾ ಸಾಮಗ್ರಿಗಳೆತ್ತ? ಲಿಂಗ ಬೇರೆ, ತಾನು ಬೇರಾಗಿ ಮಾಡುವ ಭೇದ ಜ್ಞಾನದ ಭಾವುಕರ ಪೂಜೆ ಎತ್ತ? ತಾನು ಲಿಂಗ, ಲಿಂಗವೆಂದರೆ ತಾನು ಎಂಬ ಸಮ್ಯಜ್ಞಾನದಿಂದುಕ್ತವಾದ ದಿವ್ಯ ದೃಷ್ಠಿಯುಳ್ಳ ನೋಟವೆತ್ತ? ಭರಿತ ಭಾವವೆತ್ತ? ಭೇದ ಭಾವವೆತ್ತ.

ಪೂಜಿಸುವವನು ಲಿಂಗವೆ ! ಪೂಜಾಸಾಮಗ್ರಿಗಳಾಗಿಹ ಸುಜ್ಞಾನದಿಂದುಕ್ತವಾದ ಅಗ್ಘವಣಿ ಲಿಂಗವೆ ಪುಷ್ಪವು ಲಿಂಗವೆ! ಓಗರವು ಲಿಂಗವು. ತಾನು ಲಿಂಗವೆಂಬ ಅಖಂಡ ಭಾವರೂಪಿ ಪೂಜೆ ಎತ್ತ. ಮರಣದಿಂದುಕ್ತವಾದ ಪೂಜೆ ಎತ್ತ ? ಮರಣವಿಲ್ಲದ ಮಹಾಘನ ಒಳಕೊಂಡ ಪೂಜೆ ಎತ್ತ ? ಎತ್ತಣದಿಂದೆತ್ತ. ಬೆಳಕೆತ್ತ, ಕತ್ತಲೆ ಎತ್ತ, ಕ್ರಿಯೆ ಎತ್ತ, ಅಕ್ರಿಯೆ ಎತ್ತ, ಎರಡಾದುದೆತ್ತ, ಒಂದಾದುದೆತ್ತ, ಕಂಡುದೆತ್ತ, ಕಾಣದುದೆತ್ತ, ಭ್ರಮ ವೆತ್ತ, ಬ್ರಹ್ಮವೆತ್ತ, ನಾನೀನಾದುದೆತ್ತ ನಾ ನೀನೆಂಬುದಕ್ಕೆಡೆಗೊಡದ ಘನವಾದುದೆತ್ತ?

ಲಿಂಗಾರ್ಚಕರು ಪೂಜ್ಯ ಪೂಜಕ ಭಾವದಿಂದುಕ್ತರಾಗಿ ಮಾಡುವ ಭಕ್ತರು ಬಹಳಷ್ಟು ಇದ್ದಾರೆ. ಪ್ರಭುವಿನಂಥ ಲಿಂಗಾರ್ಚಕರು ಶಿಕ್ಕುವುದೆ ವಿರಳ. ಅಗ್ಘವಣಿಯ ತಂದು ಮಜ್ಜನ ಮಾಡುವವರು ಶಿಕ್ಕುವರು. ಇವರು ಲಿಂಗಪೂಜೆಗಾಗಿ ಮಡಿನೀರು ತರುವುದೆ ತರುವುದು. ಲಿಂಗಯ್ಯನಿಗೆ ಮಜ್ಜನ ಮಾಡುವುದೆ ಮಾಡುವುದು. ದಿನಕ್ಕೆ ಒಂದುಸಲವಲ್ಲ, ಎರಡುಸಲ, ಮೂರು ಸಲ ಮಜ್ಜನ ಮಾಡುವುದು, ಲಿಂಗಯ್ಯನಿಗೆ ಮೀಸಲ ನೀರು ಎನ್ನುವುದು, ಎಂಜಲ ನೀರು ತರುವುದು. ಎಂಜಲ ನೀರ ಹಾಕಿ ಮೀಸಲಸ್ನಾನ ಮಾಡಿಸಿದೆವೆನ್ನುವದು ಇದೆಂಥ ಆಶ್ಚರ್ಯ! ಲಿಂಗಯ್ಯನಲ್ಲಿ ಮೋಸವೆ ವಂಚನೆಯೆ ಮೀಸಲ ನೀರು ಎಂದವರು ಎಂಜಲ ನೀರು ತಂದು ಮಜ್ಜನ ಮಾಡಿದ ಮೇಲೆ ಇದಕ್ಕೆ ಮೋಸವೆನ್ನ ಬೇಕೊ? ಏನೆನ್ನಬೇಕು?

ಪ್ರಭುದೇವ ಅಗ್ಘವಣಿಯ ತಂದು ಮಜ್ಜನವ ಮರೆದವನು. ತಂದುದು ಏತಕ್ಕಾಗಿ ಲಿಂಗಯ್ಯನ ಪೂಜೆಗೆ ಅಗ್ಘವಣಿ ತಂದು ಮಜ್ಜನವ ಮರೆತನೆ? ಇದೆಂಥ ಪೂಜೆ ಮಾಡಿದುದು, ಪ್ರಭು ತಂದ ನೀರು ಮೀಸಲು ನೀರು. ಲಿಂಗಯ್ಯನಿಗೆ ಒಪ್ಪುವ ನೀರು, ಲಿಂಗ ಮೀಸಲು, ಪ್ರಭುವಿನ ಲಿಂಗವೆನ್ನದ ಲಿಂಗ, ಅಲ್ಲಿ ಶಬ್ದ ಮೀಸಲು, ಅರುವ ಅರಿಯ ಹೋದವರಿಗೆ ಕಾಣಿಸುವ ಲಿಂಗವಾದ್ದರಿಂದ ಮೌನ ಮುದ್ರಿತ

ಲಿಂಗ. ಇದು ನಿಷ್ಕಳಂಕವು ನೀರು ಶುದ್ಧವು . ಆರಾರು ಮುಟ್ಟದ ನೀರು ಮೀಸಲು . ಎರಡು ಒಂದಾಗಿ ಮಜ್ಜನ ಮರತನೆ? ಅಹುದು ಇದು ಲಿಂಗಾರ್ಚನೆಯ ಮಾಡುವ ಪರಿ.

ಈ ಮೀಸಲು ನೀರು ಎಲ್ಲಿ? ಕಾಶಿಯಲ್ಲಿ ಶಿಗುವವೊ? ಅಥವಾ ಬಾರಾ ಜ್ಯೋತಿರ್ಲಿಂಗಗಳು ಇದ್ದಲ್ಲಿ ಇರುವವೊ? ಇದಲ್ಲದೆ ದೊಡ್ಡದೊಡ್ಡಮಹಾನ್ ಕ್ಷೇತ್ರಗಳಲ್ಲಿ ಇರುವವೊ? ಇವು ಲಭ್ಯವಾಗುವ ಸ್ಥಾನವೆಲ್ಲಿ?

ಮೀಸಲು ನೀರು ಲಭ್ಯವಾಗುವ ಸ್ಥಾನವೆಂದರೆ, ಪ್ರಭುದೇವನ ಅರು ಹೃದಯವೆ ಕಾಶಿ ಅಲ್ಲಿಂದ ಹೊರಡುವ ಜ್ಞಾನಾಮೃತವೆ ಮೀಸಲು ನೀರು. ಅಲ್ಲಿಯೆ ಅಖಂಡೈಕರಸವಾದ ಪರಮಾನಂದ ರೂಪಿ ಮೀಸಲು ನೀರು ಶಿಗುವುದು. ಮಹಾತ್ಮರ ಹೃದಯವದು ಲಿಂಗಾಂಗಸಮರಸ ಜ್ಞಾನದಿಂದೊಪ್ಪುವ ಕುಂಡವು. ಅಲ್ಲಿಂದ ಹೊರಬರುವಳು ಜ್ಞಾನಗಂಗಾ. ಈ ಪವಿತ್ರ ಗಂಗೆಯನ್ನು ಆದಾರು ಎಂಜಲ ಮಾಡುವುದು. ಇದು ಎಂಜಲ ಮಾತಿನವರಿಗೆ ಲಭ್ಯವಾಗುವ ಸ್ಥಾನವಲ್ಲ. ಲಿಂಗ ಸಕೀಲ ಸಂಯೋಗ ವರ್ಮಸ್ಥಲ ನರಿತವರ ಹೃದಯ. ಇಲ್ಲಿ ನೀರು, ಲಿಂಗ ಒಂದೆ ಇದು ಏಕರಸವಾದ ಪರಮಾನಂದ ಜ್ಞಾನಾಮೃತ ನೀರು! ಜ್ಞಾನಗಂಗಾ, ಲಿಂಗವದು ಜ್ಞಾನಾಮೃತ ಜ್ಞಾನಗಂಗಾ ಅಪಾರ, ಜ್ಞಾನಾಮೃತವು ಅಪಾರ, ಇವೆರಡು ಒಂದಾದುದು ಅಲ್ಲಿ ಭಿನ್ನ ದೃಷ್ಟಿಗಿಂಬಿಲ್ಲವಾದ್ದರಿಂದ ಮಜ್ಜನ ಮರೆಯಿತ್ತು ಎಂದು ಹೇಳಿಹರು.

ಪುಷ್ಪವ ತಂದು ಪೂಜೆಯ ಮರೆದವನ: ಪೂಜೆಯ ಮರೆತವರು ಆರು? ಪುಷ್ಪವ ತಂದ ಮೇಲೆ ಪೂಜೆಯ ಮರೆಯಬೇಕು. ಆಶ್ಚರ್ಯ , ಪುಷ್ಪವ ತಂದುದು ಏತಕ್ಕಾಗಿ? ಪೂಜೆಗಾಗಿ ಅಲ್ಲವೆ? ಅಹುದು.

ಪೂಜೆ ಮಾಡುವವರುಂಟು ಪೂಜೆ ಅರಿತವರುಂಟೆ? ಅರಿತವರ ಪೂಜೆ ಪೂಜೆಯೆ ತಾವಾದುದು ಪೂಜೆ ಅಗಣಿತ. ಇದು ತಿಳಿಯದೆ ಪೂಜ್ಯನ ಮಾಡಿದ ತಾನು ಪೂಜಕನಾದ, ಈ ದ್ವಂದ್ವ ದೃಷ್ಠಿ ನಷ್ಟವಾಗಿಹುದು. ಇದು ಕಾರಣ ಪುಷ್ಪವ ತಂದು ಪೂಜೆಯ ಮರೆದವನು ಎಂದು ಹೇಳಿಹರು .

ಲಿಂಗಾರ್ಚಕರು ಪುಷ್ಪವ ತಂದು ಲಿಂಗಯ್ಯನ ಪೂಜೆ ಮಾಡುವವರು ಬಹು ಜನ ಇರುವರು. ಇವರು ದಿನಂ ಪ್ರತಿ ಪುಷ್ಪ ತಂದದ್ದೆ ತಂದುದು. ಲಿಂಗಯ್ಯನಿಗೆ ಪುಷ್ಪ ಏರಿಸಿದ್ದೇ ಏರಿಸುವದು. ಮಾಡಿದ್ದೆ ಮಾಡುವುದು ಇದರಿಂದ ಪ್ರಭುವಿನಂತೆ ಪುಷ್ಪ ತಂದು ಪೂಜೆ ಮರೆದವರಾರು? ಪ್ರಭುವಿನ ಅಗ್ಘವಣಿಯೆ ಬೇರೆ ಪುಷ್ಪವೆ ಬೇರೆ, ಪ್ರಭು ತಂದ ಅಗ್ಘವಣಿ ಮೂಕ, ಲಿಂಗವು ಮೂಕ, ನೀರು ಮೂಕ, ತಂದವನು ಮೂಕ, ಮೂಕದ ಸಂಜ್ಞೆ ನಿಃಶಬ್ದ ಬ್ರಹ್ಮದ ಸಂಜ್ಞೆ. ಇದು ನಿಃಶಬ್ದ ಬ್ರಹ್ಮದ ನಿಲುವುಳ್ಳವರಾಟ. ಸುಖದಾಟ, ಶೃತಿಗಗೋಚರವಾಗಿಹ ತನ್ನಾಟ. ಇದು ಬಹಿರ್ ಅಷ್ಟಾವರ್ಣದವರಿಗೆ ನಿಲುಕದ ಪೂಜೆ. ನಿಲುಕದ ಆಟ ಅರುವಿಂಗರುವಾಗಿಹ ಆಟ. ಶಬ್ದಮುಗ್ಧವಾದವರ ಆಟ. ಈ ಮಹಾದಾಟವೆ ಅಗ್ಘವಣಿ ತಂದು ಮಜ್ಜನ ಮರೆದವನು ಎಂದು ಹೇಳಿದ್ದಾರೆ.

ಈ ಮೂಕ ನೀರು ಆವುದು ಗೊತ್ತೆ ? ಲಿಂಗವೆನ್ನದ ಮನ, ಸಂಗ ಎನ್ನದ ಮನ , ನಿಸ್ಸಂಗ ಎನ್ನದ ಮನ. ಏನೂ ಎನ್ನದೆ ಶಬ್ದಮುಗ್ಧವಾಗಿಹ ಮನ. ಇದು ಚೆನ್ನಮಲ್ಲಿಕಾರ್ಜುನನಲ್ಲಿ ತದುಗತವಾದ ಇದುವೆ ಮೀಸಲು ನೀರು, ಅಗ್ಘವಣಿಯ ನೀರು ಮೂಕನೀರು, ಲಿಂಗವು ನಿಃಶಬ್ದ ಘನಗಂಭೀರವು. ಲಿಂಗ ಪೂಜಿಸುವವನು ನಿಃಶಬ್ದ ಘನಗಂಭೀರವು, ಮೂಕ ನೀರು ನಿಃಶಬ್ದ ಘನಗಂಭೀರವು, ಮೂರೊಂದಾದುದು ಇದು ಕಾರಣ ಮಜ್ಜನ ಮರೆಯಿತ್ತು .

ಪುಷ್ಪವ ತಂದು ಪೂಜೆಯ ಮರದವನ. ಈ ಪೂಜೆ ಮರತವರಾರು? ಪುಷ್ಪತಂದ ಮೇಲೆ ಪೂಜೆ ಮರೆಯಬೇಕು? ಆಶ್ಚರ್ಯ, ಪುಷ್ಪತಂದ ಮೇಲೆ ಪೂಜೆ ಮಾಡುವುದು, ಪುಷ್ಪ ತಂದುದು ಏತಕ್ಕಾಗಿ

ಪೂಜೆಗಾಗಿ ಅಲ್ಲವೆ? ಅಹುದು ಪೂಜೆಗಾಗಿ ಪುಷ್ಪ ತರುತ್ತಾರೆ. ಲಿಂಗಯ್ಯನ ಪೂಜೆ ಮಾಡುವುದು ಪುಷ್ಪತರುವುದೆ ತರುವುದು ಪೂಜೆ ಮಾಡಿದ್ದೆ ಮಾಡುವುದು. ಇದು ಬಹು ಕಾಲದಿಂದಲೂ ಈ ಪೂಜೆ ಮಾಡುವುದು ನಡೆದೆ ಇದೆ. ಪುಷ್ಪತಂದು ಪೂಜೆ ಮಾಡುವ ಲಿಂಗಾರ್ಚಕರು ಶಿಕ್ಕುತ್ತಾರೆ. ಪುಷ್ಪತಂದು ಪೂಜೆ ಮಾಡಿದ ಲಿಂಗ ಗಂಭೀರನು ಸಿಕ್ಕುತ್ತಾನೆಯೆ? ಪ್ರಭುವಿನಂಥ ಗಂಭೀರನು ಪುಷ್ಪವ ತಂದು ಪೂಜೆ ಮರೆತ ಗಂಭೀರನು ಈ ಮಹಾಂತ ಲಿಂಗವರಿತು ಲಿಂಗ ತಾನಾಗಿಹ ಘನಗಂಭೀರ. ಈ ಘನವಂತನ ಪುಷ್ಪವೆತ್ತ! ಲಿಂಗಾರ್ಚಕರ ಪುಷ್ಪವೆತ್ತ! ಲಿಂಗಾರ್ಚಕರ ಪುಷ್ಪ ಅರಳಿ ಬಾಡುವ ಪುಷ್ಪ, ಇನ್ನೂ ಸ್ವಲ್ಪ ತಡವಾದರೆ ಒಣಗುವ ಪುಷ್ಪ. ಈ ಪುಷ್ಪದಲ್ಲಿರುವ ಸುವಾಸನೆ ಮೊದಲು ತೋರಿ ಹಿಂದಿನಿಂದ ಇಲ್ಲವಾಗುವ ವಾಸನೆ. ಪುಷ್ಪಬಾಡಿದಂತೆ ಅದರ ವಾಸನೆಯು ಕ್ಷಯವಾಗುತ್ತದೆ. ಇಂಥ ವಾಸನೆಯುಳ್ಳ ಪುಷ್ಪವೆತ್ತ? ಪ್ರಭುವಿನ ಅಕ್ಷಯ ವಾಸನೆಯುಳ್ಳ ಪುಷ್ಪವು ಪರಿಪೂರ್ಣವಾಗಿಹ ಅರುರೂಪ ಪುಷ್ಪ. ಸ್ವಾನುಭವ ರೂಪಿ ಪುಷ್ಪ, ಸದ್ವಾಸನಾರೂಪಿ ಪುಷ್ಪ ಇದು ಸದ್‌ಜ್ಞಾನ ಭರಿತವಾಗಿಹ ಪುಷ್ಪ. ಇದು ಹೃದಯದಲ್ಲಿ ಸದ್ವಾಸನೆ ಘಮಿಘಮಿಸುವ ಪುಷ್ಪ.

ಗಿಡ ಬಳ್ಳಿಗಳಿಲ್ಲಿದ್ದ ಪುಷ್ಪವೆತ್ತ? ಸಂತ ಸದ್ಗುರುವೆ ಸಂದ ಸಂಪಿಗೆಯಾದುದೆತ್ತ? ಈ ಮಕರಂದ ಅವರ್ಣನೀಯವಾದುದು? ಗಿಡ ಬಳ್ಳಿಗಳಿಂದ ಲಭ್ಯವಾಗುವ ಪುಷ್ಪ ವರ್ಣನೆಯಿಂದುಕ್ತವು. ಪ್ರಭುವಿನಂಥ ಸಮತ ಸದ್ಗುರು ರೂಪಿ ಪುಷ್ಪ ವಾಙ್ಮನೋತೀತವಾದುದು ಪುಷ್ಪವು ಮೌನ ಮಕರಂದವು ಮೌನ. ಅದನ್ನು ಘ್ರಾಣಿಸುವ ಇಂದ್ರಿಯಂಗಳು ಮೌನ. ಈ ಮೌನದ ನಿಲವು, ಶೃತಿಗಗೋಚರವಾಗಿಹ ನಿಲವು.

ಪ್ರಭುವಿನ ಪುಷ್ಪ ಪರಿಪೂರ್ಣವಪ್ಪ ಪುಷ್ಪ, ಅರುವಿನ ಘನದಿರುವಾಗಿ ಸದ್ವಾಸನೆಯಿಂದ ಸದ್‌ಜ್ಞಾನ ಭರಿತವಾಗಿಪ್ಪ ಪುಷ್ಪ. ಇದು ಮೌನ ಲಿಂಗವು ಮೌನ ಇದನು ಕಂಡರಿದ ಪ್ರಭು ಮೌನ. ಈ ಮೌನದಾಟ ನಿಃಶಬ್ದ ಬ್ರಹ್ಮದಲ್ಲಿ ನೆರೆನಿಂತ ಆಟ. ತಾನೆ ತಾನಾದ ಆಟ ಮಹಾದಾಟ. ಇದು ತನ್ನ ಆಟ, ತಾನೆ ಆಡಿದುದು ತನ್ನಾಟಕ್ಕಾಗಿ ತಾನೆ ಬಂದ ತಾನೆ ಆಡಿದ, ಇದು ಮಾತಿನ ರಂಜಕರಿಗೆ ನಿಲುಕದ ಆಟ. ಘನವರಿತು ಘನಕ್ಕೆ ಘನವಾಗಿದ್ದವರ ಆಟವಾದುದರಿಂದ, ಪುಷ್ಪವ ತಂದು ಪೂಜೆ ಮರೆದವನು ಎಂದು ಹೇಳಿಹರು.

ಓಗರವ ಕಂಡು ಆಪ್ಯಾಯನ ಮರೆದವನ: ಪ್ರಭು, ಓಗರವ ಕಂಡು ಆಪ್ಯಾಯನ ಮರೆದನೆ? ಇದೆಂಥ ಓಗರ. ಈ ಓಗರ ಕಂಡಮೇಲೆ ಹಸಿವು ಮರೆತು ಹೋಯಿತೆ? ಇದೆಂಥ ಓಗರ! ಈ ಜ್ಞಾನಾಮೃತ ಗಗನದಂತೆ ಅಖಂಡವಾಗಿರುವ ಜ್ಞಾನಾಮೃತ. ಲಿಂಗಾರ್ಚಕರು ಲಿಂಗಯ್ಯನಿಗೆ ನೈವೇದ್ಯ ಮಾಡುವ ಓಗರವೆತ್ತ? ಪ್ರಭುವಿನ ಹೃದಯದಿಂದ ಹೊರಹೊಮ್ಮಿ ಬಂದ ಜ್ಞಾನಾಮೃತವೆತ್ತ? ಲಿಂಗಾರ್ಚಕರ ಓಗರ ಪಂಚ ಪಕ್ವಾನ್ನದಿಂದುಕ್ತವಾದುದು. ಇದು ಹಾಲು, ತುಪ್ಪ, ಸಕ್ಕರೆ, ದ್ರಾಕ್ಷಿ, ವಾಡಂಬಿ, ಬಾದಾಮಿ, ಹಾಗೂ ಗೋದಿಯ ಉತ್ತಮ ನುಚ್ಚು. ಇವುಗಳಿಂದ ತಯ್ಯಾರಾದ ತಿಂಡಿ. ಇದು ಅಮೃತದಷ್ಟು ರುಚಿಯಾಗಿರುವುದರಿಂದ ಪಂಚಾಮೃತವೆಂಬ ನಾಮ ಬಂದಿದೆ. ಇದನ್ನು ಉಂಡವರು ಆರಾದರೂ ಮರಣವಿಲ್ಲದ ಮಹಾಘನ ಒಳಕೊಂಡಿರುವರೆ? ತಮ್ಮೊಳಗೆ ತಾವೆ ಅರಿದರಿದು ನೋಡುವುದು ಇದು ಪಂಚಾಮೃತವೆನಿಸದು.

ಪ್ರಭುವಿನ ಜ್ಞಾನಾಮೃತ ಅದು ಓಗರ. ಇದು ತಂಗಳವಾಗದು, ಏಕೆಂದರೆ ಈ ಅಮೃತ ಹಾಲು ತುಪ್ಪಸಕ್ಕರೆ ದ್ರಾಕ್ಷಿ ವಾಡಂಬಿ ಗೋದಿಯ ಹಿಟ್ಟಿನಿಂದಾದ ಪಂಚ ಪಕ್ವಾನ್ನವಲ್ಲ. ಇದು ಅರು ಹೃದಯದಲ್ಲಿ ತಯ್ಯಾರಾಗಿಹ ಅಖಂಡ ಜ್ಞಾನಾಮೃತ. ಇದನ್ನು ಕಂಡವರು ಶೋಕಾತೀತರು ಅಮರರು ಮರಣವಿಲ್ಲದ ಮಹಾಘನವ ಒಳಕೊಂಡುದ ಇಲ್ಲಿ ತೆರಹಿಲ್ಲದ ಘನಕ್ಕೆ ಲಿಂಗವೆಂಬ ಸಂಜ್ಞೆಯು. ಈ ಲಿಂಗಯ್ಯನಿಗೆ

ತೆರೆಹಿಲ್ಲದ ಜ್ಞಾನವೆ ಆಹಾರವಾಗಿದೆ. ಈ ಉಪಮಿಸದ ಜ್ಞಾನರೂಪಿ ಓಗರ ಕಂಡು ಶರಣನ ಹಸಿವು ಮರೆದವನು ಎಂದು ಹೇಳಿಹರು. ಇದರಿಂದ ಪ್ರಭುವಿನ ಓಗರವ ಕಂಡು ಹಸಿವು ಹಿಂಗಿತ್ತು ಎಂದು ಹೇಳಿಹರು.

ಲಿಂಗ ಕಂಡು ತನ್ನ ಮರೆದವನ : ಪೂಜಾ ಲಿಂಗವ ಕಂಡು ತನ್ನ ಮರೆದವರು ಶಿಕ್ಕುತ್ತಾರೆಯೆ? ಲಿಂಗ ಬೇರೆ ತಾನು ಬೇರೆಂಬ ಬೇಧ ದೃಷ್ಠಿಗೆ ತನ್ನ ಮರೆಯುವದು ಅಸಾಧ್ಯವಾದ ಮಾತು. ಅವರು ತ್ರಿಕಾಲದಲ್ಲಿಯೂ ಲಿಂಗಪೂಜೆಯಲ್ಲಿಯೆ ಮಗ್ನರಾಗಿಹ ಲಿಂಗವಂತರಿರಲಿ. ಈ ಪೂಜೆಯ ಫಲದಿಂದ ಚತುರ್ವಿಧ ಫಲಪದಂಗಳು ಪಡೆದಿರಲಿ. ಅವರು ಲಿಂಗವ ಕಂಡವರಲ್ಲ, ಇದು ಕಾರಣ ತನ್ನ ಮರೆತವರಾಗಲಿಲ್ಲ. ಲಿಂಗಾಂಗ ಸಮರಸ ಜ್ಞಾನವಿಲ್ಲದೆ ಲಿಂಗವ ಕಾಣುವುದು ಅಸಾಧ್ಯವು. ಅರುವ ಅರಿಯ ಹೋಗದ ವಿನಃ ಲಿಂಗದ ಘನವ ಕಾಣನು. ಆರು ಅರುವ ಅರಿಯ ಹೋಗಿಹರು ಅವರು ವೇದ ವೇದಾಂತಗಳಿಗಸಾಧ್ಯವಾಗಿಹ, ಅನುಪಮ ಲಿಂಗವ ತಿಳಿದಿಹರು. ಅವರು ನಾದ ಬಿಂದು ಕಲೆಗಳಿಗಭೇದ್ಯವಾಗಿಹ ಅಚಲಿತ ಲಿಂಗವ ಕಂಡವರು. ಇದು ಶರಣ ತನ್ನ ಮರೆತವರು ಎಂದು ಹೇಳಿಹರು.

ಲಿಂಗ ಕಂಡು ತನ್ನ ಮರೆದವನ : ಇವರಾರು ಇವರು ಶರಣ ಶರಣೆಯರು ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿತು ಅಚಲಾನಂದಲ್ಲಿದ್ದವರು ಬಸವಾದಿ ಪ್ರಮಥರು. ಶ್ರೀ ಗುರು ಕರುಣಿಸಿದ ಮೌನ ಮುದ್ರಿತವಾಗಿಹ ಘನ ಲಿಂಗವ ಕಂಡು ತನ್ನ ಮರೆದವರು ಇದು ಸಕಲರ ಹೃದಯದಲ್ಲಿ ನ್ಯಸ್ತವಾಗಿಹ ಇರವು. ನಿಧಿ ಜ್ಞಾನ ಸಿದ್ಧಿ ಅಕ್ಷಯ ನಿಧಿ. ಇದು ತನ್ನಿಂದ ತಾನಾದ ನಿಧಿ, ಮುನ್ನ ಮುನ್ನಲಾದ ಘನ. ಇದನು ತಿಳಿಯ ಹೋಗಿ ಬಸವಸರು ಘನಗಂಭೀರ ಮಹಾಘನದೊಳ ಘನಕ್ಕೆ ಘನವಾಗಿರ್ದೆಯಯ್ಯ ಕೂಡಲಸಂಗಯ್ಯನೆಂಬ ಬೆಳಗಿನೊಳಗೆ ಬೆಳಗಾಗಿದ್ದ ಶಬ್ದ ಮುಗ್ದವಾದುದ ನೇನೆಂಬೇನೆಂಬೆ. ಇವರು ಲಿಂಗವ ಕಂಡು ತನ್ನ ಮರೆದವನು ಲಿಂಗವೆಂದರೆ ತಾನು. ತಾನೆಂದರೆ ಲಿಂಗವಾಗಿಹ ಮಹದರುವು. ಬೆಳಗುವಲ್ಲಿ ಅಲ್ಲಿ ತನ್ನ ಮರೆವುದು ವರ್ಣಾಶ್ಚರ್ಯ ಆರು ತನ್ನ ಮರೆದಿಹರು ಅವರು ಮರಣವಿಲ್ಲದ ಮಹಾಘನ ಬಳಸಿಕೊಂಡಿತ್ತು. ಎಂದು ಹೇಳಿಹರು. ಮರಣವಿಲ್ಲದ ಮಹಾಘನ ತನ್ನಿಂದ ತನ್ನ ಕಂಡುದು ಬೆಳಕೊಂಡ ಸಂಜ್ಞೆ. ತಾನು ಮರಣವಿಲ್ಲದ ಮಹಾಘನನೆಂದರೆ ನುಡಿಗೆಡೆಗೊಡದ ಘನವಾದುದರಿಂದ ಮರಣವಿಲ್ಲದ ಮಹಾಘನ ಬಳಸಿಕೊಂಡಿತ್ತು ಎಂದು ಹೇಳಿಹರು.

158

ಬೆಳಗಿನೊಳಗಣ ಬೆಳಗು ಕಡದಡೆ ಮರಳಿ ಕೂಡಿತ್ತಲ್ಲಾ
ಮೇರುವನೆ ಬೋನವ ಮಾಡಿ, ಸವಿದ ಭಕ್ತರ ನೋಡಾ,
ಅಡಗ ನಾರೋಗಣೆಯ ಮಾಡಿದ ಲಿಂಗದ ಕೊಡಗೂಸು
ನುಂಗಿತ್ತು ಕಂಡೆ ಗುಹೇಶ್ವರಾ. ॥1347॥

ತಾತ್ಪರ್ಯ : ಬೆಳಗಿನೊಳಗಣ ಬೆಳಗು ಕಡದಡೆ ಮರಳಿ ಕೂಡಿತ್ತಲ್ಲಾ : ಬೆಳಗಿನೊಳಗಣ ಬೆಳಗು? ಇದಾವ ಬೆಳಗಿನೊಳಗಣ ಬೆಳಗು? ಇದು ಪೂರ್ವದಲ್ಲಿ ಬೆಳಗಿನೊಳಗಣ ಬೆಳಗು ತಾನಾರೆಂದು ತನ್ನ ತಾನರಿಯದ ಮುನ್ನವು ಇದ್ದಂತಿದ್ದ ಬೆಳಗಿನೊಳಗಣ ಬೆಳಗು ಅರಿಯುವ ಮುನ್ನ ಇದ್ದಂತಿದ್ದ ಬೆಳಗಿನೊಳಗಣ ಬೆಳಗು. ಅರಿಯುವಾಗಲೂ ಇದ್ದಂತಿದ್ದ ಬೆಳಗಿನೊಳಗಣ ಬೆಳಗು . ಇದನರಿಯ ಹೋದವರೆಲ್ಲ ಶಬ್ದಮುಗ್ಧರಾಗಿಹರು. ಅರಿದ ಮೇಲೆ ಇದ್ದಂತಿದ್ದ ಶಬ್ದಮುಗ್ಧ ಬೆಳಗಿನೊಳಗಣ ಬೆಳಗು. ಇದು ಕೂಡಲ ಸಂಗಯ್ಯನೆಂಬ ಬೆಳಗಿನೊಳಗೆ ಬೆಳಗಾಗಿರ್ದು ಶಬ್ದಮುಗ್ಧವಾದುದು ನೇನೆಂಬೇನೆಂಬೆ ಎಂದು ಪ್ರಭು ದೇವರ ಮುಂದೆ ಬಸವರಸರು ಹೇಳಿಕೊಂಡಾಗ

ಪ್ರಭು ಒಪ್ಪಿ ಹರ್ಷಿತನಾಗಿ ತನು ಉಬ್ಬಿ ಮನ ಕರಗಿ ಕೊಂಡಾಡಿದ . ಇಂದು ಕೃತಯುಗದಸ್ಕಂದನೆಂಬ ಗಣೇಶ್ವರನ ಕಂಡೆನಯ್ಯ . ಇಂದು ಆದಿಯ ಲಿಂಗವ ತೋರಿದ ಅನಿಮಿಷನ ಕಂಡೆನತಯ್ಯ ಇಂದು ತ್ರೇತಾಯುಗದ ನೀಲ ಲೋಹಿತನೆಂಬ ಗಣೇಶ್ವರನ ಕಂಡೆನಯ್ಯ ಇಂದು. ದ್ವಾಪರ ಯುಗದ ವೃಷಭನೆಂಬ ಗಣೇಶ್ವರನ ಕಂಡೆನಯ್ಯ . ಇಂದು ಕಲಿಯುಗದ ಅನಿಮಿಷ, ಬಸವನೆಂಬ ಗಣೇಶ್ವರನ ಕಂಡೆನಯ್ಯ . ಇಂದು ಎನ್ನಕಂಡವರನು ನಿನ್ನಕಂಡವರನು ಇಂದು ಕಂಡೆ ಕಾಣಾ ಗುಹೇಶ್ವರಾ.

ಪ್ರಭು ಎಂದರೂ ಬೆಳಗಿನೊಳಗಣ ಬೆಳಗು, ಬಸವನೆಂದರೂ ಬೆಳಗಿನೊಳಗಣ ಬೆಳಗು. ಇದು ತಮ್ಮ ತಾವರಿಯ ಹೋದ ಅನುವು. ಇದು ಕಾರಣ ಎನ್ನ ಕಂಡವರು ನಿನ್ನ ಕಂಡವರು , ಇಂದು ಕಂಡೆ ಕಾಣಾ ಗುಹೇಶ್ವರಾ ಎಂದು ಹೇಳಿಹರು. ಬಹು ಸಾಧಕರು, ಜಿಜ್ಞಾಸುಗಳು, ಅನುಭವಿಗಳು, ಬೆಳಕು, ಪ್ರಕಾಶ, ಸ್ವಯಂ ಪ್ರಕಾಶ, ಸ್ವಯಂ ಜ್ಯೋತಿ, ಎಂದು ಘನಕ್ಕೆ ಘನವೆಂದು ಸಂಭೋಧಿಸಿದುದುಂಟು. ಇದರ ಅನುಸಂಧಾನ ಮಾಡಿದವರುಂಟು. ತಾನು ಬೆಳಗುವ ಜ್ಯೋತಿ ಎಂದು ಪ್ರಕಾಶಮಯನೆಂದು ಸ್ವಯಂ ಪ್ರಕಾಶ ತಾನೆಂದು ಸ್ವಯಂಜ್ಯೋತಿಯೆಂದು ಭಾವಿಸಿದವರುಂಟು. ಬೆಳಗಿನೊಳಗಣ ಬೆಳಗಾಗಿರ್ದು ಶಬ್ದ ಮುಗ್ಧರಾದವರು ಬಸವರಸರು ಪ್ರಭುದೇವರು ಚೆನ್ನಬಸವರಾಜ ದೇವರು, ಅಕ್ಕಮಹಾದೇವಿ, ನೀಲಾಂಬಿಕೆ, ಮಹಾದೇವಮ್ಮ ಯತಾರ್ಥವರಿತವರು.

ಅನುಸಂಧಾನ ಮಾಡುವದಕ್ಕೂ ಅರುವ ಅರಿಯಹೋಗಿ ಶಬ್ದಮುಗ್ಧವಾದುದಕ್ಕೂ ಮಹದಂತರವಿದೆ. ಏಕೆಂದರೆ ತಾನು ಬೆಳಗಿನೊಳಗಣ ಬೆಳಗು ಇದ್ದುದು ಸ್ವತಃ ಸಿದ್ಧವಾದ ಮೇಲೆ. ತನಗೆ ತಾನೆ ಬೆಳಗಿನೊಳಗಣ ಬೆಳಗು ಅನ್ನಬಹುದೆ? ಬೆಳಗುವ ಜ್ಯೋತಿಯು, ತಾನು ಜ್ಯೋತಿ ಎನ್ನದೆ ಶಬ್ದಮುಗ್ಧವು. ಈ ಪರಪ್ರಕಾಶಕ್ಕೆಲ್ಲ ಬೆಳಗುವ ತಾನು, ತನ್ನೊಳ ಉಸರಲು ಇಂಬುಂಟೆ? ತನ್ನನೊಂದು ಮಾತಿಂಗೆ ತಂದು ನುಡಿದು ನೋಡಿದುದು ಕಿರಿದು ನೋಡಾ ಎಂದು ಹೇಳಿಹರು.

ಬೆಳಗಿನೊಳಗಣ ಬೆಳಗು ಇದು ಅರಿಯ ಹೋಗಬೇಕಾದರೆ, ತಾನು ಬೆಳಗಿನೊಳಗಣ ಬೆಳಗಾಗಿದ್ದುದು ಇದ್ದಂತೆ ಅರಿಯುವುದು. ತಾನು ಇದ್ದಂತೆ ತನ್ನ ನರಿಯುವುದು. ಇದು ಜ್ಞಾನಪ್ರಭೆ ಚಿತ್‌ಪ್ರಭೆಯಾಗಿ, ಅರಿಯುವದು. ಅರಿದರಿದು ತನ್ನ ತಾ ನೋಡುವುದು. ನೋಡುವುದು ನೋಡಲರಿಯದೆ ಕೆಟ್ಟಿತ್ತಿ ಲೋಕವೆಲ್ಲ ನೋಡುವುದು ನೋಡುವುಡೆ ಕೂಡಲಿಲ್ಲ ಅಗಲಲಿಲ್ಲ ಗುಹೇಶ್ವರಾ ನಿಮ್ಮ ಶರಣ ಅನುಪಮ ಸುಖಿ.

ಯುಗ ಯುಗಂಗಳಿಂದಲೂ, ಮಾನವ, ಅರುವಿನ ಜನ್ಮದರಿಸಿದ್ದರೂ, ಅರುಸ್ವರೂಪನಾಗಿ ತನ್ನ ತಾ ನೋಡಿದ್ದಿಲ್ಲ. ನೋಡದಿದ್ದರೂ ತಾನು ಅನ್ಯವಾಗಿಲ್ಲ, ತಾನು ಇದ್ದಂತೆ ಇದ್ದ ಘನ. ತನ್ನೊಳ ಬದಲಾವಣೆ ಎಂಬುದು ಮುನ್ನಿಲ್ಲ. ಇದು ಕಾರಣ ತಾನು ಮುನ್ನ ಮುನ್ನಲಾದ ಘನ. ತನ್ನಿಂದ ತಾನಾದ ಘನ. ತಾನು ಇದ್ದಂತಿದ್ದ ಘನ. ಅರಿವುಡೆ ಅಂದು ಇಂದು ಎಂದೆಂದೂ ತಾನೆ ಎಂಬುದು ಬೆಳಗಿನೊಳಗಣ ಬೆಳಗು ಎಂಬ ಜ್ಞಾನ ಪ್ರಭೆಯಿಂದ ತನ್ನ ಅರಿವುಡೆ ಮರಳಿ ಕೂಡಿತ್ತಲ್ಲ ಎಂದು ಹೇಳಿದ್ದಾರೆ.

ಬೆಳಗಿನೊಳಗಣ ಬೆಳಗು ಎಂಬುದು ದೃಶ್ಯಾದಿಗಳಿಗೆ ಬೆಳಗುವ ಬೆಳಗಲ್ಲ. ಇದು ದೃಕ್ ರೂಪು ಬೆಳಗು ಅಲ್ಲ .ಬೆಳಗುವದಕ್ಕೆ ಬೆಳಗುವ ಘನವೆ ಬೆಳಗಿನೊಳಗಣ ಬೆಳಗು. ಇದನರಿಯ ಹೋಗಲು ದೃಶ್ಯವೆಂಬುದಿಲ್ಲ, ದೃಕ್ ಎಂಬುದೂ ಇಲ್ಲ. ನುಡಿಗೆಡೆಗೊಡದ ಘನವು ತಾನೆ ಎಂಬುದು ಸಿದ್ಧಿಸುವದರಿಂದ ಮರಳಿ ಕೂಡಿತ್ತಲ್ಲಾ ಎಂದು ಹೇಳಿಹರು.

ತಾನು ನುಡಿಗೆಡೆಗೊಡದ ಘನವಾಗಿದ್ದುದು ಬೆಳಗಿನೊಳಗಣ ಬೆಳಗು. ಅಖಂಡಿತ ಘನ ಪರಿಪೂರ್ಣವಪ್ಪ ಇರವು . ತನ್ನೊಳ ಆವಾವುದಕ್ಕೂ ಎಡೆಗೊಡದಿಪ್ಪಗಮ್ಯ ಅಪ್ರಮಾಣವ ಉಸುರಿದರದಕ್ಕದೆ ಕೊರತೆ. ಏಕೆಂದರೆ? ತನ್ನನ್ನು ಹೇಗೆ ಅರಿವುದು? ತಾನು ಅಲಕ್ಷ್ಯಮದ್ವಯಂ

ಶೂನ್ಯಮಮೂರ್ತಂ, ಪರಮವ್ಯಯಮ್, ಬೆಳಗಿನೊಳಗಣ ಬೆಳಗು. ಅರಿವುಡೆ ತನಗೆ ತಟಸ್ಥ ಲಕ್ಷಣದಿಂದಲೂ, ಭಾಗತ್ಯಾಗ ಲಕ್ಷಣದಿಂದಲೂ ಹೇಗೆ ಅರಿವುದು? ತಾನು ನಿಸ್ಸೀಮನು ಅಲ್ಲ ಅಹುದು ಎಂಬುದಕ್ಕೂ ಎಡೆಗೊಡದವನು. ನಾ ನೀನೆಂಬುದಕ್ಕೂ ತೆರೆಹಿಲ್ಲದ ಘನನು. ಖಂಡಾಖಂಡ ಸಂಯೋಗವಿಲ್ಲದ ಅಖಂಡನು. ಅಖಂಡಿತ ಘನವ ಅದಾವ ಬಗೆಯಿಂದ ಅರಿವುದು? ತನ್ನಿಂದ ತಾನೆ ಅರಿವುದು. ತಾನೆ ಅಪಾರನಾದುದರಿಂದ ಸೀಮಿತಗಳು ತನ್ನಿಂದ ಸಿದ್ಧವಾಗುವವು. ಇದು ಸ್ವಾನುಭಾವದಿಂದ ಕಂಡು ತನ್ನೋಳ ಲೀಯವಾಗಲು ಆವುದೊಂದು ವ್ಯತ್ಯಾಸ ತೋರದೆ ತಾನು ಮುನ್ನ ಮುನ್ನಲಾದ ಘನವೆಂಬುದು ತನ್ನಿಂದ ತನಗೆ ಸಿದ್ಧವಾಗುವುದು. ಆಗ ಬೆಳಗಿನೊಳಗಣ ಬೆಳಗು ಕಡಿದಡೆ ಅರಿದರಿದು ನೋಡಿದಡೆ ಮರಳಿ ಕೂಡಿತ್ತಲ್ಲಾ ಅಂದಲ್ಲಿ ತನ್ನಿರುವು ಮೊದಲಿನಂತೆ ಇದ್ದಂತಿದ್ದ ಘನವೆ ಕಾಣುವುದು ಎಂದು ಹೇಳಿಹರು.

ಮೇರುವನೆ ಬೋನವ ಮಾಡಿ ಸವಿದ ಭಕ್ತರ ನೋಡಾ: ಸವಿದ ಭಕ್ತರೆಂಬುವವರು ಸವೆಯದ ಸುಖವ ಸವಿದ ಭಕ್ತರು. ಇವರು ಅಚ್ಚಸುಖವ ಸವಿದ ಭಕ್ತರು. ನಿರಂತರ ಸುಖ ಸವಿದ ಭಕ್ತರು. ಇವರೋಳ್ ಚಿದಹಮ್ಮಿಗೆ ಇಂಬಿಲ್ಲ.ಇವರು ಚಿದಹಮ್ಮು ಎಂಬ, ಮೇರುವನ್ನೆ ಪಾಕಮಾಡಿದ ಗಂಭೀರರು. ಲಿಂಗವರಿತು ಶಬ್ದಮುಗ್ಧರಾಗಿಹ ಗಂಭೀರರು. ಮಹಾಮೇರು ಪರ್ವತ ಘನವಾಗಿದ್ದರೂ ವಜ್ರ ಕಿರಿದೆನ್ನಬಹುದೆ ಎಂದಂತೆ. ಚಿದಹಂ ಎಂಬುದು ಮಾಹಾ ಮೇರುವಾಗಿದ್ದರೂ, ತನ್ನ ನಿಜ ಜ್ಞಾನರೂಪಿ ವಜ್ರಕ್ಕೆ ಉಳಿಯಬಹುದೆ? ಬಹು ಜನರು ಈ ಚಿದಹಮ್ಮಿಗೆ ತಾನು ತನ್ನ ಸ್ವರೂಪವೆನ್ನುವವರು, ಬಹಳಷ್ಟು ಇದ್ದಾರೆ. ಇದು ಕಾರಣ ಇದನ್ನು ಪಾಕ ಮಾಡುವಷ್ಟು,ಕರಗಿಸುವಷ್ಟು,ಜಾಣರಾಗಲಿಲ್ಲ.ಅದರ ದವಡೆಯಲ್ಲಿ ಸಿಕ್ಕಿಕೊಂಡಿರುವಾಗ,ಅದನ್ನು ಪಾಕಮಾಡುವದದೆಂತು? ಪಾಕ ಮಾಡದ್ದರಿಂದ ಸವಿದ ಭಕ್ತರಾಗಲಿಲ್ಲ ಅಚ್ಚಸುಖದ ಸುಖಿಗಳಾಗಲಿಲ್ಲ.

ಪ್ರಭು ಮೇರುವನೆ ಬೋನವ ಮಾಡಿ ಸವಿದ ಭಕ್ತ! ಓಹೋ ಚಿದಹಮ್ಮನ್ನೆ ಕರಗಿಸಿದ ಮಹಾಂತ. ತನ್ನ ಮುನ್ನ ಮುನ್ನಲಾದ ಘನದೋಳ್ ಒಂದಾದ ಘನವಂತ. ಈ ಚಿದಹಮ್ಮು ನಡುವೆ ದೊರೆತ ಮಾಯಿಕ. ಇದು ಮರವಿನಿಂದುಕ್ತವಾದುದಲ್ಲ, ತನ್ನಿರುವುಳ್ಳದು ಅಲ್ಲ. ತನ್ನಿಂದ ತಾನಾದ ಅರುವಿಂಗರುವು. ಜಾಗ್ರತವಾಗುವುಡೆ ಚಿದಹಮ್ಮು ಸ್ವಭಾವತಃ ಕರಗುವುದು. ಆಗ ಅಚ್ಚಸುಖ ಪ್ರಜ್ವಲಿಸುವುಡೆ ಅದರಲ್ಲಿ ಲೀಯವಾದುದೆ, ಸವಿದ ಭಕ್ತರೆಂದು ಹೇಳಿಹರು.

ಸವಿದ ಭಕ್ತರೆಂಬುದು ಚಿದಹಮ್ಮನ್ನೆ ಕರಗಿಸಿ, ಅಹಮಿಲ್ಲದ ಚಿದ್ಘನದಲ್ಲಿ ಒಂದಾದವರು. ಅಹಮಿಲ್ಲದ ಚಿದ್ಘನವದು . ಬೆಳಗಿನೊಳಗಣ ಬೆಳಗು . ಇದು ತನ್ನಿಂದ ತಾನರಿದು ನೋಡುವುಡೆ ಈ ಸಂಜ್ಞೆಯಾದರೂ ತನ್ನೋಳ ಕಾಣದೆ ಶಬ್ದಮುಗ್ಧರಾದ ಸುಖ ಸಂಪನ್ನರು. ಇವರು ಮೇರುವನೆ ಬೋನವ ಮಾಡಿ ಸವಿದ ಭಕ್ತರು. ಚಿದಹಮ್ಮನ್ನು ನಿಜ ಜ್ಞಾನವೆಂಬ ಅಗ್ನಿಯಲ್ಲಿ ದಹಿಸಿ ಪಾಕಗೊಳಿಸಿ ತೃಪ್ತಿಹೊಂದಲು ಸವಿದ ಭಕ್ತರಿಗೆ ಸರಳವಾಗಿದೆ.

ಯತಾರ್ಥ ಜ್ಞಾನವಿಲ್ಲದೆ ಚಿದಹಮ್ಮು ದಹಿಸುವದು ಕಷ್ಟ . ಅದನ್ನು ಪಾಕಗೊಳಿಸುವದು ಕಷ್ಟ. ತೃಪ್ತ ರೂಪ ತೃಪ್ತರಾಗಲು ಅದು ಹೇಗೆ ಸಾಧ್ಯ. ಭರಿತ ಭಾವದವರಾಗುವುದು ಅಸಾಧ್ಯವು. ಆರು ತನ್ನ ಸ್ವರೂಪ ಚಿದಹಮ್ಮು ಎಂದು ತಿಳಿದಿರುವದಿಲ್ಲ. ಏಕೆಂದರೆ ಇದು ನಡುವೆ ಬಂದುದು ಯತಾರ್ಥವಾಗದು, ಇದು ತೋರಿ ಇಲ್ಲವಾಗುವ ಮಾಯಿಕ, ಅಭ್ಯಾಸ ಕಾಲದಲ್ಲಷ್ಟೆ ತೋರುವುದು ಪುನಃ ಇಲ್ಲವಾಗುವುದೆಂದು ತನ್ನಿಂದ ತಾನರಿದು ನೋಡಿದುದರಿಂದ,ಅವರು ಇದಕ್ಕೆ ಮೋಸ ಹೋಗುವುದಿಲ್ಲ. ಅವರು ಸಹಜವಾಗಿ ಈ ಚಿದಹಮ್ಮುಳ್ಳ ಸಚ್ಚಿದಾನಂದೋಹಂ ಪರಿಪೂರ್ಣೋಹಂ

ಸ್ವಯಂ ಪ್ರಕಾಶೋಹಂ ಎಂಬ ಅಹಮುಳ್ಳ ಜ್ಞಾನವು ನನ್ನದಲ್ಲ. ನನ್ನ ನಿಲುವು ಅಲ್ಲ. ಇದಕ್ಕೆ ಮೀರಿ ಬೆಳಗುವ ಬೆಳಗೆ ತನ್ನಯ ಸ್ವರೂಪ.ತಾನು ಎಂಬುದು ತನ್ನಿಂದ ತನಗೆ ಗೊತ್ತಾಗಿ ತನ್ನನ್ನು ಇದ್ದಕ್ಕಿದ್ದಂತೆ ತಿಳಿದು ತಾನೆ ತಾನಾಗಿ ನಿಲ್ಲುವುದು. ಆಗ ತನ್ನ ಯತಾರ್ಥ ಜ್ಞಾನದಿಂದ ಚಿದಹಮ್ಮು ನಷ್ಟಮಾಡಲು ಬರುವುದು. ಅಂತಪ್ಪ ಶರಣ ತನ್ನ ಸ್ವ ಸ್ವರೂಪ ಮಾಡಿ ಪಾಕಗೊಳಿಸಿ ತೃಪ್ತ ಹೊಂದಲು ಬರುವುದು. ಅಖಂಡ ಸುಖಸ್ವರೂಪ ಸಂಪನ್ನರು. ಅವರೆ ಸವೆಯದ ಸುಖವ ಸವಿಯುವದರಿಂದ ಸವಿದ ಭಕ್ತರೆಂದು ಹೇಳಿಹರು.

ಅಂತಪ್ಪ ಭಕ್ತರು ಅಡಗನಾರೋಗಣೆಯ ಮಾಡಿದ ಲಿಂಗದ ಕೊಡಗೂಸು ನುಂಗಿತ್ತು ಕಂಡೆ ಗುಹೇಶ್ವರಾ : ಎಂದು ಹೇಳಿದುದು. ಲಿಂಗದ ಕೊಡಗೂಸು ಇದು ಶರಣರೂಪಿ ಕೂಸು, ಇದು ಲಿಂಗದ ಕೊಡಗೂಸು ಇಂತಪ್ಪ ಶರಣ ತೃಪ್ತವನೆ ಅಡಗನಾರೋಹಣ ಮಾಡಿ, ಅಚಿಂತ್ಯವು ತನ್ನಿರುವಾಗಿ ಅದರಿಂದ ಪ್ರಸನ್ನನಾಗಿ ಪರಮಾನಂದಗೊಳ್ಳುವ ಅವರ ಪರಾಶಕ್ತಿಗೆ ಸಾಧ್ಯವಾದುದು ಸಹಜವಾಗಿದೆ. ನಿಃಶಬ್ದ ಲಿಂಗವ ಆರೋಗಣ ಮಾಡಿದ ಮಹಾನ್ ಶಕ್ತಿ ಶರಣರದು. ಅವರು ದಿವ್ಯದೃಷ್ಠಿಯುಳ್ಳವರು, ಅನುಪಮ ಜ್ಞಾನಶಕ್ತಿ ಸಂಪನ್ನರು. ಅವರಲ್ಲಿರುವ ಜ್ಞಾನಕಲೆಯೂ ಸಕಲವು ನುಂಗಿ ತಾನೆ ತಾನಾಗಿ ನಿಃಶಬ್ದ ಲಿಂಗಘನವಾಗಿಹುದು ಎಂದು ಹೇಳಿಹರು. ಇದು ಶರಣ ರೂಪಿ ಲಿಂಗದ ಕೂಡಗೂಸು ಅಡಗನಾರೋಹಣ ಮಾಡಿದುದು ನುಂಗಿತ್ತು ಕಂಡೆ ಎಂದು ಹೇಳಿಹರು.

159

ಅರಿವರಿತು ಬೆರಗು ಹೊಡೆದು, ಕುರುಹು ಗೆಟ್ಟವನ,
ಬಂದ ಬಟ್ಟೆಯಲ್ಲಿ ಬಾರದೆ ಹೋದವನ
ಕಂಗಳಲುಂಡವನ, ಮನದಲ್ಲಿ ದಣಿದವನ,
ಕಿಚ್ಚಿಲ್ಲದೆ ಬೆಂದವನ, ಅಚ್ಚಲಿಂಗೈಕ್ಯನ
ಕೈಯಿಲ್ಲದೆ ಕೊಂಡವನ, ಬಾಯಿಲ್ಲದೆ ಉಂಡವನ
ಒಡಲಿಲ್ಲದೆ ಅವಗ್ರಹಿಸಿದವನ ನಂಬು ಗುಹೇಶ್ವರನಲ್ಲಮನ.

ತಾತ್ಪರ್ಯ : ಅರುವರಿತು ಬೆರಗು ಹೊಡೆದು ಅರುವು ಗೆಟ್ಟವನ: ಅರವು ಗೆಟ್ಟವ ಇವನಾರು? ಅರುವರಿತವನೆ, ಅರುವುಗೆಟ್ಟವನು, ಅರುವು ಅರುವು ಎಂಬುದೆ ಇವನಲ್ಲಿ ಕೆಟ್ಟು ಹೋಗಿದೆ. ಇವನಲ್ಲಿ ಬೆರಗು ಹೊಡೆದು, ಅರವು ಗೆಟ್ಟವನಾಗಿದ್ದಾನೆ. ನುಡಿಯುವ ನುಡಿಯೆ ಕೆಟ್ಟು ಹೋಗಿದೆ. ನಡೆಯುವ ನಡತೆಯೂ ಕೆಟ್ಟು ಹೋಗಿದೆ.

ಗಗನಕ್ಕೆ ನುಡಿಯುವ ನುಡಿಯು ಇಲ್ಲ. ನಡೆಯುವ ನಡೆತೆಯು ಕೆಟ್ಟು ಹೋಗಿದೆ. ಎಲ್ಲೆಲ್ಲೂ ಅದುವೆ ತುಂಬಿರುವಾಗ ಅದು ಇದ್ದುದು ತನ್ನಲ್ಲಿ ಹೋಗುವುದು . ತನ್ನಲ್ಲಿ ಅದು ಹೋದುದಲ್ಲ ಬಂದುದಲ್ಲ, ನಿರಂಜನ ನಿಜ ಚಿದ್ರೂಪ ತಾನಾದ ಅಚ್ಚ ಲಿಂಗೈಕ್ಯ . ಬಿಡಿ ಅರಿವುಗಳ ಅಹಂಕಾರವಿಲ್ಲ. ಮಮ ಕಾರವಿಲ್ಲ ಅವುಗಳು ಇದ್ದವೂ ಅಲ್ಲ ಇಲ್ಲದವುಗಳು ಅಲ್ಲವಾಗಿರುವದರಿಂದ ಅಚ್ಚ ಲಿಂಗೈಕ್ಯ ಬಿಡಿ ಅರಿವುಗಳ ಮುಖ್ಯತೆಯಿಲ್ಲ . ಸಾಮಾನ್ಯ ಅರಿವು ಕಲ್ಪಿತ ವಿಶೇಷ ಅರಿವು, ವಿಶೇಷ ಅರಿವಿಂಗೂ ಮುಖ್ಯತೆಯಿಲ್ಲ. ಶೃತಿಗಗೋಚರವಾದ ತತ್ವವೆ ತಾನಾಗಿರುವ ಮಹಾಂತ ಶಬ್ದ ಸಂಭ್ರಮದ ಅರಿವುಳ್ಳವನು ಹೇಗಾಗುವವನು.

ಅಚ್ಚ ಲಿಂಗೈಕ್ಯ ವಾಙ್ಮನ: ಬಾರದ ಅಪ್ರತಿಮ ಲಿಂಗವರಿತು ಅಚಲಾನಂದದೊಳಿದ್ದ ಮಹಾಂತ, ನಿದ್ರಿತ ಪುರುಷಂಗೆ ಜಾಗ್ರತ್ ಸ್ವಪ್ನಂಗಳ ಅರಿವು ಸ್ವಭಾವತಃ ಹೇಗೆ ಕೆಟ್ಟು ಹೋಗಿವೆ. ಅವುಗಳ ಸುಖ

ದುಃಖವು ಸಹ ಇಲ್ಲ. ಹಾಗೆ ಅಚಲಾನಂದದಲ್ಲಿದ್ದ ಶಿವಯೋಗಿ ಅರುವು ಅರುವು ಎಂಬುದೆ ಕೆಟ್ಟು ಹೋಗಿದೆ. ಏಕೆಂದರೆ? ಅರುವು ಅರುವು ತಾನೆಂದು ಅನುಸಂದಾನ ಮಾಡುವವರು ಶಿಕ್ಕುತ್ತಾರೆ. ಅದರ ಭಾವದಲ್ಲಿ ತಲ್ಲೀಯವಾದವರು ಶಿಕ್ಕುತ್ತಾರೆ. ಅರುವಿಂಗರುವಾದವರು ಸಿಕ್ಕಬಹುದೆ? ಅವರು ಅರಿಯದರುವುಳ್ಳವರು. ತಾನೆ ತಾನಾದ ಮಹಾಂತರು. ಇವರು ಅಚ್ಚಲಿಂಗೈಕ್ಯರು.

ಬಂದ ಬಟ್ಟೆಯಲ್ಲಿ ಬಾರದೆ ಹೋದವನ : ಬಂದ ಬಟ್ಟೆಯಲ್ಲಿ ಬಂದವರು ಹೋದವರು ಶಿಕ್ಕುತ್ತಾರೆ, ಇವರುಗಳು ಗುಣಮಯರು, ಪ್ರಕೃತಿ ವಶವಾದವರು, ಶರೀರ ಧಾರಿಗಳು, ಇವರು ತಪಸ್ವಿಗಳಿರಲಿ, ತ್ಯಾಗಿಗಳಿರಲಿ, ಯೋಗಿಗಳಿರಲಿ ಆರಿದ್ದರೂ ಇವರು ಆವರಣ ದೋಷವುಳ್ಳವರು, ಇದು ಕಾರಣ ಪ್ರಕೃತಿ ಎಂಬ ಬಟ್ಟೆಯಲ್ಲಿ ಬಂದವರು, ಪುರವೆಂಬ ಬಟ್ಟೆಯಲ್ಲಿ ಬಂದವರು. ಅದರಲ್ಲಿಯೆ ಹೋಗುವವರು ದೇಹವಾಸನೆ ಶಾಸ್ತ್ರವಾಸನೆಯುಳ್ಳವರಾಗಿ ಪ್ರಕೃತಿ ಧರರಾಗಿ ಗತಿಮತಿಯಲ್ಲಿಯೆ ಹೋದವರು.

ಅಚ್ಚಲಿಂಗೈಕ್ಯ ಲೋಕದೃಷ್ಠಿಗೆ ದೇಹವೆಂಬ ಬಟ್ಟೆಯಲ್ಲಿ ಬಂದವನಾಗಿ ಕಾಣುತ್ತಾನೆ. ತನು ತ್ರಯಂಗಳು ಅವಸ್ಥಾ ತ್ರ ಯಂಗಳು ಇವೆಲ್ಲವು ಬಂದ ಬಟ್ಟೆಗಳೆ ಎಂದು ಅರಿತ ಮಹಾಂತ . ಇದು ಕಾರಣ ಕ್ಷರಾಕ್ಷರವಾಗದ ಘನವಂತ ಬಂದ ಬಟ್ಟೆಯಲ್ಲಿ ಬಾರದೆ ಹೋದವನು. ಪ್ರಕೃತಿ ಪುರುಷ ಇವೆರಡೆ ಬಂದ ಬಟ್ಟೆಗಳೆ! ಒಂದು ನಾಶವುಳ್ಳದು ಇನ್ನೊಂದು ಅವಿನಾಶ ಎಂಬುದು ಬಂದ ಬಟ್ಟೆಗಳು ಇವೆರಡು ಬಟ್ಟೆಗಳ ಹಂಗು ಹರಿದ ಮಹಾಂತ. ಇದು ಕಾರಣ ಕ್ಷರವಾಗದವನ ಅಕ್ಷರವಾಗದವನ ಆವಾವುದು ಆಗದವನ ಏನೊಂದಾಗದ ಘನವಂತ. ಅಚ್ಚಲಿಂಗೈಕ್ಯ ಬಂದ ಬಟ್ಟೆಯಲ್ಲಿ ಬಾರದೆ ಹೋದವನು ಎಂದು ಹೇಳಿಹರು. ಪ್ರಕೃತಿ ಎಂಬುದನ್ನು ಕಲ್ಪಿಸಿದವನ ಪುರುಷ ಎಂಬುದನ್ನು ಕಲ್ಪಿಸಿದವನ ಅಕಲ್ಪಿತ ಘನದಿರುವು.

ಅದು ತನ್ನಯ ಅರುವಾಗಿಹುದನ್ನು ತನ್ನಿಂದ ತಾನು ಕಂಡು ಕೊಂಡಾತ ಪುನಃ ಕಲ್ಪನವ ಕಾಣದಾತ ಕಾಣದುದು ಕಂಡಾತ. ಕಂಗಳಲುಂಡವನ ! ಅಚ್ಚಲಿಂಗೈಕ್ಯ ಕಂಗಳಲುಂಡಾತ ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿತು ಲಿಂಗವಾಗಿಹ ನೋಟ. ನೋಡದ ನೋಟ, ಅನಿಮಿಷ ನೋಟ, ಲಿಂಗ ನೋಟ, ಸುಖದ ನೋಟ, ಲಿಂಗ ಸುಖ ಅದ ನೋಡ ಹೋಗಿ, ತಾನು ಸುಖವ ಸವಿಯುವ ನೋಟ. ಚಿತ್ ಸುಖವನುಂಡ ಕಂಗಳು ಮೌನ. ಚಿದ್ರಸವು ಮೌನ, ಅದನ್ನು ಸವಿಯುವ ರಸನೇಂದ್ರೀಯು ಮೌನ. ಇದು ಅರು ಹೃದಯ. ಅರುವು ಆನಂದ, ಹೃದಯವು ಆನಂದ, ಕಂಗಳು ಆನಂದ, ಆನಂದ ಆನಂದ ದೂಟವಾದುದರಿಂದ ಅಚಲಾನಂದವೆಂದು ಹೇಳಿಹರು. ಈ ಅಚಲಾನಂದವೆ ಕಂಗಳಿಂದ ಉಂಡವ ಸುಜ್ಞಾನದಿಂದ ಉಂಡವ, ದಿವ್ಯ ದೃಷ್ಠಿಯುಳ್ಳವನಾಗಿ ಉಂಡವ ಕಂಗಳಲುಂಡವನು ಎಂದು ಹೇಳಿಹರು.

ಮನದಲ್ಲಿ ದಣಿದವನು, ಅಚ್ಚ್ ಲಿಂಗೈಕ್ಯ , ಮನ ನಿವಾತ ಮನ, ಇದು ಉಪಾಧಿ ಮನವ ಸೇರದುದು. ಉಪಾಧಿ ರಹಿತಮನ ಸೇರದುದು. ಇವೆರಡಕ್ಕೂ ಮಿಕ್ಕಿ ಮೀರಿ ನಿಂತ ಮನವು ಸುಮನವು. ಸುಖದ ಮನವು. ಅಚಿಂತ್ಯ ಪದಕ್ಕಾಗಿ ಮನದಲ್ಲಿ ದಣಿದವನು, ನಿಶ್ಚಿಂತಕ್ಕಾಗಿ ಮನದಲ್ಲಿ ದಣಿದವನು. ನುಡಿಗೆಡೆಗೊಡದ ಘನಕ್ಕಾಗಿ ಮನದಲಿ ದಣಿದವನು. ಸಮ ಪ್ರಕಾಶ ತತ್ವ ತಿಳಿಯಲು, ಮನದಲ್ಲಿ ದಣಿದವನು. ಅಮರತ್ವ ಹೊಲಬನರಿಯಲು ಮನದಲ್ಲಿ ದಣಿದವನು ಅಚ್ಚಲಿಂಗೈಕ್ಯನೆಂದು ಹೇಳಿಹರು.

ಕಿಚ್ಚಿಲ್ಲದೆ ಬೆಂದವನ, ಅಚ್ಚಲಿಂಗೈಕ್ಯ ಕೃತ್ರಿಮ ಕಿಚ್ಚಿನಿಂದ ಬೆಂದವನಲ್ಲ, ಉಪಮಿಸಲು ಬಾರದ ಕಿಚ್ಚಿನಿಂದ ಬೆಂದವನು ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿತು ಲಿಂಗವಾಗಿಹ ಘನವಂತ ವಾಙ್ಮನದಿಂದುಕ್ತವಾದ ಕಿಚ್ಚುಸುಡವು. ಅದು ದೇಹೋಹಂ ಇರಲಿ , ಕೋಹಂ ಇರಲಿ ನಾಹಂ ಇರಲಿ

ಸೋಹಂ ಇರಲಿ ಚಿದಹಂ ಇರಲಿ, ಇವುಗಳಾವು ಅವನನ್ನು ಸುಡವು. ನಿಃಶಬ್ದ ಬ್ರಹ್ಮದರುವುಳ್ಳ ಅನುಪಮ. ಉಪಮೆಗೊಳಪಟ್ಟ ಕಿಚ್ಚು, ಸುಡುವದೆಂತು? ಎರವಲ ಕಿಚ್ಚಿನಿಂದ ಬೆಂದವನಲ್ಲ. ತನ್ನಿಂದ ತನ್ನ ಅರಿತ ಯತಾರ್ಥ ಜ್ಞಾನದಿಂದ ಬೆಂದವನಾದ್ದರಿಂದ ಕಿಚ್ಚಿಲ್ಲದೆ ಬೆಂದವನು ಎಂದು ಹೇಳಿಹರು. ಈ ಲಕ್ಷಣಗಳುಳ್ಳವನು ಅಚ್ಚಲಿಂಗೈಕ್ಯನೆಂದು ಪ್ರಭುದೇವರು ಸೂಚಿಸಿದುದು, ಇದಲ್ಲದೆ ತನ್ನ ಲಿಂಗೈಕ್ಯ ನಿಲುವ ಕೈಯಿಲ್ಲದೆ ಕೊಂಡವನು, ಬಾಯಿಲ್ಲದೆ ಉಂಡವನು, ಒಡಲಿಲ್ಲದೆ ಅವಗ್ರಹಿಸಿದವನ ನಂಟು ಗುಹೇಶ್ವರನಲ್ಲಮನ . ಪ್ರಭುದೇವ ಕೈಯಿಲ್ಲದೆ ಕೊಂಡವನು. ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವ ಕೈಯಿಲ್ಲದೆ ಕೊಂಡವನು. ಅಪ್ರತಿಮ ಲಿಂಗವರಿತು ಅಚಲಾನಂದವ ಬಾಯಿಲ್ಲದೆ ಉಂಡವನು. ಅನುಪಮ ಲಿಂಗವ ಒಡಲಿಲ್ಲದೆ ಅಪ್ಪಿಕೊಂಡವನು, ಇದೆಂಥ ಅಪ್ರಮಾಣಗಮ್ಯ ನಿಲವು, ಲಿಂಗವ ಕೈಯಿಲ್ಲದೆ ಕೊಂಡುದು ಇದೆಂಥ ಘನತ್ವ. ಲಿಂಗವು ಅಪ್ರತಿಮ ತಾನು ಅಪ್ರತಿಮ ಲಿಂಗವು ವಾಙ್ಮನಕ್ಕೆ ನಿಲುಕದುದು, ತಾನು ವಾಙ್ಮನಕ್ಕೆ ನಿಲುಕದವನು. ಲಿಂಗ ಲಿಂಗವಾಗಿ ಕೊಂಡುದರಿಂದ ಕೈಯಿಲ್ಲದ ಕೊಂಡನೆಂದು ಹೇಳಿಹರು .

ಬಾಯಿಲ್ಲದ ಉಂಡವನ: ಲಿಂಗ ಸುಖವು ಬಾಯಿಲ್ಲದೆ ಉಂಡವನು. ಇದು ಅರು ಹೃದಯದ ಊಟ. ಜ್ಞಾನಾಮೃತ, ಇದನ್ನು ಬಾಯಿಯಿಂದ ಊಟ ಮಾಡಬಹುದು. ನೆನಹು ನಿರ್ಣಯದಿಂದುಕ್ತವಾದ ಊಟ. ಬಾಯಿಯಿಂದ ಊಟ ಮಾಡಬಹುದು. ಅಚಿಂತ್ಯದ ಊಟ ಬಾಯಿಲ್ಲದೆ ಉಂಡ ಊಟ. ತನ್ನ ಊಟ ಶಬ್ದ ಸಂಭ್ರಮಕ್ಕೆ ನಿಲುಕದ ಊಟ, ನಿಃಶಬ್ದ ಬ್ರಹ್ಮದ ಊಟ. ಇದು ಬಾಯಿಲ್ಲದೆ ಉಂಡವರ ಊಟ, ಇದು ಪ್ರಭುವಿನ ಊಟ. ಎಲ್ಲವೂ ಅಲ್ಲಗಳೆದ ಅಲ್ಲಯ್ಯ, ಗುಹೇಶ್ವರ ನಲ್ಲಯ್ಯನ ಊಟ, ಬಾಯಿಲ್ಲದೆ ಉಂಡವನು ಒಡಲಿಲ್ಲದೆ ಅವಗ್ರಹಿಸಿದವನು. ಗುಹೇಶ್ವರ ಚಿಂತನೆಗೆ ನಿಲುಕದ ಘನ ಲಿಂಗ ಘನ ಅಪ್ಪ ಬೇಕಾದಲ್ಲಿ ತಾನು ಚಿಂತನೆಗೆ ನಿಲುಕದವನಾದಾಗ ಘನಲಿಂಗ ಅಪ್ಪುವನು. ಚಿಂತನೆಗೆ ನಿಲುಕದ ಘನನಾಗಿ ಗುಹೇಶ್ವರನೆಂಬ ಘನಲಿಂಗವ ಅಪ್ಪಿದುದರಿಂದ ಒಡಲಿಲ್ಲದೆ ಅವಗ್ರಹಿಸಿದವನು ಇಂತಪ್ಪ ಘನಕ್ಕೆ ಘನವಾದ ಮಹಾಂತನ ನಂಟು. ಗುಹೇಶ್ವರ ನಲ್ಲಮನ ನಂಬು ಎಂದು ಹೇಳಿಹರು .

160

ಬರಿಯ ಬೋಳುಗಳೆಲ್ಲ ಜಂಗಮವೆ?
ಜಡ ಜೀವಿಗಳೆಲ್ಲ ಜಂಗಮವೆ?
ವೇಷಧಾರಿಗಳೆಲ್ಲ ಜಂಗಮವೆ?
ಇನ್ನಾವುದು ಜಂಗಮವೆಂದರೆ ನಿರ್ಗಮನವೆ ಜಂಗಮ.
ನಿಸ್ಸೀಮವೆ ಜಂಗಮ , ನಿರ್ದೇಹಿಯೆ ಜಂಗಮ
ನಿಜೈಕ್ಯವೆ ಜಂಗಮ . ಇಂಥ ಜಂಗಮದ ಸುಳುಹು ಕಾಣದೆ ಕೂಡಲ
ಚೆನ್ನ ಸಂಗಮದೇವ ತಾನೆ ಜಂಗಮವಾದ. ॥ 1429 ॥

ತಾತ್ಪರ್ಯ: ಷಟ್‌ಸ್ಥಲ, ಚಕ್ರವರ್ತಿಯಾದ ದೇವ ದೇವನು, ನಿಜೈಕ್ಯ ಜಂಗಮ ತಿಳಿಯದಿದ್ದ ಜಂಗಮಯ್ಯಗಳನ್ನು ಕುರಿತು ಎಚ್ಚರಿಸುತ್ತಿದ್ದಾನೆ.

ಅಯ್ಯ ಜಂಗಮ ದೇವಯ್ಯಗಳಿರಾ ತಲೆಯ ಬೋಳು ಮಾಡಿಕೊಂಡ ಮಾತ್ರದಲ್ಲಿ ಜಂಗಮಯ್ಯಗಳು ಆಗಲು ಸಾಧ್ಯವೆ? ಜಡ ಭಾವಿಗಳೆಲ್ಲ ಜಂಗಮಯ್ಯಗಳೆ? ಮತಿಮಯ ಶರೀರ

ಭಾವಿಯು ಜಂಗಮ ಆಗಬಹುದೆ? ದೇಹ ಬುದ್ದಿಯುಳ್ಳವನು ಜಂಗಮನಾಗಬಹುದೆ? ನಿತ್ಯಾನಿತ್ಯ ತಿಳಿಯದವನು ಜಂಗಮನಾಗಬಹುದೆ? ಅಂಗದ ಮೇಲೆ ಲಿಂಗ ಧರಿಸಿಕೊಂಡ ಮಾತ್ರದಲ್ಲಿ ಜಂಗಮದೇವನೆ? ಪ್ರತಿನಿತ್ಯ ತ್ರಿಕಾಲ ಲಿಂಗಾರ್ಚನೆ ಮಾಡಿದರೆ ಲಿಂಗದೇವನ ತಿಳಿದವನೆನಬೇಕೆ? ಲಿಂಗ ತಾನು ಒಂದಾದವನೆನಬೇಕೆ? ಲಿಂಗತತ್ವ ತಿಳಿಯದ ಲಿಂಗಾರ್ಚಕರು ಲಿಂಗಾರ್ಚನೆಯ ನೇಮದವರು ಒಂದು ಕೋಟಿ ಆದರೇನಾಯಿತು, ಇದು ವೇಷದಾರಿ ಜಂಗಮಯ್ಯಗಳ ಕಾರ್ಯ. ಇವರು ಬಾಹ್ಯಾಚಾರದಿಂದುಕ್ತರಾದವರು. ಇವರು ಲಿಂಗಾಂಗ ಸಮರಸ ಜ್ಞಾನವುಳ್ಳವರಾಗರು, ಇವರೆಂತು ಘನಜಂಗಮರಾಗುವರು.

ಇನ್ನಾವುದು ಜಂಗಮವೆಂದರೆ , ನಿರ್ಗಮನವೆ ಜಂಗಮ : ಗಗನವದು ಸಂಚರಿಸಬಹುದೆ? ಗಗನ ಸದೃಶನಾಗಿಹ, ಜ್ಞಾನಾಮೃತ ತಾನಾಗಿಹ, ಘನ ಜಂಗಮ ಸಂಚರಿಸುವನೆ? ಚರಿಸ್ಯಾಡುವವನು ಜಂಗಮಯ್ಯನಾಗಲಾರ.

ಪ್ರಭುದೇವ! ಪ್ರಭು ಈ ಮಹಾಂತ ದೇವರ ದೇವ . ಈತ ಮಹದರುವು , ತನ್ನ ಸ್ವಂತ ಮಹಿಮೆಯಲ್ಲಿದ್ದ ಘನಮಹಿಮ ಚರಿಸ್ಯಾಡಿದುದು ಅದು ಹೇಗೆ? ದೇಹ ಭಾವಿಗಳು ಸಂಚರಿಸುವದು ದೇಹಾದಿ ಕಾರ್ಯಗಳೆಲ್ಲ ತಮ್ಮ ಮೇಲೆ ಆರೋಪಿತ ಮಾಡಿಕೊಳ್ಳುವದು ಅವರದು ಹುಟ್ಟುಗುಣವಾಗಿದೆ. ಅವರಿಗೆ ನಿರ್ಗಮನದ ರಹಸ್ಯವ ತಿಳಿಯದು .

ಪ್ರಭುದೇವ ಸಂಚರಿಸಲಿಲ್ಲ, ಏಕೆಂದರೆ ಕಾಲಿದ್ದವರು ಸಂಚರಿಸುವವರು, ಅರುವಿಂಗರುವಾಗಿಹ ಮಹಾಂತರಿಗೆ ಕಾಲುಗಳೆಲ್ಲಿ? ಇಂತಾದ ಕಾರಣ ನಿರ್ಗಮನಿ ಜಂಗಮ ದೇವನೆಂದು ಹೇಳಿಹರು. ''ಕಾಲಿಲ್ಲವೆಂಬರಯ್ಯ ಪ್ರಭುದೇವರು ಸಂಸಾರ ಸೂತಕವ ಮೆಚ್ಚನಾಗೀ ಕೈಯಿಲ್ಲವೆಂಬರು. ಪ್ರಭುದೇವ ಪರಧನವ ಕೊಳ್ಳನಾಗಿ, ಕಿವಿಯಿಲ್ಲವೆಂಬರಯ್ಯ ಅನ್ಯವ ಕೇಳನಾಗಿ ಮೂಗಿಲ್ಲವೆಂಬರಯ್ಯ . ಪ್ರಭುದೇವನು, ದುರ್ಗಂಧಕ್ಕೆಳಸನಾಗಿ ಎದೆಯಿಲ್ಲವೆಂಬರಯ್ಯ ಪ್ರಭುದೇವರು ಪರಸ್ತ್ರೀಯ ನಪ್ಪನಾಗಿ, ಇದು ಕಾರಣ ಕೂಡಲ ಚೆನ್ನಸಂಗಮದೇವಾ ಒಕ್ಕು ಮಿಕ್ಕ ಪ್ರಸಾದವ ಕೊಂಡು, ನಾನು ಧನ್ಯನಾದೆನು ಕಾಣಾ ಸಂಗನ ಬಸವಣ್ಣ '' .

ಪ್ರಭುದೇವ, ಪರಮಾರ್ಥದ ಪರಿಣಾಮಿ, ಲಿಂಗ ಒಂದಾಗಿರ್ದಜಂಗಮ, ಅಖಂಡಿತ ಘನ ಪರಿಪೂರ್ಣವೆ ತನ್ನಿರುವೆಂದರಿದ ಘನ ಜಂಗಮ. ಅವನೆಂತು ಅಂಗಾಂಗಿಯಾಗುವನು? ಜಡಭಾವಿಯಾಗುವನು? ದೇಹ ಬುದ್ಧಿಯುಳ್ಳವನಾಗುವನು? ದೇಹ ಬುದ್ಧಿಯುಳ್ಳವನು ಶರೀರ ಧಾರಿಯಾಗುವುದು ಸಹಜ. ಅವನಿಗೆಂತು ನಿರ್ಗಮನದ ಘನವ ತಿಳಿಯುವದು ? ನಿರವಯನು ಅವನೆಂತು ಚರಿಸ್ಯಾಡುವನು. ಅತಿ ಕಾಲನಿಗೆ ಸಂಸಾರ ಸೂತಕ ಕಾಣುವದದೆಂತು? ಸುಜ್ಞಾನಿಗೆ, ಕೈಯೆ ಇಲ್ಲವಾಗಿದೆ. ಅಕ್ಷಯ ನಿಧಿಯೆ ತನ್ನದಾಗಿರುವಲ್ಲಿ ಪರಧನವ ಅದೇಕೆ ಕೊಳ್ಳವನು? ಕಿವಿಯ ಕಿವಿಯಾಗಿರುವ ಘನವಂತ ನಿಃಶಬ್ದವೇದಿ ಶೃತಿಯೆ ಹೆತ್ತರಿವು ಆಗಿರುವದರಿಂದ ಅನ್ಯವ ಕೇಳನು? ಸದ್‌ಜ್ಞಾನ ಭರಿತನಾದವಂಗೆ ಕಲ್ಪಿತ ಜ್ಞಾನವ ಸೇರದ್ದರಿಂದ ಎದೆಯಿಲ್ಲವೆಂದು ಹೇಳಿಹರು, ಅಖಂಡಿತ ಜ್ಞಾನವಪ್ಪ ಪರಿಪೂರ್ಣವೆ ತನ್ನಿರುವೆಂದರಿದ ನಿಜ ಲಿಂಗೈಕ್ಯನಾದುದರಿಂದ ಶಬ್ದ ಸಂಭ್ರಮವ ಸೇರದ್ದರಿಂದ ಪರಸ್ತ್ರೀ ಒಪ್ಪನೆಂದು ಹೇಳಿಹರು.

ನಿಸ್ಸೀಮವೆ ಜಂಗಮ, ಗಗನವು ನಿಸ್ಸೀಮವು. ಅದು ಘಟ ಮಠ ಮೇಘದೊಳಗೆ ಕಂಡರೂ ಅದು ಇದ್ದಂತಿರುವ ನಿಸ್ಸೀಮವು. ಅರುವರಿತ ಮಹಾಂತ, ನಿಸ್ಸೀಮ. ಕಾಂಡತ್ರಯ ಕಾಣದ ಮಹಾಂತ ಎಲ್ಲೆಲ್ಲೂ ತನ್ನ ಕಂಡ ಮಾಹಾಂತ ಕರ್ಮಿಯಲ್ಲ , ಪೂಜ್ಯ ಪೂಜಕ ಭಾವಿಯಲ್ಲ , ಅಹುದಲ್ಲೆನ್ನುವ ಜ್ಞಾನ ಕಾಂಡಿಯಲ್ಲ. ಭರಿತ ಭಾವಿಯಲ್ಲ ಏನೊಂದಾಗದ ನಿಷ್ಕಳಂಕ. ಆನೆಂಬುದಿಲ್ಲ, ನೀನೆಂಬುದಿಲ್ಲ

ಅಹುದಾದುದಿಲ್ಲ ಅಲ್ಲಾದುದಿಲ್ಲ ಬೇಕು ಬೇಡೆಂಬುದಿಲ್ಲ ಸಂಗಿ ಎನಲಿಲ್ಲ ನಿಸ್ಸಂಗಿ ಎನಲಿಲ್ಲ. ಪ್ರಭುದೇವ ನಿರುಪಾಧಿ ನಿರಾಲಂಬನಾದುದರಿಂದ ನಿಸ್ಸೀಮ, ನಿರುಪಾಧಿಗೆ ಅದಾವ ಉಪಾಧಿ, ಬಯಲಿಂಗೆ ಅದಾವ ಘಟ! ಅದಾವ ಮಠ! ಅದು ಅಳಿದರೇನು ಉಳಿದರೇನು? ನಿರಾಲಂಬನಿಗೆ ಅದಾವುದರ ಆಲಂಬನವಿರಬೇಕು? ಅತೀಂದ್ರಿಯನಿಗೆ ಇಂದ್ರಿಯಂಗಳೆಲ್ಲಿ? ಒಡಲಿಲ್ಲದವಂಗೆ ಅದಾವ ಸಂಗ ಸಂಬಂಧ ?ತನ್ನವರೆನಲಿಲ್ಲ, ಅನ್ಯರೆನಲಿಲ್ಲ, ಮನವೆ ಅಮನವಾದವಂಗೆ ಕಾಯಾನುಭಾವ ಎಲ್ಲಿ? ಜೀವಾನುಭಾವವೆಲ್ಲಿ? ಅಂತರಾತ್ಮನೆಂಬುದೆಲ್ಲಿ? ಪರಮಾತ್ಮನೆಂಬುದೆಲ್ಲಿ? ಅಕಲ್ಪಿತನೆ ತಾನಾದುದರಿಂದ ನಿಸ್ಸೀಮ ಜಂಗಮನೆಂದು ಹೇಳಿಹರು.

ನಿರ್ದೇಹಿ ಜಂಗಮ : ದೇಹವು ಜಂಗಮವಾಗದು, ದೇಹ ಬುದ್ಧಿಯುಳ್ಳವ ಜಂಗಮನಾಗಲಾರ. ದೇಹವೆಂದರೆ ಅಹಂ, ಅಹಂಕಾರಿಯು ಜಂಗಮನಾಗನು. ಜಂಗಮನೆಂದರೆ ಪರತತ್ವ ನಿಜಸಂಯುಕ್ತ. ಆನು ನೀನೆನ್ನದಿಹ ಶಬ್ದಸುಖಿ ಸುಖರೂಪ ಸುಖಿ ಸ್ವಸುಖಿಯು , ಜಂಗಮನು ಅರುವಿಂಗರುವಾಗಿಹ ಘನವಂತನೆ ನಿರ್ದೇಹಿ ಜಂಗಮ . ಅರಿದರುಹಿಸಿಕೊಂಬುದಕ್ಕೆ ಮೀರಿದ ಘನದಿರುವಿನ ಅರುವೆ ತಾನಾದವ ನಿರ್ದೇಹಿ ಜಂಗಮನೆಂದು ಹೇಳಿಹರು. ಕ್ಷರದಭಿಮಾನಿಯಲ್ಲ, ಅಕ್ಷರದಭಿಮಾನಿಯಲ್ಲ ಅಕ್ಷರೋತ್ತಮ ತಾನಾದುದೆ ನಿರ್ದೇಹಿ ಜಂಗಮನೆಂದು ಹೇಳಿಹರು.

ನಿಜೈಕ್ಯ ಜಂಗಮ : ನಿಜವರಿತವನು ನಿಜೈಕ್ಯ ಜಂಗಮ. ನಿಜವರಿತವನು ನಿಜವೆನಲಿಲ್ಲ, ಅಖಂಡಿತ ನೆನಲಿಲ್ಲ, ಅಚಲನೆನಲಿಲ್ಲ, ಸಹಜನೆನಲಿಲ್ಲ, ಅಹುದೆನಲಿಲ್ಲ ಅಲ್ಲೆನಲಿಲ್ಲ ಇದ್ದುದೆನಲಿಲ್ಲ ಇಲ್ಲದುದೆನಲಿಲ್ಲ, ಲಿಂಗವೆನಲಿಲ್ಲ, ಸಂಗವೆನಲಿಲ್ಲ, ನಿಸ್ಸಂಗವೆನಲಿಲ್ಲ, ಜಂಗಮವೆನಲಿಲ್ಲ, ಪ್ರಸಾದವೆನಲಿಲ್ಲ, ಆವಾವ ಭಾಷೆ ಪ್ರಸಾದ ನಿಕ್ಕಲಿಲ್ಲ ಭಾಷೆ ಪ್ರಸಾದ ನಿಕ್ಕದವನೆ ನಿಜೈಕ್ಯ ಜಂಗಮ. ಅರುವರಿತು ಏನೊಂದೆನಲಿಲ್ಲದ ಅರುವು ಅದು ನುಡಿದು ಹೇಳಬಹುದೆ? ಅರುವು ಅರುವೆಂದೆನ್ನುವದು ನಿಜವರಿತ ನಿಜೈಕ್ಯ. ಜಂಗಮವಾಗದು ಶಬ್ದಮುಗ್ಧ ಶೃತಿಗಗೋಚರ ಅದು ಶಬ್ದ ಸಂಭ್ರಮವು ಆಗದು ವಾಙ್ಮನೋತೀತವಾದ ನಿಜವು ಬಾಧಿತವೆ? ನಷ್ಟವಾಗಲಿಲ್ಲವೆಂದಲ್ಲಿ ನುಡಿಗೊಳಪಡದು. ಇದು ಕಾರಣ ನಿಜವರಿತವರು ನಿಜವೆನಲಿಲ್ಲ ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿತು, ಅಚಲಾನಂದಮಯರು, ಅವರು ಶಬ್ದಮುಗ್ಧರು, ನುಡಿದು ನಿಃಶಬ್ದ ಲಿಂಗಾವಗಿಹ ಘನಕ್ಕೆ ಘನರು ಭಾವಕ್ಕಿಂಬು ಕೊಡದ ಮಹಾನುಭವಿಗಳು. ಈ ಮಹಾಂತರ ನಿಜ ನಿಲವು ನಿರವಧಿ ನಿಲುವು, ಮನಕ್ಕೆ ಮೇರೆದಪ್ಪಿದ ನಿಲವು. ಅನುಪಮ ನಿಲವು. ಇಂತಪ್ಪ ಜಂಗಮದ ಸುಳಿಹು ಕಾಣದೆ ಕೂಡಲಚೆನ್ನಸಂಗಾ ತಾನೆ ಜಂಗಮವಾದ.

ಜಂಗಮ ಜಂಗಮ ಎಂದು ಸುಳಿದಾಡುವವನು, ಜಂಗಮ ಹೇಗಾಗುವುದು ? ಮಾಯಿಕವು ಜಂಗಮವಾಗದು, ತೋರಿ ಇಲ್ಲವಾಗುವ ಅತತ್ವ ಅದು ಪರತತ್ವ ಹೇಗಾಗುವುದು ? ನಡೆ ನುಡಿಯಿಂದುಕ್ತವಾದುದು ನಿಜೈಕ್ಯ ಜಂಗಮವಾಗದು, ಕಲ್ಪಿತ ಪುರುಷ, ಪುರುಷೋತ್ತಮ ನಾಗಲಾರ. ಅಕ್ಷರೋತ್ತಮವು ಜಂಗಮ ಘನವು ಇದು ಕ್ಷರಾಕ್ಷರವಾಗದು. ಇಂಥ ಜಂಗಮ ಸುಳುಹು ಕಾಣದೆ ಕೂಡಲಚೆನ್ನ ಸಂಗಮದೇವ ತಾನೆ ಜಂಗಮವಾದ. ಈ ಲಿಂಗ ಒಂದಾಗಿರ್ದ ಜಂಗಮ ಜಂಗಮ ಒಂದಾಗಿರ್ದಲಿಂಗ ಉಪಮೆಗೆ ತಂದು ಎರಡೆನ್ನಬಹುದೆ? ಶುದ್ಧ ಶಿವೈಕ್ಯ ತಾನೆ ಅದುವೆ ಕೂಡಲಚೆನ್ನಸಂಗಮದೇವ. ತಾನೆ ಜಂಗಮವಾದುದು ಎಂದು ಹೇಳಿಹರು.

161

ಗ್ರಾಮದ ಪದ ಗತಿಯ ನರಿಯರು,

ಗ್ರಾಮಕ್ಕೆ ಗುರುವಾವುದೆಂದರಿಯರು,
ಗ್ರಾಮದ ಕರಣವಿಡಿದಲ್ಲಿ
ನಿಚ್ಚಟವಾವುದೆಂದರಿಯರು, ಇದನರಿದು ಮರೆದು ನಿಂದಡೆ
ಕೂಡಲಚೆನ್ನಸಂಗಾ ಲಿಂಗೈಕ್ಯವು. ॥ 717 ॥

ತಾತ್ಪರ್ಯ: ಗ್ರಾಮದ ಪದ ಗತಿಯನರಿಯರು : ಬಹುಜನ ಗ್ರಾಮವೆಂದರೆ ಮನೆಗಳ ಗುಂಪು. ಮನೆಗಳ ಸಮೂಹವೆಂದರಿತವರೆ ಬಹಳ. ಗ್ರಾಮದ ದೇವನೆಂದರೆ, ಈಶ್ವರ, ಗಣಪತಿ, ಪ್ರಾಣ ದೇವರು, ಬಸವಣ್ಣ, ವೀರಭದ್ರ, ಮಲ್ಲಿಕಾರ್ಜುನ, ಶಕ್ತಿದೇವಿ ಹೀಗೆ ತಮ್ಮ ತಮ್ಮ ಭಾವಕ್ಕನುಸಾರ ದೇವರನ್ನು ಮಾಡಿಕೊಂಡಿಹರು. ಇದಲ್ಲದೆ ಪೂಜ್ಯ ಪೂಜಕ ಭಾವನೆಯ ಮಾಡಿ ಆಸ್ತೀಕವಂತರಾಗಿಹರು, ಇವರು ಗ್ರಾಮದ ಪದವನರಿಯದ್ದರಿಂದ ಅದರ ಗತಿಯು ಹೇಗೆ ತಿಳಿಯುವದು.

ಮಾನವ ವಸತಿಗೆ ಮಾಡಿಕೊಂಡುದೆ ಗ್ರಾಮವೆಂದು ತಿಳಿದಿಹರು. ತೋರಿಕೆಯಿಂದುಕ್ತವಾದ ಗ್ರಾಮಗಳು ತೋರುತ್ತವೆ. ನಷ್ಟವಾಗುತ್ತವೆ. ಇದು ಮಾನವ ರಚಿತವಾದ ಗ್ರಾಮ. ಇದು ತೋರುವ ವಸತಿ . ಕೆಲವು ದಿವಸ ವರ್ಷಾಂತ್ಯದಲ್ಲಿ ನಷ್ಟವಾಗುವ ವಸತಿ , ವಿಚಾರಿಸುವುಡೆ ಇದ್ದಂತಿಹ ಕಲ್ಲು ಮಣ್ಣು ಕಟ್ಟಿಗೆ, ಕಬ್ಬಿಣ . ವಸತಿ ಎಂಬುದಿಲ್ಲ. ಗ್ರಾಮ ಎಂಬುದಿಲ್ಲ ಕಟ್ಟಿದುದಿಲ್ಲ ನಷ್ಟವಾದುದಿಲ್ಲ. ''ಅಸ್ತಿ ಭಾತಿ ಎಂಬ ಎನ್ನ ಸತ್ಯದಲ್ಲಿ ನಾಮರೂಪು ಎಂಬ ಹುಸಿಯೆಂತು ಜನಸಿ ತೆಂದರಿಯೆನಯ್ಯ . ಇಲ್ಲದ ಹೆಸರುಳ್ಳ ಚಿತ್ರದಂತೆ ರೂಪು ಮಾನ ವೀ ತೆರನೆಂದರಿಯದೆ ತೊಳಲಿ ಬಳಲು ತಿರ್ದೆನಯ್ಯ ಕೂಡಲಚೆನ್ನಸಂಗಯ್ಯಾ ಸಂಸಾರ ಬಂಧನವೆನಗಿದೆ ಕಂಡಯ್ಯ ''.

ಆಧ್ಯಾತ್ಮವಾದಿಗಳು ನಾಮರೂಪದಿಂ ತೋರುವ ಪಿಂಡಕ್ಕೆ ಗ್ರಾಮವೆನ್ನುವರು. ಬ್ರಹ್ಮಾಂಡಕ್ಕೆ ಗ್ರಾಮವೆನ್ನುವರು. ಕಲ್ಪಿತಕ್ಕೆ ಗ್ರಾಮವೆನ್ನುವರು. ಇನ್ನೂ ಕೆಲಬರು ತ್ವಂ ಪದ ಜೀವನ ಗ್ರಾಮ, ತತ್ಪದ ಈಶನ ಗ್ರಾಮ , ಅಸಿಪದ ಪ್ರತ್ಯಗಾತ್ಮನ ಗ್ರಾಮ ಹೀಗೆ ಹಲವು ವಿಧ ವಿಧವಾಗಿ ಈ ಗ್ರಾಮವ ಕಾಣುವರು.

ಗ್ರಾಮಕ್ಕೆ ಗುರುವಾವುದೆಂದರಿಯರು : ಬಹು ಮಾನವರು ಮಾನವ ಸೃಷ್ಠಿಗೆ ಗ್ರಾಮವೆಂದು ತಿಳಿದು, ಕೆಲಬರು ಗ್ರಾಮಗಳಲ್ಲಿರುವ ಪುರೋಹಿತರಿಗೂ, ಆಚಾರ್ಯರಿಗೂ, ಜಂಗಮಯ್ಯಗಳಿಗೂ ಗುರುವೆಂದು ತಿಳಿದು ತಮ್ಮ ತಮ್ಮ ಸಮಾಜಕ್ಕೆ ಒಬ್ಬ ಗುರುಗಳ ನಿಯಮ ಮಾಡಿಕೊಂಡಿಹರು. ಹೀಗೆ ನಾನಾ ವಿಧದಲ್ಲಿ ಗ್ರಾಮ ಹಾಗೂ ಗ್ರಾಮದ ಗುರುಗಳ ಕಂಡವರು ಕರಣ ವಿಡಿದವರು. ಇವರು ಗ್ರಾಮವ ತಿಳಿಯದವರು, ಗ್ರಾಮದ ಗುರುಗಳ ತಿಳಿಯದವರು. ಗ್ರಾಮದ ಪದವ ತಿಳಿದವರೆಂದರೆ ಚನ್ನ ಬಸವಣ್ಣ, ಬಸವಣ್ಣ, ಇನ್ನು ಅನೇಕ ಶರಣ ಶರಣೆಯರು.ತನು ವಿಡಿದಿಹುದು ಪ್ರಕೃತಿ. ಪ್ರಕೃತಿವಿಡಿದಿಹುದು ಪ್ರಾಣ, ಪ್ರಾಣವಿಡಿದಿಹುದು ಜ್ಞಾನ, ಜ್ಞಾನವಿಡಿದಿಹುದು ಗುರು. ಇಂತೀ ಗುರು ಲಿಂಗ ಜಂಗಮ ಪ್ರಸಾದ ಸಗುಣವೆಂದು ಹಿಡಿದು ನಿರ್ಗುಣವೆಂದು ಕಂಡ ಸಂದೇಹಿ ವ್ರತಗೇಡಿಗಳ ನೇನೆಂಬೆ? ಅವರ ಮುಖವ ತೋರದಿರು ಕೂಡಲ ಸಂಗಮದೇವಾ.

ಗ್ರಾಮದ ಪದ ಗತಿಯ ನರಿತವರು ಅಣ್ಣ ಬಸವಣ್ಣ. ಈ ತೋರಿಕೆಯಿಂದುಕ್ತವಾದ ನಾಮ ರೂಪವ ತಿಳಿದವರು, ಇತ್ತ ನಿತ್ಯಾನಿತ್ಯವೆಂದು ವಿಭಾಗ ಮಾಡಿ ತಿಳಿಯುವ ಅಧ್ಯಾತ್ಮವಾದಿಗಳ ಜ್ಞಾನವ ತಿಳಿದವರು.ಇದು ಕಾರಣ ನಾಮರೂಪದಿಂ ತೋರುವ ತನುವಾಗಲಿ ಪ್ರಕೃತಿ, ಪ್ರಾಣ, ಜ್ಞಾನವ ತಿಳಿಯದವರು. ಇದಕ್ಕೆ ಬೆಳಗುವ ಗುರು, ಲಿಂಗ, ಜಂಗಮ, ಪ್ರಸಾದವ ತಿಳಿಯದವರು, ತಿಳಿಯದ್ದರಿಂದ ಸಗುಣ, ನಿರ್ಗುಣವೆಂದು ನಿಶ್ಚಯ ಮಾಡುವವರು. ಇವರದು ಮಾಯಿಕ ದೃಷ್ಠಿ.

ತನ್ನಿಂದ ತನ್ನ ಕಂಡ ದಿವ್ಯ ದೃಷ್ಠಿ ಆಗದ್ದರಿಂದ, ಸಂದೇಹಿಗಳು. ಇದು ಕಾರಣ ಇವರ ಮುಖವ ತೋರದಿರು, ಕೂಡಲಸಂಗಮದೇವಾ ಎಂದು ಬಸವರಸರು ಪ್ರಾರ್ಥಿಸಿಕೊಂಡಿಹರು.

ಗ್ರಾಮ ಪದ ಗತಿಯನರಿಯರು. ಇವರು ಶರಣರು ಲಿಂಗೈಕ್ಯರು, ಅಸ್ತಿ ಭಾತಿ ಎಂಬ ಎನ್ನ ಸತ್ಯದಲ್ಲಿ ನಾಮ ರೂಪು ಎಂಬ ಹುಸಿ ಎಂತು ಜನಿಸಿ ತೆಂದರಿಯನಯ್ಯ. ನಾಮರೂಪದಿಂ ತೋರುವ ಲೋಕವಾಗಲಿ ಸಕಲ ಮಾನವರ ಪಿಂಡವಾಗಲಿ ಬ್ರಹ್ಮಾಂಡವಾಗಲಿ ಇದು ಬಂಜಿ ಮಗ.(ಹುಸಿ) ಇದು ಜನಿಸಿದುದು ಎಂದು? ಜನಿಸಿರುವದೇ ಇಲ್ಲವೆಂದಲ್ಲಿ ಅದಾವ ನಾಮದಿಂ ಕರೆವುದು? ಅದಾವ ರೂಪವ ಹೇಳುವುದು? ನರರೆಂದು, ಸುರರೆಂದು ಅದಾವ ನಾಮದಿಂ ಕರೆವುದು, ದೇವ ಗಣ ರುದ್ರಗಣ, ಪ್ರಮಥ ಗಣರೆಂದು ಅದಾವ ನಾಮದಿಂ ಕರೆವುದು. ನರರೂಪು ಇದು. ಸುರ ರೂಪು ಇದು ಗಣ ಸಮೂಹ ರೂಪು ಇದು ಎಂದು ಹೇಗೆ ನಿರ್ಣಯಿಸಿ ಹೇಳುವುದು. ನಾಮರೂಪು ಎಂಬ ಹುಸಿಯಲ್ಲಿ ತ್ವಂ ಪದವ ಹೇಗೆ ಕಲ್ಪಿಸುವದು, ತತ್ವದವೆಂಬುದು ಹೇಗೆ ಕಲ್ಪಿಸುವುದು, ಅಕಲ್ಪಿತ ಘನದಲ್ಲಿ ಕಲ್ಪಿತವ ಹೇಗೆ ಕಾಣುವುದು ಬೆಳಕಿನಲ್ಲಿ ಕತ್ತಲೆ ಕಾಣುವದದೆಂತು, ನಿರಂತರವಾಗಿರುವ ಮಂಗಳಮಯ ತತ್ವದಲ್ಲಿ ಅಮಂಗಲವಾಗಿ ತೋರುವ ನಾಮ ರೂಪು ಹುಸಿ ಹೇಗೆ ಹುಟ್ಟಿತೆಂದು ತಿಳಿಯುವದು.

ಇದು ಇಲ್ಲದ ಹೆಸರುಳ್ಳ ಚಿತ್ರದಂತೆ. ರೂಪ ನಾಮ ವೀ ತೆರನೆಂದರಿಯದೆ ತೊಳಲಿ ಬಳಲು ತಿರ್ದೆನಯ್ಯ. ಲೋಕದವರೆ ಇರಲಿ, ಅಲೌಕಿಕರೆ ಇರಲಿ, ಅವಿಚಾರವಂತರಿರಲಿ ವಿಚಾರವಂತರಿರಲಿ, ಮರವುಳ್ಳವರಿರಲಿ, ಅರುವುಳ್ಳವರಿರಲಿ, ಆರೆ ಇರಲಿ ಇವರು ಚನ್ನಬಸವಣ್ಣ ನವರಂತೆ, ಅಣ್ಣ ಬಸವಣ್ಣನವರಂತೆ ನಾಮ ರೂಪು ಎಂಬ ಹುಸಿ ಎಂತು ಜನಸಿ ತೆಂದರಿಯೆನಯ್ಯ ಎಂದು ಗ್ರಾಮದ ಪದ ಗತಿಯ ನರಿತವರುಂಟೆ? ಅರಿತಲ್ಲಿ ಗ್ರಾಮುದ ಪದ ಗತಿಯ ನರಿಯರು ಗ್ರಾಮುಕ್ಕೆ ಗುರುವಾವುದೆಂದರಿಯರು, ಗ್ರಾಮದ ಕರಣವಿಡಿದಲ್ಲಿ ನಿಚ್ಚಟವಾವುದೆಂದರಿತರಾ! ಸುಳ್ಳಿನ ಊರು, ಹುಸಿ ಊರು, ಹುಸಿ ಗ್ರಾಮ, ಅದಕ್ಕಾವ ಪದವ ಹೇಳುವುದು, ಅದಕ್ಕಾವ ಗತಿಯ ತಿಳಿವುದು, ಹುಸಿ ಗ್ರಾಮುದ ಗುರುವಾವುದೆಂದು ತಿಳಿಯರು, ಆರದು ತನುವಿಡಿದಿಹುದು ಪ್ರಕೃತಿ ಪ್ರಕೃತಿ ವಿಡಿದಿಹುದು.ಪ್ರಾಣ, ಪ್ರಾಣವಿಡಿದಿಹುದು. ಜ್ಞಾನ ಜ್ಞಾನವಿಡಿದಿಹುದು, ಗುರು ಇಂತೀ ಗುರು ಲಿಂಗ ಜಂಗಮ ಪ್ರಸಾದ ಗುಣವೆಂದು ಹಿಡಿದು ನಿರ್ಗುಣವೆಂದು ಕಂಡ ಸಂದೇಹಿಗಳು. ಅವರು ಕರಣವಿಡಿದವರು, ಅವರಿಗೆಂತು ನಿಜಪದವ ತಿಳಿವುದು. ಇದು ಕಾರಣ ಗ್ರಾಮದ ಪದಗತಿಯ ನರಿಯದಿರುವುದು ಆಶ್ಚರ್ಯ. ಅದೆ ಗ್ರಾಮುದಲ್ಲಿದ್ದು, ಆ ಗ್ರಾಮುದ ಆಗು ಹೋಗುಗಳ ತಿಳಿಯದಿದ್ದುದು ಇದೆಂಥ ಮರುವು. ಆ ಗ್ರಾಮದ ಗುರುವ ತಿಳಿಯದಿದ್ದುದು ಇದೆಂಥ ಆಶ್ಚರ್ಯ.

ಅಣ್ಣ ಬಸವಣ್ಣ ,ಚೆನ್ನಬಸವಣ್ಣ ಮೊದಲಾದವರು, ಗ್ರಾಮುವಾಗಲಿ ಅದರ ಗತಿಯ ತಿಳಿಯಲಿಲ್ಲ, ಅದರ ಗುರುವ ಹೇಳಲು ಒಪ್ಪಲಿಲ್ಲ. ಅರಿತು ಮರೆತು ನಿಂತವರಿಗೆ ಒಪ್ಪಿಹರು. ಅರಿತು ಮರೆತು ನಿಂತವರೆಂದಲ್ಲಿ ಪ್ರಭುದೇವ, ಬಸವಣ್ಣ, ಅನಿಮಿಷ ,ಚೆನ್ನಬಸವಣ್ಣ ಇವರು ಗ್ರಾಮದ ಪದ ಗತಿಯ ನರಿಯರು. ಏಕೆಂದರೆ ಹುಸಿ ನಾಮರೂಪು. ಮೊಲದ ಕೋಡು ಹುಸಿಗಾವ ಪದವ ಹೇಳುವದು. ಹುಸಿ ಗಾವ ಗತಿಯ ತಿಳಿಯುವುದು. ನಾಮ ರೂಪು ಎಂಬ ಹುಸಿ ಎಂದು ಜನಿಸಿ ತೆಂದರಿಯೆನಯ್ಯ ಎಂದು ಹೀಗೆ ಅರಿತಲ್ಲಿ ಗ್ರಾಮುವ ಮರೆತು ನಿಲ್ಲಲು ಸಹಜವಾಗುವುದು. ಶರಣ ಶರಣೆಯರು ಹುಸಿ ಗ್ರಾಮ, ಹುಸಿ ಗುರು ಎಂದು ತಿಳಿದು ಮರೆತು ನಿಂದವರು ಲಿಂಗೈಕ್ಯರು.

ಅರಿಯದ ಮುನ್ನ ಪ್ರಪಂಚವೆಂದು ಪರಮಾರ್ಥವೆಂದು ಈ ದೃಷ್ಠಿಯುಳ್ಳವರಾಗಿ ಅವರವರ ಮತಿಗನುಸಾರ ಗ್ರಾಮ, ಗ್ರಾಮದ ಪದ ಅದರ ಗತಿಯ ತಿಳಿದರು. ಕರಣಂಗಳನ್ನು ತಿಳಿದರು. ಕರಣಂಗಳ

ವಿಡಿದು ತಮ್ಮ ತಮ್ಮ ಪ್ರಕೃತಿಯಂತೆ ತಿಳಿದರು. ತಮ್ಮಿಂದ ತಿಳಿಸಿಕೊಳ್ಳವ ತೋರಿ ಇಲ್ಲವಾಗುವ ಪರಪ್ರಕಾಶವ ತಿಳಿದರು. ಎರವಲ ಜ್ಞಾನವ ನಂಬಿದರು. ತನ್ನ ಅರಿಯಲಿಲ್ಲ, ತನ್ನ ನಂಬಲಿಲ್ಲ ಅರುವೆ ತಾನೆಂದು ಹೇಳಿದರಲ್ಲದೆ, ಅರುವ ಅರಿಯ ಹೋಗಲಿಲ್ಲ.ಇದು ಕಾರಣ ಗ್ರಾಮದ ಗತಿಯ ನರಿತರು. ಗ್ರಾಮದ ಗುರುಗಳು ಅರಿತರು ಇಲ್ಲದುದು ಇಲ್ಲವಾಗಲಿಲ್ಲ ಇದ್ದ ತನ್ನ ಸ್ವಮಹಿಮೆ ತನಗೆ ವಿದಿತವಾಗಲಿಲ್ಲ.

ತನ್ನ ಸ್ವಂತ ಮಹಿಮೆಯಲ್ಲ . ತಾನಿದ್ದವಂಗೆ ಇಲ್ಲದ ಗ್ರಾಮವ ಕಾಣುವದೆಂತು? ಇದ್ದವ ಕರಣಂಗಳ ಕಾಣನು. ಅಕಲ್ಪಿತನಿಗೆ ಕಲ್ಪಿತವ ಕಾಣುವದದೆಂತು? ಕಲ್ಪಿತ ಪುರುಷನು ಇಲ್ಲದವನು, ಅವನ ಕಲ್ಪಿತ ಇಲ್ಲದವು, ಅವನ ಕಾರ್ಯಂಗಳು ಇಲ್ಲದವು. ಇದು ಕಾರಣ ಇಲ್ಲಾದುದಿಲ್ಲಾದುದೆಂದಿಪ್ಪವು ಇಲ್ಲಾದುದಿಲ್ಲಾದುದೆಂತಿಪ್ಪವು. ಇದ್ದವನು ತಾನು, ತನ್ನ ತಾನರಿದು ಮರೆತು ನಿಂತುದೆ ಲಿಂಗೈಕ್ಯವು ಎಂದು ಹೇಳಿಹರು.

ಹೆಸರಿಲ್ಲದ ಲಿಂಗ, ಹೆಸರಿಲ್ಲದ ಗುರು, ಹೆಸರಿಲ್ಲದ ಶಿಷ್ಯ. ಈ ತ್ರಿವಿಧ ನರಿತವರು ಲಿಂಗ ಲಿಂಗ ಎಂದು ಅರಸಲಿಲ್ಲ ಆರಾಧಿಸಲಿಲ್ಲ, ಗುರು ಘನವ ತಿಳಿದವರು ಗುರು ಗುರು ಎಂದು ಸ್ತುತಿಸಲಿಲ್ಲ, ಧ್ಯಾನಿಸಲಿಲ್ಲ. ಗ್ರಾಮದ ಕರಣಂಗಳ ಹಿಡಿಯದವನು, ಶಿಷ್ಯ ಶಿಷ್ಯ ಎಂದು ಹಲುಬಲಿಲ್ಲ. ಇವರು ಅರಿದು ಮರೆದು ನಿಂತವರು. ತನ್ನ ತಾನಾರೆಂದು ಅರಿತವರು. ಅರುವರಿತು ಅರಿಯದರುವೆ ತನ್ನ ನಿಜದರುವಾಗಿ ನೆರೆ ನಿಂತವರು ಇವರು ತ್ರಿವಿಧ ಸ್ಥಲವರಿತವರು.

ಹೆಸರುಳ್ಳ ಗುರು, ಹೆಸರುಳ್ಳ ಶಿಷ್ಯ, ಹೆಸರುಳ್ಳ ಲಿಂಗವರಿತ ಜನ ಸಿಕ್ಕುತ್ತಾರೆ. ಹೆಸರಿಲ್ಲದ ಸ್ಥಲದವರು ಶಿಕ್ಕುವುದು ದುರ್ಲಭ. ಇವರು ಅರಿದರಿದ ಅರುವೆ ತಾನಾಗಿಹ ಲಿಂಗೈಕ್ಯರು, ಅವರ್ಣನೀಯರು ಎಂದು ಹೇಳಿಹರು.

162

ಎರಡೊಂದಾದ ಬಳಿಕ ಅರ್ಚನೆ ಹಿಂಗಿತ್ತು.
ಎರಡೊಂದಾದ ಬಳಿಕ ಅರ್ಪಿತ ಹಿಂಗಿತ್ತು.
ಎರಡೊಂದಾದ ಬಳಿಕ ಆಚಾರ ಹಿಂಗಿತ್ತು.
ಎರಡೊಂದಾದ ಬಳಿಕ ಅವಧಾನ ಹಿಂಗಿತ್ತು.
ಎರಡೊಂದಾದ ಬಳಿಕ ಶಬ್ದಕ್ಕೆ ತೆರೆಹಿಲ್ಲ
ರೂಹಿಸಲೆಡೆಯುಂಟೆ ಗುಹೇಶ್ವರಾ.

ತಾತ್ಪರ್ಯ: ಎರಡೊಂದಾದ ಬಳಿಕ ಅರ್ಚನೆ ಹಿಂಗಿತ್ತು: ಎರಡೊಂದಾದುದು ಆವುದು? ಎರಡಾದುದು ಆವುದು? ಎರಡಾದುದು ಕಲ್ಪಿತ, ಎರಡೊಂದಾದುದು ಕಲ್ಪಿತಕ್ಕಿಂಬುಕೊಡದ್ದು, ಕಲ್ಪಿತ ಗುರು, ಕಲ್ಪಿತ ಶಿಷ್ಯ, ಕಲ್ಪಿತ ಭಕ್ತ ಕಲ್ಪಿತ ಜಂಗಮ. ಇವರುಗಳು ಎಲ್ಲಿಯವರೆಗೆ ಕಲ್ಪಿತರು, ಅಲ್ಲಿಯವರೆಗೆ ಎರಡೊಂದಾದವರಲ್ಲ. ಶಬ್ದ ಸಂಭ್ರಮದವರು ಆರು ಅವರು ಕಲ್ಪಿತರು. ಉಪಾಧಿಯಿಂದುಕ್ತರಾರು ಅವರು ಕಲ್ಪಿತರು . ನೆನಹು ನಿರ್ಣಯದಿಂದುಕ್ತರಾದವರು ಕಲ್ಪಿತರು . ಚಿಂತನಕ್ಕೊಳಪಟ್ಟವರೆಲ್ಲ ಕಲ್ಪಿತರು, ಅರುಸುವವರು, ಆರಾಧಿಸುವವರು, ಭಾವರೂಪ ಭ್ರಮಿತರು, ಇವರು ಕಲ್ಪಿತರು. ಕಲ್ಪಿತವೆ ತಾವಾದ ಪುರುಷರು ಎರಡೊಂದಾದವರಲ್ಲ.

ಆನು ಅರಿದೆ ಮರದೆ ಅಳಿದೆ ಉಳಿದೆನೆಂಬ ಸಂಶಯ ಭ್ರಮೆ, ಸ್ಥೂಲ, ಸೂಕ್ಷ್ಮವೆಂಬ ವಿಪರೀತ

ಭ್ರಮೆ. ಅಂತರ್ಮುಖ ಭ್ರಮೆ, ಬಹಿರ್ಮುಖ ಭ್ರಮೆ, ತತ್ವ ಅತತ್ವವೆಂಬ ವಿವೇಕ ಭ್ರಮೆ ಪುಣ್ಯ ಪಾಪ, ಸ್ವರ್ಗ ನರಕ, ಬಂಧ ಮೋಕ್ಷ, ಪ್ರವರ್ತಕ ನಿವರ್ತಕ ಆದಿಯಾದ ಕ್ರಮ ಭ್ರಮೆ ಹುಸಿ. ಜೀವ ಪರಮೈಕ್ಯವೆಂಬ ಸಂಧಾನ ಭ್ರಮೆ, ಯೋಗದಾಸೆಗೆ ನಿಲುಕದ ಭ್ರಮೆ ನಿತ್ಯಭ್ರಮೆ ಅನಿತ್ಯ ಭ್ರಮೆ, ವಾಗದ್ವೈತ್ ಭ್ರಮೆ, ಯಂತ್ರಭ್ರಮೆ, ತಂತ್ರಭ್ರಮೆ, ನಾಹಂ ಭ್ರಮೆ, ಕೋಹಂ ಭ್ರಮೆ, ಸೋಹಂ ಭ್ರಮೆ, ಚಿದಹಂ ಭ್ರಮೆ, ತತ್ವ ಸಕರಣ ವೇಷ್ಠಿತ ಜಗವೆಲ್ಲ ಮಾಯಾಮಯ. ಇದು ಕಾರಣ ಕೂಡಲ ಚೆನ್ನಸಂಗಯ್ಯ ನಿಮ್ಮ ಶರಣಂಗಾವ ಭ್ರಮೆಯು ಇಲ್ಲ.

ಎರಡೊಂದಾಗದವರು ಭಾವ ಭ್ರಮಿತರು. ಎರಡೊಂದಾದವರು ಭಾವಕ್ಕಗಮ್ಯರು. ಆವಾವ ಭ್ರಮವಿಲ್ಲದವರು. ಭ್ರಮೆಯು ಬಹು ಸೂಕ್ಷ್ಮವಾದುದು, ಆನು ಅರಿದೆ ಮರದೆನೆನ್ನುವದು ಭ್ರಮ, ಅಳಿದೆ ಉಳಿದೆನೆಂಬ ಸಂಶಯ ಭ್ರಮೆ, ಅಂತರ್ಮುಖ ಬಹಿರ್ಮುಖವೆಂಬುದು ಭ್ರಮೆ . ಮೊದಲಾದವುಗಳೆಲ್ಲ ಭ್ರಮವೆ. ಜೀವ ಶಿವರೈಕ್ಯವೆಂಬ ಸಂಧಾನ ಭ್ರಮೆ ಕೂಡಿದೆ, ಅಗಲಿದೆನೆಂಬುದು ಭ್ರಮೆಯೆ. ನಿತ್ಯ ಭ್ರಮೆ, ಅನಿತ್ಯ ಭ್ರಮೆ, ವಾಗ್‌ದ್ವೈತ ಭ್ರಮೆ, ಚಿದಹಂ ಭ್ರಮೆ, ತತ್ವದ ಸಮುದಾಯ. ಈ ಜಗವು ಮಾಯಾಮಯ ಇವರುಗಳು ಭಾವರೂಪ ಭ್ರಮಿತರು ಎರಡೊಂದಾಗದವರು, ಇದು ಕಾರಣ ನುಡಿಗೊಳಪಟ್ಟವರು . ಮಾಯಾಮಯರು ಎರಡೊಂದಾಗದವರು . ನುಡಿಗೆಡೆಗೊಡದ ಘನವಂತರು ನಿಃಶಬ್ದವೇದಿಗಳು .

ಎರಡೊಂದಾದವರು ಆರು? ಬಸವಣ್ಣ ಚೆನ್ನಬಸವಣ್ಣ ಪ್ರಭುದೇವ ಮಡಿವಾಳ ಮಾಚಿದೇವ ನೀಲಾಂಬಿಕೆ ಮಹಾದೇವಮ್ಮ ಅಕ್ಕಮಹಾದೇವಿ ಎಲ್ಲಿ ನೋಡಿದಡಲ್ಲಲ್ಲಿ ಒಂದನ್ನೆ ಕಾಣುವವರು. ''ಗುರುವಿಂಗೆ ನೀನೆ ಕರ್ತ, ಲಿಂಗಕ್ಕೆ ನೀನೆ ಕರ್ತ. ಜಂಗಮಕ್ಕೆ ನೀನೆ ಕರ್ತ, ಪ್ರಸಾದಕ್ಕೆ ನೀನೆ ಕರ್ತ, ಕೂಡಲ ಸಂಗಮದೇವರು ಸಾಕ್ಷಿಯಾಗಿ ನೀನೆ ಕರ್ತನಾದ ಕಾರಣ, ಬೇಕೆನಲಮ್ಮೆನು ಬೇಡೆನಲಮ್ಮೆನು, ಕಾಣಾ ಚನ್ನಬಸವಣ್ಣ''. ಶಬ್ದಕ್ಕೆ ತೆರೆಹಿಲ್ಲದ ಘನಮಹಿಮರೆಂದರೆ, ಗುರು, ಲಿಂಗ, ಜಂಗಮ, ಪ್ರಸಾದಕ್ಕೆ ಕರ್ತನಾದಾತನೆ ಕೂಡಲಸಂಗಮದೇವರು. ಈ ಕೂಡಲಸಂಗಮದೇವರು ತಾನು ಒಂದಾದುದು, ಶಬ್ದಕ್ಕೆ ತೆರೆಹಿಲ್ಲದ ಸಂಕೇತ. ಗುರು ನೀನೆ ಗುರುವಿಂಗೆ ಕರ್ತನೀನೆ. ಇದು ಎರಡೊಂದಾದ ಸಂಕೇತ. ಲಿಂಗ ನೀನೆ ಲಿಂಗಕ್ಕೆ ಕರ್ತ ನೀನೆ. ಇದು ಎರಡೊಂದಾದ ಸಂಕೇತ, ಜಂಗಮ ನೀನೆ ಜಂಗಮಕ್ಕೆ ಕರ್ತ ನೀನೆ ಇದು ಎರಡೊಂದಾದ ಸಂಕೇತ. ಪ್ರಸಾದ ನೀನೆ ಪ್ರಸಾದದ ಕರ್ತಾ ನೀನೆ ಸಕಲ ನೀನೆಂಬುದೆ ಎರಡೊಂದಾದ ಸಂಕೇತ. ಕರ್ತಾ ತಾನೆ ಮಹಾ ಕರ್ತಾ ತಾನೆ ತಾನಲ್ಲದೆ ಅನ್ಯವಿಲ್ಲವಾದ್ದರಿಂದ ಶಬ್ದಕ್ಕೆ ತೆರೆಹಿಲ್ಲವೆಂದು ಹೇಳಿಹರು.

ಕೃತಯುಗ, ತ್ರೇತಾಯುಗ, ದ್ವಾಪಾರ, ಕಲಿಯುಗ ವಿಲ್ಲದಲ್ಲಿಂದತ್ತತ್ತ ಧರೆಯು ಬ್ರಹ್ಮಾಂಡವು. ಮೂರುತಿಗೊಳ್ಳದಲ್ಲಿಂದತ್ತತ್ತವಾದ ಮಹಾಪ್ರಸಾದವ ಸಾಧಿಸಿ ತಂದು ಎನ್ನ ಕೈಯಲ್ಲಿ ಕೊಟ್ಟನಯ್ಯ ಬಸವಣ್ಣನೆಂಬ ಗುರು ಲಿಂಗವು.

''ಬಸವಣ್ಣನೆಂಬ ಗುರು ಲಿಂಗವು, ಓಂಕಾರದಿಂದತ್ತತ್ತ , ನಾದ ಬಿಂದು ಕಳೆಗಳಿಂದತ್ತತ್ತ. ಪ್ರಥಮಾಚಾರಿ ನೀನೆ, ಲಿಂಗಾಚಾರಿ ನೀನೆ, ಜಂಗಮಾಚಾರಿ ನೀನೆ, ಪ್ರಸಾದಾಚಾರಿ ನೀನೆ ಎನಗೆ ಸರ್ವಾಚಾರಿಯು ನೀನೆ. ನೀನೆ ಗತಿ ಮತಿಯಾಗಿ ಎನ್ನನುಳುಹಿದ ಕಾರಣ ಕೂಡಲ ಚೆನ್ನಸಂಗಯ್ಯ, ಆವ ನಿರ್ಣಯವಿಲ್ಲದಂದು ಓಂನಮಃ ಶಿವಾಯ ಎನ್ನುತಿರ್ದೆನು''.

ಬಿತ್ತದೆ ಬೆಳೆಯದೆ ಬೆಳೆದ ಹೆಬ್ಬೆಳಸಿನ ರಾಶಿಯ ನೋಡಾ. ಸುಗಂಧ ಚಂದನದಂತೆ ಹುಟ್ಟುತ್ತದೆ. ಪರಿಮಳ. ಆದಿ ಅನಾದಿ ಇಲ್ಲದ ಮುನ್ನ ತನ್ನಿಂದಲೆ ತಾನಾಗಿರ್ದ ಕಾರಣ, ಮುಟ್ಟದೆ ತಟ್ಟದೆ ಗುರು

ಕಾರುಣ್ಯವ ಪಡೆದು, ಲಿಂಗಸಯವಾಗಿ, ಎನಗೆ ಗತಿ ಪಥವ ತೋರಿಸಬೇಕೆಂದು ಆಗಾದನು ಕೂಡಲಸಂಗಮ ದೇವರಲ್ಲಿ ಚೆನ್ನಬಸವಣ್ಣನು. ಈ ಮಹಾನುಭವ ಎರಡೊಂದಾದುದು ಈ ಮಹದರುವು ಆರ ಹೃದಯದಲ್ಲಿ ಬೆಳಗುವುದೊ ಅಲ್ಲಿ ಅರ್ಚನೆ ಹಿಂಗಿದ ಸಂಕೇತ.

"ಶ್ರೀಗುರು ಕರುಣಿಸಲೊಡನೆ ಬಿಟ್ಟಿತ್ತು ಮಾಯೆ. ಶ್ರೀಗುರು ಕರುಣಿಸೆ ಬಿಟ್ಟಿತ್ತು ಮರವೆ ಶ್ರೀಗುರು ಕರುಣಿಸೆ ಬಿಟ್ಟಿತ್ತು ಪ್ರಪಂಚ ಕೂಡಲ ಚೆನ್ನಸಂಗಮದೇವಾ ಗುರು ಕರುಣಿಸೆ ಬಿಟ್ಟಿತ್ತು ಕರ್ಮಪಾಶ" ಶ್ರೀಗುರು ಕಾರುಣ್ಯ ಎರಡೊಂದು ಮಾಡುವ ಕಾರುಣ್ಯ. ಶಬ್ದಕ್ಕೆ ತೆರೆಹಿಲ್ಲದ ಕಾರುಣ್ಯ ಇದು ಸಿದ್ಧರಾಮ ಶಿವಯೋಗಿ ಚೆನ್ನಬಸವಣ್ಣ ಎರಡೊಂದಾದ ಸಂಕೇತ. ಗುರುಶಿಷ್ಯರೊಂದಾದ ಬಳಿಕ ಅರ್ಚನೆ ಹಿಂಗಿದ ಸಂಕೇತ.

ಬಸವಪ್ರಭು, ಅಲ್ಲಮ ಪ್ರಭು, ಇವರೊಂದಾದ ಘನವ ನೋಡಿರೊ! "ಆಯಿತ್ತು ಬಸವಾ ನಿನ್ನಿಂದ ಗುರು ಸ್ವಾಯತವೆನಗೆ, ಆಯಿತ್ತು ಬಸವಾ ನಿನ್ನಿಂದ ಲಿಂಗಸ್ವಾಯತವೆನಗೆ, ಆಯಿತ್ತು ಬಸವಾ ನಿನ್ನಿಂದ ಜಂಗಮ ಸ್ವಾಯತವೆನಗೆ, ಆಯಿತ್ತು ಬಸವಾ ನಿನ್ನಿಂದ ಪ್ರಸಾದ ಸ್ವಾಯತವೆನಗೆ ಇಂತೀ ಚತುರ್ವಿಧ ಸ್ವಾಯತ ನೀನೆ ಮಾಡಿದೆಯಾಗಿ, ನಮ್ಮ ಗುಹೇಶ್ವರ ಲಿಂಗಕ್ಕೆ ವಿಳಾಸವಾದೆಯ್ಯೆ ಸಂಗನ ಬಸವಣ್ಣಾ" ಇದಕ್ಕೆ ಪ್ರತಿಯಾಗಿ ಬಸವಣ್ಣನವರು "ಅಯ್ಯ ನಿಮ್ಮ ಮುಟ್ಟಿದ ಗುಣದಿಂದಲಾನು ಪೂರ್ವಾಚಾರಿಯಾದೆನಯ್ಯ, ಅಯ್ಯ ನಿಮ್ಮ ಮುಟ್ಟಿದ ಗುಣದಿಂದಲಾನು ವೃಷಭನಾದೆನಯ್ಯ. ಅಯ್ಯ ನಿಮ್ಮ ಮುಟ್ಟಿದ ಗುಣದಿಂದಲಾನು ಸಂಗನಬಸವ ನಾದೆನಯ್ಯ" ಎಂದು ಬಸವರಸರು ಹೇಳಿದುದು ಎರಡೊಂದಾದ ನಿಲವು. ಇಲ್ಲಿ ಗುರುಲಿಂಗವು ಘನಕ್ಕೆ ಘನವಾದುದು ಅದನ್ನು ಅರಿಯಲು ಬಂದ ಅರುಹೃದಯ ಘನಕ್ಕೆ ಘನವು. ಇವರು ಪೂರ್ವನಾಮವಿಲ್ಲದ ಗುರು, ಪೂರ್ವನಾಮವಿಲ್ಲದ ಶಿಷ್ಯ. ಹೆಸರಿಲ್ಲದ ಲಿಂಗ, ಈ ತ್ರಿವಿಧ ಸ್ಥಲವರಿತವರು ಇದು ಕಾರಣ ಅರ್ಚನೆ ಹಿಂಗಿತ್ತು. ಅರ್ಪಿತ ಹಿಂಗಿತ್ತು ಆಚಾರ ಹಿಂಗಿತ್ತು. ಎಚ್ಚರ ಜಾಗ್ರತೆ ಎಂಬ ನುಡಿಯೆ ಹಿಂಗಿತ್ತು. ಇಲ್ಲಿ ನುಡಿಗೆಡೆಗೊಡದ ಘನವೆ ಪ್ರಜ್ವಲಿಸಿ ಶಬ್ದಕ್ಕೆ ಇಂಬಿಲ್ಲವೆಂದು ಹೇಳಿಹರು.

ಗುರು ಘನನು ಶಿಷ್ಯರ ಹೃದಯ ಅರುಹೃದಯ ಮಾಡ ಬಂದ ದೇವ ದೇವ, ಮಹಾಪ್ರಸಾದ. ಶಿಷ್ಯ ಘನನು, ಶಬ್ದಕ್ಕಿಂಬು ಕೊಡದ ನಿಃಶಬ್ದವೇದಿ. ಶಿಷ್ಯನು ಶಬ್ದ ಸಂಭ್ರಮವ ಸೇರದ ನಿಃಶಬ್ದವೇದಿ. ಈರ್ವರು ಶೃತಿಗಗೋಚರರು. ಇದು ಕಾರಣ ಅರ್ಚನೆ ಹಿಂಗಿದೆ. ಈರ್ವರದು ನಾ ನೀನೆಂಬುದಕ್ಕೂ ತೆರೆಹಿಲ್ಲದ ಘನದ ನಿಲುವಾದುದು. ಈ ಗುರು ಶಿಷ್ಯರು ಒಂದಾದುದು ಉಪಮಿಸಲಳವಲ್ಲ ಗುರು ಘನನು "ನಾನು ಉಪದೇಶ ಹೇಳಲಮ್ಮೆನು, ಮುನ್ನ ಮುನ್ನಲಾದವರು ತನ್ನಿಂದ ತಾನಾದವರು ನಿಜದರುವುಳ್ಳ ನಿರಹಂಭಾವದ ನಿಜದ ತೇಜ ನಿರ್ವಾಣ ನಿಲುವು ಸಿದ್ಧಮಾಡುವ ಕರುಣಾಕರ. ಏಕೆಂದರೆ ನನ್ನ ಉಪದೇಶಕ್ಕಿಂತ ಮುನ್ನವೆ ನಿಮ್ಮಿಂದ ನೀವಾದವರು, ಅಂದಲ್ಲಿ ನನ್ನ ಉಪದೇಶ ಶಬ್ದವೇದಿ. ನಿಮ್ಮಯ ಅರಿವು ನಿಃಶಬ್ದ ವೇದವು . ಶಬ್ದವೇದಿಯು ನಿಃಶಬ್ದ ಘನವ ತಿಳಿಸುವದದೆಂತೆಂದು ಯತಾರ್ಥ ಅರುಹೃದಯ ವರಳಿಸುವ ಘನಗಂಭೀರ. ಈ ಸಂಜ್ಞೆಯ ಅರಿದರಿದು ಅರಿಯದರುವೆ ತಾನಾಗಿ ನಿಂತು ನೋಡುವ ಶಿಷ್ಯಹೃದಯ ಅಸಾಮಾನ್ಯವು! ಇದುವೆ ಗುರು ಶಿಷ್ಯರೊಂದಾದುದು ಇದನೆಂತು ವರ್ಣಿಸುವುದು.

ಭಕ್ತ ಜಂಗಮರೊಂದಾದುದು ಉಪಮಿಸಲಳವಲ್ಲ: ಜಂಗಮನೆಂದರೆ ಲಿಂಗ ಒಂದಾಗಿರ್ದ ಜಂಗಮ, ಜಂಗಮ ಒಂದಾಗಿರ್ದ ಲಿಂಗ, ಶುದ್ಧ ಶಿವೈಕ್ಯ ಉಪಮೆಗೆ ತಂದು ಎರಡೆನ್ನಬಹುದೆ? " ಬಿಟ್ಟು ಮಹೇಶನಾದೆ ನೆಂದಡೆ ಅರುಹಿನ ಕೇಡು, ಹಿಡಿದು ಭಕ್ತನಾದೆನೆಂಬುದು ನಿಜದ ಕೇಡು ಬಿಡುವುದು,

ಹಿಡಿವುದು ಮನ ಕಲ್ಪಿತವಲ್ಲದೆ, ಕಲ್ಪನಾರಹಿತ ಭಕ್ತ ಮಹೇಶ್ವರರಲ್ಲಿಪ್ಪುದೇನಯ್ಯ ಕಪಿಸಿದ್ಧ ಮಲ್ಲಿಕಾರ್ಜುನ''. ಬಹುಭಕ್ತ ಜಂಗಮರು ಮನದ ಹಂಗಿಗರು. ಮನನಷ್ಟ ಮಾಡುವಷ್ಟು ಸಮರ್ಥರಲ್ಲ. ಇದು ಕಾರಣ ಭಕ್ತನು ಕಲ್ಪಿತ ಪುರುಷನಾಗಿಹನು. ಮಹೇಶನು ಕಲ್ಪಿತ ಪುರುಷ ನಾಗಿಹನು. ಅಕಲ್ಪಿತ ಘನರಾಗದ್ದರಿಂದ ತ್ಯಾಗವೆ ಒಬ್ಬನ ಸ್ವರೂಪವಾಗಿದೆ. ಲಿಂಗ ಹಿಡಿದುದೆ ಭಕ್ತನ ಸ್ವರೂಪವಾಗಿದೆ. ಯತಾರ್ಥವರಿಯಲು ಈರ್ವರು ಅಕಲ್ಪಿತರೆ ಇರುವರು.

ಜಂಗಮನು ನಿಃಶಬ್ದವೇದಿ, ಭಕ್ತನು ನಿಃಶಬ್ದವೇದಿ. ಇವರೀರ್ವರು ಲಿಂಗವರಿತು ಲಿಂಗದಲ್ಲಿ ಬೆರೆತು ಲಿಂಗವಾಗಿಹ ಘನಕ್ಕೆ ಘನರು. ಇವರುಗಳು ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿತು ಅಚಲಾನಂದದೊಳಿದ್ದ ಅಪ್ರತಿಮ ಅಗಮ್ಯರು,. ನಿಜೈಕ್ಯ ಜಂಗಮ, ಶಬ್ದಮುಗ್ಧನಾಗಿ ನಿಜದಿರುವಿನ ಅರುವ ಅನುಗ್ರಹಿಸಿದ ಲಿಂಗೈಕ್ಯಭಕ್ತ ಶಬ್ದಮುಗ್ಧನಾಗಿ ಲಿಂಗವರಿತು, ಲಿಂಗವೆ ಆಗಿಹ ಘನಕ್ಕೆ ಘನ. ಈರ್ವರು ನಿರ್ವಾಣರು ನಿಜವರಿತ ನಿಬ್ಬೆರಗು. ಈ ಘನವಂತನಿಗೆ ನಿಜವೆ ಕರಿಗೊಂಡಲ್ಲಿ ಆರಿಗಾರು ಅರ್ಚನೆ ಮಾಡುವುದು. ಆರಿಗಾರು ಅರ್ಪಿತ ಮಾಡುವುದು? ಆರಿಗಾರು ಜಾಗ್ರತ ಮಾಡುವುದು. ಆರಿಗಾರು ಪವಿತ್ರ ಮಾಡುವುದು ಎಲ್ಲವು ಹಿಂಗಿದ ಕಾರಣ ಶಬ್ದಕ್ಕಿಂಬಿಲ್ಲವೆಂದು ಹೇಳಿಹರು. ಇದು ಪ್ರಸಾದಿಯ ಮಹಾ ಪ್ರಸಾದ, ತೆರಹಿಲ್ಲದ ಘನವೆ ತಾನಾಗಿಹ ನೆಲೆಯಿಲ್ಲದ ನಿಲುವು. ಇಲ್ಲಿಯ ಜ್ಞಾನ ಅರಿವು ಬರಹೋಗುವ ಜ್ಞಾನವಲ್ಲ. ಅರಿವು ಅಲ್ಲ ನಿರಂತರವಾಗಿರುವ, ಮಂಗಳಮಯ ನಿಜದರುವುಳ್ಳ ಮಹಾಪ್ರಸಾದ.ಇಲ್ಲಿ ಮರವರುವೆಂಬ ದ್ವಂದ್ವಕ್ಕೆಡೆಯಿಲ್ಲ, ಇದು ಗುರುವಿಡಿದ ಅರುವು ಅಲ್ಲ. ಲಿಂಗವಿಡಿದ ಅರಿವು ಅಲ್ಲ. ತನ್ನಿಂದ ತಾನರಿದ ಅರುವಿಂಗರುವು ಎಚ್ಚರವಾದಲ್ಲಿ ವಿಸ್ಮೃತಿಗಿಂಬಿಲ್ಲ ಸ್ಮೃತಿಗಿಂಬಿಲ್ಲ. ಇವೆರಡಕ್ಕೂ ಮಿಕ್ಕಿ ಮೀರಿನಿಂತ ನಿಜದರುವು. ಈ ಘನದರುವು ಕರಿಗೊಂಡು ಅವಧಾನ ಹಿಂಗಿತ್ತು. ಇದು ಶಬ್ದಕ್ಕಿಂಬಿಲ್ಲದ ಎರಡೊಂದಾದ ನಿಲವು. ರೂಹಿಸಲೆಡೆಯುಂಟೆ ಗುಹೇಶ್ವರಾ ಹೀಗೆಯೆ ಎಂದು ಊಹಿಸಲೆಡೆಯುಂಟೆ?

ಇಲ್ಲಿ ಗುರುವಾರೊ ಶಿಷ್ಯರಾರೊ ಭಕ್ತನಾರು ಜಂಗಮನಾರು ನಿಸ್ಸೀಮದಲ್ಲಿ ಸೀಮಿತ ದೃಷ್ಠಿಯೆ? ಭಾವಕ್ಕಗಮ್ಯವಾದುದರಲ್ಲಿ ಭಾವರೂಪ ಭ್ರಮೆಗಿಂಬುಂಟೆ? ಇಂಬಿಲ್ಲವೆಂದಲ್ಲಿ ಅರಿತವನೆನಲಿಲ್ಲ ಅರಿಯದವ ನೆನಲಿಲ್ಲ. ಅರಿಯದರುವುಳ್ಳ ಮಹದರುವು ಘನಕ್ಕೆ ಘನವು. ಇಲ್ಲಿಯ ಗುರು ಶಿಷ್ಯರೆಂಬುದು ಲೀಲೆಯ ವಿನೋದವು, ವರ್ಣಿಸಲಳವಲ್ಲ. ಭಕ್ತನಾಗಲಿ ಜಂಗಮಯ್ಯನಾಗಲಿ, ಲೀಲಾಮಯರು. ಮಾಹಾಪ್ರಸಾದಿಗಳ ಅವಧಾನ ಹೀಗೆಯೆ ಎಂದು ಹೇಗೆ ವಿವರಿಸುವುದು? ಏಕೆಂದರೆ ಶಬ್ಧಕ್ಕೆ ತೆರೆಹಿಲ್ಲ ಇವರು ನಾಮ ನಿರ್ನಾಮವ ಮಾಡಿದವರು. ಗುರುವೆಂದರೆ ನಿರ್ನಾಮವು ಶಿಷ್ಯರೆಂಬುದು ನಿರ್ನಾಮವು , ಭಕ್ತ ಜಂಗಮರೆಂಬುದು ನಿರ್ನಾಮವು. ಶಬ್ದದ ಹಂಗಿಗರಲ್ಲ, ಇದು ಕಾರಣ ಪರಮ ಗುರುವಾಗಿರುವ ಬಸವಣ್ಣನು. ಶಿಷ್ಯನ ಶಿಷ್ಯನಾಗಿರುವ ಪ್ರಭುವಿನ ಪಾದ ಪೂಜೆ ಮಾಡಿಹನು. ಗುರುವಾಗಿರುವ ಚೆನ್ನಬಸವಣ್ಣನು ಶಿಷ್ಯನಾಗಿರುವ ಸಿದ್ಧರಾಮ ಶಿವಯೋಗಿಗಳ ಘನವ ಕಂಡು ನಮೋ ನಮೋ ಎಂದು,ಕರ ಜೋಡಿಸಿಹನು. ಇದು ಎರಡೊಂದಾದ ನಿಲವು. ಉಪಮಿಸಬಾರದು ಎಂದು ಕೊಂಡಾಡಿದ, ಪ್ರಭುವಿನ ನಿರಹಂಭಾವ ಉಪಮಿಸಬಾರದು ಎಂದು ಹೇಳಿದುದು .

163

ಅರುವರಿತು ಕುರುಹ ನಷ್ಟವಾದಡೆ ಭಕ್ತ

ಆಚಾರವರಿತು ಅನಾಚಾರ ನಷ್ಟವಾದಡೆ ಜಂಗಮ
ಅರ್ಪಿತವರಿತು ಅನರ್ಪಿತ ನಷ್ಟವಾದಡೆ ಪ್ರಸಾದಿ
ಪದಾರ್ಥ ನಷ್ಟವಾದಡೆ ಪರಿಣಾಮಿ
ಪರಿಣಾಮವರಿತು ಪರಮಸುಖ ನೆಲೆಗೊಂಡಡೆ
ಕೂಡಲಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು.

ತಾತ್ಪರ್ಯ: ಅರುವರಿತು ಕುರುಹು ನಷ್ಟವಾದಡೆ ಭಕ್ತ: ಕುರುಹು ನಷ್ಟವಾದವರು ಭಕ್ತರು. ಇದಾವ ಕುರುಹು? ಲಿಂಗಾರ್ಚಕರ ಪೂಜಾ ಲಿಂಗವೆಂಬ ಕುರುಹೊ? ಅಥವಾ ಅಹಂ ಇದಂ ಎಂಬ ಕುರುಹೊ? ಆವುದು ನಷ್ಟವಾದುದಕ್ಕೆ ಭಕ್ತರೆನ್ನಬೇಕು!

ಅರುವರಿಯದ್ದರಿಂದ ಲಿಂಗಾರ್ಚಕರ ಪೂಜಾಲಿಂಗವದು ಕುರುಹಾಗಿ ಕಂಡಿತು. ಆರು ಅರುವರಿತಿಹರು ಅವರಿಗೆ ನುಡಿಗೆಡೆಗೊಡದ ಘನವಾಗಿ ಪ್ರಜ್ವಲಿಸಿತ್ತು. ಅಲ್ಲಿ ಅಹಂಕಾರವು ನಷ್ಟ, ಇದಮಾಕಾರ ಜಗವು ನಷ್ಟ, ನಾಮರೂಪವು ನಷ್ಟ. ಅರುವರಿಯದ್ದರಿಂದ ಭಕ್ತರ ಕರಕಮಲದಲ್ಲಿ ಬೆಳಗುವ ಚಿಜ್ಯೋತಿಯಾಗದೆ ಕುರುಹಾಗಿ ಕಂಡಿತು. ಇದಲ್ಲದೆ ಅರುವ ಅರಿಯದ್ದರಿಂದ ಇಲ್ಲದ ನಾಮರೂಪ ಇದ್ದಂತಾಗಿ ಅದರ ಅಹಂ ಮಮವೆ ಕುರುಹಾಗಿ ಕಾಣಿಸಿ ಕೊಂಡಿಹುದು. ಲಿಂಗವೆಂಬುದು ಕುರುಹು ಅಲ್ಲವೆಂದು ತನ್ನಿಂದ ತನಗೆ ವಿದಿತವಾಗುವುದು.

ಅರುವರಿತು ಕುರುಹು ನಷ್ಟವಾದಡೆ ಭಕ್ತನೆಂದು ಸೂಚಿಸಿದ ಸಂಜ್ಞೆ ಬಹು ಘನವಾದುದು . ಹಾಗಾದಲ್ಲಿ ಅರುವ ಅರಿವುದು ಹೇಗೆ? ಅರುವರಿಯುವ ವಿಧಾನವು ಹೇಗೆ? ಏನನ್ನಾದರೂ ಅರಿಯಬಹುದು, ಅರಿಯುವದನ್ನು ಅರಿವುದು ಹೇಗೆ? ಅರಿವು ಎಂಬ ಈ ಸಂಜ್ಞೆ ಶ್ರೀಗುರು ಕರುಣಿಸಿದ ಸಂಜ್ಞೆ. ಇದು ಚರ್ಮ ದೃಷ್ಠಿಗೆ ವಿದಿತವಾಗದು. ಇದು ಅನುಪಮ ಸಂಜ್ಞೆ. ಈ ಸಂಜ್ಞೆ ತಿಳಿಯುವ ರಹಸ್ಯ ಶ್ರೀಗುರುವೆ ದಯ ತೋರಿದಾಗ ತಿಳಿಯಲು ಬರುವದು. ಅರಿತಲ್ಲಿ ಅರಸಿಕೊಳ್ಳುವುದು ತಾನಾಗನು. ಮೂರು ಅವಸ್ಥೆಗಳಿಗೂ, ಮೂರು ಶರೀರಕ್ಕೂ ,ಮೂರು ಗುಣಗಳಿಗೂ, ಮೂರು ಜೀವರಿಗೂ, ಪಂಚಕೋಶಕ್ಕೂ ಅಹಂ ಇದಂ ರೂಪ ತೋರಿಕೆಗೂ ತಾನು ಅಸಂಗನಾಗಿ ದೃಕ್ಕಾಗಿದ್ದುದು ತನಗದು ಯತಾರ್ಥ ಅನುಭವಕ್ಕೆ ಬರುವದು. ಇವೆಲ್ಲವು ತಿಳಿಸಿಕೊಳ್ಳುವ ದೃಶ್ಯವಾಗಿ ತಾನು ದೃಕ್ ರೂಪನಾಗಿದ್ದುದು ವಿದಿತವಾಗುವುದು. ಆಗ ಈ ದೃಕ್ ರೂಪ ಅರುವೆ ಇದ್ದುದಾಗಿ ಅರುವಿನಿಂದ ತಿಳಿಸಿಕೊಳ್ಳವ ತೋರಿಕೆ ಇಲ್ಲದುದಾಗಿದ್ದರೂ, ಅರುವ ಅರಿಯದ್ದರಿಂದ ಅರುವೆ ಇಲ್ಲದುದಾಗಿ. ದೃಶ್ಯರೂಪ ಅನಾತ್ಮವೆ ಇದ್ದುದಾಗಿ ಕಾಣಿಸುವುದು.ಈ ತಪ್ಪು ತಿಳುವಳಿಕೆ ನಿವೃತ್ತ ಮಾಡಲು ಶ್ರೀ ಗುರು ಅರುವ ಅರಿಯ ಹೇಳಿದುದು.

ಅರುವ ಅರಿಯ ಹೇಳಿದ ಶ್ರೀಗುರು ಕಾರುಣ್ಯವೆ ಕೆಲವು ಭಕ್ತವೃಂದ ಲಿಂಗವರಿಯ ಹೋಗಲಿಲ್ಲ. ಅದು ಪೂಜಾ ಲಿಂಗವೆಂದು ಪೂಜಿಸ ಹತ್ತಿದರು. ಕೆಲವು ಭಕ್ತವೃಂದ ಅರುವು, ಅರುವು ಎಂದು ಅನುಷ್ಠಾನ ಮಾಡುವವರಾಗಿದ್ದಾರೆ. ಇವರು ಅರುವ ಅರಿಯ ಹೋಗಲಿಲ್ಲ. ಇವರು ಅಲ್ಪ ಬುದ್ಧಿಗಳು, ಆತ್ಮಾ ಅಸಂಗ, ಅದ್ವಿತೀಯ ಸಾಕ್ಷಿ ಸ್ವಯಂ ಪ್ರಕಾಶವೆಂದು ಭಾವಿಸಹತ್ತಿದರು. ಇದು ಕಾರಣ ಇವರಿಗೆ ಅನಾತ್ಮದ ಅಹಂ ಮಮ ತಾನಾರೆಂದು ತಿಳಿಯಗೊಡದಂತೆ ಮಾಡಿತು. ಬಹುದಿವಸ ಅಭ್ಯಾಸ ಮಾಡಿದಲ್ಲಿ ಅನಾತ್ಮ ಭಾವ ತ್ಯಜಿಸಿ ಆತ್ಮ ಭಾವಿಗಳಾದರು. ಈ ಭಾವರೂಪ ಬ್ರಹ್ಮವೆ ದಿಟವಾಯಿತಲ್ಲದೆ, ಭಾವಕ್ಕಗಮ್ಯವಾದ ತನ್ನ ಸ್ವಮಹಿಮೆಯು ಪ್ರಜ್ವಲಿಸಲಿಲ್ಲ. ಶ್ರೀಗುರು ಕರುಣಿಸಿದ ಲಿಂಗ. ನಿಃಶಬ್ದ ಘನವಾಗಿ ಬೆಳಗಲಿಲ್ಲ. ಬೆಳಗದ್ದರಿಂದ ಅದು ಕುರುಹಾಗಿಯೆ ಉಳಿಯಿತು.

ಆರು ಗುರು ಕೃಪೆಯುಳ್ಳವರು ಅವರು ಅರು ಹೃದಯ ಮಾಡಿಕೊಂಡವರು. ಅವರೆ ಅರುವರಿತವರು , ಅವರಿಗೆ ಕುರುಹು ನಷ್ಟವಾಗಿದೆ. ಅವರು ಮಾತ್ರ ಭಕ್ತರು . ಭಕ್ತರೆಂದರೆ ಜ್ಞಾನ ಜ್ಞೇಯ ಒಂದಾದುದು. ಅದು ಅರುವರಿತ ಸಂಜ್ಞೆ. ದೃಶ್ಯರೂಪಿ ಪಿಂಡಾಂಡ ಬ್ರಹ್ಮಾಂಡವ ಅರಿತುದು ದೃಕ್‌ರೂಪ ಅರಿವು, ಇದುವೆ ತ್ರಿಗುಣಗಳಾಗಲಿ, ಮೂರು ಶರೀರಗಳಾಗಲಿ, ಮೂರು ಅವಸ್ಥೆಗಳಾಗಲಿ, ಅವಸ್ಥೆಗಳ ಅಭಿಮಾನಿಗಳಾದ ಮೂರು ಜೀವರುಗಳಾಗಲಿ ಅರಿವುದು ಅರುವು ಅಲ್ಲವೆ! ಈ ಅರುವು ಅರುವು ಎಂಬುದನ್ನು ಅರಿತವರಾರು? ಇವೆಲ್ಲವುಗಳ ಅರಿಯುವವನ ಅರಿಯ ಹೋಗುವುಡೆ, ಅಜ್ಞಾನದ ತೋರಿಕೆಯಾಗಿಹ ಪಿಂಡಾಂಡ ಬ್ರಹ್ಮಾಂಡ ನಷ್ಟವಾಗುವುದು.

ಕತ್ತಲೆ ಕಳೆದುದು ಬೆಳಕು. ಬೆಳಕು ಕಂಡುದು ಆವುದು? ಅದು ಕತ್ತಲೆಯು ಕಂಡಿದೆ, ಬೆಳಕು ಕಂಡಿದೆ. ಕಂಡ ಘನವು ಕತ್ತಲೆ ಕಂಡರೂ ತಾನು ಇದ್ದಂತೆ ಇದೆ. ಬೆಳಕು ಕಂಡರೂ ತಾನು ಇದ್ದಂತಿದೆ. ಬೆಳಕಿಗೂ ಕತ್ತಲೆಗೂ ಸಮ ಪ್ರಕಾಶವಾಗಿ ಬೆಳಗುವ ಬೆಳಗಿನ ಬೆಳಗ ಇದ್ದಂತಿದ್ದುದು ವಿದಿತವಾಗುವುಡೆ ಕತ್ತಲೆಯು ಪುಸಿ ಬೆಳಕು ಪುಸಿ ಇವೆರಡಕ್ಕೂ ಸಮವಾದುದು ನಿರಂತರವಾಗಿರುವ ಮಂಗಲಮಯವಾದುದು. ಇದು ನಿರುಪಮವು. ಏಕೆಂದರೆ ಇದು ಕತ್ತಲೆಯು ಕಂಡುದಿಲ್ಲ, ಬೆಳಕು ಕಂಡುದಿಲ್ಲ ಕಂಡರೂ ತಾನು ಏನೊಂದಾಗದ ಘನ, ಇದ್ದಂತಿರುವ ನಿರಾಳ ನಿಶ್ಚಿಂತ. ಅದು ಶಬ್ದಮುಗ್ಧ ಸಮವೆನಲಿಲ್ಲ ವಿಷಮವೆನಲಿಲ್ಲ ಬೆಳಕೆನಲಿಲ್ಲ ಕತ್ತಲೆ ಎನಲಿಲ್ಲ, ಮೌನ ಮುದ್ರೆಯನಲಿಲ್ಲ ನಿಶಬ್ದ ಬ್ರಹ್ಮವಾಗಿಹ ನಿಜದರುವು ಹೇಗೊ ಹಾಗೆ ಮರವೆಂಬ ಕತ್ತಲೆ ಅಜ್ಞಾನ. ಅಜ್ಞಾನದಿಂದ ತೋರುವ ನಾಮರೂಪ ಇದು ಕತ್ತಲೆ, ಇದನ್ನು ಅರಿಯುವ ದೃಕ್‌ರೂಪ ಆತ್ಮ ತಾನೆಂಬ ಚಿದಹಮ್ಮು . ಇದು ಬೆಳಕು ಇವೆರಡಕ್ಕೂ ಮೀರಿದ ಘನವೆ ತನ್ನಿರುವು, ತಾನು ತಾ, ಮರವು ಎನಲಿಲ್ಲ, ಅರುವು ಎನಲಿಲ್ಲ. ಇದ್ದಂತಿರುವ ನಿರಂತರವಾಗಿಹ ಮಂಗಲಮಯವು,ತಾನು ಶಬ್ದಮುಗ್ಧ . ತನಗೆ ಪಿಂಡಾಂಡವು ತೋರದು, ಬ್ರಹ್ಮಾಂಡವು ತೋರದು. ಈ ನಡುವಣ ಅರುವಿನ ಚಿದಹಮ್ಮು ತೋರದು ತಾನು ತಾನೆ, ಹೇಳಲೆಂತು ಬಾರದು, ಹೇಳಲು ಬಾರದಿದ್ದಲ್ಲಿ ತೋರಲು ಬರದು. ಘನಕ್ಕೆ ಘನವಾದ ತನ್ನಿರುವು ಹೇಳಿದ್ದಕ್ಕದೆ ಕೊರತೆ. ಅದೇನೊ ಇಲ್ಲದ ನಿಸ್ಸಂಗ ಸುಖವು. ಇದು ಕಾರಣ ಅರುವರಿತು ತನ್ನಿಂದ ತನ್ನ ನೋಡುವುಡೆ ತಾನೆ ಸ್ವತಃ ಸಿದ್ಧ ಸ್ವಯಂ ಜ್ಯೋತಿ ಎಂಬುದು ತನ್ನಿಂದ ತನಗದು ವಿದಿತವಾಗುವುದರಿಂದ, ಅರುವರಿತು ಕುರುಹು ನಷ್ಟವಾದಡೆ ಭಕ್ತನೆಂದು ಹೇಳಿಹರು.

ಆಚಾರವರಿತು ಅನಾಚಾರ ನಷ್ಟವಾದಡೆ ಜಂಗಮ : ಆಚಾರ ಇದು ತನ್ನ ಆಚಾರ. ಶುದ್ಧಾಚಾರ ಈ ಆಚಾರವರಿವುಡೆ ಅನಾಚಾರ ಸ್ವಭಾವತಃ ನಷ್ಟವಾಗುವುದು. ಅರುವರಿತಲ್ಲಿ ಆಚಾರದ ಘನತ್ವ ತಿಳಿವುದು ಅರುವಿನ ಶುದ್ಧತ್ವ , ಸಿದ್ಧತ್ವ , ಪ್ರಸಿದ್ಧತ್ವ ತಿಳಿವುದೆ. ಆಚಾರವರಿತ ಸಂಜ್ಞೆಯಾಗಿದೆ. ಅಜ್ಞದೃಷ್ಟಿಯಲ್ಲಿ ತೋರುವ ಈ ಕಾಯದ ಶುಭಕಾರ್ಯವು ಆಚಾರವು ಅಶುಭ ಕಾರ್ಯವು ಅನಾಚಾರವು ಹೀಗೆ ದಶೇಂದ್ರಿಯಂಗಳ ಶುಭ ಕಾರ್ಯವು ಆಚಾರವು. ಅಶುಭ ಕಾರ್ಯವು ಅನಾಚಾರ. ಮನಸ್ಸಿನ ಶುಭಾ ಶುಭಂಗಳೆ ಆಚಾರ ಅನಾಚಾರಗಳಾಗಿವೆ. ಇಲ್ಲಿಯ ದೇಹೋಹಂ, ಅಶುಭ . ನಾಹಂ ಶುಭ, ಕೋಹಂ ಅಶುಭ, ಸೋಹಂ ಶುಭ ತಿಳಿಯದೆ ಸೋಹಂ ಜಪ ಅಶುಭ ತಿಳಿದ ಸೋಹಂ ಜಪ ಶುಭ. ಚಿದಹಮ್ಮು ಅಶುಭ ಅಹಮಿಲ್ಲದ ಚಿದ್ಘನ ಶುಭ ಹೀಗೆ ಸಮಸ್ವರೂಪವಾಗಿರುವ ತನ್ನಲ್ಲಿ ಎರಡಾಗಿ ಕಾಣುವುದೇ ಅನಾಚಾರ. ಶುಭಾಶುಭ ಕಾಣುವ ಆನಾಚಾರ, ಸಮಸ್ವರೂಪವಾಗಿ ತನ್ನಲ್ಲಿ ಎರಡಾಗಿ ಕಾಣುವುದೆ ಅನಾಚಾರ. ಶುಭಾಶುಭವ ಕಾಣುವ ಅನಾಚರ. ಏಕಂ ಏಕವಾದ ವಸ್ತುವ ಕಾಣುವದೆ ಆಚಾರ. ಈ ಆಚಾರವರಿಯುವುಡೆ ಅನಾಚಾರ ಸ್ವಭಾವತಃ ನಷ್ಟವಾಗುವುದು. ಇದು

ಕಾರಣ ಆಚಾರವರಿಯುವುದು ಹೇಗೆ? ಅರುವಿನ ಶುದ್ಧತ್ವ, ಸಿದ್ಧತ್ವ, ಪ್ರಸಿದ್ಧತ್ವ ತಿಳಿವುದೆ ಆಚಾರವರಿತಂತೆ ಈ ಆಚಾರ ಜ್ಞಾನಾಚಾರ, ಅರುವಿನಾಚಾರ, ಅರುವರಿದು ಅರುವಿಂಗರುವಾಗಿಹುದೆ ಮಹಾದಾಚಾರ. ಈ ಮಹಾದಾಚಾರ ಘನಕ್ಕೆ ಘನವು. ಇದು ಕೆಡದಾಚಾರ, ನಿಷ್ಕಳಂಕ ಆಚಾರ.

ಆಚಾರವದು ಶುದ್ಧತ್ವ, ಶುದ್ಧಾಚಾರವ ಕೆಲಬರು ಕ್ರಿಯೆಯಲ್ಲಿ ಕಾಣುವರು. ಅವರಿಗೆ ಕ್ರಿಯೆಯ ರಹಸ್ಯ ಗೊತ್ತಾಗಿರುವದಿಲ್ಲ. ಕ್ರಿಯಾಚಾರ ಮಾಡಿದಾಗ ಶುದ್ಧವಾಗುತ್ತದೆ. ಮಾಡುವುದು ಬಿಡುವುಡೆ, ಆ ಶುದ್ಧತ್ವ ಉಳಿಯದು. ಅಂದಲ್ಲಿ ಅಕಳಂಕ ಆಚಾರವಾಗದು. ಆವುದು ಅಕಳಂಕವಿದೆ. ಆ ತತ್ವ ಅರಿವುಡೆ ಅದು ಕೆಡದ ಆಚಾರ. ಶುದ್ಧವಾದುದು ಅರುವು ಸಿದ್ಧವಾಗಿ, ಅಂದು ಇಂದು ಮುಂದೆ ಎಂದೆಂದೂ ಇದ್ದುದು ಅರುವು. ಪ್ರಸಿದ್ಧವಾಗಿದ್ದುದ ಅರುವು. ಅರುವು ಆವಾವುದಕ್ಕೂ ಅಂಟದೆ ತಟ್ಟದೆ ಮುಟ್ಟದೆ ಅಸಂಗವಾಗಿದ್ದುದರಿಂದ ಶುದ್ಧವು. ಗಗನದಂತೆ ಅಚಲವು ಕ್ರಿಯೆದಿಂದ ರಹಿತವು ಸಕಲ ಕ್ರಿಯೆಗಳು ಅರುವಿನಿಂದ ಸಿದ್ಧವಾಗುವದರಿಂದ ಸಿದ್ಧವು ಅರಿವು. ಅದು ಚಿದಾಕಾಶವು ಚಿದ್ಘನವು. ಅದು ಗುಣದಿಂದತೀತವು, ಭಾವದಿಂದತೀತವು, ಇದು ಕಾರಣ ವಾಙ್ಮನವು ಅದರಿಂದ ಸಿದ್ಧವಾಗುವದರಿಂದ ಸ್ವತಃ ಸಿದ್ಧವು ಎಂದು ಹೇಳಿದೆ.

ಅರುವು ಅರಿವುದರಿಂದ ನುಡಿಗೆಡೆಗೊಡದ ಘನವು ನಿಸ್ಸೀಮವು, ಕರ್ಮಕಾಂಡ ಉಪಾಸನಾಕಾಂಡ ಜ್ಞಾನಕಾಂಡವು ಅರುವಿನಿಂದ ಸಿದ್ಧವಾಗುವದರಿಂದ ಅಪಾರವು. ಅರಿವುಡೆ ತಾನೆ ಶುದ್ಧ, ತಾನೆ ಸಿದ್ಧ, ತಾನೆ ಪ್ರಸಿದ್ಧ. ತನ್ನ ಹೊರ್ತು ಅನ್ಯವಾವದು ಇಲ್ಲ. ತಾನೊಂದೆ ಸ್ವತಃ ಸಿದ್ಧವು ಸ್ವಯಂಜ್ಯೋತಿ ಎಂಬುದು ತನಗದು ವೇದ್ಯವಾದುದೆ ಆಚಾರವರಿತದು. ಅಲ್ಲಿ ಅನಾತ್ಮ ಭಾವದ ತಾದಾತ್ಮ್ಯತೆಯೆ ನಷ್ಟವಾಗಿಹುದು. ಇಲ್ಲದುದು ಎಲ್ಲಿಪ್ಪದು ? ಇಲ್ಲದುದು ಎಂದಿಪ್ಪದು ? ಈ ರಹಸ್ಯವರಿತುದು ಅನರ್ಪಿತ ನಷ್ಟವಾದುದು ಅನಾಚಾರವು ನಷ್ಟವು ಎಂದು ಹೇಳಿಹರು.

ಅರ್ಪಿತವರಿತು ಅನರ್ಪಿತ ನಷ್ಟವಾದಡೆ ಪ್ರಸಾದಿ : ಪ್ರಸಾದಿ ಎಂಬುದು ಪರಮಜ್ಞಾನ. ಪರಮಾಮೃತ ಅದು ತೆರಹಿಲ್ಲದ ಜ್ಞಾನ. ಈ ತೆರಹಿಲ್ಲದ ಜ್ಞಾನ ತನಗೆ ಉದಯವಾಗಬೇಕಾದರೆ ಅರ್ಪಿತವರಿಯ ಬೇಕು. ಶುದ್ಧಜ್ಞಾನ, ಸಿದ್ಧಜ್ಞಾನ, ಪ್ರಸಿದ್ಧಜ್ಞಾನ. ಈ ಮೂರು ಅರ್ಪಿತವಾಗಬೇಕು. ಅಂದಲ್ಲಿ ಅರಿವು, ಅಸಂಗ, ಅಚಲ, ಅಖಂಡ, ಸಚ್ಚಿದಾನಂದ ನಿತ್ಯ ಪೂರ್ಣವೆಂಬ ಬಾವ ತೆರಹಿಲ್ಲದ ಜ್ಞಾನಾಮೃತ ಕಂಡು ಈ ಭಾವ ಇಲ್ಲವಾಗಬೇಕು. ಆಗ ಅರ್ಪಿತವರಿತು ಅನರ್ಪಿತ ನಷ್ಟವಾದುದು ಅರುವು ಶುದ್ಧ, ಸಿದ್ಧ, ಪ್ರಸಿದ್ಧವೆಂಬುದು ಸಾಪೇಕ್ಷೆಯಿಂದ ಬಂದ ಸಂಜ್ಞೆ ಇದು ನಿರಪೇಕ್ಷೆಜ್ಞಾನವಲ್ಲ.

ಕಲ್ಪಿತವಾದ ವಿಶೇಷ ಜ್ಞಾನ ಕಳೆಯಲು ಬಂದ ನಿವೃತ್ತಿ ಜ್ಞಾನ ನುಡಿಗೊಳಪಟ್ಟ ಜ್ಞಾನ, ನಷ್ಟವಾಗುವವರೆಗೂ ತನ್ನ ತೆರಹಿಲ್ಲದ ಜ್ಞಾನ ತನಗೆ ಪ್ರಜ್ವಲಿಸದು. ತನ್ನಿಂದ ತನಗೆ ನಿಃಶಬ್ದ ಬ್ರಹ್ಮದರುವು ತನಗೆ ವಿದಿತವಾದುದೆ ಪ್ರಸಾದಿ. ಈ ಮಹದರುವು ತಾನಾದುದೆ ಪ್ರಸಾದಿ. ಈ ಪ್ರಸಾದಿ ತಾನಾದಲ್ಲಿ ಅನರ್ಪಿತ ಸ್ವಭಾವತಃ ನಷ್ಟವಾಗುವುದು.

ಅನರ್ಪಿತವದು ನಾಮರೂಪ, ಕಲ್ಪಿತ, ವಿಶೇಷ ಜ್ಞಾನದರುವು ಪಿಂಡಾಂಡವೆಂಬ ತೋರಿಕೆಯು ಅರಿವು. ಇದು ಸ್ವಭಾವತ ಇಲ್ಲವಾಗಬೇಕು. ಇಲ್ಲೆಂಬುದು ಇಲ್ಲವಾದುದೆ ಅನರ್ಪಿತ ನಷ್ಟವಾದುದು. ಇಲ್ಲಿ ತನು ನಷ್ಟ, ಮನ ನಷ್ಟ, ನೆನಹು ನಷ್ಟ, ಭಾವ ನಷ್ಟ, ಜ್ಞಾನ ನಷ್ಟ ಈ ಪಂಚ ನಷ್ಟವಾದುದೆ ಅನರ್ಪಿತ ನಷ್ಟವಾದಂತೆ. ಇದಲ್ಲದೆ ನಾನೆಂಬ ತೋರಿಕೆಯ ಚಿದಹಮ್ಮು ನಷ್ಟ, ಲಿಂಗ ಜಂಗಮ ನೀನೆಂಬುದು ನಷ್ಟವಾದುದೆ ಅರ್ಪಿತವರಿತಂತೆ. ಕೇವಲ ನಿಃಶಬ್ದ ಬ್ರಹ್ಮದರುವೆ ತನ್ನಿರುವು ಆದುದೆ ಪ್ರಸಾದಿ.

ಪ್ರಸಾದವರಿತು ಪದಾರ್ಥ ನಷ್ಟವಾದಡೆ ಪರಿಣಾಮಿ : ಪ್ರಸಾದ, ಪ್ರಸಾದವೆಂದು ಪ್ರಸಾದದ ಆಸ್ತೀಕರು ಬಹುವಾಗಿ ಇಹರು. ಈ ಪ್ರಸಾದವ ಬಹು ವಿಧವಾಗಿ ತಿಳಿದಿಹರು. ಪ್ರಸಾದವರಿತು ಪದಾರ್ಥ

ನಷ್ಟವಾದ ಪರಿಣಾಮಿಗಳು ಸಿಕ್ಕುವದು ವಿರಳ. ಪ್ರಸಾದವದು ಶುದ್ಧ, ಸಿದ್ಧ, ಪ್ರಸಿದ್ಧವೆಂದು ಹೇಳುವ ಮಹಾಂತರು ಇರುವರು.ಪ್ರಸಾದದ ಗುಟ್ಟು ತಿಳಿದವರು ವಿರಳ. ಇದು ಕಾರಣ ಪ್ರಸಾದ ಪ್ರಸಾದವೆಂದು ಪರಮಜ್ಞಾನ ಪರಮಾನಂದ ಪರಮಾಮೃತ ಹೇಳುವವರು ಇದ್ದಾರೆ. ಈ ರಹಸ್ಯ ತಿಳಿದವರು ಕಡಿಮೆ. ಇದು ಕಾರಣ ಅರುವ ಅರಿದರಿದು ನೋಡಿದುದು. ಆರು ಅರುವ ಅರಿದಿಹರು,ಅವರು ತೆರಹಿಲ್ಲದ ಘನವಾಗಿಹರು. ಅವರು ಆವಾವುದಕ್ಕೂ ಅವಕಾಶ ಕೊಡದ ಘನ ಶೃತಿಗೂ ಸ್ಮೃತಿಗೂ ಆವಾವುದಕ್ಕೂ ಇಂಬು ಕೊಡದ ಘನ. ಅಂದು ಇಂದು ಎಂದೆಂದೂ ಇಂಬು ಕೊಡದ ಘನ. ಅಪ್ರಮಾಣ ಅಗಮ್ಯವಾದುದು ತನ್ನಿಂದ ತನಗದು ವಿದಿತವಾದುದು.

ಪ್ರಸಾದವರಿತಲ್ಲಿ ಪದಾರ್ಥ ನಷ್ಟವಾದುದು ತನ್ನಿಂದ ತನಗದು ವಿದಿತವು. ಏಕೆಂದರೆ ಪದಾರ್ಥವೆಂದರೆ ಜಡನ ಪದಾರ್ಥವಲ್ಲ, ಪದವೆಂದರೆ ಲಿಂಗ , ಪದಾರ್ಥವೆಂದರೆ ಲಿಂಗದ ಭಕ್ತ. ಇವೆರಡು ನಷ್ಟವಾದುದು . ಲಿಂಗ ಬೇರೆ ಭಕ್ತ ಬೇರೆಂಬ ಬೇದ ಜ್ಞಾನಿಗಳಿಗೆ ಪದವುಂಟು, ಪದಾರ್ಥವುಂಟು . ಲಿಂಗವರಿತು, ಲಿಂಗಕ್ಕೆ ಲಿಂಗವಾಗಿಹ ಘನಮಹಿಮಂಗೆ ಲಿಂಗ ಬೇರೆ, ಭಕ್ತ ಬೇರೆಂಬುದಕ್ಕಿಂಬಿಲ್ಲ, ಭಕ್ತನೆ ಭವಿಯಾದ ಮೇಲೆ ಉಪಮಿಸಲಳವಲ್ಲ ಎರಡೊಂದಾಗದ ಬಳಿಕ ಭಕ್ತನೆಂದರೆ ಭವಿ ಭವಿಯೆಂದರೆ ಭಕ್ತ. ಭವಿ ಎಂದರೆ ಲಿಂಗ ಲಿಂಗವೆಂದರೆ ಲಿಂಗ ಒಂದಾಗಿರ್ದ ಭಕ್ತ.ಭಕ್ತ ಒಂದಾಗಿರ್ದ ಲಿಂಗ ಅಲ್ಲಿ ಭಾವಕ್ಕಿಂಬಿಲ್ಲ ಶಬ್ದ ಮೀಸಲು ನೋಡಾ ನುಡಿಗೆಡೆಯಿಲ್ಲ. ಎಡೆಗೆ ಕಡೆಯಿಲ್ಲ ಗುಹೇಶ್ವರ ಲಿಂಗ ವೇಧಿಸಲೊಡನೆ, ಇದುವೆ ಪ್ರದಾಸವರಿತು ಪದಾರ್ಥ ನಷ್ಟವಾದ ಪರಿಣಾಮ.

ಪರಿಣಾಮವರಿತು , ಪರಮ ಸುಖವ ನೆಲೆಗೊಂಡರೆ ಕೂಡಲಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು: ಪರಿಣಾಮವರಿತ ಜ್ಞಾನವಾವುದು? ಪರಮಸುಖ ನೆಲೆಗೊಂಡುದು ಅದುವೆ ಕೂಡಲಚೆನ್ನಸಂಗಯ್ಯನಲ್ಲಿ ಲಿಂಗೈಕ್ಯದ ಚಿನ್ಹ.

ಊಟ ಮಾಡಿದ ಚಿನ್ಹ, ತೃಪ್ತಿಯಾದುದೆ ಚಿನ್ಹ. ತೃಪ್ತಿ ಚಿನ್ಹವೆಂದಲ್ಲಿ ಹಸಿವು ಹಿಂಗಿರುವುದೆ ಚಿನ್ಹ ಸದ್ಯಕ್ಕೆ ಊಟ ಬೇಡವಾಗಿರುವುದು. ಇದು ತೃಪ್ತಿಯ ಚಿನ್ಹ. ಹಾಗೆ ಪರಿಣಾಮವರಿತು ತಾನೆ ಘನಕ್ಕೆ ಘನವಾದುದು ಬೆಳಗಿನೊಳಗಣ ಬೆಳಗು ತಾನೆ. ಅಲ್ಲಿ ಶಬ್ದಮೀಸಲಾಗಿ ಶಬ್ಧಮುಗ್ಧವಾದುದು ತಾನೆ. ಏನೊಂದೆನಲಿಲ್ಲದರುವೆ ತನ್ನಿರುವಾಗಿ ಪ್ರಜ್ವಲಿಸಿದುದೆ ಅವರ್ಣೀಯವು. ಇದು ಮೂಕನ ಮೌನ, ನಿಜದಲ್ಲಿರ್ದ ಘನ. ಇದು ನೋಡದ ನೋಟ, ಕೂಡದ ಕೂಟವಾಗಿ ಬೆರಸಲಿಲ್ಲದ ಬೆರಗು ತಾನೆ ತಾನಾಗಿ ನಿಂದುದು . ಇದು ಪರಿಣಾಮವರಿತು ಪರಮಸುಖ ನೆಲೆಗೊಂಡುದು. ಇದು ಕೂಡಲಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು ಎಂದು ಹೇಳಿಹರು.

164

ಲಿಂಗ ದ್ರೋಹಿಯನೆ ಗುರುವೆಂಬೆ
ಗುರುದ್ರೋಹಿಯನೆ ಶಿಷ್ಯನೆಂಬೆ
ಸಮಯದ್ರೋಹಿಯನೆ ಭಕ್ತನೆಂಬೆ
ಪ್ರಸಾದದ್ರೋಹಿಯನೆ ಮಹೇಶ್ವರನೆಂಬೆ
ಇದು ಕಾರಣ ಕೂಡಲಚೆನ್ನ ಸಂಗಯ್ಯ
ನಿಮ್ಮ ಶರಣ ಸರ್ವಾಂಗದ್ರೋಹಿ ಲಿಂಗೈಕ್ಯನೆಂಬೆ. ॥ 789 ॥

ತಾತ್ಪರ್ಯ: ಲಿಂಗದ್ರೋಹಿಯನೆ ಗುರುವೆಂಬೆ: ಲಿಂಗ ದ್ರೋಹಿಗಳು ಯಾರು? ಲಿಂಗ ಲಿಂಗ

ಎಂಬ ಹಂಗಿಗರು, ಲಿಂಗ ಲಿಂಗ ಎಂಬ ಪ್ರೇಮಿಗಳು ಲಿಂಗಾರ್ಚಕರು ಲಿಂಗ ಭಾವಿಕರು. ಇವರು ಲಿಂಗದ್ರೋಹಿಗಳಾಗಲಾರರು ಹಾಗಾದರೆ ಲಿಂಗದ್ರೋಹಿಗಳು ಆರು? ಆರು ಲಿಂಗವರಿತವರು ಅವರು ಲಿಂಗ ಲಿಂಗ ಅನ್ನದವರು, ಅವರು ಲಿಂಗಾರ್ಚಕರಲ್ಲ ಲಿಂಗ ಭಾವಿಕರಲ್ಲ, ಇದು ಕಾರಣ ಅವರು ಲಿಂಗಪ್ರೇಮಿಗಳು ಆಗದ್ದರಿಂದ, ಪೂಜಾಲಿಂಗ ಸೇರದ್ದರಿಂದ ಅವರು ಲಿಂಗದ್ರೋಹಿಗಳು, ಲಿಂಗ ದ್ರೋಹಿಗಳೆಂದಲ್ಲಿ ಸಿದ್ಧಾರೂಢರು , ಮಡಿವಾಳೇಶ್ವರರು , ಜಡಸಿದ್ಧರು , ನಾಗಲಿಂಗಜ್ಜ, ಸಿದ್ಧರಾಮ ಶಿವಯೋಗಿ , ಕಬೀರದಾಸರು, ಇವರು ಲಿಂಗ ಸಕೀಲ ಸಂಯೋಗ ವರ್ಮಸ್ಥಲ ನರಿತುದರಿಂದ ಕುರುಹಿನ ಲಿಂಗ ಸೇರದವರು. ಲಿಂಗವನ್ನು ಕುರುಹಾಗಿ ಕಾಣದವರು . ಕುರುಹಿನ ಹಂಗಿಲ್ಲದವರು ಅರುವ ಅರಿತವರು; ಲಿಂಗದ್ರೋಹಿಗಳು .

''ಅರುವ ಅರಿಯ ಹೇಳಿ ಕುರುಹು ಕೈಯಲ್ಲಿ ಕೊಟ್ಟನಲ್ಲದೆ, ಅರುವನೆ ಮರೆದು ಕುರುಹನೆ ಪೂಜಿಸುವ ನರ ಕುರಿಗಳ ನೋಡಾ ಕೂಡಲ ಚೆನ್ನಸಂಗಮದೇವಾ''.

ಕುರುಹ ಸೇರದವರು ಅರುವರಿತವರು. ಇವರು ಪೂಜಾ ಲಿಂಗ ಸೇರದವರು. ಕುರುಹೆ ಲಿಂಗವೆಂದು ಒಪ್ಪದವರು . ಲಿಂಗವರಿತವರು ಲಿಂಗವೆ ತಾನಾಗಿಹ ಅಪ್ರತಿಮರು. ಇದು ಕಾರಣ ಲಿಂಗಾರ್ಚಕರಂತೆ ಲಿಂಗಪೂಜಿಸದ್ದರಿಂದ ಲಿಂಗದ್ರೋಹಿಗಳು ಎಂದು ಹೇಳಿಹರು .

ಗುರುಗಳು ಆರು ಗೊತ್ತೆ ? ಅರುವ ಅರಿಯ ಹೇಳಿ, ಕುರುಹು ಕೈಯಲ್ಲಿ ಕೊಟ್ಟು, ಇದು ವೇದ ವೇದಾಂತಗಳಿಗಸಾಧ್ಯವಾಗಿಹ ಅನುಪಮ ಲಿಂಗವೆಂದು ಕರುಣಿಸಿದಾತ ಸದ್ಗುರು . ಆ ಸದ್ಗುರು ದಿವ್ಯ ದೃಷ್ಠಿಗೆ ಲಿಂಗ ಹೆತ್ತರಿವು. ತಾನು ಸ್ವಯ ಮೇವ ಅರಿವು . ಆರಿಗೆ ಲಿಂಗವೆ ಶ್ರೇಷ್ಠವಾಗಿ ತಾನು ಕಿರಿಕಿರಿದಾಗಿಹನು, ಆತನು ಶ್ರೀಗುರು ವೆನಿಸಲಾರ . ಆರಿಗೆ ಲಿಂಗವು ಕಲ್ಪಿತವಾಗಿ ತಾನು ಅಕಲ್ಪಿತ ಘನನಾಗಿಹನೋ ಆ ಮಹಾಂತ ಶ್ರೀಗುರು ಎಂದು ಹೇಳಿಸಿಕೊಳ್ಳುವನು .

ಶಿಷ್ಯನ ದೃಷ್ಠಿಗೆ ಲಿಂಗ ಅಕಲ್ಪಿತವಾಗಿ, ತನ್ನ ಸ್ವರೂಪ ಕಿರಿಕಿರಿದಾಗಿ ಕಾಣುವನು. ಈ ಬೇಧ ದೃಷ್ಠಿ, ಭೇದ ಭಾವ, ಭೇದಜ್ಞಾನ ಕಳೆಯಲು, ಲಿಂಗವೆಂಬ ಮೌನಮುದ್ರಿತವಾಗಿಹ ಪರತತ್ವ ಕೃಪೆ ಮಾಡಿಹನು. ಆರು ಈ ಮೌನ ಮುದ್ರಿತವಾಗಿಹ ಘನದರುವು ಅರಿಯಹೋಗಿಹರು. ಅವರಿಗೆ ಲಿಂಗವೆ ಹೆತ್ತರಿವು ಆಗಿ, ತಾನು ಸ್ವಯಂ ಅರುವಾಗಿಹನು. ಲಿಂಗವರಿಯ ಹೋದವರಿಗೆ ಲಿಂಗ ಶ್ರೇಷ್ಠವಾಗಿಲ್ಲ, ತಾನು ಶ್ರೇಷ್ಠಾತಿ ಶ್ರೇಷ್ಠನಾಗಿಹನು.''ಘನ ಗಂಬೀರ ಮಹಾ ಘನದೊಳಗೆ ಘನಕ್ಕೆ ಘನವಾಗಿರ್ದೆನಯ್ಯ ಕೂಡಲ ಸಂಗಯ್ಯನೆಂಬ ಬೆಳಗಿನೊಳಗೆ ಬೆಳಗಾಗಿರ್ದು ಶಬ್ದ ಮುಗ್ಧವಾದುದು ನೇನೆಂಬೆ''. ಘನಗಂಭೀರವಾದ ಮಹಾಘನವದು ವೇದ ವೇದಾಂತಗಳಿಗಸಾಧ್ಯವಾಗಿಹ ಅನುಪಮ ಲಿಂಗ. ಈ ಅನುಪಮ ಲಿಂಗ ಆರು ಅರಿಯ ಹೋಗಿಹರು, ಅವರಿಗೆ ಲಿಂಗವು ಘನವು ಅಹುದು ಅಂತಪ್ಪ ಲಿಂಗ ತನ್ನಿಂದ ಸಿದ್ಧವಾಗುವುದರಿಂದ ತಾನೆ ಘನಕ್ಕೆ ಘನವಾಗಿಹನು. ಕೂಡಲಸಂಗಯ್ಯ ಪ್ರಕಾಶಮಯ ನಿಜ. ಆ ಪ್ರಕಾಶವು ತನ್ನಿಂದ ಸಿದ್ಧವಾಗುವುದರಿಂದ ಆ ಪ್ರಕಾಶಕ್ಕೆ ತಾನೆ ಪ್ರಕಾಶಿಸುವದರಿಂದ ಲಿಂಗವು ಗೌಣವು ಆಗಿದೆ. ಅಣ್ಣ ಬಸವಣ್ಣನವರು ಪ್ರಧಾನರಾಗಿಹರು. ಇದು ಕಾರಣ ಆರಿಗೆ ತನ್ನನ್ನು ಘನಕ್ಕೆ ಘನವಾಗಿ ಕಂಡಿಹರು, ಅವರಿಗೆ ಲಿಂಗವು ಕಲ್ಪಿತವಾದುದರಿಂದ ಅವರು ಲಿಂಗ ದ್ರೋಹಿಗಳು ಎಂದು ಹೇಳಿಹರು.

''ತಾನಿಲ್ಲದ ಮುನ್ನ ಗುರುವೆಲ್ಲಿಯದೊ, ಲಿಂಗವೆಲ್ಲಿಯದೊ, ಜಂಗಮವೆಲ್ಲಿಯದೊ, ಪ್ರಸಾದವೆಲ್ಲಿಯದೊ,ಪರವೆಲ್ಲಿಯದೊ,ಸ್ವಯವೆಲ್ಲಿಯದೊ, ಗುರುವೆಂದರಿದವನು ತಾನೆ, ಲಿಂಗವೆಂದರಿದವನು ತಾನೆ, ಜಂಗಮವೆಂದರಿದವನು ತಾನೆ, ಪ್ರಸಾದವೆಂದರಿದವನು ತಾನೆ. ಸ್ವಯವೆಂದರಿದವನು ತಾನೆ, ಪರವೆಂದರಿದವನು ತಾನೆ. ಇವೆಲ್ಲವೂ ಹೆತ್ತರಿವು ಸ್ವಯಂ ಜ್ಯೋತಿ ಕಲ್ಲೇಶ್ವರ ತಾನೆ''.

ಗುರುದ್ರೋಹಿಯನೆ ಶಿಷ್ಯನೆಂಬೆ: ಗುರುವೆಂಬುದು ಘನವು. ಅದನ್ನು ಬೋಧಾ ಮೂರ್ತಿಯೆಂದು ತಿಳಿಯದವನೆ ನಿಜವಾದ ಶಿಷ್ಯ. ಶ್ರೀಗುರುವನ್ನು ನಡೆ ನುಡಿಗೆ ಮೀರಿದವನೆಂದು ತಿಳಿಯುವದೆ ನಿಜವಾದ ಶಿಷ್ಯ. ಶಬ್ದಾತೀತನೆಂದು, ನಿಶಬ್ದ ವೇದಿಯೆಂದು ತಿಳಿಯುವುದೆ ನಿಜವಾದ ಶಿಷ್ಯನು.

ಗುರುದ್ರೋಹಿ ಯಾರು? ಪರಮಾರ್ಥ ಸಂಪ್ರದಾಯವು ಗುರು ತತ್ವ ತಿಳಿಯದೆ ಶಿಷ್ಯರನ್ನು ಮಾಡಿಕೊಂಡ ಗುರು ಪುಂಗವರು ಇದ್ದಾರೆ. ಶಿಷ್ಯರು ನಿಜವಾದ ಗುರುಗಳು ಆರೆಂಬುದು ತಿಳಿಯದೆ ಗುರುವೆಂದು ಭಾವಿಸಿದ ಭಾವಿಕರು ಬಹುವಾಗಿ ಇಹರು. ಈ ಭಾವರೂಪ ಭ್ರಮೆಯು ಬಹುವರ್ಷಗಳಿಂದಲೂ ಬಂದಂತೆ ಕಾಣುವುದು. ಇದನ್ನು ಕಂಡೆ ಪ್ರಭುದೇವ.

''ಒಂದರ ಮೋರೆಯನೊಂದು ಮೂಸಿ ನೋಡಿ ಮತ್ತೊಬ್ಬ ಹೊತ್ತಿಂಗೆ ಕಚ್ಚೆಯಾಡಿ ಹೋದಂತಾಯಿತ್ತು ನೋಡಿರೆ ಕಲಿಯುಗದೊಳಗಣ ಮೇಳಾಪವ ಗುರುವೆಂಬಾತ ಶಿಷ್ಯನಂತುವ ನರಿಯ ಶಿಷ್ಯನೆಂಬಾತ ಗುರುವಿನಂತುವ ನರಿಯ, ಭಕ್ತನೆಂಬಾತ ಜಂಗಮನಂತುವ ನರಿಯ, ಜಂಗಮನೆಂಬಾತ ಭಕ್ತ ನಂತುವ ನರಿಯ. ಗುರು ಗುರುವಿನಲ್ಲಿ ಸಮವಿಲ್ಲ, ಶಿಷ್ಯ ಶಿಷ್ಯರಲ್ಲಿ ಸಮವಿಲ್ಲ, ಭಕ್ತ ಭಕ್ತರಲ್ಲಿ ಸಮವಿಲ್ಲ, ಜಂಗಮ ಜಂಗಮರಲ್ಲಿ ಸಮವಿಲ್ಲ. ಇದು ಕಾರಣ ಕಲಿಯುಗದಲ್ಲಿ ಉಪದೇಶ ಮಾಡುವ ಕಾಳ ಗುರಿಕೆಯ ಮಕ್ಕಳನೇನೆಂಬೆ ಗುಹೇಶ್ವರಾ''.

ಸಮಸ್ವರೂಪ ತಿಳಿದವರು, ಸಮತೆ ಸಯವಾದ ಶರಣರು. ಅರುವು ಮರವುಗಳಿಗೆ ಮೀರಿದವರು. ಅಲ್ಲಿ ಗುರುವನ್ನು ಬೋಧಾಮೂರ್ತಿಯೆಂದು ತಿಳಿದಿರುವದಿಲ್ಲ. ಶಿಷ್ಯನನ್ನು ಮರವುಳ್ಳವನೆಂದು ತಿಳಿದಿರುವದಿಲ್ಲ. ಈರ್ವರದು ಸಮ ಪ್ರಕಾಶಮಾನವಾದ ತತ್ವವೆ ಸ್ವರೂಪವಾಗಿದೆ. ಶಿಷ್ಯನಾದವನು ಗುರುವಿನ ಬೋಧವ ಕೆಡಿಸಿಯೆ ಸಮಪ್ರಕಾಶಮಾನವಾದ ತತ್ವತಿಳಿದಿರುವನು ಇದು ಕಾರಣ ಗುರುದ್ರೋಹಿಯನೆ ಶಿಷ್ಯನೆಂದು ಹೇಳಿಹರು. ಶಿಷ್ಯನಾದವನು ಗುರುವಿನಂತುವ ತಿಳಿದಿಹನು. ಗುರುವಾದನು ಶಿಷ್ಯನ ಮೂಲವ ತಿಳಿದಿಹನು. ತಿಳಿದುದರಿಂದ ಸಮ ಪ್ರಕಾಶಮಾನವಾದ ತತ್ವ ತಿಳಿಯುವದು ಬಹು ಜನರಿಗೆ ಒಪ್ಪಿಗೆಯಾಗದಂತಾಗಿ ಶಿಷ್ಯ ಶಿಷ್ಯರು ವಿಷಮವಂತರು. ಗುರು ಪುಂಗವರು ವಿಷಮದೃಷ್ಠಿಯುಳ್ಳವರು. ಭಕ್ತ ಜಂಗಮರದು ಕೂಡಾ ಇದೆ ಆಗಿದೆ. ಹೀಗಾಗಿ ಮೂಲದ ಘನವ ತಿಳಿಯದಂತಾಗಿ ನಿಜವಾದ ಶಿಷ್ಯನು ಒಬ್ಬನು ಸಿಗದಂತಾಗಿದೆ.

ಗುರುತ್ವ ಕೆಡಿಸುವದು ಮಹಾಪಾಪವೆಂದು ತಿಳಿದವರೆ ಹೆಚ್ಚು ಜನ. ಇದು ಅರು ಹೃದಯ; ಹಿರಿತನವಲ್ಲ . ಶಿಷ್ಯತ್ವ ಕೆಡಿಸಲು ಬಂದುದೆ ಗುರು ಹೃದಯ ಶಿಷ್ಯತ್ವ ಕೆಟ್ಟಮೇಲೆ ಗುರುತ್ವ ಕೆಟ್ಟುದೆ ಶಿಷ್ಯನ ಹೃದಯ ಅರು ಹೃದಯವಾದ ಚಿನ್ಹ. ಗುರು ಘನ ಕಾಣದ್ದರಿಂದ ಶಿಷ್ಯತ್ವ ಹಾಗೆ ಉಳಿದು ಬಂದುದು ಗುರು ಘನ ದೊರೆತಲ್ಲಿ, ಶಿಷ್ಯತ್ವ ಉಳಿದುದು ಹೇಗೆ? ಶಿಷ್ಯತ್ವವೆ ಉಳಿಯದಿದ್ದಲ್ಲಿ ಗುರುಘನ ಆರಿಗೆ? ವರ ಶಿಗದ ವಧುವಾಗಿದ್ದವಳು ವರ ಶಿಕ್ಕು ವಧುವಿಗೆ ಲಗ್ನವಾದ ಮೇಲೆ ಅವಳು ಕನ್ಯೆಯಾಗಿ ಹೇಗೆ ಇರುವಳು. ಅವಳು ಕನ್ಯೆಯಾಗದಿದ್ದಲ್ಲಿ ಇವನು ವರ ಹೇಗಾಗುವನು? ಹಾಗೆ ಮೂಲವಾದ ತತ್ವದೊರೆಯದ ಮುನ್ನ, ಶಿಷ್ಯನಾದುದು ಸಹಜ. ಮುನ್ನ ಮುನ್ನಲಾದ ಘನ ತನ್ನಿಂದ ತಾನಾದ ಘನದ ಪರಿಚಯವಾದ ಮೇಲೆ ಆರಿಗಾರು ಗುರುತ್ವ ವಹಿಸುವುದು, ಆರಿಗಾರು ಶಿಷ್ಯತ್ವ ವಹಿಸುವದು, ? ಎರಡಿದ್ದಲ್ಲಿ ಗುರುವಿಂಗೆ ಶಿಷ್ಯತ್ವವಹಿಸುವುದು ನಿಜ. ಏನೊಂದಾಗದ ಘನವೆ ತಮ್ಮಯ ಸ್ವರೂಪವಾದಲ್ಲಿ ಗುರುವಿನ ಘನತ್ವ ಉಳಿಯದ್ದರಿಂದ, ಗುರುದ್ರೋಹಿಯನೆ ಶಿಷ್ಯನೆಂದು ಹೇಳಿಹರು.

ಸಮಯ ದ್ರೋಹಿಯನೆ ಭಕ್ತನೆಂಬೆ : ಒಬ್ಬರನೊಬ್ಬರು ಕಂಡು ಬೆಳೆದು ಬಂದ ಸಂಪ್ರದಾಯ . ಧರ್ಮ, ಮತದ ಸಂಕೇತಕ್ಕೆ ಎಲ್ಲರೂ ಒಳಪಟ್ಟಿರುವದು. ಪ್ರತಿ ಒಂದು ಧರ್ಮ ಮತ ಸಂಘಟನೆಯಲ್ಲಿ ಈ ಸಂಪ್ರದಾಯ ಬೆಳೆದು ಬಂದಿದೆ, ಹಿಂದುಗಳ ಅಭಿಪ್ರಾಯ ಒಂದಾದರೆ, ಮುಸಲ್ಮಾನರ ಅಭಿಪ್ರಾಯ

ಒಂದು. ಹಿಂದುಗಳು ಮೂರ್ತಿ ಪೂಜಕರಾದರೆ ಮುಸಲ್ಮಾನರು ಅದಕ್ಕೆ ವಿರುದ್ಧ ಪೂಜೆ. ಒಬ್ಬರು ಸಾಕಾರಕ್ಕೆ ಒಪ್ಪಿದರೆ, ಮತ್ತೊಬ್ಬರು ನಿರಾಕಾರಕ್ಕೆ ಒಪ್ಪುವದು. ಈ ಸಂಪ್ರದಾಯಕ್ಕೆ ಒಳಪಟ್ಟ ಹೃದಯ ಅಲ್ಲಿ ಅರು ಹೃದಯರಾಗಿ ಸಾಕಾರವ ತಿಳಿಯರು, ನಿರಾಕಾರವ ತಿಳಿಯರು, ಸಗುಣವ ತಿಳಿಯರು . ನಿರ್ಗುಣವ ತಿಳಿಯರು, ಲಿಂಗವ ತಿಳಿಯರು, ಅಂಗವ ತಿಳಿಯರು, ಲಿಂಗಾಂಗ ಸಮರಸವ ತಿಳಿಯರು, ಇತ್ತ ಬ್ರಹ್ಮವ ನಂಬಿದವರು, ಬ್ರಹ್ಮವ ತಿಳಿಯರು. ಅಲ್ಲಾನನ್ನು ನಂಬಿದವರು ಅಲ್ಲಾನನ್ನು ತಿಳಿಯರು. ತಿಳಿಯದ್ದರಿಂದ ಸಮಯದ್ರೋಹಿಗಳಾಗುವುದು ಅಸಾಧ್ಯವಾದುದು ಆಗಿದೆ. ಆರು ತತ್ವ ತಿಳಿಯಲು ಹೋಗಿಹರು, ಅವರು ಸಂಪ್ರದಾಯಕ್ಕೆ ಮೀರಿ ನಿಂತಿದ್ದಾರೆ. ಧರ್ಮ, ಮತ, ಸಂಪ್ರದಾಯದ ಕಟ್ಟು ನಿಟ್ಟುಗಳ ಸೇರದವರಾಗಿದ್ದಾರೆ. ಅವರನ್ನು ಕಂಡು ಧರ್ಮದ್ರೋಹಿಗಳು ಮತ ವಂಚಕರು ಎಂದು ದೂರುತ್ತಿದ್ದಾರೆ. ಹಿಂದಕ್ಕೆ ಜನ ಕಬೀರದಾಸ ಷರೀಫ ಸಾಹೇಬರನ್ನು ದೂರಿದ್ದಾರೆ. ಸಿದ್ಧಾರೂಢರನ್ನ ಜಡೆ ಸಿದ್ಧ ಶಿವಯೋಗಿಗಳನ್ನೂ ದೂರಿದ್ದಾರೆ. ಮಹಾತ್ಮರುಗಳನ್ನೆಲ್ಲ ಸೇರದವರು. ಸಂಪ್ರದಾಯಕ್ಕೆ ಒಳಪಟ್ಟ ಜನ. ಅವರ ಪಾರ್ಥಿವ ಶರೀರ ಬಟ್ಟೆಮೇಲೆ, ಅವರು ಗದ್ದುಗೆ ಪೂಜೆಗೆ ಸೇರಿದವರು.

ಆರು ತತ್ವವೇತ್ತರಾಗಿಹರು ಅವರು ಮೂಢ ಸಂಪ್ರದಾಯಕ್ಕೆ ಒಪ್ಪದವರು. ಅಣ್ಣ ಬಸವಣ್ಣ ಜನಿವಾರ ಹಾಕಿಕೊಳ್ಳಲು ಒಪ್ಪದಾತ. ಸಿದ್ಧಾರೂಢ ಲಿಂಗಹಾಕಿಕೊಳ್ಳಲು ಒಪ್ಪದಾತ. ಷರೀಫ ಸಾಹೇಬರು ನಮಾಜ ಮಾಡಲು ಒಪ್ಪದವರು, ಜ್ಞಾನೇಶ್ವರಿ ಮಹಾರಾಜ, ನಿವೃತ್ತಿನಾಥ ಇವರು ಯಜ್ಞ ಯಾಗಾದಿಗಳಗೆ ಒಪ್ಪದ ಅಖಂಡ ಜ್ಞಾನಿಗಳು. ಹೀಗೆ ತತ್ತ್ವವೇತ್ತ ಸಮುದಾಯವೆಲ್ಲ ಸಮಯಾಚಾರಕ್ಕೆ ಒಪ್ಪದವರು. ತತ್ತ್ವವೇತ್ತರೆ ನಿಜವಾದ ಭಕ್ತರು, ಭಕ್ತಂಗೆ ಉತ್ಪತ್ತಿಯಿಲ್ಲಾಗಿ ಸ್ಥಿತಿ ಇಲ್ಲ, ಸ್ಥಿತಿ ಇಲ್ಲಾಗಿ ಲಯವಿಲ್ಲ ,ಲಯವಿಲ್ಲಾಗಿ ಮುನ್ನೆಲ್ಲಿಂದ ಬಂದ ನಲ್ಲಿಗೆ ಹೋಗಿ ನಿತ್ಯನಾಗಿರ್ಪನಯ್ಯ ಗುಹೇಶ್ವರ ನಿಮ್ಮ ಶರಣ. ಭಕ್ತರಾದವರು ಮುನ್ನ ಮುನ್ನಲಾದ ಘನವ ತನ್ನಿಂದ ಕಂಡು ತಾನದುದೆ ಆಗಿಹ ಘನಕ್ಕೆ ಘನರು.ಅವರು ಗುಹೇಶ್ವರ ಲಿಂಗವರಿತು, ತನುವಿಂಗೆ ತನುವಾಗಿ, ಮನಕ್ಕೆ ಮನವಾಗಿ, ಜೀವಕ್ಕೆ ಜೀವವಾಗಿ ಇದ್ದುದು ಬಲ್ಲವರು. ಅವರು ಲಿಂಗವ ದೂರವೆನಲಿಲ್ಲ, ಸಮೀಪವೆನಲಿಲ್ಲ, ಒಳಗೆನಲಿಲ್ಲ, ಹೊರಗೆನಲಿಲ್ಲ, ಪ್ರಾಣವೆನಲಿಲ್ಲ, ಲಿಂಗವೆನಲಿಲ್ಲ, ಲಿಂಗವೆ ತಾವಾಗಿ ಶಬ್ದ ಮುಗ್ಧವಾದುದು ಏನೆಂದು ಹೇಳುವದು. ಇಂತಪ್ಪ ತಾನಾರೆಂದು ತನ್ನಿಂದ ತನ್ನ ಅರಿತವರು ಅವರು ಮೂಢ ಸಂಪ್ರದಾಯಕ್ಕೆ ಒಪ್ಪದ್ದರಿಂದ ಸಮಯದ್ರೋಹಿಗಳು. ಇವರು ಭಕ್ತರೆಂದು ಹೇಳಿಹರು.

ಪ್ರಸಾದ ದ್ರೋಹಿಯನೆ ಮಹೇಶ್ವರರೆಂಬೆ : ಪ್ರಸಾದವೆ ಗುರು, ಪ್ರಸಾದವೆ ಲಿಂಗ, ಪ್ರಸಾದವೆ ಜಂಗಮ, ಪ್ರಸಾದವೆ ಪರಾತ್ಪರ, ಪ್ರಸಾದವೆ ಪರಮಜ್ಞಾನ, ಪ್ರಸಾದವೆ ವಾಙ್ಮನೋತೀತ, ಪ್ರಸಾದವೆ ನಿತ್ಯ ಪರಿಪೂರ್ಣವೆಂಬುದು ನಷ್ಟವಾದಡೆ ಮಹೇಶ್ವರನು ಪ್ರಸಾದವರಿತಲ್ಲಿ ತೆರಹಿಲ್ಲದ ಸುಖದ ನಿಧಿ, ಅದು ತನಗಿಂತ ಅನ್ಯವಲ್ಲ, ಅರಿವುಡೆ ತಾನೆ ನುಡಿದು ಹೇಳಲಿಲ್ಲ , ನಡೆದು ತೋರಿಸಲಿಲ್ಲ , ಇದ್ದಂತಿದ್ದ ಘನವು ಅಲ್ಲಿ ಕಲ್ಪಿತಕ್ಕಿಂಬಿಲ್ಲ ಕ್ರಿಯೆಗಿಂಬಿಲ್ಲ, ಅಕ್ರಿಯೆ, ಜ್ಞಾನಾಚಾರ ,ಜ್ಞಾನಾನಂದ ಶಬ್ದಮೀಸಲು. ಗುರು, ಲಿಂಗ, ಜಂಗಮ, ಪ್ರಸಾದವೆಂದು ಹಲಬುವ ಹಲುಬಾಟವಿಲ್ಲ. ಗುರು ಘನವದು, ಅದು ಬೋಧಾಮೂರ್ತಿಯಲ್ಲ ಕುರುಹು ಕೂನಂಗಳಿಂದತ್ತತ್ತ . ಅದು ಪೂಜ್ಯ , ಪೂಜಕ ದೃಷ್ಟಿಗೊಳಪಡದು, ಭೇದಾಭೇದ ಜ್ಞಾನಕ್ಕೊಳಪಡದು. ಕಲ್ಪಿತ ಅಕಲ್ಪಿತ ಎಂಬುಭಯ ಭಾವ ನಷ್ಟವಾದುದೆ ಪ್ರಸಾದದ್ರೋಹಿ. ಅಂಗವು ಅಕಲ್ಪಿತ, ಲಿಂಗವು ಅಕಲ್ಪಿತ. ಎರಡು ಸಮವೆಂಬ ಭಾವ. ಭಾವಾಚಾರ ನಷ್ಟವಾದುದೆ ಪ್ರಸಾದ ದ್ರೋಹಿ. ಗುರು, ಲಿಂಗ, ಜಂಗಮ, ಪ್ರಸಾದ ಈ ಚತುರ್ವಿಧದ ಸಂಪತ್ತು ಶಬ್ದ ಮೀಸಲಾಗಬೇಕು. ಭಾವಕ್ಕೊಳಪಡಬಾರದು, ಚಿಂತನಕ್ಕಕೊಳಪಡದಂತಾಗಿ ಶಬ್ದಕ್ಕಿಂಬಿಲ್ಲದಂತಾಗಿ, ತನ್ನಿಂದ ತನ್ನ ಸ್ವಮಹಿಮೆಯ ನೋಡುವುದು. ಇಂತಪ್ಪ ಘನಮಹಿಮನೆ ಮಹೇಶ್ವರನು. ವಾಙ್ಮನದ ಹಂಗಿಗನಲ್ಲ

ಮಹೇಶ, ವಾಙ್ಮನೋತೀತವೆಂಬ ಹಂಗಿಗನು ಅಲ್ಲ ಮಹೇಶ, ಪ್ರಸಾದವೆಂಬುದು ಪರಮಜ್ಞಾನ ಪರಮಾಮೃತವೆಂಬುದು ಶಬ್ದದಿಂದುಕ್ತವಾಗಬಾರದು , ಅದುವೆ ತಾನಾಗುವದು ನುಡಿದು ಹೇಳಲಿಕ್ಕಿಂಬಿಲ್ಲವಾದುದೆ ಪ್ರಸಾದ ದ್ರೋಹಿ ಎಂದು ಹೇಳಿಹರು. ಇದು ಕಾರಣ ಕೂಡಲಚೆನ್ನಸಂಗಯ್ಯ, ನಿಮ್ಮ ಶರಣ ಸರ್ವಾಂಗದ್ರೋಹಿ ಆತನನ್ನು ಲಿಂಗೈಕ್ಯನೆಂಬೆ.

ಕೂಡಲಚೆನ್ನಸಂಗಯ್ಯ ನಿಮ್ಮ ಶರಣ ಸರ್ವಾಂಗ ದ್ರೋಹಿ : ಶರಣನ ದಿವ್ಯ ದೃಷ್ಠಿಗೆ ಸರ್ವಾಂಗ ನಷ್ಟವಾಗಿದೆ . ಲಿಂಗವ ಕುರುಹಾಗಿ ಕಾಣಲಿಲ್ಲ ಗುರುವರನ ಅಂಗವಾಗಿ ಕಾಣಲಿಲ್ಲ . ಅಲ್ಲಿ ಪೂಜ್ಯ ಪೂಜಕವೆಂಬ ಭೇದ ದೃಷ್ಠಿ ತಲೆದೋರಲಿಲ್ಲ ಭೇದ ದೃಷ್ಠಿ ಇಲ್ಲದ್ದರಿಂದ ಅದನ್ನು ಕೆಡಿಸುವ ಅಭೇದ ದೃಷ್ಠಿಯು ಇಲ್ಲ. ಭೇದಾಭೇದ ವಿನಿರ್ಮುಕ್ತವಾದ ಸ್ಥಿತಿಯು ಸರ್ವಾಂಗ ದ್ರೋಹಿಯು, ತನ್ನಿಂದ ತನ್ನ ಕಂಡ ಸ್ವಮಹಿಮೆ ರೂಹಿಸಲೆಡೆಯುಂಟೆ? ಲಿಂಗೈಕ್ಯವೆಂಬುದು ಶಬ್ದಮುಗ್ಧತ್ವವು, ನಡೆ ನುಡಿಗಿಂಬಿಲ್ಲ ತನ್ನಯ ಘನಮಹಿಮವು ತಾನೆ ಹೇಳಿದರದಕ್ಕದೆ ಕೊರತೆ. ನುಡಿದು ನಡೆದು ತೋರಿಸುವ ಸರ್ವಾಂಗಗಳು ನಷ್ಟವಾದ ಸಂಜ್ಞೆಯೆ ಲಿಂಗೈಕ್ಯ ಸಂಜ್ಞೆ, ಇದು ತನ್ನಿಂದ ತಾನರಿದುದು ತಾನೆ ತಾನಾಗಿಹ ಸಂಜ್ಞೆ ಎಂದು ಹೇಳಿದುದು.

165

ಸ್ಥಲವೆಂದೆನ್ನೆ, ನಿಸ್ಥಲವೆಂದೆನ್ನೆ
ನಿರ್ಣಯವೆನಗಾದ ಬಳಿಕ,
ಏನೆಂದರಿಯೆನಯ್ಯ, ಇದು ಕಾರಣ
ಕೂಡಲ ಚೆನ್ನಸಂಗಯ್ಯ ಲಿಂಗೈಕ್ಯವೆಂದೆನ್ನೆ! ॥ 764 ॥

ತಾತ್ಪರ್ಯ : ಸ್ಥಲವೆಂದೆನ್ನೆ, ನಿಸ್ಥಲವೆಂದೆನ್ನೆ, ನಿರ್ಣಯ ವೆನಗಾದ ಬಳಿಕ ಏನೆಂದರಿಯೆನಯ್ಯ: ನಿರ್ಣಯ ಇದಾವ ನಿರ್ಣಯ? ತಾನಾರೆಂದರಿತು ತನ್ನ ನಿರ್ಣಯ ತನಗಾದ ಬಳಿಕ ತನ್ನದು ಷಟ್‌ಸ್ಥಲವೆಂದೆನ್ನೆ, ನಿಸ್ಥಲವೆಂದೆನ್ನೆ, ತಾನಾರೆಂದರಿಯದ ಮುನ್ನ, ತನ್ನ ನಿರ್ಣಯ ತನಗಾಗದ ಮುನ್ನ ಷಟ್‌ಸ್ಥಲದವ, ನಿಸ್ಥಲದವ ಎನುತಿದ್ದೆ. ತನ್ನ ನಿರ್ಣಯ ತನಗಾದುದರಿಂದ ಏನೆಂದರಿಯೆನಯ್ಯ, ಷಟ್‌ಸ್ಥಲವು ಕಲ್ಪಿತ ಪುರುಷನ ಸ್ಥಲ, ನಿಸ್ಥಲವು, ಅಕಲ್ಪಿತ ಸ್ಥಲ. ಅಂಗನೆಂಬ ಕಲ್ಪಿತನಿಗೆ ವೇದ ವೇದಾರ್ಥ ಸಾರಾಯದಿಂದ ಆರು ಶಾಸ್ತ್ರ ಹದಿನೆಂಟು ಪುರಾಣಗಳಾದವು. ಆ ಪುರಾಣಂಗಳ ನರಿವುದರಿಂದ ಜ್ಯೋತಿ ಜ್ಞಾನವಾಯಿತ್ತು. ಆ ಜ್ಯೋತಿ ಜ್ಞಾನದಿಂದ ಮತಿಜ್ಞಾನ ಶೃತಿಜ್ಞಾನ ಮನಪರಿಪೂರ್ಣ ಜ್ಞಾನ, ಅವಧಿ ಜ್ಞಾನ, ಕೇವಲ ಜ್ಞಾನ. ಇಂತೀ ಪಂಚ ಜ್ಞಾನವೆ ಪಂಚಸ್ಥಲವಾಯಿತ್ತು.

''ಮತಿ ಜ್ಞಾನವುಳ್ಳಾತ ಭಕ್ತ, ಶೃತಿ ಜ್ಞಾನವುಳ್ಳಾತ ಮಹೇಶ್ವರ, ಮನ ಪರಿಪೂರ್ಣ ಜ್ಞಾನವುಳ್ಳಾತನೆ ಪ್ರಸಾದಿ. ಅವಧಿ ಜ್ಞಾನವುಳ್ಳಾತನೆ ಪ್ರಾಣಲಿಂಗಿ. ಕೇವಲ ಜ್ಞಾನವುಳ್ಳತಾನೆ ಶರಣ, ಶರಣ ಸ್ಥಲವೆಂಬುದು ಭವಂನಾಸ್ತಿ. ಪಂಚ ಜ್ಞಾನಕ್ಕೆ ಮೂಲವಾದ ಜ್ಯೋತಿ ಜ್ಞಾನವೆ ಪಂಚಸ್ಥಲದಲ್ಲಿ ಏಕಾಕರದ ಐಕ್ಯನು. ಇಂತೆಂದುದಾಗಿ ಕೂಡಲ ಚೆನ್ನಸಂಗಯ್ಯನಲ್ಲಿ ಪಂಚಸ್ಥಲದ ನೆಲೆಯಬಲ್ಲ ಐಕ್ಯ ಬಸವಣ್ಣಂಗೆ ನಮೋ ನಮೋ ಎಂಬೆನು''. ಅಂಗನಿಗಾಗಿ ಕಲ್ಪಿಸಿದ ಸ್ಥಲ ಐದು. ಐದು ಸ್ಥಲಂಗಳಿಗೆ ಜ್ಯೋತಿ ಜ್ಞಾನವೆ ಅಧಿಷ್ಠಾನವು. ಭಕ್ತ ಸ್ಥಲವು ಮತಿ ಜ್ಞಾನವು ಕಲ್ಪಿತವು. ಒಂದು ಬೆಳಗಿಸಿಕೊಳ್ಳುವದನ್ನಾಗಿ ಮಾಡಿ ಇನ್ನೊಂದು ಬೆಳಗುವ ಜ್ಯೋತಿಯನ್ನಾಗಿ ಮಾಡಿದುದು ಮತಿಜ್ಞಾನ . ತೋರಿ ಇಲ್ಲವಾಗುವದೆಲ್ಲ ಬೆಳಗಿಸಿಕೊಳ್ಳವದಾಗಿ, ತೋರದಡಗದ ಘನವೆ ಬೆಳಗುವ ಜ್ಯೋತಿಯಾಗಿ ಕಲ್ಪಿಸಿದ ಮತಿಜ್ಞಾನ

ಭಕ್ತಿಸ್ಥಲವಾಗಿದೆ. ಮಹೇಶ್ವರ ಜ್ಞಾನ, ಶೃತಿ ಜ್ಞಾನ, ವೇದದಲ್ಲಿ ತಿಳಿದ ಜ್ಞಾನ ತಿಳಿಯಲ್ಪಟ್ಟ ಜ್ಞಾನವಾಗಿದೆ. ಇದು ಮಹೇಶ್ವರ ಸ್ಥಲವಾಗಿದೆ. ಮಹೇಶ್ವರನಿಂದ ಲಭ್ಯವಾದ ಜ್ಞಾನ ವನ್ನು ಮನದಲ್ಲಿ ತಿಳಿದ ಜ್ಞಾನ, ಪರಿಪೂರ್ಣ ಜ್ಞಾನ, ಅದು ಪ್ರಸಾದಿಸ್ಥಲವಾಗಿದೆ. ಅವಧಿ ಜ್ಞಾನ ಇದು ಪ್ರಾಣಲಿಂಗ ಜ್ಞಾನ, ಇದು ಲಿಂಗಜ್ಞಾನ, ಸತ್ಯ ಜ್ಞಾನಾನಂದದ ಅರಿವು. ಎಚ್ಚರದ ಅರಿವು ಇದು ಪ್ರಾಣಲಿಂಗಸ್ಥಲವಾಗಿದೆ. ಅರುವಿನ ಎಚ್ಚರ ಅರುವೆ ತಾನೆಂಬ ಎಚ್ಚರ ಕೇವಲ ಜ್ಞಾನವೆ ಶರಣಸ್ಥಲವಾಗಿದೆ. ಅರುವಿನ ಅರುವು ಇದು ಶರಣನ ಸ್ವಯಮೇವ ಅರುವು ಬಸವಣ್ಣಂಗೆ ಪಂಚಸ್ಥಲಂಗಳು ಬೇರಾಗಿ ಕಾಣಲಿಲ್ಲ, ಐದರಲ್ಲಿಯೂ ಜ್ಯೋತಿರ್ ಜ್ಞಾನವ ಕಂಡ ಮಹಾಂತ. ಇದು ಕಾರಣ ಆತನು ಐಕ್ಯನೆಂದು ಹೇಳಿದೆ.

ನಿಸ್ಥಲವೆಂಬುದು ಅಕಲ್ಪಿತನ ಸ್ಥಲ. ಇದು ಜ್ಯೋತಿರ್ಜ್ಞಾನ. ಇದು ಆರು ಶಾಸ್ತ್ರ ಹದಿನೆಂಟು ಪುರಾಣಂಗಳರಿವುದರಿಂದ ಬಂದ ಜ್ಞಾನ. ಜ್ಯೋತಿರ್ಜ್ಞಾನ ಈ ಜ್ಞಾನ ಘನವೆ ಅಕಲ್ಪಿತ, ಕಲ್ಪಿತ ಪುರುಷನಿಗಿಂಬು ಗೊಡದ ಜ್ಞಾನ. ಇದು ಐದು ಸ್ಥಲವಾಗದ ಜ್ಞಾನ ಜ್ಯೋತಿರ್ಜ್ಞಾನವೆಂಬುದಕ್ಕೂ ಮೀರಿದ ಜ್ಞಾನ. ಇದು ನಿಸ್ಥಲ ಜ್ಞಾನ, ಏಕೆಂದರೆ ಮತಿಯಿಂದುಕ್ತವಾದುದಲ್ಲ ಶೃತಿಯಿಂದುಕ್ತವಾದುದಲ್ಲ, ಮನದ ಮೇರೆಗೆ ಮೀರಿದುದು ಲಿಂಗ ಲಿಂಗ ಎಂಬುದಕ್ಕೂ ಮೀರಿದುದು, ಸಚ್ಚಿದಾನಂದ ಸಚ್ಚಿದಾನಂದ ಎಂಬುದಕ್ಕೂ ಮೀರಿದುದು . ಇದು ಅರುವೆಂಬುದರ ಅಧಿಷ್ಠಾನವು, ಈ ಅಧಿಷ್ಠಾನವೆ ನಿಸ್ಥಲವಾಗಿದೆ.

ಇಲ್ಲಿ ಸ್ಥಲವೆಂದೆನ್ನೆ ನಿಸ್ಥಲವೆಂದೆನ್ನೆ ನಿರ್ಣಯವೆನಗಾದ ಬಳಿಕ ಏನೆಂದರಿಯೆನಯ್ಯ ಎಂದು ಬಿತ್ತರಿಸಿದುದು. ಇದು ವೇದ ವೇಧಿಸಲರಿಯದ ಜ್ಞಾನ. ಶಾಸ್ತ್ರದಿಂದ ಸಾಧಿಸದ ಜ್ಞಾನ, ಪುರಾಣ ಪೂರೈಸದ ಜ್ಞಾನ, ಆಗಮಕ್ಕೆ ನಿಲುಕದ ಜ್ಞಾನವಾದ್ದರಿಂದ ಸ್ಥಲವೆಂದೆನ್ನೆ ನಿಸ್ಥಲವೆಂದೆನ್ನೆ ಎಂದು ಹೇಳಿಹರು.

ನಿರ್ಣಯ ವೆನಗಾದ ಬಳಿಕ, ಏನೆಂದರಿಯೆನಯ್ಯ : ಇದು ತನ್ನ ನಿರ್ಣಯ ತನ್ನಿಂದ ತನಗಾದ ನಿರ್ಣಯ ಗುರುವಿನಿಂದಾಗಲಿ ಲಿಂಗದಿಂದಾಗಲಿ ಆದ ನಿರ್ಣಯವಲ್ಲ . ಏಕೆಂದರೆ ಗುರುರೂಪವಾಗಲಿ, ಲಿಂಗಲಕ್ಷಣವಾಗಲಿ , ತನ್ನಿಂದ ಬೆಳಗಿಸಿಕೊಳ್ಳತಕ್ಕವುಗಳು , ತಾನು ಮಾತ್ರ ಬೆಳಗುಳ್ಳಬೆಳಗು ಸ್ವಯಂ ಬೆಳಗು. ತನ್ನದು ಎರವಲ ಬೆಳಗಲ್ಲ ಏನೊಂದುಸರಲು ಇಂಬುಗೊಡದ ಬೆಳಗುಳ್ಳ ಬೆಳಗು. ಈ ನಿರ್ಣಯ ತನ್ನ ನಿರ್ಣಯವಾದುದರಿಂದ, ಗುರು ರೂಪವರಿಯ ಲಿಂಗ ಲಕ್ಷಣವರಿಯ.ಇವು ಕಲ್ಪಿತವಾದ್ದರಿಂದ ಅರಿಯೆ.ತಾನು ಕಲ್ಪಿತವು ಅಲ್ಲ ಅಕಲ್ಪಿತವು ಅಲ್ಲ. ಏನೊಂದುಸರಲು ಎಡೆಗೊಡದ ಘನ. 1ಇದು ತನ್ನ ಸ್ವಂತ ಮಹಿಮೆಯಲ್ಲಿ ನೆಲಿಸಿರುವ ತನಗೆ ಸ್ಥಲವೇನು ನಿಸ್ಥಲವೇನು?

ಇದು ಕಾರಣ ಕೂಡಲಚೆನ್ನಸಂಗಯ್ಯ ಲಿಂಗೈಕ್ಯವೆಂದೆನ್ನೆ, ಏನನ್ನಾದರೂ ಅರಿಯಬಹುದು ; ಅರಿದರುಹಿಸಿಕೊಂಬುದಕ್ಕೂ ಮೀರಿದ ಘನಕ್ಕೆ ಘನವಾಗಿಹ ನನ್ನಂ ಆವುದರಿಂದ ಅರಿವುದು. ಅನುಪಮವು ಉಪಮೆಗೊಳಪಡಬಹುದೆ? ಆಕಾಶದ ಎತ್ತರವು ಅಳತೆಗೆ ನಿಲುಕಬಹುದೆ? ಅದಕ್ಕೆ ಘಟಾಕಾಶ, ಮಠಾಕಾಶ, ಮೇಘಾಕಾಶವೆನಬಹುದೆ? ಇದ್ದಂತಿರುವ ಅಗಣಿತ ಗಣನೆಗೆ ಇಂಬಾಗಬಹುದೆ? ಏನೊಂದುಸರಲು ಬಾರದ ಘನ ಸ್ವಯಂಜ್ಯೋತಿ ವಾಙ್ಮನಕ್ಕೆ ನಿಲುಕಬಹುದೆ? ಸ್ಥಲವಾಗಲಿ, ನಿಸ್ಥಲವಾಗಲಿ ವರ್ಣನೆಯಿಂದುಕ್ತವು ಸಾಪೇಕ್ಷ, ನಿರಪೇಕ್ಷ, ಶಬ್ದ ಬ್ರಹ್ಮ, ನಿಃಶಬ್ದ ಬ್ರಹ್ಮ ವರ್ಣನೆಯಿಂದುಕ್ತವು. ಏನೊಂದುಸರಲು ಎಡೆಗೊಡದ ಘನವೆಂಬುದು ವಾಙ್ಮನದಿಂದ ಒಂದಾಗಬಾರದ ಸ್ವಯಂ ಜ್ಯೋತಿ ಎಂದೂ ಎಂಜಲ ಮಾತಿನ ಸ್ವಾನುಭವವಾಗಬಾರದು. ತನ್ನ ಸ್ವಂತ ಮಹಿಮೆಯಲ್ಲಿ ನೆಲಿಸಿದುದು ಆಗಬೇಕು. ಆಗ ತನ್ನದು ಸ್ಥಲವೆಂದೆನ್ನೆ, ನಿಸ್ಥಲವೆಂದೆನ್ನೆ ನಿರ್ಣಯ

ವೆನಗಾದ ಬಳಿಕ ಏನೆಂದರಿಯೆನಯ್ಯ ಲಿಂಗೈಕ್ಯವೆನ್ನುವದು ಸರಿಯಾಗದು. ವಾಣಿಯೆ ನಾಚಿ ಹೋಗಿ ನಿರ್ವಾಣವಾದ ಬಳಿಕ ಉಸರುವದದೆಂತು ? ಕಲ್ಪಿತ ಅಕಲ್ಪಿತವೆಂಬ ಮನವೆ ನಷ್ಟವಾದಲ್ಲಿ ಇನ್ನೆನಿನ್ನೇನು? ಇದು ತನ್ನಿಂದ ತನ್ನ ಕಂಡ ಸ್ವಂತ ಸ್ವಮಹಿಮೆಯು. ಇದು ಉಪಮಿಸದ ನಿಲುವು, ಕಾಣದುದ ಕಂಡುದ ಊಹಿಸಿ ಹೇಳಲು ಬಾರದ ಧಾಮ. ಈ ಪರಮಧಾಮ, ವೇದ ವೇಧಿಸಲರಿಯದುದು. ಬಣ್ಣಿಸುವದೆಲ್ಲ ಗಗನ ಕುಸುಮ ಬಂಜಿಮಗನ ಸರಿ ಆಗುವುದು. ಇದು ಕಾರಣ ತನ್ನಿಂದ ತನ್ನಂ ನೋಡುವುದು, ಇದುವೆ ನೋಡದ ನೋಟ ಗುರುವಿಲ್ಲದ ಕೂಟ. ಲಿಂಗವಿಲ್ಲದ ಮಾಟ, ಬೆರಸಲಿಲ್ಲದ ಬೆರಗು, ಇದು ಕಾರಣ ಏನೊಂದರಿಯೆನಯ್ಯ ಎಂದು ಹೇಳಿದುದು .

ಏನೊಂದರಿಯಲು ಇಂಬಿಲ್ಲದಿರುವಲ್ಲಿ, ಲಿಂಗೈಕ್ಯವೆನ್ನಲು ಬರದು ಎಂದು ಬಿತ್ತರಿಸಿದುದು . ಈ ನಿರ್ಣಯ ತನ್ನದಾಗಬೇಕು. ತಾನಾಗಬೇಕು. ಆಗ ಷಟ್‌ಸ್ಥಲ ಹಂಗು ಹರಿದುದು, ನಿಸ್ಥಲವೆಂಬ ಹಂಗು ಹರಿದುದು ಲಿಂಗೈಕ್ಯವೆನ್ನುವ ಹಂಗು ಹರಿದ ನಿರ್ಣಯ ತನಗಾದ ನಿರ್ಣಯ. ಉಪಮಿಸದ ನಿರ್ಣಯ, ಸುಖದ ಸುಖಿ ಆದನೆಂತು ವರ್ಣಿಸುವುದು.

166

ವಾಙ್ಮನಕ್ಕ ಗೋಚರ ಲಿಂಗ, ಅಗೋಚರ ಶರಣ
ಸಕಾಯ ಲಿಂಗ, ಅಕಾಯ ಶರಣ
ಆದಿ ಲಿಂಗ, ಅನಾದಿಶರಣ, ಪೂರ್ವಿಕ ಲಿಂಗ
ಅಪೂರ್ವಿಕ ಶರಣ, ಇದು ಕಾರಣ
ಕೂಡಲಚೆನ್ನಸಂಗಯ್ಯನಲ್ಲಿ ಅಚ್ಚಲಿಂಗೈಕ್ಯ ಪ್ರಭುದೇವ. ॥ 1613 ॥

ತಾತ್ಪರ್ಯ: ವಾಙ್ಮನಕ್ಕೆ ಗೋಚರ ಲಿಂಗ, ಅಗೋಚರ ಶರಣ : ಶರಣನ ವಾಕ್ ಮನಕ್ಕೆ ಗೋಚರ ಲಿಂಗ, ಅಗೋಚರ ಶರಣ ,ಆರು? ಅಚ್ಚಲಿಂಗೈಕ್ಯ , ಪ್ರಭುದೇವರೆ ಅಗೋಚರ ಶರಣ. ಈ ಮಹಾಂತನ ವಾಕ್ ಮನಸ್ಸಿಗೆ ಗೋಚರ ಲಿಂಗ. ಇದು ಕಾರಣ 'ಕೆರೆಹಳ್ಳ, ಬಾವಿ ಮೈದೆಗದರೆ ಗುಳ್ಳೆ ಗೊರಚೆ ಕಾಣಬಹುದು. ವಾರಿಧಿ ಮೈದೆಗೆದರೆ ಮುತ್ತು ರತ್ನಂಗಳ ಕಾಣಬಹುದು, ಕೂಡಲ ಸಂಗನ ಶರಣರು ಮನದೆರೆದು ಮಾತನಾಡಿದರೆ ಲಿಂಗವ ಕಾಣಬಹುದು ' ಎಂದಂತೆ ಅಗೋಚರಶರಣ, ಅಪ್ರಮಾಣ ಶರಣ ಅಚಿಂತ್ಯ ಶರಣ ಮನದೆರೆದು ಮಾತನಾಡಿದರೆ ಲಿಂಗವ ಕಾಣಬಹುದು.

ಶರಣ ಮನೆದೆರೆದು ಮಾತನಾಡಿದುದೆ, ವಾಙ್ಮನಕ್ಕಗೋಚರ ಲಿಂಗವಾಗಿದೆ. ಅವರು ಮನದೆರೆದು ಮಾತನಾಡಿದ ಪರಿ ಆವುದು?

''ಅರಿದಿಹೆನೆಂದಡೆ ಅರುಹಿಂಗಸಾಧ್ಯ ನೆನೆದಿಹೆನೆಂದಡೆ ನೆನಹಿಂಗಸಾಧ್ಯ , ಭಾವಿಸಿಹೆನೆಂದಡೆ ಭಾವಕ್ಕಸಾಧ್ಯ ,ವಾಙ್ಮನಕ್ಕಗೋಚರವ ನರಿವ ಪರಿ ಎಂತಯ್ಯ ಗುರು ತೋರದನ್ನಕ್ಕರ. ಗುರು ಶಿಷ್ಯರ ಮಧ್ಯದಲ್ಲಿ ಸ್ವಯಂಜ್ಯೋತಿ ಉದಯವಪ್ಪುದೆಂಬ ಶೃತಿಯು ಹುಸಿಯೆ? ಕೂಡಲಸಂಗಮದೇವಾ ನಿಮ್ಮ ಮಹಾನುಭಾವ ಮಥನದಿಂದ ನಿಜವ ನೆಲಿಗೊಳಿಸಾ ಪ್ರಭುವೆ''.

ಓ! ಪ್ರಭುವೆ ನಿಮ್ಮ ಮಹಾನುಭಾವದ ಮಥನವೆ ನಿಜ ನೆಲೆಗೊಳಿಸುವ ಪರಿ. ಅದುವೆ ವಾಙ್ಮನಕ್ಕಗೋಚರ ಲಿಂಗವಾಗಿದೆ. ನೀನು ಅಗೋಚರನಾಗಿರುವೆ , ಓ !ದೇವ ದೇವ ಎಲ್ಲರ ವಾಕ್ಕಿನಂತೆ ನಿನ್ನ ವಾಕ್ ಅಲ್ಲ. ಎಲ್ಲರ ಮನಸ್ಸಿನಂಥ ನಿನ್ನ ಮನಸ್ಸಲ್ಲ. ಎಲ್ಲ ಶರಣರಂಥ ಶರಣನಲ್ಲ, ನಿನ್ನ ನುಡಿ ನುಡಿದು ನುಡಿಯದಂತಿದ್ದ ಸಂಜ್ಞೆ ನಿನ್ನ ಮನ, ಅರಸದ ಮನ, ಆರಾಧಿಸದ ಮನ ಚಿಂತಿಸದ ಮನ,

ನಿಶ್ಚಿಂತ ಮನ. ನೀನು ಮನಕ್ಕೆ ಬೋಧಿಸುವ ಗುರು ಮೂರ್ತಿಯು ನಿನ್ನದು ಅವರ್ಣೀಯ ನಿಲುವು ಅದನೆಂತು ಬಣ್ಣಿಸುವುದು.

ಎಲೆ ಮನವೆ, ನಿನ್ನ ನಿಜವ ತಿಳಿವುಡೆ ಆ ನಿನ್ನ ನಿಜವ ಹೇಳುವೆ ಕೇಳು. ಅದು ಕೇವಲ ಜ್ಯೋತಿ ವರ್ಣಾತೀತ ನೀನದ ನರಸುವಾಗ ನಿನಗಾವಲ್ಲಿ ನಿಶ್ಚಯ ತೋರಿತ್ತು. ಅದೀಗ ನಿನ್ನ ಪರಿಪೂರ್ಣತ್ವದ ನೆಲೆ. ಆ ನಿನ್ನ ನಿಜವ ನಿಶ್ಚೈಯಿಸಿ ನಿಗರ್ಮನಿಯಾದಲ್ಲಿ ಅದೆ ನಿನ್ನ ಸಮ್ಯಜ್ಞಾನದ ತೋರಿಕೆ ಆ ತೋರಿಕೆಯ ಅಖಂಡ ಬೆಳಗಿನ ಹೊಳಹಿನೊಳಗೆ ನೀ ನಮ್ಮ ಗುಹೇಶ್ವರ ಲಿಂಗದ ಶ್ರೀ ಚರಣವ ಸ್ಮರಿಸಿಕೊಂಡು ನಿಶ್ಚಿಂತ ನಾಗಲೆ ಮನವೆ.

ಇದು ಶರಣನ ವಾಕ್ ಮನಸ್ಸು, ಈ ವಾಕ್ಕಿಗೆ ಮನಸ್ಸಿಗೆ ಗೋಚರವಾದುದು ಲಿಂಗ, ಶರಣನ ವಾಕ್ ಪ್ರಪಂಚದ ವಾಕ್ ಅಲ್ಲ, ಪರಮಾರ್ಥದ ವಾಕ್ ಅಲ್ಲ, ಇವೆರಡಕ್ಕೂ ಮೀರಿ ನಿಂದ ನಿಲುವುಳ್ಳ ವಾಕ್ ಆದುದರಿಂದ ಅದು ಕೇವಲ ಜ್ಯೋತಿ ಎಂದು ಸಂಜ್ಞೆ ಮಾಡಿದುದಲ್ಲದೆ ಅದು ವರ್ಣಾತೀತ ಎಂದು ಅನುವ ಕರುಣಿಸಿದುದು. ಇದಲ್ಲದೆ ಎಲೆ ಮನವೆ ನೀನದ ಹುಡುಕುವೆ ಎಂದಲ್ಲಿ ನಿನಗಾವಾಗ ನಿಶ್ಚಯ ತೋರಿತ್ತು. ಎಂದು ಮನಕ್ಕೆ ಬೋಧಿಸಿ ಮನವನ್ನು ಪ್ರವೃತ್ತಿ ನಿವೃತ್ತಿಯಿಂದ ವಿಮುಖ ಮಾಡಿ, ತನ್ನ ನೋಡಲು ಹಚ್ಚಿ, ನಿಗರ್ಮನ ಮಾಡಿದೆ, ಹುಡುಕದಂತೆ ಮಾಡಿದೆ, ಚಿಂತಿಸದ ಮನ ಮಾಡಿ ಅಚಿಂತ್ಯ ಘನವನ್ನೆ ಮಾಡಿದೆ , ಇದು ಶರಣರ ವಾಕ್ ಶರಣರ ಮನಸ್ಸು. ಈ ವಾಕ್ ಮನಸ್ಸಿಗೆ ಗೋಚರ ಲಿಂಗವೆಂದು ಬಸವರಸರು ಹೇಳಿದುದು.

ಪ್ರಭುದೇವರ ವಾಕ್ ಮನಸ್ಸು ಕಾಣಬಹುದು. ಪ್ರಭುದೇವನ ಕಾಣುವುದು ಅಸಾಧ್ಯವಾದುದರಿಂದ ವಾಙ್ಮನಕ್ಕೆ ಗೋಚರ ಲಿಂಗ, ಅಗೋಚರ ಶರಣ ಬಿತ್ತರಿಸಿದುದು. ಪ್ರಭುದೇವರ ಸ್ವಾನುಭವ ರೂಪಿ ವಾಕ್ ಜ್ಯೋತಿಯು ಕಾಣುತ್ತೇವೆ. ಆತನು ಅರಸಿ ಕಾಣಬಾರದ ಮನ, ಅಕಲ್ಪಿತ, ಅಚಿಂತ್ಯವೆಂಬ ಮನದ ಸಂಜ್ಞೆಯು ಕಾಣುತ್ತೇವೆ. ಆ ಮಹಾಂತನು ವಾಕ್ ಆಗಲಿಲ್ಲ, ಏನೊಂದಾಗದ ಘನ ತನ್ನ ಸ್ವಂತ ಸ್ವಮಹಿಮೆಯಲ್ಲಿದ್ದ ಅನುಪಮನಾದುದರಿಂದ ಅಗೋಚರವೆಂದು ಹೇಳಿಹರು.

ಸಕಾಯ ಲಿಂಗ, ಅಕಾಯ ಶರಣ, ಶರಣನ ಕಾಯ ಸಕಾಯ. ಅದು ಸಕಾಯವಾದುದರಿಂದ ಲಿಂಗ. ಶರಣ ಅಕಾಯ, ಶರಣನ ಕಾಯ ಕಾಣಬಹುದು ಶರಣನ ಕಾಣುವುದು ಅಸಾಧ್ಯ. ಶರಣನ ಕಾಯ ಸಕಾಯ, ಅದು ಸದ್ ಜ್ಞಾನ ಭರಿತ ಕಾಯ, ಸತ್ ಸ್ವರೂಪವರಿತ ಕಾಯ. ಅದು ಸತ್, ಅಸತ್ ಎಂಬ ವಿಭಾಗದೃಷ್ಠಿಯಿಂದುಕ್ತವಾದುದಲ್ಲ. ಅದು ಸತ್, ಅಸತ್ ಎಂಬುದಕ್ಕೂ ಮೀರಿದ ತತ್ವವರಿತ ಕಾಯವಾದುದರಿಂದ, ಅದು ಸಕಾಯ. ಅಖಂಡ ಜ್ಞಾನದಿಂದುಕ್ತವಾದ ಕಾಯ, ಚಿನ್ಮಯ ಕಾಯವಾದುದರಿಂದ ಸಕಾಯವೆಂದು ಹೇಳಿಹರು.

ಶರಣ ಅಕಾಯ ಎಂದು ಬಿತ್ತರಿಸಿದುದು ನೋಡುವುಡೆ, ಶರಣನು ಎಂಜಲಮಾತ ನುಡಿವ ರಂಜಕನಲ್ಲ, ಮಿಗೆ ಮಿಗೆ ಮೀಸಲು ತತ್ವವರಿತು, ಘನಕ್ಕೆ ಘನನಾದುದರಿಂದ, ಶಬ್ದವೆ ಮೀಸಲಾಗಿರುವದರಿಂದ ಶರಣನನ್ನು ಸಕಾಯ ದೃಷ್ಠಿಯಿಂದ ನೋಡ ಕೂಡದು. ಶರಣನನ್ನು ಪ್ರಾಪಂಚಿಕರು ನೋಡುವುದು ಒಂದುದೃಷ್ಠಿ. ಪರಮಾರ್ಥದವರು ನೋಡುವುದು ಒಂದು ದೃಷ್ಠಿ. ಇವೆರಡಕ್ಕು ಮಿಕ್ಕಿ ಮೀರಿ ನಿಂದ ನಿಲುವುಳ್ಳ ಮಹಾಂತನ ಕಾಣುಫದೆಂತು ಸಾಧ್ಯ. ಆವಾವುದಕ್ಕೂ ಅಸಾಧ್ಯವಾದುದರಿಂದ ಶರಣ ಅಕಾಯನೆಂದು ಹೇಳಿಹರು.

ಕಾಯಧಾರಿಯ ಕಾಣಬಹುದು, ಕಾಯವೆ ನಷ್ಟವಾದವನ ಕಾಣುವದದೆಂತು? ದೃಶ್ಯವ

ಕಾಣುವದು ಸಹಜ, ಅದೃಶ್ಯನ ಕಾಣುವದದೆಂತು ? ಇದು ಕಾರಣ ಅಕಾಯ ಶರಣನೆಂದು ಹೇಳಿಹರು.

ಆದಿ ಲಿಂಗ, ಅನಾದಿ ಶರಣ, ಸೃಷ್ಠಿಗಿಂತ ಪೂರ್ವದಲ್ಲಿದ್ದುದು ಲಿಂಗ. ಸೃಷ್ಠಿ ತೋರುತ್ತದೆ ಲಯವಾಗುತ್ತದೆ. ಪಿಂಡಾಂಡ, ಬ್ರಹ್ಮಾಂಡ, ತೋರುತ್ತದೆ ಲಯವಾಗುತ್ತದೆ. ಆವುದು ನಾಮ ರೂಪಕ್ಕಾಧಾರ ಅಧಿಷ್ಠಾನವಾಗಿದೆ ಅದು ಆದಿಯಾಗಿದೆ ಅಂದರೆ ಮೊದಲೆ ಇದ್ದುದಾಗಿದೆ. ಅದಕ್ಕೆ ಸತ್ ಎಂದು ಚಿತ್ ಎಂದು ಆನಂದವೆಂದೂ ಪೂರ್ಣವೆಂದು ಸ್ವಪ್ರಕಾಶವೆಂದು ಹೇಳಿಹರು. ಪಿಂಡಾಂಡ ಬ್ರಹ್ಮಾಂಡಕ್ಕಿಂತ ಮುನ್ನವೆ ಲಿಂಗವಿದ್ದುದರಿಂದ ಆದಿ ಲಿಂಗವಾಗಿದೆ. ಇದು ಸತ್ ಸ್ವರೂಪವಾಗಿದೆ. ನಾಮರೂಪವುಳ್ಳ ಪಿಂಡಾಂಡ ಬ್ರಹ್ಮಾಂಡ ಅಸತ್ ರೂಪಾಗಿ ಮಿಥ್ಯಾರೂಪವಾಗಿದೆ. ತೋರಿ ಇಲ್ಲವಾಗುವದಕ್ಕೆ ಮಿಥ್ಯಾರೂಪವೆಂದು, ಸತ್‌ಸ್ವರೂಪವಾದ ಲಿಂಗದೃಷ್ಠಿಗೆ, ಇದು ಇಲ್ಲವೆ ಇಲ್ಲವಾದುದರಿಂದ ಅಸತ್ ರೂಪವು ನಾಮರೂಪವೆಂದು ಹೇಳಿದೆ.

ಲಿಂಗವು ಸೃಷ್ಠಿಗಿಂತ ಪೂರ್ವದಲ್ಲಿದ್ದುದು ಎಂದು ಹೇಳಲು ಬರುವದರಿಂದ, ಆದಿ ಲಿಂಗವೆಂದು ಹೇಳಿಹರು. ಶರಣನನ್ನು ಸೃಷ್ಠಿಗಿಂತ ಪೂರ್ವದಲ್ಲಿದ್ದವ ನೆನ್ನಲು ಬರದು. ಲಿಂಗಸ್ವರೂಪನೆನ್ನಲು ಬರದು. ನುಡಿಗೆಡೆಗೊಡದ ಘನಮಹಿಮನ ದಿವ್ಯದೃಷ್ಠಿಗೆ ಜಗವು ಕಾಣಲೊಲ್ಲದು, ಇತ್ತ ಆದಿ, ಲಿಂಗವು ಕಾಣದುದು, ಕಾಣದುದು ಕಂಡ ಘನ ಮಹಿಮಂಗೆ ಅಂಗವೆಂಬುದು ನಿರ್ನಾಮ, ಲಿಂಗವೆಂಬುದು ನಿರ್ನಾಮವಾದವಂಗೆ ವರ್ಣಿಸುವುದದೆಂತು? ಇದು ಕಾರಣ ಅನಾದಿ ಶರಣ ಎಂದು ಹೇಳಿಹರು. ಪೂರ್ವಿಕ ಲಿಂಗ, ಅಪೂರ್ವಿಕ ಶರಣ. ಲಿಂಗವು ಪೂರ್ವದಿಂದಲೂ ಇದ್ದುದು ಎಂದು ಹೇಳಬಹುದು. ಈಗಲು ಇದೆ ಮುಂದೆಯು ಇದೆ, ಎಂದೆಂದೂ ಇದೆ, ಎಂದು ಹೇಳಬಹುದು. ಇದು ಸಚ್ಚಿದ್ರೂಪವಾಗಿ ಇದ್ದುದರಿಂದ, ಇದಕ್ಕೆ ಅಕ್ಷರವೆಂದು ಹೇಳಿದೆ. ಇದು ನಾಶರಹಿತ ತತ್ವವಾದ್ದರಿಂದ ಪೂರ್ವಿಕ ಲಿಂಗವೆಂದು ಹೇಳಿದೆ.

ಅಪೂರ್ವಿಕ ಶರಣ ಲಿಂಗವರಿತು ಲಿಂಗಕ್ಕೆ ಲಿಂಗವಾಗಿಹ ಮಹಾಂತ. ಸಚ್ಚಿದ್ರೂಪವರಿತು ನಿಜ ಚಿದ್ರೂಪವಾಗಿಹ ಸ್ವಮಹಿಮ. ಸಚ್ಚಿದ್ರೂಪ ಲಿಂಗ ಜಗತ್ತಿಗೆಲ್ಲ ಬೆಳಗುವ ಜ್ಯೋತಿಯಾದರೆ,ಶರಣಂಗೆ ತನ್ನಿಂದ ಬೆಳಗಿಸಿಕೊಳ್ಳುವ ಜ್ಯೋತಿಯಾಗಿಹುದು. ಲಿಂಗ ಬೆಳಗುವ ಜ್ಯೋತಿಯಾದರೆ ಶರಣ ಬೆಳಗಿನ ಬೆಳಗು. ಬೆಳಗುಳ್ಳ ಬೆಳಗು. ಲಿಂಗ ಘನವಾದರೆ ಶರಣ ಘನಕ್ಕೆ ಘನನು. ಲಿಂಗವೆಂಬುದು ಶಬ್ದವೇದಿಯಾದರೆ, ಶರಣ ನಿಃಶಬ್ದ ವೇದಿಯಾಗಿಹನು. ಲಿಂಗವು ಲಕ್ಷಣ, ಲಕ್ಷ್ಯ ಅಲಕ್ಷ್ಯವೆಂಬ ಸಂಕೇತದಿಂದುಕ್ತವಾದರೆ, ಶರಣ ಉಸುರುವುದಕ್ಕೆಲ್ಲ ಮಿಕ್ಕಿ ಮೀರಿ ನಿಂತು ತನ್ನ ಸ್ವಂತ ಮಹಿಮೆಯಲ್ಲಿ ತಾನಿದ್ದ ಘನವ ನೇನೆಂಬೆ. ಇದು ಕಾರಣ ಶರಣ ತನ್ನ ಸ್ವಮಹಿಮೆಯಲ್ಲಿ ಮಗ್ನನಾಗಿಹ ಮಹಾಂತಂಗೆ ಏನನ್ನುವದು? ಇದು ಕಾರಣ ಅಪೂರ್ವಕ ಶರಣನೆಂದು ಹೇಳಿಹರು.

ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ ಅಚ್ಚ ಲಿಂಗೈಕ್ಯ ಕಾಣಾ. ಚೆನ್ನ ಬಸವರಾಜದೇವರು, ಪ್ರಭು ದೇವರನ್ನು ಕೂಡಲಚೆನ್ನಸಂಗಯ್ಯನಲ್ಲಿ ಅಚ್ಚ ಲಿಂಗೈಕ್ಯ ಪ್ರಭುಗಳು ಎಂದು ಕೊಂಡಾಡಿಹರು.

167

ತಾನೆ ಜಗ, ಜಗವೆಲ್ಲ ತಾನೆಂದರಿದ ಘನವೇದ್ಯನ
ಭೇದ ರೂಪವಾಗಿ, ಅನ್ಯವಿಲ್ಲದನ್ಯವ ನರಿಯಲೆಲ್ಲಿಯದೊ?
ನಿರಂಜನ ನಿಜ ಚಿದ್ರೂಪ ತಾನಾಗಿ ಅರುವು ತಾನೆಂಬ
ಮಮತೆಗೆಡೆಯಲ್ಲಿಯದೊ? ಅನ್ಯವೆನ್ನದ
ತಾನೆನ್ನದಳಿದುಳಿಮೆಯನುಪಮಿಸಬಹುದೆ?
ಅನುಪಮ ಸುಖ ಸಾರಾಯ,

ಕೂಡಲಚೆನ್ನಸಂಗಾ ನಿಮ್ಮ ಶರಣ. ॥ 1303 ॥

ತಾತ್ಪರ್ಯ : ತಾನೆ ಜಗ, ಜಗವೆಲ್ಲ ತಾನೆಂದರಿದ ಘನ ವೇದ್ಯನ ಭೇದರೂಪನಾಗಿ ಅನ್ಯವಿಲ್ಲ ದನ್ಯವನರಿಯಲೆಲ್ಲಿಯದೊ : ಘನ ವೇದ್ಯನೆಂದರೆ, ತಿಳಿಯಬೇಕಾದುದನ್ನು ತಿಳಿದವನೆ ಘನವೇದ್ಯ. ತಿಳಿಯಬೇಕಾದುದು ಆವುದು? ತನ್ನನ್ನು ಜಗತ್ತನ್ನು ತಿಳಿದಲ್ಲಿ ತಾನೆಂಬುದು ಜಗ, ಜಗವೆಂಬುದು ತಾನೆ. ಎಂದರಿದುದೆ ತಿಳಿಯಬೇಕಾದುದು. ಈ ಘನವೇದ್ಯನ ಭೇದ ರೂಪನಾಗಿ ಈತನದು ದಿವ್ಯ ದೃಷ್ಠಿ ನಿಸ್ಸೀಮ ದೃಷ್ಠಿ .ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದ ಮಹಾಂತ. ಈ ಮಹಾಂತ ಕಾಯ ನಾನೆನ್ನುವ ಕರ್ಮಕಾಂಡಿ ಹೇಗಾಗುವನು, ಈಶಾರ್ಪಣ ಮಾಡುವ ಭಕ್ತನೂ ಆಗನು. ಸಕಲ ಕರ್ಮಗಳಿಗೆ ಬೇರಾಗಿರುವ ಸಾಕ್ಷಿ ನಾನೆನ್ನುವ ಜ್ಞಾನ ಕಾಂಡಿಯು ಆಗನು. ಕಾಂಡತ್ರಯಂಗಳಿಗೆ ಮೀರಿದ ಅಖಂಡ ಎಲ್ಲೆಲ್ಲೂ ತನ್ನನ್ನೆ ಕಂಡ ಸ್ವಯಂಜ್ಯೋತಿ. ಈ ಸ್ವಯಂಜ್ಯೋತಿ ತನ್ನಿಂದ ತನ್ನ ಕಂಡುದು, ತಾನು ಅಖಂಡವಾದುದರಿಂದ ತನ್ನ ದೃಷ್ಠಿಗೆ ತೋರುವ ಜಗವು ತಾನೆ ತನ್ನೊಳ ಅರಸಿಕೊಳ್ಳುವ ಆನಾತ್ಮವಿಲ್ಲ ಅರಿಯುವ ದೃಕ್‌ರೂಪ ಆತ್ಮನೆಂಬುದಿಲ್ಲ, ಅರಿದರುಹಿಸಿ ಕೊಂಬುದಕ್ಕೆ ಮೀರಿದ ಪರತತ್ವವರಿತ ಘನವೇದ್ಯ. ಈ ಘನಮಹಿಮಂಗೆ ತಾನು ಘನ, ತನ್ನ ಹೊರ್ತು ಏನನ್ನು ಕಾಣದ ಪರಿಪೂರ್ಣನಾದ್ದರಿಂದ ತಾನೆ ಜಗ, ಜಗವೆಲ್ಲ ತಾನೆಂದರಿದ ಘನವೇದ್ಯನೆಂದು ಹೇಳಿಹರು.

ಅಭೇದ ರೂಪ ಸಮತೆ ಸಯವಾದ ಶರಣಂಗೆ ಅರುವು ಮರವುಗಳುಂಟೆ? ಉಪಮೆ ನಿಸ್ಥಲವಾದ ಶರಣಂಗೆ ಶಬ್ದ ಸಂದಣಿಯುಂಟೆ? ಅಖಂಡಿತ ಲಿಂಗಕ್ಕೆ ಅಪ್ರಮಾಣ ಶರಣಂಗೆ ಸೀಮೆ ಸಂಬಂಧವೆಂಬ ಸಂಕಲ್ಪವುಂಟೆ? ತಾನೆ ಜಗ, ಜಗವೆಲ್ಲ ತಾನೆಂದರಿದ ಘನವೇದ್ಯ, ಸಮತೆ ಸಯವಾದ ಮಾಹಂತ, ದೃಶ್ಯ ದೃಕ್ ಎಂಬ ವಿಭಾಗ ದೃಷ್ಠಿಯಿಲ್ಲದ ಘನವೇದ್ಯ. ಅಂಗ ಲಿಂಗವೆಂಬ ಶಬ್ದ ಸಂದಣಿ ಕಾಣದ ನಿಃಶಬ್ದವೇದಿ ಯಾದುದರಿಂದ ಅನ್ಯವಿಲ್ಲ ದನ್ಯವರಿಯಲೆಲ್ಲಿಯದೊ? ಎಂಬ ಮಹದರುವು ಆತನ ನಿಜಧಾಮವಾಗಿದೆ.

ತನ್ನ ಹೊರ್ತು ಏನನ್ನು ಕಾಣದ ಘನಗಂಬೀರ ಮಹಾಘನವರಿತ ಘನಕ್ಕೆ ಘನನಾಗಿಹ ವೇದ್ಯ. ಆ ಶರಣನ ದಿವ್ಯ ದೃಷ್ಠಿಯಲ್ಲಿ ತನ್ನ ವಿನಃ ಅನ್ಯವಾವುದು ಇಲ್ಲ. ಅನ್ಯವೆ ಇಲ್ಲದಿರುವಾಗ ಅರಿಯುವದೆಲ್ಲಿಯದು. ತನ್ನ ಅಭೇದ ರೂಪ ಉಪಮಿಸದ ರೂಪ! ಅಲ್ಲಿ ಶಬ್ದ ಸಂದಣಿಗಿಂಬಿಲ್ಲದಿರುವದರಿಂದ ಜಗವಾಗಿ ಕಂಡರೂ ತಾನೆ ಜಗವೆಲ್ಲವು ತಾನೆಂದರಿತವನಾದುದರಿಂದ ಘನವೇದ್ಯನೆಂದು ಹೇಳಿದೆ. ತನ್ನ ತಾ ಅರಿತವಂಗೆ ಜಡವೆಂಬುದು ದೂಷಿತವಲ್ಲ. ಅಜಡವೆಂಬುದು ಪ್ರಿಯವಾದುದಿಲ್ಲ. ಸಾಕಾರ ದೂಷಿತವಲ್ಲ ನಿರಾಕಾರ ಪ್ರಿಯವಾದುದಿಲ್ಲ ಅವಿದ್ಯೆ ದೂಷಿತವಲ್ಲ ವಿದ್ಯೆ ಪ್ರಿಯವಾದುದಿಲ್ಲ . ಏಕೆಂದರೆ ಇವುಗಳು ಇಲ್ಲ. ಇಲ್ಲಾದುದಿಲ್ಲಾ ದುದೆಂದಿಪ್ಪುದು, ಇಲ್ಲಾದುದಿಲ್ಲಾದುದೆಲ್ಲಿಪ್ಪುದು ತಾನೊಂದು ಸತ್ಯ, ಎಲ್ಲೆಲ್ಲೂ ತನ್ನನ್ನೆ ಕಾಣುವದರಿಂದ ಅಜ್ಞಾನಿಗಳ ದೃಷ್ಠಿಯಲ್ಲಿ ಜಡ ಜಗತ್ತು ಕಂಡರೂ ತಾನೆ, ಜಿಜ್ಞಾಸುಗಳ ದೃಷ್ಠಿಯಲ್ಲಿ ಕಂಡ ಅಜಡವೂ ತಾನೆ. ಉಪಾಸಕರ ದೃಷ್ಠಿಯಲ್ಲಿ ತೋರುವ ಸಗುಣ ದೇವನು ತಾನೆ. ಜ್ಞಾನಿಗಳ ದೃಷ್ಠಿಯಲ್ಲಿ ತೋರುವ ನಿರ್ಗುಣ ತಾನೆ. ಇವರುಗಳ ದೃಷ್ಠಿಯಲ್ಲಿ ಇದ್ದುದೊಂದೆ ತತ್ವ. ಬೇರೆ ಬೇರೆಯಾಗಿ ಕಂಡರೂ, ನಿಸ್ಸೀಮನ ದೃಷ್ಠಿಯಲ್ಲಿ ಇದ್ದುದೊಂದೆ ತತ್ವ ಬೇರೆ ಬೇರೆಯಾಗಿ ಕಂಡರೂ ನಿಸ್ಸೀಮನ ದೃಷ್ಠಿಯಲ್ಲಿ ಎಲ್ಲೆಲ್ಲೂ ತಾನೆ ತೋರುವನು ಎಂದು ಹೇಳಿದೆ.

ನಿರಂಜನ ನಿಜ ಚಿದ್ರೂಪ ತಾನಾಗಿ , ಅರುವು ತಾನೆಂಬ ಮಮತೆಗೆಡೆಯೆಲ್ಲಿಯದೊ? ನಿರಂಜನ ನಿಜ ಚಿದ್ರೂಪ ತಾನಾಗಿಹ ಯತಾರ್ಥ ಜ್ಞಾನಿಗಳು ಸಿಕ್ಕುವುದು ವಿರಳ . ಈ ಪರಮಜ್ಞಾನ

ಶಬ್ದಸೂತಕಿಗಳದಲ್ಲ, ಶ್ರವಣ ಮನನ ನಿಧಿಧ್ಯಾಸವಂತರದಲ್ಲ, ಕಲ್ಪಿತ ಪುರುಷನಿಗೆ ಒಳಪಟ್ಟಜ್ಞಾನವಲ್ಲ ಮಿಗೆ ಮಿಗೆ ಮೀಸಲ ತತ್ವವರಿತವರ ಜ್ಞಾನ, ಎಂಜಲ ಮಾತ ನುಡಿವರ ಜ್ಞಾನವಲ್ಲ. ಇಲ್ಲಿತನು, ಇಂದ್ರಿ, ಪ್ರಾಣ, ಮನ, ಬುದ್ಧಿ, ಅಹಂಕಾರ ನಷ್ಟವಾದವರು, ನೀನೆಂಬುದು ನಷ್ಟವಾದವರು, ಸೋಹಂ ನಷ್ಟವಾದವರು, ಕಾಣುವ ಮಿಗೆ ಮಿಗೆ ಮೀಸಲವಾಗಿಹ ಪರತತ್ವ, ಏನೆಂದೆನಲಿಲ್ಲದ ಅರುವು. ತಾನಾದವಂಗೆ ಅರುವು ತಾನೆಂಬ ಮಮತೆಗೆಡೆಯೆಲ್ಲಿಯದು, ಅವಸ್ಥಾ ತ್ರಯಂಗಳಾದರೂ ಎಲ್ಲಿ? ಅಥವಾ ತೋರಿಯವೆಲ್ಲಿ?

ಅನ್ಯವೆನ್ನದ ತಾನೆನ್ನದಳಿದುಳುಮೆಯ ನುಪಮಿಸಬಹುದೆ ? ಅನುಪಮಸುಖ ಸಾರಾಯ ಕೂಡಲಚೆನ್ನ ಸಂಗಾ ನಿಮ್ಮ ಶರಣ ಉಪಮಾತೀತ ; ಕೂಡಲಚೆನ್ನಸಂಗಾ ತನಗಿಂತ ಅನ್ಯವೆನ್ನದವನು ತಾನೆನ್ನದವನು ಶರಣನ ದೃಷ್ಠಿಯಲ್ಲಿ ಭಿನ್ನ ದೃಷ್ಠಿಗಿಂಬಿಲ್ಲ ಅಭಿನ್ನ ವೆಂಬುದಕ್ಕಿಂಬಿಲ್ಲದ ಅನುಪಮ. ಶಬ್ದ ಸಂಭ್ರಮದವನಲ್ಲ ಏನೆಂದುಸರಲು ಬಾರದ ನಿರಂಜನ ನಿಜ ಚಿದ್ರೂಪ ತಾನಾಗಿಹ ಮಿಗೆ ಮಿಗೆ ಮೀಸಲು ತತ್ವವರಿತ ಜ್ಞಾನ, ಇದು ಉಪಮಿಸದ ಜ್ಞಾನ. ಇದು ಉಳುಮೆ ಸ್ವರೂಪವೆಂದು ಕೆಲಬರು ಹೇಳಬಹುದು. ಶಬ್ದಕ್ಕಿಂಬಿಲ್ಲದುದರೋಳ್ ಶಬ್ದ ಮಾಡುವುದು ಎಂಜಲ ಮಾತು. ಉಳುಮೆ ಎಂಬುದು,ಮಾತಿನಿಂದ ಬಳಸುವದಲ್ಲ. ನೆನಹು ನಿರ್ಣಯಕ್ಕೂ ಒಳಪಟ್ಟುದಲ್ಲ. ಚಿಂತನಕ್ಕೆ ನಿಲುಕದ ಘನ, ಅದನ್ನು ಚಿಂತಿಸುವುದು ಹೇಗೆ? ಅದನ್ನು ಅಚಿಂತ್ಯವೆಂದು ಉಸುರುವದಾದರೂ ಹೇಗೆ? ಶೇಷ ಪ್ರಸಾದ ಉಪಮಿಸಬಹುದೆ? ಅದು ಅನುಪಮ ಸುಖ ಸಾರಾಯ. ನಿಮ್ಮ ಶರಣನೆಂದು ಹೇಳಿಹರು. ಸುಖವೆಂಬುದು ಉಪಮೆ ಕೊಡುವದಕ್ಕೂ ನಿಲುಕದು. ಅನುಪಮ ಸುಖಕ್ಕಾವ ಉಪಮೆ ತರುವದು? ತಾನೆ ಜಗ, ಜಗವೆಲ್ಲ ತಾನೆಂದರಿತ ಘನ ವೇದ್ಯ, ಇದುವೆ ಸಾರರೂಪವು ಇದುವೆ ಅನುಪಮಸುಖ ಸಾರಾಯ ಕೂಡಲಚೆನ್ನಸಂಗಾ ನಿಮ್ಮ ಶರಣ.

168

ತೆರೆಹಿಲ್ಲದ ಘನವು ಮನದೊಳಗೆ ನಿಂದು ನೆಲೆಗೊಂಡ ಬಳಿಕ
ಆ ಘನವ ತೆರೆಯ ಮರೆಯಲಡಗಿಸಿಹೆನೆಂದಡೆ ಅಡಗುವುದೆ!
ಹೇಮಗಿರಿಯ ಕದ್ದು ಭೂಮಿಯಲಡಗಿಸಿಹೆನೆಂದಡೆ
ಆ ಕಳವು ಸಿಕ್ಕದೆ ಮಾಣ್ಬುದೆ ಕೂಡಲಚೆನ್ನಸಂಗಾ ಶರಣ
ಪ್ರಭುವಿನಲ್ಲಿ ಬೆರಸಿದ ಸುಖವ ಮರಸಿಹೆನೆಂದಡೆ
ನಿನ್ನಳವೆ ಹೇಳಾ ಸಂಗನ ಬಸವಣ್ಣ. ॥ 1311 ॥

ತಾತ್ಪರ್ಯ : ತೆರಹಿಲ್ಲದ ಘನವು ಮನದೊಳಗೆ ನಿಂದು ನೆಲೆಗೊಂಡ ಬಳಿಕ, ತೆರೆಹಿಲ್ಲದ ಘನವರಿವುಡೆ ತಾನೆ, ತಾನು ಆವಾವುದಕ್ಕೂ ಅವಕಾಶ ಕೊಡದಂತಿದ್ದ ಘನ, ವಾಙ್ಮನಸ್ಸಿಗೆ ಸಂದು ಕೊಡದ ಘನ ಶಬ್ದಕ್ಕಿಂಬುಕೊಡದ ಘನ, ಶೃತಿಗಿಂಬುಕೊಡದ ಘನ, ಶೃತಿಯೆ ನಾಚಿಹೋಗಿ ಮೌನ ಧರಿಸಿದ ತನ್ನಿರುವು, ಇದು ಕಾರಣ ಭಾವಕ್ಕಿಂಬಿಲ್ಲ ಶಬ್ದ ಮೀಸಲು ನೋಡಾ ನುಡಿಗೆಡೆಯಿಲ್ಲ ಎಡೆಗೆ ಕಡೆಯಿಲ್ಲ ಗುಹೇಶ್ವರ ಲಿಂಗ ವೇಧಿಸಲೊಡನೆ ಎಂದು ಬಿತ್ತರಿಸಿದುದು.ತೆರೆಹಿಲ್ಲದ ಘನವದು ತನ್ನಿರುವು. ಅಲ್ಲಿ ಭಾವಕ್ಕಿಂಬಿಲ್ಲ ಶಬ್ದವೆ ಮೀಸಲಾಗಿರುವಲ್ಲಿ ನುಡಿಯಲು ಅವಕಾಶವೆಲ್ಲಿಯದು? ಮನದೊಳಗೆ ಈ ಪರಮಜ್ಞಾನ ದೃಢವಾಗಿ ನಿಲ್ಲಬೇಕು, ಅದುವೆ ಅಚಲವಾಗಬೇಕು. ಆಗ ಮನ ತೆರೆಹಿಲ್ಲದ ಘನವಾಗುವುದು, ತೆರಹಿಲ್ಲದ ಘನ ಮನದೊಳಗೆ ನಿಂದ ನೆಲೆಗೊಂಡ ಚಿನ್ಹವೆಂದರೆ, ಮನವು ಆವಾವ

ಕಲ್ಪಿತಕ್ಕೂ ನೆನಹಿಂಗು ನಿರ್ಣಯಕ್ಕೂ ಚಿಂತನಕ್ಕೂ ಅವಕಾಶ ಕೊಡದಿರುವುದು, ಏಕೆಂದರೆ ಭಾವಕ್ಕಗಮ್ಯವಾಗಿಹ ಘನವೆ ತನ್ನಿರುವು ಆಗಿರುವಲ್ಲಿ, ಸಕಲ ಭಾವಂಗಳು ನಷ್ಟವಾಗಬೇಕು. ಅಂಗ ಭಾವಿಯಾಗ ಬಾರದು, ಲಿಂಗ ಭಾವಿಯಾಗಬಾರದು, ನಾನೀನೆಂಬುವದಕ್ಕೂ ಎಡೆಗೊಡದೆ ತೆರಹಿಲ್ಲದ ಘನವಾಗುವುದು ಅಲ್ಲಿ ಮರವಿನ ಕ್ರಿಯೆಯಾದ ಅನಾತ್ಮ ಭಾವಕ್ಕೂ ಅರುವಿನ ಕ್ರಿಯೆವಾಗಿಹ, ಆತ್ಮ ಭಾವಕ್ಕೂ ಘನತ್ವ ಉಳಿಯಬಾರದು. ಇತ್ತ ಸತ್ಯ ಮಿಥ್ಯೆಗಳ ವಿಷಮ ಚಿಂತನಕ್ಕೂ ಇತ್ತ ಸಮ ಸ್ವರೂಪವಾಗಿಹ ಅಚಿಂತ್ಯನೆಂಬುದಕ್ಕೂ ಅವಕಾಶ ಕೊಡದಂತಿದ್ದುದು ತೆರೆಹಿಲ್ಲದ ಘನ ಗಂಭೀರತ್ವವು ಅಲ್ಲಿಯೆ ತೆರೆಹಿಲ್ಲದ ಘನವು ತನ್ನಷ್ಟಕ್ಕೆ ತಾನೆ ಪ್ರಜ್ವಲಿಸುವುದು.

ತೆರಹಿಲ್ಲದ ಘನ ಮನದೊಳಗೆ ನಿಂದು ನೆಲೆಗೊಳ್ಳಬೇಕಾದರೆ, ಇದಾವ ಮನವೆನಬೇಕು ? ಅವಿದ್ಯೆಯಿಂದುಕ್ತವಾದ ಮನವೆನ್ನಲೆ ? ಅಲ್ಲಾ ವಿದ್ಯೆಯಿಂದುಕ್ತವಾದ ಮನವೆನ್ನಲೆ! ಅಲ್ಲಾ ತೆರೆಹಿಲ್ಲದ ಘನವು ಆವಾವುದಕ್ಕೂ ಸಂದು ಕೊಡದೆ ತಾನೆ ತಾನಾಗಿ ಹೇಗೆ ನಿಸ್ಸೀಮವಾಗಿದೆ ಹಾಗೆ ಮನವಾದರೂ ಪ್ರವೃತ್ತ ಮನವಾಗದೆ, ನಿವೃತ್ತ ಮನವಾಗದೆ ಆವಾವ ಮನವಾಗದೆ ಇದ್ದಂತಿದ್ದುದೆ ಇದರ ಘನತ್ವ . ಅಲ್ಲಿಯೆ ತೆರೆಹಿಲ್ಲದ ಘನವು ಮನದೊಳಗೆ ನಿಂದು ನೆಲೆಗೊಂಡ ನಿಲಯ, ತೆರೆಹಿಲ್ಲದ ಘನವು ಹೇಗೆ ಅವರ್ಣನೀಯವೊ ಹಾಗೆ ಮನವು ಉಪಾಧಿಕ ಮನವಾಗದೆ, ಉಪಾಧಿರಹಿತ ಮನವಾಗದೆ ಅವರ್ಣನೀಯವಾದುದು ಅದನೆಂತು ಬಣ್ಣಿಸುವುದು. ಬಹು ಜಿಜ್ಞಾಸುಗಳು ಪ್ರವೃತ್ತಿ ಮನ ಸೇರದವರಾಗಿ ನಿವೃತ್ತಿ ಮನದ ಪ್ರಿಯರಾಗಿಹರು. ನಿವೃತ್ತಿ ಮನಕ್ಕೂ, ಮಿಕ್ಕಿ ಮೀರಿ ನಿಂತ ನಿಲುವುಳ್ಳರಾಗುವುದು ಅತಿ ವಿರಳ. ಏಕೆಂದರೆ ಇಲ್ಲಿ ಶಬ್ದವೆ ಮೀಸಲವಾಗಿದೆ. ಭಾವನೆ ಮಾಡಲು ಅವಕಾಶವಿಲ್ಲದಂತಾದುದರಿಂದ ಜಿಜ್ಞಾಸುಗಳಿಗೆ ತೆರಹಿಲ್ಲದ ಘನವಾದ ತಮ್ಮ ಸ್ವಯಪದ ಮನದಲ್ಲಿ ಚೆನ್ನಾಗಿ ಅಳವಡಿಸುವದು ಅಸಾಧ್ಯವಾಗಿದೆ. ಎಲ್ಲೋ ಕೆಲವರು ಮಾತ್ರ ಶಬ್ದಮೀಸಲಾಗಿದ್ದ ತಮ್ಮ ಸ್ವಯವಾಗಿಹ ಘನತತ್ವ ಅರಿದರಿದು ತಮ್ಮ ಸ್ವಮಹಿಮೆಯಲ್ಲಿ ನೆಲಿಸಿ ತೆರಹಿಲ್ಲದ ಘನ ಸುಖಿಗಳಾಗಿಹರು.

ತೆರಹಿಲ್ಲದಭವನ ಅರಿತವರು, ಶಬ್ದ ಸಂಭ್ರಮಕ್ಕೆ ನಿಲುಕದ ಪರತತ್ವವರಿತವರು. ಅವರು ಆವಾವ ಮನವಾಗದವರು, ಅವರದು ಅರಸದ ಮನ, ಚಿಂತಿಸದ ಮನ, ಚಿಂತನಕ್ಕೆಡೆಗೊಡದ ತೆರಹಿಲ್ಲದ ಘನ ತತ್ವ ಅಚಲವಾಗಿ ಪ್ರಜ್ವಲಿಸುತ್ತಿಹುದು. ಆ ಘನವು ತೆರೆಯ ಮರೆಯಲಡಗಿಸಿಹೆನೆಂದಡೆ ಅಡಗುವುದೆ? ಘನಕ್ಕೆ ಘನವಾಗಿ ಪ್ರಜ್ವಲಿಸುವ, ತನ್ನ ಸ್ವಮಹಿಮೆಯನ್ನು, ಈ ಮನದ ಸಂಕಲ್ಪ ವಿಕಲ್ಪರೂಪ ಅಲೆಗಳು ಮರವು ಮಾಡಿ ಕಾಣಿಸದಂತೆ ಮಾಡಬಹುದೆ? ಸೂರ್ಯನನ್ನು ಈ ವಿದ್ಯುದ್ದೀಪಗಳು ಸೂರ್ಯಪ್ರಕಾಶದ ಘನವ ಕಾಣದಂತೆ ಮರೆಮಾಡಿ ಕಾಣಿಸದಂತೆ ಮಾಡಬಹುದೆ ?

ಕೋಟಿ ಸೂರ್ಯರಿಗಿಂತಲೂ ಅಧಿಕವಾಗಿಹ, ತನ್ನ ತೆರಹಿಲ್ಲದ ಘನವಾಗಿಹ, ತನ್ನ ಸ್ವಮಹಿಮೆಯನ್ನು ಮನಸ್ಸಿನಿಂದ ಕಲ್ಪಿತವಾದ ಪ್ರಪಂಚದ ಭಾವವಿರಲಿ, ಪರಮಾರ್ಥದ ಭಾವವಿರಲಿ, ಈ ಭಾವಂಗಳು ತನ್ನ ಸ್ವಮಹಿಮೆಯಲ್ಲಿ ನೆಲಿಸಿದ ಮಹಾಂತಂಗೆ ತನ್ನ ಸ್ವಸುಖವ ಕಾಣದಂತೆ ಮಾಡಬಹುದೆ ? ಭಾವಕ್ಕಗಮ್ಯವಾದ ತನ್ನ ಸ್ವಮಹಿಮೆಯನ್ನು , ಭಾವಂಗಳು ಕಾಣದಂತೆ ಮಾಡಲರಿಯವು .

ಸ್ವಧರ್ಮಃ ಸ್ವ ಚ ವಾ ಕಾಮಃ ಸ್ವ ಚಾರ್ಥಃ ಸ್ವವಿವೇಕಿತಾ।
ಸ್ವದ್ವೈತಂ ಸ್ವ ಚ ವಾ ದ್ವೈತಂ ಸ್ವಮಹಿಮ್ನಿ ಸ್ಥಿತಸ್ಯ ಮೇ॥

ನನ್ನ ಸ್ವಂತ ಮಹಿಮೆಯಲ್ಲಿ ನೆಲಿಸಿರುವ ನನಗೆ ಧರ್ಮವೇನು, ಕಾಮವೇನು, ಅರ್ಥವೇನು

ವಿವೇಕವೇನು, ದ್ವೈತವೇನು, ಅದ್ವೈತವೇನು?

ಕ್ವಚಾತ್ಮಾ ಕ್ವ ಚ ವಾನಾತ್ಮಾ ಕ್ವಶುಭಂ ಕ್ವ ಶುಭಂ ತಥಾ
ಕ್ವಚಿಂತಾ ಕ್ವಚ ವಾಚಿಸ್ತ ಸ್ವಮಹಿಮ್ನಿ ಸ್ಥಿತಸ್ಯ ಮೇ॥ ಅಷ್ಟಾವಕ್ರಗೀತಾ

ನನ್ನ ಸ್ವಂತ ಮಹಿಮೆಯಲ್ಲಿ ನೆಲಿಸಿದ ನನಗೆ ಆತ್ಮವೇನು? ಅನಾತ್ಮವೇನು, ಶುಭವೇನು, ಅಶುಭವೇನು? ಚಿಂತೆಯೇನು, ಅಚಿಂತೆಯೇನು?

ತೆರಹಿಲ್ಲದ ಘನವಾದುದು ನನ್ನ ಸ್ವಂತ ಮಹಿಮೆಯು, ನನ್ನ ಮಹಿಮೆಯಲ್ಲಿ ನೆಲಿಸಿದ ನನಗೆ ಆತ್ಮ ಬುದ್ಧಿಯಿಂದ ನನಗಾದ ಲಾಭವಾವುದು? ದೇಹ ಬುದ್ಧಿಯಿಂದ ಹಾನಿಯಾದುದೇನು, ನಿಸ್ಸೀಮವಾದ ನನಗೆ ವಿಸ್ಮೃತಿ ಮಾಡಿದುದಿಲ್ಲ, ಸ್ಮೃತಿಯುಂಟು ಮಾಡಿದುದಿಲ್ಲ.

ಹೇಮಗಿರಿಯು ಕದ್ದು, ಭೂಮಿಯಲಡಗಿಸಿಹೆನೆಂದಡೆ: ಆ ಕಳವು ಸಿಕ್ಕದೆ ಮಾಣ್ಬುದೆ? ಸಣ್ಣ ಕಳವು ಆದಲ್ಲಿ ಭೂಮಿಯಲ್ಲಿ ಹುದುಗಿಸಿಡಲು ಬರುವುದು. ಹೇಮದ ಗುಡ್ಡವೆ ಕದ್ದ ಮೇಲೆ, ಅದನ್ನು ಭೂಮಿಯಲ್ಲಿ ಹೂಳಿಟ್ಟರೆ ಆ ಕಳುವು ಸಿಗದಿರಬಹುದೆ? ಸೋಹಂ ವೃತ್ಯಾತ್ಮಕಂ ಜ್ಞಾನವಾಗಲಿ ಚಿದಹಮ್ಮು ವೃತ್ಯಾತ್ಮಕಜ್ಞಾನ ಮರವೆಂಬ ಅಜ್ಞಾನದಲ್ಲಿ ಅಥವಾ ಅಜ್ಞಾನದ ಕಾರ್ಯವಾದ ವಿಷಯಾಕಾರ ವೃತ್ತಿಬಂದು ಕಾಣಗೊಡದಂತೆ ಮಾಡಬಹುದು. ವೃತ್ತಿರಹಿತವಾದ ಕೇವಲ ನಿರಂಜನ ನಿಜ ಚಿದ್ರೂಪವು ಶಬ್ದಕ್ಕಿಂಬುಕೊಡದ ಘನತತ್ವ ಅದು ಹೃದಯದಲ್ಲಿ ಪ್ರಜ್ವಲಿಸಿದಾಗ ಅದನ್ನು ಕೆಡಿಸುವದಾಗಲಿ ಕಾಣಗೊಡದಂತೆ ಮಾಡುವುದು. ಅದಾವ ವೃತ್ತಿಗೆ ಸಾಧ್ಯ ? ಹೇಮಗಿರಿ ಎಂಬುದು ಅಕ್ಷಯ ಸುಖರೂಪ ಸುಖದ ನಿಧಿ. ಅದನ್ನು ಕೆಡಿಸಲು ಅದಾವ ಮನಸ್ಸಿನ ವೃತ್ತಿಗೆ ಸಾಧ್ಯ ? ಆಕಾಶವನ್ನು ಅದಾವ ಮೋಡವ ಮುಟ್ಟುವದು. ಹಾಗೆ ನುಡಿಗೆಡೆಗೊಡದ ಘನವನ್ನು ಅದಾವ ಮನವು ಕಾಣಗೊಡದಂತೆ ಮಾಡುವುದು.

ಕೂಡಲಚೆನ್ನಸಂಗಾ ಶರಣ ಪ್ರಭುವಿನಲ್ಲಿ ಬೆರಸಿದ ಸುಖವ ಮರಸಿಹೆನೆಂದಡೆ ನಿನ್ನಳವೆ ಹೇಳಾ: ಸಂಗನ ಬಸವಣ್ಣಾ ಕೂಡಲಚೆನ್ನಸಂಗಾ ಶರಣ ಪ್ರಭುವಿನಲ್ಲಿ ಬೆರಸಿದ ಸುಖವದು ತೆರಹಿಲ್ಲದ ಘನ ಶರಣ ಪ್ರಭುವೆಂದು ತನ್ನ ಮನದೊಳಗೆ ತೆರೆಹಿಲ್ಲದ ಘನನಿಂದು ನೆಲೆಗೊಂಡುದೆ ಶರಣಪ್ರಭವು, ಅವರಲ್ಲಿ ಲೀನವಾದ ಬಳಿಕ ಪುನಃ ಆ ಸುಖವ ಮರಸಲು ಅದಾರಿಗೆ ಸಾಧ್ಯ? ಮರಸುವಂತೆ ಮಾಡುವುದು ಅದಾರಿಗೆ ಸಾಧ್ಯ ? ಅರಿಯುವಂತೆ, ಅರಿಯದಂತೆ ಮಾಡುವುದು ಅದಾರಿಗೆ ಸಾಧ್ಯ, ಒಮ್ಮೆ ತೆರಹಿಲ್ಲದ ಘನದಲ್ಲಿ ಮನವು ನೆಲೆಗೊಂಡ ಬಳಿಕ, ಅದನ್ನು ಕೆಡಿಸುವರಾರು? ಕೆಡಿಸಲು ಅದಾರಿಗೆ ಸಾಧ್ಯ ಹೇಳಾ ಸಂಗನಬಸವಣ್ಣಾ.

169

ಅಂತರಂಗದಲ್ಲಿ ಭಾವಿಸುವನಲ್ಲ, ಬಹಿರಂಗದಲ್ಲಿ ಬಳಸುವನಲ್ಲ
ಎರಡನತಿಗಳೆದು ತನ್ನಲ್ಲಿ ತಾನೆ ಸಹಜ ನೋಡಾ
ಅಂತರಂಗವಿಲ್ಲ, ಬಹಿರಂಗವಿಲ್ಲ, ಕೂಡಲಚೆನ್ನಸಂಗಾ ನಿಮ್ಮ ಶರಣಂಗೆ ॥ 908 ॥

ತಾತ್ಪರ್ಯ : ಅಂತರಂಗದಲ್ಲಿ ಭಾವಿಸುವನಲ್ಲ, ಬಹಿರಂಗದಲ್ಲಿ ಬಳಸುವನಲ್ಲ : ಅಂತರಂಗದಲ್ಲಿ ಭಾವಿಸದವನಾರು? ಬಹಿರಂಗದಲ್ಲಿ ಬಳಸದವನಾರು? ಆರಿಗೆ ಅಂತರಂಗವಿದೆ, ಅವರು ಭಾವಿಸುವುದು ಉಂಟು. ಆರಿಗೆ ಬಹಿರಂಗವಿದೆ ಅವರು ಬಳಸುವುದು ಉಂಟು, ಇಲ್ಲದವನು ಭಾವಿಸುವದದೆಂತು ? ಬಳಸುವದದೆಂತು ? ಆರು ಭ್ರಾಂತರು ಅವರಿಗೆ ಅಂತರಂಗವಿದ್ದುದರಿಂದ ಭಾವಂಗಳು ಉಂಟು. ಬಹಿರಂಗವಿದ್ದುದರಿಂದ ಬಳಸಲು ಇಂದ್ರಿಯಗಳು ಉಂಟು.

ಆರು ನಿಭ್ರಾಂತರು ಅವರಿಗೆ ಇಲ್ಲದ ಅಂತರಂಗವಿಲ್ಲ ಬಹಿರಂಗವಿಲ್ಲ ಅವರು ಭಾವಿಸುವುದು ಇಲ್ಲ ಬಳಸುವುದು ಇಲ್ಲ, ಭ್ರಾಂತರು ಆರು ನಿಭ್ರಾಂತರು ಆರು ?

ಕಲ್ಪಿತ ಪುರುಷ ತಾನೆಂದು ಒಪ್ಪಿಕೊಂಡವನು ಭ್ರಾಂತನು . ತೆರಹಿಲ್ಲದ ಘನ ತಾನೆಂದು ಒಪ್ಪಿಕೊಂಡವನು ನಿಭ್ರಾಂತನು, ಕಲ್ಪಿತ ಪುರುಷ ತಾನಾದುದರಿಂದ ಕಲ್ಪಿಸುವದೆ ಅವನ ಸ್ವಭಾವಕ್ಕನುಸಾರವಾಗಿ , ಇಲ್ಲದ ಅಂತರಂಗ ಕಲ್ಪಿಸುತ್ತಾನೆ , ನಾನಾ ಭಾವಂಗಳ ಭಾವಿಸುತ್ತಾನೆ. ಬಹಿರಂಗ ಕಲ್ಪಿಸುತ್ತಾನೆ , ಬಳಸುವುದು ಮಾಡುತ್ತಾನೆ . ಈ ಕಲ್ಪಿತನೆ ಬಹಿರಂಗ ಅಂತರಂಗವೆಂದು ಕಲ್ಪಿಸುವನು, ಇವನೆ ಶಬ್ದ ಸ್ಪರ್ಶ ರೂಪ ರಸ ಗಂಧಗಳೆಂಬ ಪಂಚ ವಿಷಯಂಗಳ ಕಲ್ಪಿಸಿ , ಪಂಚ ಜ್ಞಾನೇಂದ್ರಿಯಂಗಳ ಮೂಲಕ ಇಂದ್ರಿಯರಾಮನಾಗಿ ಬಳಸುವನು , ಇವುಗಳಭಿಮಾನಿಯಾಗಿ ಬಳಲುವ ಜೀವನು ಇವನೆ. ಇವನೆ ಹೆಣ್ಣೆಂದು ಮಣ್ಣೆಂದು ಹೊನ್ನೆಂದು ಕಲ್ಪಿಸಿ , ಇಂದ್ರಿಯಂಗಳ ಮುಖಾಂತರ ಬಳಸುವವನು ಇವನೆ ಅಂತರಂಗದಲ್ಲಿ ಭಾವಿಸುವವನು ಇವನೆ . ಮನೋ ಮೂಲಕ ನಾನಾ ಲೋಕಂಗಳ ಭಾವಿಸುವ ಇವನೆ . ಕಲ್ಪಿತ ಪುರುಷನು ದುರ್ಭಾವವುಳ್ಳವನು ಆಗಿಹನು.ಸದ್ಭಾವವುಳ್ಳವನು ಆಗಿಹನು, ದುರ್ಭಾವಗಳೆಂದಲ್ಲಿ ಜ್ಞಾನ ವಿಕೃತಿ , ವರ್ತನ ವಿಕೃತಿ , ಮೋಹನ ವಿಕೃತಿ ಭಾವಹೊಂದಿಹನು . ಮರವಿನಿಂದ ಅಹಂ ಎಂಬ ಜಡಭಾವದಿಂದ ಬ್ರಾಹ್ಮಣಾದ್ಯನೇಕ ಅಹಂಕಾರ ವುಳ್ಳವನಾಗಿಹುದೆ ಜ್ಞಾನ ವಿಕೃತಿ ಭಾವ, ಜಡಾಜಡ ಮಿಶ್ರಣದಿಂ, ನಾನಾ ಪ್ರಕಾರದಿಂದ ಅಲೆದು ವ್ಯವಹರಿಸುತ್ತಿರುವದೆ ವರ್ತನ ವಿಕೃತಿ ಭಾವ. ನಿಜವ ಮರೆತು ಜಡಭಾವದಿಂದ ಅಹಂ ಭಾವವನೊವ್ಮೆಯೂ , ಬಿಡದಿರುವುದು ಮೋಹನ ವಿಕೃತಿ ಭಾವ . ಅಂತರಂಗದಲ್ಲಿ ಭಾವಿಸುವವನಾಗಿಹನು . ಇದಲ್ಲದೆ ಪ್ರಕಾಶ, ಪ್ರವರ್ತನ, ಮೋಹನ ಇವು ಸದ್ಭಾವ ವೃತ್ತಿಯು. ಅರುವು ಮರವುಗಳಿಲ್ಲದೆ ಸದಾ ಬೆಳಗುವ ಸುಜ್ಞಾನ ಪ್ರಕಾಶವೆ ಪ್ರಕಾಶವೆಂಬ ಭಾವವು. ಸತ್ಯ, ಸದಾಚಾರ, ಸನ್ಮಾರ್ಗ, ಸದ್ವರ್ತನೆವಿಡಿದು ನಡೆವುದೆ ಪ್ರವರ್ತನೆಯೆಂಬ ಭಾವವು. ನಿರಿಚ್ಛೆಯಿಂದ ಪರಮಾತ್ಮನಲ್ಲಿ ಮೋಹವಿಡುವುದೆ ಮೋಹವೆಂಬ ಭಾವವು.

ಎರಡುವನತಿಗಳೆದು ತನ್ನಲ್ಲಿ ತಾನೆ ಸಹಜ ನೋಡಾ: ಜ್ಞಾನ ಅಜ್ಞಾನ ಎರಡೂ ಇಲ್ಲದ ನಿಜಪದದ ಸುಖದ ಸುಗ್ಗಿಯ ಬೆಳಸಿದ ರಾಶಿಯು ಆರಿಗೂ ತಿಳಿಯದು. ಆ ಸುಖವ ವರ್ಣಿಸುವದು ಅಸಾಧ್ಯ. ಇಂತಹ ನಿಜಪದದ ನಿಲವನ್ನು ಮಾಹಾಜ್ಞಾನಿಯಾದ ಶರಣನು ಸಮ್ಯಕ್ ದೃಷ್ಠಿಯಿಂದ ಕಂಡು ತೆರಹಿಲ್ಲದ ಘನವ ಮನದಲ್ಲಿ ಅಳವಡಿಸಿಕೊಂಡು ಸ್ವ ಸುಖಿಯಾಗಿಹನು.

ಶರಣ ಅಂತರಂಗ ಬಹಿರಂಗವೆಂಬ ಮಾಯಿಕ ದೃಷ್ಠಿಯುಳ್ಳವನಲ್ಲ , ನಿರ್ಮಾಯನಾದುದರಿಂದ ಎರಡನ್ನು ಕಾಣ , ನಿಸ್ಸೀಮ. ಅಖಂಡಿತ ಘನ ಪರಿಪೂರ್ಣವೆ , ತನ್ನಿರುವೆಂದರಿದ ಮಹಾಂತ. ನಿರಂಜನ ನಿಜ ಚಿದ್ರೂಪವೆ ತಾನಾಗಿಹ ಮಹಾಂತಂಗೆ ಅಲ್ಲಿ ಜೀವನೆಂಬುದಕ್ಕಿಂಬಿಲ್ಲ ಅಂತರಾತ್ಮನೆಂಬುದಕ್ಕಿಂಬಿಲ್ಲ, ಪರಮಾತ್ಮನೆಂಬುದಕ್ಕಿಂಬಿಲ್ಲ ಆವಾವುದಕ್ಕೂ ಇಂಬು ಕೊಡದ ಸ್ವಮಹಿಮ ಎರಡುವ ನತಿಗಳೆದು ತನ್ನಲ್ಲಿ ತಾನೆ ತಾನಾದ ಸಹಜ ನೋಡಾ.

ಶರಣ, ಅಕಲ್ಪಿತ ಘನ. ತನ್ನ ಸ್ವಮಹಿಮೆಯಲ್ಲಿ ನೆಲೆಸಿದ ಅನುಪಮ, ತಾನೆ ತಾನಾಗಿರುವ ಘನಕ್ಕೆ ಘನ . ಅಕ್ರಿಯೆವರಿತು ,ಅರುವರಿತ ಆದುವೆ ಆಗಿಹ ಅರಿಯದರುವು. ಅಲ್ಲಿ ಮರವಿಗಿಂಬಿಲ್ಲ ಅರುವೆಂಬುದಕ್ಕಿಂಬಿಲ್ಲ.ಮರವಿನ ದೇಹವಾಗಿ , ಬ್ರಹ್ಮಚರ್ಯನಾಗಿ ಒಳಪಟ್ಟವನಲ್ಲ , ಗ್ರಹಸ್ಥನಾಗಿ ಇಂದ್ರಿಯಂಗಳ ಬಳಸಿದವನು ಅಲ್ಲ, ವಾನಪ್ರಸ್ಥನೆಂಬ ಭಾವಿಯಲ್ಲ ಸನ್ಯಾಸಿಯಾಗುವನಲ್ಲ. ಅರುವಿನ ಭಾವಂಗಳಾದ ಜೀವ ಭಾವಿಯಲ್ಲ. ಅಂತರಾತ್ಮ ಭಾವಿಯಲ್ಲ ಏಕೆಂದರೆ ಬಳಸಲು ಬಹಿರಂಗವಿಲ್ಲ

ಭಾವಿಸಲು ಅಂತರಂಗವಿಲ್ಲ ಬಹಿರ್ ದೃಷ್ಠಿ, ಅಂತರದೃಷ್ಠಿಗಳೆಂಬ ದ್ವಂದ್ವವ ಕಳೆದ ನಿಷ್ಕಳಂಕ ನಿಜೈಕ್ಯ.

ನಿಜೈಕ್ಯನು ಭಾವಕ್ಕಗಮ್ಯನು ಭಾವವುಳ್ಳವನಾಗಬಹುದೆ? ಅತೀಂದ್ರಿಗೆ ಬಹಿರ್ ದೃಷ್ಠಿ ಆವುದು, ಅಂತರ್ ದೃಷ್ಠಿ ಆವುದು, ಅಜ್ಞಾನವಾವುದು , ಜ್ಞಾನವಾವುದು ಎರಡುವನತಿಗಳೆದ ನಿಲವು . ಸಹಜ ನಿಲವು ತಾನಾರೆಂದರಿತ ತನ್ನ ನಿಲವು ಅರಿದರುಹಿಸಿ ಕೊಂಬುದಕ್ಕೂ ಮೀರಿದ ಘನದ ನಿಲವು, ತಾನೆ ಜಗ, ಜಗವೆ ತಾನೆಂದು ಅರಿದ ಘನವೇದ್ಯ . ನಭೇದ ರೂಪ ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದ ಪರಾನಂದ . ಅನುಪಮ ಸುಖವೆ ತನ್ನ ಸ್ವಮಹಿಮೆಯಲ್ಲಿದ್ದ ಸಹಜತ್ವ ನೋಡಾ, ಶರಣನು ನಿಂತ ನಿಜಧಾಮ. ಅರುವಿನ ಭಾವಿಗಳಿಗೂ ತಿಳಿಯದಿರುವಾಗ ದೇಹ ಭಾವಿಗಳು ತಿಳಿಯುವದದೆಂತು? ಶರಣ ನಿರಹಂಭಾವಿ, ನಿರುಪಾಧಿ ನಿರಾಲಂಬ, ನಿಸ್ಸಂಗ, ನಿರವಧಿ ನಿಜಪದವನೈದ ನಿಜೈಕ್ಯ, ನಿಜೈಕ್ಯರಾರು ಅವರಿಗೆ ನಿಜೈಕ್ಯ ಶರಣರ ಘನತ್ವವು ವೇದ್ಯವು, ಇದು ಕಾರಣ ಶರಣಂಗೆ ಅಂತರಂಗವಿಲ್ಲ ಬಹಿರಂಗವಿಲ್ಲವೆಂದು ಹೇಳಿಹರು.

ಶರಣ ಗಗನ ಸದೃಶ್ಯನಾಗಿಹ ಚಿದಾಕಾಶ , ಚಿತ್‌ಸ್ವರೂಪ, ಗಗನಕ್ಕೆ ಬಹಿರಂಗ ಅಂತರಂಗವೆಂಬುದಿದೆಯೆ? ಘಠ ಮಠವೆಂಬುದಿದೆಯೆ? ಘಟ ಮಠವೆ ಕಾಣದ ಬಯಲಿಂಗೆ ಒಳಗಾವುದು, ಹೊರಗಾವು1ದು? ಆಕಾಶಕ್ಕಿಂತ ಸಹಸ್ರಾರುಪಾಲು ಸೂಕ್ಷ್ಮವಾಗಿರುವ ಚಿದಾಕಾಶನಾಗಿಹ ಶರಣ ಅಂತರಂಗವು ಕಾಣನು ಬಹಿರಂಗವು ಕಾಣನು. ಕಾಣದುದ ಕಂಡು, ತನ್ನ ಸ್ವಮಹಿಮೆಯಲ್ಲಿನೆಲೆಸಿದ ಮಹಾಂತ, ಅನುಪಮ ಸುಖ ಸಾರಾಯನು ಎಂದು ಹೇಳಿಹರು.

170

ಲೋಕ ವಿರಹಿತ ಶರಣ ಶರಣ ವಿರಹಿತ ಲೋಕ,
ಊರ ಹೊಂದ, ಕಾಡ ಹೊಂದ , ಆಪ್ಯಾಯನ ಬುಕ್ತಿ ವಿರಹಿತ
ಕೂಡಲಚೆನ್ನಸಂಗಮ ದೇವರಲ್ಲಿ ಲಿಂಗ ನಿಜೈಕ್ಯನು. ॥ 1607 ॥

ತಾತ್ಪರ್ಯ: ಲೋಕ ವಿರಹಿತ ಶರಣ : ಲೋಕದಿಂದತ್ತತ್ತ, ಶರಣ ಲೋಕದಿಂದ ನಿಸ್ಸಂಗವಾದಾತ. ಲೋಕವೆಂದರೆ ಹದಿನಾಲ್ಕು, ಹದಿನಾಲ್ಕು ಲೋಕದಿಂದಲೂ ಬೇರೆಯಾದಾತ ನಿಸ್ಸಂಗವಾದಾತ ಶರಣ.

ಹದಿನಾಲ್ಕು ಲೋಕಂಗಳಾವವು , ಲೋಕಂಗಳಲ್ಲಿ ಅಧೋ ಲೋಕ ಏಳು, ಊರ್ಧ್ವ ಲೋಕಂಗಳು ಏಳು. ಭೂಮಿಯ ಕೆಳಗಿರುವ ಲೋಕ ಅಧೋ ಲೋಕಂಗಳು. ಭೂಮಿಯ ಮೇಲಿರುವ ಲೋಕ ಊರ್ಧ್ವ ಲೋಕಂಗಳು . ಒಟ್ಟು ಹದಿನಾಲ್ಕು ಲೋಕಂಗಳು. ಇವು ಮಾನವರಿಗೆ ಕಾಣುವದೆಂದರೆ ಪುರಾಣಂಗಳಲ್ಲಿ ಹೇಳುವ ಲೋಕ. ಇವು ಪರೋಕ್ಷ ಲೋಕ, ಮಾಯಿಕ ಲೋಕ. ಇವು ಮಾನವನ ಪುಣ್ಯ ಪಾಪಾನು ಮೇರೆಗೆ ಮಾನವ ಶರೀರ ಪಾತವಾದ ನಂತರ ಪಾಪಿಯಾದರೆ ಅಧೋಲೋಕಕ್ಕೆ ಹೋಗುವನು . ಪುಣ್ಯ ಪುರುಷನಾದರೆ ಊರ್ಧ್ವ ಲೋಕಕ್ಕೆ ಹೋಗಿ ತನ್ನ ಪುಣ್ಯ ಇರುವವರೆಗೂ ಆ ಲೋಕದಲ್ಲಿದ್ದು ಪುಣ್ಯ ತೀರಿದ ನಂತರ ಪುನಃ ಜನ್ಮತಾಳುವನೆಂದು ಪುರಾಣಗಳಲ್ಲಿಯ ವಿಷಯ. ತತ್ವ ಅತತ್ವ ವಿಭಾಗ ಮಾಡಿನೋಡಲು ಮಾನವ ರೂಪಿ ಅರುವಿನ ಪಿಂಡದಿಂದ ಈ ಹದಿನಾಲ್ಕು ಲೋಕಂಗಳು ತಿಳಿಯಲು ಮಾನವ ಪಿಂಡದಿಂದ ಸಾಧ್ಯವು. ಏಳು ಅಧೋಲೋಕಂಗಳು, ಏಳು ಊರ್ಧ್ವ ಲೋಕಂಗಳು. ಈ ಲೋಕಂಗಳಿರುವಿನ ಸ್ಥಾನಂಗಳ ವಿವಿರ ಹೀಗಿದೆ.

ಮಾನವನ ಸೊಂಟದಿಂದ ಹಿಡಿದು ಕೆಳಗಿರುವ ಲೋಕ, ಅಧೋಲೋಕ, ನರಕ ಲೋಕ ಹೇಯ

ಲೋಕ . ಇವುಗಳಿಗೆ ತಳವೆ ಇಲ್ಲ. ಅಧೋಲೋಕಂಗಳು ಪದತಲ(ಹೆಜ್ಜೆಯ ಅಂಗಾಲಲ್ಲಿ) ಅತಲ ಲೋಕ, ಪಾದದೋರ್ಧ್ವದಲ್ಲಿ (ಪಾದದ ಮೇಲ್ಭಾಗದಲ್ಲಿ) ವಿತಲ ಲೋಕ . ಜಂಘೆಯಲ್ಲಿ (ಕೆಳ ತೊಡೆಯಲ್ಲಿ) ಸುತಲ ಲೋಕ. ಉರುದ್ವಯದಲ್ಲಿ(ಎರಡು ತೊಡೆಯಲ್ಲಿ) ತಲಾತಲ ಲೋಕ. ಗುಹ್ಯ ಸ್ಥಾನ (ಜನನೇಂದ್ರಿ ಸ್ಥಾನದಲ್ಲಿ) ರಸಾತಲ ಲೋಕ. ಕಟಸ್ಥಾನದಲ್ಲಿ(ಸೊಂಟದಲ್ಲಿ) ಪಾತಾಳ ಲೋಕ. ಹೀಗೆ ಸೊಂಟದಿಂದ ಹಿಡಿದು ತೆಳಗಿರುವ ಲೋಕ ಏಳು ಲೋಕಂಗಳು .

ಇನ್ನು ಊರ್ಧ್ವಲೋಕ ಏಳು . ಸೊಂಟದಿಂದ ಹಿಡಿದು ಮೇಲಿರುವ ಲೋಕ ಏಳು. ಅವುಗಳಿಗೆ ಊರ್ಧ್ವಲೋಕವೆಂಬ ನಾಮ ಬಂದಿವೆ . ನಾಭಿ ಸ್ಥಾನದಲ್ಲಿ(ಹೊಕ್ಕಳಲ್ಲಿ) ಭೂಲೋಕ, ಕುಷಿಯಲ್ಲಿ(ಗರ್ಭಸ್ಥಾನ) ಭುವರ್ ಲೋಕ(ಹೃದಯದಲ್ಲಿ) ಸ್ವರ್ಗ ಲೋಕ, ವೃಕ್ಷದಲ್ಲಿ(ಎದೆಯಲ್ಲಿ) ಮಹಲೋಕ ಕಂಠದಲ್ಲಿ ಜನಲೋಕ, ಲಲಾಟದಲ್ಲಿ ತಪೋಲೋಕ, ಶಿರಸ್ಥಾನದಲ್ಲಿ ಸತ್ಯಲೋಕ (ಬ್ರಹ್ಮಾಂಡದಲ್ಲಿ) ಹೀಗೆ ಮಾನವ ಪಿಂಡದಲ್ಲಿ ಹದಿನಾಲ್ಕು ಲೋಕಂಗಳು ಇವೆ .

ಶರಣನು ಕೆಳಗಿನ ಅಧೊ ಲೋಕಕ್ಕೂ ದೂರಾದಾತ ನಿಸ್ಸಂಗವಾದಾತ . ಮೇಲಿನ ಊರ್ಧ್ವ ಲೋಕಕ್ಕೂ ಬೇರಾದಾತ . ನಿಸ್ಸಂಗ ನಿರಾಲಂಬ ಶರಣ. ಶರಣ ಕ್ಷರವೆಂಬುದಕ್ಕೂ, ಮೀರಿದ ಘನ,. ಅಕ್ಷರನೆಂಬುದಕ್ಕೂ ಮೀರಿದ ಘನ, ಘನಕ್ಕೆ ಘನ ಅಪ್ರತಿಮನಗಮ್ಯ ಶರಣ. ಈ ಕುರುಹಿನಿಂದುಕ್ತವಾಗಿಹ ಲೋಕಂಗಳಲ್ಲಿ ಅವನೆಂತು ಕೂಡುವನು. ಅಜ್ಞಾನಿಗಳಿಗೆ ಅಧೋ ಲೋಕವು ಬಹುಪ್ರಿಯವಾಗಿವೆ . ಧರ್ಮಾತ್ಮರಿಗೂ ತಪಸ್ವಿಗಳಿಗೂ ಸಿಧ್ಯಾದಿ ಪುರುಷರಿಗೂ ಮಂತ್ರ ಪ್ರೇಮಿಗಳಿಗೂ ಊರ್ಧ್ವಲೋಕ ಪ್ರಿಯವಾಗಿವೆ. ಇವೆರಡು ಲೋಕಂಗಳ ನೋಡ ಶರಣ. ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದ ಮಹಾಂತ ಅಲೌಕಿಕ .

'' ನೋಡುವುದ ನೋಡಲರಿಯದೆ ಕೆಟ್ಟಿತ್ತೀ ಜಗವೆಲ್ಲ ನೋಡುವುದ ನೋಡುವುಡೆ ಕೂಡಲಿಲ್ಲ ಅಗಲಲಿಲ್ಲ ಗುಹೇಶ್ವರ ನಿಮ್ಮ ಶರಣ , ಅನುಪಮ ಸುಖಿ '' ಎಂದು ಪ್ರಭುದೇವರೆ ಬಿತ್ತರಿಸಿರುವುದು ನೋಡಿದಡೆ, ಈ ಹದಿನಾಲ್ಕು ಲೋಕ ಮೆಟ್ಟಿದವರು ಶರಣರು. ಲೋಕ ಪ್ರೇಮಿಗಳು ನೋಡಬೇಕಾದ ತನ್ನನ್ನು ನೋಡದೆ ಕೆಟ್ಟವರು . ತಾನಾಗದ ತನ್ನದಾಗದ ಲೋಕ ಕಂಡು ತನ್ನದೆಂದು ತಿಳಿದ ಪ್ರೇಮಿಗಳು ಇವರು ಕೆಟ್ಟರು . ಶರಣ ನೋಡಬೇಕಾದ ಘನಕ್ಕೆ ಘನ ತಾನು ಸ್ವಯಂಜ್ಯೋತಿ ತನ್ನನ್ನು ನೋಡಿದ ತಾನು ಆವಾವ ಲೋಕದಲ್ಲಿ ಕೂಡದವನು, ತನ್ನಿಂದ ಅಗಲದವನು, ಎಂದೆಂದೂ ಇದ್ದಂತಿರುವ ನಿರಂತರವಾಗಿರುವ ಮಂಗಳಮಯ ಚಿಜ್ಯೋತಿ. ಸುಖದ ಸುಖಿ ಅನುಪಮ ಸುಖಿ ಶರಣನಾದುದರಿಂದ ಲೋಕ ವಿರಹಿತ ಶರಣನೆಂದು ಹೇಳಿಹರು .

ಶರಣ ವಿರಹಿತ ಲೋಕ : ಶರಣ ಲೋಕದಿಂದ ವಿರಹಿತ, ಶರಣ ವಿರಹಿತ ಲೋಕ, ಶರಣಂಗೆ ದೂರವಾಗಿರುವ ಲೋಕ, ಶರಣನ ತತ್ವಕ್ಕೆ ಸೇರದ ಲೋಕ. ಶರಣ ತತ್ವ ಅತತ್ವಂಗಳ ಕಾಣದ ಪರತತ್ವ , ಶರಣ ಪರತತ್ವ ನಿಜ ಸಂಯುಕ್ತ . ನಾ ನೀನೆನ್ನದಿಹ ತೆರಹಿಲ್ಲದ ಘನ, ಲಿಂಗೈಕ್ಯ ಲಿಂಗ ಸಂಗಿ, ಅಚ್ಚಲಿಂಗೈಕ್ಯ ಸುಖಿಯಾದುದರಿಂದ ಶರಣವಿರಹಿತ ಲೋಕವೆಂದು ಹೇಳಿಹರು.

ಲೋಕಕ್ಕೆ ಅಚ್ಚಸುಖ ಬೇಡಾಗಿದೆ. ಕೆಲಬರಿಗೆ ಬೇಕಾಗಿದ್ದರೂ ಅದು ಸಾಧ್ಯವಾಗದ್ದು . ಅಚ್ಚ ಶರಣನಿಗೊಂದೆ ಸಾಧ್ಯವಲ್ಲದೆ , ಇನ್ನುಳಿದವರಿಗೆ ಅಸಾಧ್ಯವು. ಏಕೆಂದರೆ ಪ್ರಪಂಚದವರಲ್ಲಿ ಬಹುದಿವಸದಿಂದ ಅಂಧ ಶ್ರದ್ಧೆ ಬೆಳೆದು ಬಂದಿದೆ. ಅವರಲ್ಲಿ ನಿತ್ಯಾನಿತ್ಯದ ಪರಿ ಜ್ಞಾನವಿಲ್ಲ, ಅನಿತ್ಯವನ್ನೆ ನಿತ್ಯವೆಂದು ತಿಳಿದವರು. ಆಧ್ಯಾತ್ಮ ಜ್ಞಾನಕ್ಕೆ ಪ್ರೇಮಮಾಡುವದರಿಂದ ಸೋಮ್ಕಾರಿಯಾಗುವನು. ಸತಿ ಸುತರನ್ನು ಬಂಧು ಬಾಂಧವರನ್ನು ಇವರು ಪ್ರೀತಿ ಮಾಡರು, ಹೊಲ ಮನೆ ಸೇರರು, ಇದು ಕಾರಣ

ಶರಣ ತತ್ವದಿಂದ ಅವರ ಸಂಗದಿಂದ ದೂರ ವಾಗಿರುವುದೆ ಲೇಸೆಂದು, ಶರಣರನ್ನು ಅಪ್ರಿಯರಾಗಿ ನೋಡುವ ಜನವೆ ಬಹುಜನ ಇದು ಕಾರಣ ಶರಣ ವಿರಹಿತ ಲೋಕವೆಂದು ಹೇಳಿಹರು.

ಲೋಕ ಗುರುಗಳೆಲ್ಲ ಇಂದ್ರಿಯಜನ್ಯ ವಿಷಯೋಪ ಭೋಗದ ಕಾಂಕ್ಷೆಯುಳ್ಳವರು. ವಿಷಯ ಸುಖಿ ಇಂದ್ರಿಯರಾಮ, ಭೋಗಿಸಿದುದನ್ನೆ ಭೋಗಿಸುವ, ಉದಾಸೀನವೆಂಬುದು ಅವನ ಜೀವನದಲ್ಲಿ ನೋಡನು, ಶರಣ ನಿರ್ವಿಷಯ ನಿರಾಲಂಬಿ ನಿಜ ಸುಖದ ಸುಖಿ, ಲೋಕ ಅಲ್ಪ ಸುಖಿ ಬಹು ಕಾಲ ದುಃಖಿಗಳು. ಶರಣ ಅಚ್ಚಸುಖಿ, ನಿರಂತರ ಸುಖಿ, ಅಕ್ಷಯ ಸುಖಿ, ಅತ್ಯಂತ ಸುಖಿ, ಅತ್ಯಂತ ದುಃಖ ನಿವೃತ್ತಿ ನಿರಂಕುಶ ತೃಪ್ತಿಯ ತೃಪ್ತನು.

ಊರ ಹೊಂದ ಕಾಡ ಹೊಂದ : ಜನರಿರುವ ವಸತಿಯ ಸೇರದವನು, ಜನರಿಲ್ಲದ ಕಾಡನ್ನು ಒಪ್ಪದವನು , ಶರಣ ಪ್ರವೃತ್ತಿರೂಪವಾದ ಪ್ರಪಂಚದ ಬೋಗಾಭಿಲಾಷೆಯನ್ನು ಸೇರದವನು. ನಿವೃತ್ತಿ ಪರವಾದ, ತ್ಯಾಗ ವೈರಾಗ್ಯ ಉದಾಸೀನವೆಂಬ ಕಾಡನ್ನು ಹೊಂದದವನು. ಶರಣ ಬೋಗಾಂಗಿಯು ಅಲ್ಲ ತ್ಯಾಗಾಂಗಿಯು ಅಲ್ಲ ಯೋಗಾಂಗಿಯು ಅಲ್ಲ. ತ್ರಿವಿಧಾಂಗಕ್ಕೆ ಮೀರಿದ ಮಹಾಲಿಂಗಿ, ಅವನೆಂತು ಅಂಗಾಂಗಿಯಾಗುವನು .ಅಂಗಾಂಗಿಯಾದವಂಗೆ ಭೋಗಾಂಗ, ತ್ಯಾಗಾಂಗ, ಯೋಗಾಂಗದ ಕಳವಳವಿದೆ . ಶರಣ ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿತು, ಅಚಲಾನಂದ ಮಯನಾಗಿರುವ ಅಚ್ಚಸುಖಿ, ಅಕ್ಷಯಸುಖಿ ಯಾದುದರಿಂದ ಕಾಡಹೊಂದ, ಊರಹೊಂದ ಎಂದು ಹೇಳಿಹರು.

ಆಪ್ಯಾಯನ ಭಕ್ತಿ ವಿರಹಿತ ಕೂಡಲ ಚನ್ನಸಂಗಯ್ಯನಲ್ಲಿ ಲಿಂಗ ನಿಜೈಕ್ಯನು : ಲಿಂಗ ನಿಜೈಕ್ಯ ಶರಣ ಅವನೆಂತು ಆಪ್ಯಾಯನ ಭಕ್ತಿಗೆ ಪ್ರೀತಿ ಮಾಡುವನು ನಿತ್ಯ ತೃಪ್ತಂಗೆ ಅದಾವ ಹಸಿವು ಅದಾವ ಊಟ, ಹಸುವಿಂಗೆ ಅನ್ನದ ಪ್ರೀತಿಯಾಗುವದು ಸಹಜ. ತೃಪ್ತಂಗೆ ಅದಾವ ಹಸಿವು ಆನಂದಕ್ಕೆ ಅದಾವ ಹಸಿವು. ಸುಖಕ್ಕೆ ಅದಾವ ಹಸಿವು ಶರಣ ಹಸಿವು ವಿರಹಿತ ನಾದುದರಿಂದ ಹದಿನಾಲ್ಕು ಲೋಕದ ಭೋಗದ ಹಸುವಿನಿಂದ ವಿರಹಿತ ಆಪ್ಯಾಯನ ಭುಕ್ತಿ ವಿರಹಿತ. ಲಿಂಗ ನಿಜೈಕ್ಯನು ಅಚಲಾನಂದಮಯನು . ಅಚಿಂತ್ಯನು ತನ್ನ ಸ್ವಮಹಿಮೆಯಲ್ಲಿ ನೆಲಿಸಿದ ಸ್ವಸುಖಿಯು, ಸುಖಕ್ಕೆ ಅದಾವುದು ಹಸಿವು, ಶರಣ ಅಚ್ಚಸುಖಿಯಾದುದರಿಂದ ಅಧೋಲೋಕದ ಹಸಿವಿನಿಂದಲೂ ವಿರಹಿತ, ಅಧೋಲೋಕದ ಏಳು ಲೋಕದ ಭೋಗದ ಹಸಿವಿನಿಂದಲೂ ವಿರಹಿತ. ನಿಸ್ಸಂಗಿಯಾದ ಶರಣ, ಈ ಹದಿನಾಲ್ಕು ಲೋಕಂಗಳಿಗೂ ಅಂಟದ ಶರಣ. ತಟ್ಟದ ಮುಟ್ಟದ ಶರಣ. ಲಿಂಗ ನಾನೆಂಬುದೆ ಸೂತಕವಾದ ಶರಣ ಅವನೆಂತು ಅನಿತ್ಯವಾದ ವಿಷಯೋಪ ಭೋಗದಾನಂದಕ್ಕೆ ನಿಜಾನಂದವೆಂದು ಒಪ್ಪಬಹುದೆ? ಒಪ್ಪಲರಿಯನಾದ್ದರಿಂದ ಆಪ್ಯಾಯನ ಭುಕ್ತಿ ವಿರಹಿತನೆಂದು ಹೇಳಿಹರು.

ಶರಣ ನಿಸ್ಸೀಮ ಸುಖಿ . ಸೀಮಿತ ಭೋಗಕ್ಕೆ ಆಶೆ ಬಯಕೆ ಹಸಿವು ಅತೃಪ್ತಿಯ ಜಾಲಕ್ಕೆ ಸಿಕ್ಕಬಹುದೆ? ಸಿಗಲರಿಯದ್ದರಿಂದ ಲಿಂಗ ನಿಜೈಕ್ಯನು ಎಂದು ಹೇಳಿಹರು.

171

ಭಜಿಸಲಿಲ್ಲ, ಗತಿಮತಿ ಫಲವಿರಹಿತನಾಗಿ
ಉಂಟೆಂಬ ಕುಳವಿಲ್ಲ ಇಲ್ಲೆಂಬ ನಿಸ್ಸಂಸಾರಿಯಲ್ಲ
ಕೂಡಲಚೆನ್ನಸಂಗಾ ನಿಮ್ಮ ಶರಣ ಲಿಂಗೈಕ್ಯನಾಗಿ. ॥ 686 ॥

ತಾತ್ಪರ್ಯ : ಭಜಿಸಲಿಲ್ಲ, ಗತಿ ಮತಿ ಫಲವಿರಹಿತನಾಗಿ : ಫಲ ವಿರಹಿತರು ಯಾರು , ತನ್ನ

ಹೊರ್ತು ಏನನ್ನೂ ಕಾಣದವರು. ಅವರ ದಿವ್ಯ ದೃಷ್ಠಿಯಲ್ಲಿ ಅನ್ಯವಿಲ್ಲವಾದ್ದರಿಂದ ಅರಿಯುವುದಿಲ್ಲ, ಮರೆಯುವುದಿಲ್ಲ, ಅವರು ಭಕ್ತ ಸ್ಥಲದವರು ಅಲ್ಲ, ಆರು ತಾನಾರೆಂದು ತನ್ನ ತಾ ಅರಿತಿರುವುದಿಲ್ಲ ಅವರಿಗೆ ಅರಿಯದ ಮುನ್ನ ಗುರು ಉಂಟು, ಲಿಂಗ ಉಂಟು, ಜಂಗಮ ಉಂಟು ಪ್ರಸಾದ ಉಂಟು ಇವರು ಉಂಟೆಂಬ ಭಕ್ತ ಕುಳದವರು .

ಆರು ತನ್ನನ್ನು ಅರಿದರುಹಿಸಿ ಕೊಂಬುದಕ್ಕೂ , ಮೀರಿದ ಘನಕ್ಕೆ ಘನ ತಾನು ಎಂದರಿತಿರುವನು ಅವನು , ತನ್ನ ಅರಿತವನು. ಮುಟ್ಟಬಾರದ ಅಚಿಂತ್ಯ ಪದ ಮುಟ್ಟಿಹನು, ಅಸಾಧ್ಯವ ಸಾಧಿಸಿಹನು, ಕಾಣದುದ ಕಂಡಿಹನು. ಅವನಿಗೆ ಭಾವಕ್ಕಿಂಬಿಲ್ಲ ಶಬ್ದ ಮೀಸಲಾಗಿರುವದರಿಂದ ಉಂಟೆಂಬ ಕುಳವಿಲ್ಲ, ಇಲ್ಲವೆಂಬ ನಿಸ್ಸಂಸಾರಿಯಲ್ಲ . ಉಂಟೆಂಬುದು ಮಾನವನ ಕಲ್ಯಾಣಕ್ಕೋಸ್ಕರ ಬಸವಣ್ಣ ಕೊಂಡ . ಇಲ್ಲೆಂದು ಮಾನವನ ಕಲ್ಯಾಣಕ್ಕೋಸ್ಕರ ಅಲ್ಲಯ್ಯ ಕೊಂಡ . ಬಸವಣ್ಣ ಗುರು ಉಂಟು, ಲಿಂಗ ಉಂಟು, ಜಂಗಮ ಉಂಟು, ಪ್ರಸಾದ ಉಂಟು ಎಂದು ಕೊಂಡುದು . ಇದು ಮಾಹಾದಾಶ್ಚರ್ಯ. ಏಕೆಂದರೆ ತಾನೆ ಗುರುವಾಗಿ ಗುರುವ ಕೊಂಡ, ಲಿಂಗಬಾಗಿ ಲಿಂಗವ ಕೊಂಡ, ಜಂಗಮವಾಗಿ ಜಂಗಮವ ಕೊಂಡ, ಪ್ರಸಾದವಾಗಿ ಪ್ರಸಾದವ ಕೊಂಡ, ತಾನು ಏನೂ ಅರಿಯದ ಭಕ್ತನಾಗಿ, ಭಕ್ತನಾದುದು . ಮಹಾದಾಶ್ಚರ್ಯವಲ್ಲವೆ?

ಅಲ್ಲಯ್ಯ ಇಲ್ಲೆಂಬುದು ಇಲ್ಲವಾಗಿ ಇಲ್ಲೆಂಬುದು ಕೊಂಡ, ಗುರುವಾಗಿ ಗುರುವ ಕೊಂಡುದು ಇಲ್ಲ , ಲಿಂಗವಾಗಿ ಲಿಂಗವಕೊಂಡುದು ಇಲ್ಲ, ಜಂಗಮವಾಗಿ ಜಂಗಮ ಕೊಂಡುದು ಇಲ್ಲ, ಪ್ರಸಾದವಾಗಿ ಪ್ರಸಾದಕೊಂಡುದು ಇಲ್ಲ, ಏಕೆಂದರೆ ಇಲ್ಲೆಂಬುದು ಇಲ್ಲ ಮಾಡಿದನಲ್ಲದೆ, ನಾನೀನೆಂಬುದು ಇಲ್ಲಮಾಡಿ ಸಂದಿಲ್ಲದಿಪ್ಪ ಅಪ್ರಮಾಣ ಅಚಿಂತ್ಯ ನಿಲುವ ತೋರಿಸಿದ ಘನಕ್ಕೆ ಘನ. ಇವರೀರ್ವರೋಳ್ ಆರದು ಗ್ರಾಹ್ಯವಾದುದು ? ಆರದು ಅಗ್ರಾಹ್ಯವಾದುದು? ಎಂದು ತಿಳಿಯುವದು?

ಬಸವಣ್ಣನ ಭಕ್ತಿಯ ಅಭಿನಯ ಇದಾರಿಗೆ ? ಅಲ್ಲಯ್ಯನೆಂಬ ಜಂಗಮ ಅಭಿನಯ ಇದಾರಿಗೆ? ಮಾಡಿ ಮಾಡದ ಭಕ್ತಿ ಬಸವಣ್ಣನದು . ಮುಟ್ಟಿ ಮುಟ್ಟದ ಜಂಗಮ ಪ್ರಭುವಿನದು. ಈರ್ವರು ಗೆದ್ದವರು . ನಿಜೈಕ್ಯರು ಭಜಿಸಿ ಭಜಿಸದವ ಬಸವಣ್ಣನಾದುದರಿಂದ ಮತಿಯಿಲ್ಲದವನಾಗಿ ಗತಿಯಿಲ್ಲ,ಗತಿ ಇಲ್ಲವಾಗಿ ಫಲ ವಿರಹಿತ ಬಸವಣ್ಣ . ಏಕೆಂದರೆ ಬಸವಣ್ಣನ ದಿವ್ಯದೃಷ್ಠಿಯಲ್ಲಿ ಲಿಂಗ ಲಿಂಗ ಎಂಬುವಂಗೆ ಲಿಂಗವಿಲ್ಲ, ಜಂಗಮ ಜಂಗಮ ಎಂಬುವಂಗೆ ಜಂಗಮವಿಲ್ಲ, ಪ್ರಸಾದ ಪ್ರಸಾದ ಎಂಬುವಂಗೆ ಪ್ರಸಾದವಿಲ್ಲ , ಎನ್ನದವಂಗೆ ಲಿಂಗವುಂಟು , ಜಂಗಮವುಂಟು , ಪ್ರಸಾದ ಉಂಟು . ಇವು ತ್ರಿವಿಧ ಸ್ಥಲವು . ಈ ತ್ರಿವಿಧ ಸ್ಥಲವನರಿಯಬಲ್ಲಡೆ ಕೂಡಲಚೆನ್ನಸಂಗಯ್ಯ ತಾನೆ ಉಂಟು.

ಆರಿಗೆ ಭಾವಕ್ಕಿಂಬುಕೊಡದ ಪರತತ್ವ ವೇದ್ಯವಾಗಿದೆ, ಅವರಿಗೆ ತಮ್ಮ ನುಡಿಯುವ ನುಡಿಯೆ ದೋಷ ನುಡಿಯಾಗಿದೆ. ಭಾವಿಸುವ ಭಾವವು ದೋಷವಾಗಿದೆ, ನೆನೆಯುವ ನೆನಹು ದೋಷದಿಂದುಕ್ತವಾಗಿದೆ, ಅವರಿಗೆ ಭಜಿಸಲು ನಾಮವೆ ಶಿಗದಂತಾಗಿದೆ. ಏಕೆಂದರೆ ಭಜಿಸುವ ನಾಮಂಗಳೆಲ್ಲ ದೋಷವುಳ್ಳವುಗಳಾಗಿವೆ . ದೇವ, ಭಕ್ತ , ಗುರು, ಶಿಷ್ಯ , ಜಂಗಮ ಇದ್ದಲ್ಲಿ ಭಜಿಸುವುದು ಸಹಜವಾಗಿದೆ . ಲಿಂಗಕ್ಕೆ ಲಿಂಗ ಎಂಬುದೆ ದೋಷ. ಜಂಗಮಕ್ಕೆ ಜಂಗಮ ಎಂಬುದೆ ದೋಷ ಎನ್ನದವನು ನಿರ್ದೋಷಿ, ಅವನು ಭಜಿಸದವನು. ಆರು ಭಜಿಸಲಿಲ್ಲ ಅವರಲ್ಲಿ ಲಿಂಗ ಜಂಗಮ ಪ್ರಸಾದ ಯತಾರ್ಥ ಜ್ಞಾನವದೆ . ಇದು ಕಾರಣ ಅವರು ಭಜಿಸಲಿಲ್ಲ ಎಂದು ಹೇಳಿಹರು. ಆ ಭಜಿಸದವರು ಲಿಂಗ ಸಕೀಲ ಸಂಯೋಗ ವರ್ಮಸ್ಥಲವರಿತವರು. ಅವರು ಲಿಂಗವರಿತು ಲಿಂಗವೆ ತಾನಾಗಿಹ

ಮಹಾಂತನಾದುದರಿಂದ ಶರಣಸ್ಥಲ ವಿರಹಿತನಾಗಿ ಎಂದು ಹೇಳಿಹರು.

ಲಿಂಗಾರ್ಚಕರು ಎಲ್ಲಿಯವರೆಗೆ ಅಂಗ ಬೇರೆ, ಲಿಂಗ ಬೇರೆಂದು ತಿಳಿದಿಹರು ಅಲ್ಲಿ ಮತಿಯು ಉಂಟು, ಗತಿಯು ಉಂಟು, ಫಲಪದಂಗಳು ಉಂಟು. ಲಿಂಗೈಕ್ಯ ದೃಷ್ಠಿ ನಿಸ್ಸೀಮ ದೃಷ್ಠಿ ,ಅಖಂಡಿತ ಘನ ಪೂರ್ಣವಪ್ಪದು ತನ್ನಿರುವೆಂದರಿದ ಮಹಾಂತ. ಅಲ್ಲಿ ಅಂಗ ಲಿಂಗ ಬೇರೆಂಬ ವಿಭಾಗ ದೃಷ್ಠಿಗೂ ಸಂದಿಲ್ಲ, ಒಂದೆಂಬ ದೃಷ್ಠಿಗೂ ಸಂದಿಲ್ಲ, ತನ್ನಲ್ಲಿ ತಾನೆ ತಾನಾಗಿರುವ ಸಹಜನು.ಇದಲ್ಲದೆ ಸಹಜನೆಂಬುದಕ್ಕಿಂಬಿಲ್ಲ ಅಸಹಜನೆಂಬುದಕ್ಕಿಂಬಿಲ್ಲ ಭಾವಕ್ಕಿಂಬಿಲ್ಲದಿರುವಲ್ಲಿ ಸಹಜನೆಂದು ಹೇಗೆ ಹೇಳುವುದು? ಅಸಹಜನೆಂದು ಹೇಗೆ ಹೇಳುವುದು, ಖಂಡಾಖಂಡ ಸಂಯೋಗವಿಲ್ಲದ ಅಖಂಡದಲ್ಲಿ ಮತಿ ಆವುದು? ಗತಿ ಆವುದು?

ಕಲ್ಪಿತ ಪುರುಷನಾದಲ್ಲಿ ಮತಿ ಉಂಟು, ಗತಿ ಉಂಟು. ಅವನ ಅಭ್ಯಾಸವೆ ಮತಿ ಆಗಿದೆ, ಗತಿ ಆಗಿದೆ . ಕಲ್ಪಿತವಿರಹಿತಂಗೆ, ಅಕಲ್ಪಿತನೆಂಬುವದಾದರೂ ಹೇಗೆ? ಅಚಿಂತ್ಯನೆಂಬುದಾದರೂ ಹೇಗೆ? ಏಕೆಂದರೆ ಅಚಿಂತ್ಯನೆಂಬುದು ಅದು ಚಿಂತನಕ್ಕೊಳ ಪಡುವದೆಂದಲ್ಲಿ ಇದು ತನ್ನ ಸ್ವಮಹಿಮೆಯಲ್ಲಿ ನೆಲೆಸಿದ ಘನಮಹಿಮಂಗೆ ಒಪ್ಪದು. ಇದು ಕಾರಣ ತಾನಾರೆಂದು ತನ್ನಿಂದ ತನ್ನ ಅರಿತು ತನ್ನ ಸ್ವಮಹಿಮೆಯಲ್ಲಿ ನೆಲೆಸಿದವಂಗೆ ಫಲವಾವುದು? ಪದವಾವುದು. ತಾನು ಭಾವಕ್ಕಗಮ್ಯನೆಂಬುದು ಕರಿಗೊಂಡುದರಿಂದ ಭಾವದ ಭ್ರಮೆಗೆ ಒಳಗಾಗಲಾರ. ತಾನು ಅನುಪಮಲಿಂಗವೆಂಬುದು ಕರಿಗೊಂಡುದರಿಂದ ಫಲವಿರಹಿತನೆಂದು ಹೇಳಿಹರು.

ಉಂಟೆಂಬ ಕುಳವಿಲ್ಲ , ಇಲ್ಲವೆಂಬ ನಿಸ್ಸಂಸಾರಿಯಲ್ಲ ,ಕೂಡಲಚೆನ್ನಸಂಗಾ ನಿಮ್ಮ ಶರಣ ಲಿಂಗೈಕ್ಯನಾಗಿ : ಚೆನ್ನ ಬಸವಣ್ಣ ಮಹಾಮಹಿಮ, ನಿಮ್ಮ ಶರಣ ಲಿಂಗೈಕ್ಯನಿಗೆ ಉಂಟೆಂಬ ಕುಳವಿಲ್ಲ ಇಲ್ಲವೆಂಬ ನಿಸ್ಸಂಸಾರಿಯು ಅಲ್ಲ. ಮಾನವರ ಕಲ್ಯಾಣಕ್ಕೋಸ್ಕರ ಭಕ್ತಿ ಅಭಿನಯ ಬಸವಣ್ಣನದು ಮಹೇಶ್ವರನ ಅಭಿನಯ ಪ್ರಭುವಿನದು ಎಂದು ಮೊದಲೆ ಹೇಳಿದೆ. ಏಕೆಂದರೆ ಶರಣ ಶರಣೆಯರೆಲ್ಲ ಲಿಂಗೈಕ್ಯವೆಂದೆನ್ನೆ ಎಂಬ ನಿರ್ಣಯದವರು . ಅವರಿಗಾವ ಸ್ಥಲ ಕಟ್ಟು ಒಳಪಡಿಸಿ ನೋಡಬಾರದು. ಈ ಮಹಾಂತರು ಸ್ಥಲದವರಲ್ಲ, ನಿಸ್ಥಲದವರು. ಅಲ್ಲಿ ನುಡಿಗೆಡೆಗೊಡದ ಘನವಂತರ ವಿಷಯದಲ್ಲಿ ಅದಾರು ನಿರ್ಣಯ ಮಾಡುವುದು. ಲೋಕ ಕಲ್ಯಾಣಕ್ಕೋಸ್ಕರ ಅಭಿನಯವಂತರು. ಬಸವಣ್ಣನವರು ಉಂಟೆಂಬುದು ಕೊಂಡದ್ದು ಲೋಕ ಕಲ್ಯಾಣಕ್ಕೋಸ್ಕರ. ಪ್ರಭುದೇವ, ಇಲ್ಲೆಂಬುದು ಕೊಂಡುದು ಲೋಕ ಕಲ್ಯಾಣಕ್ಕೋಸ್ಕರ. ಲೋಕ ಕಲ್ಯಾಣಕ್ಕಾಗಿ ಗುರು ಉಂಟು, ಲಿಂಗ ಉಂಟು , ಜಂಗಮ ಉಂಟು, ಪ್ರಸಾದ ಉಂಟು ಎಂದು ಕೊಂಡುದು. ಪ್ರಭುದೇವ ಗುರುವಿಲ್ಲ, ಲಿಂಗವಿಲ್ಲ , ಜಂಗಮವಿಲ್ಲ , ಪ್ರಸಾದವಿಲ್ಲ, ತನ್ನ ಹೊರ್ತು ಅನ್ಯ ಆವುದು ಇಲ್ಲವೆಂಬುದು ಕೊಂಡುದು ಸಕಲರ ಹಿತಕ್ಕೋಸ್ಕರ ಅಲ್ಲವೆ!

ಇದು ಕಾರಣ, ಲಿಂಗೈಕ್ಯ ನಿಲುವು, ಭಾವಕ್ಕಿಂಬುಕೊಡದ ಘನವಾದ್ದರಿಂದ, ಉಂಟೆಂಬ ಭಾವಕ್ಕೂ ಸಂದಿಲ್ಲ, ಇಲ್ಲೆಂಬ ಭಾವಕ್ಕೂ ಸಂದಿಲ್ಲ, ಭಾವಕ್ಕಗಮ್ಯವಾಗಿಹ ನಿಲುವಿನಲ್ಲಿ ಭಾವವೆಂಬುದು ಭ್ರಮವು. ಆರು ಸ್ಥಲಂಗಳು ಭ್ರಮವು , ನಿಸ್ಥಲವು ಭ್ರಮವು . ತಾನಾರೆಂಬ ತನ್ನ ನಿರ್ಣಯ ತನಗಾದ ಬಳಿಕ ಅದು ಉಪಮಿಸದ ನಿಲುವು. ತನ್ನ ನಿಲುವು. ಸ್ಥಲ ನಿಸ್ಥಲ ಕಾಣದ ನಿಲುವು ತಾನು ಮರವಿನಿಂದುಕ್ತನಾಗಿ ಎಲ್ಲಿಯವರೆಗೆ ಕಲ್ಪಿತನಾಗಿಹನು, ಅಲ್ಲಿಯವರೆಗೆ ಉಂಟೆಂಬ ಪ್ರವೃತ್ತಿಯು ಉಂಟು. ಇಲ್ಲೆಂಬ ನಿವೃತ್ತಿಯು ಉಂಟು. ಇವೆರಡನ್ನು ಕಾಣದವನು ತನ್ನ ಕಂಡವನು, ಕಾಣದುದ ಕಂಡವನು ಎಲ್ಲೆಲ್ಲಿಯೂ ತನ್ನ ಕಂಡವನು , ತಾನು ತೆರಹಿಲ್ಲದ ಘನನಾದುದರಿಂದ ಎಲ್ಲಿ ನೋಡಿದಡಲ್ಲಲ್ಲಿ ತನ್ನ ಕಂಡವನಾದುದರಿಂದ ತನ್ನದು ಉಪಮಿಸಲು ಬಾರದ ನಿಲುವು , ಕೂಡಲಚೆನ್ನಸಂಗಾ ನಿಮ್ಮ ಶರಣ ಲಿಂಗೈಕ್ಯನಾಗಿ ಎಂದು ಹೇಳಿಹರು .

ಭೋಗಿಯೆನಲಿಲ್ಲ ನಿರ್ಭೋಗಿಯೆನಲಿಲ್ಲ ಕಾಮಿ ಎನಲಿಲ್ಲ ನಿಃಕಾಮಿ ಎನಲಿಲ್ಲ
ತನ್ನ ಪರಿ ಬೇರೆ ನೋಡಯ್ಯ.
ದೇವನೆನಲಿಲ್ಲ, ಭಕ್ತನೆನಲಿಲ್ಲ, ಭಾವಿ ಎನಲಿಲ್ಲ ನಿರ್ಭಾವಿ ಎನಲಿಲ್ಲ
ತನ್ನ ಪರಿ ಬೇರೆನೋಡಯ್ಯ.
ಭವ ಭವಂಗಳೆಲ್ಲವ ಪರಿಹರಿಸಿ ಕಳೆದ ನಿಭ್ರಾಂತ ನಿರುತ್ತರ
ಅಪ್ರತಿಮನು ಆ ಅಪ್ರತಿಮಂಗೆ ಪ್ರತಿಯುಂಟೆ ಕೂಡಲಚೆನ್ನಸಂಗಮದೇವಾ.

ತಾತ್ಪರ್ಯ : ಭೋಗಿ ಎನಲಿಲ್ಲ, ನಿರ್ಭೋಗಿ ಎನಲಿಲ್ಲ, ಕಾಮಿ ಎನಲಿಲ್ಲ ನಿಃಕಾಮಿ ಎನಲಿಲ್ಲ ತನ್ನ ಪರಿ ಬೇರೆ ನೋಡಯ್ಯ : ತಾನಾರೆಂಬ ತನ್ನ ನಿರ್ಣಯ ತನಗಾದ ಬಳಿಕ ಏನೆಂದರಿಯೆನಯ್ಯ, ಸ್ಥಲವೆಂದೆನ್ನೆ ನಿಸ್ಥಲವೆಂದೆನ್ನೆ ಎಂದು ಬಿತ್ತರಿಸಿರುವಲ್ಲಿ ತನ್ನ ಸ್ವಮಹಿಮೆಯಲ್ಲಿ ನೆಲಿಸಿದವಂಗೆ ಭೋಗಿ ಎನಲು ಬಾರದು ನಿರ್ಭೋಗಿ ಎನಲು ಬಾರದು. ಕಲ್ಪಿತ ಪುರುಷನಾದಲ್ಲಿ ಅಂಗ ನೆನ್ನುವುದು ಉಂಟು, ಲಿಂಗ ನೆನ್ನುವುದು ಉಂಟು, ಅಕಲ್ಪಿತ ನೆನ್ನಲು ಬಾರದ ಅಪ್ರತಿಮಂಗೆ ಭೋಗಿ ಎನಲು ಬರದು, ನಿರ್ಭೋಗಿ ಎಂದು ಹೇಗೆ ಹೇಳುವುದು? ಒಡಲು ವುಳ್ಳವಂಗೆ ಆಸಕ್ತನೆನ್ನಲು ಬರುವುದು, ನಿರಾಸಕ್ತ ನೆಂದು ಹೇಳಲು ಬರುವುದು. ಒಡಲಿಲ್ಲದವಂಗೆ ಆಸಕ್ತರು ಏಂದೆನ್ನುವದಾದರೂ ಹೇಗೆ? ಅನಾಸಕ್ತರು ಎಂದೆನ್ನುವದಾದರೂ ಹೇಗೆ? ಕ್ಷರ ಮತಿಯುಳ್ಳವಂಗೆ ಕಾಮಿ ಎನಬಹುದು, ಅಕ್ಷರವರಿತಂಗೆ ಕಾಮಿ ಎನ್ನುವದಾದರೂ ಹೇಗೆ? ನಿಃಕಾಮಿ ಎನ್ನಲು ಬರದ ಮಹಿಮಂಗೆ ಕಾಮಿ ಎನ್ನುವುದಾದರೂ ಹೇಗೆ? ನಿಃಕಾಮಿ ಎನ್ನುವುದಾದರೂ ಹೇಗೆ ?

ತನ್ನ ಪರಿ ಬೇರೆ ನೋಡಯ್ಯಾ : ತಾನಾರೆಂದರಿತವರ ರಹಸ್ಯವೆ ಬೇರೆ, ಇದು ಎರವಲವಾಗಿ ಬಂದ ಜ್ಞಾನವು ಅಲ್ಲ, ತನ್ನಿಂದ ತನಗೆ ಉದಯವಾದ ಜ್ಞಾನ. ಇದು ಉದಯಾಸ್ತವಾಗದ ಜ್ಞಾನ, ಇದು ಎರಡನ್ನು ಕಾಣದ ಜ್ಞಾನ, ಸಕಲಕ್ಕೂ ಮಿಕ್ಕಿ ಮೀರಿನಿಂದ ನಿಲುವು . ಏನೆಂಬೇನೆಂಬೆ, ಅಂಗನೆನ್ನಲು ಸಂದಿಲ್ಲ ಲಿಂಗನೆನ್ನಲು ಸಂದಿಲ್ಲ, ಅಂಗ ಲಿಂಗನೆನ್ನಲು ಸಂದಿಲ್ಲದಿರುವಲ್ಲಿ ಬೇರೆನಲಿಲ್ಲ ಒಂದೆನಲಿಲ್ಲ ಕೂಡಿದುದೆನಲಿಲ್ಲ. ಥಅಂಗ ಲಿಂಗ ಇದ್ದವು ಎನಲಿಲ್ಲ, ಇಲ್ಲದವು ಎನಲಿಲ್ಲ ಇದ್ದವುಗಳಾದಲ್ಲಿ ಷಟ್‌ಸ್ಥಲವ ಹೇಳಬಹುದು. ಇಲ್ಲದವುಗಳಾದಲ್ಲಿ ನಿಸ್ಥಲವ ಹೇಳಬಹುದು ತನ್ನ ನಿರ್ಣಯ ತನಗಾದುದರಿಂದ ಏನೆಂದರಿಯಲು ಅಸಾಧ್ಯವಾಗಿ ಲಿಂಗೈಕ್ಯವೆಂದೆನ್ನೆ ಎಂದು ಹೇಳಿದುದರಿಂದ ತನ್ನ ಪರಿ ಬೇರೆ ನೋಡಯ್ಯ ಎಂದು ಹೇಳಿಹರು.

ತಾನು ಏನೊಂದಾಗದ ಘನ, ತನ್ನನ್ನು ಅರಿಯುವದದೆಂತು? ತಾನು ಅರಿದರುಹಿಸಿ ಕೊಂಬುದಕ್ಕೂ ಮೀರಿದ ಘನಕ್ಕೆ ಘನವಾಗಿರುವಾಗ, ತನ್ನನ್ನು ತನ್ನಿಂದ ತಿಳಿಸಿಕೊಳ್ಳುವ ವಾಙ್ಮನ ಬುದ್ಧಿ ಇವುಗಳಾದರೂ ತನ್ನನ್ನು ಅರಿಯುವದದೆಂತು. ತಾನು ದೃಕ್ ಎಂಬುದಕ್ಕೂ ದೃಕ್ ಆಗಿರುವಲ್ಲಿ ಈ ದೃಶ್ಯಗಳ ಅರಿಯುವ ದೃಕ್ ಅರಿಯುವುದಾದರು ಹೇಗೆ? ತಾನು ಅರುವಿಂಗರುವು ಆಗಿರುವಲ್ಲಿ ತನ್ನನ್ನು ಅದಾವ ಅರುವು ಅರಿಯುವುದು? ತಾನು ಅರುವೆಂಬುದಕ್ಕೂ ಮೀರಿದ ಘನದಿರುವಿನ ಅರುವಾಗಿರುವಲ್ಲಿ ತನ್ನನ್ನು ತಾನು ಬುದ್ಧಿ ಆಗಿ ಅರಿಯಲು ಹೋದವರಿಗೂ ಅಸಾಧ್ಯ. ಚಿದಹಮ್ಮು ರೂಪಿ ದೃಕ್ ಆಗಿ ಅರಿಯಲು ಹೋದವರಿಗೂ ಅಸಾಧ್ಯ ಏಕೆಂದರೆ ಭಾವಕ್ಕಗಮ್ಯನೆಂಬುದುಕ್ಕೂ ಮೀರಿದ ಘನ. ಅಕಲ್ಪಿತನೆಂಬುದಕ್ಕೂ ಮೀರಿದ ಘನ. ಅಂಗ ಲಿಂಗನೆಂಬುದಕ್ಕೂ ಸಂದಿಲ್ಲದಿಪ್ಪ ಅಪ್ರಮಾಣಂಗೆ ತನ್ನಿಂದ ತಾನೆ ತನ್ನ ಅರಿವುದಲ್ಲದೆ ಬೇರೆ ಅರುವು ನಿಷ್ಪ್ರಯೋಜಕವಾಗುವದರಿಂದ ತನ್ನ

ಪರಿ ಬೇರೆ ನೋಡಯ್ಯ ಎಂದು ಹೇಳಿಹರು.

ಏನೊಂದಾಗದ ಘನವಂತನಿಗೆ, ಕಾಮಿ ಎನ್ನುವದಾದರೂ ಹೇಗೆ? ನಿಃಕಾಮಿ ಎನ್ನುವದಾದರೂ ಹೇಗೆ? ಏನೊಂದು ಸರಲು ಇಂಬುಗೊಡದ ಘನಮಹಿಮನೆ ತಾನಾಗಿರುವಲ್ಲಿ ದೇವನೆನ್ನುವದಾದರೂ ಅದಾರಿಗೆ? ಭಕ್ತ ನೆನ್ನುವದಾದರೂ ಅದಾರಿಗೆ? ತನ್ನೊಳ ದೇವ ಭಕ್ತನೆನ್ನಲು ಅವಕಾಶವಿದೆಯೆ? ತನ್ನನ್ನು ವೇದ ವೇಧಿಸಲರಿಯದು ಶಾಸ್ತ್ರಸಾಧಿಸಲರಿಯದು ಪುರಾಣ ಪೂರೈಸಲರಿಯದು ತಾನು ಸಕಲಕ್ಕೂ ಮೀರಿದ ಘನವಾಗಿರುವಲ್ಲಿ ತನಗೆ ವೇದವು ದೇವನೆಂದುದು ಸತ್ಯವಾದೀತೆ? ದೇವನೆಂಬುದು ಸತ್ಯವಾಗದಿರುವಲ್ಲಿ ದೇವನಲ್ಲಿ ಕೂಡುವದು ಬೆರೆಯುವದು ಅದಾವ ಪರಿಯಿಂದ? ಕೂಡದಗಲದ ಘನದಲ್ಲಿ ದೇವನಾದುದು ಹೇಗೆ? ಭಕ್ತರಾದುದು ಹೇಗೆ? ತಾನಾರೆಂದರಿಯದೆ ತನ್ನ ನಿರ್ಣಯ ತನಗಾದ ಕಲ್ಪಿತರಿಗೆ ವೇದ ಹೇಳಿದ ಜ್ಞಾನ, ಶಾಸ್ತ್ರ ಸಾಧಿಸಿದ ಜ್ಞಾನ ಪುರಾಣ ಪೂರೈಸಿದ ಜ್ಞಾನ ನಿಜವಾಗಿತ್ತು. ಆಗ ದೇವನು ಸ್ವಗತಾದಿ ರಹಿತ ಸಚ್ಚಿದಾನಂದ ನಿತ್ಯ ಪೂರ್ಣವೆಂಬ ಲಕ್ಷಣವು ನಿಜವಾಗಿತ್ತು. ತಾನಾರೆಂದರಿದು ತನ್ನಿಂದ ತನ್ನ ಸ್ವಮಹಿಮೆಯಲ್ಲಿ ನೆಲಿಸಿ ತನ್ನಿರವು ತನಗದು ನಿರ್ಣಯವಾದಾಗ ಇವೆಲ್ಲವು ಹೆತ್ತರಿವು ಆದವು. ತಾನು ಮಾತ್ರ ಏನೊಂದುಸರಲು ಎಡೆಗೊಡದ ಘನಕ್ಕೆ ಘನವಾಗಿರುವದರಿಂದ ದೇವನೆನ್ನಲು ಬರದು. ಭಕ್ತ ನೆನ್ನಲು ಬರದು. ಆವಾವ ಭಾವಕ್ಕೆಡೆಗೊಡದಿಹುದೆ ತನ್ನ ಸ್ವರೂಪವೆಂದರಿದು, ತನ್ನಿಂದ ತನಗದು ವೇದ್ಯವಾಗಿರುವಲ್ಲಿ ಜಂಗಮನೆಂದು ಭಾವಿಸಲಿಲ್ಲ. ಭಕ್ತನೆಂದು ಭಾವಿಸಲಿಲ್ಲ, ತಾನು ಭಾವಕ್ಕಗಮ್ಯವೆಂಬ ನಿರ್ಭಾವಿ ಎನಲಿಲ್ಲ. ತಾನು ಆವಾವುದಕ್ಕೂ ಸಂದು ಕೊಡದ ನಿಸ್ಸೀಮನು. ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದ ಮಹಾಂತ. ಏನೊಂದುಸರಲಿಲ್ಲ ಉಸರಲು ಸರ್ವಾಂಗಂಗಳು ದ್ರೋಹವುಳ್ಳವುಗಳು. ದ್ರೋಹವುಳ್ಳವುಗಳಾದ ವಾಙ್ಮನದಿಂದ ಸುತ್ತಿಸಿದ, ಧ್ಯಾನಿಸಿದ ಭಾವಿಸಿದ ಭಾವ ನಿಜವಾಗಬಹುದೆ! ಇದು ಕಾರಣ ಇವುಗಳು ಭಾವಿಸುವ ಭಾವ ನಿಷ್ಪ್ರಯೋಜಕ, ನಿರ್ಭಾವವೆಂಬುದು ನಿಷ್ಪ್ರಯೋಜಕವಾದುದರಿಂದ ತನ್ನ ಪರಿ ಬೇರೆ ನೋಡಯ್ಯ ಎಂದು ಹೇಳಿಹರು.

ಭವ ಭವಂಗಳೆಲ್ಲವ ಪರಿಹರಿಸಿ ಕಳೆದ ನಿಭ್ರಾಂತ ನಿರುತ್ತರ ಅಪ್ರತಿಮನು. ಭವವೆಂಬುದು ಹುಟ್ಟು ಸಾವುಗಳಿಂದ ಕೂಡಿದುದು. ಆವುದು ತೋರುವುದು ಅದು ಅಡಗುವುದು. ಈ ತೋರಿಕೆ ಬಹು ವಿಚಿತ್ರವಾದುದು. ಮರವಿನಿಂದುಕ್ತವಾದಾಗ, ಪಿಂಡಾಂಡ, ಬ್ರಹ್ಮಾಂಡಗಳ ತೋರಿಕೆ, ವ್ಯಷ್ಠಿ ಸಮಷ್ಠಿಯ ತೋರಿಕೆ. ಇದು ತೋರುವುದು ನಷ್ಟವಾಗುವುದು. ಮರವಿನಿಂದುಕ್ತವಾದ ಜೀವನಿಗೆ ಈ ತೋರಿಕೆ ಆತ್ಮನಂತೆ ಸತ್ಯವಾಗಿ ಕಾಣುವುದು. ಅಬಾಧಿತವಾಗಿ ಕಾಣುವದರಿಂದ ದೇಹದ ಅಹಂ, ಮಮ, ಈ ಲೋಕದ ಅಹಂ, ಮಮ ಗಾಢವಾಗಿ ಬೆಳೆದು ದೃಢವಾಗಿ ಬೇರೂರಿರುವದರಿಂದ ಈ ಪಿಂಡಾಂಡರೂಪಿ ದೇಹವು ಸತ್ಯ ಬ್ರಹ್ಮಾಂಡರೂಪಿ ಲೋಕವು ಸತ್ಯವಾಗಿ ದೇಹವಾಸನೆ ಲೋಕವಾಸನೆ ನಷ್ಟಮಾಡಿಕೊಳ್ಳುವುದು ದುಸ್ತರವಾಗಿದೆ. ಇದಲ್ಲದೆ ಇನ್ನೊಂದು ಸಾರೆ ಭವವೆಂದು ಹೇಳಿಹರು. ಭವ ಭವಂಗಳೆಲ್ಲವ ಪರಿಹರಿಸಿ ಎಂದು ಬಿತ್ತರಿಸಿದುದು ನೋಡುವುಡೆ, ಮರವಿನಿಂದ ಕೂಡಿದ ನಾಮರೂಪಂಗಳು ತೋರಿ ಇಲ್ಲವಾದಂತೆ ಹುಟ್ಟಿ ನಷ್ಟವಾದಂತೆ ಅರುವಿನಿಂದ ಕೂಡಿದ ಶಾಸ್ತ್ರವು, ಅರುವಿನ ಲಕ್ಷಣವಾಗಲಿ, ನೆನಹು ಆಗಲಿ, ಚಿಂತನವಾಗಲಿ, ಭಾವವಾಗಲಿ ಇವು ತೋರುತ್ತವೆ ಉತ್ಪತ್ತಿಯಾಗುತ್ತವೆ, ನಷ್ಟವಾಗುತ್ತವೆ. ಇದು ಕಾರಣ ಮಹಾತ್ಮರ ಸಂಜ್ಞೆ ಭವ ಭವಂಗಳೆಲ್ಲವ ಪರಿಹರಿಸಿ ಕಳೆದ ನಿಭ್ರಾಂತ ನಿರುತ್ತರ ಎಂದು ಎಚ್ಚರಿಸಿಹರು.

ಇದು ಕಾರಣ ಭವ ಭವಂಗಳೆಲ್ಲವ ಪರಿಹರಿಸಿ, ಕಳೆಯಲು ಒಂದೆ ಸದುಪಾಯ, ತನ್ನಿಂದ ತನ್ನಂ

ಅರಿವುದು ಅರಿವುಡೆ ತಾನು ನುಡಿಗೆಡೆಗೊಡದ ಘನವೆಂಬುದು ತನ್ನಿಂದ ತಾನು ಅರಿವುದು ಆಗ ತನಗೆ ತನ್ನ ಸ್ವಮಹಿಮೆಯಲ್ಲಿ ನೆಲಿಸಲು ಬರುವುದು. ಆಗ ತನ್ನಿಂದ ತಿಳಿಸಿಕೊಳ್ಳುವ ಪಿಂಡಾಂಡಕ್ಕೂ ಬ್ರಹ್ಮಾಂಡಕ್ಕೂ ತಾನು ಮೋಸ ಹೋಗನು. ಸತ್ಯತ್ವ ಬುದ್ಧಿಯಾಗನು, ಮಿಥ್ಯೆತ್ವ ಬುದ್ಧಿ ಮಾಡನು, ನಂತರ ತನ್ನಿಂದ ತಿಳಿಸಿಕೊಳ್ಳವ ಸೋಹಂಭಾವವಾಗಲಿ ಚಿದಹಮ್ಮು ಭಾವವಾಗಲಿ, ಚಿಂತನವಾಗಲಿ, ಸಮಾಧಿ ಯಾಗಲಿ, ಅವುಗಳಿಗೆ ಮೋಸ ಹೋಗನು, ಅಂದರೆ ಅವುಗಳಿಗೆ ತಾನೆಂದು ತಿಳಿಯನು, ಅವು ತೋರಲಿ ಅಡಗಲಿ ಇವುಗಳಿಗೆ ಸತ್ಯತ್ವ ಬುದ್ಧಿ ಮಾಡನು, ಮಿಥ್ಯೆತ್ವ ಮಾಡನು, ತನ್ನೊಳಗೆ ಬುದ್ಧಿಯೆ ಭಸ್ಮವಾಗಿ, ತನ್ನ ಸ್ವಮಹಿಮೆಯಲ್ಲಿ ನೆಲಿಸಿದ ಮಾಹಾಂತನಾದುದರಿಂದ ನಿಭ್ರಾಂತ ನಿರುತ್ತರ, ತನ್ನೊಳಗೆ ಬುದ್ಧಿ ಭಸ್ಮವಾಗಿರುವದರಿಂದ ಇತ್ತ ದೇಹ ಬುದ್ಧಿಯು ಭಸ್ಮ, ಇತ್ತ ಆತ್ಮ ಬುದ್ಧಿಯು ನಷ್ಟವಾಗಿರುವದರಿಂದ ಭವ ಭವಂಗಳೆಲ್ಲವ ಪರಿಹರಿಸಿ ಕಳೆದ ಎಂದು ಹೇಳಿಹರು. ನಿಭ್ರಾಂತ ನಿರುತ್ತರವೆಂಬುದು ತನ್ನಿಂದ ತನ್ನ ಅರಿದು ತನ್ನಸ್ವ ಮಹಿಮೆಯಲ್ಲಿ ನೆಲೆಸಿದುದರಿಂದ ನಿಭ್ರಾಂತ ನಿರುತ್ತರವೆಂದು ಹೇಳಿಹರು. ಅಪ್ರತಿಮನು ತಾನೆ ಅಪ್ರತಿಮನು ತನಗೆ ಮತ್ತೊಂದು ಪ್ರತಿಯಿಲ್ಲ ತನ್ನಂಥ ದೇವನಿಹನು ಎಂಬುದು ಪ್ರತಿಯಲ್ಲ ತಾನು ಏನೊಂದಾಗದ ಘನ ತನ್ನನ್ನು ನಾಲ್ಕು ವೇದಂಗಳು ಶೃತಿಗಳು, ಸುತ್ತಿಸಲರಿಯದಿರುವಲ್ಲಿ ಲೋಕವು ಅದೆಂತು ಸುತ್ತಿಸುವುದು, ಲೋಕವು ಅಂತಪ್ಪ ಮಹಾಂತನಿಗೆ ಭೋಗಿ ಎನಲಿ ನುಡಿಗೆಡೆಗೊಡದ ಘನವಂತನನ್ನು ನುಡಿಗೊಳಪಡಿಸಿ ನೋಡುವುದೆಲ್ಲ ನಿರರ್ಥಕವು, ನಿಷ್ಪ್ರಯೋಜಕವು. ಇದು ಕಾರಣ, ಅಪ್ರತಿಮಂಗೆ ಪ್ರತಿಯುಂಟೆ ಕೂಡಲಚೆನ್ನಸಂಗಮದೇವಾ ಎಂದು ಬಿತ್ತರಿಸಿಹರು.

173

ಲಿಂಗಸ್ಥಲ, ನಾಸ್ತಿ ಯಾದಲ್ಲದೆ ಭಕ್ತನಲ್ಲ,
ಜಂಗಮಸ್ಥಲ ನಾಸ್ತಿಯಾದಲ್ಲದೆ ಶರಣನಲ್ಲ
ಗುರುಸ್ಥಲ ನಾಸ್ತಿಯಾದಲ್ಲದೆ ಐಕ್ಯನಲ್ಲ
ಇದು ಕಾರಣ ಕೂಡಲಚೆನ್ನಸಂಗಮದೇವಾ
ಭಕ್ತ ಕೆಟ್ಟು ಭವಿಯಾದನಲ್ಲದೆ ಲಿಂಗೈಕ್ಯನಲ್ಲ. ॥ 708 ॥

ತಾತ್ಪರ್ಯ : ಲಿಂಗ ಸ್ಥಲ ನಾಸ್ತಿಯಾದಲ್ಲದೆ ಭಕ್ತನಲ್ಲ: ಬಹು ಭಕ್ತರು ಹೊರಗೆ ತೋರುವ ತೀರ್ಥಕ್ಷೇತ್ರಗಳಲ್ಲಿ, ದೇವಾಲಯಗಳಲ್ಲಿರುವ ದೇವರಿಗೆ,ಲಿಂಗವೆಂದು ತಿಳಿದಿಹರು. ಇನ್ನು ಕೆಲಬರು ಬಾರಾ ಜ್ಯೋತಿರ್ಲಿಂಗಕ್ಕೆ ಲಿಂಗವೆಂದು ತಿಳಿದಿರುವದರಿಂದ,ಜ್ಯೋತಿರ್ಲಿಂಗಗಳಿರುವ ಸ್ಥಲಂಗಳೆ ಲಿಂಗಸ್ಥಲವೆಂದು ತಿಳಿದಿಹರು. ಲಿಂಗಾರ್ಚಕರು ಲಿಂಗಸ್ಥಲವೆಂದರೆ ಕರಸ್ಥಲವೆ ಲಿಂಗ ಸ್ಥಲವೆಂದು ತಿಳಿದಿಹರು. ಇನ್ನು ಕೆಲಬರು ಪಿಂಡದಲ್ಲಿ ಆಯಾ ಸ್ಥಾನಕ್ಕೆ ಲಿಂಗಸ್ಥಲವೆಂದು ,ಆಧಾರ ,ಸ್ವಾಧಿಷ್ಠ , ಮಣಿಪುರ ,ಅನಾಹತ, ವಿಶುದ್ಧ,ಬ್ರಹರಂದ್ರ ,ಶಿಖಾ, ಸ್ಥಾನಗಳನ್ನು ಲಿಂಗಸ್ಥಲವೆಂದು ತಿಳಿದಿಹರು.

ಹಠಯೋಗಿಗಳು ಷಟ್ ಚಕ್ರವ ಸಾಧಿಸಿ ಪ್ರಾಣಾಯಾಮ ಬಲದಿಂದ ಕುಂಭಕ ಯೋಗವ ಸಾಧಿಸಿ ಷಟ್ ಚಕ್ರದಲ್ಲಿ ಮನವ ಸ್ಥಾಪಿಸಿ ಅಭ್ಯಾಸ ಬಲದಿಂದ ಅಲ್ಲಿ ಕಾಣುವ ಪ್ರಕಾಶಕ್ಕೆ ಲಿಂಗವೆಂದು ತಿಳಿದಿಹರು. ಈ ಪ್ರಕಾಶ, ಪರ ಪ್ರಕಾಶವೊ? ಸ್ವ ಪ್ರಕಾಶವೊ ? ಅದು ತನ್ನಿಂದ ಬೆಳಗಿಸಿಕೊಳ್ಳುವದೊ? ಬೆಳಗುವುದೊ ? ಎಂದು ಅರುವಿನಿಂದ ಅರಿಯರು, ಇವರು ನಿತ್ಯಾ ನಿತ್ಯ ಪರಿಜ್ಞಾನವಿಲ್ಲದವರು, ಪರಪ್ರಕಾಶ, ಸ್ವಪ್ರಕಾಶದ ಪರಿಜ್ಞಾನವಿಲ್ಲದವರು, ಇವರು ಲಿಂಗತತ್ವ ಅರಿಯದವರು. ಇನ್ನೂ ಕೆಲಬರು ಲಿಂಗಾರ್ಚಕರು, ಲಿಂಗ ಜಡವೊ ಅಜಡವೊ ಎಂಬುದು ಸಹ ತಿಳಿಯದವರು ಇರುವರು. ಲಿಂಗ

ತತ್ವವರಿತವರು ತತ್ತ್ವ ವೇತ್ತರು, ತತ್ತ್ವ ದೃಷ್ಟಿಗೆ ಗೋಚರವಾಗುವ ಲಿಂಗಘನ, ಸತ್ಯ ಜ್ಞಾನಾನಂದ ಮಯವಾಗಿಹ ಲಿಂಗ. ಸ್ವಯಂ ಜ್ಯೋತಿಯಾಗಿಹ ಘನಲಿಂಗ. ಇದು ಲಿಂಗವ ಕುರುಹೆಂದು ತಿಳಿದು ಪೂಜೆ ಮಾಡುವ ಲಿಂಗಾರ್ಚಕರಿಗೂ ಕ್ರಿಯಾನಿಷ್ಠರಿಗೂ ಲಿಂಗವರಿಯುವುದು ಹೇಗೆ ಸಾಧ್ಯ?

ಕುರುಡ ಕನ್ನಡಿಯ ಹಿಡಿದಡೇನು, ತನ್ನ ಮುಖವ ತಾ ಕಾಣಲರಿಯದಂತೆ. ಶಿವ ಜ್ಞಾನವಿಲ್ಲದವನ ಕೈಯಲ್ಲಿ ಲಿಂಗವಿದ್ದಡೇನು,ಲಿಂಗದಲ್ಲಿ ತನ್ನ ನಿಜವ ತಾ ಕಾಣಲರಿಯ. ನಿಜಗುರು ಸ್ವತಂತ್ರ ಲಿಂಗೇಶ್ವರ ನರಿಯದವರು, ಲಿಂಗ ಹಿಡಿದರೇನು ವ್ಯರ್ಥ ಕಾಣಿರಣ್ಣಾ.

ವೀರಶೈವರಾಗಿ ಲಿಂಗಧರಿಸಿದುದು, ಸಮಯಾಚಾರ ಒಳ್ಳೆಯದು , ಇದರ ಜೊತೆಗೆ ಲಿಂಗವರಿಯಲು ಶಿವಜ್ಞಾನವು ಮುಖ್ಯವು. ಶಿವ ಜ್ಞಾನ ಆವುದು ಗೊತ್ತೆ? ಬೇಧಿಸ ಬಾರದೆ ಇಪ್ಪ ಅಭೇದ್ಯ ಶಿವನೆ , ನಿನ್ನ ಭೇಧಿಸಿ ತಂದು ಕೊಟ್ಟನೆನ್ನಯ ಶ್ರೀಗುರು. ಇನ್ನು ನಾ ನಿನ್ನ ಬಿಡುವೆನೆ ? ಬಿಡೆ ಬಿಡೆ, ಮೆಚ್ಚಿದೆ ಪಾದೋದಕವ, ನಚ್ಚಿದೆ ಪ್ರಸಾದವ ಗುರುವೆ ಕಪಿಲಸಿದ್ಧಮಲ್ಲಿಕಾರ್ಜುನ.

ಶೃತಿಗಗೋಚರವಾಗಿಹ ಶಿವ, ಭೇದಿಸಬಾರದೆ ಇಪ್ಪ ಅಭೇದ್ಯ ಶಿವ. ಶೃತಿಗಳನ್ನೆ ಬಾಧವಪಡಿಸಿದುದು ಪುನಃ ಅಭೇದ್ಯತ್ವ ಸಿದ್ಧಮಾಡಿ ಕರುಣಿಸಿದುದು ಶ್ರೀಗುರು ಇದು ಅಸಾಧ್ಯವ ಸಾಧಿಸಿದುದು, ಮುಟ್ಟಬಾರದು ತಾನು ಮುಟ್ಟಿದುದು ಇದು ತನ್ನಿಂದ ತನ್ನಗದು ವಿಧಿತವಾದುದು . ನಿನ್ನ ಭೇದಿಸಿ ತಂದುಕೊಟ್ಟ ನೆನ್ನಯ ಶ್ರೀಗುರು ಇನ್ನು ನಾ ನಿನ್ನ ಬಿಡುವನೆ ನೀ ಕರುಣಿಸಿದ ಮಹದನುವ ಬಿಡುವೆನೆ ? ಬಿಡೆ ಬಿಡೆ ಶಿವತತ್ವ ತಿಳಿದ ಗುಟ್ಟು ಬಿಡಲಾರೆ, ನಿನ್ನ ಮಹದರುವುಳ್ಳ ಮಹಾನುಭವಕ್ಕೆ ಮೆಚ್ಚಿದೆ. ಅರು ಹೃದಯನಾಗಿ ಅರಿದರಿದು ತೆರಹಿಲ್ಲದ ಘನ ಪ್ರಸಾದ ನಚ್ಚಿದ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದು ಶಿವ ಜ್ಞಾನದ ರಹಸ್ಯ ತಿಳಿದಾಗ ಲಿಂಗವು, ಕರಕಮಲದಲ್ಲಿದ್ದುದು ಸಾರ್ಥಕ,ಇಲ್ಲದಿದ್ದರೆ ಕುರುಡ ಕನ್ನಡಿ ಹಿಡಿದರೂ ತನ್ನ ಮುಖ ಕಾಣದಂತೆ ಹಾಗೆ ಶಿವಜ್ಞಾನರೂಪ ದಿವ್ಯ ದೃಷ್ಟಿ ಇಲ್ಲದೆ,ಲಿಂಗಹಿಡಿದರೂ ವ್ಯರ್ಥ ಕಾಣಿರಂಣಾ ನಿಜಗುರು ಸ್ವತಂತ್ರ ಸಿದ್ಧ ಲಿಂಗೇಶ್ವರಾ.

ಇನ್ನು ಕೆಲಬರು ಲಿಂಗ ಸ್ಥೂಲವೆಂಬರು ಲಿಂಗ ಸ್ಥೂಲವಲ್ಲ, ಲಿಂಗ ಸೂಕ್ಷ್ಮವೆಂಬರು ಲಿಂಗ ಸೂಕ್ಮವಲ್ಲ ಸ್ಥೂಲ ಸೂಕ್ಷ್ಮದ ಮೇಲಣ ಜ್ಞಾನರೂಪ ಪರಾನಂದ ಪರಬ್ರಹ್ಮವೆ ಲಿಂಗವೆಂದರಿದ ಅರಿವು ಅಖಂಡರೂಪು, ನಿಜಗುರು ಸ್ವತಂತ್ರ ಸಿದ್ಧ ಲಿಂಗೇಶ್ವರ ನಿಲವು ತಾನೆ ಬೇರಿಲ್ಲ.

ಓ ! ಅಣ್ಣಯ್ಯಗಳಿರಾ, ಅಪ್ಪಯ್ಯಗಳಿರಾ! ಲಿಂಗವೆಂಬುದು ಸ್ಥೂಲವಲ್ಲ, ಸೂಕ್ಷ್ಮವಲ್ಲ, ಅದು ಜ್ಞಾನರೂಪು ಪರಾನಂದ ಪರಬ್ರಹ್ಮವೆ ಲಿಂಗವೆಂದರಿದ ಅರುವು ಅಖಂಡರೂಪು ಆಗಿರುವಲ್ಲಿ ಲಿಂಗಕ್ಕೆ ಸ್ಥಲ ಹುಡುಕಬಹುದೆ? ಅದು ತೀರ್ಥಕ್ಷೇತ್ರಗಳಲ್ಲಿದ್ದುದು, ಅನ್ಯ ಸ್ಥಾನದಲ್ಲಿ ಇಲ್ಲವೆಂದು ತಿಳಿಯಬಹುದೆ? ಇದಲ್ಲದೆ ಪಿಂಡಾಂಡ ಬ್ರಹ್ಮಾಂಡವೆನ್ನದೆ ನಿಸ್ಸೀಮವಾಗಿರುವ ಲಿಂಗಕ್ಕೆ ಜ್ಞಾನ ಸ್ವರೂಪವಾಗಿರುವ ಲಿಂಗಕ್ಕೆ ಅಖಂಡಿತ ಲಿಂಗಕ್ಕೆ ಒಂದು ಸ್ಥಾನದಲ್ಲಿದ್ದು ಇನ್ನೊಂದು ಸ್ಥಾನದಲ್ಲಿಲ್ಲವೆಂದು ಅಪೂರ್ಣ ಮಾಡಬಾರದು ನೋಡಾ, ಇದಲ್ಲದೆ ಅರುವಿಂಗರುವಾಗಿಹ ಲಿಂಗಕ್ಕೆ ಅಲ್ಲಿ ಜಡ, ಚೇತನವೆಂದು ವಿಭಾಗ ಮಾಡಬಹುದೆ? ಎಲ್ಲೆಲ್ಲೂ ಪರಿಪೂರ್ಣವಾದ ಲಿಂಗಕ್ಕೆ ಆಧಾರ ಸ್ವಾಧಿಷ್ಠ, ಮಣಿಪೂರ, ಅನಾಹತ ವಿಶುದ್ಧ ಬ್ರಹ್ಮರಂಧ್ರ ಶಿಖಾ ಸ್ಥಾನಗಳೆಂದು ಸ್ಥಲಂಗಳ ಹೇಳಬಹುದೆ?

ಗಗನವು ಒಂದು ಸ್ಥಾನದಲ್ಲಿದ್ದು ಮತ್ತೊಂದು ಸ್ಥಾನದಲ್ಲಿ ಇಲ್ಲವೆನಬೇಕೆ? ಗಗನವಿಲ್ಲದ ಸ್ಥಾನವೆ ಸಿಗದಿರುವಲ್ಲಿ ಲಿಂಗವಿಲ್ಲದ ಸ್ಥಾನವು ಸಿಕ್ಕಬಹುದೆ? ಗಗನಕ್ಕಿಂತ ಸಹಸ್ರಾರು ಪಾಲು ಸೂಕ್ಷ್ಮವಾಗಿರುವ ಜ್ಞಾನರೂಪು ಲಿಂಗ ಒಂದು ಸ್ಥಾನದಲ್ಲಿದ್ದು ಇನ್ನೊಂದು ಸ್ಥಾನದಲ್ಲಿ ಇಲ್ಲವೆನಬಾರದು, ಒಂದು ಸ್ಥಾನದಲ್ಲಿ ಇದ್ದು, ಇನ್ನೊಂದು ಸ್ಥಾನದಲ್ಲಿ ಲಿಂಗವಿಲ್ಲವೆನ್ನುವದು ಚಿದ್ಘನವ ನರಿಯದ ಪರಿಣಾಮ

ಚಿದ್ಘನವನರಿಯದವರು, ಪೂಜಾಲಿಂಗವ ಧರಿಸಿದರೇನು ಬಿಟ್ಟರೇನು? ಇವರು ಲಿಂಗವ ಪೂಜಿಸಿದರೇನು ಬಿಟ್ಟರೇನು? ಲಿಂಗವರಿಯದವರು ಇವರು ಭಕ್ತರಲ್ಲ, ಯುಕ್ತರಲ್ಲ, ಲಿಂಗವರಿತವರು, ಲಿಂಗಸ್ವರೂಪರು, ಅವರಲ್ಲಿ ಲಿಂಗಬೇರೆ ತಾನು ಬೇರೆ ಜಗತ್ತು ಬೇರೆ ಗುರು ಬೇರೆಂಬ ಭೇದಜ್ಞಾನವು ನಷ್ಟವಾಗಿದೆ, ತನ್ನ ಸ್ಥಲ ಲಿಂಗಸ್ಥಲ ಒಂದಾಗಿದೆ. ತಾನೆಂದರೆ ಲಿಂಗ, ಲಿಂಗವೆಂದರೆ ತಾನು. ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದ ಸ್ವಾತ್ಮಜ್ಞಾನಿಗೆ ಸ್ಥಲವಾವುದು? ಇದು ಕಾರಣ ಕುರುಹಿನಿಂದ ಕೂಡಿದ ಲಿಂಗಸ್ಥಲವೆ ನಾಸ್ತಿಯಾಗಿದೆ. ಭಕ್ತನೆಂದರೆ ಲಿಂಗವರಿತು ಲಿಂಗವಾಗಿಹ ಘನವಂತ, ಘನಲಿಂಗವರಿತು ಘನಕ್ಕೆ ಘನವಾಗಿರುವ ಸ್ವಮಹಿಮನಿಗೆ ಕುರುಹಿನಿಂದ ಕೂಡಿದ ಅದಾವ ಲಿಂಗಸ್ಥಲ, ಅಜ್ಞಾನಿಗೆ, ಲಿಂಗ ಕುರುಹಾಗಿ ಕಂಡುದರಿಂದ ಸ್ಥಲವುಂಟು, ಸುಜ್ಞಾನಿಗೆ ಲಿಂಗ ಅನುಪಮ, ಅಖಂಡ, ಅಚಲವೆಂದು ತಿಳಿದುದರಿಂದ ಲಿಂಗಕ್ಕೆ ಸ್ಥಲವಿಲ್ಲವಾದ್ದರಿಂದ ಲಿಂಗಸ್ಥಲ ನಾಸ್ತಿಯಾಗಿಹುದರಿಂದ ಭಕ್ತನೆಂದು ಹೇಳಿಹರು.

ಜಂಗಮ ಸ್ಥಲ ನಾಸ್ತಿಯಾದುದಲ್ಲದೆ ಶರಣನಲ್ಲ, ಜಂಗಮವೆಂಬುದು ಒಂದು ವ್ಯಕ್ತಿಯಲ್ಲ, ಇದು ಒಂದು ಚಾರಿತ್ರ ಪುರುಷನಿಗೆ ಸೇರಿದುದು ಅಲ್ಲ, ಇದಲ್ಲದೆ ಇದೊಂದು ಜಾತಿಗೂ ಸೇರಿದುದು ಅಲ್ಲ. ಇದೊಂದು ಪ್ರತಿಷ್ಠಿತ ಪಡೆದ ವ್ಯಕ್ತಿಯ ಜಾತಿಯದು ಅಲ್ಲ. ಜಂಗಮೊ ಜಗದ್ಭರಿತ ಜಗದ್ಭರಿತವಾದ ತತ್ವಕ್ಕೆ ಸ್ಥಲ ಹುಡುಕುವುದು ನ್ಯಾಯವೆ, ಸ್ಥಾನ ಹುಡುಕುವುದು ನ್ಯಾಯವೆ ? ಅರುಹೃದಯಕ್ಕೆ ಸಮ್ಮತವೆ?

ಪೂಜಾಲಿಂಗ ಧರಿಸಿದ ಲಿಂಗವಂತರು ಜಂಗಮಯ್ಯಗಳು, ಗುರು ಪುಂಗವರು, ಲಿಂಗ, ಜಂಗಮವೆಂಬುದು, ಇದೊಂದು ಸೀಮಿತ ತತ್ವಮಾಡಿ ಕೊರಳಲ್ಲಿ ಪೂಜಾ ಲಿಂಗವ ಧರಿಸಿ, ಲಿಂಗ ಪೂಜಾ ಮಾಡುವವರು, ಸೀಮಿತ ಗುಂಪಿಗೆ ಈ ಪರತತ್ವ ಸೇರಿಸಿ ತಮ್ಮದಾದ ಒಂದು ಸಾಂಪ್ರದಾಯ ಸೀಮಿತ ಭಾವಕ್ಕೆ ಹೋಲಿಸಿ ಪೂಜಾಲಿಂಗ ಹಾಕಿಕೊಂಡು, ಪೂಜಾಮಾಡುವವರು. ಅವರು ಲಿಂಗವಂತರು ಅಹುದು ಜಂಗಮಯ್ಯಗಳು ಅಹುದು, ಗುರು ವರ್ಗವು ಅಹುದು, ಇದಲ್ಲದೆ ಲಿಂಗಪೂಜಿಸುವ ಲಿಂಗವಂತರ ಗರ್ಭದಲ್ಲಿ ಜನನವಾದವರು ಲಿಂಗಾಯತರು, ಗುರು ವರ್ಗದ ಗರ್ಭದಲ್ಲಿ ಜನಿಸಿದವರೆಲ್ಲ ಗುರುಗಳು, ಜಂಗಮಯ್ಯಗಳ ಗರ್ಭದಲ್ಲಿ ಜನಿಸಿದವರೆಲ್ಲ ಜಂಗಮಯ್ಯಗಳೆಂದು ತಮ್ಮದಾದ ಸೀಮಿತ ಭಾವರೂಪಿ ಕ್ರಿಯಾಚಾರವ ಕಲಿಸಿ ಲಿಂಗ ಪೂಜಿಸುವ ಜ್ಞಾನ ಸಕಲ ಲಿಂಗವಂತರಿಗೆ ಕಲಿಸಿ ಅರುಹೃದಯ ಕಾಣಗೊಡದಂತೆ ಮಾಡಿರುವರು. ತಾವುಮರವುಳ್ಳವರು ಭಕ್ತರು ಮರವುಳ್ಳವರು ಆಗಿ, ವೇದ ವೇದಾಂತಗಳಿಗೆ ಅಸಾಧ್ಯವಾಗಿಹ ಅನುಪಮ ಲಿಂಗದ ರಹಸ್ಯವ ತಿಳಿಯದೆ, ಲಿಂಗವೆಂಬುದು ಕುರುಹೆಂದು ತಿಳಿದುದರಿಂದ ಪೂರ್ಣವು ಅಪೂರ್ಣವಾಗಿ ಬಾರಾ ಜ್ಯೋತಿರ್ಲಿಂಗಸ್ಥಲವೆ ಲಿಂಗಸ್ಥಲವಾಯಿತ್ತು. ಲಿಂಗಾರ್ಚಕರಿಗೆ ಇಷ್ಟಲಿಂಗ ಪೂಜಿಸುವ ಭಕ್ತನ ಕರಸ್ಥಲವೆ ಲಿಂಗಸ್ಥಲವಾಯಿತ್ತು. ಈ ಅಜ್ಞಾನ ಪರಿಹಾರಗೋಸ್ಕರ ಜಂಗಮ ತತ್ವ ತಿಳಿಯುವುದು ಅವಶ್ಯಕವಾದುದು, ಜಂಗಮ ತತ್ವ ಜಗದ್ಭರಿತವಾದ ತತ್ವ. ಅಖಂಡ ತತ್ವ ಜಂಗಮನೊಳಗೆ ಜಗವಿಹಿದು , ಜಗತ್ತಿನೊಳಗೆ ಜಂಗಮನಿಲ್ಲ, ಜಂಗಮವೆಂಬುದು ಲಿಂಗ ಒಂದಾಗಿರ್ದ ಜಂಗಮ , ಜಂಗಮ ಒಂದಾಗಿರ್ದ ಲಿಂಗ ಉಪಮೆಗೆ ತಂದು ಎರಡೆನಬಹುದೆ? ಮಹಾಘನ ಶುದ್ಧ ಶಿವೈಕ್ಯ ನಿರಾವರಣ, ನಿರ್ಜನಿತ, ನಿರ್ಲೇಪ, ನಿಃಕಪಟ ನಿರ್ವಚನೀಯ ನುಪಮಿಸಲಿಲ್ಲ ನಿಲ್ಲೊನಿರಾಳ ನಿರ್ಮಾಯ ನಿಸ್ಸಂಗಿ ನಿರ್ಲಿಖಿತ ನಿರವಯನ ಅವಯವಕ್ಕೆ ತರಲಿಲ್ಲ, ನಿಲ್ಲೊ ಸಿಮ್ಮಲಗೆಯ ಚೆನ್ನರಾಮನೆಂಬ ಜಂಗಮ ಲಿಂಗವನುಪಮಿಸಲಿಲ್ಲ ನಿಲ್ಲೊ!

ಜಂಗಮ ಸ್ಥಲ ನಾಸ್ತಿಯಾಗಬೇಕಾದರೆ ಲಿಂಗ ಒಂದಾಗಿರ್ದ ಜಂಗಮ ತತ್ವ ತಿಳಿಯುವುದು.

ಆಗ ಜಂಗಮವೆಂಬುದು ಒಂದು ವ್ಯಕ್ತಿ ಅಲ್ಲ. ಜಾತಿಗೆ ಸೇರಿದುದು ಅಲ್ಲ .ಪಕ್ಷ ಅಂದರೆ ದ್ವೈತ ಪಕ್ಷವೂ ಅಲ್ಲ, ಅದ್ವೈತ ಪಕ್ಷವೂ ಅಲ್ಲ. ಅದು ಮರವಿನ ಪಂಗಡಕ್ಕೂ ಸೇರಿದುದುಲ್ಲ, ಅರುವೆಂಬುವವರ ಪಂಗಡಕ್ಕೂ ಸೇರಿದುದಲ್ಲ. ಅದು ಅರಿಸಿಕೊಳ್ಳುವ ಅನಾತ್ಮವು ಆಗದು, ಅರಿಯುವ ದೃಕ್ ಆಗದು, ಅರಿದರುಹಿಸಿಕೊಂಬುದಕ್ಕೆ ಮೀರಿದ ಘನವಾವುದು, ಅದು ನಿರಾವರಣ, ನಿರ್ಜನಿತ, ನಿರ್ಲೇಪ, ಇಂತಪ್ಪ ನಿಜ ಚೈತನ್ಯವು ಆರಿಗೆ ತನ್ನಿಂದ ತನಗೆ ಸಿದ್ಧವಾಗಿದೆಯೊ, ಅದುವೆ ಲಿಂಗ ಒಂದಾಗಿರ್ದ ಜಂಗಮ ಲಿಂಗ. ಇಂತಪ್ಪ ಪರತತ್ವವರಿತ ಮಹಾಂತನನ್ನು ಕಾಯ ಧಾರಿಯಾಗಿ ಕಾಣಬಾರದು, ಜೀವಭಾವಿಯಾಗಿ ಕಾಣಬಾರದು, ಸೋಹಂ ಭಾವಿಯಾಗಿ ಕಾಣಬಾರದು ಚಿದಹಮ್ಮುವುಳ್ಳವನನ್ನಾಗಿ ಕಾಣಬಾರದು ಆವಾವುದಕ್ಕೂ ಅಂಟದ ನಿರಾಲಂಬ ತತ್ವ ನಿಸ್ಸಂಗ ತತ್ವ ಅದು ನಿರ್ವಂಚಕ ತತ್ವ . ಈ ತತ್ವವರಿತ ತತ್ತ್ವವೇತ್ತನನ್ನು ಅದನ್ನಾವ ಭಾಷೆಯಿಂದ ಉಪಮಿಸುವುದು. ಅದು ತಾನೆ ತಾನಾಗಿರುವ ಸ್ವಮಹಿಮ, ಅದು ತೋರದಡಗದ ಪರಾತ್ಪರ ಪರತತ್ವವ ಹೀಗೆಯೆ ಎಂದು ಹೇಗೆ ಬರೆಯುವುದು. ಇಂತಪ್ಪ ಜಂಗಮ ಲಿಂಗವ ಒಂದು ಜಾತಿಗೂ ಒಂದು ವ್ಯಕ್ತಿಗೂ ಹೋಲಿಸಬೇಕೆ? ಹೋಲಿಸುವುದು ಮರವಿನ ಕಾರ್ಯ. ಅದು ಅರಿದರಿದ ಘನತ್ವವಲ್ಲ, ಅರುವರಿತವರಿಗೆ ಒಂದು ಕುರುಹಿಗೆ ಹೋಲಿಸುವುದು ಜಂಗಮ ಸ್ಥಲವಲ್ಲ.

ಗಗನದ ಗರ್ಭದೊಳಗೆ ಇಡೀ ವಿಶ್ವವಿರುವಲ್ಲಿ ಗಗನಕ್ಕೆ ಸ್ಥಲವೆಲ್ಲಿ ಹುಡುಕುವುದು. ಇಂತಪ್ಪ ಗಗನವೆ ಚಿದಾಕಾಶ ಗರ್ಭದೊಳಿರುವಾಗ, ಚಿತ್ ಸ್ವರೂಪಕ್ಕಾವ ಸ್ಥಲ ಹುಡುಕುವುದು ಚಿತ್ ಸ್ವರೂಪವರಿತು, ನಿರಂಜನ ನಿಜ ಚಿದ್ರೂಪವಾಗಿಹ ಜಂಗಮ ಲಿಂಗಕ್ಕೆ ಅದಾವ ಸ್ಥಲ ಹುಡುಕುವುದು? ಇದು ಕಾರಣ, ಜಂಗಮ ಲಿಂಗಕ್ಕೆ ಸ್ಥಲವಿಲ್ಲವೆಂಬುದೆ ಜಂಗಮ ಸ್ಥಲ ನಾಸ್ತಿಯಾದ ಲಕ್ಷಣ. ಇದು ಶರಣತ್ವದ ಹಿರಿಮೆ ಎಂದು ಹೇಳಿದೆ.

ಗುರುಸ್ಥಲ ನಾಸ್ತಿಯಾದಲ್ಲದೆ ಐಕ್ಯನಲ್ಲ. ಶಿವ ಪಥವರಿಯಲು, ಗುರು ಪಥವೆ ಮೊದಲು ಗುರುಪಥದಿಂದ ಲಿಂಗದುದಯ, ಜಂಗಮದುದಯ, ಪ್ರಸಾದದುದಯ. ಇದು ಕಾರಣ ಗುರು ಮಾಡಲು ಕಾರಣರಾರು? ಗುರು ಘನನು ತನ್ನಷ್ಟಕ್ಕೆ ತಾನೆ ಆದನೆ? ಕಾರಣವಿಲ್ಲದೆ ಕರ್ತಾರನಾಗಿರುವನೆ? ವಿಚಾರ ಮಾಡುವುದು ಮುಖ್ಯವಾಗಿದೆ.

ಆನು ಮಾಡಲು ಗುರುವಾದನಲ್ಲದೆ ಗುರು ಮಾಡಲು ಆನಾದೆನೆ? ಗುರು ಮಾಡಲು ಲಿಂಗವಾಯಿತ್ತಲ್ಲದೆ, ಲಿಂಗ ಮಾಡಲು ಗುರುವಾದನೆ? ಇಂತೀ ವುಭಯ ಕುಳಸ್ಥಳ ದರಿವು ಕೂಡಲಚೆನ್ನಸಂಗನ ಶರಣರು ಬಲ್ಲರಲ್ಲದೆ ಎಲ್ಲರು ಎತ್ತ ಬಲ್ಲರು.

ಗುರುಘನ ತಮಶ್ಚಂಡ ಭಾಸ್ಕರ, ಚಿಜ್ಯೋತಿ, ಜ್ಞಾನ ಜ್ಯೋತಿ ನಿಜ ಈ ತಮಶ್ಚಂಡಕ್ಕು , ಭಾಸ್ಕರನಾಗಿರುವ ಚಿಜ್ಯೋತಿಗೂ, ಸ್ವಯಂ ಜ್ಯೋತಿ. ಸ್ವಯಂಜ್ಯೋತಿಯಾಗಿಹ ತನ್ನನ್ನು ಅರಿತನೆ? ತಾನೆಂದರೆ ಅಜ್ಞಾನಕ್ಕೂ ಜ್ಞಾನಕ್ಕೂ ಮೀರಿದ ಘನನಾದುದರಿಂದ ತನ್ನನ್ನು ಗುರ ಘನನು ಮಾಡಲಿಲ್ಲ ಗುರು ಘನನನ್ನು ತಾನು ಮಾಡಿದ ಗುರು ಘನದಿಂದ ಬಂದ ಜ್ಞಾನ, ಅದು ಹೆತ್ತರಿವು. ತಾನು ಸ್ವಯಂ ಅರಿವು ಎಂಬುದು ತನಗದು ವೇದ್ಯವಾಗಿ ತಾನೆ ಅರುವಿಂಗರುವು, ಅರಿಯದರುವು ಎಂಬುದು ತನಗದು ವೇದ್ಯವಾಗಬೇಕು. ಆಗ ಗುರುಸ್ಥಲ ನಾಸ್ತಿಯಾಗುವುದು ಇಂತಪ್ಪ ಮಹದರುವು ತನ್ನಲ್ಲಿ ಬೆಳಗಿದಾಗ, ಗುರು ಸ್ಥಲ ನಾಸ್ತಿಯಾದುದು ಎಂಬುದು ತನಗೆ ವಿದಿತವಾದಲ್ಲಿ ಐಕ್ಯನೆಂದು ಹೇಳಿಹರು.

ಕೂಡಲಚೆನ್ನಸಂಗಯ್ಯ ಭಕ್ತ ಕೆಟ್ಟು ಭವಿಯಾದನಲ್ಲದೆ ಲಿಂಗೈಕ್ಯನಲ್ಲ. ಲಿಂಗ ಭಕ್ತ, ಜಂಗಮ ಭಕ್ತ, ಗುರುಭಕ್ತನೆಂಬುದು ಎಲ್ಲಿಯವರೆಗೆ ಕೆಡುವದಿಲ್ಲ,ಅಲ್ಲಿಯ ವರೆಗೆ ತನ್ನ ಸ್ವಮಹಿಮೆ ತನಗೆ ಗೊತ್ತಾಗದು , ಆವಲ್ಲಿ ತನಗಿಂತ ಬೇರೊಂದು ಘನವ ಕಂಡು ಅದರಲ್ಲಿ ಕೂಡುವುದು , ಬೆರೆಯುವುದು

ಮಾಡುವನು, ಅದು ತನ್ನಿಂದ ತನ್ನ ಕಂಡ ಸ್ವಮಹಿಮೆಯು ಅಲ್ಲ. ಇದು ಕಾರಣ ಮುಟ್ಟದ ಮುನ್ನ ಗುರು ಉಂಟು, ಲಿಂಗ ಉಂಟು, ಜಂಗಮ ಉಂಟು, ಪ್ರಸಾದ ಉಂಟು ಮುಟ್ಟಿದ ಬಳಿಕ, ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ ಪ್ರಸಾದವಿಲ್ಲ ಸ್ವಯವಲ್ಲದೆ ಪರವಿಲ್ಲವೆಂಬುದು ನಿನ್ನಲ್ಲಿ ಕಾಣಬಂದಿತ್ತು ಪ್ರಭುವೆ. ಎಂದು ಬಿತ್ತರಿಸಿದುದು ನೋಡಿದಡೆ ಎಲ್ಲಿಯವರೆಗೆ ತಾನಾರೆಂದರಿತು ತನ್ನಿಂದ ತಾನು ತನ್ನನ್ನು ಮುಟ್ಟುವದಿಲ್ಲ, ತಿಳಿಯುವದಿಲ್ಲ, ಅಲ್ಲಿಯ ವರೆಗೆ ತನ್ನೊಳಿಲ್ಲದ ಗುರು, ಲಿಂಗ, ಜಂಗಮ ಪ್ರಸಾದವ ಕಾಣುತ್ತಾನೆ. ಯಾವಾಗ ತಾನು ತನ್ನನ್ನು ತನ್ನಿಂದ ಅರಿತು ಮುಟ್ಟಿದನು, ಆಗ ಅಸಾಧ್ಯವ ಸಾಧಿಸಿದನು, ಕಾಣದುದ ಕಂಡನು, ಆಗ ಮಾತ್ರ ತಾನು ತಾನೆ, ಅಲ್ಲಿ ಗುರುವಾದುದಿಲ್ಲ ಗುರುಭಕ್ತನಾದುದಿಲ್ಲ ಲಿಂಗವಾದುದಿಲ್ಲ, ಲಿಂಗಭಕ್ತನಾದುದಿಲ್ಲ, ಜಂಗಮವಾದುದಿಲ್ಲ, ಜಂಗಮ ಭಕ್ತನಾದುದಿಲ್ಲ, ಪ್ರಸಾದಿಗಳಾದುದಿಲ್ಲ, ಇಲ್ಲಾದುದಿಲ್ಲಾದುದೆಂದಿಪ್ಪುದು ಇಲ್ಲಾದುದಿಲ್ಲಾದುದು ಎಂತಿಪ್ಪುದು. ಆಗ ತಾನು ಭವಿ ಎಂಬುದು ತೆರಹಿಲ್ಲದ ಘನ ಏನೊಂದುಸರಲು ಎಡೆಗೊಡದ ಪರಾತ್ಪರ ಪರತತ್ವ ತಾನೆಂಬುದು ಶಬ್ದಮುಗ್ಧವಾದುದ ನೇನೆಂಬೆ.

174

ಅಂಜಿಕೆಯುಳ್ಳನ್ನಕ್ಕರ ಪ್ರಾಣಲಿಂಗಿಯಲ್ಲ ಸೂತಕ ಉಳ್ಳನ್ನಕ್ಕರ ಶರಣನಲ್ಲ
ಎಂಜಲವುಳ್ಳಕ್ಕನ್ನರ ಪ್ರಸಾದಿಯಲ್ಲ, ಈ ತ್ರಿವಿಧವುಳ್ಳಕ್ಕನ್ನರ
ಲಿಂಗೈಕ್ಯನಲ್ಲ ಕೂಡಲಚೆನ್ನಸಂಗಮದೇವಾ. ॥ 709 ॥

ತಾತ್ಪರ್ಯ : ಅಂಜಿಕೆಯುಳ್ಳನ್ನಕ್ಕರ ಪ್ರಾಣಲಿಂಗಿಯಲ್ಲ: ಅಂಜಿಕೆ ಆರಿಗೆ? ಭ್ರಾಂತರಿಗೆ ವಿಪರೀತ ಬುದ್ಧಿಯುಳ್ಳವರಿಗೆ. ನಸುಗತ್ತಲೆಯಲ್ಲಿ ಹಗ್ಗದಲ್ಲಿ ಹಾವು ಕಂಡವಂಗೆ ಅಂಜಿಕೆಯಾಗಿದೆ. ಕೈಯಲ್ಲಿ ದೀಪ ತೆಗೆದುಕೊಂಡು ನೋಡಲು ಹಾವು ಇಲ್ಲ. ಇಲ್ಲದ ಹಾವು ಇಲ್ಲವಾಗಿ ಹಗ್ಗದ ದರ್ಶನ ವಾಗುವುದರಿಂದ ಅಂಜಿಕೆ ಇಲ್ಲ. ಆಗ ಸಹಜ ನಿರ್ಭಯನು, ಶಾಂತನು ಹೇಗೊ ಹಾಗೆ, ಮರವರುವೆಂಬ ದ್ವಂದ್ವದಲ್ಲಿ ಶಿಲುಕಿದ ಜೀವನಿಗೆ ಮರವಿನ ಅರುವು ಇದೆ. ಅರುವಿನ ಅರುವು ಇಲ್ಲದ್ದರಿಂದ ಅಜ್ಞಾನಿಯು.

ಅಂಜಿಕೆ ಆರಿಗೆ ? ಮರವಿನ ಅರುವಿನಲ್ಲಿ ಪಂಡಿತನಾಗಿದ್ದರೂ ಮರವುಳ್ಳವನಾದುದರಿಂದ ಅಜ್ಞಾನಿಯು. ತಾನು ಅರು ಸ್ವರೂಪನಾಗಿದ್ದರೂ, ಅರುವ ಯತಾರ್ಥ ತಿಳಿಯದಿದ್ದುದು ಇದು ಮರವು. ಅಜ್ಞಾನಿಯು ಈ ಲಕ್ಷಣವುಳ್ಳವರೆಲ್ಲ ಅಜ್ಞಾನಿಗಳು, ಈ ಅಜ್ಞಾನಿಗಳು ಭ್ರಮಾತ್ಮ ಬುದ್ಧಿಯುಳ್ಳವರು ಜಡದೇಹ ತಾನೆಂಬ ಅಹಂಕಾರಿಗಳು. ಮತ್ತು ದೇಹ ಬುದ್ಧಿಯುಳ್ಳವರಾಗಿರುವರಿಂದ ಅಂಜಿಕೆಯುಳ್ಳವರು. ಇತ್ತ ಮಾನ ಅಪಮಾನದ ಅಂಜಿಕೆ, ಸುಖದುಃಖದ ಅಂಜಿಕೆ, ಧರ್ಮಾ ಧರ್ಮದ ಅಂಜಿಕೆ, ಭೋಗ ತ್ಯಾಗ ಅಂಜಿಕೆ, ಯೋಗ ವಿಯೋಗದ ಅಂಜಿಕೆ, ಬಂಧ ಮೋಕ್ಷದ ಅಂಜಿಕೆ, ಮೇಲೆ ಸಾವಿನ ಅಂಜಿಕೆ. ಈ ಎಲ್ಲ ಅಂಜಿಕೆಯಿಂದ ಪಾರಾಗಲು ಮಾನವ ವಿಶ್ವ ಪ್ರಯತ್ನ ಮಾಡುತ್ತಿರುತ್ತಾನೆ. ಆದರೂ ಅಂಜಿಕೆ ಮಾತ್ರ ಹೋಗಿರುವುದಿಲ್ಲ, ಹೆಚ್ಚಿನ ಅಂಜಿಕೆ ಮರಣ, ಈ ಮರಣ ಭಯದಿಂದ ನಿವೃತ್ತರಾಗಲು ಹಠಯೋಗ ಪ್ರಾಣಾಯಾಮ ಬಲದಿಂದ ಕುಂಭಕಯೋಗ ಸಾಧಿಸಿ ಬ್ರಹ್ಮರಂಧ್ರದಲ್ಲಿ ಪ್ರಾಣವಾಯುವನ್ನು ಸೇರಿಸಿ ಖೇಚರಿ ಮುದ್ರೆಯಿಂದ ಸಹಸ್ರಾರು ವರ್ಷಗಳವರೆಗೆ ಜೀವಿಸಿದರೂ ಜೀವಗಳ್ಳರೆ ಹೊರ್ತು, ಮುಕ್ತಾತ್ಮರಲ್ಲ ಏಕೆಂದರೆ ಅವರು ಜೀವ ಬ್ರಹ್ಮರೇಕತ್ವ ಜ್ಞಾನದಿಂದ ವಂಚಕರಾಗಿಹರು. ಶ್ರೀಗುರು ಕೃಪೆ ಲಭ್ಯವಾಗದ್ದರಿಂದ ಭೇದ ಜ್ಞಾನವೆ ಅವರಲ್ಲಿ ದೃಢವಾಗಿದ್ದರಿಂದ ತಾನಾರೆಂಬ ತನ್ನ ನಿಜ ಜ್ಞಾನವಿಲ್ಲ, ನಿಜ ಜ್ಞಾನದಿಂದ

ದೂರಾದವರಿಗೆ ಈ ದ್ವಂದ್ವದ ಭೀತಿಯಿದ್ದುದೆ , ಪ್ರಾಣದ ಭೀತಿ ಇದ್ದುದೆ, ನಾಶವುಳ್ಳ ದೇಹ, ಅಮರವನ್ನಾಗಿ ಮಾಡಬೇಕೆನ್ನುವ ಅಜ್ಞ ತನವೆ ಭೀತಿಗೆ ಕಾರಣವಾಗಿದೆ.

ಅಂಜಿಕೆಯಿಲ್ಲದವರು ಪ್ರಾಣಲಿಂಗಿಗಳು ನಿಜ. ಅದು ನಿರ್ಭಯದ ಸೂಚಕ, ಪ್ರಾಣ ಲಿಂಗಿಗಳ ಸೂಚಕ. '' ಪ್ರಾಣಲಿಂಗ ಪರಾಪರವೆಂದರಿದು ಅಣು ರೇಣು ತೃಣ ಕಾಷ್ಟದೊಳಗೆ ಕೂಡಿ, ಪರಿಪೂರ್ಣ ಶಿವನೆಂದರಿದು, ಇಂತು ಕ್ಷಣ ವೇದಿ ಅಂತರಂಗ ವೇದಿಸಲ್ಕೆ ಅಗಣಿತ ಅಕ್ಷರೇಶ್ವರ, ತಾನೆಂದರಿದು ಪ್ರಣವ ಪ್ರಭೆಯ ಮೇಲಣ ಪರಂಜ್ಯೋತಿ ತಾನೆಂದರಿದ ಕಾರಣ ಗುಹೇಶ್ವರ ನಿಮ್ಮ ಶರಣನುಪಮಾತೀತನು''.

ಪ್ರಾಣಲಿಂಗವದು ಶ್ರೇಷ್ಠಾತಿ ಶ್ರೇಷ್ಟವೆಂದು ತಿಳಿದು , ಎಲ್ಲೆಲ್ಲೂ ಪರಿಪೂರ್ಣವಾಗಿಹ ಪರಶಿವ ಸ್ವರೂಪ ಪ್ರಾಣಲಿಂಗ. ಇದು ಒಳಹೊರಗೆನ್ನದೆ, ಭರಿತವಾಗಿಹ ಶಿವ. ಖಂಡಾಖಂಡ ಸಂಯೋಗವಿಲ್ಲದ ಅಖಂಡ ಶಿವ. ಅಣುವಿನಲ್ಲಿ ಶಿವ, ರೇಣುವಿನಲ್ಲಿ ಶಿವ ಕಟ್ಟಿಗೆಯಲ್ಲಿ ಶಿವ ಎಲ್ಲೆಲ್ಲೂ ಶಿವನೆಂದರಿದು ಪರಿಪೂರ್ಣ ಶಿವ ಅರಿವುಡೆ ಅಗಣಿತ ಅಕ್ಷರೇಶ್ವರ ತಾನೆ, ಪ್ರಣವ ತಾನಲ್ಲ ಪ್ರಣವ ಪ್ರಭೆಯ ಮೇಲಣ ಪರಂಜ್ಯೋತಿ ತಾನೆಂದರಿದ ಶರಣ ಉಪಮಾತೀತ . ಇತ್ತ ಬಸವರಾಜ ದೇವರು, ವೇದ ವೇದಾಂತಗಳಿಗಸಾಧ್ಯವಾಗಿಹ ಅನುಪಮ ಲಿಂಗವ ತಂದು ಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ . ನಾದಬಿಂದು ಕಳೆಗಳಿಗ ಭೇದ್ಯವಾಗಿಹ ಅಚಲಿತ ಲಿಂಗವ ತಂದು ಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ . ವಾಙ್ಮನಕ್ಕಗೋಚರವಾದ ಅಖಂಡಿತ ಲಿಂಗವ ತಂದು ಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ ಇನ್ನು ನಾನು ಬದುಕಿದೆನು, ನಾ ಬಯಸುವ ಬಯಕೆ ಕೈ ಸಾರಿ ತಿಂದು ಕೂಡಲಸಂಗಮದೇವಾ ಇದು ಗುರ್‍ವಾನುಗ್ರಹ.

ಇಂಥ ಅನುಪಮ ಲಿಂಗ ಆರಿಗೆ ಲಭ್ಯವಾಗಿದೆ , ಅವರು ಬದುಕಿದವರು. ಬದುಕಿದವರಿಗೆ ಆರಾದರೂ ಸತ್ತವನೆನ್ನಬಹುದೆ ? ಬದುಕಿದವನು , ನಾನು ಸತ್ತವನೆನ್ನಲಾರ . ಬದುಕಿದವರೆಂದರೆ ಲಿಂಗ ಸಕೀಲ ಸಂಯೋಗ ವರ್ಮಸ್ಥಲವರಿತವರು , ಲಿಂಗವರಿತವರು ಲಿಂಗವೆ ತಾವಾದವರು , ಪ್ರಾಣ ಲಿಂಗವೆ ತಾನಾದವಂಗೆ ಅದಾವ ಭೀತಿ . ಶ್ರೀಗುರು ಪ್ರಾಣಲಿಂಗವನು ಕರತಳಾಮಳಕವ ಮಾಡಿ ಕರಸ್ಥಲಕ್ಕೆ ತಂದು ಕೊಟ್ಟನಾಗಿ ಒಳಗೆನ್ನದೆ ಹೊರಗರನ್ನದೆ, ಆ ಲಿಂಗವ ನಚ್ಚಿ ಮೆಚ್ಚಿ ಹರುಷದೊಳೋಲಾಡುವೆ. ಅಂದೆಂತೆಂದೊಡೆ ''ಯತೋವಾಚೊ ನಿವರ್ತಂತೆ ಅಪ್ರಾಪ್ಯ ಮನಸಾಸಹ'' ನಾದ ಬಿಂದು ಕಳಾತೀತಂ ಗುರು ಣಾ ಲಿಂಗ ಮುದ್ಭವಮ್. ಇಂತೆಂದುದಾಗಿ ಮಹಾಘನಲಿಂಗವ ಪಡೆದು ಆನಂದಿಸುವೆ ಕೂಡಲಸಂಗಮದೇವಾ ಒಳಗೆನ್ನದೆ ಹೊರಗೆನ್ನದೆ ಬಾರದಿರುವ ಅಖಂಡಿತ ಲಿಂಗ ವಾಙ್ಮನಕ್ಕಗೋಚರ ಲಿಂಗ ಅಂತಪ್ಪ ಅನುಪಮ ಲಿಂಗ. ಶ್ರೀಗುರು ಕೃಪೆಯಿಂದ ಕರತಳಾಮಳಕವಾದಲ್ಲಿ ಭಯವಾವುದು? ಅಚಲಿತ ಲಿಂಗವೆ ತಾನಾಗಿರುವ ಮಹಾಘನಲಿಂಗಿಗೆ ಭಯವೇತರದು? ಇದು ಕಾರಣ ಲಿಂಗವೆ ತಾನೆಂದರಿದವನು ಪ್ರಾಣಲಿಂಗಿಯಾದುದರಿಂದ ಅಂಜಿಕೆಯಿಲ್ಲ. ಆರು ಅಂಜಿಕೆವುಳ್ಳವರು ಅವರು ಪ್ರಾಣಲಿಂಗಿಗಳಲ್ಲ ಎಂದು ಹೇಳಿಹರು.

ಸೂತಕ ಉಳ್ಳನ್ನಕ್ಕರ ಶರಣನಲ್ಲ : ಕರ್ಣಸೂತಕ ಉಳ್ಳನ್ನಕ್ಕರ ಶರಣನಾಗಲಾರ . ನೋಟ ಸೂತಕವುಳ್ಳನ್ನಕ್ಕರ ಶರಣನಾಗಲಾರ, ಕಾಯದ ಸೂತಕ ಉಳ್ಳನ್ನಕ್ಕರ ಶರಣನಾಗಲಾರ . ಜಾತಿ ಸೂತಕ ಉಳ್ಳನ್ನಕ್ಕರ ಶರಣ ನಾಗಲಾರ, ಜನನ ಸೂತಕ ಉಳ್ಳನ್ನಕ್ಕರ ಶರಣ ನಾಗಲಾರ, ಪ್ರೇತ ಸೂತಕ ರಜ ಸೂತಕವುಳ್ಳನ್ನಕ್ಕರ ಶರಣನಾಗಲಾರ. ಕರಣ ಸೂತಕ ಹೋಗ ಬೇಕಾದರೆ ಸದ್ಗುರು ವಚನದಿಂದ, ನೋಟ ಸೂತಕ ಹೋಗಬೇಕಾದರೆ ಸದ್ಭಕ್ತರ ಕಂಡು , ಕಾಯದ ಸೂತಕ ಹೋಗಬೇಕಾದರೆ ನಿಮ್ಮ ಚರಣ ಮುಟ್ಟಿದೆನಾಗಿ, ನಾನಾ ಸೂತಕ ಹೋಗಬೇಕಾದರೆ ನಿಮ್ಮ ಶರಣರ ಅನುಭವ ಕೇಳಿದೆನಾಗಿ ಕೂಡಲಸಂಗಮದೇವಯ್ಯ ಎನ್ನ ನಾನಾ ಸೂತಕ ಹೋಯಿತ್ತು , ನೀವಲ್ಲ ದನ್ಯವಿಲ್ಲವೆಂದಾಗಿ.

ಶರಣರ ಅನುಭಾವ ಅವರ್ಣೀಯವಾದುದು. ವಾಙ್ಮನಕ್ಕೆ ಅಗೋಚರ ಲಿಂಗ, ಅಗೋಚರ

ಶರಣ ಸಕಾಯ ಲಿಂಗ, ಅಕಾಯ ಲಿಂಗ, ಆದಿ ಲಿಂಗ, ಅನಾದಿ ಲಿಂಗ, ಪೂರ್ವಿಕ ಲಿಂಗ ಅಪೂರ್ವಿಕ ಶರಣ ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ ಅಚ್ಚ ಲಿಂಗೈಕ್ಯ ಪ್ರಭುದೇವರು. ಲಿಂಗೈಕ್ಯ ಶರಣ ಮನದೆರೆದು ಮಾತಾಡಿದ ಮಾತೆ ಜ್ಯೋತಿರ್ಲಿಂಗ . ನುಡಿದು ನಿಃಶಬ್ದಿ , ನಡೆದು ನಿರ್ಗಮನಿ ಸ್ವರವೆಂಬುದು ಪರತತ್ವ . ಹೀಗಿರುವಲ್ಲಿ ಆ ಮಹಾಂತಂಗೆ ಸೂತಕವಿರಬಹುದೆ? ಸಕಾಯವೆ ಲಿಂಗವಾಗಿರುವಾಗ ಸೂತಕವೆಲ್ಲಿಯದು .

ಅಂಗಭಾವಿಗೆ ಸೂತಕ ಉಂಟು , ಸರ್ವಾಂಗ ಲಿಂಗಿಗೆ ಸೂತಕ ವೇತರದು ? ಅಂಗ ಸ್ಥಲಕ್ಕೆ ಸೂತಕಗಳುಂಟು. ಮಹಾಲಿಂಗವೆ ತಾನಾಗಿಹ ಶರಣಂಗೆ ಸೂತಕಗಳಿರಬಹುದೆ? ಇರಲರಿಯವು . ಕೊಟ್ಟುದು ಸೂತಕ, ಮುಟ್ಟಿದುದು ಸೂತಕ , ಕೊಟ್ಟು ಕೊಂಬುದೆ ಸೂತಕ ಲಿಂಗ ನಿಜೈಕ್ಯಂಗೆ . ಎಲೆ ಕೂಡಲಚೆನ್ನಸಂಗಯ್ಯಾ ಲಿಂಗ ನಾನೆಂಬುದೆ ಸೂತಕ. ಆರಿಗೆ ಶಬ್ದವೆ ಮೀಸಲವಾಗಿದೆ, ನುಡಿನಡೆಗೆಡೆಗೊಡದ ಘನ ತಾನಾಗಿಹನು, ಅಂತಪ್ಪ ಶರಣ ಸೂತಕವಿರಹಿತ ಆತನೆ ನಿಜ ಶರಣ. ಉಳಿದವರು ಸೂತಕ ವುಳ್ಳವರಾದುದರಿಂದ ಶರಣನೆನಿಸಲಾರರು .

ಎಂಜಲವುಳ್ಳನ್ನಕ್ಕರ ಪ್ರಸಾದಿಯಲ್ಲ : ಎಂಜಲು ಬಹು ಸೂಕ್ಷ್ಮವಾಗಿ ನಿರೀಕ್ಷಿಸಿದರೆ ತಿಳಿಯುವುದು. ಪ್ರಸಾದಿಕರಲ್ಲಿ ಎಂಜಲು ಎನ್ನುವ ನೇಮದವರು ಬಹಳಷ್ಟು ಇರುವರು . ಒಬ್ಬನ ಪ್ರಸಾದ ಸೇವಿಸಿದುದು ಮತ್ತೊಬ್ಬನು ಸೇವಿಸಿದ ಮಾತ್ರದಲ್ಲಿ ಎಂಜಲು ಎನ್ನುವ ನೇಮದವರು ಇದ್ದಾರೆ. ಇದು ಬಹಿರ್ ಪ್ರಸಾದಿಕರ ಅನುಭವಕ್ಕೆ ಬರುವ ವಿಷಯವಲ್ಲ. ಕೆಲಬರು ಒಬ್ಬರ ಬಾಯೊಳಗಿನ ಪ್ರಸಾದ ತೆಗೆದುಕೊಂಡು ತಾವು ಸೇವಿಸುವರು. ಪ್ರಸಾದ ಎಂಜಲು ಎನ್ನಬಾರದ ಅವರ ನೇಮದಲ್ಲಿ ಹೀಗೆ ಹಲವು ವಿಧದಲ್ಲಿ ಎಂಜಲ ಬಗ್ಗೆ ತಿಳಿದವರು ಅತಿ ವಿರಳವಾಗಿಹರು .

'' ಶಬ್ದವೆಂಬನೆ ಶ್ರೋತ್ರವಿನ ಎಂಜಲು . ಸ್ಪರ್ಶವೆಂಬನೆ ತ್ವಕ್ಕಿನ ಎಂಜಲು ರೂಪವೆಂಬನೆ ನೇತ್ರದೆಂಜಲು ರುಚಿಯೆಂಬನೆ ಜಿಂಹ್ವೆದೆಂಜಲು, ಗಂಧವೆಂಬೆನೆ ಘ್ರಾಣದೆಂಜಲು , ನಾನೆಂಬೆನೆ ಅರುಹಿನೆಂಜಲು . ಎಂಜಲೆಂಬ ಭಿನ್ನಸೂತಕ ವಳಿದುಳಿದು ಬೆಳಗಿನ ಬೆಳಗು ಗುಹೇಶ್ವರಾ ನಿಮ್ಮ ಶರಣ''. ಪ್ರಸಾದಿ ಎಲ್ಲಿಯವರೆಗೆ ಕಲ್ಪಿತಪುರುಷನಾಗಿಹನು , ಅಲ್ಲಿಯವರೆಗೆ ಭೇದಜ್ಞಾನಿಯು . ಕಲ್ಪಿತದಲ್ಲಿ ಹುಟ್ಟಿ ಕಲ್ಪಿತವೆ ಬೆಳೆದು ಕಲ್ಪನೆಯೆ ಬಹು ಮುಖ್ಯವಾಗಿರುವವನಿಗೆ ಎಂಜಲವೆ ಎಂಜಲು, ಮೀಸಲು ತತ್ವ ಅವನೇನು ಬಲ್ಲನು? ಮೀಸಲು ತತ್ವ ಬಲ್ಲವರು ಎಂಜಲವುಳ್ಳವರಲ್ಲ . ಅವರು ಕ್ಷರಮತಿಯರಲ್ಲ, ಅಕ್ಷರ ಮತಿಯಲ್ಲಿ ಅಕ್ಷರಾಕ್ಷರವೆಂಬುದಕ್ಕೂ, ಮೀರಿದ ಘನಕ್ಕೆ ಘನರು. ಅನುಪಮರು ನಿರಾಲಂಬ ಅರುವುಳ್ಳವರು. ಇದು ಕಾರಣ ಭಿನ್ನ ಸೂತಕ ವಳಿದವರು ಶೇಷ ಪ್ರಸಾದಮಯರು ಅನುಪಮರು ಬೆಳಗಿನ ಬೆಳಗು ಎಂದು ಹೇಳಿಹರು.

ಇಂತಪ್ಪ ಮಹಾಪ್ರಸಾದಿಗಳೆ ಎಂಜಲವುಳ್ಳವರಲ್ಲ ಉಳಿದವರೆಲ್ಲ ಎಂಜಲವುಳ್ಳವರು. ಇದು ಕಾರಣ ತ್ರಿವಿಧವುಳ್ಳನ್ನಕ್ಕರ ಲಿಂಗೈಕ್ಯರಲ್ಲ ಎಂದು ಹೇಳಿಹರು.

ಅಂಜಿಕೆ ಉಳ್ಳವರು ಸೂತಕಿಗಳು : ಎಂಜಲವುಳ್ಳವರು ಇವರು ಪ್ರಸಾದಿಗಲ್ಲ ಪ್ರಾಣಲಿಂಗಿಗಳಲ್ಲ ಶರಣರಲ್ಲ ಲಿಂಗೈಕ್ಯರೆಂದರೆ ಪ್ರಸಾದಿ . ಶರಣ ಪ್ರಾಣಲಿಂಗವರಿತವರು, ಪ್ರಸಾದಿಸ್ಥಲವರಿತವರು, ಎಂಜಲವುಳ್ಳವರಲ್ಲ ಸೂತಕ ವಿರಹಿತರಾದುದರಿಂದ ಶರಣಸ್ಥಲವರಿತವರು ಅಮರತ್ವ ಹೊಲಬನರಿತವರಾದುದರಿಂದ ಅಂಜಿಕೆಯಿಲ್ಲದುದು ಪ್ರಾಣ ಲಿಂಗ ಸ್ಥಲವಾಗಿದೆ. ಈ ಮೂರು ಸ್ಥಲವುಳ್ಳವರಾದುದರಿಂದ ಲಿಂಗೈಕ್ಯರು ಕೂಡಲಚೆನ್ನಸಂಗಮದೇವಾ.

175

ಲಿಂಗಸ್ಥಲವಿಲ್ಲದವರ ಭಕ್ತರೆಂಬೆ,
ಗುರುಸ್ಥಲವಿಲ್ಲದವರ ಶಿಷ್ಯರೆಂಬೆ,
ಪ್ರಸಾದಿ ಸ್ಥಲವಿಲ್ಲದವರ ಜಂಗಮರೆಂಬೆ
ಇದುಕಾರಣ ಕೂಡಲಚೆನ್ನಸಂಗಯ್ಯನಲ್ಲಿ
ಭವಿ ಸಾಹಿತ್ಯವಾಗಿದ್ದವರ ಲಿಂಗೈಕ್ಯರೆಂಬೆ. ॥ 788 ॥

ತಾತ್ಪರ್ಯ : ಲಿಂಗಸ್ಥಲದಿಂದುಕ್ತರಾದ ಭಕ್ತರು, ಗುರು ಸ್ಥಲದಿಂದುಕ್ತರಾದ ಶಿಷ್ಯರು, ಪ್ರಸಾದ ಸ್ಥಲದಿಂದುಕ್ತರಾದ ಜಂಗಮಯ್ಯಗಳು: ಈ ತ್ರಿವಿಧ ಸ್ಥಲವುಳ್ಳವರಾದ ಶರಣರು ಸಿಕ್ಕುತ್ತಾರೆ. ಲಿಂಗಸ್ಥಲವಿಲ್ಲದ ಭಕ್ತ, ಗುರುಸ್ಥಲವಿಲ್ಲದ ಶಿಷ್ಯ, ಪ್ರಸಾದಿಸ್ಥಲವಿಲ್ಲದ ಜಂಗಮ ಸಿಕ್ಕುವುದು ವಿರಳ.

ಆಧುನಿಕ ಸಮಯದಲ್ಲಿ ಲಿಂಗವನ್ನು ತತ್ವ ದೃಷ್ಠಿಯುಂದ ತಿಳಿಯದ ಜನರು ಬಹುವಾಗಿ ಇದ್ದಾರೆ, ಅದನ್ನೆಸ್ಥೂಲ ದೃಷ್ಠಿಯಿಂದ ನೋಡುವವರು ಬಹುವಾಗಿ ಇದ್ದಾರೆ. ಲಿಂಗಕ್ಕೆ ದೇವನೆನ್ನುತ್ತಾರೆ. ಶೈವರು ಹೇಗೆ ಸ್ಥಾವರ , ಲಿಂಗವೆಂಬುದು ಒಬ್ಬರಿಂದ ರಚಿತವಾದುದು. ರಾಮೇಶ ಲಿಂಗ, ಭೀಮೇಶ ಲಿಂಗ, ಉಳುಮೇಶ್ವರ ಲಿಂಗ, ಹೇಗೆ ಬಾರಾ ಜ್ಯೋತಿರ್ಲಿಂಗಗಳಿಗೆ ಲಿಂಗವೆಂದು ಶೈವರು ತಿಳಿದಿಹರು, ವೀರಶೈವರಾದವರು ಸ್ಥೂಲ ದೃಷ್ಠಿಯಿಂದ ಲಿಂಗಕ್ಕೆ ಗೋಲಾಕಾರವೆಂದು ತಿಳಿದವರೆ ಸಾಕಷ್ಟು ಜನ ಶಿಕ್ಕುತ್ತಾರೆ.

ಲಿಂಗಸ್ಥಲವಿಲ್ಲದವರೆಂದರೆ ಬಸವಣ್ಣ . ವೇದ ವೇದಾಂತಗಳಿಗಸಾಧ್ಯವಾಗಿಹ, ಅನುಪಮ ಲಿಂಗವ ತೋರಿಸಿಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲದಲ್ಲಿ. ಎಂದು ಬಿತ್ತರಿಸಿದುದು ನೋಡಿದಡೆ, ಈ ಲಿಂಗಕ್ಕೆ ಅದಾವ ಸ್ಥಲವೆನ್ನಬೇಕು, ನಾದ ಬಿಂದು ಕಳೆಗಳಿಗಭೇದ್ಯವಾದ ಅಚಲಿತ ಲಿಂಗವ ತೋರಿಸಿಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲದಲ್ಲಿ, ಎಂಬ ಸಂಜ್ಞೆಯ ನೋಡಿದಡೆ ಲಿಂಗ ಅನುಪಮ ಅಚಲಿತವಾಗಿರುವಲ್ಲಿ ಇದಕ್ಕಾವ ಲಿಂಗಸ್ಥಲ ಹೇಳಬೇಕು. ನಾದ ಬಿಂದುವೆಂಬದಕ್ಕೂ ಮೀರಿದ ಘನ, ಕಲೆ ಎಂಬುದಕ್ಕೂ ಮೀರಿದ ಘನ, ಈ ಘನಲಿಂಗಕ್ಕೆ ಅದಾವ ಸ್ಥಲವ ಹೇಳುವದು. ವಾಙ್ಮನಕ್ಕೆ ಬಾರದ ಅಖಂಡಿತ ಲಿಂಗವ ತಂದು ಕೊಟ್ಟನಯ್ಯ ಸದ್ಗುರು ಎನ್ನಸ್ಥಲಕ್ಕೆ ಎಂಬುದು, ಇದಾವ ನುಡಿಗೆಡೆಗೊಡದ ನಡೆಗೆಡೆಗೊಡದ ಭಾವಿಕ್ಕಿಂಬು ಕೊಡದ ನಿಸ್ಸೀಮವಾದ ಲಿಂಗವೆಂದು ತಿಳಿದ ಈ ಮಹಾಂತನ ದೃಷ್ಠಿ, ಲಿಂಗವರಿತ ದೃಷ್ಠಿ. ಘನಗಂಭೀರ ಮಹಾಘನದೊಳಗೆ, ಘನಕ್ಕೆ ಘನ ವಾಗಿರ್ದನಯ್ಯ ಕೂಡಲಸಂಗಯ್ಯನೆಂಬ ಬೆಳಗಿನೊಳಗೆ ಬೆಳಗಾಗಿ ಶಬ್ದಮುಗ್ಧವಾಗಿರ್ದುದ ನೇನೆಂಬೇನೆಂಬೆ ಎಂದು ಬಿತ್ತರಿಸಿದುದು ನೋಡಿದಡೆ, ಗುರು ಕರುಣಿಸಿದುದು ಘನಗಂಭೀರ ಮಹಾಘನ. ಇದಲ್ಲದೆ ಬೆಳಗುವ ಘನವೆಂದುದು ಇದನ್ನು ತಿಳಿಯಲು ಹೋಗಿ ಘನಗಂಭೀರ ಮಹಾಘನ ಇದಲ್ಲದೆ ಬೆಳಗುವ ಘನವೆಂದು ಇದನ್ನು ತಿಳಿಯಲು ಹೋಗಿ ಘನಗಂಭೀರ ಮಹಾಘನ ಲಿಂಗವದು ನಿಜ. ಆದರೆ ಈ ಘನಗಂಭೀರ ಮಹಾಘನವ ನನ್ನಿಂದ ತಿಳಿಸಿಕೊಳ್ಳುವದರಿಂದ ಇದಕ್ಕೆ ಬೆಳೆಯುವನಾದ ನಾನು ಘನಕ್ಕೆ ಘನನಾಗಿರುವೆನು ಎಂದುದು ನೋಡಿದಡೆ ಈ ಮಹಾಂತ ಲಿಂಗಸ್ಥಲವಿಲ್ಲದ ಮಹಾಂತ, ಲಿಂಗ ಈ ಮಹಾಂತನ ಬೆಳಗಲಿಲ್ಲ ಲಿಂಗಕ್ಕೆ ತಾನೆ ಬೆಳಗಿದ. ಲಿಂಗವು ಹೆತ್ತರಿವು ಆಯಿತು. ತಾನು ಸ್ವಯ ಮೆವ ಅರಿಯದರುವು. ಲಿಂಗ ಘನ ತಾನು ಘನಕ್ಕೆ ಘನ ತಾನು ಅನುಪಮ ಅಚಲಿತ ಅಖಂಡ ಎಂಬ ಸಂಜ್ಞೆಯಿಂದುಕ್ತವಾದುದು. ಇದನ್ನರಿಯುವ ತಾನು ತನ್ನ ಸ್ವಮಹಿಮೆಯಲ್ಲಿ ನೆಲಿಸಿ ಶಬ್ದಮುಗ್ಧವಾದುದು, ಇದು ಕಾರಣ ಲಿಂಗಸ್ಥಲವಿಲ್ಲದಾತ ಬಸವಣ್ಣನೆಂದು ಹೇಳಿದುದು.

ಈ ಮಹಾಂತ , ಆದಿ ಲಿಂಗವಾದರೆ ಅನಾದಿ ಭಕ್ತ. ಪೂರ್ವಿಕ ಲಿಂಗವಾದರೆ ,ತಾನು

ಅಪೂರ್ವಿಕ ಭಕ್ತನೆಂದು ಹೇಳಿಹರು. ಇದು ಕಾರಣ ಲಿಂಗಸ್ಥಲವಿಲ್ಲದವರು ಭಕ್ತರೆಂದು ಹೇಳಿಹರು.

ಗುರುಸ್ಥಲ ವಿಲ್ಲದವರು ಶಿಷ್ಯರೆಂಬೆ: ಬಹುಜನ ಗುರುಸ್ಥಲದಿಂದುಕ್ತರಾದ ಶಿಷ್ಯರು ಸಿಕ್ಕುತ್ತಾರೆ. ಗುರುಗಳಿಂದ ಕರ್ಣವನೂದಿ ಮಂತ್ರವ ಪೇಳಿದ ಜನ ಸಿಕ್ಕುವವರೆ ಹೆಚ್ಚು. ಇದಲ್ಲದೆ ಹೊರಗಣ ತತ್ವಮಸ್ಯಾದಿ ಬಳಸಿದ ಗುರುಗಳು ಶಿಷ್ಯರು ಇವರು ಹೆಚ್ಚು, ಇದುವೆ ಗುರು ಪರಂಪರೆಯಾಗಿದೆ. ಇಬ್ಬರಿಗೊಬ್ಬರು ತತ್ವಮಸ್ಯಾದಿ ಮಹಾವಾಕ್ಯಗಳ ಹೊರಗಣ ಬಳಸುವದೆ, ಕಲಿಸುವದು. ಇದು ಗುರು ಶಿಷ್ಯ ಪರಂಪರೆಯಾಗಿ ಗುರುಸ್ಥಲವಿಲ್ಲದ ಶಿಷ್ಯರು ಶಿಕ್ಕುವುದು ದುರ್ಲಭವಾಗಿದೆ.

ಗುರುಸ್ಥಲವಿಲ್ಲದ ಶಿಷ್ಯನೆಂದರೆ ಪ್ರಭು. ''ನಿತ್ಯ ನಿರಂಜನ ತಾನೆಂದರಿಯದೆ ತತ್ವ ಮಸಿಯನೆ ಹೊರಗಣ ಬಳಸಿ ಸತ್ತಿತ್ತೆಲ್ಲ ಜಗವೆಲ್ಲ ನಾಯಿಸಾವ. ತಮ್ಮ ತಾವರಿಯದೆ ಸತ್ತವರ ಹೆಸರ ಪತ್ರ ನೋಡಿದಡೆತ್ತಣ ಮುಕ್ತಿ ಗುಹೇಶ್ವರ ''. ಎಂದು ಈ ಗುರುಸ್ಥಲವ ಖಂಡಿಸಿಹನು. ತಾನಾರೆಂದು ತಿಳಿಯಲು ಗುರು ಘನ ಅವಶ್ಯಕ. ತತ್ವಮಸಿಯೆಂದು ಹೊರಗಣ ಬಳಸಿದವರು ಗುರುಗಳೆ ? ಅಯ್ಯ ಹೊರಗಣ ಬಳಸಿದ ತತ್ವಮಸಿ ಮಹಾವಾಕ್ಯ ಅದು ನಿತ್ಯ ನಿರಂಜನವಾಗುವುದೆ? ಹೊರಗಣ ಬಳಸುವ ಗುರುಪದ ನಿತ್ಯ ನಿರಂಜನವಾಯಿತೆ? ಅದನ್ನು ಶ್ರವಣ ಮಾಡುವ ಶ್ರೋತೃಗಳು ಶಿಷ್ಯವೃಂದ ನಿತ್ಯ ನಿರಂಜನವಾಯಿತೆ. ವಾಙ್ಮನ ನಷ್ಟವಾಯಿತೆ? ನಷ್ಟವಾಗದ್ದರಿಂದ, ಇವರು ಶಬ್ದ ಬ್ರಹ್ಮರು, ನಿಃಶಬ್ದ ಬ್ರಹ್ಮವ ತಿಳಿಯಲಿಲ್ಲ. ಇದು ಕಾರಣ ವ್ಯರ್ಥ ಸತ್ತು ಹೋದರು ಮತ್ತು ಸತ್ತವರ ಸುದ್ದಿ ಹೇಳುವ ಗುರು ಸ್ಥಲದವರು ಎಂದು ಖಂಡಿಸಿದ್ದಾರೆ. ಗುರುವಿಡಿದ ಅರುವು ಅರುವಲ್ಲ ಲಿಂಗವಿಡಿದ ಅರುವು ಅರುವಲ್ಲ, ಇಲ್ಲದ ಗುರು, ಇಲ್ಲದ ಲಿಂಗ ಕಲ್ಪಿತಕ್ಕೆ ಅರಿವಹುದೆ? ತನ್ನಿಂದ ತಾನರಿಯುವುಡೆ ಅರಿವು ಗುಹೇಶ್ವರ ಎಂದು ಬಿತ್ತರಿಸಿದುದು ನೋಡಿದಡೆ, ಈ ಮಹಾಂತನ ಮಹದರಿವು ಗುರುವಿಡಿದ ಅರಿವು ಅಲ್ಲ, ತನ್ನಿರುವಿನ ಅರುವು . ಉಳಿದವುಗಳನ್ನ ಕಲ್ಪಿತವಾಗಿ ಕಂಡಿಹನು. ತಾನು ಅಕಲ್ಪಿತ ಘನವಾಗಿಹನು. ಗುರುವೆಂದರಿದವನು ತಾನೆ, ಲಿಂಗವೆಂದರಿದವನು , ಜಂಗಮವೆಂದರಿದವನು ತಾನೆ. ಇವಾವು ತನ್ನ ಬೆಳಗಲಿಲ್ಲ ತಿಳಿಯಲಿಲ್ಲ ತಾನೆ ಬೆಳಗಿನ ಬೆಳಗು. ಸ್ವಯಂ ಬೆಳಗುವಿದ್ದುದರಿಂದ ಅರುವಿಂಗರುವು ನಿಜವಾದ ಅರುವು ತಾನೆ. ಇದು ನಿಜವಾದ ಶಿಷ್ಯತ್ವ ತನ್ನ ಮೂಲವಾದ ಸ್ವಮಹಿಮೆಗೆ ಒಪ್ಪಿ ತನ್ನೊಳ ಗುರುವಿಲ್ಲದ ಶಿಷ್ಯತ್ವ ಒಪ್ಪಿದುದು ಇದು ಅತಿ ವಿರಳವೆಂದಿಹರು.

ಪ್ರಸಾದಿಸ್ಥಲವಿಲ್ಲದವರ ಜಂಗಮವೆಂಬೆ : ಪ್ರಸಾದಿ ಸ್ಥಲವೆಂದರೆ ಬಹುಪ್ರಸಾದಿಕರು ಮಡಿ ನೀರಿನಿಂದ ಹಾಲು ತುಪ್ಪ ದ್ರಾಕ್ಷಿ ವಾಡಂಬಿ ಗೋದಿ ಹಿಟ್ಟಿನಿಂದ ಪಕ್ವಮಾಡಿದ ಅನ್ನಕ್ಕೆ ಪಂಚಾಮೃತ ಪ್ರಸಾದವೆಂದು ತಿಳಿದು ದೇವನಿಗೆ ನೈವೇದ್ಯಮಾಡಿ , ಅದನ್ನು ಭಕ್ಷಿಸುವದೆ ಪ್ರಸಾದಿಸ್ಥಲವೆಂದು ಹೇಳಿಹರು.

ಪ್ರಸಾದಿಸ್ಥಲವಿಲ್ಲದವರೆಂದಲ್ಲಿ ಇಲ್ಲೆಂಬುದ ನಿಲ್ಲೆನಬಲ್ಲರೆ ಅರ್ಪಿತ . ಉಂಟೆಂಬುದ ನುಂಟೆನ ಬಲ್ಲರೆ ಪ್ರಸಾದ. ಆ ಪ್ರಸಾದವ ತಾನಿಲ್ಲದೆ ಕೊಳಬಲ್ಲರೆ ಪ್ರಸಾದಿ. ಆ ಪ್ರಸಾದಿಯ ಪರಮ ಪರಿಣಾಮವೆ ಪ್ರಸಾದವಾಗಿ ಆ ಪ್ರಸಾದವೆ ತಾನಾಗಿ ಬೆಳಗುತ್ತಿಪ್ಪನಯ್ಯ ಕೂಡಲಚೆನ್ನಸಂಗಾ ನಿಮ್ಮ ಶರಣ. ನುಡಿಗೆಡೆಗೊಡದ ಘನದರುವು ತಾನೆ ತಾನಾಗಿ ಆವ ಹೃದಯದಲ್ಲಿ ಪ್ರಜ್ವಲವಾಗಿ ಬೆಳಗುಳ್ಳ ಬೆಳಗಾಗಿ ಪ್ರಸಾದರೂಪವಾಗಿ ಪರಮ ಜ್ಞಾನವಾಗಿ ಪರಮಾಮೃತವಾಗಿ ವಾಙ್ಮನೋತೀತವಾಗಿದೆ. ಇದು ಪ್ರಸಾದಿಸ್ಥಲವಿಲ್ಲದವರು ಇವರು ಜಂಗಮರೆಂದು ಹೇಳಿಹರು.

ಪರಮಜ್ಞಾನ ಪರಮಾಮೃತಕ್ಕೆ ಅದಕ್ಕಾವ ಸ್ಥಲವು. ಮರವಿಂಗೆ ಸ್ಥಲವುಂಟು ಅರುವಿಂಗರುವಾದುದಕ್ಕೆ ಸ್ಥಲವೆಲ್ಲಿಯದು. ಜಂಗಮನೆಂದರೆ ದೇಹಿ ದೇಹಿ, ದೃಕ್ ದೃಕ್ ಎಂಬುದು ಶೃತಿಗಗೋಚರವಾಗಿರುವ ಪ್ರಸಾದವು ಪರಮಜ್ಞಾನವು ಪರಮಾಮೃತವು. ಇದು ಕಾರಣ

ವಾಙ್ಮನೋತೀತವೆಂದು ಹೇಳಿದಾಗ ಜಂಗಮವೆಂಬುದು ನಿರ್ನಾಮ ಜಂಗಮ, ನಿರ್ಲಕ್ಷಿತ ಜಂಗಮ, ನಿರವಧಿ ಜಂಗಮವಾದುದರಿಂದ ಅಂತಪ್ಪ ಘನ ಜಂಗಮನಿಗೆ, ಪ್ರಸಾದಿಸ್ಥಲವಿಲ್ಲವೆಂದು ಹೇಳಿಹರು.

ತ್ರಿವಿಧ ಸ್ಥಲವಿಲ್ಲದವರ ಶರಣರೆಂಬೆ :ಈ ವಿಷಯ ಮೊದಲೆ ಬಂದಿದೆ. ಅಲ್ಲಿ ನೋಡಿಕೊಳ್ಳುವುದು ಲಿಂಗಸ್ಥಲವಿಲ್ಲದ ಭಕ್ತರದು ತಿಳಿಸಿದೆ. ಗುರುಸ್ಥಲವಿಲ್ಲದ ಶಿಷ್ಯರದು ತಿಳಿಸಿದೆ . ಪ್ರಸಾದಿಸ್ಥಲವಿಲ್ಲದ ಜಂಗಮರದು ತಿಳಿಸಿದೆ. ಈ ಮೂರು ಸ್ಥಲ ಆರಿಗೆ ಇಲ್ಲವಾಗಿವೆ, ಅವರು ಶರಣರೆಂದು ಹೇಳಿಹರು, ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ ತ್ರಿವಿಧ ನಾಸ್ತಿಯಾಗಿ ಭಕ್ತ ಕೆಟ್ಟು ಭವಿಯಾದನಲ್ಲದೆ, ಲಿಂಗೈಕ್ಯನಲ್ಲವೆಂದು ಚೆನ್ನಬಸವಣ್ಣನವರ ದಿವ್ಯ ದೃಷ್ಠಿಗೆ ಲಿಂಗ ಸಾಹಿತ್ಯ ನಿಜವಾದ ಸಾಹಿತ್ಯ . ಆ ಲಿಂಗವರಿತ ಮಹಾಂತನಿಗೆ ಲಿಂಗವೆಂಬುದಿಲ್ಲ ಗುರುತತ್ವ ಸಮಪ್ರಕಾಶಮಾನವಾದ ತತ್ವ ತಿಳಿದವರಿಗೆ ಗುರುವೆಂಬುದಿಲ್ಲ, ಜಂಗಮವೆಂಬ ನಿರುಪಾಧಿ ಅರಿವು ಅಖಂಡ ಅರುವು ಅರಿದಲ್ಲಿ ಅಖಂಡಿತನೆಂಬುದಿಲ್ಲ ಲಿಂಗವರಿತವರು ಲಿಂಗೈಕ್ಯರು, ಗುರು ಘನವರಿತವರು ಲಿಂಗೈಕ್ಯರು, ಜಂಗಮ ಸ್ಥಲವರಿತವರು ಲಿಂಗೈಕ್ಯರು ಏಕೆಂದರೆ ಮೂರೆಂಬುದು ಒಂದು , ಒಂದೆಂಬುದು ಮೂರು . ಗುರು ಲಿಂಗ ಜಂಗಮ ಇವು ಬೇರಲ್ಲ.

ಚರಿಸಿ ಜಂಗಮವೆನಿಸಿತ್ತಯ್ಯ ಲಿಂಗವು. ಜಂಗಮಕ್ಕೆ ಸ್ಥಲವಿಲ್ಲ ನೆಲಿಸಿ ಲಿಂಗವೆನಿಸಿತ್ತಯ್ಯ ಲಿಂಗವು . ಒಳಗೆನ್ನದೆ, ಹೊರಗೆನ್ನದೆ ನೆಲಿಸಿದ ಲಿಂಗವಾದ್ದರಿಂದ ಸ್ಥಲವಿಲ್ಲ. ಇದರಂದವ ಅರುಹಿದಲ್ಲಿ ಗುರುವೆನಿಸಿತ್ತಯ್ಯ ಲಿಂಗವು ಇದು ಕಾರಣ ಈ ತ್ರಿವಿಧಕ್ಕೂ ಸ್ಥಲವಿಲ್ಲ . ಏಕೆಂದರೆ ಗುರು ಲಿಂಗ ಜಂಗಮಕ್ಕೆ ತಿಲಾಂಶವಾದರೂ ಭೇದವಿಲ್ಲ ನೋಡಾ. ಇದು ಕಾರಣ ಭವಿ ಸಾಹಿತ್ಯವಾಗಿದ್ದವರು ಲಿಂಗೈಕ್ಯರೆಂಬೆ ಎಂದು ಬಿತ್ತರಿಸಿದುದು ನೋಡಿದಡೆ ಬಹು ರಹಸ್ಯದಿಂದುಕ್ತವು. ಲಿಂಗಸ್ಥಲವಿಲ್ಲದ ಭಕ್ತನು ಭವಿ ಗುರುಸ್ಥಲವಿಲ್ಲದ ಶಿಷ್ಯನು ಭವಿ, ಜಂಗಮ ಸ್ಥಲವಿಲ್ಲದ ಶರಣನು ಭವಿ, ಇವರು ನಿಃಶಬ್ದವೇದಿಗಳು ಭವಿ ಸಾಹಿತ್ಯವಾಗಿದ್ದವರು.

ಅರುವರಿತು ಅರಿಯದರುವೆ ತಾನಾಗಿ ನಿಂತ ನಿಬ್ಬೆರಗು . ಇದು ಭವಿ ಸಾಹಿತ್ಯ ಭಾವಕ್ಕಿಂಬಿಲ್ಲದ ಶಬ್ದಮಿಸಲವಾಗಿದ್ದ ಸಾಹಿತ್ಯ . ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವು ಕೂಡಿ ಅಚಲಾನಂದದಲ್ಲಿದ್ದುದು ಭವಿ ಸಾಹಿತ್ಯ . ಈ ಭವಿ ಸಾಹಿತ್ಯವಾಗಿದ್ದವರೆ ಲಿಂಗೈಕ್ಯರು ಎಂದು ಹೇಳಿಹರು.

176

ಉಂಟೆಂಬ ವಸ್ತು, ಇಲ್ಲೆಂಬ ಪ್ರಮಾಣ ಬಹು ,
ಆಚಾರಕಿಕ್ಕುವುದು ಭಕ್ತಿಯೆ? ಉಂಟೆಂಬ ಉದ್ಭವಿಯಲ್ಲ
ಇಲ್ಲೆಂಬ ನಿರ್ಭಾವಿಯಲ್ಲ ಇದು ಕಾರಣ ಕೂಡಲಚೆನ್ನಸಂಗಾ
ಸಜ್ಜನ ಶುದ್ಧ ಶಿವಾಚಾರಿಗಲ್ಲದೆ ಲಿಂಗೈಕ್ಯ ಅಳವಡದು . ॥ 724 ॥

ತಾತ್ಪರ್ಯ : ಉಂಟೆಂಬ ವಸ್ತು, ಇಲ್ಲೆಂಬ ಪ್ರಮಾಣ ಬಹು ಆಚಾರಕ್ಕಿರುವುದು ಭಕ್ತಿಯೆ : ಬಹು ಭಕ್ತರು ಜಿಜ್ಞಾಸುಗಳು, ಮುಮುಕ್ಷುವೃಂದ, ಗುರು ವಿರಕ್ತರು, ಜಂಗಮಯ್ಯಗಳು, ಉಂಟೆಂಬ ವಸ್ತುವಿಗೆ ನಂಬಿದವರು ಉಂಟು . ವಸ್ತು ಇಲ್ಲೆಂಬ ಪ್ರಮಾಣವ ನಂಬಿದವರು ವಿರಳ ವೇದ ವೇದಾಂತಗಳು ವಸ್ತು ಉಂಟು ಎಂಬುದನ್ನು ಆಧಾರ ಮಾಡಿಕೊಂಡು, ಅಧಿಷ್ಠಾನದಲ್ಲಿ ಹೆಣೆದು, ಅಂಗನೆಂಬ ಜೀವನಿಗೆ ಪುರುಷಾರ್ಥ ಜ್ಞಾನ ಮಾಡಿಕೊಡಲು , ಲಕ್ಷಣ ಲಕ್ಷ್ಯವೆ ಸೂಚಿಸಿದಲ್ಲದೆ ತಟಸ್ಥ ಲಕ್ಷಣ ಭಾಗ , ತ್ಯಾಗ ಲಕ್ಷಣ , ಸ್ವರೂಪ ಲಕ್ಷಣವ ಉಂಟು ಎಂಬ ವಸ್ತುವ ತಿಳಿಸಲು

ದಶೋಪನಿಷತ್ತುಗಳು, ಇಪ್ಪತ್ತೆಂಟು ಆಗಮಗಳು , ಒಳ್ಳೆ ಪ್ರಬಲ ಮತಗಳೆನಿಸಿವೆ. ಇದಲ್ಲದೆ ಬ್ರಹ್ಮಸೂತ್ರ ಭಗವದ್ಗೀತೆ ಉಪನಿಷತ್ತು ಪ್ರಸ್ಥಾನತ್ರಯ ಗ್ರಂಥಗಳೆನಿಸಿವೆ . ಇಲ್ಲಿ ಕರ್ಮಿಗಳಿಗೂ ಉಪಾಸಕರಿಗೂ ಜ್ಞಾನ ಕಾಂಡದವರಿಗೂ ಮೂಲ ತತ್ವ ತಿಳಿಸುವ ಮಹದ್ಗ್ರಂಥಗಳೆಂದು ಪೂಜ್ಯರೂಪದಲ್ಲಿ ನೋಡುವ ಪಠಿಸುವ ಪಾಠಕೊಡುವ ವೇದಾಂತಾಚಾರ್ಯರ ಮುಖ್ಯ ಗುರಿಯಾಗಿದೆ. ಇವರೆಲ್ಲರುಗಳಲ್ಲಿ ವೇದ ವೇದಾಂತಗಳಿಗೆ ಅಸಾಧ್ಯವಾದ ಅನುಪಮ ಲಿಂಗವ ತಂದು ಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲದಲ್ಲಿ ಎಂಬುದನ್ನು ಸೂಚಿಸಿದ ಘನವಂತರು ಅದೆಷ್ಟು ಜನ ಇರುವರು , ಹೇಳಲು ಬಾರದಾಗಿದೆ. ಏಕೆಂದರೆ ಬಹು ಆಚಾರ್ಯರಿಗೆ ಶಬ್ದ ಸಂಭ್ರಮವೆ ಮುಖ್ಯವಾಗಿದೆ . ಬಹುಭಾಗ ವೇದ ವೇದಾಂತ ಶಬ್ದ ಸಂಭ್ರಮವುಳ್ಳದ್ದಿದೆ , ಅದರಲ್ಲಿ ಸ್ವಲ್ಪಭಾಗ ಅರಿದರಿದು ನೋಡಿದವರಿಗೆ ಶಬ್ದ ಕರಗಿಸುವ ಸಂಜ್ಞೆಗಳು ಸಿಕ್ಕುತ್ತವೆ.

ಯತಾವಾಚ್ಯೊ ನಿವರ್ತಂತೆ ಅಪ್ರಾಪ್ಯ ಮನಸಾಸಹ ಎಂಬ ಸಂಜ್ಞೆ ತಿಳಿದ ಮಹಾಂತರು, ಅದೆಷ್ಟು ಜನ ಇರುವರು. ಕಥನ ಮಾಡುವದು ಬ್ರಹ್ಮವಲ್ಲ ಮನಸ್ಸಿನಿಂದ ಕಲ್ಪಿಸುವುದು ನೆನಯುವದು ಬ್ರಹ್ಮವಲ್ಲವೆಂದು ಬೊಧಿಸುವ ಗುರುದೇವರು ಇರುವರು. ಹೀಗೆ ಬೋಧಿಸುವ ಬೋಧವನ್ನು ನಷ್ಟ ಮಾಡುವ ಮಹಾಂತ ಸದ್ಗುರು ಶಿಕ್ಕುವುದು ವಿರಳ. ಸಿಕ್ಕರೆ ಆ ಘನವಂತ ನಿಃಶಬ್ದವೇದಿ. ಈ ಮಹಾಂತ ಕಾಣಬಾರದ ಗುರು. ತನ್ನನ್ನು ಗುರುವಾಗಿ ಕಂಡಿಲ್ಲ. ಇನ್ನೊಬ್ಬನನ್ನು ಶಿಷ್ಯನನ್ನಾಗಿ ಕಂಡಿಲ್ಲ, ತಾನೆ ಜಗ, ಜಗವೆಲ್ಲ ತಾನೆಂದರಿದ ಘನವೇದ್ಯನು ಅಭೇದದ ರೂಪ . ಆ ಘನವಂತ ದಿವ್ಯ ದೃಷ್ಠಿಗೆ ತನಗಿಂತ ಅನ್ಯವಿಲ್ಲವಾದುದರಿಂದ, ಆತನಿಗೆ ಮಧ್ಯಸ್ಥವಾದ ದೃಕ್ ಎಂಬ ಅರುವು ನಾಚಿಹೋಗಿದೆ.

ಆ ಮಹಾಂತ ಮಾತಿನಲ್ಲಿ ಬಳಸುವ ನಿರಂಜನನಲ್ಲ. ನಿಜ ಚಿದ್ರೂಪ ತಾನಾದ ಘನಕ್ಕೆ ಘನ. ಅಲ್ಲಿ ಅರುವೆ ತಾನೆಂಬ ಮಮಕಾರಕ್ಕಿಂಬಿಲ್ಲ. ಆ ಘನವಂತನು ಅನ್ಯವೆನ್ನದವನು , ತಾನೆನ್ನದವನು, ಅಳಿದುಳಿಮೆಯೆಂಬುದು ಉಪಮಿಸದಂತಾದ ಅನುಪಮಸುಖ ಸಾರಾಯ , ಈ ಮಹಾಂತನೆ ಶಬ್ದ ಸಂಭ್ರಮ ದಾಂಟಿದ ಘನವಂತ. ಈತನ ಕರುಣೆಯೆಂಬುದು ಅನುಪಮ ಕರುಣೆ ಇದುವೆ ಗುರ್ವಾನುಗ್ರಹ.

ಬಹು ಗುರುಗಳ ಗುರ್ವಾನುಗ್ರಹ ಉಪಮೆಗೊಳಪಟ್ಟ ಗುರ್ವಾನುಗ್ರಹ. ಸದ್ಗುರುವಿನ ಗುರ್ವಾನುಗ್ರಹ, ಅನುಪಮ ಕೃಪೆ. ಅನುಪಮ ಕೃಪೆಯುಳ್ಳ ಸದ್ಗುರು ನಿರ್ವಾಣ ನಿಜಸುಖ ಸಂಪನ್ನ ಶ್ರೀಗುರು ಕೃಪೆಯಾದಲ್ಲಿ ನಿರ್ವಾಣದ ನಿಜ ಸುಖಿಗಳು. ಈರ್ವರಿಗೂ ಶಬ್ದ ಸಂಭ್ರಮ ನಾಚಿ ನಿಂತಿದೆ. ಇವರದು ಉಪಮಿಸದ ನಿಲುವಾಗಿದೆ, ಅದು ಸುಖದ ಸುಧೆಯು ಅಮರಾನಂದ ಧಾಮವು, ನಿಸ್ಸೀಮದ ನಿಜದರುವು, ಅಲ್ಲಿ ಆಚಾರ ಅನಾಚಾರವೆಂಬುದಕ್ಕಿಂಬಿಲ್ಲವಾದ್ದರಿಂದ, ಅದು ಶುದ್ಧ ಶಿವಾಚಾರವಾಗಿದೆ. ಉಂಟೆಂಬುದಿಲ್ಲ ಇಲ್ಲವೆಂಬುದಿಲ್ಲ. ಆಚಾರವು ಸಿದ್ಧ ಅದು ಶುದ್ಧ ಸಿದ್ಧ ಪ್ರಸಿದ್ಧದ ಅರುವು ಆಗಿದೆ. ಆವುದು ಕ್ರಿಯೆಯಿಂದುಕ್ತವಾಗಿದೆ ಬಹಿರಾಚಾರವು ಸ್ಥೂಲ ಇಂದ್ರಿಯಂಗಳಿಂದುಕ್ತವಾದುದು ಇಲ್ಲಿ ಅದು ಗೌಣವಾಗಿದೆ. ಏಕೆಂದರೆ ಇದು ಕೆಲವು ಸಮಯ ತೋರಿ ಕೆಲವು ಸಮಯದಲ್ಲಿ ಇಲ್ಲವಾಗುವುದು. ಇದು ಕಾರಣ ಅದು ಅಕ್ರಿಯೆದರುವು ಹೇಗಾಗುವುದು?

ಬಹುಭಕ್ತರ ಮತ , ಜಂಗಮರ ಮತ, ಗುರು ಉಂಟು, ಲಿಂಗ ಉಂಟು, ಜಂಗಮ ಉಂಟೆಂಬುವದಕ್ಕೆ ಒಪ್ಪುವವರೆ ಅಧಿಕವಾಗಿಹರು. ಗುರುವೆ ವಸ್ತು, ಲಿಂಗ ವಸ್ತು, ಜಂಗಮ ವಸ್ತು ಎಂಬ ಛಲವಾದಿಗಳು ಇಹರು. ವಸ್ತುವೆಂಬುದು ಇಲ್ಲದುದು ಆಗಿರುವಾಗ, ಗುರುವೆಂಬುದಿಲ್ಲ ಲಿಂಗವೆಂಬುದಿಲ್ಲ, ಗುರುವೆಂಬುದು ಕಲ್ಪಿತ, ಲಿಂಗವೆಂಬುದು ಕಲ್ಪಿತವಾದುದರಿಂದ ಅದು ಇಲ್ಲದುದು,

ಸಕಲವ ಇಲ್ಲ ಮಾಡುವ ಪ್ರಭುರೂಪಿ ಜಂಗಮ ಸಿಕ್ಕುವುದು ವಿರಳ.

ಉಂಟೆಂಬುದು ಬಸವಣ್ಣನ ರೂಪಕ, ಇಲ್ಲೆಂಬುದು ಅಲ್ಲಯ್ಯನ ರೂಪಕ ಇನ್ನಾರನ ಅಹುದೆಂಬೆನು, ಇನ್ನಾರನ ಅಲ್ಲೆಂಬೆನು ಇವರೀರ್ವರು ಛಲವಾದಿಗಳಾದುದು ಕಂಡೆ ಲಿಂಗ ಸಂಪನ್ನರನಾರನು ಕಾಣೆ ಕೂಡಲಚೆನ್ನಸಂಗಮದೇವಾ. ಸಮ್ಯಜ್ಞಾನಿ ಚೆನ್ನಬಸವರಸರು ಬಿತ್ತರಿಸಿದುದು ನೋಡಿದಡೆ ವಸ್ತು ಉಂಟೆಂಬುದಕ್ಕೂ ಒಪ್ಪಿಗೆ ಇಲ್ಲ ವಸ್ತು ಇಲ್ಲೆಂಬುದಕ್ಕೂ ಒಪ್ಪಲಿಲ್ಲ, ಒಪ್ಪುವವರು ಆಚಾರವುಳ್ಳವರು ಇವೆರಡನ್ನು ಕಾಣದವರು ಲಿಂಗೈಕ್ಯರು.

ಭಕ್ತರಾದವರು ಉಂಟೆಂಬ ಉದ್ಭಾವಿಯಲ್ಲ, ಇಲ್ಲೆಂಬ ನಿರ್ಭಾವಿಯಲ್ಲ,ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ ಶಿವಾಚಾರಿ ಗಲ್ಲದೆ ಲಿಂಗೈಕ್ಯ ಅಳವಡದು ಎಂದು ಹೇಳಿಹರು. ಗುರು, ಲಿಂಗ, ಜಂಗಮ ಉಂಟೆಂಬವನು ಶುದ್ಧ ಶಿವಾಚಾರವುಳ್ಳವನಲ್ಲ . ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲವೆಂಬುವವರು ಶುದ್ಧ ಶಿವಾಚಾರವುಳ್ಳವರಲ್ಲ ಇವರಿಗೆ ಲಿಂಗೈಕ್ಯ ಅಳವಡದು.

ಶುದ್ಧ ಶಿವಾಚಾರವುಳ್ಳವರೆಂದರೆ, ಉಂಟೆಂಬ ವಸ್ತು ಕಲ್ಪಿತವಾಗಿದೆ, ಇಲ್ಲೆಂಬ ನಿರ್ಭಾವವು ಕಲ್ಪಿತವಾಗಿದೆ. ಇವರು ಶುದ್ಧ ಶಿವ ಸ್ವರೂಪವಾಗಿಹ ತಮ್ಮಿರವ ತಾವರಿಯದವರು . ಶುದ್ಧ ಶಿವತತ್ವವೆಂಬುದು ಮಾತಿನ ರಂಜಕರದಲ್ಲ. ಅದು ಮಿಗೆ ಮಿಗೆ ಮೀಸಲವಾದ ತತ್ವ . ಅಲ್ಲಿ ಶಬ್ದವೆ ಮೀಸಲು ತನಗಿಂತನ್ಯವೆಂಬುದಿಲ್ಲ ತಾನೆನ್ನುವುದಿಲ್ಲ ಚಿದಹಮ್ಮು ಇಲ್ಲ, ನಿತ್ಯ ನಿರಂಜನ ನಿಜ ಚಿದ್ರೂಪ ತಾನಾದ ಶುದ್ಧ ಶಿವಾಚಾರ ಉಸುರಿದರದಕ್ಕದೆ ಕೊರತೆ. ಅದು ಅರಿಯದರುವು ಏನೆಂದೆನಲಿಲ್ಲದ ಅರುವು, ತಾನೆ ತಾನಾಗಿ ನಿಂತ ನಿಲುವು . ಶುದ್ಧ ಶಿವಾಚಾರವು ಮಿಗೆ ಮಿಗೆ ಮೀಸಲವಾದುದರಿಂದ ಶುದ್ಧವಾದುದು, ಅದು ಒಳಗೆನ್ನದೆ, ಹೊರಗೆನ್ನದೆ ಭರಿತವಾದುದು . ನಡೆ ನುಡಿಗೆ ಮೀರಿದುದರಿಂದ ಶ್ರೇಷ್ಠ ಆಚಾರವು ಇದು ಕೊನೆ ಮೊದಲಿಲ್ಲದ ಆಚಾರ , ನೆನೆಯಲರಿಯದ ಆಚಾರ , ನಿರ್ಧರಿಸಲರಿಯದ ಆಚಾರ , ಧ್ಯಾನಾತೀತ ತನ್ನದಾದ ಇರವು , ಅರುವ ಕರಿಗೊಂಡು ನಿಷ್ಪತ್ತಿ ನಿರಾಳ. ಇದು ಕಲ್ಪಿತನಿಗಿಂಬು ಕೊಡದ ನಿಜಧಾಮ. ಇದು ಅನುಪಮ ಸುಖ ಸಾರಾಯದಿಂದುಕ್ತವಾದ ಶುದ್ಧ ಶಿವಾಚಾರವೆಂದು ಹೇಳಿಹರು .

ಶುದ್ಧ ಶಿವಾಚಾರವು ಕಲ್ಪಿತವೆ ನಷ್ಟವಾದ ಅರುವು. ಅದು ತನ್ನಿಂದ ತನ್ನ ಅರಿತು ಅರುವಿಂಗರುವಾಗಿ ನಿಂತ ಆಚಾರ, ಇಲ್ಲಿ ಭೇದ ಅಭೇದವೆಂಬುದಕ್ಕಿಂಬು ಕೊಡದ ಆಚಾರ, ಇದು ಶುದ್ಧ ಶಿವಾಚಾರವು ತನ್ನ ಅನುಪಮ ಸುಖದ ಸುಖಿಯಾದುದು. ಶುದ್ಧ ಶಿವಾಚಾರವುಳ್ಳವರಾದುದರಿಂದ ಲಿಂಗೈಕ್ಯ ಅಳವಟ್ಟುದು ಆರಿಗೆ? ಇಂತಪ್ಪ ಶುದ್ಧ ಶಿವಾಚಾರವಾಗಿಹ ಅನುಪಮ ಸುಖದ ಸುಖಿಗಳು ಆಗಿರುವದಿಲ್ಲ ಅಥವಾ ಅಳವಟ್ಟಿರುವದಿಲ್ಲ ಅವರಿಗೆ ಲಿಂಗೈಕ್ಯವು ಅಳವಡದು ಎಂದು ಹೇಳಿಹರು .

177

ಅರ್ಪಿತವೆಂದಡೆ ಅನರ್ಪಿತವಾಯಿತ್ತು
ಅನರ್ಪಿತವೆಂದಡೆ ಅರ್ಪಿತವಾಯಿತ್ತು
ಗುರುವೆಂದಡೆ ಶಿಷ್ಯನಾಯಿತ್ತು , ಶಿಷ್ಯನೆಂದಡೆ ಗುರುವಾಯಿತ್ತು
ಗುರುಶಿಷ್ಯ ಸಂಬಂಧಕ್ಕೆ ಪ್ರತಿಭಾವವುಳ್ಳನ್ನಕ್ಕ
ಆ ಘನಲಿಂಗೈಕ್ಯವೆಲ್ಲಿಯದೊ ಕೂಡಲಚೆನ್ನಸಂಗಮದೇವಾ . ॥ 786 ॥

ತಾತ್ಪರ್ಯ:''ಅರ್ಪಿತವೆಂದಡೆ ಅನರ್ಪಿತವಾಯಿತ್ತು . ಅನರ್ಪಿತವೆಂದಡೆ

ಅರ್ಪಿತವಾಯಿತ್ತು : ಅರ್ಪಿತ ಅನರ್ಪಿತವನಾರು ಬಲ್ಲರಯ್ಯ, ಅರ್ಪಿಸಿಕೊಂಬುದು ಅನರ್ಪಿತ ಅರ್ಪಿಸದೆ ಕೊಂಬುದು ಅರ್ಪಿತ. ಅರ್ಪಿಸಿ ಅರ್ಪಿಸದೆ ಕೊಳಬಲ್ಲ ಗುಹೇಶ್ವರಾ ನಿಮ್ಮ ಪ್ರಸಾದಿ''.

ಭಕ್ತರಾಗಲಿ ಶಿಷ್ಯರಾಗಲಿ ಅರ್ಪಿತ ಅನರ್ಪಿತದ ರಹಸ್ಯ ತಿಳಿದವರು ಕಡಿಮೆ. ಈ ಅರ್ಪಿತ ಅನರ್ಪಿತದ ಗುಟ್ಟು ಅರಿದರಿದು ನೋಡುವುಡೆ ತನ್ನಿಂದ ತನಗೆ ವಿದಿತವಾಗುವ ರಹಸ್ಯ, ಇದನ್ನು ಕೊಡಕೊಳ್ಳುವ ವ್ಯವಹಾರ ದೃಷ್ಟಿಯಲ್ಲಿ ನೋಡಿದರೆ ತಿಳಿಯದು , ಏಕೆಂದರೆ ಕೊಡುವ ಕಾರ್ಯ ಒಬ್ಬನದು. ಕೊಳ್ಳುವ ಕಾರ್ಯ ಒಬ್ಬನದು. ಏನಾಗಿ ಕೊಡುವುದು, ಏನಾಗಿ ತೆಗೆದುಕೊಳ್ಳುವುದು ಇದು ಜ್ಞಾನಾಚಾರವಾಗದು .

ಅರ್ಪಿತ ಅನರ್ಪಿತ ತಿಳಿಯುವುದು ಜ್ಞಾನದಿಂದ . ಜ್ಞಾನವಿಲ್ಲದೆ ಅರ್ಪಿತದ ಕಾರ್ಯವಾಗಲಿ, ಅನರ್ಪಿತದ ಕಾರ್ಯವಾಗಲಿ ಅದು ನಿಷ್ಪ್ರಯೋಜಕವಾಗಿದೆ. ಜ್ಞಾನವಿಲ್ಲದೆ ಈಗಲೂ ಏಷ್ಟೊ ಭಕ್ತರು ಶಿಷ್ಯರು ಅರ್ಪಿತಮಾಡುವವರಾಗಿದ್ದಾರೆ. ಇದಲ್ಲದೆ ಲೌಕಿಕರು ಅರ್ಪಿತ ಮಾಡುತ್ತಾರೆ, ಅರ್ಪಿತ ಮಾಡದವರು ಇದ್ದಾರೆ, ಹಣವೆ ಆಗಲಿ, ಮನವೆ ಆಗಲಿ, ತನುವಾಗಲಿ, ನಾವು ಏಕೆ ಅರ್ಪಿತ ಮಾಡುವುದು ? ಇದರ ರಹಸ್ಯ ಗೊತ್ತಾಗಿದೆಯಾ ? ಅರ್ಪಿತ ಮಾಡದಿದ್ದರೂ , ಅದರ ರಹಸ್ಯ ಗೊತ್ತಾಗಿದೆಯಾ ? ಈರ್ವರಿಗೂ ಇದರ ಗುಟ್ಟೆ ತಿಳಿದಿಲ್ಲವೆಂದಲ್ಲಿ, ಈ ಅರ್ಪಿತ ಅನರ್ಪಿತದಿಂದ ಲಾಭವಾದುದಾದರೂ ಏನು? ಇದು ಕಾರಣ ಅರಿದರಿದು ನೋಡಿದಾಗ ಅರ್ಪಿತವೆಂದಡೆ ಅನರ್ಪಿತವಾಯಿತ್ತು. ಅನರ್ಪಿತವೆಂದಲ್ಲಿ ಅರ್ಪಿತದ ರಹಸ್ಯ ಗೊತ್ತಾಗುವುದು.ಇದಲ್ಲದೆ ಅರ್ಪಿಸಿ ಅರ್ಪಿಸದಿದ್ದಡೆ ಕೊಳಬಲ್ಲ ಜ್ಞಾನಾಚಾರ ಸಿದ್ಧವಾಗುತ್ತದೆ.

ತನುವ ಅರ್ಪಿಸವುದು ಗುರುವಿಂಗೆ , ಮನವ ಅರ್ಪಿಸುವುದು ಲಿಂಗಕ್ಕೆ , ಧನವ ಅರ್ಪಿಸುವುದು ಜಂಗಮಕ್ಕೆಂದು ಹೇಳಿದೆ. ಇವುಗಳನ್ನು ಗುರು ಲಿಂಗ ಜಂಗಮಕ್ಕೇಕೆ ಅರ್ಪಿಸುವುದು? ಗುರುವೆಂದರೆ ಜ್ಞಾನ, ಲಿಂಗವೆಂದರೆ ಜ್ಞಾನ ಸ್ವರೂಪ, ಜಂಗಮವೆಂದರೆ ಜ್ಞಾನಾನಂದ , ತನುವಿಂಗೆ ಭೂಷಣವಾದುದು . ಜ್ಞಾನ ಆವ ಜ್ಞಾನ? ಅಬಾಧಿತ ಜ್ಞಾನ ಮನಕ್ಕೆ ಭೂಷಣವಾದುದು. ನೆನಹಿಂಗೆ ಮೀರಿದ ಜ್ಞಾನ ಚಿಂತನೆಗೆ ಮೀರಿದ ಜ್ಞಾನ . ಧನಕ್ಕೆ ಭೂಷಣವಾವುದು? ಜ್ಞಾನಾನಂದಕ್ಕೆ ಉಪಯೋಗಿಸುವುದು. ಏಕೆಂದರೆ ಈ ಮೂರು ಗುರು ಲಿಂಗ ಜಂಗಮದ ಆಸ್ತಿ ಸೊತ್ತು. ಅವುಗಳ ಶೋಭೆಗಾಗಿ ಉಪಯೋಗಿಸುವುದೆ ಅರ್ಪಿತದ ಕಾರ್ಯ.

ತನುವಿನಲ್ಲಿ ಜ್ಞಾನೋದಯವಾಗಲು ಜ್ಞಾನದ ತನುವಾಗಲು ಅರುವಿನ ತನುವಾಗಲು ಸಾವಿನ ಭೀತಿ ಇಲ್ಲವಾಗುವದೆ ಅರ್ಪಿತದ ಘನತ್ವ. ಮನದಲ್ಲಿ ನೆನಹಿಂಗೆ ಮೀರಿದ ಜ್ಞಾನ ಸ್ವರೂಪ ಪ್ರಜ್ವಲಿಸುವುದೆ ಮನ ಅರ್ಪಿತದ ಘನತ್ವ . ಧನವು ಜಂಗಮರೂಪಿ ಜ್ಞಾನಾನಂದಕ್ಕಾಗಿ ಉಪಯೋಗಿಸಿ ತಾನು ಜ್ಞಾನಾನಂದ ಮಯನಾಗುವುದೆ ಅರ್ಪಿಸಿದ ಘನತ್ವ.

ತ್ರಿವಿಧಕ್ಕೆ ತ್ರಿವಿಧವನಿತ್ತು ತ್ರಿವಿಧನಾಥನೆಂಬೆ. ಅನಿತ್ಯವ ನಿತ್ಯಕ್ಕೆ ಅರ್ಪಿಸುವದೆ ಸದುಪಯೋಗ,. ನಿತ್ಯರೂಪಿಯಾಗಿಹ ಗುರುಘನವ ಅರಿದರಿದು ನೋಡುವುಡೆ ಸ್ವಭಾವತಃ ತನುವು ನಿರ್ನಾಮವಾಗುವುದು. ಆಗ ನಿತ್ಯವೆಂದರೆ ನಿರಂತರವಾಗಿದ್ದ ಸಮಪ್ರಕಾಶಮಾನವಾದ ತತ್ವವೆ ಗುರು ಸ್ವರೂಪ , ಅದುವೆ ಶ್ರೀಗುರು ರೂಪ. ನಿರಂತರವಾಗಿಹ ಮಂಗಲ ತತ್ವ ಸ್ವರೂಪಿಯಾದ ಗುರು . ಘನಕ್ಕೆ ತನುವು ಅರ್ಪಿತವೆಂದಡೆ, ಅನರ್ಪಿತ ಮಂಗಲಮಯ ತತ್ವಕ್ಕೆ ಅಮಂಗಲ ತನುವ ಹೇಗೆ ಅರ್ಪಿಸುವುದು. ನಿರ್ಮಲ ತತ್ವಕ್ಕೆ ಮಲಮಯ ತನುವ ಅರ್ಪಿಸುವೆನೆಂದಲ್ಲಿ ದೋಷವಲ್ಲವೆ? ಹಾಗೆ ಶ್ರೀಗುರುವೆಂದರೆ ನಿರಂತರವಾಗಿಹ ಮಂಗಲಮಯ ತತ್ವ ಈ ಪರತತ್ವರೂಪಿ ಗುರುಸ್ವರೂಪಕ್ಕೆ ಈ

ಮಲಮಯವಾಗಿಹ ತನುವ ಹೇಗೆ ಅರ್ಪಿಸುವುದು. ದಿಟಕ್ಕೆ ಸಟೆಯ ಹೇಗೆ ಅರ್ಪಿಸುವದು ? ದಿಟವೆಂದರೆ ನಿರಂತರ ಇದ್ದುದು. ಸಟೆಯೆಂದರೆ ಇಲ್ಲದುದು, ಇಲ್ಲದುದು ನಿರಂತರ ಇದ್ದುದರಲ್ಲಿ ಸಟೆಯ ಹೇಗೆ ಇರುವದು . ಇಲ್ಲದ ಸಟೆಯು ಇಲ್ಲವೆ ಇಲ್ಲ. ಇದ್ದ ನಿರಂತರವಾಗಿಹ ಮಂಗಲಮಯ ತತ್ವ ಇದ್ದಂತೆ ಇದೆ. ಹಾಗೆ ಅದೆ. ಇದ್ದುದಕ್ಕೆ ಇಲ್ಲದುದು ಹೇಗೆ ಅರ್ಪಿತವಾಗಬೇಕು? ಇಲ್ಲದುದು ಇಲ್ಲವೆ ಇಲ್ಲವೆಂಬ ತಿಳಿವಳಿಕೆ ಮಾಡದೆ , ತನುಮನ ಧನಕ್ಕೆ ಅರ್ಪಿತ ಮಾಡಿದಂತೆ. ನಿತ್ಯವಾಗಿಹ ಗುರು ಲಿಂಗ ಜಂಗಮಕ್ಕೆ ಅನಿತ್ಯವಾಗಿಹ ತನು ಮನ ಧನ ಈ ಮೂರು ನಿತ್ಯ ತಿಳಿಯ ಹೋಗಿ , ಅನಿತ್ಯವೆಂಬ ತೋರಿಕೆ ಅಥವಾ ಹೆಸರು ಕೂಡಾ ಇಲ್ಲವಾದರೆ ಅನರ್ಪಿತ ಎಂದರೆ ಅರ್ಪಿತವಾಯಿತ್ತು . ಈ ತನುವ ಧನ ಅರ್ಪಿಸಹೋಗಿ ತಾನು ನಿತ್ಯನಾಗಿಹ ಮಂಗಳ ತತ್ವದ ಸಪ್ರೇಮವಾದಡೆ ಅದರಲ್ಲಿ ಸಮರಸವಾದುದೆ ಅರ್ಪಿತ . ಹೇಗೆ ಅನರ್ಪಿತವಾಯಿತ್ತು ? ಗುರುವೆಂದರೆ ಶಿಷ್ಯ , ಶಿಷ್ಯನೆಂದಡೆ ಗುರು, ಗುರು ಶಿಷ್ಯ ಸಂಬಂಧಕ್ಕೆ ಪ್ರತಿಭಾವವುಳ್ಳನ್ನಕ್ಕರ ಘನಲಿಂಗೈಕ್ಯವೆಲ್ಲಿಯದು ?

ಗುರುವೆಂದರೆ ಶಿಷ್ಯನಾಯಿತ್ತು, ಗುರುವೇದ್ಯಂಗೆ ಗುರುತ್ವವು ವೇದ್ಯವಾಗಲಿಲ್ಲ. ಇದು ಕಾರಣ ಪ್ರತಿಭಾವ ನಷ್ಟವಾಗಲಿಲ್ಲ. ನಿರವಧಿಯು ಸಿದ್ಧವಾಗಲಿಲ್ಲ, ಶಿಷ್ಯನೆಂದರೆ ಗುರುವಾಯಿತ್ತು . ಶಿಷ್ಯಂಗೂ ಮುನ್ನ ಮುನ್ನಲಾದ ತನ್ನ ಘನವು ವೇದ್ಯವಾಗಲಿಲ್ಲ . ಇದು ಕಾರಣ ಪ್ರತಿಭಾವ ನಷ್ಟವಾಗದ್ದರಿಂದ ಗುರುವಾಗಿ ತೋರಿತ್ತು .

ಗುರುಶಿಷ್ಯ ಎಂಬ ವ್ಯಾಧಿ ತಾವಾರೆಂಬ ತಮ್ಮ ಸ್ವಸ್ವರೂಪ ವೇದ್ಯವಾಗದ್ದರಿಂದ ಭಾವಾಚಾರವುಳ್ಳವರಾದರಲ್ಲದೆ ಭಾವಕ್ಕಗಮ್ಯವಾದ ತಮ್ಮ ಘನವು ವಿದಿತವಾಗಲಿಲ್ಲ. ಎಲ್ಲಿಯವರೆಗೆ ಅರುವ ಅರಿಯ ಹೋಗುವದಿಲ್ಲ . ಈ ಗುರು ಶಿಷ್ಯರೆಂಬ ಪ್ರತಿಭಾವ ರೂಪ ಭ್ರಾಂತಿ ಹೋಗುವದಿಲ್ಲ. ಗುರು ಪ್ರಕಾಶಮಯ . ಈ ಪ್ರಕಾಶಮಯ ತತ್ವ ತಿಳಿಯಲು ಹೋಗಬೇಕು. ಗುರು ಎಂದಲ್ಲಿ ಗು ಕಾರ ಗುಣಾತೀತವಾದುದು, ರು ಕಾರ ರೂಪಾತೀತವಾದುದು, ಅತೀತವಾದ ನಿಲುವುಳ್ಳದು ಗುರು ಘನವು ಗುಣಕ್ಕೂ, ರೂಪಕ್ಕೂ , ಅತೀತವಾದ ತತ್ವವೆ ಗುರುರೂಪವಾಗಿದೆ. ಆರು ತತ್ವ ಅರಿಯ ಹೋಗಿಹರು. ಅವರು ಅತೀತದ ಸ್ವಮಹಿಮೆ ಬೆಳಗುವದರಿಂದ, ಗುರುವೆನ್ನಲು ಒಪ್ಪರು . ಗುರುವೆನ್ನಲು ಹೃದಯ ಒಪ್ಪದಿರುವಾಗ, ಗುರುವೆನ್ನಿಸಿಕೊಳ್ಳುವ ಭ್ರಮವಾದರೂ ಎಲ್ಲಿಯದು ಆ ಘನವಂತನಿಗೆ? ಇವರು ಶಿಷ್ಯರೆಂಬ ಪ್ರತಿಭಾವ ವುಳ್ಳವರಾದುದಾದರೂ ಹೇಗೆ?

ಶಿಷ್ಯನೆಂಬುದು ವಿದ್ಯಾರ್ಜನೆಯ ಸಪ್ರೇಮಿ ಅಲ್ಲವೆ? ಅತೀತ ನಿಲುವುಳ್ಳ ಜ್ಞಾನಾರ್ಜನೆಗಾಗಿ ಬಂದ ಹೃದಯ. ಅದು ಶಿಷ್ಯ ಹೃದಯವಲ್ಲವೆ? ಗುರುವೆಂಬುದು ಬ್ರಹ್ಮ ವಿದ್ಯೆ, ಶಿಷ್ಯನೆಂಬುದು ಬ್ರಹ್ಮವೇದ್ಯ . ವಿದ್ಯಾರ್ಜನೆ ಸಪ್ರೇಮಿಯು ಶಿಷ್ಯನಾದವನು. ವೇದಾತೀತವಾಗಿಹ ನಿಲುವುಳ್ಳ ಅರುವು ತಿಳಿಯಲು ಹೋದಾಗ ಅವನ ಹೃದಯ ಸಹಜ ಅರು ಹೃದಯ ; ಅರುಹೃದಯವೆನಲಿಲ್ಲ . ಅಲ್ಲಿ ಪ್ರಜ್ವಲಿಸುವ ತನ್ನ ಸ್ವಮಹಿಮೆ ಸ್ವ ಮಹಿಮೆ ವೆನಲಿಲ್ಲ, ಆಗ ಘಟ್ಟಿದುಪ್ಪ ತಿಳಿದುಪ್ಪಕ್ಕೆ ಭೇದ ಉಂಟೆ? ಶಿಷ್ಯನು ಅರುಹೃದಯ, ಗುರುವು ಅರುಹೃದಯ. ಶಿಷ್ಯ ತಿಳಿದ ಅರುಹೃದಯ ಬೇರೆ? ಗುರುವಿನ ಅರುಹೃದಯ ಬೇರೆಯೆ? ಈರ್ವರು ಅರುವಿಂಗರುವಿನ ಜ್ಞಾನ ಆವಲ್ಲಿ ಅರು ಹೃದಯವಾಗಿರುವದು ಅಲ್ಲಿ ಗುರು ಶಿಷ್ಯ ಸಂಬಂಧ ಪ್ರತಿಭಾವವುಳ್ಳದ್ದಾಗಿದೆ. ಈ ಪ್ರತಿಭಾವವುಳ್ಳ ಹೃದಯಕ್ಕೆ ಅರ್ಪಿತ ಅನರ್ಪಿತದ ರಹಸ್ಯ ಗೊತ್ತಾಗದು. ಅಲ್ಲಿ ಗುರು ಶಿಷ್ಯತ್ವದ ಸಂಬಂಧವು ಗೊತ್ತಾಗದು. ಏಕೆಂದರೆ ಪ್ರತಿಭಾವವು ಒಂದನ್ನೊಂದು ಅವಲಂಬನ ಮಾಡಿಕೊಂಡು ಬಂದಭಾವಗಳು. ಎಲ್ಲಿಯವರೆಗೆ ಅಪ್ರತಿಮರಾಗುವುದಿಲ್ಲ ಅಲ್ಲಿಯವರೆಗೆ ಪ್ರತಿಭಾವವಿದ್ದುದೆ. ಇದು ಕಾರಣ ಅರ್ಪಿತ ಅನರ್ಪಿತವೆಂಬ ಇವೆರಡು ಭಾವ ಕರಗಬೇಕು. ಗುರುಶಿಷ್ಯರೆಂಬ ಭಾವ ಕರಗಬೇಕು, ಅದು ಘನಲಿಂಗೈಕ್ಯದ ಚಿನ್ಹ .

ಇದ್ದುದು ತಾನೊಬ್ಬ ತನ್ನ ವಿನಹ ಬೇರಾವ ಆವಾವ ಭಾವಕ್ಕಿಂಬುಗೊಡದೆ ಸಂದಿಲ್ಲದಿಪ್ಪ ಅಪ್ರಮಾಣ ಅಗಮ್ಯ, ಅಚಿಂತ್ಯಾತ್ಮ ತಾನಿರುವಲ್ಲಿ ಇಲ್ಲಿ ಅರ್ಪಿತ ಮಾಡುವುದು ಆರಿಗೆ, ಅರ್ಪಿತ ಮಾಡುವದೆ ಸಂಭವಿಸುವದಿಲ್ಲವೆಂದಲ್ಲಿ ಅನರ್ಪಿತ ಎಲ್ಲಿದೆ? ಇಲ್ಲದ ಗುರುತ್ವ ಇಲ್ಲದ ಶಿಷ್ಯತ್ವ ಇಲ್ಲ ಮಾಡವುದೆ ಅರ್ಪಿತದ ರಹಸ್ಯವಾಗಿದೆ. ಇದ್ದ ನಿರಂತರವಾಗಿಹ ಮಂಗಲತತ್ವ ತನ್ನಿಂದ ತನಗೆ ಬೆಳಗಿ ತಾನು ತನ್ನ ಸ್ವಮಹಿಮೆಯಲ್ಲಿರುವುದೆ, ಅನರ್ಪಿತದ ರಹಸ್ಯವಾಗಿದೆ. ಆಗ ಸಹಜ ತನ್ನಿಂದ ತಾನೆ ತನ್ನ ಸ್ವಮಹಿಮೆ. ತನ್ನಿಂದ ತಾನೆ ಬೆಳಗುವುದು. ಇದು ಶಬ್ದಮುಗ್ಧವಾದುದರಿಂದ ಘನ ಲಿಂಗೈಕ್ಯವೆಂದು ಹೇಳಿಹರು.

178

ಗುರುವಿಲ್ಲದ ಕೂಟ, ಲಿಂಗವಿಲ್ಲದ ನೋಟ
ಜಂಗಮವಿಲ್ಲದ ಮಾಟ, ಪ್ರಸಾದವಿಲ್ಲದ ಊಟ
ಈ ನಾಲ್ಕರ ಬೇಟವಿಲ್ಲದ ಕೂಟ
ಕೂಡಲಚೆನ್ನಸಂಗಯ್ಯ ನೆನಲಿಲ್ಲದ ಆಟ. ॥ 1224 ॥

ತಾತ್ಪರ್ಯ : ಗುರುವಿಲ್ಲದ ಕೂಟ : ಅದಾವ ಕೂಟ, ಶಿವ ಪಥವರಿವುಡೆ ಗುರು ಪಥವೆ ಮೊದಲು ಎಂದು ಹೇಳಿರುವಲ್ಲಿ ಗುರುವಿಲ್ಲದ ಅದೆಂಥ ಶಿವ ಕೂಟ. ಅದೆಂಥ ಶಿವ ನರಿವುದು. ಆಶ್ಚ್ರಯ! ಗುರುವಿಡಿದ ಅರಿವೆ ಅರುವಾಗಿದೆ ; ಶಿಷ್ಯಂಗೆ ಗುರು ಬೋಧಿಸಿದ ಬೋಧವೆ ಅದು ದಿಟವಾಗಿದೆ. ಅಂಥವರಿಗೆ ಗುರುವಿಲ್ಲದ ಕೂಟ ವೇದ್ಯವಾಗುವುದಾದರೂ ಹೇಗೆ? ಇದಲ್ಲದೆ ಗುರು ಕರುಣಿಸಿದ ಲಿಂಗ ಲಿಂಗದರುವೆ ದಿಟವಾಗಿ ಅದನ್ನು ನೋಡುವ ನೋಟವೆ ತನ್ನದಾಗಿದೆ. ಲಿಂಗವಿಲ್ಲದ ನೋಟವಾದರೂ ಅದು ಹೇಗೆ ಸಾಧ್ಯ? ಇವರು ಕಲ್ಪಿತರು, ಕಲ್ಪಿತ ಜ್ಞಾನಕ್ಕೆ ಒಪ್ಪಿದವರು. ಇವರಿಗೆ ಗುರುವಿಲ್ಲದ ಕೂಟ ಹೇಗೆ ಸಾಧ್ಯವು ಎಂದು ಹೇಳಿಹರು.

ಗುರುವಿಲ್ಲದ ಕೂಟ ತನ್ನ ಕೂಟ, ತನ್ನನ್ನು ಕಂಡ ಕೂಟ. ಕೂಡದಗಲದ ಕೂಟ, ಬಯಲ ಕೂಟ, ನಿರಂತರ ಕೂಟ, ತಾನಾರೆಂದರಿತು ತನ್ನಿಂದ ತನಗೆ ಸ್ವಸ್ವರೂಪ ವೇದ್ಯವಾಗಿ, ತಾನೆ ತಾನಾಗಿ ನಿಂತ ನಿಬ್ಬೆರಗು. ಇದು ಅರಿಯದರುವೆ ತನ್ನದಾದ ಕೂಟವಾದ್ದರಿಂದ, ಅರಿಯಲಿಲ್ಲ ಮರೆಯಲಿಲ್ಲ, ಇಲ್ಲದ ಗುರು ಇಲ್ಲದ ಲಿಂಗ ಏಕೆಂದರೆ ಗುರುವೆಂಬುದು ಕಲ್ಪಿತ. ಲಿಂಗವೆಂಬುದು ಕಲ್ಪಿತ, ಕಲ್ಪಿತವಾದ್ದರಿಂದ ಹೆತ್ತರಿವು. ತಾನು ಅಕಲ್ಪಿತ ಘನನಾದುದರಿಂದ ಇವುಗಳು ತನ್ನನರಿಯವು. ಗುರುವೆಂದರಿತವನು ತಾನೆ ಲಿಂಗವೆಂದರಿತವನು ತಾನೆ ತನ್ನೊಳು ಗುರು ಲಿಂಗ ಇವು ಇಲ್ಲದವುಗಳು. ತಾನು ಅಂದು ಇಂದು ಎಂದೆಂದೂ ಇದ್ದವನು, ನಿರಂತರ ವಾಗಿಹ ಮಂಗಳಮಯ ತತ್ವ, ಗುರು ಘನವು ಮರುವಿಂಗೆ ಬೆಳಗುವವನಾಗಿದ್ದಾನೆ, ಗುರುಘನಕ್ಕೆ ತಾನೆ ಬೆಳಗಿನ ಬೆಳಗು ಆಗಿರುವಲ್ಲಿ ತನ್ನ ಬೆಳಗಿನ ಬೆಳಗು ಕರಿಗೊಂಡು, ತಾನೆ ತಾನಾಗಿ ನಿಂದುದು ಅರಿಯಲಿಲ್ಲದ ಕೂಟವಾದ್ದರಿಂದ ಗುರುವಿಲ್ಲದ ಕೂಟ. ಈ ಕೂಟ ತನ್ನ ಸ್ವಮಹಿಮೆಯು ತನಗೆ ಕರಗತವಾದಲ್ಲಿ ಸ್ವಯಮೇವ ಕೂಟ. ಇದು ಆರ ಕೃಪಾಶಿರ್ವಾದದಿಂದ ಹುಟ್ಟಿದ ಕೂಟವೆನಲಿಲ್ಲ ತನ್ನ ಕೃಪೆಯಿಂದ ತನ್ನ ಕರಣಂಗಳಿಗೆ ಉದಯವಾದ ಕೂಟ. ಈ ಕೂಟ ಉದಯಾಸ್ತ ಪ್ರಜ್ಞೆಯಿಲ್ಲದ ಕೂಟವಾದ್ದರಿಂದ ಗುರುವಿಲ್ಲದ ಕೂಟವೆಂದು ಹೇಳಿಹರು.

ಲಿಂಗವಿಲ್ಲದ ನೋಟ, ಲಿಂಗ ನೋಡುವವ ತಾನೆ. ತಾನೆ ಲಿಂಗ ನೋಡುವನಲ್ಲದೆ ತನ್ನ ಲಿಂಗ ನೋಡಲಿಲ್ಲ ಲಿಂಗವೆಂದರಿತವನು ತಾನೆ, ತನ್ನ ಲಿಂಗವರಿಯಲಿಲ್ಲ. ಕಾಣುವುದು ಕಣ್ಣೊ? ಕಣ್ಣಿನಿಂದ ಕಾಣಿಸಿಕೊಳ್ಳುವುದು ಕಣ್ಣೊ? ತನ್ನಿಂದ ಕಾಣಿಸಿಕೊಳ್ಳುವ ಲಿಂಗವು ತಾನೊ? ಲಿಂಗವ ಕಾಣುವವ

ತಾನೊ? ತನ್ನಿಂದ ಕಾಣಿಸಿಕೊಳ್ಳುವ ಲಿಂಗ ತಾನೆಂದಾದರೂ ಆಗಬಹುದೆ? ಲಿಂಗವ ಕಾಣುವವನು ತಾನು , ತಾನಿಲ್ಲದ ಲಿಂಗವೆಲ್ಲಿಯದೊ ? ತಾನಿಲ್ಲದ ಗುರುವೆಲ್ಲಿಯದೊ? ತಾನಿದ್ದುದರಿಂದ ಗುರು, ತಾನಿದ್ದುದರಿಂದ ಲಿಂಗ ಸಿದ್ಧವಾಗುವುದು ಗುರುವೆಂದರಿತವನು ತಾನೆ, ಲಿಂಗವೆಂದರಿತವನು ತಾನೆ, ತನ್ನೊಳು ಇವು ಇಲ್ಲದವುಗಳು . ಇದಲ್ಲದೆ ತನ್ನ ಕಲ್ಪಿತದಿಂದ ರಚಿವಾದವುಗಳು, ತಾನು ಕಲ್ಪಿತಕ್ಕೆ ಮೀರಿದ ಘನ, ಇದು ಕಾರಣ ತನ್ನ ನೋಟ , ಲಿಂಗವಿಲ್ಲದ ನೋಟ . ಇಲ್ಲದ ಲಿಂಗ ಅದನ್ನು ನೋಡುವ ನೋಟ, ತನ್ನ ನೋಟವಾದ್ದರಿಂದ, ನೋಡದ ನೋಟ ಲಿಂಗವಿಲ್ಲದ ನೋಟ .

ಕಣ್ಣಿನ ನೋಟ , ನೋಡುವ ನೋಟವಾಗಬಹುದು , ಕಣ್ಣಿನ ಕಣ್ಣು ನಿರಂತರ ಕಣ್ಣು , ಕಣ್ಣಿನ ಹೊರತು ಅನ್ಯ ಆವಾವುದು ಕಾಣದ ಕಣ್ಣು , ಇದು ತನ್ನ ಸ್ವಯಮೇವ ಕಣ್ಣು . ಇದು ಕಾರಣ ತನ್ನ ನೋಟ , ನೋಡದ ನೋಟ. ತನ್ನ ಕೂಟ ಕೂಡದಗಲದ ಕೂಟ, ಸೂರ್ಯನಲ್ಲಿ ನೋಡುವ ನೋಟವೂ ಇಲ್ಲ , ನೋಡದ ನೋಟವೂ ಇಲ್ಲವೆನ್ನಲು ಬಾರದಾಗಿದೆ . ಸೂರ್ಯನ ನೋಡಿದ ಕಣ್ಣು ಕಂಡಿಲ್ಲ ನಾಲಿಗೆಯನ್ನು ಕಂಡಿಲ್ಲ, ತಾನೆ ತಾನಾಗಿರುವ ಪ್ರಕಾಶಮಯ ಅನುಪಮ ಹೇಗೊ ಹಾಗೆ ತನ್ನ ನೋಟ ಉಪಮಿಸದ ನೋಟ. ತಾನು ಗುರುವಾಗಿದ್ದಲ್ಲಿ ತನ್ನ ಗುರುತನ ನೋಡಿದುದು ಉಂಟು, ತಾನು ಲಿಂಗವಾಗಿದ್ದರೆ ಲಿಂಗವ ಕಂಡುದು ಉಂಟು . ಇವೆರಡು ಮೀರಿದ ಘನನಾಗಿರುವಲ್ಲಿ ತನ್ನ ನೋಟ ಉಪಮಿಸದ ನೋಟ , ತನ್ನಿಂದ ತನ್ನ ಕಂಡ ನೋಟ . ಇದನೆಂತು ಉಪಮಿಸುವುದು? ಕಣ್ಣು ತನ್ನ ಕಂಡು ಎರಡೆನಲಿಲ್ಲ ಒಂದೆನಲಿಲ್ಲ , ಶಬ್ದಮುಗ್ಧ ಹೇಗೊ ಹಾಗೆ ತನ್ನಿಂದ ತನ್ನ ಕಂಡು ಎರಡೆನಲಿಲ್ಲ ಒಂದೆನಲಿಲ್ಲ ಗುರು ಶಿಷ್ಯ ಬೇರೆನಲಿಲ್ಲ ಒಂದೆನಲಿಲ್ಲ , ಲಿಂಗ ತಾನು ಬೇರೆನಲಿಲ್ಲ ಒಂದೆನಲಿಲ್ಲ , ಶಬ್ದಮುಗ್ಧ ತನ್ನದು ಲಿಂಗವಿಲ್ಲದ ನೋಟವೆಂದು ಹೇಳಿಹರು .

ಜಂಗಮವಿಲ್ಲದ ನೋಟ , ಜಂಗಮವಿಲ್ಲದ ಮಾಟ, ಪ್ರಸಾದವಿಲ್ಲದ ಊಟ, ಜಂಗಮ ಮಾಟ, ಕಲ್ಪಿತ ನಷ್ಟ ಮಾಡುವ ಮಾಟ, ಪ್ರಸಾದ ಉಣಬಡಿಸಿದ ಊಟ, ಜಂಗಮನ ಮಾಟ, ಕುರುಹಾಗಲಿ ಕಲ್ಪಿತವಾಗಲಿ ಇಲ್ಲ. ಇಲ್ಲವೆಂಬುದು ಮಾಟ. ನೆನಹಾಗಲಿ ನಿರ್ಣಯವಾಗಲಿ, ಅರಿತೆನೆನ್ನವದಾಗಲಿ ಅರಿಯೆನೆನ್ನುವದಾಗಲಿ, ಆವಾವ ಭಾವಕ್ಕಿಂಬುಕೊಡದ ಊಟ. ತನ್ನದು ಜಂಗಮವಿಲ್ಲದ ಮಾಟ, ಏನೊಂದುಸರಲು ಎಡೆಗೊಡದ ಮಾಟ.

ಜಂಗಮನದು ಗುರುವಿಲ್ಲ, ಲಿಂಗವಿಲ್ಲ ಎಂಬುದು ಮಾಟವಾದರೆ ತನ್ನದು ಇಲ್ಲವೆಂಬುದಕ್ಕೂ ಉಂಟೆಂಬುದಕ್ಕೂ ಸಂದು ಕೊಡದ ಊಟ, ಕಲ್ಪಿತವೆಂಬುದಕ್ಕೂ ಸಂದುಕೊಡದ ಊಟ ಗುರುವೆಂಬುದಕ್ಕೂ ಸಂದು ಕೊಡದ ಮಾಟ , ಇದು ತನ್ನ ಮಾಟ , ತನ್ನ ಸ್ವಮಹಿಮೆ ತನ್ನಿಂದ ತನಗೆ ವೇದ್ಯವಾದ ಮಾಟ. ತನ್ನದು ತನಗೆ ವೇದ್ಯವಾಗಿ ವೇದ ವೇದಾಂತಗಳಿಗೆ ನಿಲುಕದ ಮಾಟ, ಶಾಸ್ತ್ರಕ್ಕೆ ಸಾಧಿಸದ ಮಾಟ, ಪುರಾಣ ಪೂರೈಸದ ಮಾಟ ಬಯಲಿನ ಮಾಟ ಅದಾರು ಹೀಗೆಯೆ ಎಂದು ವರ್ಣಿಸುವುದು? ತನ್ನ ಮಾಟ, ಜಂಗಮ ಘನ . ಇವರೇನು ಅವನ ಮಾಟವ ಮಾಡಿ ತೋರಿಸುವುದು? ಇದು ಕಾರಣ ತಾನು ಗುರು, ಲಿಂಗ, ಜಂಗಮರಿಗೂ ಮೀರಿದ ಘನಕ್ಕೆ ಘನವಾಗಿರುವಲ್ಲಿ ತನ್ನದು ಗುರುವಿಲ್ಲದ ಮಾಟ, ಲಿಂಗವಿಲ್ಲದ ನೋಟ, ಜಂಗಮವಿಲ್ಲದ ಮಾಟವೆಂದು ಹೇಳಿಹರು.

ಪ್ರಸಾದವಿಲ್ಲದ ಊಟ ತನ್ನ ಊಟ ಹಸಿದವನಿಗೆ ಪ್ರಸಾದವು ಪ್ರಯೋಜನವು ಎಂದೆಂದೂ ಹಸಿವು ಆಗದವನಿಗೆ ಪ್ರಸಾದವು ನಿಷ್ಪ್ರಯೋಜಕವು. ತೃಪ್ತರೂಪ ತೃಪ್ತವೆಂಬುದು, ಇದು ಪ್ರಸಾದವುಳ್ಳವರ ಊಟ. ಈ ಪ್ರಸಾದ ಕಲ್ಪಿತ ಪುರುಷನಿಗೆ ಮುಖ್ಯವಾಗಿದೆ. ಅಕಲ್ಪಿತ ಪುರುಷನಿಗೆ ಗೌಣವಾಗಿದೆ ತಾನು ಕಲ್ಪಿತನೆಂಬುದಕ್ಕೂ ನಿಲುಕದವನು ಏನೊಂದಾಗದವನು ನಿತ್ಯ ತೃಪ್ತರೂಪ ತೃಪ್ತನೆಂಬುದರ ಹಂಗಿಲ್ಲದ

ಸುಖಮಯನು ಪ್ರಸಾದವಿಲ್ಲದ ಊಟ. ಏಕೆಂದರೆ ಕಲ್ಪಿಸಿದವೆಲ್ಲವು ಹೆತ್ತರಿವು ಆಗಿರುವಲ್ಲಿ ಅರುವಿನ ಅರುವುಳ್ಳವಂಗೆ ಈ ನಾಲ್ಕರ ಬೇಟವಿಲ್ಲದುದು. ಕೂಡಲಚೆನ್ನಸಂಗಯ್ಯನೆನಲಿಲ್ಲದ ಆಟ. ಇದು ತನ್ನ ಆಟ ಬಯಲಾಟ. ತಾನೆ ಉದ್ದ ತಾನೆ ಅಗಲ, ತಾನೆ ಎತ್ತರ, ತಾನೆ ಗಿಡ್ಡ ಸಕಲವು ತಾನೆ ಹೇಗೊ ಹಾಗೆ ತನ್ನ ನಿರ್ಣಯ ತನಗಾದ ಮಹಾಂತಂಗೆ ತನ್ನಿರುವಿನರುವು ತನ್ನ ಸ್ವಮಹಿಮೆಯಲ್ಲಿ ನಿಂತುದೆ ಕೂಡದಗಲದ ಕೂಟ, ಗುರುವಿಲ್ಲದ ಕೂಟ, ಲಿಂಗವಿಲ್ಲದ ನೋಟ, ತನ್ನದು ತನ್ನಿಂದ ತನ್ನ ನೋಡಿದುದು ನೋಡದ ನೋಟ, ತನ್ನ ನೋಡುವ ನೋಟವೆ ನೋಟ. ಏನೊಂದಾಗದ ಮಾಟವೆ ತನ್ನ ಮಾಟ. ಇದು ಜಂಗಮವಿಲ್ಲದ ಮಾಟ.

ತನ್ನದು ತೃಪ್ತರೂಪ ತೃಪ್ತವಾದ್ದರಿಂದ, ತಾನು ತೃಪ್ತನೆನಲಿಲ್ಲ, ಅತೃಪ್ತನೆನಲಿಲ್ಲ. ಏನೊಂದಾಗದ ಸುಖಮಯನು. ಸುಖ ಪ್ರಸಾದವಿಲ್ಲದ ಊಟ, ಅದು ಕೂಡಲಚೆನ್ನಸಂಗಯ್ಯ ನೆನಲಿಲ್ಲದ ಆಟ. ತನ್ನ ಆಟ ನಾಮ ನಿರ್ನಾಮವಾದ ಆಟ, ಶಬ್ದಮುಗ್ಧದಾಟ, ಸುಖವು ಸುಖವೆ, ಸುಖಮಯನು ಸ್ವಸುಖಿಯು ; ಅದಾವ ಭಾಷೆಯಿಂದ ವಿಸ್ತರಿಸುವದು ? ಇದು ಕೂಡಲಚೆನ್ನಸಂಗಯ್ಯನೆನಲಿಲ್ಲದ ಆಟವೆಂದು ಹೇಳಿಹರು.

179

ಊಹಿಸಲರಿಯೆ, ಉತ್ತರವನರಿಯೆ, ದೇವನ ನರಿಯೆ
ದೇಹಿಕ ನರಿಯೆ, ನಾನೆನ್ನಲರಿಯೆ ನೀನೆನ್ನಲರಿಯೆ
ಕೂಡಲಚೆನ್ನಸಂಗಮದೇವಾ ಎನ್ನಲರಿಯೆ. ॥1067॥

ತಾತ್ಪರ್ಯ : ಊಹಿಸಲರಿಯೆ, ಉತ್ತರವ ನರಿಯೆ : ಆವುದು ಊಹಿಸಲು ಬಾರದುದು ಆವುದು ಉತ್ತರ ದೊರೆಯದುದು. ಗಗನದ ಉದ್ದ, ಅಗಲ, ಎತ್ತರ, ಗಿಡ್ಡ, ಆರಂಭ ಎಲ್ಲಿಂದ ಮುಕ್ತಾಯ ಎಲ್ಲಿಗೆ? ಗಗನವನ್ನು ಅದಾವ ಮಾಪಿನಿಂದ ಅಳೆಯುವುದು? ಇದು ಇಷ್ಟೆ ಎಂದು ಅಳೆದು ಊಹಿಸಬಹುದೆ? ಊಹಿಸಲು ಬಾರದಿರುವಲ್ಲಿ ,ಇದು ಇಷ್ಟೆ ಎಂದು ನಿರ್ಣಯ ಮಾಡಿ ಉತ್ತರ ಹೇಳುವದಾದರೂ ಹೇಗೆ ? ಕಣ್ಣಿನ ಕಣ್ಣು ! ಈ ಕಣ್ಣಿನಂಥ ಇನ್ನೊಂದು ಕಣ್ಣು ಇದ್ದರೆ, ಅದು ಹೇಗೆ ಅದೆ ಎಂದು ಹೇಳಬಹುದು ಊಹಿಸಬಹುದು, ಊಹಿಸಲು ಬಾರದಿರುವದನ್ನು ಅದಕ್ಕೆ ಉತ್ತರ ದೊರೆಯುವುದಾದರೂ ಹೇಗೆ ? ಸಕಲವನ್ನು ಕಾಣುವ ಕಣ್ಣು, ಅದನ್ನು ಕಾಣುವ ಕಣ್ಣೆ ಇಲ್ಲದಿರುವಲ್ಲಿ ಅದನ್ನು ಹೀಗೆ ಎಂದು ಊಹಿಸುವುದಾದರೂ ಹೇಗೆ ? ಅದರ ಉತ್ತರ ಶಿಗುವದಾದರೂ ಹೇಗೆ ?

ಕಣ್ಣಿನ ಕಣ್ಣು ಕಣ್ಣೆನ್ನಲು ಇಂಬುಕೊಡದೆ ಸ್ವಯಂಜ್ಯೋತಿಯಾಗಿಹ ಘನವು. ಅದನ್ನು ಉಪಮಿಸುವದಾದರೂ ಹೇಗೆ ? ಇದು ಸಕಲವನ್ನು ಕಾಣುವ ಕಣ್ಣಾಗಿರುವಲ್ಲಿ ಕಣ್ಣಿನ ಹೊರ್ತು ಅನ್ಯ ಆವುದು ಇಲ್ಲದಿರುವಾಗ ಸಕಲವನ್ನು ಕಾಣುವ ಕಣ್ಣೆಂದು ಹೇಗೆ ಊಹಿಸುವುದು? ಏಕೆಂದರೆ ಕಣ್ಣು ಎಂದೆಂದು ಅದು ಕಣ್ಣೆಂದು ನುಡಿಯಲು ನಾಲಿಗೆ ಇಲ್ಲ. ನುಡಿಯದ ಕಣ್ಣಿನಿಂದ ಕಣ್ಣು ಹಾಗೆ ಹೀಗೆ ಎಂದು ಉಹಿಸುವುದು ತಪ್ಪು. ಅದು ಕಾಣದ ಕಣ್ಣು ಎಂದು ಉತ್ತರ ಹೇಳುವುದು ತಪ್ಪು.

ಆವುದು ಕೆಲಬರಿಗೆ ಉಂಟೆಂಬ ವಸ್ತುವಾಗಿದೆ, ಕೆಲಬರಿಗೆ ಇಲ್ಲೆಂಬ ಪ್ರಮಾಣದಿಂದುಕ್ತವಾದುದು ಆಗಿದ್ದಲ್ಲಿ, ಅದನ್ನು ಅವರು ಇದು ಗುರು, ಲಿಂಗ ,ಜಂಗಮ, ಪ್ರಸಾದರೂಪಿ ವಸ್ತುವು ಎಂದು, ತೋರಿಸಿ ಉತ್ತರ ಕೊಡುವುದು ಸಾಧ್ಯವಾಗುತ್ತಿತ್ತು. ಕೆಲಬರು ಅದು ಗುರು ಆಗಿಲ್ಲ ಲಿಂಗವಾಗಿಲ್ಲ ಜಂಗಮವಾಗಿಲ್ಲ ಪ್ರಸಾದವಾಗಿಲ್ಲೆಂಬ ಪ್ರಮಾಣದಿಂದ ಊಹಿಸಲು

ಬಹುದು, ಉತ್ತರಿಸಲು ಬಹುದು. ಆವುದು ಉಂಟೆಂಬುವದಕ್ಕೂ ಇಲ್ಲೆಂಬ ಪ್ರಮಾಣಕ್ಕೂ ವಸ್ತುವೆಂಬುದಕ್ಕೂ ವಸ್ತುವೆಂಬುದಕ್ಕೂ ನಿಲುಕದ್ದಾಗಿದೆ. ಅದನ್ನು ಊಹಿಸುವದಾದರೂ ಹೇಗೆ? ಊಹಿಸಲುಬಾರದಿರುವಲ್ಲಿ ಉತ್ತರವಾದರೂ ಹೇಗೆ ಹೇಳುವುದು?

ಭಕ್ತನ ಕಲ್ಪಿತಕ್ಕೆ ಒಳಪಟ್ಟಿದ್ದರೆ ಉಂಟೆಂಬ ವಸ್ತುವಾಗಿ ಅದನ್ನು ಲಕ್ಷಣ ದ್ವಾರದಿಂದಾಗಲಿ ಅಥವಾ ಲಕ್ಷ್ಯಸ್ವರೂಪವೆಂದುದಾಗಲಿ ಅಥವಾ ಅಲಕ್ಷ್ಯವೆಂದುದಾಗಲಿ ಊಹಿಸಲು ಬರುತ್ತಿತ್ತು . ಊಹಿಸಿ ಹೇಳಲು ಬಾರದಿರುವಲ್ಲಿ ಉತ್ತರವ ಹೇಗೆ ಹೇಳುವುದು.

ಜಂಗಮ ಕಲ್ಪಿತಕ್ಕೆ ನಿಲುಕುವದ್ದಾಗಿದ್ದರೆ ಅದನ್ನು ಇಲ್ಲೆಂಬ ಪ್ರಮಾಣವ ಹಚ್ಚಿ ಅದು ಅಪ್ರಮಾಣ ಅಗಮ್ಯ ಅಚಿಂತ್ಯ ಅಕಲ್ಪಿತ ಅನಾಮಯವಾಗಿದ್ದುದನ್ನು ಹೇಗೆ ಹೇಳುವುದೆಂದು ಊಹಿಸಲು ಬರುತ್ತಿತ್ತು. ಹೀಗೆ ಎಂದು ಉತ್ತರಿಸಲು ಬರುತ್ತಿತ್ತು. ತಾನು ನುಡಿಗೆಡೆಗೊಡದ ಘನವಾಗಿರುವಲ್ಲಿ ಅಪ್ರಮಾಣ, ಇಲ್ಲೆಂಬ ಪ್ರಮಾಣ, ಉಂಟೆಂಬ ವಸ್ತು ಇವೆಲ್ಲವು ನುಡಿಗೊಳಪಟ್ಟವು. ತನಗೆ ಶಬ್ದವೆ ಮೀಸಲುವಾಗಿರುವಲ್ಲಿ, ಊಹಿಸಲರಿಯೆ ಉತ್ತರವ ನರಿಯೆ ಎಂದು ಹೇಳಿಹರು.

ತಾನು ಏನೊಂದುಸರಲು ಎಡೆಗೊಡದ ಘನವಾಗಿರುವಲ್ಲಿ ತನ್ನನ್ನು ವಾಣಿ ಇಂದ್ರಿ ಮನ ಬುದ್ಧಿ ಕಲ್ಪಿತ ಚೇತನ ಇವುಗಳಿಂದ ಊಹಿಸಬಹುದೆ? ಕಲ್ಪಿತ ಅಕಲ್ಪಿತವೆಂದು ಊಹಿಸಬಹುದೆ? ಉತ್ತರವ ಹೇಳಬಹುದೆ? ವಾಣಿಯು ನಿರ್ವಾಣನೆಂಬುದಕ್ಕೂ ನಿಲುಕದವನನ್ನು ಅದೆಂತು ಊಹಿಸುವುದು? ಉತ್ತರವ ಹೇಳುವುದು?

ಚಿಂತಿಸುವ ಚಿತ್ತವು ಅದು ಲೋಕ ಚಿಂತನದಿಂದ ಉಕ್ತವಾಗಿರುವದಾಗಿದ್ದಲ್ಲಿ ಮತ್ತು ಪರಮಾರ್ಥ ಚಿಂತನದಿಂದ ಉಕ್ತವಾದುದಾಗಿರುವಲ್ಲಿ ಆತ್ಮ ಪರಮಾರ್ಥ ಚೈತನ್ಯ, ಸಚಿದಾನಂದ ನಿತ್ಯ ಪೂರ್ಣ, ಅಖಂಡ, ಅದ್ವಿತೀಯ, ಅಪಾರ ಅಚಿಂತ್ಯ ಎಂದು ಚಿತ್ತವು ಚಿಂತನ ಮಾಡಹೋಗಿ ಇದು ಹೀಗೆ ಎಂದು ಊಹಿಸ ಬಹುದಾಗಿತ್ತು. ಉತ್ತರವ ಹೇಳಲು ಬರುತ್ತಿತ್ತು, ಭಾವಕ್ಕಿಂಬಿಲ್ಲದುದರಲ್ಲಿ ಆತ್ಮ ಪರಮಾತ್ಮನೆಂದು ಭಾವಿಸುವುದು ಹೇಗೆ? ಅದು ಅಚಿಂತ್ಯವೆಂದು ಉತ್ತರಿಸುವದಾದರೂ ಹೇಗೆ? ಇದು ಕಾರಣ ಕಥನ ಮಾಡುವುದೆ, ಆಶ್ಚರ್ಯವಾಗಿರುವದರಿಂದ, ಊಹಿಸಲುಬಾರದು, ಉತ್ತರವ ಹೇಳಲು ಬಾರದು, ಏಕೆಂದರೆ ತನ್ನ ನಿರ್ಣಯ ತನಗಾದುದು ಅದಕ್ಕಾಗಿ ಊಹಿಸಲುಬಾರದು ಉತ್ತರವ ತಿಳಿಯಲುಬಾರದು, ಉತ್ತರ ತಿಳಿಯಲು ಬಾರದ್ದರಿಂದ ತಾನಾರೆಂದು ತನ್ನ ನಿರ್ಣಯ ತನಗಾದುದರಿಂದ ಊಹಿಸಲರಿಯೆ, ಉತ್ತರವನರಿಯೆ ಎಂದು ಹೇಳಿಹರು.

ದೇವನರಿಯೆ, ದೇಹಿಕನರಿಯೆ, ದೇವನೆನ್ನಲಿ, ದೇಹಿ ಎನ್ನಲಿ ಈ ಹಲುಬಾಟ ತನ್ನನ್ನು ಯತಾರ್ಥ ತಿಳಿಯದ ಮುನ್ನ ದೇವನೆಂಬುದು ವಿದಿತವಾಗಿದ್ದಲ್ಲಿ ದೇಹಿಕನೆಂಬುದು ವಿದಿತವಾಗಿದ್ದಲ್ಲಿ ಆಗ ದೇವ ಎಂದನು. ದೇಹಿ ಎಂದನು. ಎಲ್ಲಿಯವರೆಗೆ ಕಲ್ಪಿತ ಪುರುಷನಾಗಿರುತ್ತಾನೆ, ಅಲ್ಲಿಯವರೆಗೆ ದೇವನೆಂಬ ಹಲುಬಾಟ, ದೇಹಿ ಎಂಬ ಹಲುಬಾಟ ಇದ್ದುದೆ.

ಭಕ್ತರು, ದೇವನೆನ್ನುವವರು ಉಂಟು, ಇತ್ತ ಜಿಜ್ಞಾಸುಗಳು ದೇಹಿ ಎನ್ನುವವರು ಉಂಟು. ದೇವನನ್ನು ತಿಳಿಯ ಹೋದವರಿಲ್ಲ, ದೇಹಿಯನ್ನು ತಿಳಿಯ ಹೋದವರಿಲ್ಲ. ಅಂಗನೆನ್ನುವರು ಉಂಟು, ಲಿಂಗನೆನ್ನುವವರು ಉಂಟು, ಅಂಗ ಲಿಂಗ ಒಂದೆನ್ನುವವರು ಉಂಟು. ಅದು ಪ್ರಾಣಲಿಂಗ ನಿರಂತರ ಎಂದು ಅನ್ನುವವರು ಉಂಟು. ನಿರಂತರವಾಗಿರುವ ಮಂಗಳಮಯ ತತ್ವ ತಿಳಿಯ ಹೋದವರು ದೇವನೆನಲಿಲ್ಲ, ದೇಹಿಕ ನೆನಲಿಲ್ಲ. ಏಕೆಂದರೆ ನಿರಂತರವಾಗಿರುವ ಮಂಗಳಮಯ ತತ್ವ ತನಗಿಂತದು ಅನ್ಯವಾಗಲಿಲ್ಲ, ತಾನೆ ಆಗಿರುವದರಿಂದ ತಾನು ನಿರಂತರ ನೆನಲಿಲ್ಲ ಮಂಗಳ ಮಯನೆನಲಿಲ್ಲ, ದೇವನೆಂಬುದು ಕಾಣಲಿಲ್ಲ ದೇಹಿ ಎಂಬುದು ಕಾಣಲಿಲ್ಲ. ಇದು ಕಾರಣ ದೇವನರಿಯೆ, ದೇಹಿಕನರಿಯೆ

ಎಂದು ಹೇಳಿಹರು.

ನಾನೆನ್ನಲರಿಯೆ ನೀನೆನ್ನಲರಿಯೆ ನಾನೆನ್ನುವದು ಮರವರುವಿನ ಕಾರ್ಯ, ನೀನೆಂಬುದು ದಾಸೋಹಂ ಕಾರ್ಯ. ಮರವಿನಲ್ಲಿ ದೇಹೋಹಂ ಕೋಹಂ ಇದೆ. ಅರುವಿನಲ್ಲಿ ಸೋಹಂ, ಚಿದಹಮ್ಮು ಇದೆ, ನೀನೆಂಬುವಲ್ಲಿ ದಾಸೋಹಂ ಇದೆ ಅಲ್ಲಿ ನಿರಹಂಭಾವವು ಭರಿತವು . ಕೋಹಂ ಎಂಬುದು ನೀನೆ ಸೋಹಂ ಎಂಬುದು ನೀನೆ, ತತ್ವ ತೂರ್ಯಾರ್ಥವು ನೀನೆ ಸಕಲವು ನೀನೆಂಬುದು ನಿರಹಂಭಾವ ನಿಲವು ತಾನು. ತಾನು ಆವಾವ ಭಾವಕ್ಕಿಂಬು ಕೊಡದವನು. ಅಹಮ್ಮಿಗೂ ಚಿದಹಮ್ಮಿಗೂ ದಾಸೋಹಂ ಭಾವಿಗೂ ಇಂಬು ಕೊಡದವನಾದುದರಿಂದ, ನಾನೆನ್ನಲರಿಯೆ ನೀನೆನ್ನಲರಿಯೆ ಎಂದು ಹೇಳಿಹರು.

ತಾನು ವೇದ ವೇದಾಂತಗಳಿಗೂ ಅಸಾಧ್ಯವಾಗಿಹ ತೆರಹಿಲ್ಲದ ಘನನಾದುದರಿಂದ ಅನುಪಮ ಲಿಂಗವೆಂದು ಹೇಳುವುದಾದರೂ ಹೇಗೆ? ತಾನು ಅನುಪಮ ಲಿಂಗವೆಂದು ಹೇಳದಿರುವಲ್ಲಿ ಸೋಹಂ ನಾನೆನ್ನಲರಿಯೆ, ಚಿದಹಮ್ಮು ನಾನೆನ್ನಲರಿಯೆ, ಪರಬ್ರಹ್ಮ ನಾನೆಂಬುನರಿಯೆ ಸಕಲವು ನೀನೆಂಬ ಭಾವಭರಿತ ನಾನರಿಯೆ ಎಂದು ಹೇಳಿಹರು.

ಕೂಡಲ ಚೆನ್ನಸಂಗಮದೇವಾ ಏನೂ ಎನ್ನಲರಿಯೆ: ತನ್ನನ್ನು ಎಲ್ಲಿಯವರೆಗೆ ಉಪಮೆಗೊಳಪಟ್ಟವನನ್ನಾಗಿ ತಿಳಿದಿದ್ದನು , ಅಲ್ಲಿಯವರೆಗೂ ಗುರು ಲಿಂಗ ಜಂಗಮ ಉಪಮೆಗೆ ಒಳಪಟ್ಟುದೆ ಆಗಿತ್ತು . ತನ್ನ ಸ್ವರೂಪ ಸ್ವರೂವೆಂಬುದೆ ಬಾರದಂತಾದುದು ತನ್ನಿಂದ ತನಗದು ವೇದ್ಯವಾಯಿತು. ಆಗ ತೆರಹಿಲ್ಲದ ಘನ ತನ್ನಿರುವಾಗಿ ಪ್ರಜ್ವಲಿಸುವಲ್ಲಿ ಇಲ್ಲದುದು ಇಲ್ಲವೆ ಇಲ್ಲವೆನ್ನಲು ಸಂದಿಲ್ಲವಾಯಿತ್ತು . ಇದ್ದುದು ಆವಾಗಲೂ ಇದೆ ಎಂಬುದಕ್ಕೂ ಸಂದಿಲ್ಲವಾಯಿತ್ತು . ಇದನೇನೆಂಬೆ ಏನೆಂಬೆ ಏಕೆಂದರೆ ತೆರಹಿಲ್ಲದ ಘನವು ಮನದೊಳಗೆ ನಿಂದು ನೆಲೆಗೊಂಡ ಬಳಿಕ ಕೂಡಲ ಚೆನ್ನಸಂಗಯ್ಯ ಎನ್ನಲರಿಯೆ ಎಂದು ಹೇಳಿಹರು. ಆವಾವುದಕ್ಕೂ ಎಡೆಗೊಡದ ಘನವು ಮನದಲ್ಲಿ ಅಳವಟ್ಟಾಗ ದೇಹ ಎನ್ನಲರಿಯೆ, ದೇಹಿ ಎನ್ನಲರಿಯೆ, ವಿದೇಹಿ ಎನ್ನಲರಿಯೆ ನಿರ್ದೇಹಿ ಎನ್ನಲರಿಯೆ ಶೃತಿಗೂ ಇಂಬು ಕೊಡದಿರುವಲ್ಲಿ ಅಲ್ಲಿ ತಿಳಿಸಿಕೊಳ್ಳುವ ಅನಾತ್ಮವೆಲ್ಲಿ? ತಿಳಿಯುವ ದೃಕ್ ರೂಪ ಆತ್ಮನೆಂಬುದೆಲ್ಲಿ? ಇಲ್ಲದುದು ಇಲ್ಲವೆ ಇಲ್ಲವೆನ್ನುವದಾದರೂ ಹೇಗೆ , ಇದ್ದುದು ನಿರಂತರ ಐದ್ದುದು ಎನ್ನುವದಾದರೂ ಹೇಗೆ? ಇದು ಕಾರಣ ಕೂಡಲ ಚೆನ್ನಸಂಗಮದೇವಾ ಎನ್ನಲರಿಯೆ ಎಂದು ಹೇಳಿಹರು.

180

ಆದಿ ಶೂನ್ಯ , ಮಧ್ಯ ಶೂನ್ಯ , ಅಂತ್ಯ ಶೂನ್ಯ ನಿರಾಮಯ
ಸರ್ವಶೂನ್ಯಂ ನಿರಾಕಾರಂ ನಿಃಶಬ್ದಂ ಬ್ರಹ್ಮಮುಚ್ಯತೆ
ಆ ನಿರವಯ ಸ್ಥಲವು ಉರಿಯುಂಡ ಕರ್ಪೂರದಂತಿದ್ದು
ಇಂತಿದು ನಿರವಯ ಸ್ಥಲವಯ್ಯಾ ಕೂಡಲಚೆನ್ನಸಂಗಮದೇವಾ. ॥ 1020 ॥

ತಾತ್ಪರ್ಯ : ಆದಿ ಶೂನ್ಯ ಆದಿ ಆವುದಕ್ಕನ್ನಬೇಕು, ಪೂರ್ವದಲ್ಲಿದ್ದುದು ಆವುದು: ಅದು ಆದಿ ಎನ್ನಿಸುವದು. ಪೂರ್ವದಲ್ಲಿದ್ದುದು ಅಂದಲ್ಲಿ, ಪೂರ್ವವೆಂದರೆ ಆವುದು? ಆವುದು ತೋರುವದಕ್ಕಿಂತ ಮುನ್ನ ಇದ್ದುದು ಅದುವೆ ಆದಿ ಎಂದು ಹೇಳಿಸಿಕೊಳ್ಳುವುದು. ತೋರುವುದು ಆವುದು? ತಮ ತಮಗೆಲ್ಲ ನೊಸಲ ಕಣ್ಣುಳ್ಳವರು ತೋರುವವರಾಗಿದ್ದಾರೆ. ತಮ ತಮಗೆಲ್ಲ ನಂದಿವಾಹನರು ತೋರುವರಾಗಿಹರು. ತಮ ತಮಗೆ ಖಟ್ವಾಂಗ ಕಪಾಲ ತ್ರಿಶೂಲಧರರು ತೋರುವರಾಗಿಹರು.

ಇವರಿದ್ದವರೆಂದರೆ ಇವರ ಭಕ್ತರು ಇವರ ದರ್ಶನಕ್ಕಾಗಿ ತಪವ ಮಾಡುವರಾಗಿದ್ದಲ್ಲಿ ಇವರೆಲ್ಲ ತೋರುವವರು ಇದಲ್ಲದೆ ಈ ತೋರುವ ಜಂಗಮ ಸ್ಥಾವರ ತೋರುವುದು ತೋರುವದೆಂದಲ್ಲಿ ಕುರುಹಾಗಿ ತೋರುವುದು. ಪಿಂಡಾಂಡ ಬ್ರಹ್ಮಾಂಡವಾಗಿ ತೋರುವುದು. ಈ ಕುರುಹೆ ನಾನಾ ಮುಖವಾಗಿ ತೋರುವುದು, ಇವೆಲ್ಲವುಗಳಿಗಿಂತ ಇದ್ದುದು ಆವುದು? ಅದು ಆದಿ ಎಂದು ಸಿದ್ಧವಾಗುವುದು. ಆ ಆದಿ ಸ್ವಗತಾದಿ ರಹಿತ ಸಚ್ಚಿದಾನಂದವೆಂಬ ಬ್ರಹ್ಮವೆ ಆದಿ ಎಂದು ಹೇಳಿಸಿಕೊಳ್ಳುವದು.

ಇಲ್ಲಿ ಆದಿ ಶೂನ್ಯ : ಈ ಆದಿಯು ಶೂನ್ಯವಾದುದು ಹೇಗೆ? ನಾಮರೂಪ ಜಗತ್ತು ಇದು ನಾಶವುಳ್ಳದು ಎಂದು ಒಪ್ಪುವುದು. ಇದಕ್ಕಿಂತ ಪೂರ್ವದಲ್ಲಿದ್ದು ನಾಮರೂಪಕ್ಕೆ ಆಧಾರವಾದುದು, ಅದು ಹೇಗೆ ಇಲ್ಲವಾಗುವುದು? ಇಲ್ಲಿ ನಾಮರೂಪವನ್ನಾಶ್ರಯ ಮಾಡಿಕೊಂಡು ಇದಕ್ಕಾಧಾರವಾದುದು ಆದಿ ಇದು ನಿಜವಾಗಿತ್ತು ; ನಾಮರೂಪವೆ ಮಿಥ್ಯಾತೋರಿಕೆಯಾದಲ್ಲಿ ಸುಳ್ಳಿಗೆ ಅಂದರೆ ನಾಮರೂಪವೆ ಸುಳ್ಳು ಹುಸಿ ಆದಲ್ಲಿ ಅದಕ್ಕೆ ಆಧಾರವಾದ ಆದಿಯು ಅದು ಹೇಗೆ ನಿಜವಾಗುತ್ತದೆ. ಇದು ಕಾರಣ ನಾಮರೂಪ ಹುಸಿ ಅದಕ್ಕೆ ಆಧಾರವಾದ ಪೂರ್ವದಲ್ಲಿದ್ದುದು ಅದು ಹುಸಿಯಾಗುವದರಿಂದ ಆದಿ ಶೂನ್ಯನೆಂದು ಹೇಳಿಹರು.

ಗಗನ ಕುಸುಮವಿದ್ದರೆ ಅದಕ್ಕೆ ಆಧಾರವಾದ ಗಗನವು ಆದಿಯು ದಿಟವಾಗುವುದು. ಗಗನ ಕುಸುಮವೆ ಇಲ್ಲವಾಗಿರುವಲ್ಲಿ ,ಅದಕ್ಕೆ ಆಧಾರವಾದುದು ಅದು ಹೇಗೆ ಸಿದ್ಧಿಸಲ್ಪಡುವುದು? ನಸುಗತ್ತಲೆಯಲ್ಲಿ ತೋರುವ ಹಾವಿಗೆ, ಅದರ ಪೂರ್ವದಲ್ಲಿದ್ದುದು ಅಜ್ಞಾನ,ಹಾವು ಇಲ್ಲವಾದಲ್ಲಿ ಅದಕ್ಕೆ ಕಾರಣವಾದ ಅಜ್ಞಾನವು ಹೇಗೆ ದಿಟವಾಗುವುದು? ಹಾಗೆ ಸ್ಥಾವರ ಜಂಗಮವಾಗಿ ತೋರುವ ಅಖಿಲ ಜಗತ್ತು ಹುಸಿಯಾಗಿರುವಲ್ಲಿ ಅದಕ್ಕೆ ಆಧಾರವಾದುದು ಸತ್ ಎಂದು ಹೇಳಿಸಿ ಕೊಳ್ಳುವದು ಅದು ಹೇಗೆ ದಿಟವಾಗುವುದು? ನಾಮರೂಪವು ಹುಸಿ. ಅದರ ಪೂರ್ವದಲ್ಲಿದ್ದುದು ಹುಸಿ ಎಂದು ಹೇಳಿಹರು.

ಮಧ್ಯವಾವುದು? ಮಧ್ಯಶೂನ್ಯ , ಮಧ್ಯವಾವುದೆಂದಲ್ಲಿ ಇದು ಪೂರ್ವದಲ್ಲಿದ್ದುದು ಎನ್ನಲು ಬರದು. ಅಂತ್ಯವಾದ ಮೇಲೆ ಇದ್ದುದು ಎನ್ನಲು ಬರದು. ಆದಿಯಾಗದ ಅಂತ್ಯವಾಗದ ಮಧ್ಯಮ ಕಾಲವಾವುದು ಅದು ಮಧ್ಯಮವೆಂದು ಹೇಳಿಸಿಕೊಳ್ಳುವುದು. ಮಧ್ಯವೆಂದಲ್ಲಿ ತಮ ತಮಗೆಲ್ಲ ನೊಸಲ ಕಣ್ಣುಳ್ಳವರು, ತಮ್ಮ ತಮಗೆಲ್ಲಾ ನಂದಿವಾಹನರು, ತಮ್ಮ ತಮಗೆಲ್ಲಾ ಖಟ್ವಾಂಗ ಕಪಾಲ ತ್ರಿಶೂಲಧರರು. ಇವರು ಮಧ್ಯದಲ್ಲಿ ತೋರುವರು. ಇವರಿಗೆ ದೇವರೆನ್ನಬೇಕೆ? ಇವರುಗಳನ್ನು ಪೂಜಿಸುವವರಿಗೆ ದೇವರೆನ್ನಬೇಕೆ? ಇಲ್ಲಿ ದೇವರಾರು ಭಕ್ತರಾರು ತಿಳಿಯದಂತಾಗಿದೆ. ಇಲ್ಲಿ ದೇವನ ಮಾಯಿಕವೆ ನಾಮ ರೂಪದಿಂದ ದೇವರಾಗಿ ಕಾಣಿಸುವುದು. ಈ ದೇವ ವಿಚಿತ್ರದೇವ, ಶೃತಿ ಪ್ರಮಾಣಂಗಳಿಗೆ ವಿರುದ್ಧನು. ಏಕೆಂದರೆ ನೊಸಲ ಕಣ್ಣುಳ್ಳವ. ಉರಿಗಣ್ಣುಳ್ಳುವ ಮುದಿ ಎತ್ತನ್ನು ವಾಹನ ಮಾಡಿಕೊಂಡ ಶಿವ . ಹುಲಿ ಚರ್ಮವನುಟ್ಟ ಶಿವ, ವಿಷಧರನನ್ನು ಆಭರಣ ಮಾಡಿಕೊಂಡ ಶಿವ , ಗಂಗೆ ಗೌರಿ ವಲ್ಲಭ ನಾಗಿರುವ ಶಿವ. ತ್ರಿಶೂಲ ಡಮರುಗವ ಹಿಡಿದ ಶಿವ, ಇವರ ನಡುವೆ ತೋರುವ ಮಧ್ಯಮರು ಜ್ಞಾನಕಾಲದಲ್ಲಿ ತೋರುವ ದೇವನು ಈ ದೇವನಲ್ಲ. ಅಜ್ಞಾನ ಕಾಲದಲ್ಲಿ ತೋರುವ ದೇವನು ದೇವನಲ್ಲ. ಉಪಾಸಕರಿಗೆ ಉಪಾಸನಾ ಕಾಲದಲ್ಲಿ ತೋರುವ ದೇವನು ಮಧ್ಯಮನು. ಇಲ್ಲಿ ಉಪಾಸಿಸುವ ಭಕ್ತರು ಮಧ್ಯಮರು ಇದು ಕಾರಣ ಜ್ಞಾನ ಅಜ್ಞಾನ ಕಾಲದ ಮಧ್ಯಮ ಕಾಲವೆ ಭಾವಿಸುವ ಭಕ್ತರ ಕಾಲ. ಇವರ ಭಾವದಂತೆ ತೋರುವ ದೇವನು ಮಧ್ಯಮನು. ಯತಾರ್ಥ ಜ್ಞಾನವಾದಲ್ಲಿ ಈ ದೇವನಿಗೆ, ನಿಜವಾದ ದೇವನು ಎನ್ನಲಾರ. ಮಧ್ಯದಲ್ಲಿ ತೋರಿ ಮಧ್ಯದಲ್ಲಿಯೆ ಇಲ್ಲವಾಗುವದಕ್ಕೆ ,ಮಧ್ಯ ಶೂನ್ಯ ಎಂದು ಹೇಳಿಹರು.

ಇವರು ದೇವಗಣ, ರುದ್ರಗಣ, ಪ್ರಮಥ ಗಣ, ಸಮೂಹ ಗಣವೆಲ್ಲ ಮಧ್ಯದಲ್ಲಿ ತೋರುವುದು, ಮಧ್ಯದಲ್ಲಿಯೆ ಇಲ್ಲವಾಗುವುದರಿಂದ ಮಧ್ಯ ಶೂನ್ಯವೆಂದು ಹೇಳಿಹರು. ಇತ್ತ ಇವರು ರಚಿಸಿದ ಲೋಕಂಗಳೆಲ್ಲವು ಮಧ್ಯಮಯ, ಇವು ಮಧ್ಯದಲ್ಲಿ ತೋರಿ ತಾನಾರೆಂಬ ಯತಾರ್ಥ ಜ್ಞಾನವಾದ ಮೇಲೆ ಆಗ ಲೋಕಂಗಳು ಕಾಣಿಸವು. ಇವರು ಉಪಾಸಿಸುವ ಮಧ್ಯಮ ದೇವರು ಇವು ಇಲ್ಲದವುಗಳು, ಉಪಾಸಿಸುವ ಭಕ್ತರು ಇಲ್ಲದವರುಗಳು. ಆದಕ್ಕಾಗಿ ಮಧ್ಯಮ ಶೂನ್ಯವಾದುದು ಎಂದು ಹೇಳಿಹರು.

ಅಂತ್ಯ ಶೂನ್ಯ ಇಲ್ಲಿ ಬ್ರಹ್ಮಪ್ರಳಯ ,ರುದ್ರ ಪ್ರಳಯ, ವಿಷ್ಣುಪ್ರಳಯಕ್ಕೆ ಅಂತ್ಯವೆನ್ನುತ್ತಾರೆ. ಆರದೆ ಸೃಷ್ಠಿ ಇರಲಿ ಅದು ಬ್ರಹ್ಮನದು ವಿಷ್ಣುವಿನದು, ರುದ್ರನದು. ಅವರು ರಚಿಸಿದ ಜಗವಿರಲಿ ಜೀವಿಗಳಿರಲಿ ಆದಿ ಪ್ರಳಯವೆಂದು ಶಾಸ್ತ್ರವು ಹೇಳುವವು. ಮಧ್ಯದಲ್ಲಿ ತೋರುವ ದೇವತೆಗಳು ದೇವರಿಂದ ಸೃಷ್ಠಿಯಾದ ಸ್ಥಾವರ ಜಂಗಮ ಜಗತ್ತು . ಇವು ತೋರಿ ಒಂದು ದಿವಸ ಪ್ರಳಯವಾಗುವವು ಎನ್ನುವದು ಈ ಪ್ರಳಯವೆಂಬ ಅಂತ್ಯ ಪ್ರಮಾಣವೆ ಸುಳ್ಳು . ಇದು ಪ್ರಳಯವೆ ಇಲ್ಲದವುಗಳು ಎನ್ನುವುದೆ ಅಂತ್ಯ ಶೂನ್ಯವಾಗಿದೆ.

ನಿರಾವಯ ಸರ್ವಶೂನ್ಯಂ,ಇಲ್ಲದ ಸೃಷ್ಠಿ ಇಲ್ಲವಾದಾಗ ಸೃಷ್ಠಿಗಿಂತ ಪೂರ್ವದಲ್ಲಿದ್ದುದು ಎಂಬುದು ಆದಿಯು ನಿಜವಾಗುವುದು. ಸೃಷ್ಠಿಯು ಇಲ್ಲವಾದಾಗ ಇದರ ಆದಿಯು ಇಲ್ಲ ಮಧ್ಯಮವು ಇಲ್ಲ. ಅಂತ್ಯವು ಇಲ್ಲವಾದಾಗ ಇಲ್ಲವೆಂಬುದು ಇಲ್ಲವಾದಾಗ ಇದ್ದ ನಿರಾವಯ ತತ್ವ ಇದ್ದುದು. ಅದು ನಿರಾಲಂಬ ತತ್ವ ಅಲ್ಲಿ ಸರ್ವವು ಶೂನ್ಯವಾಗಿದೆ. ಇಲ್ಲದ ಅತತ್ವಕ್ಕೆ ಇರುವಿಕೆಯಿಲ್ಲ ಇದ್ದ ನಿರಾಮಯ ತತ್ವ ನಿರಂತರ ಮಂಗಳಮಯ ಆಗಿದೆ. ನಿರಾಕಾರ ನಿಃಶಬ್ದ ಬ್ರಹ್ಮಮುಚ್ಯತೆ ಎಂದುದಾಗಿ ಎಂದು ಹೇಳಿಹರು.

ಇಲ್ಲಿ ಷಟ್‌ಸ್ಥಲ ದೃಷ್ಠಿಯಿಂದ ನೋಡಿದರೂ ಸಾವಯವವಾದುದು ಷಟ್‌ಸ್ಥಲ. ಈ ಷಟ್‌ಸ್ಥಲಗಳು ಒಂದು ಪ್ರತಿ ಮತ್ತೊಂದು ಇದ್ದವುಗಳಾಗಿರುವದರಿಂದ ಈ ಷಟ್‌ಸ್ಥಲಂಗಳಲ್ಲಿ ಮೊದಲನೆಯದಾದ ಭಕ್ತಸ್ಥಲವು ಆದಿ. ಇದು ಇಲ್ಲದುದು ಆದಕ್ಕಾಗಿ ಇದನ್ನು ಆದಿ ಶೂನ್ಯವೆಂದು ಹೇಳಿಹರು.

ಜಂಗಮ ಸ್ಥಲವು ಅನಾದಿಯಾಗಿದೆ. ಇದು ಮಧ್ಯಮವಾಗಿದೆ. ಆದಿಯನ್ನು ಸಾಪೇಕ್ಷೆ ಮಾಡಿಕೊಂಡೆ ಅನಾದಿ ಸಿದ್ಧವಾಗಿದೆ. ಒಂದು ಕುರುಹಿನಿಂದುಕ್ತವಾದ ಸಂಜ್ಞೆಯು ಇನ್ನೊಂದು ಅನಾದಿ ಎಂಬ ಶಬ್ದ ಸಂಜ್ಞೆಯು ಜಂಗಮ ಸಂಜ್ಞೆಯು. ಇದು ಮಧ್ಯ ಸಂಜ್ಞೆಯು. ಇದು ಕೂಡಾ ಇಲ್ಲದುದು ಆಗಿರುವದರಿಂದ ಮಧ್ಯ ಶೂನ್ಯವೆಂದು ಹೇಳಿಹರು. ಅಂತ್ಯ ಶೂನ್ಯವೆಂದು ಆವುದು ಆದಿ ಮಧ್ಯದಿಂದುಕ್ತವಾಗಿದೆ. ಅದು ಅಂತ್ಯದಿಂದುಕ್ತವು ಅಲ್ಲಿಗೆ ಕುರುಹಿನ ಸಂಜ್ಞೆಯು ಬಾರದಾಗಿದೆ. ಶಬ್ದ ಸಂಜ್ಞೆಯು ಬಾರದಾಗಿದೆ. ಇವೆರಡಕ್ಕೂ ಮೀರಿದ ಘನವಾದುದರಿಂದ ಮೀರಿದುದು ಎಂಬ ಸಂಜ್ಞೆಯು ಅಂತ್ಯಸಂಜ್ಞೆ.. ಇದು ಶರಣನ ಸಂಜ್ಞೆ ಇದು ಕೂಡಾ ಇಲ್ಲವಾದುದೆ ಅಂತ್ಯ ಶೂನ್ಯವಾಗಿದೆ.

ನಿರಾವಯಂ ಸರ್ವಶೂನ್ಯಂ ಎಂದು ಹೇಳಿರುವಲ್ಲಿ, ಐಕ್ಯವು ನಿರಾಮಯವಾಗಿದೆ. ಅಲ್ಲಿ ಸರ್ವ ಶೂನ್ಯವಾಗಿದೆ, ಭಕ್ತನ ಆದಿಯು ಶೂನ್ಯವು ಗುರು ಕರುಣಿಸಿದ ಕುರುಹು ಇಲ್ಲದುದು ಆದುದರಿಂದ ಆದಿ ಶೂನ್ಯವಾಗಿದೆ. ಜಂಗಮನ ಅನಾದಿಯಾಗಿಹ ಮಧ್ಯಂತರವು ಇಲ್ಲದುದಾಗಿದೆ. ಶರಣನ ಅಂತ್ಯವಾದ ಆದಿ ಅನಾದಿ ಎಂಬುದಕ್ಕು ಮೀರಿದುದು ಎಂಬ ಸಂಜ್ಞೆಯು ಇಲ್ಲವಾಗಿದೆ, ಆವಾವ ಭವ ಸೋಂಕದ ಭವಿಯ ನಿಲವು. ಅದು ನಿರಾವಯ ನಿಲವು. ಅಲ್ಲಿ ಕುರುಹಿನ ಸಂಜ್ಞೆಯು ಶೂನ್ಯವಾಗಿದೆ. ಆದಿಯಿಂದತ್ತ ಅನಾದಿಯೆಂಬುದು ಶಬ್ದ ಸಂಜ್ಞೆಯು ಇಲ್ಲವಾಗಿದೆ. ಆದಿ ಅನಾದಿಯಿಂದತ್ತತ್ತವೆಂಬುದು

ಅಂತ್ಯ ಶೂನ್ಯವು ಇಲ್ಲವಾಗಿದೆ. ಏನೊಂದುಸರಲು ಇಂಬುಗೊಡದ ನಿಲುವು. ಅದು ನಿರಂತರ ನಿಲುವು ಅದಕ್ಕೆ ನಿರಾಕಾರಂ ನಿಃಶಬ್ದ ಬ್ರಹ್ಮಮುಚ್ಯತೆ ಎಂದುದಾಗಿ ಆ ನಿರವಯ ಸ್ಥಲವು ಉರಿಯುಂಡ ಕರ್ಪುರದಂತಿದ್ದಿತ್ತು.

ಆದಿಯು ಸಾವಯವ,ಮಧ್ಯವು ಸಾವಯವ, ಅಂತ್ಯವು ಸಾವಯವ, ಶೂನ್ಯವೆಂಬುದು ಸಾವಯವ, ಸರ್ವಶೂನ್ಯವೆಂಬುದು ಸಾವಯವ, ಆವುದು ಸಾಪೇಕ್ಷವು. ಅದು ನಿರಪೇಕ್ಷವು ಸಾಪೇಕ್ಷೆ ನಿರಪೇಕ್ಷೆವೆಂಬಿವು ತನ್ನಿಂದ ಸಿದ್ಧವಾಗುವುದರಿಂದ, ತಾನು ಘನಕ್ಕೆ ಘನವಾದುದು ಅದುವೆ ನಿರಂತರವಾದುದು ಸರ್ವಮಂಗಲಮಯವಾದ ಪರಮಸತ್ಯವು. ಅದುವೆ ನಿಃಶಬ್ದ ಬ್ರಹ್ಮ ಮುಚ್ಯತೆ, ಎಂದು ಬಿತ್ತರಿಸಿದುದು ನೋಡಿದಡೆ ನಿಃಶಬ್ದ ಬ್ರಹ್ಮವೆಂಬುದು ನುಡಿದು ಹೇಳುವ ಪದ ಇದಲ್ಲ. ಇದು ತನ್ನಯ ಸ್ವಮಹಿಮೆ. ಇದು ಮೊದಲು ಇದ್ದುದು, ಮಧ್ಯದಲ್ಲಿ ಇದ್ದುದು ಸದಾ ಇದ್ದುದು. ಇದು ಅನಂತವು. ತನ್ನದು ತನ್ನಸ್ವಂತ ಮಹಿಮೆಯಲ್ಲಿ ತಾನಿದ್ದುದು ತೋರಬಾರದ ಘನ. ಹೇಳಲೆಂದೇನೊ? ಹೇಳಬಾರದ ಘನ ತೋರಲೆಂದೇನೊ? ಇದು ತಾನಾರೆಂದರಿತ ತನ್ನ ನಿರ್ಣಯ ತನಗಾದ ಬಳಿಕ ಏನೆಂದರಿಯೆನಯ್ಯ ಎಂದು ಹೇಳಿಹರು.

ತನ್ನಸ್ವಮಹಿಮೆ ತಾನೆ ಪೂರ್ವದಲ್ಲಿದ್ದ ಘನಕ್ಕೆ ಘನವೆಂದು ಹೇಳಲಿಲ್ಲ. ಇದು ಇಲ್ಲದ ಸಮಯ ಇಲ್ಲವೆ ಇಲ್ಲದಿರುವಾಗ ಆದಿ ಶೂನ್ಯ, ಮಧ್ಯಶೂನ್ಯ, ಅಂತ್ಯ ಶೂನ್ಯವು. ಏಕೆಂದರೆ ತನ್ನಹೊರ್ತು ಅನ್ಯ ಆವಾವುದು ಇಲ್ಲದಿರುವಲ್ಲಿ ಆದಿ ಮಧ್ಯ ಅಂತ್ಯವೆಲ್ಲಿಯದು. ಅನಂತನಿಗೆ ಆದಿ ಶೂನ್ಯ ಮಧ್ಯ ಶೂನ್ಯ ಅಂತ್ಯಶೂನ್ಯ ತಾನು ನಿರಂತರ ಬೆಳಗಿನ ಬೆಳಗು ಪ್ರಜ್ವಲಿಸುವದರಿಂದ ಇದು ಆದಿ ಮಧ್ಯ ಅಂತ್ಯವೆಂಬುದು ಕರ್ಪುರ ತಾನು ನಿರಂತರ ಬೆಳಗಿನ ಬೆಳಗು ಪ್ರಜ್ವಲಿಸುವದೆ ಉರಿ. ಈ ಮಹದರುವು ತನಲ್ಲಿ ಕರಿಗೊಂಡ ಬಳಿಕ ಭಕ್ತ ಸ್ಥಲವೆ ಇರಲಿ, ಜಂಗಮ ಸ್ಥಲವೆ ಇರಲಿ, ಶರಣ ಸ್ಥಲವೆ ಇರಲಿ, ಅವುಗಳೆಲ್ಲವು ಕರ್ಪುರ ತಾನು ತನ್ನಸ್ವಂತ ಮಹಿಮೆಯಲ್ಲಿ ಪ್ರಜ್ವಲಿಸುವದರಿಂದ ಇವುಗಳೆಲ್ಲವು ತಾನೆ ತಾನೆ ನಿಃಶಬ್ದ ಬ್ರಹ್ಮವೆಂಬುದು ಜ್ಯೋತಿ ತನ್ನ ಮುಟ್ಟಿದ ಸ್ಥಲಗಳೆಲ್ಲವು ಕರ್ಪುರವಾ ದ್ದರಿಂದ ಉರಿಯುಂಡ ಕರ್ಪುರದಂತಿದ್ದಿತ್ತು ಎಂದು ಹೇಳಿಹರು. ಇಂತಿದು ನಿರವಯಸ್ಥಲವಯ್ಯ ಕೂಡಲಚೆನ್ನಸಂಗಮ ದೇವಯ್ಯ ತನ್ನದು ನಿರವಯ ಸ್ಥಲವೆಂದು ಹೇಳಿಹರು.

181

ಸಹಜವೆನ್ನದೆ ನಿಜವೆನ್ನದೆ ಅಚಲವೆನ್ನದೆ
ಅಖಂಡಿತವೆನ್ನದೆ ಶೂನ್ಯವೆನ್ನದೆ ನಿಃಶೂನ್ಯವೆನ್ನದೆ
ಏನೂ ಎನ್ನದೆ ಕೂಡಲಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು. ॥ 847 ॥

ತಾತ್ಪರ್ಯ : ಸಹಜವೆನ್ನದೆ, ನಿಜವೆನ್ನದೆ, ಅಚಲವೆನ್ನದೆ : ಇದ್ದುದು ಆವುದು? ಪಂಚಭೂತಂಗಳಲ್ಲಿ ಗಗನವು ತಾನು ಇದ್ದಂತಿರುವ ನಿಲುವು. ಅದರಲ್ಲಿ ಬದಲಾವಣೆಯಿಲ್ಲ, ಎಂದೆಂದಿನಿಂದಲೂ ಹಾಗೆ ಇದೆ. ಲೋಕದೃಷ್ಠಿಯಲ್ಲಿ ಅದರ ಜನಿತವೂ ಕಂಡಿಲ್ಲಸಾವು ಕಂಡಿಲ್ಲ. ಇದು ಜೀವ ಬುದ್ಧಿಗೆ ಎಟಕದ ವಿಷಯ. ಗಗನವು ಎಂದು ಹೇಳುವದಷ್ಟೆ ಅಲ್ಲದೆ ಅದರ ನಿಲವು ಹೇಗೆ ಎಂದು ಕೇಳಿದರೆ ಅದು ಎಂದೆಂದೂ ತಾನು ಇದ್ದಂತಿರುವುದೆ ಅದರ ನಿಯಮ. ಸ್ವಭಾವವು ಅದು ನಿರಂತರ ಸಹಜ ಸ್ಥಿತಿಯಲ್ಲಿದ್ದರೂ ನಾನು ಸಹಜವಾಗಿದ್ದೇನೆ ಎಂದು, ಎಂದೂ ಹೇಳಿದುದಲ್ಲ.

ಗಗನವು ಹೇಗೆ ಶಬ್ದಮುಗ್ಧವಾಗಿದೆಯೋ ಹಾಗೆ ಗಗನ ಸದೃಶ್ಯವಾಗಿಹ ಅಖಂಡಿತ ತೆರಹಿಲ್ಲದ

ಘನ ಆವಾವುದಕ್ಕೂ, ಎಡೆಗೊಡದೆ ತನ್ನ ಸ್ವಮಹಿಮೆಯಲ್ಲಿದ್ದುದ ಶಬ್ದಮುಗ್ಧವು. ಸಹಜವಾಗಿಯೆ ಅಂದು ಇಂದು ಎಂದೆಂದೂ ಇದ್ದಂತಿರುವುದು ತನ್ನ ನಿಲುವಾದುದರಿಂದ ಸಹಜವೆನ್ನದೆ ಇದ್ದುದು ಎಂದು ಹೇಳಿಹರು.

ನಿಜವೆಂದರೆ ದಿಟ. ದಿಟವೆಂದರೆ ಸತ್ಯ. ಸತ್ಯ ಸುಳ್ಳಿನ ಸಮಾವೇಶವಿಲ್ಲ. ಅಸತ್ಯದ ಸಮಾವೇಶವಿಲ್ಲ, ಹಗ್ಗದಲ್ಲಿ ಹಾವು ನಸುಗತ್ತಲೆಯಲ್ಲಿ ತೋರುವುದು. ಅದು ಏನೆಂದು ಬೆಳಕಿನಿಂದ ನೋಡಲು ಅದು ಹಾವಾಗದೆ ಹಗ್ಗವೆ ಸಿದ್ಧವಾಗುವುದು. ಇದೆ ಪ್ರಕಾರ ಕಪ್ಪು ಚಿಪ್ಪಿನಲ್ಲಿ ಬೆಳ್ಳಿಯಂತೆ ಭಾಸವಾಗುತ್ತದೆ. ಅದನ್ನು ನಿರೀಕ್ಷಿಸಲು ಬೆಳ್ಳಿಯ ತೋರಿಕೆ ಇಲ್ಲವಾಗಿ ಕಪ್ಪಚಿಪ್ಪು ಸಿದ್ಧವಾಗುತ್ತದೆ. ಇದುವೆ ಮಿಥ್ಯಾತೋರಿಕೆ. ಅವಿಚಾರರೂಪಿ ನಸುಗತ್ತಲೆಯಲ್ಲಿ ನಾಮರೂಪಿ ಸ್ಥಾವರ ಜಂಗಮ ಜಗವು ತೋರುವುದು. ಅರುವಿನಿಂದ ಅರಿದರಿದು ನೋಡುವುಡೆ, ಈ ನಾಮ ರೂಪ ಹುಸಿ ಹೇಗೆ ಹುಟ್ಟಿತೊ ತಿಳಿಯದಂತಾಗಿದೆ. ತಾನು ನಿರಂಜನನಾಗಿಹ ನಿತ್ಯ ನಿಜ ಚಿದ್ರೂಪ ಕಾಣುವದೆಲ್ಲ ಮಿಥ್ಯಾತೋರಿಕೆ ಮೊಲದ ಕೋಡು, ಗಗನ ಕುಸುಮ, ಇವು ಅಸತ್ ರೂಪವು. ಮೊಲದ ಕೋಡು ಗಗನಕುಸುಮ ಇವು ಇಲ್ಲವೆ ಇಲ್ಲ ನುಡಿಯಲ್ಲಿ ಮಾತ್ರ ತೋರುತ್ತವೆಯಲ್ಲದೆ ವಿಚಾರ ಮಾಡಲು ಆಕಾಶದ ಪುಷ್ಪ ಅನ್ನುವದಷ್ಟೆ ಆಕಾಶವದು ಬಳ್ಳಿಯಲ್ಲಿ ಬಳ್ಳಿಯಾಗಿದ್ದರೆ ಅದರ ಹೂವುಗಳು ಇರುತ್ತಿದ್ದವು. ಆಕಾಶ ಬಳ್ಳಿಯಲ್ಲ, ವೃಕ್ಷವಲ್ಲ. ಅಲ್ಲಿ ಬಳ್ಳಿ ಇಲ್ಲ, ವೃಕ್ಷವು ಇಲ್ಲ ಇಲ್ಲವೆಂಬುದು ಅಸತ್ ಲಕ್ಷಣ.

ದಿಟವಾದುದು ಅದು ಮಿಥ್ಯಾ ತೋರಿಕೆಯಿಂದುಕ್ತವಾದುದಲ್ಲ, ನುಡಿಮಾತ್ರದಲ್ಲಿ ಹೇಳಿ ವಿಚಾರಿಸುವುಡೆ ಅತ್ಯಂತ ಆಭಾಸವಾಗುವುದು. ಅಲ್ಲಿ ಈ ಮಿಥ್ಯೆತೋರಿಕೆಗೂ ಮಿಥ್ಯೆ ನುಡಿಗೂ ಅಸತ್ಯವೆಂಬ ನುಡಿಗೂ ಮಿಕ್ಕಿ ಮೀರಿದುದು ತತ್ವವಾವುದು ಅದು ಸತ್ ಆಗಿದೆ, ದಿಟವಾಗಿದೆ. ಅದು ತೋರಬಾರದ ಘನವಾಗಿದೆ. ಅದನ್ನು ಹೇಳುವದದೆಂತು? ಹೇಳಲು ಬಾರದ ಘನ ತೋರುವದದೆಂತು?

ತೋರದ ಘನ ತಾನು ತೋರದ ಘನವೆಂದು ನುಡಿದಿಲ್ಲ. ಹೇಳಲು ಬಾರದ ಘನವ ಹೇಳುವದದೆಂತು, ತೋರಿಸುವದದೆಂತು? ಇದು ಕಲ್ಪಿತ ಪುರುಷನಿಗೆ ಮೀರಿದುದು ಅವಿಚಾರ ವಿಚಾರಕ್ಕೆ ನಿಲುಕದ ಘನ. ಅಜ್ಞಾನ ಜ್ಞಾನಕ್ಕೂ ನಿಲುಕದ ಘನ, ಭಾವಕ್ಕಿಂಬು ಕೊಡದ ಘನ, ಚಿಂತನಕ್ಕೆಡೆಗೊಡದ ಅಚಿಂತ್ಯತ್ವವು ಅದು ನಿಜವೆನ್ನದು, ಅನಿಜವೆನ್ನದು, ಘನವು ಎಂದೆಂದೂ ನಡಿಯದು ಅದು ಘನವೆನ್ನದು.

ಅಚಲವೆನ್ನದೆ ಆಕಾಶವು ಅಚಲವು. ಅದರ ಸ್ವಭಾವ ಸ್ಪಂದನ ನಿಸ್ಪಂದನಗಳಿಂದ ದೂರವು. ಅದು ಮಂದ ವೇಗದಿಂದಲೂ ಬೇರಾದುದು. ತೀವ್ರವೇಗದಿಂದದಲೂ ಬೇರಾದುದು. ಇದು ಕಾರಣ ಅದು ಚರಿಸ್ಯಾಡದ ನಿಲುವುಳ್ಳದು. ಎಂದೆಂದೂ ಅಚಲ ನಿಲುವುಳ್ಳದು, ಎಂದು ಹೇಳಿದೆ. ಅಚಲವಾಗಿರುವ ಆಕಾಶ ತಾನು ಅಚಲವೆಂದು ಎಂದೂ ಹೇಗೆ ನುಡಿಯದ್ದಾಗಿದೆ, ಹಾಗೆ ಚಿದಾಕಾಶನಾದ ತಾನು ಚಿದಾಕಾಶನೆಂದು ಎಂದು ನುಡಿದಿರುವದಿಲ್ಲ, ಆಕಾಶವು ಅಚಲವಾಗಿರುವಾಗ ಇದಕ್ಕಿಂತ ಸಹಸ್ರಾರು ಪಾಲು ಸೂಕ್ಷ್ಮವಾಗಿರುವ ತಾನು ಅಚಲನೆನ್ನದೆ ಅಚಲನಾಗಿರುವನು.

ಅಖಂಡಿತನೆನ್ನದೆ ಆಕಾಶವು ಅಪಾರವಾದ ಭೂತ. ಇದು ಎಂದೆಂದೂ ತುಣುಕು ತುಣುಕು ಆಗದ ಭೂತ, ಎಲ್ಲೆಲ್ಲೂ ವ್ಯಾಪಕವಾದ ಭೂತ. ಊರ್ಧ್ವ ಲೋಕ ಅಧೋ ಲೋಕದಲ್ಲಿ ವ್ಯಾಪಿಸಿದ ಭೂತ. ಇದು ಆವಾವ ಲೋಕಂಗಳಾಗಿಲ್ಲ. ಇದಲ್ಲದೆ ಹದಿನಾಲ್ಕು ಲೋಕಧಲ್ಲಿ ಒಳಹೊರಗೆನ್ನದೆ ವ್ಯಾಪಿಸಿದ ಭೂತ. ಸಕಲ ಲೋಕಂಗಳು ಇದರ ಗರ್ಭದಲ್ಲಿ ನಿವಾಸವು. ಇದು ತಾನೆಂದು ಅಖಂಡಿತ

ಭೂತವೆಂದುದಲ್ಲ ಇದು ಪಂಚಭೂತಗಳಲ್ಲೊಂದಾದ ಭೂತ. ಈ ಭೂತ ಹೀಗಿರುವಾಗ ಇದಕ್ಕಿಂತ ಸಹಸ್ರಾರು ಪಾಲು ಸೂಕ್ಷ್ಮಾತಿ ಸೂಕ್ಷ್ಮವಾಗಿರುವ ಚೈತನ್ಯವು. ಅದು ಎಂದಾದರೂ ತುಣ ತುಣಕು ಆಗಿದೆಯಾ? ಇದ್ದಂತಿದ್ದ ಘನ. ತಾನು ಅಖಂಡಿತವೆಂದೂ ಎಂದೂ ನುಡಿದುದಲ್ಲ.

ಶೂನ್ಯವೆನ್ನದೆ ಶೂನ್ಯವಿದ್ದುದು, ಅದು ಶೂನ್ಯವೆಂದುದಲ್ಲ, ಶಾಸ್ತ್ರವು ಇಷ್ಟೆಲ್ಲ ಒಬ್ಬ ಆತ್ಮರ ತಿಳಿಸಲು ಗಗನದೃಷ್ಟಾ ಹೋಲಿಸುತ್ತದೆ. ಇದು ಸರಿಯಾಗದೆ ಗಗನದತ್ತಾಚೆ ಎನೂ ಇದೆ ಎಂದಲ್ಲಿ ಏನೂ ಇಲ್ಲೆಂಬುದು ಶೂನ್ಯದೃಷ್ಟಾಂತ ಏನೂ ಇಲ್ಲವೆಂಬುದಾದರೂ ಆತ್ಮನ ಸದೃಶ ಲಕ್ಷಣವಾಗುವುದೆ? ಆಗದು ಶೂನ್ಯ ಹೇಗೆ ಎನೊಂದಾಗದೆ ಜಡದಂತೆ ಮೌನ ಮುದ್ರಿತವಾಗಿದೆ ಎಂದು ಈ ಲಕ್ಷಣ ತಿಳಿಸಿದರೂ ಸರಿಬಾರದೆ ನಿಃಶೂನ್ಯವೆನ್ನಲು ಬಾರದೆ ಏನೇನೂ ಇಲ್ಲವೆಂಬುದೆ ನಿಃಶಬ್ದ ದೃಷ್ಟಾಂತದಿಂದ ಹೇಳಿ ಕೊಡುವುದು ಇಲ್ಲಿ ದೃಷ್ಟಾಂತ ಕೊಟ್ಟು ದ್ರಾಷ್ಟಾಂತ ಹೋಲಿಸಲು ಜಿಜ್ಞಾಸುವಿಗೆ ಮೂಲ ವಸ್ತುವಿಗೆ ತಿಳುವಳಿಕೆಗೆ ನಡೆದ ಹೃದಯದ ಕರುಣಾರಸ. ವಿಚಾರ ಮಾಡಲು ಪರತತ್ವ ನಿಜ ಸಂಯುಕ್ತರ ಆ ನೀನೆನ್ನದಿಹ ಶಬ್ದ ಸುಖಿಗಳ ತೋರಾ ಎನಗೆ ಎಂದು ಬಿತ್ತರಿಸಿದುದು ನೋಡಿದಡೆ, ನಾನೀನೆಂಬುದಕ್ಕು ಎಡೆಗೊಡದ ಘನವ, ಅಲ್ಲಿ ನಾಹಂ, ಕೋಹಂ, ಸೋಹಂ, ಪರಬ್ರಹ್ಮಸ್ಮಿ ದಾಸೋಹಂ, ಚಿದಹಮ್ಮು ಇಲ್ಲ ಅವುಗಳ ಬೋಧೆಗೂ ಅವಕಾಶ ಕೊಡದ ಘನವು ಇಲ್ಲಿ ಪರತತ್ವ ತಿಳಿಸಲು ಉಪಮಾನ ಉಪಮೇಯ ಸಂಭವಿಸವು. ಅನುಪಮವೆಂಬುದೆ ಯತಾರ್ಥವಾಗದಿರುವಲ್ಲಿ, ಉಪಮಾನ ನಿರುಪಯೋಗವು. ಉಪಮೇಯವು ನಿರುಪಯೋಗವೆನ್ನಿಸುವವು. ಏಕೆಂದರೆ ತನ್ನ ಸ್ವರೂಪದಂಥ ಇನ್ನೊಂದು ಅದರ ಸದೃಶವಾಗಿದ್ದಲ್ಲಿ, ಉಪಮಾನ ಉಪಮೇಯ ಬಳಸುವದು ಸಹಜವಾಗಿದೆ. ಇಲ್ಲಿ ಇವಾವು ನಿರುಪಯೋಗವಾಗವದರಿಂದ, ಆತ್ಮ ಬ್ರಹ್ಮ ಚೈತನ್ಯ ಸತ್ಯ ಜ್ಞಾನಾನಂದ, ಜ್ಞಾನ ಸ್ವರೂಪ ಲಿಂಗ ಅಕಲ್ಪಿತ ಅವಿಕಾರಿ ಎಂದು ಶೃತಿಗಳು ಹೇಳಲ್ಪಟ್ಟಿವೆ. ಏಕೆಂದರೆ ಇಲ್ಲಿ ಈ ಶೃತಿವಾಕ್ಯಗಳು ನಿರುಪಯೋಗವಾಗುತ್ತವೆ. ಶೃತಿಗಳು ತನ್ನಿಂದ ಸಿದ್ಧವಾಗುವದರಿಂದ ತನ್ನನ್ನು ಶೃತಿಗಳು ಸಿದ್ದಮಾಡವು, ಶೃತಿಗಳಲ್ಲಿ ಹೇಳಿದ ಬ್ರಹ್ಮ ಒಂದು ಇವುಗಳನ್ನು ತಿಳಿಯುವ ತಾನೊಬ್ಬನು ಆದಲ್ಲಿ ಏಕಂ ಏಕವಾದ ವಸ್ತು ತಿಳಿಯದಂತಾಯಿತ್ತು. ಅದಕ್ಕಾಗಿ ಇದು ಸರಿಯಾಗದು.

ಸಹಜವೆನ್ನದೆ ನಿಜವೆನ್ನದೆ ಅಚಲವೆನ್ನದೆ ಅಖಂಡಿತವೆನ್ನದೆ ಎಂದು ಬಿತ್ತರಿಸಿದ ಸಂಜ್ಞೆ ತಿಳಿದು ನೋಡುವುಡೆ, ಇದನ್ನು ಬಿತ್ತರಿಸಲಿಲ್ಲವೆನಬೇಕೆ? ಬಿತ್ತರಿಸಿದುದು ನಿರೀಕ್ಷಿಸಿದರೆ ಬಿತ್ತರಿಸಿಯೂ ಬಿತ್ತರಿಸದ ಸಂಜ್ಞೆ. ಇದು ಅರಿದರಿದು ನೋಡು ಎನ್ನುವ ಸಂಜ್ಞೆ. ಆರನು? ತನ್ನನ್ನು! ಗಗನವು ತನಗಿಂತ ಬೇರೆಯಾದುದು ಅರಿದು ನೋಡಿದಂತೆ ಇದು ಬೇರಾಗಿ ಅರಿದು ನೋಡುವುದು ಅಲ್ಲ, ಗ್ರಂಥಗಳಲ್ಲಿ ಆತ್ಮ ಪರಮಾತ್ಮ ತ್ವಂ ಪದಕ್ಕೆ ಸಾಕ್ಷಿ, ತತ್ವಪದಕ್ಕೆ ಸಾಕ್ಷಿ, ಸಾಕ್ಷಿ ಲಕ್ಷಣ, ಲಕ್ಷ್ಯ ಎಂದು ತಿಳಿಸಿದುದುನ್ನು ಪಠಣ ಮಾಡುವುದಕ್ಕಲ್ಲ ಅರಿಯುವದಕ್ಕಾಗಿ. ಇಲ್ಲಿ ಆರು ಅರಿದರಿದು ನೋಡುವರು ಅವರಿಗೆ ಗಂಭೀರತ್ವವು ಸಹಜ ಸಿದ್ಧಿಸುವುದು. ಇಲ್ಲಿ ಪರಬ್ರಹ್ಮ ಸಾಕ್ಷಿ ಸ್ವಯಂ ಪ್ರಕಾಶ, ಅರುವು ಎಂಬುದನ್ನು ಅರಿದರಿದು ನೋಡುವ ಘನತ್ವವೆ ತನ್ನನ್ನು ಅರಿಯುವ ಒಂದನುವ ಈ ಲಕ್ಷಣದಿಂದ ಅರಿಯ ಹೋಗುವುಡೆ ತನ್ನದು ಉಪಮಿಸದ ನಿಲುವೆಂಬುದು ತನ್ನಿಂದ ತನಗದು ಸಹಜ ವೇದ್ಯವಾಗುವುದು. ಇದು ಕಾರಣ ಅರುವ ಅರಿಯ ಹೋಗುವುದು ಆರು ಅರಿಯ ಹೋಗುವರು, ಅವರಿಗೆ ತನಗೆ ಸಹಜವೆನ್ನಲು ಬಾರದಕ್ಕೆ ನಿಜವೆನ್ನದೆ ಎಂದು ಹೇಳಿದ್ದಾರೆ, ಅಚಲ ಅಖಂಡಿತವೆನ್ನಲು ಬಾರದಿರುವದಕ್ಕೆ ಅಚಲವೆನ್ನದೆ ಅಖಂಡಿತವೆನ್ನದೆ ಎಂದು ಹೇಳಿಹರು.

ಏನೂ ಎನ್ನಲು ಬಾರದ ನಿಲುವುಳ್ಳವರು ಶೂನ್ಯವೆನ್ನಲು ಬಾರದಿರುವುದಕ್ಕೆ ಶೂನ್ಯವೆನ್ನದೆ ಎಂದು

ಹೇಳಿಹರು. ಶಬ್ದಮುಗ್ಧಮೌನ ವೆನ್ನಲು ಬಾರದಿರುವುದಕ್ಕೆ ನಿಃಶೂನ್ಯವೆನ್ನದೆ ಎಂದು ಹೇಳಿಹರು. ಏನೂ ಎನ್ನದೆ ಇದ್ದುದೆ ಕೂಡಲಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು ಎಂದು ಹೇಳಿದುದು. ಲಿಂಗ ಲಿಂಗವಾಗಿಪ್ಪುದೆ ಲಿಂಗೈಕ್ಯವು, ಲಿಂಗ ಏನೂ ಎನ್ನದಿರುವದರಿಂದ ಹೇಗೆ ಲಿಂಗವಾಗಿದೆಯೊ ಹಾಗೆ ತಾನಾರೆಂದರಿತ ಘನವಂತ ತನ್ನೊಳ ತಾನೆ ತಾನಾಗಿದ್ದುದೆ ಲಿಂಗೈಕ್ಯ ನಿಲುವು. ಏಕೆಂದರೆ ತಾನೆ ಲಿಂಗವಾದವನು, ಲಿಂಗವು ಲಿಂಗ ತಾನೆ ಲಿಂಗವಾದುದರಿಂದ ಲಿಂಗ ಲಿಂಗ ಅನ್ನದೆ ಹೇಗೆ ಅನುಪಮವಾಗಿದೆಯೊ ಹಾಗೆ ಅರಿತ ಮಹಾಂತ. ತಾನು ಅರುವು ಎನ್ನದೆ ಲಿಂಗವೆನ್ನದೆ ಅಚಲವೆನ್ನದೆ ಸಹಜವೆನ್ನದೆ ಅಖಂಡಿತ ಏನ್ನದೆ, ತನ್ನ ಸ್ವಮಹಿಮೆಯಲ್ಲಿ ನಿಂತುದೆ ಲಿಂಗೈಕ್ಯವು ಎಂದು ಹೇಳಿಹರು.

ಲಿಂಗೈಕ್ಯನಿಲವು ಚಿದಹಮ್ಮು ಕರಗಿದವರ ನಿಲವು. ಮರವರುವಿಂಗೆ ಮೀರಿದ ನಿಲವು. ಇದು ಮರವಿಂಗೆ ಹೇಗೆ ಸಾಧ್ಯ? ಅರುವಿನ ಅಹಂಕಾರಿಗೂ ನಿಲುಕದ ನಿಲುವು ಇದು ಮಾತಿನ ಮಹಾಂತರ ನಿಲುವುಳ್ಳ ನಿಲುವಿಂಗೆ ನಿಲುಕದ ತತ್ವ. ಮಿಗೆ ಮಿಗೆ ಮೀಸಲವಾದ ತತ್ವ. ಬಲ್ಲವರ ಮಹದರುವು ಎಂಜಲ ಮಾತ ನುಡಿವ ರಂಜಕರ ಜ್ಞಾನಕ್ಕೆ ಇದು ಗೊತ್ತಾಗದು. ಸಹಜ, ಅಜ, ಅಚಲ, ಅಚಿಂತ್ಯ, ಅಪ್ರಮಾಣಗಮ್ಯ ಹೀಗೆ ಹೇಳಿದುದನ್ನೆ, ಹೇಳುತ್ತ ಬಂದವರು ಬಹಳಷ್ಟು ಚಿದಹಮ್ಮುಳ್ಳವರು ಇದ್ದಾರೆ. ಇದಲ್ಲದೆ ಈ ಚಿದಹಮ್ಮಿಗೆ ನಿಲುಕದ್ದು ಆಗಿರುವದರಿಂದ ಸಹಜವೆನ್ನದೆ ನಿಜವೆನ್ನದೆ ಅಚಲವೆನ್ನದೆ ಅಖಂಡಿತ ವೆನ್ನದೆ ಗ್ರಂಥಗಳ ನೋಡಿ ಹೇಳುವವರೆಲ್ಲ ಎಂಜಲ ಮಾತ ನುಡಿವ ರಂಜಕರೆ. ಇದು ಮಿಗೆ ಮಿಗೆ ಮೀಸಲವಾದ ತತ್ವ. ಶಬ್ದವೆ ಮೀಸಲವಾದುದರಿಂದ ಭಾವಕ್ಕಿಂಬುಕೊಡದ ಘನವಾದ್ದರಿಂದ ಇದು ಮೀಸಲ ತತ್ವವರಿತವರ ಘನವು. ಏನೂ ಎನ್ನದೆ ಕೂಡಲಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು ಎಂದು ಹೇಳಿಹರು.

182

ಏನೆಂಬೆ ನೇನೆಂಬೆ ಆಶ್ರಯ ವಿರಹಿತನ,
ಏನೆಂಬೆ ನೇನೆಂಬೆ ನಾಮ ನಿರ್ನಾಮನ
ಏನೆಂಬೆ ನೇನೆಂಬೆ ಸಾರಾಯ ಭೂತನಲ್ಲದುದು,
ಏನೆಂಬೆ ನೇನೆಂಬೆ ದೇವಾ ಕ್ರಿಯೆ ಮೀರಿದ ಸಂಬಂಧವ
ಕೂಡಲಚೆನ್ನಸಂಗಮದೇವಾ
ಆನೆಂಬುದಿಲ್ಲದ ನೇನೆಂದುಪಮಿಸುವೆನಯ್ಯ. ॥ 841 ॥

ತಾತ್ಪರ್ಯ : ಏನೆಂಬೆ ನೇನೆಂಬೆ ಆಶ್ರಯ ವಿರಹಿತನ: ಆಶ್ರಯವುಳ್ಳವನಾರು? ಆಶ್ರಮ ರಹಿತ ನಾರು? ಕಲ್ಪಿತ ಪುರುಷ ಆಶ್ರಯ ವುಳ್ಳವ, ಉಪಾಧಿಯುಳ್ಳವ, ಸಂಗ ಸಂಬಂಧವುಳ್ಳವ, ತನು ಮನ, ಧನವುಳ್ಳವ ಗೃಹಸ್ಥ, ಬ್ರಹ್ಮಚರ್ಯ ವಾನಪ್ರಸ್ಥ ಸನ್ಯಾಸ, ಇವನು ಆಶ್ರಯವುಳ್ಳವ. ಗೃಹಸ್ಥನಿಗೆ ಸಂಸಾರವೆ ಆಶ್ರಯವಾಗಿದೆ. ವಿಷಯದಾಸಕ್ತಿಯ ಆಶ್ರಯ ಫಲಾಪೇಕ್ಷೆಯ ಆಶ್ರಯ, ಬ್ರಹ್ಮಚರ್ಯನಿಗೆ ಇಂದ್ರಿಯ ನಿಗ್ರಹವೆ ಆಶ್ರಯ, ಮನೋಮಯವೇ ಆಶ್ರಯ, ವಾಸನಾಪ್ರಸ್ಥನಿಗೆ ವನದಲ್ಲಿರುವದೆ ಆಶ್ರಯ, ಸನ್ಯಾಸಿಗೆ ಆರಾರಿಗೂ ಸೇರದೆ ಇರುವದೆ ಅವನಿಗೆ ಆಶ್ರಯ. ಈ ನಾಲ್ಕು ಆಶ್ರಮಂಗಳಿಗೆ ಅಜ್ಞಾನವೆ ಅಶ್ರಮವಾಗಿದೆ, ಅವಿದ್ಯೆಯೆ ಆಶ್ರಯ ಮಲಿನ ಸತ್ವಗುಣವೆ ಆಶ್ರಯ, ಸತ್ವಗುಣವುಳ್ಳವಂಗೆ ವಿವೇಕ ವೈರಾಗ್ಯ ಶಮಾದಿ ಷಟ್‌ಸಂಪತ್ತು ಮುಮುಕ್ಷುತ್ವ ಸಾಧಕ ಚತುಷ್ಟಯವೆ ಆಶ್ರಯ. ನಂತರ ಸದ್ಗುರುವಿನ ಆಶ್ರಯ ಆ ಮಹಾಂತನ ಬೋಧದಾಶ್ರಯ, ಬೋಧವಾದ ನಂತರ ಮನನ ನಿಧಿ ಧ್ಯಾಸದಾಶ್ರಯ ಲಿಂಗಾರ್ಚಕರಿಗೆ ಪೂಜಾಲಿಂಗದಾಶ್ರಯ, ಅಂಗಪ್ರೇಮಿಗಳಿಗೆ ಅಂಗದಾಶ್ರಯ

ಜಂಗಮ ಪ್ರೇಮಿಗಳಿಗೆ ಜಂಗಮದಾಶ್ರಯ, ಪ್ರಸಾದ ಪ್ರೇಮಿಗಳಿಗೆ ಪ್ರಸಾದಾಶ್ರಯ, ಗುರುವಿಡಿದವಂಗೆ ಗುರುವಿನಾಶ್ರಯ, ಇವರೆಲ್ಲರು ಕಲ್ಪಿತಪುರುಷರು, ತಮ್ಮ ತಮ್ಮ ಕಲ್ಪಿತವೆ ಇವರುಗಳಿಗೆ ಆಶ್ರಯವಾಗಿದೆ. ಇಂಥವರು ಆಶ್ರಯ ವಿರಹಿತವಾಗಲು ಅಸಾಧ್ಯವಾಗಿದೆ ಏಕೆಂದರೆ ತಮ್ಮ ತಮ್ಮ ಆವರಣಂಗಳೆ ತಮಗೆ ಅಭ್ಯಾಸವಾಗಿ ಇಲ್ಲದುದೆ ಉಂಟಾಗಿ ಆಶ್ರಯವುಳ್ಳವನನ್ನಾಗಿ ಮಾಡಿದೆ. ಇದು ಕಾರಣ ಇವರು ಆಶ್ರಯ ವಿರಹಿತರಾಗಲು ಹೇಗೆ ಸಾಧ್ಯ. ಭಾವಕ್ಕಗಮ್ಯವಾದ ಘನವೇನು ಬಲ್ಲರು ಅರಿಯದ್ದರಿಂದ ಇವರು ಆಶ್ರಯ ವಿರಹಿತರಾಗಲಾರರು.

ಭಕ್ತ, ಮಹೇಶ, ಪ್ರಸಾದಿ , ಪ್ರಾಣಲಿಂಗ ಶರಣ, ಐಕ್ಯಸ್ಥಲ ಹಿಡಿದು ಕೊಂಡವರು ಕೂಡ ಆಶ್ರಯವುಳ್ಳವರು ಪಂಚಾಚಾರ, ಅಷ್ಟಾವರಣ ಹಿಡಿದು ಕೊಂಡವರೆಲ್ಲ ಆಶ್ರಯವುಳ್ಳವರು ಷಟ್‌ಸ್ಥಲ ಪ್ರೇಮಿ ಷಟ್‌ಸ್ಥಲ ಹಿಡಿದರೆ ನಿಸ್ಥಲದವನು ನಿಸ್ಥಲವ ಹಿಡಿದಿಹನು. ಇವರೀರ್ವರು ಆಶ್ರಯವುಳ್ಳವರು.

ಭಕ್ತರಿಗೆ ಗುರು, ಲಿಂಗ, ಜಂಗಮ, ಪ್ರಸಾದ ಉಂಟೆಂಬುದೆ, ಆಶ್ರಯವುಳ್ಳದಾಗಿದೆ. ಜಂಗಮನಿಗೆ ಇಲ್ಲೆಂಬ ಪ್ರಮಾಣವೆ ಆಶ್ರಯವಾಗಿದೆ. ಲಿಂಗ ಸಕೀಲ ಸಂಯೋಗ ವರ್ಮಸ್ಥಲವರಿತವರು ಮಾತ್ರ ಆಶ್ರಯ ವಿರಹಿತರಾಗಿದ್ದಾರೆ.

ಲಿಂಗ ಲಿಂಗ ಎನ್ನಲಿ ಜಂಗಮ ಜಂಗಮ ಎನ್ನಲಿ ಇವರೆಲ್ಲ ಆಶ್ರಯವುಳ್ಳವರು ಶಬ್ದ ಸಂಭ್ರಮದವರೆಲ್ಲ ಆಶ್ರಯವುಳ್ಳವರು.

ಶಬ್ದ ಸೂತಕ ವಿರಹಿತರು ಮಾತ್ರ ಆಶ್ರಯ ವಿರಹಿತರು. (ಯಾರು) ಶಬ್ದ ಸಂಭ್ರದವರು ನಿಃಶಬ್ದ ವೇದಿಗಳ ಘನವ ಅವರೇನು ಬಲ್ಲರು. ಬಯಲಿನ ಘನವ ಘಟಮಠಾದಿಗಳೇನು ಬಲ್ಲವು. ಆ ಘಟ ಮಠವ ನಂಬಿದ ಕಲ್ಪಿತನಾದರೂ, ಆ ಬಯಲಿನ ಘನವ ಅವನೇನು ಬಲ್ಲನು. ಬಯಲಿನ ಘನವ ಬಯಲು ಬಲ್ಲದು. ಬಯಲು ಬಯಲಾಗಿರುವುದೆ, ಬಯಲಿನ ಹಿರಿಮೆ. ಬಯಲಿನ ಹಿರಿಮೆ, ಭೂಮಿ, ನೀರು, ಅಗ್ನಿ, ವಾಯು ಇವುಗಳೇನು ಬಲ್ಲವು? ಬಯಲಾದರೂ ಒಂದು ಆಶ್ರಯವುಳ್ಳದ್ದು, ಅಜ್ಞಾನವೆ ಅದಕ್ಕೆ ಆಶ್ರಯ , ಅಜ್ಞಾನಕ್ಕೆ ಜ್ಞಾನವೆ ಆಶ್ರಯ . ಜ್ಞಾನಕ್ಕೆ ಗುರುಕೃಪೆಯೆ ಆಶ್ರಯ, ಗುರುಕೃಪಾಕ್ಕೆ ತನ್ನಿಂದ ತನ್ನ ಅರಿದ ಅರುವೆ ಆಶ್ರಯ. ಈ ಅರಿದ ಅರುವಿಂಗೆ ಅರಿಯದರುವು ತಾನಾದವಂಗೆ ಆದಾರ ಆಶ್ರಯ.

ಏನೆಂಬೆ ಏನೆಂಬೆ ಆಶ್ರಯ ವಿರಹಿತನ, ಮಹಾತ್ಮರ ಮಹದುಪಕಾರ ಅವರ್ಣೀಯವು ಇಲ್ಲಿ ಆಶ್ರಯ ವಿರಹಿತನ ಘನತ್ವ. ಆ ಮಹಿಮನ ಹಿರಿಮೆಯೆ ಒಂದನುವ ಮಾಡಿ, ವರ್ಣಿಸಲು ಉದ್ಯುಕ್ತನಾಗಿಯೂ, ಅಲ್ಲಿ ನುಡಿಯೆ ನುಡಿಸಲು ಬಾರದಂತಾಗಿ ಏನೆಂಬೆ, ಏನೆಂಬೆ ಎಂದು ಎರಡು ಸಾರೆ ಹೇಳಿಹರು.

ಆವಾವುದರ ಆಶ್ರಯವಿಲ್ಲದವನು ಕಥನ ಮಾಡುವದದೆಂತು? ಉಪಾಧಿ ನಷ್ಟಮಾಡಿದವಂಗೆ ಉಪಾಧಿಯಿಂದ ವರ್ಣಿಸುವದದೆಂತು? ತಾನಾರೆಂದು ತನ್ನ ನಿರ್ಣಯ ತನಗಾದ ಘನ ಮಹಿಮ ಆಶ್ರಯವಿರಹಿತ. ಶಬ್ದ ಸಂಭ್ರಮವೆ ನಾಚಿ ನಿಂತಿದೆ. ಮನದ ಪೂರ್ವಸ್ವಭಾವ ಉತ್ತರ ಸ್ವಭಾವ, ಎರಡರ ನೆನಹು ನಿರ್ಣಯಂಗಳು ನಿರುಪಯೋಗವಾಗಿ, ನಿಷ್ಪ್ರಯೋಜಕ ನಿರರ್ಥಕವೆಂದು ತನ್ನಿಂದ ತನಗೆ ವೇದ್ಯವಾದಲ್ಲಿ ಆಶ್ರಯ ವಿರಹಿತನು. ಇಂತಪ್ಪ ಮಹಾಂತನ ಏನೆಂಬೆ ಏನೆಂಬೆ ಎನ್ನಲು ಬಾರದಂತಾಗಿರುವುದೆ ಆಶ್ರಯ ವಿರಹಿತನ ಸೂಚಕವಾಗಿದೆ. ಪ್ರವೃತ್ತನಾಗಿಯು ನುಡಿಯಲು ಇಂಬಿಲ್ಲವಾಗಿದೆ. ನಿವೃತ್ತನಾಗಿಯೂ ನುಡಿಯಲು ಇಂಬಿಲ್ಲವಾಗಿದೆ. ನಡೆಯಿಂದ ನುಡಿ ಕೆಟ್ಟುಹೋಗಿದೆ. ತಾನಾರೆಂಬ ನಿರ್ಣಯ ತನಗಾದುದೆ ನಿಜವಾದ ನಡೆ. ಈ ನಡೆ ಬಂದಮೇಲೆ ನುಡಿ

ಕೆಟ್ಟು ಹೋಗಿದೆ. ಭಾವದ ಗುಸುಟು ತಾನೆ ನಾಚಿ ಮಾದುದು, ಗುಹೇಶ್ವರನೆಂದು ಸಿನೆ ಬಂಜೆಯಾಗಿರುವದರಿಂದ ಹೇಳಲು ಉದ್ಯುಕ್ತವಾಗಿದ್ದರೂ, ಅಲ್ಲಿ ವಾಣಿಯ ಸಾಹಸ ನಿಂತು ಹೋದುದರಿಂದ ಏನೆಂಬೆ ಏನೆಂಬೆ ಆಶ್ರಯ ವಿರಹಿತನ ಎಂದು ಹೇಳಿಹರು.

ಏನೆಂಬೆ ನೇನೆಂಬೆ ನಾಮ ನಿರ್ನಾಮನ : ನಾಮವಿದ್ದಲ್ಲಿ ವರ್ಣನೆ ಉಂಟು, ನಾಮದ ವ್ಯಾಪಕತ್ವ ಬಹುದೂರ ಅವಲಂಬಿಸಿಕೊಂಡಿದೆ. ಪ್ರಪಂಚ ವ್ಯವಹಾರಕ್ಕಾಗಿ ಬಳಕೆಗೆ ಬಂದವುಗಳೆಲ್ಲ ನಾಮಂಗಳು. ಪಾರಮಾರ್ಥದ ಪರಿಣಾಮದಿಂದ ಪ್ರಕಟವಾದವುಗಳೆಲ್ಲ ನಾಮಂಗಳು. ಇವುಗಳು ಸತ್ಯತ್ವ, ನಿಜವಾದ ಸತ್ಯವನ್ನು ತಿಳಿಯಗೊಡದಂತೆ ಮಾಡಿದೆ. ಪ್ರಪಂಚದಲ್ಲಿರುವ ನಾಮದ ಪ್ರಮುಖ ನಾಮವೆಂದರೆ, ತಂದೆ, ತಾಯಿ, ಸತಿ, ಸುತ, ಸಹೋದರ, ಸಹೋದರಿಯರು, ಮಿತ್ರ , ವೈರಿಯೆಂಬ ಪರಿಯಾಯ ನಾಮಗಳು. ಇನ್ನು ಪರಮಾರ್ಥದಲ್ಲಿ ಪ್ರಮುಖ ನಾಮಗಳೆಂದರೆ, ಗುರು ಶಿಷ್ಯ ವಿರತಿ ಮುಮುಕ್ಷು, ಅಭ್ಯಾಸಿ, ಅನುಭವಿ, ಆರೂಢ. ಇದಲ್ಲದೆ ಷಟ್‌ಸ್ಥಲದಲ್ಲಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ. ಈ ನಾಮಂಗಳ ಸತ್ಯತ್ವ ಬುದ್ಧಿ ನಷ್ಟವಾಗಬೇಕು. ಮಿಥ್ಯತ್ವ ಬುದ್ಧಿ ನಷ್ಟವಾಗಬೇಕು. ಸಮತೆ ಸಯವಾದ ಸ್ವಮಹಿಮೆ ಪ್ರಜ್ವಲಿಸಿದಾಗ, ನಾಮ ನಿರ್ನಾಮವೆಂಬುದು ವಿದಿತವಾಗುವುದು.

ಆಗ ಏನೆಂಬೆ ಏನೆಂಬೆ ಎಂಬ ಅವರ್ಣೀಯತ್ವವು, ನಮ್ಮ ಹೃದಯಕ್ಕೆ ವೇದ್ಯವಾಗುವದು. ಏನೆಂಬೆ ಏನೆಂಬೆ ಸಾರಾಯ ಭೂತನಲ್ಲದುದು ಅರಿಯದಿರೆ ವೇದವೆ ಇರಲಿ ವೇದಾಂತವೆ ಇರಲಿ, ಶೃತಿಯೆ ಇರಲಿ ಉಪನಿಷದ್ ಆಗಮಂಗಳೆ ಇರಲಿ ಇವೆಲ್ಲವು ಆತ್ಮನ ಲಕ್ಷಣದಿಂದುಕ್ತವಾಗಿ ಶಬ್ದ ಸಂಭ್ರಮದವುಳಾಗಿಹವು. ಶಬ್ದ ಸಂಭ್ರಮದಿಂದುಕ್ತವಾದ ಸಂಜ್ಞೆಗಳು ಸಾರಾಯ ಭೂತ ಅಲ್ಲದುದು ಎನ್ನಿಸಲಾರವು.

ಸಾರಾಯಭರಿತನಲ್ಲದುದು ಅದಾವುದು ? ತಾನೆ ಊಹೆಗೂ ಉತ್ತರಕ್ಕೂ ನಿಲುಕದ ತನ್ನ ಸ್ವಮಹಿಮೆಯೆ ಸಾರಾಯಭರಿತ ಅಲ್ಲದುದು . ತನ್ನನ್ನು ವೇದ ವೇಧಿಸಲರಿಯದು ಶಾಸ್ತ್ರ ಸಾಧಿ ಸಲರಿಯದು ಪುರಾಣ ಪೂರೈಸದ್ದು ಆಗಮಕ್ಕೆ ನಿಲುಕದ್ದು ತನ್ನ ಸ್ವಮಹಿಮೆ ಸಾರಾಯ ಭರಿತ ನಲ್ಲದುದು ಎಂದು ಸಂಜ್ಞೆ ಸೂಚಿಸಿಹರು . ಸೂಚಿಸಲು ಬಾರದ ಘನವೆಂದರೆ ತಾನು ತನ್ನ ಸ್ವಮಹಿಮೆಯಲ್ಲಿ ತಾನೆ ತಾನಾಗಿ ನಿಂತಲ್ಲಿ ಆಶ್ರಯ ವಿರಹಿತವನೆಂಬೆ ಏನೆಂಬೆ ಎಂದು ಹೇಳಿಹರು.

ಏನೆಂಬೆ ಏನೆಂಬೆ , ಕ್ರಿಯೆ ಮೀರಿದ ಸಂಬಂಧವ ಕ್ರಿಯೆದಿಂದುಕ್ತವಾದುದು ವರ್ಣಿಸಲು ಬರುತ್ತದೆ. ಕ್ರಿಯೆದಲ್ಲಿ ಮರವಿನ ಕ್ರಿಯೆ , ಅರುವಿನ ಕ್ರಿಯೆ ಎರಡು ಇರುತ್ತವೆ . ಒಂದು ಅಂಗ ಚಿಂತನ, ಇನ್ನೊಂದು ಲಿಂಗ ಚಿಂತನ ವೆಂದು ಎರಡುಂಟು.ಮರವರುವಿಗೆ ಮೀರಿದ ಘನವಾಗಿಹ, ತನ್ನ ಸ್ವಮಹಿಮೆಯಲ್ಲಿ ನೆಲಿಸಿ , ತಾನೆ ತಾನಾದುದು . ತನ್ನಿಂದ ತನಗದು ಕರಿಗೊಂಡಾಗ ಅರಿಯದರುವು ತಾನು ಏನೊಂದಾಗದ ಘನ. ನೆನೆಯಲರಿಯೆ , ನಿರ್ಧರಿಸಲರಿಯೆ ಕಲ್ಪಿತನೆ ನಷ್ಟವಾದಾಗ ಕ್ರಿಯೆ ಎಲ್ಲಿ, ಅಕ್ರಿಯೆ ಎಂಬುದೆಲ್ಲಿ? ಕ್ರಿಯೆ , ಅಕ್ರಿಯೆ ಎಂಬುದರ ಭ್ರಾಂತಿ ನಿರಸನವಾದುದೆ ಕ್ರಿಯೆ ಮೀರಿದ ಸಂಬಂಧ ಅದನೇನೆಂಬೆ ಏನೆಂಬೆ ಎಂದು ಹೇಳಿಹರು.

ಕೂಡಲಚೆನ್ನಸಂಗಾ ಆನೆಂಬುದಿಲ್ಲದುದ ಏನೆಂದುಪಮಿಸುವೆನಯ್ಯ . ಆನೆಂಬುದಕ್ಕೆ ಸಂದಿಲ್ಲದಿರುವಲ್ಲಿ ಉಪಮಿಸಲಳವಲ್ಲ ಉಸರಲೆಡೆಯಿಲ್ಲದಿರುವಲ್ಲಿ ಉಪಮಿಸಬಾರದು ಎಂದು ಹೇಳಿಹರು.

ಶುಭ ಮಂಗಲಂ

ಬಸವರಾಜ ಸ್ವಾಮಿ ಅವರ ಕೃತಿಗಳು

1. ಬೆಳಕಿನ ಬಳ್ಳಿ	2011
2. ಬಲಯ ಬೀಜಗಳು	2012
3. ರೂಹಿಲ್ಲದ ಚೆಲುವೆ	2012
4. ಜ್ಞಾನಭಂಡಾರಿ ಬಸವಣ್ಣ (ಸಮಗ್ರ)	2018
5. ಅಂಬಿಗರ ಚೌಡಯ್ಯಗಳ ವಚನಾನುಭಾವ	2019
6. ಹಡಪದ ಅಪ್ಪಣಗಳ ವಚನಾನುಭಾವ	2019
7. ಸಿದ್ಧರಾಮ ಶಿವಯೋಗಿಗಳ ವಚನಾನುಭಾವ (ಭಾಗ -1)	2019
8. ಸಿದ್ಧರಾಮ ಶಿವಯೋಗಿಗಳ ವಚನಾನುಭಾವ (ಭಾಗ-2)	2022

ಸಂಪಾದಿತ ಕೃತಿಗಳು

1. ಗಗನ ಸಿದ್ಧಾಂತ (ಸಮಗ್ರ)	2015
2. ತೆರಹಿಲ್ಲದಭವ ನುಡಿಗೆಡೆಗೊಡನು	2011
3. ಗುರುಕನ್ಯೆ	2017
4. ಅರಿತ ಕಿರಣ, ಕಲ್ಪಿತ ವೃಕ್ಷ, ಕಲ್ಪಿತ ಕೃಪೆ (ಮೂರು ಪುಸ್ತಕಗಳ ಸಂಗಮ)	2022
5. ಅರಿವೇ ಗುರು (ಸತ್ಯ ಸಂವಾದ)	2023

ವಚನಾನುಕ್ರಮಣಿಕೆ

ವಚನಗಳು	ವಚನಕಾರರು	ವಚನ ಸಂ.
ಅಂಗದ ಧರೆಯ ಮೇಲೆ ಮೂರು ಬಾವಿಗಳುಂಟು	ಅಲ್ಲಮಪ್ರಭು	6
ಅರಿದೆ ನೆಂಬುದು ತಾ ಬಯಲು	ಅಲ್ಲಮಪ್ರಭು	7
ಅರಿದರಿದು ಅರುವು ಬಂಜೆಯಾಯಿತ್ತು	ಅಲ್ಲಮಪ್ರಭು	8
ಅರುಹಿ ನೊಳಗಣ ಕುರುಹು ಮರಹಿಂಗೆ ಬೀಜ	ಚೆನ್ನಬಸವಣ್ಣ	16
ಅರಿಯ ಲಿಲ್ಲದ ಅರುವು ,ಮರೆಯಲಿಲ್ಲದ ಮರವು	ಚೆನ್ನಬಸವಣ್ಣ	20
ಅರುಹಿಂದಲಾದ ಮರಹಿನ ಶಬ್ಧವನರಿಯಲಾಗದು	ಚೆನ್ನಬಸವಣ್ಣ	24
ಅರಿಯಲಿಲ್ಲದ ಅರಿವು ಅವಗ್ರ ಹಿಸಿತ್ತಾಗಿ ಅರಿಯಲಿಲ್ಲ ಮರೆಯಲಿಲ್ಲ	ಬಸವಣ್ಣ	34
ಅರುವಿನ ಹೃದಯ ಕಂದೆರೆಯ ಬೇಕೆಂದು ಗುರು ವೆಂದು	ಅಲ್ಲಮಪ್ರಭು	61
ಅವಿರಳ ವಿಟನ ಮದುವೆಗೆ ನಿಬ್ಬಣಗಿತ್ತಿಯರೆಲ್ಲರು ಬಂದು	ಅಲ್ಲಮಪ್ರಭು	86
ಅರಿದು ನೆನೆಯಲಿಲ್ಲ ಮರೆದು ಪೂಜಿಸಲಿಲ್ಲ,	ಅಲ್ಲಮಪ್ರಭು	89
ಅರಸಲಿಲ್ಲದ ಘನವ ನರಸುವದದೇನೊ, ತಿಳಿವುದೇನೊ?	ಅಲ್ಲಮಪ್ರಭು	99
ಅಕ್ಷರದಲ ಭ್ಯಾಸವ ಮಾಡಿ ಬರ(ಹ)ವ ತೊಡೆವ ಪರಿಯಂತೊ	ಅಲ್ಲಮಪ್ರಭು	108
ಅಂಗದಿಂದ ಲಿಂಗಸುಖ ಲಿಂಗದಿಂದ ಅಂಗ ಸುಖ	ಚೆನ್ನಬಸವಣ್ಣ	110
ಅಂಗದುದಯ ಲಿಂಗ ಸುಖವು	ಚೆನ್ನಬಸವಣ್ಣ	111
'ಅಂಗವೆ ಲಿಂಗವಾಗಿ, ಲಿಂಗವೆ ಅಂಗವಾದ ಬಳಿಕ ಅಲ್ಲಿಯೆ ಕಾಣಿಭೋ	ಚೆನ್ನಬಸವಣ್ಣ	112
ಅಂತರಂಗ ಬಹಿರಂಗ ಶುದ್ಧವಿಲ್ಲದೆ ನುಡಿವರು ಸಂತೆಯ ಸೂಳೆಯರಂತೆ	ಚೆನ್ನಬಸವಣ್ಣ	121
ಅರಿದೆವೆಂಬವನ ಅರಿವೆ ನುಂಗಿತ್ತಯ್ಯ.	ಚೆನ್ನಬಸವಣ್ಣ	126
ಅರುವರಿತು ಬೆರಗು ಹತ್ತಿತ್ತೆಂಬ ಜ್ಞಾನವಿದೇನೊ?	ಅಲ್ಲಮಪ್ರಭು	139
ಅಪ್ಪಿ ಮುಟ್ಟಲಿಲ್ಲ ಮುಟ್ಟಿ ಮರಳಲಿಲ	ಅಲ್ಲಮಪ್ರಭು	143
ಅಟ್ಟಿ ಮುಟ್ಟಿತ್ತು ಮನ, ದೃಷ್ಠಿ ಲಿಂಗದ ಮೇಲೆ	ಅಲ್ಲಮಪ್ರಭು	149
ಅಂಗವಿಲ್ಲದ ಅನುಭಾವಕ್ಕೆ ನೇಮವಿಲ್ಲದ ನೆನಹು	ಅಲ್ಲಮಪ್ರಭು	156
ಅಗ್ಗವಣಿಯ ತಂದು ಮಜ್ಜನವ ಮರೆದವನ	ಅಲ್ಲಮಪ್ರಭು	157
ಅರಿವರಿತು ಬೆರಗು ಹೊಡೆದು, ಕುರುಹು ಗೆಟ್ಟವನ,	ಅಲ್ಲಮಪ್ರಭು	159
ಅರುವರಿತು ಕುರುಹ ನಷ್ಟವಾದಡೆ ಭಕ್ತ	ಚೆನ್ನಬಸವಣ್ಣ	163
ಅಂತರಂಗದಲ್ಲಿ ಭಾವಿಸುವನಲ್ಲ, ಬಹಿರಂಗದಲ್ಲಿ ಬಳಸುವನಲ್ಲ	ಚೆನ್ನಬಸವಣ್ಣ	169
ಅಂಜಿಕೆಯುಳ್ಳನ್ನಕ್ಕರ ಪ್ರಾಣಲಿಂಗಿಯಲ್ಲ ಸೂತಕ ಉಳ್ಳನ್ನಕ್ಕರ ಶರಣನಲ್ಲ	ಚೆನ್ನಬಸವಣ್ಣ	174
ಅರ್ಪಿತವೆಂದಡೆ ಅನರ್ಪಿತವಾಯಿತ್ತು	ಚೆನ್ನಬಸವಣ್ಣ	177
ಆನು ನೀನೆಂಬುದು ತಾನಿಲ್ಲ , ತಾನರಿದ ಬಳಿಕ ಏನೂ ಇಲ್ಲ ಇಲ್ಲ	ಅಲ್ಲಮಪ್ರಭು	43
ಆನು ನೀನೆಂಬ ಮೋಹ ವೆಲ್ಲಿಯದು	ಚೆನ್ನಬಸವಣ್ಣ	44
ಆವಲ್ಲಿ ಸರ್ವಪ್ರಪಂಚ ನಿವೃತ್ತಿಯಾಗಿಹುದು ಅದೀಗ ಬ್ರಹ್ಮಜ್ಞಾನ.	ಚೆನ್ನಬಸವಣ್ಣ	101
ಆದಿ ಶೂನ್ಯ , ಮಧ್ಯ ಶೂನ್ಯ , ಅಂತ್ಯ ಶೂನ್ಯ ನಿರಾಮಯ	ಚೆನ್ನಬಸವಣ್ಣ	180
ಇದ್ದು ಬದ್ಧನಲ್ಲ, ಸುಳಿದು ಸೂತಕಿಯಲ್ಲ ಆವಂಗ ಸಂಗವಿಲ್ಲದ ನಿಜೈಕ್ಯನು	ಚೆನ್ನಬಸವಣ್ಣ	120
ಉದಕದೊಳಗಣ ಕಿಚ್ಚಿನಂತೆ	ಚೆನ್ನಬಸವಣ್ಣ	40
ಉಂಡಡೇನೊ ? ಉಣದಿರ್ದಡೇನೊ	ಅಲ್ಲಮಪ್ರಭು	26
ಉದಯ ಬಿಂದು ರೂಪಾಯಿತ್ತು , ಅಂತರ ಬಿಂದು ನಿರೂಪ ವಾಯಿತು	ಅಲ್ಲಮಪ್ರಭು	56
ಉರವಣಿಸುವ ಮನ , ಮುಟ್ಟುವನ್ನ ಬರ ಕಾಡುವುದು,	ಅಲ್ಲಮಪ್ರಭು	75
ಉಂಟೆಂಬ ವಸ್ತು , ಇಲ್ಲೆಂಬ ಪ್ರಮಾಣ ಬಹು ,	ಅಲ್ಲಮಪ್ರಭು	174
ಉಪಮೆ ಉಪಮಿಸಲರಿಯದ ಉಪಮಾತೀತ ವೆನುತ್ತಿದ್ದಿತ್ತು ,	ಅಲ್ಲಮಪ್ರಭು	132

ಉಪಾಧಿ ಮನ, ಉಪಾಧಿರಹಿತ ಮನ,	ಅಲ್ಲಮಪ್ರಭು	140
ಊಹಿಸಲರಿಯೆ, ಉತ್ತರವನರಿಯೆ, ದೇವನ ನರಿಯೆ	ಚೆನ್ನಬಸವಣ್ಣ	179
ಎಂಜಲ ಮಾತ ನುಡಿವ ರಂಜಕರೆಲ್ಲರೂ ಮಿಗೆ,ಮಿಗೆ ಮೀಸಲ	ಚೆನ್ನಬಸವಣ್ಣ	1
ಎಮ್ಮವರಿಗೆ ಸಾವು ಇಲ್ಲ, ಎಮ್ಮವರು ಸಾವನರಿಯರು	ಬಸವಣ್ಣ	14
ಎರಡೆಂಬರಯ್ಯ ಕರಣದ ಕಂಗಳಲ್ಲಿ ನೋಡಿದವರು	ಅಲ್ಲಮಪ್ರಭು	80
ಎನ್ನ ಅನುಭಾವದಗಮ್ಯವೆ ಎನ್ನ ಅರುವಿನ ವಿಶ್ರಾಮವೆ	ಚೆನ್ನಬಸವಣ್ಣ	123
ಎರಡೊಂದಾದ ಬಳಿಕ ಅರ್ಚನೆ ಹಿಂಗಿತ್ತು	ಅಲ್ಲಮಪ್ರಭು	162
ಏನೆಂಬೆ ನೇನೆಂಬೆ, ನೊಂದೆರಡಾದುದ	ಚೆನ್ನಬಸವಣ್ಣ	45
ಏನೆಂಬೆ ನೇನೆಂಬೆ ಆಶ್ರಯ ವಿರಹಿತನ	ಚೆನ್ನಬಸವಣ್ಣ	182
ಏಕಂ ಏಕವಾದ ವಸ್ತುವ ಲೋಕಾ ಲೋಕಂಗಳರಿಯವು	ಅಲ್ಲಮಪ್ರಭು	134
ಒಡಲುಗೊಂಡು ಒಡಲು ವಿಡಿಯದೆ	ಚೆನ್ನಬಸವಣ್ಣ	11
ಒತ್ತಿ ಹಣ್ಣ ಮಾಡಿದಡೆ ಅದೆತ್ತಣ ರುಚಿಯಪ್ಪುದೊ	ಅಲ್ಲಮಪ್ರಭು	95
ಕಂಗಳ ಸೂತಕ ಕಾಮಿಸಲಾಗಿ ಹರಿಯಿತ್ತು	ಅಲ್ಲಮಪ್ರಭು	53
ಕಣ್ಣೊಳಗಣ ಕಸ, ಕಾಲೊಳಗಿನ ಮುಳ್ಳು	ಅಲ್ಲಮಪ್ರಭು	54
ಕರಸ್ಥಲದ ಲಿಂಗ, ಮನಸ್ಥಲಕ್ಕೆ ವೇದ್ಯವಾಗಿ	ಚೆನ್ನಬಸವಣ್ಣ	67
ಕದನದೊಳಗಣ ಕಂಣು ಕೆಂಪು	ಅಲ್ಲಮಪ್ರಭು	76
ಕರ್ತೃತ್ವವಿಲ್ಲವಾಗಿ ಕರ್ಮವಿಲ್ಲ, ಕರ್ಮವಿಲ್ಲವಾಗಿ ಜನನವಿಲ್ಲ	ಚೆನ್ನಬಸವಣ್ಣ	115
ಕರ್ಪುರದ ಗಿರಿಯ ಉರಿಯ ಹಿಡಿದರೆ ಇದ್ದಲುಂಟೆ	ಅಲ್ಲಮಪ್ರಭು	141
ಕರಸ್ಥಲ ಲಿಂಗವೆ ಕಾಯಕ್ಕೆ ವೇಧಿಸಿದಲ್ಲಿ ಕಾಯ ಲಿಂಗವಾಗಿತ್ತು	ಅಲ್ಲಮಪ್ರಭು	151
ಕಾಣಬಹುದೆ ನಿರಾಕಾರವ! ಕಾಣಬಹುದೆ	ಚೆನ್ನಬಸವಣ್ಣ	9
ಕಾಯದೊಳಗೆ ಕಾಯವಾಗಿರ್ದೆಯಲ್ಲಾ ಹಂಸಾ	ಚೆನ್ನಬಸವಣ್ಣ	34
ಕಾಯ ಗುಣವಳಿದು ಜೀವನ್ಮುಕ್ತನಾದ ಬಳಿಕ	ಅಲ್ಲಮಪ್ರಭು	33
ಕಾಯ ಲಿಂಗೈಕ್ಯವೆ? ಅಲ್ಲನಿಲ್ಲು, ಜೀವ ಲಿಂಗೈಕ್ಯವೆ? ಅಲ್ಲನಿಲ್ಲು	ಅಲ್ಲಮಪ್ರಭು	49
ಕಾಲು, ಕರ, ಜೀವದೊಳಗಾಡುವ ಭಾವವವು ದೈವವೇ	ಅಲ್ಲಮಪ್ರಭು	55
ಕಾಯ ದೊಳಗೆ ಕಾಯವಾಗಿ, ಪ್ರಾಣದೊಳಗೆ ಪ್ರಾಣವಾಗಿ	ಅಲ್ಲಮಪ್ರಭು	70
ಕಾಯ ಗುಣ ಕೆಟ್ಟು ಮತ್ತೆ ಅರ್ಚನೆ ಹಿಂಗಿತ್ತು	ಅಲ್ಲಮಪ್ರಭು	150
ಕು ಶಬ್ದವು, ಅಶಬ್ದವು, ಶಬ್ದದಲ್ಲಿಯೆ ಕಾಣಬಹುದು ಕಾಣಿರೊ	ಚೆನ್ನಬಸವಣ್ಣ	113
ಕೂಡಲಿಲ್ಲದ, ಅಗಲಲಿಲ್ಲದ ಘನವ ಕೂಡುವ ಪರಿ ಎಂತವ್ವಾ	ಅಲ್ಲಮಪ್ರಭು	68
ಕೆರೆಯಲುಂಡು ತೊರೆಯ ಹೊಗಳುವುರು .ಅತ್ಯುತ್ಕಟದ	ಅಲ್ಲಮಪ್ರಭು	78
ಕೆಟ್ಟುದ ನರಸಹೋಗಿ ತಾನೆ ಕೆಟ್ಟಿತ್ತು , ಹೇಳಲೆಂತು ಬಾರದು	ಅಲ್ಲಮಪ್ರಭು	29
ಕೈಯಲ್ಲಿ ಕರಸ್ಥಲ ಮನದಲ್ಲಿ ಪರಸ್ಥಲ	ಅಲ್ಲಮಪ್ರಭು	94
ಗ್ರಾಮದ ಪದ ಗತಿಯ ನರಿಯರು	ಚೆನ್ನಬಸವಣ್ಣ	161
ಗುರು ಸ್ಥಲ ನಾಸ್ತಿಯಾದಲ್ಲದೆ ಶಿಷ್ಯನಲ್ಲ	ಚೆನ್ನಬಸವಣ್ಣ	13
ಗುರು ವಿಡಿದ ಅರಿವು ಅರುವಲ್ಲ ,ಲಿಂಗ ವಿಡಿದ ಅರಿವು ಅರುವಲ್ಲ	ಅಲ್ಲಮಪ್ರಭು	57
ಗುರು, ಲಿಂಗ, ಜಂಗಮವೆಂಬ ಭೇದವನೆ ಕಳೆದು	ಚೆನ್ನಬಸವಣ್ಣ	127
ಗುರುವಿನ, ಗುರುವಿನ ಕೈಯ ಶಿಷ್ಯರ ಶಿಷ್ಯ	ಚೆನ್ನಬಸವಣ್ಣ	128
ಗುರುವೆಂಬ ಗೂಳಿ ಮುಟ್ಟಲು ಶಿಷ್ಯನೆಂಬ ಮಣಕ ತೆನೆಯಾಯಿತ್ತು	ಚೆನ್ನಬಸವಣ್ಣ	129
ಗುರುವಿಂಗೆ ಗುರುವಾಗಿ, ಗುರುಪ್ರಸಾದ ಕೊಂಬುದು	ಚೆನ್ನಬಸವಣ್ಣ	131
ಗುರುವಿಲ್ಲದ ಕೂಟ, ಲಿಂಗವಿಲ್ಲದ ನೋಟ	ಚೆನ್ನಬಸವಣ್ಣ	178
ಘನವ ಮನ ಕಂಡು ಅದನೊಂದು ಮಾತಿಂಗೆ ತಂದು	ಅಲ್ಲಮಪ್ರಭು	135
ಘನವ ಕಂಡು ಮನ ಅವಗ್ರಾಹಕವಾಯಿತ್ತು	ಅಲ್ಲಮಪ್ರಭು	146

ತನು ನಷ್ಟ, ಮನ ನಷ್ಟ, ನೆನಹು ನಷ್ಟ, ಭಾವ ನಷ್ಟ, ಜ್ಞಾನ ನಷ್ಟ	ಅಲ್ಲಮಪ್ರಭು	36
ತನು ನಷ್ಟ, ಮನ ನಷ್ಟ, ನೆನಹು ನಷ್ಟ, ಭಾವ ನಷ್ಟ, ಜ್ಞಾನ ನಷ್ಟ	ಅಲ್ಲಮಪ್ರಭು	37
ತನ್ನ ತಾನರಿದ ಬಳಿಕ ಅನ್ಯವಿಲ್ಲ, ಕಾಬ ಮರವು ನಷ್ಟವಾಯಿತ್ತು	ಅಲ್ಲಮಪ್ರಭು	51
ತಪವೆಂಬುದು ಬಂಧನ ನೇಮವೆಂಬುದು ಗತಹು	ಚೆನ್ನಬಸವಣ್ಣ	116
ತನುವ ಸೋಂಕಿ ತನು ನಷ್ಟವಾಯಿತ್ತು ಮನವ ಸೋಂಕಿ	ಚೆನ್ನಬಸವಣ್ಣ	117
ತನುವಿಲ್ಲದೆ ಕಂಡು ಕಂಡು ನಿಂದೆ	ಅಲ್ಲಮಪ್ರಭು	145
ತನ್ನನರಿದವಂಗೆ ಇದಿರೆಂಬುದುಂಟು, ತನ್ನನರಿಯದವಂಗೆ	ಚೆನ್ನಬಸವಣ್ಣ	118
ತಾನೆ ಜಗ, ಜಗವೆಲ್ಲ ತಾನೆಂದರಿದ ಘನವೇದ್ಯನ	ಚೆನ್ನಬಸವಣ್ಣ	167
ತಾ ಸುಖಿಯಾದಡೆ ನಡೆಯಲು ಬೇಡ	ಅಲ್ಲಮಪ್ರಭು	137
ತುಂಬಿ ಪರಿಮಳವ ನುಂಡುದೊ	ಅಲ್ಲಮಪ್ರಭು	31
ತೆರೆಹಿಲ್ಲದ ಘನವು ಕುರುಹಿಂಗೆ ಬಾರದ ಮುನ್ನ ತೋರಿದವರಾರೊ	ಅಲ್ಲಮಪ್ರಭು	41
ತೆರೆಹಿಲ್ಲದ ಘನವ ಮನ ಒಳಕೊಂಡು	ಅಲ್ಲಮಪ್ರಭು	64
ತೆರೆಹಿಲ್ಲದ ಘನವ ಅರಸಿಹೆ ನಂದಡೆ ಕಾಣಬಾರದು	ಅಲ್ಲಮಪ್ರಭು	50
ತೆರೆಹಿಲ್ಲದ ಘನವು ಮನದೊಳಗೆ ನಿಂದು ನೆಲೆಗೊಂಡ ಬಳಿಕ	ಚೆನ್ನಬಸವಣ್ಣ	168
ತೋರಬಾರದ ಘನವ ಹೇಳಲೆಂದೇನೋ	ಅಲ್ಲಮಪ್ರಭು	107
ದೃಷ್ಟ ನಷ್ಟವಾದುದಕ್ಕೇನು ದೃಷ್ಟ	ಚೆನ್ನಬಸವಣ್ಣ	23
ದೃಷ್ಟಕ್ಕೆ ದೃಷ್ಟಮುಂದಿಲ್ಲ ಇಲ್ಲ ಮಾಡಿದಡೇನಹುದೊ	ಅಲ್ಲಮಪ್ರಭು	9
ಧನವ ಕೊಟ್ಟಡೆ ದಾನಿಯಾದ, ತನುವ ಕೊಟ್ಟಡೆ ವೀರನಾದ	ಚೆನ್ನಬಸವಣ್ಣ	130
ನಂಬಿದರೆ ಪ್ರಸಾದ ನಂಬದಿರ್ದಡೆ ವಿಷವೊ	ಚೆನ್ನಬಸವಣ್ಣ	106
ನಾ ಸತ್ತೆನೆಂದು ಹೆಣ ಕೂಗಿದುದುಂಟೆ	ಅಲ್ಲಮಪ್ರಭು	69
ನಾನೆಂಬುದು ಪ್ರಮಾಣ, ನೀನೆಂಬುದು ಪ್ರಮಾಣ	ಅಲ್ಲಮಪ್ರಭು	71
ನಾರು ಬೇರಿನ ಕುಟಿಲ ಕಪಟದ ಯೋಗವಲ್ಲಿದು ನಿಲ್ಲಿಭೊ	ಅಲ್ಲಮಪ್ರಭು	93
ನಾದ ಮುನ್ನವೊ ಬಿಂದು ಮುನ್ನವೊ?	ಅಲ್ಲಮಪ್ರಭು	138
ನಾ ನೀನೆಂಬ ಭೇದ ಅಂದೂ ಇಲ್ಲ, ಇಂದೂ ಇಲ್ಲ	ಅಲ್ಲಮಪ್ರಭು	147
ನಿರ್ವಿಕಲ್ಪವೆಂಬ ನಿಜದೊಳಗೆ ನಿರಹಂಭಾವದಲ್ಲಿರ್ದ ನೋಡಿರೆ	ಅಲ್ಲಮಪ್ರಭು	38
ನೀರು ಕ್ಷೀರದಂತೆ ಕೂಡಿದ ಭೇದವ ನಾರಿಗೆ ಹೇಳಲಿಲ್ಲ, ಕೇಳಲಿಲ್ಲ	ಚೆನ್ನಬಸವಣ್ಣ	66
ನಿಜವನರಿದ ನಿಶ್ಚಿಂತನೆ, ಮರಣ ಗೆಲಿದ ಮಹಾಂತನೆ	ಅಲ್ಲಮಪ್ರಭು	92
ನಿಮ್ಮ ನೆನವುತ್ತಿದ್ದಿತ್ತು ನೆನೆವ ಮುಖವಾವುದೆಂದರಿಯದೆ	ಅಲ್ಲಮಪ್ರಭು	96
ನಿತ್ಯ ನಿರಂಜನ ತಾನೆಂದರಿಯದೆ 'ತತ್ವಮಸಿ'ಯೆಂದು	ಅಲ್ಲಮಪ್ರಭು	122
ನಿಶ್ಚಲವೆಂಬ ಭಾಜನದಲ್ಲಿ, ನಿಜ ಜ್ಞಾನವೆಂಬ ಅಕ್ಕಿಯ ತುಂಬಿ	ಅಲ್ಲಮಪ್ರಭು	59
ನುಡಿಯಿಂದ ನಡೆ ಕೆಟ್ಟಿತ್ತು ನಡೆಯಿಂದ ನುಡಿ ಕೆಟ್ಟಿತ್ತು	ಅಲ್ಲಮಪ್ರಭು	42
ನೆನೆಯಲರಿಯೆ, ನಿರ್ಧರಿಸಲರಿಯೆ	ಅಕ್ಕಮಹಾದೇವಿ	19
ನೆನಹಿನ ಸುಖವ ನೋಟ ನುಂಗಿತ್ತು	ಚೆನ್ನಬಸವಣ್ಣ	47
ನೆನಹ ನೆನೆವ ಮನದಲ್ಲಿಲ್ಲ, ತನುವಿನಲ್ಲಿ ಆಸೆಯಿಲ್ಲ	ಅಲ್ಲಮಪ್ರಭು	142
ನೋಡಿಹೆನೆಂದರೆ ದೃಷ್ಟಿ ಕೊಳ್ಳದು	ಚೆನ್ನಬಸವಣ್ಣ	17
ನೋಡಿ ನೋಟವ ಮರೆದು, ಕೂಡಿ ಕೂಟವ ಮರೆದು	ಚೆನ್ನಬಸವಣ್ಣ	22
ಪ್ರಥಮ ವೇದಿಗಳೆಲ್ಲರು ಗತಿಯಲ್ಲಿ ಸಿಲುಕಿದರು	ಚೆನ್ನಬಸವಣ್ಣ	2
ಪಂಚಭೂತ. ಸಂಗದಿಂದ ಜ್ಯೋತಿಯಾಯಿತ್ತು	ಅಲ್ಲಮಪ್ರಭು	79
ಪೃಥ್ವಿಯೊಳಗಿಲ್ಲ ಆಕಾಶದೊಳಗಿಲ್ಲ	ಅಲ್ಲಮಪ್ರಭು	82
ಪಾದವಿಲ್ಲದ ಗುರುವಿಂಗೆ ತಲೆಯಿಲ್ಲದ ಶಿಷ್ಯನು	ಅಲ್ಲಮಪ್ರಭು	88

ಬಯಲು ರೂಪು ಮಾಡಬಲ್ಲಾತನೆ ಶರಣ	ಬಸವಣ್ಣ	12
ಬರಿಯ ಬೋಳುಗಳೆಲ್ಲ ಜಂಗಮವೆ	ಚೆನ್ನಬಸವಣ್ಣ	160
ಬಂದ ಬಟ್ಟೆಯ ಹೊದ್ದದಾತ ಲಿಂಗೈಕ್ಯನು	ಚೆನ್ನಬಸವಣ್ಣ	102
ಬಯಲ ಬೆರಗಿನ ಸುಖದ ಸವಿಯು, ಬೆರಗಲ್ಲದೆ ಕಾಣೆ	ಅಲ್ಲಮಪ್ರಭು	148
ಬಯಲು ಬಯಲನೆ ಬಿತ್ತಿ , ಬಯಲು ಬಯಲನೆ ಬೆಳೆದು	ಅಲ್ಲಮಪ್ರಭು	27
ಬೆಳಗಿನೊಳಗಣ ಬೆಳಗು ಕಡದಡೆ ಮರಳಿ ಕೂಡಿತ್ತಲ್ಲಾ	ಅಲ್ಲಮಪ್ರಭು	158
ಬೆಳಗು ಕತ್ತಲೆಯ ನುಂಗಿ	ಗುಹೇಶ್ವರಾ	15
ಭಕ್ತ ಪ್ರಸಾದ ವ ಕೊಂಡು ಪ್ರಸಾದವಾದ	ಅಲ್ಲಮಪ್ರಭು	60
ಭವಕ್ಕೆ ಹುಟ್ಟುವವನಲ್ಲ ಸಂದೇಹಿ ಸೂತಕಿಯಲ್ಲ	ಚೆನ್ನಬಸವಣ್ಣ	105
ಭಜಿಸಲಿಲ್ಲ, ಗತಿಮತಿ ಫಲವಿರಹಿತನಾಗಿ	ಚೆನ್ನಬಸವಣ್ಣ	171
ಭಾವಕ್ಕಿಂಬಿಲ್ಲ , ಶಬ್ದ ಮೀಸಲು ನೋಡಾ	ಅಲ್ಲಮಪ್ರಭು	35
ಭಾವವಳಿಯದೆ ಬಯಕೆ ಸವೆಯದೆ ಐಕ್ಯವು ಆವ ಘನವೆಂದಡಹುದೆ	ಅಲ್ಲಮಪ್ರಭು	77
ಭಾವಿಸಿ ನೋಡಿಹೆನೆಂಬುದೆಲ್ಲವು ಭ್ರಮವು ಅದು	ಅಲ್ಲಮಪ್ರಭು	154
ಭೂಮಿಯೊಳಗಿಲ್ಲ ಆಕಾಶದೊಳಗಿಲ್ಲ	ಅಲ್ಲಮಪ್ರಭು	98
ಭೋಗಿಯೆನಲಿಲ್ಲ ನಿರ್ಭೋಗಿಯೆನಲಿಲ್ಲ ಕಾಮಿ ಎನಲಿಲ್ಲ	ಚೆನ್ನಬಸವಣ್ಣ	171
ಭೋಗಿಯೆನಲಿಲ್ಲ ನಿರ್ಭೋಗಿಯೆನಲಿಲ್ಲ ಕಾಮಿ ಎನಲಿಲ್ಲ	ಚೆನ್ನಬಸವಣ್ಣ	172
ಮನದ ಕೊನೆಯ ಮೇಲೆ ನೆನೆದ ನೆನಹು	ಅಲ್ಲಮಪ್ರಭು	39
ಮನದ ಕಾಲ ಕತ್ತಲು, ತನುವಿನ ಕಾಲ ಕತ್ತಲು	ಅಲ್ಲಮಪ್ರಭು	119
ಮನ,ಮನ, ಒಂದಾಗಿ ಅರಿವು ಸಮವಾದ ಬಳಿಕ	ಚೆನ್ನಬಸವಣ್ಣ	65
ಮನದ ಭ್ರಮೆಯ ಕಳೆದು , ಗುರುವ ಮಾಡಿ ಗುರುಭಕ್ತನಾದನಯ್ಯ	ಚೆನ್ನಬಸವಣ್ಣ	124
ಮುಕ್ತಿಗೆ ಮುಖವಾಗಿ ಮುಕ್ತಿಗೆ ಹೊರಗಾಗಿ	ಅಲ್ಲಮಪ್ರಭು	52
ಮುಕ್ತಿಗೆ ಮುಖವಾಗಿ , ಯುಕ್ತಿಗೆ ಹೊರಗಾಗಿ	ಅಲ್ಲಮಪ್ರಭು	63
ಮುನ್ನ ಎಂತಾಯಿತ್ತು , ಆಗದಡೆಂತಾಯಿತು	ಅಲ್ಲಮಪ್ರಭು	58
ಮೂರರಲ್ಲಿ ಮುಟ್ಟಲಿಲ್ಲ,ಆರರಲ್ಲಿ ತೋರಲಿಲ್ಲ	ಅಲ್ಲಮಪ್ರಭು	109
ಯುಗ ಜಗ ಮಡಿವಲ್ಲಿ ಬ್ರಹ್ಮಾಂಡಗಳಳಿವಲ್ಲಿ	ಅಲ್ಲಮಪ್ರಭು	133
ಲಿಂಗ ಗುಣದಿಂದ ಲಿಂಗೈಕ್ಯವೆಂಬರು	ಚೆನ್ನಬಸವಣ್ಣ	10
ಲಿಂಗ ವಿಡಿದು ಲಿಂಗ ಮಹೇಶ್ವರ ನೆನಿಸಿಕೊಂಬೆ	ಚೆನ್ನಬಸವಣ್ಣ	18
ಲಿಂಗಾರ್ಚನೆಯ ಮಾಡುವ ಮಹಾಮಹಿಮರೆಲ್ಲರೂ	ಚೆನ್ನಬಸವಣ್ಣ	32
ಲಿಂಗವಂತಂಗೆ ಲಿಂಗದ ವಾರ್ತೆಯ ನುಡಿವುದೆ	ಅಲ್ಲಮಪ್ರಭು	74
ಲಿಂಗದ ಪೂರ್ವಾಶ್ರಯವ ಕಳೆಯ ಬಲ್ಲಾತನೆ ಭಕ್ತ	ಚೆನ್ನಬಸವಣ್ಣ	125
ಲಿಂಗ ದ್ರೋಹಿಯನೆ ಗುರುವೆಂಬೆ	ಚೆನ್ನಬಸವಣ್ಣ	164
ಲಿಂಗಸ್ಥಲ, ನಾಸ್ತಿ ಯಾದಲ್ಲದೆ ಭಕ್ತನಲ್ಲ	ಚೆನ್ನಬಸವಣ್ಣ	173
ಲಿಂಗಸ್ಥಲವಿಲ್ಲದವರ ಭಕ್ತರೆಂಬೆ	ಚೆನ್ನಬಸವಣ್ಣ	175
ಲೋಕ ವಿರೋಧಿ ಭಕ್ತ, ಭಕ್ತ ವಿರೋಧಿ ಶರಣ	ಅಲ್ಲಮಪ್ರಭು	100
ಲೋಕ ವಿರಹಿತ ಶರಣ ಶರಣ ವಿರಹಿತ ಲೋಕ,	ಚೆನ್ನಬಸವಣ್ಣ	170
ಲೋಕ ವಳುತ್ತಿದೆ ಇದ ಬೇಕು ಬೇಡೆಂಬುವರ ನೊಬ್ಬರನು ಕಾಣೆ	ಅಲ್ಲಮಪ್ರಭು	48
ವಾಙ್ಮನಕ್ಕಬಾರದ ಅಪ್ರತಿಮ ಲಿಂಗವ ಕೂಡಿ	ಅಲ್ಲಮಪ್ರಭು	25
ವಾಙ್ಮನಕ್ಕ ಗೋಚರ ಲಿಂಗ, ಅಗೋಚರ ಶರಣ	ಚೆನ್ನಬಸವಣ್ಣ	166
ಶಬ್ದ ಸಂಭ್ರಮದಲ್ಲಿ ಹಿಂದು ಗಾಣರು, ಮುಂದು ಗಾಣರು	ಅಲ್ಲಮಪ್ರಭು	5
ಶರಣ ಇಹ ಪರನಲ್ಲ, ಪರಾಪರನಲ್ಲ, ಕಾಮಿಸಿ ಕಾಮಿಯಲ್ಲ	ಅಲ್ಲಮಪ್ರಭು	104
ಶಿವಯೋಗಿ ನಿಭ್ರಾಂತನೆ ಶರಣ ಕರ್ಮಕಾಯನಲ್ಲ	ಚೆನ್ನಬಸವಣ್ಣ	103

ಷಡೂರ್ಮಿಯಿಲ್ಲ, ಷಡ್ವರ್ಗವಿಲ್ಲ	ಅಲ್ಲಮಪ್ರಭು	155
ಸಮ ಸುಖ ಸಂಧಾನ ವಿಲ್ಲದ ಸಂಗ ನೋಡಾ	ಚೆನ್ನಬಸವಣ್ಣ	28
ಸ್ವಸ್ಥಾನ ಸ್ವಸ್ಥಿರದ ಸುಮನ ಮಂಟಪದೊಳಗೆ	ಚೆನ್ನಬಸವಣ್ಣ	30
ಸಹಜವೆನ್ನದೆ, ನಿಜವೆನ್ನದೆ ಅಚಲವೆನ್ನದೆ ಶೂನ್ಯವೆನ್ನದೆ	ಚೆನ್ನಬಸವಣ್ಣ	46
ಸಹ ಭಾಜನ, ಸಹ ಭೋಜನ ವೆಂದೆಂಬರು	ಅಲ್ಲಮಪ್ರಭು	62
ಸರ್ವಶೂನ್ಯ ಆದಿ, ಅನಾದಿ ಭಕ್ತಸ್ಥಲ, ನಾದ ಬಿಂದು ಮಹೇಶ್ವರ	ಅಲ್ಲಮಪ್ರಭು	72
ಸತ್ತು ಹುಟ್ಟಿ ಕೆಟ್ಟವರೆಲ್ಲರು ದೇವಲೋಕಕ್ಕೆ ಹೋದರೆಂಬ	ಅಲ್ಲಮಪ್ರಭು	73
ಸತ್ತಾತನೊಬ್ಬ ಹೊತ್ತಾತನೊಬ್ಬ	ಅಲ್ಲಮಪ್ರಭು	87
ಸಚರಾ ಚರ ವೆಂಬುದೊಂದು ಕಿಂಚಿತ್	ಅಲ್ಲಮಪ್ರಭು	136
ಸತ್ಯವನೊಳಕೊಂಡ ಮಿಥ್ಯಕ್ಕೆ ಭಂಗ, ಮಿಥ್ಯವನೊಳಕೊಂಡ	ಅಲ್ಲಮಪ್ರಭು	144
ಸತ್ಯವೂ ಇಲ್ಲ, ಅಸತ್ಯವೂ ಇಲ್ಲ ಸಹಜವೂ ಇಲ್ಲ, ಅಸಹಜವೂ ಇಲ್ಲ	ಅಲ್ಲಮಪ್ರಭು	152
ಸತ್ತು ಮುಂದೆ ದೇವರ ಕೂಡಿಹೆವೆಂಬಿರಿ, ಸಾಯದ ಮುನ್ನ ಸತ್ತಿಪ್ಪಿರಿ	ಅಲ್ಲಮಪ್ರಭು	153
ಸ್ಥಲವೆಂದೆನ್ನೆ, ನಿಸ್ಥಲವೆಂದೆನ್ನೆ	ಚೆನ್ನಬಸವಣ್ಣ	165
ಸಹಜವೆನ್ನದೆ ನಿಜವೆನ್ನದೆ ಅಚಲವೆನ್ನದೆ	ಚೆನ್ನಬಸವಣ್ಣ	181
ಹರಿವ ನದಿಗೆ ಮೈಯೆಲ್ಲಾ ಕಾಲು ಉರಿವ ಅಗ್ನಿಗೆ ಮೈಯೆಲ್ಲಾ	ಅಲ್ಲಮಪ್ರಭು	114
ಹಸಿವಿನ ಪ್ರೇಮಕ್ಕೆ ಬೋನವ ಹಿಡಿವರು	ಅಲ್ಲಮಪ್ರಭು	85
ಹಿಂದೆ ಎಷ್ಟು ಪ್ರಳಯ ಹೋಯಿತ್ತೆಂದರಿಯೆ! ಮುಂದೆ	ಅಲ್ಲಮಪ್ರಭು	4
ಹುಲ್ಲ ಕಿಚ್ಚುವ, ಕಲ್ಲ ಬೀಜವ, ನೀರ ನೆಳಲುವ	ಅಲ್ಲಮಪ್ರಭು	81
ಹುಟ್ಟುವಾತ ನಾನಲ್ಲಯ್ಯ, ಹೊಂದುವಾತ ನಾನಲ್ಲಯ್ಯ	ಅಲ್ಲಮಪ್ರಭು	83
ಹುಟ್ಟಿದ ನಲೆಯ ತೃಷ್ಣೆ ಬಿಡದವಂಗೆ ಲಿಂಗದ ಅನುಭಾವ ವೇಕೋ	ಅಲ್ಲಮಪ್ರಭು	97
ಹೊಸ ಮುತ್ತಿನ ಸುಪ್ಪಾಣಿಯಂತೆ ಲಿಂಗೈಕ್ಯವು	ಅಲ್ಲಮಪ್ರಭು	84
ಹೊರಗನೆ ಕೊಯ್ದು, ಹೊರಗನೆ ಪೂಜಿಸಿ ಹೊರಗಾಗಿ ಹೋಯಿತ್ತು	ಅಲ್ಲಮಪ್ರಭು	90
ಜ್ಞಾತೃವೆ ಅರುಹಿಸುವದು, ಜ್ಞಾನವೆ ಅರಿವುದು	ಅಲ್ಲಮಪ್ರಭು	21



ಪರಮ ಪೂಜ್ಯ ಸದ್ಗುರು ಶ್ರೀ ವಿದ್ಯಾನಂದ ಶರಣರು

ದ್ವೈತ, ದ್ವೈತಾದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಿವಶಕ್ತಿ ವಿಶಿಷ್ಟಾದ್ವೈತ, ಮುಂತಾದ ಸಿದ್ಧಾಂತಗಳು ಭಾರತದಲ್ಲಿ ಪ್ರಚಲಿತದಲ್ಲಿವೆ. ಪ್ರತಿ ದೇಹದಲ್ಲಿರುವ ಶಕ್ತಿಯನ್ನು ಆಯಾ ದೇಹವೇ ಬಳಕೆ ಮಾಡಿಕೊಳ್ಳಲು ಸಕಲ ದೇಹಗಳಿಗೆ ನೆರವಾಗಲೆಂದು ಆಯಾ ಸಿದ್ಧಾಂತಗಳನ್ನು ಮಹಾಜ್ಞಾನಿಗಳು ರಚಿಸಿರುವರು. ಆದರೆ ಜನ ಆಯಾ ಗ್ರಂಥಗಳನ್ನು ಬರೆದ ಜ್ಞಾನಿಗಳನ್ನು ಅವರು ಬರೆದ ಸೂತ್ರಪ್ರಧಾನವಾದ ಜ್ಞಾನ ಗ್ರಂಥಗಳನ್ನು ಮಾತ್ರ ವಿಶ್ವಾಸಕ್ಕೆ ತೆಗೆದುಕೊಂಡರು. ತಮ್ಮ ತಮ್ಮ ದೇಹಗಳಲ್ಲಿ ತನ್ಮಯವಾದ ಅರಿವಿನ ಶಕ್ತಿಯನ್ನೆ ಮರೆತರು. ಒಬ್ಬೊಬ್ಬ ಜ್ಞಾನಿಯ ಹೆಸರಲ್ಲಿ ಮತ ಧರ್ಮ ನಿರ್ಮಾಣವಾಯಿತು. ಜಾತಿ ಉಪಜಾತಿ ಪಂಗಡಗಳು ಹುಟ್ಟಿಕೊಂಡವು. ಜ್ಞಾನಿಗಳು ಬರೆದ ಸೂತ್ರ ಪ್ರಧಾನ ಸಿದ್ಧಾಂತಗಳೆಲ್ಲಾ ಧರ್ಮಗ್ರಂಥಗಳಾದವು. ಅವು ಪೂಜೆಗೆ, ವಾದ ವಿವಾದಗಳಿಗೆ ಉಪನ್ಯಾಸಕ್ಕೆ ಮೀಸಲಾದವು.

ದೇಹದ ಉನ್ನತಿಗಾಗಿ ದೇಹದಿಂದಲೇ ಬರೆದ ಗ್ರಂಥಗಳು ದೇಹಗಳಿಗೆ ಮುಳುವಾದವು. ಈ ಸಕಲ ಸಿದ್ಧಾಂತಗಳಿಂದ ಆದ ಬದಲಾವಣೆಯನ್ನು ಶ್ರೀ ವಿದ್ಯಾನಂದ ಶರಣರು ಗಮನದಲ್ಲಿಟ್ಟುಕೊಂಡು ಶರಣರ ವಚನಗಳನ್ನು ತೆಗೆದುಕೊಂಡು ಅವುಗಳಿಗೆ ತಮ್ಮದೆ ಆದ ಸೂತ್ರ ರೂಪದ ವ್ಯಾಖ್ಯಾನವನ್ನು ಬರೆದರು. ಇವು ಮನುಕುಲವನ್ನು ಮಹಾ ಮನುಕುಲದತ್ತ ತೆಗೆದುಕೊಂಡು ಹೋಗುವುದರಲ್ಲಿ ಸಂದೇಹವೇ ಇಲ್ಲ.

ಸದ್ಗುರು ವಿದ್ಯಾನಂದರು ಈ ನಾಡು ಕಂಡ ಮಹಾನ್ ಸಂತರು. ಮಠ ಮಾನ್ಯಗಳ ಒಡೆಯರು ಸಾಹಿತಿಗಳು ಈ ಸತ್ಪುರುಷರನ್ನು ನೋಡಲು ಬರಲಿಲ್ಲ. ರಾಜಕಾರಣಿಗಳು ಇವರತ್ತ ಸುಳಿಯಲಿಲ್ಲ. ಗುರುಗಳಾದರೂ ಅಷ್ಟೆ. ಅವರ ನೆರಳಿನ ಸಾಮಿಪ್ಯವೂ ಹೋಗಲಿಲ್ಲ. ಅರುಹೃದಯಿಗಳನ್ನು ಕಂಡು ಅರಿವಿನ ಬೀಜ ಬಿತ್ತಿದರು. ಮೊಳಕೆಯೊಡೆದು ಸಸಿಗಳಾಗಿವೆ. ಕೆಲವು ಮರಗಳಾಗಿ ಫಲಕ್ಕೆ ಬಂದಿವೆ ಆ ಮಾಗಿದ ಅರಿವಿನ ಫಲ ತನ್ನ ಕೆಲಸ ಮಾಡದೇ ಇರದು.

ಬಸವರಾಜ ಸ್ವಾಮಿ

ಸಂಪಾದಕ